|| ಓಂ ಓಂ ನಮೋ ನಾರಾಯಣಾಯ|| ಶ್ರೀ ವೇದವ್ಯಾಸಾಯ ನಮಃ ||

## ಶ್ರೀ ಕೃಷ್ಣದ್ವೈಪಾಯನ ವೇದವ್ಯಾಸ ವಿರಚಿತ

# ಶ್ರೀ ಮಹಾಭಾರತ



## ಮುಖ್ಯ ಕಥಾ ಪ್ರಸಂಗಗಳು (ಸಂಪುಟ ೪)

ಡಾ| ಬಿ. ಎಮ್. ರಮೇಶ್




ಬನದಕೊಪ್ಪದ ಶ್ರೀ ಲಕ್ಷ್ಮೀನಾರಾಯಣ ದೇವರು

# ಮುಖ್ಯ ಕಥಾ ಪ್ರಸಂಗಗಳು


ದ್ರೋಣ ಪರ್ವ .......................................................... 3

ಹನ್ನೊಂದನೆಯ ದಿನದ ಯುದ್ಧ........................................... 3

ಹನ್ನೆರಡನೆಯ ದಿನದ ಯುದ್ಧ: ಸಂಶಪ್ತಕವಧೆ ............................... 68

ಹದಿಮೂರನೆಯ ದಿನದ ಯುದ್ಧ: ಅಭಿಮನ್ಯು ವಧೆ .......................156

ಯುದ್ಧದ ಹದಿಮೂರನೆಯ ರಾತ್ರಿ ಅರ್ಜುನನ ಪ್ರತಿಜ್ಞೆ; ಪಾಶುಪತ ಪುನಃ ಪ್ರಾಪ್ತಿ...............................................................226

ಹದಿನಾಲ್ಕನೆಯ ದಿನದ ಯುದ್ಧ – ಜಯದ್ರಥವಧೆ.........................306

ಹದಿನಾಲ್ಕನೆಯ ದಿನದ ರಾತ್ರಿಯುದ್ಧ – ಘಟೋತ್ಕಚವ ವಧೆ ..........700

ಹದಿನೈದನೇ ದಿನದ ಯುದ್ಧ – ದ್ರೋಣವಧೆ...............................919

ಹದಿನೈದನೆಯ ದಿನದ ಯುದ್ಧ: ಅಶ್ವತ್ಥಾಮನಿಂದ ನಾರಾಯಣಾಸ್ತ್ರ ಪ್ರಯೋಗ .........................................................................999

# ದ್ರೋಣ ಪರ್ವ




# ಹನ್ನೊಂದನೆಯ ದಿನದ ಯುದ್ಧ

## ಕರ್ಣನ ರಣಯಾತ್ರೆ

ಸತ್ಯಪರಾಕ್ರಮಿ ಭೀಷ್ಮನು ನಿಹತನಾಗಲು ಕೌರವರು ಮತ್ತು ಪಾಂಡವೇಯರು ಪ್ರತ್ಯೇಕ ಪ್ರತ್ಯೇಕವಾಗಿ ಸಮಾಲೋಚನೆ ನಡೆಸಿದರು. ಕ್ಷತ್ರಧರ್ಮವನ್ನು ವಿಮರ್ಶಿಸಿ ವಿಸ್ಮಿತರೂ ಪ್ರಹೃಷ್ಟರೂ ಆದ ಅವರು ಸ್ವಧರ್ಮವನ್ನು ನಿಂದಿಸುತ್ತಾ ಆ ಮಹಾತ್ಮ ಅಮಿತತೇಜಸ್ವಿ ಭೀಷ್ಮನಿಗೆ

ನಮಸ್ಕರಿಸಿ ಸನ್ನತಪರ್ವ ಶರಗಳಿಂದ ಅವನಿಗೆ ಶಯನವನ್ನೂ ತಲೆದಿಂಬನ್ನೂ ಮಾಡಿದರು. ಕಾಲಚೋದಿತ ಕ್ಷತ್ರಿಯರು ಪರಸ್ಪರರಲ್ಲಿ ಮಾತನಾಡಿಕೊಂಡು ಗಾಂಗೇಯ ಭೀಷ್ಮನಿಗೆ ರಕ್ಷಣಾವ್ಯವಸ್ಥೆಯನ್ನು ಏರ್ಪಡಿಸಿ, ಪ್ರದಕ್ಷಿಣೆಮಾಡಿ ಅವನ ಅನುಮತಿಯನ್ನು ಪಡೆದು, ಕ್ರೋಧದಿಂದ ಕೆಂಪಾದ ಕಣ್ಣುಗಳಿಂದ ಪರಸ್ಪರರನ್ನು ನೋಡುತ್ತಾ ಪುನಃ ಯುದ್ಧಮಾಡಲು ತೆರಳಿದರು. ಆಗ ತೂರ್ಯ-ಭೇರಿ ನಿನಾದದ ಮಹಾಸ್ವನಗಳೊಂದಿಗೆ ನಿನ್ನವರ ಮತ್ತು ಶತ್ರುಗಳ ಸೇನೆಗಳು ಹಿಂದಿರುಗಿದವು.

ಜಾಹ್ನವೀ ಸುತನ ಪತನದ ಮರುದಿನ ಕಾಲಪ್ರಭಾವದಿಂದ ಹತ ಚೇತಸರಾಗಿದ್ದ ಆ ಎಲ್ಲ ಭರತಶ್ರೇಷ್ಠರೂ ಮಹಾತ್ಮ ಗಾಂಗೇಯನ ವಚನವನ್ನು ಅನಾದರಿಸಿ ಕೋಪಾವೇಶಗೊಂಡವರಾಗಿ ಶಸ್ತ್ರಗಳೊಂದಿಗೆ ಹಿಂದಿರುಗಿದರು. ಧೃತರಾಷ್ಟ್ರ ಮತ್ತು ಅವನ ಮಗ ದುರ್ಯೋಧನನ ಮೋಹದಿಂದಾಗಿ ಮತ್ತು ಶಾಂತನವನ ವಧೆಯಿಂದಾಗಿ ಎಲ್ಲ ರಾಜರ ಸಹಿತ ಕೌರವ್ಯರು ಮೃತರಾದಂತೆಯೇ ತೋರಿದರು. ದೇವವ್ರತನಿಲ್ಲದೇ ಅವರು ವನದಲ್ಲಿ ಹಿಂಸಮೃಗಗಳ ಮಧ್ಯದಲ್ಲಿ ರಕ್ಷಣೆಯೇ ಇಲ್ಲದ ಗೋವುಗಳಂತೆ ತುಂಬಾ ಉದ್ವಿಗ್ನಮನಸ್ಕರಾಗಿದ್ದರು. ಭರತಶ್ರೇಷ್ಠನು ಕೆಳಗುರುಳಲು ಕುರುವಾಹಿನಿಯು ನಕ್ಷತ್ರವಿಲ್ಲದ ಆಕಾಶದಂತಾಯಿತು.

ಗಾಳಿಯೇ ಇಲ್ಲದ ಅಂತರಿಕ್ಷದಂತಾಯಿತು. ಸಸ್ಯಗಳು ನಾಶವಾದ ಭೂಮಿಯಂತಾಯಿತು. ಅಸಂಸ್ಕೃತ ಮಾತಿನಂತಾಯಿತು. ಹಿಂದೆ ಬಲಿಯಿಲ್ಲದೇ ಅಸ್ತವ್ಯಸ್ತವಾಗಿದ್ದ ಅಸುರೀ ಸೇನೆಯಂತಾಯಿತು. ವಿಧವೆಯಾದ ಸುಂದರಿಯಂತೆ, ಒಣಗಿದ ನದಿಯಂತೆ, ವನದಲ್ಲಿ ಗಂಡುಜಿಂಕೆಯನ್ನು ಕಳೆದುಕೊಂಡು ತೋಳಗಳಿಂದ ಸುತ್ತುವರೆಯಲ್ಪಟ್ಟ ಹೆಣ್ಣುಜಿಂಕೆಯಂತೆ ಕಂಡಿತು. ಜಾಹ್ನವೀಸುತನು ಬೀಳಲು ಭಾರತ ಸೇನೆಯು ಸಿಂಹವನ್ನು ಕಳೆದುಕೊಂಡ ಗಿರಿಕಂದರದ ಮಹಾ ಗುಹೆಯಂತಾಯಿತು. ಬಲಶಾಲಿ ವೀರ ಪಾಂಡವರಿಂದ ಮರ್ದಿತವಾದ ಕೌರವ ಸೈನ್ಯವು ನಾಲ್ಕೂ ಕಡೆಗಳಿಂದ ಬೀಸುವ ಭಿರುಗಾಳಿಗೆ ಸಿಲುಕಿ ಮಹಾಸಾಗರದಲ್ಲಿ ಮುರಿಯುತ್ತಿರುವ ನೌಕೆಯಂತಾಯಿತು. ಆ ಸೇನೆಯಲ್ಲಿದ್ದ ಅಶ್ವ-ರಥ-ಪದಾತಿಗಳು ತುಂಬಾ ವ್ಯಾಕುಲವಾಗಿದ್ದವು. ಸೈನಿಕರು ವಿಷಣ್ಣರಾಗಿದ್ದರು. ದೀನರಾಗಿ ಕಾಣುತ್ತಿದ್ದರು. ದೇವವ್ರತನಿಲ್ಲದೇ ತ್ರಸ್ತರಾದ ನೃಪತಿ-ಸೈನಿಕರು ಪಾತಾಳದಲ್ಲಿ ಮುಳುಗಿ ಹೋಗುತ್ತಿರುವವರೋ ಎನ್ನುವಂತಿರಲು ಕುರುಗಳು ದೇವವ್ರತನಂತಿರುವ ಕರ್ಣನನ್ನೇ ಸ್ಮರಿಸಿಕೊಂಡರು. ಮಧ್ಯಾಹ್ನದ ಸಮಯದಲ್ಲಿ ಸದ್ಗೃಹಸ್ತನು ಅತಿಥಿಯನ್ನು ಹೇಗೋ ಹಾಗೆ ಮತ್ತು ಆಪತ್ತಿನಲ್ಲಿರುವವರು ಬಂಧು-ಮಿತ್ರರನ್ನು ಹೇಗೋ ಹಾಗೆ ಅವರು ಆ ಸರ್ವಶಸ್ತ್ರಭೃತಶ್ರೇಷ್ಠನನ್ನು ಮನಸ್ಸಿನಲ್ಲಿ ಧ್ಯಾನಿಸಿದರು. ಪಾರ್ಥಿವರು ಅಲ್ಲಿ “ಕರ್ಣ ! ಕರ್ಣ !”

ಎಂದು ಕೂಗಿಕೊಂಡರು. ಅವರು ಹೀಗೆ ಮಾತನಾಡಿದರು:

> "ನಮ್ಮ ಹಿತಕ್ಕಾಗಿ ದೇಹವನ್ನೇ ಮುಡುಪಾಗಿಸಿರುವ ಸೂತಪುತ್ರ ರಾಧೇಯ ಕರ್ಣನನ್ನು ಅಮಾತ್ಯಬಂಧುಗಳೊಂದಿಗೆ ಬೇಗನೇ ಕರೆತನ್ನಿರಿ! ಆ ಮಹಾಯಶಸ್ವಿಯು ತನ್ನದೇ ಮಾತಿನಂತೆ ಈ ಹತ್ತು ದಿವಸಗಳು ಯುದ್ಧವನ್ನು ಮಾಡಲಿಲ್ಲ. ಏಕೆಂದರೆ ಮಹಾಬಾಹು ಭೀಷ್ಮನು ಸರ್ವ ಕ್ಷತ್ರಿಯರೂ ನೋಡುತ್ತಿದ್ದಂತೆ ಬಲವಿಕ್ರಮಶಾಲಿ ರಥಿಗಳನ್ನು ಗಣಿಸುವಾಗ ಕರ್ಣನನ್ನು ಅರ್ಧರಥನೆಂದು ಗಣಿಸಿದ್ದನು. ಆದರೆ ನರರ್ಷಭ ಕರ್ಣನು ಅದಕ್ಕಿಂತಲೂ ದ್ವಿಗುಣನು. ಪಿತೃವಿತ್ತಾಂಬು ದೇವೇಶನೊಡನೆಯೂ ಯುದ್ಧಮಾಡಲು ಉತ್ಸುಕನಾಗಿರುವ ಆ ಶೂರಸಮ್ಮತನು ರಥಾತಿರಥರ ಗಣನೆಯಲ್ಲಿ ಅಗ್ರಣಿಯಷ್ಟೇ!"

ಆದುದರಿಂದಲೇ ಅವನು ಕೋಪದಿಂದ ಗಾಂಗೇಯನಿಗೆ ಹೇಳಿದ್ದನು:

> "ಭೀಷ್ಮ! ನೀನು ಜೀವಿಸಿರುವವರೆಗೆ ಎಂದೂ ನಾನು ಯುದ್ಧಮಾಡುವುದಿಲ್ಲ. ಒಂದುವೇಳೆ ನೀನೇ ಪಾಂಡವರನ್ನು ಮಹಾಯುದ್ಧದಲ್ಲಿ ಸಂಹರಿಸಿಬಿಟ್ಟರೆ ದುರ್ಯೋಧನನ

> ಅನುಮತಿಯನ್ನು ಪಡೆದು ವನಕ್ಕೆ ಹೊರಟುಹೋಗುತ್ತೇನೆ. ಒಂದುವೇಳೆ ನೀನೇ ಪಾಂಡವರಿಂದ ಹತನಾಗಿ ಸ್ವರ್ಗಕ್ಕೆ ಹೊರಟುಹೋದರೆ ನೀನು ಯಾರನ್ನು ರಥರೆಂದು ಭಾವಿಸಿರುವೆಯೋ ಅವರೆಲ್ಲರನ್ನೂ ಒಂದೇ ರಥದಲ್ಲಿ ನಾನು ಸಂಹಾರಮಾಡುತ್ತೇನೆ.”

ಹೀಗೆ ಹೇಳಿ ಮಹಾಯಶಸ್ವಿ ಕರ್ಣನು ದುರ್ಯೋಧನನ ಸಮ್ಮತಿಯಂತೆ ಹತ್ತು ದಿವಸಗಳೂ ಯುದ್ಧ ಮಾಡಲಿಲ್ಲ. ಸಮರವಿಕ್ರಾಂತ ಪರಾಕ್ರಮಿ ಭೀಷ್ಮನು ಸಮರದಲ್ಲಿ ಪಾಂಡವೇಯನ ಅಸಂಖ್ಯಾತ ಯೋಧರನ್ನು ಸಂಹರಿಸಿದನು. ಆ ಶೂರ ಸತ್ಯಸಂಧ ಮಹೌಜಸನು ಹತನಾಗಲು ಧೃತರಾಷ್ಟ್ರನ ಮಕ್ಕಳು ನದಿಯನ್ನು ದಾಟಲು ಬಯಸುವವರು ದೋಣಿಯನ್ನು ಹೇಗೋ ಹಾಗೆ ಕರ್ಣನನ್ನು ಸ್ಮರಿಸಿಕೊಂಡರು. ಎಲ್ಲರಾಜರೊಂದಿಗೆ ಅವರು “ಹಾ ಕರ್ಣ! ಇದೋ ಸಮಯವೊದಗಿದೆ!” ಎಂದು ಕೂಗಿ ಹೇಳಿದರು. ಜಾಮದಗ್ನಿಯಿಂದ ಅಸ್ತ್ರಗಳನ್ನು ತಿಳಿದುಕೊಂಡಿದ್ದ ಮತ್ತು ಶತ್ರುಗಳನ್ನು ತಡೆಯಲು ಅಸಾಧ್ಯ ಪೌರುಷವನ್ನು ಪಡೆದಿದ್ದ ಕರ್ಣನು ಆಪತ್ತಿನಲ್ಲಿ ಬಂಧುಗಳನ್ನು ನೆನೆಯುವಂತಿದ್ದ ಅವರ ಮನಸ್ಸಿಗೆ ಬಂದನು. ಏಕೆಂದರೆ ತ್ರಿದಶರನ್ನು ಸತತವೂ ಮಹಾಭಯದಿಂದ ರಕ್ಷಿಸುವ ಗೋವಿಂದನಂತೆ ಅವನೇ

ಅವರನ್ನು ರಣದಲ್ಲಿ ಮಹಾಭಯದಿಂದ ರಕ್ಷಿಸಲು ಶಕ್ತನಾಗಿದ್ದನು.

ಕುರುಗಳ ಸೇನೆಯು ತುಂಡಾದ ನಾವೆಯಂತೆ ಅಗಾಧ ಸಮುದ್ರದಲ್ಲಿ ಮುಳುಗಿರಲು ಭೀಷ್ಮನು ಹತನಾದನೆಂದು ತಿಳಿದು ಅಧಿರಥಿ ಸೂತಪುತ್ರನು ಸಹೋದರನಂತೆ ದುರ್ಯೋಧನನ ಸೇನೆಯನ್ನು ಉಳಿಸಲು ಬಯಸಿದನು. ಆ ಮಹಾರಥ ಶಾಂತನವನು ಬಿದ್ದನೆಂದು ಕೇಳಿ ತಕ್ಷಣವೇ ಧನುರ್ಧರಶ್ರೇಷ್ಠ ಅಮಿತ್ರಕರ್ಷನ ವೃಷಸೇನ ಕರ್ಣನು ಹೊರಟನು. ಶತ್ರುಗಳಿಂದ ರಥಸತ್ತಮ ಭೀಷ್ಮನು ಹತನಾಗಿ ಕುರುಗಳ ನಾವೆಯು ಮಹಾಸಾಗರದಲ್ಲಿ ಮುಳುಗುತ್ತಿರಲು ತಂದೆಯು ಮಕ್ಕಳ ಬಳಿ ಬರುವಂತೆ ತ್ವರೆಮಾಡಿ ದುರ್ಯೋಧನನ ಸೇನೆಯನ್ನು ಉಳಿಸಲೋಸುಗ ಕರ್ಣನು ಅಲ್ಲಿಗೆ ಧಾವಿಸಿ ಬಂದನು. ಕರ್ಣನು ಹೇಳಿದನು:

> “ಯಾರಲ್ಲಿ ಧೃತಿ ಬುದ್ಧಿ ಪರಾಕ್ರಮ ಓಜಸ್ಸು ದಮ ವಿನಯ ಸಂಕೋಚ ಸತ್ಯ ವೀರಗುಣಗಳೆಲ್ಲವೂ, ದಿವ್ಯ ಅಸ್ತ್ರಗಳು ಮತ್ತು ಪ್ರೀತಿಯ ಮಾತುಗಳಿದ್ದವೋ ಆ ಬ್ರಹ್ಮದ್ವೇಷಿಗಳನ್ನು ಸಂಹರಿಸುವ, ಸತತವೂ ಕೃತಜ್ಞನಾಗಿದ್ದ, ಚಂದ್ರನಲ್ಲಿರುವ ಲಕ್ಷ್ಮಿಯಂತೆ ಸನಾತನನಾದ, ಪ್ರಶಾಂತ, ಪರವೀರಹಂತ ಭೀಷ್ಮನೇ ಹತನಾದನೆಂದರೆ ಎಲ್ಲ ಯೋಧರೂ

ಹತರಾದರಂತೆಯೇ! ಕರ್ಮಯೋಗದಿಂದ ಹುಟ್ಟಿದ ಯಾವುದೂ ಈ ಲೋಕದಲ್ಲಿ ನಿತ್ಯವೂ ಇರುವುದಿಲ್ಲವೆಂದು ತಿಳಿದುಕೊಳ್ಳಬೇಕು. ಏಕೆಂದರೆ ಇಂದು ಮಹಾವ್ರತನು ಹತನಾಗಲು ಯಾರುತಾನೇ ಸಂಶಯವಿಲ್ಲದೇ ನಾಳೆ ಸೂರ್ಯೋದಯವಾಗುತ್ತದೆಯೆಂದು ಹೇಳಬಹುದು? ಆ ವಸುಪ್ರಭಾವ ವಸುವೀರ್ಯಸಂಭವನು ವಸುಂಧರೆಯಲ್ಲಿ ವಸುವಾಗಿಯೇ ಹೋಗಲು ಇಂದು ಈ ಸೇನೆಯು ಸಂಪತ್ತು ಮಕ್ಕಳು ಭೂಮಿ ಮತ್ತು ಕುರುಗಳ ಕುರಿತು ಶೋಕಿಸುತ್ತಿದೆ!"

ಆ ಲೋಕಶ್ರೇಷ್ಠ ಮಹಾ ತೇಜಸ್ವಿ ಶಾಂತನವನು ಬೀಳಲು ಪರಾಜಿತರಾಗಿ ದುಃಖಿತ ಭರತರನ್ನು ಕರ್ಣನು ಜೋರಾಗಿ ಅಳುತ್ತಾ ಸಂತವಿಸತೊಡಗಿದನು. ರಾಧೇಯನ ಈ ಮಾತನ್ನು ಕೇಳಿ ಧೃತರಾಷ್ಟ್ರನ ಮಕ್ಕಳು ಮತ್ತು ಸೈನಿಕರು ಪರಸ್ಪರರನ್ನು ನೋಡಿ ತುಂಬಾ ಜೋರಾಗಿ ಕೂಗಿ ಅತ್ತರು. ಕೂಗುತ್ತಾ ಪುನಃ ಪುನಃ ಕಣ್ಣೀರನ್ನು ಸುರಿಸಿದರು. ಆದರೆ ಪುನಃ ಮಹಾಯುದ್ಧವು ಪ್ರಾರಂಭವಾಗಿ ಪಾರ್ಥಿವರು ಸೇನೆಗಳನ್ನು ಪ್ರಚೋದಿಸಲು ಸರ್ವಮಹಾರಥ ಋಷಭ ಕರ್ಣನು ರಥರ್ಷಭರಿಗೆ ಈ ಪ್ರೋತ್ಸಾಹಕರ ಮಾತುಗಳನ್ನಾಡಿದನು:

"ಅನಿತ್ಯವಾದ ಈ ಜಗತ್ತು ಸತತವೂ ಓಡುತ್ತಿರುತ್ತವೆ. ಇದನ್ನು

ಲಕ್ಷಿಸಿ ಎಲ್ಲವೂ ಅಸ್ಥಿರವೆಂದು ಯೋಚಿಸುತ್ತೇನೆ. ನೀವೆಲ್ಲ ಇರುವಾಗ ಹೇಗೆ ತಾನೇ ಗಿರಿಪ್ರಕಾಶ ಕುರುಪುಂಗವನು ರಣದಲ್ಲಿ ಬಿದ್ದನು? ಆಕಾಶದಿಂದ ಬಿದ್ದ ಸೂರ್ಯನಂತೆ ಮಹಾರಥ ಶಾಂತನವನು ಭೂಮಿಯ ಮೇಲೆ ಮಲಗಿರಲು ಭಿರುಗಾಳಿಯನ್ನು ಎದುರಿಸಲಾರದ ಪರ್ವತದ ಮರಗಳಂತೆ ಧನಂಜಯನನ್ನು ಎದುರಿಸಲು ಪಾರ್ಥಿವರು ಅಶಕ್ಯರಾಗಿದ್ದಾರೆ. ಆ ಮಹಾತ್ಮನಂತೆ ನಾನು ಇಂದು ಪ್ರಧಾನನನ್ನು ಕಳೆದುಕೊಂಡು ಪರರಿಂದ ನಾಶಗೊಂಡು ಉತ್ಸಾಹವನ್ನು ಕಳೆದುಕೊಂಡು ಅನಾಥವಾಗಿರುವ ಈ ಕುರುಸೇನೆಯನ್ನು ಯುದ್ಧದಲ್ಲಿ ರಕ್ಷಿಸುತ್ತೇನೆ. ಈ ಭಾರವನ್ನು ನನ್ನ ಮೇಲೆ ತೆಗೆದುಕೊಳ್ಳುತ್ತೇನೆ. ಈ ಜಗತ್ತು ಅನಿತ್ಯವೆಂದು ತಿಳಿದುಕೊಂಡು, ಯುದ್ಧನಾಯಕನೇ ಯುದ್ಧದಲ್ಲಿ ಬಿದ್ದಿರುವುದನ್ನು ಲಕ್ಷದಲ್ಲಿಟ್ಟುಕೊಂಡ ನನಗೆ ಯುದ್ಧದಲ್ಲಿ ಭಯವೇನಿದೆ? ಆದುದರಿಂದ ನಾನು ರಣದಲ್ಲಿ ಸಂಚರಿಸಿ ಜಿಹ್ಮಗಗಳಿಂದ ಆ ಕುರುವೃಷಭರನ್ನು ಯಮಸದನಕ್ಕೆ ಕಳುಹಿಸುತ್ತೇನೆ. ಜಗತ್ತಿನಲ್ಲಿ ಯಶಸ್ಸೇ ಹೆಚ್ಚಿನದು ಎಂದು ತಿಳಿದುಕೊಂಡು ಯುದ್ಧದಲ್ಲಿ ಶತ್ರುಗಳಿಂದ ಹತನಾಗುತ್ತೇನೆ ಅಥವಾ ಅವರಿಂದ ಹತನಾಗಿ ಮಲಗುತ್ತೇನೆ. ಯುಧಿಷ್ಠಿರನಲ್ಲಿ

ಧೃತಿ, ಮತಿ ಮತ್ತು ಧರ್ಮತತ್ವಗಳಿವೆ. ವೃಕೋದರನ ವಿಕ್ರಮವು ನೂರು ಆನೆಗಳಿಗೆ ಸಮನಾದುದು. ಹಾಗೆಯೇ ಅರ್ಜುನನು ಯುವಕ ಮತ್ತು ತ್ರಿದಶರಲ್ಲಿ ಶ್ರೇಷ್ಠನಾದವನ ಮಗ. ಅವರ ಸೇನೆಯನ್ನು ಅಮರರೂ ಕೂಡ ಸುಲಭವಾಗಿ ಗೆಲ್ಲಲಾರರು. ಯಾವ ಸೇನೆಯಲ್ಲಿ ಯಮರಂತಿರುವ ಯಮಳರಿದ್ದಾರೆಯೋ, ಸಾತ್ಯಕಿ, ದೇವಕೀ ಸುತರಿದ್ದಾರೋ ಅದು ಮೃತ್ಯುವಿನ ಬಾಯಿಯಿದ್ದಂತೆ. ಅದನ್ನು ಎದುರಿಸಿದ ಯಾವ ಕಾಪುರುಷನೂ ಜೀವಂತ ಹಿಂದಿರುಗಲಾರ. ಬುದ್ಧಿವಂತರು ತಪಸ್ಸನ್ನು ತಪಸ್ಸಿನಿಂದಲೇ ಮತ್ತು ಬಲವನ್ನು ಬಲದಿಂದಲೇ ಎದುರಿಸುತ್ತಾರೆ. ನಾನೂ ಕೂಡ ಶತ್ರುನಿವಾರಣೆಯ ಮತ್ತು ಸ್ವ-ರಕ್ಷಣೆಯ ಅಚಲವಾದ ನಿಶ್ಚಯವನ್ನು ಮಾಡಿದ್ದೇನೆ.

ಸೂತ! ನಾನೀಗಲೇ ಯುದ್ಧಕ್ಕೆ ಹೋಗಿ ಶತ್ರುಗಳ ಪ್ರಭಾವವನ್ನು ಕುಗ್ಗಿಸುತ್ತೇನೆ. ಮಿತ್ರನಿಗೆ ದ್ರೋಹವನ್ನೆಸುವುದು ನನಗೆ ಸಹ್ಯವಾಗುವುದಿಲ್ಲ. ಸೈನ್ಯವು ಭಗ್ನವಾಗಿರುವಾಗ ಸಹಾಯ ಮಾಡುವವನೇ ಮಿತ್ರನು. ಸತ್ಪುರುಷರಿಗೆ ಯೋಗ್ಯವಾದ ಈ ಕಾರ್ಯವನ್ನು ನಾನು ಮಾಡುತ್ತೇನೆ.

ಪ್ರಾಣಗಳನ್ನು ತ್ಯಜಿಸಿ ಭೀಷ್ಮನನ್ನು ಅನುಸರಿಸಿ ಹೋಗುತ್ತೇನೆ. ಯುದ್ಧದಲ್ಲಿ ಸರ್ವ ಶತ್ರುಸಂಘಗಳನ್ನು ಸಂಹರಿಸುತ್ತೇನೆ ಅಥವಾ ಹತನಾಗಿ ವೀರಲೋಕಕ್ಕೆ ಹೋಗುತ್ತೇನೆ. ಧಾರ್ತರಾಷ್ಟ್ರನ ಪೌರುಷವು ಉಡುಗಿಹೋಗಿದೆ. ಹೆಂಗಸರು ಮಕ್ಕಳು ಮೊರೆಯಿಟ್ಟು ರೋದಿಸುತ್ತಿದ್ದಾರೆ. ಇಂತಹ ಸಮಯದಲ್ಲಿ ನಾನು ಏನು ಮಾಡಬೇಕೆಂದು ತಿಳಿದುಕೊಂಡಿದ್ದೇನೆ. ಆದುದರಿಂದ ಧಾರ್ತರಾಷ್ಟ್ರನ ಶತ್ರುಗಳನ್ನು ಜಯಿಸುತ್ತೇನೆ. ಕುರುಗಳನ್ನು ರಕ್ಷಿಸಿ, ಪಾಂಡುಪುತ್ರರನ್ನು ಸಂಹರಿಸಿ, ಘೋರರೂಪದ ಈ ರಣದಲ್ಲಿ ಪ್ರಾಣಗಳನ್ನು ತ್ಯಜಿಸಿ, ಯುದ್ಧದಲ್ಲಿ ಎಲ್ಲ ಶತ್ರುಪಡೆಗಳನ್ನು ಸಂಹರಿಸಿ ನಾನು ರಾಜ್ಯವನ್ನು ಧಾರ್ತರಾಷ್ಟ್ರನಿಗೆ ಕೊಡುತ್ತೇನೆ. ಮಣಿರತ್ನಗಳಿಂದ ಹೊಳೆಯುವ, ಶುಭ್ರವಾದ, ವಿಚಿತ್ರವಾದ, ಬಂಗಾರದ, ಕವಚವನ್ನು ನನಗೆ ತೊಡಿಸು. ಸೂರ್ಯನಂತೆ ಹೊಳೆಯುತ್ತಿರುವ ಶಿರಸ್ತ್ರಾಣವನ್ನೂ, ಸರ್ಪಗಳಂತಿರುವ ಧನುಸ್ಸು-ಬಾಣಗಳನ್ನೂ ಕೊಡು. ಹದಿನಾರು ಭತ್ತಳಿಕೆಗಳ ವ್ಯವಸ್ಥೆಯಾಗಲಿ. ದಿವ್ಯವಾದ ಧನುಸ್ಸುಗಳನ್ನೂ, ಖಡ್ಗಗಳನ್ನೂ, ಶಕ್ತಿಗಳನ್ನೂ, ಭಾರವಾದ ಗದೆಗಳನ್ನೂ, ಬಂಗಾರದ ಚಿತ್ರಗಳಿಂದ ಹೊಳೆಯುವ ಶಂಖವನ್ನೂ ತರಲಿ. ಆನೆಗೆ

ಕಟ್ಟುವ ಸುವರ್ಣಮಯವಾದ ವಿಚಿತ್ರವಾದ ಸರಪಣಿಯನ್ನೂ, ಜಯವನ್ನು ಗಳಿಸುವ ಕಮಲದ ಚಿಹ್ನೆಯಿರುವ ಹೊಳೆಯುವ ಧ್ವಜವನ್ನೂ, ನವಿರಾದ ಮತ್ತು ಸುಂದರ ಬಟ್ಟೆಗಳಿಂದ ಒರೆಸಿಕೊಂಡು, ಮಗಳಕರವಾದ ಅರಳಿನಿಂದ ಕಟ್ಟಿದ ಚಿತ್ರ-ವಿಚಿತ್ರವಾಗಿರುವ ಪುಷ್ಪಮಾಲಿಕೆಯನ್ನೂ ತರಲಿ.

ಶ್ರೀಘ್ರಗಾಮಿಗಳಾದ, ಬಿಳಿಯ ಮೋಡದಂತೆ ಪ್ರಕಾಶಮಾನವಾದ, ಪುಷ್ಟವಾದ, ಮಂತ್ರಪೂತ ನೀರಿನಿಂದ ಸ್ನಾನಮಾಡಿರುವ, ಪುಟಕ್ಕೆ ಹಾಕಿದ ಚಿನ್ನದ ಆಭರಣಗಳಿಂದ ಸಮಲಂಕೃತವಾದ ಕುದುರೆಗಳನ್ನು ಶೀಘ್ರವಾಗಿ ಕರೆತಾ.

ಸುವರ್ಣಮಾಲೆಗಳಿಂದ ಅಲಂಕೃತವಾದ, ಸೂರ್ಯಚಂದ್ರರ ಪ್ರಕಾಶವುಳ್ಳ, ರತ್ನಗಳಿಂದ ಚಿತ್ರಿತವಾದ, ಯುದ್ಧೋಪಯೋಗೀ ಸಾಮಗ್ರಿಗಳಿಂದ ಸಂಪನ್ನವಾದ, ಉಪಪನ್ನ ಕುದುರೆಗಳನ್ನು ಕಟ್ಟಲ್ಪಟ್ಟ ರಥವನ್ನು ಶೀಘ್ರವಾಗಿ ಸಿದ್ಧಗೊಳಿಸು.

ವೇಗಯುಕ್ತವಾದ ಮತ್ತು ಚಿತ್ರಿತವಾದ ಧನುಸ್ಸುಗಳನ್ನೂ, ಗಟ್ಟಿಯಾದ ಶಿಂಜಿನಿಗಳನ್ನೂ, ಕವಚಗಳನ್ನೂ, ಬಾಣಗಳಿಂದ ತುಂಬಿದ ಭತ್ತಳಿಕೆಗಳನ್ನೂ, ಶರೀರದ ಆವರಣಗಳನ್ನೂ ಕೂಡಲೇ ಸಜ್ಜುಗೊಳಿಸು. ರಣಯಾತ್ರೆಗೆ ಅವಶ್ಯವಾದ ಎಲ್ಲ ಸಾಮಗ್ರಿಗಳನ್ನೂ ತನ್ನಿ. ಮೊಸರಿನಿಂದ ತುಂಬಿದ ಕಂಚಿನ

ಮತ್ತು ಚಿನ್ನದ ಪಾತ್ರೆಗಳನ್ನು ಹಿಡಿದು ಕನ್ಯೆಯರು ಬಂದು ವಿಜಯ ಮಾಲೆಯನ್ನು ತೊಡಿಸಲಿ. ವಿಜಯಕ್ಕಾಗಿ ಭೇರಿಗಳನ್ನು ಮೊಳಗಿಸಿ. ಸೂತ! ಅನಂತರ ಎಲ್ಲಿ ಕಿರೀಟೀ, ವೃಕೋದರ, ಧರ್ಮಸುತ ಮತ್ತು ಯಮಳರು ಇರುವರೋ ಅಲ್ಲಿಗೆ ಕರೆದುಕೊಂಡು ಹೋಗು.

ಅವರನ್ನು ಒಟ್ಟಿಗೇ ಯುದ್ಧದಲ್ಲಿ ಸಂಹರಿಸುತ್ತೇನೆ ಅಥವಾ ಶತ್ರುಗಳಿಂದ ಹತನಾಗಿ ಭೀಷ್ಮನನ್ನು ಅನುಸರಿಸಿ ಹೋಗುತ್ತೇನೆ. ಯಾರ ರಾಜನು ಸತ್ಯಧೃತಿ ಯುಧಿಷ್ಠಿರನೋ, ಯಾರಲ್ಲಿ ಭೀಮಸೇನ-ಅರ್ಜುನರು, ವಾಸುದೇವ-ಸಾತ್ಯಕಿಯರು ಮತ್ತು ಸೃಂಜಯರಿದ್ದಾರೋ ಆ ಸೇನೆಯು ಮಹೀಪರಿಂದ ಅಜಯ್ಯವೆಂದು ಅನ್ನಿಸುತ್ತದೆ. ಎಲ್ಲವನ್ನೂ ನಾಶಪಡಿಸುವ ಮೃತ್ಯುವೇ ಒಂದುವೇಳೆ ಅವನನ್ನು ರಕ್ಷಿಸಿದರೂ ಸದಾ ಅಪ್ರಮತ್ತನಾಗಿರುವ ಕಿರೀಟಿಯನ್ನು ಸಮರದಲ್ಲಿ ಸೇನೆಗಳೊಂದಿಗೆ ಸಂಹರಿಸುತ್ತೇನೆ ಅಥವಾ ಭೀಷ್ಮನ ದಾರಿಯಲ್ಲಿ ಯಮನಲ್ಲಿಗೆ ಹೋಗುತ್ತೇನೆ. ನಾನು ಈಗ ಹೇಳುತ್ತಿದ್ದೇನೆ. ಆ ಶೂರರ ಮಧ್ಯೆ ನುಗ್ಗಿ ಹೋಗುತ್ತೇನೆ. ಮಿತ್ರದ್ರೋಹಿಗಳು, ದುರ್ಬಲ ಭಕ್ತರು, ಪಾಪಾತ್ಮರು ನನ್ನ

ಸಹಾಯಕ್ಕೆ ಬರುವವರಲ್ಲ.”

ಅವನು ಉತ್ತಮವಾದ ದೃಢವಾದ ನೊಗವನ್ನುಳ್ಳ, ಬಂಗಾರದಿಂದ ಸಮಲಂಕೃತವಾದ ಶುಭವಾದ ಪಾತಕಗಳನ್ನುಳ್ಳ, ಗಾಳಿಯ ವೇಗವುಳ್ಳ ಉತ್ತಮ ಕುದುರೆಗಳನ್ನು ಕಟ್ಟಿದ್ದ ರಥದಲ್ಲಿ ಕುಳಿತು ಜಯಕ್ಕಾಗಿ ಹೊರಟನು. ಕುರುಗಳಿಂದ ಗೌರವಿಸಿಕೊಳ್ಳುತ್ತಾ ಆ ಮಹಾತ್ಮಾ ರಥರ್ಷಭ ಉಗ್ರಧನ್ವಿ ಯೋಧನು ಬಿಳಿಯ ಕುದುರೆಗಳನ್ನು ಕಟ್ಟಿದ್ದ ರಥದಲ್ಲಿ ಭರತರ್ಷಭ ಭೀಷ್ಮನು ಅವಸಾನಹೊಂದಿದಲ್ಲಿಗೆ ಹೋದನು. ಮಹಾ ವರೂಥವನ್ನೇರಿ, ಧ್ವಜದಿಂದ ಕೂಡಿದ, ಸುವರ್ಣ-ಮುತ್ತು-ಮಣಿ-ವಜ್ರಗಳಿಂದ ಅಲಂಕೃತವಾದ, ಮೇಘದ ಧ್ವನಿಯುಳ್ಳ, ಸೂರ್ಯನ ತೇಜಸ್ಸುಳ್ಳ ಕುದುರೆಗಳನ್ನು ಕಟ್ಟಿದ್ದ ರಥದಲ್ಲಿ ಕರ್ಣನು ಹೊರಟನು. ಹುತಾಶನನಂತೆ ಹೊಳೆಯುವ ಅವನು ಹುತಾಶನನ ಪ್ರಭೆಯುಳ್ಳ, ಶುಭನಾಗಿದ್ದ ಅವನು ಶುಭವಾದ ರಥದಲ್ಲಿ, ಸ್ವಯಂ ವಿಮಾನದಲ್ಲಿ ನಿಂತ ಸುರರಾಜನಂತೆ ಆ ಧನುರ್ಧರ ಅಧಿರಥಿ ಮಹಾರಥಿಯು ನಿಂತು ರಾರಾಜಿಸಿದನು.

ಮಹಾ ಚಂಡಮಾರುತದಿಂದ ಶೋಷಿತವಾದ ಸಮುದ್ರದಂತಿದ್ದ ಶರತಲ್ಪದಲ್ಲಿ ಮಲಗಿದ್ದ, ಭೀಷ್ಮನನ್ನು ನೋಡಿ ಅದಿರಥನು ರಥದಿಂದ ಇಳಿದು ಆರ್ತನಾಗಿ, ಕಣ್ಣೀರಿನಿಂದ ವ್ಯಾಕುಲಗೊಂಡ ಮಾತಿನಲ್ಲಿ

ಕೈಮುಗಿದು ಅಭಿವಾದಿಸಿ ನಮಸ್ಕರಿಸುತ್ತಾ ಹೇಳಿದನು:

“ಭಾರತ! ನಾನು ಕರ್ಣ. ನಿನಗೆ ಮಂಗಳವಾಗಲಿ. ಇಂದು ನನ್ನೊಡನೆ ಮಾತನಾಡು! ಪುಣ್ಯವಾದ ಕ್ಷೇಮಕರ ಮಾತಿನಿಂದ ದೃಷ್ಟಿಯಿಂದ ನನ್ನನ್ನು ನೋಡು! ಧರ್ಮಪರ ವೃದ್ಧನಾದ ನೀನೇ ಭೂಮಿಯ ಮೇಲೆ ಹೀಗೆ ಮಲಗಿದ್ದೀಯೇ ಎಂದರೆ ಪುಣ್ಯಕರ್ಮಗಳ ಫಲವು ಇಲ್ಲಿ ಯಾರಿಗೂ ದೊರೆಯುವುದಿಲ್ಲವೆಂದಲ್ಲವೇ? ಕುರುಸತ್ತಮ! ಕೋಶ ಸಂಗ್ರಹದಲ್ಲಿ, ಮಂತ್ರಾಲೋಚನೆಯಲ್ಲಿ, ವ್ಯೂಹರಚನೆಯಲ್ಲಿ, ಪ್ರಹರಿಸುವುದರಲ್ಲಿ ಕುರುಗಳ ನಾಥನಾಗಿ ಬೇರೆ ಯಾರನ್ನೂ ನಾನು ಕಾಣುತ್ತಿಲ್ಲ. ವಿಶುದ್ಧ ಬುದ್ಧಿಯಿಂದ ಯುಕ್ತನಾಗಿ ಕುರುಗಳನ್ನು ಭಯದಿಂದ ಪಾರುಗೊಳಿಸಿ, ಯುದ್ಧದಲ್ಲಿ ಅನೇಕ ಯೋಧರನ್ನು ಸಂಹರಿಸಿ ಪಿತೃಲೋಕಕ್ಕೆ ಹೋಗುತ್ತಿರುವೆ? ಇಂದಿನಿಂದ ಪಾಂಡವರು ಕ್ರುದ್ಧರಾಗಿ ವ್ಯಾಘ್ರವು ಮೃಗಗಳನ್ನು ಕೊಲ್ಲುವಂತೆ ಕುರುಗಳ ಕ್ಷಯವನ್ನು ಮಾಡುತ್ತಾರೆ. ಇಂದು ಸವ್ಯಸಾಚಿಯ ವೀರ್ಯವನ್ನು ತಿಳಿದ ಕುರುಗಳು ಗಾಂಡೀವಘೋಷದಿಂದಾಗಿ ವಜ್ರಪಾಣಿಯನ್ನು ಅಸುರರು ಹೇಗೋ ಹಾಗೆ ತಡೆದುಕೊಳ್ಳಲಾರರು. ಇಂದು ಸಿಡಿಲಿನಂತೆ

ಗುಡುಗುವ ಗಾಂಡೀವದಿಂದ ಹೊರಟ ಬಾಣಗಳು ಸಂಗ್ರಾಮದಲ್ಲಿ ಕುರುಗಳನ್ನೂ ಅನ್ಯ ಪಾರ್ಥಿವರನ್ನೂ ತ್ರಾಸಗೊಳಿಸಲಿವೆ. ಮಹಾಜ್ವಾಲೆಯ ಅಗ್ನಿಯಲ್ಲಿ ವೃಕ್ಷಗಳು ಹೇಗೆ ಸುಟ್ಟುಹೋಗುತ್ತವೆಯೋ ಹಾಗೆ ಕಿರೀಟಿಯ ಬಾಣಗಳಿಂದ ಧಾರ್ತರಾಷ್ಟ್ರರು ಭಸ್ಮವಾಗಲಿದ್ದಾರೆ. ವಾಯು ಮತ್ತು ಅಗ್ನಿಯರು ಒಟ್ಟಿಗೇ ವನದಲ್ಲಿ ಎಲ್ಲೆಲ್ಲಿ ಪ್ರಸರಿಸುತ್ತಾರೆಯೋ ಅಲ್ಲಲ್ಲಿ ಸುಡುವಂತೆ ಭಗವಂತರಿಬ್ಬರೂ ಇಚ್ಛಿಸಿದವರನ್ನು ಸುಡುತ್ತಾರೆ. ಅಗ್ನಿಯು ಹೇಗೆ ಸುಡುತ್ತಾನೋ ಹಾಗೆ ಪಾರ್ಥ ಎನ್ನುವುದರಲ್ಲಿ ಸಂಶಯವಿಲ್ಲ. ಹಾಗೆಯೇ ಕೃಷ್ಣನು ವಾಯು ಎನ್ನುವುದರಲ್ಲಿಯೂ ಸಂಶಯವಿಲ್ಲ. ಪಾಂಚಜನ್ಯದ ಧ್ವನಿ ಮತ್ತು ಗಾಂಡೀವದ ಟೇಂಕಾರಗಳನ್ನು ಕೇಳಿ ಸರ್ವ ಸೈನ್ಯಗಳೂ ಭಯೋದ್ವಿಗ್ನರಾಗುತ್ತಾರೆ. ನಿನ್ನನ್ನು ಬಿಟ್ಟು ಬೇರೆ ಯಾವ ಪಾರ್ಥಿವರಿಗೂ ಕಪಿಧ್ವಜ ಅಮಿತ್ರಕರ್ಶನನ ನುಗ್ಗಿ ಬರುತ್ತಿರುವ ರಥವನ್ನು ತಡೆಯಲು ಸಾಧ್ಯವಿಲ್ಲ. ಯಾರ ದಿವ್ಯ ಕರ್ಮಗಳನ್ನು ಮನೀಷಿಣರು ಮಾತನಾಡಿಕೊಳ್ಳುತ್ತಿರುತ್ತಾರೋ, ಯಾವ ಧೀಮಂತನು ತ್ರ್ಯಂಬಕನೊಂದಿಗೆ ಅಮಾನುಷ ಸಂಗ್ರಾಮವನ್ನು ನಡೆಸಿ ಅವನಿಂದ ವರವನ್ನು ಪಡೆದನೋ ಅಂತಹ ದುಷ್ಪ್ರಾಪ

ಕೃತಾತ್ಮ ಅರ್ಜುನನೊಂದಿಗೆ ರಣದಲ್ಲಿ ಹೋರಾಡಲು ಬೇರೆ ಯಾವ ಪಾರ್ಥಿವರೂ ಅರ್ಹರಲ್ಲ. ಇಂದು ಆ ಪಾಂಡವ ಯುದ್ಧಶೌಂಡನನ್ನು ಸಹಿಸಲಾಗದ ನಾನು ನಿನ್ನ ಅನುಜ್ಞೆಯನ್ನು ಪಡೆದು ಸರ್ಪದ ವಿಷದಂತಿರುವ, ಘೋರ ದೃಷ್ಟಿಯಿಂದಲೇ ಸಂಹರಿಸಬಲ್ಲ ಅವನನ್ನು ಗೌರವಿಸಿ ವಧಿಸುತ್ತೇನೆ ಅಥವಾ ಜಯವನ್ನು ಗಳಿಸುತ್ತೇನೆ.”

ಅವನ ಆ ಲಲಾಪಗಳನ್ನು ಕೇಳಿದ ಪ್ರೀತಮನಸ್ಕನಾದ ವೃದ್ಧ ಕುರುಪಿತಾಮಹನು ದೇಶ ಕಾಲೋಚಿತವಾದ ಮಾತನ್ನಾಡಿದನು:

“ನದಿಗಳಿಗೆ ಸಮುದ್ರದಂತೆ, ಬೆಳಗುತ್ತಿರುವವರಲ್ಲಿ ಭಾಸ್ಕರನಂತೆ, ಸಂತರಿಗೆ ಸತ್ಯದಂತೆ, ಫಲವತ್ತಾದ ಭೂಮಿಗೆ ಬೀಜದಂತೆ, ಜೀವಿಗಳಿಗೆ ಮಳೆಯಂತೆ ನಿನ್ನ ಸುಹೃದಯರಲ್ಲಿ ನೆಲೆಸಿರು. ಸಹಸ್ರಾಕ್ಷನನ್ನು ಅವಲಂಬಿಸಿ ಅಮರರು ಇರುವಂತೆ ಬಾಂಧವರು ನಿನ್ನನ್ನು ಅವಲಂಬಿಸಿರಲಿ. ಕರ್ಣ ! ಧಾರ್ತರಾಷ್ಟ್ರನಿಗೆ ಪ್ರಿಯವಾದುದನ್ನು ಮಾಡಲಿಚ್ಛಿಸಿ ನೀನು ರಾಜಪುರಕ್ಕೆ ಹೋಗಿ ಕಾಂಬೋಜರನ್ನು ಸಂಹರಿಸಿದೆ. ಗಿರಿವ್ರಜಕ್ಕೆ ಹೋಗಿ ನಗ್ನಜಿತನೇ ಮೊದಲಾದ ಪ್ರಮುಖ ನೃಪರನ್ನೂ, ಅಂಬಷ್ಠ, ವಿದೇಹ, ಗಾಂಧಾರರನ್ನು ನೀನು ಗೆದ್ದೆ.

ಹಿಂದೆ ನೀನು ಹಿಮವತ್ಪರ್ವತದ ಕಣಿವೆಯಲ್ಲಿ ವಾಸಿಸುವ ರಣಕರ್ಕಶರಾದ ಕಿರಾತರು ದುರ್ಯೋಧನನನ ವಶದಲ್ಲಿ ಬರುವಂತೆ ಮಾಡಿದೆ. ದುರ್ಯೋಧನನಿಗೆ ಹಿತವನ್ನು ಮಾಡಲು ಬಯಸಿ ನಿನ್ನ ವೀರ್ಯ ಮತ್ತು ಮಹಾ ಓಜಸ್ಸಿನಿಂದ ನೀನು ಅಲ್ಲಲ್ಲಿ ಅನೇಕರನ್ನು ಗೆದ್ದೆ. ದುರ್ಯೋಧನನು ಜ್ಞಾತಿಕುಲಬಾಂಧವರಿಗೆ ಹೇಗೋ ಹಾಗೆ ನೀನೂ ಕೂಡ ಸರ್ವ ಕೌರವರಿಗೆ ಗತಿಯಾಗಿರು. ಮಂಗಳಕರವಾಗಿ ನಿನಗೆ ಹೇಳುತ್ತಿದ್ದೇನೆ. ಹೋಗು! ಶತ್ರುಗಳೊಂದಿಗೆ ಯುದ್ಧಮಾಡು! ಯುದ್ಧದಲ್ಲಿ ಕುರುಗಳನ್ನು ನಡೆಸಿ ದುರ್ಯೋಧನನಿಗೆ ಜಯವನ್ನು ಕೊಡು. ದುರ್ಯೋಧನನು ಹೇಗೋ ಹಾಗೆ ನೀನೂ ಕೂಡ ನಮಗೆ ಮೊಮ್ಮಗನ ಸಮನಾಗಿರುವೆ. ಆದುದರಿಂದ ಧರ್ಮತಃ ನಮ್ಮದೆಲ್ಲವೂ ನಿನ್ನದೂ ಕೂಡ. ಒಂದೇ ತಾಯಿಯಲ್ಲಿ ಹುಟ್ಟಿದವರಿಗಿಂತ ಸಜ್ಜನರ ಸಂಗವು ವಿಶಿಷ್ಟವಾದುದೆಂದು ತಿಳಿದವರು ಹೇಳುತ್ತಾರೆ. ಆದುದರಿಂದ ಸತ್ಯಸಂಗರನಾಗಿದ್ದುಕೊಂಡು ದುರ್ಯೋಧನನ ಸೇನೆಯನ್ನು ನನ್ನದೇ ಎಂದು ನಿಶ್ಚಯಿಸಿ ಕುರುಗಳನ್ನು ಪಾಲಿಸು!”

ಅವನ ಆ ಮಾತನ್ನು ಕೇಳಿ ವೈಕರ್ತನ ಕರ್ಣನು ಅವನ ಚರಣಗಳಿಗೆ

ನಮಸ್ಕರಿಸಿ ಬೇಗನೇ ದುರ್ಯೋಧನನ ಕಡೆ ಹೋದನು. ಅವನು ಆ ಅಪ್ರತಿಮ ಸ್ಥಾನದ ಮಹಾ ಸೇನೆಯನ್ನು ನೋಡಿ ವಿಶಾಲ ಎದೆಯ ಅವನು ಉತ್ತೇಜಿಸಿದನು. ಯುದ್ಧಕ್ಕೆ ಬಂದೊದಗಿದ ಮಹೇಷ್ವಾಸ ಕರ್ಣನನ್ನು ನೋಡಿ ಕೌರವರು ಅವನನ್ನು ಭುಜಗಳನ್ನು ತಟ್ಟುವುದರ ಮೂಲಕ, ಸಿಂಹನಾದದೊಂದಿಗೆ ವಿವಿಧ ಧನುಸ್ಸುಗಳ ಶಬ್ಧಗಳೊಂದಿಗೆ ಗೌರವಿಸಿದರು.

## ದ್ರೋಣನ ಸೇನಾಪತ್ಯ

ರಥದಲ್ಲಿ ನಿಂತಿದ್ದ ಪುರುಷವ್ಯಾಘ್ರ ಕರ್ಣನನ್ನು ನೋಡಿ ಹೃಷ್ಟನಾದ ದುರ್ಯೋಧನನು ಈ ಮಾತನ್ನಾಡಿನು:

> “ನಿನ್ನಿಂದ ಪಾಲಿತವಾದ ಈ ಸೇನೆಯು ಈಗ ನಾಯಕನನ್ನು ಪಡೆದಿದೆ. ಈಗ ನೀನು ಏನು ಮಾಡುವುದು ಒಳ್ಳೆಯದೆಂದು ಅಭಿಪ್ರಾಯ ಪಡುತ್ತೀಯೋ ಅದರಂತೆಯೇ ಆಗಲಿ!”

ಕರ್ಣನು ಹೇಳಿದನು:

> “ಪುರುಷವ್ಯಾಘ್ರ! ನೃಪ! ನಿನಗೆ ಎಲ್ಲರಿಗಿಂತ ಹೆಚ್ಚು ತಿಳಿದಿದೆ. ನೀನೇ ಹೇಳು. ರಾಜನು ಏನು ಮಾಡಬೇಕೆಂದು ಯೋಚಿಸಿರುತ್ತಾನೋ ಅದನ್ನು ಇನ್ನೊಬ್ಬರು ಯೋಚಿಸಿ

ಹೇಳಲಿಕ್ಕಾಗುವುದಿಲ್ಲ. ಇಲ್ಲಿ ನಾವೆಲ್ಲರೂ ನಿನ್ನ ಮಾತುಗಳನ್ನು ಕೇಳಲು ಬಯಸಿದ್ದೇವೆ. ನೀನು ಅನ್ಯಾಯದ ಮಾತುಗಳನ್ನು ಹೇಳುವುದೇ ಇಲ್ಲವೆಂದು ನನ್ನ ಅಭಿಪ್ರಾಯ.”

ದುರ್ಯೋಧನನು ಹೇಳಿದನು:

“ವಯಸ್ಸು, ವಿಕ್ರಮ, ವಿದ್ಯೆ ಮತ್ತು ಯೋಧನಲ್ಲಿರಬೇಕಾದ ಎಲ್ಲ ಗುಣಗಳಿಂದ ಸುಸಂಪನ್ನನಾಗಿದ್ದ ಭೀಷ್ಮನು ನಮ್ಮ ಸೇನಾಪತಿಯಾಗಿದ್ದನು. ಕರ್ಣ! ಅತಿ ಯಶಸ್ವಿಯಾಗಿದ್ದ ಆ ಮಹಾತ್ಮನು ನನ್ನ ಶತ್ರುಗಣಗಳನ್ನು ಸಂಹರಿಸುತ್ತ ಉತ್ತಮವಾಗಿ ಯುದ್ಧಮಾಡಿ ಹತ್ತು ದಿನಗಳು ನಮ್ಮನ್ನು ಪಾಲಿಸಿದನು. ಅವನು ಸಾಧಿಸಲಸಾಧ್ಯವಾದುದನ್ನು ಸಾಧಿಸಿ ಸ್ವರ್ಗದ ದಾರಿಯನ್ನು ಹಿಡಿದಿದ್ದಾನೆ. ಅವನ ನಂತರ ಯಾರನ್ನು ಸೇನಾಪತಿಯನ್ನಾಗಿ ಮಾಡಬೇಕೆಂದು ನಿನ್ನ ಅಭಿಪ್ರಾಯ? ನಾಯಕನಿಲ್ಲದೇ ಯುದ್ಧದಲ್ಲಿ ಸೇನೆಯು ನೀರಿನಲ್ಲಿ ನಾಯಕನಿಲ್ಲದ ದೋಣಿಯಂತೆ ಮುಹೂರ್ತಕಾಲವೂ ನಿಲ್ಲಲಾರದು. ನಡೆಸುವವನಿಲ್ಲದ ದೋಣಿಯಂತೆ, ಸಾರಥಿಯಿಲ್ಲದ ರಥದಂತೆ ಸೇನಾಪತಿಯಿಲ್ಲದ ಸೇನೆಯು ಇಷ್ಟಬಂದಲ್ಲಿ ಓಡಿ

ಹೋಗುವುದಿಲ್ಲವೇ? ಈಗ ನೀನು ನನ್ನವರಾದ ಮಹಾತ್ಮರಲ್ಲಿ ಶಾಂತನವನಂತೆ ಸೇನಾಪತಿಯಾಗಲು ಯುಕ್ತನಾರೆಂದು ನೋಡು! ಯಾರನ್ನು ನೀನು ಸೇನಾಪತಿಯೆಂದು ಆರಿಸುತ್ತೀಯೋ ಅವನನ್ನೇ ನಾವೆಲ್ಲರೂ ಸೇರಿ ಸೇನಾಪತಿಯೆಂದು ಮಾಡೋಣ!”

ಕರ್ಣನು ಹೇಳಿದನು:

“ಈ ಎಲ್ಲ ಮಹಾತ್ಮ ಪುರುಷಸತ್ತಮರೂ ಸೇನಾಪತಿಯಾಗಲು ಅರ್ಹರಾಗಿದ್ದಾರೆ. ಅದರಲ್ಲಿ ವಿಚಾರಣೆ ಮಾಡುವುದೇನೂ ಇಲ್ಲ. ಎಲ್ಲರೂ ಕುಲೀನರು. ಯುದ್ಧದ ಜ್ಞಾನವುಳ್ಳವರು. ವಿಕ್ರಮ ಬುದ್ಧಿಯುಳ್ಳವರು. ಕೃತಜ್ಞರು. ನಾಚಿಕೆಯಿದ್ದವರು. ಮತ್ತು ಯುದ್ಧದಿಂದ ಪಲಾಯನ ಮಾಡದವರು. ಆದರೆ ಅವರೆಲ್ಲರೂ ಏಕ ಕಾಲದಲ್ಲಿ ನಾಯಕರಾಗಲಾರರು. ವಿಶೇಷ ಗುಣಗಳಿರುವ ಒಬ್ಬನನ್ನೇ ನಾಯಕನನ್ನಾಗಿ ಮಾಡಬೇಕು. ಭಾರತ! ಅನ್ಯೋನ್ಯರೊಡನೆ ಸ್ಪರ್ಧಿಸುವ ಅವರಲ್ಲಿ ಯಾರೊಬ್ಬನನ್ನು ನೀನು ಸತ್ಕರಿಸಿದರೂ ಉಳಿದವರು ಬೇಸರ ಪಟ್ಟುಕೊಂಡು ಯುದ್ಧಮಾಡದೇ ಇರಬಹುದು. ಈ ಸರ್ವಯೋಧರ ಆಚಾರ್ಯ, ವೃದ್ಧ ಗುರು, ಶಸ್ತ್ರಭೃತರಲ್ಲಿ

ಶ್ರೇಷ್ಠ ದ್ರೋಣನನ್ನು ಸೇನಾಪತಿಯನ್ನಾಗಿ ಮಾಡುವುದು ಯುಕ್ತವಾಗಿದೆ. ಶುಕ್ರ ಮತ್ತು ಅಂಗಿರಸರಂತೆ ತೋರುವ ಈ ಬ್ರಹ್ಮವಿದುತ್ತಮ ದುರ್ಧರ್ಷ ದ್ರೋಣನನ್ನು ಬಿಟ್ಟು ಬೇರೆ ಯಾರುತಾನೇ ಸೇನಾಪತಿಯಾಗಲು ನಿಲ್ಲುತ್ತಾರೆ? ಈ ಸರ್ವ ರಾಜರಲ್ಲಿ ಸಮರದಲ್ಲಿ ಹೋಗುತ್ತಿರುವ ದ್ರೋಣನನ್ನು ಅನುಸರಿಸದೇ ಇರುವವರು ಯಾರೂ ಇಲ್ಲ. ಇವನು ಸೇನಾ ಪ್ರಣೇತಾರ. ಇವನು ಶಸ್ತ್ರಭೃತರಲ್ಲಿ ಶ್ರೇಷ್ಠನೂ ಕೂಡ. ಇವನು ಬುದ್ಧಿವಂತರಲ್ಲಿ ಕೂಡ ಶ್ರೇಷ್ಠ. ಮತ್ತು ಇವನು ನಿನ್ನ ಗುರುವೂ ಹೌದು. ದುರ್ಯೋಧನ! ಹೀಗಿರುವ ಆಚಾರ್ಯನನ್ನು ಸೇನಾಪತಿಯನ್ನಾಗಿ ಮಾಡು. ಅವನು ಕಾರ್ತಿಕೇಯನು ಅಮರರಿಗೆ ಅಸುರರನ್ನು ಗೆದ್ದುಕೊಟ್ಟಂತೆ ನಿನಗೆ ಜಯವನ್ನು ನೀಡುತ್ತಾನೆ.”

ಕರ್ಣನ ಮಾತನ್ನು ಕೇಳಿ ರಾಜಾ ದುರ್ಯೋಧನನು ಸೇನೆಯ ಮಧ್ಯ ಹೋಗಿ ದ್ರೋಣನಿಗೆ ಈ ಮಾತನ್ನಾಡಿದನು:

“ವರ್ಣದ ಶ್ರೇಷ್ಠತೆಯಲ್ಲಿ, ಜನ್ಮತಾಳಿದ ಕುಲದಲ್ಲಿ, ಶಸ್ತ್ರಜ್ಞಾನದಲ್ಲಿ, ವಯಸ್ಸಿನಲ್ಲಿ, ಬುದ್ಧಿಯಲ್ಲಿ, ವೀರ್ಯದಲ್ಲಿ, ದಕ್ಷತೆಯಲ್ಲಿ, ಅಜೇಯತ್ವದಲ್ಲಿ, ಅರ್ಥಜ್ಞಾನದಲ್ಲಿ, ಜಯದಲ್ಲಿ,

ತಪಸ್ಸಿನಲ್ಲಿ, ಕೃತಜ್ಞತೆಯಲ್ಲಿ ಮತ್ತು ಇತರ ಸರ್ವ ಗುಣಗಳಲ್ಲಿ ನೀಮಗೆ ಸಮನಾಗಿರುವವರು ಮತ್ತು ರಕ್ಷಕರು ಯಾರೂ ಇಲ್ಲವೆಂದು ರಾಜನಿಗೆ ತಿಳಿದಿದೆ. ದ್ವಿಜಸತ್ತಮ! ವಾಸವನು ದೇವತೆಗಳನ್ನು ಹೇಗೋ ಹಾಗೆ ನೀವು ನಮ್ಮೆಲ್ಲರನ್ನೂ ರಕ್ಷಿಸಬೇಕು. ನಿಮ್ಮ ನೇತೃತ್ವದಲ್ಲಿ ಶತ್ರುಗಳನ್ನು ಜಯಿಸಲು ಇಚ್ಛಿಸುತ್ತೇನೆ. ರುದ್ರರಲ್ಲಿ ಕಪಾಲಿಯಂತೆ, ವಸುಗಳಲ್ಲಿ ಪಾವಕನಂತೆ, ಯಕ್ಷರಲ್ಲಿ ಕುಬೇರನಂತೆ, ಮರುತರಲ್ಲಿ ವಾಸವನಂತೆ, ವಿಪ್ರರಲ್ಲಿ ವಸಿಷ್ಠನಂತೆ, ತೇಜಸ್ವಿಗಳಲ್ಲಿ ಭಾಸ್ಕರನಂತೆ, ಪಿತೃಗಳಲ್ಲಿ ಧರ್ಮನಂತೆ, ಆದಿತ್ಯರಲ್ಲಿ ಸೂರ್ಯನಂತೆ, ನಕ್ಷತ್ರಗಳಲ್ಲಿ ಶಶಿಯಂತೆ, ದೈತ್ಯರಲ್ಲಿ ಶುಕ್ರನಂತೆ ಸೇನಾಪತಿಗಳಲ್ಲಿ ಶ್ರೇಷ್ಠನಾಗಿ ನನ್ನ ಸೇನಾಪತಿಯಾಗು. ಈ ಹನ್ನೊಂದು ಅಕ್ಷೌಹಿಣಿಗಳು ನಿನ್ನ ವಶದಲ್ಲಿ ಬಂದಿವೆ. ನೀನೂ ಶತ್ರುಗಳ ಪ್ರತಿಯಾಗಿ ವ್ಯೂಹವನ್ನು ರಚಿಸಿ ದಾನವರನ್ನು ಇಂದ್ರನು ಹೇಗೋ ಹಾಗೆ ಶತ್ರುಗಳನ್ನು ಸಂಹರಿಸು. ಪಾವಕೀ ಕಾರ್ತಿಕೇಯನು ದೇವಸೇನೆಯ ಅಗ್ರಭಗದಲ್ಲಿ ಹೋಗುವಂತೆ ನಿವು ನಮ್ಮ ಮುಂಬಾಗದಲ್ಲಿ ನಡೆಯಿರಿ. ಹಸುಗಳು ಹೋರಿಯನ್ನು ಅನುಸರಿಸುವಂತೆ ನಾವು ನಿಮ್ಮನ್ನು ಹಿಂಬಾಲಿಸಿ ಬರುತ್ತೇವೆ. ದಿವ್ಯ ಧನುಸ್ಸನ್ನು

ಟೇಂಕರಿಸಿ ಮುಂದಿರುವ ಮಹೇಷ್ವಾಸ ಉಗ್ರಧನ್ವಿ ನಿಮ್ಮನ್ನು ನೋಡಿ ಅರ್ಜುನನು ಪ್ರಹರಿಸುವುದಿಲ್ಲ. ಒಂದುವೇಳೆ ನೀವು ನನ್ನ ಸೇನಾಪತಿಯಾದರೆ ಯುದ್ಧದಲ್ಲಿ ಬಾಂಧವರು ಮತ್ತು ಅನುಯಾಯಿಗಳೊಂದಿಗೆ ಯುಧಿಷ್ಠಿರನನ್ನು ಗೆಲ್ಲುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ.”

ದ್ರೋಣನಿಗೆ ಹೀಗೆ ಹೇಳಲು ಜಯುವಾಗಲೆಂದು ನರಾಧಿಪರು ಕೂಗಿ ಹೇಳಿ, ಮಹಾ ಸಿಂಹನಾದದಿಂದ ದುರ್ಯೋಧನನನ್ನು ಹರ್ಷಿಸಿದರು. ಸಂತೋಷದಿಂದ ಸೈನಿಕರು ದ್ವಿಜೋತ್ತಮನಿಗೆ ಜಯಕಾರ ಹಾಕಿದರು. ದುರ್ಯೋಧನನನ್ನು ಮುಂದಿರಿಸಿಕೊಂಡು ಮಹದ್ಯಶನನ್ನು ಬೇಡಿಕೊಂಡರು. ಆಗ ದ್ರೋಣನು ಹೇಳಿದನು:

“ಆರೂ ಅಂಗಗಳೊಂದಿಗೆ ವೇದವನ್ನು ತಿಳಿದಿದ್ದೇನೆ. ಮನುವಿನ ಅರ್ಥವಿದ್ಯೆಯನ್ನೂ ನಾನು ತಿಳಿದುಕೊಂಡಿದ್ದೇನೆ. ತ್ರೈಯಂಬಕನ ವಿವಿಧ ಇಷ್ವಸ್ತ್ರಗಳನ್ನೂ ಅರಿತಿದ್ದೇನೆ. ವಿಜಯಕಾಂಕ್ಷಿಗಳಾದ ನೀವು ನನ್ನ ಏನೆಲ್ಲ ಗುಣಗಳಿವೆಯೆಂದು ಹೇಳಿದಿರೋ ಅವೆಲ್ಲವನ್ನೂ ಸತ್ಯವಾಗಿಸಲು ಪಾಂಡವರೊಡನೆ ಹೋರಾಡುತ್ತೇನೆ.”

ಹೀಗೆ ಅವನು ಅನುಜ್ಞೆಯನ್ನು ನೀಡಲು ದುರ್ಯೋಧನನು ದ್ರೋಣನನ್ನು



ವಿಧಿವತ್ತಾದ ಕರ್ಮಗಳಿಂದ ಸೇನಾಪತಿಯನ್ನಾಗಿ ಮಾಡಿದನು. ಆಗ ದುರ್ಯೋಧನಪ್ರಮುಖ ನೃಪರು ಹಿಂದೆ ಶಕ್ರನ ನಾಯಕತ್ವದಲ್ಲಿ ಸುರರು ಸ್ಕಂದನನ್ನು ಹೇಗೋ ಹಾಗೆ ದ್ರೋಣನನ್ನು ಸೇನಾಪತಿಯನ್ನಾಗಿ ಅಭಿಷೇಕಿಸಿದರು. ಮಂಗಳ ವಾದ್ಯಗಳ ಘೋಷಗಳಿಂದ ಪುರುಷರ ಮಹಾಕೂಗುಗಳೊಡನೆ ಹರ್ಷದಿಂದ ದ್ರೋಣನನ್ನು ಸೇನಾಪತಿಯನ್ನಾಗಿ ಮಾಡಲಾಯಿತು. ಪುಣ್ಯಾಹಘೋಷ, ಸ್ವಸ್ತಿವಾಚನ, ಸೂತ-ವಂದಿ-ಮಾಗಧರ ಹೊಗಳಿಕೆ, ಸಂಗೀತ, ಶ್ರೇಷ್ಠ ಬ್ರಾಹ್ಮಣರಿಂದ ಜಯಾಶಿಷಗಳು, ನೃತ್ಯಗಾತಿಯರಿಂದ ನರ್ತನ ಇತ್ಯಾದಿಗಳಿಂದ ದ್ರೋಣನನ್ನು ಯಥಾವಿಧಿಯಾಗಿ ಸತ್ಕರಿಸಿದ ಕೌರವರು ಪಾಂಡವರನ್ನು ಗೆದ್ದೆವೆಂದೇ ಭಾವಿಸಿದರು.

## ದ್ರೋಣನ ಪ್ರತಿಜ್ಞೆ

ಸೇನಾಪತಿತ್ವವನ್ನು ಪಡೆದು ಮಹಾರಥ ಭಾರದ್ವಾಜನು ಸರ್ವ ಸೇನೆಗಳ ಮಧ್ಯೆ ನಿನ್ನ ಮಗನಿಗೆ ಈ ಮಾತನ್ನಾಡಿದನು:

> “ರಾಜನ್! ಕೌರವರ ಋಷಭ ಆಪಗೇಯನ ನಂತರ ನನ್ನನ್ನು ಸೇನಾಪತ್ಯದಿಂದ ಗೌರವಿಸಿದ್ದೀಯೆ. ಈ ಕರ್ಮಕ್ಕೆ ತಕ್ಕುದಾದ ಫಲವನ್ನು ಪಡೆಯುತ್ತೀಯೆ. ಪಾರ್ಥಿವ! ನಿನ್ನ ಆಸೆ ಏನಿದೆ ಹೇಳು. ಅದನ್ನು ನಾನು ಇಂದು ಮಾಡುತ್ತೇನೆ. ಬೇಕಾದ

ವರವನ್ನು ಕೇಳಿಕೋ!”

ಆಗ ದುರ್ಯೋಧನನು ಕರ್ಣ-ದುಃಶಾಸನಾದಿಗಳೊಂದಿಗೆ ಚರ್ಚಿಸಿ ಆ ವಿಜಯಿಗಳಲ್ಲಿ ಶ್ರೇಷ್ಠ, ದುರ್ಧರ್ಷ ಆಚಾರ್ಯನಿಗೆ ಹೇಳಿದನು: “ನನಗೆ ವರವನ್ನು ಕೊಡುತ್ತೀರಾದರೆ ಯುಧಿಷ್ಠಿರನನ್ನು ಜೀವಂತವಾಗಿ ಸೆರೆಹಿಡಿಯಿರಿ. ಆ ರಥಿಶ್ರೇಷ್ಠನನ್ನು ಹಿಡಿದು ನನ್ನ ಬಳಿಗೆ ಕರೆದುಕೊಂಡು ಬನ್ನಿ.”

ಆಗ ಕುರುಗಳ ಆಚಾರ್ಯನು ದುರ್ಯೋಧನನ ಮಾತನ್ನು ಕೇಳಿ ಸರ್ವ ಸೇನೆಗಳನ್ನೂ ಹರ್ಷಗೊಳಿಸುತ್ತಾ ಈ ಮಾತನ್ನಾಡಿದನು:

“ಯಾರನ್ನು ಸೆರೆಹಿಡಿಯಲು ಬಯಸುತ್ತೀಯೋ ಆ ರಾಜಾ ಕುಂತೀಪುತ್ರನು ಧನ್ಯ. ಅವನ ವಧೆಯನ್ನು ಇಂದು ವರವನ್ನಾಗಿ ಕೇಳುತ್ತಿಲ್ಲವಲ್ಲ! ಯಾವ ಕಾರಣಕ್ಕಾಗಿ ನೀನು ಅವನ ವಧೆಯನ್ನು ಬಯಸುತ್ತಿಲ್ಲ? ನಿಶ್ಚಯವಾಗಿ ದುರ್ಯೋಧನನು ಮತ್ತನಾಗಿ ಈ ಕೆಲಸವನ್ನು ಹೇಳುತ್ತಿಲ್ಲ ತಾನೇ? ಧರ್ಮಪುತ್ರನ ವಧೆಯನ್ನು ಬಯಸುವವನು ಯಾರೂ ಇಲ್ಲವೆಂದರೆ ಅದೊಂದು ಅದ್ಭುತವೇ ಸರಿ. ಅವನನ್ನು ಜೀವಂತವಿರಿಸಿ ನೀನು ನಿನ್ನನ್ನೂ ನಿನ್ನ ಕುಲವನ್ನೂ ರಕ್ಷಿಸಲು ಬಯಸುತ್ತಿದ್ದೀಯಾ? ಅಥವಾ ಯುದ್ಧದಲ್ಲಿ ಪಾಂಡವರನ್ನು

ಸೋಲಿಸಿ ಅವರ ರಾಜ್ಯಾಂಶವನ್ನು ಅವರಿಗೆ ಹಿಂದಿರುಗಿಸಿ ಉತ್ತಮ ಸಹೋದರತ್ವವನ್ನು ಕಲ್ಪಿಸಲು ಬಯಸುತ್ತಿರುವೆಯಾ? ಉತ್ತಮ ಕುಲದಲ್ಲಿ ಜನಿಸಿದ ಧೀಮತ ರಾಜಾ ಕುಂತೀಸುತನೇ ಧನ್ಯ. ನೀನೂ ಕೂಡ ಅವನಲ್ಲಿ ಸ್ನೇಹಭಾವವನ್ನು ತೋರಿಸುತ್ತಿರುವೆಯೆಂದರೆ ಅವನ ಅಜಾತಶತ್ರುತ್ವವು ಸತ್ಯವಾದಂತಾಯಿತು."

ದ್ರೋಣನು ಹೀಗೆ ಹೇಳಲು ನಿತ್ಯವೂ ದುರ್ಯೋಧನನಲ್ಲಿ ಮಲಗಿದ್ದ ನಿಜಭಾವನೆಯು ಒಮ್ಮಿಂದೊಮ್ಮೆಲೇ ಪ್ರಕಟವಾಯಿತು. ಬೃಹಸ್ಪತಿಯಂತಿರುವವರು ಕೂಡ ಅವನ ಆಕಾರವನ್ನು ಊಹಿಸಲು ಶಕ್ಯರಾಗಿರಲಿಲ್ಲ. ಅದಕ್ಕೆ ಅವನು ಪ್ರಹೃಷ್ಟನಾಗಿ ಹೀಗೆ ಹೇಳಿದನು:

"ಆಚಾರ್ಯ! ಕುಂತೀಸುತನ ವಧೆಯಲ್ಲಿ ನನ್ನ ವಿಜಯವಿಲ್ಲ. ಯುಧಿಷ್ಠಿರನು ಹತನಾದರೆ ಪರ್ಥನು ಸರ್ವರನ್ನೂ ಸಂಹರಿಸುತ್ತಾನೆ ಎನ್ನುವುದು ಖಂಡಿತ. ರಣದಲ್ಲಿ ಅವರೆಲ್ಲರನ್ನು ಸಂಹರಿಸಲು ಅಮರರಿಂದಲೂ ಸಾಧ್ಯವಿಲ್ಲ. ಅವರಲ್ಲಿ ಯಾರು ಉಳಿದರೂ ಅವರು ನಮ್ಮೆಲ್ಲರನ್ನೂ ಉಳಿಯಗೊಡುವುದಿಲ್ಲ. ಆ ಸತ್ಯಪ್ರತಿಜ್ಞನನ್ನು ನೀನು ಕರೆದುಕೊಂಡು ಬಂದರೆ ಪುನಃ ದ್ಯೂತದಲ್ಲಿ ಅವನನ್ನು

ಸೋಲಿಸಿ, ಪುನಃ ಅರಣ್ಯಕ್ಕೆ ಕಳುಹಿಸುತ್ತೇನೆ. ಕೌಂತೇಯರು ಅವನನ್ನು ಹಿಂಬಾಲಿಸಿ ಹೋಗುತ್ತಾರೆ. ಅಂಥಹ ಜಯವು ನನಗೆ ದೀರ್ಘಕಾಲವುಳಿಯುತ್ತದೆ ಎಂದು ವ್ಯಕ್ತವಾಗುತ್ತಿದೆ. ಇದರಿಂದಾಗಿ ನಾನು ಎಂದೂ ಧರ್ಮರಾಜನ ವಧೆಯನ್ನು ಬಯಸುವುದಿಲ್ಲ."

ಅವನ ನಾಲಿಗೆಯಿಂದ ಅವನ ಅಭಿಪ್ರಾಯವನ್ನು ತಿಳಿದ ಅರ್ಥತತ್ವಗಳನ್ನು ತಿಳಿದಿದ್ದ ಬುದ್ಧಿಮಾನ್ ದ್ರೋಣನು ಕೂಡಲೇ ಯೋಚಿಸಿ ಅವನಿಗೆ ವರವನ್ನಿತ್ತನು:

"ವೀರ! ಒಂದುವೇಳೆ ಅರ್ಜುನನು ಯುದ್ಧದಲ್ಲಿ ಯುಧಿಷ್ಠಿರನನ್ನು ರಕ್ಷಿಸುತ್ತಿಲ್ಲವಾದರೆ ಜ್ಯೇಷ್ಠ ಪಾಂಡವನನ್ನು ನಾನು ಸೆರೆಹಿಡಿದು ತರುತ್ತೇನೆ ಎಂದು ತಿಳಿ. ರಣದಲ್ಲಿ ಪಾರ್ಥನನ್ನು ಜಯಿಸಲು ಇಂದ್ರಸಮೇತರಾದ ದೇವಾಸುರರಿಂದಲೂ ಶಕ್ಯವಾಗುವುದಿಲ್ಲ. ಆದುದರಿಂದ ಅವನ ಮೇಲೆ ಆಕ್ರಮಣಿಸಲಾಗಲೀ ಜಯಿಸಲಾಗಲೀ ನಾನು ಯಾವಾಗಲೂ ಯೋಚಿಸುವುದೇ ಇಲ್ಲ. ಅವನು ನನ್ನ ಶಿಷ್ಯನೆಂಬುವುದರಲ್ಲಿ ಸಂಶಯವಿಲ್ಲ. ಅಸ್ತ್ರಗಳನ್ನು ಬೋಧಿಸಿದುದರಲ್ಲಿ ಅವನಿಗೆ ನಾನೇ ಮೊದಲಿಗನು.

ಅವನಿನ್ನೂ ತರುಣನು. ಅನೇಕ ಪುಣ್ಯಕಾರ್ಯಗಳನ್ನು ಮಾಡಿದ ಸುಕೃತನು. ಇನ್ನು ಹೆಚ್ಚಾಗಿ ಇಂದ್ರ ಮತ್ತು ರುದ್ರರಿಂದ ಅಸ್ತ್ರಗಳನ್ನು ಸಂಪಾದಿಸಿದ್ದಾನೆ. ನಿನ್ನ ಮೇಲೆ ಕುಪಿತನಾಗಿದ್ದಾನೆ. ನಾನು ಅವನ ಮೇಲೆ ಸಿಟ್ಟಾಗುವುದಿಲ್ಲ. ಯಾವುದಾದರೂ ಉಪಾಯವನ್ನು ಹೂಡಿ ಯುದ್ಧದಿಂದ ನೀನು ಪಾರ್ಥನನ್ನು ದೂರಕಳುಹಿಸಲು ಶಕ್ಯನಾದರೆ ನೀನು ಧರ್ಮರಾಜನನ್ನು ಗೆದ್ದಂತೆಯೇ. ಅವನನ್ನು ಹಿಡಿಯುವುದರಿಂದಲೇ ಜಯವೆಂದು ನೀನು ಅಭಿಪ್ರಾಯ ಪಟ್ಟಿದ್ದೀಯೇ. ಈ ಉಪಾಯದಿಂದ ಅವನನ್ನು ಹಿಡಿಯುವುದು ಖಂಡಿತ ಸಾಧ್ಯವಾಗುತ್ತದೆ. ರಾಜನ್! ಕುಂತೀಪುತ್ರ ಧನಂಜಯನನ್ನು ದೂರಕ್ಕೆ ಒಯ್ದ ನಂತರ ಒಂದು ಕ್ಷಣಕಾಲವೂ ಅವನು ನನ್ನ ಎದುರು ನಿಂತರೆ ಆ ಸತ್ಯಧರ್ಮಪರಾಯಣ ರಾಜನನ್ನು ಹಿಡಿದು ನಿನ್ನ ವಶದಲ್ಲಿ ಇಂದು ತರುತ್ತೇನೆ. ಅದರಲ್ಲಿ ಸಂಶಯ ಬೇಡ. ಪಾರ್ಥ ಫಲ್ಗುನನು ನೋಡುತ್ತಿರುವಾಗಲೇ ಸಮರದಲ್ಲಿ ಯುಧಿಷ್ಠಿರನನ್ನು ಸೆರೆಹಿಡಿಯಲು ಇಂದ್ರನೊಂದಿಗೆ ಸುರಾಸುರರಿಗೂ ಸಾಧ್ಯವಿಲ್ಲ.”

ರಾಜನನ್ನು ಸೆರೆಹಿಡಿಯಲು ದ್ರೋಣನು ಈ ರೀತಿ ನಿಬಂಧನೆಗಳೊಂದಿಗೆ ಪ್ರತಿಜ್ಞೆ ಮಾಡಲು ಧೃತರಾಷ್ಟ್ರನ ಪುತ್ರರು ಬಾಲಕರಂತೆ ಅವನು ಸೆರೆಹಿಡಿಯಲ್ಪಟ್ಟನೆಂದೇ ಭಾವಿಸಿದರು. ಪಾಂಡವರೊಂದಿಗೆ ದ್ರೋಣನ ಪಕ್ಷಪಾತವಿದೆಯೆಂದು ದುರ್ಯೋಧನನು ತಿಳಿದಿದ್ದನು. ಆದುದರಿಂದ ರಹಸ್ಯದಲ್ಲಿ ಮಾಡಿದ್ದ ಪ್ರತಿಜ್ಞೆಯನ್ನು ಬಹಿರಂಗಗೊಳಿಸಿದನು. ಆಗ ದುರ್ಯೋಧನನು ಪಾಂಡವನ ಸೆರೆಹಿಡಿಯುವುದರ ಕುರಿತು ಎಲ್ಲ ಸೈನ್ಯ ಸ್ಥಾನಗಳಲ್ಲಿ ಘೋಷಿಸಿದನು.

## ಅರ್ಜುನನಿಂದ ಯುಧಿಷ್ಠಿರನಿಗೆ ಆಶ್ವಾಸನೆ; ಹನ್ನೊಂದನೆಯ ದಿನದ ಯುದ್ಧಾರಂಭ

ಯುಧಿಷ್ಠಿರನ ಸೆರೆಹಿಡಿಯುವುದರ ಕುರಿತು ಅದನ್ನು ಕೇಳಿದ ಸೈನಿಕರು ಸಿಂಹನಾದಗೈದರು. ಬಾಣ ಶಂಖಗಳಿಂದ ತುಮುಲ ಶಬ್ಧಮಾಡಿದರು. ಭಾರದ್ವಾಜನು ಮಾಡಿದ ಪ್ರತಿಜ್ಞೆಯನ್ನು ಸಂಪೂರ್ಣವಾಗಿ ನಡೆದಂತೆ ಆಪ್ತರಿಂದ ಧರ್ಮರಾಜನು ತಿಳಿದುಕೊಂಡನು. ಆಗ ಎಲ್ಲಕಡೆಗಳಿಂದ ತಮ್ಮಂದಿರನ್ನೂ ಸೇನೆಗಳನ್ನೂ ಕರೆಯಿಸಿಕೊಂಡು ಧರ್ಮರಾಜನು ಧನಂಜಯನಿಗೆ ಈ ಮಾತುಗಳನ್ನಾಡಿದನು.

“ಪುರುಷವ್ಯಾಘ್ರ! ಇಂದು ದ್ರೋಣನು ಮಾಡಿದ

ಪ್ರತಿಜ್ಞೆಯನ್ನು ನೀನೂ ಕೇಳಿದೆಯಲ್ಲವೇ? ಅದು ಸತ್ಯವಾಗದ ಹಾಗೆ ನೀತಿಯನ್ನು ರೂಪಿಸಬೇಕಾಗಿದೆ. ದ್ರೋಣನ ಪ್ರತಿಜ್ಞೆಯಲ್ಲಿ ಒಂದು ಛಿದ್ರವನ್ನಿಟ್ಟಿದ್ದಾರೆಂದು ತಿಳಿದಿದೆ. ಆ ಛಿದ್ರವು ಯಶಸ್ವಿಯಾಗದೇ ಇರುವುದು ನಿನ್ನ ಮೇಲೆ ಅವಲಂಬಿಸಿದೆ. ದ್ರೋಣನ ಪ್ರತಿಜ್ಞೆಯ ಮೂಲಕವಾಗಿ ದುರ್ಯೋಧನನು ತನ್ನ ಇಚ್ಛೆಯನ್ನು ಪೂರೈಸಿಕೊಳ್ಳದ ಹಾಗೆ ಇಂದು ನೀನು ನನ್ನ ಹತ್ತಿರವಿದ್ದೇ ಯುದ್ಧಮಾಡಬೇಕು!"

ಅರ್ಜುನನು ಹೇಳಿದನು:

"ರಾಜನ್! ಆಚಾರ್ಯರ ವಧೆಯು ಎಂದೂ ನನ್ನ ಕೆಲಸವಲ್ಲವೋ ಹಾಗೆ ನಿನ್ನನ್ನು ಪರಿತ್ಯಜಿಸುವುದೂ ನಾನು ಇಚ್ಛಿಸುವ ಕೆಲಸವಲ್ಲ. ಯುದ್ಧದಲ್ಲಿ ನಾನು ಪ್ರಾಣಗಳನ್ನು ತ್ಯಜಿಸಿಯೇನು. ಆದರೆ ಆಚಾರ್ಯರ ಕುರಿತು ವಿರೋಧಭಾವನೆಯನ್ನು ಮಾತ್ರ ಖಂಡಿತವಾಗಿಯೂ ಇಟ್ಟುಕೊಳ್ಳುವುದಿಲ್ಲ. ನಿನ್ನನ್ನು ಸಮರದಲ್ಲಿ ಬಂಧಿಸಲು ಧಾರ್ತರಾಷ್ಟ್ರನು ಏನು ಇಚ್ಛಿಸಿರುವನೋ ಆ ಬಯಕೆಯನ್ನು ಅವನು ಈ ಜೀವಲೋಕದಲ್ಲಿ ಎಂದೂ ಪೂರೈಸಿಕೊಳ್ಳಲಾರ. ನಕ್ಷತ್ರಸಹಿತವಾಗಿ ಆಕಾಶವೇ ಕೆಳಗೆ ಬೀಳಬಹುದು.

ಭೂಮಿಯು ಚೂರುಚೂರಾಗಬಹುದು. ಆದರೆ ನಾನು ಜೀವಿಸಿರುವಾಗ ದ್ರೋಣರು ನಿನ್ನನ್ನು ಸೆರೆಹಿಡಿಯಲಾರರು. ಇದು ಖಂಡಿತ. ಒಂದುವೇಳೆ ಅವನಿಗೆ ರಣದಲ್ಲಿ ಸಹಾಯವಾಗಿ ಸ್ವಯಂ ವಜ್ರಭೃತುವು ದೇವ ಅಥವಾ ದೈತ್ಯರೊಂದಿಗೆ ಬಂದರೂ ಕೂಡ ಅವನು ನಿನ್ನನ್ನು ಯುದ್ಧದಲ್ಲಿ ಬಂಧಿಸಲಾರನು. ನಾನು ಜೀವಿಸಿರುವಾಗ ನೀನು ಅಸ್ತ್ರಭೃತರಲ್ಲಿ ಶ್ರೇಷ್ಠನಾದ ದ್ರೋಣರಿಗಾಗಲೀ ಸರ್ವ ಶಸ್ತ್ರಭೃತರಿಗಾಗಲೀ ಭಯಪಡಬಾರದು. ಸುಳ್ಳುಹೇಳಿರುವುದು ನೆನಪಿಲ್ಲ. ಪರಾಜಯಗೊಂಡಿದುದು ನೆನಪಿಲ್ಲ. ಎಂದಾದರೂ ಪ್ರತಿಜ್ಞೆಯನ್ನು ಸುಳ್ಳಾಗಿಸಿ ನಡೆದುಕೊಂಡಿದುದರ ನೆನಪಿಲ್ಲ."

ಆಗ ಪಾಂಡವರ ಶಿಬಿರದಲ್ಲಿ ಶಂಖ, ಭೇರಿ, ಮೃದಂಗ, ಅನಕಗಳನ್ನು ಒಟ್ಟಿಗೇ ಬಾರಿಸಲಾಯಿತು. ಮಹಾತ್ಮ ಪಾಂಡವರ ಸಿಂಹನಾದವೂ ಸೇರಿಕೊಂಡು ಕೇಳಿಬಂದಿತು. ಧನುಸ್ಸಿನ ಭಯಂಕರ ಟೇಂಕಾರ ಶಬ್ಧವು ಗಗನದಲ್ಲಿ ಮೊಳಗಿತು. ಮಹಾತ್ಮ ಪಾಂಡವರ ಶಂಖನಿರ್ಘೋಷವನ್ನು ಕೇಳಿ ಕೌರವ ಸೇನೆಗಳಲ್ಲಿಯೂ ಕೂಡ ವಾದಿತ್ರಾದಿ ವಾದ್ಯಗಳನ್ನು ಬಾರಿಸಲಾಯಿತು.

ಸೇನಾಪತಿತ್ವವನ್ನು ಪಡೆದು ಮಹಾರಥ ಭಾರದ್ವಾಜನು ಸೈನ್ಯಗಳನ್ನು

ವ್ಯೂಹದಲ್ಲಿ ರಚಿಸಿ ಕೌರವರೊಡನೆ ಹೊರಟನು. ಸೈಂಧವ, ಕಲಿಂಕ ಮತ್ತು ವಿಕರ್ಣರು ಕವಚಗಳನ್ನು ಧರಿಸಿ ಬಲಭಾಗದಲ್ಲಿ ನಿಂತರು. ಅವರ ಬೆಂಬಲವಾಗಿ ಶಕುನಿಯು ಹೊಳೆಯುವ ಪ್ರಾಸಗಳನ್ನು ಹಿಡಿದಿದ್ದ ಶ್ರೇಷ್ಠ ಗಾಂಧಾರಕ ಅಶ್ವಯೋಧಿಗಳೊಂದಿಗೆ ನಡೆದನು. ಕೃಪ, ಕೃತವರ್ಮ, ಚಿತ್ರಸೇನ, ವಿವಿಂಶತಿಯರು ದುಃಶಾಸನನ ನಾಯಕತ್ವದಲ್ಲಿ ಎಡ ಭಾಗವನ್ನು ರಕ್ಷಿಸುತ್ತಿದ್ದರು. ಅವರ ಬೆಂಬಲಿಗರಾಗಿ ಸುದಕ್ಷಿಣನನ್ನು ಮುಂದಿರಿಸಿಕೊಂಡು ಕಾಂಬೋಜರು ಶಕ ಮತ್ತು ಯವನರೊಂದಿಗೆ ಮಹಾವೇಗದ ಕುದುರೆಗಳ ಮೇಲೆ ಹೊರಟರು. ಮದ್ರರು, ತ್ರಿಗರ್ತರು, ಅಂಬಷ್ಠರು, ಪೂರ್ವದವರು, ಉತ್ತರದವರು, ಶಿಬಿಗಳು, ಶೂರಸೇನರು, ಶೂದ್ರರು, ಮಲದರು, ಸೌವೀರರು, ಕಿತವರು, ಪಶ್ಚಿಮದವರು, ದಕ್ಷಿಣದವರು ಎಲ್ಲರೂ ದುರ್ಯೋಧನನನ್ನು ಮುಂದಿರಿಸಿಕೊಂಡು ಸೂತಪುತ್ರನ ಹಿಂದೆ ನಡೆದರು. ವೈಕರ್ತನ ಕರ್ಣನು ಸರ್ವ ಧನ್ವಿಗಳ ಪ್ರಮುಖನಾಗಿ ಸರ್ವ ಸೇನೆಗಳನ್ನು ಹರ್ಷಗೊಳಿಸುತ್ತಾ, ಸೇನೆಗಳಿಗೆ ಬಲವನ್ನು ನೀಡುತ್ತಾ ನಡೆದನು. ಆನೆಯ ಹಗ್ಗದ ಚಿಹ್ನೆಯುನ್ನು ಹೊಂದಿದ ಅವನ ಅತಿ ದೊಡ್ಡದೂ ಎತ್ತರವೂ ಆದ ಧ್ವಜವು ಸೂರ್ಯನ ಬೆಳಕಿನಂತೆ ಬೆಳಗಿ ಅವನ ಸೇನೆಗಳನ್ನು ಹರ್ಷಗೊಳಿಸುತ್ತಿತ್ತು. ಕರ್ಣನನ್ನು ನೋಡಿ ಕುರುಗಳೊಂದಿಗೆ ಎಲ್ಲ ರಾಜರೂ ಭೀಷ್ಮನನ್ನು ಕಳೆದುಕೊಂಡಿದುದರ ದುಃಖವನ್ನು

ಮರೆತಿದ್ದರು. ಅಲ್ಲಿ ಹೃಷ್ಟರಾಗಿದ್ದ ಅನೇಕ ಯೋಧರು ಒಟ್ಟಿಗೇ ಮಾತನಾಡಿಕೊಳ್ಳುತ್ತಿದ್ದರು:

> "ರಣದಲ್ಲಿ ಕರ್ಣನನ್ನು ನೋಡಿ ಪಾಂಡವರು ಯುದ್ಧದಲ್ಲಿ ನಿಲ್ಲಲಾರರು. ಏಕೆಂದರೆ ಕರ್ಣನೊಬ್ಬನೇ ಸಮರದಲ್ಲಿ ವಾಸವನೊಂದಿಗೆ ದೇವತೆಗಳನ್ನು ಗೆಲ್ಲಲು ಶಕ್ತ. ಇನ್ನು ಯುದ್ಧದಲ್ಲಿ ಕಡಿಮೆ ವೀರ್ಯ-ಪರಾಕ್ರಮಗಳುಳ್ಳ ಪಾಂಡವರು ಯಾವ ಲೆಖ್ಕಕ್ಕೆ? ಭೀಷ್ಮನಾದರೋ ರಣದಲ್ಲಿ ಪಾರ್ಥರನ್ನು ಪಾಲಿಸಿದನು. ಆದರೆ ಕರ್ಣನು ಅವರನ್ನು ತೀಕ್ಷ್ಣ ಶರಗಳಿಂದ ನಾಶಗೊಳಿಸುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ."

ಹೀಗೆ ಅನ್ಯೋನ್ಯರಲ್ಲಿ ಹೇಳಿಕೊಳ್ಳುತ್ತಾ ಹೃಷ್ಟರೂಪರಾಗಿ ಅವರು ರಾಧೇಯನನ್ನು ಗೌರವಿಸುತ್ತಾ ಪ್ರಶಂಸಿಸುತ್ತಾ ನಡೆದರು. ದ್ರೋಣನು ಹೇಳಿದಂತೆ ಕೌರವ ಸೇನೆಯು ಶಕಟವ್ಯೂಹದಲ್ಲಿ ರಚನೆಗೊಂಡಿತು. ಧರ್ಮರಾಜನಿಂದ ವಿಹಿತವಾದ ಮಹಾತ್ಮ ಶತ್ರುಗಳ ಸೇನೆಯು ಸಂತೋಷದಿಂದ ಕ್ರೌಂಚ ವ್ಯೂಹದ್ದಾಗಿತ್ತು.

ಅವರ ಸೇನೆಯ ಪ್ರಮುಖಸ್ಥಾನದಲ್ಲಿ ವಾನರಧ್ವಜವನ್ನು ಹಾರಿಸಿಕೊಂಡು ಪುರುಷರ್ಷಭರಾದ ವಿಷ್ವಕ್ಸೇನ-ಧನಂಜಯರಿದ್ದರು. ಸರ್ವಸೈನ್ಯಗಳಿಗೂ ಗುರುತಾಗಿದ್ದ, ಸರ್ವಧನುಷ್ಮಂತರಿಗೂ

ಆಶ್ರಯಭೂತವಾದ, ಸೂರ್ಯನ ಮಾರ್ಗವಾದ ಆಕಾಶದಲ್ಲಿ ಹಾರಾಡುತ್ತಿದ್ದ ಅಮಿತ ತೇಜಸ್ವಿ ಪಾರ್ಥನ ಆ ಧ್ವಜವು ಮಹಾತ್ಮ ಪಾಂಡವನ ಸೈನ್ಯವನ್ನು ಯುಗಾಂತದಲ್ಲಿ ಸೂರ್ಯನು ಭೂಮಿಯನ್ನು ಬೆಳಗುವಂತೆ ಪ್ರಜ್ವಲಿಸಿ ಬೆಳಗಿಸುತ್ತಿತ್ತು. ಯೋಧರಲ್ಲಿ ಅರ್ಜುನನು ಶ್ರೇಷ್ಠ. ಧನುಸ್ಸುಗಳಲ್ಲಿ ಗಾಂಡೀವ, ಇರುವವರಲ್ಲಿ ವಾಸುದೇವ ಮತ್ತು ಚಕ್ರಗಳಲ್ಲಿ ಸುದರ್ಶನವು ಶ್ರೇಷ್ಠವು. ಈ ನಾಲ್ಕೂ ತೇಜಸ್ಸುಗಳನ್ನೂ ಏರಿಸಿಕೊಂಡ ಶ್ವೇತಹಯಗಳ ರಥವು ಕಾಲಚಕ್ರದಂತೆ ಶತ್ರುಸೇನೆಯ ಅಗ್ರಭಾಗದಲ್ಲಿ ನಿಂತಿತ್ತು. ಹೀಗೆ ಅವರಿಬ್ಬರು ಮಹಾತ್ಮರೂ ಬಲಿಷ್ಟವಾದ ತಮ್ಮ ಸೇನೆಯ ಅಗ್ರಭಾಗದಲ್ಲಿ ಇದ್ದರು. ಕೌರವರ ಮುಂಬಾಗದಲ್ಲಿ ಕರ್ಣ ಮತ್ತು ಶತ್ರುಸೇನೆಯ ಮುಂದೆ ಧನಂಜಯರರು ನಿಂತಿದ್ದರು. ಆಗ ಕರ್ಣ-ಪಾಂಡವರಿಬ್ಬರೂ ತಮ್ಮ ತಮ್ಮ ಪಕ್ಷಕ್ಕೆ ವಿಜಯವನ್ನು ಗಳಿಸಿಕೊಡಬೇಕೆಂದು ಕ್ರುದ್ಧರಾಗಿ ಅನ್ಯೋನ್ಯರನ್ನು ವಧೆಮಾಡುವ ಇಚ್ಛೆಯಿಂದ ಪರಸ್ಪರರನ್ನು ದುರುಗುಟ್ಟಿಕೊಂಡು ನೋಡುತ್ತಿದ್ದರು.

ಆಗ ಮಹಾರಥ ಭಾರದ್ವಾಜನು ಬರಲು ಘೋರವಾದ ಅಂತರ್ನಾದದೊಂದಿಗೆ ಭೂಮಿಯು ಕಂಪಿಸಿತು. ಆಗ ಪ್ರಚಂಡ ಭಿರುಗಾಳಿಯು ಬೀಸಿ ರೇಷ್ಮೆಯಂತೆ ನವಿರಾದ ಧೂಳೆದ್ದು ಅದು

ಸೂರ್ಯಸಹಿತವಾದ ಆಕಾಶವನ್ನೇ ವ್ಯಾಪಿಸಿತು. ಮೋಡಗಳಿಲ್ಲದಿದ್ದರೂ ಆಕಾಶದಿಂದ ಮಾಂಸ, ಮೂಳೆ ಮತ್ತು ರಕ್ತಗಳ ಮಳೆಯು ಸುರಿಯಿತು. ಹದ್ದುಗಳು, ಗಿಡುಗಗಳು, ಬಕಗಳು, ರಣಹದ್ದುಗಳು ಮತ್ತು ಕಾಗೆಗಳು ಸಹಸ್ರಾರು ಸಂಖ್ಯೆಗಳಲ್ಲಿ ನಿನ್ನ ಸೇನೆಯ ಮೇಲ್ಭಾಗದಲ್ಲಿ ಹಾರಾಡುತ್ತಿದ್ದವು. ಗುಳ್ಳೇನರಿಗಳು ಭಯಂಕರವಾಗಿ ವಿಕಾರವಾಗಿ ಕಿರುಚಿಕೊಳ್ಳುತ್ತಿದ್ದವು. ರಕ್ತವನ್ನು ಕುಡಿಯಲು ಮತ್ತು ಮಾಂಸವನ್ನು ತಿನ್ನಲು ಅವು ಅನೇಕ ಸಂಖ್ಯೆಗಳಲ್ಲಿ ನಿನ್ನ ಸೇನೆಯನ್ನು ಅಪ್ರದಕ್ಷಿಣೆಹಾಕಿ ಸುತ್ತುತ್ತಿದ್ದವು. ಬೆಳಗುತ್ತಿರುವ ಉಲ್ಕೆಗಳು ಉರಿಯುತ್ತಾ ಬಾಲದಿಂದ ರಣರಂಗವನ್ನು ಎಲ್ಲ ಕಡೆಗಳಿಂದ ಆವರಿಸಿ, ಮಹಾ ಶಬ್ಧದೊಂದಿಗೆ ನಡುಗುತ್ತಾ ಬಿದ್ದಿತು. ಆ ಸೇನಾಪತಿಗಳು ಮುಂದೆ ಬರುವಾಗ ಭಾಸ್ಕರನ ಮಂಡಲದಿಂದ ವಿದ್ಯುತ್ತಿನಂತೆ ಬೆಳಕು ಮತ್ತು ಗುಡುಗಿನಂತೆ ಶಬ್ಧಗಳು ಬರುತ್ತಿದ್ದವು. ಯುದ್ಧದಲ್ಲಿ ವೀರರ ಸಾವನ್ನು ಸೂಚಿಸುವ ಇವು ಮತ್ತು ಇನ್ನೂ ಅನೇಕ ದಾರುಣ ಉತ್ಪಾತಗಳು ಅಲ್ಲಿ ನಡೆಯಿತು.

ಆಗ ಪರಸ್ಪರರನ್ನು ವಧಿಸಲು ಬಯಸಿದ್ದ ಕುರುಪಾಂಡವ ಸೈನ್ಯಗಳ ನಡುವೆ ಜಗತ್ತನ್ನೇ ಶಬ್ಧದಿಂದ ಮೊಳಗಿಸುತ್ತಾ ಯುದ್ಧವು ನಡೆಯಿತು. ಅನ್ಯೋನ್ಯರೊಡನೆ ಕ್ರೋಧಿತರಾದ ಪ್ರಹಾರದಲ್ಲಿ ನಿಷ್ಣಾತರಾದ

ಪಾಂಡವ-ಕೌರವರು ಒಟ್ಟಿಗೇ ನಿಶಿತ ಬಾಣಗಳಿಂದ ಕೊಲ್ಲತೊಡಗಿದರು. ಆ ಮಹೇಷ್ವಾಸ ಮಹಾದ್ಯುತಿಯು ವೇಗದಿಂದ ಆಕ್ರಮಣಿಸಿ ಪಾಂಡವರ ಮಹಾಸೇನೆಯ ಮೇಲೆ ನೂರಾರು ನಿಶಿತ ಶರಗಳನ್ನು ಎರಚಿದನು. ದ್ರೋಣನು ಮೇಲೆ ಎರಗಿದುದನ್ನು ನೋಡಿ ಪಾಂಡವರೊಂದಿಗೆ ಸೃಂಜಯರು ಅವನನ್ನು ಮೇಲಿಂದ ಮೇಲೆ ಶರವರ್ಷಗಳಿಂದ ತಡೆದುಕೊಂಡರು. ದ್ರೋಣನಿಂದ ಕ್ಷೋಭೆಗೊಂಡ ಮತ್ತು ಒಡೆದುಹೋದ ಪಾಂಚಾಲರ ಆ ಮಹಾಸೇನೆಯು ಭಿರುಗಾಳಿಗೆ ಸಿಲುಕಿದ ಬೆಳ್ಳಕ್ಕಿಗಳ ಸಾಲಿನಂತೆ ಚದುರಿ ಹೋಯಿತು. ಅನೇಕ ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಾ ದ್ರೋಣನು ಕ್ಷಣದಲ್ಲಿಯೇ ಪಾಂಡವ-ಸೃಂಜಯರ ಸೇನೆಯನ್ನು ಪೀಡಿಸಿದನು.

ವಾಸವನಿಂದ ದಾನವರಂತೆ ದ್ರೋಣನಿಂದ ವಧಿಸಲ್ಪಡುತ್ತಿದ್ದ ಧೃಷ್ಟದ್ಯುಮ್ನನ ನಾಯಕತ್ವದಲ್ಲಿದ್ದ ಪಾಂಚಾಲರು ತತ್ತರಿಸಿದರು. ಆಗ ದಿವ್ಯಾಸ್ತ್ರಗಳನ್ನು ತಿಳಿದಿದ್ದ ಮಹಾರಥ ಶೂರ ಯಾಜ್ಞಸೇನಿಯು ಶರವರ್ಷಗಳಿಂದ ದ್ರೋಣನ ಸೇನೆಯನ್ನು ಅನೇಕ ಕಡೆಗಳಲ್ಲಿ ಭೇದಿಸಿದನು. ದ್ರೋಣನ ಶರವರ್ಷಗಳನ್ನು ತನ್ನದೇ ಶರವರ್ಷಗಳಿಂದ ತುಂಡುಮಾಡಿ ಆ ಬಲಶಾಲಿಯು ಕುರುಗಳ ಸೇನೆಯನ್ನು ತಡೆದನು. ಆಗ ಮಹಾಬಾಹು ದ್ರೋಣನು ಯುದ್ಧದಲ್ಲಿ ತನ್ನ ಸೇನೆಯನ್ನು

ಒಟ್ಟುಗೂಡಿಸಿಕೊಂಡು ಪಾರ್ಷತನ ಮೇಲೆ ಆಕ್ರಮಣ ಮಾಡಿದನು. ಕ್ರುದ್ಧನಾದ ಮಘವಾನನು ಒಮ್ಮೊಂದೊಮ್ಮೆಲೇ ದಾನವರ ಮೇಲೆ ಹೇಗೋ ಹಾಗೆ ಅವನು ಪಾರ್ಷತನ ಮೇಲೆ ಬಾಣಗಳ ಅತಿದೊಡ್ಡ ಮಳೆಯನ್ನು ಸುರಿಸಿದನು. ದ್ರೋಣನ ಬಾಣಗಳಿಂದ ತತ್ತರಿಸಿದ ಪಾಂಡವ-ಸೃಂಜಯರು ಸಿಂಹನಿಂದ ಆಕ್ರಮಣಿಸಲ್ಪಟ್ಟ ಇತರ ಮೃಗಗಳಂತೆ ಪುನಃ ಪುನಃ ಚದುರಿ ಹೋಗುತ್ತಿದ್ದರು. ಹೀಗೆ ಬಲಶಾಲೀ ದ್ರೋಣನು ಬೆಂಕಿಯ ಚಕ್ರದಂತೆ ಪಾಂಡವರ ಸೇನೆಯಲ್ಲಿ ರಾಜಿಸುತ್ತಿದ್ದನು. ಆಗ ಈ ಅದ್ಭುತವು ನಡೆಯಿತು. ಆಕಾಶದಲ್ಲಿ ಚಲಿಸುತ್ತಿರುವ ನಗರದಂತೆ ಶಾಸ್ತ್ರೋಕ್ತವಾಗಿ ಸಜ್ಜುಗೊಳಿಸಿದ್ದ, ಗಾಳಿಯಿಂದ ಹಾರಾಡುತ್ತಿದ್ದ ಪತಾಕೆಯುಳ್ಳ, ರಣಭೂಮಿಯನ್ನೇ ತುಂಬುವ ಗಾಲಿಯ ಶಬ್ಧಗಳನ್ನುಳ್ಳ, ಸ್ಪಟಿಕದಂತೆ ಹೊಳೆಯುತ್ತಿದ್ದ ಬಾವುಟವುಳ್ಳ ಶತ್ರುಗಳನ್ನು ಸುಡುವ ಶ್ರೇಷ್ಠವಾದ ರಥವನ್ನೇರಿ ದ್ರೋಣನು ಅರಿಸೇನೆಯನ್ನು ಸಂಹರಿಸತೊಡಗಿದನು.

ಹಾಗೆ ದ್ರೋಣನು ಅಶ್ವ-ಸೂತ-ರಥ-ಗಜಗಳೊಡನೆ ಸಂಹರಿಸುತ್ತಾ ಅವರನ್ನು ಸುತ್ತುವರೆದುದನ್ನು ನೋಡಿ ಪಾಂಡವರು ವ್ಯಥಿತರಾದರು. ಆಗ ರಾಜಾ ಯುಧಿಷ್ಠಿರನು ಧೃಷ್ಟದ್ಯುಮ್ನ ಧನಂಜಯರಿಗೆ “ಕುಂಭಯೋನಿಜನನ್ನು ತಡೆಯುವ ಸರ್ವ ಯತ್ನಗಳೂ ನಡೆಯಲಿ!”

ಎಂದನು. ಆಗ ಅರ್ಜುನ ಮತ್ತು ಪಾರ್ಷತರು ಎಲ್ಲ ಮಹಾರಥ ಅನುಯಾಯಿಗಳೊಂದಿಗೆ ದ್ರೋಣನನ್ನು ಮುತ್ತಿದರು. ಕೇಕಯರು, ಭೀಮಸೇನ, ಸೌಭದ್ರ, ಘಟೋತ್ಕಚ, ಯುಧಿಷ್ಠಿರ, ಯಮಳರು, ಮತ್ಸ್ಯರು, ದ್ರುಪದನ ಮಕ್ಕಳು, ದ್ರೌಪದಿಯ ಮಕ್ಕಳು, ಸಂಹೃಷ್ಟನಾಗಿದ್ದ ಧೃಷ್ಟಕೇತು ಸಾತ್ಯಕಿಯರು, ಚೇಕಿತಾನ, ಸಂಕ್ರುದ್ಧನಾಗಿದ್ದ ಮಹಾರಥಿ ಯುಯುತ್ಸು ಇವರು ಮತ್ತು ಪಾಂಡವರನ್ನು ಬೆಂಬಲಿಸಿದ ಅನ್ಯ ಪಾರ್ಥಿವರು ಅವರವರ ಕುಲ ವೀರ್ಯಗಳಿಗನುಗುಣವಾಗಿ ಅನೇಕ ಕರ್ಮಗಳನ್ನೆಸಗಿದರು. ರಣದಲ್ಲಿ ಪಾಂಡವರು ಸಂಗ್ರಹಿಸಿ ಸಂರಕ್ಷಿಸಿದ್ದ ಆ ಸೇನೆಯನ್ನು ನೋಡಿ ಭಾರದ್ವಾಜನು ಕೋಪದಿಂದ ಕಣ್ಣುಗಳನ್ನರಳಿಸಿ ನೋಡಿದನು. ಆ ಸಮರದುರ್ಮದನು ತೀವ್ರವಾಗಿ ಕೋಪಗೊಂಡು ಪಾಂಡವರ ಸೇನೆಯನ್ನು ಮೋಡಗಳನ್ನು ಚದುರಿಸುವಂತೆ ಭೇದಿಸಿದನು. ವೃದ್ಧನಾಗಿದ್ದರೂ ತರುಣನಂತೆ ಉನ್ಮತ್ತನಾಗಿರುವನೋ ಎನ್ನುವಂತೆ ದ್ರೋಣನು ಅಲ್ಲಿಂದಿಲ್ಲಿಗೆ ಧಾವಿಸುತ್ತಾ ಅವರ ರಥಗಳನ್ನೂ, ಕುದುರೆಗಳನ್ನೂ, ಸೈನಿಕರನ್ನೂ, ಆನೆಗಳನ್ನೂ ವಧಿಸುತ್ತಿದ್ದರು. ಸ್ವಭಾವತಃ ಕೆಂಪಾಗಿದ್ದ ಅವನ ಕುದುರೆಗಳು ರಕ್ತದಿಂದ ತೋಯ್ದ ಶರೀರಗಳಿಂದ ಇನ್ನೂ ಹೆಚ್ಚು ಕೆಂಪಾಗಿ ಕಾಣುತ್ತಿದ್ದವು. ವಾಯುವೇಗದ ಅವು ಅವಿಭ್ರಾಂತರಾಗಿ ಅವನನ್ನು ಕೊಂಡೊಯ್ಯುತ್ತಿದ್ದವು. ಅಂತಕನಂತೆ

ಕ್ರುದ್ಧನಾಗಿ ಮೇಲೆ ಬೀಳುತ್ತಿದ್ದ ಆ ಯತವ್ರತನನ್ನು ನೋಡಿ ಪಾಂಡವರ ಯೋಧರು ಎಲ್ಲ ಕಡೆಗಳಲ್ಲಿ ಓಡಿ ಹೋಗುತ್ತಿದ್ದರು. ಹೀಗೆ ಓಡಿಹೋಗುತ್ತಿರುವವರ, ಪುನಃ ಹಿಂದಿರುಗುತ್ತಿರುವವರ, ಸುಮ್ಮನೆ ನಿಂತು ನೋಡುತ್ತಿದ್ದವರ, ನಿಂತು ಕೂಗಿಕೊಳ್ಳುತ್ತಿದ್ದವರ ಭೀಕರ ಶಬ್ಧವು ಪರಮ ದಾರುಣವಾಗಿತ್ತು.

ಆಕಾಶ-ಭೂಮಿಗಳನ್ನು ಎಲ್ಲ ಕಡೆಯಿಂದಲೂ ತುಂಬಿಬಿಟ್ಟಿದ್ದ ಆ ತುಮುಲವು ಶೂರರಿಗೆ ಹರ್ಷವನ್ನಿತ್ತರೆ ದುರ್ಬಲಹೃದಯದವರ ಭಯವನ್ನು ಹೆಚ್ಚಿಸುತ್ತಿತ್ತು. ಆಗ ಪುನಃ ದ್ರೋಣನು ಯುದ್ಧದಲ್ಲಿ ತನ್ನ ಹೆಸರನ್ನು ಕೇಳಿಸುತ್ತಾ ತನ್ನ ರೂಪವನ್ನು ರೌದ್ರವಾಗಿಸಿಕೊಂಡು ಶತ್ರುಗಳ ಮೇಲೆ ನೂರಾರು ಬಾಣಗಳನ್ನು ಎರಚಿದನು. ವೃದ್ಧನಾಗಿದ್ದರೂ ಬಲಶಾಲಿ ಯುವಕನಂತಿದ್ದ ಧೀಮತ ದ್ರೋಣನು ಪಾಂಡವನ ಸೇನೆಗಳ ಮಧ್ಯೆ ಅಂತಕನಂತೆ ಸಂಚರಿಸುತ್ತಿದ್ದನು. ಆ ಮಹಾರಥನು ಉಗ್ರನಾಗಿ ರಥದಲ್ಲಿದ್ದವರ ಶಿರಗಳನ್ನು ಮತ್ತು ಸುಭೂಷಣ ಬಾಹುಗಳನ್ನೂ ಕತ್ತರಿಸಿ ರಥಗಳನ್ನು ಬರಿದುಮಾಡಿ ಗರ್ಜಿಸುತ್ತಿದ್ದನು. ಅವನ ಹರ್ಷಗರ್ಜನೆಯಿಂದ ಮತ್ತು ಬಾಣಗಳ ವೇಗದಿಂದ ರಣದಲ್ಲಿ ಯೋಧರು ಛಳಿಯಿಂದ ನಡುಗುವ ಗೋವುಗಳಂತೆ ನಡುಗುತ್ತಿದ್ದರು. ದ್ರೋಣನ ರಥ ಘೋಷದಿಂದ, ಶಿಂಜನಿಯನ್ನು ಉಜ್ಜುವುದರಿಂದಲೂ,

ಧನುಸ್ಸಿನ ಟೇಂಕಾರದಿಂದ ಉಂಟಾದ ಶಬ್ಧವು ಆಕಾಶವನ್ನು ತಲುಪಿ ಅತಿ ಜೋರಾಯಿತು. ಅವನು ಬಿಟ್ಟ ಸಹಸ್ರಾರು ಬಾಣಗಳು ಹೆಚ್ಚಾಗಿ ಎಲ್ಲ ದಿಕ್ಕುಗಳನ್ನೂ ವ್ಯಾಪಿಸಿ ಆನೆ-ಕುದುರೆ-ರಥ-ಪದಾತಿಗಳ ಮೇಲೆ ಬೀಳುತ್ತಿದ್ದವು.

ಆ ಮಹಾಧನ್ವಿ, ಮಹಾವೇಗಿ, ಅಸ್ತ್ರಗಳನ್ನು ಹೊಂದಿದ್ದ, ಪಾವಕನಂತೆ ಪ್ರಜ್ವಲಿಸುತ್ತಿದ್ದ ದ್ರೋಣನನ್ನು ಆಕ್ರಮಣಿಸಲು ಪಾಂಡವರೊಂದಿಗೆ ಪಾಂಚಾಲರು ಪ್ರಯತ್ನಿಸಿದರು. ಅವರನ್ನು ರಥ-ಆನೆ-ಕುದುರೆಗಳೊಂದಿಗೆ ಯಮಸಾದನಕ್ಕೆ ಕಳುಹಿಸಿ ದ್ರೋಣನು ಕ್ಷಣಮಾತ್ರದಲ್ಲಿ ಭೂಮಿಯನ್ನು ರಕ್ತದ ಕೆಸರಿನಿಂದ ತುಂಬಿಸಿದರು. ದ್ರೋಣನಿಂದ ಸತತವಾಗಿ ಪ್ರಯೋಗಿಸಲ್ಪಟ್ಟ ಪರಮಾಸ್ತ್ರಗಳೂ ಶರಗಳೂ ದಿಕ್ಕುಗಳನ್ನು ಬಾಣಗಳ ಜಾಲದಂತೆ ಮುಚ್ಚಿರುವುದು ಕಂಡುಬಂದಿತು. ಪದಾತಿಗಳ, ರಥ-ಕುದುರೆಗಳ, ಆನೆಗಳ ಮಧ್ಯೆ ಎಲ್ಲೆಡೆಯಲ್ಲಿ ಮೋಡಗಳ ಮಧ್ಯೆ ಕಾಣುವ ಮಿಂಚಿನಂತೆ ಅವನ ಧ್ವಜವು ಕಾಣುತ್ತಿತ್ತು. ದ್ರೋಣನು ಬಿಲ್ಲು ಬಾಣಗಳನ್ನು ಹಿಡಿದು ಕೇಕಯರ ಐವರು ಮುಖ್ಯರನ್ನೂ ಪಾಂಚಾಲರಾಜನನ್ನೂ ಶರಗಳಿಂದ ಹೊಡೆದು ಯುಧಿಷ್ಠಿರನ ಸೇನೆಯನ್ನು ಆಕ್ರಮಣಿಸಿದನು. ಭೀಮಸೇನ-ಧನಂಜಯರು, ಸಾತ್ಯಕಿ, ಧೃಷ್ಟದ್ಯುಮ್ನ, ಶೈಬ್ಯನ ಮಗ, ಕಾಶಿರಾಜ,

ಶಿಬಿ ಮೊದಲಾದವರು ಹೃಷ್ಟರಾಗಿ ಕೂಗುತ್ತಾ ಶರಸಮೂಹಗಳಿಂದ ಅವನನ್ನು ಮುಚ್ಚಿದರು. ಆಗ ದ್ರೋಣನ ಧನುಸ್ಸಿನಿಂದ ಹೊರಟ ಕಾಂಚನದ ಬಣ್ಣದ ರೆಕ್ಕೆಗಳುಳ್ಳ ಪತತ್ರಿಗಳು ಆನೆ ಕುದುರೆಗಳ ಶರೀರಗಳನ್ನು ಭೇದಿಸಿ ರಕ್ತದಲ್ಲಿ ತೋಯ್ದು ಭೂಮಿಯನ್ನು ಹೊಕ್ಕವು. ಎಲ್ಲ ಕಡೆ ಬಿದ್ದಿದ್ದ ಆ ಯೋಧರ ಗುಂಪುಗಳಿಂದ ಮತ್ತು ರಥಗಳಿಂದ, ಶರಗಳಿಂದ ತುಂಡಾದ ಆನೆ-ಕುದುರೆಗಳಿಂದ ರಣಭೂಮಿಯು ಕಪ್ಪು ಮೋಡಗಳಿಂದ ಕೂಡಿದ ಆಕಾಶದಂತೆ ತೋರಿತು. ನಿನ್ನ ಸುತರಿಗೆ ಒಳಿತನ್ನು ಮಾಡಬಯಸಿ ದ್ರೋಣನು ಶೈನೇಯ-ಭೀಮ-ಅರ್ಜುನರಿಂದ ಪಾಲಿತವಾದ ವಾಹಿನಿಯನ್ನೂ, ಶೈಬ್ಯ, ಅಭಿಮನ್ಯು, ಕಾಶಿರಾಜ, ಮತ್ತು ಇತರ ವೀರರರನ್ನು ಸಮರದಲ್ಲಿ ಮರ್ದಿಸುತ್ತಿದ್ದನು.

ದ್ರೋಣನ ಸೇನೆಯನ್ನು ನಾಶಗೊಳಿಸಲು ಪ್ರಯತ್ನಿಸಿದರೂ ದ್ರೋಣನಿಂದ ಪಾಲಿತವಾದ ಸೇನೆಯನ್ನು ವಿನಾಶಗೊಳಿಸಲು ಸೃಂಜಯರು ಶಕ್ಯರಾಗಲಿಲ್ಲ. ಹಾಗೆಯೇ ದುರ್ಯೋಧನನ ರಥೋದಾರ ಪ್ರಹಾರಿಗಳೂ ಕೂಡ ಕಿರೀಟಿಯಿಂದ ಪಾಲಿತಗೊಂಡ ಪಾಂಡವರ ಸೇನೆಯನ್ನು ನಾಶಗೊಳಿಸಲು ಶಕ್ಯರಾಗಲಿಲ್ಲ. ರಾತ್ರಿವೇಳೆ ಸುಪುಷ್ಪಿತ ವನರಾಜಿಗಳು ಹಂದಾಡದೇ ನಿದ್ರಿಸುತ್ತಿರುವಂತೆ ಪರಸ್ಪರರಿಂದ ರಕ್ಷಿಸಲ್ಪಟ್ಟ ಆ ಸೇನೆಗಳು ಸ್ತಿಮಿತವಾಗಿಬಿಟ್ಟಿದ್ದವು. ಆಗ ರುಕ್ಮರಥ

ದ್ರೋಣನು ಸೂರ್ಯನಂತೆ ವಿರಾಜಿಸುತ್ತಾ ಸೈನ್ಯದ ಗುಂಪಿನಿಂದ ಹೊರಬಂದು ಸೇನಾವಿಭಾಗಗಳ ಮುಂಭಾಗದಲ್ಲಿ ಸಂಚರಿಸತೊಡಗಿದರು. ಆಹವದಲ್ಲಿ ಒಂದೇರಥದಲ್ಲಿ ಕುಳಿತು ಬಾಣಗಳ ಮಳೆಯನ್ನು ಅವ್ಯಾಹತವಾಗಿ ಸುರಿಸಲು ಅನೇಕ ದ್ರೋಣರು ತಮ್ಮೊಡನೆ ಹೋರಡುತ್ತಿರುವರೋ ಏನೋ ಎಂದು ಪಾಂಡುಸೃಂಜಯರು ಅಂದುಕೊಂಡರು.

ಅವನು ಬಿಟ್ಟ ಘೋರ ಶರಗಳು ಎಲ್ಲ ದಿಕ್ಕುಗಳಲ್ಲಿ ಹರಡಿ ಪಾಂಡವೇಯನ ಸೇನೆಯನ್ನು ಬಹುವಾಗಿ ಭಯಪಡಿಸಿದವು. ನೂರಾರು ಕಿರಣಗಳ ಸೂರ್ಯನು ಮಧ್ಯಾಹ್ನದ ಹೊತ್ತು ತನ್ನ ಉಷ್ಣತೆಯಿಂದ ಸುಡುವಂತೆ ದ್ರೋಣನು ಕಂಡನು. ಸಮರದಲ್ಲಿ ಕ್ರುದ್ಧನಾದ ಮಹೇಂದ್ರನನ್ನು ದಾನವರು ಹೇಗೋ ಹಾಗೆ ಅವನನ್ನು ನೋಡಲು ಪಾಂಡವರು ಯಾರೂ ಶಕ್ಯರಾಗಿರಲಿಲ್ಲ. ಭಾರದ್ವಾಜನು ಬೇಗನೇ ಸೇನೆಗಳನ್ನು ಮೂರ್ಛೆಗೊಳಿಸಿ ಧೃಷ್ಟದ್ಯುಮ್ನನ ಸೇನೆಯನ್ನು ನಿಶಿತ ಶರಗಳಿಂದ ವಧಿಸಿದನು. ಜಿಹ್ಮಗಗಳಿಂದ ಅವನು ಎಲ್ಲ ದಿಕ್ಕುಗಳನ್ನೂ ಆಕಾಶವನ್ನೂ ತುಂಬಿಸಿಬಿಟ್ಟನು. ಪಾರ್ಷತನು ಎಲ್ಲಿದ್ದನೋ ಅಲ್ಲಲ್ಲಿಯೇ ಪಾಂಡವ ವಾಹಿನಿಯನ್ನು ಮರ್ದಿಸಿದನು.

ಆಗ ಪಾಂಡವರ ಸೇನೆಯಲ್ಲಿ ಮಹಾ ತುಮುಲವುಂಟಾಯಿತು.

ದ್ರೋಣನು ಸಂಚರಿಸುತ್ತಾ ಪಾಂಡವರನ್ನು ಹುಲ್ಲುಮೆದೆಯಂತೆ ಸುಡುತ್ತಿದ್ದನು. ಭುಗಿಲೆದ್ದ ಸಾಕ್ಷಾತ್ ಅಗ್ನಿಯಂತೆ ಸೇನೆಯನ್ನು ದಹಿಸುತ್ತಿದ್ದ ರುಕ್ಮರಥನನ್ನು ನೋಡಿ ಸೃಂಜಯರು ನಡುಗಿದರು. ಸತತವಾಗಿ ಸೆಳೆಯಲ್ಪಟ್ಟು ಬಾಣಗಳನ್ನು ಬಿಡುತ್ತಿದ್ದ ಧನುಸ್ಸಿನ ಟೇಂಕಾರ ಶಬ್ಧವು ಸಿಡಿಲಿನ ಶಬ್ಧದಂತೆ ಕೇಳಿಬರುತ್ತಿತ್ತು. ಆ ಕೈಚಳಕಿನವನು ಬಿಟ್ಟ ರೌದ್ರ ಸಾಯಕಗಳು ರಥಿಗಳನ್ನೂ, ಅಶ್ವಾರೋಹಿಗಳನ್ನೂ, ಆನೆಗಳನ್ನೂ, ಕುದುರೆಗಳನ್ನೂ, ಪದಾತಿಗಳನ್ನೂ ಹೊಡೆದುರುಳಿಸುತ್ತಿದ್ದವು. ಮಳೆಗಾಲದ ಆರಂಭದಲ್ಲಿ ಮೋಡಗಳು ಭಿರುಗಾಳಿಯಡಗೂಡಿ ಗುಡುಗುತ್ತಾ ಆನೆಕಲ್ಲಿನ ಮಳೆಕರೆಯುವಂತೆ ಬಾಣಗಳ ಮಳೆಗರೆದು ಅವನು ಶತ್ರುಗಳಲ್ಲಿ ಯುದ್ಧದ ಭಯವನ್ನು ಹುಟ್ಟಿಸಿದನು. ಆ ಪ್ರಭುವು ಸಂಚರಿಸುತ್ತಾ ಸೇನೆಗಳನ್ನು ಅಲ್ಲೋಲಕಲ್ಲೋಲಗೊಳಿಸಿ ಶತ್ರುಗಳ ಮನಸ್ಸಿನಲ್ಲಿ ಅಮಾನುಷ ಭಯವನ್ನು ಹೆಚ್ಚಿಸಿದನು. ಮೋಡದಂತೆ ಚಲಿಸುತ್ತಿರುವ ಅವನ ರಥದಿಂದ ಹೇಮಪರಿಷ್ಕೃತ ಧನುಸ್ಸು ಮೋಡದಲ್ಲಿನ ಮಿಂಚಿನಂತೆ ಫಳ ಫಳನೆ ಪುನಃ ಪುನಃ ಹೊಳೆಯುತ್ತಿರುವುದು ಕಂಡುಬಂದಿತು. ಆ ವೀರ, ಸತ್ಯವಾನ್, ಪ್ರಾಜ್ಞ, ಧರ್ಮನಿತ್ಯನು ಪ್ರಲಯಕಾಲದಂತೆಯೇ ರೌದ್ರವೂ ದಾರುಣವೂ ಆದ ರಕ್ತದ ನದಿಯನ್ನೇ ಸೃಷ್ಟಿಸಿದನು. ಕೋಪದ ಆವೇಗದಿಂದ ಹುಟ್ಟಿದ ಆ ನದಿಯು ಮಾಂಸಾಹಾರಿ

ಪ್ರಾಣಿಸಂಕುಲಗಳಿಂದ ಕೂಡಿದ್ದು ಸೈನ್ಯಸಮೂಹದ ಪ್ರವಾಹದಿಂದ ಪೂರ್ಣವಾಗಿ, ವೀರರನ್ನೇ ವೃಕ್ಷಗಳನ್ನಾಗಿ ತೇಲಿಸಿಕೊಂಡು ಹೋಗುತ್ತಿತ್ತು. ರಕ್ತವೇ ನೀರಾಗಿತ್ತು, ರಥಗಳೇ ಸುರುಳಿಗಳಾಗಿದ್ದವು, ಆನೆ-ಕುದುರೆಗಳೇ ಅದರ ದಡಗಳಾಗಿದ್ದವು, ವೀರರ ಕವಚಗಳೇ ದೋಣಿಗಳಂತಿದ್ದವು ಮತ್ತು ಮಾಂಸರೂಪದ ಕೆಸರಿನಿಂದ ತುಂಬಿಕೊಂಡಿತ್ತು. ಮೇಧಸ್ಸು-ಮಜ್ಜೆ-ಮೂಳೆಗಳೇ ಮರಳಿನ ರಾಶಿಯಾಗಿದ್ದವು, ಶಿರಸ್ತ್ರಾಣಗಳು ನೊರೆಯ ರೂಪದಲ್ಲಿದ್ದವು, ಸಂಗ್ರಾಮವೆಂಬ ಮೋಡಗಳಿಂದ ಸುರಿದ ರಕ್ತದಿಂದ ತುಂಬಿಹೋಗಿತ್ತು ಮತ್ತು ಪ್ರಾಸಾಯುಧಗಳೇ ಮೀನುಗಳ ಸಮಾಕುಲದಂತಿದ್ದವು. ನರ-ಗಜ-ಅಶ್ವಗಳಿಂದ ತುಂಬಿದ್ದ ಆ ನದಿಗೆ ಶರವೇಗಗಳೇ ಪ್ರವಾಹಗಳಾಗಿದ್ದವು. ಶರೀರಗಳು ಅದರ ಘಟ್ಟಗಳಾಗಿದ್ದರೆ ರಥಗಳೇ ಆಮೆಗಳಾಗಿದ್ದವು. ತಲೆಗಳು ಕಮಲದ ಪುಷ್ಪಗಳಂತಿದ್ದವು. ಖಡ್ಗಗಳೇ ಮೀನುಗಳಾಗಿ ತುಂಬಿಹೋಗಿದ್ದವು. ರಥಗಳು ಮತ್ತು ಆನೆಗಳ ಅದರ ಮಡುವಿನಂತಿದ್ದವು. ನಾನಾಭರಣಗಳೇ ನೀರಜ ಪುಷ್ಪಗಳಾಗಿದ್ದವು. ನೂರಾರು ಮಹಾರಥಗಳು ಸುಳಿಗಳಿಂತಿದ್ದವು. ಭೂಮಿಯಿಂದ ಹುಟ್ಟಿದ ಧೂಳೀ ಅದರ ಅಲೆಗಳ ಮಾಲೆಗಳಾಗಿದ್ದವು. ಯುದ್ಧದಲ್ಲಿ ಮಹಾವೀರರಿಗೆ ಅದು ಸುಲಭವೂ ರಣಹೇಡಿಗಳಿಗೂ ದುಸ್ತರವೂ ಆಗಿದ್ದಿತು. ಶೂರರ ಶರೀರಗಳಿಂದ ತುಂಬಿದ್ದ ಅದಕ್ಕೆ ಪ್ರಾಣಿಗಳ

ಗುಂಪುಗಳು ಮುತ್ತಿದ್ದವು. ಹರಿದುಹೋದ ಚತ್ರಗಳು ಹಂಸಗಳಂತೆ ತೇಲುತ್ತಿದ್ದವು. ಮುಕುಟಗಳು ಪಕ್ಷಿಸಂಕುಲಗಳಂತೆ ತೋರುತ್ತಿದ್ದವು. ಚಕ್ರಗಳು ಆಮೆಗಳಂತಿದ್ದವು, ಗದೆಗಳು ಮೊಸಳೆಗಳಂತಿದ್ದವು, ಶರಗಳೆಂಬ ಸಣ್ಣ ಸಣ್ಣ ಮೀನುಗಳಿಂದ ತುಂಬಿಹೋಗಿತ್ತು. ಘೋರವಾದ ಹದ್ದು, ಬಕ ಮತ್ತು ಗುಳ್ಳೇನರಿಗಳ ಗುಂಪುಗಳಿಂದ ಕೂಡಿತ್ತು. ದ್ರೋಣನ ಬಲಶಾಲಿ ಶರಗಳು ಯುದ್ಧದಲ್ಲಿ ಪ್ರಾಣಿಗಳನ್ನು ಕೊಂದು ನೂರಾರು ರಾಜಸತ್ತಮರನ್ನು ಪಿತೃಲೋಕಕ್ಕೆ ತೇಲಿಸಿಕೊಂಡು ಹೋಗುತ್ತಿದ್ದವು. ನೂರಾರು ಶರೀರಗಳಿಂದ ಸಮಾಕುಲವಾಗಿದ್ದ ಕೂದಲುಗಳೆಂಬ ಹುಲ್ಲಿನಿಂದಲೂ ಪಾಚಿಯಿಂದಲೂ ಕೂಡಿದ್ದ ಭೀರುಗಳಿಗೆ ಭಯವನ್ನು ಹೆಚಿವಿಸುತ್ತಿದ್ದ ಆ ರಕ್ತನದಿಯು ಹರಿಯುತ್ತಿತ್ತು.

ಅಲ್ಲಲ್ಲಿ ಸೇನೆಗಳನ್ನು ಜಯಿಸುತ್ತಿದ್ದ ದ್ರೋಣನನ್ನು ಯುಧಿಷ್ಠಿರನೇ ಮೊದಲಾದವರು ಎಲ್ಲಕಡೆಗಳಿಂದ ಆಕ್ರಮಣಿಸಿದರು. ಧಾವಿಸಿ ಬರುತ್ತಿದ್ದ ಆ ಶೂರರನ್ನು ಕೌರವ ದೃಢಕಾರ್ಮುಕರು ಎಲ್ಲ ಕಡೆಯಿಂದ ತಡೆದು ನಿಲ್ಲಿಸಿದರು. ಆಗ ರೋಮಾಂಚಕಾರೀ ಯುದ್ಧವು ನಡೆಯಿತು. ನೂರಾರು ಮಾಯಾವಿದ್ಯೆಗಳನ್ನು ತಿಳಿದಿದ್ದ ಶಕುನಿಯು ಸಹದೇವನನ್ನು ಆಕ್ರಮಣಿಸಿ, ಅವನನ್ನೂ, ಸಾರಥಿಯನ್ನೂ, ಧ್ವಜವನ್ನೂ, ರಥವನ್ನು ನಿಶಿತ ಶರಗಳಿಂದ ಹೊಡೆದನು. ಆಗ ಮಾದ್ರೀ ಸುತನು ಅತಿ ಕ್ರುದ್ಧನಾಗಿ

ಅವನ ಧ್ವಜ, ಧನುಸ್ಸು, ಸೂತ ಮತ್ತು ಕುದುರೆಗಳನ್ನೂ ಶರಗಳಿಂದ ತುಂಡುಮಾಡಿ ಅರವತ್ತರಿಂದ ಸೋದರ ಮಾವನನ್ನು ಹೊಡೆದನು. ಸೌಬಲನಾದರೋ ಗದೆಯನ್ನು ಹಿಡಿದು ಉತ್ತಮ ರಥದಿಂದ ಕೆಳಗೆ ಹಾರಿ ಆ ಗದೆಯಿಂದ ಅವನ ರಥದಿಂದ ಸೂತನನ್ನು ಕೆಳಗೆ ಬೀಳಿಸಿದನು. ಆಗ ಅವರಿಬ್ಬರು ಮಹಾರಥ ಶೂರರೂ ರಥಗಳನ್ನು ಕಳೆದುಕೊಂಡು ಗದೆಗಳನ್ನು ಹಿಡಿದು ರಣದಿಂದ ಶಿಖರಗಳಿರುವ ಪರ್ವತಗಳಂತೆ ಹೋರಾಡಿದರು.

ದ್ರೋಣನು ಪಾಂಚಾಲರಾಜನನ್ನು ಹತ್ತು ಆಶುಗಗಳಿಂದ ಗಾಯಗೊಳಿಸಿದನು. ಆಗ ಅವನೂ ಕೂಡ ದ್ರೋಣನನ್ನು ಅನೇಕ ನೂರಕ್ಕೂ ಹೆಚ್ಚು ಬಾಣಗಳಿಂದ ಹೊಡೆದನು. ಭೀಮಸೇನನು ವಿವಿಂಶತಿಯನ್ನು ಇಪ್ಪತ್ತು ನಿಶಿತ ಶರಗಳಿಂದ ಹೊಡೆಯಲು ಆ ವೀರನು ಅಲುಗಾಡಲಿಲ್ಲ. ಒಡನೆಯೇ ವಿವಿಂಶತಿಯು ಭೀಮನನ್ನು ಕುದುರೆ-ಧ್ವಜ-ಬಿಲ್ಲುಗಳು ಇಲ್ಲದಂತೆ ಮಾಡಿಬಿಟ್ಟನು. ಆಗ ಸೈನ್ಯಗಳು ಅವನನ್ನು ಗೌರವಿಸಿದವು. ಆಹವದಲ್ಲಿ ಶತ್ರುವಿನ ವಿಜಯವನ್ನು ಸಹಿಸಿಕೊಳ್ಳಲಾಗದ ಆ ವೀರನು ಗದೆಯಿಂದ ಅವನ ಆನೆ-ಕುದುರೆಗಳೆಲ್ಲವನ್ನೂ ಅಪ್ಪಳಿಸಿ ಉರುಳಿಸಿದನು.

ವೀರ ಶಲ್ಯನಾದರೋ ತನ್ನ ಪ್ರಿತಿಯ ಅಳಿಯ ನಕುಲನನ್ನು ನಗುತ್ತಾ

ಆಟವಾಡುತ್ತಿದ್ದಂತೆ ಮತ್ತು ಕೋಪದಲ್ಲಿರುವಂತೆ ಬಾಣಗಳಿಂದ ಹೊಡೆದನು. ಆಗ ನಕುಲನು ಅವನ ಕುದುರೆಗಳನ್ನೂ, ಧ್ವಜವನ್ನೂ, ಸೂತನನ್ನೂ, ಧನುಸ್ಸನ್ನೂ ಕೆಳಗುರುಳಿಸಿ ಶಂಖವನ್ನು ಊದಿದನು. ಧೃಷ್ಟಕೇತುವು ಕೃಪನು ಪ್ರಯೋಗಿಸಿದ ಬಹುವಿಧದ ಶರಗಳನ್ನು ಕತ್ತರಿಸಿ, ಮೂರು ಬಾಣಗಳಿಂದ ಅವನ ಧ್ವಜವನ್ನು ತುಂಡರಿಸಿ ಕೃಪನನ್ನು ಎಪ್ಪತ್ತು ಬಾಣಗಳಿಂದ ಗಾಯಗೊಳಿಸಿದನು. ಅವನನ್ನು ಕೃಪನು ಮಹಾ ಶರವರ್ಷದಿಂದ ಮುಚ್ಚಿದನು. ವಿಪ್ರನು ಧೃಷ್ಟಕೇತುವನ್ನು ತಡೆದು ಯುದ್ಧ ಮಾಡಿದನು. ಸಾತ್ಯಕಿಯು ಕೃತವರ್ಮನನ್ನು ನಾರಾಚದಿಂದ ಎದೆಗೆ ಹೊಡೆದು ಪುನಃ ನಗುತ್ತ ಇತರ ಎಪ್ಪತ್ತರಿಂದ ಹೊಡೆದನು. ಆಗ ಭೋಜನು ಅವನನ್ನು ಎಪ್ಪತ್ತೇಳು ನಿಶಿತ ಶರಗಳಿಂದ ಹೊಡೆಯಲು ಶೈನೇಯನು ಭಿರುಗಾಳಿಗೂ ಅಲುಗಾಡದ ಪರ್ವತದಂತೆ ಕಂಪಿಸಲಿಲ್ಲ. ಸೇನಾಪತಿ ಧೃಷ್ಟದ್ಯುಮ್ನನು ಸುಶರ್ಮನನ್ನು ಶೀಘ್ರವಾಗಿ ಮರ್ಮಗಳಲ್ಲಿ ಹೊಡೆದನು. ಅವನೂ ಕೂಡ ಅವನನ್ನು ಜತ್ರುದೇಶದಲ್ಲಿ ತೋಮರದಿಂದ ಹೊಡೆದನು.

ವೈಕರ್ತನನ್ನು ವಿರಾಟನು ಮತ್ಸ್ಯ ಮಹಾವೀರರೊಂದಿಗೆ ಎದುರಿಸಿ ತಡೆದನು. ಆಗ ಈ ಅದ್ಭುತವು ನಡೆಯಿತು. ಸನ್ನತಪರ್ವ ಶರಗಳಿಂದ

ಸೈನ್ಯವನ್ನು ತಡೆಹಿಡಿದ ಸೂತಪುತ್ರನ ದಾರುಣ ಪೌರುಷವನ್ನು ಅಲ್ಲಿ ನೋಡಲಿಕ್ಕೆ ಸಿಕ್ಕಿತು. ರಾಜಾ ದ್ರುಪದನು ಸ್ವಯಂ ಭಗದತ್ತನೊಡನೆ ಯುದ್ಧಮಾಡಿದನು. ಅವರಿಬ್ಬರ ಯುದ್ಧವು ವಿಚಿತ್ರವಾಗಿ ಕಾಣುತ್ತಿತ್ತು. ಅವರಿಬ್ಬರು ಅಸ್ತ್ರವಿಶಾರದರೂ ಭೂತಗಳಿಗೆ ಭಯವನ್ನುಂಟುಮಾಡತೊಡಗಿದರು. ವೀರ್ಯವಾನ್ ಭೂರಿಶ್ರವನು ಮಹಾರಥ ಯಾಜ್ಞಸೇನಿಯನ್ನು ಮಹಾ ಸಾಯಕಗಳ ರಾಶಿಯಿಂದ ಹೊಡೆದನು. ಆಗ ಶಿಖಂಡಿಯಾದರೋ ಕ್ರುದ್ಧನಾಗಿ ಸೌಮದತ್ತಿಯನ್ನು ತೊಂಭತ್ತು ಸಾಯಕಗಲಿಂದ ನಡುಗಿಸಿದನು. ಭೀಮಕರ್ಮಿ ರಾಕ್ಷಸರಿಬ್ಬರು ಹೈಡಿಂಬಿ-ಅಲಂಬುಸರು ಪರಸ್ಪರರನ್ನು ವಧಿಸಲು ಬಯಸಿ ಅತ್ಯದ್ಭುತವಾದ ಯುದ್ಧದಲ್ಲಿ ತೊಡಗಿದರು. ದೃಪ್ತರಾದ ಅವರಿಬ್ಬರೂ ನೂರಾರು ಮಾಯೆಗಳನ್ನು ಸೃಷ್ಟಿಸಿ ಒಬ್ಬರನ್ನೊಬ್ಬರ ಮಾಯೆಗಳಿಂದ ಅಂತರ್ಧಾನರಾಗಿ ತುಂಬಾ ವಿಸ್ಮಯಗಳನ್ನುಂಟುಮಾಡುತ್ತಾ ಸಂಚರಿಸುತ್ತಿದ್ದರು. ದೇವಾಸುರರ ಯುದ್ಧದಲ್ಲಿ ಮಹಾಬಲಶಾಲಿಗಳಾದ ಬಲ ಮತ್ತು ಶಕ್ರರಂತೆ ಚೇಕಿತಾನ-ಅನುವಿಂದರು ಅತಿ ಭೈರವ ಯುದ್ಧದಲ್ಲಿ ತೊಡಗಿದರು. ಹಿಂದೆ ವಿಷ್ಣುವು ಹಿರಣ್ಯಾಕ್ಷನೊಂದಿಗೆ ಹೇಗೋ ಹಾಗೆ ಲಕ್ಷ್ಮಣನು ಕ್ಷತ್ರದೇವನ ಸೇನೆಯನ್ನು ಚೆನ್ನಾಗಿ ಮರ್ದಿಸಿದನು.

## ಅಭಿಮನ್ಯು ಪರಾಕ್ರಮ

ಆಗ ಚಂಚಲಸ್ವಭಾವದ ಕುದುರೆಗಳಿಂದ ವಿಧಿವತ್ತಾಗಿ ಕಲ್ಪಿತವಾಗಿದ್ದ ರಥದಲ್ಲಿ ಪೌರವನು ನಿನಾದಿಸುತ್ತಾ ಸೌಭದ್ರನನ್ನು ಆಕ್ರಮಣಿಸಿದನು. ಯುದ್ಧಾಕಾಂಕ್ಷಿಯಾಗಿದ್ದ ಮಹಾಬಲ ಅಭಿಮನ್ಯುವು ತ್ವರೆಮಾಡಿ ಅವನೊಂದಿಗೆ ಮಹಾಯುದ್ಧದಲ್ಲಿ ತೊಡಗಿದನು. ಪೌರವನು ಸೌಭದ್ರನನ್ನು ಶರವರ್ಷಗಳಿಂದ ಮುಚ್ಚಿಬಿಟ್ಟನು. ಆರ್ಜುನಿಯು ಅವನ ಧ್ವಜ, ಚತ್ರ, ಧನುಸ್ಸುಗಳನ್ನು ಕತ್ತರಿಸಿ ಬೀಳಿಸಿದನು. ಸೌಭದ್ರನು ಪೌರವನನ್ನು ಅನ್ಯ ಏಳು ಆಶುಗಗಳಿಂದ ಹೊಡೆದು ಐದು ಸಾಯಕಗಳಿಂದ ಅವನ ಕುದುರೆಗಳನ್ನೂ ಸೂತನನ್ನೂ ಹೊಡೆದನು. ಆಗ ಆರ್ಜುನಿಯು ಸೇನೆಗಳನ್ನು ಹರ್ಷಗೊಳಿಸುತ್ತಾ ಪುನಃ ಪುನಃ ಸಿಂಹದಂತೆ ಗರ್ಜಿಸಿದನು ಮತ್ತು ತಕ್ಷಣವೇ ಪೌರವನನ್ನು ಅಂತ್ಯಗೊಳಿಸಲು ಶರವನ್ನು ತೆಗೆದುಕೊಂಡನು. ಆಗ ಹಾರ್ದಿಕ್ಯನು ಎರಡು ಬಾಣಗಳಿಂದ ಅವನ ಬಿಲ್ಲು-ಬಾಣಗಳನ್ನು ಕತ್ತರಿಸಿದನು. ಪರವೀರಹ ಸೌಭದ್ರನು ಆ ತುಂಡಾದ ಧನುಸ್ಸನ್ನು ಎಸೆದು ಥಳಥಳಿಸುವ ಖಡ್ಗವನ್ನು ವರಸೆಯಿಂದ ತೆಗೆದು ಗುರಾಣಿಯನ್ನೂ ಹಿಡಿದನು. ಅವನು ಅನೇಕ ನಕ್ಷತ್ರಗಳ ಚಿಹ್ನೆಗಳನ್ನು ಹೊಂದಿದ ಗುರಾಣಿಯನ್ನು ಹಿಡಿದು, ಅದರಲ್ಲಿ ತನ್ನ ಕೈಚಳಕವನ್ನು ಮತ್ತು ವೀರ್ಯವನ್ನು ತೋರಿಸುತ್ತಾ ರಣಾಂಗಣದ ಸುತ್ತಲೂ ತಿರುಗುತ್ತಿದ್ದನು.

ಭ್ರಾಮಿತ (ಕತ್ತಿ-ಗುರಾಣಿಗಳನ್ನು ಕೆಳಕ್ಕೆ ತಿರುಗಿಸುವುದು), ಉದ್ಭ್ರಾಂತ (ಕತ್ತಿಯನ್ನು ಮೇಲೆ ತಿರುಗಿಸುವುದು), ಅಧೂತ (ಸುತ್ತಲೂ ತಿರುಗಿಸುವುದು), ಉತ್ಥಿತ (ಮೇಲಕ್ಕೆ ಹಾರಿ ತಿರುಗಿಸುವುದು) – ಇತ್ಯಾದಿ ವರಸೆಗಳಿಂದ ಅವನು ಖಡ್ಗ ಗುರಾಣಿಗಳನ್ನು ತಿರುಗಿಸುತ್ತಿದ್ದು ವಿಶೇಷವಾಗಿ ಕಂಡಿತು. ಅವನು ಒಮ್ಮೆಲೇ ಜೋರಾಗಿ ಗರ್ಜಿಸಿ ಪೌರವನ ರಥದ ಮೂಕಿನ ಮೇಲೆ ಹಾರಿ ರಥದಲ್ಲಿ ಕುಳಿತಿದ್ದ ಪೌರವನ ತಲೆಗೂದಲನ್ನು ಹಿಡಿದನು. ಕಾಲಿನಿಂದ ಅವನನ್ನು ಒದೆದು, ಖಡ್ಗದಿಂದ ಸೂತ ಮತ್ತು ಧ್ವಜಗಳನ್ನು ಉರುಳಿಸಿದನು. ಅಲ್ಲೋಲಕಲ್ಲೋಲಗೊಂಡಿದ್ದ ಸಮುದ್ರದಿಂದ ಗರುಡನು ಸರ್ಪಗಳನ್ನು ಎಳೆದುಕೊಳ್ಳುವಂತೆ ಅವನನ್ನು ಸೆಳೆದುಕೊಂಡನು. ಸಿಂಹದಿಂದ ಬೀಳಿಸಲ್ಪಟ್ಟ ಹೋರಿಯಂತೆ ಕೆಳಗೆ ಅಚೇತನನಾಗಿ ಬಿದ್ದ ಬಿಚ್ಚಿದ ಕೂದಲಿನ ಅವನನ್ನು ಸರ್ವಪಾರ್ಥಿವರೂ ನೋಡಿದರು.

ಆರ್ಜುನಿಯ ವಶದಲ್ಲಿ ಬಂದು ಅನಾಥನಂತೆ ಎಳೆದಾಡಲ್ಪಟ್ಟು ಬಿದ್ದಿದ್ದ ಪೌರವನನ್ನು ನೋಡಿ ಜಯದ್ರಥನು ಸಹಿಸಿಕೊಳ್ಳಲಿಲ್ಲ. ನವಿಲುಗರಿಗಳಿಂದ ಮತ್ತು ಸಣ್ಣಸಣ್ಣ ಗಂಟೆಗಳಿಂದ ಅಲಂಕೃತಗೊಂಡಿದ್ದ ಗುರಾಣಿಯನ್ನೂ ಖಡ್ಗವನ್ನೂ ಹಿಡಿದು ಗರ್ಜಿಸುತ್ತಾ ರಥದಿಂದ ಧುಮುಕಿದನು. ಸೈಂಧವನನ್ನು ನೋಡಿ

ಕಾರ್ಷ್ಣಿಯು ಪೌರವನನ್ನು ಅಲ್ಲಿಯೇ ಬಿಟ್ಟು ತಕ್ಷಣವೇ ರಥದಿಂದ ಧುಮುಕಿ ಗಿಡುಗದಂತೆ ಮೇಲೆ ಬಿದ್ದನು. ಶತ್ರುಗಳು ತನ್ನ ಮೇಲೆ ಪ್ರಹರಿಸುತ್ತಿದ್ದ ಪ್ರಾಸ-ಪಟ್ಟಿಶ-ಖಡ್ಗಗಳನ್ನು ಕಾರ್ಷ್ಣಿಯು ಗುರಾಣಿಯಿಂದ ತಡೆಯುತ್ತಾ ಖಡ್ಗದಿಂದ ಅವುಗಳನ್ನು ತುಂಡರಿಸಿದನು. ಅವನು ತನ್ನ ಬಾಹುಬಲವನ್ನು ಸೇನೆಗಳಿಗೆ ತೋರಿಸುತ್ತಾ ಆ ಬಲಿ ಶೂರನು ಪುನಃ ಮಹಾಖಡ್ಗವನ್ನೂ ಗುರಾಣಿಯನ್ನು ಮೇಲೆತ್ತಿ ವೃದ್ಧಕ್ಷತ್ರನ ಮಗ, ತನ್ನ ತಂದೆಯ ಅತ್ಯಂತ ವೈರಿಯಾಗಿದ್ದ ಜಯದ್ರಥನನ್ನು ಆನೆಯನ್ನು ಸಿಂಹವು ಹೇಗೋ ಹಾಗೆ ಸಲೀಲವಾಗಿ ಎದುರಿಸಿದನು. ಖಡ್ಗ, ಹಲ್ಲು ಮತ್ತು ಉಗುರುಗಳೇ ಆಯುಧಗಳಾಗಿದ್ದ ಅವರಿಬ್ಬರೂ ಪರಸ್ಪರರನ್ನು ಎದುರಿಸಿ ಸಂತೋಷಗೊಂಡು ಸಿಂಹ ಮತ್ತು ಹುಲಿಗಳಂತೆ ಹೊಡೆದಾಡಿದರು. ಆ ಇಬ್ಬರು ನರಸಿಂಹರ ನಡುವೆ ಖಡ್ಗ-ಗುರಾಣಿಗಳ ಸಂಪಾತ-ಅಭಿಪಾತ-ನಿಪಾತಗಳಲ್ಲಿ ಯಾವ ಅಂತರವೂ ಕಾಣಲಿಲ್ಲ.

ಖಡ್ಗಪ್ರಹಾರ, ಖಡ್ಗಸಂಚಾಲನದ ಶಬ್ಧ, ಅನೇಕ ವಿಧವಾದ ವರಸೆಗಳ ಪ್ರದರ್ಶನ, ಶರೀರದ ಮುಂಬಾಗ-ಹಿಂಬಾಗಗಳಲ್ಲಿ ಸಮಯವರಿತು ಪ್ರಹರಿಸುವಿಕೆ ಇವುಗಳಲ್ಲಿ ಅವರಿಬ್ಬರ ನಡುವೆ ಅಂತರವೇ ಕಾಣಲಿಲ್ಲ. ಶರೀರದ ಮುಂದೆ ಮತ್ತು ಹಿಂದೆ ತಿರುಗಿಸುತ್ತಾ, ಉತ್ತಮ ಮಾರ್ಗದಲ್ಲಿ

ತಿರುಗುತ್ತಿರುವ ಆ ಇಬ್ಬರು ಮಹಾತ್ಮರು ರೆಕ್ಕೆಗಳಿರುವ ಪರ್ವತಗಳಂತೆ ಕಂಡರು. ಆಗ ಖಡ್ಗವನ್ನು ತಿರುಗಿಸುತ್ತಿದ್ದ ಸೌಭದ್ರನ ಗುರಾಣಿಯ ಒಂದು ಭಾಗವನ್ನು ಯಶಸ್ವಿ ಜಯದ್ರಥನು ಹೊಡೆದನು. ಬಂಗಾರದ ತಗುಡಿನಿಂದ ಮಾಡಿದ್ದ ಗುರಾಣಿಯಲ್ಲಿ ಚುಚ್ಚಿಕೊಂಡಿದ್ದ ತನ್ನ ಮಹಾ ಖಡ್ಗವನ್ನು ಸಿಂಧುರಾಜನು ಬಲವನ್ನುಪಯೋಗಿಸಿ ಅಲ್ಲಾಡಿಸಿ ಕೀಳಲು ಹೋದಾಗ ಅದು ಅಲ್ಲಿಯೇ ತುಂಡಾಯಿತು. ತನ್ನ ಖಡ್ಗವು ತುಂಡಾದುದನ್ನು ಗಮನಿಸಿದ ಜಯದ್ರಥನು ಒಡನೆಯೇ ಆರು ಅಡಿಗಳಷ್ಟು ಹಾರಿ ನಿಮಿಷದಲ್ಲಿ ತನ್ನ ರಥದಲ್ಲಿ ಕುಳಿತಿದ್ದುದು ಪ್ರೇಕ್ಷಣೀಯವಾಗಿತ್ತು. ಕಾರ್ಷ್ಣಿ ಅಭಿಮನ್ಯುವೂ ಕೂಡ ಯುದ್ಧವನ್ನು ನಿಲ್ಲಿಸಿ ತನ್ನ ಉತ್ತಮ ರಥದಲ್ಲಿ ಕುಳಿತುಕೊಂಡನು. ಆಗ ಸರ್ವ ರಾಜರೂ ಒಟ್ಟಿಗೇ ಎಲ್ಲ ಕಡೆಗಳಿಂದ ಅವನನ್ನು ಸುತ್ತುವರೆದರು. ಆಗ ಖಡ್ಗವನ್ನೂ ಗುರಾಣಿಯನ್ನೂ ಮೇಲೆತ್ತಿ ಮಹಾಬಲ ಅರ್ಜುನನ ಮಗನು ಜಯದ್ರಥನನ್ನು ನೋಡುತ್ತಾ ಗರ್ಜಿಸಿದನು. ಸಿಂಧುರಾಜನನ್ನು ಬಿಟ್ಟು ಪರವೀರಹ ಸೌಭದ್ರನು ಆ ಸೈನ್ಯವನ್ನು ಭುವನವನ್ನು ಭಾಸ್ಕರನು ಹೇಗೋ ಹಾಗೆ ಸುಡತೊಡಗಿದನು.

ಆಗ ಶಲ್ಯನು ಅಗ್ನಿಯ ಜ್ವಾಲೆಯಂತೆ ಪ್ರದೀಪ್ತವಾಗಿದ್ದ ಕನಭೂಷಣದ ಲೋಹಮಯವಾಗಿದ್ದ ಘೋರವಾದ ಶಕ್ತಿಯನ್ನು ಅವನ ಮೇಲೆ

ಎಸೆದನು. ಬೀಳುತ್ತಿರುವ ಉತ್ತಮ ನಾಗವನ್ನು ವೈನತೇಯನು ಹೇಗೋ ಹಾಗೆ ಕಾರ್ಷ್ಣಿಯು ಅದನ್ನು ಹಾರಿ ಹಿಡಿದು, ತನ್ನ ಒರಸೆಯಿಂದ ಖಡ್ಗವನ್ನು ಎಳೆದು ತೆಗೆದನು. ಆ ಅಮಿತತೇಜಸ್ವಿಯ ಸತ್ತ್ವವನ್ನೂ ಹಸ್ತಲಾಘವವನ್ನೂ ತಿಳಿದ ಸರ್ವ ರಾಜರೂ ಒಟ್ಟಿಗೇ ಸಿಂಹನಾದಗೈದರು. ಆಗ ಶಲ್ಯನ ಅದೇ ವೈಡೂರ್ಯದಿಂದ ಸಮಲಂಕೃತವಾಗಿದ್ದ ಶಕ್ತಿಯನ್ನು ಪರವೀರಹ ಸೌಭದ್ರನು ತನ್ನ ಭುಜವೀರ್ಯದಿಂದ ಎಸೆದನು. ಪೊರೆಯನ್ನು ಬಿಟ್ಟ ಸರ್ಪದಂತಿದ್ದ ಅದು ಅವನ ರಥವನ್ನು ತಲುಪಿ ಶಲ್ಯನ ಸೂತನನ್ನು ಕೊಂದು ಅವನನ್ನು ರಥದಿಂದ ಕೆಳಗೆ ಉರುಳಿಸಿತು. ಆಗ ವಿರಾಟ-ದ್ರುಪದರು, ಧೃಷ್ಟಕೇತು-ಯುಧಿಷ್ಠಿರರು, ಸಾತ್ಯಕಿ, ಕೇಕಯರು, ಭೀಮ, ಧೃಷ್ಟದ್ಯುಮ್ನ-ಶಿಖಂಡಿಯರು, ಯಮಳರು ಮತ್ತು ದ್ರೌಪದೇಯರು "ಸಾಧು! ಸಾಧು!" ಎಂದು ಕೂಗಿದರು. ಯುದ್ಧದಲ್ಲಿ ಪಲಾಯನವನ್ನರಿಯದ ಸೌಭದ್ರನನ್ನು ಹರ್ಷಗೊಳಿಸುತ್ತಾ ವಿವಿಧ ಬಾಣ ಪ್ರಹಾರದ ಶಬ್ಧಗಳೂ ಪುಷ್ಕಲ ಸಿಂಹನಾದಗಳೂ ಕೇಳಿ ಬಂದವು.

ಶತ್ರುಗಳ ವಿಜಯಸೂಚಕವಾದ ಅದನ್ನು ಕೌರವರು ಸಹಿಸಿಕೊಳ್ಳಲಿಲ್ಲ. ಆಗ ಅವರೆಲ್ಲರೂ ಅವನನ್ನು ನಿಶಿತ ಶರಗಳಿಂದ ಎಲ್ಲಕಡೆಗಳಿಂದ

ಪರ್ವತವನ್ನು ಮೋಡಗಳು ಹೇಗೋ ಹಾಗೆ ಮುಸುಕಿದರು. ತನ್ನ ಸೂತನ ಪರಾಭವದಿಂದ ಮತ್ತು ಕೌರವರಿಗೆ ಪ್ರಿಯವಾದುದನ್ನು ಮಾಡಲು ಅಮಿತ್ರಘ್ನ ಶಲ್ಯನು ಕ್ರುದ್ಧನಾಗಿ ಸೌಭದ್ರನನ್ನು ಪುನಃ ಆಕ್ರಮಣಿಸಿದನು.

## ಭೀಮ-ಶಲ್ಯರ ಯುದ್ಧ

ತನ್ನ ಸೂತನು ಹತನಾದುದನ್ನು ನೋಡಿ ಶಲ್ಯನು ಕ್ರುದ್ಧನಾಗಿ ಉಕ್ಕಿನಮಯವಾಗಿದ್ದ ಗದೆಯನ್ನು ಮೇಲೆ ಎತ್ತಿ ಹಿಡಿದು ಗರ್ಜಿಸುತ್ತಾ ಉತ್ತಮ ರಥದಿಂದ ಧುಮುಕಿದನು. ಕಾಲಾಗ್ನಿಯಂತೆ ಉರಿಯುತ್ತಿದ್ದ, ದಂಡವನ್ನು ಹಿಡಿದ ಅಂತಕನಂತಿದ್ದ ಅವನನ್ನು ನೋಡಿ ಭೀಮನು ಮಹಾ ಗದೆಯನ್ನು ಹಿಡಿದು ವೇಗದಿಂದ ಎದುರಿಸಿದನು. ಸೌಭದ್ರನೂ ಕೂಡ ವಜ್ರಾಯುಧದಂತಿದ್ದ ಮಹಾ ಗದೆಯನ್ನು ಹಿಡಿತು “ಬಾ ! ಬಾ !” ಎಂದು ಶಲ್ಯನನ್ನು ಕರೆಯುತ್ತಿರಲು ಭೀಮನು ಅವನನ್ನು ಪ್ರಯತ್ನಪಟ್ಟು ತಡೆದನು. ಸೌಭದ್ರನನ್ನು ತಡೆದು ಪ್ರತಾಪವಾನ್ ಭೀಮಸೇನನು ಶಲ್ಯನನ್ನು ಎದುರಿಸಿ ಸಮರದಲ್ಲಿ ಗಿರಿಯಂತೆ ಅಚಲವಾಗಿ ನಿಂತನು. ಆಗ ಮದ್ರರಾಜನೂ ಕೂಡ ಮಹಾಬಲ ಭೀಮನನ್ನು ನೋಡಿ ಹುಲಿಯು ಆನೆಯನ್ನು ಆಕ್ರಮಣಿಸುವಂತೆ ಅವನಿಗೆ ಎದುರಾಗಿ ಹೋಗಿ ಆಕ್ರಮಣಿಸಿದನು. ಆಗ ಕೂಡಲೇ ಸಹಸ್ರಾರು ಶಂಖಗಳ ನಿನಾದಗಳು,

ಸಿಂಹನಾದಗಳು ಮತ್ತು ಭೇರಿಗಳ ಮಹಾಶಬ್ಧವು ಉಂಟಾಯಿತು. ನೋಡುತ್ತಿರುವ ನೂರಾರು ಪಾಂಡವ-ಕೌರವರ ಕಡೆಯವರು ಸಮಚೇತಸರಾದ ಅನ್ಯೋನ್ಯರನ್ನು “ಸಾಧು! ಸಾಧು!” ಎಂದು ಹುರಿದುಂಬಿಸುತ್ತಿದ್ದರು. ಸಂಯುಗದಲ್ಲಿ ಭೀಮಸೇನನ ವೇಗವನ್ನು ಸಹಿಸಿಕೊಳ್ಳುವವರು ಸರ್ವರಾಜರಲ್ಲಿ ಮದ್ರಾಧಿಪನನ್ನು ಬಿಟ್ಟು ಬೇರೆ ಯಾರೂ ಇರಲಿಲ್ಲ. ಹಾಗೆಯೇ ಮಹಾತ್ಮ ಮದ್ರಾಧಿಪನ ಗದಾವೇಗವನ್ನು ಯುದ್ಧದಲ್ಲಿ ವೃಕೋದರನನ್ನು ಬಿಟ್ಟು ಬೇರೆ ಯಾರೂ ಸಹಿಸಿಕೊಳ್ಳಲು ಉತ್ಸುಕರಿರಲಿಲ್ಲ.

ಬಂಗಾರದ ಪಟ್ಟಿಯಿಂದ ಕಟ್ಟಲ್ಪಟ್ಟಿದ್ದ ಭೀಮನು ಹಿಡಿದಿದ್ದ ಜನಹರ್ಷಿಣೀ ಮಹಾಗದೆಯು ಉರಿಯುವ ಬೆಂಕಿಯಂತೆ ಹೊಳೆಯುತ್ತಿತ್ತು. ಹಾಗೆಯೇ ಮಂಡಲಾಕಾರ ಮಾರ್ಗದಲ್ಲಿ ಚಲಿಸುತ್ತಿದ ಶಲ್ಯನ ಗದೆಯೂ ಕೂಡ ಭಾಗಶಃ ಆಕಾಶದಲ್ಲಿರುವ ಮಹಾಮಿಂಚಿನಂತೆ ಹೊಳೆಯತ್ತಿತ್ತು. ಗೂಳಿಗಳಂತೆ ಕೂಗುತ್ತಾ, ಮಂಡಲಾಕಾರಗಳಲ್ಲಿ ಚಲಿಸುತ್ತಾ ಆ ಶಲ್ಯ-ವೃಕೋದರರಿಬ್ಬರು ಶೃಂಗಗಳಂತಿರುವ ಗದೆಗಳಿಂದ ಹೊಡೆದಾಡಿದರು. ಮಂಡಲಾಕಾರವಾಗಿ ತಿರುಗುವುದರಲ್ಲಿ, ಗಡೆಯನ್ನು ತಿರುಗಿಸುವುದರಲ್ಲಿ ಆ ಪುರುಷಸಿಂಹರ ಯುದ್ಧದಲ್ಲಿ ವ್ಯತ್ಯಾಸವೇ ಇರಲಿಲ್ಲ. ಭೀಮಸೇನನಿಂದ ಹೊಡೆಯಲ್ಪಟ್ಟ

ಶಲ್ಯನ ಮಹಾಗದೆಯು ಅಗ್ನಿಜ್ವಾಲೆಯೊಂದಿಗೆ ಮಹಾರೌದ್ರವಾಗಿ ಚೂರು ಚೂರಾಯಿತು. ಹಾಗೆಯೇ ಭೀಮಸೇನನ ದ್ವೇಷಿಯಿಂದ ಹೊಡೆಯಲ್ಪಟ್ಟ ಗದೆಯು ಮಳೆಗಾಲದ ಪ್ರದೋಷಕಾಲದಲ್ಲಿ ಮಿಂಚಿನ ಹುಳುಗಳು ಮುತ್ತಿರುವ ವೃಕ್ಷದಂತೆ ತೋರಿತು. ಮದ್ರರಾಜನು ಸಮರದಲ್ಲಿ ಎಸೆದ ಗದೆಯು ಆಕಾಶವನ್ನೇ ಬೆಳಗಿಸುತ್ತಾ ಅನೇಕ ಬೆಂಕಿಯ ಕಿಡಿಗಳನ್ನುಂಟುಮಾಡಿತು. ಹಾಗೆಯೇ ಭೀಮಸೇನನು ಕೋಪದಿಂದ ಎಸೆದ ಗದೆಯು ಬೀಳುತ್ತಿರುವ ಮಹಾ ಉಲ್ಕೆಯಂತೆ ಆ ಸೈನ್ಯವನ್ನು ಸುಟ್ಟಿತು. ಗದೆಯಲ್ಲಿ ಶ್ರೇಷ್ಠರಾದ ಅವರಿಬ್ಬರೂ ಪರಸ್ಪರರನ್ನು ಎದುರಿಸಿ ನಾಗಕನ್ಯೆಯರಂತೆ ಭುಸುಗುಟ್ಟುತ್ತಾ ಬೆಂಕಿಯ ಕಿಡಿಗಳನ್ನು ಹೊರಹೊಮ್ಮಿದರು. ಮಹಾವ್ಯಾಘ್ರಗಳು ಉಗುರುಗಳಿಂದ ಹೇಗೋ ಹಾಗೆ ಮತ್ತು ಮಹಾಗಜಗಳೆರಡು ದಂತಗಳಿಂದ ಹೇಗೋ ಹಾಗೆ ಅವರಿಬ್ಬರೂ ಗದೆಗಳಿಂದ ಪರಸ್ಪರರನ್ನು ತಾಗಿಸಿ ಹೊಡೆದರು. ಆಗ ಕ್ಷಣದಲ್ಲಿಯೇ ಗದೆಯಿಂದ ಪೆಟ್ಟುತಿಂದು ರಕ್ತದಿಂದ ತೋಯ್ದುಹೋಗಿದ್ದ ಆ ಇಬ್ಬರು ಮಹಾತ್ಮರು ಹೂಬಿಟ್ಟ ಕಿಂಶುಕ ವೃಕ್ಷಗಳಂತೆ ಕಂಡರು. ಆ ಪುರುಷಸಿಂಹರ ಗದಾಪ್ರಹಾರದ ಶಬ್ಧವು ಸಿಡುಲಿನ ಗರ್ಜನೆಯಂತೆ ಎಲ್ಲ ದಿಕ್ಕುಗಳಲ್ಲಿ ಕೇಳಿಬರುತ್ತಿತ್ತು. ಮದ್ರರಾಜನು ಗದೆಯಿಂದ ಎಡ ಮತ್ತು ಬಲಭಾಗಗಳೆರಡಕ್ಕೆ ಹೊಡೆದರೂ ಭೀಮನು ಪರ್ವತದಂತೆ ಅಲುಗಾಡಲಿಲ್ಲ. ಹಾಗೆಯೇ

ಭೀಮನ ಗದಾವೇಗದಿಂದ ಹೊಡೆಯಲ್ಪಟ್ಟ ಮಹಾಬಲ ಮದ್ರಾಧಿಪನು ಧೈರ್ಯದಿಂದ ವರ್ಜದಿಂದ ಹೊಡೆಯಲಟ್ಟ ಪರ್ವತದಂತೆ ನಿಂತಿದ್ದನು. ಪುನಃ ಮಹಾವೇಗಯುಕ್ತರಾಗಿದ್ದ ಅವರು ಮಹಾಗದೆಗಳನ್ನು ಎತ್ತಿಕೊಂಡು ಅಂತರ ಮಾರ್ಗಸ್ಥರಾಗಿ ಮಂಡಲಾಕರದ ಗತಿಯಿಂದ ಚಲಿಸತೊಡಗಿದರು. ಎಂಟು ಹೆಜ್ಜೆಗಳಷ್ಟು ದೂರ ಕುಪ್ಪಳಿಸಿ ಎರಡು ಆನೆಗಳೋಪಾದಿಯಲ್ಲಿ ಹೋರಾಡುತ್ತಾ ಒಡನೆಯೇ ಆ ಲೋಹದಂಡಗಳಿಂದ ಪರಸ್ಪರರನ್ನು ಹೊಡೆದರು. ಪರಸ್ಪರರ ವೇಗವಾದ ಗದೆಗಳ ಪ್ರಹಾರಗಳಿಂದ ತುಂಬಾ ಗಾಯಗೊಂಡ ಆ ಇಬ್ಬರೂ ವೀರರೂ ಒಟ್ಟಿಗೇ ಇಂದ್ರಧ್ವಜಗಳಂತೆ ಭೂಮಿಯ ಮೇಲೆ ಬಿದ್ದರು. ಆಗ ಶಲ್ಯನು ವಿಹ್ವಲಮಾನನಾಗಿ ಪುನಃ ಪುನಃ ಭುಸುಗುಟ್ಟುತ್ತಾ ಬಿದ್ದಿರಲು ಒಡನೆಯೇ ಅಲ್ಲಿಗೆ ಮಹಾರಥ ಕೃತವರ್ಮನು ಆಗಮಿಸಿದನು. ಗದೆಯಿಂದ ಪೀಡಿತನಾಗಿ ಸರ್ಪದಂತೆ ಮೂರ್ಛೆತಪ್ಪಿ ಹೊರಳಾಡುತ್ತಿದ್ದ ಅವನನ್ನು ನೋಡಿದನು.

ಆಗ ಗದೆಯೊಂದಿಗೆ ಮದ್ರಾಧಿಪನನ್ನು ರಥದಲ್ಲಿ ಏರಿಸಿಕೊಂಡು ಮಹಾರಥ ಕೃತವರ್ಮನು ರಣದಿಂದ ವೇಗವಾಗಿ ಹೊರಟುಹೋದನು. ವಿಹ್ವಲನಾಗಿದ್ದ ಆಯಾಸಗೊಂಡಿದ್ದ ಸುಮಹಾಬಾಹು ವೀರ ಭೀಮನಾದರೋ ನಿಮಿಷದಲ್ಲಿಯೇ ಗದೆಯನ್ನು

ಹಿಡಿದು ನಿಂತನು. ಆಗ ಮದ್ರಾಧಿಪನು ಪರಾಙ್ಮುಖನಾದುದನ್ನು ನೋಡಿ ಕೌರವರು ಗಜ-ರಥ-ಅಶ್ವ-ಪದಾತಿಗಳೊಂದಿಗೆ ನಡುಗಿದರು. ಗೆಲುವಿನಿಂದ ಸೊಕ್ಕಿದ್ದ ಪಾಂಡವರಿಂದ ಮರ್ದಿಸಲ್ಪಡುತ್ತಿದ್ದ ಅವರು ಭಿರುಗಾಳಿಗೆ ಸಿಲುಕಿದ ಮೋಡಗಳಂತೆ ಭೀತರಾಗಿ ದಿಕ್ಕಾಪಾಲಾಗಿ ಓಡಿದರು. ಧಾರ್ತರಾಷ್ಟ್ರರನ್ನು ಸೋಲಿಸಿ ಮಹಾರಥ ಯಶಸ್ವಿ ಪಾಂಡವರು ರಣದಲ್ಲಿ ಬೆಳಗುತ್ತಾ ರಾರಾಜಿಸಿದರು. ಗಟ್ಟಿಯಾಗಿ ಸಿಂಹನಾದಗೈದರು. ಹರ್ಷಿತರಾಗಿ ಶಂಖಗಳನ್ನು ಊದಿದರು. ಅನಕಗಳೊಂದಿಗೆ ಭೇರಿಗಳನ್ನೂ ಮೃದಂಗಗಳನ್ನೂ ಬಾರಿಸತೊಡಗಿದರು.

## ಹನ್ನೊಂದನೇ ದಿನದ ಯುದ್ಧ ಸಮಾಪ್ತಿ

ಕೌರವರ ಆ ಮಹಾ ಸೇನೆಯು ಚೆಲ್ಲಪಿಲ್ಲಿಯಾಗಿ ರಣದಿಂದ ಪಾಂಡವರಿಂದ ಓಡಿಹೋಗುತ್ತಿದ್ದುದನ್ನು ನೋಡಿ ವೀರ್ಯವಾನ್ ವೃಷಸೇನನೊಬ್ಬನೇ ತನ್ನ ಅಸ್ತ್ರಮಾಯೆಯಿಂದ ಅವರನ್ನು ತಡೆದನು. ವೃಷಸೇನನು ಬಿಟ್ಟ ಬಾಣಗಳು ಮನುಷ್ಯರು-ಕುದುರೆಗಳು-ರಥಗಳು ಮತ್ತು ಆನೆಗಳನ್ನು ಭೇದಿಸಿ ಹತ್ತು ದಿಕ್ಕುಗಳಲ್ಲಿಯೂ ಸಂಚರಿಸಿದವು. ಅವನ ಉರಿಯುತ್ತಿರುವ ಸಹಸ್ರಾರು ಮಹಾಬಾಣಗಳು ಗ್ರೀಷ್ಮಕಾಲದ ಆಕಾಶದಲ್ಲಿ ನಕ್ಷತ್ರಗಳು ಮಿಂಚುವಂತೆ ಮಿನುಗಿದವು. ಅವನಿಂದ

ಆರ್ದ್ರತರಾದ ರಥಿಗಳು ಮತ್ತು ಅಶ್ವಾರೋಹಿಗಳು ಭಿರುಗಾಳಿಗೆ ಸಿಲುಕಿದ ಮರಗಳಂತೆ ತಕ್ಷಣವೇ ಭೂಮಿಯ ಮೇಲೆ ಬಿದ್ದರು. ಕುದುರೆಗಳ ಗುಂಪುಗಳು, ರಥಗಳ ಗುಂಪುಗಳು ಮತ್ತು ಆನೆಗಳ ಸಮೂಹಗಳು ಎಲ್ಲಕಡೆ ನೂರಾರು ಸಹಸ್ರಾರು ಸಂಖ್ಯೆಗಳಲ್ಲಿ ಉರುಳಿದವು. ಈ ರೀತಿ ಭಯವಿಲ್ಲದೇ ಸಮರದಲ್ಲಿ ಸಂಚರಿಸುತ್ತಿರುವ ಅವನನ್ನು ನೋಡಿ ಎಲ್ಲರಾಜರೂ ಒಟ್ಟಿಗೇ ಎಲ್ಲ ಕಡೆಗಳಿಂದ ಅವನನ್ನು ಸುತ್ತುವರೆದರು. ನಕುಲನ ಮಗ ಶತಾನೀಕನಾದರೋ ವೃಷಸೇನನನ್ನು ಎದುರಿಸಿ ಅವನನ್ನು ಮರ್ಮಭೇದಿಗಳಾದ ಹತ್ತು ನಾರಾಚಗಳಿಂದ ಹೊಡೆದನು. ಕರ್ಣಾತ್ಮಜನು ಅವನ ಧನ್ನುಸ್ಸನ್ನು ಕತ್ತರಿಸಿ ಧ್ವಜವನ್ನು ಕೆಡವಿದನು. ಆ ಸಹೋದರರನನ್ನು ರಕ್ಷಿಸಲು ಇತರ ದ್ರೌಪದೇಯರು ಧಾವಿಸಿದರು. ಅವರು ಶರಗಳ ಮಳೆಯನ್ನು ಸುರಿಸಿ ಕರ್ಣಾತ್ಮಜನನ್ನು ಕಾಣದಂತೆ ಮಾಡಿದರು. ಆಗ ದ್ರೋಣಪುತ್ರನ ನಾಯಕತ್ವದಲ್ಲಿ ರಥರು ಗರ್ಜಿಸುತ್ತಾ ಅವರಿದ್ದಲ್ಲಿಗೆ ಧಾಮಿಸಿ ಬಂದರು. ಅವರು ತಕ್ಷಣವೇ ನಾನಾ ವಿಧದ ಶರಗಳಿಂದ ಮೋಡಗಳು ಪರ್ವತವನ್ನು ಹೇಗೋ ಹಾಗೆ ಮಹಾರಥ ದ್ರೌಪದೇಯರನ್ನು ಮುಚ್ಚಿದರು. ಆಗ ಪುತ್ರರ ಮೇಲಿನ ಪ್ರೀತಿಯಿಂದ ಪಾಂಡವರು, ಪಾಂಚಾಲರು, ಕೇಕಯರು, ಮತ್ಸ್ಯರು ಮತ್ತು ಸೃಂಜಯರೊಂದಿಗೆ ಆಯುಧಗಳನ್ನು ಎತ್ತಿ ಹಿಡಿದು ಧಾವಿಸಿದರು. ಆಗ ದಾನವರೊಂದಿಗೆ ದೇವತೆಗಳಂತೆ ಕೌರವರೊಡನೆ

ಪಾಂಡುಪುತ್ರರ ರೋಮಾಂಚಕಾರೀ ಘೋರವಾದ ತುಮುಲ ಯುದ್ಧವು ನಡೆಯಿತು.

ಹೀಗೆ ಕುರುಪಾಂಡವರು ಪರಸ್ಪರರ ತಪ್ಪುಗಳಿಗೆ ಪರಸ್ಪರರನ್ನು ದಿಟ್ಟಾಗಿ ನೋಡುತ್ತಾ ಕ್ರೋಧದಿಂದ ಉತ್ತಮವಾಗಿ ಯುದ್ಧಮಾಡಿದರು. ಕೋಪದಿಂದ ಆ ಅಮಿತತೇಜಸ್ವಿಯರ ಶರೀರಗಳು ಆಕಾಶದಲ್ಲಿ ಗರುಡ ಮತ್ತು ಸರ್ಪಗಳು ಹೊಡೆದಾಡುತ್ತಿರುವಂತೆ ಕಾಣುತ್ತಿದ್ದವು. ಭೀಮ, ಕರ್ಣ, ಕೃಪ, ದ್ರೋಣ, ದ್ರೌಣಿ, ಪಾರ್ಷತ ಮತ್ತು ಸಾತ್ಯಕಿಯರಿಂದ ರಣಾಂಗಣವು ಉದಯಕಾಲದ ಸೂರ್ಯನಂತೆ ಹೊಳೆಯುತ್ತಿತ್ತು. ಆಗ ಸುರರಿಂದ ದಾನವರು ಹೇಗೋ ಹಾಗೆ ಒಬ್ಬರು ಇನ್ನೊಬ್ಬರನ್ನು ಸಂಹರಿಸುವ ಆ ಮಹಾಬಲರ ಬಲಶಾಲೀ ತುಮುಲ ಯುದ್ಧವು ನಡೆಯಿತು. ಯುಧಿಷ್ಠಿರನ ಸೇನೆಯು ಉಕ್ಕಿಬರುವ ಸಮುದ್ರದಂತೆ ಜೋರಾಗಿ ಗರ್ಜಿಸುತ್ತಾ ನಿನ್ನ ಸೇನೆಯ ಮೇಲೆ ಎರಗಿತು. ಮಹಾರಥರು ಪಲಾಯನಗೈದರು. ಶತ್ರುಗಳಿಂದ ಬಹಳವಾಗಿ ಮರ್ದಿಸಲ್ಪಟ್ಟು ಭಗ್ನವಾದ ಆ ಸೇನೆಯನ್ನು ನೋಡಿ ದ್ರೋಣನು “ಶೂರರೇ! ನಿಲ್ಲಿ! ಓಡಬೇಡಿ!” ಎಂದು ಕೂಗಿ ಹೇಳಿದನು. ಆಗ ದ್ರೋಣನು ನಾಲ್ಕುದಂತಗಳ ಆನೆಯಂತೆ ಕೂಗುತ್ತಾ ಪಾಂಡವರ ಸೇನೆಯನ್ನು ಪ್ರವೇಶಿಸಿ ಯುಧಿಷ್ಠಿರನನ್ನು ಆಕ್ರಮಣಿಸಿದನು. ಯುಧಿಷ್ಠಿರನು ಅವನನ್ನು

ನಿಶಿತ ಕಂಕಪತ್ರ ಬಾಣಗಳಿಂದ ಹೊಡೆಯಲು ದ್ರೋಣನು ಅವನ ಧನುಸ್ಸನ್ನು ಕತ್ತರಿಸಿ ಅವನ ಮೇಲೆ ವೇಗದಿಂದ ಎರಗಿದನು. ಆಗ ಪಂಚಾಲರ ಯಶಸ್ಕರ ಯುಧಿಷ್ಠಿರನ ಚಕ್ರರಕ್ಷಕ ಕುಮಾರನು ಆಕ್ರಮಣಿಸುತ್ತಿದ್ದ ದ್ರೋಣನನ್ನು ಉಕ್ಕಿ ಬರುವ ಅಲೆಗಳನ್ನು ದಡವು ತಡೆಯುವಂತೆ ತಡೆದನು. ಕುಮಾರನು ದ್ರೋಣನನ್ನು ತಡೆದುದನ್ನು ನೋಡಿ "ಸಾಧು ! ಸಾಧು !" ಎಂಬ ಸಿಂಹನಾದವು ಕೇಳಿಬಂದಿತು. ಕುಮಾರನಾದರೋ ಮಹಾಹವದಲ್ಲಿ ಸಂಕ್ರುದ್ಧನಾಗಿ ದ್ರೋಣನನ್ನು ಸಾಯಕದಿಂದ ಎದೆಗೆ ಹೊಡೆದು ಪುನಃ ಪುನಃ ಸಿಂಹನಾದಗೈದನು. ಮಹಾಬಲ ದ್ರೋಣನು ಅನೇಕ ಸಹಸ್ರ ಬಾಣಗಳಿಂದ ಕುಮಾರನನ್ನು ರಣದಲ್ಲಿ ತಡೆದನು. ದ್ವಿಜಸತ್ತಮನು ಆ ಶೂರ, ಆರ್ಯವ್ರತಿ, ಅಸ್ತ್ರಾರ್ಥಕೃತನಿಶ್ರಮ ಚಕ್ರರಕ್ಷಕ ಕುಮಾರನನ್ನು ಸಂಹರಿಸಿದನು.

ಆ ಭಾರದ್ವಾಜ ರಥರ್ಷಭನು ಸೇನೆಗಳ ಮಧ್ಯೆ ಹೋಗಿ ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸುತ್ತಾ ಕೌರವ ಸೇನೆಯನ್ನು ರಕ್ಷಿಸಿದನು. ಶಿಖಂಡಿಯನ್ನು ಹನ್ನೆರಡರಿಂದ, ಉತ್ತಮೌಜಸನನ್ನು ಇಪ್ಪತ್ತರಿಂದ, ನಕುಲನನ್ನು ಐದರಿಂದ, ಸಹದೇವನನ್ನು ಏಳರಿಂದ, ಯುಧಿಷ್ಠಿರನನ್ನು ಹನ್ನೆರಡರಿಂದ, ದ್ರೌಪದೇಯರನ್ನು ಮೂರು ಮೂರರಿಂದ, ಸಾತ್ಯಕಿಯನ್ನು ಐದರಿಂದ, ಮತ್ಸ್ಯನನ್ನು ಹತ್ತು ಶರಗಳಿಂದ ಹೊಡೆದು

ರಣದಲ್ಲಿ ಅಲ್ಲೋಲಕಲ್ಲೋಲವನ್ನುಂಟುಮಾಡಿದನು. ಮುಖ್ಯಯೋಧರನ್ನು ಆಕ್ರಮಣಿಸಿ ಕುಂತೀಪುತ್ರ ಯುಧಿಷ್ಠಿರನನ್ನು ತಲುಪಲು ಧಾವಿಸಿದನು. ಆಗ ಸಂಕ್ರುದ್ಧನಾದ ಯುಗಂಧರನು ಭಿರುಗಾಳಿಯಿಂದ ಉಕ್ಕಿಬಂದ ಸಮುದ್ರದಂತೆ ಮಹಾರಥ ಭಾರದ್ವಾಜನನ್ನು ತಡೆದನು. ದ್ರೋಣನು ಯುಧಿಷ್ಠಿರನನ್ನು ಸನ್ನತಪರ್ವ ಶರದಿಂದ ಹೊಡೆದು ಯುಗಂಧರನನ್ನು ಭಲ್ಲದಿಂದ ಹೊಡೆದು ರಥದಿಂದ ಕೆಳಗೆ ಬೀಳಿಸಿದನು. ಆಗ ವಿರಾಟ-ದ್ರುಪದರು, ಕೇಕಯರು, ಸಾತ್ಯಕಿ, ಶಿಬಿ, ವ್ಯಾಘ್ರದತ್ತ ಮತ್ತು ಇನ್ನೂ ಇತರ ಅನೇಕರು ಯುಧಿಷ್ಠಿರನನ್ನು ರಕ್ಷಿಸಲು ಬಯಸಿ ಅವನ ದಾರಿಯಲ್ಲಿ ಬಹಳ ಸಾಯಕಗಳನ್ನು ಚೆಲ್ಲಿದರು. ಪಾಂಚಾಲ್ಯ ವ್ಯಾಘ್ರದತ್ತನು ದ್ರೋಣನನ್ನು ಐವತ್ತು ನಿಶಿತ ಮಾರ್ಗಣಗಳಿಂದ ಹೊಡೆದನು. ಆಗ ಸೈನಿಕರು ಜೋರಾಗಿ ಕೂಗಿದರು. ಸಿಂಹಸೇನನಾದರೋ ಬೇಗನೆ ಮಹಾರಥ ದ್ರೋಣನನ್ನು ಹೊಡೆದು ಪೀಡಿಸಿ ಹರ್ಷದಿಂದ ಜೋರಾಗಿ ನಕ್ಕನು. ಆಗ ಕಣ್ಣಿನವರೆಗೆ ಧನುಸ್ಸಿನ ಶಿಂಜನಿಯನ್ನು ಎಳೆದು ಜೋರಾಗಿ ಚಪ್ಪಾಳೆಯ ಶಬ್ಧವನ್ನುಂಟುಮಾಡುತ್ತಾ ದ್ರೋಣನು ಅವನ ಮೇಲೆ ಎರಗಿದನು. ಆಗ ಆ ಬಲಶಾಲಿಯು ಎರಡು ಭಲ್ಲಗಳಿಂದ ಕುಂಡಲಗಳೊಡನೆ ಸಿಂಹಸೇನನ ಶಿರವನ್ನು ದೇಹದಿಂದ ಬೇರ್ಪಡಿಸಿ ವ್ಯಾಘ್ರದತ್ತನನ್ನು ಸಂಹರಿಸಿದನು. ಪಾಂಡವರ ಆ ಮಹಾರಥರನ್ನು

ಶರವ್ರಾತದಿಂದ ಸಂಹರಿಸಿ ದ್ರೋಣನು ಯುಧಿಷ್ಠಿರನ ಮುಂದೆ ಅಂತಕ ಮೃತ್ಯುವಿನಂತೆ ಹೋಗಿ ನಿಂತನು.

ಆಗ ಯುಧಿಷ್ಠಿರನ ಸೇನೆಯಲ್ಲಿ ಆ ಯತವ್ರತನ ಸಮೀಪವಿದ್ದ ಯೋಧರು "ರಾಜನು ಕೊಲ್ಲಲ್ಪಟ್ಟನು!" ಎಂದು ಕೂಗಿ ಮಹಾಶಬ್ಧವುಂಟಾಯಿತು. ಅಲ್ಲಿ ದ್ರೋಣನ ವಿಕ್ರಮವನ್ನು ನೋಡಿ "ಇಂದು ರಾಜಾ ಧಾರ್ತರಾಷ್ಟ್ರನು ಕೃತಾರ್ಥನಾದಂತೆಯೇ! ಇಂದು ಇವನು ಧಾರ್ತರಾಷ್ಟ್ರನ ಎದುರಿಗೆ ಬರುವವನಿದ್ದಾನೆ" ಎಂದು ಹೇಳಿಕೊಂಡರು. ಹೀಗೆ ಕೌರವರು ಕೂಗಿಕೊಳ್ಳುವಾಗ ಮಹಾರಥ ಕೌಂತೇಯನು ರಥಘೋಷದಿಂದ ಪ್ರತಿಧ್ವನಿಸುತ್ತಾ ವೇಗದಿಂದ ಅಲ್ಲಿಗೆ ಬಂದನು. ರಕ್ತವೇ ನೀರಾಗಿ, ರಥಗಳೇ ಸುಳಿಗಳಾಗಿ, ಶೂರರ ಅಸ್ಥಿಗಳಿಂದ ತುಂಬಿಹೋಗಿದ್ದ, ಪ್ರೇತಗಳೆಂಬ ದಡವನ್ನು ಕೊಚ್ಚಿಕೊಂಡು ಹೋಗುತ್ತಿದ್ದ, ಶರೌಘಗಳೇ ನೊರೆಗಳಾಗಿದ್ದ, ಪ್ರಾಸಗಳೆಂಬ ಮೀನುಗಳಿಂದ ತುಂಬಿಹೋಗಿದ್ದ ಆ ವಿಶಸನ ನದಿಯನ್ನು ವೇಗದಿಂದ ದಾಟಿ ಪಾಂಡವನು ಶೀಘ್ರವಾಗಿ ಅಲ್ಲಿಗೆ ಬಂದನು. ಆಗ ತಕ್ಷಣವೇ ಕಿರೀಟಿಯು ದ್ರೋಣನ ಸೇನೆಯನ್ನು ಆಕ್ರಮಣಿಸಿ ಮಹಾ ಶರಜಾಲದಿಂದ ಮೋಹಿಸಿ ಮುಚ್ಚಿದನು. ಯಶಸ್ವಿ ಕೌಂತೇಯನು ಎಷ್ಟೊಂದು ಶೀಘ್ರವಾಗಿದ್ದನೆಂದರೆ ಅವನು ಬಾಣವನ್ನು

ತೆಗೆದುಕೊಳ್ಳುವುದರ ಮತ್ತು ಹೂಡುವುದರ ಮಧ್ಯ ಅಂತರವೇ ಕಾಣುತ್ತಿರಲಿಲ್ಲ. ದಿಕ್ಕುಗಳಾಗಲೀ, ಅಂತರಿಕ್ಷವಾಗಲೀ, ಆಕಾಶವಾಗಲೀ, ಭೂಮಿಯಾಗಲೀ ಕಾಣದೇ ಹೋಯಿತು. ಎಲ್ಲವೂ ಬಾಣಮಯವಾಯಿತು. ಗಂಡೀವಧನ್ವಿಯು ರಚಿಸಿದ ಆ ಮಹಾ ಬಾಣಾಂಧಕಾರದಿಂದಾಗಿ ರಣದಲ್ಲಿ ಏನೊಂದೂ ಕಾಣದಂತಾಯಿತು. ಸೂರ್ಯನೂ ಅಸ್ತವಾಗುತ್ತಿರಲು ಮತ್ತು ಧೂಳಿನಿಂದ ತುಂಬಿಹೋಗಿರಲು ಅಲ್ಲಿ ಶತ್ರುಗಳಾರು ಮಿತ್ರರಾರು ಎಂದು ಏನೂ ತಿಳಿಯದೇ ಹೋಯಿತು.

ಆಗ ದ್ರೋಣ-ದುರ್ಯೋಧನಾದಿಗಳು ಯುದ್ಧದಿಂದ ಹಿಮ್ಮೆಟ್ಟಿದರು. ಶತ್ರುಗಳು ಭಯಪಟ್ಟಿದುದನ್ನೂ ಯುದ್ಧದಲ್ಲಿ ನಿರಾಸಕ್ತರಾದುದನ್ನೂ ತಿಳಿದುಕೊಂಡ ಬೀಭತ್ಸುವೂ ಕೂಡ ತನ್ನ ಸೇನೆಗಳನ್ನು ನಿಧಾನವಾಗಿ ಹಿಂದೆ ತೆಗೆದುಕೊಂಡನು. ಪ್ರಹೃಷ್ಟರಾದ ಪಾಂಡವ-ಸೃಂಜಯ-ಪಾಂಚಾಲರು ಪಾರ್ಥನನ್ನು ಋಷಿಗಳು ಸೂರ್ಯನನ್ನು ಸ್ತುತಿಸುವಂತೆ ಮನೋಜ್ಞ ಮಾತುಗಳಿಂದ ಸಂತೋಷಪಡಿಸಿದರು. ಹೀಗೆ ಶತ್ರುಗಳನ್ನು ಗೆದ್ದು ಸಂತೋಷಭರಿತನಾಗಿ ಧನಂಜಯನು ಕೇಶವನೊಂದಿಗೆ ಸರ್ವಸೇನೆಗಳ ಹಿಂಬಾಗದಲ್ಲಿ ತನ್ನ ಶಿಬಿರದ ಕಡೆ ಪ್ರಯಾಣಿಸಿದನು. ನಕ್ಷತ್ರಗಳಿಂದ ಚಿತ್ರಿತವಾಗಿರುವ ಆಕಾಶದಲ್ಲಿ ಚಂದ್ರನು

ಪ್ರಕಾಶಿಸುವಂತೆ ಪಾಂಡುಸುತನು ಮಣಿಗಳಿಂದಲೂ, ಪದ್ಮರಾಗಗಳಿಂದಲೂ, ಸುವರ್ಣದಿಂದಲೂ, ವಜ್ರಮಣಿಗಳಿಂದಲೂ, ಹವಳಗಳಿಂದಲೂ, ಸ್ಪಟಿಕ ಮೊದಲಾದವುಗಳಿಂದ ವಿಭೂಷಿತವಾಗಿದ್ದ ಚಿತ್ರರಥದಲ್ಲಿ ಪ್ರಕಾಶಿಸಿದನು.

# ಹನ್ನೆರಡನೆಯ ದಿನದ ಯುದ್ಧ: ಸಂಶಪ್ತಕವಧೆ

## ಸಂಶಪ್ತಕರ ಶಪಥ; ಯುದ್ಧಾರಂಭ

ಕೌರವ-ಪಾಂಡವ ಸೇನೆಗಳು ಶಿಬಿರಕ್ಕೆ ಹೋಗಿ ಎಲ್ಲಾ ಕಡೆ ಯಥಾಭಾಗವಾಗಿ, ಯಥಾನ್ಯಾಯವಾಗಿ ಮತ್ತು ಯಥಾಗುಲ್ಮವಾಗಿ ವಿಶ್ರಾಂತಿಪಡೆದರು. ಸೇನೆಗಳನ್ನು ಹಿಂದೆ ತೆಗೆದುಕೊಂಡ ದ್ರೋಣನು ಪರಮ ದುಃಖಿತನಾಗಿ ನಾಚಿಕೆಗೊಂಡು ದುರ್ಯೋಧನನನ್ನು ನೋಡಿ ಹೇಳಿದನು:

> “ನಾನು ಮೊದಲೇ ನಿನಗೆ ಹೇಳಿದ್ದೆ. ಧನಂಜಯನು ಸಂಗ್ರಾಮದಲ್ಲಿ ನಿಂತಿರಲು ದೇವತೆಗಳೂ ಕೂಡ ಯುಧಿಷ್ಠಿರನನ್ನು ಸೆರೆಹಿಡಿಯಲು ಶಕ್ಯರಾಗಲಾರರು.

ನೀವೆಲ್ಲರೂ ಪ್ರಯತ್ನಿಸಿದರೂ ಸಂಯುಗದಲ್ಲಿ ಪಾರ್ಥನದೇ ಮೇಲುಗೈಯಾಗಿತ್ತು. ನನ್ನ ಮಾತನ್ನು ಶಂಕಿಸಬೇಡ. ಕೃಷ್ಣ-ಪಾಂಡವರಿಬ್ಬರೂ ಅಜೇಯರು. ರಾಜನ್! ಇಂದು ಏನಾದರೂ ಉಪಾಯದಿಂದ ಶ್ವೇತವಾಹನನ್ನು ಕರೆದೊಯ್ಯಿ. ಹಾಗಾದರೆ ಇಂದಿನ ದಿನ ಯುಧಿಷ್ಠಿರನ ಸೆರೆಯಾಗಬಲ್ಲದು. ಯಾರಾದರೂ ಅವನನ್ನು ಆಹ್ವಾನಿಸಿ ರಣರಂಗದ ಬೇರೆಕಡೆ ಸೆಳೆದುಕೊಂಡು ಹೋಗಲಿ. ಅವನನ್ನು ಗೆಲ್ಲದೇ ಎಂದೂ ಕೌಂತೇಯನು ಹಿಂದಿರುಗುವುದಿಲ್ಲ. ಅವನಿಲ್ಲದಿರುವ ಈ ಸಮಯದಲ್ಲಿ ನಾನು ಸೇನೆಯನ್ನು ಭೇದಿಸಿ ಧೃಷ್ಟದ್ಯುಮ್ನನು ನೋಡುತ್ತಿರುವಾಗಲೇ ಧರ್ಮರಾಜನನ್ನು ಹಿಡಿಯುತ್ತೇನೆ. ಅರ್ಜುನನಿಲ್ಲದೇ ಅವನು ರಣದಲ್ಲಿ ನನ್ನನ್ನು ಎದುರಿಸಿದನೆಂದರೆ ನಾನು ಅವನನ್ನು ಸೆರೆಹಿಡಿಯುತ್ತೇನೆ ಎಂದು ತಿಳಿದುಕೋ. ಹೀಗೆ ನಾನು ಯುಧಿಷ್ಠಿರನನ್ನು ಅವನ ಗಣಗಳೊಂದಿಗೆ ಇಂದು ವಶಮಾಡಿಕೊಂಡು ನಿನ್ನೆದುರಿಗೆ ಕರೆದುಕೊಂಡು ಬರುತ್ತೇನೆ. ಅದರಲ್ಲಿ ಸಂಶಯ ಬೇಡ. ಆ ಪಾಂಡವನು ಸಂಗ್ರಾಮದಲ್ಲಿ ಒಂದು ಕ್ಷಣವಾದರೂ ನನ್ನ ಎದಿರು ಬಂದರೆ ನಾನು ಅವನನ್ನು ಸೆರೆಹಿಡಿದು ಕರೆತರುತ್ತೇನೆ. ಅದು ಯುದ್ಧದ್ದಲ್ಲಿ ವಿಜಯಕ್ಕಿಂತ ವಿಶೇಷವಾಗಿರುತ್ತದೆ.”

ದ್ರೋಣನ ವಚನವನ್ನು ಕೇಳಿ ತ್ರಿಗರ್ತಾಧಿಪತಿಯು ಸಹೋದರರೊಡಗೂಡಿ ಇದನ್ನು ಹೇಳಿದನು:

"ರಾಜನ್! ಗಂಡೀವಧನ್ವಿಯು ಸದಾ ನಮಗೆ ಕೆಟ್ಟದ್ದನ್ನೇ ಮಾಡಿದ್ದಾನೆ. ನಮ್ಮಲ್ಲಿ ತಪ್ಪಿಲ್ಲದಿದ್ದರೂ ಅವನು ನಮ್ಮ ಮೇಲೆ ಕೆಡುಕನ್ನೆಸಗಿದ್ದಾನೆ. ಅವನು ನಮಗೆ ಮಾಡಿದ ಪ್ರತ್ಯೇಕ ವಿಧವಿಧದ ಕೆಡುಕುಗಳನ್ನು ನೆನಪಿಸಿಕೊಂಡು ಕ್ರೋಧಾಗ್ನಿಯಿಂದ ಸುಡುತ್ತಿರುವ ನಾವು ಸದಾ ರಾತ್ರಿಯಲ್ಲಿ ನಿದ್ದೆಮಾಡುತ್ತಿಲ್ಲ. ಅವನು ದಿವ್ಯಾಸ್ತ್ರಸಂಪನ್ನನಾಗಿ ನಮ್ಮ ಕಣ್ಣಮುಂದೆ ಬರುತ್ತಿದ್ದಾನೆಂದರೆ ನಮ್ಮ ಹೃದಯದಲ್ಲಿರುವಂತೆ ಎಲ್ಲವನ್ನೂ ಮಾಡುತ್ತೇವೆ. ಅವನನ್ನು ಯುದ್ಧಕ್ಕೆ ಬೇರೆಕಡೆ ಕರೆದುಕೊಂಡು ಹೋಗಿ ನಮಗೆ ಯಶಸ್ಕರವಾಗುವಂತೆ ನಾವು ಅವನನ್ನು ಸಂಹರಿಸುತ್ತೇವೆ ಮತ್ತು ಇದರಿಂದ ನಿನಗೆ ಪ್ರಿಯವಾದುದನ್ನೂ ಮಾಡಿದಂತಾಗುತ್ತದೆ. ಇಂದು ಭೂಮಿಯು ಅರ್ಜುನ ರಹಿತವಾಗಲಿ ಅಥವಾ ತ್ರಿಗರ್ತರು ಇಲ್ಲದಂತಾಗಲಿ. ಈ ಸತ್ಯ ಪ್ರತಿಜ್ಞೆಯನ್ನು ಮಾಡುತ್ತಿದ್ದೇವೆ. ಇದು ಸುಳ್ಳಾಗುವುದಿಲ್ಲ!"

ಹೀಗೆ ಹೇಳಿ ಸತ್ಯರಥ, ಸತ್ಯಧರ್ಮ, ಸತ್ಯವರ್ಮ, ಸತ್ಯ ಮತ್ತು

ಸತ್ಯಕರ್ಮರು ಶಪಥಮಾಡಿ, ಸಹೋದರರೊಂದಿಗೆ ಐವತ್ತು ಸಾವಿರ ರಥಸೇನೆಗಳೊಂದಿಗೆ ರಣರಂಗಕ್ಕೆ ಮರಳಿದರು. ಮಾಲವ, ತುಂಡಿಕೇರರು ಮತ್ತು ಪ್ರಸ್ಥಲಲಾಧಿಪ ಸುಶರ್ಮರು ಮೂವತ್ತು ಸಾವಿರ ರಥಗಳೊಡನೆ, ಮಾಚೇಲ್ಲಕರು ಮತ್ತು ಲಲಿತರೊಡನೆ ಮದ್ರಕನು ತನ್ನ ತಮ್ಮಂದಿರು ಮತ್ತು ಹತ್ತು ಸಾವಿರ ರಥಗಳೊಂದಿಗೆ, ಪುನಃ ಹತ್ತು ಸಾವಿರ ರಥಗಳೊಂದಿಗೆ ನಾನಾ ಜನಪದೇಶ್ವರರು ಶಪಥವನ್ನು ತೆಗೆದುಕೊಳ್ಳಲು ಮುಂದೆ ಬಂದರು. ಆಗ ಅವರೆಲ್ಲರೂ ಪ್ರತ್ಯೇಕ ಪ್ರತ್ಯೇಕವಾಗಿ ಅಗ್ನಿಯನ್ನು ತೆಗೆದುಕೊಂಡು ಅದರಲ್ಲಿ ಆಹುತಿಯನ್ನಿತ್ತು ಕುಶವಸ್ತ್ರಗಳನ್ನೂ ಬಣ್ಣಬಣ್ಣದ ಕವಚಗಳನ್ನೂ ಧರಿಸಿದರು. ದಕ್ಷಿಣೆಗಳನ್ನಿತ್ತು ನೂರಾರು ಸಾವಿರಾರು ಯಜ್ಞಗಳನ್ನು ನಡೆಸಿದ್ದ, ಪುತ್ರರನ್ನು ಪಡೆದಿದ್ದ, ಲೋಕದಲ್ಲಿ ಕೃತಕೃತ್ಯರಾದ, ದೇಹವನ್ನು ತ್ಯಜಿಸಿದ್ದ, ತಮಗೆ ಯಶಸ್ಸು ಮತ್ತು ವಿಜಯಗಳನ್ನು ಬಯಸಿದ್ದ, ಬ್ರಹ್ಮಚರ್ಯ ಮತ್ತು ಶ್ರುತಿಮುಖೇನ ಆಪ್ತದಕ್ಷಿಣೆಗಳೊಂದಿಗೆ ಕ್ರತುಗಳನ್ನು ನಡೆಸಿದ್ದ, ಉತ್ತಮವಾಗಿ ಯುದ್ಧಮಾಡಿ ಬೇಗನೇ ಲೋಕಗಳನ್ನು ಪಡೆಯಲು ಬಯಸಿದ್ದ ಆ ವೀರರು ದೇಹಕ್ಕೆ ಕವಚಗಳನ್ನು ಕಟ್ಟಿಕೊಂಡು ತುಪ್ಪದಲ್ಲಿ ಸ್ನಾನಮಾಡಿ, ನಾರುಡೆಗಳನ್ನುಟ್ಟುಕೊಂಡು, ಧನುಸ್ಸಿನ ಶಿಂಜನಿಯನ್ನು ತಿವಿದು, ಬ್ರಾಹ್ಮಣರನ್ನು ತೃಪ್ತಿಗೊಳಿಸಿ ಪ್ರತ್ಯೇಕಪ್ರತ್ಯೇಕವಾಗಿ ದಕ್ಷಿಣೆಗಳನ್ನಿತ್ತು,

ಗೋವು-ವಸ್ತ್ರಗಳನ್ನಿತ್ತು, ಪುನಃ ಪರಸ್ಪರರಲ್ಲಿ ಪ್ರೀತಿಯ ಮಾತುಗಳನ್ನಾಡಿಕೊಂಡು, ರಣದಲ್ಲಿ ವ್ರತರಾಗಿ ಹೋಗಿ ಅಗ್ನಿಯನ್ನು ಪ್ರಜ್ವಲಿಸಿ ಆ ಅಗ್ನಿಯಲ್ಲಿ ದೃಢನಿಶ್ಚಯರಾಗಿ ಪ್ರತಿಜ್ಞೆಗಳನ್ನು ಕೈಗೊಂಡರು. ಸರ್ವಭೂತಗಳಿಗೂ ಕೇಳಿಸುವಂತೆ ಉಚ್ಛ ಸ್ವರದಲ್ಲಿ ಧನಂಜಯವಧೆಯ ಪ್ರತಿಜ್ಞೆಯನ್ನು ಮಾಡಿದರು:

> “ಇಂದು ನಾವು ಯುದ್ಧದಲ್ಲಿ ಧನಂಜಯನನ್ನು ಕೊಲ್ಲದೇ ಹಿಂದಿರುಗಿದರೆ ಅಥವಾ ಅವನ ಅಸ್ತ್ರಗಳಿಂದ ಆರ್ದಿತರಾಗಿ ಭಯಪಟ್ಟುಕೊಂಡು ಪಲಯಾನಗೈದು ಬಂದರೆ ನಮಗೆ ಯಾವ ಲೋಕಗಳು ಸುಳ್ಳುಬುರುಕರಿಗೂ, ಬ್ರಹ್ಮಘಾತಿಗಳಿಗೂ ದೊರೆಯುತ್ತವೆಯೋ, ಮತ್ತು ಕುಡುಕರಿಗೂ, ಗುರುಪತ್ನಿಯೊಂದಿಗೆ ಭೋಗಿಸುವವರಿಗೂ ದೊರಕುವ ಲೋಕಗಳು, ಬ್ರಾಹ್ಮಣರ ಸಂಪತ್ತನ್ನು ಅಪಹರಿಸಿದವನಿಗೆ ಅಥವಾ ರಾಜನ ಪಿಂಡವನ್ನು ಅಪಹರಿಸಿದವನಿಗೆ ದೊರೆಯುವ ಲೋಕಗಳು, ಶರಣಾಗತನಾಗಿರುವವನನ್ನು ತ್ಯಜಿಸುವವನಿಗೆ ಮತ್ತು ಬೇಡಿಕೊಳ್ಳುತ್ತಿರುವವನನ್ನು ಕೊಂದವನಿಗೆ ದೊರೆಯುವ ಲೋಕಗಳು, ಮನೆಗಳಿಗೆ ಬೆಂಕಿಯಿಟ್ಟವನಿಗೆ ಮತ್ತು ಗೋವುಗಳನ್ನು ಕೊಲ್ಲುವವನಿಗೆ

ದೊರೆಯುವ ಲೋಕಗಳು, ಅಪಚಾರಿಗಳಿಗೆ ಮತ್ತು ಬ್ರಾಹ್ಮಣದ್ವೇಷಿಗಳಿಗೆ ದೊರೆಯುವ ಲೋಕಗಳು, ಋತುಕಾಲದಲ್ಲಿರುವಾಗ ಮತ್ತು ಶ್ರಾದ್ಧದ ದಿನಗಳಲ್ಲಿ ಮೋಹದಿಂದ ಸಂಭೋಗವನ್ನು ಬಯಸುವವರಿಗೆ ದೊರೆಯುವ ಲೋಕಗಳು, ಆತ್ಮಹತ್ಯೆಮಾಡಿಕೊಳ್ಳುವವರಿಗೆ ಮತ್ತು ಇನ್ನೊಬ್ಬರು ನಂಬಿಕೆಯಿಂದ ಇಟ್ಟಿದ್ದ ಸಂಪತ್ತನ್ನು ಕದಿಯುವವರಿಗೆ ದೊರೆಯುವ ಲೋಕಗಳು, ವಿದ್ಯೆಯನ್ನು ನಾಶಮಾಡುವವರಿಗೆ, ನಪುಂಸಕರೊಂದಿಗೆ ಯುದ್ಧಮಾಡುವವರಿಗೆ ಮತ್ತು ನೀಚರನ್ನು ಅನುಸರಿಸುವವರಿಗೆ ದೊರೆಯುವ ಲೋಕಗಳು, ಮತ್ತು ಇನ್ನೂ ಇತರ ಪಾಪಕರ್ಮಿಗಳಿಗೆ ದೊರೆಯುವ ಲೋಕಗಳು ದೊರೆಯಲಿ. ಒಂದುವೇಳೆ ಕಷ್ಟಕರವಾದ ಈ ಕರ್ಮಗಳನ್ನು ನಾವು ಸಂಯುಗದಲ್ಲಿ ಮಾಡಿದರೆ ಪುಣ್ಯಕೃತರಿಗೆ ಇಷ್ಟವಾದ ಲೋಕಗಳು ನಮಗೆ ದೊರೆಯುತ್ತವೆ ಎನ್ನುವುದರಲ್ಲಿ ಸಂಶಯವಿಲ್ಲ.”

ಹೀಗೆ ಹೇಳಿ ಆ ವೀರರು ಅರ್ಜುನನನ್ನು ಆಹ್ವಾನಿಸುತ್ತಾ ರಣರಂಗದ ದಕ್ಷಿಣಭಾಗದಲ್ಲಿ ಹೋಗಿ ಸೇರಿದರು. ಆ ನರವ್ಯಾಘ್ರರಿಂದ ಕೂಗಿ

ಕರೆಯಲ್ಪಟ್ಟ ಪಾರ್ಥನು ಧರ್ಮರಾಜನಿಗೆ ತಡಮಾಡದೇ ಈ ಮಾತುಗಳನ್ನಾಡಿದನು:

"ಕರೆಯಲ್ಪಟ್ಟಾಗ ಹಿಂದೆಸರಿಯದೇ ಇರುವುದು ನಾನು ನಡೆಸಿಕೊಂಡು ಬಂದಿರುವ ವ್ರತ. ರಾಜನ್! ಸಂಶಪ್ತಕರು ನನ್ನನ್ನು ಪುನಃ ಪುನಃ ಕೂಗಿ ಕರೆಯುತ್ತಿದ್ದಾರೆ. ಸಹೋದರರರೊಡನೆ ಸುಶರ್ಮನೂ ಕೂಡ ರಣಕ್ಕೆ ನನ್ನನ್ನು ಕರೆಯುತ್ತಿದ್ದಾನೆ. ಗಣಗಳೊಂದಿಗೆ ಅವನನ್ನು ವಧಿಸಲು ಅಲ್ಲಿ ನನಗೆ ಹೋಗಬೇಕಾಗಿದೆ. ಆಹ್ವಾನಿಸುವವರನ್ನು ಬಿಟ್ಟುಬಿಡಲು ಶಕ್ಯನಾಗುತ್ತಿಲ್ಲ. ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ಈ ಶತ್ರುಗಳು ಯುದ್ಧದಲ್ಲಿ ಹತರಾದರೆಂದೇ ತಿಳಿ."

ಯುಧಿಷ್ಠಿರನು ಹೇಳಿದನು:

"ಅಯ್ಯಾ! ದ್ರೋಣನು ಏನು ಮಾಡಲು ಬಯಸಿರುವನೆಂಬುದನ್ನು ನೀನು ಕೇಳಿದ್ದೇಯೆ. ಅವನ ಪ್ರಯತ್ನವು ಸುಳ್ಳಾಗುವ ರೀತಿಯಲ್ಲಿ ನಡೆದುಕೋ. ದ್ರೋಣನು ಬಲಶಾಲಿ, ಶೂರ, ಅಸ್ತ್ರಗಳಲ್ಲಿ ಪಳಗಿದವನು ಮತ್ತು ಆಯಾಸವನ್ನು ಗೆದ್ದವನು. ಅವನೂ ಕೂಡ ನನ್ನ ಸೆರೆಯ

ಪ್ರತಿಜ್ಞೆಯನ್ನು ಮಾಡಿದ್ದಾನೆ."

ಅರ್ಜುನನು ಹೇಳಿದನು:

"ರಾಜನ್! ಇಂದು ಸತ್ಯಜಿತುವು ಯುದ್ಧದಲ್ಲಿ ನಿನ್ನನ್ನು ರಕ್ಷಿಸುತ್ತಾನೆ. ಈ ಪಾಂಚಾಲ್ಯನು ಇರುವವರೆಗೆ ಆಚಾರ್ಯನು ತನ್ನ ಇಚ್ಛೆಯನ್ನು ಪೂರೈಸಿಕೊಳ್ಳಲಾರನು. ಆದರೆ ಈ ಪುರುಷವ್ಯಾಘ್ರ ಸತ್ಯಜಿತುವು ಹತನಾದರೆ ನಮ್ಮೆಲ್ಲರ ಸೇನೆಗಳೊಂದಿಗಿದ್ದರೂ ನೀನು ಎಂದೂ ರಣದಲ್ಲಿ ನಿಲ್ಲ ಬಾರದು!"

ರಾಜನು ಅಪ್ಪಣೆಯನ್ನು ನೀಡಿ ಫಲ್ಗುನನನ್ನು ಬಿಗಿದಪ್ಪಿ ಪ್ರೇಮದಿಂದ ನೋಡಿ, ಅನೇಕ ಆಶೀರ್ವಾದಗಳನ್ನಿತ್ತು ಕಳುಹಿಸಿದನು. ಆಗ ಪಾರ್ಥನು ಹಸಿದ ಸಿಂಹವು ತನ್ನ ಹಸಿವೆಯನ್ನು ನೀಗಿಸಿಕೊಳ್ಳಲು ಜಿಂಕೆಗಳ ಹಿಂಡಿನ ಕಡೆ ಹೋಗುವಂತೆ ತ್ರಿಗರ್ತರ ಕಡೆ ಹೊರಟನು. ಅರ್ಜುನನು ಹೊರಟುಹೋಗಲು ದುರ್ಯೋಧನನ ಸೇನೆಯು ಧರ್ಮರಾಜನನ್ನು ಸೆರೆಹಿಡಿಯಲು ತುಂಬಾ ಕಾತರಗೊಂಡಿತು. ಆಗ ಎರಡೂ ಸೇನೆಗಳು ಮಳೆಗಾಲದ ಪ್ರವಾಹದಲ್ಲಿ ಗಂಗೆ ಮತ್ತು ಸರಯೂ ನದಿಗಳು ವೇಗದಿಂದ ಅನ್ಯೋನ್ಯರನ್ನು ಸೇರುವಂತೆ ಓಜಸ್ಸಿನಿಂದ ಕೂಡಿ ಹೋರಾಡಿದರು.

## ಅರ್ಜುನ-ಸಂಶಪ್ತಕರ ಯುದ್ಧ

ಸಂಶಪ್ತಕರು ಸಮಪ್ರದೇಶದಲ್ಲಿ ರಥಸೇನೆಗಳಿಂದಲೇ ಅರ್ಧಚಂದ್ರದ ವ್ಯೂಹವನ್ನು ರಚಿಸಿಕೊಂಡು ಮುದಾನ್ವಿತರಾಗಿ ಸಜ್ಜಾಗಿ ನಿಂತಿದ್ದರು. ಕಿರೀಟಿಯು ಬರುತ್ತಿರುವುದನ್ನು ನೋಡಿ ಆ ನರವ್ಯಾಘ್ರರು ಹರ್ಷದಿಂದ ಜೋರಾಗಿ ಕೂಗಿದರು. ಆ ಶಬ್ಧವು ಸರ್ವ ದಿಕ್ಕು-ಉಪದಿಕ್ಕುಗಳನ್ನೂ ಆಕಾಶವನ್ನೂ ಹರಡಿಕೊಂಡಿತು. ಲೋಕದ ಎಲ್ಲೆಡೆಯೂ ಪ್ರವೇಶಿಸಿದುದರಿಂದ ಆ ಶಬ್ಧವು ಪ್ರತಿಧ್ವನಿಸಲಿಲ್ಲ. ಅತೀವ ಹರ್ಷಿತರಾಗಿದ್ದ ಅವರನ್ನು ಸಮೀಪಿಸಿ ಧನಂಜಯನು ನಸುನಕ್ಕು ಕೃಷ್ಣನಿಗೆ ಈ ಮಾತನ್ನಾಡಿದನು:

> “ದೇವಕೀಮಾತ! ಮುಹೂರ್ತದಲ್ಲಿಯೇ ಇಂದು ಸಾಯಲಿರುವ ಇವರನ್ನು ನೋಡು! ಅಳಬೇಕಾಗಿರುವ ಈ ಸಮಯದಲ್ಲಿ ಇವರು ಹರ್ಷಿತರಾಗಿ ನಗುತ್ತಿದ್ದಾರೆ. ಅಥವಾ ಕುತ್ಸಿತರು ಪಡೆಯಲು ಕಷ್ಟಕರವಾದ ಅನುತ್ತಮ ಲೋಕಗಳನ್ನು ಈ ಸಮಯದಲ್ಲಿ ಸುಲಭವಾಗಿ ಪಡೆಯಲಿದ್ದಾರೆಂದು ಈ ತ್ರೈಗರ್ತರು ಹರ್ಷಪಡುತ್ತಿದ್ದಾರೆ ಎನ್ನುವುದರಲ್ಲಿ ಸಂಶಯವಿಲ್ಲ.”

ಹೀಗೆ ಹೃಷೀಕೇಶನಿಗೆ ಹೇಳಿ ಮಹಾಬಾಹು ಅರ್ಜುನನು ರಣದಲ್ಲಿ

ತ್ರೈಗರ್ತರ ಸೇನೆಯ ವ್ಯೂಹವನ್ನು ಸಮೀಪಿಸಿದನು. ಫಲ್ಗುನನು ಹೇಮಪರಿಷ್ಕೃತ ದೇವದತ್ತ ಶಂಖವನ್ನು ವೇಗವಾಗಿ ಮತ್ತು ಜೋರಾಗಿ ಊದಿ ದಿಕ್ಕುಗಳನ್ನು ಮೊಳಗಿಸಿದನು. ಆ ಶಬ್ಧದಿಂದ ನಡುಗಿದ ಸಂಶಪ್ತಕರ ಸೇನೆಯು ಲೋಹದಿಂದ ಮಾಡಿದ ಪ್ರತಿಮೆಯಂತೆ ರಣರಂಗದಲ್ಲಿ ಹಾಗೆಯೇ ನಿಂತುಬಿಟ್ಟಿತು. ಅವರ ಕುದುರೆಗಳು ಕಣ್ಣುತೆರೆದು, ಕಿವಿಗಳನ್ನೂ ತಲೆಗಳನ್ನೂ ಸ್ತಬ್ಧವಾಗಿಸಿಕೊಂಡು, ಕಾಲುಗಳು ಸೆಟೆದು ನಿಂತು ಮೂತ್ರ ಮತ್ತು ರಕ್ತವನ್ನು ಸುರಿಸಿದವು. ಅವರು ಎಚ್ಚೆತ್ತು, ಸೇನೆಗಳನ್ನು ಪುನಃ ಸಜ್ಜುಗೊಳಿಸಿ, ಒಟ್ಟಾಗಿ, ಪಾಂಡುಪುತ್ರನ ಮೇಲೆ ಕಂಕಪತ್ರಿಗಳನ್ನು ಎಸೆದರು. ಪರಾಕ್ರಮಿ ಅರ್ಜುನನು ಹದಿನೈದು ಬಾಣಗಳಿಂದಲೇ ಅವರು ಪ್ರಯೋಗಿಸಿದ ಸಹಸ್ರಾರು ಬಾಣಗಳು ಬಂದು ತಲುಪುವುದರೊಳಗೇ ಅವುಗಳನ್ನು ಕತ್ತರಿಸಿದನು. ಆಗ ಅವರು ಅರ್ಜುನನ್ನು ಪುನಃ ಪ್ರತಿಯೊಬ್ಬರೂ ಹತ್ತು ಹತ್ತು ನಿಶಿತ ಬಾಣಗಳಿಂದ ಹೊಡೆಯಲು ಪಾರ್ಥನು ಅವಕ್ಕೆ ಪ್ರತಿಯಾಗಿ ಪ್ರತಿಯೊಬ್ಬರನ್ನೂ ಮೂರು ಮೂರು ಬಾಣಗಳಿಂದ ಹೊಡೆದನು. ಆಗ ಅವರು ಒಬ್ಬೊಬ್ಬರೂ ಐದೈದು ಬಾಣಗಳಿಂದ ಪಾರ್ಥನನ್ನು ಹೊಡೆಯಲು ಆ ಪರಾಕ್ರಮಿಯು ಅವರಲ್ಲಿ ಪ್ರತಿಯೊಬ್ಬರನ್ನೂ ಎರೆಡೆರಡರಿಂದ ಹೊಡೆದನು. ಮೋಡಗಳು ಮಳೆಯಿಂದ ತಟಾಕವನ್ನು ತುಂಬಿಸುವಂತೆ ಸಂರಬ್ಧರಾದ ಅವರು

ಕೇಶವನೊಂದಿಗೆ ಅರ್ಜುನನ್ನು ತೀಕ್ಷ್ಣ ಶರಗಳಿಂದ ತುಂಬಿದರು. ವನದಲ್ಲಿ ದುಂಬಿಗಳ ಸಮೂಹಗಳು ಸುಪುಷ್ಪಿತ ವೃಕ್ಷಸಮೂಹಗಳನ್ನು ಮುತ್ತುವಂತೆ ಅವರು ಬಿಟ್ಟ ಸಹಸ್ರಾರು ಬಾಣಗಳು ಅರ್ಜುನನ ಮೇಲೆ ಬಿದ್ದವು. ಆಗ ಸುಬಾಹುವು ಲೋಹಮಹವಾದ ಮೂವತ್ತು ಬಾಣಗಳಿಂದ ಸವ್ಯಸಾಚಿಯ ಕಿರೀಟಕ್ಕೆ ಬಹಳ ಆಳವಾಗಿ ಪ್ರಹರಿಸಿದನು.

ಕಿರೀಟವನ್ನು ಹೊಕ್ಕಿದ್ದ ಚಿನ್ನದ ರೆಕ್ಕೆಗಳ ಆ ಜಿಹ್ಮಗಗಳಿಂದ ಕಿರೀಟಿಯು ನೂರುಕುಂಭಗಳಿಂದ ಅಲಂಕೃತ ಯಜ್ಞವೇದಿಕೆಯಂತೆ ಶೋಭಿಸಿದನು. ಪಾಂಡವನು ಭಲ್ಲದಿಂದ ಸುಬಾಹುವಿನ ಹಸ್ತಾವಾಪವನ್ನು ಕತ್ತರಿಸಿದನು ಮತ್ತು ಪುನಃ ಶರವರ್ಷದಿಂದ ಅವನನ್ನು ಮುಚ್ಚಿದನು. ಆಗ ಸುಶರ್ಮ, ಸುರಥ, ಸುಧರ್ಮ, ಸುಧನ್ವ ಮತ್ತು ಸುಬಾಹು – ಇವರು ಕಿರೀಟಿಯನ್ನು ಹತ್ತತ್ತು ಶರಗಳಿಂದ ಹೊಡೆದರು. ವಾನರಪ್ರವರಧ್ವಜನು ಬೇರೆ ಬೇರೆ ಬಾಣಗಳಿಂದ ಅವರನ್ನು ತಿರುಗಿ ಹೊಡೆದು ಭಲ್ಲದಿಂದ ಅವರ ಧ್ವಜಗಳನ್ನು ತುಂಡರಿಸಿದನು. ಸುಧನ್ವನ ಧನುಸ್ಸನ್ನು ಕತ್ತರಿಸಿ, ಕುದುರೆಗಳನ್ನು ಬಾಣಗಳಿಂದ ಸಂಹರಿಸಿದನು. ಅನಂತರ ಅವನ ಶಿರವನ್ನು, ಶಿರಸ್ತ್ರಾಣದೊಂದಿಗೆ, ದೇಹದಿಂದ ಅಪಹರಿಸಿದನು. ಆ ವೀರನು ಕೆಳಗುರುಳಲು ಅವನ ಅನುಯಾಯಿಗಳು ಭಯ-ಭೀತರಾಗಿ

ದುರ್ಯೋಧನನ ಸೇನೆಯ ಕಡೆ ಓಡಿಹೋದರು.

ಆಗ ವಾಸವಿಯು ಸಂಕ್ರುದ್ಧನಾಗಿ ಸೂರ್ಯನು ತನ್ನ ಕಿರಣಗಳಿಂದ ಕತ್ತಲೆಯನ್ನು ಕತ್ತರಿಸುವಂತೆ ಆ ಮಹಾಸೇನೆಯನ್ನು ಶರಜಾಲಗಳಿಂದ ಚಿಂದಿಮಾಡಿದನು. ಆಗ ಸವ್ಯಸಾಚಿಯ ಕೋಪಕ್ಕೆ ಸಿಲುಕಿ ಸೇನೆಯು ಭಗ್ನವಾಗಿ ಎಲ್ಲಕಡೆ ಓಡಿಹೋಗುತ್ತಿರಲು ತ್ರಿಗರ್ತರಿಗೆ ಭಯವು ಆವೇಶಗೊಂಡಿತು. ಪಾರ್ಥನ ಸನ್ನತಪರ್ವ ಶರಗಳಿಂದ ವಧಿಸಲ್ಪಡುತ್ತಿದ್ದ ಅವರು ಭಯಗೊಂಡ ಮೃಗಗಣಗಳಂತೆ ಅಲ್ಲಲ್ಲಿಯೇ ಮೂರ್ಛಿತರಗಿ ಬೀಳುತ್ತಿದ್ದರು. ಆಗ ತ್ರಿಗರ್ತರಾಜನು ಕ್ರುದ್ಧನಾಗಿ ಆ ಮಹಾರಥರಿಗೆ ಹೇಳಿದನು:

> “ಓಡಬೇಡಿ! ಶೂರರಾದ ನಾವು ಭಯಪಡುವುದು ಸರಿಯಲ್ಲ. ಸರ್ವಸೈನ್ಯಗಳೂ ನೋಡುತ್ತಿದ್ದಂತೆ ಘೋರವಾದ ಶಪಥಗಳನ್ನು ಕೈಗೊಂಡು ಈಗ ದುರ್ಯೋಧನನ ಸೈನ್ಯದ ಬಳಿ ಓಡಿ ಹೋಗಿ ಯಾವ ಉತ್ತರವನ್ನು ನೀಡುವಿರಿ? ಹೇಗೆ ಲೋಕದಲ್ಲಿ ನಾವು ಅಪಹಾಸ್ಯಕ್ಕೆ ಒಳಗಾಗುವುದಿಲ್ಲವೋ ಅಂಥಹುದನ್ನು ರಣದಲ್ಲಿ ನಮಗೆ ಮಾಡಬೇಕಾಗಿದೆ. ಹಿಂದಿರುಗಿ! ನಾವೆಲ್ಲ ಒಟ್ಟಿಗೇ ಬಲವಿದ್ಧಷ್ಟು ಹೋರಾಡೋಣ!”

ಅವನು ಹೀಗೆ ಹೇಳಲು ಅವರು ಪುನಃ ಪುನಃ ಗರ್ಜನೆ ಮಾಡುತ್ತಾ ಹಿಂದಿರುಗಿದರು. ಪರಸ್ಪರರನ್ನು ಹರ್ಷಗೊಳಿಸುತ್ತಾ ಆ ವೀರರು ಶಂಖಗಳನ್ನು ಊದಿದರು. ನಾರಾಯಣ-ಗೋಪಾಲ ಮೊದಲಾದ ಸಂಶಪ್ತಕ ಗಣಗಳು ಮೃತ್ಯುವನ್ನೇ ದಾರಿಯನ್ನಾಗಿಸಿಕೊಂಡು ಹಿಂದಿರುಗಿದರು.

ಆ ಸಂಶಪ್ತಕಗಣಗಳು ಪುನಃ ಹಿಂದಿರುಗಿದುದನ್ನು ನೋಡಿ ಅರ್ಜುನನು ಮಹಾತ್ಮ ವಾಸುದೇವನಿಗೆ ಹೇಳಿದನು:

> "ಹೃಷೀಕೇಶ! ಸಂಶಪ್ತಕಗಣಗಳ ಕಡೆ ಕುದುರೆಗಳನ್ನು ಓಡಿಸು. ಜೀವಂತವಿರುವವರೆಗೂ ಇವರು ಯುದ್ಧಮಾಡುವುದನ್ನು ಬಿಡುವುದಿಲ್ಲವೆಂದು ನನಗನ್ನಿಸುತ್ತಿದೆ. ನನ್ನ ಘೋರ ಅಸ್ತ್ರಬಲವನ್ನು ಮತ್ತು ಬಾಹು-ಧನುಸ್ಸುಗಳ ಬಲವನ್ನು ನೋಡು! ಕ್ರುದ್ಧನಾದ ರುದ್ರನು ಪಶುಗಳನ್ನು ಹೇಗೋ ಹಾಗೆ ಇಂದು ಇವರನ್ನು ಉರುಳಿಸುತ್ತೇನೆ."

ಆಗ ಕೃಷ್ಣನು ನಸುನಕ್ಕು ಶುಭಾಶಂಸನೆಗಳಿಂದ ಅವನನ್ನು ಅಭಿನಂದಿಸಿ ಅರ್ಜುನನು ಎಲ್ಲಿಗೆ ಹೋಗಬಯಸಿದನೋ ಅಲ್ಲಿಗೆ ಪ್ರವೇಶಿಸಿದನು. ರಣರಂಗದಲ್ಲಿ ಬಿಳಿಯ ಕುದುರೆಗಳು ಎಳೆದುಕೊಂಡು ಹೋಗುತ್ತಿದ್ದ ಆ ಬಿಳೀ ರಥವು ಆಕಾಶದಲ್ಲಿ ಹಾರಿಕೊಂಡು ಹೋಗುತ್ತಿರುವ

ವಿಮಾನದಂತೆ ವಿಜೃಂಭಿಸಿತು. ಹಿಂದೆ ದೇವಾಸುರರ ಯುದ್ಧದಲ್ಲಿ ಶಕ್ರನ ರಥವು ಹೇಗೋ ಹಾಗೆ ಇವರ ರಥವೂ ಕೂಡ ಮಂಡಲಾಕಾರದಲ್ಲಿ, ಮುಂದೆ ಮತ್ತು ಹಿಂದೆ ಚಲಿಸುತ್ತಿತ್ತು.

ಆಗ ನಾರಾಯಣರು ಕ್ರುದ್ಧರಾಗಿ ವಿವಿಧ ಆಯುಧಗಳನ್ನು ಹಿಡಿದು ಧನಂಜಯನನ್ನು ಬಾಣಗಳ ಮಳೆಯಿಂದ ಮುಚ್ಚಿ, ಸುತ್ತುವರೆದರು. ಅವರು ಕೃಷ್ಣನ ಸಹಿತ ಕುಂತೀಪುತ್ರ ಧನಂಜಯನನ್ನು ಮುಹೂರ್ತಕಾಲ ಅದೃಶ್ಯನನ್ನಾಗಿ ಮಾಡಿಬಿಟ್ಟರು. ಕ್ರುದ್ಧನಾದ ಫಲ್ಗುನನ ವಿಕ್ರಮವು ಇಮ್ಮಡಿಯಾಯಿತು. ತಕ್ಷಣವೇ ಗಾಂಡೀವವನ್ನು ಹಿಡಿದು ಶಿಂಜಿನಿಯನ್ನು ಮೀಟಿದನು. ಕ್ರೋಧದ ಪ್ರತಿಲಕ್ಷಣವಾದ ಹುಬ್ಬು-ಮುಖವನ್ನು ಗಂಟಿಕ್ಕಿ ಪಾಂಡವನು ಮಹಾಶಂಖ ದೇವದತ್ತವನ್ನು ಜೋರಾಗಿ ಊದಿದನು. ಅರ್ಜುನನು ಅರಿಸಂಹಾರಕ ತ್ವಾಷ್ಟ್ರವೆಂಬ ಮಹಾಅಸ್ತ್ರವನ್ನು ಪ್ರಯೋಗಿಸಲು ಅದರಿಂದ ಪ್ರತ್ಯೇಕ ಪ್ರತ್ಯೇಕವಾಗಿ ಸಹಸ್ರಾರು ರೂಪಗಳು ಹೊರಹೊಮ್ಮಿದವು. ಅರ್ಜುನನ ರೂಪದಂತೆಯೇ ಇದ್ದ ಸಾವಿರಾರು ಆಕೃತಿಗಳು ಆ ಸೈನಿಕರನ್ನು ಸೇರಿಕೊಳ್ಳಲು ಅವರು ಮೋಹಿತರಾಗಿ ಅನ್ಯೋನ್ಯರನ್ನೇ ಅರ್ಜುನನೆಂದು ತಿಳಿದುಕೊಂಡು ತಾವೇ ತಮ್ಮವರನ್ನು ಸಂಹರಿಸಿದರು.

“ಇವನು ಅರ್ಜುನ! ಇವನು ಗೋವಿಂದ! ಇವರಿಬ್ಬರು

ಯಾದವ-ಪಾಂಡವರು !”

ಎಂದು ಹೇಳುತ್ತಾ, ಸಮ್ಮೂಢರಾಗಿ, ಅವರು ಅನ್ಯೋನ್ಯರನ್ನು ಸಂಹರಿಸಿದರು. ಪರಮಾಸ್ತ್ರದ ಪ್ರಭಾವದಿಂದ ಮೋಹಿತರಾದ ಅವರು ಪರಸ್ಪರರೊಂದಿಗೆ ಹೊಡೆದಾಡಿ ಕ್ಷಯವನ್ನು ಹೊಂದಿದರು. ರಣದಲ್ಲಿ ಆ ಯೋಧರು ಪುಷ್ಪಭರಿತ ಕಿಂಶುಕಗಳಂತೆ ಶೋಭಿಸಿದರು. ಆ ಅಸ್ತ್ರವು ಅವರು ಬಿಟ್ಟ ಸಹಸ್ರಾರು ಬಾಣಗಳನ್ನು ಭಸ್ಮೀಭೂತವಾಗಿ ಮಾಡಿ ಆ ವೀರರನ್ನು ಯಮಸದನಕ್ಕೆ ಕಳುಹಿಸಿತು. ಆಗ ಬೀಭತ್ಸುವು ಜೋರಾಗಿ ನಕ್ಕು ಲಲಿತ್ಥ-ಮಾಲವ-ಮಾಚೇಲ್ಲ ಮತ್ತು ತ್ರಿಗರ್ತಯೋಧರನ್ನು ಶರಗಳಿಂದ ಹೊಡೆದು ಚದುರಿಸಿ ಬೇರೆ ಬೇರೆ ಮಾಡಿದನು. ಆ ವೀರನಿಂದ ವಧಿಸಲ್ಪಡುತ್ತಿದ್ದ ಕಾಲಚೋದಿತ ಆ ಕ್ಷತ್ರಿಯರು ಪಾರ್ಥನ ಮೇಲೆ ನಾನಾವಿಧದ ಬಾಣಗಳ ಮಳೆಯನ್ನು ಸುರಿಸಿದರು. ಘೋರ ಶರವರ್ಷದಿಂದ ತುಂಬಿಹೋಗಿರಲು ಅಲ್ಲಿ ಅರ್ಜುನನಾಗಲೀ, ರಥವಾಗಲೀ, ಕೇಶವನಾಗಲೀ ಕಾಣಿಸಲಿಲ್ಲ. ಆಗ ಅವರು ಅನ್ಯೋನ್ಯರಲ್ಲಿ “ಗುರಿಗೆ ಸಿಲುಕಿ ಇಬ್ಬರೂ ಕೃಷ್ಣರೂ ಹತರಾದರು !” ಎಂದು ಹೇಳಿಕೊಳ್ಳುತ್ತಾ ಸಂತೋಷದಿಂದ ಅಂಗವಸ್ತ್ರಗಳನ್ನು ಮೇಲಕ್ಕೆತ್ತಿ ಕೂಗಿದರು.

ಅಲ್ಲಿ ಸಹಸ್ರಾರು ವೀರರು ಭೇರಿ-ಮೃದಂಗ-ಶಂಖಗಳನ್ನು

ಮೊಳಗಿಸಿದರು ಮತ್ತು ಉಗ್ರ ಸಿಂಹನಾದಗೈದರು. ಬೆವತುಹೋದ ಕೃಷ್ಣನು ಖಿನ್ನನಾಗಿ ಅರ್ಜುನನಿಗೆ ಹೇಳಿದನು:

> "ಪಾರ್ಥ ! ಎಲ್ಲಿರುವೆ? ನಿನ್ನನ್ನು ಕಾಣುತ್ತಿಲ್ಲವಲ್ಲ !
> ಜೀವಂತವಿದ್ದೀಯೆ ತಾನೇ?"

ಅವನ ಆ ಮಾನುಷ ಭಾವವನ್ನು ಅರಿತ ಪಾಂಡವನು ಕೂಡಲೇ ವಾಯುವ್ಯಾಸ್ತ್ರದಿಂದ ಆ ಶರವೃಷ್ಟಿಯನ್ನು ಹೋಗಲಾಡಿಸಿದನು. ಆಗ ವಾಯುವು ಒಣಗಿದ ತರಗೆಲೆಗಳನ್ನು ಹಾರಿಸಿಕೊಂಡು ಹೋಗುವಂತೆ ಆ ಸಂಶಪ್ತಕ ಸಮೂಹವನ್ನು ಕುದುರೆ-ಆನೆ-ರಥ-ಆಯುಧಗಳೊಂದಿಗೆ ಹಾರಿಸಿಕೊಂಡು ಹೋದನು. ವಾಯುವಿನಿಂದ ಹಾರಿಸಿಕೊಂಡು ಹೋಗುತ್ತಿದ್ದ ಆ ಸೇನೆಯು ಮರದಲ್ಲಿರುವ ಪಕ್ಷಿಗಳು ಸಮಯಬಂದಾಗ ಒಟ್ಟಿಗೇ ಹಾರಿಹೋಗುತ್ತಿರುವಂತೆ ಕಂಡಿತು. ಅವರನ್ನು ಹೀಗೆ ವ್ಯಾಕುಲರನಾಗಿಸಿ ಧನಂಜಯನು ತ್ವರೆಮಾಡಿ ನಿಶಿತಬಾಣಗಳಿಂದ ನೂರಾರು ಸಹಸ್ರಾರು ಯೋಧರನ್ನು ಸಂಹರಿಸಿದನು. ನಿಶಿತ ಭಲ್ಲಗಳೆಂಬ ಶರಗಳಿಂದ ಶಿರಗಳನ್ನೂ, ಆಯುಧಗಳೊಂದಿಗೆ ಬಾಹುಗಳನ್ನೂ, ಆನೆಗಳ ಸೊಂಡಿಲುಗಳಂತಿದ್ದ ಯೋಧರ ತೊಡೆಗಳನ್ನೂ ಉರುಳಿಸಿದನು. ಕೆಲವರ ಪೃಷ್ಟಭಾಗವು ಕತ್ತರಿಸಿ ಹೋಗಿತ್ತು, ಕಾಲುಗಳನ್ನು ಕಳೆದುಕೊಂಡಿದ್ದರು, ತೋಳುಗಳನ್ನು

ಕಳೆದುಕೊಂಡಿದ್ದರು, ಕೆಲವರ ದೇಹದ ಅರ್ಧಭಾಗವೇ ಕತ್ತರಿಸಿ ಹೋಗಿತ್ತು. ಹೀಗೆ ಧನಂಜಯನು ಅವರನ್ನು ನಾನಾ ಅಂಗಾಂಗಗಳಿಂದ ವಿಹೀನರನ್ನಾಗಿ ಮಾಡಿದನು. ಅವನು ಗಂಧರ್ವನಗರಗಳ ಆಕಾರದಲ್ಲಿ ವಿಧಿವತ್ತಾಗಿ ಕಲ್ಪಿಸಿದ್ದ ರಥಗಳನ್ನು ಶರಗಳಿಂದ ಛಿನ್ನ-ಭಿನ್ನಗಳನ್ನಾಗಿ ಮಾಡಿ ಅವರನ್ನು ಅಶ್ವ-ರಥ-ಗಜಗಳಿಂದ ವಿಹೀನರನ್ನಾಗಿ ಮಾಡಿದನು.

ಅಲ್ಲಲ್ಲಿ ಧ್ವಜಗಳು ತುಂಡಾಗಿದ್ದ ರಥಗಳ ಗುಂಪುಗಳು ತಲೆಯನ್ನು ಕತ್ತರಿಸಿದ ತಾಳೆಯ ಮರಗಳಂತೆ ಕಾಣುತ್ತಿದ್ದವು. ಪತಾಕ-ಅಂಕುಶ-ಆಯುಧಗಳನ್ನು ಕಳೆದುಕೊಂಡ ಮಾವುತರನ್ನು ಕಳೆದುಕೊಂಡ ಆನೆಗಳು ಇಂದ್ರನ ವಜ್ರಾಯುಧದಿಂದ ಹೊಡೆಯಲ್ಪಟ್ಟ ಪರ್ವತಗಳು ವೃಕ್ಷಸಹಿತ ಕೆಳಗುರುಳಿರುವಂತೆ ಬಿದ್ದಿದ್ದವು. ಚಾಮರಗಳಿಂದಲೂ ಮಾಲೆಗಳಿಂದಲೂ, ಕವಚಗಳಿಂದಲೂ ಸವಾರರಿಂದಲೂ ಕೂಡಿದ್ದ ಅನೇಕ ಕುದುರೆಗಳು ಪಾರ್ಥನ ಬಾಣಗಳಿಂದ ಹತವಾಗಿ ಭೂಮಿಯ ಮೇಲೆ ಬಿದ್ದವು. ತುಂಡಾದ ಖಡ್ಗಗಳು ಮತ್ತು ನಖರುಗಳು, ತುಂಡಾಗಿದ್ದ ಕವಚಗಳು, ಋಷ್ಟಿಗಳು ಮತ್ತು ಶಕ್ತಿಗಳೊಂದಿಗೆ ಪದಾತಿಗಳು ಕವಚಗಳು ಹರಿದುಹೋಗಿ ಬಡಪಾಯಿಗಳಂತೆ ಸತ್ತು ಮಲಗಿದರು. ಅವರಲ್ಲಿ ಸತ್ತುಹೋಗಿದ್ದ, ಸಾಯುತ್ತಿದ್ದ, ಬಿದ್ದಿದ್ದ, ಬೀಳುತ್ತಿದ್ದ, ಭ್ರಮೆಯಿಂದ ತಿರುಗುತ್ತಿದ್ದ, ಕೂಗಿಕೊಳ್ಳುತ್ತಿದ್ದವರಿಂದ

ತುಂಬಿಹೋಗಿ ರಣಾಂಗಣವು ಬಹಳ ಭಯಂಕರವಾಗಿ ಕಾಣುತ್ತಿತ್ತು. ಮೇಲೆದ್ದಿದ್ದ ಅತಿದೊಡ್ಡ ಧೂಳು ರಕ್ತದ ಮಳೆಸುರಿದು ಶಾಂತವಾದವು. ನೂರಾರು ಮುಂಡಗಳ ರಾಶಿಯಿಂದ ತುಂಬಿಹೋಗಿದ್ದ ರಣಾಂಗಣವು ಪ್ರವೇಶಕ್ಕೂ ಬಹಳ ದುರ್ಗಮವಾಗಿತ್ತು. ಆಗ ಬೀಭತ್ಸುವಿನ ರಥವು ರೌದ್ರವೂ ಬೀಭತ್ಸವೂ ಆಗಿತ್ತು. ಕಾಲಾಂತ್ಯದಲ್ಲಿ ಪ್ರಾಣಿಗಳನ್ನು ಕೊಲ್ಲುವ ರುದ್ರನ ಕ್ರೀಡಾಂಗಣದಂತೆ ತೋರಿತು. ಪಾರ್ಥನಿಂದ ವಧಿಸಲ್ಪಟ್ಟು ವ್ಯಾಕುಲಗೊಂಡ ಅಶ್ವ-ರಥ-ಗಜಗಳು ಅವನ ಎದುರಾಗಿಯೇ ಯುದ್ಧಮಾಡಿ ಶಕ್ರನ ಅತಿಥಿಗಳಾಗಿ ಹೋಗಿ ಕ್ಷೀಣವಾಗುತ್ತಿದ್ದವು. ಆ ಮಹಾರಥರು ಹತರಾಗಿ ಬಿದ್ದಿದ್ದ ಭೂಮಿಯು ಎಲ್ಲ ಕಡೆ ಪ್ರೇತಗಳಿಂದ ತುಂಬಿಕೊಂಡಿದೆಯೋ ಎನ್ನುವಂತೆ ತೋರಿತು.

ಈ ರೀತಿ ಸವ್ಯಸಾಚಿಯು ಯುದ್ಧದಲ್ಲಿ ತಲ್ಲೀನನಾಗಿರಲು ದ್ರೋಣನು ವ್ಯೂಹದೊಂದಿಗೆ ಯುಧಿಷ್ಠಿರನನ್ನು ಆಕ್ರಮಣಿಸಿದನು. ಯುಧಿಷ್ಠಿರನನ್ನು ಬಂಧಿಸಲು ವ್ಯೂಹವನ್ನು ರಚಿಸಿಕೊಂಡು ಪ್ರಹಾರ ಮಾಡಲು ಆಗ ಮಹಾ ತುಮುಲಯುದ್ಧವು ನಡೆಯಿತು.

## ಕುರು-ಪಾಂಡವರ ಯುದ್ಧ

ಮಹಾರಥ ಭಾರದ್ವಾಜನು ಸುಯೋಧನನೊಡನೆ ಅನೇಕ ಮಾತುಗಳನ್ನಾಡಿ ರಾತ್ರಿಯನ್ನು ಕಳೆದನು. ಸಂಶಪ್ತಕಗಣಗಳೊಂದಿಗೆ

ಪಾರ್ಥನು ಯುದ್ಧಮಾಡಬೇಕೆಂದು ತಂತ್ರಹೂಡಿ, ಪಾರ್ಥನನ್ನು ರಣದಿಂದ ಸಂಶಪ್ತಕರ ವಧೆಗೆ ಕಳುಹಿಸಲಾಯಿತು. ಆಗ ದ್ರೋಣನು ಧರ್ಮರಾಜನನ್ನು ಸೆರೆಹಿಡಿಯುವ ಆಸೆಯಿಂದ ವ್ಯೂಹವನ್ನು ರಚಿಸಿಕೊಂಡು ಪಾಂಡವರ ಮಹಾಸೇನೆಯ ಮೇಲೆ ಆಕ್ರಮಣ ಮಾಡಿದನು. ಭಾರದ್ವಾಜನು ರಚಿಸಿದ ಗರುಡವ್ಯೂಹವನ್ನು ನೋಡಿ ಯುಧಿಷ್ಠಿರನು ಅದಕ್ಕೆ ಪ್ರತಿಯಾಗಿ ಮಂಡಲಾರ್ಧವ್ಯೂಹವನ್ನು ರಚಿಸಿದನು. ಗರುಡ ವ್ಯೂಹದ ಮುಖದಲ್ಲಿ ಮಹಾರಥ ಭಾರದ್ವಾಜನಿದ್ದನು. ಶಿರೋಭಾಗದಲ್ಲಿ ಸೋದರರು ಮತ್ತು ಅನುಯಾಯಿಗಳೊಂದಿಗೆ ರಾಜಾ ದುರ್ಯೋಧನನಿದ್ದನು. ಕೃತವರ್ಮ ಮತ್ತು ಗೌತಮರು ಕಣ್ಣುಗಳಾಗಿದ್ದರು. ಭೂತವರ್ಮ, ಕ್ಷೇಮಶರ್ಮ, ಕರಕರ್ಷ, ಕಲಿಂಗರು, ಸಿಂಹಲರು, ಪೂರ್ವದೇಶದವರು, ಅಭೀರರು, ದಶೇರಕರು, ಶಕ, ಯವನ, ಕಾಂಬೋಜರು, ಹಂಸಪದದವರು, ಶೂರಸೇನರು, ದರದರು, ಮದ್ರರು ಮತ್ತು ಕೇಕಯರು ನೂರಾರು ಸಹಸ್ರಾರು ಆನೆ-ಕುದುರೆ-ರಥ-ಪದಾತಿ ಸಂಕುಲಗಳೊಡನೆ ಕುತ್ತಿಗೆಯ ಭಾಗದಲ್ಲಿದ್ದರು. ಭೂರಿಶ್ರವ, ಶಲ, ಶಲ್ಯ, ಸೋಮದತ್ತ ಮತ್ತು ಬಾಹ್ಲಿಕರು ವೀರ ಅಕ್ಷೌಹಿಣಿಗಳಿಂದ ಆವೃತರಾಗಿ ಬಲಭಾಗವನ್ನು ಆಶ್ರಯಿಸಿದ್ದರು. ಅವಂತಿಯ ವಿಂದಾನುವಿಂದರು ಮತ್ತು ಕಾಂಬೋಜದ ಸುದಕ್ಷಿಣರು ದ್ರೋಣಪುತ್ರನ ನೇತೃತ್ವದಲ್ಲಿ

ಎಡಭಾಗವನ್ನು ಆಶ್ರಯಿಸಿ ನಿಂತಿದ್ದರು. ಹಿಂಬಾಗದಲ್ಲಿ ಕಲಿಂಗರು, ಅಂಬಷ್ಠರು, ಮಾಗಧರು, ಪೌಂಡ್ರರು, ಮದ್ರಕರು, ಶಕುನಿಯೊಡನೆ ಗಾಂಧಾರರು, ಪೂರ್ವದೇಶದವರು, ಮತ್ತು ಪರ್ವತದವರು ನೆಲೆಸಿದ್ದರು. ಪುಚ್ಛದ ಭಾಗದಲ್ಲಿ ವೈಕರ್ತನ ಕರ್ಣನು ನಾನಾ ಧ್ವಜಸಮೂಹಗಳಿಂದ ಕೂಡಿದ ಮಹಾಸೇನೆಯೊಂದಿಗೆ ಮಕ್ಕಳು ಮತ್ತು ಜ್ಞಾತಿಬಾಂಧವರೊಂದಿಗೆ ನಿಂತಿದ್ದನು. ಜಯದ್ರಥ, ಭೀಮರಥ, ಸಂಯಾತಿ, ಋಷಭ, ಜಯ, ಭೂಮಿಂಜಯ, ವೃಷಕ್ರಾಥ, ನೈಷಧರು ಮಹಾ ಬಲದಿಂದೊಡಗೂಡಿ ವ್ಯೂಹದ ವಕ್ಷಸ್ಥಳದ ಪ್ರದೇಶದಲ್ಲಿದ್ದರು. ರಥಾಶ್ವರಥಪದಾತಿಗಳಿಂದ ದ್ರೋಣನಿಂದ ರಚಿತವಾಗಿದ್ದ ಆ ವ್ಯೂಹವು ಭಿರುಗಾಳಿಗೆ ಸಿಲುಕಿ ಅಲ್ಲೋಲಕಲ್ಲೋಲವಾಗುತ್ತಿರುವ ಸಮುದ್ರದಂತೆ ಕಾಣುತ್ತಿತ್ತು. ವರ್ಷಾಕಾಲದಲ್ಲಿ ಮಿಂಚಿನಿಂದ ಕೂಡಿ ಗರ್ಜಿಸುವ ಮೋಡಗಳು ಎಲ್ಲ ದಿಕ್ಕುಗಳಿಂದಲೂ ಬಂದು ಸೇರುವಂತೆ ಆ ವ್ಯೂಹದ ಪಕ್ಷಪಕ್ಷಗಳಿಂದ ಯುದ್ಧೋತ್ಸಾಹೀ ಯೋಧರು ರಣರಂಗಕ್ಕೆ ಧುಮುಕುತಿದ್ದರು.

ಅದರ ಮಧ್ಯದಲ್ಲಿ ವಿಧಿವತ್ತಾಗಿ ಸಜ್ಜುಗೊಳಿಸಿದ ಆನೆಯ ಮೇಲೆ ಪ್ರಗ್ಜ್ಯೋತಿಷಾಧಿಪತಿ ಭಗದತ್ತನು ಉದಯಿಸುತ್ತಿರುವ ಸೂರ್ಯನಂತೆ ಶೋಭಿಸಿದನು. ರಾಜಾ ಭಗದತ್ತನ ತಲೆಯ ಮೇಲೆ ಸುವರ್ಣದ

ದಾರದಿಂದ ಕಟ್ಟಲ್ಪಟ್ಟ ಮಾಲೆಗಳಿಂದ ಸಮಲಂಕೃತವಾಗಿದ್ದ ಶ್ವೇತಛತ್ರವಿದ್ದಿತು. ಅದರಿಂದ ಕೃತ್ತಿಕಾನಕ್ಷತ್ರಯುಕ್ತವಾದ ಹುಣ್ಣಿಮೆಯ ಚಂದ್ರನಂತೆ ಅವನು ಪ್ರಕಾಶಿಸುತ್ತಿದ್ದನು. ಮದದಿಂದ ಕೊಬ್ಬಿಹೋಗಿದ್ದ ಕಾಡಿಗೆಯ ರಾಶಿಯಂತೆ ಕಾಣುತ್ತಿದ್ದ ಅವನ ಆನೆಯು ಮಹಾಮೇಘಗಳು ಸುರಿಸಿದ ಮಳೆಯಿಂದ ತೋಯ್ದ ಮಹಾ ಪರ್ವತದಂತೆ ಹೊಳೆಯುತ್ತಿತ್ತು. ದೇವಗಣಗಳಿಂದ ಶಕ್ರನು ಹೇಗೋ ಹಾಗೆ ನಾನಾ ನೃಪತಿ ವೀರರಿಂದ, ವಿವಿಧ ಆಯುಧ ಭೂಷಣಗಳಿಂದ ಕೂಡಿದ ಪರ್ವತೀಯರೊಂದಿಗೆ ಆವೃತನಾಗಿದ್ದನು.

ಶತ್ರುಗಳಿಗೆ ಅಜೇಯವಾದ ಆ ಅತಿಮಾನುಷವಾದ ವ್ಯೂಹವನ್ನು ನೋಡಿ ಯುಧಿಷ್ಠಿರನು ಪಾರ್ಥನಿಗೆ ಹೇಳಿದನು:

> "ಇಂದು ನಾನು ಬ್ರಾಹ್ಮಣನ ವಶದಲ್ಲಿ ಬಾರದಹಾಗೆ ಯುದ್ಧನೀತಿಯನ್ನು ರೂಪಿಸು!"

ಧೃಷ್ಟದ್ಯುಮ್ನನು ಹೇಳಿದನು:

> "ಸುವ್ರತ! ದ್ರೋಣನು ಪ್ರಯತ್ನಿಸಿದರೂ ನೀನು ಅವನ ವಶನಾಗುವುದಿಲ್ಲ. ಇಂದು ನಾನು ದ್ರೋಣನನ್ನು, ಅವನ ಅನುಯಾಯಿಗಳೊಂದಿಗೆ ತಡೆಯುತ್ತೇನೆ. ನಾನು

> ಜೀವಿಸಿರುವಾಗ ನೀನು ಉದ್ವೇಗಗೊಳ್ಳಬಾರದು. ರಣದಲ್ಲಿ ಎಂದೂ ದ್ರೋಣನು ನನ್ನನ್ನು ಜಯಿಸಲು ಶಕ್ಯನಾಗುವುದಿಲ್ಲ.”

ಹೀಗೆ ಹೇಳಿ ದ್ರುಪದನ ಮಗನು ಸ್ವಯಂ ತಾನೇ ಬಾಣಗಳನ್ನು ಎರಚಿ ದ್ರೋಣನನ್ನು ಆಕ್ರಮಣಿಸಿದನು. ಅನಿಷ್ಟದರ್ಶನ ಧೃಷ್ಟದ್ಯುಮ್ನನು ಎದುರಾದುದನ್ನು ನೋಡಿ ಒಂದು ಕ್ಷಣ ದ್ರೋಣನು ಅಸಂತುಷ್ಟನಾದನು. ಅದನ್ನು ನೋಡಿ ಧೃತರಾಷ್ಟ್ರನ ಮಗ ದುರ್ಮುಖನು ದ್ರೋಣನಿಗೆ ಪ್ರಿಯವಾದುದನ್ನು ಮಾಡಬಯಸಿ ಧೃಷ್ಟದ್ಯುಮ್ನನನ್ನು ತಡೆದನು. ಅವನು ಪ್ರಹರಿಸಲು ಪಾರ್ಷತ ಮತ್ತು ದುರ್ಮುಖರ ನಡುವೆ ತುಮುಲ ಯುದ್ಧವು ನಡೆಯಿತು. ಪಾರ್ಷತನು ಕ್ಷಿಪ್ರವಾಗಿ ಶರಜಾಲದಿಂದ ದುರ್ಮುಖನನ್ನು ಮುಚ್ಚಿ ಭಾರದ್ವಾಜನನ್ನು ಮಹಾ ಶರಗಳ ಮಹಾಜಾಲದಿಂದ ತಡೆದನು. ದ್ರೋಣನನ್ನು ಪ್ರಹರಿಸಿದುದನ್ನು ನೋಡಿ ದುರ್ಮುಖನು ನಾನಾ ತರಹದ ಶರಸಮೂಹಗಳಿಂದ ಪಾರ್ಷತನನ್ನು ಸಂಮೋಹಗೊಳಿಸಿದನು.

ಆ ಪಾಂಚಾಲ್ಯ-ಕುರುಮುಖ್ಯರಿಬ್ಬರೂ ಪರಸ್ಪರರಲ್ಲಿ ಯುದ್ಧಮಾಡುತ್ತಿರಲು ದ್ರೋಣನು ಯುಧಿಷ್ಠಿರನ ಸೇನೆಯನ್ನು ಅನೇಕ ಶರಗಳಿಂದ ಮರ್ದಿಸಿದನು. ಗಾಳಿಯಿಂದ ಹೇಗೆ ಮೋಡಗಳು ಎಲ್ಲಕಡೆ ಚದುರಿ ಹೋಗುವವೋ ಹಾಗೆ ಪಾರ್ಥನ ಸೇನೆಗಳು ಭಿನ್ನ-ಭಿನ್ನವಾಗಿ

ಎಲ್ಲೆಲ್ಲಿಯೋ ಓಡಿಹೋಯಿತು. ಮುಹೂರ್ತಕಾಲ ಆ ಯುದ್ಧವು ನೋಡಲು ಮಧುರವಾಗಿತ್ತು. ಅನಂತರ ಉನ್ಮತ್ತರಾದವರಂತೆ ನಿರ್ಮರ್ಯಾದೆಯಿಂದ ವರ್ತಿಸಲು ಪ್ರಾರಂಭಿಸಿದರು. ತಮ್ಮವರನ್ನು ಮತ್ತು ಶತ್ರುಗಳನ್ನು ಪರಸ್ಪರ ಗುರಿತಿಸಲಾರದಾದರು. ಅನುಮಾನದಿಂದ ಸಂಜ್ಞೆಗಳನ್ನು ನೋಡಿ ಯುದ್ಧ ಮಾಡುತ್ತಿದ್ದರು. ಅವರ ಚೂಡಾಮಣಿಗಳ ಮೇಲೆ, ಸರಗಳ ಮೇಲೆ ಇತರ ಭೂಷಣಗಳ ಮೇಲೆ ಮತ್ತು ಕವಚಗಳ ಮೇಲೆ ಸೂರ್ಯನ ಕಿರಣಗಳು ಬಿದ್ದು ಪ್ರಕಾಶಿಸುತ್ತಿದ್ದವು. ಹಾರಾಡುತ್ತಿದ್ದ ಪತಾಕೆಗಳು, ರಥ, ಆನೆ, ಕುದುರೆಗಳು ಆಕಾಶದಲ್ಲಿ ತೇಲುವ ಮೋಡಗಳಂತೆ ಮತ್ತು ಬೆಳ್ಳಕ್ಕಿಗಳಂತೆ ಕಂಡವು. ನರರನ್ನು ನರರು ಸಂಹರಿಸಿದರು. ಕುದುರೆಗಳು ಕುದುರೆಗಳನ್ನು ಕೊಂದವು. ರಥಿಗಳನ್ನು ರಥಿಗಳು ಮತ್ತು ಆನೆಗಳನ್ನು ಆನೆಗಳು ಕೊಂದವು. ಕ್ಷಣದಲ್ಲಿಯೇ ಹಾರಾಡುತ್ತಿರುವ ಪತಾಕೆಗಳ, ಆನೆಗಳೊಂದಿಗೆ ಆನೆಗಳ ಘೋರ ತುಮುಲ ಸಂಗ್ರಾಮವು ನಡೆಯಿತು. ಆನೆಗಳ ಗಾಯಗೊಂಡ ದೇಹಗಳ, ಒಬ್ಬರು ಇನ್ನೊಬ್ಬರನ್ನು ಕೂಗಿ ಕರೆಯುವ ಯುದ್ಧದಲ್ಲಿ ದಂತ ಸಂಘಾತ ಸಂಘರ್ಷಗಳಿಂದ ಹೊಗೆಯೊಂದಿಗೆ ಅಗ್ನಿಯು ಹುಟ್ಟಿಕೊಂಡಿತು. ತುಂಡಾದ ಪತಾಕೆಗಳಿಂದ ಕೂಡಿದ, ದಂತಗಳಲ್ಲಿ ಅಗ್ನಿಯು ಉರಿಯುತ್ತಿರಲು ಆ ಆನೆಗಳು ಆಕಾಶದಲ್ಲಿ ಮಿಂಚಿನಿಂದ ಕೂಡಿದ ಮೋಡಗಳಂತೆ ಕಂಡವು.

ಹರಡಿಕೊಂಡು ಬಿದ್ದಿದ್ದ ಮತ್ತು ಕೂಗುತ್ತಿದ್ದ ಆನೆಗಳಿಂದ ರಣಭೂಮಿಯು ಶರದೃತುವಿನಲ್ಲಿ ಚದುರಿದ ಮೋಡಗಳಿಂದ ಕೂಡಿದ ಆಕಾಶದಂತೆ ತೋರಿತು ಬಾಣ-ತೋಮರ-ಋಷ್ಟಿಗಳಿಂದ ವಧಿಸಲ್ಪಡುತ್ತಿದ್ದ ಆ ಆನೆಗಳ ಕೂಗು ಮಳೆಗಾಲದಲ್ಲಿ ಮೋಡಗಳ ಗುಡುಗಿನಂತೆ ಕೇಳುತ್ತಿದ್ದವು.

ಕೆಲವು ಆನೆಗಳು ತೋಮರಗಳಿಂದ ಇನ್ನು ಕೆಲವು ಬಾಣಗಳಿಂದ ಪೆಟ್ಟು ತಿಂದು ಸರ್ವಭೂತಗಳಿಗೂ ಭಯವನ್ನುಂಟುಮಾಡುವಂತೆ ಕೂಗುತ್ತಾ ರಣದಿಂದ ಬೇರೆಕಡೆ ಓಡಿಹೋಗುತ್ತಿದ್ದವು. ಕೆಲವು ಆನೆಗಳು ಅಲ್ಲಿ ಇತರ ಆನೆಗಳ ದಂತಗಳಿಂದ ಪೆಟ್ಟುತಿಂದು ಆರ್ತಸ್ವರದಲ್ಲಿ ಪ್ರಳಯಕಾಲದ ಘೋರವಾಗಿ ಉರುಳುತ್ತಿರುವ ಮೋಡಗಳಂತೆ ಕೂಗಿಕೊಳ್ಳುತ್ತಿದ್ದವು. ಅಂಕುಶಗಳಿಂದ ತಿವಿಯಲ್ಪಟ್ಟು ಪ್ರೇರಿತರಾಗಿ ಉನ್ಮತ್ಥರಾಗಿ ಪುನಃ ಓಡಿ ಬರುತ್ತಿದ್ದವು. ಮಹಾಕಾಯದ ಆನೆಗಳು ಮಹಾಕಾಯಗಳಿಂದ ಮತ್ತು ಬಾಣ-ತೋಮರಗಳಿಂದ ಹೊಡೆಯಲ್ಪಟ್ಟು ಅಂಕುಶಗಳ ಪ್ರಹರಣದಿಂದ ಮುಕ್ತರಾಗಿ ಭೂಮಿಯ ಮೇಲೆ ಬಿದ್ದವು. ಮಾವುತರನ್ನು ಕಳೆದುಕೊಂಡ ಆನೆಗಳು ಕಿರಚುತ್ತಾ ಅಲ್ಲಲ್ಲಿ ಚದುರಿದ ಮೋಡಗಳಂತೆ ಓಡುತ್ತಿರಲು ಪರಸ್ಪರರನ್ನು ಡಿಕ್ಕಿ ಹೊಡೆದು ಉರುಳಿಬಿದ್ದವು. ಕೆಲವು ಆನೆಗಳು ಸತ್ತವರನ್ನು ಹೊತ್ತು,

ಪರಮಾಯುಧಗಳನ್ನು ಎಳೆಯುತ್ತಾ ಒಂಟಿಯಾಗಿ ದಿಕ್ಕಾಪಾಲಾಗಿ ಓಡಾಡುತ್ತಿದ್ದವು. ಕೆಲವು ಆನೆಗಳು ತೋಮರ-ಋಷ್ಟಿ-ಪರಶಾಯುಧಗಳಿಂದ ಹೊಡೆಯುತ್ತಾ ಅಥವಾ ಹೊಡೆಯಲ್ಪಟ್ಟು ಆರ್ತಸ್ವರದಲ್ಲಿ ಕೂಗುತ್ತಾ ನೆಲಕ್ಕುರುಳಿದವು. ಆ ಪರ್ವತಗಳಂತಹ ದೇಹಗಳನ್ನುಳ್ಳ ಆನೆಗಳು ಎಲ್ಲ ಕಡೆ ಹೊಡೆದು ದೊಪ್ಪೆಂದು ಬೀಳುತ್ತಿರಲು ಭೂಮಿಯು ಕಂಪಿಸಿ ಕೂಗಿತು.

ಎಲ್ಲೆಡೆಯೂ ಸಜ್ಜಾಗಿದ್ದ, ಮಾವುತರಿಂದ ಕೂಡಿದ್ದ, ಪತಾಕೆಗಳನ್ನುಳ್ಳ ಆನೆಗಳಿಂದ ಕೂಡಿದ ಭೂಮಿಯು ಚೆಲ್ಲಿಹೋದ ಪರ್ವತಗಳಂತೆ ಶೋಭಿಸಿತು. ಮಹಾಕಾಯದ ಆನೆಗಳ ಆರೋಹಿಗಳು ರಣದಲ್ಲಿ ರಥಿಗಳ ಭಲ್ಲ-ಅಂಕುಶ-ತೋಮರಗಳಿಂದ ಗಾಯಗೊಂಡು ಮತ್ತು ಹೃದಯಗಳು ಒಡೆದು ಬಿದ್ದಿದ್ದರು. ಅನ್ಯ ಗಜಗಳು ನಾರಾಚಗಳಿಂದ ಹೊಡೆಯಲ್ಪಟ್ಟು ಕ್ರೌಂಚಗಳಂತೆ ಕಿರಚುತ್ತಾ ಶತ್ರುಗಳನ್ನೂ ತಮ್ಮವರನ್ನೂ ತುಳಿಯುತ್ತಾ ದಿಕ್ಕುದಿಕ್ಕುಗಳಲ್ಲಿ ಓಡಿ ಹೋಗುತ್ತಿದ್ದವು. ಗಜ-ಅಶ್ವ-ರಥಗಳ ಗುಂಪುಗಳಿಂದ ಮತ್ತು ಶರೀರಗಳ ರಾಶಿಗಳಿಂದ ಹಾಗೂ ಮಾಂಸ-ರಕ್ತ-ಕರ್ದಮಗಳಿಂದ ರಣಭೂಮಿಯು ತುಂಬಿಹೋಯಿತು. ಆನೆಗಳ ದಂತಗಳ ಅಗ್ರಭಾಗದಿಂದ ಸೀಳಿಹೋದ, ಎತ್ತಿ ಹಾಕಲ್ಪಟ್ಟ ಚಕ್ರವಿದ್ದ ಮತ್ತು ಚಕ್ರವಿಲ್ಲದ ರಥಗಳಲ್ಲಿಯೇ ಇದ್ದ

ಮಹಾರಥರು, ರಥಿಗಳಿಲ್ಲದ ರಥಗಳೂ, ಮನುಷ್ಯರು ಏರಿರದ ಕುದುರೆಗಳು, ಆರೋಹಿಗಳನ್ನು ಕಳೆದುಕೊಂಡ ಆನೆಗಳು ಶರಗಳಿಂದ ಪೀಡಿತವಾಗಿ ದಿಕ್ಕಾಪಾಲಾಗಿ ಹೋದವು. ಅಲ್ಲಿ ಮಕ್ಕಳು ತಂದೆಯನ್ನೂ, ತಂದೆಯು ಮಗನನ್ನೂ ಕೊಂದರು. ಹೀಗೆ ಆ ತುಮುಲ ಯುದ್ಧದಲ್ಲಿ ಏನೂ ತಿಳಿಯುತ್ತಿರಲಿಲ್ಲ. ರಕ್ತಮಾಂಸಗಳ ಕೆಸರಿನಲ್ಲಿ ಹುಗಿದು ಹೋಗಿದ್ದ ನರರು ಕಾಡ್ಗಿಚ್ಚಿಗೆ ಸಿಲುಕಿ ಉರಿಯುತ್ತಿದ್ದ ಮಹಾವೃಕ್ಷಗಳಂತೆ ತೋರುತ್ತಿದ್ದರು. ವಸ್ತ್ರಗಳು, ಕವಚಗಳು, ಚತ್ರ-ಪತಾಕಗಳು ರಕ್ತದಿಂದ ತೋಯ್ದುಹೋಗಿರಲು ಎಲ್ಲವೂ ಕೆಂಪಾಗಿ ಕಾಣುತ್ತಿತ್ತು. ಎಲ್ಲಕಡೆ ಬಿದ್ದಿರುವ ಕುದುರೆಗಳ ರಾಶಿ, ರಥಗಳ ರಾಶಿ, ಮತ್ತು ಪದಾತಿಗಳ ರಾಶಿಗಳು ಓಡುತ್ತಿರುವ ರಥಚಕ್ರಗಳಿಂದ ಪುನಃ ಪುನಃ ತುಂಡಾಗುತ್ತಿದ್ದವು.

ಆನೆಗಳೇ ಪ್ರವಾಹವಾಗಿದ್ದ, ಪದಾತಿಗಳ ಶರೀರಗಳೇ ತೇಲಿಹೋಗುತ್ತಿರುವ ಹುಲ್ಲುಕಡ್ಡಿಗಳಂತಿರುವ, ಮತ್ತು ರಥಗಳ ರಾಶಿಗಳೇ ಮಡುವನ್ನಾಗುಳ್ಳ ಆ ಸೈನ್ಯಸಾಗರವು ಘೋರರೂಪವನ್ನು ತಾಳಿತು. ವಾಹನಗಳೆಂಬ ಮಹಾನೌಕೆಗಳನ್ನು ಹೊಂದಿದ್ದ ಜಯಧನವನ್ನು ಬಯಸಿದ್ದ ಯೋಧರು ಮುಳುಗಿಹೋಗದೇ ದಾಟಿ ಶತ್ರುಗಳನ್ನು ಮೋಡಿಮಾಡುತ್ತಿದ್ದರು. ಶರವರ್ಷಗಳಿಂದ ತಮ್ಮ

ಗೆಲುವಿನ ಲಕ್ಷಣಗಳು ಮುಚ್ಚಿಹೋಗಲು ಯೋಧರು ತಮ್ಮ ಲಾಂಛನಗಳನ್ನು ಕಳೆದುಕೊಂಡರೂ ದುಃಖಿತರಾಗಲಿಲ್ಲ. ಹಾಗೆ ಭಯಂಕರವೂ ಘೋರರೂಪವೂ ಆದ ಯುದ್ಧವು ನಡೆಯುತ್ತಿರಲು ದ್ರೋಣನು ಶತ್ರುಗಳನ್ನು ಮೋಡಿಗೊಳಿಸಿ ಯುಧಿಷ್ಠಿರನನ್ನು ಎದುರಿಸಿದನು.

## ದ್ರೋಣನ ಯುದ್ಧ

ಆಗ ಯುಧಿಷ್ಠಿರನು ಹತ್ತಿರ ಬರುತ್ತಿರುವ ದ್ರೋಣನನ್ನು ನೋಡಿ ಭಯಪಡದೇ ಮಹಾ ಶರವರ್ಷದಿಂದ ಬರಮಾಡಿಕೊಂಡನು. ಮಹಾಸಿಂಹವನ್ನು ಕೊಲ್ಲಲು ಬಯಸಿದ ಆನೆಗಳ ಹಿಂಡಿನಲ್ಲಿ ಹೇಗೋ ಹಾಗೆ ಯುಧಿಷ್ಠಿರನ ಸೇನೆಯಲ್ಲಿ ಹಾಲಾಹಲ ಶಬ್ಧವುಂಟಾಯಿತು. ದ್ರೋಣನನ್ನು ನೋಡಿ ಸತ್ಯಜಿತುವು ಯುಧಿಷ್ಠಿರನನ್ನು ರಕ್ಷಿಸಲು ಆಚಾರ್ಯನ ಮೇಲೆ ಎರಗಿದನು. ಆಗ ಆಚಾರ್ಯ-ಪಾಂಚಾಲ್ಯರಿಬ್ಬರೂ ಪರಸ್ಪರರೊಡನೆ ಇಂದ್ರ-ವೈರೋಚನರಂತೆ ಸೈನ್ಯವನ್ನು ಕ್ಷೋಭೆಗೊಳಿಸುತ್ತಾ ಯುದ್ಧ ಮಾಡಿದರು. ಆಚಾರ್ಯನು ಶೀಘ್ರವಾಗಿ ಹತ್ತು ತೀಕ್ಷ್ಣ ಮರ್ಮಭೇದಿಗಳಿಂದ ಸತ್ಯಜಿತುವಿನ ಬಾಣವನ್ನು ಹೂಡಿದ್ದ ಧನುಸ್ಸನ್ನು ತುಂಡರಿಸಿದನು. ಆ ಪ್ರತಾಪವಾನನು ಅತಿಶೀಘ್ರದಲ್ಲಿ ಇನ್ನೊಂದು ಧನುಸ್ಸನ್ನು ಎತ್ತಿಕೊಂಡು

ಇಪ್ಪತ್ತು ಕಂಕಪತ್ರಗಳಿಂದ ದ್ರೋಣನನ್ನು ಹೊಡೆದನು. ಸತ್ಯಜಿತನು ದ್ರೋಣನೊಡನೆ ಯುದ್ಧದಲ್ಲಿ ತೊಡಗಿರುವುದನ್ನು ತಿಳಿದು ಪಾಂಚಾಲ್ಯ ವೃಕನು ನೂರು ತೀಕ್ಷ್ಣ ಶರಗಳಿಂದ ದ್ರೋಣನನ್ನು ಹೊಡೆದನು. ಮಹಾರಥ ದ್ರೋಣನನ್ನು ಹಾಗೆ ಎದುರಿಸಿದುದನ್ನು ನೋಡಿ ಪಾಂಡವರು ಹರ್ಷದಿಂದ ಉತ್ತರೀಯಗಳನ್ನು ಮೇಲೆ ಹಾರಿಸಿ ಕೂಗಿದರು. ಬಲವಾನ್ ವೃಕನಾದರೋ ಪರಮಕ್ರುದ್ಧನಾಗಿ ದ್ರೋಣನ ಎದೆಗೆ ಅರವತ್ತು ಬಾಣಗಳಿಂದ ಹೊಡೆದನು. ಅದು ಅದ್ಭುತವಾಗಿತ್ತು.

ಆಗ ಶರವರ್ಷಗಳಿಂದ ಮುಚ್ಚಿಹೋಗಿದ್ದ ದ್ರೋಣನು ಕ್ರೋಧದಿಂದ ಎಚ್ಚೆತ್ತು ಕಣ್ಣುಗಳನ್ನು ತೆರೆದನು. ಆಗ ದ್ರೋಣನು ಸತ್ಯಜಿತು ಮತ್ತು ವೃಕರ ಧನುಸ್ಸುಗಳನ್ನು ತುಂಡರಿಸಿ ಆರು ಬಾಣಗಳಿಂದ ಸೂತ, ಕುದುರೆಗಳೊಂದಿಗೆ ವೃಕನನ್ನು ವಧಿಸಿದನು. ಆಗ ಸತ್ಯಜಿತುವು ಅತಿವೇಗದಲ್ಲಿ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ವಿಶಿಖಗಳಿಂದ ಕುದುರೆ, ಸೂತ, ಧ್ವಜಗಳೊಂದಿಗೆ ದ್ರೋಣನನ್ನು ಹೊಡೆದನು. ಪಾಂಚಾಲ್ಯನ ಆ ಪೆಟ್ಟನ್ನು ದ್ರೋಣನು ಸಹಿಸಿಕೊಳ್ಳದಾದನು. ಅವನ ವಿನಾಶಕ್ಕಾಗಿ ಒಂದೇಸಮನೆ ಬಾಣಗಳನ್ನು ಪ್ರಯೋಗಿಸತೊಡಗಿದನು. ದ್ರೋಣನು ಸಹಸ್ರಾರು ಶರಗಳನ್ನು ಸುರಿಸಿ ಅವನ ಕುದುರೆಗಳನ್ನೂ, ಧ್ವಜವನ್ನೂ, ಎರಡೂ ಧನುರ್ಮುಷ್ಟಿಗಳನ್ನೂ, ಪಾರ್ಷ್ಣಿಸಾರಥಿಗಳನ್ನೂ

ಮುಚ್ಚಿದನು. ಹೀಗೆ ಪುನಃ ಪುನಃ ತನ್ನ ಬಿಲ್ಲುಗಳನ್ನು ಕತ್ತರಿಸುತ್ತಿದ್ದರೂ ಪರಮಾಸ್ತ್ರಜ್ಞನಾಗಿದ್ದ ಪಾಂಚಾಲ್ಯನು ಶೋಣಾಶ್ವನನ್ನು ಎದುರಿಸಿ ಯುದ್ಧಮಾಡಿದನು. ಆ ಮಹಾಹವದಲ್ಲಿ ಉತ್ತೇಜಿತನಾಗಿ ಹೋರಾಡುತ್ತಿರುವ ಸತ್ಯಜಿತುವನ್ನು ನೋಡಿದ ದ್ರೋಣನು ಅರ್ಧಚಂದ್ರದಿಂದ ಅವನ ಶಿರವನ್ನು ತುಂಡರಿಸಿದನು. ಆ ಇಬ್ಬರು ಪಾಂಚಾಲ ಮಹಾಕಾಯರು ರಥರ್ಷಭನಿಂದ ಹತರಾಗಲು ಭೀತನಾದ ಯುಧಿಷ್ಠಿರನು ವೇಗವುಳ್ಳ ಕುದುರೆಗಳನ್ನೇರಿ ಪಲಾಯನಗೈದನು.

ಆಗ ಪಾಂಚಾಲರು, ಕೇಕಯರು, ಮತ್ಸ್ಯರು, ಚೇದಿ-ಕರೂಷರು, ಕೋಸಲರು ಯುಧಿಷ್ಠಿರನನ್ನು ರಕ್ಷಿಸಲು ಬಯಸಿ ಸಂತೋಷದಿಂದ ದ್ರೋಣನ ಮೇಲೆ ಎರಗಿದರು. ಆಗ ಶತ್ರುಸೇನೆಗಳನ್ನು ಮರ್ದಿಸುವ ಆಚಾರ್ಯನು ಯುಧಿಷ್ಠಿರನನ್ನು ಹಿಡಿಯಲು ಬಯಸಿ ಆ ಸೇನೆಗಳನ್ನು ಬೆಂಕಿಯು ಹತ್ತಿಯ ರಾಶಿಯನ್ನು ಹೇಗೋ ಹಾಗೆ ಸುಟ್ಟುಬಿಟ್ಟನು. ಅನೇಕ ಬಾರಿ ಆ ಸೇನೆಗಳನ್ನು ದಹಿಸುತ್ತಿದ್ದ ದ್ರೋಣನನ್ನು ಮತ್ಸ್ಯರಾಜನ ತಮ್ಮ ಶತಾನೀಕನು ಎದುರಿಸಿದನು. ಸೂರ್ಯನ ರಶ್ಮಿಗಳಂತಿರುವ ಕಮ್ಮಾರನಿಂದ ಪರಿಷ್ಕೃತಗೊಂಡ ಅರು ಬಾಣಗಳಿಂದ ದ್ರೋಣನನ್ನು, ಅವನ ಸಾರಥಿ ಮತ್ತು ಕುದುರೆಗಳೊಂದಿಗೆ ಚೆನ್ನಾಗಿ ಹೊಡೆದನು. ದ್ರೋಣನು ಕ್ಷುರದಿಂದ ಬೇಗನೇ ಅವನ ಶಿರವನ್ನು ಕುಂಡಲಗಳೊಂದಿಗೆ

ಕಾಯದಿಂದ ಬೇರ್ಪಡಿಸಿ ಜೋರಾಗಿ ಗರ್ಜಿಸಲು ಮತ್ಸ್ಯರು ಪಲಾಯನಗೈದರು.

ಭಾರದ್ವಾಜನು ಪುನಃ ಪುನಃ ಮತ್ಸ್ಯರನ್ನು ಚೇದಿಗಳನ್ನು, ಕಾರೂಷರನ್ನು, ಕೇಕಯರನ್ನೂ, ಸೃಂಜಯರನ್ನೂ ಮತ್ತು ಪಾಂಡವರನ್ನೂ ಸೋಲಿಸಿದನು. ಕ್ರೋಧಿತಗೊಂಡ ಅಗ್ನಿಯು ವನವನ್ನು ಹೇಗೋ ಹಾಗೆ ಸೇನೆಗಳನ್ನು ಸುಡುತ್ತಿದ್ದ ಆ ಕ್ರುದ್ಧ ರುಕ್ಮರಥನನ್ನು ನೋಡಿ ಸೃಂಜಯರು ನಡುಗಿದರು. ಧನುಸ್ಸನ್ನು ಎಳೆದು ಶತ್ರುಗಳನ್ನು ಸಂಹರಿಸುತ್ತಿದ್ದ ಮತ್ತು ಉತ್ತಮವಾಗಿ ಹೋರಾಡುತ್ತಿದ್ದ ಅವನ ಟೇಂಕಾರವು ಎಲ್ಲ ದಿಕ್ಕುಗಳಲ್ಲಿಯೂ ಕೇಳಿಬರುತ್ತಿತ್ತು. ಕೈಚಳಕವಿದ್ದ ಅವನು ಪ್ರಯೋಗಿಸಿದ ರೌದ್ರ ಸಾಯಕಗಳು ಆನೆಗಳನ್ನೂ, ಕುದುರೆಗಳನ್ನೂ, ಪದಾತಿಗಳನ್ನೂ, ರಥಿಗಳನ್ನೂ, ಗಜಸಾದಿನರನ್ನೂ ಸಂಹರಿಸಿದವು. ಬೇಸಗೆಯಲ್ಲಿ ಗಾಳಿ-ಗುಡುಗಿನೊಂದಿಗೆ ಮೋಡಗಳು ಆನೆಗಲ್ಲಿನ ಮಳೆಗರೆಯುವಂತೆ ಬಾಣಗಳ ಮಳೆಸುರಿಸಿ ಶತ್ರುಗಳಲ್ಲಿ ಭಯವನ್ನುಂಟುಮಾಡಿದನು. ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸುತ್ತಾ ಸೇನೆಗಳನ್ನು ಕ್ಷೋಭೆಗೊಳಿಸುತ್ತಾ ಆ ಬಲಶಾಲೀ ಶೂರ ಮಹೇಷ್ವಾಸನು ಶತ್ರುಗಳಲ್ಲಿ ಭಯವನ್ನುಂಟುಮಾಡಿದನು. ಆ ಅಮಿತತೇಜಸ್ವಿ ದ್ರೋಣನ ಬಂಗಾರ ಪರಿಷ್ಕೃತ ಚಾಪದಿಂದ ಮೋಡಗಳಿಂದ ಮಿಂಚು ಮೂಡುವಂತೆ ಎಲ್ಲ

ದಿಕ್ಕುಗಳಲ್ಲಿಯೂ ಮಿಂಚುಗಳು ಹೊರಬರುತ್ತಿರುವುದು ಕಾಣಿಸುತ್ತಿತ್ತು. ಸುರಾಸುರನಮಸ್ಕೃತ ವಿಷ್ಣುವು ದೈತ್ಯಗಣದೊಂದಿಗೆ ಹೇಗೋ ಹಾಗೆ ದ್ರೋಣನು ಪಾಂಡವರ ಸೇನೆಯೊಂದಿಗೆ ಮಹಾ ಕದನವನ್ನಾಡಿದನು.

ಆ ಶೂರ, ಸತ್ಯವಾದಿ, ಪ್ರಾಜ್ಞ, ಬಲವಾನ್, ಸತ್ಯವಿಕ್ರಮ, ಮಹಾನುಭಾವ ದ್ರೋಣನು ಕಾಲಾಂತದಂತೆ ರೌದ್ರವಾದ, ಹೇಡಿಗಳಿಗೆ ಭಯವನ್ನುಂಟುಮಾಡುವ, ಕವಚಗಳೇ ಅಲೆಗಳಾಗಿರುವ, ಧ್ವಜಗಳೇ ಮಡುವುಗಳಾಗಿರುವ, ಮನುಷ್ಯರ ಶರೀರಗಳ ರಾಶಿಗಳನ್ನೇ ಕೊಂಡೊಯ್ಯುತ್ತಿದ್ದ, ಆನೆ-ಕುದುರೆಗಳೇ ಮೊಸಳೆಗಳಾಗಿದ್ದ, ಖಡ್ಗಗಳೇ ಮೀನುಗಳಂತಿರುವ, ದುರಾಸದ, ವೀರಯೋಧರ ಎಲುಬುಗಳೇ ಕಲ್ಲಿನ ಹರಳುಗಳಂತಿರುವ, ರೌದ್ರವಾದ, ಭೇರೀ-ಮೃದಂಗಗಳೇ ಆಮೆಗಳಾಗಿರುವ, ಕವಚಗಳೇ ಮಹಾಪ್ರವಾಹದಂತಿರುವ, ಘೋರ ತಲೆಕೂದಲುಗಳೇ ಪಾಚಿಹುಲ್ಲುಗಳಾಗಿರುವ, ಬಾಣಗಳೇ ಅಲೆಗಳಾಗಿರುವ, ಬಿಲ್ಲುಗಳೇ ಪ್ರವಾಹವಾಗಿರುವ, ಬಾಹುಗಳೇ ಸರ್ಪಸಂಕುಲಗಳಂತಿರುವ, ರಣಭೂಮಿಯಲ್ಲಿ ಹರಿಯುವ ಕುರು-ಸೃಂಜಯರ ವಾಹಿನಿಯನ್ನು, ಮನುಷ್ಯರ ತಲೆಬುರುಡೆಗಳೇ ಕಲ್ಲುಬಂಡೆಗಳಾಗಿದ್ದ, ಶಕ್ತಿಗಳೇ ಮೀನಾಗಿದ್ದ, ಗದೆಗಳೇ ತೆಪ್ಪಗಳಾಗಿದ್ದ, ತಲೆಯ ಮುಂಡಾಸುಗಳು ಮತ್ತು ಉಟ್ಟ ವಸ್ತ್ರಗಳೇ ನೊರೆಗಳಾಗಿರುವ,

ಹೊರಬಿದ್ದ ಕರುಳುಗಳೇ ಸರೀಸೃಪಗಳಾಗಿದ್ದ, ವೀರರನ್ನು ಅಪಹರಿಸಿಕೊಂಡು ಹೋಗುತ್ತಿರುವ, ಉಗ್ರ ಮಾಂಸ-ರಕ್ತಗಳೇ ಕೆಸರಾಗಿದ್ದ, ಆನೆಗಳೇ ಮೊಸಳೆಗಳಾಗಿದ್ದ, ಧ್ವಜಗಳೇ ವೃಕ್ಷಗಳಾಗಿದ್ದ, ಕ್ಷತ್ರಿಯರನ್ನು ಮುಳುಗಿಸುತ್ತಿದ್ದ, ಕ್ರೂರ ಶರೀರಗಳೇ ಒಡ್ಡಾಗಿದ್ದ, ಅಶ್ವಾರೋಹಿ ಮತ್ತು ಮಾವುತರೇ ತಿಮಿಂಗಿಲಗಳಾಗಿದ್ದ, ಮಾಂಸಾಹಾರೀ ಪ್ರಾಣಿಗಳ ಗುಂಪುಗಳಿಂದ ಕೂಡಿದ್ದ, ಮಹಾರೌದ್ರರಾದ ರಾಕ್ಷಸರು ಮತ್ತು ಪಿಶಾಚಿಗಳನ್ನು ಎಲ್ಲಕಡೆ ಹೊಂದಿದ್ದ, ಯಮನಲ್ಲಿಗೆ ಹರಿಯುತ್ತಿದ್ದ ನದಿಯನ್ನು ಅಲ್ಲಿ ಹರಿಸಿದನು.

ಯಮನಂತೆ ಸೇನೆಗಳನ್ನು ದಹಿಸುತ್ತಿರುವ ಆ ರಥೋದಾರ ದ್ರೋಣನನ್ನು ಕುಂತೀಪುತ್ರನ ನಾಯಕತ್ವದಲ್ಲಿ ಎಲ್ಲಕಡೆಗಳಿಂದ ಆಕ್ರಮಣಿಸಿದರು. ಆ ಶೂರ ಮಹೇಷ್ವಾಸರನ್ನು ಕೌರವರ ಕಡೆಯ ರಾಜರು ರಾಜಪುತ್ರರು ಆಯುಧಗಳನ್ನು ಎತ್ತಿ ಹಿಡಿದು ಎಲ್ಲ ಕಡೆಗಳಿಂದ ಸುತ್ತುವರೆದರು. ಆಗ ದ್ರೋಣನು ಕುಂಭಸ್ಥಳವು ಒಡೆದುಹೋಗಿರುವ ಆನೆಯಂತೆ ರಥಸೇನೆಯನ್ನು ದಾಟಿ ದೃಢಸೇನನನ್ನು ಕೆಡವಿದನು. ಭಯವಿಲ್ಲದವನಂತೆ ಪ್ರಹರಿಸುತ್ತಿದ್ದ ಕ್ಷೇಮನನ್ನು ತಲುಪಿ, ಅವನನ್ನು ಒಂಭತ್ತು ಬಾಣಗಳಿಂದ ಹೊಡೆದು ರಥದಿಂದ ಕೆಡವಿದನು. ಅವನು ಸೈನ್ಯಗಳ ಮಧ್ಯವನ್ನು ಸೇರಿ, ಎಲ್ಲ

ದಿಕ್ಕುಗಳಲ್ಲಿಯೂ ಸಂಚರಿಸುತ್ತಾ ಇತರ ಎಲ್ಲರನ್ನೂ ರಕ್ಷಿಸುತ್ತಿದ್ದನು. ಅವನಿಗೆ ಯಾರೂ ರಕ್ಷಣೆಯಿರಲಿಲ್ಲ. ಶಿಖಂಡಿಯನ್ನು ಹನ್ನೆರಡು ಬಾಣಗಳಿಂದ, ಉತ್ತಮೌಜಸನನ್ನು ಇಪ್ಪತ್ತರಿಂದ ಹೊಡೆದು, ಭಲ್ಲದಿಂದ ವಸುಧಾನನನ್ನು ಯಮಸಾದನಕ್ಕೆ ಕಳುಹಿಸಿದನು. ಎಂಭತ್ತರಿಂದ ಕ್ಷತ್ರವರ್ಮನನ್ನು ಮತ್ತು ಅರವತ್ತು-ಇಪ್ಪತ್ತರಿಂದ ಸುದಕ್ಷಿಣನನ್ನು ಹೊಡೆದು ಭಲ್ಲದಿಂದ ಕ್ಷತ್ರದೇವನನ್ನು ರಥನೀಡದಿಂದ ಉರುಳಿಸಿದನು. ಯುಧಾಮನ್ಯುವನ್ನು ಅರವತ್ನಾಲ್ಕು ಮತ್ತು ಸಾತ್ಯಕಿಯನ್ನು ಮೂವತ್ತು ಬಾಣಗಳಿಂದ ಹೊಡೆದು ರುಕ್ಮರಥನು ಕೂಡಲೇ ಯುಧಿಷ್ಠಿರನ ಮೇಲೆ ಎರಗಿದನು. ಆಗ ಯುಧಿಷ್ಠಿರನು ಕ್ಷಿಪ್ರವಾಗಿ ವೇಗವುಳ್ಳ ಕುದುರೆಗಳ ಮೇಲೆ ಹೊರಟುಹೋದನು.

ಆಗ ಪಾಂಚಾಲ್ಯನು ದ್ರೋಣನನ್ನು ಆಕ್ರಮಣಿಸಿದನು. ದ್ರೋಣನು ಧನುಸ್ಸು-ಕುದುರೆಗಳೊಂದಿಗೆ ಅವನನ್ನು ಸಂಹರಿಸಿದನು. ಹತನಾಗಿ ಅವನು ಆಕಾಶದಿಂದ ಭೂಮಿಯ ಮೇಲೆ ಜ್ಯೋತಿಯೊಂದು ಬೀಳುವಂತೆ ರಥದಿಂದ ಕೆಳಗೆ ಬಿದ್ದನು. ಪಾಂಚಾಲರ ಯಶಸ್ಕರ ಆ ರಾಜಪುತ್ರನು ಹತನಾಗಲು "ದ್ರೋಣನನ್ನು ಕೊಲ್ಲಿ! ದ್ರೋಣನನ್ನು ಕೊಲ್ಲಿ!" ಎಂದು ಮಹಾ ತುಮುಲ ಶಬ್ಧವುಂಟಾಯಿತು. ಆಗ ಬಲಶಾಲೀ ದ್ರೋಣನು ತುಂಬಾ ಸಂಕ್ರುದ್ಧರಾದ ಪಾಂಚಾಲರನ್ನು,

ಮತ್ಸ್ಯರನ್ನು, ಕೇಕಯರನ್ನು, ಸೃಂಜಯರನ್ನು ಮತ್ತು ಪಾಂಡವರನ್ನು ಸದೆಬಡಿದನು. ಕುರುಗಳಿಂದ ಪರಿವಾರಿತನಾಗಿದ್ದ ದ್ರೋಣನು ಸಾತ್ಯಕಿ, ಚೇಕಿತಾನ, ಧೃಷ್ಟದ್ಯುಮ್ನ, ವಾರ್ಧಕ್ಷೇಮಿ, ಚಿತ್ರಸೇನ, ಸೇನಾಬಿಂದು, ಸುವರ್ಚಸ ಇವರುಗಳನ್ನು ಮತ್ತು ಇನ್ನೂ ಇತರ ಅನೇಕ ನಾನಾ ಜನಪದೇಶ್ವರರೆಲ್ಲರನ್ನೂ ಯುದ್ಧದಲ್ಲಿ ಸೋಲಿಸಿದನು. ಆ ಮಹಾಯುದ್ಧದಲ್ಲಿ ಜಯವನ್ನು ಪಡೆದ ಕೌರವರು ಎಲ್ಲಕಡೆ ಓಡಿ ಹೋಗುತ್ತಿರುವ ಪಾಂಡವೇಯರನ್ನು ರಣದಲ್ಲಿ ಸಂಹರಿಸಿದರು. ಇಂದ್ರನಿಂದ ದಾನವರಂತೆ ವಧಿಸಲ್ಪಡಿತ್ತಿರುವ ಮಹಾತ್ಮ ಪಾಂಚಲರು, ಕೇಕಯರು ಮತ್ತು ಮತ್ಸ್ಯರು ನಡುಗಿದರು.

## ಕರ್ಣ-ದುರ್ಯೋಧನರ ಸಂವಾದ

ದ್ರೋಣನ ಸಾಯಕಗಳಿಂದ ಪೀಡಿತರಾಗಿ ರಣರಂಗದಿಂದ ಚದುರಿ ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದ ಪಾಂಚಾಲ-ಪಾಂಡವ-ಮತ್ಸ್ಯ-ಸೃಂಜಯ-ಚೇದಿ-ಕೇಕಯರನ್ನು ನೋಡಿ, ನದಿಯ ಪ್ರವಾಹದಿಂದ ದೋಣಿಗಳು ಸೆಳೆಯಲ್ಪಡುವಂತೆ ದ್ರೋಣನ ಬಿಲ್ಲಿನಿಂದ ಬಿಡಲ್ಪಟ್ಟ ಬಾಣಗಳ ಮಳೆಯಿಂದ ಕೊಚ್ಚಿಕೊಂಡು ಹೋಗುತ್ತಿರುವ ಅವರನ್ನು ನೋಡಿ ಕೌರವರು ಸಿಂದನಾದಗೈದು, ನಾನಾವಾದ್ಯಗಳನ್ನು ನುಡಿಸಿ, ರಥ-ಗಜ-ನರ-ಅಶ್ವಗಳನ್ನು ಎಲ್ಲ ಕಡೆಯಿಂದ ಸುತ್ತುವರೆದರು.

ಅವರನ್ನು ನೋಡಿ ಸ್ವಜನರಿಂದ ಸಂವೃತನಾಗಿ ಸೇನೆಯ ಮಧ್ಯದಲ್ಲಿದ್ದ ರಾಜಾ ದುರ್ಯೋಧನನು ಸಂತೋಷದಿಂದ ನಗುತ್ತಾ ಕರ್ಣನಿಗೆ ಹೇಳಿದನು:

"ರಾಧೇಯ! ಸಿಂಹವು ವನ್ಯಪ್ರಾಣಿಗಳನ್ನು ಹೇಗೋ ಹಾಗೆ ಸಾಯಕಗಳಿಂದ ಪಾಂಚಾಲರನ್ನು ಪೀಡಿಸುತ್ತಿರುವ ದೃಢಧನ್ವಿ ದ್ರೋಣನನ್ನು ನೋಡು! ಭಿರುಗಾಳಿಗೆ ಸಿಲುಕಿ ಮುರಿದು ಬಿದ್ದ ಮಹಾಮರಗಳಂತೆ ದ್ರೋಣನಿಂದ ಭಗ್ನರಾದ ಇವರು ಪುನಃ ಯುದ್ಧಕ್ಕೆ ಬರುತ್ತಾರೆಂದು ನನಗನ್ನಿಸುವುದಿಲ್ಲ. ಆ ಮಹಾತ್ಮನ ರುಕ್ಮಪುಂಖ ಶರಗಳಿಂದ ಪೆಟ್ಟುತಿಂದ ಅವರು ಅಲ್ಲಲ್ಲಿಯೇ ಸುತ್ತುತ್ತಾ ಒಂದೇ ಮಾರ್ಗದಲ್ಲಿ ಹೋಗುತ್ತಿಲ್ಲ. ಬೆಂಕಿಯನ್ನು ಹಾಕಿ ಆನೆಗಳ ಹಿಂಡನ್ನು ಒಂದೇಕಡೆ ಗೋಲಾಕಾರವಾಗಿ ತಿರುಗಿಸುವಂತೆ ಮಹಾತ್ಮ ದ್ರೋಣ ಮತ್ತು ಕುರುಗಳು ಇವರನ್ನು ಮಾಡಿದ್ದಾರೆ. ದುಂಬಿಗಳಂತಿರುವ ದ್ರೋಣನ ನಿಶಿತ ಶರಗಳಿಂದ ಮುಸುಕಲ್ಪಟ್ಟು ಇವರು ಪಲಾಯನವೊಂದೇ ಮಾರ್ಗವೆಂದು ತಿಳಿದು ಅನ್ಯೋನ್ಯರ ಹಿಂದೆ ಅಡಗಿಕೊಳ್ಳುತ್ತಿದ್ದಾರೆ. ಈ ಕೋಪಿಷ್ಟ ಭೀಮನು ಪಾಂಡವ-ಸೃಂಜಯರಿಂದ ವಿಹೀನನಾಗಿ ನಮ್ಮವರ ಯೋಧರಿಂದ

ಸುತ್ತುವರೆಯಲ್ಪಟ್ಟಿದ್ದಾನೆ. ಕರ್ಣ! ಇದು ನನಗೆ ಅತೀವ ತೃಪ್ತಿಯನ್ನು ನೀಡುತ್ತಿದೆ. ಆ ದುರ್ಮತಿಗೆ ಇಂದು ಲೋಕವೆಲ್ಲವೂ ದ್ರೋಣಮಯವಾಗಿಯೇ ಕಾಣುತ್ತಿದೆ. ಇಂದು ಆ ಪಾಂಡವನಿಗೆ ಜೀವಿತದಲ್ಲಿಯೂ ರಾಜ್ಯದಲ್ಲಿಯೂ ನಿರಾಶೆಯುಂಟಾಗಿದೆ ಎನ್ನುವುದು ತೋರುತ್ತಿದೆ.”

ಕರ್ಣನು ಹೇಳಿದನು:

“ಈ ಮಹಾಬಾಹುವು ಜೀವವಿರುವವರೆಗೆ ಯುದ್ಧವನ್ನು ಬಿಟ್ಟು ಹೋಗುವುಲ್ಲ ಎಂದು ತಿಳಿ. ಪುರುಷವ್ಯಾಘ್ರ! ಇವನು ನಮ್ಮವರ ಈ ಸಿಂಹನಾದವನ್ನೂ ಸಹಿಸಿಕೊಳ್ಳುವವನಲ್ಲ. ಶೂರರಾದ, ಬಲವಂತರಾದ, ಕೃತಾಸ್ತ್ರರಾದ, ಯುದ್ಧದುರ್ಮದರಾದ ಪಾಂಡವರು ಯುದ್ಧವನ್ನು ಮುಂದುವರಿಸುತ್ತಾರೆ ಎಂದು ನನ್ನ ಅಭಿಪ್ರಾಯ. ವಿಷ-ಬೆಂಕಿ-ದ್ಯೂತ ಮತ್ತು ವನವಾಸಗಳ ಕಷ್ಟಗಳನ್ನು ನೆನಪಿನಲ್ಲಿಟ್ಟುಕೊಂಡಿರುವ ಪಾಂಡವರು ಸಂಗ್ರಾಮದಿಂದ ಓಡಿಹೋಗುವುದಿಲ್ಲವೆಂದು ನನಗನ್ನಿಸುತ್ತದೆ. ಏಕೆಂದರೆ ಮಹಾಬಾಹು ಅಮಿತ ಓಜಸ್ವಿ ವೃಕೋದರ ಕೌಂತೇಯನು ಮರಳಿ ನಮ್ಮವರ ಶ್ರೇಷ್ಠ ಶ್ರೇಷ್ಠ ರಥೋದಾರರನ್ನು

ಕೊಲ್ಲುತ್ತಾನೆ. ಖಡ್ಗದಿಂದ, ಧನುಸ್ಸಿನಿಂದ, ಶಕ್ತಿಯಿಂದ, ಕುದುರೆಗಳಿಂದ, ಆನೆಗಳಿಂದ, ಮನುಷ್ಯರಿಂದ, ರಥಗಳಿಂದ, ಹಾರೆಕೋಲಿನಿಂದ ಮತ್ತು ದಂಡದಿಂದ ಗುಂಪು ಗುಂಪಾಗಿ ಸಂಹರಿಸುತ್ತಾನೆ. ಅವನನ್ನು ಹಿಂಬಾಲಿಸಿ ಸಾತ್ಯಕಿಪ್ರಮುಖರಾದ ರಥರು, ವಿಶೇಷವಾಗಿ ಪಾಂಚಾಲರು, ಕೇಕಯರು, ಮತ್ಸ್ಯರು ಮತ್ತು ಪಾಂಡವರು ಬರುತ್ತಿದ್ದಾರೆ. ಆ ಶೂರರು, ಬಲವಂತರು, ವಿಕ್ರಾಂತ ಮಹಾರಥರು ಭೀಮನ ರಣೋತ್ಸಾಹದಿಂದ ವಿಶೇಷವಾಗಿ ಪ್ರಚೋದಿತಗೊಂಡಿದ್ದಾರೆ. ವೃಕೋದರನನ್ನು ರಕ್ಷಿಸಲೋಸುಗ ಈ ಕುರುಪಾಂಡವರು ಸೂರ್ಯನನ್ನು ಮುತ್ತುವ ಮೋಡಗಳಂತೆ ದ್ರೋಣನ ಮೇಲೆ ಮುತ್ತಿಗೆ ಹಾಕಿದ್ದಾರೆ. ರಕ್ಷಣೆಯಿಲ್ಲದ ಯತವ್ರತನನ್ನು ಪೀಡಿಸುವ ಒಂದೇ ಒಂದು ಉದ್ದೇಶವನ್ನಿಟ್ಟುಕೊಂಡಿರುವ ಇವರು ದೀಪದ ಹುಳುಗಳು ದೀಪವನ್ನು ಮುತ್ತಿಕೊಂಡು ತಾವು ಸಾಯುವುದನ್ನೂ ಗಮನಿಸದೇ ದೀಪವನ್ನು ಆರಿಸಲು ಪ್ರಯತ್ನಿಸುತ್ತಿರುವಂತೆ ಇರುವ ಈ ಕೃತಾಸ್ತ್ರರು ಅವನನ್ನು ತಡೆಯಲು ಸಮರ್ಥರು ಎನ್ನುವುದರಲ್ಲಿ ಸಂಶಯವಿಲ್ಲ. ಆದುದರಿಂದ ಇದು ಭಾರದ್ವಾಜನ ಮೇಲಿರುವ ಅತಿಭಾರವೆಂದು ನನಗನ್ನಿಸುತ್ತದೆ. ದ್ರೋಣನಿರುವಲ್ಲಿಗೆ

ಶೀಘ್ರವಾಗಿ ಹೋಗೋಣ. ಕಾಗೆಗಳು ಮಹಾಸರ್ಪವನ್ನು ಹೇಗೋ ಹಾಗೆ ಅವರು ಆ ಯತವ್ರತನನ್ನು ಸಂಹರಿಸಬಾರದು!"

ರಾಧೇಯನ ಮಾತನ್ನು ಕೇಳಿ ರಾಜಾ ದುರ್ಯೋಧನನು ಸಹೋದರರೊಂದಿಗೆ ದ್ರೋಣನ ಕಡೆ ಹೋದನು. ಅಲ್ಲಿ ದ್ರೋಣನನ್ನು ಸಂಹರಿಸುವ ಒಂದೇ ಉದ್ದೇಶವನ್ನಿಟ್ಟುಕೊಂಡು ನಾನಾ ಬಣ್ಣದ ಉತ್ತಮ ಕುದುರೆಗಳನ್ನೇರಿ ಹಿಂದಿರುಗಿ ಬರುತ್ತಿರುವ ಪಾಂಡವರ ಮಹಾ ಶಬ್ಧವು ಕೇಳಿಬರುತ್ತಿತ್ತು.

## ರಥಚಿಹ್ನೆಗಳು

ಕರಡಿಯ ಬಣ್ಣದ ಕುದುರೆಗಳಿಂದ ಎಳೆಯಲ್ಪಟ್ಟ ರಥದಲ್ಲಿ ಕುಳಿತು ಬರುತ್ತಿದ್ದ ವೃಕೋದರನನ್ನು ನೋಡಿ ಶೂರ ಶೈನೇಯನು ಬೆಳ್ಳಿಯ ಬಣ್ಣದ ಕುದುರೆಗಳನ್ನೊಡಗೂಡಿ ಅವನೊಂದಿಗೆ ಹಿಂದಿರುಗಿದನು. ಸುಂದರವಾದ ಗಿಣಿಯರೆಕ್ಕೆಗಳ ಬಣ್ಣದ ಕಾಂಬೋಜ ಕುದುರೆಗಳು ಶೀಘ್ರವಾಗಿ ನಕುಲನನ್ನು ಹೊತ್ತು ಕೌರವ ಸೈನಿಕರಿದ್ದೆಡೆಗೆ ಓಡಿಬಂದವು. ಆಯುಧವನ್ನು ಎತ್ತಿಹಿಡಿದಿದ್ದ ಸಹದೇವನನ್ನು ಭೀಮವೇಗದ, ಗಾಳಿಯ ವೇಗವುಳ್ಳ, ಮೋಡಗಳಂತೆ ಕಪ್ಪಾಗಿದ್ದ ಕುದುರೆಗಳು ಒಯ್ದುತಂದವು. ಸುವರ್ಣಮಯ ವಸ್ತ್ರಗಳಿಂದ

ಆಚ್ಛಾದಿತವಾದ, ವೇಗದಲ್ಲಿ ವಾಯುವಿಗೆ ಸಮನಾಗಿದ್ದ ಕುದುರೆಗಳ ರಥದಲ್ಲಿದ್ದ ಯುಧಿಷ್ಠಿರನನ್ನು ಎಲ್ಲ ಸೇನೆಗಳೂ ಅನುಸರಿಸಿದವು. ರಾಜನ ಅನಂತರ ಪಾಂಚಾಲ್ಯ ದ್ರುಪದನು ಬಂಗಾರದ ರೂಪಮಯ ಛತ್ರದಡಿಯಲ್ಲಿ ತನ್ನವರೆಲ್ಲರಿಂದ ರಕ್ಷಿಸಲ್ಪಟ್ಟಿದ್ದನು. ಲಲಾಮ ಎಂಬ ಚಿಹ್ನೆಯನ್ನು ಹೊಂದಿದ್ದ ಎಂತಹ ಮುಹಾಶಬ್ಧವನ್ನೂ ಸಹಿಸಿಕೊಳ್ಳಬಲ್ಲ ಕುದುರೆಗಳಿಂದ ಕೂಡಿದವನಾಗಿ ಯುದ್ಧದಲ್ಲಿ ರಾಜರ ಮಧ್ಯೆ ಆ ಮಹೇಷ್ವಾಸನು ಶಾಂತನಾಗಿ, ಭಯವಿಲ್ಲದೇ ಹೋಗುತ್ತಿದ್ದನು. ಅವನನ್ನು ವಿರಾಟನು ಮಹಾರಥ ಶೂರರಿಂದೊಡಗೂಡಿ ಅನುಸರಿಸಿದನು. ಕೇಕಯರು, ಶಿಖಂಡಿ ಮತ್ತು ಧೃಷ್ಟಕೇತು ಇವರು ಅವರವರ ಸೈನ್ಯಗಳೊಂದಿಗೆ ಪರಿವೃತರಾಗಿ ಮತ್ಸ್ಯರಾಜನನ್ನು ಹಿಂಬಾಲಿಸಿದರು. ಮತ್ಸ್ಯರಾಜನು ಪಾಟಲ ಪುಷ್ಪಗಳ ಸಮವರ್ಣದ ಉತ್ತಮ ಕುದುರೆಗಳು ಕೊಂಡೊಯ್ಯುತ್ತಿದ್ದ ರಥದಲ್ಲಿ ವಿರಾಜಿಸಿದನು. ಚಿನ್ನದ ಸರದಿಂದ ಅಲಂಕೃತವಾಗಿದ್ದ, ಹಳದೀ ಬಣ್ಣದ ವೇಗದ ಕುದುರೆಗಳು ವಿರಾಟರಾಜನ ಮಗನನ್ನು ತ್ವರೆಮಾಡಿ ಕೊಂಡೊಯ್ಯುತ್ತಿದ್ದವು. ಇಂದ್ರಗೋಪಗಳ ಬಣ್ಣದ ಕುದುರೆಗಳಿಂದ ಎಳೆಯಲ್ಪಟ್ಟ ರಥದಲ್ಲಿ ಕುಳಿತಿದ್ದ ಐವರು ಕೇಕಯ ಸಹೋದರರು ಬಂಗಾರದ ಬಣ್ಣದಂತೆ ಪ್ರಕಾಶಿಸುತ್ತಿದ್ದರು. ಎಲ್ಲರೂ ಕೆಂಪು ಧ್ವಜಗಳನ್ನು ಹೊಂದಿದ್ದರು. ಚಿನ್ನದ ಮಾಲೆಗಳನ್ನು ಧರಿಸಿದ್ದ ಆ ಎಲ್ಲ

ಶೂರ ಯುದ್ಧವಿಶಾರದರೂ ಕವಚಗಳನ್ನು ಧರಿಸಿ ಮಳೆಸುರಿಸುವ ಮೋಡಗಳಂತೆ ಕಂಡರು. ಪಾಂಚಲ್ಯ ಶಿಖಂಡಿಯನ್ನು ಆಮಪಾತ್ರದ ಆಕಾರದ ಅರುಣೋದಯದ ಕೆಂಪುಬಣ್ಣದ ನಿಯಮವುಳ್ಳ ಕುದುರೆಗಳನ್ನು ಕಟ್ಟಿದ ಕುದುರೆಗಳು ಒಯ್ದವು. ಹನ್ನೆರಡು ಸಾವಿರ ಪಾಂಚಾಲರ ಮಹಾರಥರಲ್ಲಿ ಆರು ಸಾವಿರ ಮಂದಿ ಶಿಖಂಡಿಯನ್ನು ಅನುಸರಿಸಿದರು. ಶಿಶುಪಾಲನ ಮಗ ನರಸಿಂಹನನ್ನು ಸಾರಂಗದಂತೆ ಚುಕ್ಕೆಗಳನ್ನು ಹೊಂದಿದ ಕುದುರೆಗಳು ಕುಣಿಯುತ್ತಾ ಕೊಂಡೊಯ್ಯುತ್ತಿದ್ದವು. ಚೇದಿಗಳ ಋಷಭ ಧೃಷ್ಟಕೇತುವನ್ನು ಚುಕ್ಕೆಗಳನ್ನು ಹೊಂದಿದ್ದ ಕಾಂಬೋಜದ ಕುದುರೆಗಳು ಕೊಂಡೊಯ್ಯುತ್ತಿದ್ದವು. ಕೈಕೇಯರ ಸುಕುಮಾರ ಬೃಹತ್ಕ್ಷತ್ರನನ್ನು ಬೆಂಕಿಬಿದ್ದ ಹುಲ್ಲುಮೆದೆಯಿಂದ ಹೊರಡುವ ಹೊಗೆಯ ಬಣ್ಣದ ಸಿಂಧುದೇಶದ ಉತ್ತಮ ಕುದುರೆಗಳು ಶೀಘ್ರವಾಗಿ ಕೊಂಡೊಯ್ಯುತ್ತಿದ್ದವು.

ಶಿಖಂಡಿಯ ಶೂರಪುತ್ರ ಕ್ಷತ್ರದೇವನನ್ನು ಸ್ವಲಂಕೃತವಾದ ಮಲ್ಲಿಕಾಕ್ಷ, ಪದ್ಮವರ್ಣದ, ಬಾಹ್ಲಿಜಾತ ಕುದುರೆಗಳು ಕೊಂಡೊಯ್ಯುತ್ತಿದ್ದವು. ಕಾಶೀರಾಜ ಅಭಿಭುವನ ಮಗ ಯುವಕ ಸುಕುಮಾರ ಮಹಾರಥನನ್ನು ಕ್ರೌಂಚವರ್ಣದ ಉತ್ತಮ ಕುದುರೆಗಳು ಯುದ್ಧಕ್ಕೆ

ಕೊಂಡೊಯ್ಯುತ್ತಿದ್ದವು. ಮನೋವೇಗದ ಕಪ್ಪು ಕುತ್ತಿಗೆಯ ಬಿಳೀ ಕುದುರೆಗಳು ರಾಜಪುತ್ರ ಪ್ರತಿವಿಂಧ್ಯನನ್ನು ಒಯ್ಯುತ್ತಿದ್ದವು. ಪಾರ್ಥನ ಮಗ ಸುತಸೋಮನನ್ನು ಉದ್ದಿನ ಹೂವಿನ ಬಣ್ಣದ ಕುದುರೆಗಳು ರಣರಂಗಕ್ಕೆ ಕೊಂಡೊಯ್ಯುತ್ತಿದ್ದವು. ಕುರುಗಳ ಪುರವಾದ ಉದಯೇಂದುವಿನಲ್ಲಿ ಜನಿಸಿದುದರಿಂದ , ಯಜ್ಞದಲ್ಲಿ ಸೋಮರಸವನ್ನು ಹಿಂಡುವ ಸಮಯದಲ್ಲಿ ಜನಿಸಿದುದರಿಂದ ಮತ್ತು ಸಹಸ್ರಸೋಮರ ಸಮಾನ ಕಾಂತಿಯನ್ನು ಹೊಂದಿದ್ದ ಅವನ ಹೆಸರು ಸುತಸೋಮನೆಂದಾಯಿತು. ನಕುಲನ ಮಗ ಶತಾನೀಕನನ್ನು ಶಾಲಪುಷ್ಪ ಬಣ್ಣದ, ಬಾಲಸೂರ್ಯನ ಕಾಂತಿಯ, ಶ್ಲಾಘನೀಯ ಕುದುರೆಗಳು ಕೊಂಡೊಯ್ದವು. ಕಾಂಚನದ ಹಗ್ಗಗಳಿಂದ ಬಿಗಿಯಲ್ಪಟ್ಟ, ನವಿಲಿನ ಕುತ್ತಿಗೆಯ ಬಣ್ಣದಂತಿದ್ದ ಕುದುರೆಗಳು ದ್ರೌಪದೇಯ, ನರವ್ಯಾಘ್ರ, ಶ್ರುತಕರ್ಮನನ್ನು ಒಯ್ದವು. ಯುದ್ಧದಲ್ಲಿ ಪಾರ್ಥನ ಸಮನೆಂದು ಹೇಳುವ, ವಿದ್ಯೆಯ ನಿಧಿಯೆನಿಸಿದ್ದ, ದ್ರೌಪದೇಯ ಶ್ರುತಕೀರ್ತಿಯನ್ನು ಕಳಿಂಗಪಕ್ಷಿಯ ರೆಕ್ಕೆಗಳ ಬಣ್ಣದ ಉತ್ತಮ ಕುದುರೆಗಳು ಒಯ್ದವು.

ಯುದ್ಧದಲ್ಲಿ ಕೃಷ್ಣ ಮತ್ತು ಪಾರ್ಥರಿಗಿಂತಲೂ ಅರ್ಧಗುಣ ಹೆಚ್ಚಿನವನೆಂದು ಯಾರಿಗೆ ಹೇಳುತ್ತಾರೋ ಆ ಕುಮಾರ ಅಭಿಮನ್ಯುವನ್ನು ರಣಕ್ಕೆ ಕಪಿಲವರ್ಣದ ಕುದುರೆಗಳು

ಕೊಂಡೊಯ್ಯುತ್ತಿದ್ದವು. ಧಾರ್ತರಾಷ್ಟ್ರರಲ್ಲಿ ಪಾಂಡವರನ್ನು ಆಶ್ರಯಿಸಿದ ಒಬ್ಬನೇ ಒಬ್ಬ ಯುಯುತ್ಸುವನ್ನು ವಿಶಾಲವಾದ ಮಹಾಕಾಯ ಕುದುರೆಗಳು ರಣಕ್ಕೆ ಕೊಂಡೊಯ್ದವು. ತರಸ್ವಿ ವಾರ್ಧಕ್ಷೇಮಿಯನ್ನು ಜೋಳದ ಕಡ್ಡಿಯ ಬಣ್ಣದ ಸ್ವಲಂಕೃತವಾದ ಹೃಷ್ಟ ಕುದುರೆಗಳು ಆ ತುಮುಲ ಯುದ್ಧಕ್ಕೆ ಕರೆದೊಯ್ದವು. ಕುಮಾರ ಸೌಚಿತ್ತಿಯನ್ನು ರುಕ್ಮಪತ್ರಗಳನ್ನು ಹೊದ್ದಿದ್ದ, ಕಪ್ಪು ಕಾಲುಗಳುಳ್ಳ, ಸಾರಥಿಯ ಆಜ್ಞಾನುಸಾರವಾಗಿ ಹೆಜ್ಜೆಗಳನ್ನಿಡುತ್ತಿದ್ದ ಕುದುರೆಗಳು ಯುದ್ಧಕ್ಕೆ ಕೊಂಡೊಯ್ಯುತ್ತಿದ್ದವು. ಸುವರ್ಣಪೀಠವನ್ನು ಹೊತ್ತಿದ್ದ, ರೇಷ್ಮೆಯಂತಹ ನವಿರಾದ ಕೂದಲುಗಳುಳ್ಳ, ಸುವರ್ಣದ ಮಾಲೆಗಳನ್ನು ಧರಿಸಿದ, ಸಹಸಶಕ್ತಿಯುಳ್ಳ ಕುದುರೆಗಳು ಶ್ರೇಣಿಮಂತನನ್ನು ಕೊಂಡೊಯ್ಯುತ್ತಿದ್ದವು. ಚಿನ್ನದ ಮಾಲೆಯನ್ನು ಧರಿಸಿದ್ದ, ಶೂರ, ಹೇಮವರ್ಣದ, ಸ್ವಲಂಕೃತವಾಗಿದ್ದ, ಶ್ಲಾಘನೀಯವಾದ ಶ್ರೇಷ್ಠ ಹಯಗಳು ಕಾಶಿರಾಜನನ್ನು ಕೊಂಡೊಯ್ಯುತ್ತಿದ್ದವು. ಅಸ್ತ್ರಗಳಲ್ಲಿ, ಧನುರ್ವೇದದಲ್ಲಿ ಮತ್ತು ಬ್ರಾಹ್ಮೀ ವೇದದಲ್ಲಿ ಪಾರಂಗತನಾದ ಆ ಸತ್ಯಧೃತಿಯನ್ನು ಅರುಣವರ್ಣದ (ಎಣ್ಣೆಗೆಂಪಿನ) ಕುದುರೆಗಳು ಕೊಂಡೊಯ್ಯುತ್ತಿದ್ದವು. ಯಾವ ಪಾಂಚಾಲಸೇನಾನಿಯು ದ್ರೋಣನನ್ನು ತನ್ನ ಪಾಲಿಗೆ ಕಲ್ಪಿಸಿಕೊಂಡಿದ್ದನೋ ಆ ಧೃಷ್ಟದ್ಯುಮ್ನನನ್ನು ಪಾರಿವಾಳದ ಬಣ್ಣದ ಕುದುರೆಗಳು ಒಯ್ದವು. ಅವನನ್ನು ಸೌಚಿತ್ತಿ

ಸತ್ಯಧೃತಿ, ವಸುದಾನನ ಪುತ್ರ ಶ್ರೇಣಿಮಾನ್ ಮತ್ತು ಕಾಶೀರಾಜನ ಮಗ ಅಭಿಭೋ ಇವರು ಅನುಸರಿಸಿದರು. ವೇಗಯುಕ್ತವಾದ ಹೇಮಮಾಲೆಗಳನ್ನು ಧರಿಸಿದ್ದ, ಶತ್ರುಗಳ ಸೇನೆಯನ್ನು ಭಯಪಡಿಸುತ್ತಿದ್ದ, ವೈಶ್ರವಣ ಯಮರಂತಿದ್ದ, ಆಯುಧಗಳನ್ನು ಎತ್ತಿ ಹಿಡಿದಿದ್ದ ಆರು ಸಾವಿರ ಪಾಂಚಾಲದ ಪ್ರಭದ್ರಕರು ನಾನಾ ವರ್ಣದ ಶ್ರೇಷ್ಠ ಪರಮ ಕಾಂಬೋಜ ಕುದುರೆಗಳೊಂದಿಗೆ ಹೇಮಚಿತ್ರರಥಧ್ವಜಗಳೊಂದಿಗೆ, ಕಾರ್ಮುಕಗಳನ್ನು ಹಿಡಿದು ಶತ್ರುಗಳನ್ನು ಶರಗಳ ಮಳೆಯಿಂದ ಭಯಗೊಳಿಸುತ್ತ ಮೃತ್ಯುವಿನ ಸಮನಾಗಿದ್ದುಕೊಂಡು ಧೃಷ್ಟದ್ಯುಮ್ನನನ್ನು ಅನುಸರಿಸಿದರು.

ಕೌಶೇಯವರ್ಣದ, ಸುವರ್ಣವರಮಾಲೆಗಳನ್ನು ಧರಿಸಿದ್ದ ಉತ್ತಮ ಹಯಗಳು ಚೇಕಿತಾನನನ್ನು ಕೊಂಡೊಯ್ದವು. ಸವ್ಯಸಾಚಿಯ ಸೋದರಮಾವ ಪುರುಜಿತ್ ಕುಂತೀಭೋಜನನ್ನು ಕಾಮನಬಿಲ್ಲಿನ ಬಣ್ಣದ ಉತ್ತಮ ಕುದುರೆಗಳು ಸುಂದರ ರಥದಲ್ಲಿ ಕೊಂಡೊಯ್ದವು. ನಕ್ಷತ್ರಗಳಿಂದ ಚಿತ್ರಿತವಾದ ಅಂತರಿಕ್ಷದ ಬಣ್ಣವುಳ್ಳ ಕುದುರೆಗಳು ರಾಜಾ ರೋಚಮಾನನನ್ನು ಯುದ್ಧಕ್ಕೆ ಕೊಂಡೊಯ್ದವು. ಜರಾಸಂಧನ ಮಗ ಸಹದೇವನನ್ನು ಬಂಗಾರದ ಜಾಲಗಳಿಂದ ಅಲಂಕೃತವಾಗಿದ್ದ, ಚಿತ್ರವರ್ಣದ, ಕಪ್ಪು ಕಾಲುಗಳ ಶ್ರೇಷ್ಠ ಹಯಗಳು ಕೊಂಡೊಯ್ದವು.

ಕಮಲದ ದಂಟಿನ ಬಣ್ಣದ, ವೇಗದಲ್ಲಿ ಗಿಡುಗಕ್ಕೆ ಸಮನಾದ ವಿಚಿತ್ರವಾಗಿದ್ದ ಉತ್ತಮ ಕುದುರೆಗಳು ಸುದಾಮಾನನನ್ನು ಕೊಂಡೊಯ್ದವು. ಮೊಲದ ಬಣ್ಣದ ಮತ್ತು ಕೆಂಪು ಬಣ್ಣದ, ಬಿಳೀ ಕೂದಲಿನಿಂದ ಹೊಳೆಯುತ್ತಿದ್ದ ಕುದುರೆಗಳು ಪಾಂಚಾಲ್ಯ ಗೋಪತಿಯ ಮಗ ಸಿಂಹಸೇನನನ್ನು ಕೊಂಡೊಯ್ಯುತ್ತಿದ್ದವು.

ಜನಮೇಜಯನೆಂದು ಖ್ಯಾತನಾಗಿದ್ದ ಪಾಂಚಾಲರ ನರವ್ಯಾಘ್ರನನ್ನು ಸಾಸಿವೆ ಹೂವಿನ ಬಣ್ಣದ ಉತ್ತಮ ಹಯಗಳು ಕೊಂಡೊಯ್ಯುತ್ತಿದ್ದವು. ಉದ್ದಿನ ಬಣ್ಣದ, ವೇಗಶಾಲೀ, ಬಂಗಾರದ ಮಾಲೆಗಳನ್ನು ಧರಿಸಿದ್ದ, ಮೊಸರಿನಂತೆ ಬಿಳುಪಾದ ಪೃಷ್ಠಭಾಗವನ್ನು ಹೊಂದಿದ್ದ, ಮುಖದಲ್ಲಿ ಚುಕ್ಕೆಗಳನ್ನು ಹೊಂದಿದ್ದ ಎತ್ತರ ಕುದುರೆಗಳು ಪಾಂಚಾಲ್ಯ ದ್ರುತನನ್ನು ಕೊಂಡೊಯ್ಯುತ್ತಿದ್ದವು. ಬಿದಿರಿನ ಗಿಣ್ಣಿನ ಬಣ್ಣದ ಕಮಲಬಣ್ಣದಂತೆ ಕಾಂತಿಯುಕ್ತವಾಗಿದ್ದ ಶೂರ ಭದ್ರಕ ಕುದುರೆಗಳು ದಂಡಧಾರನನ್ನು ಒಯ್ದವು. ಕೋಸಲಾಧಿಪತಿಯ ಮಗ ಸುಕ್ಷತ್ರನನ್ನು ಹೇಮಮಾಲೆಗಳಿಂದ ಬೆಳಗುತ್ತಿದ್ದ ಚಕ್ರವಾಕದ ಬಣ್ಣದ ಕುದುರೆಗಳು ರಥದಲ್ಲಿ ಕೊಂಡೊಯ್ದವು. ಅನೇಕ ಚುಕ್ಕೆಗಳಿಂದ ಕೂಡಿದ್ದ, ಎತ್ತರವಾಗಿದ್ದ, ವಶವರ್ತಿಗಳಾಗಿದ್ದ, ಬಂಗಾರದ ಮಾಲೆಗಳನ್ನು ಧರಿಸಿದ್ದ, ಶುಭಕರವಾಗಿದ್ದ ಕುದುರೆಗಳು ಕ್ಷೇಮಿಯ ಮಗ ಸತ್ಯಧೃತಿಯನ್ನು

ಯುದ್ಧಕ್ಕೆ ಕೊಂಡೊಯ್ದವು. ಯಾರ ಧ್ವಜ, ಕವಚ, ಧನುಸ್ಸು ಎಲ್ಲವೂ ಒಂದೇ ಬಣ್ಣದವುಗಳೋ ಆ ಶುಕ್ಲನು ಬಿಳೀ ಬಣ್ಣದ ಕುದುರೆಗಳೊಂದಿಗೆ ಹಿಂದಿರುಗಿದನು.

ಸಮುದ್ರಸೇನನ ಮಗ, ರುದ್ರತೇಜಸ್ವಿ, ಚಂದ್ರದೇವನನ್ನು ಸಮುದ್ರದಲ್ಲಿ ಜನಿಸಿದ ಚಂದ್ರನ ಸದೃಶ ಕುದುರೆಗಳು ಕೊಂಡೊಯ್ದವು. ಬಂಗಾರದ ಆಭರಣಗಳಿಂದ ವಿಭೂಷಿತವಾದ, ಚಿತ್ರಮಾಲೆಗಳನ್ನು ಧರಿಸಿದ್ದ ಕನ್ನೈದಿಲೆಯ ಬಣ್ಣದ ಹಯಗಳು ಶೈಬ್ಯ ಚಿತ್ರರಥನನ್ನು ಯುದ್ಧಕ್ಕೆ ಕೊಂಡೊಯ್ದವು. ನೆಲಗಡಲೆ ಹೂವಿನ ಬಣ್ಣದ, ಕೆಂಪು ಮತ್ತು ಬಿಳಿಪು ಕೂದಲಿನಿಂದ ರಾರಾಜಿಸುತ್ತಿದ್ದ ಶ್ರೇಷ್ಠ ಹಯಗಳು ರಥಸೇನನನ್ನು ಕೊಂಡೊಯ್ಯುತ್ತಿದ್ದವು. ಯಾರನ್ನು ಸರ್ವಮನುಷ್ಯರಿಗಿಂತಲೂ ಶೂರನೆಂದು ಹೇಳುತ್ತಾರೋ ಆ ಪಟಚ್ಚರ ಹಂತಾರ ನೃಪನನ್ನು ಗಿಳಿಯ ಬಣ್ಣದ ಕುದುರೆಗಳು ಕೊಂಡೊಯ್ದವು. ಚಿತ್ರಮಾಲ್ಯ, ಚಿತ್ರವಾದ ಕವಚ-ಆಯುಧ-ಧ್ವಜವನ್ನು ಹೊಂದಿದ್ದ ಚಿತ್ರಾಯುಧನನ್ನು ಮುತ್ತುಗದ ಹೂವಿನ ಬಣ್ಣದ ಉತ್ತಮ ಹಯಗಳು ಕೊಂಡೊಯ್ದವು. ಧ್ವಜ-ಕವಚ-ಧನುಸ್ಸು-ರಥ-ಕುದುರೆಗಳು ಎಲ್ಲವೂ ಒಂದೇ ನೀಲಿ ಬಣ್ಣದಲ್ಲಿರುವ ನೀಲನು ಹಿಂದಿರುಗಿದನು. ಯಾರ ಕಟಾಂಜನ, ರಥ ಮತ್ತು ಧನುಸ್ಸುಗಳು ನಾನಾರೂಪದ ರತ್ನಗಳಿಂದ ಮೆತ್ತಲ್ಪಟ್ಟಿದ್ದವೋ ಆ

ಚಿತ್ರರಾಜನು ಚಿತ್ರಿತವಾಗಿ ಕಾಣುತ್ತಿದ್ದ ಚಿತ್ರವರ್ಣದ ಕುದುರೆ, ಧ್ವಜ ಮತ್ತು ಪತಾಕೆಗಳೊಂದಿಗೆ ಯುದ್ಧಕ್ಕೆ ಹೋದನು. ಕಮಲಪತ್ರದ ಸಮಾನ ಬಣ್ಣದ ಉತ್ತಮ ಹಯಗಳು ರೋಚಮಾನನ ಮಗ ಹೇಮವರ್ಣನನ್ನು ಕೊಂಡೊಯ್ದವು. ಯುದ್ಧಪ್ರಯೋಜಕಗಳಾದ, ಮಂಗಳದಾಯಕಗಳಾದ, ಲಾಳದ ಕಡ್ಡಿಯ ಬಣ್ಣದ, ಬಿಳಿಯ ಅಂಡಗಳನ್ನು ಹೊಂದಿದ್ದ, ಕೋಳಿಯ ಮೊಟ್ಟೆಯಂತೆ ಬಿಳುಪಾಗಿದ್ದ ಕುದುರುಗಳು ದಂಡಕೇತುವನ್ನು ಕೊಂಡೊಯ್ದವು.

ಅಡುಸೋಗೇಗಿಡದ ಬಣ್ಣದಂತೆ ಪ್ರಕಾಶಮಾನವಾಗಿದ್ದ ಕುದುರೆಗಳು ಪಾಂಡ್ಯನನ್ನು ಅನುಸರಿಸಿ ಹೋಗುತ್ತಿದ್ದ ಒಂದು ಲಕ್ಷ ನಲವತ್ತು ಸಾವಿರ ರಥಮುಖ್ಯರನ್ನು ಕೊಂಡೊಯ್ಯುತ್ತಿದ್ದವು. ನಾನವಿಧವಾದ ರೂಪಗಳುಳ್ಳ, ಬಣ್ಣಗಳ, ನಾನಾ ಆಕೃತಿಯ ಮುಖಗಳುಳ್ಳ ಕುದುರೆಗಳು ರಥಚಕ್ರದ ಚಿಹ್ನೆಯ ಧ್ವಜವುಳ್ಳ ವೀರ ಘಟೋತ್ಕಚನನ್ನು ಕೊಂಡೊಯ್ದವು. ಸುವರ್ಣವರ್ಣದ ಶ್ರೇಷ್ಠ ಕುದುರೆಗಳು ಸೇನೆಗಳ ಮಧ್ಯವಿದ್ದ ಯುಧಿಷ್ಠಿರನನ್ನು ಎಲ್ಲ ಕಡೆಯಿಂದ ಸುತ್ತುವರೆದು ಹಿಂದೆ ಹಿಂದೆ ಹೋಗುತ್ತಿದ್ದವು. ನಾನಾವಿಧದ ಬಣ್ಣಗಳ ಸುಂದರ ಕುದುರೆಗಳಿಂದ ಯುಕ್ತವಾದ ರಥಗಳಲ್ಲಿ ದೇವರೂಪೀ ಅನೇಕ ಪ್ರಭದ್ರಕರು ಕಾಂಚನಧ್ವಜರಾಗಿ ಭೀಮಸೇನನೊಂದಿಗೆ

ಇಂದ್ರನೊಡನಿರುವ ದಿವೌಕಸರಂತೆ ಕಾಣುತ್ತಿದ್ದರು. ಅಲ್ಲಿ ಸೇರಿದ್ದ ಅವರೆಲ್ಲರನ್ನೂ ಮೀರಿಸಿ ಧೃಷ್ಟದ್ಯುಮ್ನನು ರಾಜಿಸಿದನು. ಆದರೆ ಸರ್ವ ಸೇನೆಗಳಲ್ಲಿಯೂ ಕೂಡ ಭಾರದ್ವಾಜನು ಅತಿಯಾಗಿ ರಾರಾಜಿಸಿದನು.

## ದ್ವಂದ್ವಯುದ್ಧ

ಪಾಂಡವರು ಹಿಂದಿರುಗಿದ ನಂತರ ಮೋಡಗಳಿಂದ ಸೂರ್ಯನು ಹೇಗೋ ಹಾಗೆ ದ್ರೋಣನು ಬಾಣಗಳಿಂದ ಮುಚ್ಚಲ್ಪಡಲು ಕೌರವರಿಗೆ ಮಹಾ ಭಯವುಂಟಾಯಿತು. ಅವರ ತೀವ್ರ ನಡೆದಾಟದಿಂದ ಎದ್ದ ಧೂಳು ಕೌರವ ಸೈನ್ಯವನ್ನು ಸಂಪೂರ್ಣವಾಗಿ ಮುಚ್ಚಿತು. ಅದರಿಂದ ಅವರಿಗೆ ಕಾಣದಂತಾಗಿ, ದ್ರೋಣನು ಹತನಾದನೆಂದೇ ಅವರು ಭಾವಿಸಿದರು. ಕ್ರೂರ ಕರ್ಮವನ್ನು ಮಾಡಲು ಬಯಸಿದ್ದ ಆ ಶೂರ ಮಹೇಷ್ವಾಸರನ್ನು ಕಂಡು ತಕ್ಷಣವೇ ದುರ್ಯೋಧನನು ತನ್ನ ಸೈನ್ಯವನ್ನು ಪ್ರಚೋದಿಸಿದನು:

> “ನರಾಧಿಪರೇ! ಯಥಾಶಕ್ತಿಯಾಗಿ, ಯಥೋತ್ಸಾಹದಿಂದ, ಯಥಾಸತ್ವವನ್ನು ಬಳಸಿ ಯಥಾಯೋಗವಾಗಿ ಪಾಂಡವರ ಸೇನೆಯನ್ನು ತಡೆಯಿರಿ!”

ಆಗ ಧೃತರಾಷ್ಟ್ರನ ಮಗ ದುರ್ಮರ್ಷಣನು ಬಾಣಗಳನ್ನು ಎರಚುತ್ತಾ

ದ್ರೋಣನ ಜೀವವನ್ನು ಕಳೆಯಲಿಚ್ಛಿಸಿದ ಭೀಮನನ್ನು ಎದುರಿಸಿದನು. ಕ್ರುದ್ಧನಾಗಿ ಯುದ್ಧದಲ್ಲಿ ಮೃತ್ಯುಸಮಾನ ಬಾಣಗಳಿಂದ ಅವನನ್ನು ಹೊಡೆಯಲು, ಭೀಮಸೇನನೂ ಕೂಡ ಬಾಣಗಳಿಂದ ಅವನನ್ನು ಗಾಯಗೊಳಿಸಿದನು. ಮಹಾತುಮುಲ ಯುದ್ಧವು ನಡೆಯಿತು.

ತಮ್ಮ ಯಜಮಾನದಿಂದ ಆಜ್ಞಾಪಿತರಾದ ಆ ಪ್ರಾಜ್ಞರು, ಶೂರರು, ಪ್ರಹಾರಿಗಳು ಮೃತ್ಯುಭಯ-ಅಧಿಕಾರಭಯಗಳನ್ನು ತೊರೆದು ಶತ್ರುಗಳೊಂದಿಗೆ ಯುದ್ಧಮಾಡಿದರು. ಕೃತವರ್ಮನು ದ್ರೋಣನ ಬಳಿಬರುತ್ತಿದ್ದ ದಾಯಾದಿ ಸಾತ್ಯಕಿಯನ್ನು ಸುತ್ತುವರೆದನು. ಅವನನ್ನು ಶೈನೇಯನೂ ಶೈನೇಯನನ್ನು ಕೃತವರ್ಮನೂ ಮದಿಸಿದ ಆನೆಗಳಂತೆ ಕ್ರುದ್ಧರಾಗಿ ಕ್ರುದ್ಧರನ್ನು ತಡೆದರು. ಉಗ್ರಧನ್ವಿ ಸೈಂಧವನು ದ್ರೋಣನ ಕಡೆ ಬರುತ್ತಿದ್ದ ಶರಗಳ ಮಳೆಯನ್ನು ಸುರಿಸುತ್ತಿದ್ದ ಮಹೇಷ್ವಾಸ ಕ್ಷತ್ರಧರ್ಮನನ್ನು ತಡೆದನು. ಕ್ರುದ್ಧನಾದ ಕ್ಷತ್ರಧರ್ಮನು ಸಿಂಧುಪತಿಯ ಕೇತನ-ಕಾರ್ಮುಕಗಳನ್ನು ತುಂಡುಮಾಡಿ ಅನೇಕ ನಾರಾಚಗಳಿಂದ ಅವನ ಸರ್ವ ಮರ್ಮಗಳಿಗೆ ಹೊಡೆದನು. ಕೃತಹಸ್ತನಾದ ಸೈಂಧವನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಎಲ್ಲವೂ ಲೋಹಮಯವಾದ ಶರಗಳಿಂದ ರಣದಲ್ಲಿ ಕ್ಷತ್ರಧರ್ಮನನ್ನು ಹೊಡೆದನು. ಪಾಂಡವರಿಗೋಸ್ಕರವಾಗಿ ಯುದ್ಧಮಾಡುತ್ತಾ ದ್ರೋಣನ ಕಡೆ

ಬರುತ್ತಿದ್ದ ಅಣ್ಣ ಶೂರ ಮಹಾರಥ ಯುಯುತ್ಸುವನ್ನು ಸುಬಾಹುವು ಪ್ರಯತ್ನಿಸಿ ತಡೆದನು. ಅದರಿಂದ ಕ್ರುದ್ಧನಾದ ಯುಯುತ್ಸುವು ನಿಶಿತವಾದ ಪೀತವರ್ಣದ ಎರಡು ಕ್ಷುರಗಳಿಂದ ಧನುರ್ಬಾಣಯುಕ್ತವಾಗಿದ್ದ ಪರಿಘಗಳಂತಿದ್ದ ಅವರ ಎರಡು ಭುಜಗಳನ್ನೂ ಕತ್ತರಿಸಿದನು. ಪ್ರಕ್ಷುಬ್ಧವಾದ ಸಾಗರವನ್ನು ದಡವು ತಡೆಯುವಂತೆ ರಾಜಾ ಯುಧಿಷ್ಠಿರನನ್ನು ಮದ್ರರಾಜನು ತಡೆಹಿಡಿದನು. ಅವನ ಮೇಲೆ ಧರ್ಮರಾಜನು ಅನೇಕ ಮರ್ಮಭೇದಿ ಬಾಣಗಳನ್ನು ಎರಚಲು ಮದ್ರೇಶಸ್ತನು ಅರವತ್ನಾಲ್ಕು ಬಾಣಗಳಿಂದ ಅವನನ್ನು ಹೊಡೆದು ಜೋರಾಗಿ ಗರ್ಜಿಸಿದನು. ಗರ್ಜಿಸುತ್ತಿದ್ದ ಅವನ ಕೇತು ಮತ್ತು ಕಾರ್ಮುಕಗಳನ್ನು ಪಾಂಡವಶ್ರೇಷ್ಠನು ಎರಡು ಕ್ಷುರಗಳಿಂದ ಕತ್ತರಿಸಲು ಜನರು ಜೋರಾಗಿ ಜಯಕಾರ ಮಾಡಿದರು. ಹಾಗೆಯೇ ರಾಜಾ ಬಾಹ್ಲೀಕನು ತನ್ನ ಸೇನೆಯೊಂದಿಗೆ ಬರುತ್ತಿದ್ದ ರಾಜ ದ್ರುಪದನನ್ನು ಸೇನೆಯನ್ನೊಡಗೂಡಿ ಶರಗಳಿಂದ ತಡೆದನು. ಆಗ ಸೇನೆಗಳೊಡನಿದ್ದ ಆ ಇಬ್ಬರು ವೃದ್ಧರ ನಡುವೆ ಮದೋದಕವನ್ನು ಸುರಿಸುತ್ತಿದ್ದ ಎರಡು ಮಹಾಗಜಗಳ ನಡುವಿನಂತೆ ಘೋರವಾದ ಯುದ್ಧವು ನಡೆಯಿತು. ಅವಂತಿಯ ವಿಂದಾನುವಿಂದರು ಸೇನೆಗಳೊಡನೆ ಸೇನಾಸಮೇತನಾಗಿದ್ದ ಮತ್ಸ್ಯ ವಿರಾಟನನ್ನು ಹಿಂದೆ ಇಂದ್ರಾಗ್ನಿಗಳಿಬ್ಬರೂ ಬಲಿಯನ್ನು ಆಕ್ರಮಣಿಸಿದಂತೆ ಆಕ್ರಮಣಿಸಿದರು.

ಆಗ ದೇವಾಸುರರ ಯುದ್ದದಂತೆ ಮತ್ಸ್ಯ ಮತ್ತು ಕೇಕಯರ ನಡುವೆ ಭಯವಿಲ್ಲದೇ ಅಶ್ವ-ರಥ-ಗಜಗಳ ಭಯಂಕರ ಯುದ್ಧವು ನಡೆಯಿತು. ನಕುಲನ ಮಗ ಶತಾನೀಕನನ್ನು ಸಭಾಪತಿ ಭೂತಕರ್ಮನು ಬಾಣಗಳ ಜಾಲವನ್ನೇ ಬೀಸುತ್ತಾ ದ್ರೋಣನ ಬಳಿ ಬಾರದಂತೆ ತಡೆದನು. ಆಗ ನಕುಲನ ಮಗನು ತೀಕ್ಷ್ಣವಾದ ಮೂರು ಭಲ್ಲಗಳಿಂದ ಭೂತಕರ್ಮನ ಬಾಹುಗಳನ್ನೂ ಕತ್ತನ್ನೂ ದೇಹದಿಂದ ಬೇರ್ಪಡಿಸಿದನು. ಶರಗಳ ಮಳೆಯನ್ನೇ ಪ್ರಯೋಗಿಸುತ್ತಾ ದ್ರೋಣಾಭಿಮುಖನಾಗಿ ಬರುತ್ತಿದ್ದ ವೀರ ವಿಕ್ರಾಂತ ಸುತಸೋಮನನ್ನು ವಿವಿಂಶತಿಯು ತಡೆದನು. ಸಂಕ್ರುದ್ಧನಾದ ಕವಚವನ್ನು ಧರಿಸಿದ್ದ ಸುತಸೋಮನು ಚಿಕ್ಕಪ್ಪ ವಿವಿಂಶತಿಯನ್ನು ಜಿಹ್ಮಗ ಶರಗಳಿಂದ ಹೊಡೆದು ಹಿಮ್ಮೆಟ್ಟಲಿಲ್ಲ. ಅನಂತರ ಭೀಮರಥನು ನಿಶಿತವಾದ ಆರು ಆಯಸಗಳಿಂದ ಶಾಲ್ವನನ್ನು ಕುದುರೆಗಳೊಂದಿಗೆ ಯಮಸಾದನಕ್ಕೆ ಕಳುಹಿಸಿದನು. ನವಿಲಿನ ಬಣ್ಣದ ಕುದುರೆಗಳೊಡನೆ ಬರುತ್ತಿದ್ದ ಶ್ರುತಕರ್ಮನನ್ನು ಧೃತರಾಷ್ಟ್ರನ ಮೊಮ್ಮಗ, ಚಿತ್ರಸೇನಿಯ ಮಗನು ತಡೆದನು. ಪರಸ್ಪರರ ವಧೆಮಾಡಲು ಬಯಸಿದ್ದ ಆ ಇಬ್ಬರು ಧೃತರಾಷ್ಟ್ರನ ದುರ್ಧರ್ಷ ಮೊಮ್ಮೊಕ್ಕಳು ತಂದೆಯರಿಗೆ ಅರ್ಥಸಿದ್ಧಿಯಾಗಲೆಂದು ಉತ್ತಮ ಯುದ್ಧದಲ್ಲಿ ತೊಡಗಿದರು. ರಣರಂಗದಲ್ಲಿ ಮುಂದೆ ನಿಂತಿರುವ ಪ್ರತಿವಿಂಧ್ಯನನ್ನು ನೋಡಿ ದ್ರೌಣಿಯು, ತಂದೆಗೆ ಮಾನವನ್ನುಂಟು

ಮಾಡುತ್ತಾ ಮಾರ್ಗಣಗಳಿಂದ ಅವನನ್ನು ಮುಚ್ಚಿದನು. ತಂದೆಗೋಸ್ಕರವಾಗಿ ನಿಂತಿದ್ದ ಆ ಸಿಂಹದಬಾಲದ ಚಿಹ್ನೆಯ ಧ್ವಜವುಳ್ಳವನನ್ನು ಕ್ರುದ್ಧನಾದ ಪ್ರತಿವಿಂಧ್ಯನು ನಿಶಿತ ಶರಗಳಿಂದ ಪ್ರತಿಯಾಗಿ ಹೊಡೆದನು. ಬೀಜಬಿತ್ತುವ ಕಾಲದಲ್ಲಿ ಬೀಜಗಳನ್ನು ಸುರಿಸುವಂತೆ ದ್ರೌಣಿಯು ದ್ರೌಪದೇಯನನ್ನು ಶರವರ್ಷಗಳಿಂದ ಮುಚ್ಚಿದನು. ಯಾರನ್ನು ಎರಡೂ ಸೇನೆಗಳಲ್ಲಿ ಅತ್ಯಂತ ಶೂರನೆಂದು ಅಭಿಪ್ರಾಯಪಡುತ್ತಾರೋ ಆ ಪಟಚ್ಚರಹಂತಾರನನ್ನು ಲಕ್ಷ್ಮಣನು ಎದುರಿಸಿದನು. ಅವನು ಲಕ್ಷ್ಮಣನ ಧನುಸ್ಸು ಮತ್ತು ಧ್ವಜಗಳನ್ನು ತುಂಡರಿಸಿ ಲಕ್ಷ್ಮಣನ ಮೇಲೆ ಶರಜಾಲಗಳನ್ನು ಪ್ರಯೋಗಿಸಿ ಬಹುವಾಗಿ ಶೋಭಿಸಿದನು. ಸಮರದಲ್ಲಿ ಮಹಾಪ್ರಾಜ್ಞ ಯುವಕ ವಿಕರ್ಣನು ಮುಂದುವರೆಯುತ್ತಿದ್ದ ಯುವಕ ಯಾಜ್ಞಸೇನಿ ಶಿಖಂಡಿಯನ್ನು ಸುತ್ತುವರೆದು ತಡೆದನು. ಆಗ ಯಾಜ್ಞಸೇನಿಯು ಅವನನ್ನು ಶರಜಾಲಗಳಿಂದ ಮುಚ್ಚಿದನು. ವಿಕರ್ಣನು ಆ ಬಾಣಜಾಲವನ್ನು ತೆಗೆದುಹಾಕಿದನು. ದ್ರೋಣಾಭಿಮುಖವಾಗಿ ಬರುತ್ತಿದ್ದ ಉತ್ತಮೌಜಸನನ್ನು ಅಂಗದನು ಎದುರಿಸಿ ವತ್ಸದಂತಗಳಿಂದ ತಡೆದನು. ಆ ಇಬ್ಬರು ಪುರುಷಸಿಂಹರು ಪ್ರಹಾರಿಸುತ್ತಾ ತುಮುಲ ಯುದ್ಧವನ್ನು ನಡೆಸಿರಲು ಅವರ ಮೇಲೆ ಎಲ್ಲ ಸೈನಿಕರಿಗೂ ಪ್ರೀತಿಯು ಹೆಚ್ಚಾಯಿತು. ಮಹೇಷ್ವಾಸ ದುರ್ಮುಖನಾದರೋ ದ್ರೋಣನ ಕಡೆ ಬರುತ್ತಿದ್ದ ವೀರ

ಪುರಜಿತ ಬಲಶಾಲೀ ಕುಂತಿಭೋಜನನ್ನು ತಡೆದನು. ಅವನು ನಾರಾಚಗಳಿಂದ ದುರ್ಮುಖನ ಹುಬ್ಬುಗಳ ಮಧ್ಯೆ ಹೊಡೆದನು. ಆಗ ಅವನ ಮುಖವು ನಾಳಯುಕ್ತ ಕಮಲದಂತೆ ಕಂಡಿತು. ಕರ್ಣನಾದರೋ ದ್ರೋಣನ ಅಭಿಮುಖವಾಗಿ ಬರುತ್ತಿದ್ದ ಕೆಂಪು ಧ್ವಜಗಳನ್ನುಳ್ಳ ಕೇಕಯ ಸಹೋದರರನ್ನು ಶರವರ್ಷಗಳಿಂದ ತಡೆದನು. ತುಂಬಾ ಸಿಟ್ಟಿಗೆದ್ದ ಅವರು ಅವನನ್ನೂ ಬಾಣಗಳ ಮಳೆಯಿಂದ ಮುಚ್ಚಿದರು. ಅವನೂ ಕೂಡ ಅವರನ್ನು ಪುನಃ ಪುನಃ ಶರಜಾಲಗಳಿಂದ ಮುಚ್ಚಿದನು. ಪರಸ್ಪರ ಬಾಣಪ್ರಯೋಗಳಿಂದ ಮುಚ್ಚಲ್ಪಟ್ಟ ಕರ್ಣನಾಗಲೀ, ಆ ಐವರಾಗಲೀ ಅವರ ಕುದುರೆ-ಸೂತ-ರಥಗಳ ಸಹಿತ ಕಾಣಲಿಲ್ಲ.

ಧೃತರಾಷ್ಟ್ರನ ಮಕ್ಕಳಾದ ದುರ್ಜಯ, ಜಯ ಮತ್ತು ವಿಜಯರು ನೀಲ, ಕಾಶ್ಯ ಮತ್ತು ಜಯ ಈ ಮೂರು ಶೂರರನ್ನು ತಡೆದರು. ಆಗ ಕಾಡು ಕೋಣಗಳೊಂದಿಗೆ ಸಿಂಹ-ವ್ಯಾಘ್ರ-ತೋಳಗಳ ಹೊಡೆದಾಟದಂತೆ ನೋಡುವವರಿಗೆ ಸಂತೋಷವನ್ನು ಕೊಡುವ ಘೋರ ಯುದ್ಧವು ಅವರ ನಡುವೆ ನಡೆಯಿತು. ಕ್ಷೇಮಧೂರ್ತಿ ಮತ್ತು ಬೃಹಂತ ಈ ಇಬ್ಬರು ಸಹೋದರರೂ ಯುದ್ಧದಲ್ಲಿ ದ್ರೋಣನ ಕಡೆ ಬರುತ್ತಿದ್ದ ಸಾತ್ವತ ಸಾತ್ಯಕಿಯನ್ನು ತೀಕ್ಷ್ಣ ಶರಗಳಿಂದ ಗಾಯಗೊಳಿಸಿದರು. ಅವರ ನಡುವೆ ವನದಲ್ಲಿ ಮದೋದಕವನ್ನು ಸುರಿಸುವ ಎರಡು ಆನೆಗಳೊಡನೆ ಸಿಂಹದ

ಹೋರಾಟದಂತೆ ಅದ್ಭುತವಾದ ಯುದ್ಧವು ನಡೆಯಿತು. ಚೇದಿರಾಜನು ಕ್ರುದ್ಧನಾಗಿ ಬಾಣಗಳನ್ನು ಪ್ರಯೋಗಿಸಿ ಯುದ್ಧಾಭಿನಂದನ ರಾಜಾ ಅಂಬಷ್ಠನನ್ನು ದ್ರೋಣನ ಬಳಿ ಹೋಗದಂತೆ ತಡೆದನು. ಅಂಬಷ್ಟನು ಅವನನ್ನು ಶಲಾಕಗಳಿಂದ ಹೊಡೆಯಲು, ಅವನು ಬಾಣದೊಂದಿಗೆ ಬಿಲ್ಲನ್ನು ಬಿಟ್ಟು, ರಥದಿಂದ ನೆಲದ ಮೇಲೆ ಬಿದ್ದನು. ಕ್ರೋಧರೂಪಿ ವಾರ್ಷ್ಣೇಯ ವಾರ್ಧಕ್ಷೇಮಿಯನ್ನು ಶಾರದ್ವತ ಕೃಪನು ಸಣ್ಣ ಸಣ್ಣ ಶರಗಳಿಂದ ದ್ರೋಣನ ಬಳಿ ಹೋಗದಂತೆ ತಡೆದನು. ಆ ಇಬ್ಬರು ಚಿತ್ರಯೋಧಿಗಳು - ಕೃಪ ವಾರ್ಷ್ಣೇಯರು - ಯುದ್ಧಮಾಡುತ್ತಿರುವುದನ್ನು ನೋಡುತ್ತಿದ್ದವರು ಆ ಯುದ್ಧದಲ್ಲಿ ಆಸಕ್ತಿ ತೋರಿಸುವುದನ್ನು ಬಿಟ್ಟು ಬೇರೆ ಏನನ್ನು ಮಾಡಲೂ ಮನಸ್ಸುಮಾಡಲಿಲ್ಲ. ಸೋಮದತ್ತನ ಮಗನಾದರೋ ಬರುತ್ತಿದ್ದ ರಾಜರ ಅತಂದ್ರಿತ ಮಣಿಮಂತನನ್ನು ತಡೆದು ದ್ರೋಣನ ಯಶಸ್ಸನ್ನು ಹೆಚ್ಚಿಸಿದನು. ಅವನು ಸೌಮದತ್ತಿಯ ಧನುಸ್ಸಿನ ಶಿಂಜಿನಿಯನ್ನೂ, ಕೇತನವನ್ನೂ ಮತ್ತೆ ಪುನಃ ಪತಾಕೆ, ಸೂತ ಮತ್ತು ಚತ್ರಗಳನ್ನು ರಥದಿಂದ ಬೀಳಿಸಿದನು. ಆಗ ಯೂಪಕೇತು ಅಮಿತ್ರಹ ಸೌಮದತ್ತಿಯು ತಕ್ಷಣವೇ ರಥದಿಂದ ಹಾರಿ ಶ್ರೇಷ್ಠ ಖಡ್ಗದಿಂದ ಅವನನ್ನು ಕುದುರೆಗಳು, ಸೂತ, ಧ್ವಜ ಮತ್ತು ರಥಗೊಳಿಂದಿಗೆ ತುಂಡರಿಸಿದನು.

ತನ್ನ ರಥವನ್ನು ಏರಿ, ಇನ್ನೊಂದು ಧನ್ನುಸ್ಸನ್ನು ತೆಗೆದುಕೊಂಡು, ಸ್ವಯಂ ತಾನೇ ಕುದುರೆಗಳನ್ನು ನಡೆಸುತ್ತಾ ಪಾಂಡವ ಸೇನೆಯನ್ನು ಸಂಹರಿಸುತ್ತಿದ್ದನು. ಮುಸಲ, ಮುದ್ಗರ, ಚಕ್ರ, ಭಿಂಡಿಪಾಲ, ಪರಶು, ನೀರು, ಗಾಳಿ, ಅಗ್ನಿ, ಕಲ್ಲು, ಭಸ್ಮ, ಹುಲ್ಲು, ಮರಗಳೊಂದಿಗೆ ಏರುತ್ತಾ, ಇಳಿಯುತ್ತಾ, ಒಡೆಯುತ್ತಾ, ಕೊಲ್ಲುತ್ತಾ, ಓಡಿಸುತ್ತಾ, ಎಸೆಯುತ್ತಾ ಸೇನೆಗಳನ್ನು ಬೆದರಿಸುತ್ತಾ ದ್ರೋಣನನ್ನು ತಲುಪಲು ಘಟೋತ್ಕಚನು ಧಾವಿಸಿ ಬಂದನು. ನಾನಾಪ್ರಹರಣಗಳಿಂದ, ನಾನಾ ಯುದ್ಧ ವಿಶೇಷಗಳಿಂದ ರಾಕ್ಷಸನನ್ನು ರಾಕ್ಷಸ ಅಲಂಬುಸನು ಕ್ರುದ್ಧನಾಗಿ ಎದುರಿಸಿದನು. ಹಿಂದೆ ಶಂಬರ ಮತ್ತು ಅಮರರಾಜನೊಡನೆ ನಡೆದ ಯುದ್ಧದಂತೆ ಆ ಇಬ್ಬರು ರಾಕ್ಷಸ ಮುಖ್ಯರ ನಡುವೆ ಯುದ್ಧವು ನಡೆಯಿತು. ಹೀಗೆ ಕೌರವರ ಮತ್ತು ಪಾಂಡವರ ರಥ-ಆನೆ-ಕುದುರೆ ಸವಾರರ ಮತ್ತು ಪದಾತಿಗಳ ನಡುವೆ ದ್ವಂದ್ವಯುದ್ಧವು ನಡೆಯಿತು.

ದ್ರೋಣನ ನಾಶಕ್ಕೆ ಮತ್ತು ರಕ್ಷಣೆಗೆ ತೊಡಗಿದ್ದ ಅವರ ನಡುವೆ ನಡೆದ ಯುದ್ಧದಂತಹ ಯುದ್ಧವನ್ನು ಈ ಮೊದಲು ಯಾರೂ ನೋಡಲೂ ಇರಲಿಲ್ಲ ಮುತ್ತು ಕೇಳಲೂ ಇರಲಿಲ್ಲ. ಅಲ್ಲಿ ಕಾಣುತ್ತಿದ್ದ ಅನೇಕ ಯುದ್ಧಗಳಲ್ಲಿ ಇದು ಘೋರವಾಗಿತ್ತು, ಅವರು ಹಾಗೆ ಹಿಂದಿರುಗಿ ತಮ ತಮಗೆ ಬೇಕಾದವರೊಂದಿಗೆ ಹೋರಾಡುತ್ತಿರಲು ಸ್ವಯಂ

ದುರ್ಯೋಧನನು ಗಜಸೇನೆಯೊಂದಿಗೆ ಭೀಮನ ಮೇಲೆ ಎರಗಿದನು. ಸಲಗನಿಂದ ಕಾಳಗಕ್ಕೆ ಸೆಳೆಯಲ್ಪಟ್ಟ ಸಲಗದಂತೆ ಮತ್ತು ಗೂಳಿಯಿಂದ ಕರೆಯಲ್ಪಟ್ಟ ಗೂಳಿಯಂತೆ ಸ್ವಯಂ ರಾಜನಿಂದಲೇ ನಡೆಸಲ್ಪಡುತ್ತಿದ್ದ ಗಜಸೇನೆಯನ್ನು ಭೀಮನು ಆಕ್ರಮಣಿಸಿದನು. ಯುದ್ಧಕುಶಲನಾದ ಮತ್ತು ಬಾಹುವೀರ್ಯದಿಂದ ಸಮನ್ವಿತನಾದ ಆ ಪಾರ್ಥನು ಆನೆಗಳ ಸೇನೆಯನ್ನು ಕ್ಷಣದಲ್ಲಿಯೇ ಧ್ವಂಸಮಾಡಿದನು. ಮದಿಸಿ ಎಲ್ಲಕಡೆ ಓಡುತ್ತಿರುವ, ಪರ್ವತಗಳಂತಿದ್ದ ಆ ಆನೆಗಳು ಭೀಮಸೇನನ ನಾರಾಚಗಳಿಗೆ ಸಿಲುಕಿ ಮತ್ತನ್ನು ಕಳೆದುಕೊಂಡು ಹಿಮ್ಮೆಟ್ಟಿದವು. ವಾಯುವು ಹೇಗೆ ಮೋಡಗಳ ಜಾಲಗಳನ್ನು ಎಲ್ಲಕಡೆ ಚದುರಿಸುತ್ತಾನೋ ಹಾಗೆಯೇ ಪವನಾತ್ಮಜನೂ ಕೂಡ ಗಜಸೇನೆಗಳನ್ನು ಚಲ್ಲಾಪಿಲ್ಲಿ ಮಾಡಿದನು. ಕಿರಣಗಳಿಂದ ಜಗತ್ತೆಲ್ಲವನ್ನೂ ಬೆಳಗಿಸುವ ಉದಿಸುತ್ತಿರುವ ರವಿಯಂತೆ ಭೀಮನು ಆನೆಗಳ ಮೇಲೆ ಬಾಣಗಳನ್ನು ಪ್ರಯೋಗಿಸಿ ಶೋಭಿಸಿದನು. ಆಕಾಶದಲ್ಲಿ ನಾನಾ ಮೋಡಗಳು ಸೂರ್ಯನ ಕಿರಣಗಳಿಂದ ಬೆಳಗುತ್ತಿರುವಂತೆ ಆನೆಗಳು ಶರೀರದ ತುಂಬ ಭೀಮನ ನೂರಾರು ಬಾಣಗಳಿಂದ ಹೊಡೆಯಲ್ಪಟ್ಟು ಪ್ರಕಾಶಿಸಿದವು. ಈ ರೀತಿ ಆನೆಗಳೊಡನೆ ಕದನ ಮಾಡುತ್ತಿದ್ದ ಅನಿಲಾತ್ಮಜನ ಬಳಿ ಕ್ರುದ್ಧನಾದ ದುರ್ಯೋಧನನು ಬಂದು ನಿಶಿತ ಶರಗಳಿಂದ ಹೊಡೆದನು.

ಒಡನೆಯೇ ಗಾಯದಿಂದ ಹೊರಡುವ ರಕ್ತದಂತೆ ಕಣ್ಣುಗಳನ್ನು ಕೆಂಪು ಮಾಡಿಕೊಂಡು ಭೀಮನು ಅವನನ್ನು ಕೊನೆಗೊಳಿಸಲು ಬಯಸಿ ನಿಶಿತ ಪತ್ರಿಗಳಿಂದ ಹೊಡೆದನು. ಶರೀರವೆಲ್ಲ ಬಾಣಗಳಿಂದ ಚುಚ್ಚಲ್ಪಡಲು ಕ್ರುದ್ಧನಾದ ದುರ್ಯೋಧನನು ನಸುನಗುತ್ತಾ ಪಾಂಡವ ಭೀಮಸೇನನನ್ನು ಸೂರ್ಯನ ರಶ್ಮಿಗಳಂತಿದ್ದ ನಾರಾಚಗಳಿಂದ ಹೊಡೆದನು. ತಕ್ಷಣವೇ ಪಾಂಡವನು ಎರಡು ಭಲ್ಲಗಳಿಂದ ಅವನ ಧ್ವಜದಲ್ಲಿದ್ದ ಮಣಿಮಯವಾದ ರತ್ನಚಿತ್ರಿತವಾಗಿದ್ದ ಆನೆಯನ್ನೂ ಮತ್ತು ಬಿಲ್ಲನ್ನೂ ಕತ್ತರಿಸಿದನು. ಈ ರೀತಿ ದುರ್ಯೋಧನನನ್ನು ಪೀಡಿಸುತ್ತಿದ್ದ ಭೀಮನನ್ನು ಕಂಡು ಅವನನ್ನು ಅಲ್ಲಿಂದ ಕದಲಿಸಲು ಆನೆಯನ್ನೇರಿದ್ದ ಅಂಗರಾಜನು ಧಾವಿಸಿ ಬಂದನು. ಮೋಡಗಳಂತೆ ಗುಡುಗುತ್ತ ತನ್ನ ಮೇಲೆ ಎರಗುತ್ತಿದ್ದ ಆ ಆನೆಯನ್ನು ನೋಡಿ ಭೀಮಸೇನನು ನಾರಾಚಗಳಿಂದ ಅದರ ಕುಂಭಸ್ಥಳಕ್ಕೆ ಹೊಡೆದನು. ಅವು ಅದರ ದೇಹವನ್ನು ಸೀಳಿ ಭೂಮಿಯಲ್ಲಿ ಹುಗಿದುಕೊಂಡವು. ಅನಂತರ ಆ ಅನೆಯು ವಜ್ರವು ತಾಗಿದ ಪರ್ವತದಂತೆ ಕೆಳಗುರುಳಿತು. ಆ ಆನೆಯಿಂದ ಕೆಳಗೆ ಹಾರಲು ಪ್ರಯತ್ನಿಸುತ್ತಿದ್ದ ಮ್ಲೇಚ್ಛರ ರಾಜನ ಶಿರವನ್ನು ಕ್ಷಿಪ್ರಕಾರೀ ವೃಕೋದರನು ಭಲ್ಲದಿಂದ ಕತ್ತರಿಸಿದನು.

## ಭಗದತ್ತನ ಯುದ್ಧ

ಅಂಗರಾಜನು ಕೆಳಗೆ ಬೀಳಲು ಅವನ ಸೇನೆಯು ಪಲಾಯನ ಮಾಡಿತು. ಸಂಭ್ರಾಂತರಾಗಿ ಓಡಿ ಹೋಗುತ್ತಿದ್ದ ಕುದುರೆ-ಆನೆ-ರಥಗಳು ಪದಾತಿಗಳನ್ನೇ ತುಳಿದವು. ಆ ಸೇನೆಗಳು ಎಲ್ಲ ಕಡೆ ಓಡಿ ಹೋಗುತ್ತಿರಲು ಪ್ರಾಗ್ಜ್ಯೋತಿಷನು ಆನೆಯೊಂದಿಗೆ ಆಕ್ರಮಣಿಸಿದನು. ಯಾವ ಆನೆಯ ಮೇಲೆ ಕುಳಿತು ಮಘವಾನನು ದೈತ್ಯ-ದಾನವರನ್ನು ಜಯಿಸಿದನೋ ಅದೇ ಶ್ರೇಷ್ಠ ಆನೆಗಳ ಕುಲದಲ್ಲಿ ಹುಟ್ಟಿದ ಆನೆಯ ಮೇಲೆ ಕುಳಿತು ಒಮ್ಮಿಂದೊಮ್ಮೆಲೇ ಆಕ್ರಮಣಿಸಿದನು. ಕ್ರುದ್ಧವಾದ ಆ ಶ್ರೇಷ್ಠ ಆನೆಯು ಕಣ್ಣುಗಳನ್ನು ಅಗಲ ಮಾಡಿಕೊಂಡು ತನ್ನ ಎರಡೂ ಮುಂಗಾಲುಗಳಿಂದ ಮತ್ತು ಸುತ್ತಿಕೊಂಡಿರುವ ಸೊಂಡಿಲಿನಿಂದ ಮಥಿಸಿಬಿಡುವಂತೆ ಪಾಂಡವನ ಮೇಲೆ ಎರಗಿತು. ಮಾರಿಷ! ಆಗ "ಹಾಹಾ! ಆನೆಯಿಂದ ಭೀಮನು ಹತನಾದನು!" ಎಂದು ಸೈನ್ಯದ ಎಲ್ಲ ಕಡೆಗಳಲ್ಲಿ ಮಹಾನಾದವುಂಟಾಯಿತು. ಆ ಕೂಗಿನಿಂದ ತತ್ತರಿಸಿದ ಪಾಂಡವರ ಸೇನೆಯು ತಕ್ಷಣವೇ ವೃಕೋದರನು ಎಲ್ಲಿ ನಿಂತಿದ್ದನೋ ಅಲ್ಲಿಗೆ ಧಾವಿಸಿತು. ರಾಜಾ ಯುಧಿಷ್ಠಿರನು ವೃಕೋದರನು ಹತನಾದನೆಂದು ತಿಳಿದು ಪಾಂಚಾಲರೊಂದಿಗೆ ಭಗದತ್ತನನ್ನು ಎಲ್ಲ ಕಡೆಗಳಿಂದ ಸುತ್ತುವರೆದನು. ರಥಿಗಳಲ್ಲಿ ಶ್ರೇಷ್ಠರು ರಥಗಳಿಂದ ಅವನನ್ನು ಎಲ್ಲಕಡೆಗಳಿಂದ ಸುತ್ತುವರೆದು ನೂರಾರು ಸಹಸ್ರಾರು ತೀಕ್ಷ್ಣ ಶರಗಳಿಂದ ಮುಚ್ಚಿದರು. ಆ ಪರ್ವತೇಶ್ವರನು ಅಂಕುಶದಿಂದಲೇ ತನ್ನ

ಮೇಲೆ ಬೀಳುತ್ತಿದ್ದ ಶರಗಳನ್ನು ತಡೆದು ಆನೆಯೊಂದಿಗೆ ಪಾಂಡವ-ಪಾಂಚಾಲರನ್ನು ಜಜ್ಜಿದನು. ಆ ವೃದ್ಧ ಭಗದತ್ತನ ಆನೆಯು ಅದ್ಭುತವನ್ನೇ ಮಾಡಿ ತೋರಿಸಿತು.

ಆಗ ದಶಾರ್ಣರ ರಾಜನು ಮದೋದಕವನ್ನು ಸುರಿಸುತ್ತಿದ್ದ, ಶೀಘ್ರವಾಗಿ ಸಾಗುತ್ತಿದ್ದ, ಮತ್ತು ವಕ್ರಗತಿಯಲ್ಲಿ ಹೋಗುತ್ತಿದ್ದ ಆನೆಯ ಮೇಲೇರಿ ಪ್ರಾಗ್ಜ್ಯೋತಿಷನನ್ನು ಆಕ್ರಮಣಿಸಿದನು. ಭೀಮರೂಪದ ಆ ಎರಡು ಆನೆಗಳ ನಡುವೆ ಹಿಂದೆ ರೆಕ್ಕೆಗಳನ್ನು ಹೊಂದಿದ್ದ ಪರ್ವತಗಳು ವೃಕ್ಷಗಳೊಂದಿಗೆ ಹೊಡೆದಾಡುತ್ತಿದ್ದಂತೆ ಭಯಂಕರ ಯುದ್ಧವು ನಡೆಯಿತು. ಪ್ರಾಗ್ಜ್ಯೋತಿಷಪತಿಯ ಆನೆಯು ಹಿಂದೆ ಸರಿದು ಪುನಃ ರಭಸದಿಂದ ಮುಂದೆ ಬಂದು ದಶಾರ್ಣಾಧಿಪತಿಯ ಆನೆಯ ಪಾರ್ಶ್ವಭಾಗವನ್ನು ಪ್ರಹರಿಸಿ ಸೀಳಿ ಕೆಳಗುರುಳಿಸಿತು. ಆಗ ಸೂರ್ಯನ ರಶ್ಮಿಗಳಂತೆ ಹೊಳೆಯುತ್ತಿದ್ದ ಏಳು ತೋಮರಗಳಿಂದ ಆನೆಯ ಮೇಲೆ ಕುಳಿತಿದ್ದ ಶತ್ರುವನ್ನು ಕೆಳಗೆ ಬೀಳುವಾಗ ಸಂಹರಿಸಿದನು.

ಯುಧಿಷ್ಠಿರನಾದರೋ ರಾಜಾ ಭಗದತ್ತನ ಮೇಲೆ ಪ್ರಹರಿಸುತ್ತಾ ಮಹಾ ರಥಸೇನೆಯೊಂದಿಗೆ ಅವನನ್ನು ಎಲ್ಲ ಕಡೆಗಳಿಂದ ಸುತ್ತುವರೆದನು. ಪರ್ವತದ ಮೇಲಿನ ವನ ಮಧ್ಯದಲ್ಲಿ ಪ್ರಜ್ವಲಿಸುತ್ತಿರುವ ಹುತಾಶನನಂತೆ ರಥಗಳಿಂದ ಎಲ್ಲಕಡೆಗಳಲ್ಲಿ ಸುತ್ತುವರೆಯಲ್ಪಟ್ಟಿದ್ದ

ಆನೆಯ ಮೇಲೆ ಕುಳಿತಿದ್ದ ಅವನು ಶೋಭಿಸಿದನು. ಬಾಣಗಳ ಮಳೆಗರೆಯುತ್ತಿದ್ದ ಉಗ್ರಧನ್ವಿ ರಥಿಗಳ ಮಂಡಲವು ಎಲ್ಲ ಕಡೆಗಳಿಂದಲೂ ಆನೆಯ ಮೇಲೆ ಆಕ್ರಮಣ ನಡೆಸುತ್ತಿತ್ತು. ಆಗ ಪ್ರಾಗ್ಜ್ಯೋತಿಷದ ರಾಜನು ಆ ಮಹಾಗಜವನ್ನು ಹತೋಟಿಗೆ ತೆಗೆದುಕೊಂಡು ಯುಯುಧಾನನ ರಥದ ಕಡೆ ರಭಸದಿಂದ ನುಗ್ಗಿಸಿದನು. ಆ ಮಹಾಗಜವು ಶಿನಿಯ ಮೊಮ್ಮಗನ ರಥವನ್ನು ಸೊಂಡಿಲಿನಿಂದ ಹಿಡಿದು ವೇಗದಿಂದ ದೂರಕ್ಕೆಸೆಯಿತು. ಅಷ್ಟರೊಳಗೆ ಯುಯುಧಾನನು ರಥದಿಂದ ಕೆಳಕ್ಕೆ ಹಾರಿದ್ದನು. ಸಾರಥಿಯಾದರೋ ದೊಡ್ಡದಾಗಿದ್ದ ಸೈಂಧವ ಕುದುರೆಗಳನ್ನು ಮೇಲೆಬ್ಬಿಸಿ ರಥದ ಮೇಲೆ ಹಾರಿ ಕುಳಿತು ರಥವನ್ನು ಪುನಃ ಸಾತ್ಯಕಿಯ ಬಳಿ ತಂದು ನಿಲ್ಲಿಸಿದನು. ಅಷ್ಟರಲ್ಲಿಯೇ ತ್ವರೆಮಾಡಿ ಆ ಆನೆಯು ರಥಮಂಡಲದಿಂದ ಹೊರಬಂದು ಎಲ್ಲ ರಾಜರನ್ನೂ ಎಳೆದೆಳೆದು ಎಸೆಯತೊಡಗಿತ್ತು. ಅತಿ ವೇಗದ ಆ ಆನೆಯಿಂದ ಪೀಡಿತರಾದ ನರರ್ಷಭರು ಒಂದೇ ಆನೆಯೊಂದಿಗೆ ಹೋರಾಡುತ್ತಿದ್ದರೂ ನೂರಾರರೊಂದಿಗೆ ಹೋರಾಡುತ್ತಿದ್ದೇವೋ ಎಂದು ಭಾವಿಸಿದರು. ಆ ಆನೆಯ ಮೇಲೆ ಕುಳಿತಿದ್ದ ಭಗದತ್ತನು ಐರಾವತದ ಮೇಲೆ ಕುಳಿತಿದ್ದ ದೇವರಾಜನು ದಾನವರನ್ನು ಹೇಗೋ ಹಾಗೆ ಪಾಂಡವರನ್ನು ನಾಶಗೊಳಿಸುತ್ತಿದ್ದನು. ಅಲ್ಲಿಂದ ಓಡಿಹೋಗುತ್ತಿದ್ದ ಪಾಂಚಾಲರ ಆನೆ-ಕುದುರೆಗಳು

ಮಾಡುತ್ತಿದ್ದ ಭಯಂಕರ ಚೀತ್ಕಾರಗಳ ಶಬ್ಧವು ಜೋರಾಗಿ ಕೇಳಿಬರುತ್ತಿತ್ತು.

ಪ್ರಾಗ್ಜ್ಯೋತಿಷದ ಭಗದತ್ತನು ಪಾಂಡವರ ಸೇನೆಯನ್ನು ನಾಶಗೊಳಿಸುತ್ತಿರಲು ಪರಮ ಕ್ರುದ್ಧನಾದ ಭೀಮನು ಪುನಃ ಅವನನ್ನು ಆಕ್ರಮಣಿಸಿದನು. ರಭಸದಿಂದ ತನ್ನ ಕಡೆಗೆ ಬರುತ್ತಿದ್ದ ಅವನ ಕುದುರೆಗಳ ಮೇಲೆ ಆ ಆನೆಯು ಸೊಂಡಿಲಿನಿಂದ ನೀರನ್ನು ಸುರಿಸಿ ತೋಯಿಸಿತು. ಅನಂತರ ಅವು ಪಾರ್ಥನನ್ನು ದೂರಕ್ಕೆ ಕೊಂಡೊಯ್ದವು. ಆಗ ತಕ್ಷಣವೇ ರಥದ ಮೇಲೆ ಕುಳಿತು ಅಂತಕನಂತೆ ತೋರುತ್ತಿದ್ದ ಅಕೃತಿಯ ಮಗ ರುಚಿಪರ್ವನು ಭಗದತ್ತನ ಮೇಲೆ ಬಾಣಗಳ ಮಳೆಯನ್ನು ಸುರಿಸಿ ಆಕ್ರಮಣಿಸಿದನು. ಆಗ ಪರ್ವತಪತಿಯು ಸುಂದರ ನತಪರ್ವ ಶರದಿಂದ ಅವನನ್ನು ವೈವಸ್ವತನ ಸದನಕ್ಕೆ ಕಳುಹಿಸಿದನು. ಆ ವೀರನು ಕೆಳಗುರುಳಲು ಸೌಭದ್ರ ಮತ್ತು ದ್ರೌಪದೀಸುತರು, ಚೇಕಿತಾನ, ಧೃಷ್ಟಕೇತು ಮತ್ತು ಯುಯುತ್ಸುವು ಆನೆಯನ್ನು ಪೀಡಿಸತೊಡಗಿದರು.

ಅದನ್ನು ಕೊಲ್ಲಲು ಬಯಸಿ ಭೈರವ ಗರ್ಜನೆಯನ್ನು ಗರ್ಜಿಸುತ್ತಾ ಮೋಡಗಳಂತೆ ಬಾಣದ ಮಳೆಯನ್ನು ಸುರಿಸಿ ತೋಯಿಸಿದರು. ಆಗ ಹಿಮ್ಮಡಿ, ಅಂಕುಶ ಮತ್ತು ಅಂಗುಷ್ಠಗಳಿಂದ ಪ್ರಚೋದಿತಗೊಂಡ

ಆನೆಯು ಸೊಂಡಿಲನ್ನು ಮೇಲೆತ್ತಿ ಕಿವಿಯನ್ನು ನಿಮಿರಿಸಿ ಒಂದೇ ಕಡೆ ನೋಡುತ್ತಾ ಶೀಘ್ರವಾಗಿ ಓಡತೊಡಗಿತು. ಅದು ಕಾಲಿನಿಂದ ಯುಯುತ್ಸುವಿನ ಕುದುರೆಗಳನ್ನು ಒದೆದು ಸೂತನನ್ನು ಕೊಂದಿತು. ಆಗ ಸಂಭ್ರಾಂತನಾದ ಯುಯುತ್ಸುವು ಹಾರಿ ಸೌಭದ್ರನ ರಥವನ್ನು ಏರಿದನು. ಆ ಆನೆಯ ಮೇಲೆ ಕುಳಿತಿದ್ದ ಪಾರ್ಥಿವನು ಭುವನಗಳನ್ನು ತನ್ನ ರಶ್ಮಿಗಳಿಂದ ಬೆಳಗಿಸುವ ಆದಿತ್ಯನಂತೆ ತನ್ನ ಶತ್ರುಗಳ ಮೇಲೆ ಬಾಣಗಳನ್ನು ಪ್ರಹರಿಸುತ್ತಾ ಶೋಭಿಸಿದನು. ಅವನನ್ನು ಆರ್ಜುನಿಯು ಹನ್ನೆರಡು, ಯುಯುತ್ಸುವು ಹತ್ತು, ದ್ರೌಪದೇಯರು ಮತ್ತು ಧೃಷ್ಟಕೇತುವು ಮೂರು ಮೂರು ಬಾಣಗಳಿಂದ ಹೊಡೆದರು. ಆ ಶತ್ರುಗಳಿಂದ ಪ್ರಹರಿಸಲ್ಪಟ್ಟ ಬಾಣಗಳಿಂದ ಮುಚ್ಚಿ ಹೋದ ಆನೆಯು ಸೂರ್ಯನ ಕಿರಣಗಳಿಂದ ಸಂಸ್ಯೂತವಾದ ಮಹಾ ಮೇಘದಂತೆ ಕಾಣತ್ತಿತ್ತು. ನಿಯಂತ್ರಿಸಲು ಪ್ರಯತ್ನಪಡುತ್ತಿದ್ದ ಶತ್ರುಗಳು ಪ್ರಯೋಗಿಸಿದ ಶರಗಳಿಂದ ಆರ್ದಿತಗೊಂಡ ಆ ಆನೆಯು ತನ್ನ ಸೊಂಡಿಲಿನಿಂದ ರಿಪುಗಳನ್ನು ಹಿಡಿದು ಎಡ-ಬಲಗಳಲ್ಲಿ ಎಸೆಯತೊಡಗಿತು. ವನದಲ್ಲಿ ಗೋಪಾಲಕನು ಕೋಲಿನಿಂದ ದನಗಳನ್ನು ತರುಬುವಂತೆ ಭಗದತ್ತನು ಬಾರಿ ಬಾರಿಗೂ ಅವರ ಸೇನೆಯನ್ನು ತರುಬುತ್ತಿದ್ದನು. ವೇಗವಾಗಿ ಬಂದ ಗಿಡುಗದ ಹಿಡಿತಕ್ಕೆ ಸಿಲುಕಿದ ಕಾಗೆಗಳು ಕೂಗಿಕೊಳ್ಳುವಂತೆ ಅವನಿಂದ ಪೀಡಿತರಾಗಿ ಪಾಂಡವರ ಸೇನೆಯು ಜೋರಾಗಿ ಕೂಗುತ್ತಾ

ಓಡಿ ಹೋಗುತ್ತಿತ್ತು.

ಅಂಕುಶದಿಂದ ತಿವಿಯಲ್ಪಟ್ಟ ಆ ಗಜರಾಜನು ಹಿಂದೆ ರೆಕ್ಕೆಗಳನ್ನು ಹೊಂದಿದ್ದ ಶ್ರೇಷ್ಠ ಗಿರಿಗಳು ಹೇಗೋ ಹಾಗೆ ರಿಪುಸೇನೆಗಳಲ್ಲಿ ಭಯವನ್ನು ತರುತ್ತಿತ್ತು. ಸಾಗರವನ್ನು ಕ್ಷೋಭೆಗೊಳಿಸಿ ವರ್ತಕರನ್ನು ಅಲ್ಲೋಲಕಲ್ಲೋಲಗೊಳಿಸುವಂತೆ ತೋರುತ್ತಿತ್ತು. ಆ ಆನೆಯಿಂದ ಭಯಾರ್ದಿತರಾಗಿ ಅತಿ ಭೈರವ ಸ್ವರದಲ್ಲಿ ಕೂಗಿಕೊಂಡು ಓಡಿ ಹೋಗುತ್ತಿರುವ ರಥ-ಅಶ್ವ-ಪಾರ್ಥಿವರ ಧ್ವನಿಯು ಭೂಮಿಯನ್ನೂ, ಆಕಾಶವನ್ನೂ, ದಿಕ್ಕುಗಳನ್ನೂ, ಉಪದಿಕ್ಕುಗಳನ್ನೂ ತುಂಬಿತು. ಹಿಂದೆ ವಿಬುಧರಿಂದ ರಕ್ಷಿಸಲ್ಪಟ್ಟ ದೇವಸೇನೆಯನ್ನು ವಿರೋಚನನು ಬೇಧಿಸಿ ಒಳಹೊಕ್ಕಿದಂತೆ ಆ ಗಜಶ್ರೇಷ್ಠನ ಮೇಲೇರಿ ಪಾರ್ಥಿವನು ಶತ್ರುಸೇನೆಯನ್ನು ಚೆನ್ನಾಗಿ ಮರ್ದಿಸಿದನು. ಆಗ ಅಗ್ನಿ ಸಖ ವಾಯುವೂ ಜೋರಾಗಿ ಬೀಸಿ ಎಬ್ಬಿಸಿದ ಧೂಳು ಸೈನಿಕರೆಲ್ಲರನ್ನೂ ವ್ಯಾಪಿಸಿತು. ಒಂದೇ ಒಂದು ಆನೆಯು ನಾಲ್ಕೂ ದಿಕ್ಕುಗಳಲ್ಲಿ ಸಂಚರಿಸುತ್ತಿದ್ದರೂ ಹಲವಾರು ಆನೆಗಳು ಗುಂಪಾಗಿ ರಣಾಂಗಣದಲ್ಲಿ ಓಡಾಡುತ್ತಿರುವಂತೆ ತೋರುತ್ತಿದ್ದವು.

## ಸಂಶಪ್ತಕ ವಧೆ

ಮೇಲೆದ್ದ ಧೂಳನ್ನು ನೋಡಿ ಮತ್ತು ಭಗದತ್ತನಿಂದ ನಿಯಂತ್ರಿಸಲ್ಪಟ್ಟ

ಆನೆಯು ಘೀಳಿಡುವುದನ್ನು ಕೇಳಿದ ಕೌಂತೇಯನು ಕೃಷ್ಣನಿಗೆ ಹೇಳಿದನು.

“ಮಧುಸೂದನ! ಪ್ರಾಗ್ಜ್ಯೋತಿಷದ ರಾಜನು ಆನೆಯೊಂದಿಗೆ ತ್ವರೆಮಾಡಿ ಆಕ್ರಮಣಿಸುತ್ತಿದ್ದಾನೆ. ನಿಶ್ಚಯವಾಗಿಯೂ ಇದು ಅವನದೇ ಕೂಗು! ಗಜಯಾನದಲ್ಲಿ ವಿಶಾರದನಾಗಿರುವ ಇವನು ಯುದ್ಧದಲ್ಲಿ ಇಂದ್ರನಿಗೂ ಕಡಿಮೆಯಲ್ಲ. ಇವನು ಪೃಥ್ವಿಯಲ್ಲಿಯೇ ಮೊದಲನೆಯವನು ಅಥವಾ ಎರಡನೆಯವನು ಎಂದು ನನ್ನ ಅಭಿಪ್ರಾಯ. ಆ ಆನೆಯೂ ಕೂಡ ಶ್ರೇಷ್ಠವಾದುದು. ಯುದ್ಧದಲ್ಲಿ ಸರಿಸಾಟಿಯಾದ ಆನೆಯು ಇಲ್ಲ. ಎಲ್ಲ ಶಬ್ಧಗಳನ್ನೂ ಮೀರಿಸುವಂತವನು. ಯುದ್ಧದಲ್ಲಿ ಯಶಸ್ವಿಯು. ಆಯಾಸವೇ ಇಲ್ಲದವನು. ಮೇಲೆ ಬೀಳುತ್ತಿರುವ ಶಸ್ತ್ರಗಳನ್ನೂ, ಅಗ್ನಿಯನ್ನೂ ಸಹಿಸಿಕೊಳ್ಳಬಹುದಾದ ಇದು ಒಂದೇ ಪಾಂಡವ ಬಲವನ್ನು ನಾಶಪಡಿಸುತ್ತದೆ ಎನ್ನುವುದು ವ್ಯಕ್ತವಾಗುತ್ತಿದೆ. ಅವರ ಈ ಉಪಟಳವನ್ನು ಸಹಿಸುವವರು ನಮ್ಮಿಬ್ಬರನ್ನು ಬಿಟ್ಟರೆ ಬೇರೆ ಯಾರಿಗೂ ಶಕ್ಯವಿಲ್ಲ. ತ್ವರೆಮಾಡಿ ಪ್ರಾಗ್ಜ್ಯೋತಿಷಾಧಿಪನು ಎಲ್ಲಿದ್ದಾನೋ ಅಲ್ಲಿಗೆ ಕರೆದೊಯ್ಯಿ. ಶಕ್ರನೊಂದಿಗಿನ ಸಖ್ಯದಿಂದ, ಆನೆಯ ಬಲದಿಂದ ಮತ್ತು ವಯಸ್ಸಿನಲ್ಲಿ ವಿಸ್ಮಿತನಾಗಿರುವ ಅವನನ್ನು ಇಂದು ನಾನು

ಬಲಹಂತುವಿನ ಪ್ರಿಯ ಅತಿಥಿಯಾಗಿ ಕಳುಹಿಸುತ್ತೇನೆ.”

ಸವ್ಯಸಾಚಿಯ ಮಾತಿನಂತೆ ಕೃಷ್ಣನು ಎಲ್ಲಿ ಪಾಂಡವವಾಹಿನಿಯನ್ನು ಸೀಳುತ್ತಿದ್ದನೋ ಅಲ್ಲಿಗೆ ಕರೆದೊಯ್ದನು. ಅವನು ಬೇರೆಕಡೆ ಯುದ್ಧ ಮಾಡಲು ಹೋಗುವಾಗ ಅವನ ಹಿಂದಿನಿಂದ ಹದಿನಾಲ್ಕು ಸಾವಿರ ಸಂಶಪ್ತಕರು ಎರಗಿದರು. ಅದರಲ್ಲಿ ಹತ್ತು ಸಾವಿರ ತ್ರಿಗರ್ತರಿದ್ದರು. ಮತ್ತು ನಾಲ್ಕು ಸಾವಿರ ವಾಸುದೇವನ ಅನುಯಾಯಿಗಳಿದ್ದರು. ಭಗದತ್ತನಿಂದ ನಾಶವಾಗುತ್ತಿರುವ ಸೇನೆಯನ್ನು ನೋಡಿ ಮತ್ತು ಆಹ್ವಾನಿಸುತ್ತಿದ್ದ ಅವರ ನಡುವೆ ಅವನ ಹೃದಯವು ಎರಡಾಯಿತು.

“ಏನನ್ನು ಮಾಡಿದರೆ ಶ್ರೇಯಸ್ಕರವಾದುದು? ಇವರ ಬಳಿ
ಹಿಂದಿರುಗಲೇ ಅಥವಾ ಯುಧಿಷ್ಠಿರನ ಬಳಿ ಹೋಗಲೇ?”

ಎಂದು ಚಿಂತಿಸಿದನು. ಸಂಶಪ್ತಕರನ್ನು ವಧಿಸುವುದೇ ಯಶಸ್ಕರವಾದುದು ಎಂದು ಅರ್ಜುನನ ಬುದ್ಧಿಯು ವಿಚಾರಿಸಲು ಅವನು ಅಲ್ಲಿಯೇ ನಿಂತನು. ತಕ್ಷಣವೇ ಆ ಕಪಿಪ್ರವರಕೇತನ ವಾಸವಿಯು ಒಬ್ಬನೇ ಸಹಸ್ರಾರು ರಥರನ್ನು ಸಂಹರಿಸಲು ಹಿಂದಿರುಗಿದನು. ಇದು ಅರ್ಜುನನ ವಧೆಗೆಂದು ದುರ್ಯೋಧನ-ಕರ್ಣರಿಬ್ಬರ ಉಪಾಯವಾಗಿದ್ದಿತು. ಅವರಿಂದಾಗಿ ರಣರಂಗವು ಎರಡು ಭಾಗವಾಗಿತ್ತು. ಡೋಲಾಯಮಾನನಾದ ಪಾಂಡವನು

ರಥದಿಂದ ರಥಾಗ್ರಣ್ಯನನ್ನು ಸಂಹರಿಸಲು ಹಿಂದಿರುಗಿ ಬಂದನು. ಆಗ ಸಂಶಪ್ತಕ ಮಹಾರಥರು ಒಂದು ಲಕ್ಷ ನತಪರ್ವಣ ಶರಗಳನ್ನು ಅರ್ಜುನನ ಮೇಲೆ ಪ್ರಯೋಗಿಸಿದರು. ಆ ಶರಗಳಿಂದ ಮುಚ್ಚಿಹೋಗಲು ಕುಂತೀಸುತ ಪಾರ್ಥನಾಗಲೀ ಕೃಷ್ಣ ಜನಾರ್ದನನಾಗಲೀ, ರಥವಾಗಲೀ ಕುದುರೆಗಳಾಗಲೀ ಕಾಣಲಿಲ್ಲ.

ಆಗ ಮೋಹಿತನಾಗಿ ಜನಾರ್ದನನು ಬೆವೆತುಹೋಗಲು ಪಾರ್ಥನು ವಜ್ರಾಸ್ತ್ರದಿಂದ ಹೆಚ್ಚುಭಾಗ ಅವರನ್ನು ಸಂಹರಿಸಿದನು. ಬಾಣ-ಶಿಂಜಿನಿ-ಧನುಸ್ಸುಗಳನ್ನು ಹಿಡಿದಿದ್ದ ನೂರಾರು ಕೈಗಳು ತುಂಡಾಗಿ, ಧ್ವಜಗಳು, ಕುದುರೆಗಳು, ಸೂತರು ಮತ್ತು ರಥಿಗಳು ಭೂಮಿಯ ಮೇಲೆ ಬಿದ್ದವು. ವೃಕ್ಷ, ಪರ್ವತ ಮತ್ತು ಮೋಡಗಳಂತಿದ್ದ, ಸುಕಲ್ಪಿತಗೊಂಡಿದ್ದ ಆನೆಗಳು ಪಾರ್ಥನ ಶರಗಳಿಂದ ಹತರಾಗಿ, ಮಾವುತರನ್ನೂ ಕಳೆದುಕೊಂಡು ಭೂಮಿಯ ಮೇಲೆ ಬಿದ್ದವು. ಅವುಗಳ ಬೆನ್ನಮೇಲಿದ್ದ ಚಿತ್ರಗಂಬಳಿಗಳೂ ಆಭರಣಗಳೂ ಚೆಲ್ಲಪಿಲ್ಲಿಯಾಗಿ ಬಿದ್ದವು. ಪಾರ್ಥನ ಮಾರ್ಗಣಗಳಿಂದ ಮಥಿತವಾದ ಕುದುರೆಗಳು ಆರೋಹಿಗಳೊಂದಿಗೆ ಉರುಳಿ ಬಿದ್ದವು. ಕಿರೀಟಿಯ ಭಲ್ಲಗಳಿಂದ ಋಷ್ಟಿ, ಪ್ರಾಸ, ಖಡ್ಗ, ನಖರ, ಮುದ್ಗರ ಮತ್ತು ಪರಶುಗಳನ್ನು ಹಿಡಿದ ಮನುಷ್ಯರ ಬಾಹುಗಳು ಕತ್ತರಿಸಿ ಬಿದ್ದವು. ಬಾಲಾದಿತ್ಯ, ಕಮಲ ಮತ್ತು ಚಂದ್ರರ

ರೂಪದಂತಿರುವ ಶಿರಗಳು ಅರ್ಜುನನ ಶರಗಳಿಂದ ಕತ್ತರಿಸಲ್ಪಟ್ಟು ಭೂಮಿಯ ಮೇಲೆ ಬಿದ್ದವು. ನಾನಾ ವಿಧದ ಪ್ರಾಣವನ್ನೇ ಭೋಜನವಾಗುಳ್ಳ ಪತ್ರಿಗಳಿಂದ ಕ್ರುದ್ಧನಾದ ಫಲ್ಗುನನು ಅಲಂಕೃತ ಸೇನೆಯನ್ನು ಸುಟ್ಟು ಸಂಹರಿಸಿದನು. ಆನೆಯು ಸರೋವರವನ್ನು ಕ್ಷೋಭೆಗೊಳಿಸುವಂತೆ ಸೇನೆಯನ್ನು ಕ್ಷೋಭೆಗೊಳಿಸಿದ ಧನಂಜಯನನ್ನು ಭೂತಗಣಗಳು "ಸಾಧು! ಸಾಧು!" ಎಂದು ಗೌರವಿಸಿತು. ವಾಸವನ ಪರಾಕ್ರಮದ ಪಾರ್ಥನ ಆ ಕರ್ಮವನ್ನು ನೋಡಿ ಮಾಧವನು ಪರಮ ವಿಸ್ಮಯಗೊಂಡು ಕೈಜೋಡಿಸಿ ಗೌರವಿಸಿದನು. ಆಗ ಸಂಶಪ್ತಕರನ್ನು ಸಂಹರಿಸಿ ಪುನಃ ವ್ಯವಸ್ಥಿತನಾಗಿ ಪಾರ್ಥನು "ಭಗದತ್ತನ ಬಳಿ ಹೋಗು!" ಎಂದು ಕೃಷ್ಣನನ್ನು ಪ್ರಚೋದಿಸಿದನು.

ಅನಂತರ ಕೃಷ್ಣನು ಪಾರ್ಥನ ಸುವರ್ಣಭೂಷಿತವಾಗಿದ್ದ ಮನೋವೇಗದ ಬಿಳೀ ಕುದುರೆಗಳನ್ನು ದ್ರೋಣನ ಸೇನೆಯಕಡೆ ಕೊಂಡೊಯ್ದನು. ದ್ರೋಣನಿಂದ ಪೀಡಿತರಾಗಿದ್ದ ತನ್ನವರನ್ನು ಬಿಡುಗಡೆಗೊಳಿಸಲು ಹೋಗುತ್ತಿದ್ದ ಆ ಕುರುಶ್ರೇಷ್ಠನನ್ನು ಯುದ್ಧಾರ್ಥಿಯಾದ ಸುಶರ್ಮನು ಸಹೋದರರೊಂದಿಗೆ ಅವನ ಹಿಂದೆಯೇ ಅನುಸರಿಸಿ ಹೋದನು. ಆಗ ಶ್ವೇತಹಯ ಜಯ ಅರ್ಜುನನು ಅಪರಾಜಿತ ಕೃಷ್ಣನಿಗೆ ಹೇಳಿದನು:

"ಅಚ್ಯುತ! ಈ ಸುಶರ್ಮನು ತನ್ನ ತಮ್ಮಂದಿರೊಡಗೂಡಿ ನನ್ನನ್ನು ಕರೆಯುತ್ತಿದ್ದಾನೆ. ಆದರೆ ಉತ್ತರ ಭಾಗದಲ್ಲಿ ನಮ್ಮ ಸೈನ್ಯವು ವಿನಾಶಹೊಂದುತ್ತಿದೆ. ಈ ಸಂಶಪ್ತಕರು ಇಂದು ನನ್ನ ಮನಸ್ಸನ್ನು ಎರಡನ್ನಾಗಿ ಒಡೆದಿದ್ದಾರೆ. ಈಗ ನಾನು ಅಳಿದುಳಿದ ಸಂಶಪ್ತಕರನ್ನು ಕೊಲ್ಲಬೇಕೇ? ಅಥವಾ ಬಾಧಿತರಾದ ನಮ್ಮವರನ್ನು ರಕ್ಷಿಸಲೇ? ನನ್ನ ಈ ದ್ವಂದ್ವಭಾವವು ನಿನಗೆ ತಿಳಿದಿದೆ. ಏನು ಮಾಡಿದರೆ ಒಳ್ಳೆಯದಾಗುವುದು?"

ಹೀಗೆ ಹೇಳಲು ದಾಶಾರ್ಹನು ರಥವನ್ನು ಹಿಂದಿರುಗಿಸಿ ಎಲ್ಲಿ ತ್ರಿಗರ್ತಾಧಿಪತಿಯು ಪಾಂಡವನನ್ನು ಕರೆಯುತ್ತಿದ್ದನೋ ಅಲ್ಲಿಗೆ ಕೊಂಡೊಯ್ದನು. ಆಗ ಅರ್ಜುನನು ಸುಶರ್ಮನನ್ನು ಏಳು ಆಶುಗಗಳಿಂದ ಹೊಡೆದು ಹಾಗೆಯೇ ಕ್ಷುರಗಳೆರಡರಿಂದ ಅವನ ಧ್ವಜವನ್ನೂ ಧನುಸ್ಸನ್ನೂ ತುಂಡರಿಸಿದನು. ಪಾರ್ಥನು ತ್ವರೆಮಾಡಿ ತ್ರಿಗರ್ತಾಧಿಪತಿಯ ತಮ್ಮನನ್ನೂ ಆರು ಆಯಸಗಳಿಂದ, ಅಶ್ವ-ಸೂತರೊಂದಿಗೆ ಯಮಾಲಯಕ್ಕೆ ಕಳುಹಿಸಿದನು. ಆಗ ಸುಶರ್ಮನು ಸರ್ಪದಂತಿದ್ದ ಉಕ್ಕಿನ ಶಕ್ತಿಯನ್ನು ಅರ್ಜುನನ ಮೇಲೆ ಮತ್ತು ತೋಮರವನ್ನು ವಾಸುದೇವನ ಮೇಲೆ ಗುರಿಯಿಟ್ಟು ಪ್ರಯೋಗಿಸಿದನು.

ಅರ್ಜುನನು ಶಕ್ತಿಯನ್ನು ಮೂರು ಮತ್ತು ತೋಮರವನ್ನು ಮೂರು ಶರಗಳಿಂದ ಕತ್ತರಿಸಿ ಸುಶರ್ಮನನ್ನು ಶರವೃಷ್ಟಿಯಿಂದ ಭ್ರಾಂತಗೊಳಿಸಿ ಹಿಮ್ಮೆಟ್ಟಿಸಿದನು. ಬಾಣಗಳ ಭಾರೀ ಮಳೆಗರೆಯುತ್ತಾ ಹಿಂದಿರುಗಿ ಬರುತ್ತಿದ್ದ ಉಗ್ರ ವಾಸವಿಯನ್ನು ನಿನ್ನ ಸೇನೆಯಲ್ಲಿ ಯಾರೂ ತಡೆಯಲಿಲ್ಲ. ಧನಂಜಯನು ಬಾಣಗಳಿಂದ ಮಹಾರಥಿ ಕೌರವ್ಯರನ್ನು ಬೆಂಕಿಯು ಹುಲ್ಲಿನ ಗೊಣಬೆಯನ್ನು ಸುಡುವಂತೆ ಸುಟ್ಟು ನಾಶಗೊಳಿಸಿದನು. ಜನರು ಅಗ್ನಿಯ ಸ್ಪರ್ಶವನ್ನು ಸಹಿಸಿಕೊಳ್ಳಲಾಗದಂತೆ ಆ ಧೀಮತ ಕುಂತೀಪುತ್ರನ ವೇಗವನ್ನು ಸಹಿಸಿಕೊಳ್ಳಲಾಗಲಿಲ್ಲ. ಶರವರ್ಷಗಳಿಂದ ಸೇನೆಗಳನ್ನು ನಾಶಗೊಳಿಸುತ್ತಾ ಪಾಂಡವನು ಪ್ರಾಗ್ಜ್ಯೋತಿಷನ ಕಡೆ ಗರುಡನು ಬಂದೆರಗುವಂತೆ ಬಂದು ಆಕ್ರಮಣಿಸಿದನು. ಯಾವುದರಿಂದ ಅಪಾಯದಲ್ಲಿರುವ ಭರತರಿಗೆ ಕ್ಷೇಮವನ್ನುಂಟು ಮಾಡುವನೋ ಯಾವುದರಿಂದ ಯುದ್ಧದಲ್ಲಿ ಶತ್ರುಗಳ ಕಣ್ಣೀರನ್ನು ಹೆಚ್ಚಿಸುವನೋ ಆ ಧನುಸ್ಸನ್ನು ಜಿಷ್ಣುವು ಹಿಡಿದುಕೊಂಡನು.

## ಭಗದತ್ತವಧೆ

ಧೃತರಾಷ್ಟ್ರನ ಕೆಟ್ಟ ದ್ಯೂತವನ್ನಾಡಿ ಗೆದ್ದಿದ್ದ ಅದೇ ಧನುಸ್ಸನ್ನು ಅರ್ಜುನನು ಈಗ ಕ್ಷತ್ರಿಯರ ವಿನಾಶಕ್ಕೆ ಎತ್ತಿ ಹಿಡಿದನು. ಪರ್ವತಕ್ಕೆ ಬಡಿದ ನೌಕೆಯಂತೆ ಕೌರವ ಸೇನೆಯನ್ನು ಪಾರ್ಥನು ಕ್ಷೋಭೆಗೊಳಿಸಿ

ನುಚ್ಚು ನೂರು ಮಾಡಿದನು. ಆಗ ಹತ್ತು ಸಾವಿರ ವೀರ ಧನುಷ್ಮತರು ಕ್ರುದ್ಧರಾಗಿ ಜಯವಾಗಲೀ ಪರಾಜಯವಾಗಲೀ ಯುದ್ಧಮಾಡಬೇಕೆಂದು ನಿಶ್ಚಯಿಸಿ ಹಿಂದಿರುಗಿದರು. ಆಪದ್ಧರ್ಮವನ್ನು ಅನುಸರಿಸಿದ ಆ ರಥರು ಹೃದಯದ ಭಯವನ್ನು ತೊರೆದು ಪಾರ್ಥನ ಮೇಲೆ ಆಕ್ರಮಣಿಸಲು ಯುದ್ಧದಲ್ಲಿ ಅವರೆಲ್ಲರ ದೊಡ್ಡ ಭಾರವನ್ನೂ ಪಾರ್ಥನು ಸಹಿಸಿಕೊಂಡನು. ಮದೋದಕವನ್ನು ಸುರಿಸುವ ಸಿಟ್ಟಿಗೆದ್ದ ಅರವತ್ತು ವರ್ಷದ ಸಲಗವು ಹೇಗೆ ಬೆಂಡಿನ ವನವನ್ನು ಧ್ವಂಸಮಾಡುತ್ತದೆಯೋ ಹಾಗೆ ಪಾರ್ಥನು ಕೌರವ ಸೇನೆಯನ್ನು ಮರ್ದಿಸಿದನು. ಅವನು ಹಾಗೆ ಸೇನೆಯನ್ನು ನಾಶಗೊಳಿಸುತ್ತಿರಲು ನರಾಧಿಪ ಭಗದತ್ತನು ತನ್ನ ಆನೆಯೊಂದಿಗೆ ರಭಸದಿಂದ ಬಂದು ಧನಂಜಯನ ಮೇಲೆ ಎರಗಿದನು. ಆ ನರವ್ಯಾಘ್ರನು ರಥದಲ್ಲಿಯೇ ಕುಳಿತು ಭಯಪಡದೇ ಅವನನ್ನು ಎದುರಿಸಿದನು. ಆಗ ಅವನ ರಥ ಮತ್ತು ಆ ಆನೆಗಳ ನಡುವೆ ತುಮುಲ ಯುದ್ಧವು ನಡೆಯಿತು.

ಯಥಾಶಾಸ್ತ್ರವಾಗಿ ಪರಿಣಿತರಾದ ಆ ವೀರ ಭಗದತ್ತ-ಧನಂಜಯರ ನಡುವೆ ರಥ ಮತ್ತು ಆನೆಗಳ ಸಂಗ್ರಾಮವು ನಡೆಯಿತು. ಮೋಡದಂತಿದ್ದ ಆನೆಯಮೇಲೆ ಇಂದ್ರನಂತಿದ್ದ ಭಗದತ್ತನು ಶರವರ್ಷದಿಂದ ಧನಂಜಯನನ್ನು ಮುಚ್ಚಿದನು. ವಾಸವಿಯೂ ಕೂಡ ಆ

ಶರವರ್ಷವು ತನ್ನನ್ನು ತಲುಪುವುದರೊಳಗೆ ಇನ್ನೊಂದು ಶರವರ್ಷದಿಂದ ಅದನ್ನು ಕತ್ತರಿಸಿದನು. ಪ್ರಾಗ್ಜ್ಯೋತಿಷನು ಆ ಶರವರ್ಷವನ್ನು ನಿವಾರಿಸಿ, ಪಾರ್ಥ ಮತ್ತು ಕೃಷ್ಣರನ್ನು ಶರಗಳಿಂದ ಹೊಡೆದನು. ಆ ಮಹಾಶರಜಾಲದಿಂದ ಅವರಿಬ್ಬರನ್ನೂ ಮುಚ್ಚಿ ಅಚ್ಯುತ-ಪಾರ್ಥರನ್ನು ಕೊಲ್ಲಲು ಆನೆಯನ್ನು ಪ್ರಚೋದಿಸಿದನು. ಕ್ರುದ್ಧನಾದ ಅಂತಕನಂತೆ ಮೇಲೆ ಬೀಳುತ್ತಿದ್ದ ಆನೆಯನ್ನು ನೋಡಿ ಕೂಡಲೇ ಜನಾರ್ದನನು ರಥವನ್ನು ಬಲಕ್ಕೆ ತಿರುಗಿಸಿದನು. ಆ ಮಹಾಗಜವು ತನ್ನ ಸಮೀಪ ಬಂದಿದ್ದರೂ ರಥವನ್ನು ತಿರುಗಿಸಿದುದರಿಂದ ಅದು ಹಿಂದೆ ಸರಿದುದಕ್ಕಾಗಿ ಯುದ್ಧ ಧರ್ಮವನ್ನು ಸ್ಮರಿಸಿ ಧನಂಜಯನು ಅದನ್ನು ಸಂಹರಿಸಲು ಇಚ್ಛಿಸಲಿಲ್ಲ. ಆದರೆ ಆ ಆನೆಯು ಮುಂದೆ ಹಾಯ್ದು ರಥಗಳನ್ನೂ ಕುದುರೆಗಳನ್ನೂ ತುಳಿದು ಮೃತ್ಯುಲೋಕಕ್ಕೆ ಕಳುಹಿಸಿತು. ಆಗ ಧನಂಜಯನು ಕ್ರುದ್ಧನಾದನು.

ಪ್ರಾಗ್ಜ್ಯೋತಿಷನೊಡನೆ ಯುದ್ಧಮಾಡುತ್ತಿದ್ದ ದಾಶಾರ್ಹ-ಪಾಂಡವರಿಬ್ಬರೂ ಮೃತ್ಯುವಿನ ಬಳಿ ಹೋಗುತ್ತಿದ್ದಾರೆಂದು ಸರ್ವ ಭೂತಗಳೂ ಅಂದುಕೊಂಡವು. ಹಾಗೆಯೇ ಭಗದತ್ತನು ಆನೆಯ ಭುಜದ ಮೇಲಿಂದ ರಥದಲ್ಲಿ ಕುಳಿತಿದ್ದ ಇಬ್ಬರು ಕೃಷ್ಣರ ಮೇಲೂ ತಡೆಯಿಲ್ಲದೇ ಶರವರ್ಷವನ್ನು ಸುರಿಸಿದನು. ಕಪ್ಪು ಉಕ್ಕಿನ

ಹೇಮಪುಂಖದ ಶಿಲಾಶಿತ ಬಾಣವನ್ನು ಹೂಡಿ ಬಿಲ್ಲನ್ನು ಅಕರ್ಣಾಂತವಾಗಿ ಎಳೆದು ದೇವಕೀಪುತ್ರನನ್ನು ಹೊಡೆದನು. ಭಗದತ್ತನು ಪ್ರಯೋಗಿಸಿದ, ಮುಟ್ಟಲು ಅಗ್ನಿಯಂತೆ ತೀಕ್ಷ್ಣವಾಗಿದ್ದ ಆ ಬಾಣವು ದೇವಕೀಪುತ್ರನನ್ನು ಬೇಧಿಸಿ ಭೂಮಿಯನ್ನು ಪ್ರವೇಶಿಸಿತು. ಆಗ ಪಾರ್ಥನು ಅವನ ಧನುಸ್ಸನ್ನು ಕತ್ತರಿಸಿ, ಅಂಗರಕ್ಷಕರನ್ನೂ ಸಂಹರಿಸಿ, ಭಗದತ್ತನನ್ನು ಅಣಗಿಸುವ ರೀತಿಯಲ್ಲಿ ಹೊಡೆದನು. ಅನಂತರ ಅವನು ಸೂರ್ಯನ ರಶ್ಮಿಗಳಂತೆ ತೀಕ್ಷ್ಣವಾದ ಹದಿನಾಲ್ಕು ತೋಮರಗಳನ್ನು ಪ್ರಯೋಗಿಸಲು, ಸವ್ಯಸಾಚಿಯು ಆ ಒಂದೊಂದನ್ನೂ ಎರೆಡೆರೆಡನ್ನಾಗಿ ಮಾಡಿ ಕತ್ತರಿಸಿದನು. ಆಗ ಪಾಕಶಾಸನಿಯು ಶರಜಾಲದಿಂದ ಆನೆಯ ಕವಚವನ್ನು ಬೇಧಿಸಿದನು. ಅದು ಮೋಡಗಳಿಲ್ಲದ ಪರ್ವತದಂತೆ ಕಂಡಿತು. ಪ್ರಾಗ್ಜ್ಯೋತಿಷನು ಉಕ್ಕಿನಿಂದ ರಚಿತವಾದ ಹೇಮದಂಡದ ಶಕ್ತಿಯನ್ನು ವಾಸುದೇವನ ಮೇಲೆ ಎಸೆಯಲು ಅರ್ಜುನನು ಅದನ್ನು ಎರಡಾಗಿ ತುಂಡರಿಸಿದನು. ಅರ್ಜುನನು ಶರಗಳಿಂದ ರಾಜನ ಚತ್ರ-ಧ್ವಜಗಳನ್ನು ಕತ್ತರಿಸಿ, ತಕ್ಷಣವೇ ನಸುನಗುತ್ತಾ ಹತ್ತು ಬಾಣಗಳಿಂದ ಪರ್ವತಾಧಿಪನನ್ನು ಗಾಯಗೊಳಿಸಿದನು. ಅರ್ಜುನನ ಆ ಸುಂದರ ಪುಂಖಗಳ ಕಂಕಪತ್ರಿಗಳಿಂದ ಗಾಯಗೊಂಡು ಕ್ರುದ್ಧನಾದ ಭಗದತ್ತನು ಅರ್ಜುನನ ತಲೆಗೆ ಗುರಿಯಿಟ್ಟು ತೋಮರಗಳನ್ನು ಎಸೆದು ಜೋರಾಗಿ

ಗರ್ಜಿಸಿದನು. ಅವು ಅರ್ಜುನನ ಕಿರೀಟವನ್ನು ತಲೆಕೆಳಗೆ ಮಾಡಿದವು. ಕಿರೀಟವನ್ನು ಸರಿಮಾಡಿಕೊಳ್ಳುತ್ತಾ ಫಲ್ಗುನನು ರಾಜನಿಗೆ "ಲೋಕವೆಲ್ಲವನ್ನೂ ಒಮ್ಮೆ ನೋಡಿಕೊಂಡುಬಿಡು!" ಎಂದು ಹೇಳಿದನು.

ಹೀಗೆ ಹೇಳಲು ಭಗದತ್ತನು ಸಂಕ್ರುದ್ಧನಾಗಿ ಪ್ರಕಾಶಮಾನವಾದ ಧನುಸ್ಸನ್ನು ಎತ್ತಿಕೊಂಡು ಗೋವಿಂದನೊಂದಿಗೆ ಪಾಂಡವನ ಮೇಲೆ ಶರವರ್ಷವನ್ನು ಸುರಿಸಿದನು. ಪಾರ್ಥನು ಅವನ ಧನುಸ್ಸನ್ನು ಕತ್ತರಿಸಿ ಭತ್ತಳಿಕೆಯನ್ನು ಪುಡಿಮಾಡಿದನು. ತ್ವರೆಮಾಡಿ ಇಪ್ಪತ್ತೆರಡು ಬಾಣಗಳಿಂದ ಅವನ ಸರ್ವ ಮರ್ಮಗಳಿಗೂ ಹೊಡೆದನು. ಅದರಿಂದ ಗಾಯಗೊಂಡು ವ್ಯಥಿತನಾದ ಅವನು ಕ್ರುದ್ಧನಾಗಿ ವೈಷ್ಣವಾಸ್ತ್ರವನ್ನು ಸ್ಮರಿಸಿಕೊಂಡು ಅಂಕುಶವನ್ನು ಅಭಿಮಂತ್ರಿಸಿ ಪಾಂಡವನ ಎದೆಗೆ ಗುರಿಯಿಟ್ಟು ಎಸೆದನು. ಭಗದತ್ತನಿಂದ ಪ್ರಯೋಗಿಸಲ್ಪಟ್ಟ ಆ ಸರ್ವಘಾತಕ ಅಸ್ತ್ರವನ್ನು ಕೇಶವನು ಪಾರ್ಥನಿಗೆ ಆವರಣವಾಗಿ ನಿಂತು ತನ್ನ ವಕ್ಷಃಸ್ಥಳದಲ್ಲಿ ಧರಿಸಿದನು. ಆ ಅಸ್ತ್ರವು ಕೇಶವನ ಎದೆಯಮೇಲೆ ವೈಜಯಂತಿ ಮಾಲೆಯಾಯಿತು. ಆಗ ಅರ್ಜುನನು ಆಯಾಸಗೊಂಡ ಮನಸ್ಸಿನಿಂದ ಕೇಶವನಿಗೆ ಹೇಳಿದನು:

"ಪುಂಡರೀಕಾಕ್ಷ! ಜನಾರ್ದನ! ಯುದ್ಧವನ್ನು ಮಾಡದೇ

ಕುದುರೆಗಳನ್ನೂ ಮಾತ್ರ ನಡೆಸುತ್ತೇನೆ ಎಂದು ಮಾಡಿದ್ದ ಪ್ರತಿಜ್ಞೆಯನ್ನು ನೀನು ರಕ್ಷಿಸುತ್ತಿಲ್ಲ. ಒಂದುವೇಳೆ ನಾನು ವ್ಯಸನದಿಂದಿದ್ದರೆ ಅಥವಾ ಇದನ್ನು ನಿವಾರಿಸಲು ಅಶಕ್ತನಾಗಿದ್ದರೆ ನೀನು ಇದನ್ನು ಮಾಡಬಹುದಾಗಿತ್ತು. ಆದರೆ ನಾನು ಇಲ್ಲಿ ಶಕ್ಯನಾಗಿರುವಾಗ ನೀನು ಹೀಗೆ ಮಾಡಬಾರದಾಗಿತ್ತು. ಧನುರ್ಬಾಣಸಹಿತನಾದ ನಾನು ಸುರಾಸುರ ಮಾನವರೊಂದಿಗೆ ಈ ಲೋಕವನ್ನು ಗೆಲ್ಲಲು ಶಕ್ಯ ಎನ್ನುವುದೂ ಕೂಡ ನಿನಗೆ ತಿಳಿದೇ ಇದೆ.”

ಆಗ ವಾಸುದೇವನು ಅರ್ಜುನನಿಗೆ ಅರ್ಥವತ್ತಾದ ಮಾತುಗಳಿಂದ ಉತ್ತರಿಸಿದನು:

“ಪಾರ್ಥ ! ಹಿಂದೆ ನಡೆದ ಈ ಗುಹ್ಯ ವೃತ್ತಾಂತವನ್ನು ಕೇಳು. ಚತುರ್ಮೂರ್ತಿಯಾದ ನಾನು ಶಾಶ್ವತವಾಗಿ ಲೋಕೋದ್ಧಾರದಲ್ಲಿ ತೊಡಗಿದ್ದೇನೆ. ಲೋಕಗಳ ಹಿತಕ್ಕಾಗಿ ನನ್ನನ್ನು ನಾನೇ ವಿಭಜನ ಮಾಡಿಕೊಂಡಿದ್ದೇನೆ. ನನ್ನ ಒಂದು ಮೂರ್ತಿಯು ಭೂಮಿಯ ಮೇಲಿದ್ದುಕೊಂಡು ತಪಶ್ಚರ್ಯವನ್ನು ಮಾಡುತ್ತಿದೆ. ಇನ್ನೊಂದು ಜಗತ್ತಿನಲ್ಲಿ ನಡೆಯುವ ಒಳ್ಳೆಯದು-ಕೆಟ್ಟವುಗಳನ್ನು ನೋಡುತ್ತಿರುತ್ತದೆ.

ಇನ್ನೊಂದು ಮನುಷ್ಯ ಲೋಕವನ್ನಾಶ್ರಯಿಸಿ ಕರ್ಮಗಳನ್ನು ಮಾಡುತ್ತಿರುತ್ತದೆ. ನಾಲ್ಕನೆಯ ಇನ್ನೊಂದು ಸಹಸ್ರವರ್ಷಗಳ ಪರ್ಯಂತ ನಿದ್ರಾವಸ್ಥೆಯಲ್ಲಿ ಮಲಗಿರುತ್ತದೆ. ನನ್ನ ಈ ಮೂರ್ತಿಯು ಸಹಸ್ರ ವರ್ಷಗಳ ಅಂತ್ಯದಲ್ಲಿ ಏಳುತ್ತದೆ. ಆ ಕಾಲದಲ್ಲಿ ವರಗಳಿಗೆ ಅರ್ಹರಾದವರು ಕೇಳಿದ ಶ್ರೇಷ್ಠ ವರಗಳನ್ನು ಅದು ಕರುಣಿಸುತ್ತದೆ. ಅಂತಹ ಒಂದು ಕಾಲವು ಬಂದೊದಗಿದಾಗ ಪೃಥ್ವಿಯು ನರಕನಿಗಾಗಿ ನನ್ನಿಂದ ಒಂದು ವರವನ್ನು ಕೇಳಿದ್ದಳು. ಅದನ್ನು ಕೇಳು. "ನನ್ನ ಮಗನು ದೇವ ಮತ್ತು ಅಸುರರಿಂದ ಅವಧ್ಯನಾಗಲಿ. ಅವನು ವೈಷ್ಣವಾಸ್ತ್ರವನ್ನು ಹೊಂದಿರಬೇಕು. ನನಗೆ ಇದನ್ನು ದಯಪಾಲಿಸಬೇಕು." ಈ ರೀತಿಯ ವರವನ್ನು ಕೇಳಿ ನಾನು ಭೂಮಿಯ ತನಯನಿಗೆ ಅಮೋಘವಾದ ಈ ವೈಷ್ಣವಾಸ್ತ್ರವನ್ನು ಹಿಂದೆ ನೀಡಿದ್ದೆ. ಅವಳಿಗೆ ಹೇಳಿದ್ದೆ: "ಈ ಅಮೋಘ ಅಸ್ತ್ರವು ನರಕನನ್ನು ರಕ್ಷಿಸುತ್ತದೆ. ಇದು ಅವನಲ್ಲಿ ಇರುವಾಗ ಯಾರೂ ಅವನನ್ನು ವಧಿಸಲಾರರು. ಈ ಅಸ್ತ್ರದಿಂದ ನಿನ್ನ ಮಗ ಪರಬಲಾರ್ದನನು ಸರ್ವಲೋಕಗಳಲ್ಲಿ ಸರ್ವದ ಜಯಿಸಲಸಾಧ್ಯನಾಗಿರುತ್ತಾನೆ." ಹಾಗೆಯೇ ಆಗಲೆಂದು ಹೇಳಿ ಬಯಸಿದುದನ್ನು ಪಡೆದು ಆ ಮನಸ್ವಿನೀ

ದೇವಿಯು ಹೋದಳು. ಶತ್ರುತಾಪನ ನರಕನಾದರೋ ಅದರಿಂದಾಗಿ ದುರಾಧರ್ಷನಾಗಿದ್ದನು. ಪಾರ್ಥ! ಅವನಿಂದ ನನ್ನ ಆ ಅಸ್ತ್ರವನ್ನು ಪ್ರಾಗ್ಜ್ಯೋತಿಷನು ಪಡೆದನು. ಅದರಿಂದ ಲೋಕದಲ್ಲಿ ಇಂದ್ರ ರುದ್ರರೂ ಅವಧ್ಯರಲ್ಲ. ನಿನಗಾಗಿಯೇ ಹೊರತು ಬೇರೆ ಯಾವ ಕಾರಣದಿಂದಲೂ ನಾನು ಅದನ್ನು ನಾಶಗೊಳಿಸಲಿಲ್ಲ. ಹಿಂದೆ ನಾನು ಲೋಕ ಹಿತಾರ್ಥಕ್ಕಾಗಿ ಹೇಗೆ ನರಕನನ್ನು ಸಂಹರಿಸಿದೆನೋ ಹಾಗಿ ಪರಮಾಸ್ತ್ರವನ್ನು ಪ್ರಯೋಗಿಸಿ ಯುದ್ಧದಲ್ಲಿ ವೈರಿ ದುರ್ಧರ್ಷ ಸುರದ್ವೇಷೀ ಭಗದತ್ತನನ್ನು ಸಂಹರಿಸು.”

ಮಹಾತ್ಮ ಕೇಶವನು ಹೀಗೆ ಹೇಳಲು ಪಾರ್ಥನು ತಕ್ಷಣವೇ ಭಗದತ್ತನನ್ನು ನಿಶಿತ ಬಾಣಗಳಿಂದ ಮುಚ್ಚಿದನು. ಆಗ ಪಾರ್ಥನು ಅಸಂಭ್ರಾಂತನಾಗಿ ನಾರಾಚದಿಂದ ಆನೆಯ ಕುಂಭಸ್ಥಳದ ಮಧ್ಯದಲ್ಲಿ ಹೊಡೆದನು. ಆ ಬಾಣವು ವಜ್ರವು ಪರ್ವತವನ್ನು ಹೊಗುವಂತೆ ಮತ್ತು ಸರ್ಪವು ಬಿಲವನ್ನು ಹೊಗುವಂತೆ ಪುಂಖಗಳೊಂದಿಗೆ ಆನೆಯ ಒಳ ಹೊಕ್ಕಿತು. ಆ ಮಹಾಗಜವು ತನ್ನ ಅಂಗಾಂಗಗಳನ್ನು ನಿಷ್ಕ್ರಿಯಗೊಳಿಸಿ ಎರಡೂ ದಂತಗಳನ್ನು ಭೂಮಿಗೆ ಊರಿಕೊಂಡು, ಆರ್ತಸ್ವರದಲ್ಲಿ ಕೂಗಿ ಪ್ರಾಣಗಳನ್ನು ತೊರೆಯಿತು. ಆಗ ಪಾಂಡವನು ಅರ್ಧಚಂದ್ರದ



ಬಿಂಬವುಳ್ಳ ನತಪರ್ವ ಶರದಿಂದ ರಾಜಾ ಭಗದತ್ತನ ಹೃಧಯವನ್ನು ಬೇಧಿಸಿದನು. ಕಿರೀಟಿಯಿಂದ ಭಿನ್ನಹೃದಯನಾದ ಭಗದತ್ತನು ಒಡನೆಯೇ ಅಸು ನೀಗಿದನು. ಅವನ ಕೈಯಲ್ಲಿದ್ದ ಬಾಣ ಭತ್ತಳಿಕೆಗಳು ಕೆಳಗೆ ಬಿದ್ದವು. ಕಮಲದ ನಾಳವನ್ನು ಹೊಡೆದರೆ ಕಮಲವು ಬೀಳುವಂತೆ ಅವನ ಶಿರಸ್ತ್ರಾಣ ಮತ್ತು ಶ್ರೇಷ್ಠ ಅಂಕುಶಗಳು ಕೆಳಗೆ ಉರುಳಿದವು. ಹೂಗಳಿಂದ ಸಮೃದ್ಧವಾದ ಬೆಟ್ಟದ ಕಣಗಿಲೆ ಮರವು ಭಿರುಗಾಳಿಯ ಬಡಿತಕ್ಕೆ ಸಿಲುಕಿ ಬುಡಮೇಲಾಗಿ ಬೆಟ್ಟದ ತುದಿಯಿಂದ

ಕೆಳಕ್ಕೆ ಬೀಳುವಂತೆ ಸುವರ್ಣಮಾಲೆಯಿಂದ ಅಲಂಕೃತನಾಗಿದ್ದ ಭಗದತ್ತನು ಸುವರ್ಣಾಭರಣಗಳಿಂದ ವಿಭೂಷಿತವಾಗಿದ್ದ ಪರ್ವತೋಪಮ ಆನೆಯ ಮೇಲಿಂದ ಕೆಳಗೆ ಬಿದ್ದನು.

ಈ ರೀತಿ ನರಪತಿ ಇಂದ್ರವಿಕ್ರಮಿ ಇಂದ್ರನ ಸಖನನ್ನು ಆಹವದಲ್ಲಿ ಸಂಹರಿಸಿ ಐಂದ್ರಿಯು ವಿಜಯದ ಆಕಾಂಕ್ಷೆಯಿಂದಿದ್ದ ಕೌರವರ ಕಡೆಯ ಯೋಧರನ್ನು ಚಂಡಮಾರುತವು ವೃಕ್ಷಗಳನ್ನು ಧ್ವಂಸಮಾಡುವಂತೆ ಧ್ವಂಸಮಾಡಿದನು.

## ಶಕುನಿಯ ಪಲಾಯನ

ಸತತವೂ ಇಂದ್ರನ ಪ್ರಿಯನಾಗಿದ್ದ ಸಖ ಅಮಿತೌಜಸ ಪ್ರಾಗ್ಜ್ಯೋತಿಷನನ್ನು ಸಂಹರಿಸಿ ಪಾರ್ಥನು ಪ್ರದಕ್ಷಿಣಾಕಾರವಾಗಿ ಹಿಂದಿರುಗಿದನು. ಆಗ ಗಾಂಧಾರರಾಜನ ಮಕ್ಕಳು, ಪರಪುರಂಜಯ ಸಹೋದರರಾದ ವೃಷಕ ಮತ್ತು ಅಚಲರಿಬ್ಬರೂ ರಣದಲ್ಲಿ ಅರ್ಜುನನ ಮೇಲೆ ಬಾಣಗಳನ್ನು ಪ್ರಯೋಗಿಸಿದರು. ಆ ಇಬ್ಬರು ವೀರ ಧನ್ವಿಗಳೂ ಅರ್ಜುನನ ಮುಂದೆ ಮತ್ತು ಹಿಂದಿನಿಂದ ಮಹಾವೇಗದಿಂದ ನಿಶಿತ ಆಶುಗಗಳಿಂದ ತುಂಬಾ ಹೊಡೆದು ಗಾಯಗೊಳಿಸಿದರು. ಪಾರ್ಥನು ಹರಿತ ಬಾಣಗಳಿಂದ ಸೌಬಲನ ಮಗ ವೃಷಕನ ಕುದುರೆಗಳನ್ನೂ, ಸೂತನನ್ನೂ ಕೊಂದು ಧನುಸ್ಸನ್ನೂ, ಚತ್ರವನ್ನೂ, ರಥವನ್ನೂ,

ಧ್ವಜವನ್ನೂ ಕತ್ತರಿಸಿದನು. ಆಗ ಅರ್ಜುನನು ಬಾಣಗಳ ಮಳೆಯಿಂದಲೂ ನಾನಾ ವಿಧದ ಶಸ್ತ್ರಪ್ರಹಾರಗಳಿಂದ ಪುನಃ ಪುನಃ ಸೌಬಲಪ್ರಮುಖ ಗಾಂಧಾರರನ್ನು ವ್ಯಾಕುಲಗೊಳಿಸಿದನು. ಆಗ ಆಯುಧಗಳನ್ನು ಹಿಡಿದು ಆಕ್ರಮಣ ಮಾಡುತ್ತಿದ್ದ ಐನೂರು ಗಾಂಧಾರವೀರರನ್ನು ಧನಂಜಯನು ಕ್ರುದ್ಧನಾಗಿ ಮೃತ್ಯುಲೋಕಕ್ಕೆ ಕಳುಹಿಸಿದನು. ಕುದುರೆಗಳು ಹತವಾಗಲು ತಕ್ಷಣವೇ ಆ ಮಹಾಭುಜ ವೃಷಕನು ರಥದಿಂದ ಇಳಿದು ಸಹೋದರ ಅಚಲನ ರಥವನ್ನೇರಿ ಇನ್ನೊಂದು ಧನುಸ್ಸನ್ನು ಎತ್ತಿಕೊಂಡನು. ಅವರಿಬ್ಬರು ಸಹೋದರ ವೃಷಕ-ಅಚಲರು ಶರವರ್ಷಗಳಿಂದ ಪುನಃ ಪುನಃ ಬೀಭತ್ಸುವನ್ನು ಆಕ್ರಮಣಿಸಿದರು. ಧೃತರಾಷ್ಟ್ರನ ಬಾವನ ಮಕ್ಕಳಾದ ರಾಜಕುಮಾರ ವೃಷಕ-ಅಚಲರಿಬ್ಬರೂ ವೃತ್ರ-ಬಲರು ಇಂದ್ರನನ್ನು ಹೇಗೋ ಹಾಗೆ ಪಾರ್ಥನನ್ನು ಚೆನ್ನಾಗಿ ಗಾಯಗೊಳಿಸಿದರು. ಆಷಾಢ-ಶ್ರಾವಣ ಮಾಸಗಳು ಹೇಗೆ ಉರಿಯುವ ಕಿರಣಗಳಿಂದ ಲೋಕವನ್ನು ತಾಪಗೊಳಿಸುತ್ತವೆಯೋ ಹಾಗೆ ಲಕ್ಷ್ಯಭೇದದಲ್ಲಿ ಸಿದ್ಧಹಸ್ತರಾದ ಆ ಗಾಂಧಾರರು ಪಾಂಡವನನ್ನು ಪುನಃ ಪುನಃ ಬಾಣಗಳಿಂದ ಪ್ರಹರಿಸಿದರು.

ರಥದಲ್ಲಿ ಒಬ್ಬರಿಗೊಬ್ಬರು ತಾಗಿಕೊಂಡೇ ನಿಂತಿದ್ದ ಆ ಇಬ್ಬರು

ನರವ್ಯಾಘ್ರ ರಾಜಕುಮಾರ ವೃಷಕ-ಅಚಲರಿಬ್ಬರನ್ನೂ ಅರ್ಜುನನು ಒಂದೇ ಒಂದು ಬಾಣದಿಂದ ಪ್ರಹರಿಸಿದನು. ಸಿಂಹಗಳಂತಿದ್ದ, ಕೆಂಪುಗಣ್ಣುಳ್ಳವರಾಗಿದ್ದ, ಒಂದೇ ದೇಹಲಕ್ಷಣಗಳನ್ನು ಹೊಂದಿದ್ದ ಆ ಇಬ್ಬರು ವೀರ ಮಹಾಭುಜ ಸೋದರರಿಬ್ಬರೂ ಅಸುನೀಗಿ ರಥದಿಂದ ಕೆಳಗೆ ಬಿದ್ದರು. ಬಂಧುಜನರಿಗೆ ಪ್ರಿಯರಾದ ಅವರ ದೇಹಗಳು ತಮ್ಮ ಪುಣ್ಯ ಯಶಸ್ಸನ್ನು ಹತ್ತು ದಿಕ್ಕುಗಳಲ್ಲಿಯೂ ಪಸರಿಸಿ ರಥದಿಂದ ಭೂಮಿಯ ಮೇಲೆ ಬಿದ್ದು ಮಲಗಿದವು. ಪಲಾಯನಗೈಯದೇ ರಣದಲ್ಲಿ ಹತರಾದ ಸೋದರ ಮಾವಂದಿರನ್ನು ನೋಡಿ ಧೃತರಾಷ್ಟ್ರನ ಮಕ್ಕಳು ಬಹಳವಾಗಿ ಕಣ್ಣೀರು ಸುರಿಸಿದರು. ತನ್ನ ಸಹೋದರರು ಹತರಾದುದನ್ನು ನೋಡಿ ನೂರಾರು ಮಾಯೆಗಳ ವಿಶಾರದ ಶಕುನಿಯು ಮಾಯೆಗಳನ್ನು ಬಳಸಿ ಕೃಷ್ಣರಿಬ್ಬರನ್ನೂ ಸಮ್ಮೋಹಗೊಳಿಸತೊಡಗಿದನು.

ದೊಣ್ಣೆಗಳು, ಕಬ್ಬಿಣದ ಸಲಾಕೆಗಳು, ಕಲ್ಲುಗಳು, ಶತಘ್ನಿಗಳು, ಶಕ್ತಿಗಳು, ಗದೆಗಳು, ಪರಿಘಗಳು, ಖಡ್ಗಗಳು, ಶೂಲಗಳು, ಮುದ್ಗರ-ಪಟ್ಟಿಷಗಳು, ಕಂಪನಗಳು, ಋಷ್ಟಿಗಳು, ನಖರಗಳು, ಮುಸಲಗಳು, ಪರಶುಗಳು, ಕ್ಷುರಗಳು, ಕ್ಷುರಪ್ರನಾಲೀಕಗಳು, ವತ್ಸದಂತಿಗಳು, ಅಸ್ಥಿಸಂಧಿಗಳು, ಚಕ್ರಗಳು, ಬಾಣಗಳು, ಪ್ರಾಸಗಳು, ಮತ್ತು ವಿವಿಧ ಆಯುಧಗಳು ಎಲ್ಲ

ದಿಕ್ಕು-ಉಪ ದಿಕ್ಕುಗಳಿಂದ ಅರ್ಜುನನ ಮೇಲೆ ಬಂದು ಬೀಳತೊಡಗಿದವು. ಕತ್ತಿಗಳು, ಒಂಟೆಗಳು, ಕೋಣಗಳು, ಸಿಂಹಗಳು, ಹುಲಿಗಳು, ಬೆಟ್ಟದ ಹಸುಗಳು, ಚಿರತೆಗಳು, ಕರಡಿಗಳು, ಹದ್ದುಗಳು, ಕಪಿಗಳು, ಹಾವುಗಳು, ಮತ್ತು ವಿವಿಧ ಪಕ್ಷಿಗಳು ಹಸಿವಿನಿಂದ ಬಳಲಿ ಸಂಕ್ರುದ್ಧರಾಗಿ ಅರ್ಜುನನ ಕಡೆ ಧಾವಿಸಿ ಬಂದವು. ಆಗ ದಿವ್ಯಾಸ್ತ್ರಗಳನ್ನು ತಿಳಿದಿದ್ದ ಶೂರ ಕುಂತೀಪುತ್ರ ಧನಂಜಯನು ತಕ್ಷಣವೇ ಬಾಣಗಳ ಜಾಲಗಳನ್ನು ಪ್ರಯೋಗಿಸಿ ಅವುಗಳನ್ನು ನಾಶಗೊಳಿಸಿದನು.

ಆ ಶೂರನ ಪ್ರವರ ದೃಢ ಸಾಯಕಗಳಿಂದ ಗಾಯಗೊಂಡ ಅವುಗಳೆಲ್ಲವೂ ಮಹಾರವದಲ್ಲಿ ಕೂಗುತ್ತಾ ಹತರಾಗಿ ಬಿದ್ದು ನಾಶಗೊಂಡವು. ಆಗ ಅರ್ಜುನನ ರಥದ ಸುತ್ತಲೂ ಕತ್ತಲೆಯುಂಟಾಯಿತು. ಆ ಕತ್ತಲೆಯಲ್ಲಿ ಕ್ರೂರ ಮಾತುಗಳು ಪಾರ್ಥನನ್ನು ಬೆದರಿಸಿದವು. ಅರ್ಜುನನು ಆ ಮಹಾ ಕತ್ತಲೆಯನ್ನು ಜ್ಯೋತಿಷಾಸ್ತ್ರದಿಂದ ನಿರಸನಗೊಳಿಸಿದನು. ಅದು ನಾಶಗೊಳ್ಳಲು ಭಯಾನಕವಾದ ಜಲರಾಶಿಯು ಅವನನ್ನು ಆವರಿಸಿತು. ಆ ನೀರಿನ ವಿನಾಶಕ್ಕಾಗಿ ಅರ್ಜುನನು ಆದಿತ್ಯಾಸ್ತ್ರವನ್ನು ಪ್ರಯೋಗಿಸಿದನು. ಆ ಅಸ್ತ್ರದಿಂದ ಜಲರಾಶಿಯೆಲ್ಲವೂ ಶೋಷಿತವಾಯಿತು. ಹೀಗೆ ಸೌಬಲನು

ಮಾಡಿದ ಬಹುವಿಧದ ಮಾಯೆಗಳನ್ನು ಅರ್ಜುನನು ನಗುತ್ತಾ ಅಸ್ತ್ರಬಲದಿಂದ ನಾಶಪಡಿಸಿದನು. ಹಾಗೆ ಮಾಯೆಗಳು ನಾಶಗೊಳ್ಳಲು, ಅರ್ಜುನನ ಶರಗಳ ಪೆಟ್ಟಿನಿಂದ ತ್ರಸ್ತನಾದ ಶಕುನಿಯು ಪ್ರಾಕೃತನಂತೆ ವೇಗ ಕುದುರೆಗಳೊಂದಿಗೆ ಪಲಾಯನಗೈದನು.

ಆಗ ಅರ್ಜುನನು ಅರಿಗಳ ಮಧ್ಯೆ ತನ್ನಲ್ಲಿದ್ದ ಅಸ್ತ್ರಗಳ ಶ್ರೇಷ್ಠತೆಯನ್ನು ಪ್ರದರ್ಶಿಸುತ್ತಾ ಕೌರವರ ಸೇನೆಗಳನ್ನು ಶರೌಘಗಳಿಂದ ಮುಚ್ಚಿದನು. ಪಾರ್ಥನಿಂದ ನಾಶಗೊಳ್ಳುತ್ತಿದ್ದ ದುರ್ಯೋಧನನ ಸೇನೆಯು ಗಂಗಾನದಿಯು ಪರ್ವತವನ್ನು ಸಮೀಪಿಸಿದಾಗ ಎರಡಾಗಿ ಕವಲೊಡೆಯುವಂತೆ ಇಬ್ಭಾಗಗೊಂಡಿತು. ಕಿರೀಟಿಯಿಂದ ಪೀಡಿತರಾದ ಕೆಲವರು ದ್ರೋಣನನ್ನು ಮೊರೆಹೊಕ್ಕರು. ಇನ್ನು ಕೆಲವರು ದುರ್ಯೋಧನನನ್ನು ಮೊರೆಹೊಕ್ಕರು.

ಅಲ್ಲಿಂದಿಲ್ಲಿಗೆ ಓಡುವುದರಿಂದುಂಟಾದ ಧೂಳಿನಿಂದ ಸೈನ್ಯದಲ್ಲಿ ಕತ್ತಲೆಯು ಕವಿದು ಅರ್ಜುನನೇ ಕಾಣದಂತಾದನು. ಆದರೆ ಗಾಂಡೀವದ ನಿರ್ಘೋಷವನ್ನು ಪದೇ ಪದೇ ಕೇಳಿಬರುತ್ತಿತ್ತು. ಶಂಖದುಂದುಭಿಗಳ ನಿರ್ಘೋಷ ಮತ್ತು ವಾದ್ಯಗಳ ಸ್ವರಗಳನ್ನೂ ಮೀರಿಸಿ ಗಾಂಡೀವದ ನಿರ್ಘೋಷವು ದಿವಿಯನ್ನು ತಲುಪಿತು. ಪುನಃ ದಕ್ಷಿಣಭಾಗದಲ್ಲಿ ದ್ರೋಣನನ್ನು ಅನುಸರಿಸುತ್ತಿದ್ದ ಚಿತ್ರ

ಯೋಧಿಗಳೊಂದಿಗೆ ಅರ್ಜುನನ ಉತ್ತಮ ಸಂಗ್ರಾಮವು ನಡೆಯಿತು. ಧೃತರಾಷ್ಟ್ರ ಪುತ್ರರ ನಾನಾ ವಿಧದ ಸೇನೆಗಳನ್ನು ಭಿರುಗಾಳಿಯು ಆಕಾಶದಲ್ಲಿ ಮೋಡಗಳನ್ನು ಚದುರಿಸುವಂತೆ ಅರ್ಜುನನು ನಾಶಗೊಳಿಸಿದನು. ಅಂತಕನಂತೆ ಜೋರಾಗಿ ಬಾಣಗಳ ಮಳೆಯನ್ನು ಸುರಿಸುತ್ತಿದ್ದ ಆ ವಾಸವ ಉಗ್ರನನ್ನು ಯಾರೂ ತಡೆಯಲಿಲ್ಲ. ಪಾರ್ಥರಿಂದ ಹತರಾದ ಕೌರವರು ತುಂಬಾ ವ್ಯಥಿತರಾದರು. ಪಲಾಯನ ಮಾಡುತ್ತಿದ್ದವರು ಬಹಳಷ್ಟು ತಮ್ಮವರನ್ನೇ ನಾಶಗೊಳಿಸಿದರು. ಅರ್ಜುನನಿಂದ ಬಿಡಲ್ಪಟ್ಟು ದೇಹಗಳನ್ನು ತುಂಡರಿಸುತ್ತಿದ್ದ ಕಂಕಪತ್ರಗಳು ಮಿಡತೆಗಳೋಪಾದಿಯಲ್ಲಿ ಎಲ್ಲ ದಿಕ್ಕುಗಳನ್ನೂ ವ್ಯಾಪಿಸಿ ಬೀಳುತ್ತಿದ್ದವು. ಅವುಗಳು ಆನೆ-ಕುದುರೆ-ಪದಾತಿ-ರಥಿಗಳನ್ನು ಭೇದಿಸಿ ಹಾವುಗಳು ಹುತ್ತವನ್ನು ಪ್ರವೇಶಿಸುವಂತೆ ನೆಲವನ್ನು ಹೊಗುತ್ತಿದ್ದವು.

ಅವನು ಆನೆ-ಕುದುರೆ-ಮನುಷ್ಯರ ಮೇಲೆ ಎರಡನೆಯ ಬಾಣವನ್ನು ಬಿಡುತ್ತಿರಲಿಲ್ಲ. ಅವನ ಒಂದೊಂದು ಬಾಣದಿಂದಲೂ ಗಾಯಗೊಂಡು ಅಸುನೀಗಿ ಬೀಳುತ್ತಿದ್ದರು. ಶರವೃಷ್ಟಿಯಿಂದ ಹತರಾದ ಮನುಷ್ಯ-ಕುದುರೆ-ಆನೆಗಳು ಬಿದ್ದು ರಣರಂಗವು ತುಂಬಿಹೋಯಿತು. ಹೆಣಗಳನ್ನು ತಿನ್ನಲು ಬಂದ ನಾಯಿ ಗುಳ್ಳೇನರಿಗಳ ಕೂಗಿನಿಂದ ರಣರಂಗದ

ಮಧ್ಯಭಾಗವು ವಿಚಿತ್ರವಾಗಿ ತೋರಿತು. ಶರಾತುರರಾಗಿ ತಂದೆಯು ಮಗನನ್ನು ತೊರೆಯುತ್ತಿದ್ದನು. ಸ್ನೇಹಿತರು ಸ್ನೇಹಿತರನ್ನು ತೊರೆಯುತ್ತಿದ್ದರು. ಹಾಗೆಯೇ ಪುತ್ರರು ಪಿತೃಗಳನ್ನು ತೊರೆಯುತ್ತಿದ್ದರು. ಪಾರ್ಥನಿಂದ ಪೀಡಿತರಾದ ಕೃತಮತರು ತಮ್ಮ ತಮ್ಮ ರಕ್ಷಣೆಯಲ್ಲಿ ವಾಹನಗಳನ್ನೂ ಬಿಟ್ಟು ಓಡುತ್ತಿದ್ದರು.

ಹಾಗಿದ್ದರೂ ದುರ್ಯೋಧನನಿಗೆ ಪ್ರಿಯವಾದುದನ್ನು ಮಾಡಲು ಬಯಸಿ ಕೌರವ ಪ್ರಮುಖರು ಲೋಕದಲ್ಲಿ ತಮ್ಮ ಯಶಸ್ಸನ್ನು ರಕ್ಷಿಸಿಕೊಳ್ಳುತ್ತಾ ದ್ರೋಣನನ್ನು ಅನುಸರಿಸಿದರು. ಅವರು ಯುಧಿಷ್ಠಿರನನ್ನು ತಲುಪಿ ಶಸ್ತ್ರಗಳನ್ನು ಎತ್ತಿ ಹಿಡಿದು ಭಯಪಡದೇ ಸತ್ಯವಾದ ಭೈರವ ಆರ್ಯಕರ್ಮಗಳನ್ನು ಎಸಗಿದರು. ಬಳಿಯಲ್ಲಿ ಭೀಮಸೇನನೂ, ಸಾತ್ಯಕಿಯೂ, ಧೃಷ್ಟದ್ಯುಮ್ನನೂ ಇಲ್ಲದಿರುವ ಅವಕಾಶದಲ್ಲಿ ಅವನ ಮೇಲೆ ಎರಗಿದರು. “ದ್ರೋಣ! ದ್ರೋಣ!” ಎಂದು ಕ್ರೂರರಾದ ಪಾಂಚಾಲರು ಹುರಿದುಂಬಿಸುತ್ತಿದ್ದರು. “ದ್ರೋಣನನ್ನು ಬಿಟ್ಟುಕೊಡಬೇಡಿ!” ಎಂದು ಕೌರವರು ಕುರುಗಳನ್ನು ಹುರಿದುಂಬಿಸುತ್ತಿದ್ದರು. “ದ್ರೋಣ! ದ್ರೋಣ!” ಎಂದು ಒಂದುಕಡೆ ಪಾಂಡವರು ಮತ್ತು “ದ್ರೋಣನನ್ನು ಬಿಟ್ಟುಕೊಡಬೇಡಿ!” ಎಂದು ಇನ್ನೊಂದು ಕಡೆಯಲ್ಲಿ ಕುರುಗಳು ಕೂಗುತ್ತಾ ದ್ರೋಣನನ್ನು ದ್ಯೂತದ

ಪಣವಾನ್ನಾಗಿಸಿದ್ದರು. ದ್ರೋಣನು ಪಾಂಚಾಲರ ಯಾವ ಯಾವ ರಥಸಮೂಹಗಳನ್ನು ಆಕ್ರಮಣಿಸುತ್ತಿದ್ದನೋ ಅಲ್ಲಲ್ಲಿ ಧೃಷ್ಟದ್ಯುಮ್ನನು ಅವನನ್ನು ಎದುರಿಸುತ್ತಿದ್ದನು. ಹೀಗೆ ಭಾಗವಿಪರ್ಯಾಸದಿಂದ ನಡೆಯುತ್ತಿದ್ದ ಸಂಗ್ರಾಮವು ಭೈರವ ರೂಪವನ್ನು ತಾಳಿ, ವೀರರು ಶತ್ರು ವೀರರನ್ನು ಜೋರಾಗಿ ಗರ್ಜಿಸುತ್ತಾ ಎದುರಿಸಿದರು. ಪಾಂಡವರು ಶತ್ರುಗಳಿಂದ ಸ್ವಲ್ಪವೂ ತತ್ತರಿಸಲಿಲ್ಲ. ಆದರೆ ಅವರ ಕಷ್ಟಗಳನ್ನು ಸ್ಮರಿಸಿಕೊಂಡು ಅವರು ಕೌರವ ಸೇನೆಯು ತತ್ತರಿಸುವಂತೆ ಮಾಡಿದರು. ಲಜ್ಜಾಶೀಲರಾದ ಸತ್ತ್ವಗುಣಸಂಪನ್ನರಾದ ಪಾಂಡವರೂ ಕೂಡ ಕೋಪಾವಿಷ್ಟರಾಗಿ ಪ್ರಾಣಗಳನ್ನೂ ತೊರೆದು ಮಹಾರಣದಲ್ಲಿ ದ್ರೋಣನನ್ನು ಸಂಹರಿಸಲು ಮುನ್ನುಗ್ಗಿ ಹೋಗುತ್ತಿದ್ದರು. ಪ್ರಾಣಗಳನ್ನೇ ಪಣವಾಗಿಟ್ಟ ಅಮಿತತೇಜಸರ ಆ ತುಮುಲ ಯುದ್ಧವು ಕಬ್ಬಿಣದ ಒನಕೆಗಳ ಘರ್ಷಣೆಗೆ ಅಥವಾ ಕಲ್ಲುಗಳ ಘರ್ಷಣೆಗೆ ಸಮಾನವಾಗಿತ್ತು. ವೃದ್ಧರು ಕೂಡ ಆ ರೀತಿಯ ಸಂಗ್ರಾಮವನ್ನು ನೆನಪಿಸಿಕೊಳ್ಳಲಾಗುತ್ತಿರಲಿಲ್ಲ. ಏಕೆಂದರೆ ಆ ರೀತಿಯ ಯುದ್ಧವನ್ನು ಅವರು ಕಂಡೂ ಇರಲಿಲ್ಲ. ಕೇಳಿಯೂ ಇರಲಿಲ್ಲ. ವೀರರ ವಿನಾಶಕಾರಕ ಆ ಮಹಾಯುದ್ಧದಲ್ಲಿ ರಣಾಂಗಣಕ್ಕೆ ಹಿಂದಿರುಗುತ್ತಿದ್ದ ಮಹಾ ಸೇನಾ ಸಮೂಹದ ಭಾರದಿಂದ ಪೀಡಿತಳಾಗಿ ಭೂಮಿಯು ಕಂಪಿಸಿದಳು. ಅಜಾತಶತ್ರುವಿನ ಮತ್ತು ಕ್ರುದ್ಧನಾದ ದುರ್ಯೋಧನನ

ಸೈನ್ಯಸಮೂಹಗಳ ಆ ಭಯಂಕರ ಸಂಚಲನದಿಂದಾದ ಶಬ್ಧವು ನಾಕವನ್ನೂ ಸ್ತಬ್ಧಗೊಳಿಸಿತು. ಪಾಂಡವರ ಸೇನೆಗಳನ್ನು ಹೊಕ್ಕು ಸಂಚರಿಸುತ್ತಿದ್ದ ದ್ರೋಣನು ನಿಶಿತ ಶರಗಳಿಂದ ಸಹಸ್ರಾರು ಸಂಖ್ಯೆಗಳಲ್ಲಿ ಸಂಹರಿಸಿದನು. ಅದ್ಭುತಕರ್ಮಿ ದ್ರೋಣನಿಂದ ಪ್ರಮಥಗೊಳ್ಳುತ್ತಿರಲು ಸ್ವಯಂ ಸೇನಾಪತಿ ಧೃಷ್ಟದ್ಯುಮ್ನನು ಎದುರಿಸಿ ತಡೆದನು. ಆಗ ದ್ರೋಣ-ಪಾಂಚಾಲ್ಯರ ನಡುವೆ ಅದ್ಭುತ ಯುದ್ಧವು ನಡೆಯಿತು. ಅದರಂತಹ ಯುದ್ಧವು ಹಿಂದೆ ಎಂದೂ ನಡೆದಿರಲಿಲ್ಲ.

## ನೀಲವಧೆ

ಆಗ ಅನಲನೆಂದೇ ಪ್ರಖ್ಯಾತನಾಗಿದ್ದ ನೀಲನು ಬಾಣಗಳನ್ನೇ ಕಿಡಿಯನ್ನಾಗಿ ಬಿಲ್ಲನ್ನೇ ಜ್ವಾಲೆಯನ್ನಾಗಿಸಿಕೊಂಡು ಬೆಂಕಿಯು ಹುಲ್ಲಿನ ಮೆದೆಯನ್ನು ಸುಡುವಂತೆ ಕುರುಸೇನೆಯನ್ನು ದಹಿಸತೊಡಗಿದನು. ಅವನು ಸೇನೆಗಳನ್ನು ಸುಡುತ್ತಿರುವಾಗ ಪೂರ್ವಭಾಷೀ, ಪ್ರತಾಪವಾನ್ ದ್ರೋಣಪುತ್ರನು ನಸುನಗುತ್ತಾ ಸುಮಧುರವಾಗಿ ಹೇಳಿದನು:

> “ನೀಲ! ಬಾಣಗಳೆಂಬ ಜ್ವಾಲೆಯಿಂದ ಅನೇಕ ಯೋಧರನ್ನು ಸುಡುತ್ತೀಯೆ ಏಕೆ? ನನ್ನೊಬ್ಬನೊಡನೆಯೇ ಯುದ್ಧ ಮಾಡು. ಕೋಪಗೊಂಡು ಆಶುಗಗಳಿಂದ ನನ್ನನ್ನು ಪ್ರಹರಿಸು!”

ಆಗ ನೀಲನು ಅರಳುತ್ತಿರುವ ಪದ್ಮದಂತಿದ್ದ, ಪದ್ಮಪತ್ರನಿಭೇಕ್ಷಣ, ಕಮಲಗಳ ಸಮೂಹದಂತೆ ಸುಂದರಾಂಗನಾಗಿದ್ದ ಅಶ್ವತ್ಥಾಮನನ್ನು ಸಾಯಕಗಳಿಂದ ಹೊಡೆದನು. ಅವನಿಂದ ಪೆಟ್ಟುತಿಂದ ದ್ರೌಣಿಯು ತಕ್ಷಣವೇ ಮೂರು ನಿಶಿತ ಭಲ್ಲಗಳಿಂದ ಶತ್ರುವಿನ ಧನುಸ್ಸನ್ನೂ, ಧ್ವಜವನ್ನೂ, ಚತ್ರವನ್ನೂ ತುಂಡರಿಸಿದನು. ಆಗ ದ್ರೌಣಿಯ ಶಿರವನ್ನು ದೇಹದಿಂದ ಕತ್ತರಿಸಲು ಬಯಸಿ ನೀಲನು ಕತ್ತಿ ಗುರಾಣಿಯನ್ನು ಹಿಡಿದು ಪಕ್ಷಿಯಂತೆ ರಥದಿಂದ ಧುಮುಕಿದನು. ಅಷ್ಟರಲ್ಲಿಯೇ ದ್ರೌಣಿಯು ನಗುತ್ತಲೇ ಭಲ್ಲದಿಂದ ಉನ್ನತ ಹೆಗಲಿನಿಂದಲೂ, ಶೋಭಾಯಮಾನವಾದ ಮೂಗಿನಿಂದಲೂ ಮತ್ತು ಕರ್ಣಕುಂಡಲಗಳಿಂದಲೂ ಯುಕ್ತವಾಗಿದ್ದ ಅವನ ಶಿರವನ್ನು ಶರೀರರಿಂದ ಅಪಹರಿಸಿಬಿಟ್ಟನು. ಪೂರ್ಣಚಂದ್ರನಿಗೆ ಸಮಾನ ಮುಖಕಾಂತಿಯನ್ನು ಹೊಂದಿದ್ದ, ಕವಲದಳಸದೃಶವಾದ ಕಣ್ಣುಗಳಿಂದ ವಿರಾಜಿಸುತ್ತಿದ್ದ, ಉನ್ನತಾಕಾರವಾಗಿದ್ದ, ಕನ್ನೈದಿಲಿಗೆ ಸಮಾನ ಕಾಂತಿಯುಕ್ತನಾಗಿದ್ದ ನೀಲನು ಹತನಾಗಿ ಭೂಮಿಯ ಮೇಲೆ ಬಿದ್ದನು. ಆಚಾರ್ಯಪುತ್ರನಿಂದ ಜ್ವಲಿತತೇಜಸ್ವಿ ನೀಲನು ಹತನಾಗಲು ಬಹಳವಾಗಿ ವ್ಯಾಕುಲಗೊಂಡ ಪಾಂಡವ ಸೇನೆಯು ದುಃಖಿಸಿತು. “ವಾಸವಿಯು ಹೇಗೆ ನಮ್ಮನ್ನು ಶತ್ರುಗಳಿಂದ ರಕ್ಷಸಿಸುತ್ತಾನೆ?” ಎಂದು ಪಾಂಡವರ ಮಹಾರಥರೆಲ್ಲರೂ ಚಿಂತಿಸತೊಡಗಿದರು. ಆದರೆ ಆ

ಬಲಶಾಲಿಯು ದಕ್ಷಿಣ ಭಾಗದಲ್ಲಿ ಅಳಿದುಳಿದ ಸಂಶಪ್ತಕ ಮತ್ತು ನಾರಾಯಣ ಸೇನೆಗಳೊಂದಿಗೆ ಕದನವಾಡುತ್ತಿದ್ದನು.

## ಹನ್ನೆರಡನೆಯ ದಿನದ ಯುದ್ಧ ಸಮಾಪ್ತಿ

ವೃಕೋದರನು ತನ್ನ ಸೈನ್ಯಕ್ಕಾದ ಪ್ರತಿಘಾತವನ್ನು ಸಹಿಸಿಕೊಳ್ಳದೇ ಬಾಹ್ಲಿಕನನ್ನು ಅರವತ್ತು ಮತ್ತು ಕರ್ಣನನ್ನು ಹತ್ತು ಶರಗಳಿಂದ ಹೊಡೆದನು. ಆಗ ದ್ರೋಣನು ಅವನನ್ನು ಜೀವಿತವಾಗಿ ಉಳಿಸಬಾರದೆಂದು ಬಯಸಿ ನಿಶಿತವಾದ ತೀಕ್ಷ್ಣ ಉಕ್ಕಿನ ಬಾಣಗಳಿಂದ ಅವನ ಮರ್ಮಗಳಿಗೆ ಹೊಡೆದನು. ಆಗ ಅವನನ್ನು ಕರ್ಣನು ಹನ್ನೆರಡು ಬಾಣಗಳಿಂದಲೂ, ಅಶ್ವತ್ಥಾಮನು ಏಳರಿಂದಲೂ, ರಾಜಾ ದುರ್ಯೋಧನನು ಆರರಿಂದಲೂ ಹೊಡೆದು ಮುಚ್ಚಿದರು. ಭೀಮಸೇನನು ಅವರೆಲ್ಲರನ್ನೂ ಪ್ರತಿಯಾಗಿ ದ್ರೋಣನನ್ನು ಐವತ್ತು ಬಾಣಗಳಿಂದಲೂ, ಕರ್ಣನನ್ನು ಹತ್ತು ಬಾಣಗಳಿಂದಲೂ, ದುರ್ಯೋಧನನನ್ನು ಹನ್ನೆರಡು ಮತ್ತು ದ್ರೌಣಿಯನ್ನು ಎಂಟು ಆಶುಗಗಳಿಂದ ಹೊಡೆದನು. ಭಯಂಕರವಾಗಿ ಗರ್ಜಿಸುತ್ತಾ ಅವನು ರಣದಲ್ಲಿ ತುಮುಲ ಯುದ್ಧಮಾಡಿದನು. ಮೃತ್ಯುವು ಸರ್ವಸಾಧಾರಣವೆಂದು ಬಗೆದು ಪ್ರಾಣವನ್ನೂ ತೊರೆದು ಯುದ್ಧ ಮಾಡುತ್ತಿರಲು "ಭೀಮನನ್ನು ರಕ್ಷಿಸಿ!" ಎಂದು ಅಜಾತಶತ್ರುವು ತನ್ನ

ಯೋಧರನ್ನು ಪ್ರಚೋದಿಸಿದನು. ಭೀಮಸೇನನ ಬಳಿಗೆ ಯುಯುಧಾನನ ನೇತೃತ್ವದಲ್ಲಿ ಪಾಂಡವ ಮಾದ್ರೀಪುತ್ರರಿಬ್ಬರೂ ಬಂದರು. ಅವರೆಲ್ಲ ಮಹೇಷ್ವಾಸ ಶ್ರೇಷ್ಠರೂ ಒಟ್ಟಾಗಿ ಸೇರಿ ದ್ರೋಣನಿಂದ ರಕ್ಷಿತವಾಗಿದ್ದ ಸೇನೆಯನ್ನು ಆಕ್ರಮಣಿಸಿದರು. ಆಗ ದ್ರೋಣನಾದರೋ ಗಾಭರಿಗೊಳ್ಳದೇ ಆಕ್ರಮಣ ಮಾಡುತ್ತಿದ್ದ ಭೀಮನೇ ಮೊದಲಾದ ರಥರನ್ನು ಎದುರಿಸಿದನು. ಪ್ರಾಣಭಯವನ್ನು ಹೊರಗಟ್ಟಿ ಕೌರವರು ಆ ವೀರ ಪಾಂಡವರೊಂದಿಗೆ ಹೋರಾಡಿದರು. ಅಶ್ವಾರೋಹಿಗಳು ಅಶ್ವಾರೋಹಿಗಳನ್ನು ಮತ್ತು ಹಾಗೆಯೇ ರಥಿಗಳು ರಥರನ್ನು ಕೊಂದರು. ಶಕ್ತಿ ಮತ್ತು ಕಬ್ಬಿಣದ ಸಲಾಕೆಗಳು ಬೇಳತೊಡಗಿದವು. ಪರಶಾಯುಧಗಳ ಯುದ್ಧವು ನಡೆಯಿತು. ಕಟುಕವಾದ ಖಡ್ಗಗಳ ಯುದ್ಧವು ನಡೆಯಿತು. ಆನೆಗಳ ಸಂಘಾತದಿಂದಾಗಿ ದಾರುಣ ಯುದ್ಧವು ನಡೆಯಿತು.

ಆನೆಗಳ ಮೇಲಿಂದ ಬಿದ್ದರು. ಇನ್ನು ಕೆಲವರು ಕುದುರೆಗಳ ಮೇಲಿಂದ ತಲೆಕೆಳಗಾಗಿ ಬಿದ್ದರು. ಅನ್ಯ ಮನುಷ್ಯರು ಬಾಣಗಳಿಂದ ಭೇದಿಸಲ್ಪಟ್ಟು ರಥಗಳ ಮೇಲಿಂದ ಬಿದ್ದರು. ಇನ್ನು ಕೆಲವರು ಕವಚಗಳಿಲ್ಲದೇ ಬಾಣಗಳಿಂದ ಹೊಡೆಯಲ್ಪಟ್ಟು ಕೆಳಗೆ ಬೀಳಲು ಅಷ್ಟರಲ್ಲಿಯೇ ಆನೆಯು ಬಂದು ಅವರ ಎದೆ-ತಲೆಗಳನ್ನು ತುಳಿದು ಧ್ವಂಸಮಾಡುತ್ತಿತ್ತು.

ಇನ್ನು ಕೆಲವು ಆನೆಗಳು ಕೆಳಗೆ ಬಿದ್ದಿದ್ದ ನರರನ್ನು ತುಳಿದು ಜಜ್ಜಿಹಾಕುತ್ತಿದ್ದವು. ಕೆಲವು ಹೋಗಿ ತಮ್ಮ ದಂತಗಳಿಂದ ಹಲವಾರು ರಥಗಳನ್ನು ತಿವಿದು ಬೀಳಿಸುತ್ತಿದ್ದವು. ಹಾಗೆಯೇ ನೋಡಲು ಭಯಂಕರರಾಗಿದ್ದವರು ಶತ್ರುಗಳ ಅನೇಕ ವಿಧದ ಉಪಕರಣ-ಆಯುಧಗಳಿಂದ ಹೊಡೆಯಲ್ಪಟ್ಟು ಹತರಾಗಿ ನೆಲವನ್ನು ಸೇರಿದ್ದರು. ಕೆಲವರು ಕುದುರೆ-ಆನೆಗಳ ಕಾಲಿನ ತುಳಿತಕ್ಕೆ ಸಿಲುಕಿ ಅಥವಾ ರಥದ ಗಾಲಿಗಳಿಗೆ ಸಿಲುಕಿ ಜಜ್ಜಿ ಹೋಗಿದ್ದರು. ತಮ್ಮ ತೇಜಸ್ಸುಗಳನ್ನು ಬಳಸಿ ಪರಸ್ಪರರಲ್ಲಿ ಕುಪಿತರಾಗಿ ಆ ಮಹಾಬಲರು ಸಂಹರಿಸುತ್ತಿರಲು ಅಲ್ಲಿ ನಡೆಯುತ್ತಿದ್ದ ಜನಕ್ಷಯದಿಂದ ನಾಯಿ-ನರಿಗಳು ಮತ್ತು ಮಾಂಸವನ್ನು ಭಕ್ಷಿಸುವ ಪಕ್ಷಿಗಳು ತುಂಬಾ ಸಂತೋಷಗೊಂಡಿದ್ದವು. ಆಗ ಎರಡೂ ಸೇನೆಗಳೂ ಪರಸ್ಪರರಿಂದ ತುಂಬಾ ನುಗ್ಗಾಗಿ, ರಕ್ತದಲ್ಲಿ ತೋಯ್ದು ಪರಸ್ಪರರನ್ನು ನಿರೀಕ್ಷಿಸುತ್ತಿರಲು, ದಿವಾಕರನು ನಿಧಾನವಾಗಿ ಅಸ್ತಂಗಿರಿಯನ್ನೇರಿದನು. ಆಗ ಎರಡೂ ಪಕ್ಷಗಳೂ ಶಿಬಿರಗಳಿಗೆ ತೆರಳಿದರು.

# ಹದಿಮೂರನೆಯ ದಿನದ ಯುದ್ಧ: ಅಭಿಮನ್ಯು ವಧೆ

## ಚಕ್ರವ್ಯೂಹ ನಿರ್ಮಾಣ

ಅಮಿತೌಜಸ ಫಲ್ಗುನನು ಕೌರವರನ್ನು ಮೊದಲೇ ಭಗ್ನಗೊಳಿಸಿದ್ದನು. ಯುಧಿಷ್ಠಿರನನ್ನು ರಕ್ಷಿಸಿ ದ್ರೋಣನ ಸಂಕಲ್ಪವನ್ನು ಅಸಫಲಗೊಳಿಸಿದ್ದನು. ಕೌರವರೆಲ್ಲರೂ ಯುದ್ಧದಲ್ಲಿ ಸೋತು, ಕವಚಗಳನ್ನು ಕಳೆದುಕೊಂಡು ಧೂಳಿನಿಂತ ತುಂಬಿಕೊಂಡು, ತುಂಬಾ ಉದ್ವಿಗ್ನರಾಗಿ ದಿಕ್ಕು ದಿಕ್ಕುಗಳನ್ನು ನೋಡುತ್ತಿದ್ದರು. ಭಾರದ್ವಾಜನ ಸಮ್ಮತಿಯಂತೆ ಯುದ್ಧದಿಂದ ಹಿಂದಿರುಗಿದರು. ಅರ್ಜುನನ ಗುರಿಗೆ ಸಿಲುಕಿದ್ದ ಅವರು ರಣದಲ್ಲಿ ಶತ್ರುಗಳಿಂದ ದೀನರಾಗಿಸಿಕೊಂಡಿದ್ದರು ಮತ್ತು ಅವಹೇಳನಕ್ಕೊಳಗಾಗಿದ್ದರು. ಎಲ್ಲ ಭೂತಗಳು ಫಲ್ಗುನನ ಅಮಿತ ಗುಣಗಳನ್ನು ಮತ್ತು ಕೇಶವನ ಸೌಹಾರ್ದತೆಯನ್ನು ಶ್ಲಾಘಿಸುತ್ತಿದ್ದರು. ಅರ್ಜುನನ ಗುಣಗಾನವನ್ನೇ ಮಾಡುತ್ತಿದ್ದರು. ಕೌರವರು ಮಾತ್ರ ಕಳಂಕಿತರಾದವರಂತೆ ಧ್ಯಾನಮೂಕರಾಗಿದ್ದರು. ಆಗ ಪ್ರಭಾತಸಮಯದಲ್ಲಿ ಶತ್ರುಗಳ ಗೆಲುವಿನಿಂದ ಮನಸ್ಸು ಕೆಟ್ಟುಹೋಗಿ ಸಂರಬ್ಧನಾಗಿದ್ದ ವಾಕ್ಯಕೋವಿದ ದುರ್ಯೋಧನನು ಎಲ್ಲರಿಗೂ ಕೇಳುವಂತೆ ಪ್ರಣಯ ಮತ್ತು ಅಭಿಮಾನಗಳಿಂದ ದ್ರೋಣನಿಗೆ ಹೇಳಿದನು.

"ಬ್ರಹ್ಮವಿತ್ತಮ! ನಾವೆಲ್ಲರೂ ನಿಮ್ಮ ಶತ್ರುಪಕ್ಷದಲ್ಲಿದ್ದೇವೆ

ಎಂದು ತೋರುತ್ತದೆ. ಆದುದರಿಂದಲೇ ಯುಧಿಷ್ಠಿರನು ಸಮೀಪದಲ್ಲಿ ದೊರಕಿದ್ದರೂ ಅವನನ್ನು ನೀವು ಸೆರೆಹಿಡಿಯಲಿಲ್ಲ! ನೀವು ಬಯಸಿದರೆ ರಣದಲ್ಲಿ ನಿಮ್ಮ ಕಣ್ಣಿಗೆ ಸಿಲುಕಿದ ಯಾವ ಶತ್ರುವೂ ಅಮರರಿಂದಾಗಲೀ ಪಾಂಡವರಿಂದಾಗಲೀ ರಕ್ಷಿಸಲ್ಪಡುತ್ತಿದ್ದರೂ ನಿಮ್ಮಿಂದ ಬಿಡಿಸಿಕೊಳ್ಳಲು ಸಾಧ್ಯವಿಲ್ಲ. ನನ್ನ ಮೇಲೆ ಪ್ರೀತರಾಗಿ ವರವನ್ನಿತ್ತು ನಂತರ ಅದಕ್ಕೆ ವಿರುದ್ಧವಾಗಿ ನಡೆದುಕೊಂಡಿದ್ದೀರಿ. ಆರ್ಯರು ಎಂದೂ ಭಕ್ತರ ಆಶಾಭಂಗವನ್ನು ಎಸಗುವುದಿಲ್ಲ."

ಆಗ ಅಪ್ರೀತನಾಗಿ ಭಾರದ್ವಾಜನು ನೃಪನಿಗೆ ಹೇಳಿದನು:

"ನಿನಗೋಸ್ಕರವಾಗಿ ಸರ್ವ ಪ್ರಯತ್ನಮಾಡಿ ದುಡಿಯುತ್ತಿದ್ದವನ ಕುರಿತು ಹಾಗೆ ಆಲೋಚಿಸುವುದು ಸರಿಯಲ್ಲ. ರಣದಲ್ಲಿ ಕಿರೀಟಿಯಿಂದ ಪಾಲಿತನಾದವನನ್ನು ಜಯಿಸಲು ಲೋಕದಲ್ಲಿ ಸುರಾಸುರಗಂಧರ್ವರಿಗೂ ಯಕ್ಷೋರಗರಾಕ್ಷಸರಿಗೂ ಸಾಧ್ಯವಿಲ್ಲ. ಎಲ್ಲಿ ವಿಶ್ವದ ಸೃಷ್ಟಿಕರ್ತ ಗೋವಿಂದನಿದ್ದಾನೋ ಎಲ್ಲಿ ಸೇನಾಧಿಪತಿ ಅರ್ಜುನನಿದ್ದಾನೋ ಅಲ್ಲಿ ಪ್ರಭು ತ್ರ್ಯಂಬಕನ ಬಲವನ್ನು

ಬಿಟ್ಟು ಬೇರೆ ಯಾರ ಬಲವು ತಾನೇ ನಾಟೀತು? ಇಂದು ನಾನು ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ಇದು ಅನ್ಯಥಾ ಆಗುವುದಿಲ್ಲ ಎಂದು ತಿಳಿ. ಇಂದು ನಾನು ಓರ್ವ ಮುಖ್ಯ ವೀರ ಮಹಾರಥನನ್ನು ಕೆಡವುತ್ತೇನೆ. ಅದಕ್ಕಾಗಿ ನಾನು ದೇವತೆಗಳಿಗೂ ಅಭೇದ್ಯವಾದ ವ್ಯೂಹವನ್ನು ರಚಿಸುತ್ತೇನೆ. ಆದರೆ ಯಾವುದಾದರೂ ಉಪಾಯದಿಂದ ನೀನು ಅರ್ಜುನನನ್ನು ಬೇರೆಕಡೆ ಒಯ್ಯಬೇಕು. ಏಕೆಂದರೆ ಅವನಿಗೆ ಯುದ್ಧದ ವಿಷಯದಲ್ಲಿ ತಿಳಿಯದೇ ಇದ್ದುದು ಮತ್ತು ಅಸಾಧ್ಯವಾದುದು ಯಾವುದೂ ಇಲ್ಲ. ಅವನು ಸೇನೆಗಳ ಕುರಿತು ಸರ್ವ ಜ್ಞಾನವನ್ನೂ ಇಲ್ಲಿಂದ ಮತ್ತು ಬೇರೆಕಡೆಗಳಿಂದ ಪಡೆದುಕೊಂಡಿದ್ದಾನೆ.”

ದ್ರೋಣನು ಹೀಗೆ ಹೇಳಲು ಪುನಃ ಸಂಶಪ್ತಕಗಣಗಳು ರಣದ ದಕ್ಷಿಣಭಾಗಕ್ಕೆ ಅರ್ಜುನನನ್ನು ಯುದ್ಧಕ್ಕೆ ಆಹ್ವಾನಿಸಿದರು. ಅಲ್ಲಿ ಅರ್ಜುನ ಮತ್ತು ಶತ್ರುಗಳ ನಡುವೆ ಎಲ್ಲಿಯೂ ಎಂದೂ ಕಂಡು-ಕೇಳಿರದಂತಹ ಕಾಳಗವು ನಡೆಯಿತು. ಆಗ ದ್ರೋಣನು ಮಧ್ಯಾಹ್ನದ ಸೂರ್ಯನು ಸುಡುವಂತೆ ನೋಡಲೂ ಅಸಾದ್ಯವಾದ ವ್ಯೂಹವನ್ನು ರಚಿಸಿದನು. ಆಚಾರ್ಯರು ರಚಿಸಿದ ಚಕ್ರವ್ಯೂಹದಲ್ಲಿ

ಇಂದ್ರಸಮಾನರಾದ ರಾಜರೆಲ್ಲರೂ ಪ್ರತಿಷ್ಠಿತರಾಗಿದ್ದರು. ಆಗ ಅಲ್ಲಿ ಎಲ್ಲ ಪ್ರತಿಜ್ಞೆಮಾಡಿದ್ದ, ಸುವರ್ಣವಿಕೃತಧ್ವಜರಾದ ರಾಜಪುತ್ರರ ಒಕ್ಕೂಟವು ಸೇರಿತ್ತು. ಎಲ್ಲರೂ ಕೆಂಪು ವಸ್ತ್ರಗಳನ್ನು ಧರಿಸಿದ್ದರು. ಎಲ್ಲರೂ ಕೆಂಪು ಆಭರಣಗಳನ್ನು ಧರಿಸಿದ್ದರು. ಎಲ್ಲರಿಗೂ ಕೆಂಪು ಧ್ವಜಗಳಿದ್ದವು. ಎಲ್ಲರೂ ಚಿನ್ನದ ಮಾಲೆಗಳನ್ನು ಧರಿಸಿದ್ದರು. ಧೃತರಾಷ್ಟ್ರನ ಮೊಮ್ಮಗ ಪ್ರಿಯದರ್ಶನ ಲಕ್ಷ್ಮಣನನ್ನು ಮುಂದೆ ಇರಿಸಿಕೊಂಡಿದ್ದ ಆ ದೃಢಧನ್ವಿಗಳ ಸಂಖ್ಯೆ ಹತ್ತುಸಾವಿರವಾಗಿತ್ತು. ಒಬ್ಬನಿಗಾಗುವ ದುಃಖವು ಎಲ್ಲರಿಗೂ ಸಮಾನವೆಂದು ಭಾವಿಸಿದ್ದರು. ಸಾಹಸದಲ್ಲಿ ಅನ್ಯೋನ್ಯರ ಸಮನಾಗಿದ್ದರು. ಅನ್ಯೋನ್ಯರೊಂದಿಗೆ ಸ್ಪರ್ಧಿಸುತ್ತಿದ್ದರು. ಮತ್ತು ಅನ್ಯೋನ್ಯರ ಹಿತಾಸಕ್ತಿಯುಳ್ಳವರಾಗಿದ್ದರು. ಕರ್ಣ-ದುಃಶಾಸನರಿಂದ ಮತ್ತು ಮಹಾರಥ ರಾಜರಿಂದ ಪರಿವೃತನಾಗಿ, ದೇವರಾಜನಂತಿದ್ದ ಶ್ರೀಮಾನ್ ಶ್ವೇತಚತ್ರದಡಿಯಲ್ಲಿ, ಚಾಮರ ಬೀಸಣಿಗೆಗಳನ್ನು ಬೀಸುತ್ತಿರಲು, ಉದಯಿಸುತ್ತಿರುವ ಭಾಸ್ಕರನಂತೆ ಆ ಸೈನ್ಯದ ಪ್ರಮುಖ ನಾಯಕನಾಗಿ ದ್ರೋಣನು ವ್ಯವಸ್ಥಿತನಾಗಿದ್ದನು. ಅಲ್ಲಿ ಮೇರು ಪರ್ವತದಂತೆ ಶ್ರೀಮಾನ್ ಸಿಂಧುರಾಜನು ನಿಂತಿದ್ದನು. ಸಿಂಧುರಾಜನ ಪಕ್ಕದಲ್ಲಿ ಅಶ್ವತ್ಥಾಮನೇ ಮೊದಲಾದವರು ನಿಂತಿದ್ದರು. ದೇವ ಸನ್ನಿಭರಾದ ಧೃತರಾಷ್ಟ್ರನ ಮೂವತ್ತು ಮಕ್ಕಳೂ, ಜೂಜುಗಾರ ಗಾಂಧಾರರಾಜನೂ, ಮಹಾರಥ

ಶಲ್ಯ-ಭೂರಿಶ್ರವರೂ ಸಿಂಧುರಾಜನ ಪಕ್ಕದಲ್ಲಿ ವಿರಾಜಮಾನರಾಗಿದ್ದರು.

## ಅಭಿಮನ್ಯು ಪ್ರತಿಜ್ಞೆ

ಎದುರಿಸಲು ಅಸಾಧ್ಯವಾಗಿದ್ದ ಭಾರದ್ವಾಜನಿಂದ ರಕ್ಷಿತಗೊಂಡಿದ್ದ ಆ ಸೇನೆಯನ್ನು ಭೀಮಸೇನನನ್ನು ಮುಂದಿಟ್ಟುಕೊಂಡು ಪಾರ್ಥರು ಆಕ್ರಮಣಿಸಿದರು. ಕುಂತೀಭೋಜ, ದ್ರುಪದ, ಆರ್ಜುನಿ, ಕ್ಷತ್ರಧರ್ಮ, ಬೃಹತ್ಕ್ಷತ್ರ, ಧೃಷ್ಟಕೇತು, ಮಾದ್ರೀಪುತ್ರರಿಬ್ಬರು, ಘಟೋತ್ಕಚ, ಯುಧಾಮನ್ಯು, ಶಿಖಂಡೀ, ಉತ್ತಮೌಜ, ವಿರಾಟ, ದ್ರೌಪದೇಯರು, ಶೈಶುಪಾಲಿ, ಕೇಕಯರು, ಸಹಸ್ರಾರು ಸೃಂಜಯರು ಮತ್ತು ಇತರ ಅನ್ಯರು ಗಣಗಳೊಂದಿಗೆ ಕೃತಾಸ್ತ್ರರಾಗಿ ಯುದ್ಧದುರ್ಮದರಾಗಿ, ಯುದ್ಧಮಾಡಲು ಉತ್ಸುಕರಾಗಿ ಒಮ್ಮೆಲೇ ಭಾರದ್ವಾಜನನ್ನು ಆಕ್ರಮಣಿಸಿದರು. ಒಂದಾಗಿ ಬಂದ ಅವರೆಲ್ಲರನ್ನೂ ಭಾರದ್ವಾಜನು ಸಂಭ್ರಾಂತನಾಗದೇ ಮಹಾ ಶರಜಾಲಗಳಿಂದ ತಡೆದು ನಿಲ್ಲಿಸಿದನು. ದುರ್ಭೇದ್ಯವಾದ ಪರ್ವತದ ಸಮೀಪಕ್ಕೆ ಹೋದ ದೊಡ್ಡ ಜಲಪ್ರವಾಹವು ತಟಸ್ಥವಾಗಿ ನಿಲ್ಲುವಂತೆ, ಸಮುದ್ರದ ಅಲೆಗಳು ತಟವನ್ನು ದಾಟಿ ಮುಂದೆ ಬಾರದಂತೆ ದ್ರೋಣನನ್ನು ಅತಿಕ್ರಮಿಸಿ ಹೋಗಲು ಅವರಿಗೆ ಸಾಧ್ಯವಾಗಲಿಲ್ಲ. ದ್ರೋಣನ ಚಾಪದಿಂದ

ಪ್ರಯೋಗಿಸಲ್ಪಟ್ಟ ಶರಗಳಿಂದ ಪೀಡಿತರಾದ ಪಾಂಡವರು ಭಾರದ್ವಾಜನ ಮುಂದೆ ನಿಲ್ಲಲೂ ಶಕ್ಯರಾಗದಂತಾದರು. ಸೃಂಜಯರೊಂದಿಗೆ ಪಾಂಚಾಲರು ಮುಂದೆ ಬಾರದಂತೆ ತಡೆಗಟ್ಟಿದ ದ್ರೋಣನ ಆ ಭುಜಬಲವು ಅದ್ಭುತವಾಗಿತ್ತು. ಕ್ರುದ್ಧನಾಗಿ ಮುಂದುವರೆದು ಬರುತ್ತಿದ್ದ ದ್ರೋಣನನ್ನು ನೋಡಿ ಯುಧಿಷ್ಠಿರನು ದ್ರೋಣನನ್ನು ಎದುರಿಸಿ ನಿಲ್ಲಿಸುವುದರ ಕುರಿತು ಬಹಳವಾಗಿ ಚಿಂತಿಸಿದನು. ಬೇರೆ ಯಾರಿಗೂ ಅದು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟು ಯುಧಿಷ್ಠಿರನು ದ್ರೋಣನನ್ನು ಎದುರಿಸುವ ಅತಿ ಭಾರವಾದ ಕಾರ್ಯವನ್ನು ಸೌಭದ್ರಿಗೆ ಒಪ್ಪಿಸಿದನು. ವಾಸುದೇವನಿಗೆ ಮತ್ತು ಫಲ್ಗುನನಿಗೆ ಸಮಾನನಾದ ಪರವೀರಘ್ನ ಅಭಿಮನ್ಯುವಿಗೆ ಈ ಮಾತನ್ನಾಡಿದನು:

> “ಮಗೂ! ಅರ್ಜುನನು ನಮ್ಮನ್ನು ಈ ವಿಷಯದಲ್ಲಿ ನಿಂದಿಸಬಾರದಂತೆ ಮಾಡು. ನಮ್ಮಲ್ಲಿರುವ ಯಾರಿಗೂ ಚಕ್ರವ್ಯೂಹವನ್ನು ಭೇದಿಸುವುದು ತಿಳಿದಿಲ್ಲ. ನೀನು ಅಥವಾ ಅರ್ಜುನ ಅಥವಾ ಕೃಷ್ಣ ಅಥವಾ ಪ್ರದ್ಯುಮ್ನರು ಮಾತ್ರ ಚಕ್ರವ್ಯೂಹವನ್ನು ಭೇದಿಸಬಲ್ಲಿರಿ. ಐದನೆಯ ಬೇರೆ ಯಾರಿಗೂ ಇದು ತಿಳಿದಿಲ್ಲ. ನಿನ್ನ ತಂದೆಯರು, ಸೋದರ ಮಾವಂದಿರು

ಮತ್ತು ಎಲ್ಲ ಸೇನೆಗಳೂ ಬೇಡುವ ಈ ವರವನ್ನು ದಯಪಾಲಿಸಬೇಕು. ಯುದ್ಧದಿಂದ ಹಿಂದಿರುಗಿದ ಅರ್ಜುನನು ನಮ್ಮನ್ನು ನಿಂದಿಸಬಾರದು. ಅದಕ್ಕಾಗಿ ನೀನು ಬೇಗನೆ ಅಸ್ತ್ರಗಳನ್ನು ತೆಗೆದುಕೊಂಡು ದ್ರೋಣನ ಸೇನೆಯನ್ನು ನಾಶಗೊಳಿಸು.”

ಅಭಿಮನ್ಯುವು ಹೇಳಿದನು:

“ಪಿತೃಗಳ ಜಯವನ್ನು ಬಯಸಿ ನಾನು ದ್ರೋಣನ ದೃಢ, ಅವ್ಯಗ್ರ ಸೇನಾಪ್ರವರವನ್ನು ಯುದ್ಧದಲ್ಲಿ ನುಗ್ಗಿ ಭೇದಿಸುತ್ತೇನೆ. ನನ್ನ ತಂದೆಯು ನನಗೆ ಸೇನೆಯನ್ನು ಭೇದಿಸುವುದರ ಉಪಾಯವನ್ನು ಮಾತ್ರ ಉಪದೇಶಿಸಿದ್ದಾನೆ. ಒಂದು ವೇಳೆ ಆಪತ್ತಿನಲ್ಲಿ ಸಿಲುಕಿದರೆ ಹೊರಬರಲು ನನಗೆ ಸರ್ವಥಾ ಸಾಧ್ಯವಾಗಲಾರದು.”

ಯುಧಿಷ್ಠಿರನು ಹೇಳಿದನು:

“ಯೋಧಶ್ರೇಷ್ಠ! ಮಗೂ! ಸೇನೆಯನ್ನು ಭೇದಿಸಿ ನಮಗೆ ದ್ವಾರವನ್ನು ಮಾಡಿಕೊಡು. ನೀನು ಯಾವ ಮಾರ್ಗದಲ್ಲಿ ಒಳಹೋಗುತ್ತೀಯೋ ಅದೇ ಮಾರ್ಗದಲ್ಲಿ ನಾವು ನಿನ್ನನ್ನು

ಅನುಸರಿಸಿ ಬರುತ್ತೇವೆ. ಯುದ್ಧದಲ್ಲಿ ನಿನ್ನನ್ನು ಅರ್ಜುನನ ಸಮನೆಂದೇ ಮನ್ನಿಸುತ್ತೇವೆ. ಎಲ್ಲಕಡೆಗಳಲ್ಲಿ ಧೃಷ್ಟಿಯನ್ನು ಹರಿಸುತ್ತಾ ನಿನಗೆ ಸ್ವಲ್ಪವೂ ಅಪಾಯವಾಗದಂತೆ ನಿನ್ನನ್ನು ರಕ್ಷಿಸುತ್ತಾ ಹಿಂಬಾಲಿಸಿ ಬರುತ್ತೇವೆ.”

ಭೀಮನು ಹೇಳಿದನುಃ

“ನಾನು ನಿನ್ನನ್ನು ಹಿಂಬಾಲಿಸಿ ಬರುತ್ತೇನೆ. ಅದೇರೀತಿ ಧೃಷ್ಟದ್ಯುಮ್ನ, ಸಾತ್ಯಕಿ, ಪಾಂಚಾಲರು, ಕೇಕಯರು, ಮತ್ಸ್ಯರು ಮತ್ತು ಸರ್ವ ಪ್ರಭದ್ರಕರು ಬರುತ್ತಾರೆ. ವ್ಯೂಹವನ್ನು ಭೇದಿಸುವುದನ್ನು ತಿಳಿದುಕೊಂಡಿರುವ ನೀನು ಅಲ್ಲಲ್ಲಿ ಸ್ವಲ್ಪ ಸ್ವಲ್ಪ ಭೇದಿಸು. ನಾವು ಪುನಃ ಪುನಃ ಶ್ರೇಷ್ಠ ಶ್ರೇಷ್ಠರಾದವರನ್ನು ಸಂಹರಿಸಿ ವ್ಯೂಹವನ್ನು ಧ್ವಂಸಗೊಳಿಸುತ್ತೇವೆ.”

ಅಭಿಮನ್ಯುವು ಹೇಳಿದನುಃ

“ಈ ದುರಾಸದ ದ್ರೋಣನ ಸೇನೆಯನ್ನು ಸಂಕ್ರುದ್ಧ ಪತಂಗವು ಪ್ರಜ್ವಲಿಸುತ್ತಿರುವ ಜಾತವೇದಸನನ್ನು ಹೊಗುವಂತೆ ಪ್ರವೇಶಿಸುತ್ತೇನೆ. ಇಂದು ನಾನು ಎರಡೂ ವಂಶಗಳಿಗೆ

ಹಿತವಾದುದನ್ನು ಮಾಡುತ್ತೇನೆ. ಸೋದರ ಮಾವನಿಗೂ, ನನ್ನ ತಂದೆಗೂ ಇದರಿಂದ ಸಂತೋಷವಾಗುತ್ತದೆ. ಇನ್ನೂ ಬಾಲಕನಾಗಿರುವ ನನ್ನಿಂದ ಸಂಗ್ರಾಮದಲ್ಲಿ ಶತ್ರುಸೇನೆಗಳು ನಾಶವಾಗುವುದನ್ನು ಇಂದು ಇರುವವೆಲ್ಲವೂ ನೋಡಲಿವೆ."

ಯುಧಿಷ್ಠಿರನು ಹೇಳಿದನು:

"ಸೌಭದ್ರ! ಹೀಗೆ ಮಾತನಾಡುತ್ತಿರುವ ನಿನ್ನ ಬಲವು ವರ್ಧಿಸಲಿ. ದುರ್ಭೇದ್ಯ ಪುರುಷವ್ಯಾಘ್ರರೂ, ಮಹೇಷ್ವಾಸರೂ, ಪ್ರಹಾರಿಗಳೂ, ಮತ್ತು ಸಾಧ್ಯ-ರುದ್ರ-ಮರುತ್-ಕಲ್ಪ-ವಸು-ಅಗ್ನಿ-ಆದಿತ್ಯರ ವಿಕ್ರಮಗಳನ್ನು ಹೊಂದಿರುವವರಿಂದ ರಕ್ಷಿತವಾದ ದ್ರೋಣನ ಸೇನೆಯನ್ನು ಭೇದಿಸಲು ಉತ್ಸುಕನಾಗಿರುವೆಯಲ್ಲವೇ?"

ಅವನ ಆ ಮಾತುಗಳನ್ನು ಕೇಳಿ ಅಭಿಮನ್ಯುವು ತನ್ನ ಸಾರಥಿಯನ್ನು ಪ್ರಚೋದಿಸಿದನು:

"ಸುಮಿತ್ರ! ಕ್ಷಿಪ್ರವಾಗಿ ಕುದುರೆಗಳನ್ನು ದ್ರೋಣನ ಸೇನೆಯ ಕಡೆ ಓಡಿಸು!"

## ಅಭಿಮನ್ಯು ಪರಾಕ್ರಮ

ಧರ್ಮರಾಜನ ಮಾತನ್ನು ಕೇಳಿ ಧೀಮತ ಸೌಭದ್ರನಾದರೋ ರಥವನ್ನು ದ್ರೋಣನ ಸೇನೆಯ ಕಡೆ ನಡೆಸಿದನು. ಹೋಗು ಹೋಗೆಂದು ಅವನು ಪ್ರಚೋದಿಸಲು, ಸಾರಥಿಯು ಅಭಿಮನ್ಯುವಿಗೆ ಈ ಮಾತನ್ನಾಡಿದನು:

> “ಆಯುಷ್ಮಾನ್! ಪಾಂಡವರು ನಿನ್ನ ಮೇಲೆ ಅತಿಯಾದ ಭಾರವನ್ನು ಹೊರಿಸಿದ್ದಾರೆ. ಕ್ಷಣಕಾಲ ನೀನು ಮಾಡಬೇಕಾಗಿರುವ ಮಹಾ ಕಾರ್ಯದ ಕುರಿತು ಯೋಚಿಸಿ ನಂತರ ನೀನು ಯುದ್ಧ ಮಾಡಬೇಕಾಗುತ್ತದೆ. ಆಚಾರ್ಯ ದ್ರೋಣನು ವಿಶೇಷ ಪರಿಶ್ರಮದಿಂದ ಪರಮಾಸ್ತ್ರಗಳಲ್ಲಿ ವಿದ್ವಾಂಸನಾಗಿದ್ದಾನೆ. ನೀನಾದರೋ ಅತ್ಯಂತ ಸುಖದಲ್ಲಿ ಬೆಳೆದಿದ್ದೀಯೆ ಮತ್ತು ಯುದ್ಧ ವಿಶಾರದನೂ ಆಗಿದ್ದೀಯೆ.”

ಆಗ ಅಭಿಮನ್ಯುವು ನಸುನಕ್ಕು ಸಾರಥಿಗೆ ಈ ಮಾತನ್ನಾಡಿದನು:

> “ಸಾರಥೇ! ಏನು ಮಾತನಾಡುತ್ತಿರುವೆ? ಈ ದ್ರೋಣನಾಗಲೀ ಅಥವಾ ಕ್ಷತ್ರಿಯರಾಗಲೀ ನನಗೆ ಸರಿಸಾಟಿಯಲ್ಲ! ಐರಾವತವನ್ನೇರಿ ಅಮರಗಣಗಳೊಂದಿಗೆ ಶಕ್ರನು ಬಂದರೂ ನಾನು ರಣಮುಖದಲ್ಲಿ ಹೋರಾಡಿ ಕ್ಷತ್ರಿಯರನ್ನು ವಿಸ್ಮಯಗೊಳಿಸುತ್ತೇನೆ. ಈ ಸೈನ್ಯವೂ ಕೂಡ ನನ್ನ ಹದಿನಾರನೆಯ ಒಂದು ಭಾಗದಷ್ಟೂ ಇಲ್ಲ. ನನ್ನ ಮಾವ

> ವಿಶ್ವಜಿತು ವಿಷ್ಣುವೂ, ತಂದೆ ಅರ್ಜುನನೂ ಕೂಡ ರಣದಲ್ಲಿ
> ಬಂದರೆ ಭಯವೆನ್ನುವುದು ನನ್ನನ್ನು ಸುಳಿಯುವುದೂ ಇಲ್ಲ."

ಸಾರಥಿಯ ಮಾತುಗಳನ್ನು ನಿರ್ಲಕ್ಷಿಸಿ ಅಭಿಮನ್ಯುವು "ಶೀಘ್ರವಾಗಿ ನೀನು ದ್ರೋಣನ ಸೇನೆಯ ಕಡೆ ನಡೆ!" ಎಂದು ಹೇಳಿದನು. ಆಗ ಅಷ್ಟೊಂದು ಸಂತೋಷಗೊಳ್ಳದ ಸೂತನು ಬಂಗಾರದ ಆಭರಣಗಳಿಂದ ಅಲಂಕೃತಗೊಂಡ ಮೂರು ವರ್ಷದ ಕುದುರೆಗಳನ್ನು ಓಡಿಸಿದನು. ಸುಮಿತ್ರನಿಂದ ದ್ರೋಣನ ಕಡೆ ಓಡಿಸಲ್ಪಟ್ಟ ಆ ಮಹಾವೇಗಪರಾಕ್ರಮ ಕುದುರೆಗಳು ದ್ರೋಣನ ಬಳಿ ಓಡಿ ಬಂದವು. ಹೀಗೆ ಬರುತ್ತಿದ್ದ ಅವನನ್ನು ನೋಡಿ ಕೌರವರ ಕಡೆಯವರೆಲ್ಲರೂ ದ್ರೋಣನ ಮುಂದೆ ಬಂದರು. ಪಾಂಡವರು ಅಭಿಮನ್ಯುವನ್ನು ಹಿಂಬಾಲಿಸಿ ಹೋದರು. ಕರ್ಣಿಕಾರ ಗಿಡದ ಚಿಹ್ನೆಯ ಉನ್ನತ ಶ್ರೇಷ್ಠ ಧ್ವಜದ ಆರ್ಜುನಿಯು ಸುವರ್ಣಮಯ ಕವಚವನ್ನು ಧರಿಸಿ ಆನೆಗಳ ಹಿಂಡನ್ನು ಆಕ್ರಮಣಿಸುವ ಸಿಂಹದ ಮರಿಯಂತೆ ದ್ರೋಣಪ್ರಮುಖ ಮಹಾರಥರನ್ನು ಆಕ್ರಮಣಿಸಿದನು. ಇಪ್ಪತ್ತೇ ಅಡಿ ದೂರದಲ್ಲಿದ್ದ ಅವರು ಪ್ರಹರಿಸಲು ತೊಡಗಿದರು. ಆಗ ಅಲ್ಲಿ ಒಂದು ಕ್ಷಣ ಗಂಗೆಯ ಸಂಗಮ ಸ್ಥಾನದಲ್ಲುಂಟಾಗುವ ಸುಳಿಯಂತೆ ಕೋಲಾಹಲವುಂಟಾಯಿತು. ಇತರೇತರರರನ್ನು ಸಂಹರಿಸುತ್ತಾ ಯುದ್ಧ

ಮಾಡುತ್ತಿದ್ದ ಆ ಶೂರರ ತುಮುಲ ಯುದ್ಧವು ಅತಿ ದಾರುಣ ರೂಪವನ್ನು ತಾಳಿತು. ಆ ಅತಿಭಯಂಕರ ಸಂಗ್ರಾಮವು ನಡೆಯುತ್ತಿರಲು ಆರ್ಜುನಿಯು ದ್ರೋಣನು ನೋಡುತ್ತಿದ್ದಂತೆಯೇ ವ್ಯೂಹವನ್ನು ಭೇದಿಸಿ ಒಳನುಗ್ಗಿದನು. ಶತ್ರುಮಧ್ಯವನ್ನು ಪ್ರವೇಶಿಸಿ ಸಂಹರಿಸುತ್ತಿದ್ದ ಆ ಮಹಾಬಲನನ್ನು ಆನೆ-ಕುದುರೆ-ರಥ-ಪದಾತಿ ಗಣಗಳು ಆಯುಧಗಳೊಂದಿಗೆ ಸುತ್ತುವರೆದವು. ನಾನಾ ವಿಧದ ರಣವಾದ್ಯಗಳನ್ನು ಬಾರಿಸುತ್ತಾ, ಕೋಪದಿಂದ ಗುರುಗುಟ್ಟುತ್ತಾ, ಗಟ್ಟಿಯಾಗಿ ಗರ್ಜಿಸುತ್ತಾ, ಹುಂಕಾರ-ಸಿಂಹನಾದಗಳೊಂದಿಗೆ “ನಿಲ್ಲು! ನಿಲ್ಲು!” ಎಂದು ಕೂಗುತ್ತಾ, ಘೋರ ಹಾಲಾಹಲ ಶಬ್ಧದೊಂದಿಗೆ “ಹೋಗಬೇಡ! ನಿಲ್ಲು! ನಾನು ಇಲ್ಲಿಯೇ ಇದ್ದೇನೆ!” ಎಂದು ಬಾರಿ ಬಾರಿ ಕೂಗತ್ತಿದ್ದರು. ಛೀಂಕಾರಗಳಿಂದ, ಗಂಟೆಯ ಶಬ್ಧಗಳಿಂದ, ಗಹ-ಗಹಿಸಿ ನಗುತ್ತಾ, ರಥಚಕ್ರಗಳ ಶಬ್ಧಗಳಿಂದ ಭೂಮಿಯನ್ನೇ ಮೊಳಗಿಸುತ್ತಾ ಅವರು ಆರ್ಜುನಿಯನ್ನು ಆಕ್ರಮಣಿಸಿದರು. ಮೇಲೆ ಬೀಳುತ್ತಿದ್ದ ಅವರನ್ನು ವೀರ, ಶೀಘ್ರಯೋಧಿ, ದೃಢ, ಕ್ಷಿಪ್ರಾಸ್ತ್ರ, ಮರ್ಮಜ್ಞ ಅಭಿಮನ್ಯುವು ಮರ್ಮಭೇದಿಗಳಿಂದ ಸಂಹರಿಸತೊಡಗಿದನು. ಹಾಗೆ ನಾನಾ ಚಿಹ್ನೆಗಳ ನಿಶಿತ ಶರಗಳಿಂದ ಸಂಹರಿಸಲ್ಪಡುತ್ತಿದ್ದ ಅವರು ಬೆಂಕಿಯನ್ನು ಮುತ್ತಲು ಹೋದ ದೀಪದ ಹುಳುಗಳಂತೆ ವೇಗವಾಗಿ ಸತ್ತು ಬೀಳುತ್ತಿದ್ದರು. ಯಾಗಸಮಯದಲ್ಲಿ

ನೆಲದಲ್ಲಿ ದರ್ಭೆಗಳನ್ನು ಹರಡುವಂತೆ ಅವನು ಅವರ ಮೃತ ಶರೀರಗಳನ್ನು ಭೂಮಿಯ ಮೇಲೆ ಬೇಗನೆ ಹರಡಿಬಿಟ್ಟನು.

ಗೋಧಾಂಗುಲಿಗಳನ್ನು ಕಟ್ಟಿಕೊಂಡಿದ್ದ, ಧನುಸ್ಸು-ಬಾಣಗಳನ್ನು ಹಿಡಿದುಕೊಂಡಿದ್ದ, ಖಡ್ಗ-ಗುರಾಣಿ-ಅಂಕುಶ-ಲಗಾಮುಗಳನ್ನು ಹಿಡಿದಿದ್ದ, ತೋಮರ ಪರಶುಗಳನ್ನು ಹಿಡಿದಿದ್ದ, ಗದೆ-ಲೋಹದ ಚಂಡು-ಪ್ರಾಸಗಳನ್ನು ಹಿಡಿದಿದ್ದ, ಋಷ್ಟಿ-ತೋಮರ-ಪಟ್ಟಿಷಗಳನ್ನು ಹಿಡಿದಿದ್ದ, ಭಿಂಡಿಪಾಲ-ಪರಿಘಗಳನ್ನು ಹಿಡಿದಿದ್ದ, ಶಕ್ತಿ-ಕಂಪನಗಳನ್ನು ಹಿಡಿದಿದ್ದ, ಪ್ರತೋದ-ಮಹಾಶಂಖ-ಕುಂತ-ಕಚಗ್ರಗಳನ್ನು ಹಿಡಿದಿದ್ದ, ಮುದ್ಗರ-ಕ್ಷೇಪಣಿಗಳನ್ನೂ ಪಾಶ-ಪರಿಘ-ಉಪಲಗಳನ್ನು ಹಿಡಿದಿದ್ದ, ಕೇಯೂರ-ಅಂಗದಗಳಿಂದ ಅಲಂಕೃತಗೊಂಡಿದ್ದ, ಗಂಧಾನುಲೇಪನಗಳಿಂದ ಮನೋಹರವಾಗಿದ್ದ ಸಹಸ್ರಾರು ಬಾಹುಗಳನ್ನು ಆರ್ಜುನಿಯು ಕತ್ತರಿಸಿದನು. ಗರುಡನಿಂದ ಕತ್ತರಿಸಲ್ಪಟ್ಟ ಸರ್ಪಗಳಂತೆ ಅವರ ಶಿರಸ್ಸುಗಳಿಂದ ಭೂಮಿಯು ತುಂಬಿಹೋಗಿತ್ತು. ಫಾಲ್ಗುಣಿಯು ಚೆನ್ನಾದ ಮೂಗು-ಮುಂಗುರುಳು-ಕುಂಡಲಗಳಿಂದ ಸುಂದರವಾಗಿದ್ದ, ಅತಿ ಕ್ರೋಧದಿಂದ ತುಟಿಕಚ್ಚಿ ರಕ್ತವನ್ನು ಸುರಿಸುತ್ತಿದ್ದ, ಸುಂದರ ಮುಕುಟ-ಮುಂಡಾಸು-ಮಣಿ-ರತ್ನಗಳಿಂದ ವಿರಾಜಿಸುತ್ತಿದ್ದ, ದಂಟಿಲ್ಲದ ಕಮಲಗಳಂತೆ, ದಿವಾಕರ-ಶಶಿಗಳ ಪ್ರಭೆಯನ್ನು ಹೊಂದಿದ್ದ,

ಆ ಕಾಲದಲ್ಲಿ ಹಿತವಾದ ಪ್ರಿಯವಾದ ಮಾತುಗಳನ್ನಾಡುತ್ತಿದ್ದ, ಪುಣ್ಯಗಂಧಗಳಿಂದ ಲೇಪಿತಗೊಂಡಿದ್ದ ಹಲವಾರು ಶತ್ರು ಶಿರಗಳನ್ನು ಭೂಮಿಯ ಮೇಲೆ ತೂರಾಡಿದನು. ಅವನು ಶರಗಳಿಂದ ಗಂಧರ್ವನಗರಾಕಾರದ, ವಿಧಿವತ್ತಾಗಿ ರಚಿಸಿದ್ದ ರಥಗಳ ಈಷಾದಂಡ-ತ್ರಿವೇಣುಗಳನ್ನು ಮುರಿದುಹಾಕಿ, ಕೂಬರಗಳನ್ನು ತುಂಡುಮಾಡಿ, ಚಕ್ರಗಳ ಅಂಚುಗಳನ್ನೂ ಅರೆಕಾಲುಗಳನ್ನೂ ಮುರಿದು ಹಾಕಿ, ಉಪಕರಣಗಳನ್ನು ತುಂಡುಮಾಡಿ ಅಲ್ಲಲ್ಲಿ ಚದುರಿ, ಆಸನಗಳೇ ಇಲ್ಲದಂತೆ ಮಾಡಿ ಸಹಸ್ರಾರು ಯೋಧರನ್ನು ಕೊಂದು ಎಲ್ಲ ದಿಕ್ಕುಗಳಲ್ಲಿಯೂ ಕಾಣಿಸಿಕೊಳ್ಳುತ್ತಿದ್ದನು. ಪುನಃ ಅವನು ನಿಶಿತ ಧಾರಾಗ್ರ ಬಾಣಗಳಿಂದ ಆನೆಗಳನ್ನೂ, ಗಜಾರೋಹಿಗಳನ್ನೂ, ವೈಜಯಂತಿ-ಅಂಕುಶ-ಧ್ವಜಗಳನ್ನೂ, ಬತ್ತಳಿಕೆ-ಕವಚಗಳನ್ನೂ, ಕಕ್ಷ್ಯಗಳನ್ನೂ, ಹಗ್ಗಗಳನ್ನೂ, ಕಂಠಾಭರಣಗಳನ್ನೂ, ಕಂಬಳಿಗಳನ್ನೂ, ಘಂಟೆಗಳನ್ನೂ, ದಂತಗಳ ಅಗ್ರಭಾಗಗಳನ್ನೂ, ಬೆನ್ನುಗಳ ಮೇಲಿದ್ದ ಚತ್ರಗಳನ್ನೂ ಕತ್ತರಿಸಿದನು. ಬಾಲ-ಕಿವಿ-ಕಣ್ಣುಗಳನ್ನು ನಿಮಿರಿಸಿಕೊಂಡು ಹೆಚ್ಚು ಭಾರವನ್ನು ಹೊತ್ತು ವೇಗವಾಗಿ ಓಡಬಲ್ಲ ವನಾಯುಜ-ಪಾರ್ವತೀಯ-ಕಾಂಬೋಜ-ಆರಟ್ಟ-ಬಾಹ್ಲೀಕ ಕುದುರೆಗಳನ್ನೂ, ಅವುಗಳ ಮೇಲೆ ಶಕ್ತಿ-ಋಷ್ಟಿ-ಪ್ರಾಸಗಳನ್ನು ಹಿಡಿದು ಕುಳಿತಿದ್ದ ಸುಶಿಕ್ಷಿತ ಯೋಧರನ್ನು ಕೆಳಗುರುಳಿಸಿದನು. ಆ ಕುದುರೆಗಳ ಕುತ್ತಿಗೆಗಳ ಮೇಲೆ

ಚಾಮರಗಳಂತಿದ್ದ ಕೂದಲುಗಳು ಅಸ್ತವ್ಯಸ್ತವಾಗಿದ್ದವು. ಶರೀರದ ಮೇಲೆಲ್ಲ ಗಾಯಗಳಾಗಿದ್ದವು. ನಾಲಿಗೆಗಳೂ ಕಣ್ಣುಗಳೂ ಹೊರಚಾಚಿಕೊಂಡಿದ್ದವು. ಕರುಳುಗಳೂ ಪಿತ್ತಕೋಶಗಳೂ ಹೊರಬಿದ್ದಿದ್ದವು. ಮಲ-ಮೂತ್ರ-ರಕ್ತದಿಂದ ತೋಯ್ದು ಹೋಗಿದ್ದವು. ಹೀಗೆ ಸತ್ತು ಬಿದ್ದಿದ್ದ ಕುದುರೆಗಳು ಮತ್ತು ಸವಾರರು ಮಾಂಸಗಳನ್ನು ತಿನ್ನುವ ಪ್ರಾಣಿಗಳಿಗೆ ಆನಂದವನ್ನುಂಟು ಮಾಡಿದವು.

ಈ ರೀತಿ ಕೌರವರ ಶ್ರೇಷ್ಠ ಕುದುರೆಗಳನ್ನು ಸಂಹರಿಸಿ ಅವನು ವಿರಾಜಿಸಿದನು. ಅಚಿಂತ್ಯ ವಿಷ್ಣುವಂತೆ ಒಬ್ಬನೇ ಆ ದುಷ್ಕರ ಕರ್ಮವನ್ನು ಎಸಗಲು ಮೂರು ಅಂಗಗಳ ಆ ಕೌರವ ಮಹಾಸೇನೆಯು ಅವನಿಂದ ನಾಶಗೊಂಡಿತು. ಹೀಗೆ ಏಕಾಂಗಿಯಾಗಿ ನಿಶಿತ ಶರಗಳಿಂದ ಅಸುರೀ ಸೇನೆಯನ್ನು ಸ್ಕಂದನು ಹೇಗೋ ಹಾಗೆ ಸೌಭದ್ರಿಯು ಆ ಸೇನೆಯನ್ನು ಸಂಪೂರ್ಣ ನಾಶಮಾಡಿದುದನ್ನು ನೋಡಿ ಧೃತರಾಷ್ಟ್ರನ ಮಕ್ಕಳು ಬೆವತು, ರೋಮಾಂಚನಗೊಂಡು, ಬಾಡಿದ ಮುಖಗಳಲ್ಲಿ, ಕಣ್ಣುಗಳನ್ನು ತಿರುಗಿಸುತ್ತಾ ಹತ್ತೂ ದಿಕ್ಕುಗಳನ್ನು ವೀಕ್ಷಿಸತೊಡಗಿದರು. ಶತ್ರುವನ್ನು ಜಯಿಸಲು ನಿರುತ್ಸಾಹಿಗಳಾಗಿ, ಪಲಾಯನಮಾಡುವುದರಲ್ಲಿ ಉತ್ಸಾಹಿಗಳಾಗಿ, ಜೀವಿತವನ್ನು ಬಯಸಿ, ಅನ್ಯೋನ್ಯರ ಹೆಸರು-ಗೋತ್ರಗಳನ್ನು ಕೂಗಿಕೊಳ್ಳುತ್ತಾ, ಹತರಾಗಿದ್ದ ಮಕ್ಕಳು-ತಂದೆಯರು-

ಗೆಳೆಯರು-ಬಂಧು-ಬಾಂಧವರನ್ನು, ಕುದುರೆ-ಆನೆಗಳನ್ನು ಅಲ್ಲಿಯೇ ಬಿಟ್ಟು ತ್ವರೆಮಾಡಿ ಓಡಿದರು.

ಅಮಿತೌಜಸ ಸೌಭದ್ರನಿಂದ ತನ್ನ ಸೇನೆಯು ಭಗ್ನವಾದುದನ್ನು ನೋಡಿ ಕ್ರುದ್ಧನಾದ ದುರ್ಯೋಧನನು ಸ್ವಯಂ ತಾನೇ ಸೌಭದ್ರನ ಮೇಲೆ ಆಕ್ರಮಣಿಸಿದನು. ಸೌಭದ್ರನ್ನು ಎದುರಿಸಲು ಮುಂದಾಗುತ್ತಿರುವ ರಾಜನನ್ನು ನೋಡಿ ದ್ರೋಣನು ನರಾಧಿಪನನ್ನು ಸರ್ವಥಾ ರಕ್ಷಿಸಬೇಕೆಂದು ಯೋಧರಿಗೆ ಆದೇಶವನ್ನಿತ್ತನು: “ವೀರ್ಯವಾನ್ ಅಭಿಮನ್ಯುವು ನಾವು ನೋಡುತ್ತಿರುವಂತೆಯೇ ಮೊದಲು ಗುರಿಯಿಟ್ಟು ಅವನನ್ನು ಸಂಹರಿಸಿಬಿಡುತ್ತಾನೆ. ಆದುದರಿಂದ ಅವನ ಕಡೆ ಓಡಿ ಹೋಗಿ. ಹೆದರಬೇಡಿ. ಬೇಗನೇ ಕೌರವನನ್ನು ರಕ್ಷಿಸಿರಿ!”

ಆಗ ಕೃತಜ್ಞರಾದ ಬಲಶಾಲಿ ಸುಹೃದ ಜಯಶೀಲ ಯೋಧರು ಭಯದಿಂದ ಬಿಡುಗಡೆಗೊಳಿಸಲು ವೀರ ದುರ್ಯೋಧನನನ್ನು ಸುತ್ತುವರೆದರು. ದ್ರೋಣ, ದ್ರೌಣಿ, ಕೃಪ, ಕರ್ಣ, ಕೃತವರ್ಮ, ಸೌಬಲ, ಬೃಹದ್ಬಲ, ಮದ್ರರಾಜ, ಭೂರಿಶ್ರವ, ಶಲ, ಪೌರವ, ವೃಷಸೇನರು ನಿಶಿತ ಶರಗಳನ್ನು ಪ್ರಯೋಗಿಸುತ್ತಾ ಸೌಭದ್ರನನ್ನು ಮಹಾ ಶರವರ್ಷದಿಂದ ಮುಚ್ಚಿದರು. ಹಾಗೆ ಅವನನ್ನು ಸಮ್ಮೋಹಗೊಳಿಸಿ ದುರ್ಯೋಧನನನ್ನು ವಿಮೋಚನಗೊಳಿಸಿದರು. ಹೀಗೆ ಕೈಗೆ

ಸಿಕ್ಕಿದುದನ್ನು ಕೆಳಗೆ ಬೀಳಿಸಿದುದನ್ನು ಅರ್ಜುನನ ಮಗನು ಸಹಿಸಿಕೊಳ್ಳಲಿಲ್ಲ. ಸೌಭದ್ರನು ಮಹಾ ಶರಜಾಲದಿಂದ ಆ ಮಹಾರಥರನ್ನು, ಅಶ್ವ-ಸೂತರೊಂದಿಗೆ ವಿಮುಖರನ್ನಾಗಿ ಮಾಡಿ ಸಿಂಹನಾದಗೈದನು. ಮಾಂಸವನ್ನು ಬಯಸಿದ ಸಿಂಹದಂತಿದ್ದ ಅವನ ಆ ಗರ್ಜನೆಯನ್ನು ಕೇಳಿ ದ್ರೋಣಮುಖ ರಥರು ಸಂರಬ್ಧರಾಗಿ ಸಹಿಸಿಕೊಳ್ಳಲಿಲ್ಲ. ರಥಗಳ ಸಮೂಹದಿಂದ ಅವನನ್ನು ಇಕ್ಕಟ್ಟಾದ ಜಾಗದಲ್ಲಿರುವಂತೆ ಮಾಡಿ ಅವನ ಮೇಲೆ ಒಟ್ಟಾಗಿ ನಾನಾ ಚಿಹ್ನೆಗಳ ಬಾಣಗಳ ಜಾಲಗಳನ್ನು ಪ್ರಯೋಗಿಸಿದರು. ಅವುಗಳನ್ನು ಅಂತರಿಕ್ಷದಲ್ಲಿಯೇ ಅಭಿಮನ್ಯುವು ನಿಶಿತ ಶರಗಳಿಂದ ತುಂಡರಿಸಿದನು ಮತ್ತು ಅಲ್ಲದೇ ಅವರನ್ನೂ ತಿರುಗಿ ಹೊಡೆದನು. ಅದೊಂದು ಅದ್ಭುತವಾಗಿತ್ತು. ಆಗ ಕುಪಿತರಾದ ಕೌರವರು ಸರ್ಪವಿಷದಂತಿರುವ ಬಾಣಗಳಿಂದ ಅವನನ್ನು ಕೊಲ್ಲಲು ಬಯಸಿ ಸೌಭದ್ರನನ್ನು ಸುತ್ತುವರೆದರು. ಎಲ್ಲಕಡೆಗಳಲ್ಲೂ ವ್ಯಾಪ್ತವಾಗಿರುವ ಸಮುದ್ರವನ್ನು ತೀರಪ್ರದೇಶವು ತಡೆಹಿಡಿದಿರುವಂತೆ ಅಭಿಮನ್ಯು ಒಬ್ಬನೇ ಸಮುದ್ರದಂತಿದ್ದ ಕೌರವ ಸೇನೆಯನ್ನು ತಡೆಹಿಡಿದನು. ಇತರೇತರರನ್ನು ಹೊಡೆಯುತ್ತಾ ಯುದ್ಧಮಾಡುತ್ತಿದ್ದ ಶೂರ ಅಭಿಮನ್ಯು ಮತ್ತು ಇತರರಲ್ಲಿ ಯಾರೂ ಪರಾಙ್ಮುಖರಾಗಲಿಲ್ಲ.

ಭಯಂಕರವಾಗಿ ನಡೆಯುತ್ತಿರುವ ಆ ಘೋರ ಸಂಗ್ರಾಮದಲ್ಲಿ ದುಃಸಹನು ಒಂಭತ್ತು ಬಾಣಗಳಿಂದ, ದುಃಶಾಸನನು ಹನ್ನೆರಡು, ಕೃಪ ಶಾರದ್ವತನು ಮೂರು, ದ್ರೋಣನು ಸರ್ಪಸಮಾನ ಏಳು ಶರಗಳಿಂದ, ವಿವಂಶತಿಯು ಇಪ್ಪತ್ತು, ಕೃತವರ್ಮನು ಏಳು, ಭೂರಿಶ್ರವನು ಏಳು ಬಾಣಗಳಿಂದ, ಮದ್ರೇಶನು ಆರು ಆಶುಗಗಳಿಂದ, ಮತ್ತು ಶಕುನಿ-ನೃಪ ದುರ್ಯೋಧನರು ಎರೆಡೆರಡು ಶರಗಳಿಂದ ಅಭಿಮನ್ಯುವನ್ನು ಹೊಡೆದರು. ಚಾಪವನ್ನು ಹಿಡಿದು ನರ್ತಿಸುತ್ತಿರುವನೋ ಎನ್ನುವಂತೆ ಆ ಪ್ರತಾಪವಂತನು ಒಬ್ಬೊಬ್ಬರನ್ನೂ ಮೂರು ಮೂರು ಜಿಹ್ಮಗಗಳಿಂದ ತಿರುಗಿ ಹೊಡೆದನು. ಆಗ ಕಾಡುತ್ತಿದ್ದ ಕೌರವರಿಂದ ಕ್ರುದ್ಧನಾಗಿ ಅಭಿಮನ್ಯುವು ತನ್ನ ಸ್ವಾಭಾವಿಕ ಮಹಾ ಬಲವನ್ನು ಪ್ರದರ್ಶಿಸತೊಡಗಿದನು.

ಆಗ ಗರುಡ ಮತ್ತು ವಾಯುವೇಗಗಳಿಗೆ ಸಮಾನ ವೇಗವುಳ್ಳ ಸುಶಿಕ್ಷಿತ ಕುದುರೆಗಳಿಂದ ಎಳೆಯಲ್ಪಟ್ಟ ರಥದಲ್ಲಿ ಕುಳಿತು ಅಶ್ಮಕನ ಮಗನು ತ್ವರೆಮಾಡಿ ಆಕ್ರಮಣಿಸಿ ಹತ್ತು ಬಾಣಗಳಿಂದ ಹೊಡೆದು “ನಿಲ್ಲು! ನಿಲ್ಲು!” ಎಂದು ಕೂಗಿದನು. ಅಭಿಮನ್ಯುವು ನಸುನಗುತ್ತಾ ಹತ್ತು ಬಾಣಗಳಿಂದ ಅವನ ಸೂತನನ್ನೂ, ಧ್ವಜವನ್ನೂ, ತೋಳುಗಳನ್ನೂ, ಧನುಸ್ಸನ್ನೂ, ತಲೆ-ತೊಡೆಗಳನ್ನೂ ಕತ್ತರಿಸಿ ಬೀಳಿಸಿದನು. ಹಾಗೆ ವೀರ

ಅಶ್ಮಕೇಶ್ವರನು ಸೌಭದ್ರನಿಂದ ಹತನಾಗಲು ಸರ್ವ ಸೇನೆಗಳೂ ಪಲಾಯನಪರರಾದರು. ಕರ್ಣ, ಕೃಪ, ದ್ರೋಣ, ದ್ರೌಣಿ, ಗಾಂಧಾರರಾಜ, ಶಲ, ಶಲ್ಯ, ಭೂರಿಶ್ರವ, ಕ್ರಾಥ, ಸೋಮದತ್ತ, ವಿವಿಂಶತಿ, ವೃಷಸೇನ, ಸುಷೇಣ, ಕುಂಡಭೇದಿ, ಪ್ರತರ್ದನ, ವೃಂದಾರಕ, ಲಲಿತ್ಥ, ಪ್ರಬಾಹು, ದೀರ್ಘಲೋಚನ ಮತ್ತು ದುರ್ಯೋಧನರು ಸಂಕ್ರುದ್ಧರಾಗಿ ಅವನನ್ನು ಶರವರ್ಷಗಳಿಂದ ಮುಚ್ಚಿದರು. ಆ ಮಹೇಷ್ವಾಸರಿಂದ ಅತಿ ಕ್ರುದ್ಧನಾದ ಅಭಿಮನ್ಯುವು ಕವಚ-ದೇಹಗಳೆರಡನ್ನೂ ಭೇದಿಸಬಲ್ಲ ಜಿಹ್ಮಗ ಶರವನ್ನು ತೆಗೆದುಕೊಂಡು ಕರ್ಣನ ಮೇಲೆ ಪ್ರಯೋಗಿಸಿದನು. ಅದು ಅವನ ಕವಚವನ್ನು ಒಡೆದು ದೇಹವನ್ನು ಭೇದಿಸಿ ಹಾವು ಬಿಲದೊಳಗೆ ಹೊಗುವಂತೆ ನೆಲವನ್ನು ಹೊಕ್ಕಿತು. ಅದರ ಅತಿ ಪ್ರಹಾರದಿಂದ ವ್ಯಥಿತನಾದ ಕರ್ಣನು ವಿಹ್ವಲನಾಗಿ ಭೂಕಂಪವಾದಾಗ ಪರ್ವತಗಳು ಹೇಗೆ ಅಲ್ಲಾಡುವವೋ ಹಾಗೆ ತೂಕಾಡಿದನು. ಆಗ ಬಲಿ ಅಭಿಮನ್ಯುವು ಸಂಕ್ರುದ್ಧನಾಗಿ ಮೂರು ಮೂರು ನಿಶಿತ ಬಾಣಗಳಿಂದ ಸುಷೇಣ, ದೀರ್ಘಲೋಚನ, ಮತ್ತು ಕುಂಡಭೇದಿಯರನ್ನು ಹೊಡೆದನು. ಕರ್ಣನು ಇಪ್ಪತ್ತೈದು ನಾರಾಚಗಳನ್ನು, ಅಶ್ವತ್ಥಾಮನು ಇಪ್ಪತ್ತು ಮತ್ತು ಕೃತವರ್ಮನು ಏಳನ್ನು ಅವನ ಮೇಲೆ ಪ್ರಯೋಗಿಸಿದರು.

ಎಲ್ಲ ಅಂಗಗಳಲ್ಲಿಯೂ ಗಾಯಗೊಂಡು ಕ್ರುದ್ಧನಾದ ಶಕ್ರನ ಮಗನ ಮಗನು ಹೀಗೆ ಸೈನ್ಯದಲ್ಲಿ ಸಂಚರಿಸುತ್ತಿರುವಾಗ ಪಾಶವನ್ನು ಹಿಡಿದ ಯಮನಂತೆ ಕಂಡುಬಂದನು. ಸಮೀಪದಲ್ಲಿಯೇ ಇದ್ದ ಶಲ್ಯನನ್ನು ಬಾಣದ ಮಳೆಯಿಂದ ಮುಚ್ಚಿ ಆ ಮಹಾಬಾಹುವು ಸೇನೆಗಳನ್ನು ಬೆದರಿಸುವಂತೆ ಜೋರಾಗಿ ಗರ್ಜಿಸಿದನು. ಆ ಅಸ್ತ್ರವಿದನ ಜಿಹ್ಮಗಗಳಿಂದ ಪೆಟ್ಟುತಿಂದ ಶಲ್ಯನು ರಥದಲ್ಲಿ ಸರಿದು ಕುಳಿತುಕೊಂಡನು ಮತ್ತು ಮೂರ್ಛಿತನಾದನು. ಯಶಸ್ವಿ ಸೌಭದ್ರನಿಂದ ಅವನೂ ಕೂಡ ಮೂರ್ಛಿತನಾದುದನ್ನು ಕಂಡು ಸೇನೆಗಳೆಲ್ಲವೂ ಭಾರದ್ವಾಜನು ನೋಡುತ್ತಿದ್ದಂತೆಯೇ ಪಲಯಾನ ಮಾಡತೊಡಗಿದವು. ರುಕ್ಮಪುಂಖಗಳಿಂದ ಸಮಾವೃತನಾಗಿದ್ದ ಆ ಮಹಾಬಾಹುವನ್ನು ನೋಡಿ ಕೌರವರು ಸಿಂಹಕ್ಕೆ ಬೆದರಿದ ಜಿಂಕೆಗಳಂತೆ ಪಲಾಯನ ಮಾಡಿದರು. ರಣಾಂಗಣದಲ್ಲಿ ಗಳಿಸಿದ ಯಶಸ್ಸಿನಿಂದಾಗಿ ಪಿತೃ-ಸುರ-ಚಾರಣ-ಸಿದ್ಧ-ಯಕ್ಷಗಣಗಳಿಂದ ಮತ್ತು ಭೂಮಿಯ ಮೇಲಿನ ಎಲ್ಲ ಭೂತಗಳಿಂದ ಸಂಪೂಜಿತನಾದ ಅಭಿಮನ್ಯುವು ಆಜ್ಯಧಾರೆಗಳಿಂದ ತೋಯ್ದ ಯಜ್ಞೇಶ್ವರನಂತೆ ಅತಿಯಾಗಿ ಪ್ರಕಾಶಿಸಿದನು.

ಸೌಭದ್ರನು ರಣದಲ್ಲಿ ಆಶುಗಗಳಿಂದ ಮದ್ರೇಶನನ್ನು ಪ್ರಹರಿಸಿದುದನ್ನು ನೋಡಿ ಶಲ್ಯನ ತಮ್ಮನು ಕ್ರುದ್ಧನಾಗಿ ಬಾಣಗಳ ಮಳೆಗರೆಯುತ್ತಾ

ಅವನನ್ನು ಆಕ್ರಮಿಸಿದನು. ಅವನು ಹತ್ತು ಬಾಣಗಳಿಂದ ಆರ್ಜುನಿಯನ್ನು ಕುದುರೆ-ಸಾರಥಿಗಳೊಡನೆ ಹೊಡೆದು "ನಿಲ್ಲು ! ನಿಲ್ಲು !" ಎಂದು ಮಹಾಸ್ವರದಲ್ಲಿ ಕೂಗಿ ಹೇಳಿದನು. ಆರ್ಜುನಿಯು ಅವನ ತಲೆ, ಕತ್ತು, ಕೈಕಾಲುಗಳು, ಧನುಸ್ಸು, ಕುದುರೆಗಳು, ಚತ್ರ, ಧ್ವಜ, ರಥದ ಮೂರು ಬೊಂಬುಗಳು, ರಥದ ಮೇಲಿದ್ದ ಆಸನ, ರಥದ ಚಕ್ರಗಳು, ನೊಗ, ತೂಣೀರಗಳು, ತೋಳುಮರಗಳು, ಪತಾಕೆ, ಚಕ್ರರಕ್ಷಕರು ಮತ್ತು ಸರ್ವೋಪಕರಣಗಳನ್ನು ಸಾಯಕಗಳಿಂದ ಹಸ್ತಲಾಘವವನ್ನು ಬಳಸಿ ಕತ್ತರಿಸಿ ಚೂರುಚೂರು ಮಾಡಿದನು. ಆಗ ವಧಿಸಲ್ಪಟ್ಟವನನ್ನು ಯಾರಿಂದಲೂ ನೋಡಲು ಸಾಧ್ಯವಾಗುತ್ತಿರಲಿಲ್ಲ. ಚಂಡಮಾರುತದ ಆಘಾತಕ್ಕೆ ಸಿಲುಕಿದ ಗಿರಿಯಂತೆ ಅಮಿತ ತೇಜಸ್ವಿಯಿಂದ ಭಗ್ನನಾದ ಅವನು ಕ್ಷೀಣನಾಗಿ, ವಸ್ತ್ರಾಭರಣಗಳೆಲ್ಲ ಚೆಲ್ಲಾ-ಪಿಲ್ಲಿಯಾಗಿ, ಭೂಮಿಯ ಮೇಲೆ ಬಿದ್ದನು. ಅವನ ಅನುಯಾಯಿಗಳು ಭಯಗೊಂಡು ದಿಕ್ಕಾಪಾಲಾಗಿ ಓಡಿ ಹೋದರು. ಆರ್ಜುನಿಯ ಆ ಅದ್ಭುತ ಪರಾಕ್ರಮವನ್ನು ನೋಡಿ ಎಲ್ಲ ಪ್ರಾಣಿಗಳೂ ಎಲ್ಲ ದಿಕ್ಕುಗಳಿಂದ "ಸಾಧು ! ಸಾಧು !" ಎಂದು ಜಯಕಾರಗೈದವು.

ಶಲ್ಯನ ತಮ್ಮನು ಹತನಾಗಲು ಅವನ ಅನೇಕ ಸೈನಿಕರು ಸಂಕ್ರುದ್ಧರಾಗಿ ವಿವಿಧ ಆಯುಧಗಳನ್ನು ಹಿಡಿದು ತಮ್ಮ ಕುಲ-ನಿವಾಸ-

ನಾಮಧೇಯಗಳನ್ನು ಕೇಳಿಸುತ್ತಾ ಅರ್ಜುನಾತ್ಮಜನ ಮೇಲೆ ಎರಗಿದರು. ಬಲೋತ್ಕಟರಾದ ಅವರು ರಥ-ಅಶ್ವ-ಗಜಗಳನ್ನೇರಿ, ಇನ್ನು ಕೆಲವರು ಕಾಲ್ನಡುಗೆಯಲ್ಲಿ ಬಾಣಗಳ ಮಹಾ ಶಬ್ಧ ಮತ್ತು ರಥದ ಚಕ್ರಗಳ ಶಬ್ಧಗಳೊಂದಿಗೆ, ಹೂಂಕಾರಗಳಿಂದ, ಕೋಪದಿಂದ ಗುರುಗುಟ್ಟುತ್ತಾ, ಸಿಂಹನಾದದ ಗರ್ಜನೆಗಳೊಂದಿಗೆ, ಧನುಸ್ಸನ್ನು ಠೇಂಕರಿಸುತ್ತಾ ಚಪ್ಪಾಳೆ ತಟ್ಟುತ್ತಾ, ಅರ್ಜುನನಂದನನನ್ನು ಗರ್ಜಿಸುತ್ತಾ “ನಮ್ಮಿಂದ ನೀನು ಜೀವಸಹಿತ ಹೋಗಲಾರೆ!” ಎಂದು ಕೂಗುತ್ತಾ ಆಕ್ರಮಿಸಿದರು. ಅವರು ಹಾಗೆ ಹೇಳುತ್ತಿರುವುದನ್ನು ನೋಡಿ ಸೌಭದ್ರನು ನಕ್ಕು ಯಾರ್ಯಾರು ಮೊದಲು ತನ್ನನ್ನು ಹೊಡೆದರೋ ಅವರನ್ನು ಪತ್ರಿಗಳಿಂದ ಹೊಡೆದನು. ತನ್ನ ವಿಚಿತ್ರ ಅಸ್ತ್ರಗಳನ್ನೂ ಹಸ್ತಲಾಘವನ್ನೂ ತೋರಿಸಲು ಬಯಸಿ ಸಮರ ಶೂರ ಆರ್ಜುನಿಯು ಮೊದಲು ಮೃದುವಾಗಿಯೇ ಯುದ್ಧಮಾಡಿದನು. ವಾಸುದೇವ ಮತ್ತು ಧನಂಜಯನಿಂದ ಪಡೆದಿದ್ದ ಅಸ್ತ್ರಗಳನ್ನು ಕಾರ್ಷ್ಣಿಯು ಆ ಇಬ್ಬರು ಕೃಷ್ಣರನ್ನೂ ಮೀರಿಸಿ ಪ್ರದರ್ಶಿಸಿದನು. ಸಂಧಾನ, ದೂರ, ಗುರುತರ, ಭಾರ, ಸಾಧನಗಳಲ್ಲಿ ಪುನಃ ಪುನಃ ಅವರಿಗೂ ತನಗೂ ವ್ಯತ್ಯಾಸವೇ ಇಲ್ಲದಂತೆ ತೋರಿಸಿದನು.

ಶರತ್ಕಾಲದಲ್ಲಿ ಉರಿಯುತ್ತಿದ್ದ ಸೂರ್ಯಮಂಡಲೋಪಾದಿಯಲ್ಲಿ ಅವನ

ಧನುಸ್ಸು ಮಂಡಲಾಕಾರವಾಗಿ ಮಾತ್ರ ಎಲ್ಲ ದಿಕ್ಕುಗಳಲ್ಲಿಯೂ ಪ್ರಕಾಶಿಸುತ್ತಿತ್ತು. ವರ್ಷಾಕಾಲದಲ್ಲಿ ಮಿಂಚನ್ನು ಹೊರಬಿಡುವ ಮೇಘದ ಗರ್ಜನೆಯಂತೆ ಅವನ ಧನುಸ್ಸಿನ ಶಿಂಜನಿಯ ಶಬ್ಧವೂ ಅಂಗೈಯ ದಾರುಣ ಶಬ್ಧವೂ ಕೇಳಿಬರುತ್ತಿತ್ತು. ಲಜ್ಜಾಶೀಲನಾದ, ಅಸಹಿಷ್ಣುವಾದ, ಇತರರನ್ನು ಗೌರವಿಸುವ ಸ್ವಭಾವವುಳ್ಳ ಸುಂದರ ಸೌಭದ್ರನು ಶತ್ರುಪಕ್ಷದ ವೀರರನ್ನು ಸಮ್ಮಾನಿಸಬೇಕೆಂಬ ಇಚ್ಛೆಯಿಂದ ಅವರೊಡನೆ ಬಾಣ-ಅಸ್ತ್ರಗಳೊಡನೆ ಹೋರಾಡಿದನು. ಭಗವಾನ್ ದಿವಾಕರನು ವರ್ಷಾಕಾಲವು ಮುಗಿಯಲು ಹೇಗೆ ಪ್ರಚಂಡರಶ್ಮಿಯಾಗುತ್ತಾನೋ ಹಾಗೆ ಅವನು ಮೊದಮೊದಲು ಮೃದುವಾಗಿದ್ದು ಕಡೆಕಡೆಗೆ ಉಗ್ರನಾದನು. ಸೂರ್ಯನು ತನ್ನ ಕಿರಣಗಳನ್ನು ಚೆಲ್ಲುವಂತೆ ಅವನು ಕ್ರುದ್ಧನಾಗಿ ನೂರಾರು ವಿಚಿತ್ರವಾದ ದೊಡ್ಡ ದೊಡ್ಡ ರುಕ್ಮಪುಂಖಗಳ ಶಿಲಾಶಿತ ಶರಗಳನ್ನು ಪ್ರಯೋಗಿಸಿದನು. ಭಾರದ್ವಾಜನು ನೋಡುತ್ತಿದ್ದಂತೆಯೇ ಆ ಮಹಾಯಶನು ಅವನ ರಥಸೇನೆಯನ್ನು ಕ್ಷುರಪ್ರಗಳಿಂದ, ವತ್ಸದಂತಗಳಿಂದ, ವಿಪಾಠಗಳಿಂದ, ನಾರಾಚಗಳಿಂದ, ಅರ್ಧನಾರಾಚಗಳಿಂದ, ಭಲ್ಲಗಳಿಂದ, ಅಂಜಲೀಕಗಳಿಂದ ಮುಚ್ಚಿಬಿಟ್ಟನು. ಶರಪೀಡಿದ ಆ ಸೇನೆಯು ಆಗ ಯುದ್ಧದಿಂದ ಹಿಮ್ಮೆಟ್ಟಿತು.

ಯುದ್ಧೋತ್ಸಾಹಿಯಾದ ಅಭಿಮನ್ಯುವು ರಥದಲ್ಲಿ ಕುಳಿದು ರಥಸ್ಥರಾಗಿದ್ದ ಕೌರವರ ಕಡೆಯ ಯುದ್ಧೋತ್ಸಾಹೀ ಅರಿಂದಮರೆಲ್ಲರನ್ನೂ ದುಃಖಕ್ಕೀಡುಮಾಡಿದನು. ಬೆಂಕಿಯ ಕೊಳ್ಳಿಯಂತೆ ಎಲ್ಲ ಕಡೆ ಸಂಚರಿಸುತ್ತಾ ಬಾಣಗಳಿಂದ ಅವನು ದ್ರೋಣ, ಕರ್ಣ, ಕೃಪ, ಶಲ್ಯ, ದ್ರೌಣಿ, ಭೋಜ, ಬೃಹದ್ಬಲ, ದುರ್ಯೋಧನ, ಸೌಮದತ್ತಿ, ಶಕುನಿ, ನಾನಾ ನೃಪರು, ನೃಪರ ಮಕ್ಕಳು, ಮತ್ತು ವಿವಿಧ ಸೈನ್ಯಗಳನ್ನು ಮುಚ್ಚಿದನು. ಅಮಿತ್ರರನ್ನು ಸಂಹರಿಸುತ್ತಾ ತೇಜಸ್ವೀ ಪರಮಾಸ್ತ್ರ ಪ್ರತಾಪವಾನ್ ಸೌಭದ್ರನು ಎಲ್ಲ ದಿಕ್ಕುಗಳಲ್ಲಿಯೂ ಕಾಣುತ್ತಿದ್ದನು. ಅಮಿತೌಜಸ ಸೌಭದ್ರನ ಆ ಚರಿತವನ್ನು ನೋಡಿ ಕೌರವ ಸೈನ್ಯಗಳು ಪುನಃ ಪುನಃ ನಡುಗಿದವು. ಆಗ ಮಹಾಪ್ರಾಜ್ಞ ಪ್ರತಾಪವಾನ್ ಭಾರದ್ವಾಜನು ರಣದಲ್ಲಿ ರಣವಿಶಾರದ ಅಭಿಮನ್ಯುವನ್ನು ನೋಡಿ ಹರ್ಷದಿಂದ ವಿಕಸಿತ ಕಣ್ಣುಗಳಿಂದ ಕೂಡಿದವನಾಗಿ ದುರ್ಯೋಧನನ ಮರ್ಮಗಳನ್ನು ಇರಿಯುವಂತೆ ತ್ವರೆಮಾಡಿ ಕೃಪನಿಗೆ ಹೇಳಿದನು:

> “ಇಗೋ ಇಲ್ಲಿ ಹೋಗುತ್ತಿದ್ದಾನೆ - ಎಲ್ಲ ರಾಜರನ್ನೂ ಸುಹೃದಯರನ್ನೂ, ಯುಧಿಷ್ಠಿರ-ನಕುಲ-ಸಹದೇವ-ಭೀಮಸೇನ ಮತ್ತು ಪಾಂಡವನನ್ನೂ, ಅನ್ಯ ಬಂಧುಗಳನ್ನೂ,

ಸಂಬಂಧಿಗಳನ್ನೂ, ಮಧ್ಯಸ್ಥರನ್ನೂ, ಸುಹೃದಯರನ್ನೂ ಆನಂದಿಸುತ್ತಾ - ಯುವಕ ಸೌಭದ್ರನು ಹೋಗುತ್ತಿದ್ದಾನೆ. ಯುದ್ಧದಲ್ಲಿ ಇವನ ಸಮನಾದ ಧನುರ್ಧರನು ಬೇರೆ ಯಾರೂ ಇಲ್ಲವೆಂದು ನನಗನ್ನಿಸುತ್ತಿದೆ. ಈ ಸೇನೆಗಳನ್ನು ನಾಶಗೊಳಿಸಲು ಇಚ್ಛಿಸಿದರೂ ಯಾವುದೋ ಕಾರಣಕ್ಕೆ ಇವನು ಹಾಗೆ ಮಾಡಲು ಬಯಸುತ್ತಿಲ್ಲ."

ದ್ರೋಣನ ಪ್ರೀತಿಸಂಯುಕ್ತವಾದ ಈ ಮಾತನ್ನು ಕೇಳಿ ದುರ್ಯೋಧನನು ಆರ್ಜುನಿಯ ಕುರಿತು ಕ್ರುದ್ಧನಾಗಿ, ದ್ರೋಣನನ್ನು ನೋಡಿ ನಕ್ಕು, ಕರ್ಣ-ಬಾಹ್ಲಿಕ-ಕೃಪ-ದುಃಶಾಸನ-ಮದ್ರರಾಜ ಮತ್ತು ಇತರ ಮಹಾರಥರಿಗೆ ಹೇಳಿದನು:

"ಮೂರ್ಧಾಭಿಷಿಕ್ತರಾದ ಎಲ್ಲರಿಗೂ ಆಚಾರ್ಯರಾದ ಈ ಬ್ರಹ್ಮವಿತ್ತಮರು ಅರ್ಜುನನ ಈ ಮೂಢ ಮಗನನ್ನು ಕೊಲ್ಲಲು ಇಚ್ಛಿಸುತ್ತಿಲ್ಲ. ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ಶಸ್ತ್ರಪಾಣಿಗಳಾದ ಇವರೊಂದಿಗೆ ಸಮರದಲ್ಲಿ ಅಂತಕನೂ ಬಿಡಿಸಿಕೊಳ್ಳಲಾರ. ಹೀಗಿರುವಾಗ ಅನ್ಯ ಮರ್ತ್ಯನು ಹೇಗೆ ಉಳಿದಾನು? ಅರ್ಜುನನ ಈ ಮಗನನ್ನು ಶಿಷ್ಯತ್ವ ಭಾವದಿಂದ ರಕ್ಷಿಸುತ್ತಿದ್ದಾರೆ. ಧರ್ಮಿಗಳಿಗೆ ಪ್ರಿಯ ಶಿಷ್ಯರ ಮಕ್ಕಳು

> ತಮ್ಮದೇ ಮಕ್ಕಳಿದ್ದಂತೆ. ದ್ರೋಣರಿಂದ ಸಂರಕ್ಷಿತನಾದ ಇವನು ತನ್ನನ್ನೇ ವೀರನೆಂದು ತಿಳಿದುಕೊಂಡಿದ್ದಾನೆ. ಆತ್ಮಸಂಭಾವಿತನಾದ ಈ ಮೂಢನನ್ನು ಕೂಡಲೇ ಸಂಹರಿಸಿರಿ!”

ರಾಜನು ಹೀಗೆ ಹೇಳಲು ಭಾರದ್ವಾಜನು ನೋಡುತ್ತಿದ್ದಂತೆಯೇ ಸಾತ್ವತೀಪುತ್ರನನ್ನು ಸಂಹರಿಸಲು ಅವರು ಮುಂದಾದರು. ದುರ್ಯೋಧನನ ಮಾತನ್ನು ಕೇಳಿ ಕುರುಶಾರ್ದೂಲ ದುಃಶಾಸನನು ದುರ್ಯೋಧನನಿಗೆ ಹೀಗೆ ಹೇಳಿದನು:

> “ಮಹಾರಾಜ! ನಿನಗೆ ಹೇಳುತ್ತಿದ್ದೇನೆ! ಪಾಂಡುಪುತ್ರರು ಮತ್ತು ಪಾಂಚಾಲರು ನೋಡುತ್ತಿದ್ದಂತೆಯೇ ನಾನು ಇವನನ್ನು ಕೊಲ್ಲುತ್ತಿದ್ದೇನೆ. ರಾಹುವು ದಿವಾಕರನನ್ನು ಹೇಗೋ ಹಾಗೆ ಇಂದು ನಾನು ಸೌಭದ್ರನನ್ನು ಹಿಡಿಯುತ್ತೇನೆ.”

ಹೀಗೆ ಕೂಗಿ ಹೇಳಿ ಪುನಃ ಕುರುರಾಜನಿಗೆ ಇದನ್ನು ಹೇಳಿದನು:

> “ಸೌಭದ್ರನು ನನ್ನಿಂದ ಗ್ರಸ್ತನಾಗಿದ್ದುದನ್ನು ಕೇಳಿ ಅತಿಮಾನಿನಿಗಳಾದ ಕೃಷ್ಣರಿಬ್ಬರೂ ಜೀವಲೋಕದಿಂದ ಪ್ರೇತಲೋಕಕ್ಕೆ ಹೋಗುತ್ತಾರೆ ಎನ್ನುವುದರಲ್ಲಿ ಸಂಶಯವಿಲ್ಲ.

ಅವರಿಬ್ಬರೂ ಮೃತರಾದರೆಂದು ಕೇಳಿ ಪಾಂಡುವಿನ ಕ್ಷೇತ್ರದಲ್ಲಿ ಹುಟ್ಟಿದ ಮಕ್ಕಳು ದೌರ್ಬಲ್ಯದ ಕಾರಣದಿಂದ ಸುಹೃದ್ವರ್ಗಗಳೊಂದಿಗೆ ಒಂದೇ ದಿನದಲ್ಲಿ ಜೀವಬಿಡುತ್ತಾರೆ. ಆದುದರಿಂದ ರಾಜನ್! ಇವರಿಬ್ಬರು ಹತರಾದರೆಂದರೆ ನಿನ್ನ ಎಲ್ಲ ಅಹಿತರೂ ಹತರಾದಂತೆ. ನನಗೆ ಮಂಗಳವನ್ನು ಕೋರು. ನಿನ್ನ ಈ ಶತ್ರುಗಳನ್ನು ನಾನು ಸಂಹರಿಸುತ್ತೇನೆ."

## ಅಭಿಮನ್ಯು-ದುಃಶಾಸನರ ಯುದ್ಧ

ಹೀಗೆ ಹೇಳಿ ಗರ್ಜಿಸಿ ದುಃಶಾಸನನು ಕ್ರುದ್ಧನಾಗಿ ಸೌಭದ್ರನನ್ನು ಶರವರ್ಷಗಳಿಂದ ಮುಚ್ಚಿದನು. ಕ್ರುದ್ಧನಾಗಿ ಮೇಲೆ ಬೀಳುತ್ತಿದ್ದ ಅವನನ್ನು ಅರಿಂದಮ ಅಭಿಮನ್ಯುವು ಇಪ್ಪತ್ತಾರು ತೀಕ್ಷ್ಣ ಬಾಣಗಳಿಂದ ಹೊಡೆದನು. ದುಃಶಾಸನನಾದರೋ ಕುಂಭಸ್ಥಳವು ಒಡೆದ ಆನೆಯಂತೆ ಸಂಕ್ರುದ್ಧನಾಗಿ ರಣದಲ್ಲಿ ಸೌಭದ್ರ ಅಭಿಮನ್ಯುವಿನೊಡನೆ ಯುದ್ಧಮಾಡಿದನು. ರಥಶಿಕ್ಷಾವಿಶಾರದರಾದ ಅವರಿಬ್ಬರೂ ವಿಚಿತ್ರ ರಥಗಳಲ್ಲಿ ಎಡ ಮತ್ತು ಬಲ ಮಂಡಲಗಳಲ್ಲಿ ತಿರುಗುತ್ತಾ ಯುದ್ಧಮಾಡುತ್ತಿದ್ದರು. ಆಗ ಪಣವ, ಮೃದಂಗ, ದುಂಧುಭಿ, ಕೃಕರ, ಮಹಾನಕ ಭೇರಿಗಳನ್ನೂ ಝುರ್ಝರಗಳನ್ನು ವಾದಕರು ಬಾರಿಸಿದರು. ಆ ನಿನಾದವು ಶಂಖಧ್ವನಿಗಳಿಂದಲೂ ವೀರರ ಸಿಂಹನಾದದಿಂದಲೂ

ಕೂಡಿ ಮತ್ತಷ್ಟು ಭಯಂಕರವಾಗಿ ಕೇಳುತ್ತಿತ್ತು.

ತನ್ನ ಶರಗಳಿಂದ ಗಾಯಗೊಂಡು ಎದುರಿಸಿ ನಿಂತಿದ್ದ ಶತ್ರು ದುಃಶಾಸನನಿಗೆ ಧೀಮಾನ್ ಅಭಿಮನ್ಯುವು ನಸುನಗುತ್ತಾ ಹೇಳಿದನು:

> "ಒಳ್ಳೆಯದಾಯಿತು! ಸಂಗ್ರಾಮದಲ್ಲಿ ಮಾನಿನಿಯೂ, ಶೂರನೂ, ಕ್ರೂರಿಯೂ, ಧರ್ಮವನ್ನು ತ್ಯಜಿಸಿ ಸದಾ ಇತರರನ್ನು ನಿಂದಿಸುವುದರಲ್ಲೇ ನಿರತನಾಗಿರುವ ನಿಷ್ಠುರ ಶತ್ರುವನ್ನು ಕಾಣುತ್ತಿದ್ದೇನೆ. ಸಭೆಯಲ್ಲಿ ರಾಜಾ ಧೃತರಾಷ್ಟ್ರನೂ ಕೇಳುವಂತೆ ನೀನು ಧರ್ಮರಾಜ ಯುಧಿಷ್ಠಿರನನ್ನು ಪೌರುಷದ ಮಾತುಗಳಿಂದ ಕುಪಿತಗೊಳಿಸಿದ್ದೆ. ಜಯದಿಂದ ಉನ್ಮತ್ತನಾಗಿ ಭೀಮನಲ್ಲಿ ಕೂಡ ಬಹಳ ಅಬದ್ಧವಾಗಿ ಮಾತನಾಡಿದ್ದೆ. ಪರವಿತ್ತಾಪಹರಣ, ಕ್ರೋಧ, ಅಶಾಂತಿ, ಲೋಭ, ಜ್ಞಾನನಾಶ, ದ್ರೋಹ, ಅತಿ ಅಹಿತ ಕರ್ಮಗಳ, ಉಗ್ರಧನ್ವಿಗಳಾದ ನನ್ನ ಪಿತೃಗಳ ರಾಜ್ಯವನ್ನು ಅಪಹರಿಸಿದುದರ ಮತ್ತು ಆ ಮಹಾತ್ಮರ ಕೋಪದಿಂದಾಗಿ ನಿನಗೆ ಈ ದುರ್ದಿನವು ಪ್ರಾಪ್ತವಾಗಿದೆ. ದುರ್ಮತೇ! ಸದ್ಯವೇ ನೀನು ಆ ಉಗ್ರಧರ್ಮದ ಫಲವನ್ನು ಅನುಭವಿಸುತ್ತೀಯೆ. ಸರ್ವ ಸೇನೆಯು ನೋಡುತ್ತಿರುವಂತೆಯೇ ಇಂದು ನಿನ್ನನ್ನು

> ಬಾಣಗಳಿಂದ ಶಿಕ್ಷಿಸುತ್ತೇನೆ. ಇಂದು ನಾನು ರಣದಲ್ಲಿ ಆ ಕೋಪದ ಋಣವನ್ನು ತೀರಿಸುತ್ತೇನೆ. ಇಂದು ಕ್ರೋಧಳಾಗಿರುವ ಕೃಷ್ಣೆಯ ಮತ್ತು ನನ್ನ ದೊಡ್ಡಪ್ಪ ಭೀಮನ ಆಸೆಗಳನ್ನು ಪೂರೈಸಿ ಯುದ್ಧದಲ್ಲಿ ಋಣಮುಕ್ತನಾಗುತ್ತೇನೆ. ರಣವನ್ನು ಬಿಟ್ಟು ಓಡಿಹೋಗದೇ ಇದ್ದರೆ ನೀನು ನನ್ನಿಂದ ಜೀವಂತ ಉಳಿಯಲಾರೆ!"

ಹೀಗೆ ಹೇಳಿ ಕಾಲ-ಅಗ್ನಿ-ವಾಯುಗಳ ತೇಜಸ್ಸುಳ್ಳ ಆ ಮಹಾಬಾಹು ಪರವೀರಘ್ನನು ದುಃಶಾಸನನನ್ನು ಕೊನೆಗೊಳಿಸಲು ಧನುಸ್ಸನ್ನು ಹೂಡಿದನು. ಅದು ಕೂಡಲೇ ಅವನ ಬಳಿಸಾರಿ ಕುತ್ತಿಗೆಯ ಪ್ರದೇಶವನ್ನು ಭೇದಿಸಿತು. ಆಗ ಇನ್ನೊಮ್ಮೆ ಇಪ್ಪತ್ತೈದು ಬಾಣಗಳಿಂದ ಅವನನ್ನು ಹೊಡೆದನು. ಗಾಢವಾಗಿ ಗಾಯಗೊಂಡು ದುಃಖಿತನಾದ ದುಃಶಾಸನನು ರಥದ ಆಸನಕ್ಕೆ ಒರಗಿ ಕುಳಿತುಕೊಂಡನು ಮತ್ತು ಮಹಾ ಮೂರ್ಛಿತನಾದನು. ಸೌಭದ್ರನ ಶರದಿಂದ ಪೀಡಿತನಾಗಿ ಅಚೇತಸನಾಗಿದ್ದ ದುಃಶಾಸನನನ್ನು ಅವನ ಸಾರಥಿಯು ತ್ವರೆಮಾಡಿ ರಣದಿಂದ ಆಚೆ ತೆಗೆದುಕೊಂಡು ಹೋದನು. ಪಾಂಡವರು, ದ್ರೌಪದೇಯರು, ವಿರಾಟ, ಪಾಂಚಾಲರು ಮತ್ತು ಕೇಕಯರು ಅದನ್ನು ನೋಡಿ ಸಿಂಹನಾದಗೈದರು. ಅಲ್ಲಿ ಪಾಂಡವರ ಸೈನಿಕರು

ಸಂಹೃಷ್ಟರಾಗಿ ಎಲ್ಲರೀತಿಯ ವಾದ್ಯಗಳನ್ನು ಎಲ್ಲೆಡೆ ಬಾರಿಸಿದರು.

ಆಟವಾಡುತ್ತಿದ್ದ ಸೌಭದ್ರನನ್ನು ಮತ್ತು ಅತ್ಯಂತ ವೈರಿಯಾಗಿದ್ದ ದೃಪ್ತನಾಗಿದ್ದ ಶತ್ರುವು ಪರಾಜಿತನಾದುದನ್ನು ನೋಡಿ ನಸುನಕ್ಕು ಯುಧಿಷ್ಠಿರನನ್ನು ಮುಂದಿರಿಸಿಕೊಂಡು ಧ್ವಜಾಗ್ರಗಳಲ್ಲಿ ಧರ್ಮ, ವಾಯು, ಶಕ್ರ, ಮತ್ತು ಅಶ್ವಿನೀ ದೇವತೆಗಳ ಪ್ರತಿಮೆಗಳನ್ನು ಹೊಂದಿದ್ದ ರಥಗಳೂ ಮಹಾರಥ ದ್ರೌಪದೇಯರೂ, ಸಾತ್ಯಕಿ, ಚೇಕಿತಾನರು, ಧೃಷ್ಟದ್ಯುಮ್ನ-ಶಿಖಂಡಿಯರೂ, ಕೇಕಯರೂ, ಧೃಷ್ಟಕೇತು, ಮತ್ಸ್ಯ-ಪಾಂಚಾಲ-ಸೃಂಜಯರು, ಪಾಂಡವರೂ ಸಂತೋಷದಿಂದ ದ್ರೋಣನ ಸೇನೆಯನ್ನು ಭೇದಿಸಲು ಬಯಸಿ ಮುನ್ನುಗ್ಗಿದರು. ಆಗ ಜಯವನ್ನು ಬಯಸುತ್ತಿದ್ದವರ ಶತ್ರುಗಳೊಂದಿಗೆ ಕೌರವರ ಮಹಾಯುದ್ಧವು ನಡೆಯಿತು. ಆಗ ಮಹಾರಾಜ ದುರ್ಯೋಧನನು ರಾಧೇಯನಿಗೆ ಹೇಳಿದನು:

> “ನೋಡು! ದುಃಶಾಸನನು ಆದಿತ್ಯನಂತೆ ಸುಡುತ್ತಾ ರಣದಲ್ಲಿ ಶತ್ರುಗಳನ್ನು ಸಂಹರಿಸುತ್ತಿರುವ ವೀರ ಸೌಭದ್ರ ಅಭಿಮನ್ಯುವಿನ ವಶನಾದುದನ್ನು ನೋಡು! ಹಾಗೆಯೇ ಆಯುಧಗಳನ್ನು ಹಿಡಿದು ಪಾಂಡವರು ಮುನ್ನುಗ್ಗಿ ಬರುತ್ತಿದ್ದಾರೆ.”

## ಅಭಿಮನ್ಯು-ಕರ್ಣರ ಯುದ್ಧ

ಆಗ ದುರ್ಯೋಧನನಿಗೆ ಹಿತವನ್ನು ಮಾಡಲೋಸುಗ ಕರ್ಣನು ಸಂಕ್ರುದ್ಧನಾಗಿ ದುರಾಸದ ಅಭಿಮನ್ಯುವನ್ನು ತೀಕ್ಷ್ಣ ಶರಗಳಿಂದ ಮುಸುಕಿದನು. ಆ ವೀರನು ರಣರಂಗದಲ್ಲಿ ಸೌಭದ್ರನ ಅನುಚರರನ್ನು ತೀಕ್ಷ್ಣ ಶ್ರೇಷ್ಠ ಅಸ್ತ್ರಗಳಿಂದ ತಿರಸ್ಕಾರ ಭಾವದಿಂದ ಹೊಡೆದನು. ಮಹಾಮನಸ್ವಿ ಅಭಿಮನ್ಯುವಾದರೋ ರಾಧೇಯನನ್ನು ತ್ವರೆಮಾಡಿ ಎಪ್ಪತ್ಮೂರು ಶಿಲೀಮುಖಗಳಿಂದ ಹೊಡೆದು ದ್ರೋಣನನ್ನು ತಲುಪಿದನು. ವಜ್ರಹಸ್ತನು ಅಸುರರನ್ನು ಹೇಗೋ ಹಾಗೆ ಆಕ್ರಮಣಿಸಿ ಬರುತ್ತಿದ್ದ ಅವನನ್ನು ದ್ರೋಣನಿಂದ ತಡೆಹಿಡಿದು ನಿಲ್ಲಿಸಲು ರಣದಲ್ಲಿ ಯಾವ ರಥಶ್ರೇಷ್ಠನಿಗೂ ಶಕ್ಯವಾಗಲಿಲ್ಲ. ಆಗ ಜಯವನ್ನು ಬಯಸಿದ ಸರ್ವಧನುಭೃತರಲ್ಲಿ ಮಾನನೀಯನಾದ ಕರ್ಣನು ಉತ್ತಮ ಅಸ್ತ್ರಗಳನ್ನು ಪ್ರದರ್ಶಿಸುತ್ತಾ ಸೌಭದ್ರನನ್ನು ನೂರಾರು ಬಾಣಗಳಿಂದ ಹೊಡೆದನು. ಆ ಅಸ್ತ್ರವಿದರಲ್ಲಿ ಶ್ರೇಷ್ಠ, ರಾಮಶಿಷ್ಯ, ಪ್ರತಾಪವಾನನು ಸಮರದಲ್ಲಿ ಶತ್ರುದುರ್ಧರ್ಷ ಅಭಿಮನ್ಯುವನ್ನು ಪೀಡಿಸಿದನು.

ಈ ರೀತಿ ರಾಧೇಯನ ಅಸ್ತ್ರವೃಷ್ಟಿಗಳಿಂದ ಪೀಡಿತನಾದ ಸಮರದಲ್ಲಿ ಅಮರಸಂಕಾಶನಾದ ಸೌಭದ್ರನು ಸಹಿಸಿಕೊಳ್ಳಲಿಲ್ಲ. ಆಗ ಆರ್ಜುನಿಯು ಶಿಲಾಶಿತ ತೀಕ್ಷ್ಣ ಭಲ್ಲಗಳು ಮತ್ತು ಸನ್ನತಪರ್ವಗಳಿಂದ ಕರ್ಣನ ಧನುಸ್ಸನ್ನು ಕತ್ತರಿಸಿ ಅವನನ್ನು ಹೊಡೆದನು. ಅವನ ಧ್ವಜ-ಕಾರ್ಮುಕವು

ತುಂಡಾಗಿ ನೆಲದ ಮೇಲೆ ಬಿದ್ದವು. ಆಗ ಕರ್ಣನು ಕಷ್ಟದಲ್ಲಿ ಸಿಲುಕಿದುದನ್ನು ನೋಡಿದ ಕರ್ಣನ ತಮ್ಮನು ದೃಢವಾದ ಕಾರ್ಮುಕವನ್ನು ಎತ್ತಿ ಹಿಡಿದು ತಕ್ಷಣವೇ ಸೌಭದ್ರನ ಮೇಲೆ ಎರಗಿದನು. ಆಗ ಪಾಂಡವರು ಮತ್ತು ಅವರ ಅನುಚರ ಜನರು ವಾದ್ಯಗಳನ್ನು ನುಡಿಸಿದರು ಮತ್ತು ಸೌಭದ್ರನನ್ನೂ ಹೊಗಳಿದರು.

ಅವನು ಗರ್ಜಿಸುತ್ತಾ ಪುನಃ ಪುನಃ ಕೈಯಿಂದ ಧನುಸ್ಸಿನ ಶಿಂಜಿನಿಯನ್ನು ಎಳೆಯುತ್ತಾ ಬೇಗನೇ ಆ ಮಹಾತ್ಮರ ರಥಗಳ ಮಧ್ಯೆ ಬಂದು ಎರಗಿದನು. ನಸುನಗುವ ಮುಖವಿದ್ದ ಅವನು ದುರಾಸದ ಅಭಿಮನ್ಯುವನ್ನು ಅವನ ಚತ್ರ-ಧ್ವಜ-ಸಾರಥಿಯನ್ನೂ ಸೇರಿ ಹತ್ತು ಬಾಣಗಳಿಂದ ಹೊಡೆದನು. ಪಿತೃಪಿತಾಮಹರಿಗಾಗಿ ಅತಿ ಮಾನುಷ ಕರ್ಮವನ್ನು ಮಾಡುತ್ತಿದ್ದ ಕಾರ್ಷ್ಣಿಯು ಶರಗಳಿಂದ ಗಾಯಗೊಂಡಿದುದನ್ನು ನೋಡಿ ಕೌರವರಿಗೆ ಸಂತೋಷವಾಯಿತು. ಆಗ ಅಭಿಮನ್ಯುವು ನಗು ನಗುತ್ತಲೇ ಶರಸಂಧಾನ ಮಾಡಿ ಶಿಂಜಿನಿಯನ್ನು ದೀರ್ಘವಾಗಿ ಎಳೆದು ಒಂದೇ ಪತ್ರಿಯಿಂದ ಅವನ ಶಿರವನ್ನು ಕತ್ತರಿಸಲು ಚಂಡಮಾರುತದಿಂದ ಪರ್ವತದಿಂದ ಕೆಳಗುರುಳಿಸಲ್ಪಟ್ಟ ಬೆಟ್ಟಕಣಗಿಲೇ ಮರದಂತೆ ಅವನು ರಥದಿಂದ ನೆಲದ ಮೇಲೆ ಬಿದ್ದನು.

ಸಹೋದರನು ಹತನಾದುದನ್ನು ನೋಡಿ ಕರ್ಣನು ವ್ಯಥಿತನಾದನು.

ಕಂಕಪತ್ರಿಗಳಿಂದ ಕರ್ಣನನ್ನೂ ವಿಮುಖನನ್ನಾಗಿ ಮಾಡಿ ಸೌಭದ್ರನು ಕೂಡಲೇ ಅನ್ಯ ಮಹೇಷ್ವಾಸರನ್ನೂ ಆಕ್ರಮಿಸಿದನು. ಆಗ ಕ್ರುದ್ಧನಾದ ಮಹಾಯಶ ಅಭಿಮನ್ಯುವು ವಿಶಾಲವಾಗಿ ಹರಡಿಕೊಂಡಿದ್ದ ಗಜಾಶ್ವರಥಪದಾತಿಗ ಸೈನ್ಯವನ್ನು ಧ್ವಂಸಮಾಡಲು ಉಪಕ್ರಮಿಸಿದನು. ಕರ್ಣನಾದರೋ ಅಭಿಮನ್ಯುವಿನ ಅನೇಕ ಬಾಣಗಳಿಂದ ಗಾಯಗೊಂಡು ವೇಗವುಳ್ಳ ಕುದುರೆಗಳೊಂದಿಗೆ ಪಲಾಯನಗೈದನು.

ಆಗ ಆ ಸೇನೆಯು ಭಗ್ನವಾಯಿತು. ಆಕಾಶವು ಮಿಡಿತೆ ಹುಳುಗಳಿಂದ ಅಥವಾ ಮಳೆಯಿಂದ ಮುಚ್ಚಿಹೋದಂತೆ ಅಭಿಮನ್ಯುವಿನ ಶರಗಳಿಂದ ಮುಚ್ಚಿ ಹೋಯಿತು. ಆಗ ಏನೂ ಕಾಣುತ್ತಿರಲಿಲ್ಲ. ನಿಶಿತ ಶರಗಳಿಂದ ಆಕ್ರಮಣಿಸಿಸಲ್ಪಡುತ್ತಿರುವ ಕೌರವ ಯೋಧರಲ್ಲಿ ಸೈಂಧವನನ್ನು ಬಿಟ್ಟು ಬೇರೆ ಯಾರೂ ಅವನನ್ನು ಎದುರಿಸಿ ನಿಲ್ಲಲು ಸಾಧ್ಯವಾಗಲಿಲ್ಲ. ಆಗ ಪುರುಷರ್ಷಭ ಸೌಭದ್ರನಾದರೋ ಶಂಖವನ್ನು ಊದಿ ಶೀಘ್ರದಲ್ಲಿ ಭಾರತೀ ಸೇನೆಯನ್ನು ಆಕ್ರಮಣಿಸಿದರು. ಹುಲ್ಲುಮೆದೆಯ ಮೇಲೆ ಬಿದ್ದ ಒಂದು ಕಿಡಿಯೂ ಕೂಡ ಸ್ವಲ್ಪವೇ ಹೊತ್ತಿನಲ್ಲಿ ಅದನ್ನು ಭಸ್ಮಮಾಡುವಂತೆ ಆರ್ಜುನಿಯು ಕ್ಷಣದಲ್ಲಿಯೇ ರಿಪುಗಳನ್ನು ಸಂಹರಿಸುತ್ತಾ ಭಾರತ ಸೇನೆಯ ಮಧ್ಯೆ ಸಂಚರಿಸುತಿದ್ದನು. ಅವನು ಒಳನುಗ್ಗಿ ನಿಶಿತ ಶರಗಳಿಂದ ರಥ-ಗಜ-ಅಶ್ವ-ಮನುಷ್ಯರನ್ನು

ಹೊಡೆಯುತ್ತಾ ಭೂಮಿಯನ್ನು ಮುಂಡಗಳ ರಾಶಿಗಳಿಂದ ಮುಚ್ಚಿದನು.

ಸೌಭದ್ರನ ಧನುಸ್ಸಿನಿಂದ ಪ್ರಯೋಗಿಸಲ್ಪಟ್ಟ ಶ್ರೇಷ್ಠ ಶರಗಳಿಂದ ಗಾಯಗೊಂಡು ಜೀವವನ್ನು ಉಳಿಸಿಕೊಳ್ಳಲು ಆತುರಪಟ್ಟು ಓಡುವಾಗ ಸೇನೆಗಳು ತಮ್ಮವರನ್ನೇ ತುಳಿದು ಸಾಯಿಸುತ್ತಿದ್ದವು. ಅವನ ಘೋರವಾದ, ರೌದ್ರಕರ್ಮಗಳನ್ನು ಮಾಡಬಲ್ಲ, ತೀಕ್ಷ್ಣವಾದ ಬಹುಸಂಖ್ಯಾತ ಬಾಣಗಳು ರಥ-ಆನೆ-ಅಶ್ವಗಳನ್ನು ಸಂಹರಿಸಿ ನೆಲವನ್ನು ಹೊಗುತ್ತಿದ್ದವು. ಆಯುಧಗಳನ್ನು ಹಿಡಿದ, ಅಂಗುಲಿತ್ರಾಣಗಳನ್ನು ಧರಿಸಿದ್ದ, ಖಡ್ಗಗಳನ್ನು ಹಿಡಿದಿದ್ದ, ಗದೆಗಳನ್ನು ಹಿಡಿದಿದ್ದ, ಹೇಮಾಭರಣ ಭೂಷಿತ ಬಾಹುಗಳು ತುಂಡಾಗಿ ಬಿದ್ದಿರುವುದು ರಣರಂಗದಲ್ಲಿ ಕಂಡುಬಂದವು. ಭೂಮಿಯ ಮೇಲೆ ಸಹಸ್ರಾರು ಬಾಣಗಳೂ, ಚಾಪಗಳೂ, ಖಡ್ಗಗಳೂ, ಶರೀರಗಳೂ, ಕುಂಡಲ-ಸರಗಳನ್ನು ಧರಿಸಿದ್ದ ಶಿರಗಳೂ ಹರಡಿ ಬಿದ್ದಿದ್ದವು. ಯುದ್ಧಸಾಮಗ್ರಿಗಳಿಂದ ಕೂಡಿದ್ದ, ಆಸನಗಳು, ಈಷಾದಂಡಗಳು, ರಥದ ಅಚ್ಚುಗಳು, ಮುರಿದುಹೋದ ಚಕ್ರಗಳು, ಅನೇಕ ರಥಗಳು, ಶಕ್ತಿ-ಚಾಪ ಆಯುಧಗಳೂ ಮಹಾಧ್ವಜಗಳೂ ಬಿದ್ದಿದ್ದವು. ಸಂಹರಿಸಲ್ಪಡುತ್ತಿದ್ದ ಕ್ಷತ್ರಿಯರು, ಕುದುರೆಗಳು, ಮತ್ತು ಆನೆಗಳಿಂದ ಭೂಮಿಯು ಕ್ಷಣದಲ್ಲಿಯೇ ಅಗಮ್ಯವೂ ದಾರುಣವೂ ಆಯಿತು.

ವಧಿಸಲ್ಪಡುತ್ತಿದ್ದ ರಾಜಪುತ್ರರು ಇತರೇತರರರನ್ನು ಕೂಗಿ ಕರೆಯುತ್ತಿದುದರ ಮಹಾ ಶಬ್ಧವು ಉದ್ಭವಿಸಿತು. ಹೇಡಿಗಳ ಭಯವನ್ನು ಹೆಚ್ಚಿಸುವ ಆ ಶಬ್ಧವು ಸರ್ವ ದಿಕ್ಕುಗಳಲ್ಲಿಯೂ ಮೊಳಗಿತು. ಅಶ್ವ-ರಥ-ಗಜಗಳ ಸೇನೆಗಳನ್ನು ಸಂಹರಿಸುತ್ತಾ ಸೌಭದ್ರನು ದಿಕ್ಕು ಉಪದಿಕ್ಕುಗಳನ್ನು ಬೆಳಗಿಸುತ್ತಾ ತಿರುಗುತ್ತಿದ್ದನು. ಆಗ ಧೂಳಿನಿಂದ ಸೇನೆಗಳು ಮುಸುಕಿಹೋಗಲು ಆನೆ-ಕುದುರೆ-ಸೈನಿಕರನ್ನು ಧ್ವಂಸಗೊಳಿಸುತ್ತಿದ್ದ ಅವನು ಕಾಣುತ್ತಲೇ ಇರಲಿಲ್ಲ. ಕ್ಷಣದಲ್ಲಿಯೇ ಮಧ್ಯಾಹ್ನದ ಸೂರ್ಯನಂತೆ ಶತ್ರುಗಣಗಳನ್ನು ಸುಡುತ್ತಾ ಅಭಿಮನ್ಯುವು ಕಾಣಿಸಿಕೊಂಡನು. ಯುದ್ಧದಲ್ಲಿ ವಾಸವನ ಸಮನಾದ ವಾಸವನ ಮಗನ ಮಗ ಅಭಿಮನ್ಯುವು ಸೇನೆಯ ಮಧ್ಯದಲ್ಲಿ ವಿರಾಜಿಸಿದನು.

## ಜಯದ್ರಥನ ಯುದ್ಧ

ರಣದಲ್ಲಿ ಅವನನ್ನು ಯುಧಿಷ್ಠಿರ, ಭೀಮಸೇನ, ಶಿಖಂಡಿ, ಸಾತ್ಯಕಿ, ಯಮಳರು, ಧೃಷ್ಟದ್ಯುಮ್ನ, ವಿರಾಟ, ದ್ರುಪದ, ಕೇಕಯರೊಂದಿಗೆ ಧೃಷ್ಟಕೇತುವೂ ಮತ್ಸ್ಯರೂ ಸಂರಬ್ಧರಾಗಿ ಅನುಸರಿಸಿ ಹೋಗುತ್ತಿದ್ದರು. ವ್ಯೂಹದಲ್ಲಿದ್ದ ಸೇನೆಗಳನ್ನು ಪ್ರಹರಿಸಿ ಆಕ್ರಮಣಿಸಿದುದನ್ನು ನೋಡಿ ಕೌರವರ ಕಡೆಯ ಶೂರರು ಓಡುತ್ತಾ ವಿಮುಖರಾದರು. ದುರ್ಯೋಧನನ ಮಹಾಬಲವು ಹಾಗೆ ವಿಮುಖವಾಗುತ್ತಿದ್ದುದನ್ನು

ನೋಡಿದ ಧೃತರಾಷ್ಟ್ರನ ಅಳಿಯ ತೇಜಸ್ವಿ ಜಯದ್ರಥನು ಶತ್ರುಗಳನ್ನು ತಡೆಹಿಡಿಯಲು ಧಾವಿಸಿದನು. ಸೈಂಧವನ ಮಗ ರಾಜಾ ಜಯದ್ರಥನು ಮಗನನ್ನು ಹಿಂಬಾಲಿಸಿ ಹೋಗುತ್ತಿದ್ದ ಪಾರ್ಥರನ್ನು ಅವರ ಸೇನೆಗಳೊಂದಿಗೆ ತಡೆದನು. ಓಡಿಬಂದು ಆನೆಗಳನ್ನು ಎದುರಿಸುವ ಸಲಗದಂತೆ ಉಗ್ರಧನ್ವಿ, ಮಹೇಷ್ವಾಸ ವಾರ್ಧಕ್ಷತ್ರಿಯು ದಿವಾಸ್ತ್ರಗಳನ್ನು ಪ್ರಯೋಗಿಸುತ್ತಾ ಆಕ್ರಮಣಿಸಿದನು.

ದ್ರೌಪದೀಹರಣದ ಸಮಯದಲ್ಲಿ ಭೀಮಸೇನನಿಂದ ಪರಾಜಯಗೊಂಡ ಈ ರಾಜನು ಮಾನ್ಯತೆಯಿಂದ ವರವನ್ನು ಅರಸಿ ಮಹಾ ತಪಸ್ಸನ್ನಾಚರಿಸಿದನು. ಇಂದ್ರಿಯಗಳನ್ನು ಇಂದ್ರಿಯಾರ್ಥಗಳಿಂದ ಹಿಂದಿರುಗಿಸಿ, ಪ್ರಿಯವಾದವುಗಳೆಲ್ಲವನ್ನೂ ಹತ್ತಿರಕ್ಕೆ ತೆಗೆದುಕೊಳ್ಳದೇ, ಹಸಿವು-ಬಾಯಾರಿಕೆ-ಬಿಸಿಲನ್ನು ಸಹಿಸಿಕೊಂಡು ತಪಸ್ಸನ್ನಾಚರಿಸಿದ ಅವನು ಕೃಶನಾಗಿ, ದಮನಿಗಳು ಮಾತ್ರವೇ ಕಾಣಿಸಿಕೊಳ್ಳುತ್ತಿರುವ ಹಾಗೆ ಬ್ರಹ್ಮ, ಸನಾತನ, ದೇವ ಶರ್ವನನ್ನು ಆರಾಧಿಸಿದನು. ಭಕ್ತಾನುಕಂಪಿಯಾದ ಭಗವಾನನು ಅವನ ಮೇಲೆ ದಯೆ ತೋರಿಸಿದನು. ಒಮ್ಮೆ ಸ್ವಪ್ನದ ಕೊನೆಯಲ್ಲಿ ಹರನು ಸಿಂಧುಪತಿಯ ಸುತನಿಗೆ ಕಾಣಿಸಿಕೊಂಡು

"ಜಯದ್ರಥ! ನಿನ್ನ ಕುರಿತು ಪ್ರೀತನಾಗಿದ್ದೇನೆ. ವರವನ್ನು

ಕೇಳು. ಏನನ್ನು ಇಚ್ಛಿಸುತ್ತೀಯೆ?”

ಎಂದು ಕೇಳಿದನು. ಶರ್ವನು ಹೀಗೆ ಹೇಳಲು ಸಿಂಧುರಾಜ ಜಯದ್ರಥನು ರುದ್ರನಿಗೆ ಅಂಜಲೀಬದ್ಧನಾಗಿ ನಮಸ್ಕರಿಸಿ ಹೇಳಿದನು:

“ನಾನು ರಣದಲ್ಲಿ ಭೀಮವೀರ್ಯಪರಾಕ್ರಮಿಗಳಾದ ಪಾಂಡವ ಸಮಸ್ತರನ್ನು ಒಬ್ಬನೇ ಯುದ್ಧದಲ್ಲಿ ಎದುರಿಸಬಲ್ಲವನಾಗಬೇಕು”

ಎಂದು. ಹೀಗೇ ಹೇಳಲು ದೇವೇಶನು ಜಯದ್ರಥನಿಗೆ ಹೇಳಿದನು:

“ಸೌಮ್ಯ! ನಿನಗೆ ವರವನ್ನು ಕೊಡುತ್ತೇನೆ. ಪಾರ್ಥ ಧನಂಜಯನ ಹೊರತಾಗಿ ನಾಲ್ವರು ಪಾಂಡುನಂದನರನ್ನು ನೀನು ಸಂಗ್ರಾಮದಲ್ಲಿ ಎದುರಿಸಬಲ್ಲೆ!”

ಹೀಗೆ ಹೇಳಿ ದೇವೇಶನು ರಾಜನನ್ನು ಎಚ್ಚರಿಸಿದನು. ಅವನು ಆ ವರದಾನದಿಂದ ಮತ್ತು ದಿವ್ಯಾಸ್ತ್ರಗಳ ಬಲದಿಂದ ಒಬ್ಬನೇ ಪಾಂಡವರ ಸೇನೆಯನ್ನು ಎದುರಿಸತೊಡಗಿದನು.

ಅವನ ಧನುಸ್ಸು ಮತ್ತು ಚಪ್ಪಾಳೆಯ ಘೋಷದಿಂದ ಶತ್ರುಪಕ್ಷದ ಕ್ಷತ್ರಿಯರಲ್ಲಿ ಭಯವು ಆವೇಶಗೊಂಡಿತು ಮತ್ತು ಕೌರವ ಸೇನೆಯಲ್ಲಿ

ಪರಮ ಹರ್ಷವುಂಟಾಯಿತು. ಭಾರವೆಲ್ಲವೂ ಸೈಂಧವನ ಪಾಲಿಗೆ ಬಂದುದನ್ನು ನೋಡಿ ಕೌರವರ ಕಡೆಯ ಕ್ಷತ್ರಿಯರು ಜೋರಾಗಿ ಗರ್ಜಿಸುತ್ತಾ ಯುಧಿಷ್ಠಿರನ ಸೇನೆಯನ್ನು ಆಕ್ರಮಿಸಿದರು. ಸಾರಥಿಯ ವಶವರ್ತಿಗಳಾದ, ಹೆಚ್ಚು ಭಾರವನ್ನು ಹೊರಬಲ್ಲ, ನಾನಾಪ್ರಕಾರದ ನಡಿಗೆಗಳನ್ನುಳ್ಳ ವಾಯುವಿನ ವೇಗಗತಿಯಿದ್ದ ಅತಿದೊಡ್ಡ ಕುದುರೆಗಳು ಅವನ ರಥವನ್ನು ಕೊಂಡೊಯ್ಯುತ್ತಿದ್ದವು. ಗಂಧರ್ವನಗರಾಕಾರದ, ವಿಧಿವತ್ತಾಗಿ ರಚಿಸಲ್ಪಟ್ಟ ರಥವು ವರಾಹದ ಚಿಹ್ನೆಯ ಬೆಳ್ಳಿಯ ಮಹಾ ಕೇತುವೊಂದಿಗೆ ಶೋಭಿಸುತ್ತಿತ್ತು. ಶ್ವೇತ ಚತ್ರ-ಪತಾಕೆಗಳಿಂದ ಮತ್ತು ಚಾಮರ-ವ್ಯಂಜನಗಳಿಂದ ಮತ್ತು ಇತರ ರಾಜ ಚಿಹ್ನೆಗಳಿಂದ ಅವನು ಅಂಬರದಲ್ಲಿ ತಾರಾಪತಿಯಂತೆ ಕಾಣಿಸಿದನು. ಮುಕ್ತ-ವಜ್ರ-ಮಣಿ-ಸುವರ್ಣಗಳಿಂದ ಭೂಷಿತವಾಗಿದ್ದ ಲೋಹಮಯವಾಗಿದ್ದ ಆ ರಥದ ಕಟಾಂಜನವು ನಕ್ಷತ್ರಗಳಿಂದ ಆವೃತವಾದ ಆಕಾಶದಂತೆ ಪ್ರಕಾಶಿಸುತ್ತಿತ್ತು. ಅವನು ಮಹಾಚಾಪವನ್ನು ಎಳೆದು ಅನೇಕ ಬಾಣಸಮೂಹಗಳನ್ನು ಪ್ರಯೋಗಿಸಿ ಅರ್ಜುನಿಯು ದ್ವಾರವನ್ನಾಗಿಸಿದ್ದ ವ್ಯೂಹದ ಆ ಖಂಡವನ್ನು ಮುಚ್ಚಿಬಿಟ್ಟನು.

ಅವನು ಸಾತ್ಯಕಿಯನ್ನು ಮೂರು ಬಾಣಗಳಿಂದ, ಎಂಟರಿಂದ ವೃಕೋದರನನ್ನು, ಹಾಗೆಯೇ ಧೃಷ್ಟದ್ಯುಮ್ನನನ್ನು ಆರವತ್ತರಿಂದ,

ವಿರಾಟನನ್ನು ಹತ್ತು ಶರಗಳಿಂದ, ದ್ರುಪದನನ್ನು ಐದು ತೀಕ್ಷ್ಣ ಶರಗಳಿಂದ, ಹತ್ತರಿಂದ ಶಿಖಂಡಿಯನ್ನು, ಇಪ್ಪತ್ತೈದರಿಂದ ಕೇಕಯರನ್ನು, ದ್ರೌಪದೇಯರನು ಮೂರು ಮೂರು ಬಾಣಗಳಿಂದ ಮತ್ತು ಯುಧಿಷ್ಠಿರನನ್ನು ಎಪ್ಪತ್ತು ಬಾಣಗಳಿಂದಲೂ ಪ್ರಹರಿಸಿ, ಉಳಿದವರನ್ನೂ ಬಾಣಗಳ ಮಹಾ ಜಾಲಗಳನ್ನು ಸುರಿಸಿ ಓಡಿಸಿಬಿಟ್ಟನು. ಅದೊಂದು ಅದ್ಭುತವಾಗಿತ್ತು. ಆಗ ರಾಜಾ ಧರ್ಮಪುತ್ರನು ನಸುನಗುತ್ತಾ ಹೊಂಬಣ್ಣದ ನಿಶಿತ ಭಲ್ಲವನ್ನು ಪ್ರಯೋಗಿಸಿ ಅವನ ಕಾರ್ಮುಕವನ್ನು ಕತ್ತರಿಸಿದನು. ಕಣ್ಣು ಮುಚ್ಚಿ ತೆಗೆಯುವುದರೊಳಗಾಗಿ ಅವನು ಇನ್ನೊಂದು ಬಿಲ್ಲನ್ನು ಎತ್ತಿಕೊಂಡು ಹತ್ತು ಬಾಣಗಳಿಂದ ಪಾರ್ಥನನ್ನೂ, ಅನ್ಯರನ್ನು ಮೂರು ಮೂರು ಬಾಣಗಳಿಂದಲೂ ಹೊಡೆದನು.

ಅವನ ಆ ಹಸ್ತಲಾಘವನ್ನು ಅರ್ಥಮಾಡಿಕೊಂಡ ಭೀಮನು ಮೂರು ಮೂರು ಬಾಣಗಳಿಂದ ಪುನಃ ಅವನ ಧನುಸ್ಸನ್ನೂ, ಧ್ವಜವನ್ನೂ, ಚತ್ರವನ್ನೂ ಭೂಮಿಯ ಮೇಲೆ ಬೀಳಿಸಿದನು. ಆ ಬಲವಾನನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಹೆದೆಯೇರಿಸಿ ಭೀಮನ ಕೇತು, ಧನುಸ್ಸು ಮತ್ತು ಕುದುರೆಗಳನ್ನು ಕಡಿದು ಉರುಳಿಸಿದನು. ಧನುಸ್ಸನ್ನು ಕಳೆದುಕೊಂಡ ಅವನು ಕುದುರೆಗಳು ಹತವಾಗಿದ್ದ ಆ ಉತ್ತಮ ರಥದಿಂದ ಧುಮುಕಿ ಸಿಂಹವು ಪರ್ವತ ಶಿಖರವನ್ನೇರುವಂತೆ

ಸಾತ್ಯಕಿಯ ರಥವನ್ನೇರಿದನು. ಶ್ರವಣಮಾತ್ರದಿಂದ ನಂಬಲಾಗದ ಪರಮಾದ್ಭುತವಾದ ಸಿಂಧುರಾಜನ ಆ ಸಾಹಸಕರ್ಮವನ್ನು ಪ್ರತ್ಯಕ್ಷವಾಗಿಯೇ ನೋಡಿದ ಕೌರವರ ಕಡೆಯವರು ಸಂಹೃಷ್ಟರಾಗಿ "ಸಾಧು! ಸಾಧು!" ಎಂದು ಕೂಗಿದರು. ಅಸ್ತ್ರತೇಜಸ್ಸಿನಿಂದ ಅವನು ಒಬ್ಬನೇ ಸಂಕ್ರುದ್ಧರಾದ ಪಾಂಡವರನ್ನು ತಡೆಹಿಡಿದ ಅವನ ಆ ಕರ್ಮವನ್ನು ನೋಡಿ ಸರ್ವ ಭೂತಗಳೂ ಅವನನ್ನು ಗೌರವಿಸಿದವು.

ಈ ಮೊದಲು ಸೌಭದ್ರನು ಅನೇಕ ಗಜ-ಯೋಧರನ್ನು ಸಂಹರಿಸಿ ಪಾಂಡವರಿಗೆ ತೋರಿಸಿಕೊಟ್ಟಿದ್ದ ದಾರಿಯನ್ನೇ ಸೈಂಧವನು ಮುಚ್ಚಿಬಿಟ್ಟನು. ಆ ಮತ್ಸ್ಯ-ಪಾಂಚಾಲ-ಕೇಕಯ ವೀರರು ಮತ್ತು ಪಾಂಡವರು ಎಷ್ಟೇ ಪ್ರಯತ್ನಪಟ್ಟರೂ ಸೈಂಧವನನ್ನು ಅಲ್ಲಿಂದ ಕದಲಿಸಲು ಅವರಿಗೆ ಸಾಧ್ಯವಾಗಲಿಲ್ಲ. ಪಾಂಡವರಲ್ಲಿ ಯಾರ್ಯಾರು ದ್ರೋಣನ ವ್ಯೂಹವನ್ನು ಭೇದಿಸಲು ಪ್ರಯತ್ನಿಸುತ್ತಿದ್ದರೋ ಅವರನ್ನು ದೇವವರವನ್ನು ಪಡೆದಿದ್ದ ಸೈಂಧವನು ತಡೆಯುತ್ತಿದ್ದನು. ವಿಜಯೇಚ್ಛುಗಳಾದ ಪಾಂಡವರು ಸೈಂಧವನಿಂದ ತಡೆಯಲ್ಪಡಲು ಕೌರವರ ಮತ್ತು ಪಾಂಡವರ ನಡುವೆ ಅತಿ ಘೋರವಾದ ಯುದ್ಧವು ನಡೆಯಿತು.

## ಅಭಿಮನ್ಯು ಯುದ್ಧ

ಅಷ್ಟರಲ್ಲಿ ಸತ್ಯಸಂಧ ತೇಜಸ್ವಿ ಆರ್ಜುನಿಯು ದುರಾಸದವಾದ ಕೌರವ ಸೇನೆಯನ್ನು ಪ್ರವೇಶಿಸಿ ಮೊಸಳೆಯು ಸಮುದ್ರವನ್ನು ಹೇಗೋ ಹಾಗೆ ಅಲ್ಲೋಲಕಲ್ಲೋಲಗೊಳಿಸಿದನು. ಶರವರ್ಷದಿಂದ ಕ್ಷೋಭೆಗೊಳಿಸುತ್ತಿದ್ದ ಅರಿಂದಮ ಸೌಭದ್ರನನ್ನು ಕುರುಸತ್ತಮ ಪ್ರಧಾನರು ಒಟ್ಟಾಗಿ ಆಕ್ರಮಿಸಿದರು. ಒಟ್ಟಾಗಿ ಸೇರಿ ಶರವರ್ಷಗಳನ್ನು ಸೃಷ್ಟಿಸುತ್ತಿದ್ದ ಅಮಿತೌಜಸರಾದ ಕೌರವರ ಮತ್ತು ಅವನ ನಡುವೆ ದಾರುಣ ಯುದ್ಧವು ನಡೆಯಿತು. ಶತ್ರುಪಕ್ಷದ ರಥಸಮೂಹಗಳಿಂದ ಸುತ್ತುವರೆಯಲ್ಪಟ್ಟ ಆರ್ಜುನಿಯು ವೃಷಸೇನನ ಸಾರಥಿಯನ್ನೂ ಧನುಸ್ಸನ್ನೂ ಕತ್ತರಿಸಿದನು. ಬಲವಾನನು ಜಿಹ್ಮಗ ಶರಗಳಿಂದ ಅವನ ಕುದುರೆಗಳನ್ನೂ ಹೊಡೆಯಲು ವಾಯುವೇಗಸಮನಾದ ಕುದುರೆಗಳು ಅವನ ರಥವನ್ನು ರಣದಿಂದ ಕೊಂಡೊಯ್ದವು. ಅದರ ಮಧ್ಯದಲ್ಲಿ ಅಭಿಮನ್ಯುವಿನ ಸಾರಥಿಯು ರಥವನ್ನು ಮಹಾರಥರ ಮಧ್ಯದಿಂದ ಬೇರೊಂದು ಕಡೆ ಕೊಂಡೊಯ್ಯಲು ಅದನ್ನು ನೋಡಿದ ರಥಸಮೂಹಗಳು ಹೃಷ್ಟರಾಗಿ "ಸಾಧು! ಸಾಧು!" ಎಂದು ಕೂಗಿದರು. ಸಿಂಹದಂತೆ ಸಂಕ್ರುದ್ಧನಾಗಿ ಶರಗಳಿಂದ ಅರಿಗಳನ್ನು ಸಂಹರಿಸುತ್ತಿದ್ದ ಅವನನ್ನು ದೂರದಿಂದಲೇ ನೋಡಿದ ವಸಾತೀಯನು ಬೇಗನೆ ಮುಂದೆ ಬಂದು ಎದುರಿಸಿದನು. ಅವನು ಅಭಿಮನ್ಯುವನ್ನು ಅರವತ್ತು ರುಕ್ಮಪುಂಖಗಳಿಂದ ಮುಚ್ಚಿ "ನಾನು ಜೀವಿಸಿರುವಾಗ ನೀನು

ಜೀವಸಹಿತವಾಗಿ ಹೋಗಲಾರೆ!” ಎಂದು ಹೇಳಿದನು.

ಆಗ ಸೌಭದ್ರನು ಉಕ್ಕಿನ ಕವಚವನ್ನು ಧರಿಸಿದ್ದ ಅವನ ಹೃದಯಕ್ಕೆ ಗುರಿಯಿಟ್ಟು ದೂರಲಕ್ಷ್ಯವಿರುವ ಬಾಣದಿಂದ ಹೊಡೆಯಲು ಅವನು ಅಸುನೀಗಿ ಭೂಮಿಯ ಮೇಲೆ ಬಿದ್ದನು. ವಸಾತಿಯು ಹತನಾದುದನ್ನು ನೋಡಿ ಕ್ರುದ್ಧರಾದ ಕ್ಷತ್ರಿಯಪುಂಗವರು ಅಭಿಮನ್ಯುವನ್ನು ಸಂಹರಿಸಲು ಸುತ್ತುವರೆದರು. ನಾನಾ ರೂಪದ ಅನೇಕ ಚಾಪಗಳನ್ನು ಠೇಂಕರಿಸುತ್ತಿದ್ದ ಅರಿಗಳೊಡನೆ ಸೌಭದ್ರನ ರೌದ್ರ ಯುದ್ಧವು ನಡೆಯಿತು. ಕ್ರುದ್ಧನಾದ ಫಾಲ್ಗುನಿಯು ಅವರ ಶರಗಳನ್ನೂ, ಧನುಸ್ಸುಗಳನ್ನೂ, ಶರೀರಗಳನ್ನೂ, ಕರ್ಣಕುಂಡಲ-ಹಾರಗಳೊಂದಿಗೆ ಶಿರಗಳನ್ನೂ ಕತ್ತರಿಸಿದನು. ಖಡ್ಗಗಳೊಂದಿಗೆ, ಅಂಗುಲಿತ್ರಾಣಗಳೊಂದಿಗೆ, ಪಟ್ಟಿಶ-ಪರಶಾಯುಧಗಳೊಂದಿಗೆ ಹೇಮಾಭರಣ ಭೂಷಿತವಾದ ಭುಜಗಳು ಅದೃಶ್ಯವಾಗುತ್ತಿದ್ದವು. ಮಹಿಯ ಮೇಲೆ ಮಾಲೆಗಳು, ಆಭರಣಗಳು, ವಸ್ತ್ರಗಳು, ಕೆಳಗೆ ಬಿದ್ದಿದ್ದ ಮಹಾಧ್ವಜಗಳು, ಕವಚಗಳು, ಗುರಾಣಿಗಳು, ಹಾರಗಳು, ಮುಕುಟಗಳು, ಚತ್ರ-ಚಾಮರಗಳು, ಯುದ್ಧೋಪಯೋಗಿ ಸಾಮಗ್ರಿಗಳು, ಆಸನಗಳು, ಈಷಾದಂಡಗಳು, ಮೂಕಿಕಂಬಗಳು, ಅಚ್ಚುಮರಗಳು, ಮುರಿದುಹೋದ ಚಕ್ರಗಳು, ಭಗ್ನವಾದ ಅನೇಕ ನೊಗಗಳು, ಹರಿದುಹೋದ ಪತಾಕೆಗಳು, ಅಸುನೀಗಿ ಮಲಗಿದ್ದ

ಸಾರಥಿ-ಕುದುರೆಗಳು, ಮುರಿದ ರಥಗಳು, ಮತ್ತು ಹತವಾದ ಆನೆಗಳು ಹರಡಿ ಬಿದ್ದಿದ್ದವು. ಜಯವನ್ನು ಬಯಸಿದ್ದ ಶೂರ ನಾನಾಜನಪದೇಶ್ವರ ಕ್ಷತ್ರಿಯರು ಹತರಾಗಿ ಬಿದ್ದಿದ್ದ ಭೂಮಿಯು ದಾರುಣವಾಗಿ ಕಂಡಿತು.

ರಣದಲ್ಲಿ ಕ್ರುದ್ಧನಾಗಿ ಎಲ್ಲ ದಿಕ್ಕು-ಉಪದಿಕ್ಕುಗಳಲ್ಲಿ ಸಂಚರಿಸುತ್ತಿದ್ದ ಅಭಿಮನ್ಯುವಿನ ರೂಪವು ಮಧ್ಯ-ಮಧ್ಯದಲ್ಲಿ ಕಾಣಿಸುತ್ತಲೇ ಇರಲಿಲ್ಲ. ಕೇವಲ ಅವನ ಥಳಥಳಿಸುವ ಬಂಗಾರದ ಕವಚ, ಆಭರಣಗಳು, ಧನುಸ್ಸು ಮತ್ತು ಶರಗಳು ಕಾಣುತ್ತಿದ್ದವು. ಸೂರ್ಯನಂತೆ ರಣದ ಮಧ್ಯದಲ್ಲಿ ನಿಂತು ಬಾಣಗಳಿಂದ ಯೋಧರ ಪ್ರಾಣಗಳನ್ನು ಹೀರುತ್ತಿದ್ದ ಅವನನ್ನು ಆಗ ಕಣ್ಣುಗಳನ್ನು ತೆರೆದು ನೋಡಲು ಯಾರಿಗೂ ಸಾಧ್ಯವಾಗುತ್ತಿರಲಿಲ್ಲ.

ಕಾಲವು ಸಮೀಪಿಸಿದಾಗ ಸರ್ವಭೂತಗಳ ಪ್ರಾಣಗಳನ್ನು ತೆಗೆದುಕೊಳ್ಳುವ ಅಂತಕನಂತೆ ಆರ್ಜುನಿಯು ಶೂರರ ಆಯುಸ್ಸುಗಳನ್ನು ಅಪಹರಿದನು. ಶಕ್ರನಂತೆಯೇ ಆ ಶಕ್ರನ ಮಗನ ಮಗ ಬಲಶಾಲೀ ವಿಕ್ರಾಂತ ಅಭಿಮನ್ಯುವು ಆ ಸೇನೆಯನ್ನು ಮಥಿಸುತ್ತಾ ಬಹುವಾಗಿ ಶೋಭಿಸಿದನು. ಕ್ಷತ್ರಿಯೇಂದ್ರರಿಗೆ ಅಂತಕನಂತಿದ್ದ ಅವನು ಶತ್ರು ಸೈನ್ಯವನ್ನು ಪ್ರವೇಶಿಸಿ ವ್ಯಾಘ್ರವು ಜಿಂಕೆಯನ್ನು ಹೇಗೋ ಹಾಗೆ ಸತ್ಯಶ್ರವಸನ ಪ್ರಾಣಗಳನ್ನು ಅಪಹರಿಸಿದನು. ಸತ್ಯಶ್ರವಸನು

ಕೆಳಗುರುಳಲು ಮಹಾರಥರು ತ್ವರೆಮಾಡಿ ವಿಪುಲ ಶಸ್ತ್ರಗಳನ್ನು ಹಿಡಿದು ಅಭಿಮನ್ಯುವನ್ನು ಆಕ್ರಮಣಿಸಿದರು. “ನಾನು ಮೊದಲು! ನಾನು ಮೊದಲು!” ಎಂದು ಸ್ಪರ್ಧಿಸುತ್ತಾ ಅರ್ಜುನಾತ್ಮಜನನ್ನು ಕೊಲ್ಲಲು ಬಯಸಿ ಕ್ಷತ್ರಿಯಪುಂಗವರು ಮುಂದಾದರು. ತನ್ನ ಮೇಲೆ ಬೀಳಲು ಆತುರದಿಂದ ಮುನ್ನುಗ್ಗುತ್ತಿದ್ದ ಕ್ಷತ್ರಿಯರ ಸೇನೆಗಳನ್ನು ಅವನು ಸಮುದ್ರದಲ್ಲಿ ತಿಮಿಂಗಿಲವು ಕ್ಷುದ್ರಮೀನುಗಳನ್ನು ಹೇಗೋ ಹಾಗೆ ಕಬಳಿಸಿದನು. ಪಲಾಯನ ಮಾಡದೇ ಅವನ ಸಮೀಪಕ್ಕೆ ಯಾರೆಲ್ಲ ಹೋಗುತ್ತಿದ್ದರೂ ಅವರು ಸಮುದ್ರಕ್ಕೆ ಸೇರಿದ ನದಿಗಳಂತೆ ಹಿಂದಿರುಗುತ್ತಿರಲಿಲ್ಲ. ಮೊಸಳೆಗೆ ಬಾಯಿಗೆ ಸಿಕ್ಕಿದವರಂತೆ, ಚಂಡಮಾರುತದ ಭಯದಿಂದ ಆರ್ದಿತವಾದವರಂತೆ, ಮತ್ತು ಸಮುದ್ರದಲ್ಲಿ ದಿಕ್ಕುತಪ್ಪಿದ ನೌಕೆಯಂತೆ ಆ ಸೇನೆಯು ನಡುಗಿತು.

ಆಗ ರುಕ್ಮರಥನೆಂಬ ಹೆಸರಿನ ಮದ್ರೇಶ್ವರನ ಬಲಶಾಲೀ ಮಗನು ನಿರ್ಭಯನಾಗಿ ಭಯಗೊಂಡಿದ್ದ ಸೇನೆಗೆ ಆಶ್ವಾಸನೆಯನ್ನು ನೀಡುತ್ತಾ ಹೇಳಿದನು:

> “ಭಯಪಡುವುದನ್ನು ಸಾಕುಮಾಡಿ! ಶೂರರೇ! ನಾನಿರುವಾಗ ನಿಮಗೆ ಯಾವುದೇ ರೀತಿಯ ಭಯಕ್ಕೂ ಕಾರಣವಿಲ್ಲ. ನಾನು ಇವನನ್ನು ಜೀವಸಹಿತ ಹಿಡಿಯುತ್ತೇನೆ. ಅದರಲ್ಲಿ

ಸಂಶಯವಿಲ್ಲ.”

ಹೀಗೆ ಹೇಳಿ ಆ ವೀರ್ಯವಾನನು ಸುಕಲ್ಪಿತ ರಥದಲ್ಲಿ ವಿರಾಜಿಸುತ್ತಾ ಸೌಭದ್ರನನ್ನು ಆಕ್ರಮಿಸಿದನು. ಅವನು ಅಭಿಮನ್ಯುವಿನ ವಕ್ಷಸ್ಥಳಕ್ಕೆ ಮತ್ತು ಮೂರು ಮೂರು ನಿಶಿತ ಶರಗಳಿಂದ ಅವನ ಎಡ-ಬಲ ಬಾಹುಗಳನ್ನೂ ಹೊಡೆದು ಗರ್ಜಿಸಿದನು. ಆಗ ಫಾಲ್ಗುಣಿಯು ಅವನ ಧನುಸ್ಸನ್ನೂ, ಎಡ-ಬಲ ಭುಜಗಳನ್ನೂ, ಸುಂದರ ಕಣ್ಣು-ಹುಬ್ಬುಗಳಿಂದ ಕೂಡಿದ್ದ ಶಿರವನ್ನೂ ಕತ್ತರಿಸಿ ಭೂಮಿಯ ಮೇಲೆ ಬೀಳಿಸಿದನು.

ಜೀವಂತವಾಗಿ ಹಿಡಿಯಲು ಬಯಸಿದ್ದ ಶಲ್ಯನ ಮಾನಿನೀ ಪುತ್ರ ರುಕ್ಮರಥನು ಯಶಸ್ವಿನೀ ಸೌಭದ್ರನಿಂದಲೇ ಹತನಾದುದನ್ನು ನೋಡಿ ಸಂಗ್ರಾಮದುರ್ಮದರಾದ, ಪ್ರಹಾರಿಗಳಾದ, ಶಲ್ಯಪುತ್ರನ ಮಿತ್ರ ರಾಜಪುತ್ರ ಮಹಾರಥರು ಸುವರ್ಣಧ್ವಜಗಳೊಂದಿಗೆ ನಾಲ್ಕು ಮೊಳಗಳ ಧನುಸ್ಸುಗಳನ್ನು ಟೇಂಕರಿಸುತ್ತಾ ಆರ್ಜುನಿಯನ್ನು ಶರವರ್ಷಗಳಿಂದ ಎಲ್ಲ ಕಡೆಗಳಿಂದಲೂ ಸುತ್ತುವರೆದರು. ಸಮರದಲ್ಲಿ ಶೂರ ಅಪರಾಜಿತ ಸೌಭದ್ರನು ಒಬ್ಬನೇ ಅನೇಕ ಶೂರ-ಶಿಕ್ಷಾಬಲೋಪೇತ-ತರುಣ-ಅಮರ್ಷರ ಶರವೃಷ್ಟಿಯಿಂದ ಮುಸುಕಿದ್ದುದನ್ನು ನೋಡಿ ಹೃಷ್ಟನಾದ ದುರ್ಯೋಧನನು ಅವನು ವೈವಸ್ವತನ ಭವನಕ್ಕೆ ಹೋದನೆಂದೇ ತಿಳಿದನು. ಸುವರ್ಣ

ಪುಂಖಗಳಿದ್ದ, ನಾನಾ ಚಿಹ್ನೆಗಳಿಂದೊಡಗೂಡಿದ, ಮೂರು ಮೂರು ತೀಕ್ಷ್ಣ ಶರಗಳಿಂದ ಆ ನೃಪಾತ್ಮಜರು ಆರ್ಜುನಿಯನ್ನು ಒಂದು ನಿಮಿಷ ಕಾಣಿಸದಂತೆಯೇ ಮಾಡಿ ಬಿಟ್ಟರು. ಮುಳ್ಳುಹಂದಿಯ ಶರೀರದಂತೆ ಅವನೂ ಅವನ ಸೂತನೂ, ಕುದುರೆಗಳೂ, ಧ್ವಜವೂ, ರಥವೂ ಬಾಣಗಳಿಂದ ಚುಚ್ಚಲ್ಪಟ್ಟರು. ಆಳವಾಗಿ ಗಾಯಗೊಂಡು ಕ್ರುದ್ಧನಾದ ಅವನು ಅಂಕುಶದಿಂದ ತಿವಿಯಲ್ಪಟ್ಟ ಆನೆಯಂತೆ ಘೀಳಿಟ್ಟನು. ಮತ್ತು ಗಾಂಧರ್ವಾಸ್ತ್ರವನ್ನು ಪ್ರಯೋಗಿಸಿ ರಥಮಾಯೆಯನ್ನು ಬಳಸಿದನು. ಅರ್ಜುನನು ತಪಸ್ಸುಮಾಡಿ ತುಂಬುರು ಪ್ರಮುಖ ಗಂಧರ್ವರಿಂದ ಯಾವ ಅಸ್ತ್ರವನ್ನು ಪಡೆದಿದ್ದನೋ ಅದನ್ನೇ ತನ್ನ ಮಗನಿಗೂ ಉಪದೇಶಿಸಿದ್ದನು. ಅದನ್ನು ಬಳಸಿ ಅವನು ಶತ್ರುಗಳನ್ನು ಮೋಹಿಸಿದನು. ಬೆಂಕಿಯ ಕೊಳ್ಳಿಯ ಚಕ್ರದಂತೆ ಒಬ್ಬನೇ ನೂರಾಗಿಯೂ ಸಹಸ್ರವಾಗಿಯೂ ಕಾಣಿಸುತ್ತಾ ಬೇಗನೇ ಅಸ್ತ್ರಗಳನ್ನು ಪ್ರದರ್ಶಿಸಿದನು.

ರಥದ ಚಲನೆ ಮತ್ತು ಅಸ್ತ್ರಗಳಿಂದ ಮೋಹಿಸಿ ಆ ಪರಂತಪನು ನೂರಾರು ಮಹೀಕ್ಷಿತರ ಶರೀರಗಳನ್ನು ಭೇದಿಸಿದನು. ಪ್ರಾಣವಿರುವವರ ಪ್ರಾಣಗಳನ್ನು ರಣದಲ್ಲಿ ನಿಶಿತ ಶರಗಳಿಂದ ಪರಲೋಕಕ್ಕೆ ಕಳುಹಿಸಲು ಶರೀರಗಳು ಭೂಮಿಯ ಮೇಲೆ ಬಿದ್ದವು. ಫಾಲ್ಗುನಿಯು ನಿಶಿತ ಭಲ್ಲಗಳಿಂದ ಅವರ ಧನುಸ್ಸುಗಳನ್ನೂ, ಕುದುರೆಗಳನ್ನೂ,

ಸಾರಥಿಗಳನ್ನೂ, ಧ್ವಜಗಳನ್ನೂ, ಅಂಗದಗಳೊಡನೆ ಬಾಹುಗಳನ್ನೂ ಶಿರಗಳನ್ನೂ ಕತ್ತರಿಸಿದನು. ಫಲವನ್ನು ಕೊಡಲಿರುವ ಐದುವರ್ಷದ ಮಾವಿನ ಮರವು ಸಿಡುಲಿಗೆ ಸಿಲುಕಿ ಭಗ್ನವಾಗುವಂತೆ ಆ ನೂರು ರಾಜಪುತ್ರರು ಸೌಭದ್ರನಿಂದ ಭಗ್ನರಾಗಿ ಹೋದರು. ಕ್ರುದ್ಧ ಸರ್ಪದ ವಿಷದಂತಿದ್ದ ಅ ಸುಖೋಚಿತ ಸುಕುಮಾರರೆಲ್ಲರೂ ಒಬ್ಬನಿಂದನೇ ನಿಹತರಾದುದನ್ನು ನೋಡಿ ದುರ್ಯೋಧನನು ಭೀತನಾದನು. ರಥಿಗಳು, ಆನೆಗಳು, ಕುದುರೆಗಳು ಮತ್ತು ಪದಾತಿಗಳು ಅವನಿಂದ ನಾಶವಾಗುತ್ತಿರುವುದನ್ನು ನೋಡಿ ಸಹಿಸಿಕೊಳ್ಳಲಾರದೇ ದುರ್ಯೋಧನನು ಬೇಗನೇ ಅವನನ್ನು ಆಕ್ರಮಣಿಸಿದನು. ಅವರಿಬ್ಬರ ನಡುವೆ ನಡೆದ ಒಂದೇ ಕ್ಷಣದ ಸಂಗ್ರಾಮದಲ್ಲಿ ನೂರಾರು ಶರಗಳಿಂದ ಗಾಯಗೊಂಡ ದುರ್ಯೋಧನನು ವಿಮುಖನಾದನು.

ಮುಖವು ಒಣಗಿ ಹೋಗಿ, ಕಣ್ಣುಗಳು ತಿರುಗುತ್ತಿರಲು, ಶರೀರಗಳು ಬೆವತಿರಲು, ರೋಮಗಳು ನಿಮಿರೆದ್ದು, ಪಲಾಯನದಲ್ಲಿಯೇ ಉತ್ಸಾಹಿಗಳಾಗಿ, ಶತ್ರುಗಳನ್ನು ಜಯಿಸುವುದರಲ್ಲಿ ನಿರುತ್ಸಾಹಿಗಳಾಗಿ, ಹತರಾಗಿದ್ದ ಸಹೋದರರು-ಪಿತೃಗಳು-ಪುತ್ರರು-ಮಿತ್ರರು-ಸಂಬಂಧಿಗಳು-ಬಾಂಧವರನ್ನು ಅಲ್ಲಲ್ಲಿಯೇ ಬಿಟ್ಟು ತಾವು ಕುಳಿತಿದ್ದ ಕುದುರೆ ಆನೆಗಳನ್ನು ಅವಸರ ಪಡಿಸುತ್ತಾ ಓಡಿ ಹೋಗುತ್ತಿದ್ದರು.

ಅವರು ಹಾಗೆ ಪ್ರಭಗ್ನರಾದುದನ್ನು ನೋಡಿ ದ್ರೋಣ, ದ್ರೌಣಿ, ಬೃಹದ್ಬಲ, ಕೃಪ, ದುರ್ಯೋಧನ, ಕರ್ಣ, ಕೃತವರ್ಮ, ಮತ್ತು ಸೌಬಲರು ಸಂಕ್ರುದ್ಧರಾಗಿ ಅಪರಾಜಿತ ಸೌಭದ್ರನನ್ನು ಆಕ್ರಮಣಿಸಿದರು. ಅವರನ್ನೂ ಕೂಡ ಹೆಚ್ಚುಪಾಲು ಅಭಿಮನ್ಯುವು ವಿಮುಖರನ್ನಾಗಿ ಮಾಡಿದನು.

## ಲಕ್ಷ್ಮಣ ವಧೆ

ಆದರೆ ಅವರಲ್ಲಿ ಒಬ್ಬ – ಸುಖದಲ್ಲಿಯೇ ಬೆಳೆದಿದ್ದ, ಬಾಲ್ಯದಿಂದಲೂ ದರ್ಪ-ಭಯಗಳನ್ನು ತೊರೆದಿದ್ದ, ಇಷ್ವಸ್ತ್ರಗಳನ್ನು ಚೆನ್ನಾಗಿ ತಿಳಿದಿದ್ದ, ಮಹಾತೇಜಸ್ವಿ ಲಕ್ಷ್ಮಣನು ಆರ್ಜುನಿಯನ್ನು ಎದುರಿಸಿದನು. ಮಗನ ಮೇಲಿನ ಪ್ರೀತಿಯಿಂದ ಅವನ ತಂದೆ ದುರ್ಯೋಧನನೂ ಅವನನ್ನು ಹಿಂಬಾಲಿಸಿದನು. ಇತರ ಮಹಾರಥರೂ ಹಿಂದಿರುಗಿದರು. ಮೋಡಗಳು ಮಳೆಗರೆದು ಪರ್ವತವನ್ನು ಮುಚ್ಚುವಂತೆ ಅವನು ಮತ್ತು ಅವನ ಅನುಯಾಯಿಗಳು ಬಾಣಗಳಿಂದ ಅವನನ್ನು ಮುಚ್ಚಿಬಿಟ್ಟರು. ಮದಿಸಿದ ಸಲಗವನ್ನು ಇನ್ನೊಂದು ಮದಿಸಿದ ಸಲಗವು ಎದುರಿಸುವಂತೆ ರಣದಲ್ಲಿ ಕಾರ್ಷ್ಣಿಯು ತನ್ನ ತಂದೆಯ ಸಮೀಪದಲ್ಲಿಯೇ ನಿಂತು ಕಾರ್ಮುಕವನ್ನು ಎತ್ತಿ ಹಿಡಿದಿದ್ದ ಧೃತರಾಷ್ಟ್ರನ ಮೊಮ್ಮಗ, ದುರ್ಧರ್ಷ, ನೋಡಲು ಸುಂದರನಾಗಿದ್ದ,

ಅತ್ಯಂತ ಸುಖದಲ್ಲಿ ಬೆಳೆದಿದ್ದ, ಧನೇಶ್ವರನ ಮಗನಂತಿದ್ದ ಶೂರ ಲಕ್ಷ್ಮಣನನ್ನು ಎದುರಿಸಿದನು. ಎದುರಿಸಲು ಪರವೀರಹ ಸೌಭದ್ರನು ಲಕ್ಷ್ಮಣನ ನಿಶಿತ ತೀಕ್ಷ್ಣ ಶರಗಳಿಂದ ಬಾಹುಗಳು ಮತ್ತು ಎದೆಯಲ್ಲಿ ಹೊಡೆಯಲ್ಪಟ್ಟನು. ಕೋಲಿನಿಂದ ಹೊಡೆಯಲ್ಪಟ್ಟ ಸರ್ಪದಂತೆ ಸಂಕ್ರುದ್ಧನಾದ ಅವನು ಲಕ್ಷ್ಮಣನಿಗೆ ಹೇಳಿದನು:

> “ಈ ಲೋಕವನ್ನೆಲ್ಲ ಒಮ್ಮೆ ಚೆನ್ನಾಗಿ ನೋಡಿಕೋ! ಇನ್ನೊಂದು ಲೋಕಕ್ಕೆ ಹೋಗಲಿರುವೆ. ಬಾಂಧವರೆಲ್ಲರೂ ನೋಡುತ್ತಿರುವಂತೆ ನಿನ್ನನ್ನು ನಾನು ಯಮಸಾದನಕ್ಕೆ ಕಳುಹಿಸುತ್ತೇನೆ!”

ಹೀಗೆ ಹೇಳಿ ಪರವೀರಹ ಮಹಾಬಾಹು ಸೌಭದ್ರನು ಪೊರೆಬಿಟ್ಟ ಸರ್ಪದಂತಿದ್ದ ಭಲ್ಲವನ್ನು ತೆಗೆದು ಪ್ರಯೋಗಿಸಿದನು. ಅದು ಸುಂದರನಾಗಿದ್ದ ಲಕ್ಷ್ಮಣನ ಸುಂದರ ಮೂಗು, ಸುಂದರ ಹುಬ್ಬು, ಮುಂಗುರುಳುಗಳ ಕುಂಡಲಗಳನ್ನು ಧರಿಸಿದ್ದ ಶಿರವನ್ನು ಅಪಹರಿಸಿತು. ಲಕ್ಷ್ಮಣನು ಹತನಾದುದನ್ನು ನೋಡಿ ಜನರು ಹಾಹಾಕಾರ ಮಾಡಿದರು. ತನ್ನ ಪ್ರಿಯಪುತ್ರನು ಕೆಳಗುರುಳಲು ಕ್ರುದ್ಧನಾಗಿ ಕ್ಷತ್ರಿಯರ್ಷಭ ದುರ್ಯೋಧನನು “ಇವನನ್ನು ಕೊಲ್ಲಿ!” ಎಂದು ಕ್ಷತ್ರಿಯರಿಗೆ ಕೂಗಿ ಹೇಳಿದನು. ಆಗ ದ್ರೋಣ, ಕೃಪ, ಕರ್ಣ, ದ್ರೋಣಪುತ್ರ, ಬೃಹದ್ಬಲ,

ಕೃತವರ್ಮ ಈ ಷಡ್ರಥರು ಅವನನ್ನು ಮುತ್ತಿಗೆ ಹಾಕಿದರು. ಅವರನ್ನು ನಿಶಿತ ಬಾಣಗಳಿಂದ ಗಾಯಗೊಳಿಸಿ ವಿಮುಖರನ್ನಾಗಿ ಮಾಡಿ ಆರ್ಜುನಿಯು ಕ್ರುದ್ಧನಾಗಿ ವೇಗದಿಂದ ಸೈಂಧವನ ಮಹಾಬಲದ ಮೇಲೆ ಎರಗಿದನು. ಅವನನ್ನು ದಾರಿಯಲ್ಲಿಯೇ ಗಜಸೇನೆಯಿಂದ ರಕ್ಷಿತರಾದ ಕಲಿಂಗರು, ನಿಷಾದರು ಮತ್ತು ವೀರ್ಯವಾನ್ ಕ್ರಾಥಪುತ್ರನು ಅವನನ್ನು ಆಕ್ರಮಣಿಸಿದರು. ಆಗಲೇ ಇತ್ಯರ್ಥವಾಗುವಂತಹ ಯುದ್ಧವು ನಡೆಯಿತು.

ಆರ್ಜುನಿಯು ಆ ಗಜಸೇನೆಯನ್ನು ಅಂಬರದಲ್ಲಿರುವ ನೂರಾರು ಕಪ್ಪು ಮೋಡಗಳನ್ನು ಭಿರುಗಾಳಿಯು ಚದುರಿಸುತ್ತದೆಯೋ ಹಾಗೆ ಚೆಲ್ಲಾಪಿಲ್ಲಿ ಮಾಡಿದನು. ಆಗ ಕ್ರಾಥನು ಶರವ್ರಾತಗಳಿಂದ ಆರ್ಜುನಿಯನ್ನು ಮುಸುಕಿದನು. ಅಷ್ಟರಲ್ಲಿಯೇ ದ್ರೋಣಪ್ರಮುಖ ರಥರು ಹಿಂದಿರುಗಿ ಬಂದು ಪುನಃ ಪರಮಾಸ್ತ್ರಗಳನ್ನು ಪ್ರಯೋಗಿಸುತ್ತಾ ಸೌಭದ್ರನನ್ನು ಆಕ್ರಮಣಿಸಿದರು. ಅವುಗಳನ್ನು ತಪ್ಪಿಸಿಕೊಂಡು ಆರ್ಜುನಿಯು ತ್ವರೆಮಾಡಿ ಅವನನ್ನು ಕೊಲ್ಲಲು ಬಯಸಿ ಕ್ರಾಥಪುತ್ರನನ್ನು ಅಪ್ರಮೇಯ ಶರೌಘದಿಂದ ಹೊಡೆದನು. ಅವುಗಳು ಧನುಸ್ಸು-ಬಾಣ-ಕೇಯೂರಗಳೊಂದಿಗೆ ಅವನ ಬಾಹುಗಳನ್ನೂ, ಮುಕುಟ ಧರಿಸಿದ ಶಿರವನ್ನೂ, ಚತ್ರ-ಧ್ವಜಗಳನ್ನೂ, ಸಾರಥಿ-ಕುದುರೆಗಳನ್ನೂ ಕೆಳಗೆ

ಬೀಳಿಸಿದವು. ಕುಲ-ಶೀಲ-ಶಿಕ್ಷಣ-ಶಕ್ತಿ, ಕೀರ್ತಿ ಮತ್ತು ಅಸ್ತ್ರಬಲಗಳಿಂದ ಕೂಡಿದ ಅವನು ಹತನಾಗಲು ನಿಮ್ಮವರಲ್ಲಿ ಪ್ರಾಯಶಃ ಎಲ್ಲ ವೀರರೂ ಯುದ್ಧದಿಂದ ಹಿಮ್ಮೆಟ್ಟಿದರು.

## ಬೃಹದ್ಬಲ ವಧೆ

ಪಾಂಡುನಂದನ ಅಭಿಮನ್ಯುವು ಪ್ರವೇಶಿಸುತ್ತಲೇ ಕೌರವರ ಸರ್ವ ಪಾರ್ಥಿವರನ್ನೂ ವಿಮುಖರನ್ನಾಗಿ ಮಾಡಿದನು. ಅವನನ್ನಾದರೋ ದ್ರೋಣ, ಕೃಪ, ಕರ್ಣ, ದ್ರೌಣಿ, ಬೃಹದ್ಬಲ ಮತ್ತು ಕೃತವರ್ಮ ಈ ಷಡ್ರಥರು ಸುತ್ತುವರೆದರು. ಸೈಂಧವನ ಮೇಲೆ ಗುರುತರ ಭಾರವಿದ್ದುದನ್ನು ನೋಡಿ ಕೌರವ ಸೈನ್ಯವು ಯುಧಿಷ್ಠಿರನನ್ನು ಆಕ್ರಮಣಿಸಿತು. ಇತರ ವೀರರು ತಾಲಮಾತ್ರದ ಚಾಪಗಳನ್ನು ಟೇಂಕರಿಸುತ್ತಾ ಸೌಭದ್ರನ ಮೇಲೆ ಶರಾಂಬುಗಳನ್ನು ಸುರಿಸಿದರು. ಪರವೀರಹ ಸೌಭದ್ರನು ಆ ಎಲ್ಲ ಮಹೇಷ್ವಾಸರನ್ನೂ ಸರ್ವವಿದ್ಯೆಗಳಲ್ಲಿಯೂ ಪರಿಣಿತರಾಗಿದ್ದವರನ್ನು ಬಾಣಗಳಿಂದ ತಡೆಗಟ್ಟಿದನು. ದ್ರೋಣನನ್ನು ಐವತ್ತರಿಂದ ಮತ್ತು ಬೃಹದ್ಬಲನನ್ನು ಇಪ್ಪತ್ತರಿಂದ ಹೊಡೆದು, ಕೃತವರ್ಮನನ್ನು ಎಂಭತ್ತು ಮತ್ತು ಕೃಪನನ್ನು ಅರವತ್ತು ಶಿಲೀಮುಖಗಳಿಂದ ಹೊಡೆದು, ಆರ್ಜುನಿಯು ಅಶ್ವತ್ಥಾಮನನ್ನು ರುಕ್ಮಪುಂಖಗಳ ಮಹಾವೇಗದ ಹತ್ತು ಬಾಣಗಳನ್ನು

ಕಿವಿಯವರೆಗೆ ಎಳೆದು ಹೊಡೆದನು. ಫಾಲ್ಗುನಿಯು ಶತ್ರುಗಳ ಮಧ್ಯದಲ್ಲಿದ್ದ ಕರ್ಣನ ಕಿವಿಗೆ ಡೊಂಕಾಗಿದ್ದ ಪೀತ ನಿಶಿತ ಪರಮ ಬಾಣದಿಂದ ಹೊಡೆದನು. ಕೃಪನ ಎರಡೂ ಅಶ್ವಗಳನ್ನೂ ಇಬ್ಬರು ಪಾರ್ಷ್ಣಿಸಾರಥಿಗಳನ್ನೂ ಹೊಡೆದುರುಳಿಸಿ ಅವನ ಎದೆಗೆ ಹತ್ತು ಬಾಣಗಳಿಂದ ಹೊಡೆದನು. ಆಗ ಕೌರವ ಪುತ್ರರು ಮತ್ತು ವೀರರು ನೋಡುತ್ತಿದ್ದಂತೆಯೇ ಆ ಬಲಶಾಲಿಯು ಕುರುಗಳ ಕೀರ್ತಿವರ್ಧನ ವೀರ ವೃಂದಾರಕನನ್ನು ಸಂಹರಿಸಿದನು. ಶ್ರೇಷ್ಠ ಅಮಿತ್ರರೊಂದಿಗೆ ಭಯಗೊಳ್ಳದೇ ಯುದ್ಧಮಾಡುತ್ತಿದ್ದ ಆ ಶ್ರೇಷ್ಠನನ್ನು ದ್ರೌಣಿಯು ಇಪ್ಪತ್ತೈದು ಕ್ಷುದ್ರಕಗಳಿಂದ ಹೊಡೆದನು. ಆರ್ಜುನಿಯಾದರೋ ಕೂಡಲೇ ಧಾರ್ತರಾಷ್ಟ್ರರು ನೋಡುತ್ತಿದ್ದಂತೆಯೇ ಅಶ್ವತ್ಥಾಮನನ್ನು ನಿಶಿತ ಬಾಣಗಳಿಂದ ತಿರುಗಿ ಹೊಡೆದನು. ಅವನನ್ನು ದ್ರೌಣಿಯು ಅರವತ್ತು ತಿಗ್ಮಧಾರೆ, ತೇಜಸ್ವಿ ಉಗ್ರ ಬಾಣಗಳಿಂದ ಹೊಡೆಯಲು ಅವನು ಮೈನಾಕ ಪರ್ವತದಂತೆ ನಡುಗದೇ ನಿಂತಿದ್ದನು. ಆ ಮಹಾತೇಜಸ್ವಿ ಬಲವಾನನು ದ್ರೌಣಿಯನ್ನು ತಿರುಗಿ ಎಪ್ಪತ್ಮೂರು ಹೇಮಪುಂಖ ಜಿಹ್ಮಗಗಳಿಂದ ಹೊಡೆದನು. ಪುತ್ರನ ಮೇಲಿನ ಪ್ರೀತಿಯಿಂದ ದ್ರೋಣನು ಅಭಿಮನ್ಯುವಿನ ಮೇಲೆ ನೂರು ಬಾಣಗಳನ್ನು ಪ್ರಯೋಗಿಸಿದನು. ಮತ್ತು ರಣದಲ್ಲಿ ತಂದೆಯನ್ನು ರಕ್ಷಿಸುವ ಸಲುವಾಗಿ ಅಶ್ವತ್ಥಾಮನು ಅಭಿಮನ್ಯುವಿನ ಮೇಲೆ ಎಂಟು ಬಾಣಗಳನ್ನೂ,

ಕರ್ಣನು ಇಪ್ಪತ್ತೆರಡು ಭಲ್ಲಗಳನ್ನು, ಕೃತವರ್ಮನು ಹದಿನಾಲ್ಕು, ಬೃಹದ್ಬಲನು ಐವತ್ತನ್ನೂ, ಕೃಪ ಶಾರದ್ವತನು ಹತ್ತನ್ನು ಪ್ರಹರಿಸಿದರು. ಅವರೆಲ್ಲರನ್ನೂ ತಿರುಗಿ ಹತ್ತು ಹತ್ತು ಬಾಣಗಳಿಂದ ಹೊಡೆದು ಸೌಭದ್ರನು  ಎಲ್ಲೆಡೆಗಳಿಂದ ನಿಶಿತ ಶರಗಳಿಂದ ಅವರನ್ನು ಗಾಯಗೊಳಿಸಿದನು. ಅವನ ಎದೆಗೆ ಗುರಿಯಿಟ್ಟು ಕೋಸಲಾಧಿಪ ಬೃಹದ್ಬಲನು ಕರ್ಣಿಯನ್ನು ಪ್ರಯೋಗಿಸಿದನು. ಆಗ ಅವನು ಅವನ ಕುದುರೆಗಳನ್ನೂ, ಧ್ವಜವನ್ನೂ, ಚಾಪವನ್ನೂ, ಸೂತನನ್ನೂ ನೆಲಕ್ಕುರುಳಿಸಿದನು. ಆಗ ವಿರಥನಾದ ಕೋಸಲರಾಜನು ಖಡ್ಗ-ಗುರಾಣಿಗಳನ್ನು ಹಿಡಿದು ಫಾಲ್ಗುನಿಯ ಶರೀರದಿಂದ ಕುಂಡಲ ಸಹಿತ ಶಿರಸ್ಸನ್ನು ಅಪಹರಿಸಲು ಮುಂದಾದನು. ಅವನು ಕೋಸಲರ ಒಡೆಯ ರಾಜಪುತ್ರ ಬೃಹದ್ಬಲನ ಎದೆಯನ್ನು ಬಾಣದಿಂದ ಹೊಡೆಯಲು ಅವನು ಹೃದಯವೊಡೆದು ಬಿದ್ದನು. ಅಶಿವ ಮಾತುಗಳನ್ನಾಡುತ್ತಾ ಖಡ್ಗ-ಕಾರ್ಮುಕಗಳನ್ನು ಹಿಡಿದು ಬರುತ್ತಿದ್ದ ಹತ್ತು ಸಾವಿರ ಮಹಾತ್ಮರನ್ನು ಸದೆಬಡಿದನು. ಹಾಗೆ ಬೃಹದ್ಬಲನನ್ನು ಸಂಹರಿಸಿ ಸೌಭದ್ರನು ರಣದಲ್ಲಿ ಕೌರವ ಮಹೇಷ್ವಾಸ ಯೋಧರನ್ನು ಶರಾಂಬುಗಳಿಂದ ಮುಚ್ಚಿ ಭಯಪಡಿಸುತ್ತಾ ಸಂಚರಿಸಿದನು.

## ಅಭಿಮನ್ಯುವು ವಿರಥನಾದುದು

ಪುನಃ ಫಾಲ್ಗುನಿಯು ಕರ್ಣನ ಕಿವಿಗಳಿಗೆ ಡೊಂಕಾದ ಶರದಿಂದ ಹೊಡೆದನು. ಅವನು ಇನ್ನೂ ತುಂಬಾ ಕೋಪಗೊಂಡು ಐವತ್ತು ಶರಗಳಿಂದ ಅವನನ್ನು ಹೊಡೆದನು. ರಾಧೇಯನೂ ಅಷ್ಟೇ ಬಾಣಗಳಿಂದ ಅವನನ್ನು ಪ್ರಹರಿಸಿದನು. ಸರ್ವಾಂಗಗಳಲ್ಲಿ ಬಾಣಗಳಿಂದ ಚುಚ್ಚಲ್ಪಟ್ಟಿದ್ದ ಅಭಿಮನ್ಯುವು ಆಗ ಬಹಳವಾಗಿ ಶೋಭಿಸಿದನು. ಅವನೂ ಕೂಡ ಕ್ರುದ್ಧನಾಗಿ ಕರ್ಣನು ಗಾಯಗೊಂಡು ರಕ್ತವನ್ನು ಸುರಿಸುವಂತೆ ಮಾಡಿದನು. ಶೂರ ಕರ್ಣನೂ ಕೂಡ ಶರಗಳಿಂದ ಗಾಯಗೊಂಡು ರಕ್ತದಿಂದ ತೋಯ್ದು ಬಹಳವಾಗಿ ಶೋಭಿಸಿದನು. ಅವರಿಬ್ಬರು ಮಹಾತ್ಮರೂ ಶರಗಳಿಂದ ಚುಚ್ಚಲ್ಪಟ್ಟು, ರಕ್ತದಿಂದ ತೋಯ್ದು ಹೂಬಿಟ್ಟ ಮುತ್ತುಗದ ಮರಗಳಂತೆ ಕಂಡರು. ಆಗ ಸೌಭದ್ರನು ಕರ್ಣನ ಶೂರರೂ ಚಿತ್ರಯೋಧಿಗಳೂ ಆದ ಆರು ಸಚಿರವರನ್ನು ಅವರ ಅಶ್ವ-ಸೂತ-ಧ್ವಜ-ರಥಗಳೊಂದಿಗೆ ಸಂಹರಿಸಿದನು. ಮತ್ತೆ ಸಂಭ್ರಾಂತನಾಗದೇ ಇತರ ಮಹೇಷ್ವಾಸರನ್ನು ಹತ್ತು ಹತ್ತು ಶರಗಳಿಂದ ಹೊಡೆದನು. ಅದೊಂದು ಅದ್ಭುತವಾಗಿತ್ತು. ಪುನಃ ಅವನು ಆರು ಜಿಹ್ಮಗಗಳಿಂದ ಮಾಗಧನ ಮಗನನ್ನು ಹೊಡೆದು ಕುದುರೆಗಳು ಮತ್ತು ಸಾರಥಿಗಳೊಂದಿಗೆ ಅಶ್ವಕೇತುವನ್ನು ಉರುಳಿಸಿದನು. ಅನಂತರ ಆನೆಯ ಧ್ವಜವನ್ನು ಹೊಂದಿದ್ದ ಮಾರ್ತಿಕಾವತದ ರಾಜ ಭೋಜನನ್ನು ಕ್ಷುರಪ್ರದಿಂದ ಸಂಹರಿಸಿ

ಶರಗಳನ್ನು ಪ್ರಯೋಗಿಸುತ್ತಾ ಸಿಂಹನಾದಗೈದನು.

ದುಃಶಾಸನನ ಮಗನು ಅವನ ನಾಲ್ಕು ಕುದುರೆಗಳನ್ನು ನಾಲ್ಕರಿಂದ, ಸೂತನನ್ನು ಒಂದರಿಂದ ಮತ್ತು ಹತ್ತರಿಂದ ಅರ್ಜುನನ ಮಗನನ್ನು ಹೊಡೆದನು. ಆಗ ಕಾರ್ಷ್ಣಿಯು ದೌಃಶಾಸನಿಯನ್ನು ಏಳು ಆಶುಗಗಳಿಂದ ಹೊಡೆದು ಕ್ರೋಧದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ ಜೋರಾಗಿ ಕೂಗಿ ಹೇಳಿದನು:

> "ನಿನ್ನ ತಂದೆಯು ಹೇಡಿಯಂತೆ ಹೇಗೆ ಯುದ್ಧವನ್ನು ಬಿಟ್ಟು ಹೋದನೋ ಹಾಗೆ ನೀನೂ ಸಹ ಯುದ್ಧಮಾಡಲು ಕಲಿತಿರುವೆಯಲ್ಲವೇ? ಆದರೆ ಇಂದು ನಿನ್ನನ್ನು ಜೀವಸಹಿತವಾಗಿ ಬಿಡುವುದಿಲ್ಲ!"

ಹೀಗೆ ಹೇಳಿ ಅವನು ಕಮ್ಮಾರನಿಂದ ಪರಿಷ್ಕೃತವಾದ ನಾರಾಚವನ್ನು ಅವನ ಮೇಲೆ ಪ್ರಯೋಗಿಸಲು ದ್ರೌಣಿಯು ಅದನ್ನು ಮೂರು ಬಾಣಗಳಿಂದ ಕತ್ತರಿಸಿದನು. ಆರ್ಜುನಿಯು ಅವನ ಧ್ವಜವನ್ನು ಕತ್ತರಿಸಿ ಮೂರರಿಂದ ಶಲ್ಯನನ್ನು ಹೊಡೆದನು. ಅವನನ್ನು ಶಲ್ಯನು ಒಂಭತ್ತು ಹದ್ದಿನ ಗರಿಗಳನ್ನುಳ್ಳ ಶರಗಳಿಂದ ಹೊಡೆದನು. ಆರ್ಜುನಿಯು ಅವನ ಧ್ವಜವನ್ನು ತುಂಡರಿಸಿ, ಪಾರ್ಶ್ವರಕ್ಷಕರಿಬ್ಬರನ್ನೂ ಸಂಹರಿಸಿ, ಲೋಹಮಯವಾದ ಆರು ಬಾಣಗಳಿಂದ ಶಲ್ಯನನ್ನು ಪ್ರಹರಿಸಿದನು.

ಅವನು ಬೇರೆಯೇ ರಥವನ್ನೇರಿದನು. ಅನಂತರ ಶತ್ರುಂಜಯ, ಚಂದ್ರಕೇತು, ಮೇಘವೇಗ, ಸುವರ್ಚಸ ಮತ್ತು ಸೌರ್ಯಭಾಸ ಈ ಐವರನ್ನು ಸಂಹರಿಸಿ, ಸೌಬಲನನ್ನು ಹೊಡೆದನು. ಸೌಬಲನು ಅವನನ್ನು ಮೂರುಬಾಣಗಳಿಂದ ಹೊಡೆದು ದುರ್ಯೋಧನನಿಗೆ ಹೇಳಿದನು:

> "ಇವನು ನಮ್ಮಲ್ಲಿ ಒಬ್ಬೊಬ್ಬರನ್ನೇ ಆರಿಸಿಕೊಂಡು ಸಂಹರಿಸುವ ಮೊದಲು ನಾವೆಲ್ಲರೂ ಒಟ್ಟಾಗಿ ಸೇರಿ ಇವನನ್ನು ಸಂಹರಿಸೋಣ!"

ಆಗ ವೈಕರ್ತನ ಕರ್ಣನೂ ಕೂಡ ದ್ರೋಣನೊಡನೆ ಇದರ ಕುರಿತೇ ಕೇಳಿದನು:

> "ಇವನು ಸರ್ವರನ್ನೂ ಕೊಲ್ಲುವ ಮೊದಲೇ ಇವನನ್ನು ವಧಿಸುವ ಉಪಾಯವನ್ನು ಹೇಳಿ."

ಆಗ ಮಹೇಷ್ವಾಸ ದ್ರೋಣನು ಅವರೆಲ್ಲರಿಗೆ ಉತ್ತರಿಸಿದನು:

> "ಕುಮಾರನಲ್ಲಿ ಯಾವುದೇ ರೀತಿಯ ಸ್ವಲ್ಪ ದೋಷವೂ ಇಲ್ಲದಿರುವುದನ್ನು ನೀವು ನೋಡಿದಿರಿ. ತನ್ನ ತಂದೆಯಂತೆ ಇಂದು ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸುತ್ತಿರುವ ಈ ಪಾಂಡವೇಯ ನರಸಿಂಹನ ಶೀಘ್ರತೆಯನ್ನು ನೋಡಿರಿ.

ರಥಮಾರ್ಗಗಳಲ್ಲಿ ಇವನ ಧನುರ್ಮಂಡಲವೇ ಕಾಣುತ್ತದೆ. ಇವನು ಶೀಘ್ರವಾಗಿ ವಿಶಿಖೆಗಳನ್ನು ಸಂಧಾನಮಾಡುತ್ತಾನೆ ಮತ್ತು ಬಿಡುತ್ತಾನೆ ಕೂಡ! ಸಾಯಕಗಳಿಂದ ನನ್ನ ಪ್ರಾಣಗಳನ್ನು ಸಂಕಟಗೊಳಿಸಿ ಮೋಹಿತನನ್ನಾಗಿಸುತ್ತಿದ್ದರು ಪರವೀರಹ ಸೌಭದ್ರನು ಬಾರಿ ಬಾರಿಗೂ ನನಗೆ ಹರ್ಷವನ್ನು ನೀಡುತ್ತಿದ್ದಾನೆ. ರಣದಲ್ಲಿ ಸಂಚರಿಸುತ್ತಿರುವ ಈ ಸೌಭದ್ರನು ನನಗೆ ಅತಿಯಾದ ಆನಂದವನ್ನು ನೀಡುತ್ತಿದ್ದಾನೆ. ಇವನಿಂದ ಗಾಯಗೊಂಡ ಮಹಾರಥರೂ ಕೂಡ ಇವನಲ್ಲಿ ದೋಷವನ್ನು ಕಾಣುವುದಿಲ್ಲ. ಹಸ್ತ ಲಾಘವದಿಂದ ಎಲ್ಲ ದಿಕ್ಕುಗಳನ್ನೂ ಬಾಣಗಳಿಂದ ಮುಚ್ಚುತ್ತಿರುವ ಇವನು ಮತ್ತು ರಣದಲ್ಲಿ ಗಾಂಡೀವಧನ್ವಿಯ ನಡುವೆ ಯಾವ ವ್ಯತ್ಯಾಸವನ್ನೂ ನಾನು ಕಾಣತ್ತಿಲ್ಲ!”

ಆಗ ಅರ್ಜುನಿಯ ಶರಗಳಿಂದ ಪೀಡಿತನಾಗುತ್ತಿದ್ದ ಕರ್ಣನು ಪುನಃ ದ್ರೋಣನಿಗೆ ಹೇಳಿದನು:

“ಅಭಿಮನ್ಯುವಿನಿಂದ ಪೀಡಿತನಾಗಿದ್ದರೂ ಓಡಿಹೋಗಬಾರದೆಂದು ನಿಂತಿದ್ದೇನೆ. ಈ ತೇಜಸ್ವೀ ಕುಮಾರನ ಪರಮದಾರುಣ ಘೋರ ಪಾವಕನ ತೇಜಸ್ಸುಳ್ಳ

ಶರಗಳು ಇಂದು ನನ್ನ ಹೃದಯವನ್ನು ಸೀಳುತ್ತಿವೆ.”

ಕರ್ಣನಿಗೆ ಆಚಾರ್ಯನು ನಗುತ್ತಿರುವಂತೆ ಮೆಲ್ಲಗೆ ಹೇಳಿದನು:

“ಇವನ ಕವಚವು ಅಭೇದ್ಯವಾದುದು. ಇವನಿನ್ನೂ ಯುವಕ. ತನ್ನ ಪರಾಕ್ರಮವನ್ನು ಬಹುಬೇಗ ಪ್ರಕಟಿಸುವ ಸಾಮರ್ಥ್ಯವುಳ್ಳವನು. ಇವನ ತಂದೆಗೆ ನಾನು ಕವಚಧಾರಣವಿಧಿಯನ್ನು ಹೇಳಿಕೊಟ್ಟಿದ್ದೆನು. ಅದನ್ನೇ ಸಂಪೂರ್ಣವಾಗಿ ಈ ಪರಪುರಂಜಯನು ತಿಳಿದುಕೊಂಡಿದ್ದಾನೆ ಎನ್ನುವುದು ಸತ್ಯ. ಆದರೆ ಏಕಾಗ್ರಚಿತ್ತವುಳ್ಳವರು ಇವನ ಧನುಸ್ಸನ್ನೂ ಶಿಂಜಿನಿಯನ್ನೂ ಬಾಣಗಳಿಂದ ಕತ್ತರಿಸಲು ಸಾಧ್ಯವಿದೆ. ಅನಂತರ ಕುದುರೆಗಳ ಕಡಿವಾಣಗಳನ್ನು ಕತ್ತರಿಸಿ ಅವುಗಳನ್ನೂ ಪರ್ಶ್ವಸಾರಥಿಗಳನ್ನೂ ಸಂಹರಿಸಬಹುದು. ರಾಧೇಯ! ಸಾಧ್ಯವಾದರೆ ಇದನ್ನು ಮಾಡು! ಹೀಗೆ ಇವನನ್ನು ವಿಮುಖನಾಗುವಂತೆ ಮಾಡಿ ನಂತರ ಅವನ ಮೇಲೆ ಪ್ರಹರಣ ಮಾಡು. ಧನುಸ್ಸಿನೊಂದಿರುವ ಇವನನ್ನು ಗೆಲ್ಲಲು ಸುರಾಸುರರಿಗೂ ಶಕ್ಯವಿಲ್ಲ. ಆದುದರಿಂದ ಇಚ್ಛಿಸುವೆಯಾದರೆ ಇವನನ್ನು ವಿರಥನನ್ನಾಗಿಯೂ ಧನುಸ್ಸು ಇಲ್ಲದವನನ್ನಾಗಿಯೂ

ಮಾಡು!”

ಆಚಾರ್ಯನ ಆ ಮಾತನ್ನು ಕೇಳಿ ವೈಕರ್ತನ ಕರ್ಣನು ತ್ವರೆಮಾಡಿ ಶೀಘ್ರ ಬಾಣಗಳಿಂದ ಆ ಲಘುಹಸ್ತನ ಧನುಸ್ಸನ್ನು ಕತ್ತರಿಸಿದನು. ಆಗ ಭೋಜ ಕೃತವರ್ಮನು ಅವನ ಕುದುರೆಗಳನ್ನೂ, ಗೌತಮನು ಪಾರ್ಶ್ವಸಾರಥಿಗಳನ್ನು ಸಂಹರಿಸಿದರು. ಧನುಸ್ಸನ್ನು ಕಳೆದುಕೊಂಡಿದ್ದ ಅವನನ್ನು ಉಳಿದವರು ಶರವರ್ಷಗಳಿಂದ ಮುಚ್ಚಿದರು. ಅವಸರ ಮಾಡಬೇಕಾಗಿದ್ದ ಆ ಸಮಯದಲ್ಲಿ ಷಣ್ಮಹಾರಥರು ತ್ವರೆಮಾಡಿ ವಿರಥನಾಗಿದ್ದ ಏಕಾಕಿಯಾಗಿದ್ದ ಬಾಲಕನನ್ನು ನಿಷ್ಕರುಣೆಯಿಂದ ಶರವರ್ಷಗಳಿಂದ ಮುಚ್ಚಿಬಿಟ್ಟರು. ಆ ಚಿನ್ನಧನ್ವಿ ವಿರಥ ಶ್ರೀಮಾನನು ಸ್ವಧರ್ಮವನ್ನು ಅನುಸರಿಸಿ ಖಡ್ಗ-ಗುರಾಣಿಗಳನ್ನು ಹಿಡಿದು ಆಕಾಶಕ್ಕೆ ಹಾರಿದನು. ಕೈಶಿಕಾದಿ ಮಾರ್ಗಗಳಿಂದಲೂ ಲಘುತ್ವ ಮತ್ತು ಬಲದಿಂದ ಆರ್ಜುನಿಯು ಪಕ್ಷಿಯಂತೆ ಆಕಾಶದಲ್ಲಿ ಚೆನ್ನಾಗಿ ಸಂಚರಿಸಬಲ್ಲವನಾಗಿದ್ದನು. ಖಡ್ಗವನ್ನು ಹಿಡಿದಿರುವ ಅವನು ನನ್ನ ಮೇಲೆಯೇ ಬೀಳುತ್ತಾನೆ ಎಂದು ಸಮರದಲ್ಲಿ ಮಹೇಷ್ವಾಸರು ಭಾವಿಸಿಕೊಂಡು ಮೇಲೆ ನೋಡುತ್ತಿದ್ದರು. ದ್ರೋಣನು ಅವನ ಮುಷ್ಟಿಯಲ್ಲಿದ್ದ ಮಣಿಮಯ ಹಿಡಿಯಿದ್ದ ಖಡ್ಗವನ್ನು ಕತ್ತರಿಸಿದನು. ರಾಧೇಯನು ನಿಶಿತ ಬಾಣಗಳಿಂದ ಅವನ ಉತ್ತಮ ಗುರಾಣಿಯನ್ನು

ಸೀಳಿದನು. ಖಡ್ಗ-ಗುರಾಣಿಗಳನ್ನು ಕಳೆದುಕೊಂಡು, ಸಂಪೂರ್ಣ ಅಂಗಗಳಲ್ಲಿ ಬಾಣಗಳಿಂದ ಚುಚ್ಚಲ್ಪಟ್ಟಿದ್ದ ಅವನು ಪುನಃ ಭೂಮಿಗಿಳಿದನು.

ಅಲ್ಲಿದ್ದ ಚಕ್ರವನ್ನೇ ಹಿಡಿದು ಕ್ರುದ್ಧನಾಗಿ ದ್ರೋಣನ ಕಡೆ ಧಾವಿಸಿದನು. ಆಗ ಚಕ್ರದ ಧೂಳು ಮತ್ತು ಕಾಂತಿಯಿಂದ ಶೋಭಿತಾಂಗನಾಗಿದ್ದ ಅವನು ಚಕ್ರವನ್ನು ಎತ್ತಿ ಹಿಡಿತು ಅತೀವವಾಗಿ ಪ್ರಕಾಶಿಸುತ್ತಿದ್ದನು. ರಣದಲ್ಲಿ ವಾಸುದೇವನ ನಡುಗೆಯನ್ನೇ ಅನುಕರಿಸುತ್ತಿದ್ದ ಅಭಿಮನ್ಯುವು ಒಂದು ಕ್ಷಣ ಘೋರನಾಗಿ ಕಂಡನು. ಸುರಿಯುತ್ತಿದ್ದ ರಕ್ತದಿಂದ ಅವನ ವಸ್ತ್ರಗಳು ಕೆಂಪಾಗಿದ್ದವು. ಗಂಟಿಕ್ಕಿಕೊಂಡಿದ್ದ ಅವನ ಹುಬ್ಬುಗಳ ಮಧ್ಯವು ಸ್ಪಷ್ಟವಾಗಿ ಕಾಣುತ್ತಿರಲು ಅವನು ಸಿಂಹನಾದಗೈದನು. ರಣದಲ್ಲಿ ನೃಪವರರ ಮಧ್ಯದಲ್ಲಿ ಆ ಅಮಿತ ಬಲಶಾಲಿ, ಅಭಿಮನ್ಯುವು ತುಂಬಾ ವಿರಾಜಿಸಿದನು.

## ಅಭಿಮನ್ಯು ವಧೆ

ವಿಷ್ಣುವಿನ ಅಳಿಯ, ಆನಂದದಾಯಕ, ವಿಷ್ಣುವಿನ ಆಯುಧ ಭೂಷಿತನಾದ ಆ ಅತಿರಥನು ಯುದ್ಧದಲ್ಲಿ ಅಪರ ಜನಾರ್ದನನಂತೆಯೇ ರಾರಾಜಿಸಿದನು. ಮುಂಗುರುಳುಗಳು ಗಾಳಿಯಲ್ಲಿ



ಹಾರಾಡುತ್ತಿರಲು, ಶ್ರೇಷ್ಠವಾದ ಚಕ್ರಾಯುಧವನ್ನು ಮೇಲೆತ್ತಿ ಹಿಡಿದಿದ್ದ, ಸುರರಿಗೂ ನೋಡಲಿಕ್ಕೆ ಸಿಗದ ಅವನ ಆ ರೂಪವನ್ನು ಪೃಥ್ವೀಶರು ಕಂಡರು. ಉದ್ವಿಗ್ನರಾದ ಅವರು ಆ ಚಕ್ರವನ್ನು ಅನೇಕ ಭಾಗಗಳಾಗಿ

ತುಂಡರಿಸಿದರು. ಆಗ ಮಹಾರಥ ಕಾರ್ಷ್ಣಿಯು ಮಹಾಗದೆಯನ್ನು ಎತ್ತಿಕೊಂಡನು. ಶತ್ರುಗಳಿಂದ ಧನುಸ್ಸು, ರಥ, ಖಡ್ಗ ಮತ್ತು ಚಕ್ರಗಳಿಲ್ಲದಂತೆ ಮಾಡಿಸಿಕೊಂಡ ಅಭಿಮನ್ಯುವು ಗದೆಯನ್ನು ಹಿಡಿದು ಅಶ್ವತ್ಥಾಮನ ಮೇಲೆ ಎರಗಿದನು. ವಜ್ರಾಯುಧದಂತಿದ್ದ ಆ ಗದೆಯನ್ನು ಮೇಲೆತ್ತಿ ಬರುತ್ತಿರುವ ಅವನನ್ನು ನೋಡಿ ನರರ್ಷಭ ಅಶ್ವತ್ಥಾಮನು ತಾನು ನಿಂತಿದ್ದ ರಥದಿಂದ ಮೂರು ಹೆಜ್ಜೆಗಳಷ್ಟು ಹಿಂದೆ ಸರಿದನು. ಗದೆಯಿಂದ ಅವನ ಕುದುರೆಗಳನ್ನೂ ಇಬ್ಬರು ಪಾರ್ಶ್ವಸಾರಥಿಗಳನ್ನೂ ಕೊಂದನು. ಅಂಗಾಂಗಳಲೆಲ್ಲಾ ಶರಗಳಿಂದ ಚುಚ್ಚಲ್ಪಟ್ಟಿದ್ದ ಸೌಭದ್ರನು ಮುಳ್ಳುಹಂದಿಯಂತೆಯೇ ಕಂಡನು. ಅನಂತರ ಅವನು ಸುಬಲನ ಮಗ ಕಾಲಕೇಯನನ್ನು ಕೆಳಗುರುಳಿಸಿ ಅವನ ಎಪ್ಪತ್ತೇಳು ಗಾಂಧಾರ ಅನುಚರರನ್ನು ಸಂಹರಿಸಿದನು. ಪುನಃ ಅವನು ಗದೆಯಿಂದ ಬ್ರಹ್ಮವಸಾತೀಯ ಹತ್ತು ರಥಿಗಳನ್ನು ಸಂಹರಿಸಿದನು. ಹತ್ತು ಆನೆಗಳನ್ನು ಕೊಂದು ಕೇಕಯರ ಏಳು ರಥಗಳನ್ನು ನೆಲಸಮಮಾಡಿದನು. ಹಾಗೆಯೇ ದೌಃಶಾಸನಿಯ ರಥವನ್ನು ಅಶ್ವಗಳೊಂದಿಗೆ ಧ್ವಂಸಮಾಡಿದನು.

ಆಗ ದೌಃಶಾಸನಿಯು ಕ್ರುದ್ಧನಾಗಿ ಗದೆಯನ್ನು ಮೇಲೆತ್ತಿ “ನಿಲ್ಲು! ನಿಲ್ಲು!” ಎಂದು ಹೇಳುತ್ತಾ ಸೌಭದ್ರನ ಮೇಲೆ ಎರಗಿದನು. ಅನ್ಯೋನ್ಯರನ್ನು ವಧಿಸಲು ಬಯಸಿ ಅವರಿಬ್ಬರು ಭ್ರಾತೃಗಳೂ ಹಿಂದೆ ತ್ರ್ಯಂಬಕ-

ಅಂತಕರಂತೆ ಪರಸ್ಪರರನ್ನು ಗದೆಯಿಂದ ಪ್ರಹರಿಸಿದರು. ಗದೆಗಳ ಅಗ್ರಭಾಗಗಳಿಂದ ಪೆಟ್ಟುತಿಂದು ಮೇಲಿನಿಂದ ಬಿದ್ದ ಇಂದ್ರಧ್ವಜಗಳಂತೆ ಇಬ್ಬರೂ ಭೂಮಿಯ ಮೇಲೆ ಬಿದ್ದರು. ಒಡನೆಯೇ ಕುರುಗಳ ಕೀರ್ತಿವರ್ಧಕ ದೌಃಶಾಸನಿಯು ಮೇಲೆದ್ದು ಮೇಲೇಳುತ್ತಿರುವ ಸೌಭದ್ರನ ತಲೆಗೆ ಗದೆಯಿಂದ ಹೊಡೆದನು. ಮಹಾವೇಗಯುಕ್ತವಾದ ಗದಾ ಪ್ರಹಾರದಿಂದಲೂ ಹೆಚ್ಚಿನ ಶ್ರಮದಿಂದಲೂ ವಿಮೋಹಿತನಾಗಿದ್ದ ಪರವೀರಹ ಸೌಭದ್ರನು ಅಸುನೀಗಿ ಭೂಮಿಯ ಮೇಲೆ ಬಿದ್ದನು. ಹೀಗೆ ಅನೇಕರು ಆಹವದಲ್ಲಿ ಏಕಾಂಗಿಯಾಗಿದ್ದವನನ್ನು ಸಂಹರಿಸಿದರು.

ಸರೋವರವನ್ನು ಆನೆಯು ಕ್ಷೋಭೆಗೊಳಿಸುವಂತೆ ಆ ವೀರನು ಸೇನೆಯನ್ನು ಅಲ್ಲೋಲಕಲ್ಲೋಲಗೊಳಿಸಿ ವ್ಯಾಧರಿಂದ ಬೇಟೆಯಾಡಲ್ಪಟ್ಟ ಕಾಡಾನೆಯಂತೆ ಹತನಾಗಿ ಶೋಭಿಸಿದನು. ಹೀಗೆ ಕೆಳಗೆಬಿದ್ದ ಆ ಶೂರನನ್ನು ಕೌರವರು ಸುತ್ತುವರೆದರು. ಶಿಶಿರ ಋತುವಿನ ಅಂತ್ಯದಲ್ಲಿ ಅರಣ್ಯವನ್ನು ಸುಟ್ಟು ಶಾಂತನಾದ ಪಾವಕನಂತಿದ್ದ, ಮರ-ಶಿಖರಗಳನ್ನು ಕೆಳಗುರುಳಿಸಿ ಶಾಂತವಾದ ಭಿರುಗಾಳಿಯಂತಿದ್ದ, ಭಾರತವಾಹಿನಿಯನ್ನು ಸುಟ್ಟು ಅಸ್ತಂಗತನಾದ ಆದಿತ್ಯನಂತಿದ್ದ, ರಾಹುಗ್ರಸ್ತನಾದ ಚಂದ್ರನಂತಿದ್ದ, ಬತ್ತಿಹೋದ ಸಾಗರದಂತಿದ್ದ, ಪೂರ್ಣಚಂದ್ರನ ಕಾಂತಿಯಿಂದ ಬೆಳಗುತ್ತಿದ್ದ, ಮುಂಗುರುಳುಗಳು

ಮುಚ್ಚಿದ ಕಣ್ಣುಗಳಿಂದ ಕೂಡಿದ ಮುಖದ ಅವನು ಭೂಮಿಯ ಮೇಲೆ ಬಿದ್ದುದನ್ನು ನೋಡಿ ಕೌರವರ ಕಡೆಯ ಮಹಾರಥರು ಪರಮ ಹರ್ಷಿತರಾಗಿ ಒಟ್ಟಾಗಿ ಮತ್ತೆ ಮತ್ತೆ ಸಿಂಹನಾದಗೈದರು. ಅವರಿಗೆ ಪರಮ ಹರ್ಷವುಂಟಾಯಿತು. ಆದರೆ ಇತರ ವೀರರ ಕಣ್ಣುಗಳು ನೀರಿನಿಂದ ತುಂಬಿದವು. ಅಂಬರದಿಂದ ಚಂದ್ರನು ಬಿದ್ದಂತೆ ಬಿದ್ದಿರುವ ಆ ವೀರನನ್ನು ನೋಡಿ ಅಂತರಿಕ್ಷದಲ್ಲಿ ಇರುವವರು ಕಿರುಚಿಕೊಂಡರು:

> "ದ್ರೋಣ-ಕರ್ಣರೇ ಪ್ರಮುಖರಾದ ಧಾರ್ತರಾಷ್ಟ್ರರ ಆರು ಮಹಾರಥರಿಂದ ಈ ಒಬ್ಬನೇ ನಿಹತನಾಗಿ ಮಲಗಿದ್ದಾನೆ! ಇದು ಧರ್ಮವಲ್ಲವೆಂಬುದು ನಮ್ಮ ಮತ!"

ಆ ವೀರನು ಹತನಾಗಲು ರಣಾಂಗಣವು ಪೂರ್ಣಚಂದ್ರನಿಂದ ಕೂಡಿದ ನಕ್ಷತ್ರಗಣಮಾಲಿನೀ ಆಕಾಶದಂತೆ ಬಹುವಾಗಿ ಶೋಭಿಸಿತು. ರುಕ್ಮಪುಂಖಗಳಿಂದ, ಸಂಪೂರ್ಣವಾಗಿ ರಕ್ತದಲ್ಲಿ ತೋಯ್ದುಹೋಗಿದ್ದ ವೀರರ ಶಿರಗಳಿಂದ, ಹೊಳೆಯುತ್ತಿದ್ದ ಕುಂಡಲಗಳಿಂದ, ಪತಾಕೆಗಳಿಂದ ಸಂವೃತವಾಗಿದ್ದ ವಿಚಿತ್ರ ಪರಿಸ್ತೋಮಗಳಿಂದ, ಚಾಮರಗಳಿಂದ, ಬಣ್ಣದ ಕಂಬಳಿಗಳಿಂದ, ಹರಡಿದ್ದ ಉತ್ತಮ ವಸ್ತ್ರಗಳಿಂದ, ರಥ-ಅಶ್ವ-ನರ-ನಾಗಗಳ ಹೊಳೆಯುತ್ತಿರುವ ಅಲಂಕಾರಗಳಿಂದ, ಪೊರೆಬಿಟ್ಟ ಸರ್ಪಗಳಂತಿದ್ದ ಪೀತಲದ ನಿಶಿತ ಖಡ್ಗಗಳಿಂದ, ಮುರಿದಿದ್ದ ಚಾಪ-

ವಿಶಿಖಗಳಿಂದ, ಶಕ್ತಿ-ಋಷ್ಟಿ-ಪ್ರಾಸ-ಕಂಪನಗಳಿಂದ, ಅನ್ಯ ವಿವಿಧ ಆಯುಧಗಳಿಂದ ತುಂಬಿ ಭೂಮಿಯು ಶೋಭಿಸಿತು. ಸೌಭದ್ರನಿಂದ ಕೆಳಗುರುಳಿಸಲ್ಪಟ್ಟ ನಿರ್ಜೀವ ಕುದುರೆಗಳು ಮತ್ತು ರಕ್ತದಿಂದ ತೋಯ್ದು ಹೋಗಿ ಆರೋಹಿಗಳೊಡನೆ ಸ್ವಲ್ಪ ಸ್ವಲ್ಪವೇ ಉಸಿರಾಡುತ್ತಿದ್ದ ಕುದುರೆಗಳಿಂದ ರಣಭೂಮಿಯು ವಿರುತಿಟ್ಟಾಗಿತ್ತು. ಅಂಕುಶಗಳಿಂದ, ಮಾವುತರಿಂದ, ಕವಚಗಳಿಂದ, ಆಯುಧಗಳಿಂದ, ಕೇತುಗಳಿಂದ, ಮತ್ತು ವಿಶಿಖಗಳಿಂದ ಸಂಹರಿಸಲ್ಪಟ್ಟ ಪರ್ವತಗಳಂತಿರುವ ಆನೆಗಳಿಂದ ರಣರಂಗವು ಹರಡಿ ಹೋಗಿತ್ತು. ಅಶ್ವ-ಸಾರಥಿ-ಯೋಧರಿಂದ ವಿಹೀನವಾದ ರಥಗಳು ನುಚ್ಚುನೂರಾಗಿ ಅಲ್ಲೋಲಕಲ್ಲೋಲವಾಗಿರುವ, ಸತ್ತುಬಿದ್ದಿರುವ ಸರ್ಪಗಳಿಂದ ಕೂಡಿದ ಮಡುವುಗಳಂತೆ ಶೋಭಿಸುತ್ತಿದ್ದವು. ವಿವಿಧಾಯುಧಭೂಷಣಗಳೊಂದಿಗೆ ಹತರಾಗಿ ಬಿದ್ದಿದ್ದ ಪದಾತಿಸೇನೆಗಳಿಂದ ರಣಭೂಮಿಯು ಹೇಡಿಗಳಿಗೆ ಭಯವನ್ನುಂಟುಮಾಡುವ ಘೋರರೂಪವನ್ನು ತಾಳಿತ್ತು. ಚಂದ್ರ-ಸೂರ್ಯರ ಕಾಂತಿಯನ್ನು ಹೊಂದಿದ್ದ ಅವನು ಭೂಮಿಯ ಮೇಲೆ ಬಿದ್ದುದನ್ನು ನೋಡಿ ಕೌರವರಿಗೆ ಪರಮ ಸಂತೋಷವಾಯಿತು ಮತ್ತು ಪಾಂಡವರಿಗೆ ವ್ಯಥೆಯಾಯಿತು. ಇನ್ನೂ ಯೌವನವನ್ನು ಪಡೆಯದಿದ್ದ ಕುಮಾರ ಅಭಿಮನ್ಯುವು ಹತನಾಗಲು ಧರ್ಮರಾಜನು

ನೋಡುತ್ತಿದ್ದಂತೆಯೇ ಎಲ್ಲ ಸೇನೆಗಳೂ ಓಡಿ ಹೋಗತೊಡಗಿದವು. ಸೌಭದ್ರನು ಕೆಳಗುರುಳಲು ಸೀಳಿಹೋದ ಸೇನೆಯನ್ನು ನೋಡಿ ಅಜಾತಶತ್ರುವು ತನ್ನ ವೀರರಿಗೆ ಈ ಮಾತನ್ನಾಡಿದನು:

> "ಪರಾಙ್ಮುಖನಾಗದೇ ಹತನಾದ ಈ ಶೂರನು ಸ್ವರ್ಗಕ್ಕೇ ಹೋಗಿದ್ದಾನೆ. ನೀವೆಲ್ಲರೂ ಧೈರ್ಯತಾಳಿರಿ. ಹೆದರಬೇಡಿ. ರಣದಲ್ಲಿ ರಿಪುಗಳನ್ನು ನಾವು ಗೆಲ್ಲುತ್ತೇವೆ!"

ಈ ರೀತಿಯಾಗಿ ದುಃಖಿತನಾಗಿದ್ದ ಮಹಾತೇಜಸ್ವಿ ಮಹಾದ್ಯುತಿ, ಯೋಧರಲ್ಲಿ ಶ್ರೇಷ್ಠ ಧರ್ಮರಾಜನು ಹೇಳಿ ದುಃಖವನ್ನು ಕಡಿಮೆಮಾಡಿದನು. ಯುದ್ಧದಲ್ಲಿ ಸರ್ಪವಿಷಸಮಾನರಾದ ಅನೇಕ ರಾಜಪುತ್ರರನ್ನು ರಣದಲ್ಲಿ ಮೊದಲು ಸಂಹರಿಸಿ ಅನಂತರ ಸಂಗ್ರಾಮದಲ್ಲಿ ಆರ್ಜುನಿಯು ತೀರಿಕೊಂಡನು. ಹತ್ತು ಸಾವಿರರನ್ನು ಮತ್ತು ಮಹಾರಥ ಕೌಸಲ್ಯನನ್ನೂ ಸಂಹರಿಸಿ ಕೃಷ್ಣಾರ್ಜುನರ ಸಮನಾದ ಕಾರ್ಷ್ಣಿಯು ಶಕ್ರನ ಮನೆಗೆ ಹೋಗಿರುವುದು ನಿಶ್ಚಯ. ಸಹಸ್ರಾರು ರಥ-ಅಶ್ವ-ನರ-ಮಾತಂಗಗಳನ್ನು ನಾಶಪಡೆಸಿಯೂ ಅವನು ಸಂಗ್ರಾಮದಲ್ಲಿ ಅತೃಪ್ತನಾಗಿದ್ದನು. ಪುಣ್ಯಕರ್ಮಗಳನ್ನೆಸಗಿದ ಅವನು ಅಶೋಚ್ಯನೇ ಸರಿ. ಕೌರವರಾದರೋ ಪಾಂಡವರಲ್ಲಿ ಶ್ರೇಷ್ಠನಾದವನನ್ನು ಸಂಹರಿಸಿ ಅವನ ಶರಗಳಿಂದ ಪೀಡಿತರಾಗಿ,

ರಕ್ತದಲ್ಲಿ ತೋಯ್ದು, ಸಾಯಂಕಾಲದ ಹೊತ್ತಿಗೆ ಬಿಡಾರಗಳಿಗೆ ಹಿಂದಿರುಗಿದರು. ಕೌರವರು ಮತ್ತು ಪಾಂಡವರು ರಣರಂಗವನ್ನು ತಿರುಗಿ ತಿರುಗಿ ನೋಡುತ್ತಾ ಮೆಲ್ಲ ಮೆಲ್ಲನೇ ಹಿಂದಿರುಗಿದರು. ಅವರು ಶೋಕಗ್ರಸ್ತರಾಗಿ ಬುದ್ಧಿಕೆಟ್ಟವರಾಗಿ ಹಿಂದಿರುಗಿದರು. ಆಗ ಕಮಲದ ಮಾಲೆಯ ಕಾಂತಿಯ ದಿವಾಕರನು ಪರ್ವತವನ್ನೇರಿ ಕೆಳಗಿಳಿಯುತ್ತಿರಲು, ರಾತ್ರಿ ಮತ್ತು ದಿವಸದ ಸಂಧಿಯು ನರಿಗಳ ಅಮಂಗಳಕರ ಕೂಗಿನಿಂದ ಅದ್ಭುತವಾಯಿತು. ಶ್ರೇಷ್ಠ ಖಡ್ಗ-ಶಕ್ತಿ-ಋಷ್ಠಿ-ರಥ-ಗುರಾಣಿಗಳ ಮತ್ತು ವಿಭೂಷಣಗಳ ಪ್ರಭೆಗಳನ್ನು ಹೀರಿಕೊಳ್ಳುತ್ತಾ, ಅಂತರಿಕ್ಷ-ಭೂಮಿಗಳನ್ನು ಸಮಾನವೆನ್ನಿಸುವಂತೆ ಮಾಡುತ್ತಾ ಭಾನುವು ತನ್ನ ಪ್ರಿಯ ಪಾವಕನಲ್ಲಿ ಸೇರಿಕೊಂಡನು.

ಮಹಾಮೇಘಸಮೂಹಸದೃಶವಾದ, ಪರ್ವತಶಿಖರ ಸದೃಶವಾದ ದೊಡ್ಡ ದೊಡ್ಡ ಆನೆಗಳು ವಜ್ರಾಯುಧದಿಂದ ಹತವಾದವುಗಳಂತೆ ವೈಜಯಂತಿ-ಅಂಕುಶ-ಕವಚ-ಮಾವುತರ ಸಹಿತ ಅಸುನೀಗಿ ಕೆಳಗೆ ಬಿದ್ದು ರಣರಂಗದ ಹಾದಿಗಳನ್ನೇ ಮುಚ್ಚಿಬಿಟ್ಟಿದ್ದವು. ಒಡೆಯರು ಹತರಾಗಿ, ಯುದ್ಧ ಸಾಮಗ್ರಿಗಳು ಚೆಲ್ಲಿ ಹರಡಿ, ಕುದುರೆ-ಸಾರಥಿಗಳು ಹತರಾಗಿ, ಪತಾಕೆ-ಕೇತುಗಳನ್ನು ಕಳೆದುಕೊಂಡು ಮುರಿದು ಬಿದ್ದಿದ್ದ ಮಹಾರಥಗಳು ರಣರಂಗದಲ್ಲಿ ಶತ್ರುಗಳಿಂದ ಧ್ವಂಸಗೊಂಡ

ಪುರಗಳಂತೆ ಶೋಭಿಸಿದವು. ಮುರಿದ ರಥಗಳೂ ಮತ್ತು ಸತ್ತುಹೋದ ಕುದುರೆಗಳೂ, ಅವುಗಳ ಸವಾರರೂ ಗುಂಪು ಗುಂಪಾಗಿ ಬಿದ್ದಿದ್ದವು. ಸಲಕರಣ್ಗಳು ಮತ್ತು ಆಭರಣಗಳು ಅಲ್ಲಲ್ಲಿ ಚೆಲ್ಲಿ ಬಿದ್ದಿದ್ದವು. ಹೊರಚಾಚಿದ್ದ ನಾಲಿಗೆ, ಹಲ್ಲು, ಕರುಳು, ಕಣ್ಣುಗಳಿಂದ ಧರೆಯು ನೋಡಲು ಘೋರವೂ ವಿರೂಪವೂ ಆಗಿದ್ದಿತು. ಗಜಾಶ್ವರಥ ಸೇನೆಗಳನ್ನು ಅನುಸರಿಸಿ ಹೋಗುತ್ತಿದ್ದ ಪದಾತಿಗಳೂ, ತುಂಡಾಗಿದ್ದ ಕವಚ-ಆಭರಣಗಳು, ಶ್ರೇಷ್ಠ ಆಯುಧಗಳು ಅಲ್ಲಲ್ಲಿ ಹರಡಿ ಬಿದ್ದಿದ್ದವು. ಸದಾ ಬೆಲೆಬಾಳುವ ಹಾಸಿಗೆಗಳ ಮೇಲೆ ಮಲಗಲು ಅರ್ಹರಾಗಿದ್ದ ಅವರು ಅನಾಥರಂತೆ ಹತರಾಗಿ ನೆಲದ ಮೇಲೆ ಮಲಗಿದ್ದರು. ಆ ಸುದಾರುಣ ರಣದಲ್ಲಿ ನಾಯಿಗಳು, ನರಿಗಳು, ಕಾಗೆಗಳು, ಬಕಪಕ್ಷಿಗಳು, ಗರುಡಪಕ್ಷಿಗಳು, ತೋಳಗಳು, ಕಿರುಬಗಳು, ರಕ್ತವನ್ನೇ ಹೀರುವ ಪಕ್ಷಿಗಳು, ರಾಕ್ಷಸ ಗಣಗಳು ಮತ್ತು ಪಿಶಾಚ ಪಂಗಡಗಳು ಅತೀವ ಹರ್ಷಿತವಾಗಿದ್ದವು. ಅವು ಚರ್ಮಗಳನ್ನು ಕಿತ್ತು ರಕ್ತವನ್ನು ಹೀರಿ ಕುಡಿಯುತ್ತಿದ್ದವು. ಹಾಗೆಯೇ ಮಾಂಸ-ಮಜ್ಜೆಗಳನ್ನು ತಿನ್ನುತ್ತಿದ್ದವು. ಹೆಣಗಳನ್ನು ಅನೇಕ ಬಾರಿ ಇಲ್ಲಿಂದಲ್ಲಿಗೆ ಕಚ್ಚಿಕೊಂಡು ಎಳೆದಾಡುತ್ತಿದ್ದ ಅವು ನಗುತ್ತಾ, ಹಾಡುತ್ತಾ, ಔತಣದೂಟ ಮಾಡುತ್ತಿದ್ದವು. ಮಹಾಭಯಂಕರವಾದ ದಾಟಲು ಅಸಾಧ್ಯವಾದ ವೈತರಣೀ ನದಿಯನ್ನು ಶ್ರೇಷ್ಠ ಯೋಧರು ಅಲ್ಲಿ ಹರಿಸಿದ್ದರು. ರಕ್ತವೇ ನೀರಾಗಿದ್ದ

ಅದರಲ್ಲಿ ಪ್ರಾಣಿಗಳ ಶರೀರಸಮೂಹಗಳು ಕೊಚ್ಚಿಕೊಂಡು ಹೋಗುತ್ತಿದ್ದವು. ರಥಗಳು ದೋಣಿಗಳಂತಿದ್ದವು. ಆನೆಗಳು ಸಂಕಟದ್ವೀಪಗಳಂತಿದ್ದವು. ಮನುಷ್ಯರ ತಲೆಗಳು ನದಿಯ ಸಣ್ಣ ಬಂಡೆಗಳಂತಿದ್ದವು. ಮಾಂಸವೇ ಕೆಸರಾಗಿತ್ತು. ಚೆಲ್ಲಿದ್ದ ನಾನಾವಿಧದ ಶಸ್ತ್ರಗಳೇ ತೆರೆಗಳಾಗಿದ್ದವು. ಜೀವಿಸಿರುವವರನ್ನೂ ಸತ್ತವರನ್ನೂ ಒಯ್ಯುತ್ತಿದ್ದ ಆ ಭಯಂಕರ ನದಿಯು ರಣರಂಗದ ಮಧ್ಯದಲ್ಲಿ ಹರಿಯುತ್ತಿತ್ತು. ನೋಡಲೂ ಕಷ್ಟಸಾಧ್ಯವಾದ, ತುಂಬಾ ಭೈರವ ವಿವಿಧ ಪಿಶಾಚಗಣಗಳು ಅಲ್ಲಿ ಕುಡಿಯುತ್ತಿದ್ದವು ತಿನ್ನುತ್ತಿದ್ದವು. ಪ್ರಾಣವಿರುವವುಗಳಲ್ಲೇ ಭಯಂಕವಾದ ಮೃಗ-ಪಕ್ಷಿಗಳು ಸಮಾನವಾಗಿ ಆನಂದಿತರಾಗಿ ಭಕ್ಷಿಸುತ್ತಿದ್ದವು.

ನಿಶಾಮುಖದಲ್ಲಿ ಆ ರಣರಂಗವು ಯಮರಾಜನ ರಾಷ್ಟ್ರದಂತೆ ಉಗ್ರವಾಗಿ ಕಾಣುತ್ತಿತ್ತು. ಮೇಲಕ್ಕೆದ್ದು ಕುಣಿಯುತ್ತಿದ್ದ ಮುಂಡಗಳನ್ನು ಜಾಗ್ರತೆಯಿಂದ ನೋಡಿಕೊಳ್ಳುತ್ತಾ ಯೋಧರು ಮೆಲ್ಲನೆ ಹಿಂದಿರುಗಿದರು. ಸುತ್ತಲೂ ಮಹಾರ್ಹಭೂಷಣಗಳು ಹರಡಿ ಬಿದ್ದಿರುವ, ಹವಿಸ್ಸಿಲ್ಲದೇ ಸೀದುಹೋದ ಯಜ್ಞೇಶ್ವರನಂತೆ ರಣದಲ್ಲಿ ಬಿದ್ದಿರುವ ಶಕ್ರಸಮ ಮಹಾರಥ ಅಭಿಮನ್ಯುವನ್ನು ಜನರು ನೋಡಿದರು.

# ಯುದ್ಧದ ಹದಿಮೂರನೆಯ ರಾತ್ರಿ ಅರ್ಜುನನ ಪ್ರತಿಜ್ಞೆ; ಪಾಶುಪತ ಪುನಃ ಪ್ರಾಪ್ತಿ

## ಯುಧಿಷ್ಠಿರ ವಿಲಾಪ

ಆ ರಥಯೂಥಪ ವೀರ ಸೌಭದ್ರನು ಹತನಾಗಲು ಎಲ್ಲರೂ ರಥದಿಂದ ಕೆಳಗಿಳಿದು, ಧನುಸ್ಸುಗಳನ್ನು ಕೆಳಗಿಟ್ಟು, ರಾಜಾ ಯುಧಿಷ್ಠಿರನನ್ನು ಸುತ್ತುವರೆದು ಕುಳಿತುಕೊಂಡರು. ಸೌಭದ್ರನ ಕುರಿತೇ ಚಿಂತಿಸುತ್ತಾ ಅವರು ಮನಸ್ಸುಗಳನ್ನು ಕಳೆದುಕೊಂಡಿದ್ದರು. ಆಗ ಯುಧಿಷ್ಠಿರನು ತಮ್ಮನ ಮಗ ಮಹಾರಥ ವೀರ ಅಭಿಮನ್ಯುವು ಹತನಾದುದಕ್ಕೆ ತುಂಬಾ ದುಃಖಿತನಾಗಿ ವಿಲಪಿಸಿದನು:

> “ನನಗೆ ಪ್ರಿಯವಾದುದನ್ನು ಮಾಡಲು ಬಯಸಿ ಒಡೆಯಲು ಅಸಾಧ್ಯವಾದ ದ್ರೋಣನ ಸೇನೆಗಳ ವ್ಯೂಹವನ್ನು ಭೇದಿಸಿ ಇವನು ಗೋವುಗಳ ಮಧ್ಯೆ ಸಿಂಹದಂತೆ ಪ್ರವೇಶಿಸಿದನು. ಈ ಶೂರನು ರಣದಲ್ಲಿ ಎದುರಾಗಿ ಬಂದ ಮಹೇಷ್ವಾಸ ಕೃತಾಸ್ತ್ರ ಯುದ್ಧ ದುರ್ಮದರನ್ನು ಪ್ರಭಗ್ನರನ್ನಾಗಿಸಿ ಹಿಮ್ಮೆಟ್ಟುವಂತೆ

ಮಾಡಿದನು. ನಮ್ಮ ಅತ್ಯಂತ ಶತ್ರುವಾದ ದುಃಶಾಸನನು ಯುದ್ಧದಲ್ಲಿ ಎದುರಾಗಲು ಅವನನ್ನು ಕ್ಷಿಪ್ರವಾಗಿ ಶರಗಳಿಂದ ಮೂರ್ಛಿತನನ್ನಾಗಿ ಮಾಡಿ ವಿಮುಖನನ್ನಾಗಿ ಮಾಡಿದನು. ಆ ವೀರ ಕಾರ್ಷ್ಣಿಯು ದುಸ್ತರವಾದ ದ್ರೋಣನ ಸೇನೆಯೆಂಬ ಮಹಾಸಾಗರವನ್ನು ದಾಟಿ ದೌಃಶಾಸನಿಯಿಂದ ವೈವಸ್ವತ ಪುರಕ್ಕೆ ಕಳುಹಿಸಲ್ಪಟ್ಟನು. ಸೌಭದ್ರನು ನಿಹತನಾದ ವಿಷಯವನ್ನು ಕೌಂತೇಯ ಅರ್ಜುನನಿಗೆ ಅಥವಾ ಪ್ರಿಯ ಪುತ್ರನನ್ನು ಕಾಣದ ಸುಭದ್ರೆಗೆ ಹೇಗೆ ತಾನೇ ಹೇಳಲಿ? ಇಂದು ನಾವು ಹೃಷೀಕೇಶ-ಧನಂಜಯರಿಗೆ ಯಾವ ಅಶ್ಲಿಷ್ಟವಾದ ಅಸಮಂಜಸವಾದ, ಅಪ್ರಿಯ ಮಾತುಗಳನ್ನು ಹೇಳಬಲ್ಲೆವು? ನನಗಿಷ್ಟವಾದ ಜಯವನ್ನು ಬಯಸಿ ನಾನೇ ಸುಭದ್ರೆಗೂ, ಕೇಶವಾರ್ಜುನರಿಗೂ ಅಪ್ರಿಯವಾದ ಈ ಕೃತ್ಯವನ್ನೆಸಗಿದ್ದೇನೆ! ಲುಬ್ಧನಾದವನಿಗೆ ಅವನ ದೋಷಗಳು ಕಾಣುವುದಿಲ್ಲ. ಮೋಹದಿಂದ ಲೋಭವು ಉಂಟಾಗುತ್ತದೆ. ಮಧುವನ್ನು ಅರಸುವವರು ಅವರ ಮುಂದಿರುವ ಪ್ರಪಾತವನ್ನು ಕಾಣುವುದಿಲ್ಲ. ನಾನೂ ಅವರಂತೆಯೇ! ಯಾರಿಗೆ ಭೋಜನ, ವಾಹನ, ಹಾಸಿಗೆಗಳನ್ನೂ ಭೂಷಣಗಳನ್ನೂ ಇತ್ತು ಪುರಸ್ಕರಿಸಬೇಕಾಗಿತ್ತೋ ಆ ನಮ್ಮ ಬಾಲಕನನ್ನು ಯುದ್ಧದಲ್ಲಿ

ಮುಂದೆ ಕಳುಹಿಸಿದೆನಲ್ಲ! ಹೇಗೆ ತಾನೇ ಅಂತಹ ವಿಷಮ ಪರಿಸ್ಥಿತಿಯಲ್ಲಿ ಅಂತಹ ಬಾಲಕ, ತರುಣ, ಯುದ್ಧದಲ್ಲಿ ಪಳಗಿಲ್ಲದ ಅವನು ಕ್ಷೇಮದಿಂದ ಇದ್ದಾನು? ಒಳ್ಳೆಯ ಕುದುರೆಯಂತೆ ತನ್ನ ಮೇಲೇರಿರುವವನಿಗೆ ಆಪತ್ತಾಗುವ ಮೊದಲೇ ತನ್ನನ್ನು ತಾನೇ ಬಲಿಯಾಗಿತ್ತನು! ಅಯ್ಯೋ! ಇಂದು ನಾವು ಕೋಪದಿಂದ ಉರಿಯುತ್ತಿರುವ ಬೀಭತ್ಸುವಿನ ಶೋಕದ ದೃಷ್ಟಿಯಿಂದ ಸುಟ್ಟು ನೆಲದಮೇಲೆ ಮಲಗುವವರಿದ್ದೇವೆ! ಅಲುಬ್ಧನಾದ, ಮತಿವಂತನಾದ, ಲಜ್ಜಾವಂತನಾದ, ಕ್ಷಮಾವಂತನಾದ, ರೂಪವಾನ್, ಬಲಶಾಲೀ, ಸುಂದರ, ಮನ್ನಿಸುವ, ಧೀರ, ಪ್ರಿಯ, ಸತ್ಯಪರಾಯಣ, ಯಾವ ಮಹತ್ತರ ಕರ್ಮಿಯ ಕರ್ಮಗಳನ್ನು ದೇವತೆಗಳೂ ಶ್ಲಾಘಿಸುತ್ತಾರೋ, ನಿವಾತಕವಚರನ್ನು ಮತ್ತು ಕಾಲಕೇಯರನ್ನು ಸಂಹರಿಸಿದ ವೀರ್ಯವಾನ್, ಮಹೇಂದ್ರನ ಶತ್ರುಗಳಾದ ಹಿರಣ್ಯಪುರವಾಸಿಗಳನ್ನು ಮತ್ತು ಪೌಲೋಮರನ್ನು ಗಣಗಳೊಂದಿಗೆ ನಿಮಿಷಮಾತ್ರದಲ್ಲಿ ಸಂಹರಿಸಿದ, ಭಯಾರ್ಥಿಗಳಾದ ಶತ್ರುಗಳಿಗೂ ಅಭಯವನ್ನೀಡುವ ಪ್ರಭು, ಮದ್ಯಾತ್ಮಜನ ಭಯವನ್ನು ನಾವು ಸಹಿಸಿಕೊಳ್ಳಲಾರೆವು! ಧಾರ್ತರಾಷ್ಟ್ರನ ಮಹಾಸೇನೆಗೆ ಮಹಾ

ಭಯವು ಬಂದೊದಗಿದೆ. ಪುತ್ರವಧೆಯಿಂದ ಕ್ರುದ್ಧನಾದ ಪಾರ್ಥನು ಕೌರವರನ್ನು ಸದೆಬಡಿಯುತ್ತಾನೆ. ಕ್ಷುದ್ರರ ಸಹಾಯವನ್ನು ಹೊಂದಿರುವ ಆ ಕ್ಷುದ್ರ ದುರ್ಯೋಧನನು ತನ್ನ ಪಕ್ಷವು ಆಪತ್ತಿನಲ್ಲಿರುವುದನ್ನು ನೋಡಿ ಶೋಕದಿಂದ ತನ್ನ ಜೀವವನ್ನೇ ಕಳೆದುಕೊಳ್ಳುತ್ತಾನೆ ಎನ್ನುವುದು ವ್ಯಕ್ತವಾಗುತ್ತಿದೆ. ಈ ಅಪ್ರತಿಮ ವೀರ ಪೌರುಷವಿದ್ದಿದ್ದ ದೇವವರನ ಮಗನ ಮಗನು ಬಿದ್ದಿರುವುದನ್ನು ನೋಡಿದರೆ ನನಗೆ ಜಯವೂ, ರಾಜ್ಯವೂ, ಚಾಮರತ್ವವೂ, ಸುರರ ಲೋಕವೂ ಸಂತೋಷವನ್ನುಂಟುಮಾಡುವುದಿಲ್ಲ!”

## ಅರ್ಜುನನ ಕೋಪ

ಪ್ರಾಣವಿರುವವರ ಕ್ಷಯಕರವಾದ ಆ ಹಗಲು ಕಳೆದು ಆದಿತ್ಯನು ಅಸ್ತಂಗತನಾಗಲು ಶ್ರೀಮಾನ್ ಸಂಧ್ಯಾಕಾಲವು ಸರಿದು ಬಂದಿತು. ಸೈನ್ಯಗಳು ವಿಶ್ರಾಂತಿಗೆಂದು ತೆರಳಿದವು. ಜಿಷ್ಣು ಕಪಿಧ್ವಜನು ಸಂಶಪ್ತರ ಸೇನೆಗಳನ್ನು ದಿವ್ಯಾಸ್ತ್ರಗಳಿಂದ ಸಂಹರಿಸಿ ಚೈತ್ರರಥವನ್ನೇರಿ ತನ್ನ ಶಿಬಿರದ ಕಡೆ ಹೊರಟನು. ಹೋಗುವಾಗ ಅವನು ಗದ್ಗದ ಕಂಠದವನಾಗಿ ಗೋವಿಂದನಿಗೆ ಹೇಳಿದನು:

“ಕೇಶವ! ಅಚ್ಯುತ! ಇದೇನು ನನ್ನ ಹೃದಯವು

ಭಯಗೊಂಡಿದೆ. ಮಾತುಗಳು ತೊದಲುತ್ತಿವೆ. ಅನಿಷ್ಟಸೂಚಕವಾಗಿ ಸ್ಪಂದಿಸುತ್ತಿವೆ. ಶರೀರವು ಆಯಾಸಗೊಂಡಿದೆ! ಯಾವುದೋ ಅನಿಷ್ಟದ ಚಿಂತೆಯು ನನ್ನ ಮನಸ್ಸನ್ನು ಕಾಡುತ್ತಿದೆ. ಹೃದಯವನ್ನು ಸುತ್ತಿಕೊಂಡಿದೆ. ಭೂಮಿಯಲ್ಲಿ ಮತ್ತು ದಿಕ್ಕುಗಳಲ್ಲಿ ಕಾಣುವ ಉಗ್ರ ಉತ್ಪಾತಗಳು ನನಗೆ ಭಯವನ್ನುಂಟು ಮಾಡುತ್ತಿವೆ. ಬಹುಪ್ರಕಾರವಾಗಿ ಕಾಣಿಸಿಕೊಳ್ಳುವ ಈ ಎಲ್ಲವೂ ಅಮಂಗಳವನ್ನೇ ಸೂಚಿಸುತ್ತಿವೆ. ಅಮಾತ್ಯಸಹಿತನಾಗಿ ನನ್ನ ಗುರು ರಾಜನು ಕುಶಲದಿಂದಿರಬಹುದೇ?”

ವಾಸುದೇವನು ಹೇಳಿದನು:

“ಅಮಾತ್ಯರೊಂದಿಗೆ ನಿನ್ನ ಅಣ್ಣನು ಕುಶಲದಿಂದಿರುವನು. ಶೋಕಿಸಬೇಡ! ಬೇರೆ ಯಾವುದೋ ಅನಿಷ್ಟವು ಸಂಭವಿಸಿರಬಹುದು!”

ಆಗ ಆ ವೀರರಿಬ್ಬರೂ ವೀರರು ಅವಸಾನರಾದ ರಣಭೂಮಿಯಲ್ಲಿಯೇ ಸಂಧ್ಯಾವಂದನೆಗಳನ್ನು ಮುಗಿಸಿ, ರಥದಲ್ಲಿ ಕುಳಿತು, ರಣದಲ್ಲಿ ನಡೆದುದರ ಕುರಿತು ಮಾತನಾಡಿಕೊಳ್ಳುತ್ತಾ ಪ್ರಯಾಣಿಸಿದರು. ಸುದುಷ್ಕರ ಕರ್ಮಗಳನ್ನೆಸಗಿ ವಾಸುದೇವಾರ್ಜುನರು ಆನಂದವನ್ನು

ಕಳೆದುಕೊಂಡಿದ್ದ ಕಾಂತಿಹೀನವಾಗಿದ್ದ ತಮ್ಮ ಶಿಬಿರವನ್ನು ತಲುಪಿದರು. ಆಗ ನಾಶಗೊಂಡಂತಿದ್ದ ತನ್ನ ಶಿಬಿರವನ್ನು ನೋಡಿ ಪರವೀರಹ ಬೀಭತ್ಸುವು ಅಸ್ವಸ್ಥಹೃದಯನಾಗಿ ಕೃಷ್ಣನಿಗೆ ಹೇಳಿದನು:

"ಜನಾರ್ದನ! ಇಂದು ದುಂದುಭಿ ನಿರ್ಘೋಷಗಳಿಂದ, ಶಂಖ ಮತ್ತು ಡಂಬರುಗಳಿಂದ ಕೂಡಿದ ಮಂಗಳವಾದ್ಯಗಳು ಮೊಳಗುತ್ತಿಲ್ಲ. ತಾಳ ಮೃದಂಗಗಳೊಂದಿಗೆ ವೀಣಾವಾದನವೂ ನಡೆಯುತ್ತಿಲ್ಲ! ನನ್ನ ಶಿಬಿರದ ಬಂದಿಗಳು ಮಂಗಲ ಗೀತೆಗಳನ್ನು ಹಾಡುತ್ತಿಲ್ಲ, ಮತ್ತು ರಮ್ಯವಾದ ಸ್ತುತಿಯುಕ್ತವಾದವುಗಳನ್ನು ಓದುತ್ತಿಲ್ಲ! ಯೋಧರೂ ಕೂಡ ನನ್ನನ್ನು ನೋಡಿ ಮುಖಕೆಳಗೆ ಮಾಡಿ ಹೋಗುತ್ತಿದ್ದಾರೆ. ಹಿಂದೆ ಅವರು ನನಗೆ ನಮಸ್ಕರಿಸಿ ಯುದ್ಧವಾರ್ತೆಗಳನ್ನು ಹೇಳುತ್ತಿದ್ದರು! ಮಾಧವ! ನಿಶ್ಚಯವಾಗಿಯೂ ನನ್ನ ಅಣ್ಣಂದಿರಿಬ್ಬರೂ ಕುಶಲವಾಗಿರುವರೇ? ನನ್ನವರ ವ್ಯಾಕುಲತೆಯನ್ನು ನೋಡಿ ಈ ಭಾವವು ನನ್ನಿಂದ ದೂರವಾಗುತ್ತಿಲ್ಲ. ಅಚ್ಯುತ! ಪಾಂಚಾಲರಾಜನ, ವಿರಾಟನ ಎಲ್ಲ ಯೋಧರೂ ಸಮಗ್ರವಾಗಿ ಕುಶಲದಿಂದಿರುವರೇ? ಇಂದು ಸಹೋದರರೊಂದಿಗೆ ಅತಿ ಸಂತೋಷದಿಂದ ನಗು ನಗುತ್ತಾ

ಸೌಭದ್ರನು ಯುದ್ಧದಿಂದ ಹಿಂದಿರುಗಿದ ನನ್ನನ್ನು ಉಚಿತವಾಗಿ ಎದಿರುಗೊಳ್ಳುತ್ತಲೂ ಇಲ್ಲ!”

ಹೀಗೆ ಮಾತನಾಡಿಕೊಳ್ಳುತ್ತಾ ಅವರಿಬ್ಬರೂ ತಮ್ಮ ಶಿಬಿರವನ್ನು ಪ್ರವೇಶಿಸಿ ಅಲ್ಲಿ ತುಂಬಾ ಅಸ್ವಸ್ಥರಾಗಿದ್ದ ಚೇತನವನ್ನು ಕಳೆದುಕೊಂಡಿದ್ದ ಪಾಂಡವರನ್ನು ಕಂಡರು. ವಿಮನಸ್ಕರಾಗಿದ್ದ ಸಹೋದರರರನ್ನೂ ಮಕ್ಕಳನ್ನೂ ನೋಡಿ ಅಲ್ಲಿ ಸೌಭದ್ರನನ್ನು ಕಾಣದೇ ವಾನರಧ್ವಜನು ಈ ಮಾತನ್ನಾಡಿದನು:

“ನೀವೆಲ್ಲರೂ ಮುಖವರ್ಣಗಳನ್ನು ಕಳೆದುಕೊಂಡು ಅಪ್ರಸನ್ನರಾಗಿರುವವರಂತೆ ಕಾಣುತ್ತಿದ್ದೀರಿ. ಅಭಿಮನ್ಯುವೂ ನನಗೆ ಕಾಣುತ್ತಿಲ್ಲ. ನನ್ನೊಡನೆ ಸಂತೋಷದಿಂದ ಮಾತನಾಡುತ್ತಿಲ್ಲ! ದ್ರೋಣನು ಚಕ್ರವ್ಯೂಹವನ್ನು ನಿರ್ಮಿಸಿದನೆಂದು ನಾನು ಕೇಳಿದ್ದೆ. ಸೌಭದ್ರನಲ್ಲದೇ ನಿಮ್ಮಲ್ಲಿ ಯಾರಿಗೂ ಯುದ್ಧದಲ್ಲಿ ಅದನ್ನು ಭೇದಿಸುವುದು ತಿಳಿದಿರಲಿಲ್ಲ. ನಾನಾದರೋ ಅವನಿಗೆ ವ್ಯೂಹವನ್ನು ಪ್ರವೇಶಿಸುವುದರ ಹೊರತಾಗಿ ನಿರ್ಗಮಿಸುವುದರ ಕುರಿತು ಉಪದೇಶಿಸಿರಲಿಲ್ಲ. ನಿಮ್ಮಲ್ಲಿ ಯಾರೂ ಅವನು ಶತ್ರುವ್ಯೂಹವನ್ನು ಪ್ರವೇಶಿಸುವಂತೆ ಮಾಡಿಲ್ಲ ತಾನೇ? ಮಹೇಷ್ವಾಸ ಪರವೀರಹ ಸೌಭದ್ರನು

ಯುದ್ಧದಲ್ಲಿ ಶತ್ರುಗಳ ಸೇನೆಯನ್ನು ಬಹುವಾಗಿ ಭೇದಿಸಿ ಕೊನೆಗೆ ಅಲ್ಲಿಯೇ ಹತನಾಗಿ ಮಲಗಿಲ್ಲ ತಾನೇ? ಲೋಹಿತಾಕ್ಷ, ಮಹಾಬಾಹು, ಪರ್ವತಗಳಲ್ಲಿ ಹುಟ್ಟಿದ ಸಿಂಹದಂತಿದ್ದ, ಉಪೇಂದ್ರನಂತಿದ್ದ ಅವನು ಯುದ್ಧಮಾಡುತ್ತಾ ಹೇಗೆ ಹತನಾದನೆಂದು ಹೇಳಿ! ನನಗೆ ಸದಾ ಪ್ರಿಯನಾದ ಸುಕುಮಾರ, ಮಹೇಷ್ವಾಸ, ವಾಸವನ ಮಗನ ಮಗನು ಯುದ್ಧದಲ್ಲಿ ಹೇಗೆ ಹತನಾದನು ಹೇಳಿ! ವಾರ್ಷ್ಣೇಯಿಯ ಮಗ, ಶೂರ, ಸತತವೂ ನನ್ನಿಂದ ಮುದ್ದಿಸಲ್ಪಡುತ್ತಿದ್ದ, ತಾಯಿ ಕುಂತಿಗೂ ನಿತ್ಯವೂ ಪ್ರಿಯನಾದ ಅವನನ್ನು ಕಾಲಚೋದಿತನಾದ ಯಾರು ವಧಿಸಿದರು? ವಿಕ್ರಮ-ಕೀರ್ತಿ-ಮಹಾತ್ಮೆಗಳಲ್ಲಿ ವೃಷ್ಣಿಸಿಂಹ ಕೇಶವನಂತಿರುವ ಆ ಮಹಾತ್ಮನು ಯುದ್ಧದಲ್ಲಿ ಹೇಗೆ ಹತನಾದನು ಹೇಳಿ! ನಿತ್ಯವೂ ಸುಭದ್ರೆಯ, ದ್ರೌಪದಿಯ ಮತ್ತು ಕೇಶವನ ಪ್ರಿಯನಾದ ನನ್ನ ಮಗನನ್ನು ನಾನೇನಾದರೂ ಕಾಣದೇ ಇದ್ದರೆ ನಾನೂ ಕೂಡ ಯಮಸಾದನಕ್ಕೆ ಹೋಗುತ್ತೇನೆ! ಮೃದುವಾದ ಗುಂಗುರು ಕೂದಲುಳ್ಳ, ಜಿಂಕೆಯ ಮರಿಯ ಕಣ್ಣುಗಳುಳ್ಳ, ಮತ್ತಗಜದ ನಡುಗೆಯ, ಎಳೆಯ ಸಾಲವೃಕ್ಷದಂತೆ ಎತ್ತರನಾಗಿದ್ದ, ನಗುನಗುತ್ತಲೇ

ಮಾತನಾಡುವ, ಶಾಂತಸ್ವಭಾವದ, ಸದಾ ಹಿರಿಯರ ಮಾತಿನಂತೆಯೇ ನಡೆದುಕೊಳ್ಳುತ್ತಿದ್ದ, ಬಾಲಕನಾಗಿದ್ದರೂ ಅಬಾಲರ ಕೃತ್ಯವನ್ನೆಸಗುತ್ತಿದ್ದ, ಪ್ರಿಯವಾಗಿ ಮಾತನಾಡುವ, ಮಾತ್ಸ್ಯರ್ಯವಿಲ್ಲದ, ಬಾಲಕ, ಮಹೋತ್ಸಾಹಿ, ಮಹಾಬಾಹು, ದೀರ್ಘರಾಜೀವಲೋಚನ, ಭಕ್ತಾನುಕಂಪೀ, ಶಾಂತ, ನೀಚರನ್ನು ಅನುಸರಿಸದ, ಕೃತಜ್ಞ, ಜ್ಞಾನಸಂಪನ್ನ, ಕೃತಾಸ್ತ್ರ, ಯುದ್ಧದಲ್ಲಿ ಪಲಾಯನ ಮಾಡದ, ಯುದ್ಧದ ಪ್ರಶಂಸಕ, ನಿತ್ಯವೂ ಶತ್ರುಗಳಿಗೆ ಭಯವನ್ನುಂಟುಮಾಡುತ್ತಿದ್ದ, ತನ್ನವರಿಗೆ ಪ್ರಿಯವೂ ಹಿತವೂ ಆದ ಕಾರ್ಯಗಳಲ್ಲಿ ನಿರತನಾದ, ಪಿತೃಗಳ ಜಯವನ್ನು ಆಶಿಸಿದ, ತನಗೆ ಮೊದಲು ಹೊಡೆಯದೇ ಇದ್ದವನನ್ನು ಹೊಡೆಯದ, ಸಂಗ್ರಾಮದಲ್ಲಿ ಸಂಭ್ರಮವನ್ನು ಕಳೆದುಕೊಳ್ಳದ ಆ ನನ್ನ ಮಗನನ್ನು ನಾನೇನಾದರೂ ಕಾಣದೇ ಇದ್ದರೆ ನಾನೂ ಕೂಡ ಯಮಸಾದನಕ್ಕೆ ಹೋಗುತ್ತೇನೆ! ಸುಂದರ ಹಣೆಯುಳ್ಳ, ಸುಂದರ ಮುಂಗುರುಳುಗಳುಳ್ಳ, ಸುಂದರ ಹುಬ್ಬು, ಕಣ್ಣು, ಹಲ್ಲುಗಳನ್ನುಳ್ಳ ಆ ಮುಖವನ್ನು ಕಾಣದ ನನ್ನ ಹೃದಯಕ್ಕೆ ಶಾಂತಿಯೆಲ್ಲಿ? ವೀಣಾವಾದನದಂತೆ ಸುಖವನ್ನು ನೀಡುವ, ಗಂಡು ಕೋಗಿಲೆಯ ಧ್ವನಿಯುಳ್ಳ ಅವನ ರಮ್ಯ ಸ್ವರವನ್ನು

ಕೇಳದ ನನ್ನ ಹೃದಯಕ್ಕೆ ಶಾಂತಿಯೆಲ್ಲಿ? ತ್ರಿದಶರಿಗೂ ದುರ್ಲಭವಾದ ಆ ಅಪ್ರತಿಮ ರೂಪಿ ವೀರನ ರೂಪವನ್ನು ಕಾಣದ ನನ್ನ ಹೃದಯಕ್ಕೆ ಇಂದು ಶಾಂತಿಯೆಲ್ಲಿ? ಅಭಿವಾದನದಲ್ಲಿ ದಕ್ಷನಾದ ಪಿತೃಗಳ ವಚನರತನಾದ ಅವನನ್ನು ಇಂದು ನಾನು ಕಾಣದೇ ಇದ್ದರೆ ನನ್ನ ಹೃದಯಕ್ಕೆ ಶಾಂತಿಯೆಲ್ಲಿ? ಸುಕುಮಾರನಾದ, ಸದಾ ವೀರನಾದ, ಮಹಾಬೆಲೆಬಾಳುವ ಹಾಸಿಗೆಗಳ ಮೇಲೆ ಮಲಗಲು ಅರ್ಹನಾದ ಅವನು ತನಗೆ ಶ್ರೇಷ್ಠ ರಕ್ಷಕರಿದ್ದರೂ ಇಂದು ಅನಾಥನಂತೆ ನೆಲದ ಮೇಲೆ ಮಲಗಿದ್ದಾನಲ್ಲ! ಹಿಂದೆ ಶಯನದಲ್ಲಿ ಪರಮ ಸ್ತ್ರೀಯರು ಬಂದು ಉಪಾಸಿಸುತ್ತಿದ್ದ ಅವನ ಅಂಗಾಂಗಳಲ್ಲಿ ಬಾಣಗಳು ಚುಚ್ಚಿಕೊಂಡಿರುವಾಗ ಈಗ ಅಮಂಗಳ ನರಿಗಳು ಉಪಾಸಿಸುತ್ತಿವೆಯಲ್ಲ! ಹಿಂದೆ ಮಲಗಿರುವಾಗ ಯಾರನ್ನು ಸೂತಮಾಗದಬಂಧಿಗಳು ಎಚ್ಚರಿಸುತ್ತಿದ್ದರೋ ಅವನನ್ನು ಇಂದು ನರಿ-ನಾಯಿಗಳು ವಿಕೃತ ಸ್ವರಗಳಲ್ಲಿ ಎಚ್ಚರಿಸಲು ಪ್ರಯತ್ನಿಸುತ್ತಿರುವವಲ್ಲ! ಯಾರ ಶುಭ ವದನವು ಚತ್ರಗಳ ಛಾಯೆಗಳಡಿಯಲ್ಲಿ ರಕ್ಷಿತವಾಗಿತ್ತೋ ಅದು ಇಂದು ರಣದಲ್ಲಿ ಧೂಳು ಮುಕ್ಕಿ ಮಾಸಿದೆಯಲ್ಲ! ಹಾ ಪುತ್ರ! ಸತತವೂ ಪುತ್ರನನ್ನು

ನೋಡುತ್ತಿದ್ದರೂ ತೃಪ್ತನಾಗದ ಈ ಭಾಗ್ಯಹೀನನನ್ನು ಕಾಲವು ಏಕೆ ಬಲವಂತವಾಗಿ ಕೊಂಡೊಯ್ಯುತ್ತಿಲ್ಲ? ಸುಕೃತಿಗಳು ಸದಾ ಹೋಗಲು ಬಯಸುವ ಯಮಸದನವು ಇಂದು ನಿನ್ನಿಂದಾಗಿ ಇನ್ನೂ ಹೆಚ್ಚು ರಮ್ಯವೂ ಪ್ರಕಾಶವುಳ್ಳದ್ದೂ ಆಗಿ ವಿರಾಜಿಸುತ್ತಿರಬಹುದು. ನಿನ್ನನ್ನು ಪ್ರಿಯ ಅತಿಥಿಯನ್ನಾಗಿ ಪಡೆದು ವೈವಸ್ವತ, ವರುಣ, ಶತಕ್ರತು ಮತ್ತು ಧನೇಶ್ವರರು ನಿನ್ನನ್ನು ಗೌರವಿಸುತ್ತಿರಬಹುದು."

ಹೀಗೆ ಹಡಗು ಮುರಿದ ವರ್ತಕನಂತೆ ಬಹುವಿಧಗಳಲ್ಲಿ ವಿಲಪಿಸಿ, ಮಹಾ ದುಃಖದಿಂದ ಆವಿಷ್ಟನಾಗಿ ಅರ್ಜುನನು ಯುಧಿಷ್ಠಿರನನ್ನು ಕೇಳಿದನು:

"ಪಾಂಡುನಂದನ! ಆ ನರರ್ಷಭನು ಶತ್ರುಗಳೊಂದಿಗೆ ಕದನ ಮಾಡುತ್ತಾ ರಣದಲ್ಲಿ ಶತ್ರುಗಳಿಗೆ ಎದುರಾಗಿ ಯುದ್ಧಮಾಡುತ್ತಿರುವಾಗಲೇ ಸ್ವರ್ಗಗತನಾದನೇ? ಬಹುಸಂಖ್ಯಾತರಾದ ಪ್ರಯತ್ನಶೀಲರಾದ ನರರ್ಷಭರೊಡನೆ ಯುದ್ಧಮಾಡುತ್ತಿರುವಾಗ ಅಸಹಾಯಕನಾಗಿದ್ದಾಗ ಸಹಾಯಕ್ಕಾಗಿ ಖಂಡಿತವಾಗಿಯೂ ನನ್ನನ್ನು ಅವನು ಸ್ಮರಿಸಿಕೊಂಡಿರಬೇಕು. ಶರಗಳಿಂದ ಪೀಡಿತನಾದಾಗ ಆ

ಬಾಲ ಕಂದನು ಈಗ ನಾನು ರಕ್ಷಣೆಗೆ ಬರಬಹುದು ಎಂದು ವಿಲಪಿಸುತ್ತಿರುವಾಗಲೇ ಕ್ರೂರಿಗಳಾದ ಬಹುಜನರಿಂದ ಹತನಾಗಿರಬಹುದು ಎಂದು ಭಾವಿಸುತ್ತೇನೆ. ಅಥವಾ ನನ್ನ ಮಗ, ಮಾಧವನ ಅಳಿಯ ಮತ್ತು ಸುಭದ್ರೆಗೆ ಹುಟ್ಟಿದವನ ಕುರಿತು ಹೀಗೆ ಮಾತನಾಡುವುದು ಸರಿಯಲ್ಲ! ನಿಜವಾಗಿಯೂ ನನ್ನ ಹೃದಯವು ವಜ್ರದ ಸಾರದಿಂದ ಮಾಡಿದ್ದಿರಬೇಕು. ದೀರ್ಘಬಾಹು ಆ ರಕ್ತಾಕ್ಷನನ್ನು ಕಾಣದೇ ಒಡೆದು ಹೋಗುತ್ತಿಲ್ಲವಲ್ಲ! ಹೇಗೆ ತಾನೇ ಕ್ರೂರಿಗಳಾದ ಮಹೇಷ್ವಾಸರು ಇನ್ನೂ ಬಾಲಕನಾಗಿದ್ದ ನನ್ನ ಮಗ, ವಾಸುದೇವನ ಅಳಿಯನ ಮೇಲೆ ಮರ್ಮಭೇದೀ ಶರಗಳನ್ನು ಪ್ರಯೋಗಿಸಿದರು? ನಿತ್ಯವೂ ಶತ್ರುಗಳನ್ನು ಸಂಹರಿಸಿ ಬರುತ್ತಿದ್ದಾಗ ಆ ಅದೀನಾತ್ಮನು ಸಂತೋಷದಿಂದ ಹಾರಿಬಂದು ನನ್ನನ್ನು ಅಭಿನಂದಿಸುತ್ತಿದ್ದನು. ಇಂದು ಏಕೆ ಅವನು ನನ್ನನ್ನು ನೋಡುತ್ತಿಲ್ಲ? ಅವನು ರಕ್ತದಿಂದ ತೋಯ್ದು ಭೂಮಿಯ ಮೇಲೆ ಬೀಳಿಸಲ್ಪಟ್ಟ ಆದಿತ್ಯನಂತೆ ತನ್ನ ಶರೀರಕಾಂತಿಯಿಂದ ರಣಾಂಗಣವನ್ನೇ ಶೋಭಾಯಮಾನವನ್ನಾಗಿ ಮಾಡುತ್ತಾ ಅಲ್ಲಿಯೇ ಮಲಗಿರಬಹುದೇ? ಅಭಿಮನ್ಯುವು ರಣದಲ್ಲಿ ಹತನಾದುದನ್ನು

ಕೇಳಿ ಶೋಕಾರ್ತಳಾಗಿ ಪ್ರಾಣವನ್ನೇ ಬಿಡುವ ಸುಭದ್ರೆಗೆ ನಾನು ಏನು ಹೇಳಲಿ? ಅವನನ್ನು ಕಾಣದೇ ದುಃಖಾರ್ತಳಾದ ದ್ರೌಪದಿಗೆ ನಾನು ಏನು ಹೇಳಲಿ? ಶೋಕಕರ್ಶಿತಳಾಗಿ ರೋದಿಸುತ್ತಿರುವ ನನ್ನ ಸೊಸೆಯನ್ನು ನೋಡಿಯೂ ನನ್ನ ಹೃದಯವು ಸಹಸ್ರ ಚೂರುಗಳಾಗಿ ಒಡೆಯಲಿಲ್ಲವೆಂದರೆ ಅದು ಖಂಡಿತವಾಗಿಯೂ ವಜ್ರಸಾರಮಯವಾಗಿದ್ದಿರಬೇಕು! ಹೃಷ್ಟರಾದ ಧಾರ್ತರಾಷ್ಟ್ರರ ಸಿಂಹನಾದವು ನನಗೆ ಕೇಳಿಸಿತು. ಯುಯುತ್ಸುವು ವೀರರನ್ನು ನಿಂದಿಸಿದುದೂ ಕೃಷ್ಣನಿಗೆ ಕೇಳಿಸಿತು. "ಮಹಾರಥರೇ! ಅಧರ್ಮಜ್ಞರೇ! ಬೀಭತ್ಸುವನ್ನು ಎದುರಿಸಲು ಸಾಧ್ಯವಾಗದೇ ನೀವೆಲ್ಲ ಬಾಲಕನನ್ನು ವಧಿಸಿ ಸಂತೋಷಪಡುವಿರೇಕೆ? ಪಾರ್ಥನ ಬಲವನ್ನು ನೀವು ನೋಡುವಿರಿ! ರಣದಲ್ಲಿ ಕೇಶವಾರ್ಜುನರಿಗೆ ವಿಪ್ರಿಯವಾದುದನ್ನು ಮಾಡಿ ಸಂತೋಷದಿಂದ ಸಿಂಹನಾದವನ್ನು ಮಾಡುತ್ತಿರುವ ನಿಮಗೆ ಶೋಕಕಾಲವು ಉಪಸ್ಥಿತವಾಗಿದೆ. ಪಾಪಕರ್ಮದ ಫಲವು ಕ್ಷಿಪ್ರವಾಗಿ ನಿಮಗೆ ಬರಲಿದೆ. ತೀವ್ರವಾದ ಅಧರ್ಮವನ್ನೆಸಗಿರುವವರಿಗೆ ಅದರ ಫಲವು ಹೇಗೆ ತಡವಾಗಿ ದೊರೆಯುತ್ತದೆ?"

“ಹೀಗೆ ಹೇಳಿ ಆ ಮಹಾಮತಿ ವೈಶ್ಯಾಪುತ್ರನು ಕೋಪ-ದುಃಖಸಮನ್ವಿತನಾಗಿ ಶಸ್ತ್ರಗಳನ್ನು ಬಿಸುಟು ರಣವನ್ನು ಬಿಟ್ಟು ಹೋದನು. ಕೃಷ್ಣ! ಈ ವಿಷಯವನ್ನು ನೀನು ರಣಾಂಗಣದಲ್ಲಿಯೇ ಏಕೆ ನನಗೆ ಹೇಳಲಿಲ್ಲ? ಆಗಲೇ ನಾನು ಆ ಎಲ್ಲ ಕ್ರೂರ ಮಹಾರಥರನ್ನೂ ಸುಟ್ಟುಬಿಡುತ್ತಿರಲಿಲ್ಲವೇ?”

ಆಗ ಪುತ್ರಶೋಕವೆಂಬ ದುಃಖಸಾಗರದಲ್ಲಿ ಮುಳುಗಿಹೋಗಿದ್ದ, ತೀವ್ರಶೋಕಸಮನ್ವಿತನಾದ ಅವನನ್ನು ಬಿಗಿದಪ್ಪಿ ವಾಸುದೇವ ಕೃಷ್ಣನು “ಹೀಗೆ ದುಃಖಿಸಬೇಡ!” ಎಂದು ಹೇಳಿದನು:

> “ಯುದ್ಧದಿಂದ ಓಡಿಹೋಗದೇ ಇರುವ ಎಲ್ಲ ಶೂರರಿಗೂ, ವಿಶೇಷವಾಗಿ ಯುದ್ಧವೇ ಜೀವನವಾಗಿರುವ ಕ್ಷತ್ರಿಯರಿಗೆ, ಕೊನೆಗೆ ಇದೇ ದಾರಿ! ಯುದ್ಧದಿಂದ ಹಿಂದಿರುಗದೇ ಯುದ್ಧಾಸಕ್ತರಾದ ಶೂರರಿಗೂ ಇದೇ ಮಾರ್ಗವು ಧರ್ಮಶಾಸ್ತ್ರಜ್ಞರಿಂದ ವಿಹಿತವಾಗಿದೆ. ಹಿಂದಿರುಗದ ಶೂರರಿಗೆ ಯುದ್ಧದಲ್ಲಿ ಮರಣವು ನಿಶ್ಚಿತವಾದುದು. ಅಭಿಮನ್ಯುವು ಪುಣ್ಯಕೃತರ ಲೋಕಕ್ಕೆ ಹೋಗಿದ್ದಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಸಂಗ್ರಾಮದದಲ್ಲಿ ಎದುರುಮುಖರಾಗಿದ್ದಾಗ ಸಾವನ್ನು ಪಡೆಯಬೇಕು ಎನ್ನುವುದು ಎಲ್ಲ ವೀರರ

ಬಯಕೆಯಾಗಿರುತ್ತದೆ. ಅವನಾದರೋ ರಣದಲ್ಲಿ ಮಹಾಬಲಶಾಲಿಗಳಾದ ವೀರ ರಾಜಪುತ್ರರನ್ನು ಸಂಹರಿಸಿ ವೀರರು ಬಯಸುವ, ರಣದಲ್ಲಿ ಎದುರುಮುಖನಾಗಿರುವಾಗ, ಮೃತ್ಯುವನ್ನು ಪಡೆದಿದ್ದಾನೆ. ಶೋಕಿಸಬೇಡ! ರಣದಲ್ಲಿ ನಾಶವು ಕ್ಷತ್ರಿಯರ ಧರ್ಮವೆಂದು ಸನಾತನ ಧರ್ಮವನ್ನು ಮಾಡಿದವರು ಹಿಂದೆಯೇ ಮಾಡಿದ್ದಾರೆ. ನೀನು ಶೋಕಸಮಾವಿಷ್ಟನಾದೆಯೆಂದರೆ ಈ ನಿನ್ನ ಸಹೋದರರು, ನೃಪರು, ಸುಹೃದಯರು ಎಲ್ಲರೂ ದೀನರಾಗುತ್ತಾರೆ. ಇವರನ್ನು ನೀನು ಸಮಾಧಾನಪೂರ್ವಕ ಆಶ್ವಾಸನೆಯ ಮಾತುಗಳಿಂದ ಸಂತೈಸು. ತಿಳಿಯಬೇಕಾದುದನ್ನು ತಿಳಿದಿರುವ ನೀನು ಶೋಕಿಸುವುದು ಸರಿಯಲ್ಲ!”

ಹೀಗೆ ಅದ್ಭುತ ಕರ್ಮಿ ಕೃಷ್ಣನಿಂದ ಸಂತೈಸಲ್ಪಡಲು ಪಾರ್ಥನು ಗದ್ಗದನಾಗಿ ಸಹೋದರರೆಲ್ಲರಿಗೂ ಹೇಳಿದನು:

“ಆ ದೀರ್ಘಬಾಹು, ವಿಶಾಲ ಭುಜದ, ದೀರ್ಘರಾಜೀವ ಲೋಚನ ಅಭಿಮನ್ಯುವು ಹೇಗೆ ನಡೆದುಕೊಂಡನೆನ್ನುವುದನ್ನು ಕೇಳಲು ಬಯಸುತ್ತೇನೆ. ನನ್ನ ಮಗನ ವೈರಿಯನ್ನು ಸಂಗ್ರಾಮದಲ್ಲಿ ನಾನು ಅವನ ಅನುಬಂಧರನ್ನೂ ಕೂಡಿ,

ಅವನ ಆನೆ-ಕುದುರೆ-ರಥಗಳೊಂದಿಗೆ ಭಸ್ಮಮಾಡುತ್ತೇನೆ. ಆದರೆ ಕೃತಾಸ್ತ್ರರೂ ಶಸ್ತ್ರಪಾಣಿಗಳೂ ಆಗಿರುವ ನೀವೆಲ್ಲರೂ ಇರುವಾಗ ರಣದಲ್ಲಿ ವಜ್ರಪಾಣಿಯೇ ಎದುರಾಗಿದ್ದರೂ ಸೌಭದ್ರನು ಹೇಗೆ ನಿಧನನಾದನು? ಪಾಂಡವ-ಪಾಂಚಾಲರು ನನ್ನ ಮಗನನ್ನು ರಕ್ಷಿಸಲು ಅಸಮರ್ಥರೆಂದು ನನಗೆ ಮೊದಲೇ ತಿಳಿದಿದ್ದರೆ ಅವನನ್ನು ರಕ್ಷಿಸಲು ನಾನೇ ಬರುತ್ತಿದ್ದೆ. ರಥದಮೇಲೆ ನಿಂತು ಶರವರ್ಷಗಳನ್ನು ಪ್ರಯೋಗಿಸುತ್ತಿರುವ ನಿಮ್ಮನ್ನು ತೃಣೀಕರಿಸಿ ನಮ್ಮ ಶತ್ರುಗಳು ಹೇಗೆ ಅಭಿಮನ್ಯುವನ್ನು ಕೊಂದರು? ಅಯ್ಯೋ! ನಿಮ್ಮಲ್ಲಿ ಪೌರುಷವೂ ಇಲ್ಲ. ಪರಾಕ್ರಮವೂ ಇಲ್ಲ! ನೀವು ನೋಡುತ್ತಿರುವಾಗಲೇ ಸಮರದಲ್ಲಿ ಅಭಿಮನ್ಯುವನ್ನು ಕೆಳಗುರುಳಿಸಿದಲ್ಲ! ನನ್ನನ್ನು ನಾನೇ ನಿಂದಿಸಿಕೊಳ್ಳಬೇಕು. ತಿಳಿಯದೇ ನಿಮ್ಮಂತಹ ದುರ್ಬಲ, ದೃಢನಿಶ್ಚಯವಿಲ್ಲದ ಹೇಡಿಗಳಿಗೆ ಅವನನ್ನು ಒಪ್ಪಿಸಿ ಹೋದೆನಲ್ಲಾ! ಅಯ್ಯೋ! ನಿಮ್ಮ ಈ ಕವಚ-ಶಸ್ತ್ರ-ಆಯುಧಗಳು ಕೇವಲ ಭೂಷಣಕ್ಕಾಗಿಯೇ? ಸಂಸತ್ತುಗಳಲ್ಲಿ ಮಾತುಗಳನ್ನಾಡುವ ನೀವು ನನ್ನ ಮಗನನ್ನು ರಕ್ಷಿಸಲಿಲ್ಲ!”

ಹೀಗೆ ಹೇಳಿ ಅವನು ಶ್ರೇಷ್ಠ ಚಾಪವನ್ನೂ ಖಡ್ಗವನ್ನೂ ಹಿಡಿದು ಮೇಲೆದ್ದು ನಿಂತನು. ಆಗ ಬೀಭತ್ಸುವನ್ನು ತಲೆಯೆತ್ತಿ ನೋಡಲು ಯಾರಿಗೂ ಸಾಧ್ಯವಾಗಲಿಲ್ಲ. ಅಂತಕನಂತೆ ಕ್ರುದ್ಧನಾದ, ಮತ್ತೆ ಮತ್ತೆ ನಿಟ್ಟುಸಿರು ಬಿಡುತ್ತಾ ಪುತ್ರಶೋಕಾಭಿಸಂತಪ್ತನಾಗಿ ಅವನ ಮುಖವು ಕಣ್ಣೀರಿನಿಂದ ತುಂಬಿಹೋಗಿತ್ತು. ಅವನು ಅಂತಹ ಪರಿಸ್ಥಿತಿಯಲ್ಲಿದ್ದಾಗ ಅರ್ಜುನನನ್ನು ನೋಡಲು ವಾಸುದೇವ ಮತ್ತು ಜ್ಯೇಷ್ಠ ಪಾಂಡುನಂದನನ ಹೊರತಾಗಿ ಬೇರೆ ಯಾವ ಸುಹೃದರಿಗೂ ಸಾಧ್ಯವಾಗಲಿಲ್ಲ. ಸರ್ವಾವಸ್ಥೆಗಳಲ್ಲಿ ಅರ್ಜುನನ ಹಿತವನ್ನೂ ಮನಸ್ಸನ್ನೂ ಅನುಸರಿಸುವುದರಿಂದ, ಆದರ-ಗೌರವಗಳಿಂದ ಮತ್ತು ಪ್ರಿಯತ್ವದಿಂದ ಅವರಿಬ್ಬರು ಮಾತ್ರ ಅವನಲ್ಲಿ ಮಾತನಾಡಬಲ್ಲವರಾಗಿದ್ದರು. ಆಗ ಪುತ್ರಶೋಕದಿಂದ ತುಂಬಾ ಪೀಡಿತ ಮನಸ್ಕನಾಗಿದ್ದ ಕ್ರುದ್ಧನಾಗಿದ್ದ ಆ ರಾಜೀವಲೋಚನನಿಗೆ ರಾಜ ಯುಧಿಷ್ಠಿರನು ಹೇಳಿದನು:

> “ಮಹಾಬಾಹೋ! ಸಂಶಪ್ತಕರ ಸೇನೆಯ ಕಡೆ ನೀನು ಹೋದನಂತರ ನನ್ನನ್ನು ಹಿಡಿಯಲು ಆಚಾರ್ಯನು ತೀವ್ರ ಪ್ರಯತ್ನವನ್ನು ಮಾಡಿದನು. ಹಾಗೆ ರಣದಲ್ಲಿ ಪ್ರಯತ್ನಿಸುತ್ತಿದ್ದ ದ್ರೋಣನ ಆ ರಥಸೇನೆಯ ವ್ಯೂಹವನ್ನು ನಾವು

ಪ್ರತಿವ್ಯೂಹದೊಂದಿಗೆ ಎಲ್ಲಕಡೆಗಳಲ್ಲಿಯೂ ತಡೆದೆವು. ರಥಿಕರು ಅವನನ್ನು ತಡೆಯುತ್ತಿದ್ದರು ಮತ್ತು ನಾನು ಸುರಕ್ಷಿತವಾಗಿದ್ದೆ. ಆದರೆ ಅವನು ನಮ್ಮನ್ನು ನಿಶಿತ ಶರಗಳಿಂದ ಪೀಡಿಸುತ್ತಿದ್ದನು. ದ್ರೋಣನಿಂದ ಪೀಡಿತರಾದ ನಾವು ದ್ರೋಣನ ಸೇನೆಯ ಕಡೆ ನೋಡಲೂ ಕೂಡ ಅಸಮರ್ಥರಾದೆವು. ಹಾಗಿರುವಾಗ ಅದನ್ನು ಭೇದಿಸುವುದಾದರೂ ಹೇಗೆ ಸಾಧ್ಯವಿತ್ತು? ಆಗ ವೀರ್ಯಗಳೆಲ್ಲದರಲ್ಲಿ ನಿನಗೆ ಸಮನಾದ ಸೌಭದ್ರಾತ್ಮಜನಿಗೆ ನಾವು "ಮಗೂ! ಸೇನೆಯನ್ನು ಭೇದಿಸು!" ಎಂದು ಕೇಳಿಕೊಂಡೆವು. ಹಾಗೆ ನಮ್ಮಿಂದ ಪ್ರೇರಿತನಾದ ಆ ವೀರ್ಯವಾನನು ಉತ್ತಮ ಥಳಿಯ ಕುದುರೆಯಂತೆ ಸಹಿಸಲು ಕಷ್ಟವಾದರೂ ಆ ಭಾರವನ್ನು ಹೊರಲು ಮುಂದಾದನು. ನಿನ್ನ ಅಸ್ತ್ರೋಪದೇಶದಿಂದ ಮತ್ತು ವೀರ್ಯದಿಂದ ಸಮನ್ವಿತನಾದ ಆ ಬಾಲಕನು ಗರುಡನು ಸಾಗರವನ್ನು ಹೇಗೋ ಹಾಗೆ ಆ ಸೇನೆಯನ್ನು ಪ್ರವೇಶಿಸಿದನು. ಅವನು ಪ್ರವೇಶಿಸಿದ ಮಾರ್ಗದಿಂದಲೇ ವ್ಯೂಹವನ್ನು ಪ್ರವೇಶಿಸಲು ಇಚ್ಛಿಸಿ ನಾವೆಲ್ಲರೂ ಸಾತ್ವತೀಪುತ್ರ ವೀರನನ್ನು ಅನುಸರಿಸಿ ಹೋದೆವು. ಆಗ ಕ್ಷುದ್ರ ರಾಜ ಸೈಂಧವ ಜಯದ್ರಥನು

ರುದ್ರನ ವರದಾನದಿಂದ ನಮ್ಮೆಲ್ಲರನ್ನೂ ತಡೆದನು. ಆಗ ದ್ರೋಣ, ಕೃಪ, ಕರ್ಣ, ದ್ರೌಣಿ, ಬೃಹದ್ಬಲ ಮತ್ತು ಕೃತವರ್ಮ ಈ ಷಡ್ರಥರು ಸೌಭದ್ರನನ್ನು ಸುತ್ತುವರೆದರು. ಅವರೆಲ್ಲ ಮಹಾರಥರಿಂದ ಯುದ್ಧದಲ್ಲಿ ಸುತ್ತುವರೆಯಲ್ಪಟ್ಟು ಪರಮ ಶಕ್ತಿಯಿಂದ ಹೋರಾಡುತ್ತಿದ್ದ ಆ ಬಾಲಕನನ್ನು ಅನೇಕರು ವಿರಥರನ್ನಾಗಿ ಮಾಡಿದರು. ಆಗ ಪರಮ ಸಂಕಟವನ್ನು ಅನುಭವಿಸಿದ ದೌಃಶಾಸನಿಯು ಆ ವಿರಥನಾದವನನ್ನು ಕ್ಷಿಪ್ರವಾಗಿ ಗದೆಯಿಂದ ಪ್ರಹರಿಸಿ ಸಂಹರಿಸಿದನು. ಅವನಾದರೋ ಸಹಸ್ರಾರು ಆನೆ-ಕುದುರೆ-ರಥಾರೂಢರನ್ನು ಸಂಹರಿಸಿ, ಅನೇಕ ನೂರು ಅಗ್ರ ವೀರ ರಾಜಪುತ್ರರನ್ನು ಸಂಹರಿಸಿ, ರಾಜ ಬೃಹದ್ಬಲನನ್ನೂ ಸ್ವರ್ಗಕ್ಕೆ ಕಳುಹಿಸಿ ನಂತರ ಮೃತ್ಯುವಶನಾದನು. ನಮ್ಮ ಶೋಕವನ್ನು ಹೆಚ್ಚಿಸಿದ ಆ ಪುರುಷವ್ಯಾಘ್ರನು ಈ ರೀತಿ ನಡೆದುಕೊಂಡು ಸ್ವರ್ಗಲೋಕವನ್ನು ಪಡೆದನು.”

## ಅರ್ಜುನನ ಪ್ರತಿಜ್ಞೆ

ಧರ್ಮರಾಜನು ಆಡಿದ ಮಾತನ್ನು ಕೇಳಿ ಅರ್ಜುನನು "ಹಾ ಪುತ್ರ!" ಎಂದು ನಿಟ್ಟುಸಿರು ಬಿಡುತ್ತಾ ವ್ಯಥಿತನಾಗಿ ಭೂಮಿಯ ಮೇಲೆ ಬಿದ್ದನು. ಎಲ್ಲರೂ ವಿಷಣ್ಣವದನರಾಗಿ ಧನಂಜಯನನ್ನು ಹಿಡಿದು, ದೀನರಾಗಿ ಎವೆಯಿಕ್ಕದೇ ಪರಸ್ಪರರನ್ನು ನೋಡುತ್ತಿದ್ದರು. ಆಗ ಸಂಜ್ಞೆಗಳನ್ನು ಪಡೆದ ವಾಸವಿಯು ಕ್ರೋಧಮೂರ್ಛಿತನಾಗಿ, ಜ್ವರದಲ್ಲಿರುವವನಂತೆ ಕಂಪಿಸುತ್ತಾ, ಪುನಃ ಪುನಃ ನಿಟ್ಟುಸಿರು ಬಿಡುತ್ತಾ, ಕೈಯಿಂದ ಕೈಯನ್ನು ಉಜ್ಜುತ್ತಾ, ಕಣ್ಣುಗಳಲ್ಲಿ ನೀರು ತುಂಬಿಸಿಕೊಂಡು ಉನ್ಮತ್ತನಾದವನಂತೆ ಯಾವುದೋ ದಿಕ್ಕನ್ನು ದಿಟ್ಟಿಸಿ ನೋಡುತ್ತಾ ಈ ಮಾತನ್ನಾಡಿದನು:

> "ನಿಮ್ಮೆಲ್ಲರ ನಡುವೆ ಈ ಸತ್ಯಪ್ರತಿಜ್ಞೆಯನ್ನು ಮಾಡುತ್ತೇನೆ! ನಾಳೆ ನಾನು ಜಯದ್ರಥನನ್ನು ಸಂಹರಿಸುತ್ತೇನೆ! ಭಯದಿಂದ ಭೀತನಾಗಿ ಅವನು ಧಾರ್ತರಾಷ್ಟ್ರರನ್ನು ಬಿಟ್ಟು ಓಡಿ ಹೋಗದಿದ್ದರೆ, ನನ್ನ ಅಥವಾ ಪುರುಷೋತ್ತಮ ಕೃಷ್ಣನ ಅಥವಾ ಮಹಾರಾಜ ನಿನ್ನ ಶರಣು ಹೋಗದಿದ್ದರೆ ನಾಳೆ ನಾನು ಜಯದ್ರಥನನ್ನು ಕೊಲ್ಲುತ್ತೇನೆ! ಧಾರ್ತರಾಷ್ಟ್ರರಿಗೆ ಪ್ರಿಯಂಕರನಾದ, ಸೌಹಾರ್ದತೆಯನ್ನು ಮರೆತಿರುವ, ಬಾಲವಧೆಗೆ ಕಾರಣನಾದ ಆ ಪಾಪಿ ಜಯದ್ರಥನನ್ನು ನಾಳೆ



ನಾನು ವಧಿಸುತ್ತೇನೆ! ಯುದ್ಧದಲ್ಲಿ ಅವನನ್ನು ರಕ್ಷಣೆಮಾಡಲು ಯಾವ ಕೆಲವರು ನನ್ನೊಡನೆ ಹೋರಾಡುತ್ತಾರೋ ಅವರು ವೀರರಾದ ದ್ರೋಣ-ಕೃಪರೇ ಆಗಿದ್ದರೂ, ಅವರನ್ನು ಶರಗಳಿಂದ ಮುಚ್ಚಿಬಿಡುತ್ತೇನೆ! ಒಂದುವೇಳೆ ಸಂಗ್ರಾಮದಲ್ಲಿ ಇದನ್ನು ನಾನು ಮಾಡದೇ ಇದ್ದರೆ ಶೂರರಿಗೆ ಸಮ್ಮತವಾದ ಪುಣ್ಯಕೃತರ ಲೋಕಗಳು ನನಗೆ ದೊರೆಯದಿರಲಿ! ಮಾತಾಪಿತೃಗಳನ್ನು ಹತ್ಯೆಮಾಡಿದವರಿಗೆ, ಗುರುಪತ್ನಿಯನ್ನು ಭೋಗಿಸಿದವರಿಗೆ, ಚಾಡಿಕೋರರಿಗೆ, ಸಾಧುಗಳನ್ನು ನಿಂದಿಸಿದವರಿಗೆ, ಇತರರ ಮೇಲೆ ಮಿಥ್ಯಾಪವಾದವನ್ನು ಹೊರಿಸುವವರಿಗೆ, ವಿಶ್ವಾಸದಿಂದ ಇಟ್ಟ ನಿಧಿಯನ್ನು ಅಪಹರಿಸಿದವರಿಗೆ, ವಿಶ್ವಾಸಘಾತಿಗಳಿಗೆ, ಇನ್ನೊಬ್ಬರು ಭೋಗಿಸಿದ ಸ್ತ್ರೀಯನ್ನು ಕೂಡುವವನಿಗೆ, ಯಾವಾಗಲೂ ಪಾಪಕರವಾದ ಮಾತುಗಳನ್ನೇ ಆಡುವವರಿಗೆ, ಬ್ರಹ್ಮಹತ್ಯೆಯನ್ನು ಮಾಡಿದವರಿಗೆ, ಗೋಹತ್ಯೆಯನ್ನು ಮಾಡಿದವರಿಗೆ, ಪಾಯಸ-ಗೋಧಿಯ ಅನ್ನ-ಕಾಯಿ-ಪಲ್ಯೆಗಳು-ತಿಲಾನ್ನ-ಹೋಳಿಗೆ-ಮಾಂಸ ಇವುಗಳನ್ನು ನಿವೇದಿಸದೇ ಭಕ್ಷಿಸುವವನಿಗೆ ಯಾವ ನರಕ ಲೋಕಗಳು ಪ್ರಾಪ್ತವಾಗುವವೋ ಅವುಗಳಿಗೆ ನಾನು ನಾಳೆ ಜಯದ್ರಥನನ್ನು

ಕೊಲ್ಲದೇ ಇದ್ದರೆ ಹೋಗುತ್ತೇನೆ. ವೇದಾಧ್ಯಾಯಿಯಾದ ಮತ್ತು ಅತ್ಯಂತ ಕಠೋರ ನಿಷ್ಠೆಯಲ್ಲಿರುವ ದ್ವಿಜೋತ್ತಮನನ್ನು, ವೃದ್ಧರನ್ನು, ಸಾಧುಗಳನ್ನು, ಮತ್ತು ಗುರುಗಳನ್ನು ಅವಮಾನಿಸುವನಿಗೆ; ಬ್ರಾಹ್ಮಣನನ್ನೂ, ಗೋವನ್ನೂ, ಅಗ್ನಿಯನ್ನೂ ಕಾಲಿನಿಂದ ಒದೆಯುವವನಿಗೆ; ನೀರಿನಲ್ಲಿ ಕಫ, ಮಲ ಅಥವಾ ಮೂತ್ರಗಳನ್ನು ವಿಸರ್ಜಿಸುವವನಿಗೆ ಯಾವ ಘೋರ ಗತಿಯು ಪ್ರಾಪ್ತವಾಗುವುದೋ ಅದು ನನಗೂ ಕೂಡ ಜಯದ್ರಥನನ್ನು ಕೊಲ್ಲದೇ ಇದ್ದರೆ ಪ್ರಾಪ್ತವಾಗುತ್ತದೆ. ನಗ್ನರಾಗಿ ಸ್ನಾನಮಾಡುವವರಿಗೆ, ಅತಿಥಿಯನ್ನು ನಿಂದಿಸಿ ಕಳುಹಿಸುವವರಿಗೆ, ಲಂಚತಿನ್ನುವವರಿಗೆ, ಸುಳ್ಳುಹೇಳುವವರಿಗೆ, ವಂಚನೆಮಾಡುವವರಿಗೆ, ಆತ್ಮಹತ್ಯೆ ಮಾಡಿಕೊಳ್ಳುವವರಿಗೆ, ಇತರರ ಮೇಲೆ ಮಿಥ್ಯಾರೋಪ ಮಾಡುವವರಿಗೆ, ಸೇವಕರ ಆಜ್ಞೆಯಂತೆ ನಡೆಯುವವರಿಗೆ, ಮಕ್ಕಳು-ಹೆಂಡತಿ-ಆಶ್ರಿತರೊಂದಿಗೆ ಹಂಚಿಕೊಳ್ಳದೇ ಮೃಷ್ಟಾನ್ನವನ್ನು ಭುಂಜಿಸುವವನಿಗೆ ಯಾವ ಘೋರ ಗತಿಗಳು ಪ್ರಾಪ್ತವಾಗುವವೋ ಅವು ನನಗೂ ಕೂಡ ಜಯದ್ರಥನನ್ನು ನಾನು ಸಂಹರಿಸದೇ ಇದ್ದರೆ ಪ್ರಾಪ್ತವಾಗುತ್ತವೆ. ಆಶ್ರಯದಲ್ಲಿರುವವರನ್ನು ತ್ಯಜಿಸಿ ಅವರ ಪೋಷಣೆಯನ್ನು

ಮಾಡದ ಕ್ರೂರಿಗೆ, ಉಪಕಾರಮಾಡಿದವರನ್ನು ನಿಂದಿಸುವವರಿಗೆ, ಯೋಗ್ಯನಾಗಿರುವ ಪಕ್ಕದ ಮನೆಯವನನ್ನು ಶ್ರಾದ್ಧಕ್ಕೆ ಕರೆಯದೇ ಇರುವವನಿಗೆ, ಅನರ್ಹ ಶೂದ್ರಳನ್ನು ವಿವಾಹವಾದ ಬ್ರಾಹ್ಮಣನನ್ನು ಶ್ರಾದ್ಧಕ್ಕೆ ಕರೆಯುವವನಿಗೆ, ಮದ್ಯಪಾನ ಮಾಡುವವನಿಗೆ, ಧರ್ಮಮರ್ಯಾದೆಯನ್ನು ಮೀರಿದವನಿಗೆ, ಕೃತಘ್ನನಿಗೆ, ಭ್ರಾತೃನಿಂದಕನಿಗೆ ದೊರೆಯುವ ಗತಿಯು ಒಂದುವೇಳೆ ನಾನು ಜಯದ್ರಥನನ್ನು ಕೊಲ್ಲದೇ ಇದ್ದರೆ ಕ್ಷಿಪ್ರವಾಗಿ ನನಗಾಗಲಿ. ಈ ಹಿಂದೆ ಹೇಳಿದವರನ್ನು ಬಿಟ್ಟು ಇನ್ನೂ ಇತರ ಪಾಪಕರ್ಮಿಗಳಿಗೆ ಪ್ರಾಪ್ತವಾಗುವ ಗತಿಯು ಒಂದು ವೇಳೆ ಈ ರಾತ್ರಿಯನ್ನು ಕಳೆದ ನಾಳೆ ನಾನು ಜಯದ್ರಥನನ್ನು ಸಂಹರಿಸದಿದ್ದರೆ ನನಗಾಗಲಿ.

ಈ ನನ್ನ ಮತ್ತೊಂದು ಪ್ರತಿಜ್ಞೆಯನ್ನು ಕೇಳಿರಿ! ಒಂದುವೇಳೆ ಆ ಪಾಪಿಯು ಹತನಾಗದೇ ಸೂರ್ಯನು ಅಸ್ತನಾದನೆಂದಾದರೆ ಇಲ್ಲಿಯೇ ನಾನು ಉರಿಯುತ್ತಿರುವ ಅಗ್ನಿಯನ್ನು ಪ್ರವೇಶಿಸುತ್ತೇನೆ! ಅಸುರರು, ಸುರರು, ಮನುಷ್ಯರು, ಪಕ್ಷಿಗಳು, ಉರಗಗಳು, ಪಿತೃಗಣಗಳು, ನಿಶಾಚರರು, ಬ್ರಹ್ಮರ್ಷಿಗಳು, ದೇವರ್ಷಿಗಳು, ಈ ಚರಾಚರ ಜಗತ್ತು, ಇವುಗಳಲ್ಲದೇ ಇನ್ನೂ

ಯಾವ ಶಕ್ತಿಗಳಿವೆಯೋ ಅವುಗಳೆಲ್ಲವೂ ಸೇರಿದರೂ ನನ್ನ ಶತ್ರುವನ್ನು ರಕ್ಷಿಸಲಾರರು. ಅವನು ಪಾತಾಳಕ್ಕೇ ಹೋಗಲಿ, ಅಲ್ಲಿಂದ ಮುಂದಕ್ಕೂ ಹೋಗಲಿ, ಆಕಾಶಕ್ಕೇ ಹೋಗಲಿ, ದೇವಲೋಕಕ್ಕೆ ಹೋಗಲಿ, ದೈತ್ಯರ ಪಟ್ಟಣಕ್ಕಾದರೂ ಹೋಗಲಿ – ಬೆಳಗಾದೊಡನೆಯೇ ನಾನು ಅಲ್ಲಿಯೇ ಹೋಗಿ ನೂರಾರು ಬಾಣಗಳಿಂದ ನನ್ನ ಶತ್ರುವಿನ ಶಿರವನ್ನು ಹಾರಿಸುತ್ತೇನೆ!”

ಹೀಗೆ ಹೇಳಿ ಅವನು ಗಾಂಡೀವವನ್ನು ಎರಡೂ ಕೈಗಳಿಂದ ಟೇಂಕರಿಸಿದನು. ಆ ಧನುಸ್ಸಿನ ಘೋಷವು ಎಲ್ಲವನ್ನೂ ಅತಿಕ್ರಮಿಸಿ ದಿಕ್ಕುಗಳನ್ನು ಮುಟ್ಟಿತು. ಅರ್ಜುನನು ಪ್ರತಿಜ್ಞೆಮಾಡಲು ಜನಾರ್ದನನು ಪಾಂಚಜನ್ಯವನ್ನೂ ಸಂಕ್ರುದ್ಧನಾದ ಧನಂಜಯನು ದೇವದತ್ತವನ್ನೂ ಊದಿದರು. ಅಚ್ಯುತನ ಬಾಯಿಯ ವಾಯುವಿನಿಂದ ಪಾಂಚಜನ್ಯದ ಉದರಭಾಗವು ಸಂಪೂರ್ಣವಾಗಿ ತುಂಬಿ, ಅಲ್ಲಿಂದ ಹೊರಬಂದ ಶಬ್ಧವು ಪಾತಾಲ, ಆಕಾಶ, ದಿಕ್ಕುಗಳು ಮತ್ತು ದಿಕ್ಪಾಲಕರಿಂದ ಕೂಡಿದ ಸಂಪೂರ್ಣ ಜಗತ್ತು ಇವೆಲ್ಲವನ್ನೂ ಯುಗಾಂತವೋ ಎಂಬಂತೆ ನಡುಗಿಸಿತು. ಆ ಮಹಾತ್ಮನು ಪ್ರತಿಜ್ಞೆಮಾಡಲು ಎಲ್ಲಕಡೆ ವಾದ್ಯ ಘೋಷಗಳು ಮೊಳಗಿದವು ಮತ್ತು ಪಾಂಡವರು ಸಿಂಹನಾದಗೈದರು.

## ಜಯದ್ರಥನಿಗೆ ಕೌರವರು ನೀಡಿದ ಆಶ್ವಾಸನೆ

ಪುತ್ರಶೋಕದಿಂದಿದ್ದ ಪಾಂಡವರ ಆ ಮಹಾಶಬ್ಧವನ್ನು ಚಾರರಿಂದ ಕೇಳಿ ಜಯದ್ರಥನು ಸಂಕಟದಿಂದ ಮೇಲೆದ್ದನು. ಶೋಕಸಮ್ಮೂಢಹೃದಯನಾಗಿ, ದುಃಖದಿಂದ ತುಂಬಾ ಪೀಡಿತನಾಗಿ, ವಿಪುಲವಾದ ಅಗಾಧ ಶೋಕಸಾಗರದಲ್ಲಿ ಮುಳುಗಿದವನಾಗಿ, ಸೈಂಧವನು ರಾಜರ ಸಭೆಗೆ ನಡೆದನು. ಅಲ್ಲಿ ನರದೇವರ ಮುಂದೆ ಅವನು ವಿಲಪಿಸಿದನು. ಅಭಿಮನ್ಯುವಿನ ತಂದೆಗೆ ಹೆದರಿ ಭಯಪಡುತ್ತಾ ಈ ಮಾತನ್ನಾಡಿದನು:

> "ಪಾಂಡುವಿನ ಕ್ಷೇತ್ರದಲ್ಲಿ ಕಾಮಿ ಶಕ್ರನಿಂದ ಯಾವನು ಹುಟ್ಟಿದ್ದಾನೋ ಆ ದುರ್ಬುದ್ಧಿಯು ನನ್ನನ್ನೊಬ್ಬನನ್ನೇ ಯಮಕ್ಷಯಕ್ಕೆ ಕಳುಹಿಸಲು ಇಚ್ಛಿಸಿದ್ದಾನೆ. ಬದುಕಿರುವ ಇಚ್ಛೆಯಿಂದ ನಾನು ನನ್ನ ಮನೆಗೆ ತೆರಳುತ್ತೇನೆ. ನಿಮಗೆ ಮಂಗಳವಾಗಲಿ! ಕ್ಷತ್ರಿಯರ್ಷಭರೇ! ಅಥವಾ ಅವನಿಗೆ ಸರಿಸಾಟಿಯಾದ ಬಲದಿಂದ ನನ್ನನ್ನು ರಕ್ಷಿಸಬೇಕು. ಪಾರ್ಥನ ಪ್ರತಿಜ್ಞೆಗೆ ಪ್ರತಿಯಾಗಿ ವೀರರಾದ ನೀವು ನನಗೆ ಅಭಯವನ್ನು ನೀಡಬೇಕು. ದ್ರೋಣ, ದುರ್ಯೋಧನ, ಕೃಪ, ಕರ್ಣ, ಮದ್ರೇಶ, ಬಾಹ್ಲಿಕರು ಮತ್ತು ದುಃಶಾಸನಾದಿಗಳು

ಕಂಟಕವೊದಗಿರುವ ನನ್ನನ್ನು ಯಮನ ಬಾಧೆಯಿಂದಲೂ ಪಾರುಮಾಡಬಲ್ಲರು. ಹಾಗಿರುವಾಗ ನನ್ನೊಬ್ಬನನ್ನೇ ಕೊಲ್ಲಲು ಬಯಸಿರುವ ಫಲ್ಗುನನು ಯಾವ ಲೆಖ್ಖಕ್ಕೆ? ಭೂಮಂಡಲಕ್ಕೇ ಒಡೆಯರಾಗಿರುವ ನೀವೆಲ್ಲರೂ ಸೇರಿ ನನ್ನೊಬ್ಬನನ್ನು ರಕ್ಷಿಸಲಾರರೇ? ಪಾಂಡವೇಯರ ಹರ್ಷದ ಕೂಗನ್ನು ಕೇಳಿ ನನಗೆ ಮಹಾಭಯವಾಗುತ್ತಿದೆ. ಪಾರ್ಥಿವರೇ! ಸಾಯುವವನಿಗಾಗುವಂತೆ ನನ್ನ ಅಂಗಗಳು ಶಿಥಿಲಗೊಳ್ಳುತ್ತಿವೆ. ಗಾಂಡೀವ ಧನ್ವಿಯು ಪ್ರತಿಜ್ಞೆ ಮಾಡಿದುದರಿಂದ ನನ್ನ ವಧೆಯು ನಿಶ್ಚಿತವಾಗಿಬಿಟ್ಟಿದೆ. ಆದುದರಿಂದಲೇ ಶೋಕಪಡಬೇಕಾಗಿದ್ದ ಸಮಯದಲ್ಲಿಯೂ ಪಾಂಡವರು ಸಂತೋಷದಿಂದ ಕೂಗುತ್ತಿದ್ದಾರೆ. “ದೇವತೆಗಳಾಗಲೀ, ಗಂಧರ್ವರಾಗಲೀ, ಅಸುರ-ಉರಗ-ರಾಕ್ಷಸರಾಗಲೀ ಇದನ್ನು ಸುಳ್ಳಾಗಿಸಲು ಉತ್ಸುಕರಿಲ್ಲದಿರುವಾಗ ಇನ್ನು ನರಾಧಿಪರು ಯಾವ ಲೆಖ್ಖಕ್ಕೆ?” ಎಂದು ಹೇಳಿಕೊಳ್ಳುತ್ತಿದ್ದಾರೆ. ಆದುದರಿಂದ ನನಗೆ ಅನುಜ್ಞೆಯನ್ನು ನೀಡಿ. ನಿಮಗೆ ಮಂಗಳವಾಗಲಿ! ಪಾಂಡವರು ಪತ್ತೇ ಹಚ್ಚದ ಹಾಗೆ ಕಣ್ಣುತಪ್ಪಿಸಿಕೊಂಡು ಹೋಗುತ್ತೇನೆ!”

ತನ್ನ ಕಾರ್ಯಸಾಧನೆಯೇ ಹೆಚ್ಚಿನದೆಂದು ತಿಳಿದ ರಾಜಾ ದುರ್ಯೋಧನನು ಹೀಗೆ ಭಯದಿಂದ ವ್ಯಾಕುಲಗೊಂಡ ಬುದ್ಧಿಯುಳ್ಳವನಾಗಿ ವಿಲಪಿಸುತ್ತಿದ್ದ ಅವನಿಗೆ ಹೇಳಿದನು:

> “ನರವ್ಯಾಘ್ರ! ಹೆದರಬೇಡ! ಕ್ಷತ್ರಿಯ ವೀರರ ಮಧ್ಯೆ ನಿಂತಿರುವ ನಿನ್ನೊಡನೆ ಹೋರಾಡಲು ಯಾರು ತಾನೇ ಬಯಸುತ್ತಾರೆ? ನಾನು, ವೈಕರ್ತನ ಕರ್ಣ, ಚಿತ್ರಸೇನ, ವಿವಿಂಶತಿ, ಭೂರಿಶ್ರವ, ಶಲ, ಶಲ್ಯ, ವೃಷಸೇನ, ಪುರುಮಿತ್ರ, ಜಯ, ಭೋಜ, ಕಾಂಭೋಜ, ಸುದಕ್ಷಿಣ, ಸತ್ಯವ್ರತ, ವಿಕರ್ಣ, ದುರ್ಮುಖ, ಜೊತೆಗೆ ದುಃಶಾಸನ, ಸುಬಾಹು, ಕಲಿಂಗ, ಯುಧಾಯುಧ, ಅವಂತಿಯ ವಿಂದಾನುವಿಂದರು, ದ್ರೋಣ, ದ್ರೌಣಿ, ಸೌಬಲ, ರಥಿಗಳಲ್ಲಿ ಶ್ರೇಷ್ಠ, ಅಮಿತದ್ಯುತಿ, ಶೂರ ಸ್ವಯಂ ನೀನು ಹೇಗೆ ಪಾಂಡವೇಯರಿಂದ ಭಯವನ್ನು ಕಾಣುತ್ತಿರುವೆ? ನನ್ನ ಈ ಹನ್ನೊಂದು ಅಕ್ಷೌಹಿಣೀ ಸೇನೆಗಳೂ ನಿನ್ನ ರಕ್ಷಣೆಯನ್ನೇ ಗುರಿಯಾಗಿಟ್ಟುಕೊಂಡು ಪ್ರಯತ್ನಿಸಿ ಹೋರಾಡುತ್ತದೆ. ಸೈಂಧವ! ನೀನು ಭಯಪಟ್ಟುಕೊಳ್ಳಬೇಡ! ನಿನ್ನ ಭಯವನ್ನು ಹೊರಹಾಕು!”

ದುರ್ಯೋಧನನಿಂದ ಹೀಗೆ ಆಶ್ವಾಸನೆಯನ್ನು ಪಡೆದ ಸೈಂಧವನು

ಅವನೊಡನೆ ರಾತ್ರಿ ದ್ರೋಣನ ಬಳಿ ಹೋದನು. ಅಲ್ಲಿ ಅವನು ದ್ರೋಣನಿಗೆ ಕಾಲುಮುಟ್ಟಿ ನಮಸ್ಕರಿಸಿ ಅವನ ಅನುಮತಿಯನ್ನು ಪಡೆದು ಸಮೀಪದಲ್ಲಿ ಕುಳಿತು ವಿನಯಾನ್ವಿತನಾಗಿ ಕೇಳಿದನು:

> “ಭಗವನ್! ಲಕ್ಷ್ಯಭೇದನದಲ್ಲಿ, ದೂರ ಎಸೆಯುವುದರಲ್ಲಿ, ಕೈಚಳಕದಲ್ಲಿ, ದೃಢವಾಗಿ ಹೊಡೆಯುವುದರಲ್ಲಿ ನನಗೆ ಮತ್ತು ಫಲ್ಗುನನಿಗೆ ಇರುವ ವ್ಯತ್ಯಾಸವನ್ನು ಹೇಳಿ. ಆಚಾರ್ಯ! ಧನುರ್ವಿದ್ಯೆಯಲ್ಲಿ ನನಗೂ ಅರ್ಜುನನಿಗೂ ಇರುವ ವ್ಯತ್ಯಾಸವನ್ನು ಯಥಾವತ್ತಾಗಿ ತಿಳಿಯ ಬಯಸುತ್ತೇನೆ. ಇದನ್ನು ನಿಮಗೆ ತಿಳಿದಹಾಗೆ ಹೇಳಿ.”

ದ್ರೋಣನು ಹೇಳಿದನು:

> “ಅಯ್ಯಾ! ನಾನು ನಿನಗೆ ಮತ್ತು ಅರ್ಜುನ ಇಬ್ಬರಿಗೂ ಸಮನಾಗಿಯೇ ಆಚಾರ್ಯತ್ವವನ್ನು ಮಾಡಿದ್ದೇನೆ. ಆದರೆ, ಯೋಗ ಮತ್ತು ಪಟ್ಟ ದುಃಖಗಳಿಂದಾಗಿ ಅರ್ಜುನನು ನಿನಗಿಂತಲೂ ಅಧಿಕನು. ಆದರೆ ನೀನು ಯುದ್ಧದಲ್ಲಿ ಎಂದೂ ಪಾರ್ಥನಿಗೆ ಹೆದರಬೇಕಾಗಿಲ್ಲ. ಈ ಭಯದಿಂದ ನಾನು ನಿನ್ನನ್ನು ರಕ್ಷಿಸುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ. ನನ್ನ ಬಾಹುಗಳಿಂದ ರಕ್ಷಿಸಲ್ಪಟ್ಟವನನ್ನು ಅಮರರೂ ಕೂಡ

ಆಳಲಾರರು! ಪಾರ್ಥನು ಸೀಳಲಾರದಂಥಹ ವ್ಯೂಹವನ್ನು ರಚಿಸುತ್ತೇನೆ. ಆದುದರಿಂದ ಪಿತೃಪೈತಾಮಹರ ಮಾರ್ಗವನ್ನು ಅನುಸರಿಸಿ, ಸ್ವಧರ್ಮವನ್ನು ಪಾಲಿಸಿ, ಯುದ್ಧಮಾಡು! ನೀನು ಭಯಪಡಬೇಡ! ವೇದಗಳನ್ನು ವಿಧಿವತ್ತಾಗಿ ಅಧ್ಯಯನ ಮಾಡಿ ಅಗ್ನಿಯಲ್ಲಿ ನೀನು ಆಹುತಿಗಳನ್ನಿತ್ತಿರುವೆ. ಬಹಳಷ್ಟು ಯಜ್ಞಗಳನ್ನೂ ಇಷ್ಟಿಗಳನ್ನೂ ಮಾಡಿರುವೆ. ಆದುದರಿಂದ ನಿನಗೆ ಮೃತ್ಯುಭಯದ ಭಯವು ಇರಬಾರದು. ಮಂದ ಮನುಷ್ಯರಿಗೆ ದುರ್ಲಭವಾದ ಮಹಾಭಾಗ್ಯವನ್ನು ನೀನು ಪಡೆದಿರುವೆ. ಭುಜವೀರ್ಯದಿಂದ ದಿವ್ಯ ಲೋಕಗಳನ್ನು ಗೆದ್ದು ಅನುತ್ತಮವಾದುದನ್ನು ಪಡೆಯುತ್ತೀಯೆ. ಕೌರವರು, ಪಾಂಡವರು, ವೃಷ್ಣಿಗಳು ಮತ್ತು ಅನ್ಯ ಮಾನವರು, ಪುತ್ರನೊಂದಿಗೆ ನಾನೂ ಕೂಡ ಚಿರರಲ್ಲ. ಇದರ ಕುರಿತು ಯೋಚಿಸು. ಒಬ್ಬೊಬ್ಬರಾಗಿ ನಾವೆಲ್ಲರೂ ಬಲಶಾಲಿ ಕಾಲನಿಂದ ಹತರಾಗಿ ತಮ್ಮ ತಮ್ಮ ಕರ್ಮಗಳಿಗನುಗುಣವಾದ ಪರಲೋಕಕ್ಕೆ ಹೋಗುತ್ತೇವೆ. ತಪಸ್ಸನ್ನು ತಪಿಸಿ ತಪಸ್ವಿಗಳು ಯಾವ ಲೋಕಗಳನ್ನು ಪಡೆಯುತ್ತಾರೋ ಆ ಲೋಕಗಳನ್ನೇ ಕ್ಷತ್ರಧರ್ಮಾಶ್ರಿತರಾದ ಶೂರ ಕ್ಷತ್ರಿಯರು ಪಡೆಯುತ್ತಾರೆ.”

ಭಾರದ್ವಾಜನಿಂದ ಹೀಗೆ ಆಶ್ವಾಸಿತನಾದ ಸೈಂದವನು ಆ ಭಯವನ್ನು ತೊರೆದು ಪಾರ್ಥನೊಂದಿಗೆ ಯುದ್ಧಮಾಡುವ ಮನಸ್ಸು ಮಾಡಿಕೊಂಡನು.

## ಅರ್ಜುನನ ವಾಕ್ಯ

ಪಾರ್ಥನು ಸಿಂಧುರಾಜನ ವಧೆಯ ಪ್ರತಿಜ್ಞೆಯನ್ನು ಮಾಡಲು ಮಹಾಬಾಹು ವಾಸುದೇವನು ಧನಂಜಯನಿಗೆ ಹೇಳಿದನು:

> “ಸಹೋದರರ ಅಭಿಪ್ರಾಯಗಳನ್ನು ತಿಳಿಯದೆಯೇ ನೀನು “ನಾಳೆ ಸೈಂಧವನನ್ನು ಕೊಲ್ಲುತ್ತೇನೆ!” ಎಂದು ಅತಿಸಾಹಸ ಕಾರ್ಯವನ್ನು ಮಾತಿನ ಮೂಲಕ ಕೇಳಿಸಿಬಿಟ್ಟೆಯಲ್ಲ! ನನ್ನೊಡನೆ ಕೂಡ ವಿಚಾರಿಸದೇ ನೀನು ಅತಿಭಾರವಾದ ಈ ಕಾರ್ಯವನ್ನು ವಹಿಸಿಕೊಂಡಿರುವೆ. ಈಗ ನಾವು ಸರ್ವಲೋಕದ ಅಪಹಾಸ್ಯಕ್ಕೆ ಒಳಗಾಗದಂತೆ ಹೇಗೆ ಮುಂದುವರೆಯಬೇಕು? ಧಾರ್ತರಾಷ್ಟ್ರನ ಶಿಬಿರಕ್ಕೆ ನಾನು ಕಳುಹಿಸಿದ ಚರರು ಶೀಘ್ರವಾಗಿ ಬಂದು ಅಲ್ಲಿ ನಡೆದುದನ್ನು ನನಗೆ ತಿಳಿಸಿದ್ದಾರೆ. ನೀನು ಸಿಂಧುರಾಜವಧೆಯ ಪ್ರತಿಜ್ಞೆ ಮಾಡಿದಾಗ ಇಲ್ಲಿ ಆದ ಮಹಾ ಸಿಂಹನಾದವನ್ನು ಅವರು ಕೇಳಿದರು. ಆ ಶಬ್ಧದಿಂದ ಭಯಗೊಂಡ ಸೈಂಧವನೊಂದಿಗೆ

ಧಾರ್ತರಾಷ್ಟ್ರರು ಇದು ಅಕಸ್ಮಾತ್ತಾಗಿ ಕೇಳಿಬಂದ ಸಿಂಹನಾದವಲ್ಲವೆಂದು ಅಭಿಪ್ರಾಯಪಟ್ಟು ಒಟ್ಟು ಗೂಡಿದರು. ಕೌರವರ ಸೇನೆಗಳಲ್ಲಿಯೂ ಆನೆ-ಕುದುರೆ-ಪದಾತಿಗಳ ಮತ್ತು ರಥಘೋಷದ ಭೈರವ ಶಬ್ಧವು ಕೇಳಿಬಂದಿತು. ಅಭಿಮನ್ಯುವಿನ ವಧೆಯನ್ನು ಕೇಳಿ ಆರ್ತನಾದ ಧನಂಜಯನು ನಿಶ್ಚಯವಾಗಿ ಕ್ರೋಧದಿಂದ ರಾತ್ರಿಯೇ ಯುದ್ಧಕ್ಕೆ ಹೊರಡುತ್ತಾನೆ ಎಂದು ಯೋಚಿಸಿ ಅವರು ಸನ್ನದ್ಧರಾಗಿದ್ದರು. ಆಗ ಅವರು ಸತ್ಯವ್ರತನಾದ ನೀನು ಸಿಂಧುರಾಜನ ವಧೆಯ ಕುರಿತು ಮಾಡಿದ ಪ್ರತಿಜ್ಞೆಯ ಸತ್ಯವನ್ನು ಕೇಳಿ ತಿಳಿದುಕೊಂಡರು. ಆಗ ಸುಯೋಧನ ಮತ್ತು ಅವನ ಅಮಾತ್ಯರು ಕ್ಷುದ್ರಮೃಗಗಳಂತೆ ಭಯಗೊಂಡು ವಿಮನಸ್ಕರಾಗಿ ಕುಳಿತುಕೊಂಡರು. ಆಗ ದೀನ ಜಯದ್ರಥನು ತುಂಬಾ ದುಃಖಿತನಾಗಿ ಎದ್ದು ಅಮಾತ್ಯರೊಡಗೂಡಿ ತನ್ನ ಶಿಬಿರಕ್ಕೆ ತೆರಳಿದನು. ಅವನು ಯೋಚಿಸಬೇಕಾದ ಸಮಯದಲ್ಲಿ ಶ್ರೇಯಸ್ಸುಂಟುಮಾಡುವ ಎಲ್ಲ ಕ್ರಿಯೆಗಳ ಕುರಿತು ಮಂತ್ರಾಲೋಚನೆ ಮಾಡಿ ರಾಜಸಂಸದಿಗೆ ಬಂದು ಸುಯೋಧನನಿಗೆ ಈ ಮಾತನ್ನಾಡಿದನು: “ತನ್ನ ಮಗನನ್ನು ಕೊಂದವನು ನಾನು ಎಂದು ತಿಳಿದು ಧನಂಜಯನು ನಾಳೆ

ಯುದ್ಧದಲ್ಲಿ ನನ್ನನ್ನು ಎದುರಿಸುವವನಿದ್ದಾನೆ. ಅವನ ಸೇನೆಯ ಮಧ್ಯೆ ನನ್ನನ್ನು ವಧಿಸುವ ಪ್ರತಿಜ್ಞೆಯನ್ನೂ ಮಾಡಿದ್ದಾನೆ. ಸವ್ಯಸಾಚಿಯ ಪ್ರತಿಜ್ಞೆಯನ್ನು ದೇವತೆಗಳಾಗಲೀ, ಗಂಧರ್ವರಾಗಲೀ, ಅಸುರ-ಉರಗ-ರಾಕ್ಷಸರಾಗಲೀ ಸುಳ್ಳುಮಾಡಲು ಉತ್ಸುಕರಾಗಿಲ್ಲ. ಆದುದರಿಂದ ನೀವೆಲ್ಲರೂ ಸಂಗ್ರಾಮದಲ್ಲಿ ನನ್ನನ್ನು ರಕ್ಷಿಸಬೇಕು. ನಿಮ್ಮ ನೆತ್ತಿಯ ಮೇಲೆ ಕಾಲಿಟ್ಟು ಧನಂಜಯನು ತನ್ನ ಗುರಿಯನ್ನು ಹೊಡೆಯಲು ಬಿಡಬೇಡಿ! ಕುರುನಂದನ! ಯುದ್ಧದಲ್ಲಿ ನೀನು ನನ್ನನ್ನು ರಕ್ಷಿಸಲಾರೆ ಎಂದಾದರೆ ನನಗೆ ಅನುಜ್ಞೆಯನ್ನು ನೀಡು. ನಾನು ನನ್ನ ಮನೆಗೆ ಹೋಗುತ್ತೇನೆ.”

ಹೀಗೆ ಹೇಳಲು ಸುಯೋಧನನು ವಿಮನಸ್ಕನಾಗಿ ತಲೆತಗ್ಗಿಸಿ ಯೋಚಿಸಿದನು. ಅವನು ಹೀಗೆ ಶಪಿತನಾದುದನ್ನು ಕೇಳಿ ಸುಮ್ಮನಾಗಿ ಯೋಚಿಸತೊಡಗಿದನು. ರಾಜನು ದುಃಖಿತನಾಗಿರುವುದನ್ನು ನೋಡಿ ಸೈಂಧವನು ತನಗೆ ಒಳ್ಳೆಯದಾಗುವ ರೀತಿಯಲ್ಲಿ ಮೃದುವಾಗಿ ಹೀಗೆ ಹೇಳಿದನು: “ಮಹಾಹವದಲ್ಲಿ ಅರ್ಜುನನ ಅಸ್ತ್ರಗಳನ್ನು ಅಸ್ತ್ರಗಳಿಂದ ಪ್ರತಿಯಾಗಿ ಹೊಡೆಯಬಲ್ಲ, ಅವನಷ್ಟು ವೀರ್ಯವಂತನಾದ

ಧನುರ್ಧರನನ್ನು ನಿನ್ನ ಕಡೆಯವರಲ್ಲಿ ಯಾರನ್ನೂ ನಾನು ಕಾಣುತ್ತಿಲ್ಲ. ವಾಸುದೇವನನ್ನು ಸಹಾಯಕನಾಗಿ ಪಡೆದಿರುವ, ಗಾಂಡೀವ ಧನುಸ್ಸನ್ನು ಟೇಂಕರಿಸುವ ಅರ್ಜುನನ ಎದುರು ಸಾಕ್ಷಾತ್ ಶತಕ್ರತುವೇ ನಿಲ್ಲದಿರುವಾಗ ಬೇರೆ ಯಾರಿಗೆ ತಾನೇ ಇದು ಸಾಧ್ಯ? ಹಿಂದೆ ಹಿಮಾಲಯ ಗಿರಿಯಲ್ಲಿ ಮಹಾತೇಜಸ್ವಿ ಪ್ರಭೂ ಮಹೇಶ್ವರನೂ ಕೂಡ ಪಾರ್ಥನೊಂದಿಗೆ ನಿಂತೇ ಯುದ್ಧಮಾಡಿದನೆಂದು ಕೇಳಿದ್ದೇವೆ. ದೇವರಾಜನಿಂದ ಉತ್ತೇಜಿತನಾದ ಅವನು ಒಬ್ಬನೇ ರಥದಲ್ಲಿ ಹಿರಣ್ಯಪುರವಾಸಿನೀ ಸಹಸ್ರಾರು ದಾನವರನ್ನು ಸಂಹರಿಸಿದನು. ಧೀಮತ ವಾಸುದೇವನೊಡಗೂಡಿ ಕೌಂತೇಯನು ಅಮರರೊಂದಿಗೆ ಈ ಮೂರು ಲೋಕಗಳನ್ನೂ ನಾಶಗೊಳಿಸಬಲ್ಲ ಎಂದು ನನಗನ್ನಿಸುತ್ತದೆ. ಆದುದರಿಂದ ನೀನು ತಿಳಿದಂತೆ ನನಗೆ ಹೋಗಲು ಅನುಜ್ಞೆಯನ್ನು ನೀಡು ಅಥವಾ ವೀರ ಪುತ್ರನೊಂದಿಗೆ ಮಹಾತ್ಮ ದ್ರೋಣನು ನನ್ನನ್ನು ರಕ್ಷಿಸಲಿ.”

ಅರ್ಜುನ! ಆಗ ಸ್ವಯಂ ರಾಜನು ತುಂಬಾ ಕಳವಳಗೊಂಡು ಆಚಾರ್ಯನೊಂದಿಗೆ ಒಪ್ಪಂದವನ್ನು ಮಾಡಿಕೊಂಡು

ರಥಗಳನ್ನು ಸಜ್ಜುಗೊಳಿಸಲು ಆದೇಶವಿತ್ತಿದ್ದಾನೆ. ಕರ್ಣ, ಭೂರಿಶ್ರವ, ದ್ರೌಣಿ, ವೃಷಸೇನ, ದುರ್ಜಯ ಮತ್ತು ಮದ್ರರಾಜ ಈ ಆರು ಮಂದಿ ಎದುರಿರುತ್ತಾರೆ. ಅರ್ಧ ಶಕಟ ಮತ್ತೊಂದು ಅರ್ಧ ಪದ್ಮಾಕಾರದ ವ್ಯೂಹವನ್ನು ದ್ರೋಣನು ಕಲ್ಪಿಸಿದ್ದಾನೆ. ಪದ್ಮಕರ್ಣಿಕದ ಮಧ್ಯದಲ್ಲಿ ಸೂಚಿಭಾಗದಲ್ಲಿ ಜಯದ್ರಥನಿರುತ್ತಾನೆ. ಹೀಗೆ ಸಿಂಧುರಾಜನು ಯುದ್ಧದುರ್ಮದರಾದ ವೀರರಿಂದ ರಕ್ಷಿಸಲ್ಪಟ್ಟಿದ್ದಾನೆ. ಧನುಸ್ಸು, ಅಸ್ತ್ರ, ವೀರ್ಯ, ಪ್ರಾಣ ಮತ್ತು ಹುಟ್ಟಿನಲ್ಲಿ ಹೆಚ್ಚಿನವರಾದ ಈ ಷಡ್ರಥರನ್ನು ಸುಲಭವಾಗಿ ಗೆಲ್ಲಲಾರೆವು ಎನ್ನುವುದು ಖಂಡಿತ. ಸೇನೆಗಳೊಂದಿಗೆ ಇವರನ್ನು ಗೆಲ್ಲದೇ ಜಯದ್ರಥನನ್ನು ನಾವು ತಲುಪಲಾರೆವು. ಆ ಆರರಲ್ಲಿ ಒಬ್ಬೊಬ್ಬರ ವೀರ್ಯದ ಕುರಿತೂ ಯೋಚಿಸು. ಒಟ್ಟಿಗೇ ಆ ನರವ್ಯಾಘ್ರರನ್ನು ಜಯಿಸುವುದು ಶಕ್ಯವಿಲ್ಲವೆನಿಸುತ್ತದೆ. ಇನ್ನೊಮ್ಮೆ ನಾವು ಕಾರ್ಯಸಿದ್ಧಿಗಾಗಿ ಮತ್ತು ನಮ್ಮ ಹಿತದ ನೀತಿಯ ಕುರಿತು ಸಚಿವರೊಂದಿಗೆ ಮತ್ತು ಸುಹೃದಯರೊಂದಿಗೆ ಮಂತಾಲೋಚನೆ ಮಾಡಬೇಕೆಂದು ಯೋಚಿಸುತ್ತಿದ್ದೇನೆ.”

ಆಗ ಅರ್ಜುನನು ಹೇಳಿದನು:

“ಯಾರ ಬಲವು ಅಧಿಕವೆಂದು ನೀನು ಅಭಿಪ್ರಾಯಪಡುತ್ತಿದ್ದೀಯೋ ಧಾರ್ತರಾಷ್ಟ್ರನ ಆ ಷಡ್ರಥರ ವೀರ್ಯವು ನನ್ನ ಅರ್ಧಕ್ಕೂ ಸಮನಿಲ್ಲ ಎಂದು ನನಗನ್ನಿಸುತ್ತದೆ. ಮಧುಸೂದನ! ಜಯದ್ರಥನನ್ನು ವಧಿಸಲು ಬಯಸಿದ ನಾನು ಅವರೆಲ್ಲರ ಅಸ್ತ್ರಗಳನ್ನೂ ಅಸ್ತ್ರಗಳಿಂದ ತುಂಡುಮಾಡುವುದನ್ನು ನೀನು ನೋಡುವೆಯಂತೆ! ಸೇನೆಗಳೊಂದಿಗೆ ದ್ರೋಣನು ನೋಡುತ್ತಾ ವಿಲಪಿಸಲು ನಾನು ಸಿಂಧುರಾಜನ ರುಂಡವನ್ನು ನೆಲಕ್ಕುರುಳಿಸುತ್ತೇನೆ! ಒಂದುವೇಳೆ ಸಾಧ್ಯರೂ, ರುದ್ರರೂ, ಅಶ್ವಿನಿಗಳೊಡನೆ ವಸುಗಳೂ, ಇಂದ್ರನೊಂದಿಗೆ ಮರುತರೂ, ವಿಶ್ವೇದೇವರೂ, ಹಾಗೆಯೇ ಅಸುರರೂ, ಗಂಧರ್ವರೊಡನೆ ಪಿತೃಗಳೂ, ಸುಪರ್ಣರೂ, ಸಾಗರ-ಪರ್ವತಗಳೂ, ಆಕಾಶ, ಭೂಮಿ, ದಿಕ್ಪಾಲಕರೊಂದಿಗೆ ದಿಕ್ಕುಗಳೂ, ಗ್ರಾಮ-ಅರಣ್ಯಗಳೂ, ಸ್ಥಾವರ-ಚರ ಭೂತಗಳೂ ಸಿಂಧುರಾಜನನ್ನು ರಕ್ಷಿಸಲು ಬಂದರೂ, ನಾಳೆ ರಣದಲ್ಲಿ ನನ್ನ ಬಾಣಗಳಿಂದ ಅವನು ಹತನಾಗುವುದನ್ನು ನೀನು ನೋಡುತ್ತೀಯೆ! ಕೃಷ್ಣ! ನನ್ನ

ಆಯುಧವನ್ನು ಮುಟ್ಟಿಕೊಂಡು ಸತ್ಯವಾಗಿ ನಾನು ಈ ಶಪಥವನ್ನು ಮಾಡುತ್ತಿದ್ದೇನೆ. ಆ ಪಾಪಿ ದುರ್ಮತಿ ಮಹೇಷ್ವಾಸನ ರಕ್ಷಕನಾಗಿರುವ ದ್ರೋಣನನ್ನೇ ಮೊಟ್ಟಮೊದಲಿಗೆ ಎದಿರಿಸುತ್ತೇನೆ. ಇವನೇ ದ್ಯೂತದ ಪಣವೆಂದು ಸುಯೋಧನನು ತಿಳಿದಿದ್ದಾನೆ. ಆದುದರಿಂದ ಅವನ ಸೇನೆಯ ಅಗ್ರಭಾಗವನ್ನು ಭೇದಿಸಿಯೇ ನಾನು ಸೈಂಧವನನ್ನು ಕೊಲ್ಲುತ್ತೇನೆ. ವಜ್ರದಿಂದ ಗಿರಿಶೃಂಗಗಳನ್ನು ಸೀಳುವಂತೆ ಆ ಮಹೇಷ್ವಾಸರನ್ನು ನಾಳೆ ಯುದ್ಧದಲ್ಲಿ ನನ್ನ ತಿಗ್ಮತೇಜಸ್ವೀ ನಾರಾಚಗಳಿಂದ ಸೀಳುವುದನ್ನು ನೀನು ನೋಡುವೆ! ನಿಶಿತ ಶರಗಳಿಂದ ಒಡೆದು ಕೆಳಗೆ ಬೀಳುವ ಮತ್ತು ಬಿದ್ದ ಆನೆ, ಕುದುರೆ ಮತ್ತು ನರರ ಶರೀರಗಳಿಂದ ರಕ್ತವು ಹರಿಯುತ್ತದೆ. ಗಾಂಡೀವದಿಂದ ಪ್ರಯೋಗಿಸಲ್ಪಟ್ಟ, ಮನಸ್ಸು ಮತ್ತು ವಾಯುವೇಗಗಳನ್ನುಳ್ಳ ಬಾಣಗಳು ಸಹಸ್ರಾರು ನರ-ಆನೆ-ಕುದುರೆಗಳ ದೇಹಗಳನ್ನು ಕತ್ತರಿಸಲಿವೆ. ಯಮ, ಕುಬೇರ, ವರುಣ, ರುದ್ರ ಮತ್ತು ಇಂದ್ರರಿಂದ ನಾನು ಯಾವ ಅಸ್ತ್ರಗಳನ್ನು ಪಡೆದಿದ್ದೆನೋ ಆ ಘೋರ ಅಸ್ತ್ರಗಳನ್ನು ನರರು ನಾಳೆ ಯುದ್ಧದಲ್ಲಿ ನೋಡಲಿದ್ದಾರೆ. ಸೈಂಧವನನ್ನು ರಕ್ಷಿಸುವವರೆಲ್ಲರೂ ನನ್ನ ಅಸ್ತ್ರ-ಬ್ರಹ್ಮಾಸ್ತ್ರಗಳಿಂದ

ನಾಶವಾಗುವುದನ್ನು ನೋಡಲಿದ್ದಾರೆ. ನಾಳೆ ಯುದ್ಧದಲ್ಲಿ ನನ್ನ ಶರವೇಗದಿಂದ ರಾಜರ ರುಂಡಗಳು ತುಂಡಾಗಿ ಭೂಮಿಯ ಮೇಲೆ ಚೆಲ್ಲಿ ಬೀಳುವುದನ್ನು ನೀನು ನೋಡಲಿರುವೆ. ಕ್ರವ್ಯಾದಗಳನ್ನು ತೃಪ್ತಿಪಡಿಸುತ್ತೇನೆ. ಶತ್ರುಗಳನ್ನು ಓಡಿಸುತ್ತೇನೆ. ಸ್ನೇಹಿತರನ್ನು ಸಂತೋಷಗೊಳಿಸುತ್ತೇನೆ. ಸೈಂಧವನನ್ನು ಉರುಳಿಸುತ್ತೇನೆ. ಬಹಳಷ್ಟು ಕೆಟ್ಟದ್ದನ್ನು ಮಾಡಿರುವ, ಕೆಟ್ಟ ಸಂಬಂಧೀ, ಪಾಪದೇಶದಲ್ಲಿ ಹುಟ್ಟಿದ ರಾಜ ಸೈಂಧವನು ನನ್ನಿಂದ ಹತನಾಗಿ ತಾನೇ ಶೋಕಿಸುವವನಿದ್ದಾನೆ. ಸದಾ ಕ್ಷೀರಾನ್ನವನ್ನೇ ಉಣ್ಣುತ್ತಾ ಬಂದ ಆ ಪಾಪಾಚಾರೀ ಸೈಂಧವನು ರಾಜರೊಂದಿಗೆ ರಣದಲ್ಲಿ ನನ್ನ ಬಾಣಗಳಿಂದ ಸಾಯುತ್ತಾನೆ. ಕೃಷ್ಣ! ನಾಳೆ ಬೆಳಿಗ್ಗೆ ಯುದ್ಧದಲ್ಲಿ ನನ್ನ ಸರಿಸಮನಾದ ಧನುರ್ಧರನು ಬೇರೆ ಯಾರೂ ಎಂದು ಸುಯೋಧನನು ಯೋಚಿಸುವಂತೆ ಮಾಡುತ್ತೇನೆ. ದಿವ್ಯ ಗಾಂಡೀವ ಧನುಸ್ಸಿನೊಡನೆ ಯುದ್ಧಮಾಡುವ ಮತ್ತು ನೀನೇ ಸಾರಥಿಯಾಗಿರುವ ನನ್ನನ್ನು ಯಾರುತಾನೇ ಗೆದ್ದಾರು? ಚಂದ್ರನಲ್ಲಿ ಲಕ್ಷ್ಮಿಯಿರುವಂತೆ ಮತ್ತು ಸಮುದ್ರದಲ್ಲಿ ನೀರಿರುವಂತೆ ನನ್ನ ಪ್ರತಿಜ್ಞೆಯಲ್ಲಿಯೂ ಸತ್ಯವಿದೆಯೆಂದು ತಿಳಿ. ನನ್ನ ಅಸ್ತ್ರಗಳನ್ನು ಅವಮಾನಿಸಬೇಡ! ನನ್ನ ದೃಢ ಧನುಸ್ಸನ್ನು

> ಅವಮಾನಿಸಬೇಡ! ನನ್ನ ಬಾಹುಗಳ ಬಲವನ್ನು ಅವಮಾನಿಸಬೇಡ! ಈ ಧನಂಜಯನನ್ನು ಅವಮಾನಿಸಬೇಡ! ಸೋಲನ್ನಪ್ಪದೇ ವಿಜಯಿಯಾಗುವಹಾಗೆ ನಾನು ಸಂಗ್ರಾಮವನ್ನು ಪ್ರವೇಶಿಸುತ್ತೇನೆ. ಅದೇ ಸತ್ಯದಿಂದ ಸಂಗ್ರಾಮದಲ್ಲಿ ಜಯದ್ರಥನನ್ನು ಕೊಲ್ಲುತ್ತೇನೆ ಎಂದು ತಿಳಿ. ಬ್ರಾಹ್ಮಣರಲ್ಲಿ ಸತ್ಯವು ನಿಶ್ಚಿತವಾದುದು. ಸಾಧುಗಳಲ್ಲಿ ಸನ್ನತಿಯು ನಿಶ್ಚಿತವಾದುದು. ದಕ್ಷರಲ್ಲಿ ಸಂಪತ್ತು ನಿಶ್ಚಿತವಾದುದು. ಮತ್ತು ನಾರಾಯಣನಲ್ಲಿ ಜಯವು ನಿಶ್ಚಿತವಾದುದು."

ಹೀಗೆ ಹೃಷೀಕೇಶನಿಗೆ ಮತ್ತು ಸ್ವಯಂ ತಾನೇ ತನಗೆ ಹೇಳಿಕೊಂಡು ವಾಸವಿ ಅರ್ಜುನನು ಗಾಢ ಧ್ವನಿಯಲ್ಲಿ ಮತ್ತೊಮ್ಮೆ ಪ್ರಭು ಕೇಶವನಿಗೆ ಹೇಳಿದನು:

> "ಕೃಷ್ಣ! ರಾತ್ರಿಯು ಕಳೆದು ಪ್ರಭಾತದಲ್ಲಿಯೇ ನನ್ನ ರಥವನ್ನು ಸಿದ್ಧಗೊಳಿಸಬೇಕು. ನಾವು ವಹಿಸಿಕೊಂಡಿರುವ ಕಾರ್ಯವು ಮಹತ್ತರವಾದುದು!"

## ಶ್ರೀಕೃಷ್ಣನು ಸುಭದ್ರೆಯನ್ನು ಸಂತವಿಸಿದ್ದುದು

ವಾಸುದೇವ-ಧನಂಜಯರು ದುಃಖಶೋಕಾರ್ತರಾಗಿ ಸರ್ಪಗಳಂತೆ ನಿಟ್ಟುಸಿರು ಬಿಡುತ್ತಾ ನಿದ್ರೆಯನ್ನು ಪಡೆಯಲಾರದೇ ಹೋದರು. ನರನಾರಾಯಣರು ಕ್ರುದ್ಧರಾಗಿದ್ದಾರೆ ಎನ್ನುವುದನ್ನು ತಿಳಿದು ವಾಸವನೊಂದಿಗೆ ದೇವತೆಗಳು ವ್ಯಥಿತರಾಗಿ ಮುಂದೇನು ನಡೆಯಲಿದೆ? ಎಂದು ಚಿಂತಿಸತೊಡಗಿದರು. ಭಯಸೂಚಕವಾದ, ದಾರುಣವಾದ ಕ್ರೂರ ಗಾಳಿಯು ಬೀಸತೊಡಗಿತು. ಸೂರ್ಯನ ಸುತ್ತಲೂ ದುಂಡಾದ ಪರಿಧಿಯು ಕಬಂಧದೊಡನೆ ಕಾಣಿಸಿಕೊಂಡಿತು. ಮಿಂಚಿನೊಡನೆ ಗರ್ಜಿಸುತ್ತಾ ಒಣ ಸಿಡಿಲುಗಳು ಸಿಡಿದವು. ಶೈಲ-ವನ-ಕಾನನಗಳೊಂದಿಗೆ ಭೂಮಿಯು ನಡುಗಿತು. ಮಕರಾಲಯ ಸಾಗರಗಳು ಅಲ್ಲೋಲಕಲ್ಲೋಲಗೊಂಡವು. ಸಮುದ್ರದ ಕಡೆ ಹರಿಯುತ್ತಿದ್ದ ನದಿಗಳು ಹಿಂದಿರುಗಿ ಅವು ಹುಟ್ಟಿದ ಕಡೆ ಹರಿಯತೊಡಗಿದವು. ಯಮನ ರಾಷ್ಟ್ರನ ವೃದ್ಧಿಗಾಗಿ ಮತ್ತು ಕ್ರವ್ಯಾದಗಳ ಸಂತೋಷಾರ್ಥವಾಗಿ ಅಶ್ವ-ಗಜ-ರಥ-ಪದಾತಿ ಸೈನಿಕರ ಎರಡು ತುಟಿಗಳೂ ಅದುರತೊಡಗಿದವು. ಆ ಎಲ್ಲ ರೋಮಾಂಚಕಾರೀ ದಾರುಣ ಉತ್ಪಾತಗಳನ್ನು ನೋಡಿ ವಾಹನಗಳು ರೋದಿಸಿದವು ಮತ್ತು ಮಲಮೂತ್ರಗಳನ್ನು ವಿಸರ್ಜಿಸಿದವು. ಕೌರವ ಸೇನೆಯವರೆಲ್ಲರೂ ಮಹಾಬಲ ಸವ್ಯಸಾಚಿಯ ಉಗ್ರ ಪ್ರತಿಜ್ಞೆಯನ್ನು ಕೇಳಿ ವ್ಯಥಿತರಾದರು.

ಆಗ ಮಹಾಬಾಹು ಪಾಕಶಾಸನಿಯು ಕೃಷ್ಣನಿಗೆ ಹೇಳಿದನು:

“ಸೊಸೆಯೊಂದಿಗಿರುವ ನಿನ್ನ ತಂಗಿ ಸುಭದ್ರೆಯನ್ನು ಸಂತವಿಸು! ಮಾಧವ! ಸೊಸೆಯ ಮತ್ತು ಅವಳ ಸಖಿಯರ ಶೋಕವನ್ನು ಸಾಂತ್ವನದ ಮತ್ತು ಸತ್ಯದಿಂದ ಕೂಡಿದ ಮಾತುಗಳಿಂದ ದೂರಮಾಡು!”

ಆಗ ವಾಸುದೇವನು ದುಃಖದಿಂದ ಅರ್ಜುನನ ಮನೆಗೆ ಹೋಗಿ ಪುತ್ರಶೋಕದಿಂದ ಆರ್ತಳಾಗಿದ್ದ ದುಃಖಿತಳಾಗಿದ್ದ ತಂಗಿಯನ್ನು ಸಂತವಿಸಿದನು:

“ವಾರ್ಷ್ಣೇಯೀ! ಸೊಸೆಯೊಂದಿಗೆ ಕುಮಾರನಿಗಾಗಿ ಶೋಕಿಸಬೇಡ! ಪ್ರಾಣಿಗಳೆಲ್ಲವೂ ಕಾಲನಿರ್ಮಿತವಾದ ಈ ಪರಿಸ್ಥಿತಿಗೆ ಬಂದೇ ಬರುತ್ತವೆ. ವಿಶೇಷವಾಗಿ ವೀರ ಕ್ಷತ್ರಿಯರ ಕುಲದಲ್ಲಿ ಹುಟ್ಟಿದ ಈ ನಿನ್ನ ಪುತ್ರನ ಮರಣವು ಅವನಿಗೆ ತಕ್ಕುದಾಗಿದೆ. ಶೋಕಿಸಬೇಡ! ಅದೃಷ್ಟದಿಂದ ತನ್ನ ತಂದೆಯ ಪರಾಕ್ರಮಕ್ಕೆ ಸಮನಾದ ವೀರ ಮಹಾರಥನು ಕ್ಷಾತ್ರ ವೀರರು ಬಯಸುವ ಗತಿಯನ್ನು ವಿಧಿವತ್ತಾಗಿಯೇ ಪಡೆದಿದ್ದಾನೆ. ಬಹಳಷ್ಟು ಶತ್ರುಗಳನ್ನು ಗೆದ್ದು,  ಮೃತ್ಯುಲೋಕಗಳಿಗೂ ಕಳುಹಿಸಿ ಅವನು ಸರ್ವಕಾಮಗಳನ್ನೂ ಪೂರೈಸಬಲ್ಲ ಪುಣ್ಯಕೃತರ ಅಕ್ಷಯ ಲೋಕಗಳಿಗೆ ಹೋಗಿದ್ದಾನೆ. ತಪಸ್ಸು,

ಬ್ರಹ್ಮಚರ್ಯ, ಶಾಸ್ತ್ರಜ್ಞಾನ ಮತ್ತು ಪ್ರಜ್ಞೆಯ ಮೂಲಕ ಸಂತರು ಯಾವ ಗತಿಯನ್ನು ಬಯಸುತ್ತಾರೋ ಆ ಗತಿಯನ್ನೇ ನಿನ್ನ ಮಗನು ಪಡೆದಿದ್ದಾನೆ. ಭದ್ರೇ! ವೀರಮಾತೆಯಾದ, ವೀರನ ಪತ್ನಿಯಾದ, ವೀರಪುತ್ರಿಯಾದ, ವೀರರನ್ನೇ ಬಾಂಧವರನ್ನಾಗಿ ಪಡೆದಿರುವ ನೀನು ಮಗನ ಕುರಿತು ಶೋಕಿಸಬೇಡ. ಅವನು ಪರಮ ಗತಿಯನ್ನು ಪಡೆದಿದ್ದಾನೆ. ಕ್ಷುದ್ರನಾದ, ಬಾಲಘಾತಕನಾದ ಸೈಂಧವನು ತನ್ನ ಸುಹೃದ್ಗಣ-ಬಾಂಧವರೊಂದಿಗೆ ಈ ಪಾಪದ ಫಲವನ್ನು ಪಡೆಯುತ್ತಾನೆ. ಈ ರಾತ್ರಿ ಕಳೆದರೆ ಆ ಪಾಪಕರ್ಮಿಯು ಅಮರಾವತಿಯಲ್ಲಿ ಹೊಕ್ಕಿಕೊಂಡರೂ ಪಾರ್ಥನಿಂದ ಬಿಡುಗಡೆ ಹೊಂದಲಾರ! ಸೈಂಧವನ ಶಿರಸ್ಸು ರಣದಲ್ಲಿ ಹಾರಿಹೋಗಿ ಸಮಂತಪಂಚಕದ ಹೊರಗೆ ಬಿದ್ದಿತು ಎನ್ನುವುದನ್ನು ನೀನು ನಾಳೆಯೇ ಕೇಳುವೆ. ಶೋಕರಹಿತಳಾಗಿರು. ರೋದಿಸಬೇಡ! ಕ್ಷತ್ರಧರ್ಮವನ್ನು ಆದರಿಸಿ ಅವನು ಶೂರರ ಸಂತರ ಗತಿಯನ್ನು ಪಡೆದಿದ್ದಾನೆ. ನಾವು ಮತ್ತು ಅನ್ಯ ಶಸ್ತ್ರಜೀವಿಗಳೂ ಕೂಡ ಇದೇ ಗತಿಯನ್ನು ಪಡೆಯುತ್ತವೆ. ವಿಶಾಲ ಹೆಗಲಿನ, ಯುದ್ಧದಲ್ಲಿ ಬೆನ್ನುತೋರಿಸದ, ಶತ್ರುಗಳನ್ನು ಗೆದ್ದ ನಿನ್ನ ಮಗ ಆ ಮಹಾಬಾಹುವು ಸ್ವರ್ಗಕ್ಕೆ ಹೋಗಿದ್ದಾನೆ.

ಪರಿತಪಿಸುವುದನ್ನು ಬಿಡು! ಆ ಶೂರ ಮಹಾರಥ ವೀರ್ಯವಾನನು ತಂದೆ ಮತ್ತು ತಾಯಿಯ ಕುಲಗಳನ್ನು ಅನುಸರಿಸಿ ಸಹಸ್ರಾರು ಶತ್ರುಗಳನ್ನು ಸಂಹರಿಸಿ ಹತನಾದನು. ನಿನ್ನ ಸೊಸೆಯನ್ನು ಸಂತವಿಸು. ತುಂಬಾ ದುಃಖಿಸಬೇಡ. ನಾಳೆಯೇ ನೀನು ಅತ್ಯಂತ ಪ್ರಿಯವಾರ್ತೆಯನ್ನು ಕೇಳುವೆ. ವಿಶೋಕಳಾಗು! ಪಾರ್ಥನು ಪ್ರತಿಜ್ಞೆಮಾಡಿದಂತೆಯೇ ನಡೆಯುತ್ತದೆ. ಅನ್ಯಥಾ ಅಲ್ಲ. ನಿನ್ನ ಗಂಡನು ಬಯಸಿದುದು ಎಂದೂ ನಿಷ್ಫಲವಾಗುವುದಿಲ್ಲ. ಒಂದುವೇಳೆ ಮನುಷ್ಯರು, ಪನ್ನಗರು, ಪಿಶಾಚಿಗಳು, ರಜನೀಚರರು, ಪಕ್ಷಿಗಳು, ಸುರಾಸುರರೂ ಕೂಡ ರಣರಂಗದಲ್ಲಿ ಸೇರಿ ಸಿಂಧುರಾಜನನ್ನು ರಕ್ಷಿಸಲು ಬಂದರೂ ಬೆಳಿಗ್ಗೆ ಅವರೆಲ್ಲರೊಡನೆಯೂ ಅವನು ಉಳಿಯುವುದಿಲ್ಲ!”

ಮಹಾತ್ಮ ಕೇಶವನ ಈ ಮಾತನ್ನು ಕೇಳಿದ ಸುಭದ್ರೆಯು ಪುತ್ರಶೋಕಾರ್ತಳಾಗಿ, ಬಹಳ ದುಃಖಿತಳಾಗಿ ವಿಲಪಿಸಿದಳು.

“ಹಾ ಪುತ್ರ! ಮಂದಭಾಗ್ಯಳಾದ ನನ್ನಲ್ಲಿ ಹುಟ್ಟಿ ತಂದೆಯ ಸಮನಾದ ಪರಾಕ್ರಮವನ್ನು ಪಡೆದು ನೀನು ಹೇಗೆ ತಾನೇ ಯುದ್ಧದಲ್ಲಿ ನಿಧನಹೊಂದಿದೆ? ಕನ್ನೈದಿಲೆಯಂತೆ

ಶ್ಯಾಮವರ್ಣದ, ಸುಂದರ ಹಲ್ಲಿನ, ಸುಂದರ ಕಣ್ಣುಗಳ ನಿನ್ನ ಮುಖವು ರಣ ಧೂಳಿನಿಂದ ಆಚ್ಛಾದಿತವಾಗಿ ಹೇಗೆ ಕಾಣುತ್ತಿದೆಯೋ! ಯುದ್ಧದಿಂದ ಹಿಮ್ಮೆಟ್ಟದ, ಸುಂದರ ಶಿರಸ್ಸಿನಿಂದಲೂ, ಕಂಬುಕಂಠದಿಂದಲೂ, ನೀಳವಾದ ಬಾಹುಗಳಿಂದಲೂ, ಉನ್ನತವಾದ ಹೆಗಲುಗಳಿಂದಲೂ, ವಿಸ್ತಾರವಾದ ಎದೆಯಿಂದಲೂ, ಆಳವಾಗಿರುವ ಹೊಟ್ಟೆಯಿಂದಲೂ, ಸುಂದರವಾದ ದಷ್ಟಪುಷ್ಟ ಸರ್ವಾಂಗಗಳಿಂದಲೂ, ಸುಂದರ ಕಣ್ಣುಗಳಿಂದಲೂ ಕೂಡಿರುವ ಉದಯಿಸುತ್ತಿರುವ ಚಂದ್ರನಂತೆ ಕಾಣುತ್ತಿದ್ದ ಶೂರನಾದ ನೀನು ಶಸ್ತ್ರಗಳಿಂದ ಗಾಯಗೊಂಡು ಬಿದ್ದಿರುವುದನ್ನು ಭೂತಗಳು ನೋಡುತ್ತಿವೆಯೇ? ಹಿಂದೆ ರತ್ನಗಂಬಳಿಗಳಿಂದ ಅಚ್ಛಾದಿತವಾದ ಶಯನದಲ್ಲಿ ಮಲಗುತ್ತಿದ್ದ ನೀನು ಸುಖೋಚಿತವದ ಎಳೆಯ ವಯಸ್ಸಿನಲ್ಲಿ ಹೇಗೆ ತಾನೇ ಇಂದು ಭೂಮಿಯಲ್ಲಿ ಮಲಗಿರುವೆ? ಮಹಾಭುಜ! ವೀರ! ಹಿಂದೆ ಶ್ರೇಷ್ಠ ಸ್ತ್ರೀಯರಿಂದ ಸೇವೆಮಾಡಿಸಿಕೊಳ್ಳುತ್ತಿದ್ದ ನೀನು ಇಂದು ನರಿಗಳ ಮಧ್ಯೆ ರಣದಲ್ಲಿ ಬಿದ್ದು ಹೇಗೆ ತಾನೆ ಸೇವೆಗಳನ್ನು ಪಡೆಯುತ್ತಿದ್ದೀಯೆ? ಹಿಂದೆ ಸಂತೋಷದಿಂದ ಸೂತ-ಮಾಗದ-ಬಂಧಿಗಳಿಂದ

ಸ್ತುತಿಸಲ್ಪಡುತ್ತಿದ್ದ ನೀನು ಇಂದು ಕ್ರವ್ಯಾದಗಣಗಳ ಘೋರ ಕಿರುಚಾಟಗಳ ಉಪಾಸನೆಯಲ್ಲಿದ್ದೀಯೆ! ಪಾಂಡವರನ್ನು, ವೃಷ್ಣಿವೀರರನ್ನು ಮತ್ತು ವೀರ ಪಾಂಚಾಲರನ್ನು ನಾಥರನ್ನಾಗಿ ಪಡೆದಿದ್ದ ನೀನು ಅನಾಥನಂತೆ ಯಾರಿಂದ ಹತನಾದೆ? ಮಗನೇ! ನಿನ್ನನ್ನು ನೋಡಿ ತೃಪ್ತಳಾಗದ ಮಂದಭಾಗ್ಯಳಾದ ನಾನು ಇಂದು ನಿಜವಾಗಿಯೂ ಯಮಲೋಕಕ್ಕೆ ಹೋಗುವವಳಿದ್ದೇನೆ! ವಿಶಾಲಾಕ್ಷನಾದ, ಸುಂದರ ಗುಂಗುರುಕೂದಲುಳ್ಳ, ಇಂಪಾಗಿ ಮಾತನಾಡುವ, ಸುಗಂಧಯುಕ್ತವಾದ, ಗಾಯಗಳಿಲ್ಲದ ನಿನ್ನ ಮುಖವನ್ನು ಪುನಃ ಎಂದು ನೋಡುತ್ತೇನೆ? ಭೀಮಸೇನನ ಬಲಕ್ಕೆ ಧಿಕ್ಕಾರ! ಪಾರ್ಥನ ಬಿಲ್ಲುಗಾರಿಕೆಗೆ ಧಿಕ್ಕಾರ! ವೃಷ್ಣಿವೀರರ ವೀರ್ಯಕ್ಕೆ ಧಿಕ್ಕಾರ! ಪಾಂಚಾಲರ ಬಲಕ್ಕೆ ಧಿಕ್ಕಾರ! ಕೇಕಯರಿಗೂ, ಚೇದಿಗಳಿಗೂ, ಮತ್ಸ್ಯರಿಗೂ, ಸೃಂಜಯರಿಗೂ ಧಿಕ್ಕಾರ! ಅವರು ನಿನ್ನಂತಹ ವೀರನನ್ನು ರಣಕ್ಕೆ ಕಳುಹಿಸಿ ಜೀವಸಹಿತ ಕೆಡವಿಸಿದರು. ಶತ್ರುಗಳಿಂದ ಹತನಾಗಿರುವ ಅಭಿಮನ್ಯುವನ್ನು ಕಾಣದೇ ಶೋಕವ್ಯಾಕುಲಲೋಚನಳಾಗಿ ಇಂದು ಇಡೀ ಭೂಮಿಯೇ ಶೂನ್ಯವಾಗಿದೆಯೆಂದು ಕಾಣುತ್ತಿದ್ದೇನೆ. ವಾಸುದೇವನ ಅಳಿಯ ಮತ್ತು ಗಾಂಡೀವಧನ್ವಿಯ ವೀರ

ಮಗನಾದ ನಿನ್ನನ್ನು ವಿರಥನಾಗಿ ಅನ್ಯರಿಂದ ಬೀಳಿಸಲ್ಪಟ್ಟಿರುವುದನ್ನು ಹೇಗೆ ತಾನೇ ನೋಡುತ್ತಿರುವೆ? ಹಾ ವೀರ! ಸ್ವಪ್ನದಲ್ಲಿ ಕಂಡ ಧನದಂತೆ ನೀನು ನನಗೆ ಕಾಣಿಸಿಕೊಂಡು ಮರೆಯಾಗಿಬಿಟ್ಟೆಯಲ್ಲ! ಅಯ್ಯೋ! ನೀರಿನ ಗುಳ್ಳೆಯಂತೆ ಈ ಮನುಷ್ಯ ಜನ್ಮವು ಚಂಚಲ ಮತ್ತು ಅನಿತ್ಯ. ಕರುವನ್ನು ಕಳೆದುಕೊಂಡ ಹಸುವಿನಂತೆ ವಿರಹ ಶೋಕದಲ್ಲಿ ಮುಳುಗಿಹೋಗಿರುವ ಈ ತರುಣೀ ನಿನ್ನ ಭಾರ್ಯೆಯನ್ನು ನಾನು ಹೇಗೆ ಸಂತವಿಸಲಿ? ಪುತ್ರಕ! ನಿನಗೆ ಪುತ್ರಪ್ರಾಪ್ತಿಯಾಗಲಿದ್ದ ಈ ಸಮಯದಲ್ಲಿ ನಿನ್ನ ದರ್ಶನಕ್ಕೆ ಕಾತುರಳಾಗಿರುವ ನನ್ನನ್ನು ನೋಡದೇ ಅಕಾಲದಲ್ಲಿ ಏಕೆ ಹೊರಟುಹೋದೆ? ಕೇಶವನನ್ನೇ ನಾಥನನ್ನಾಗಿ ಪಡೆದ ನೀನೂ ಕೂಡ ಸಂಗ್ರಾಮದಲ್ಲಿ ಅನಾಥನಂತೆ ಹತನಾದೆನೆಂದರೆ ಪ್ರಾಜ್ಞರಿಗೂ ಕೂಡ ಕೃತಾಂತನ ಬಹುವಿಧದ ಗತಿಯು ತಿಳಿದಿರಲು ಅಸಾಧ್ಯ ಎಂದೆನಿಸುತ್ತದೆ. ಯಜ್ಞ ಮಾಡಿದವರಿಗೆ, ದಾನಶೀಲರಿಗೆ, ಬ್ರಾಹ್ಮಣರಿಗೆ, ಕೃತಾತ್ಮರಿಗೆ, ಬ್ರಹ್ಮಚರ್ಯವನ್ನು ಪಾಲಿಸುವವರಿಗೆ, ಪುಣ್ಯತೀರ್ಥಗಳಿಗೆ ಹೋಗಿರುವವರಿಗೆ, ಕೃತಜ್ಞರಿಗೆ, ಉದಾರಿಗಳಿಗೆ, ಗುರುಶುಶ್ರೂಷಣೆಗಳಿಗೆ, ಸಹಸ್ರ ದಕ್ಷಿಣೆಗಳನ್ನಿತ್ತವರಿಗೆ ಯಾವ

ಗತಿಯು ದೊರೆಯುತ್ತದೆಯೋ ಆ ಸದ್ಗತಿಯನ್ನು ನೀನು ಪಡೆಯುವವನಾಗು. ಯುದ್ಧದಿಂದ ಹಿಮ್ಮೆಟ್ಟದೇ ಹೋರಾಡಿ ಸಂಗ್ರಾಮದಲ್ಲಿ ಆಯುಧಗಳಿಂದ ಮಡಿಯುವ ಶೂರರಿಗೆ ದೊರೆಯುವ ಗತಿಯು ನಿನಗೂ ದೊರೆಯಲಿ. ಪುತ್ರಕ! ಸಾವಿರ ಗೋವುಗಳನ್ನು ದಾನಮಾಡುವವರಿಗೆ, ಯಜ್ಞಸಾಮಾಗ್ರಿಗಳನ್ನು ದಾನಮಾಡುವವರಿಗೆ, ಸುಸಜ್ಜಿತವಾದ ವಾಸಸ್ಥಾನಗಳನ್ನು ದಾನಮಾಡುವವರಿಗೆ ದೊರೆಯುವ ಶುಭ ಗತಿಯೂ; ಸಂಶಿತವ್ರತ ಮುನಿಗಳು ಬ್ರಹ್ಮಚರ್ಯದ ಮೂಲಕ ಪಡೆಯುವ ಗತಿಯೂ, ಏಕಪತ್ನಿಯನ್ನು ಹೊಂದಿರುವವರಿಗೆ ದೊರೆಯುವ ಗತಿಯೂ ನಿನಗೆ ದೊರೆಯುವಂತಾಗಲಿ! ಪುತ್ರಕ! ಸುಚರಿತ ರಾಜರಿಗೆ ದೊರೆಯುವ ಶಾಶ್ವತ ಗತಿ, ಪವಿತ್ರ ಪುಣ್ಯಗಳಿಂದ ನಾಲ್ಕು ಆಶ್ರಮಗಳಲ್ಲಿ ಸುರಕ್ಷಿತರಾಗಿರುವವರಿಗೆ, ದೀನಾನುಕಂಪಿಗಳಿಗೆ, ಸತತವೂ ಹಂಚಿಕೊಳ್ಳುವವರಿಗೆ, ಬೇರೆಯವರ ವಿಷಯದಲ್ಲಿ ದೋಷವನ್ನು ತೋರಿಸಿಕೊಡದವರಿಗೆ ಯಾವ ಗತಿಯುತ್ತದೆಯೋ ಆ ಗತಿಯನ್ನು ನೀನೂ ಪಡೆ. ಪುತ್ರಕ! ವ್ರತಪರಾಯಣರಿಗೆ, ಧರ್ಮಶೀಲರಿಗೆ, ಗುರುಶುಶ್ರೂಷಣರಿಗೆ, ಅತಿಥಿಗಳಿಗೆ ನಿರಾಶೆಯನ್ನುಂಟುಮಾಡದವರಿಗೆ ಯಾವ ಗತಿಯೋ ಆ

ಗತಿಯು ನಿನ್ನದಾಗಲಿ! ಋತುಕಾಲದಲ್ಲಿ ತನ್ನ ಪತ್ನಿಯನ್ನು ಕೂಡುವ ಮನಸ್ಸಿಗೆ ಮತ್ತು ಅನ್ಯರ ಪತ್ನಿಯರನ್ನು ಕೂಡದೇ ಇರುವವರಿಗೆ ದೊರೆಯುವ ಗತಿಯು ನಿನ್ನದಾಗಲಿ! ಇರುವ ಎಲ್ಲವನ್ನೂ ಸಮಭಾವದಿಂದ ಕಾಣುವವರಿಗೆ, ಮಾತ್ಸ್ಯರ್ಯವನ್ನು ಕಳೆದುಕೊಂಡವರಿಗೆ, ಯಾರನ್ನೂ ಮಾತಿನಿಂದ ನಿಂದಿಸದವರಿಗೆ, ಕ್ಷಮಾವಂತರಿಗೆ ಯಾವ ಸದ್ಗತಿಯೋ ಅದು ನಿನಗೂ ದೊರೆಯಲಿ. ಮದ್ಯ-ಮಾಂಸಗಳಿಂದ ಮತ್ತು ಹಾಗೆಯೇ ಮದ, ದಂಭ ಮತ್ತು ಸುಳ್ಳುಗಳಿಂದ ದೂರವಿರುವವರಿಗೆ, ಇನ್ನೊಬ್ಬರನ್ನು ನೋಯಿಸುವುದನ್ನು ಬಿಟ್ಟವರಿಗೆ ದೊರೆಯುವ ಗತಿಯು ನಿನಗೂ ದೊರೆಯಲಿ. ಸಕಲ ಶಾಸ್ತ್ರಗಳನ್ನೂ ತಿಳಿದಿರುವ, ಆದರೆ ಲಜ್ಜಾಶೀಲರಾದ, ಜ್ಞಾನದಿಂದ ತೃಪ್ತಿಹೊಂದಿರುವ, ಜಿತೇಂದ್ರಿಯರಾದ ಸಾಧುಗಳು ಯಾವ ಗತಿಗೆ ಹೋಗುತ್ತಾರೋ ಆ ಗತಿಗೆ ನೀನೂ ಹೋಗುವವನಾಗು!”

ಹೀಗೆ ವಿಲಪಿಸುತ್ತಿರುವ ದೀನಳಾದ ಶೋಕಕರ್ಶಿತಳಾದ ಸುಭದ್ರೆಯ ಬಳಿ ವೈರಾಟೀ ಉತ್ತರೆಯ ಸಹಿತ ಪಾಂಚಾಲಿಯು ಬಂದಳು. ಅವರು ಅವನನ್ನು ಬಯಸಿ ರೋದಿಸಿ, ವಿಲಪಿಸಿ ಸುದುಃಖಿತರಾಗಿ,

ಹುಚ್ಚು ಹಿಡಿದವರಂತಾಗಿ, ಮೂರ್ಛೆತಪ್ಪಿ ಭೂಮಿಯ ಮೇಲೆ ಬಿದ್ದರು. ಆಗ ತುಂಬಾ ದುಃಖಿತನಾದ ಕೃಷ್ಣನು ದುಃಖಿತಳಾದ ಅವಳನ್ನು ಉಪಚರಿಸಿ, ನೀರನ್ನು ಚುಮುಕಿಸಿ ಹಿತವಚನಗಳನ್ನು ಹೇಳಿ ಸಂತವಿಸಿದನು. ಮೂರ್ಛಿತಳಾಗಿದ್ದಂತೆ ಅಳುತ್ತಿದ್ದ, ಮತ್ತು ತರತರನೆ ನಡುಗುತ್ತಿದ್ದ ಭಗಿನಿಗೆ ಪುಂಡರೀಕಾಕ್ಷನು ಈ ಮಾತನ್ನಾಡಿದನು: "ಸುಭದ್ರೇ! ಮಗನ ಕುರಿತು ಶೋಕಿಸಬೇಡ!" ಪಾಂಚಾಲಿ ಮತ್ತು ಉತ್ತರೆಯನ್ನು ಸಂತವಿಸುತ್ತಾ ಹೇಳಿದನು:

> "ಅಭಿಮನ್ಯು ಕ್ಷತ್ರಿಯಪುಂಗವನು ಸರ್ವಶ್ರೇಷ್ಠ ಸದ್ಗತಿಯನ್ನು ಹೊಂದಿರುವನು. ವರಾನನೇ! ನಮ್ಮ ಕುಲದಲ್ಲಿ ಇನ್ನು ಇತರ ಪುರುಷರು ಯಾರು ಇರುವರೋ ಅವರೆಲ್ಲರೂ ಯಶಸ್ವಿ ಅಭಿಮನ್ಯುವಿನ ಗತಿಯನ್ನೇ ಪಡೆಯುವಂಥವರಾಗಲಿ. ನಿನ್ನ ಮಹಾರಥ ಮಗನು ಏಕಾಂಗಿಯಾಗಿ ಇಂದು ಯಾವ ಪರಾಕ್ರಮವನ್ನು ಮಾಡಿ ತೋರಿಸಿದನೋ ಅದನ್ನು ನಾವೂ ಮತ್ತು ನಮ್ಮ ಸುಹೃದಯರೂ ಕಾರ್ಯರೂಪದಲ್ಲಿ ಮಾಡಿ ತೋರಿಸಬೇಕಾಗಿದೆ."

ಹೀಗೆ ತಂಗಿಯನ್ನೂ, ದ್ರೌಪದಿ-ಉತ್ತರೆಯರನ್ನೂ ಸಂತವಿಸಿ ಆ ಮಹಾಬಾಹುವು ಪಾರ್ಥನ ಬಳಿಗೆ ಬಂದನು. ಅನಂತರ ನೃಪರನ್ನೂ

ಬಂಧುಗಳನ್ನೂ ಕಳುಹಿಸಿಕೊಟ್ಟು ಕೃಷ್ಣನು ಅಂತಃಪುರವನ್ನು ಪ್ರವೇಶಿಸಲು ಅನ್ಯರೂ ತಮ್ಮ ತಮ್ಮ ಶಿಬಿರಗಳಿಗೆ ತೆರಳಿದರು.

## ಶ್ರೀಕೃಷ್ಣ-ದಾರುಕರ ಸಂಭಾಷಣೆ

ಅನಂತರ ಪುಂಡರೀಕಾಕ್ಷನು ಅರ್ಜುನನ ಅಪ್ರತಿಮ ಭವನವನ್ನು ಪ್ರವೇಶಿಸಿ ಆಚಮನ ಮಾಡಿ ಶುಭಲಕ್ಷಣ ವೇದಿಯ ಮೇಲೆ ವೈಡೂರ್ಯಸನ್ನಿಭ ಶುಭ ದರ್ಭೆಗಳನ್ನು ಹಾಸಿದನು. ಅನಂತರ ವಿಧಿವತ್ತಾಗಿ ಮಾಲೆಗಳಿಂದ, ಸುಮಂಗಲ ಅರಳು ಮತ್ತು ಗಂಧಗಳಿಂದ ಆ ದರ್ಭೆಯ ಹಾಸಿಗೆಯನ್ನು ಅಲಂಕರಿಸಿ, ಸುತ್ತಲೂ ಉತ್ತಮ ಆಯುಧಗಳನ್ನಿಟ್ಟನು. ಅನಂತರ ಆಚಮನ ಮಾಡಿದ ಪಾರ್ಥನಿಗೆ ವಿನೀತರಾದ ಪರಿಚಾರಕರು ಅದರ ಬಳಿಯೇ ರಾತ್ರಿ ತ್ರ್ಯಂಬಕನಿಗೆ ಬಲಿಯನ್ನು ಕೊಡುವುದರ ಕುರಿತು ಮಾಡಿ ತೋರಿಸಿಕೊಟ್ಟರು. ಆಗ ಪ್ರೀತಮನಸ್ಕನಾದ ಪಾರ್ಥನು ಗಂಧಮಾಲೆಗಳಿಂದ ಮಾಧವನನ್ನು ಅಲಂಕರಿಸಿ ರಾತ್ರಿಯ ಉಪಹಾರವನ್ನು ಅವನಿಗೆ ನಿವೇದಿಸಿದನು. ನಸುನಗುತ್ತಾ ಗೋವಿಂದನು ಫಲ್ಗುನನಿಗೆ ಉತ್ತರಿಸಿದನು:

> “ಪಾರ್ಥ ! ಮಲಗಿಕೋ ! ನಿನಗೆ ಮಂಗಳವಾಗಲಿ. ನಿನ್ನ ಕಲ್ಯಾಣಕ್ಕೆ ನಾನೂ ತೆರಳುತ್ತೇನೆ.”

ಆಗ ಶ್ರೀಮಾನನು ದ್ವಾರದಲ್ಲಿ ಆಯುಧಪಾಣಿ ಅಂಗರಕ್ಷಕರನ್ನು ನಿಲ್ಲಿಸಿ, ದಾರುಕನೊಂದಿಗೆ ತನ್ನ ಶಿಬಿರವನ್ನು ಪ್ರವೇಶಿಸಿದನು. ಬಹಳಷ್ಟು ಚಿಂತಿಸುತ್ತಾ ಅವನು ಶುಭ್ರ ಹಾಸಿಗೆಯ ಮೇಲೆ ಪವಡಿಸಿದನು. ಆ ರಾತ್ರಿ ಪಾಂಡವರ ಶಿಬಿರದಲ್ಲಿ ಯಾರೂ ನಿದ್ರಿಸಲಿಲ್ಲ. ಎಲ್ಲರನ್ನೂ ಜಾಗರಣೆಯೇ ಆವರಿಸಿಬಿಟ್ಟಿತ್ತು.

> “ಪುತ್ರಶೋಕದಿಂದ ಆವೇಶಗೊಂಡು ಮಹಾತ್ಮ ಗಾಂಡೀವಧನ್ವಿಯು ದುಡುಕಿ ಸಿಂಧುರಾಜನ ವಧೆಯ ಪ್ರತಿಜ್ಞೆಯನ್ನು ಮಾಡಿಬಿಟ್ಟನು! ಆದರೆ ವಾಸವಿ ಪರವೀರಹನು ತನ್ನ ಪ್ರತಿಜ್ಞೆಯನ್ನು ಹೇಗೆ ಸಫಲಗೊಳಿಸಬಲ್ಲನು?”

ಎಂದು ಅವರು ತುಂಬಾ ಚಿಂತಿಸಿದರು.

> “ಮಹಾತ್ಮ ಪಾಂಡವನು ಪುತ್ರಶೋಕದಿಂದ ತಪ್ತನಾಗಿ ಮಹಾ ಪ್ರತಿಜ್ಞೆಯನ್ನು ಮಾಡಿ ಅತಿದೊಡ್ಡ ಕಷ್ಟದ ಕೆಲಸವನ್ನೇ ಕೈಗೊಂಡಿದ್ದಾನೆ. ಸೈಂಧವನ ಸಹೋದರರರೂ ವಿಕ್ರಾಂತರು. ಮತ್ತು ಧೃತರಾಷ್ಟ್ರನ ಮಗನು ಬಹಳ ಸೇನೆ ಸರ್ವವನ್ನೂ ಅವನ ರಕ್ಷಣೆಗಾಗಿ ನಿಯೋಜಿಸಿದ್ದಾನೆ. ಯುದ್ಧದಲ್ಲಿ ಸೈಂಧವನನ್ನು ಸಂಹರಿಸಿ ಧನಂಜಯನು

ಹಿಂದಿರುಗುವಂತಾಗಲಿ. ಶತ್ರುಗಣಗಳನ್ನು ಗೆದ್ದು ಅರ್ಜುನನು ತನ್ನ ಪ್ರತಿಜ್ಞೆಯನ್ನು ಪೂರೈಸಲಿ. ಸಿಂಧುರಾಜನನ್ನು ಸಂಹರಿಸದೇ ಇದ್ದರೆ ಅವನು ಅಗ್ನಿಯನ್ನು ಪ್ರವೇಶಿಸುತ್ತಾನೆ. ಏಕೆಂದರೆ ಧನಂಜಯನು ಯಾವುದೇ ಕಾರಣದಿಂದ ತನ್ನ ಮಾತನ್ನು ಸುಳ್ಳಾಗಿಸುವುದಿಲ್ಲ. ಅರ್ಜುನನು ಮೃತನಾಗಲು ಧರ್ಮಪುತ್ರನು ಹೇಗೆ ರಾಜನಾಗುತ್ತಾನೆ? ಏಕೆಂದರೆ ಅವನು ವಿಜಯವನ್ನು ಸಂಪೂರ್ಣವಾಗಿ ಪಾಂಡವ ಅರ್ಜುನನಿಗೆ ಹೊರೆಸಿಬಿಟ್ಟಿದ್ದಾನೆ. ಒಂದುವೇಳೆ ನಾವು ಏನಾದರೂ ಒಳ್ಳೆಯದನ್ನು ಮಾಡಿದ್ದರೆ, ದಾನಮಾಡಿದ್ದರೆ ಮತ್ತು ಆಹುತಿಗಳನ್ನಿತ್ತಿದ್ದರೆ ಅವುಗಳೆಲ್ಲವುಗಳ ಫಲದಿಂದ ಸವ್ಯಸಾಚಿಯು ಅರಿಗಳನ್ನು ಜಯಿಸುವಂಥವನಾಗಲಿ!"

ಹೀಗೆ ಪರಸ್ಪರರಲ್ಲಿ ಮಾತನಾಡಿಕೊಳ್ಳುತ್ತಾ, ಅವನಿಗೆ ಜಯವನ್ನು ಆಶಿಸುತ್ತಾ ಮಹಾ ಕಷ್ಟದಿಂದ ಅವರು ರಾತ್ರಿಯನ್ನು ಕಳೆದರು. ಆ ರಾತ್ರಿಯ ಮಧ್ಯೆ ಎಚ್ಚೆತ್ತಿದ್ದ ಜನಾರ್ದನನು ಪಾರ್ಥನ ಪ್ರತಿಜ್ಞೆಯನ್ನು ಸ್ಮರಿಸಿಕೊಂಡು ದಾರುಕನಿಗೆ ಹೇಳಿದನು:

"ದಾರುಕ! ಬಂಧುವು ಹತನಾದುದರಿಂದ ದುಃಖಿತನಾಗಿ ಅರ್ಜುನನು ನಾಳೆ ಜಯದ್ರಥನನ್ನು ಸಂಹರಿಸುತ್ತೇನೆ ಎಂದು

ಪ್ರತಿಜ್ಞೆಯನ್ನು ಮಾಡಿಬಿಟ್ಟಿದ್ದಾನೆ. ಅತ್ತ ದುರ್ಯೋಧನನು ಇದನ್ನು ಕೇಳಿ ಪಾರ್ಥನು ಜಯದ್ರಥನನ್ನು ಸಂಹರಿಸಬಾರದ ಹಾಗೆ ಮಂತ್ರಾಲೋಚನೆಯನ್ನು ನಡೆಸಿರುವನು. ಅವನ ಎಲ್ಲ ಅಕ್ಷೌಹಿಣಿಗಳೂ, ಸರ್ವಾಸ್ತ್ರವಿಧಿಪಾರಂಗತ ದ್ರೋಣನೂ ಮಗನೊಂದಿಗೆ ಜಯದ್ರಥನನ್ನು ರಕ್ಷಿಸಲಿದ್ದಾರೆ. ಏಕಮಾತ್ರ ವೀರನಾದ, ದೈತ್ಯದಾನವರ ದರ್ಪವನ್ನಡಗಿಸಿದ ಸಹಸ್ರಾಕ್ಷನೂ ಕೂಡ ದ್ರೋಣನಿಂದ ರಕ್ಷಿತನಾದವನನ್ನು ಸಂಹರಿಸಲು ಉತ್ಸಾಹಿತನಾಗುವುದಿಲ್ಲ. ನಾಳೆ ನಾನು ಸೂರ್ಯನು ಅಸ್ತನಾಗುವ ಮೊದಲೇ ಅರ್ಜುನನು ಜಯದ್ರಥನನ್ನು ಕೊಲ್ಲುವ ಹಾಗೆ ಮಾಡುತ್ತೇನೆ. ಪತ್ನಿಯರಾಗಲೀ ಮಿತ್ರರಾಗಲೀ ಜ್ಞಾತಿ-ಬಾಂಧವರಾಗಲೀ ಕುಂತೀಪುತ್ರ ಅರ್ಜುನನಿಗಿಂತ ಹೆಚ್ಚು ಪ್ರಿಯರು ನನಗೆ ಬೇರೆ ಯಾರೂ ಇಲ್ಲ. ದಾರುಕ! ಅರ್ಜುನನಿಲ್ಲದ ಈ ಲೋಕವನ್ನು ಮುಹೂರ್ತಕಾಲವು ನೋಡಲು ನಾನು ಶಕ್ಯನಿಲ್ಲ. ಆದರೆ ಹಾಗೆ ಆಗುವುದಿಲ್ಲ. ಅರ್ಜುನನಿಗಾಗಿ ನಾನು ನಾಳೆ ರಥ-ಆನೆಗಳೊಂದಿಗೆ ಧ್ವಜಿಗಳಾದ ಶತ್ರುಗಳನ್ನು ಕರ್ಣ-ಸುಯೋಧನರೊಡನೆ, ಸಂಹರಿಸುತ್ತೇನೆ. ನಾಳಿನ ಮಹಾಯುದ್ಧದಲ್ಲಿ ಧನಂಜಯನಿಗಾಗಿ ನಾನು ತೋರಿಸುವ

ಪರಾಕ್ರಮವನ್ನೂ ವೀರ್ಯವನ್ನೂ ಮೂರು ಲೋಕಗಳೂ ನೋಡಲಿ! ನಾಳೆ ಸಹಸ್ರಾರು ನರೇಂದ್ರರೂ, ನೂರಾರು ರಾಜಪುತ್ರರೂ ಗಜ-ಅಶ್ವ-ರಥ-ಪದಾತಿ ಸೈನ್ಯಗಳೊಂದಿಗೆ ಓಡಿ ಹೋಗುವಂತೆ ಮಾಡುತ್ತೇನೆ. ನಾಳೆ ನಾನು ಸಮರದಲ್ಲಿ ಪಾಂಡವನಿಗಾಗಿ ಕ್ರುದ್ಧನಾಗಿ ಚಕ್ರದಿಂದ ನೃಪವಾಹಿನಿಯನ್ನು ಕತ್ತರಿಸಿ ಬೀಳಿಸುವುದನ್ನು ನೀನು ನೋಡುವೆ! ನಾಳೆ ದೇವ-ಗಂಧರ್ವ-ಪಿಶಾಚ-ಉರಗ-ರಾಕ್ಷಸ ಲೋಕಗಳೆಲ್ಲವೂ ನಾನು ಸವ್ಯಸಾಚಿಯ ಸುಹೃದನೆನ್ನುವುದನ್ನು ಅರ್ಥಮಾಡಿಕೊಳ್ಳುತ್ತವೆ. ಅವನನ್ನು ಯಾರು ದ್ವೇಷಿಸುತ್ತಾರೋ ಅವರು ನನ್ನನ್ನೂ ದ್ವೇಷಿಸುತ್ತಾರೆ. ಅವನನ್ನು ಯಾರು ಅನುಸರಿಸುತ್ತಾರೋ ಅವರು ನನ್ನನ್ನೂ ಅನುಸರಿಸಿರುತ್ತಾರೆ. ಅರ್ಜುನನ ನನ್ನ ಶರೀರದ ಅರ್ಧಭಾಗವೆಂದೇ ನೀನು ಯೋಚಿಸಿ ತಿಳಿದುಕೋ.

ನೀನು ಈ ರಾತ್ರಿ ಕಳೆದು ಬೆಳಗಾಗುವುದರೊಳಗೆ ನನ್ನ ಉತ್ತಮ ರಥವನ್ನು ಯಥಾಶಾಸ್ತ್ರವಾಗಿ ವ್ರತಸಂಯತನಾಗಿ ಸಿದ್ಧಗೊಳಿಸು. ಸೂತ! ಕೌಮೋದಕೀ ಗದೆಯನ್ನೂ, ದಿವ್ಯ ಶಕ್ತಿ ಚಕ್ರ, ಧನುಸ್ಸು, ಶರಗಳನ್ನೂ ಸರ್ವ ಉಪಕರಣಗಳನ್ನು

ರಥದಲ್ಲಿ ಏರಿಸಿ, ರಥದಲ್ಲಿರುವ ನನ್ನ ಧ್ವಜದಲ್ಲಿ ಸಮರದಲ್ಲಿ ರಥಶೋಭಿನಿಯಾದ ವೀರ ವೈನತೇಯನಿಗೆ ಸ್ಥಳವನ್ನು ಕಲ್ಪಿಸು. ಚತ್ರವನ್ನೂ, ಬಂಗಾರದ ಜಾಲಗಳಿಂದ ಕೂಡಿದ ಸೂರ್ಯನ ಜ್ವಲನದಂತಿರುವ ವಿಶ್ವಕರ್ಮನಿಂದ ನಿರ್ಮಿತ ಭೂಷಣಗಳಿಂದ ಅಲಂಕೃತವಾದ ಬಲಾಹಕ, ಮೇಘಪುಷ್ಪ, ಸೈನ್ಯ ಮತ್ತು ಸುಗ್ರೀವಗಳೆಂಬ ದಿವ್ಯ ಶ್ರೇಷ್ಠ ಅಶ್ವಗಳನ್ನು ಕಟ್ಟಿ ಕವಚವನ್ನು ಧರಿಸಿ ನಿಂತಿರು. ಋಷಭಸ್ವರದಿಂದಲೇ ಊದಲ್ಪಡುವ ಪಾಂಚಜನ್ಯದ ನಿರ್ಘೋಷವನ್ನೂ ಭೈರವ ನಾದವನ್ನೂ ಕೇಳಿ ನೀನು ವೇಗದಿಂದ ನನ್ನ ಬಳಿ ಬರಬೇಕು. ತಂದೆಯ ತಂಗಿಯ ಮಗನ ತಮ್ಮನಾದ ಅವನ ಸರ್ವದುಃಖಗಳನ್ನೂ ಒಂದೇ ದಿನದಲ್ಲಿ ಕೋಪಗೊಂಡು ಕಳೆದುಬಿಡುತ್ತೇನೆ. ಆಹವದಲ್ಲಿ ಧಾರ್ತರಾಷ್ಟ್ರರು ನೋಡುತ್ತಿರುವಂತೆಯೇ ಬೀಭತ್ಸುವು ಜಯದ್ರಥನನ್ನು ಕೊಲ್ಲುವಂತೆ ಸರ್ವ ಉಪಾಯಗಳಿಂದಲೂ ಪ್ರಯತ್ನಿಸುತ್ತೇನೆ. ಸಾರಥೇ! ಬೀಭತ್ಸುವು ಯಾರ್ಯಾರನ್ನು ವಧಿಸಲು ಪ್ರಯತ್ನಿಸುತ್ತಾನೋ ಅಲ್ಲಿ ಅವನಿಗೆ ನಿಶ್ಚಯವಾದ ಜಯವುಂಟಾಗಬೇಕೆಂದು ಆಶಿಸುತ್ತೇನೆ.”

ದಾರುಕನು ಹೇಳಿದನು:

> “ಪುರುಷವ್ಯಾಘ್ರ! ನೀನು ಯಾರ ಸಾರಥ್ಯವನ್ನು ವಹಿಸಿಕೊಂಡಿರುವೆಯೋ ಅವನ ಜಯವು ನಿಶ್ಚಿತವಾದುದು. ಎಲ್ಲಿಯ ಪರಾಜಯ? ನೀನು ನನಗೆ ಆಜ್ಞೆಯಿತ್ತಿರುವಂತೆಯೇ ವಿಜಯನ ಜಯಕ್ಕಾಗಿ ಈ ರಾತ್ರಿ ಬೆಳಗಾಗುವುದರೊಳಗೆ ಎಲ್ಲವನ್ನೂ ಮಾಡುತ್ತೇನೆ.”

## ಅರ್ಜುನನಿಗೆ ಪುನಃ ಪಾಶುಪತಾಸ್ತ್ರ ಪ್ರಾಪ್ತಿ

ಅಚಿಂತ್ಯವಿಕ್ರಮಿ ಕುಂತೀಪುತ್ರ ಧನಂಜಯನು ತನ್ನ ಪ್ರತಿಜ್ಞೆಯನ್ನು ರಕ್ಷಿಸಿಕೊಳ್ಳುವ ಸಲುವಾಗಿ ಆ ಮಂತ್ರವನ್ನೇ ಸ್ಮರಿಸುತ್ತಾ ನಿದ್ದೆಹೋದನು. ಸ್ವಪ್ನದಲ್ಲಿ ಶೋಕಸಂತಪ್ತನಾಗಿದ್ದ ಕಪಿವರಧ್ವಜನ ಬಳಿ ಮಹಾತೇಜಸ್ವಿ ಗರುಡಧ್ವಜನು ಆಲೋಚಿಸುತ್ತಾ ಬಂದನು. ಕೃಷ್ಣನು ಬಂದಾಗ ಭಕ್ತಿಯಿಂದ ಮತ್ತು ಪ್ರೇಮದಿಂದ ಸರ್ವದಾ ಸರ್ವಾವಸ್ಥೆಯಲ್ಲಿ ಎದ್ದು ನಿಲ್ಲುತ್ತಿದ್ದ ಧರ್ಮಾತ್ಮ ಧನಂಜಯನು ಆ ಕ್ರಮಕ್ಕೆ ಸ್ವಪ್ನಾವಸ್ಥೆಯಲ್ಲಿಯೂ ಲೋಪವನ್ನು ತರಲಿಲ್ಲ. ಬೀಭತ್ಸುವು ಗೋವಿಂದನನ್ನು ವಿನೀತನಾಗಿ ಆದರದಿಂದ ಎದ್ದುನಿಂತು ಬರಮಾಡಿಕೊಂಡು ಆಸನವನ್ನೂ ಸ್ವಯಂ ಬುದ್ಧಿಯನ್ನೂ ಅವನಿಗಿತ್ತನು. ಆಗ ಕುಳಿತುಕೊಂಡ ಮಹಾತೇಜಸ್ವಿ ಕೃಷ್ಣನು ಪಾರ್ಥನ ನಿಶ್ಚಯವನ್ನು



ತಿಳಿದು ನಿಂತಿರುವ ಕುಂತೀಪುತ್ರನಿಗೆ ಈ ಮಾತನ್ನಾಡಿದನು:

"ಪಾರ್ಥ! ಮನಸ್ಸನ್ನು ವಿಷಾದದಲ್ಲಿ ತೊಡಗಿಸಬೇಡ. ಕಾಲವೆಂಬುದು ಜಯಿಸಲಸಾಧ್ಯವಾದುದು. ಕಾಲವು ಇರುವ ಎಲ್ಲವನ್ನೂ ವಿಧಾತನ ವಿಧಾನದಲ್ಲಿ ತೊಡಗಿಸುತ್ತದೆ. ಯಾವ ಕಾರಣದಿಂದಾಗಿ ನೀನು ವಿಷಾದಪಡುತ್ತಿರುವೆಯೆನ್ನುವುದನ್ನು ಹೇಳು. ತಿಳಿದವರು ಶೋಕಿಸುವುದಿಲ್ಲ. ಶೋಕವು ಮಾಡಬೇಕಾದ ಕಾರ್ಯವನ್ನು ನಾಶಗೊಳಿಸುವಂಥಹುದು. ಶೋಕವು ಶತ್ರುಗಳಿಗೆ ಆನಂದವನ್ನೀಯುತ್ತದೆ. ಬಾಂಧವರನ್ನು ಸಂಕಟಕ್ಕೀಡುಮಾಡುತ್ತದೆ. ಮನುಷ್ಯನನ್ನು ಕ್ಷೀಣಗೊಳಿಸುತ್ತದೆ. ಆದುದರಿಂದ ನೀನು ಶೋಕಿಸಬಾರದು."

ವಾಸುದೇವನು ಹೀಗೆ ಹೇಳಲು, ಅಪರಾಜಿತ ಬೀಭತ್ಸುವು ಅರ್ಥವತ್ತಾದ ಈ ಮಾತುಗಳನ್ನಾಡಿದನು.

"ಕೇಶವ! ನಾಳೆ ನಾನು ಪುತ್ರಘ್ನನಾದ ದುರಾತ್ಮ ಜಯದ್ರಥನನ್ನು ಕೊಲ್ಲುತ್ತೇನೆಂದು ಅವನ ವಧೆಯ ಮಹಾ ಪ್ರತಿಜ್ಞೆಯನ್ನು ಮಾಡಿದ್ದೇನೆ. ಆದರೆ ನನ್ನ ಪ್ರತಿಜ್ಞೆಗೆ ವಿಘ್ನವನ್ನುಂಟುಮಾಡಲೋಸುಗ ಧಾರ್ತರಾಷ್ಟ್ರರು ಎಲ್ಲ ಮಹಾರಥರ ಹಿಂದೆ ಸೈಂಧವನನ್ನು ನಿಲ್ಲಿಸಿಕೊಂಡು ರಕ್ಷಣೆಯ

> ಕಾರ್ಯವನ್ನು ಮಾಡುತ್ತಾರೆ. ಕೃಷ್ಣ! ಜಯಿಸಲಸಾಧ್ಯವಾದ ಆ ಹನ್ನೊಂದು ಅಕ್ಷೌಹಿಣಿಗಳಿಂದಾಗಿ ಪ್ರತಿಜ್ಞೆಯ ಭಂಗವಾದರೆ ನನ್ನಂಥವನು ಹೇಗೆ ತಾನೇ ಜೀವಿಸಿರಬಲ್ಲನು? ದುಃಖಕ್ಕೆ ಕಾರಣವಾದ ನನ್ನ ಈ ಪ್ರತಿಜ್ಞೆಯು ಭಂಗವಾಗಲಿಕ್ಕೇ ಇದೆಯೆಂದು ಅನ್ನಿಸುತ್ತಿದೆ. ಸೂರ್ಯನೂ ಕೂಡ ಈಗ ಬೇಗ ಅಸ್ತನಾಗುತ್ತಾನೆ. ಆದುದರಿಂದ ನಾನು ಹೇಳುತ್ತಿದ್ದೇನೆ."

ಪಾರ್ಥನ ಶೋಕಪರಿಸ್ಥಿತಿಯನ್ನು ಕೇಳಿ ದ್ವಿಜಕೇತನ ಮಹಾತೇಜಸ್ವಿ, ಪುಷ್ಕರೇಕ್ಷಣ ಕೃಷ್ಣನು ಪೂರ್ವಾಭಿಮುಖವಾಗಿ ಕುಳಿತು ಆಚಮನ ಮಾಡಿ ಪಾಂಡುಪುತ್ರನ ಹಿತಾರ್ಥವಾಗಿ ಮತ್ತು ಸೈಂಧವನ ವಧೆಯನ್ನು ಬಯಸಿ ಈ ಮಾತನ್ನಾಡಿದನು:

> "ಪಾರ್ಥ! ಪಾಶುಪತವೆಂಬ ಹೆಸರಿನ ಸನಾತನ ಪರಮಾಸ್ತ್ರವಿದೆ. ಅದರಿಂದಲೇ ದೇವ ಮಹೇಶ್ವರನು ಯುದ್ಧದಲ್ಲಿ ಸರ್ವ ದೈತ್ಯರನ್ನೂ ಸಂಹರಿಸಿದ್ದನು. ಅದು ಇಂದು ನಿನಗೆ ತಿಳಿದಿರುವುದೇ ಆದರೆ ನಾಳೆ ನೀನು ಜಯದ್ರಥನನ್ನು ಕೊಲ್ಲುವೆ. ಅದನ್ನು ತಿಳಿದುಕೊಳ್ಳಲು ನೀನು ಮನಸಾರೆ ವೃಷಭಧ್ವಜನನ್ನು ಪ್ರಾರ್ಥಿಸು. ಧನಂಜಯ! ಆ ದೇವನನ್ನು ಮನಸಾ ಧ್ಯಾನಿಸಿ ಮೌನಿಯಾಗು. ಅವನ

ಪ್ರಸಾದದಿಂದ ಭಕ್ತನಾದ ನೀನು ಆ ಮಹಾಸ್ತ್ರವನ್ನು ಪಡೆದುಕೊಳ್ಳುವೆ.”

ಕೃಷ್ಣನ ಮಾತನ್ನು ಕೇಳಿ ಧನಂಜಯನು ಆಚಮನ ಮಾಡಿ ನೆಲದ ಮೇಲೆ ಕುಳಿತು ಏಕಾಗ್ರಚಿತ್ತನಾಗಿ ಮನಸಾರೆ ಭವನನ್ನು ಮೊರೆಹೊಕ್ಕನು. ಆಗ ಶುಭಲಕ್ಷಣಸೂಚಕವಾದ ಬ್ರಾಹ್ಮೀ ಮುಹೂರ್ತದಲ್ಲಿ ಅರ್ಜುನನು ಕೇಶವನೊಂದಿಗೆ ತಾನು ಗಗನದಲ್ಲಿ ಹೋಗುತ್ತಿರುವುದನ್ನು ಕಂಡನು. ನಕ್ಷತ್ರಗಳು ಹರಡಿ ತುಂಬಿಹೋಗಿದ್ದ, ಸಿದ್ಧಚಾರಣಸೇವಿತವಾದ ಆಕಾಶವನ್ನು ಪಾರ್ಥನು ಕೇಶವನೊಂದಿಗೆ ವಾಯುವೇಗಗತಿಯಲ್ಲಿ ದಾಟಿದನು. ಕೇಶವನಿಂದ ಎಡಭುಜದಲ್ಲಿ ಹಿಡಿಯಲ್ಪಟ್ಟು ಅವನು ಅನೇಕ ಭಾವಗಳುಳ್ಳ, ಅದ್ಭುತವಾಗಿ ಕಾಣುತ್ತಿದ್ದವುಗಳನ್ನು ನೋಡಿದನು. ಆ ಧರ್ಮಾತ್ಮನು ಉತ್ತರ ದಿಕ್ಕಿನಲ್ಲಿ ಶ್ವೇತಪರ್ವತವನ್ನು ಮತ್ತು ಕುಬೇರನ ವಿಹಾರವಾದ ಪದ್ಮಭೂಷಿತ ಸರೋವರವನ್ನು ನೋಡಿದನು. ಅನಂತರ ಅವನು ಬಹಳ ನೀರಿರುವ ನದಿಶ್ರೇಷ್ಠೆ ಗಂಗೆಯನ್ನು ನೋಡಿ, ಮುಂದೆ ಸದಾ ಫಲ-ಪುಷ್ಪಗಳಿಂದ ತುಂಬಿರುವ ವೃಕ್ಷಗಳಿಂದ ಕೂಡಿದ, ಸ್ಫಟಿಕ ಶಿಲೆಗಳಿಂದ ಕೂಡಿದ, ಸಿಂಹ-ವ್ಯಾಘ್ರಗಳಿಂದ ತುಂಬಿದ, ನಾನಾ ರೀತಿಯ ಮೃಗಗಣಸಂಕುಲಗಳಿಂದ ಕೂಡಿದ, ರಮ್ಯವಾದ

ಪುಣ್ಯಾಶ್ರಮಗಳಿಂದ ಕೂಡಿದ, ಮನೋಜ್ಞ ಪಕ್ಷಿಗಳಿರುವ, ಕಿನ್ನರರ ಗಾಯನಗಳ ಗುಂಗಿನಲ್ಲಿರುವ, ಔಷಧಗಳ ಹೊಳಪಿನಿಂದ ಬಂಗಾರದಂತೆ ಬೆಳಗುತ್ತಿದ್ದ ಶಿಖರವುಳ್ಳ, ಪುಷ್ಪಗಳಿಂದ ತುಂಬಿ ಬಗ್ಗಿದ ಮಂದಾರವೃಕ್ಷಗಳಿಂದ ಶೋಭಿಸುವ ಮಂದರ ಪರ್ವತ ಪ್ರದೇಶವನ್ನೂ ನೋಡಿದನು. ಕಾಡಿಗೆಯ ರಾಶಿಯಂತೆ ತೋರುತ್ತಿದ್ದ ಕಾಲಪರ್ವತವನ್ನು ತಲುಪಿ ಅಲ್ಲಿಂದ ಪುಣ್ಯ ಮಣಿಮಂತ ಹಿಮವತ್ ಪರ್ವತದ ಬುಡಕ್ಕೆ ಬಂದನು. ಬ್ರಹ್ಮತುಂಗವನ್ನೂ, ಅನ್ಯ ನದಿಗಳನ್ನೂ, ಜನಪದಗಳನ್ನೂ, ಸುಶೃಂಗ-ಶತಶೃಂಗಗಳನ್ನೂ, ಶರ್ಯಾತಿವನವನ್ನೂ, ಅಥರ್ವಣನ ಸ್ಥಾನವಾದ ಪುಣ್ಯಾಶ್ರಮ ಶಿರಸ್ಥಾನವನ್ನೂ, ವೃಷದಂತವನ್ನೂ, ಶೈಲೇಂದ್ರವನ್ನೂ, ಅಪ್ಸರೆಯರಿಂದ ತುಂಬಿರುವ ಕಿನ್ನರರಿಂದ ಶೋಭಿಸುವ ಮಹಾಮಂದರವನ್ನೂ, ಅದರ ಶೈಲಗಳನ್ನು ಪಾರ್ಥನು ಕೇಶವನೊಂದಿಗೆ ನೋಡುತ್ತಾ ಮುಂದುವರೆದನು. ಶುಭ ಪ್ರಸ್ರವಣಗಳಿಂದ ಹರಡಿದ್ದ, ಹೇಮಧಾತುಗಳಿಂದ ವಿಭೂಷಿತವಾಗಿದ್ದ, ಚಂದ್ರನ ರಶ್ಮಿ ಪ್ರಕಾಶದಲ್ಲಿ ಮಿಂದಿದ್ದ, ಪುರಮಾಲಿನೀ ಪೃಥ್ವಿಯನ್ನು, ಅದ್ಭುತ ಆಕಾರದ ಸಮುದ್ರವನ್ನೂ ನೋಡಿದನು. ಹೀಗೆ ವಿಷ್ಣುಪದದಲ್ಲಿ ಬಿಲ್ಲಿನಿಂದ ಪ್ರಯೋಗಿಸಲ್ಪಟ್ಟ ಬಾಣದಂತೆ ಕೃಷ್ಣನೊಡಗೂಡಿ ಹೋಗುತ್ತಾ ಪೃಥಿವ್ಯಾಕಾಶಗಳನ್ನು ಒಮ್ಮೆಗೇ ನೋಡುತ್ತಾ ವಿಸ್ಮಿತನಾದನು. ಆಗ ಪಾರ್ಥನು ಗ್ರಹಗಳು, ನಕ್ಷತ್ರಗಳು,

ಚಂದ್ರ, ಸೂರ್ಯ ಮತ್ತು ಅಗ್ನಿಯ ಸಮ ತೇಜಸ್ಸಿನಿಂದ ಉರಿಯುತ್ತಿರುವ ಪರ್ವತವನ್ನು ಕಂಡನು. ಆ ಶೈಲವನ್ನು ಸಮೀಪಿಸಿ ಶೈಲದ ಶಿಖರದಲ್ಲಿ ಕುಳಿತಿದ್ದ ತಪೋನಿತ್ಯ, ತನ್ನದೇ ತೇಜಸ್ಸಿನಿಂದ ಉರಿಯುತ್ತಿರುವ ಸಹಸ್ರ ಸೂರ್ಯರಂತಿದ್ದ, ಶೂಲದಾರಿ, ಜಟಿಲಧಾರಿ, ಗೌರವರ್ಣವುಳ್ಳ, ವಲ್ಕಲ-ಜಿನಗಳನ್ನು ಧರಿಸಿದ್ದ, ಸಹಸ್ರ ಕಣ್ಣುಗಳಿದ್ದ, ವಿಚಿತ್ರಾಂಗ, ಮಾಹೌಜಸ, ಪಾರ್ವತಿಯ ಸಹಿತ, ಹೊಳೆಯುತ್ತಿರುವ ಭೂತಸಂಘಗಳೊಡನೆ, ಗೀತ-ವಾದ್ಯ-ಹಾಡು-ಚಪ್ಪಾಳೆ-ಕುಣಿತಗಳ ಭುಜಗಳನ್ನು ತಟ್ಟಿ ಗಟ್ಟಿಯಾಗಿ ಕೂಗುತ್ತಿದ್ದವರ ಮಧ್ಯವಿದ್ದ, ಪುಣ್ಯಗಂಧಗಳಿಂದ ಸೇವಿಸಲ್ಪಡುತ್ತಿದ್ದ, ಮುನಿಗಳು ಮತ್ತು ಬ್ರಹ್ಮವಾದಿಗಳಿಂದ ದಿವ್ಯ ಸ್ತವಗಳಿಂದ ಸ್ತುತಿಸಲ್ಪಡುತ್ತಿದ್ದ, ಸರ್ವಭೂತಗಳ ಗೋಪ್ತಾರ, ಧನುರ್ಧರ ಮಹಾತ್ಮ ವೃಷಭಧ್ವಜನನ್ನು ಕಂಡನು.

ವಾಸುದೇವನಾದರೋ ಸನಾತನನಾದ, ಬ್ರಹ್ಮಸ್ವರೂಪನನ್ನು ನೋಡಿದೊಡನೆಯೇ ಪಾರ್ಥನೊಂದಿಗೆ ಸಾಷ್ಟಾಂಗ ನಮಸ್ಕರಿಸಿದನು. ಲೋಕಕ್ಕೇ ಆದಿಕಾರಣನಾದ, ವಿಶ್ವವನ್ನೇ ರಚಿಸಿದ, ಅಜ, ಈಶಾನ, ಅವ್ಯಯ, ಮನಸ್ಸಿನ ಪರಮ ಯೋನಿ, ಆಕಾಶ-ವಾಯು-ನಕ್ಷತ್ರಗಳ ನಿಧಿ, ಜಲಧಾರೆ-ಭೂಮಿ-ಪ್ರಕೃತಿ-ಮತ್ತು ಅದಕ್ಕೂ ಆಚೆಯವುಗಳ ಸ್ರಷ್ಟಾರ,

ದೇವ-ದಾನವ-ಯಕ್ಷರ ಮತ್ತು ಮಾನವರ ಸಾಧನನಾದ, ಯೋಗಿಗಳ ಪರಮ ಬ್ರಹ್ಮನಾದ, ಬ್ರಹ್ಮವಿದರ ವ್ಯಕ್ತ ನಿಧಿಯಾದ, ಚರಾಚರಗಳ ಸ್ರಷ್ಟಾರ ಮತ್ತು ಪ್ರತಿಹರ್ತನೂ ಆದ, ಕಾಲಕೋಪಿ, ಶಕ್ರ ಮತ್ತು ಸೂರ್ಯರ ಗುಣಗಳಿಗೆ ಕಾರಣೀಭೂತನಾದ ಮಹಾತ್ಮನನ್ನು ಕೃಷ್ಣನು ವಾಕ್-ಮನೋ-ಬುದ್ಧಿ-ಕರ್ಮಗಳಿಂದ ವಂದಿಸಿದನು. ಸೂಕ್ಷ್ಮವಾದ ಆದ್ಯಾತ್ಮಪದವನ್ನು ಪಡೆಯಲಿಚ್ಛಿಸುವ ವಿದ್ವಾಂಸರು ಯಾರನ್ನು ಶರಣುಹೊಗುತ್ತಾರೋ ಆ ಅಜ, ಕಾರಣ ಸ್ವರೂಪ, ಶರಣ, ಭವ ದೇವನನ್ನು, ಅವನೊಬ್ಬನೇ ಭೂತ-ಭವ್ಯಾದಿಗಳಿಗೆ ಮತ್ತು ಸರ್ವಭುತಗಳ ಉದ್ಭವಕ್ಕೆ ಕಾರಣನೆಂದು ತಿಳಿದು ಅರ್ಜುನನೂ ಕೂಡ ಬಾರಿಬಾರಿ ವಂದಿಸಿದನು. ಆಗ ಶರ್ವನು ನಗುತ್ತಾ ಬಂದಿರುವ ಇಬ್ಬರಿಗೂ ಹೇಳಿದನು:

> “ನರಶ್ರೇಷ್ಠರೇ! ಸ್ವಾಗತ! ಮೇಲೇಳಿ! ಆಯಾಸವನ್ನು ನೀಗಿಸಿಕೊಳ್ಳಿ. ವೀರರೇ! ಏನನ್ನು ಮನಸ್ಸಿನಲ್ಲಿ ಬಯಸಿ ಬಂದಿರುವಿರೋ ಅದನ್ನು ಬೇಗನೇ ಹೇಳಿ. ಯಾವ ಕಾರ್ಯಕ್ಕಾಗಿ ನೀವು ಇಲ್ಲಿಗೆ ಬಂದಿದ್ದೀರೋ ಅದನ್ನು ನಿಮಗೆ ನಾನು ಮಾಡಿಕೊಡುತ್ತೇನೆ. ನಿಮಗೆ ಪ್ರಿಯವಾದ ಶ್ರೇಯಸ್ಕರವಾದ ಎಲ್ಲವನ್ನೂ ನೀಡುತ್ತೇನೆ.”

ಅವನ ಆ ಮಾತನ್ನು ಕೇಳಿ ಮೇಲೆದ್ದು ಅಂಜಲೀಬದ್ಧರಾಗಿ ಮಹಾಮತಿಗಳಾದ ವಾಸುದೇವ-ಅರ್ಜುನರು ಶರ್ವನನ್ನು ಸ್ತುತಿಸತೊಡಗಿದರು:

"ಭವ, ಶರ್ವ, ರುದ್ರ, ವರದ, ಪಶುಪತೇ, ನಿತ್ಯ, ಉಗ್ರ, ಕಪರ್ದಿನೇ! ನಿನಗೆ ನಮಸ್ಕಾರ! ಮಹಾದೇವ, ಭೀಮ, ತ್ರ್ಯಂಬಕ, ಶಂಭು, ಈಶಾನ, ಭಗಘ್ನ, ಅಂಧಕಘಾತಿನೇ! ನಿನಗೆ ನಮಸ್ಕಾರ! ಕುಮಾರಗುರುವೇ! ನಿತ್ಯನೇ! ನೀಲಗ್ರೀವನೇ! ವೇಧಸನೇ! ವಿಲೋಹಿತಾಯನೇ! ಧೂಮ್ರನೇ! ವ್ಯಾಧಿಗಳನ್ನು ಸೋಲಿಸುವವನೇ! ನಿತ್ಯನೇ! ನೀಲಶಿಖಂಡಿಯೇ! ಶೂಲಿನಿಯೇ! ದಿವ್ಯದೃಷ್ಟಿಯುಳ್ಳವನೇ! ಹಂತ್ರನೇ! ಗೋಪ್ತ್ರನೇ! ತ್ರಿನೇತ್ರನೇ! ವ್ಯಾಧನೇ! ವಸುರೇತಸ! ಅಚಿಂತ್ಯ! ಅಂಬಿಕಾಭರ್ತ್ರೇ! ಸರ್ವದೇವಸ್ತುತ! ವೃಷಧ್ವಜ! ಪಿಂಗ! ಜಟಿನೇ! ಬ್ರಹ್ಮಚಾರಿಣೇ! ನೀರಿನಲ್ಲಿ ತಪಸ್ಸು ಮಾಡುವವನೇ! ಬ್ರಹ್ಮಣ್ಯನೇ! ಅಜಿತನೇ! ವಿಶ್ವಾತ್ಮನೇ! ವಿಶ್ವಸೃಜನೇ! ವಿಶ್ವಮಾವೃತನೇ! ತಿಷ್ಠನೇ! ಸೇವ್ಯನೇ! ಭೂತಗಳ ಪ್ರಭುವೇ! ಬ್ರಹ್ಮವಕ್ತ್ರನೇ! ಶರ್ವನೇ! ಶಂಕರನೇ! ಶಿವನೇ! ನಿನಗೆ ನಮೋ ನಮಸ್ತೇ! ವಾಚಸ್ಪತೆಯೇ ನಿನಗೆ

ನಮಸ್ಕಾರ! ಪಜಾಪತಿಯೇ ನಮಸ್ಕಾರ! ವಿಶ್ವಪತಿಯೇ ನಮಸ್ಕಾರ! ಮಹಾಪತಿಯೇ ನಮಸ್ಕಾರ! ಸಹಸ್ರಶಿರಸೇ! ಸಹಸ್ರಭುಜನೇ! ಮನ್ಯವೇ! ನಮಸ್ಕಾರ! ಸಹಸ್ರನೇತ್ರಪಾದನೇ! ಅಸಂಖ್ಯೇಯಕರ್ಮಣೇ! ನಮಸ್ಕಾರ! ಹಿರಣ್ಯವರ್ಣನೇ! ಹಿರಣ್ಯಕವಚನೇ! ಭಕ್ತಾನುಕಂಪಿನೇ! ನಿತ್ಯನೇ! ನಿನಗೆ ನಮಸ್ಕಾರ! ನಮ್ಮಿಬ್ಬರಿಗೆ ಸಿದ್ಧಿಯಾಗುವ ವರವನ್ನು ನೀಡು ಪ್ರಭೋ!”

ಹೀಗೆ ಸ್ತುತಿಸಿ ಅರ್ಜುನನೊಂದಿಗೆ ವಾಸುದೇವನು ಭವ ಮಹಾದೇವನನ್ನು ಅಸ್ತ್ರದ ಪ್ರಾಪ್ತಿಗೋಸ್ಕರ ಪ್ರಸನ್ನಗೊಳಿಸಿದನು. ಆಗ ಅರ್ಜುನನು ಹರ್ಷೋತ್ಫುಲ್ಲನಯನನಾಗಿ ಸಮಸ್ತ ತೇಜಸ್ಸುಗಳ ನಿಧಿಯಾಗಿರುವ ವೃಷಭಧ್ವಜನನ್ನು ಪ್ರೀತಿಯಿಂದ ವಂದಿಸಿದನು. ರಾತ್ರಿ ಉಪಾಹಾರಾರ್ಥವಾಗಿ ತಾನೇ ಯಾವ ಉಪಹಾರವನ್ನು ವಾಸುದೇವನಿಗೆ ನೈವೇದ್ಯ ಮಾಡಿದ್ದನೋ ಅದೇ ಉಪಹಾರವು ತ್ರ್ಯಂಬಕನ ಬಳಿ ಇರುವುದನ್ನು ನೋಡಿದನು. ಪಾಂಡವನು ಶರ್ವನನ್ನೂ ಕೃಷ್ಣನನ್ನೂ ಮನಸಾ ನಮಸ್ಕರಿಸಿ “ದಿವ್ಯಾಸ್ತ್ರವನ್ನು ಇಚ್ಛಿಸುತ್ತೇನೆ!” ಎಂದು ಶಂಕರನಿಗೆ ಹೇಳಿದನು. ಆಗ ವರವಾಗಿ ಪಾರ್ಥನು ಕೇಳಿದುದನ್ನು ಅರಿತ ಪ್ರಭು ದೇವನು ನಸುನಗುತ್ತಾ ವಾಸುದೇವ-



ಅರ್ಜುನರಿಗೆ ಹೇಳಿದನು:

> "ಶತ್ರುಸೂದನರೇ! ಹತ್ತಿರದಲ್ಲಿಯೇ ಅಮೃತಮಯವಾದ ದಿವ್ಯ ಸರೋವರವಿದೆ. ಅಲ್ಲಿ ನಾನು ಹಿಂದೆ ಆ ದಿವ್ಯ ಧನುಸ್ಸನ್ನೂ ಶರವನ್ನೂ ಇರಿಸಿದ್ದೇನೆ. ಅದರಿಂದ ನಾನು ದೇವಶತ್ರುಗಳೆಲ್ಲರನ್ನೂ ಯುದ್ಧದಲ್ಲಿ ಬೀಳಿಸಿದ್ದೆ. ಕೃಷ್ಣರೇ! ಆ ಉತ್ತಮ ಧನುಸ್ಸು-ಶರಗಳನ್ನು ತೆಗೆದುಕೊಂಡು ಬನ್ನಿರಿ!"

ಹಾಗೆಯೇ ಆಗಲೆಂದು ಶರ್ವನಿಗೆ ಹೇಳಿ ಆ ವೀರರಿಬ್ಬರೂ ಶಿವನ ಪಾರ್ಷದರೊಂದಿಗೆ ನೂರಾರು ಆಶ್ಚರ್ಯಗಳಿಂದ ಆವೃತವಾದ ಆ ದಿವ್ಯ ಸರೋವರಕ್ಕೆ ತೆರಳಿದರು. ಋಷಿಗಳಾಗಿದ್ದಾಗ ಸರ್ವಾರ್ಥಸಾಧಕ ನಿರ್ದಿಷ್ಟ ಪುಣ್ಯಗಳನ್ನು ಗಳಿಸಿದ್ದ ಆ ನರನಾರಾಯಣ ಋಷಿಗಳು ಸಂಭ್ರಾಂತರಾಗಿ ಅಲ್ಲಿ ತಲುಪಿದರು. ಆ ಸರೋವರಕ್ಕೆ ಹೋಗಿ ಅರ್ಜುನ-ಅಚ್ಯುತರು ಅಂತರ್ಜಲದಲ್ಲಿ ಸೂರ್ಯಮಂಡಲೋಪಾದಿಯಲ್ಲಿರುವ ಘೋರವಾದ ನಾಗನನ್ನು ಕಂಡರು. ಅಗ್ನಿಯ ವರ್ಚಸ್ಸನ್ನು ಪಡೆದಿದ್ದ, ವಿಪುಲ ಜ್ವಾಲೆಗಳನ್ನು ಉಗುಳುತ್ತಿದ್ದ ಸಾವಿರ ಹೆಡೆಗಳ ಇನ್ನೊಂದು ಎರಡನೆಯ ಶ್ರೇಷ್ಠ ನಾಗನನ್ನೂ ನೋಡಿದರು. ಆಗ ಕೃಷ್ಣ-ಪಾರ್ಥರು ಆಚಮನ ಮಾಡಿ ಕೈಮುಗಿದು ವೃಷಧ್ವಜನಿಗೆ ನಮಸ್ಕರಿಸಿ ಆ ನಾಗಗಳೆರಡನ್ನೂ

ಪೂಜಿಸತೊಡಗಿದರು. ವೇದ ವಿದ್ವಾಂಸರಾಗಿದ್ದ ಅವರಿಬ್ಬರೂ ಶತರುದ್ರೀಯ ಮಂತ್ರಗಳನ್ನು ಪಠಿಸುತ್ತಾ ಬ್ರಹ್ಮರೂಪನಾದ ಅಪ್ರಮೇಯ ಭವನನ್ನು ಸರ್ವಾತ್ಮಗಳಿಂದಲೂ ಮೊರೆಹೊಕ್ಕು ಪ್ರಣಮಿಸಿದರು. ಆಗ ರುದ್ರನ ಮಹಾತ್ಮೆಯಿಂದ ಆ ಎರಡೂ ಮಹಾ ಸರ್ಪಗಳು ತಮ್ಮ ರೂಪವನ್ನು ತೊರೆದು ಶತ್ರುಸಂಹಾರಕ ಧನುರ್ಬಾಣಗಳೆರಡಾಗಿ ಪರಿಣಮಿಸಿದವು. ಆ ಮಹಾತ್ಮರು ಪ್ರೀತರಾಗಿ ಅತ್ಯಂತ ಪ್ರಭೆಯುಳ್ಳ ಆ ಧನುರ್ಬಾಣಗಳನ್ನು ತೆಗೆದುಕೊಂಡು ಬಂದು ಮಹಾತ್ಮನಿಗೆ ಒಪ್ಪಿಸಿದರು. ಆಗ ವೃಷಾಂಕನ ಪಕ್ಕದಿಂದ ಹಳದೀ ಬಣ್ಣದ ಕಣ್ಣುಳ್ಳ, ತಪಸ್ಸಿಗೆ ಕ್ಷೇತ್ರಪ್ರಾಯನಾಗಿಯೂ, ಬಲಶಾಲಿಯೂ ಆಗಿದ್ದ ನೀಲಿ ಮತ್ತು ಕೆಂಪು ಬಣ್ಣದವುಗಳಾಗಿದ್ದ ಬ್ರಹ್ಮಚಾರಿಯೊಬ್ಬನು ಹೊರಬಂದನು. ಅವನು ಆ ಶ್ರೇಷ್ಠ ಧನುಸ್ಸನ್ನು ಹಿಡಿದು ಸ್ಥಾನದಲ್ಲಿ ಕುಳಿತುಕೊಂಡು ವಿಧಿವತ್ತಾಗಿ ಶರವನ್ನು ಹೂಡಿ ಆ ಉತ್ತಮ ಧನುಸ್ಸನು ಎಳೆದನು. ಅವನು ಶಿಂಜಿನಿಯನ್ನು ಹಿಡಿಯುವ ಮುಷ್ಟಿಯನ್ನೂ ಸ್ಥಾನವನ್ನೂ ಪಾಂಡವನು ವೀಕ್ಷಿಸಿ ತಿಳಿದುಕೊಂಡನು. ಆ ಅಚಿಂತ್ಯ ವಿಕ್ರಮಿಯು ಭವನು ಹೇಳಿದ ಮತ್ರವನ್ನೂ ಕೇಳಿ ಗ್ರಹಿಸಿಕೊಂಡನು. ಆ ಅತಿಬಲ ವೀರನು ಆ ಬಾಣ-ಧನುಸ್ಸುಗಳನ್ನು ಪುನಃ ಅದೇ ಸರೋವರದಲ್ಲಿ ವಿಸರ್ಜಿಸಿ ಬಂದನು.

ಆಗ ಭವನು ಪ್ರೀತನಾದನೆಂದು ತಿಳಿದು ಅರ್ಜುನನು ಅರಣ್ಯಕದಲ್ಲಿ ಶಂಕರನು ನೀಡಿದ್ದ ಶ್ರೇಷ್ಠ ದರ್ಶನವನ್ನು ನೆನಪಿಸಿಕೊಂಡನು. ಇದು ನನಗೆ ಬರಲಿ ಎಂದು ಅವನು ಮನಸ್ಸಿನಲ್ಲಿಯೇ ಚಿಂತಿಸಿದನು. ಅವನ ಆ ಬಯಕೆಯನ್ನು ತಿಳಿದ ಭವನು ಪ್ರೀತಿಯಿಂದ ಅವನಿಗೆ ಆ ಪ್ರತಿಜ್ಞೆಯನ್ನು ಪಾರುಮಾಡುವ ಮತ್ತು ಆ ಘೋರ ಪಾಶುಪತದ ವರವನ್ನಿತ್ತನು.

ಸಂಹೃಷ್ಟನಾಗಿ ರೋಮಾಂಚನಗೊಂಡ ಆ ದುರ್ಧರ್ಷನು ಕಾರ್ಯವು ಯಶಸ್ವಿಯಾಯಿತು ಎಂದು ಅಂದುಕೊಂಡನು. ಅವರಿಬ್ಬರೂ ಸಂಹೃಷ್ಟರಾಗಿ ಮಹೇಶ್ವರನನ್ನು ತಲೆಬಾಗಿ ನಮಸ್ಕರಿಸಿದರು. ಕ್ಷಣದಲ್ಲಿಯೇ ಭವನಿಂದ ಅಪ್ಪಣೆ ಪಡೆದು ವೀರ ಅರ್ಜುನ-ಕೇಶವರು ಜಂಭನ ವಧೆಯನ್ನು ಬಯಸಿ ಸಂತೋಷದಿಂದ ಇಂದ್ರ-ವಿಷ್ಣುಗಳು ಹೇಗೋ ಹಾಗೆ ಪರಮಸಂತೋಷಗೊಂಡವರಾಗಿ ತಮ್ಮ ಶಿಬಿರಕ್ಕೆ ಮರಳಿದರು.

## ಹದಿನಾಲ್ಕನೆಯ ದಿನದ ಬೆಳಿಗ್ಗೆ ಯುಧಿಷ್ಠಿರನು ಸಜ್ಜಾದುದು

ಕೃಷ್ಣ ಮತ್ತು ದಾರುಕರ ಸಂವಾದವು ನಡೆಯುತ್ತಿದ್ದಂತೆಯೇ ರಾತ್ರಿಯು ಕಳೆಯಲು ರಾಜ ಯುಧಿಷ್ಠಿರನು ಎಚ್ಚೆತ್ತನು. ಆ ಪುರುಷರ್ಷಭನನ್ನು ಪಾಣಿಸ್ವನಿಕರು, ಮಾಗಧರು, ಮಧುಪರ್ಕಿಕರು, ವೈತಾಲಿಕರು, ಮತ್ತು

ಸೂತರು ಸಂತುಷ್ಟಗೊಳಿಸಿದರು. ನರ್ತಕರು ನಾಟ್ಯಮಾಡಿದರು. ಇಂಪಾದ ಕಂಠದ ಗಾಯಕರು ಕುರುವಂಶದ ಕೀರ್ತಿಯನ್ನು ಹೇಳುವ ಮಧುರ ಗೀತೆಗಳನ್ನು ಹಾಡಿದರು. ಮೃದಂಗ, ಝರ್ಝರ, ಭೇರಿ, ಪಣವಾನಕ, ಗೋಮುಖ, ಆಡಂಬರ, ಶಂಖ ಮತ್ತು ದುಂದುಭಿಗಳನ್ನು ಜೋರಾಗಿ ನುಡಿಸಲಾಯಿತು. ಇವು ಎಲ್ಲ ಮತ್ತು ಇನ್ನೂ ಅನ್ಯ ವಾದ್ಯಗಳನ್ನು ಕುಶಲರೂ ಚೆನ್ನಾಗಿ ಪಳಗಿದವರೂ ಸಂಹೃಷ್ಟರಾಗಿ ಬಾರಿಸಿದರು. ಮೇಘದಂತೆ ಮೊಳಗುತ್ತಿದ್ದ ನಿರ್ಘೋಷ ಮತ್ತು ದಿವವನ್ನು ಮುಟ್ಟುತ್ತಿದ್ದ ಮಹಾ ಶಬ್ಧವು ಮಲಗಿದ್ದ ಆ ಪಾರ್ಥಿವಪ್ರವರ ಯುಧಿಷ್ಠಿರನನ್ನು ಎಚ್ಚರಿಸಿತು. ಅತಿ ಬೆಲೆಬಾಳುವ ಉತ್ತಮ ಶಯನದಲ್ಲಿ ಸುಖವಾಗಿ ಮಲಗಿದ್ದ ಅವನು ಎಚ್ಚೆತ್ತನು. ಅನಂತರ ಅವಶ್ಯಕಾರ್ಯಗಳಿಗಾಗಿ ಎದ್ದು ಸ್ನಾನಗೃಹಕ್ಕೆ ತೆರಳಿದನು.

ಆಗ ನೂರಾಎಂಟು ಬಿಳಿಯ ವಸ್ತ್ರಗಳನ್ನುಟ್ಟಿದ್ದ ಸ್ನಾನಮಾಡಿಸುವ ತರುಣರು ಸ್ನಾನಮಾಡಿಸಲು ತುಂಬಿದ ಬಂಗಾರದ ಕೊಡಗಳಿಂದ ಸಿದ್ಧರಾಗಿದ್ದರು. ತೆಳುವಾದ ಬಟ್ಟೆಯನ್ನುಟ್ಟು ಭದ್ರಾಸನದಲ್ಲಿ ಸುಖವಾಗಿ ಕುಳಿತ ಅವನಿಗೆ ಚಂದನಯುಕ್ತವಾದ ಅಭಿಮಂತ್ರಿಸಿದ ನೀರಿನಿಂದ ಸ್ನಾನಮಾಡಿಸಿದರು. ಚೆನ್ನಾಗಿ ಪಳಗಿದ ಬಲವಂತರು ಅವನ ಅಂಗಾಂಗಗಳನ್ನು ಔಷಧ-ಸುಗಂಧಗಳಿಂದ ಯುಕ್ತವಾದ ನೀರಿನಿಂದ

ಚೆನ್ನಾಗಿ ತಿಕ್ಕಿದರು. ಅರಿಷಿಣ ಚಂದನಗಳಿಂದ ಅಂಗಗಳನ್ನು ಲೇಪಿಸಿಯಾದ ನಂತರ ಮಹಾಭುಜನು ಹಾರವನ್ನು ಧರಿಸಿ, ಶುಚಿಯಾದ ವಸ್ತ್ರಗಳನ್ನು ತೊಟ್ಟು ಕೈಜೋಡಿಸಿ ಪೂರ್ವಾಭಿಮುಖನಾಗಿ ನಿಂತನು. ಕೌಂತೇಯನು ಸಂತರ ಮಾರ್ಗವನ್ನು ಅನುಸರಿಸಿ ಜಪವನ್ನು ಜಪಿಸಿದನು. ಅನಂತರ ವಿನೀತನಾಗಿ ಉರಿಯುತ್ತಿರುವ ಅಗ್ನಿಯಿರುವ ಕೊಠಡಿಯನ್ನು ಪ್ರವೇಶಿಸಿದನು. ಪವಿತ್ರವಾದ ಸಮಿದ್ಧೆಯನ್ನು ಅಗ್ನಿಯಲ್ಲಿ ಆಹುತಿಯನ್ನಿತ್ತು, ಮಂತ್ರಪೂತಗಳಿಂದ ಅರ್ಚಿಸಿ ನಂತರ ಆ ಕೊಠಡಿಯಿಂದ ಹೊರಬಂದನು. ಆ ಪಾರ್ಥಿವ ಪುರುಷವ್ಯಾಘ್ರನು ಎರಡನೆಯ ಕಕ್ಷವನ್ನು ಪ್ರವೇಶಿಸಿ ಅಲ್ಲಿ ವೇದವಿದ ವಿಪ್ರರನ್ನೂ ಬ್ರಾಹ್ಮಣರ್ಷಭರನ್ನೂ ನೋಡಿದನು.

ಶಾಂತರಾಗಿದ್ದ ಅವರು ವೇದವ್ರತ ಸ್ನಾನಮಾಡಿದ್ದರು ಮತ್ತು ಅವಭೃತ ಸ್ನಾನವನ್ನೂ ಮಾಡಿದ್ದರು. ಆ ಸೌರರು ಒಂದುಸಾವಿರವಿದ್ದರು. ಅವರ ಅನುಚರರು ಎಂಟು ಸಾವಿರವಿದ್ದರು. ಅವರು ಅಕ್ಷತೆ ಮತ್ತು ಸುಮನೋಹರವಾದ ಆಶೀರ್ವಾದಗಳನ್ನು ಪಠಿಸುತ್ತಿರಲು ಮಹಾಭುಜ ಪಾಂಡವನು ಆ ದ್ವಿಜರಿಗೆ ಜೇನು, ತುಪ್ಪ, ಶ್ರೇಷ್ಠ ಸುಮಂಗಲ ಫಲಗಳನ್ನು ಇತ್ತು, ಒಬ್ಬೊಬ್ಬರಿಗೂ ಒಂದೊಂದು ಬಂಗಾರದ

ನಿಷ್ಕವನ್ನೂ, ಅಲಂಕರಿಸಲ್ಪಟ್ಟ ಒಂದು ನೂರು ಕುದುರೆಗಳನ್ನೂ, ವಸ್ತ್ರಗಳನ್ನೂ ದಕ್ಷಿಣೆಗಳನ್ನೂ ನೀಡಿದನು. ಹಾಗೆಯೇ ಪಾಂಡುನಂದನನು ಕೋಡುಗಳನ್ನು ಬಂಗಾರದಿಂದಲೂ ಖುರಗಳನ್ನು ಬೆಳ್ಳಿಯಿಂದಲೂ ಅಲಂಕರಿಸಲ್ಪಟ್ಟ, ಹಾಲುಕೊಡುವ ಕಪಿಲ ಗೋವುಗಳನ್ನು, ಕರುಳೊಂದಿಗೆ ಕೊಟ್ಟು ಪ್ರದಕ್ಷಿಣೆ ಹಾಕಿದನು. ಅನಂತರ ಕೌಂತೇಯನು ಆನಂದವನ್ನು ವೃದ್ಧಿಸುವ ಸ್ವಸ್ತಿಕಗಳನ್ನೂ, ಕಾಂಚನದ ನಂದ್ಯಾವರ್ತಗಳನ್ನೂ, ಮಾಲೆಗಳನ್ನೂ, ಜಲಕುಂಭಗಳನ್ನೂ, ಜ್ವಲಿಸುವ ಹುತಾಶನನನ್ನೂ, ಪೂರ್ಣವಾಗಿರುವ ನಕ್ಷತ್ರ ಪಾತ್ರೆಗಳನ್ನೂ, ಬಿಸಿಲಿನಲ್ಲಿ ಒಣಗಿಸಿದ ಅಕ್ಕಿಯನ್ನೂ, ಅಲಂಕೃತರಾದ ಶುಭ ಕನ್ಯೆಯರನ್ನೂ, ಮೊಸರು-ತುಪ್ಪ-ಜೇನು-ನೀರನ್ನೂ, ಮಂಗಲ ಪಕ್ಷಿಗಳನ್ನೂ, ಇತರ ಪೂಜಿತ ವಸ್ತುಗಳನ್ನೂ ನೋಡುತ್ತಾ ಮುಟ್ಟುತ್ತಾ ಹೊರಗಿನ ಕಕ್ಷಕ್ಕೆ ಬಂದನು.

ಅಲ್ಲಿ ಮಹಾಬಾಹುವನ್ನು ಅವನ ಪರಿಚಾರಕರು ಬಂಗಾರದ, ಸರ್ವತೋಭದ್ರವಾದ, ಮುತ್ತು-ವೈಡೂರ್ಯಗಳನ್ನು ಕೂಡಿಸಿದ್ದ, ಅತಿ ಅಮೂಲ್ಯವಾದ ರತ್ನಗಂಬಳಿಯನ್ನು ಹೊದೆಸಿದ್ದ, ಅದರ ಮೇಲೆ ಮತ್ತೊಂದು ಮೃದು ವಸ್ತ್ರವನ್ನು ಹಾಸಿದ್ದ, ವಿಶ್ವಕರ್ಮನಿಂದ ನಿರ್ಮಿತವಾಗಿದ್ದ ದಿವ್ಯವಾದ ವರಾಸನದ ಮೇಲೆ ಕುಳ್ಳಿರಿಸಿದರು. ಅಲ್ಲಿ

ಅವನು ಕುಳಿತುಕೊಳ್ಳಲು ಎಲ್ಲ ಕಡೆಗಳಿಂದ ಮಹಾ ಅಮೂಲ್ಯ ಶುಭ್ರ ಭೂಷಣಗಳನ್ನು ತಂದರು. ಆಭರಣ ಉಡುಪುಗಳನ್ನು ಧರಿಸಿದ್ದ ಮಹಾತ್ಮ ಕೌಂತೇಯನ ರೂಪವು ಶತ್ರುಗಳ ಶೋಕವನ್ನು ಹೆಚ್ಚಿಸುವಂತಿತ್ತು. ಚಂದ್ರನ ಕಿರಣಗಳಂತೆ ಬೆಳ್ಳಗಿದ್ದ, ಬಂಗಾರದ ದಂಡವಿದ್ದ ಚಾಮರಗಳಿಂದ ಬೀಸುತ್ತಿರಲು ಅವನು ಮಿಂಚಿನಿಂದ ಕೂಡಿದ ಮೋಡದಂತೆ ಶೋಭಿಸಿದನು. ಸ್ತುತಿಸುತ್ತಿದ್ದ ಸೂತರು, ವಂದಿಸುತ್ತಿದ್ದ ಬಂದಿಗಳು, ಹಾಡುತ್ತಿದ್ದ ಗಂಧರ್ವರು ಕುರುನಂದನನನ್ನು ಸಂತೋಷಗೊಳಿಸಿದರು. ಆಗ ಮುಹೂರ್ತದಲ್ಲಿಯೇ ಬಂದಿಗಳ ಸ್ವರ, ರಥಿಗಳ ಚಕ್ರಗಳ ಘೋಷ, ಕುದುರೆಗಳ ಖುರಗಳ ಶಬ್ಧಗಳು ಜೋರಾದವು. ಆನೆಗಳ ಗಂಟೆಗಳ ಬಾರಿಸುವಿಕೆಯಿಂದ, ಶಂಖಗಳ ನಿನಾದದಿಂದ, ಸೈನಿಕರ ಕಾಲ್ನಡುಗೆಯ ಶಬ್ಧಗಳಿಂದ ಮೇದಿನಿಯು ಕಂಪಿಸುವಂತಿತ್ತು. ಆಗ ಕುಂಡಲಗಳನ್ನು ಧರಿಸಿದ್ದ, ಖಡ್ಗವನ್ನು ಒರಸೆಯಲ್ಲಿ ಕಟ್ಟಿಕೊಂಡಿದ್ದ, ಸನ್ನದ್ಧ ಕವಚನಾದ ಯುವಕನು ಬಂದು ಕಾಲುಗಳನ್ನು ನೆಲಕ್ಕೆ ಊರಿ ವಂದನೀಯನಾದ ಜಗತ್ಪತಿಯನ್ನು ವಂದಿಸಿ, ದ್ವಾರದಲ್ಲಿ ಹೃಷೀಕೇಶನು ಒಳಬರನು ಕಾದುಕೊಂಡಿದ್ದಾನೆಂದು ಮಹಾತ್ಮ ಧರ್ಮಾತ್ಮಜನಿಗೆ ನಿವೇದಿಸಿದನು. ಆಗ ಪುರುಷವ್ಯಾಘ್ರನು ಹೇಳಿದನು: “ಮಾಧವನನ್ನು ಸ್ವಾಗತಿಸಿ, ಆ ಪರಮಾರ್ಚಿತನಿಗೆ ಅರ್ಘ್ಯ ಆಸನಗಳನ್ನು ನೀಡಿ!”

ಆಗ ವಾರ್ಷ್ಣೇಯನು ಪ್ರವೇಶಿಸಿ ವರಾಸನದಲ್ಲಿ ಕುಳಿತುಕೊಳ್ಳಲು ಸತ್ಕೃತನಾಗಿ ಸತ್ಕರಿಸಿ ಯುಧಿಷ್ಠಿರನು ಅವನನ್ನು ಕೇಳಿದನು.

## ಕೃಷ್ಣನು ಯುಧಿಷ್ಠಿರನಿಗಿತ್ತ ಆಶ್ವಾಸನೆ

ಯುಧಿಷ್ಠಿರನು ಹೇಳಿದನು:

> "ಮಧುಸೂದನ! ನಿನ್ನ ರಾತ್ರಿಯು ಸುಖವಾಗಿ ಕಳೆಯಿತೇ?
> ನಿನ್ನ ಜ್ಞಾನೇಂದ್ರಿಯಗಳೆಲ್ಲವೂ ಪ್ರಸನ್ನವಾಗಿವೆಯೇ?"

ಕೇಳಿದುದಕ್ಕೆ ವಾಸುದೇವನೂ ಕೂಡ ಯುಧಿಷ್ಠಿರನನ್ನು ಕೇಳಿದನು. ಆಗ ಸೇವಕರು ರಾಜರು ಉಪಸ್ಥಿತರಾಗಿದ್ದಾರೆಂದು ನಿವೇದಿಸಿದರು. ರಾಜನ ಅನುಜ್ಞೆಯ ಮೇರೆಗೆ ವಿರಾಟ, ಭೀಮಸೇನ, ಧೃಷ್ಟದ್ಯುಮ್ನ, ಸಾತ್ಯಕಿ, ಶಿಖಂಡಿ, ಯಮಳರು, ಚೇಕಿತಾನ, ಕೇಕಯರು, ಕೌರವ್ಯ ಯುಯುತ್ಸು, ಮತ್ತು ಪಾಂಚಾಲ್ಯ ಉತ್ತಮೌಜಸರನ್ನು ಪ್ರವೇಶಿಸಲಾಯಿತು. ಇವರಲ್ಲದೇ ಇನ್ನೂ ಅನ್ಯ ಅನೇಕ ಕ್ಷತ್ರಿಯರು ಕ್ಷತ್ರಿಯರ್ಷಭ ಮಹಾತ್ಮನ ಉಪಸ್ಥಿತಿಯಲ್ಲಿ ಪ್ರವೇಶಿಸಿ ಆಸನಗಳಲ್ಲಿ ಕುಳಿತುಕೊಂಡರು. ಒಂದೇ ಆಸನದಲ್ಲಿ ವೀರರಾದ ಮಹಾಬಲಶಾಲಿಗಳಾದ ಮಹಾತ್ಮರಾದ ಮಹಾದ್ಯುತೀ ಕೃಷ್ಣ ಮತ್ತು ಯುಯುಧಾನರು ಕುಳಿತುಕೊಂಡರು. ಆಗ ಯುಧಿಷ್ಠಿರನು ಎಲ್ಲರೂ ಕೇಳುವಹಾಗೆ

ಮಧುಸೂದನ ಪುಂಡರೀಕಾಕ್ಷನನ್ನು ಉದ್ದೇಶಿಸಿ ಈ ಮಧುರ ಮಾತನ್ನಾಡಿದನು:

"ಅಮರರು ಹೇಗೆ ಸಹಸ್ರಾಕ್ಷನನ್ನು ಆಶ್ರಯಿಸಿದ್ದಾರೋ ಹಾಗೆ ನಾವೂ ಕೂಡ ನಿನ್ನನ್ನೊಬ್ಬನನ್ನೇ ಯುದ್ಧದಲ್ಲಿ ಜಯ ಮತ್ತು ಶಾಶ್ವತ ಸುಖಗಳಿಗಾಗಿ ಪ್ರಾರ್ಥಿಸುತ್ತಿದ್ದೇವೆ. ಕೃಷ್ಣ! ಶತ್ರುಗಳಿಂದ ಮೋಸಗೊಂಡು ರಾಜ್ಯವನ್ನು ಕಳೆದುಕೊಂಡಿದುದು ಮತ್ತು ನಾವು ವಿವಿಧ ಕ್ಲೇಶಗಳನ್ನು ಅನುಭವಿಸಿದ್ದುದು ಇವೆಲ್ಲವೂ ನಿನಗೆ ತಿಳಿದೇ ಇದೆ. ಸರ್ವೇಶ! ಭಕ್ತವತ್ಸಲ! ಮಧುಸೂದನ! ನಮ್ಮದೆಲ್ಲವೂ-ನಮ್ಮ ಸುಖ, ಜೀವನ ನಿರ್ವಹಣೆ ಮತ್ತು ಯಾತ್ರೆ ಎಲ್ಲವೂ ನಿನ್ನದೇ! ವಾರ್ಷ್ಣೇಯ! ನನ್ನ ಮನಸ್ಸು ನಿನ್ನಲ್ಲಿಯೇ ಇರುವಂತೆ ಮಾಡು! ಅರ್ಜುನನು ಬಯಸಿದಂತೆ ಅವನ ಪ್ರತಿಜ್ಞೆಯು ಸತ್ಯವಾಗುವಂತೆ ಮಾಡು! ಮಾಧವ! ದುಃಖ-ಕೋಪಮಯವಾದ ಮಹಾಸಾಗರವನ್ನು ದಾಟಲಿಚ್ಛಿಸುವ ನಮಗೆ ಇಂದು ನಮ್ಮನ್ನು ಪಾರುಗೊಳಿಸಲು ನೀನೊಂದು ನೌಕೆಯಾಗು. ಕೃಷ್ಣ! ಯುದ್ಧದಲ್ಲಿ ರಥಿಕನಾದ ಕಾರ್ತವೀರ್ಯಸಮನು ಕೂಡ ಮಾಡಲಾಗದುದನ್ನು ರಥದಲ್ಲಿ

ಕುಶಿತ ಸಾರಥಿಯು ಮಾಡಬಲ್ಲನು!”

ವಾಸುದೇವನು ಹೇಳಿದನು:

“ಅಮರ ಲೋಕವನ್ನೂ ಸೇರಿ ಎಲ್ಲ ಲೋಕಗಳಲ್ಲಿ ಪಾರ್ಥ ಧನಂಜಯನಂತಿರುವ ಧನುರ್ಧರನು ಯಾರೂ ಇಲ್ಲ. ಆ ವೀರ್ಯವಾನ, ಅಸ್ತ್ರಸಂಪನ್ನ, ಪರಾಕ್ರಾಂತ, ಮಹಾಬಲ, ಯುದ್ಧಶೌಂಡ, ಸದಾಮರ್ಷೀ, ತೇಜಸ್ವಿನಿಂದ ಮನುಷ್ಯರಲ್ಲಿಯೇ ಶ್ರೇಷ್ಠನಾದ, ಆ ಯುವಕ, ವೃಷಭಸ್ಕಂಧ, ದೀರ್ಘಬಾಹು, ಮಹಾಬಲ, ಸಿಂಹದಂತೆ ನಡೆಯುವ ಶ್ರೀಮಾನನು ನಿನ್ನ ಶತ್ರುವನ್ನು ಸಂಹರಿಸುತ್ತಾನೆ. ನಾನೂ ಕೂಡ ಕುಂತೀಸುತ ಅರ್ಜುನನು ಧಾರ್ತರಾಷ್ಟ್ರನ ಸೇನೆಗಳನ್ನು ಅಗ್ನಿಯು ಕಟ್ಟಿಯನ್ನು ಹೇಗೋ ಹಾಗೆ ಸುಟ್ಟುಬಿಡುವಂತೆ ಮಾಡುತ್ತೇನೆ. ಇಂದು ಅರ್ಜುನನು ಆ ಪಾಪಕರ್ಮಿ, ಕ್ಷುದ್ರ, ಸೌಭದ್ರಘಾತಿಯು ಪುನಃ ಕಾಣಲು ಸಿಗದಂತಹ ಮಾರ್ಗಕ್ಕೆ ಬಾಣಗಳಿಂದ ಕಳುಹಿಸುವವನಿದ್ದಾನೆ. ಇಂದು ಅವನ ಮಾಂಸಗಳನ್ನು ಹದ್ದುಗಳು, ನರಿಗಳು, ತೋಳಗಳು ಮತ್ತು ಇತರ ಮಾಂಸಭಕ್ಷಕರು ಭಕ್ಷಿಸುತ್ತಾರೆ. ಅವನ ರಕ್ಷಣೆಗೆ ಇಂದು ಇಂದ್ರನೊಂದಿಗೆ ದೇವತೆಗಳೇ ಬಂದರೂ ಸಂಕುಲ

ಯುದ್ಧದಲ್ಲಿ ಅವನು ಇಂದು ಹತನಾಗಿ ಯಮನ ರಾಜಧಾನಿಗೆ ಹೋಗುವುದು ನಿಶ್ಚಯ. ಇಂದು ಸೈಂಧವನನ್ನು ಸಂಹರಿಸಿ ಜಿಷ್ಣುವು ನಿನ್ನ ಬಳಿ ಬರುತ್ತಾನೆ. ರಾಜನ್! ಐಶ್ವರ್ಯಸಂಪನ್ನನಾಗಿರುವ ನೀನು ಶೋಕರಹಿತನಾಗು. ವ್ಯಾಕುಲಗೊಳ್ಳಬೇಡ.”

## ಅರ್ಜುನನು ಯುದ್ಧಕ್ಕೆ ಹೊರಟಿದುದು

ಅವರು ಹೀಗೆ ಮಾತನಾಡಿಕೊಳ್ಳುತ್ತಿರಲು ಸುಹೃದ್ಗಣಗಳೊಂದಿಗಿದ್ದ ರಾಜ ಭರತಶ್ರೇಷ್ಠನನ್ನು ಕಾಣಲು ಅರ್ಜುನನು ಆಗಮಿಸಿದನು. ಆ ಶುಭ ಕ್ಷಕ್ಷೆಯನ್ನು ಪ್ರವೇಶಿಸಿ ಎದುರು ನಮಸ್ಕರಿಸಿ ನಿಂತಿದ್ದ ಅರ್ಜುನನನ್ನು ಪಾಂಡವರ್ಷಭನು ಪ್ರೇಮದಿಂದ ಮೇಲೆತ್ತಿ ಅಪ್ಪಿಕೊಂಡನು. ನೆತ್ತಿಯನ್ನು ಆಘ್ರಾಣಿಸಿ, ಬಾಹುಗಳಿಂದ ಬಿಗಿದಪ್ಪಿ, ಪರಮ ಆಶೀರ್ವಚನವನ್ನು ಹೇಳಿ ನಸುನಗುತ್ತಾ ಹೇಳಿದನು:

> “ಅರ್ಜುನ! ಇಂದಿನ ಮಹಾ ಸಂಗ್ರಾಮದಲ್ಲಿ ನಿನ್ನ ವಿಜಯವು ನಿಶ್ಚಯ. ಅದನ್ನು ಸೂಚಿಸುವಂತೆ ನಿನ್ನ ರೂಪದಲ್ಲಿ ಕಾಂತಿಯಿದೆ ಮತ್ತು ಜನಾರ್ದನನೂ ಪ್ರಸನ್ನನಾಗಿದ್ದಾನೆ.”

ಅವನಿಗೆ ಜಿಷ್ಣುವು ಹೇಳಿದನು:

“ನಿನಗೆ ಮಂಗಳವಾಗಲಿ. ಕೇಶವನ ಪ್ರಸಾದದಿಂದುಂಟಾದ
ಒಂದು ಉತ್ತಮ ಮಹದಾಶ್ಚರ್ಯವನ್ನು ನೋಡಿದೆನು!”

ಆಗ ಧನಂಜಯನು ಸುಹೃದರಿಗೆ ಆಶ್ವಾಸನೆಯನ್ನು ನೀಡಲೋಸುಗ ತ್ರ್ಯಂಬಕನೊಂದಿಗಿನ ಸಮಾಗಮವನ್ನು ಕಂಡಹಾಗೆ ವರ್ಣಿಸಿ ಹೇಳಿದನು. ಆಗ ಎಲ್ಲರೂ ವಿಸ್ಮಿತರಾಗಿ ಶಿರದಿಂದ ನೆಲವನ್ನು ಮುಟ್ಟಿ ವೃಷಾಂಕನನ್ನು ನಮಸ್ಕರಿಸಿ “ಸಾಧು! ಸಾಧು!” ಎಂದರು. ಅನಂತರ ಎಲ್ಲ ಸುಹೃದರೂ ಧರ್ಮಸೂನುವಿನ ಅಪ್ಪಣೆಯನ್ನು ಪಡೆದು ಹೃಷ್ಟರಾಗಿ, ತ್ವರೆಮಾಡಿ ಸುಸನ್ನದ್ಧರಾಗಿ ಯುದ್ಧಕ್ಕೆ ಹೊರಟರು. ರಾಜನನ್ನು ಅಭಿವಂದಿಸಿ ಯುಯುಧಾನ, ಅಚ್ಯುತ, ಅರ್ಜುನರೂ ಯುಧಿಷ್ಠಿರನ ನಿವೇಶನದಿಂದ ಹೃಷ್ಟರಾಗಿ ಹೊರಟರು. ಒಂದೇ ರಥದಲ್ಲಿ ದುರ್ಧರ್ಷರಾದ ಯುಯುಧಾನ-ಜನಾರ್ದನರು ಒಟ್ಟಿಗೇ ವೀರ ಅರ್ಜುನನ ನಿವೇಶನಕ್ಕೆ ಹೋದರು. ಅಲ್ಲಿಗೆ ಹೋಗಿ ಹೃಷೀಕೇಶನು ಸೂತನಂತೆ ರಥವರನ ವಾನರರ್ಷಭಧ್ವಜವುಳ್ಳ ರಥವನ್ನು ಸಜ್ಜುಗೊಳಿಸಿದನು. ಮೇಘಸಮ ನಿರ್ಘೋಷವುಳ್ಳ, ಪುಟವಿಟ್ಟ ಕಾಂಚನದ ಪ್ರಭೆಯುಳ್ಳ ಆ ರಥವು ಬೆಳಗಿನ ಸೂರ್ಯನಂತೆ ಪ್ರಕಾಶಮಾನವಾಗಿ ಕಾಣುತ್ತಿತ್ತು. ಆಗ ಸುಸಜ್ಜಿತರಲ್ಲಿ ಶ್ರೇಷ್ಠನಾದ ಪುರುಷ ಶಾರ್ದೂಲನು ಆಹ್ನೀಕವನ್ನು ಮಾಡಿ ರಥವನ್ನು ಪಾರ್ಥನಿಗೆ

ನಿವೇದಿಸಿದನು. ಲೋಕದಲ್ಲಿ ಪುರುಷಶ್ರೇಷ್ಠನಾದ ಕಿರೀಟಿಯು ಬಂಗಾರದ ಕವಚವನ್ನು ತೊಟ್ಟು, ಧನುರ್ಬಾಣಗಳನ್ನು ಹಿಡಿದು, ರಥವನ್ನು ಪ್ರದಕ್ಷಿಣೆ ಮಾಡಿದನು. ಅನಂತರ ವಿದ್ಯೆ-ವಯಸ್ಸು-ಕ್ರಿಯೆಗಳಲ್ಲಿ ವೃದ್ಧರಾದವರು, ಜಿತೇಂದ್ರಿಯರು ಜಯವನ್ನು ಆಶಿಸಿ ಸ್ತುತಿಸುತ್ತಿರಲು ಅವನು ಆ ಮಹಾರಥವನ್ನೇರಿದನು. ಮೊದಲೇ ವಿಜಯ ಸಾಧಕವಾದ ಯುದ್ಧಸಂಬಂಧ ಮಂತ್ರಗಳಿಂದ ಅಭಿಮಂತ್ರಿಸಲ್ಪಟ್ಟಿದ್ದ ಆ ಉತ್ತಮ ರಥವನ್ನೇರಿ ಅವನು ಉದಯಿಸುತ್ತಿರುವ ಭಾಸ್ಕರನಂತೆ ಪ್ರಕಾಶಿಸುತ್ತಿದ್ದನು. ಆ ಕಾಂಚನ ರಥದಲ್ಲಿ ಕಾಂಚನದಿಂದ ಆವೃತನಾಗಿದ್ದ ಆ ರಥಿಗಳಲ್ಲಿ ಶ್ರೇಷ್ಠನು ಮೇರು ಪರ್ವತವನ್ನೇರಿದ ವಿಮಲ, ಅರ್ಚಿಷ್ಮಾನ್ ದಿವಾಕರನಂತೆ ಹೊಳೆಯುತ್ತಿದ್ದನು. ಶರ್ಯಾತಿಯ ಯಜ್ಞಕ್ಕೆ ಹೋಗುತ್ತಿದ್ದ ಇಂದ್ರನನ್ನು ಅಶ್ವಿನೀ ದೇವತೆಗಳು ಅನುಸರಿಸಿ ಹೋಗುತ್ತಿದ್ದಂತೆ ಯುಯುಧಾನ-ಜನಾರ್ದನರಿಬ್ಬರೂ ಪಾರ್ಥನನ್ನು ಅನುಸರಿಸಿ ರಥಾರೋಹಣ ಮಾಡಿದರು. ಆಗ ವೃತ್ರನ ಸಂಹಾರಕ್ಕೆ ವಾಸವನು ಹೊರಡುವಾಗ ಮಾತಲಿಯು ಹೇಗೋ ಹಾಗೆ ಕಡಿವಾಣಗಳನ್ನು ಹಿಡಿಯುವವರಲ್ಲಿ ಶ್ರೇಷ್ಠನಾದ ಗೋವಿಂದನು ಕಡಿವಾಣಗಳನ್ನು ಹಿಡಿದನು. ಅಂಧಕಾರವನ್ನು ನಾಶಗೊಳಿಸಲು ಬುಧ ಮತ್ತು ಶುಕ್ರರ ಜೊತೆಗೂಡಿ ಹೊರಟ ಶಶಿಯಂತೆ ಪಾರ್ಥನು ಅಬರಿಬ್ಬರೊಡನೆ ಪ್ರವರ ರಥದಲ್ಲಿ

ಕುಳಿತಿದ್ದನು. ತಾರಕಾಸುರನ ವಧೆಗೆ ಮಿತ್ರಾವರುಣರೊಡನೆ ಇಂದ್ರನು ಹೊರಟಂತೆ ಸೈಂಧವನನ್ನು ವಧಿಸಲು ಬಯಸಿ ಆ ಶತ್ರುಸೇನಾನಾಶಕನು ಹೊರಟನು. ಆಗ ಹೊರಟಿರುವ ಅರ್ಜುನನನ್ನು ವಾದ್ಯನಿರ್ಘೋಷಗಳಿಂದ, ಮಂಗಲ ಶುಭ ಸ್ತವಗಳಿಂದ ಸೂತ ಮಾಗಧರು ಸಂತೋಷಗೊಳಿಸಿದರು. ಜಯದ ಆಶೀರ್ವಾದಗಳು, ಪುಣ್ಯಾಹ ವಾಚನಗಳು, ಸೂತಮಾಗಧರ ಸ್ತುತಿಗಳೊಂದಿಗೆ ವಾದ್ಯಘೋಷಗಳು ಸೇರಿ ಅವರನ್ನು ರಮಿಸಿದವು. ಅವನು ಹೊರಟಾಗ ಪುಣ್ಯಗಂಧವನ್ನು ಹೊತ್ತ ಶುಚಿಯಾದ ಗಾಳಿಯು ಹಿಂದಿನಿಂದ ಅವನು ಹೊರಟ ದಿಕ್ಕಿನಲ್ಲಿ, ಪಾರ್ಥನನ್ನು ಹರ್ಷಗೊಳಿಸುತ್ತ ಮತ್ತು ಶತ್ರುಗಳನ್ನು ಶೋಷಿಸುತ್ತಾ ಬೀಸುತ್ತಿತ್ತು. ಆಗ ಪಾಂಡವರ ವಿಜಯದ ಮತ್ತು ಕೌರವರ ಸೋಲನ್ನು ಸೂಚಿಸುವ ಅನೇಕ ನಿಮಿತ್ತಗಳು ನಡೆದವು. ಅರ್ಜುನನು ತನ್ನ ಬಲಬಾಗದಲ್ಲಿ ವಿಜಯದ ನಿಮಿತ್ತಗಳನ್ನು ನೋಡಿ ಮಹೇಷ್ವಾಸ ಯುಯುಧಾನನಿಗೆ ಈ ಮಾತನ್ನಾಡಿದನು:

> “ಯುಯುಧಾನ! ಈ ಸೂಚನೆಗಳನ್ನು ನೋಡಿದರೆ ಇಂದು ಯುದ್ಧದಲ್ಲಿ ನನಗೆ ವಿಜಯವು ನಿಶ್ಚಿತವೆಂದು ತೋರುತ್ತಿದೆ. ಯಮಲೋಕಕ್ಕೆ ಹೋಗಲು ಬಯಸಿ ನನ್ನ ವೀರ್ಯವನ್ನು ನೋಡಲು ಬಯಸುವ ನೃಪ ಸೈಂಧವನು ಎಲ್ಲಿದ್ದಾನೋ

ಅಲ್ಲಿಗೆ ಹೋಗುತ್ತೇನೆ. ನಾನು ಹೇಗೆ ಸೈಂಧವನ ವಧೆಯೆಂಬ ಪರಮ ಕೃತ್ಯವನ್ನು ಮಾಡಲಿರುವೆನೋ ಹಾಗೆಯೇ ಧರ್ಮರಾಜನ ರಕ್ಷಣೆಯೂ ಕೂಡ ಮಹಾ ಕೃತ್ಯವಾಗಿದೆ. ಇಂದು ನೀನು ರಾಜನನ್ನು ಪರಿಪಾಲಿಸು. ನಾನು ಹೇಗೆ ಅವನನ್ನು ರಕ್ಷಿಸುತ್ತೇನೋ ಹಾಗೆ ಅವನು ನಿನ್ನಿಂದಲೂ ರಕ್ಷಿಸಲ್ಪಡಲಿ. ನಾನು ನಿನ್ನಮೇಲೆ ಅಥವಾ ಮಹಾರಥಿ ಪ್ರದ್ಯುಮ್ನನ ಮೇಲೆ ಭರವಸೆಯಿಡಬಲ್ಲೆನು. ಇತರರ ಸಹಾಯವನ್ನು ಬಯಸದೇ ನಾನು ಸೈಂಧವನನ್ನು ಸಂಹರಿಸಲು ಶಕ್ಯ. ಯಾವುದೇ ಕಾರಣಕ್ಕಾಗಿ ನೀನು ನನಗಾಗಿ ಬರಬೇಕಾಗಿಲ್ಲ. ರಾಜನ ರಕ್ಷಣೆಯೇ ನಿನ್ನ ಪರಮ ಕಾರ್ಯ. ಅದನ್ನು ಸರ್ವಾತ್ಮನಾಗಿ ನಿರ್ವಹಿಸು. ಎಲ್ಲಿ ಮಹಾದೇವ ವಾಸುದೇವನಿರುವನೋ ಎಲ್ಲಿ ನಾನೂ ಇರುವೆನೋ ಅಲ್ಲಿ ಯಾವುದೇ ರೀತಿಯ ಆಪತ್ತು ಇರುವುದಿಲ್ಲವೆಂಬುದು ನಿಶ್ಚಿತ."

ಪಾರ್ಥನು ಹೀಗೆ ಹೇಳಲು ಪರವೀರಹ ಸಾತ್ಯಕಿಯು ಹಾಗೆಯೇ ಆಗಲೆಂದು ಹೇಳಿ ರಾಜಾ ಯುಧಿಷ್ಠಿರನಿರುವಲ್ಲಿಗೆ ಹೋದನು.

# ಹದಿನಾಲ್ಕನೆಯ ದಿನದ ಯುದ್ಧ –

# ಜಯದ್ರಥವಧೆ

## ಹದಿನಾಲ್ಕನೆಯ ದಿನ ಕೌರವ ವ್ಯೂಹ ರಚನೆ

ಯುದ್ಧದ ಹದಿಮೂರನೆಯ ರಾತ್ರಿಯು ಕಳೆಯಲು ಶಸ್ತ್ರಭೃತರಲ್ಲಿ ಶ್ರೇಷ್ಠ ದ್ರೋಣನು ತನ್ನ ಸೇನೆಗಳೆಲ್ಲವನ್ನೂ ವ್ಯೂಹದಲ್ಲಿರಿಸಲು ಪ್ರಾರಂಭಿಸಿದನು. ಅಲ್ಲಿ ಪರಸ್ಪರರನ್ನು ವಧಿಸಲು ಬಯಸಿದ್ದ ಸಂಕ್ರುದ್ಧರಾಗಿದ್ದ ಅಸಹನಶೀರ ಶೂರರು ವಿಚಿತ್ರ ಧ್ವನಿಯಲ್ಲಿ ಗರ್ಜಿಸುತ್ತಿರುವುದು ಕೇಳಿ ಬರುತ್ತಿತ್ತು. ಕೆಲವರು ಧನುಸ್ಸನ್ನು ಟೇಂಕರಿಸುತ್ತಿದ್ದರು. ಕೆಲವರು ಶಿಂಜನಿಯನ್ನು ಕೈಗಳಿಂದ ತೀಡುತ್ತಿದ್ದರು. ಕೆಲವರು ನಿಟ್ಟುಸಿರುಬಿಡುತ್ತಾ "ಈಗ ಆ ಧನಂಜಯನೆಲ್ಲಿ?" ಎಂದು ಗಟ್ಟಿಯಾಗಿ ಕೂಗುತ್ತಿದ್ದರು. ಕೆಲವರು ಆಕಾಶದಂತೆ ನಿರ್ಮಲವಾಗಿದ್ದ, ಹೊಂಬಣ್ಣದ, ಹರಿತ, ಸುಂದರ ಹಿಡಿಯ ಖಡ್ಗಗಳನ್ನು ಒರೆಯಿಂದ ತೆಗೆದು ತಿರುಗಿಸತೊಡಗಿದರು. ಸಹಸ್ರಾರು ಸಂಗ್ರಾಮ ಮನಸ್ಕ ಶೂರರು ತಮ್ಮ ಶಿಕ್ಷಣಕ್ಕೆ ಅನುಗುಣವಾಗಿ ಖಡ್ಗ ವರಸೆಗಳನ್ನೂ ಧನುಷ್ಟೇಂಕಾರವನ್ನೂ ಮಾಡುತ್ತಿದ್ದರು. ಕೆಲವು ಯೋಧರು ಘಂಟೆ-ಚಂದನಗಳನ್ನುಳ್ಳ, ಚಿನ್ನ-ವಜ್ರಗಳಿಂದ ವಿಭೂಷಿತವಾದ ಗದೆಗಳನ್ನು ಮೇಲಕ್ಕೆತ್ತಿ ಪಾಂಡವನೆಲ್ಲಿ? ಎಂದು ಕೇಳುತ್ತಿದ್ದರು. ಇನ್ನು ಕೆಲವು

ಬಲಮದದಿಂದ ಹುಚ್ಚಾದವರು, ಇಂದ್ರಧ್ವಜಗಳಂತಿರುವ ಪರಿಘಗಳನ್ನು ಕೈಗಳಲ್ಲಿ ಹಿಡಿದು ಆಕಾಶವನ್ನೇ ಸಂಪೂರ್ಣವಾಗಿ ಮುಚ್ಚಿ ಬಿಟ್ಟಿದ್ದರು. ಇತರ ಸಂಗ್ರಾಮಮನಸ್ಕ ಶೂರರು ನಾನಾ ಪ್ರಹರಣಗಳನ್ನು ಹಿಡಿದು, ವಿಚಿತ್ರ ಮಾಲೆಗಳಿಂದ ಅಲಂಕೃತರಾಗಿ ಅಲ್ಲಿ ನಿಂತಿದ್ದರು. "ಅರ್ಜುನನೆಲ್ಲಿ? ಗೋವಿಂದನೆಲ್ಲಿ? ಸೊಕ್ಕಿನ ವೃಕೋದರನೆಲ್ಲಿ? ಅವರ ಸುಹೃದರೆಲ್ಲೆ?" ಎಂದು ರಣದಲ್ಲಿ ಅವರನ್ನು ಕೂಗಿ ಕರೆಯುತ್ತಿದ್ದರು. ಆಗ ಶಂಖವನ್ನೂದಿ ದ್ರೋಣನು ಸ್ವಯಂ ತಾನೇ ಕುದುರೆಗಳನ್ನು ನಿಯಂತ್ರಿಸುತ್ತಾ ವ್ಯೂಹದಲ್ಲಿ ರಚಿಸುತ್ತಾ ವೇಗದಿಂದ ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದನು. ಯುದ್ಧದಲ್ಲಿ ಆನಂದವನ್ನಿಟ್ಟಿದ್ದ ಆ ಸೇನೆಗಳೆಲ್ಲವನ್ನೂ ನಿಲ್ಲಿಸಿ ಭಾರದ್ವಾಜನು ಜಯದ್ರಥನಿಗೆ ಹೇಳಿದನು:

> "ಸೌಮದತ್ತಿ ಭೂರಿಶ್ರವ, ಕರ್ಣ, ಅಶ್ವತ್ಥಾಮ, ಶಲ್ಯ, ವೃಷಸೇನ, ಕೃಪ, ಮತ್ತು ನೂರು ಸಾವಿರ ಕುದುರೆಸವಾರರೂ, ಅರವತ್ತು ಸಾವಿರ ರಥಗಳೂ, ಹದಿನಾಲ್ಕು ಸಾವಿರ ಮದೋದಕವನ್ನು ಸುರಿಸುತ್ತಿರುವ ಆನೆಗಳೂ, ಇಪ್ಪತ್ತೊಂದು ಸಾವಿರ ಕವಚಧಾರೀ ಪದಾತಿಗಳನ್ನೂ ಕರೆದುಕೊಂಡು ನೀನು ನನ್ನಿಂದ ಮೂರು ಗವ್ಯೂತಿಗಳ ದೂರಹೋಗಿ ನಿಲ್ಲು! ಸೈಂಧವ! ಅಲ್ಲಿ ನೀನಿರುವಾಗ ವಾಸವನೊಂದಿಗೆ

ದೇವತೆಗಳೂ ಕೂಡ ನಿನ್ನನ್ನು ಎದುರಿಸಿ ಯುದ್ಧಮಾಡಲಾರರು. ಇನ್ನು ಪಾಂಡವರೆಲ್ಲರೂ ಸೇರಿ ಬಂದರೂ ಏನು? ನೀನು ಸಮಾಧಾನದಿಂದಿರು!”

ಹೀಗೆ ಹೇಳಲು ಸಿಂಧುರಾಜ ಜಯದ್ರಥನು ಸಮಾಧಾನಗೊಂಡು ಅವನು ಹೇಳಿದಲ್ಲಿಗೆ ಕವಚಧಾರಿ, ಪ್ರಾಸಗಳನ್ನು ಹಿಡಿದು ನಿಂತಿರುವ ಅಶ್ವಾರೋಹೀ ಮಹಾರಥ ಗಾಂಧಾರರಿಂದ ಸುತ್ತುವರೆಯಲ್ಪಟ್ಟು ಹೋಗಿ ನಿಂತನು. ಜಯದ್ರಥನ ಅಶ್ವಗಳೆಲ್ಲವೂ ಚಾಮರಗಳಿಂದ ಮತ್ತು ಬಂಗಾರದಿಂದ ವಿಭೂಷಿತವಾಗಿದ್ದು ಭಾರವನ್ನು ಹೊರಬಲ್ಲವುಗಳಾಗಿದ್ದವು. ಅಂತಹ ಒಂಭತ್ತು ಸಾವಿರ ಕುದುರೆಗಳು ಸೈಂಧವನದಾಗಿದ್ದವು. ಕವಚಗಳನ್ನು ಧರಿಸಿದ್ದ, ಭೀಮರೂಪದ, ರೌದ್ರಕರ್ಮಿ ಐನೂರು ಮದಿಸಿದ ಆನೆಗಳನ್ನು ಏರಿದ್ದ ವಿಶಾರದ ಗಜಾರೋಹಿಗಳಿಂದ ಕೂಡಿ ಸರ್ವಸೇನೆಗಳ ಮುಂದೆ ಧೃತರಾಷ್ಟ್ರನ ಮಗ ದುರ್ಮರ್ಷಣನು ಯುದ್ಧಮಾಡಲು ನಿಂತಿದ್ದನು. ದುಃಶಾಸನ-ವಿಕರ್ಣರೂ ಕೂಡ ಸಿಂಧುರಾಜನ ಸಿದ್ಧಿಗೋಸ್ಕರ ಸೇನೆಯ ಮುಂದೆ ನಿಂತಿದ್ದರು. ಭಾರದ್ವಾಜನು ನಿರ್ಮಿಸಿದ ಚಕ್ರಶಕಟವ್ಯೂಹವು ಹನ್ನೆರಡು ಗವ್ಯೂತಿ ಉದ್ದವಾಗಿತ್ತು ಮತ್ತು ಐದೂವರೆ ಗವ್ಯೂತಿ ಅಗಲವಾಗಿತ್ತು. ನಾನಾ ನೃಪತಿ ವೀರರನ್ನು ಮತ್ತು ರಥ-ಅಶ್ವ-ಗಜ-ಪದಾತಿಗಣಗಳನ್ನು

ಸ್ವಯಂ ದ್ರೋಣನು ಅಲ್ಲಲ್ಲಿ ನಿಲ್ಲಿಸಿದನು. ಅದರ ಹಿಂಭಾಗದಲ್ಲಿ ಭೇದಿಸಲಸಾಧ್ಯವಾದ ಪದ್ಮಗರ್ಭ ವ್ಯೂಹವಿತ್ತು. ಆ ಪದ್ಮದ ಮಧ್ಯದಲ್ಲಿ ಸೂಚಿಯಂತೆ ಇನ್ನೊಂದು ಗೂಢ ವ್ಯೂಹವನ್ನು ರಚಿಸಲಾಗಿತ್ತು. ಈ ರೀತಿಯ ಮಹಾವ್ಯೂಹವನ್ನು ರಚಿಸಿ ದ್ರೋಣನು ನಿಂತುಕೊಂಡನು. ಆ ಸೂಚಿಯ ಮುಖದಲ್ಲಿ ಕೃತವರ್ಮನು ನಿಂತಿದ್ದನು. ಅನಂತರ ಕಾಂಬೋಜದ ಜಲಸಂಧನೂ, ಅವನ ಅನಂತರ ಅಮಾತ್ಯರೊಂದಿಗೆ ದುರ್ಯೋಧನನೂ ಇದ್ದರು. ಅನಂತರ ಒಂದು ಲಕ್ಷ ಯೋಧರು ಎಲ್ಲರೂ ಸೂಚಿಯನ್ನು ರಕ್ಷಿಸುತ್ತಾ ಶಕಟವ್ಯೂಹದಲ್ಲಿ ನಿಂತಿದ್ದರು. ಎದಿರು ನಿಂತಿರುವ ಆ ಮಹಾ ಬಲದಿಂದ ಆವೃತನಾಗಿ ಸೂಚಿಯ ಬುಡದಲ್ಲಿ ರಾಜಾ ಜಯದ್ರಥನು ವ್ಯವಸ್ಥಿತನಾಗಿದ್ದನು. ಶಕಟದ ಮುಂದೆ ಭಾರದ್ವಾಜನು ನಿಂತಿದ್ದನು. ಅವನ ಹಿಂದೆ ಅವನನ್ನು ರಕ್ಷಿಸುತ್ತಾ ಸ್ವಯಂ ಭೋಜನಿದ್ದನು. ಬಿಳಿಯ ವಸ್ತ್ರ ಮತ್ತು ಮುಂಡಾಸನ್ನು ಧರಿಸಿ ಆ ವಿಶಾಲಎದೆಯ ಮಹಾಭುಜ ದ್ರೋಣನು ಧನುಸ್ಸನ್ನು ಟೇಂಕರಿಸಿ ಅಂತಕನಂತೆ ಕ್ರುದ್ಧನಾಗಿ ನಿಂತಿದ್ದನು. ವೇದಿಯ ಆ ಪತಾಕೆಯನ್ನು, ಕೃಷ್ಣಾಜಿನದ ಧ್ವಜವನ್ನು ಮತ್ತು ಕೆಂಪು ಕುದುರೆಗಳ ದ್ರೋಣನ ಆ ರಥವನ್ನು ನೋಡಿ ಕುರುಗಳು ಪ್ರಹೃಷ್ಟರಾದರು. ಅಲ್ಲೋಲಕಲ್ಲೋಲಗೊಂಡಿರುವ ಸಮುದ್ರದಂತಿರುವ ದ್ರೋಣರಚಿತ ವ್ಯೂಹವನ್ನು ಕಂಡು

ಸಿದ್ಧಚಾರಣಗಣಗಳು ತುಂಬಾ ವಿಸ್ಮಿತರಾದರು. ಆ ವ್ಯೂಹವು ಶೈಲ-ಸಾಗರ-ವನಗಳು ಮತ್ತು ನಾನಾ ಜನಪದಕುಲಗಳೊಂದಿಗೆ ಇಡೀ ಭೂಮಿಯನ್ನೇ ನುಂಗಿಬಿಡುವುದೋ ಏನೋ ಎಂದು ಎಲ್ಲ ಭೂತಗಳೂ ಅಂದುಕೊಂಡವು. ಭಯವನ್ನುಂಟುಮಾಡುವ ಶಬ್ಧಗಳೊಂದಿಗೆ ಅದ್ಭುತವಾಗಿ ಕಾಣುತ್ತಿದ್ದ, ಹೃದಯವನ್ನು ಅಹಿತವಾಗಿ ಭೇದಿಸುತ್ತಿದ್ದ ಆ ಶಕಟರೂಪದಲ್ಲಿರುವ ಬಹಳಷ್ಟು ರಥ-ಮನುಷ್ಯ-ಕುದುರೆ-ಆನೆಗಳನ್ನು ನೋಡಿ ದುರ್ಯೋಧನನು ಆನಂದಿಸಿದನು.

## ಅರ್ಜುನನು ದುರ್ಮರ್ಷಣನ ಸೇನೆಯನ್ನು ಪರಾಜಿತಗೊಳಿಸಿದುದು

ಹೀಗೆ ಸೇನೆಗಳ ವ್ಯೂಹವು ರಚಿತಗೊಳ್ಳಲು ಅವರು ಉತ್ಸಾಹದಿಂದ ಕೂಗಿ ಭೇರಿ-ಮೃದಂಗಗಳನ್ನು ಬಾರಿಸಿದರು. ಸೇನೆಗಳ ಸಿಂಹಗರ್ಜನೆಗಳೊಡನೆ ವಾದ್ಯಗಳು ಮೊಳಗಿದವು. ಶಂಖಗಳನ್ನು ಊದಲು ಲೋಮಹರ್ಷಣ ನಾದವು ಕೇಳಿಬಂದಿತು. ಯುದ್ಧೇಚ್ಛುಗಳಾದ ಭರತರು ಕವಚಗಳನ್ನು ಧರಿಸಿ ಯುದ್ಧಮಾಡುತ್ತಿರಲು, ರೌದ್ರ ಮುಹೂರ್ತವು ಪ್ರಾಪ್ತವಾಗಲು ಸವ್ಯಸಾಚಿಯು ಕಾಣಿಸಿಕೊಂಡನು. ಸವ್ಯಸಾಚಿಯ ಮುಂಬಾಗದಲ್ಲಿ ಅನೇಕ ಸಾವಿರ ಹೆಣ್ಣು ಮತ್ತು ಗಂಡು ಕಾಗೆಗಳು ಆಟವಾಡುತ್ತಾ ಹಾರಿ

ಹೋಗುತ್ತಿದ್ದವು. ಘೋರವಾಗಿ ಕೂಗುವ ಮೃಗಗಳು, ದರ್ಶನದಿಂದಲೇ ಅಶುಭವನ್ನು ಸೂಚಿಸುವ ನರಿಗಳು ಕೌರವ ಸೇನೆಯ ಬಲಭಾಗದಲ್ಲಿ ಹೋಗುತ್ತಾ ಕೂಗುತ್ತಿದ್ದವು. ಘೋರವಾದ ಭಯವನ್ನು ಸೂಚಿಸುತ್ತಾ ಭಯಂಕರ ಶಬ್ಧಗಳೊಂದಿಗೆ ಉರಿಯುತ್ತಿರುವ ಉಲ್ಕೆಗಳು ಬಿದ್ದವು. ಎಲ್ಲ ಕಡೆ ಭೂಮಿಯು ಕಂಪಿಸಿತು. ಕೌಂತೇಯನು ಸಂಗ್ರಾಮಕ್ಕೆ ಆಗಮಿಸಲು ಮರಳನ್ನು ಹೊತ್ತು ಸರ್ವತ್ರ ಸುರಿಸುವ ಚಂಡಮಾರುತವು ಬೀಸಿತು. ಪ್ರಾಜ್ಞರಾದ ನಕುಲನ ಮಗ ಶತಾನೀಕ ಮತ್ತು ಪಾರ್ಷತ ಧೃಷ್ಟದ್ಯುಮ್ನರು ಪಾಂಡವರ ಸೇನೆಗಳನ್ನು ವ್ಯೂಹದಲ್ಲಿ ರಚಿಸಿದರು.

ಆಗ ಧೃತರಾಷ್ಟ್ರನ ಮಗ ದುರ್ಮರ್ಷಣನು ಒಂದು ಸಾವಿರ ರಥಿಗಳೊಡನೆ, ನೂರು ಆನೆಗಳೊಂದಿಗೆ, ಮೂರು ಸಾವಿರ ಕುದುರೆಗಳೊಂದಿಗೆ, ಹತ್ತು ಸಾವಿರ ಪದಾತಿಗಳೊಡನೆ ಅರ್ಜುನನಿಂದ ಒಂದು ಸಾವಿರದ ಐದುನೂರು ಧನುಸ್ಸುಗಳ ಪ್ರಮಾಣದಲ್ಲಿ ಸರ್ವ ಸೈನ್ಯಗಳ ಅಗ್ರಭಾಗದಲ್ಲಿ ನಿಂತು ಹೇಳಿದನು:

> “ಯುದ್ಧದುರ್ಮದ, ತಾಪಕ ಗಾಂಡೀವಧನ್ವಿಯನ್ನು ಇಂದು ತೀರವು ಸಮುದ್ರವನ್ನು ತಡೆಯುವಂತೆ ನಾನು ತಡೆಯುತ್ತೇನೆ. ಕಲ್ಲುಗಳ ರಾಶಿಯೊಂದಿಗೆ ಇನ್ನೊಂದು ಕಲ್ಲುರಾಶಿಯ ಘರ್ಷಣೆಯಾಗುವಂತೆ ಇಂದು ರಣದಲ್ಲಿ ಅಸಹನಶೀಲನಾದ

ದುರ್ಧರ್ಷ ಅರ್ಜುನನಿಗೂ ನನಗೂ ನಡೆಯುವ
ಸಂಘರ್ಷವನ್ನು ನೋಡಿರಿ!”

ಹೀಗೆ ಹೇಳಿ ಆ ಮಹೇಷ್ವಾಸನು ಮಹೇಷ್ವಾಸರಿಂದ ಆವೃತನಾಗಿ ಸಿದ್ಧನಾಗಿ ನಿಂತನು. ಅಂತಕನಂತೆ ಕ್ರುದ್ಧನಾಗಿಯೂ, ವಜ್ರಧಾರಿಯಾದ ವಾಸವನಂತೆಯೂ, ಸಹಿಸಲಸಾದ್ಯನಾದ ಕಾಲದಿಂದ ಚೋದಿತನಾದ ದಂಡಪಾಣಿ ಮೃತ್ಯುವಿನಂತೆಯೂ, ಕ್ಷೋಭೆಗೊಳಿಸಲು ಅಶಕ್ಯನಾದ ಶೂಲಪಾಣಿಯಂತಲೂ, ಪಾಶಹಸ್ತನಾದ ವರುಣನಂತೆಯೂ, ಪ್ರಜೆಗಳನ್ನು ಭಸ್ಮಮಾಡಲು ಹೊರಟಿರುವ ಜ್ವಾಲಾಯುಕ್ತ ಯುಗಾಂತದ ಅಗ್ನಿಯಂತೆಯೂ, ಕ್ರೋಧ-ಅಸಹನೆ-ಬಲಗಳಿಂದ ಚೋದಿತನಾಗಿ ಆ ನಿವಾತಕವಚಾಂತಕ ಜಯ ಮಹಾವ್ರತನು ಪ್ರತಿಜ್ಞೆಯನ್ನು ಸತ್ಯವನಾಗಿಸಲು ಎಲ್ಲರನ್ನೂ ಪಾರುಮಾಡಿ ಮುನ್ನುಗ್ಗಿದನು. ಕವಚವನ್ನು ಧರಿಸಿದ್ದ, ಖಡ್ಗಧಾರಿಯಾಗಿದ್ದ, ಬಂಗಾರದ ಕಿರೀಟವನ್ನು ಧರಿಸಿದ್ದ, ಶುಭ್ರವಾದ ಮಾಲೆ-ವಸ್ತ್ರಗಳನ್ನು ಧರಿಸಿದ್ದ, ಸುಮನೋಹರ ಕುಂಡಲಗಳನ್ನು ಧರಿಸಿದ್ದ ನಾರಾಯಣಾನುಗ ನರನು ರಣದಲ್ಲಿ ಗಾಂಡೀವವನ್ನು ಟೇಂಕರಿಸುತ್ತಾ ಉದಯಿಸುತ್ತಿರುವ ಸೂರ್ಯನಂತಿದ್ದನು. ಆ ಮಹಾಸೇನೆಯ ಎದಿರು ಬಾಣಗಳು ಬೀಳುವಷ್ಟು ದೂರದಲ್ಲಿ ರಥವನ್ನು ವ್ಯವಸ್ಥಾಪಿಸಿ ಪ್ರತಾಪವಾನ

ಧನಂಜಯನು ಶಂಖವನ್ನೂದಿದನು. ಆಗ ಪಾರ್ಥನೊಂದಿಗೆ ಕೃಷ್ಣನೂ ಕೂಡ ಸಂಭ್ರಾಂತನಾಗದೇ ಜೋರಾಗಿ ಶಂಖಪ್ರವರ ಪಾಂಚಜನ್ಯವನ್ನು ಊದಿದನು. ಅವರ ಶಂಖಧ್ವನಿಯಿಂದ ಕೌರವ ಸೇನೆಗಳು ರೋಮಾಂಚನಗೊಂಡು ನಡುಗಿ ಗತಚೇತಸರಾದರು. ಎಲ್ಲ ಪ್ರಾಣಿಗಳೂ ಸಿಡಿಲಿನ ಧ್ವನಿಯಿಂದ ಹೇಗೆ ತತ್ತರಿಸುವರೋ ಹಾಗೆ ಕೌರವ ಸೈನಿಕರು ಆ ಶಂಖಧ್ವನಿಯಿಂದ ತತ್ತರಿಸಿದರು. ಆನೆ-ಕುದುರೆಗಳು ಎಲ್ಲೆಡೆಯಲ್ಲಿ ಮಲ-ಮೂತ್ರ ವಿಸರ್ಜನೆಮಾಡಿದವು. ಹೀಗೆ ವಾಹನಗಳೊಂದಿಗೆ ಕೌವವ ಸೇನೆಯೆಲ್ಲವೂ ಆವಿಗ್ನಕ್ಕೊಳಗಾಯಿತು. ಶಂಖದ ಶಬ್ಧದಿಂದ ನರರು ಹೆದರಿದರು. ಕೆಲವರು ಮೂರ್ಛೆಹೋದರು. ಇನ್ನು ಕೆಲವರು ನಡುಗಿದರು.

ಆಗ ಭೂತಗಳೊಂದಿಗೆ ಧ್ವಜದಲ್ಲಿ ನೆಲೆಸಿದ್ದ ಕಪಿಯೂ ಕೂಡ ಬಾಯಿಯನ್ನು ಅಗಲವಾಗಿ ತೆರೆದು ಜೋರಾಗಿ ಕೂಗಿ ಕೌರವ ಸೈನಿಕರು ಇನ್ನೂ ಭೀತಿಗೊಳ್ಳುವಂತೆ ಮಾಡಿದನು. ಆಗ ಕೌರವ ಸೇನೆಗಳನ್ನು ಹರ್ಷಗೊಳಿಸಲು ಪುನಃ ಶಂಖ-ಭೇರಿ-ಮೃದಂಗ-ಅನಕಗಳನ್ನು ಒಟ್ಟಿಗೇ ಊದಿ-ಬಾರಿಸಲಾಯಿತು. ಸೇರಿದ್ದ ಮಹಾರಥರು ನಾನಾ ವಾದ್ಯಗಳ ಧ್ವನಿಯಿಂದ, ಗರ್ಜನ-ತರ್ಜನಗಳಿಂದ, ಚಪ್ಪಾಳೆಗಳಿಂದ, ಸಿಂಹನಾದಗಳಿಂದ ಹೇಡಿಗಳ ಭಯವನ್ನು ಹೆಚ್ಚಿಸುವ ಆ ತುಮುಲ

ಶಬ್ಧವನ್ನು ಮಾಡುತ್ತಿರಲು, ಅತೀವ ಹೃಷ್ಟನಾದ ಪಾಕಶಾಸನಿಯು ದಾಶಾರ್ಹನಿಗೆ ಹೇಳಿದನು:

> “ಹೃಷೀಕೇಶ! ಎಲ್ಲಿ ದುರ್ಮರ್ಷಣನಿರುವನೋ ಅಲ್ಲಿಗೇ ಕುದುರೆಗಳನ್ನು ಓಡಿಸು. ಮೊದಲು ಅವನ ಗಜಸೇನೆಯನ್ನು ಭೇದಿಸಿ ಅರಿಸೇನೆಯನ್ನು ಪ್ರವೇಶಿಸುತ್ತೇನೆ!”

ಸವ್ಯಸಾಚಿಯು ಹೀಗೆ ಹೇಳಲು ಮಹಾಬಾಹು ಕೇಶವನು ದುರ್ಮರ್ಷಣನಿರುವಲ್ಲಿಗೆ ಕುದುರೆಗಳನ್ನು ಓಡಿಸಿದನು. ಆಗ ಅನೇಕರೊಂದಿಗೆ ಒಬ್ಬನ ತುಮುಲಪ್ರಹಾರಗಳನ್ನುಳ್ಳ, ದಾರುಣವಾದ, ರಥ-ಗಜ-ನರರ ಕ್ಷಯಕಾರಕ ತುಮುಲ ಯುದ್ಧವು ನಡೆಯಿತು. ಮಳೆಸುರಿಸುವ ಮೋಡದಂತೆ ಸಾಯಕಗಳ ಮಳೆಸುರಿಸಿ, ಮೋಡಗಳು ಪರ್ವತವನ್ನು ಹೇಗೋ ಹಾಗೆ ಪಾರ್ಥನು ಶತ್ರುಗಳನ್ನು ಮುಸುಕಿದನು. ಆ ರಥಿಗಳೆಲ್ಲರೂ ಕೂಡ ತ್ವರೆಮಾಡಿ ಹಸ್ತಚಾಕಚಕ್ಯತೆಯಿಂದ ಕೃಷ್ಣ-ಧನಂಜಯರನ್ನು ಬಾಣಜಾಲಗಳಿಂದ ಮುಚ್ಚಿದರು. ಶತ್ರುಗಳಿಂದ ಯುದ್ಧದಲ್ಲಿ ತಡೆಯಲ್ಪಟ್ಟ ಪಾರ್ಥನು ಕ್ರುದ್ಧನಾಗಿ ಶರಗಳಿಂದ ರಥಿಗಳ ಶಿರಗಳನ್ನು ಕಾಯಗಳಿಂದ ಅಪಹರಿಸಿದನು. ಉದ್ವೇಗದ ಕಣ್ಣುಗಳಿಂದ, ಅವುಡುಕಚ್ಚಿದ ತುಟಿಗಳಿಂದ, ಸುಂದರ ಕುಂಡಲ-ಶಿರಸ್ತ್ರಾಣಗಳಿಂದ ಕೂಡಿದ ಶಿರಗಳಿಂದ ಅವನಿಯು ವ್ಯಾಪ್ತವಾಯಿತು. ಚೆಲ್ಲಾಪಿಲ್ಲಿಯಾಗಿ

ಬಿದ್ದಿದ್ದ ಯೋಧರ ಮುಖಗಳು ವಿಧ್ವಂಸಗೊಂಡ ಕಮಲ ಪುಷ್ಪಗಳಂತೆ ಎಲ್ಲಾ ಕಡೆ ಚದುರಿ ಬಿದ್ದಿದ್ದವು. ಸುವರ್ಣಮಯ ವಿಚಿತ್ರ ಕವಚಗಳನ್ನು ಧರಿಸಿದ್ದ, ರಕ್ತದಲ್ಲಿ ತೋಯ್ದು ಹೋಗಿದ್ದ ಅವರ ದೇಹಗಳು ಮಿಂಚಿನಿಂದ ಕೂಡಿದ ಮೇಘರಾಶಿಯಂತೆ ತೋರುತ್ತಿದ್ದವು. ಸಮಯಬಂದು ಪರಿಪಕ್ವವಾದ ತಾಳೆಯ ಹಣ್ಣುಗಳು ಬೀಳುವಂತೆ ಭೂಮಿಯ ಮೇಲೆ ಬೀಳುತ್ತಿದ್ದ ಶಿರಸ್ಸುಗಳ ಶಬ್ಧವು ಕೇಳಿಬರುತ್ತಿತ್ತು. ಆಗ ಕೆಲವು ಕಬಂಧಗಳು ಧನುಸ್ಸನ್ನೇ ಊರಿ ನಿಂತಿದ್ದವು. ಕೆಲವು ಖಡ್ಗವನ್ನು ಒರಸೆಯಿಂದ ಎಳೆದು ತೆಗೆದು ಭುಜದ ಮೇಲೆ ಹೊತ್ತು ನಿಂತಿದ್ದವು. ಸಂಗ್ರಾಮದಲ್ಲಿ ಜಯವನ್ನು ಬಯಸಿದ ಆ ನರರ್ಷಭರು ಬಾಣಗಳಿಂದ ತಮ್ಮ ಶಿರಸ್ಸುಗಳು ಬಿದ್ದಿದುದನ್ನು ತಿಳಿಯದೇ ಅಸಹನೆಯಿಂದ ಕೌಂತೇಯನ ಕಡೆ ನುಗ್ಗುತ್ತಿದ್ದರು. ಕುದುರೆಗಳ ರುಂಡಗಳು, ಆನೆಗಳ ಸೊಂಡಿಲುಗಳು, ವೀರರ ಬಾಹುಗಳು ಮತ್ತು ಶಿರಗಳು ಮೇದಿನಿಯ ಮೇಲೆ ಹರಡಿ ಬಿದ್ದಿದ್ದವು. “ಇಲ್ಲಿಯೇ ಪಾರ್ಥನಿದ್ದಾನೆ! ಪಾರ್ಥನೆಲ್ಲಿ? ಇವನೇ ಪಾರ್ಥ!” ಎಂದು ಮುಂತಾಗಿ ಕೂಗುತ್ತಿದ್ದ ಕೌರವ ಸೇನೆಯ ಯೋಧರಿಗೆ ಎಲ್ಲವೂ ಪಾರ್ಥಮಯವಾಗಿ ತೋರಿತು.

ಕಾಲದಿಂದ ಮೋಹಿತರಾದ ಅವರು ಅನ್ಯೋನ್ಯರನ್ನೂ ಕೊಲ್ಲುತ್ತಿದ್ದರು. ತಮ್ಮವರನ್ನೇ ಶತ್ರುವೆಂದು ತಿಳಿದು ಇಡೀ ಜಗತ್ತೇ ಪಾರ್ಥನಿಂದ

ತುಂಬಿಕೊಂಡಿರುವಂತೆ ಭ್ರಾಂತರಾದರು. ರಕ್ತದಿಂದ ತೋಯ್ದುಹೋಗಿ, ಗಾಢವೇದನೆಯಿಂದ ಮೂರ್ಛಿತರಾಗಿ ಮಲಗಿದ್ದ ಅನೇಕ ವೀರರು ಸ್ನೇಹಿತರನ್ನು ಕೂಗಿ ಕರೆಯುತ್ತಿದ್ದರು. ಪರಮ ಬಾಣಗಳಿಂದ ಕತ್ತರಿಸಲ್ಪಟ್ಟ ಮಹಾಸರ್ಪಗಳಂತಿದ್ದ, ಪರಿಘಗಳಂತಿದ್ದ ಬಾಹುಗಳು ರಣದಲ್ಲಿ ಎಲ್ಲ ಕಡೆ ಭಿಂಡಿಪಾಲ-ಪ್ರಾಸ-ಶಕ್ತಿ-ಪರಶಾಯುಧ-ಋಷ್ಠಿ-ತ್ರಿಶೂಲ-ಖಡ್ಗ-ಧನುಸ್ಸು-ತೋಮರ-ಕವಚ-ಆಭರಣ-ಗದೆ-ಅಂಗದಗಳೊಂದಿಗೆ ಸಂರಬ್ಧರಾಗಿ ಮೇಲೆ ಏಳುತ್ತಿದ್ದವು, ಚಡಪಡಿಸುತ್ತಿದ್ದವು, ಆವೇಶಯುಕ್ತವಾಗಿ ಮೇಲೆ ಮೇಲೆ ಹಾರುತ್ತಿದ್ದವು. ಸಮರದಲ್ಲಿ ಯಾವ ಮನುಷ್ಯನು ಪಾರ್ಥನನ್ನು ಎದುರಿಸಲು ಅಸಹನೆಯಿಂದ ಮುನ್ನುಗ್ಗುತ್ತಿದ್ದನೋ ಅವನ ಶರೀರವನ್ನು ಪ್ರಾಣಾಂತಕ ಬಾಣವು ಹೊಗುತ್ತಿತ್ತು. ಹೀಗೆ ರಥಮಾರ್ಗಗಳಲ್ಲಿ ಧನುಸ್ಸನ್ನು ಎಡ ಮತ್ತು ಬಲಗೈಗಳಲ್ಲಿ ಹಿಡಿದು ನರ್ತಿಸುತ್ತಿದ್ದ ಪಾರ್ಥನನ್ನು ಹೊಡೆಯಲು ಒಂದು ಸ್ವಲ್ಪ ಅವಕಾಶವನ್ನೂ ಅವರು ಕಾಣುತ್ತಿರಲಿಲ್ಲ. ಬೇಗಬೇಗನೇ ಶರಗಳನ್ನು ಪ್ರಯೋಗಿಸುತ್ತಿದ್ದ ಪಾಂಡುಪುತ್ರನ ಕೈಚಳಕವನ್ನು ನೋಡಿ ಜನರು ವಿಸ್ಮಿತರಾದರು. ಫಲ್ಗುನನು ಬಾಣಗಳಿಂದ ಆನೆಗಳನ್ನೂ, ಮಾವಟಿಗರನ್ನೂ, ಕುದುರೆಗಳನ್ನೂ, ಕುದುರೆಸವಾರರನ್ನೂ, ಸಾರಥಿಗಳೊಂದಿಗೆ ರಥಾರೂಢರನ್ನೂ ಸಂಹರಿಸುತ್ತಿದ್ದನು. ಪಾಂಡವನು ಓಡಿ ಹೋಗಿ ಪುನಃ

ಹಿಂದಿರುಗುತ್ತಿದ್ದವರನ್ನೂ, ಮುಂದೆ ನಿಂತು ಯುದ್ಧಮಾಡುತ್ತಿರುವವರನ್ನೂ ಯಾರನ್ನೂ ಕೊಲ್ಲದೇ ಬಿಡುತ್ತಿರಲಿಲ್ಲ. ಗಗನದಲ್ಲಿ ಸೂರ್ಯನು ಉದಯಿಸಿ ಮಹಾ ಕತ್ತಲೆಯನ್ನು ಸಂಹರಿಸುವಂತೆ ಅರ್ಜುನನು ಕಂಕಪತ್ರಿಗಳಿಂದ ಆ ಗಜಾನೀಕವನ್ನು ವಧಿಸಿದನು. ಅಂತಕಾಲದಲ್ಲಿ ಭೂಮಿಯ ಮೇಲೆ ಪರ್ವತಗಳು ಹರಡಿ ಬಿದ್ದಿರುವಂತೆ ಒಡೆದ ಆನೆಗಳು ರಣಭೂಮಿಯಲ್ಲಿ ಬಿದ್ದಿರುವುದನ್ನು ಕೌರವ ಸೈನ್ಯವು ನೋಡಿತು. ಹೇಗೆ ಮಧ್ಯಾಹ್ನದ ಸೂರ್ಯನನ್ನು ನೋಡಲು ಪ್ರಾಣಿಗಳಿಗೆ ಕಷ್ಟವಾಗುತ್ತದೆಯೋ ಹಾಗೆ ಯುದ್ಧದಲ್ಲಿ ಕ್ರುದ್ಧನಾದ ಧನಂಜಯನನ್ನು ನೋಡಲು ಶತ್ರುಗಳಿಗೆ ಕಷ್ಟವಾಗುತ್ತಿತ್ತು.

ಆಗ ದುರ್ಮರ್ಷಣನ ಸೈನ್ಯವು ಭಗ್ನವಾಗಿ, ಶರಗಳಿಂದ ಅತ್ಯಂತ ಪೀಡಿತಗೊಂಡು, ಉದ್ವಿಗ್ನತೆಯಿಂದ ಪಲಾಯನಗೈಯಿತು. ದೊಡ್ಡ ಚಂಡಮಾರುತವು ಮೇಘಗಳ ಸಮೂಹವನ್ನು ಹಾರಿಸಿಕೊಂಡು ಹೋಗುವಂತೆ ಓಡಿಹೋಗುತ್ತಿದ್ದ ಆ ಸೈನ್ಯಕ್ಕೆ ಹಿಂದಿರುಗಿ ನೋಡಲೂ ಕೂಡ ಸಾಧ್ಯವಾಗುತ್ತಿರಲಿಲ್ಲ. ಅರ್ಜುನನಿಂದ ಆರ್ದಿತರಾದ ಕೌರವರ ಕಡೆಯ ಅಶ್ವಾರೋಹಿಗಳು ಮತ್ತು ರಥಾರೂಢರು ಚಾವಟಿಗಳಿಂದಲೂ, ಧನುಸ್ಸುಗಳ ತುದಿಯಿಂದಲೂ, ಹುಂಕಾರಶಬ್ಧಗಳಿಂದಲೂ, ಚಪ್ಪರಿಸುವುದರಿಂದಲೂ, ಬಾರುಕೋಲು ಮತ್ತು ಹಿಮ್ಮಡಿಯ

ಪ್ರಹಾರಗಳಿಂದಲೂ ಗಟ್ಟಿಯಾಗಿ ಅಬ್ಬರಿಸುವುದರಿಂದಲೂ ಬೇಗ ಬೇಗ ಕುದುರೆಗಳನ್ನು ಓಡಿಸಿಕೊಂಡು ಪಲಾಯನ ಮಾಡುತ್ತಿದ್ದರು. ಕೆಲವರು ಪಾರ್ಷ್ಣಿ-ಅಂಗುಷ್ಠಾಂಕುಶಗಳಿಂದ ಆನೆಗಳನ್ನು ಓಡಿಸಿಕೊಂಡು ಹೋಗುತ್ತಿದ್ದರು. ಕೆಲವರು ಶರಗಳಿಂದ ಸಮ್ಮೋಹಿತರಾಗಿ, ಎಲ್ಲಿ ಓಡಬೇಕೆಂದು ತಿಳಿಯದೇ ಅರ್ಜುನನ ಅಭಿಮುಖವಾಗಿಯೇ ಹೋಗುತ್ತಿದ್ದರು. ಹೀಗೆ ಕೌರವ ಯೋಧರು ಉತ್ಸಾಹವನ್ನು ಕಳೆದುಕೊಂಡವರೂ, ಭ್ರಾಂತಿಗೊಂಡವರೂ ಆಗಿದ್ದರು.

ಹಾಗೆ ಅರ್ಜುನನಿಂದ ಕೌರವ ಸೇನೆಯು ನುಚ್ಚುನೂರಾಗಿ ವೀರರು ಹತರಾಗಲು, ಉತ್ಸಾಹವನ್ನು ಕಳೆದುಕೊಂಡ ಅವರು ಪಲಾಯನಕ್ಕೆ ಸಮಯ ಕಾಯುತ್ತಿದ್ದರು. ಪಾಕಶಾಸನಿಯು ಎದಿರು ಬಂದವರೆಲ್ಲರನ್ನೂ ಉತ್ತಮ ಶರಗಳಿಂದ ವಧಿಸುತ್ತಿದ್ದನು. ಆಗ ಸಂಗ್ರಾಮದಲ್ಲಿ ಅರ್ಜುನನನ್ನು ನೋಡಲು ಯಾರಿಗೂ ಶಕ್ಯವಾಗುತ್ತಿರಲಿಲ್ಲ.

## ದುಃಶಾಸನ-ಅರ್ಜುನರ ಯುದ್ಧ; ದುಃಶಾಸನನ ಪರಾಭವ

ಆಗ ದುಃಶಾಸನನು ಸೈನ್ಯವು ಹಾಗಾದುದನ್ನು ನೋಡಿ ತುಂಬಾ ಕ್ರುದ್ಧನಾಗಿ ಯುದ್ಧದಲ್ಲಿ ಅರ್ಜುನನನ್ನು ಎದುರಿಸಿದನು. ಅವನು ಕಾಂಚನದ ವಿಚಿತ್ರ ಕವಚದಿಂದ ಆವೃತನಾಗಿದ್ದನು. ಆ ತೀವ್ರಪರಾಕ್ರಮಿಯು ಬಂಗಾರದ ಶಿರಸ್ತ್ರಾಣವನ್ನು ಧರಿಸಿದ್ದನು. ಇಡೀ

ಭೂಮಿಯನ್ನೇ ನುಂಗಿಬಿಡುವಂತಿದ್ದ ಮಹಾ ಗಜಸೇನೆಯೊಂದಿಗೆ ದುಃಶಾಸನನು ಸವ್ಯಸಾಚಿಯನ್ನು ಆಕ್ರಮಣಿಸಿದನು. ಆನೆಗಳ ಘಂಟೆ-ಶಂಖಗಳ ನಿನಾದದಿಂದ, ಟೇಂಕಾರ ಧ್ವನಿಯಿಂದ ಮತ್ತು ಆನೆಗಳ ಘೀಂಕಾರಗಳಿಂದ ಭೂಮಿ-ದಿಕ್ಕು-ಅಂತರಿಕ್ಷಗಳು ಶಬ್ಧದಿಂದ ತುಂಬಿಕೊಂಡವು. ಆ ಮುಹೂರ್ತವು ಭಯವನ್ನುಂಟು ಮಾಡುವ ದಾರುಣ ಸಮಯವಾಗಿತ್ತು. ಅಂಕುಶಗಳಿಂದ ಚೋದಿತರಾಗಿ ತನ್ನ ಮೇಲೆ ಬೇಗನೆ ಬಂದು ಬೀಳುತ್ತಿದ್ದ ಕೋಪದಿಂದ ಆವೇಶಗೊಂಡಿರುವ, ರೆಕ್ಕೆಗಳುಳ್ಳ ಪರ್ವತಗಳಂತಿದ್ದ ಆ ಆನೆಗಳನ್ನು ನೋಡಿ ಧನಂಜಯನು ಜೋರಾಗಿ ಸಿಂಹನಾದಗೈದು, ಅಮಿತ್ರರ ಆ ಗಜಸೇನೆಯನ್ನು ಶರಗಳಿಂದ ವಧಿಸಲು ಉಪಕ್ರಮಿಸಿದನು. ಭಿರುಗಾಳಿಗೆ ಸಿಲುಕಿದ ಸಮುದ್ರವು ದೊಡ್ಡ ದೊಡ್ಡ ಅಲೆಗಳೊಂದಿಗೆ ಮೇಲುಕ್ಕಿ ಬರುವಂತಿದ್ದ ಆ ಗಜಸೇನೆಯನ್ನು ಕಿರೀಟಿಯು ಮೊಸಳೆಯೋಪಾದಿಯಲ್ಲಿ ಪ್ರವೇಶಿಸಿದನು. ಯುಗಸಂಕ್ಷಯದಲ್ಲಿ ಆದಿತ್ಯನು ಎಲ್ಲೆಮೀರಿ ಸುಡುವಂತೆ ಪಾರ್ಥನು ಎಲ್ಲ ದಿಕ್ಕುಗಳನ್ನೂ ಸುಡುವಂತೆ ಕಂಡುಬಂದನು. ಅಶ್ವಗಳ ಗೊರಸಿನ ಶಬ್ಧಗಳಿಂದ, ರಥಚಕ್ರದ ಘೋಷಗಳಿಂದ, ಟೇಂಕಾರದ ಉತ್ಕೃಷ್ಟ ನಿನಾದದಿಂದ, ದೇವದತ್ತ ಶಂಖದ ಘೋಷದಿಂದ, ಗಾಂಡೀವದ ನಿನಾದದಿಂದ ಆನೆಗಳ ವೇಗವು ಕುಂಠಿತವಾಯಿತು. ವಿಷಸರ್ಪಗಳಂತಿದ್ದ ಸವ್ಯಸಾಚಿಯ ಶರಗಳು ತಾಗಿ ಅವು

ನಿರ್ಭಿನ್ನವಾಗಿ ಮೂರ್ಛೆಹೋದವು. ಯುದ್ಧದಲ್ಲಿ ಗಾಂಡೀವದಿಂದ ಬಿಡಲ್ಪಟ್ಟ ತೀಕ್ಷ್ಣ ವಿಶಿಖಗಳಿಂದ ಸರ್ವಾಂಗಗಳಲ್ಲಿ ಗಾಯಗೊಂಡು ಅನೇಕ ನೂರು ಸಾವಿರ ಆನೆಗಳು ಜೋರಾಗಿ ಕೂಗಿಕೊಳ್ಳುತ್ತಾ ರೆಕ್ಕೆಗಳನ್ನು ಕತ್ತರಿಸಲ್ಪಟ್ಟ ಗಿರಿಪರ್ವತಗಳಂತೆ ಕಿರೀಟಿಯಿಂದ ವಧಿಸಲ್ಪಟ್ಟು ಭೂಮಿಯ ಮೇಲೆ ಬಿದ್ದವು. ಕೆಲವು ಆನೆಗಳು ದಂತಗಳ ಕೆಳಭಗದಲ್ಲಿಯೂ, ಕುಂಭಸ್ಥಳದಲ್ಲಿ, ಮತ್ತು ಕಪೋಲಗಳಲ್ಲಿ ಬಾಣಗಳಿಂದ ಚುಚ್ಚಲ್ಪಟ್ಟು ಕ್ರೌಂಚಪಕ್ಷಿಗಳಂತೆ ಮತ್ತೆ ಮತ್ತೆ ಕಿರುಚುತ್ತಿದ್ದವು. ಕಿರೀಟಿಯು ಆನೆಗಳ ಹೆಗಲ ಮೇಲಿದ್ದ ಪುರುಷರ ಶಿರಗಳನ್ನು ಸನ್ನತಪರ್ವ ಭಲ್ಲಗಳಿಂದ ಕತ್ತರಿಸುತ್ತಿದ್ದನು. ಧರಣೀತಲದಲ್ಲಿ ಕುಂಡಲಗಳೊಂದಿಗೆ ಬೀಳುತ್ತಿದ್ದ ಶಿರಸ್ಸುಗಳು ಪಾರ್ಥನು ಪದ್ಮಗಳ ರಾಶಿಗಳಿಂದ ಭೂಮಿಯನ್ನು ಪೂಜಿಸುತ್ತಿರುವನೋ ಎಂಬಂತೆ ತೋರುತ್ತಿದ್ದವು. ರಣದಲ್ಲಿ ತಿರುಗುತ್ತಿದ್ದ ಆನೆಗಳ ಮೇಲೆ ಯಂತ್ರಗಳಿಗೆ ಕಟ್ಟಲ್ಪಟ್ಟಿರುವರೋ ಎಂಬಂತೆ ಕವಚಗಳನ್ನು ಕಳೆದುಕೊಂಡು, ಗಾಯಗಳಿಂದ ಆರ್ತರಾಗಿ, ರಕ್ತದಿಂದ ತೋಯ್ದು ಮನುಷ್ಯರು ನೇತಾಡುತ್ತಿದ್ದರು. ಒಂದೇ ಪತತ್ರಿಯಿಂದ ಕೆಲವೊಮ್ಮೆ ಒಬ್ಬರೇ ತುಂಡಾಗಿ ಮತ್ತು ಇನ್ನು ಕೆಲವೊಮ್ಮೆ ಇಬ್ಬರು ಮೂರುಮಂದಿ ಒಟ್ಟಿಗೇ ಕತ್ತರಿಸಲ್ಪಟ್ಟು ಬೀಳುತ್ತಿದ್ದರು. ಅವನು ಸನ್ನತಪರ್ವ ಭಲ್ಲಗಳಿಂದ ರಥಿಗಳ

ಶಿಂಜಿನಿಯನ್ನೂ, ಧನುಸ್ಸು-ಧ್ವಜಗಳನ್ನೂ, ನೊಗ-ಈಷಾದಂಡಗಳನ್ನೂ ತುಂಡರಿಸಿದನು. ಧನುಸ್ಸನ್ನು ಮಂಡಲಾಕಾರವಾಗಿರಿಸಿಕೊಂಡ ಪಾರ್ಥನು ನರ್ತಿಸುತ್ತಿರುವವನಂತೆ ತೋರುತ್ತಿದ್ದನು. ಅವನು ಚಾಪಕ್ಕೆ ಬಾಣಗಳನ್ನು ಹೂಡುವುದೂ, ಪ್ರಯೋಗಿಸುವುದೂ ಕಾಣುತ್ತಲೇ ಇರಲಿಲ್ಲ.

ನಾರಾಚಗಳಿಂದ ಅತಿಯಾಗಿ ಗಾಯಗೊಂಡು ಬಾಯಿಯಿಂದ ರಕ್ತವನ್ನು ಕಾರುತ್ತಾ ಅನ್ಯ ಆನೆಗಳು ವಸುಧಾತಲದಲ್ಲಿ ಬೀಳುತ್ತಿದ್ದವು. ಆ ಪರಮ ಸಂಕುಲಯುದ್ಧದಲ್ಲಿ ಅಗಣಿತ ಕಬಂಧಗಳು ಮೇಲೆದ್ದು ಕುಣಿಯುತ್ತಿರುವುದು ಎಲ್ಲ ಕಡೆ ಕಂಡುಬಂದಿತು. ಚಾಪಗಳೊಂದಿಗೆ, ಅಂಗುಲಿತ್ರಾಣಗಳೊಂದಿಗೆ, ಖಡ್ಗಗಳೊಂದಿಗೆ, ಅಂಗದಗಳೊಂದಿಗೆ ಹೇಮಾಭರಣ ಭೂಷಿತ ಭುಜಗಳು ತುಂಡಾಗಿ ಬೀಳುತ್ತಿರುವುದು ಕಂಡುಬಂದಿತು. ಛಿನ್ನ ಛಿನ್ನ ರಥೋಪಕರಣಗಳಿಂದಲೂ, ಆಸನಗಳಿಂದಲೂ, ಈಷಾದಂಡಗಳಿಂದಲೂ, ನೊಗಗಳಿಂದಲೂ, ಅಲ್ಲಲ್ಲಿ ಹರಡಿ ಬಿದ್ದಿರುವ ಕವಚ-ಚಾಪ-ಶರಗಳಿಂದಲೂ, ಕೆಳಗೆ ಬಿದ್ದಿದ್ದ ಹಾರ-ಆಭರಣ-ವಸ್ತ್ರಗಳಿಂದಲೂ, ಧ್ವಜಗಳಿಂದಲೂ, ಹತರಾಗಿ ಬಿದ್ದಿದ್ದ ಆನೆ-ಕುದುರೆ-ಕ್ಷತ್ರಿಯರಿಂದಲೂ ಆ ರಣಭೂಮಿಯು ನೋಡಲು ದಾರುಣವಾಗಿ ತೋರುತ್ತಿತ್ತು. ಹೀಗೆ ಕಿರೀಟಿಯಿಂದ

ವಧಿಸಲ್ಪಟ್ಟ ಆ ದುಃಶಾಸನನ ಸೇನೆಯು ವ್ಯಥಿತಗೊಂಡು ನಾಯಕನೊಂದಿಗೆ ಓಡಿಹೋಯಿತು. ಆಗ ಶರಾರ್ದಿತ ದುಃಶಾಸನನು ಸೇನೆಯೊಂದಿಗೆ ದ್ರೋಣನನ್ನು ರಕ್ಷಕನಾಗಿ ಬಯಸುತ್ತಾ ಶಕಟವ್ಯೂಹವನ್ನು ಪ್ರವೇಶಿಸಿದನು.

## ಅರ್ಜುನನು ದ್ರೋಣನನ್ನು ದಾಟಿ ಮುಂದುವರೆದುದು

ದುಃಶಾಸನನ ಸೇನೆಯನ್ನು ನಾಶಗೊಳಿಸಿ ಧನಂಜಯನು ಸಿಂಧುರಾಜನನ್ನು ತಲುಪಲು ಬಯಸಿ ದ್ರೋಣನ ಸೇನೆಯನ್ನು ಆಕ್ರಮಣಿಸಿದನು. ಅವನು ವ್ಯೂಹದ ಪ್ರಮುಖ ಸ್ಥಾನದಲ್ಲಿ ನಿಂತಿದ್ದ ದ್ರೋಣನನ್ನು ತಲುಪಿ, ಕೃಷ್ಣನ ಅನುಮತಿಯಂತೆ, ಕೈಮುಗಿದು ಈ ಮಾತನ್ನಾಡಿದನು:

> “ಬ್ರಹ್ಮನ್! ನನಗೆ ಒಳ್ಳೆಯದಾಗಲೆಂದು ಯೋಚಿಸು. ಸ್ವಸ್ತಿ ಎಂದೂ ನನಗೆ ಹೇಳು. ನಿನ್ನ ಪ್ರಸಾದದಿಂದ ಭೇದಿಸಲಸಾಧ್ಯವಾದ ಈ ಸೇನೆಯನ್ನು ಪ್ರವೇಶಿಸಲು ಬಯಸುತ್ತೇನೆ. ನಿನಗೆ ನಾನು ಸತ್ಯವನ್ನು ಹೇಳುತ್ತಿದ್ದೇನೆ. ನೀನು ನನ್ನ ತಂದೆಗೆ ಸಮ. ಧರ್ಮರಾಜನ ಸಮನೂ ಕೂಡ. ಹಾಗೆಯೇ ಕೃಷ್ಣನಂತೆಯೂ ಕೂಡ. ತಂದೇ! ಅಶ್ವತ್ಥಾಮನು ಹೇಗೆ ನಿನ್ನಿಂದ ರಕ್ಷಣೀಯನೋ ಹಾಗೆ ನನ್ನನ್ನೂ ಕೂಡ ನೀನು

ರಕ್ಷಿಸಬೇಕು. ನಿನ್ನ ಪ್ರಸಾದದಿಂದ ಆಹವದಲ್ಲಿ ಸಿಂಧುರಾಜನನ್ನು ಸಂಹರಿಸಲು ಬಯಸುತ್ತೇನೆ. ನನ್ನ ಪ್ರತಿಜ್ಞೆಯನ್ನು ರಕ್ಷಿಸು!"

ಇದನ್ನು ಕೇಳಿದ ಆಚಾರ್ಯನು ನಸುನಕ್ಕು ಉತ್ತರಿಸಿದನು:

"ಬೀಭತ್ಸೋ! ನನ್ನನ್ನು ಗೆಲ್ಲದೇ ಜಯದ್ರಥನನ್ನು ಗೆಲ್ಲಲು ಶಕ್ಯನಾಗುವುದಿಲ್ಲ!"

ಹೀಗೆ ಅವನಿಗೆ ಹೇಳಿ ದ್ರೋಣನು ಜೋರಾಗಿ ನಕ್ಕು ತೀಕ್ಷ್ಣ ಶರವ್ರಾತಗಳಿಂದ ಅವನ ರಥ-ಕುದುರೆ-ಧ್ವಜ ಮತ್ತು ಸಾರಥಿಯೊಂದಿಗೆ ಅವನನ್ನು ಮುಚ್ಚಿದನು. ಆಗ ಅರ್ಜುನನು ಸಾಯಕಗಳಿಂದ ದ್ರೋಣನ ಶರವ್ರಾತಗಳನ್ನು ತಡೆದು ಘೋರರೂಪದ ಮಹತ್ತರ ಬಾಣಗಳಿಂದ ದ್ರೋಣನನ್ನು ಆಕ್ರಮಣಿಸಿದನು. ಅನುಮಾನಿಸಿ ನಂತರ ರಣದಲ್ಲಿ ಕ್ಷತ್ರಧರ್ಮವನ್ನು ಪಾಲಿಸುತ್ತಾ ದ್ರೋಣನನ್ನು ಒಂಭತ್ತು ಸಾಯಕಗಳಿಂದ ಪುನಃ ಹೊಡೆದನು. ಆ ಬಾಣಗಳನ್ನು ತುಂಡರಿಸಿ ದ್ರೋಣನು ವಿಷಾಗ್ನಿಜ್ವಲನದ ಪ್ರಖರತೆಯುಳ್ಳ ಬಾಣಗಳಿಂದ ಕೃಷ್ಣ-ಪಾಂಡವರಿಬ್ಬರನ್ನೂ ಹೊಡೆದನು. ಪಾಂಡವನು ಅವನ ಬಿಲ್ಲನ್ನು ಬಾಣಗಳಿಂದ ತುಂಡರಿಸಲು ಯೋಚಿಸುತ್ತಿರಲು ಸಂಭ್ರಾಂತನಾದ ವೀರ್ಯವಾನ್ ದ್ರೋಣನು ಶರಗಳಿಂದ ಫಲ್ಗುನನ ಶಿಂಜನಿಯನ್ನು

ಕತ್ತರಿಸಿದನು. ನಸುನಗುತ್ತಾ ಅವನ ಕುದುರೆಗಳನ್ನೂ, ಧ್ವಜವನ್ನೂ, ಸಾರಥಿಯನ್ನೂ, ಅರ್ಜುನನ್ನೂ ಶರಗಳಿಂದ ಹೊಡೆದು ಮುಚ್ಚಿದನು. ಇದರ ಮಧ್ಯೆ ಪಾರ್ಥನು ಆ ಮಹಾ ಧನುಸ್ಸನ್ನು ಸಜ್ಜುಗೊಳಿಸಿ ಆಚಾರ್ಯನನ್ನೂ ಮೀರಿಸಿ, ಒಂದೇ ಬಾಣವನ್ನು ತೆಗೆದುಕೊಂಡು ಬಿಟ್ಟ ಹಾಗೆ ಕಂಡರೂ, ಅವನ ಮೇಲೆ ಆರುನೂರು ಬಾಣಗಳನ್ನು ಪ್ರಯೋಗಿಸಿದನು. ಪುನಃ ಇತರ ಏಳು ನೂರು ಬಾಣಗಳನ್ನೂ, ನಂತರ ಸಹಸ್ರ ಬಾಣಗಳನ್ನೂ, ನಂತರ ಹತ್ತು ಸಾವಿರ ಬಾಣಗಳನ್ನೂ ಪ್ರಯೋಗಿಸಿ ದ್ರೋಣನನ್ನು ಅನುಸರಿಸಿ ಬಂದಿದ್ದ ಆ ಸೇನೆಯನ್ನು ಸಂಹರಿಸಿದನು. ಆ ಚಿತ್ರಯೋಧಿ ಯಶಸ್ವಿಯ ಬಾಣಗಳು ತಗುಲಿ ಗಾಯಗೊಂಡ ಅನೇಕ ಮನುಷ್ಯ-ಕುದುರೆ-ಆನೆಗಳು ಅಸುನೀಗಿ ಬಿದ್ದರು. ಅವನ ಶರಗಳಿಂದ ಪೀಡಿತರಾಗಿ ರಥಿಗಳು ಮತ್ತು ರಥಪ್ರಮುಖರು ಆಯುಧ-ಜೀವಿತಗಳನ್ನು ಕಳೆದುಕೊಂಡು ಬಿದ್ದರು. ಆನೆಗಳು ವಜ್ರ, ಭಿರುಗಾಳಿ ಅಥವಾ ಹುತಾಶನರಿಂದ ಪುಡಿಯಾದ, ಚದುರಿದ ಅಥವಾ ಭಸ್ಮವಾದ ಪರ್ವತಗಳೋ ಅಥವಾ ಮೋಡಗಳೋ ಅಥವಾ ಮನೆಗಳ ಗುಂಪೋ ಎನ್ನುವಂತೆ ಕೆಳಗೆ ಉರುಳಿದವು. ಅರ್ಜುನನ ಬಾಣಗಳ ಹೊಡೆತಕ್ಕೆ ಸಿಕ್ಕ ಸಹಸ್ರಾರು ಕುದುರೆಗಳು ಹಿಮವತ್ ಪರ್ವತದ ಇಳಿಜಾರುಗಳಲ್ಲಿ ನೀರಿನ ಪ್ರವಾಹಕ್ಕೆ ಸಿಕ್ಕಿ ಉರುಳಿದ ಹಂಸಗಳಂತೆ ಉರುಳಿ ಬಿದ್ದವು. ಯುಗಾಂತದಲ್ಲಿ ಅದ್ಭುತ ಪ್ರಳಯದಲ್ಲಿ

ಮುಳುಗಿಹೋಗುವಂತೆ ಮತ್ತು ಸೂರ್ಯನ ರಶ್ಮಿಗಳಿಂದ ಸುಟ್ಟುಹೋಗುವಂತೆ ಪಾಂಡವನ ಶರಗಳಿಂದ ರಥ-ಕುದುರೆ-ಆನೆ-ಪದಾತಿಗಳು ಹತವಾದವು.

ಬಾಣಗಳ ಜಾಲದಿಂದ ಯುದ್ಧದಲ್ಲಿ ಕುರುಪ್ರವೀರರನ್ನು ಸುಡುತ್ತಿದ್ದ ಪಾಂಡವನೆಂಬ ಆ ಆದಿತ್ಯನನ್ನು ದ್ರೋಣವೆಂಬ ಮೋಡವು ವೇಗವಾದ ಶರವರ್ಷಗಳಿಂದ ಮೇಘವು ಸೂರ್ಯನ ಕಿರಣಗಳನ್ನು ಹೇಗೋ ಹಾಗೆ ಮುಚ್ಚಿಬಿಟ್ಟಿತು. ಆಗ ದ್ರೋಣನು ಬಲವಾಗಿ ಪ್ರಯೋಗಿಸಿದ ಶತ್ರುಗಳ ಪ್ರಾಣವನ್ನೇ ಉಣ್ಣುವ ನಾರಾಚದಿಂದ ಧನಂಜಯನ ಎದೆಗೆ ಹೊಡೆದನು. ಬೀಭತ್ಸುವು ಸರ್ವಾಂಗಗಳಲ್ಲಿ ವಿಹ್ವಲಗೊಂಡು ಭೂಕಂಪದಲ್ಲಿ ಪರ್ವತವು ನಡುಗುವಂತೆ ನಡುಗಿದನು. ಅನಂತರ ಧೈರ್ಯವನ್ನು ಪಡೆದುಕೊಂಡು ದ್ರೋಣನನ್ನು ಪತ್ರಿಗಳಿಂದ ಹೊಡೆದನು. ದ್ರೋಣನಾದರೋ ಐದು ಬಾಣಗಳಿಂದ ವಾಸುದೇವನನ್ನು ಹೊಡೆದನು ಮತ್ತು ಅರ್ಜುನನನ್ನು ಮೂರು ಮತ್ತು ಎಪ್ಪತ್ತು ಹಾಗೂ ಧ್ವಜವನ್ನು ಮೂರು ಶರಗಳಿಂದ ಹೊಡೆದನು. ಶಿಷ್ಯನನ್ನೂ ಮೀರಿಸಿ ಪರಾಕ್ರಮಿ ದ್ರೋಣನು ಕಣ್ಣು ಮುಚ್ಚಿ ಬಿಡುವುದರಲ್ಲಿ ಶರ ವೃಷ್ಟಿಗಳಿಂದ ಅರ್ಜುನನನ್ನು ಅದೃಶ್ಯನನ್ನಾಗಿ ಮಾಡಿಬಿಟ್ಟನು.

ಭಾರದ್ವಾಜನ ಸಾಯಕಗಳು ಒಂದೇ ಸಮನೆ ಬೀಳುತ್ತಿರುವುದನ್ನೂ, ಮತ್ತು ಅವನು ಧನುಸ್ಸನ್ನು ಮಂಡಲಾಕಾರವಾಗಿ ಬಗ್ಗಿಸಿ ಹಿಡಿದಿದ್ದ ಆ ಅದ್ಭುತವೂ ಅಲ್ಲಿ ಕಾಣದೊರಕಿತು. ದ್ರೋಣನು ಬಿಟ್ಟ ಆ ಅನೇಕ ಕಂಕಪತ್ರಗಳಿಂದ ಮುಚ್ಚಲ್ಪಟ್ಟ ಬಾಣಗಳು ಸಮರದಲ್ಲಿ ಎಡೆಬಿಡದೇ ವಾಸುದೇವ-ಧನಂಜಯರ ಮೇಲೆ ಬೀಳುತ್ತಿದ್ದವು. ಆ ರೀತಿಯ ದ್ರೋಣ-ಪಾಂಡವರ ಯುದ್ಧವನ್ನು ನೋಡಿದ ವಾಸುದೇವನು ಮಾಡಬೇಕಾದ ಕಾರ್ಯದ ಕುರಿತು ಯೋಚಿಸಿ ಧನಂಜಯನಿಗೆ ಈ ಮಾತನ್ನಾಡಿದನು:

> "ಪಾರ್ಥ! ನಾವು ಸಮಯವನ್ನು ಕಳೆಯಬಾರದು. ದ್ರೋಣನನ್ನು ಬಿಟ್ಟು ಹೋಗೋಣ. ಇದೇ ಮಾಡಬೇಕಾದ ಮಹತ್ತರಕಾರ್ಯವಾಗಿದೆ!"

ಅದಕ್ಕೆ ಪಾರ್ಥನು ಕೃಷ್ಣನಿಗೆ "ಕೇಶವ! ನಿನ್ನ ಇಚ್ಛೆಯಂತೆಯೇ ಆಗಲಿ!" ಎಂದನು.

ಆಗ ಆ ಮಹಾಭುಜ ಬೀಭತ್ಸುವು ದ್ರೋಣನಿಗೆ ಪ್ರದಕ್ಷಿಣೆಯನ್ನು ಹಾಕಿ, ಸುತ್ತಲೂ ಬಾಣಗಳ ಮಳೆಗರೆಯುತ್ತಾ ಮುಂದೆ ಹೊರಟನು. ಆಗ ದ್ರೋಣನು ನಸುನಗುತ್ತಾ ಕೇಳಿದನು:

“ಪಾಂಡವ! ಎಲ್ಲಿಗೆ ಹೋಗುತ್ತಿರುವೆ? ನೀನು ರಣದಲ್ಲಿ ಶತ್ರುವನ್ನು ಗೆಲ್ಲದೆಯೇ ಹಿಂದೆಸರಿಯುವವನಲ್ಲವಲ್ಲ!”

ಅರ್ಜುನನು ಹೇಳಿದನು:

“ನೀನು ನನ್ನ ಗುರು! ಶತ್ರುವಲ್ಲವಲ್ಲ! ಶಿಷ್ಯನಾದ ನಾನು ನಿನಗೆ ಮಗನ ಸಮನಾಗಿದ್ದೇನೆ. ಯುದ್ಧದಲ್ಲಿ ನಿನ್ನನ್ನು ಪರಾಜಯಗೊಳಿಸುವ ಪುರುಷನು ಲೋಕಗಳಲ್ಲಿಯೇ ಇಲ್ಲ!”

ಹೀಗೆ ಹೇಳುತ್ತಾ ಜಯದ್ರಥನ ವಧೆಗೆ ಉತ್ಸುಕನಾಗಿದ್ದ ಮಹಾಬಾಹು ಬೀಭತ್ಸುವು ಅವಸರದೊಂದಿಗೆ ಆ ಸೇನೆಯನ್ನು ಆಕ್ರಮಣಿಸಿದನು. ಅವನನ್ನು ಅನುಸರಿಸಿ ಬಂದ ಚಕ್ರರಕ್ಷಕ ಪಾಂಚಾಲ್ಯ ಯುಧಾಮನ್ಯು-ಉತ್ತಮೌಜಸರಿಬ್ಬರೂ ಕೌರವ ಸೇನೆಯನ್ನು ಪ್ರವೇಶಿಸಿದರು. ಆಗ ಜಯ-ಕೃತವರ್ಮ-ಕಾಂಬೋಜ-ಶ್ರುತಾಯು ಇವರು ಧನಂಜಯನನ್ನು ತಡೆದರು. ಅವರನ್ನು ಅನುಸರಿಸಿ ಬಂದ ಹತ್ತು ಸಾವಿರ ರಥಿಗಳೂ, ಹಿಂದೆ ಸಂಗ್ರಾಮದಲ್ಲಿ ಕರ್ಣನಿಂದ ಗೆದ್ದಲ್ಪಟ್ಟ, ಶೋರಸಮ್ಮತ ಅಭೀಷಾಹರು, ಶೂರಸೇನರು, ಶಿಬರೂ, ವಸಾತಯರು, ಮಾಚೇಲ್ಲಕರು, ಲಲಿತ್ಥರು, ಕೇಕಯರೂ, ಮದ್ರಕರೂ, ನಾರಾಯಣರೂ, ಗೋಪಾಲರೂ, ಕಂಬೋಜರ ಗಣಗಳೂ ಭಾರದ್ವಾಜನನ್ನು ಮುಂದಿರಿಸಿಕೊಂಡು ಜೀವವನ್ನೂ ತೊರೆದು ಅರ್ಜುನನೊಡನೆ ಯುದ್ಧಮಾಡತೊಡಗಿದರು.

ಪುತ್ರಶೋಕಾಭಿಸಂತಪ್ತನಾಗಿದ್ದ ಆ ಮಹೇಷ್ವಾಸ ಪರಾಕ್ರಾಂತ ನರವ್ಯಾಘ್ರನನ್ನು ಅವರು ತಡೆದರು. ಆಗ ಅನ್ಯೋನ್ಯರನ್ನು ಕರೆಯುತ್ತಿದ್ದ ಯೋಧರು ಮತ್ತು ಅರ್ಜುನನ ನಡುವೆ ಲೋಮಹರ್ಷಣ ತುಮುಲ ಯುದ್ಧವು ಪ್ರಾರಂಭವಾಯಿತು. ಜಯದ್ರಥನ ವಧೆಯನ್ನು ಇಚ್ಛಿಸಿ ಮುಂದೆ ಬರುತ್ತಿದ್ದ ಆ ಪುರುಷರ್ಷಭನನ್ನು ಉಲ್ಬಣಗೊಳ್ಳುತ್ತಿರುವ ವ್ಯಾಧಿಯನ್ನು ಔಷಧಿಯು ಹೇಗೋ ಹಾಗೆ ಒಟ್ಟಿಗೇ ತಡೆಯತೊಡಗಿದರು.

ಮಹಾಬಲಪರಾಕ್ರಮಿಯಾದ ಪಾರ್ಥನನ್ನು ಕೌರವರ ಕಡೆಯವರು ತಡೆದು ನಿಲ್ಲಿಸಿದರು. ಅವನನ್ನು ದ್ರೋಣನೂ ಅನುಸರಿಸಿ ಬಂದನು. ವ್ಯಾಧಿಗಣಗಳು ದೇಹವನ್ನು ಹೇಗೋ ಹಾಗೆ ತನ್ನದೇ ರಶ್ಮಿಗಳಿರುವ ಭಾಸ್ಕರನಂತೆ ಅವನು ತೀಕ್ಷ್ಣವಾದ ಶರಗಣಗಳನ್ನು ಚೆಲ್ಲಿ ಆ ಸೈನ್ಯವನ್ನು ಪರಿತಾಪಗೊಳಿಸಿದನು. ಅಶ್ವಗಳು ಗಾಯಗೊಂಡವು. ಧ್ವಜಗಳು ತುಂಡಾದವು. ಆರೋಹಿಗಳೊಡನೆ ಆನೆಗಳು ಉರುಳಿದವು. ಚತ್ರಗಳು ಚಾಪಗಳು ತುಂಡಾದವು. ರಥಗಳು ಚಕ್ರಗಳಿಲ್ಲದಂತಾದವು. ಶರಗಳಿಂದ ಆರ್ತವಾದ ಸೇನೆಗಳು ಎಲ್ಲಕಡೆ ಓಡುತ್ತಿದ್ದವು. ಆಗ ಎಂತಹ ತುಮುಲ ಯುದ್ಧನಡೆಯಿತೆಂದರೆ ಏನೊಂದೂ ತಿಳಿಯುತ್ತಿರಲಿಲ್ಲ. ಅವರು ಪರಸ್ಪರರನ್ನು ಕರೆಯುತ್ತಾ ರಣದಲ್ಲಿ

ಅರ್ಜುನನನ್ನು ಜಿಹ್ಮಗಗಳಿಂದ ಒಂದೇ ಸಮನೆ ಹೊಡೆಯುತ್ತಿರಲು ಅವನೂ ಕೂಡ ಅವರನ್ನು ನಡುಗುವಂತೆ ಮಾಡಿದನು. ಆಗ ಪ್ರತಿಜ್ಞೆಯನ್ನು ಸತ್ಯವಾಗಿಸಲು ಬಯಸಿದ ಸತ್ಯಸಂಗರ ಶ್ವೇತಾಶ್ವನು ರಥಶ್ರೇಷ್ಠ ಶೋಣಾಶ್ವ ದ್ರೋಣನನ್ನು ಆಕ್ರಮಣಿಸಿದನು. ಆಚಾರ್ಯ ದ್ರೋಣನು ಶಿಷ್ಯನಾಗಿದ್ದ ಆ ಮಹೇಷ್ವಾಸನ ಮರ್ಮಗಳನ್ನು ಇಪ್ಪತ್ತೈದು ಜಿಹ್ಮಗಗಳಿಂದ ಹೊಡೆದನು. ಬೀಭತ್ಸುವು ಬೇಗನೆ ಅವನ ಬಾಣಗಳ ವೇಗವನ್ನು ನಿರಸನಗೊಳಿಸಲು ಒಂದೇ ಸಮನೆ ಬಾಣಗಳನ್ನು ಪ್ರಯೋಗಿಸಿದನು. ಅವನು ಎಸೆಯುತ್ತಿದ್ದ ಭಲ್ಲಗಳನ್ನು ಸನ್ನತಪರ್ವ ಭಲ್ಲಗಳಿಂದ ಪ್ರತಿಯಾಗಿ ಹೊಡೆದು ಆ ಅಮೇಯಾತ್ಮನು ಬ್ರಹ್ಮಾಸ್ತ್ರವನ್ನು ಪ್ರಕಟಿಸಿದನು. ಯುದ್ಧದಲ್ಲಿ ಅದು ಆಚಾರ್ಯ ದ್ರೋಣನ ಅದ್ಭುತವಾಗಿತ್ತು. ಎಷ್ಟೇ ಪ್ರಯತ್ನಿಸಿದರು ಅರ್ಜುನನಿಗೆ ಅವನನ್ನು ಗಾಯಗೊಳಿಸಲು ಆಗಲಿಲ್ಲ. ಮಹಾಮೇಘವು ಸಹಸ್ರಾರು ನೀರ ಧಾರೆಗಳನ್ನು ಸುರಿಸುವಂತೆ ದ್ರೋಣವೆಂಬ ಮೇಘವು ಪಾರ್ಥವೆಂಬ ಪರ್ವತದ ಮೇಲೆ ಶರವೃಷ್ಟಿಗಳನ್ನು ಸುರಿಸಿತು. ತೇಜಸ್ವೀ ಅರ್ಜುನನು ಆ ಶರವರ್ಷವನ್ನು ಬ್ರಹ್ಮಾಸ್ತ್ರದಿಂದಲೇ ಎದುರಿಸಿ ಬಾಣಗಳನ್ನು ಬಾಣಗಳಿಂದ ನಿರಸನಗೊಳಿಸಿದನು. ದ್ರೋಣನಾದರೋ ಇಪ್ಪತ್ತೈದರಿಂದ ಶ್ವೇತವಾಹನನನ್ನು ಹೊಡೆದನು. ಮತ್ತು ವಾಸುದೇವನನ್ನು ಬಾಹುಗಳು ಮತ್ತು ಎದೆಯಲ್ಲಿ ಏಳು

ಆಶುಗಗಳಿಂದ ಹೊಡೆದನು.

ಧೀಮಂತ ಪಾರ್ಥನಾದರೋ ಜೋರಾಗಿ ನಕ್ಕು ಆ ಶರೌಘಗಳನ್ನು ಪ್ರಯೋಗಿಸುತ್ತಿದ್ದ ಆಚಾರ್ಯನ ನಿಶಿತ ಬಾಣಗಳನ್ನು ಯುದ್ಧದಲ್ಲಿ ತಡೆದನು. ಆಗ ದ್ರೋಣನಿಂದ ಪ್ರಹರಿಸಲ್ಪಡುತ್ತಿದ್ದ ರಥಸತ್ತಮರಿಬ್ಬರೂ ಯುಗಾಂತದ ಅಗ್ನಿಯಂತೆ ಉರಿಯುತ್ತಿದ್ದ ದುರ್ಧರ್ಷ ದ್ರೋಣನನ್ನು ಅವಲೋಕಿಸಲಿಲ್ಲ.

## ಅರ್ಜುನನು ಕೃತವರ್ಮನನ್ನು ದಾಟಿ ಮುಂದುವರೆದುದು

ದ್ರೋಣನ ಚಾಪದಿಂದ ಬರುತ್ತಿದ್ದ ನಿಶಿತ ಬಾಣಗಳನ್ನು ಅವಲೋಕಿಸದೇ ಕಿರೀಟಮಾಲೀ ಕೌಂತೇಯನು ಭೋಜನ ಸೇನೆಯ ಮೇಲೆ ಆಕ್ರಮಣ ಮಾಡಿದನು. ಮೈನಾಕ ಪರ್ವತದಂತಿದ್ದ ದ್ರೋಣನನ್ನು ದೂರವಿಟ್ಟು ಅವನು ಕೃತವರ್ಮ ಮತ್ತು ಕಾಂಬೋಜದ ಸುದಕ್ಷಿಣರ ಮಧ್ಯೆ ನಿಂತು ಯುದ್ಧಮಾಡತೊಡಗಿದನು. ಆಗ ಭೋಜನು ಬೇಗನೇ ನರವ್ಯಾಘ್ರನನ್ನು ಹತ್ತು ಕಂಕಪತ್ರಿಗಳಿಂದ ಹೊಡೆದನು. ಅವನನ್ನು ಅರ್ಜುನನು ನೂರು ಪತ್ರಿಗಳಿಂದ ಹೊಡೆದನು. ಪುನಃ ಅವನು ಅನ್ಯ ಮೂರುಗಳಿಂದ ಸಾತ್ವತನನ್ನು ಮೂರ್ಛೆಗೊಳಿಸುವಂತೆ ಹೊಡೆದನು. ಭೋಜನಾದರೋ ಜೋರಾಗಿ ನಕ್ಕು ಪಾರ್ಥ ಮತ್ತು ವಾಸುದೇವ ಮಾಧವ ಒಬ್ಬೊಬ್ಬರನ್ನೂ ಇಪ್ಪತ್ತೈದು ಸಾಯಕಗಳಿಂದ

ಹೊಡೆದನು. ಅರ್ಜುನನು ಅವನ ಧನುಸ್ಸನ್ನು ಕತ್ತರಿಸಿ ಇಪ್ಪತ್ತೊಂದು ಕ್ರುದ್ಧ ಸರ್ಪದ ವಿಷದಂತಿರುವ ಅಗ್ನಿ ಶಿಖೆಯ ಆಕಾರದ ಶರಗಳಿಂದ ಹೊಡೆದನು. ಆಗ ಮಹಾರಥ ಕೃತವರ್ಮನು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಬೇಗನೇ ಐದು ಸಾಯಕಗಳಿಂದ ಅವನ ಎದೆಗೆ ಹೊಡೆದನು. ಅವನು ಪುನಃ ಐದು ನಿಶಿತ ಬಾಣಗಳಿಂದ ಪಾರ್ಥನನ್ನು ಹೊಡೆದನು. ಅವನನ್ನು ಪಾರ್ಥನು ಎದೆಗೆ ಗುರಿಯಿಟ್ಟು ಒಂಭತ್ತು ಬಾಣಗಳಿಂದ ಹೊಡೆದನು. ಕೌಂತೇಯನು ಕೃತವರ್ಮನ ರಥದ ಬಳಿಯಲ್ಲಿಯೇ ತಡೆಯಲ್ಪಟ್ಟಿದ್ದುದನ್ನು ನೋಡಿ ವಾರ್ಷ್ಣೇಯನು ನಾವು ಕಾಲದ ವ್ಯಯಮಾಡಬಾರದಲ್ಲ ಎಂದು ಚಿಂತಿಸಿದನು. ಆಗ ಕೃಷ್ಣನು ಪಾರ್ಥನಿಗೆ ಹೇಳಿದನು:

> “ಕೃತವರ್ಮನ ಮೇಲೆ ದಯೆ ಬೇಡ! ಕುರುಗಳ
> ಸಂಬಂಧಿಯನ್ನಾಗಿ ಮಾಡಿಕೊಂಡು ಅವನನ್ನು ಸದೆಬಡಿ!”

ಆಗ ಅರ್ಜುನನು ಶರಗಳಿಂದ ಕೃತವರ್ಮನನ್ನು ಮೂರ್ಛೆಗೊಳಿಸಿ, ವೇಗಶಾಲೀ ಕುದುರೆಗಳಿಂದ ಕಾಂಬೋಜರ ಸೇನೆಯನ್ನು ಆಕ್ರಮಣಿಸಿದನು. ಶ್ವೇತವಾಹನನು ಸೇನೆಯನ್ನು ಪ್ರವೇಶಿಸಿದುದನ್ನು ನೋಡಿ ಹಾರ್ದಿಕ್ಯನು ಅತ್ಯಂತ ಕುಪಿತನಾದನು. ಶರಗಳೊಂದಿಗೆ ಚಾಪವನ್ನು ಟೇಂಕರಿಸುತ್ತಾ ಅವನು ಇಬ್ಬರು ಪಾಂಚಾಲ್ಯರನ್ನು

ಎದುರಿಸಿದನು.

ಕೃತವರ್ಮನು ತನ್ನ ರಥ ಮತ್ತು ಶರಗಳಿಂದ ಅರ್ಜುನನ ಹಿಂದೆಯೇ ಹೋಗುತ್ತಿದ್ದ ಚಕ್ರರಕ್ಷಕರಾಗಿದ ಪಾಂಚಾಲರನ್ನು ತಡೆದನು. ಭೋಜನು ಯುಧಾಮನ್ಯುವನ್ನು ಮೂರು ನಿಶಿತ ಶರಗಳಿಂದಲೂ ಉತ್ತಮೌಜಸನನ್ನು ನಾಲ್ಕರಿಂದಲೂ ಹೊಡೆದನು. ಅವರೂ ಕೂಡ ಅವನನ್ನು ಹತ್ತು ಹತ್ತು ಶರಗಳಿಂದ ಹೊಡೆದರು ಮತ್ತು ಅವನ ಧ್ವಜ-ಧನುಸ್ಸುಗಳನ್ನು ಕತ್ತರಿಸಿದರು. ಆಗ ಕ್ರೋಧಮೂರ್ಛಿತನಾದ ಹಾರ್ದಿಕ್ಯನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಆ ವೀರರಿಬ್ಬರನ್ನೂ ಧನುಸ್ಸು ಇಲ್ಲದವರಂತೆ ಮಾಡಿ ಶರವರ್ಷಗಳಿಂದ ಮುಚ್ಚಿದನು. ಅವರು ಅನ್ಯ ಧನುಸ್ಸುಗಳನ್ನು ತೆಗೆದುಕೊಂಡು ಭೋಜನನ್ನು ತುಂಬಾ ಹೊಡೆದು ಗಾಯಗೊಳಿಸಿದರು. ಆ ಮಧ್ಯದಲ್ಲಿ ಬೀಭತ್ಸುವು ಶತ್ರುಸೇನೆಯನ್ನು ಪ್ರವೇಶಿಸಿದನು. ದ್ವಾರದಲ್ಲಿಯೇ ಕೃತವರ್ಮನಿಂದ ತಡೆಯಲ್ಪಟ್ಟ ಅವರಿಬ್ಬರು ನರರ್ಷಭರಿಗೆ ಎಷ್ಟೇ ಪ್ರಯತ್ನಪಟ್ಟರೂ ಧಾರ್ತರಾಷ್ಟ್ರರ ಸೇನೆಗಳನ್ನು ಪ್ರವೇಶಿಸಲು ಆಗಲಿಲ್ಲ. ಶ್ವೇತವಾಹನನು ಯುದ್ಧದಲ್ಲಿ ತ್ವರೆಮಾಡಿ ಸೇನೆಗಳನ್ನು ನಾಶಪಡಿಸುತ್ತಿದ್ದರೂ, ಆ ಅರಿಸೂದನನು ಸಿಕ್ಕಿದ್ದ ಕೃತವರ್ಮನನ್ನು ವಧಿಸಲಿಲ್ಲ.

## ಶ್ರುತಾಯುಧನ ವಧೆ

ಹಾಗೆ ಮುಂದುವರೆದು ಬರುತ್ತಿದ್ದ ಅವನನ್ನು ನೋಡಿ ಶೂರ, ರಾಜಾ ಶ್ರುತಾಯುಧನು ಸಂಕ್ರುದ್ಧನಾಗಿ ಮಹಾಧನುಸ್ಸನ್ನು ಮಿಡಿಯುತ್ತಾ ಆಕ್ರಮಣಿಸಿದನು. ಅವನು ಪಾರ್ಥನನ್ನು ಮೂರರಿಂದ ಮತ್ತು ಜನಾರ್ದನನನ್ನು ಎಪ್ಪತ್ತರಿಂದ ಹೊಡೆದು, ತೀಕ್ಷ್ಣ ಕ್ಷುರಪ್ರದಿಂದ ಪಾರ್ಥನ ಕೇತುವನ್ನು ಹಾರಿಸಿದನು. ಆಗ ಅರ್ಜುನನು ಕ್ರುದ್ಧನಾಗಿ ಮಾವಟಿಗನು ಮಹಾ ಆನೆಯನ್ನು ಚುಚ್ಚುವಂತೆ ಅವನನ್ನು ತೊಂಭತ್ತು ನತಪರ್ವ ಶರಗಳಿಂದ ಜೋರಾಗಿ ಹೊಡೆದನು. ಪಾಂಡವೇಯನ ವಿಕ್ರಮವನ್ನು ಅವನಿಗೆ ಸಹಿಸಲಾಗಲಿಲ್ಲ. ಅವನನ್ನು ಎಪ್ಪತ್ತೇಳು ಬಾಣಗಳಿಂದ ಹೊಡೆದನು. ಕ್ರುದ್ಧನಾದ ಅರ್ಜುನನು ಅವನ ಧನುಸ್ಸನ್ನು ಕತ್ತರಿಸಿ, ಬತ್ತಳಿಕೆಯನ್ನೂ ತುಂಡುಮಾಡಿ ಎದೆಗೆ ಗುರಿಯಿಟ್ಟು ಏಳು ನತಪರ್ವಗಳನ್ನು ಪ್ರಯೋಗಿಸಿದನು. ಆಗ ರಾಜನು ಕ್ರೋಧಮೂರ್ಛಿತನಾಗಿ ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ವಾಸವಿನ ಬಾಹು-ಎದೆಗಳಿಗೆ ಗುರಿಯಿಟ್ಟು ಒಂಭತ್ತು ಬಾಣಗಳನ್ನು ಬಿಟ್ಟನು. ಆಗ ಅರ್ಜುನನು ನಸುನಗುತ್ತಲೇ ಶ್ರುತಾಯುಧನನ್ನು ಅನೇಕ ಸಹಸ್ರ ಶರಗಳಿಂದ ಪೀಡಿಸತೊಡಗಿದನು. ಆ ಮಹಾರಥ ಮಹಾಬಲನು ಅವನ ಕುದುರೆಗಳನ್ನೂ ಸಾರಥಿಯನ್ನೂ ಕೊಂದು ಅವನನ್ನು ಎಪ್ಪತ್ತು ನಾರಾಚಗಳಿಂದ ಹೊಡೆದನು. ಶ್ರುತಾಯುಧನು

ಕುದುರೆಗಳನ್ನು ಕಳೆದುಕೊಂಡು ರಥದಿಂದ ಹಾರಿ ಗದೆಯನ್ನು ಮೇಲೆತ್ತಿ ಹಿಡಿದು ರಣದಲ್ಲಿ ಪಾರ್ಥನ ಮೇಲೆ ನುಗ್ಗಿದನು. ಆ ಶ್ರುತಾಯುಧನಾದರೋ ವರುಣನ ಮಗನಾಗಿದ್ದನು. ಅವನ ಜನನಿಯು ಶೀತಲ ನೀರಿನ ಮಹಾನದೀ ಪರ್ಣಾಶಾ. ಪುತ್ರನಿಗೋಸ್ಕರವಾಗಿ ಅವನ ತಾಯಿಯು ವರುಣನಿಗೆ ಈ ಮಾತನ್ನು ಕೇಳಿಕೊಂಡಿದ್ದಳು: "ನನ್ನ ಮಗನು ಲೋಕದಲ್ಲಿ ಶತ್ರುಗಳಿಗೆ ಅವಧ್ಯನಾಗಲಿ!" ಆಗ ವರುಣನು ಪ್ರೀತನಾಗಿ ಹೇಳಿದ್ದನು:

> "ನಿನಗೆ ಹಿತವಾದ ಈ ವರವನ್ನು ಕೊಡುತ್ತೇನೆ. ಈ ದಿವ್ಯ ಅಸ್ತ್ರದಿಂದ ನಿನ್ನ ಈ ಮಗನು ಅವಧ್ಯನಾಗುತ್ತಾನೆ. ಮನುಷ್ಯರಿಗೆ ಎಂದೂ ಅಮರತ್ವವೆನ್ನುವುದು ಇಲ್ಲ. ಹುಟ್ಟಿದ ಎಲ್ಲರೂ ಅವಶ್ಯವಾಗಿ ಸಾಯುತ್ತಾರೆ. ಈ ಅಸ್ತ್ರದ ಪ್ರಭಾವದಿಂದ ಇವನು ಸದಾ ರಣದಲ್ಲಿ ಶತ್ರುಗಳಿಗೆ ದುರ್ಧರ್ಷನಾಗಿರುತ್ತಾನೆ. ನಿನ್ನ ಮನಸ್ಸಿನ ಜ್ವರವನ್ನು ಕಳೆದುಕೋ!"

ಹೀಗೆ ಹೇಳಿ ವರುಣನು ಮಂತ್ರಪುರಸ್ಕೃತವಾದ ಗದೆಯನ್ನು ಕೊಟ್ಟಿದ್ದನು. ಅದನ್ನು ಪಡೆದು ಶ್ರುತಾಯುಧನು ಸರ್ವಲೋಕಗಳಲ್ಲಿ ದುರಾಧರ್ಷನಾಗಿದ್ದನು. ಭಗವಾನ್ ಜಲೇಶ್ವರನು ಪುನಃ ಇನ್ನೂ

ಹೇಳಿದ್ದನು:

> “ಯುದ್ಧಮಾಡದೇ ಇರುವವನ ಮೇಲೆ ಇದನ್ನು ಪ್ರಯೋಗಿಸಬಾರದು. ಆಗ ಅದು ನಿನ್ನಮೇಲೆಯೇ ಬೀಳುತ್ತದೆ!”

ಎಂದು.

ಅವನು ವೀರರನ್ನು ಘಾತಿಗೊಳಿಸಬಲ್ಲ ಆ ಗದೆಯಿಂದ ಜನಾರ್ದನನನ್ನು ಹೊಡೆದನು. ವೀರ್ಯವಾನ್ ಕೃಷ್ಣನು ಅದನ್ನು ತನ್ನ ದಪ್ಪ ಭುಜದ ಮೇಲೆ ಸ್ವೀಕರಿಸಿದನು. ಗಾಳಿಯು ವಿಂಧ್ಯ ಗಿರಿಯನ್ನು ಹೇಗೆ ನಡುಗಿಸಲಾರದೋ ಹಾಗೆ ಅದು ಶೌರಿಯನ್ನು ನಡುಗಿಸಲೂ ಇಲ್ಲ. ಆದರೆ ಹಿಂದೆ ಹೇಳಿದ್ದಂತೆಯೇ ಅದು ಮಾಡಿತು. ಹಿಂದಿರುಗಿ ಕಟ್ಟುಪಾಡನ್ನು ಆಚರಿಸದೇ ಇರುವವನ ಮೇಲೆ ಎರಗಿತು. ಅಲ್ಲಿ ನಿಂತಿದ್ದ ವೀರ ಶ್ರುತಾಯುಧನನ್ನು ಹೊಡೆಯಿತು. ಶ್ರುತಾಯುಧನನ್ನು ಸಂಹರಿಸಿ ಜಗತ್ತಿನಿಂದ ಕಣ್ಮರೆಯಾಯಿತು. ತನ್ನದೇ ಅಸ್ತ್ರದಿಂದ ಶ್ರುತಾಯುಧನು ಹತನಾದುದನ್ನು ನೋಡಿ ಅಲ್ಲಿ ಸೇನೆಗಳಲ್ಲಿ ಮಹಾ ಹಾಹಾಕಾರವುಂಟಾಯಿತು. ಯುದ್ಧ ಮಾಡದೇ ಇದ್ದ ಕೇಶವನ ಮೇಲೆ ಆ ಗದೆಯನ್ನು ಪ್ರಯೋಗಿಸಿದುದರಿಂದ ಅದೇ ಗದೆಯಿಂದ ಶ್ರುತಾಯುಧನು ಹತನಾದನು. ವರುಣನು ಹೇಗೆ ಹೇಳಿದ್ದನೋ

ಹಾಗೆಯೇ ಅವನು ನಿಧನವನ್ನು ಹೊಂದಿದನು. ಎಲ್ಲ ಧನ್ವಿಗಳು ನೋಡುತ್ತಿದ್ದಂತೆಯೇ ಅವನು ಅಸುನೀಗಿ ಭೂಮಿಯ ಮೇಲೆ ಬಿದ್ದನು. ಪರ್ಣಾಷಳ ಪ್ರಿಯಸುತನಾದ ಅವನು ಬೀಳುವಾಗ ಭಿರುಗಾಳಿಯಿಂದ ಮುರಿದು ಬಿದ್ದ ಬಹು ಶಾಖೆಗಳನ್ನುಳ್ಳ ವೃಕ್ಷದಂತೆ ತೋರಿದನು. ಆಗ ಶ್ರುತಾಯುಧನು ಹತನಾದುದನ್ನು ನೋಡಿ ಎಲ್ಲ ಸೇನೆಗಳೂ, ಸೇನಾಪ್ರಮುಖರೂ ಓಡತೊಡಗಿದರು.

## ಸುದಕ್ಷಿಣನ ವಧೆ

ಆಗ ಕಾಂಬೋಜರಾಜನ ಶೂರ ಪುತ್ರ ಸುದಕ್ಷಿಣನು ವೇಗ ಕುದುರೆಗಳೊಂದಿಗೆ ಬಂದು ಫಲ್ಗುನನನ್ನು ಆಕ್ರಮಣಿಸಿದನು. ಪಾರ್ಥನು ಅವನ ಮೇಲೆ ಏಳು ಶರಗಳನ್ನು ಪ್ರಯೋಗಿಸಿದನು. ಅವು ಆ ಶೂರನನ್ನು ಭೇದಿಸಿ ಧರಣೀತಲವನ್ನು ಪ್ರವೇಶಿಸಿದವು. ರಣದಲ್ಲಿ ಗಾಂಡೀವದಿಂದ ಬಿಡಲ್ಪಟ್ಟ ತೀಕ್ಷ್ಣ ಶರಗಳಿಂದ ಅತಿಯಾಗಿ ಗಾಯಗೊಂಡ ಅವನು ಹತ್ತು ಕಂಕಪತ್ರಿಗಳಿಂದ ಅರ್ಜುನನನ್ನು ತಿರುಗಿ ಹೊಡೆದನು. ಅವನು ವಾಸುದೇವನನ್ನು ಮೂರರಿಂದ ಹೊಡೆದು ಪುನಃ ಪಾರ್ಥನನ್ನು ಐದರಿಂದ ಹೊಡೆದನು. ಪಾರ್ಥನು ಅವನ ಧನುಸ್ಸನ್ನು ಕತ್ತರಿಸಿ ಕೇತುವನ್ನು ತುಂಡರಿಸಿದನು. ಪಾಂಡವನು ಅವನನ್ನು ತುಂಬಾ ತೀಕ್ಷ್ಣವಾದ ಎರಡು ಭಲ್ಲಗಳಿಂದ ಹೊಡೆದನು. ಅವನಾದರೋ

ಪಾರ್ಥನನ್ನು ಮೂರರಿಂದ ಹೊಡೆದು ಜೋರಾಗಿ ಸಿಂಹನಾದಗೈದನು. ಆಗ ಕ್ರುದ್ಧನಾದ ಶೂರ ಸುದಕ್ಷಿಣನು ಘಂಟೆಗಳಿಂದ ಕೂಡಿದ ಲೋಹಮಯವಾದ ಘೋರ ಶಕ್ತಿಯನ್ನು ಗಾಂಡೀವಧನ್ವಿಯ ಮೇಲೆ ಪ್ರಯೋಗಿಸಿದನು. ಅದು ಮಹಾ ಉಲ್ಕೆಯಂತೆ ಉರಿಯುತ್ತಾ ಬೆಂಕಿಯ ಕಿಡಿಗಳನ್ನು ಕಾರುತ್ತಾ ಆ ಮಹಾರಥನನ್ನು ತಲುಪಿ ಭೇದಿಸಿ ನೆಲದ ಮೇಲೆ ಬಿದ್ದಿತು.

ಆಗ ಅಚಿಂತ್ಯವಿಕ್ರಮಿ ಪಾರ್ಥನು ಹದಿನಾಲ್ಕು ಕಂಕಪತ್ರಿ ನಾರಾಚಗಳಿಂದ ಅವನನ್ನು ಕುದುರೆ-ಧ್ವಜ-ಧನುಸ್ಸುಗಳನ್ನೂ ಸೇರಿಸಿ ಹೊಡೆದನು. ಇತರ ಅನೇಕ ಶರಗಳಿಂದ ಅವನ ರಥವನ್ನೂ ನುಚ್ಚುನೂರು ಮಾಡಿದನು. ವಿಕ್ರಮದಿಂದ ಮಾಡಿದ ಸಂಕಲ್ಪದಲ್ಲಿ ಯಶಸ್ವಿಯಾಗದೇ ಇದ್ದ ಕಾಂಬೋಜ ಸುದಕ್ಷಿಣನ ಹೃದಯವನ್ನು ಪಾಂಡವನು ಬಹಳ ಘೋರವಾದ ಬಾಣದಿಂದ ಭೇದಿಸಿದನು. ಆ ಶೂರನು ಕವಚವು ತುಂಡಾಗಿ, ರಕ್ತದಿಂದ ಅಂಗಾಂಗಗಳು ತೋಯ್ದು, ಮುಕುಟ-ಅಂಗದಗಳನ್ನು ಕಳೆದುಕೊಂಡು ಯಂತ್ರದಿಂದ ಬೀಳಿಸಲ್ಪಟ್ಟ ಧ್ವಜದಂತೆ ಅಭಿಮುಖನಾಗಿ ಭೂಮಿಯ ಮೇಲೆ ಬಿದ್ದನು. ಪರ್ವತ ಶಿಖದಲ್ಲಿ ಹುಟ್ಟಿದ್ದ ಚೆನ್ನಾಗಿ ಊರಿಕೊಂಡಿದ್ದ ಬಹುರೆಂಬೆಗಳಿಂದ ಸಮೃದ್ಧವಾಗಿದ ಕರ್ಣಿಕಾರ ವೃಕ್ಷವು ಛಳಿಗಾಲದ ಕೊನೆಯಲ್ಲಿ

ಭಿರುಗಾಳಿಯಿಂದ ತುಂಡಾಗಿ ಬೀಳುವ ಹಾಗೆ ಹಂಸತೂಲಿಕಾತಲ್ಪದಲ್ಲಿ ಮಲಗಬೇಕಾಗಿದ್ದ ಕಾಂಬೋಜನು ನಿಹತನಾಗಿ ನೆಲದ ಮೇಲೆ ಮಲಗಿದನು. ನೋಡಲು ಸುಂದರನಾಗಿದ್ದ ಕೆಂಪು ಕಣ್ಣುಗಳ ಕಾಂಬೋಜರಾಜನ ಮಗ ಸುದಕ್ಷಿಣನು ಪಾರ್ಥನಿಂದ ಬೀಳಿಸಲ್ಪಟ್ಟನು. ಹತರಾದ ಕಾಂಬೋಜ ಶ್ರುತಾಯುಧ ಮತ್ತು ಸುದಕ್ಷಿಣರನ್ನು ನೋಡಿ ದುರ್ಯೋಧನನ ಸೇನೆಗಳೆಲ್ಲವೂ ಓಡತೊಡಗಿದವು.

## ಶ್ರುತಾಯು-ಅಚ್ಯುತಾಯು-ಆಯುತಾಯು-ದೀರ್ಘಾಯುಗಳ ವಧೆ

ವೀರರಾದ ಸುದಕ್ಷಿಣ ಮತ್ತು ಶ್ರುತಾಯುಧರು ಹತರಾಗಲು ಕುಪಿತರಾದ ಕೌರವ ಸೈನಿಕರು ವೇಗದಿಂದ ಪಾರ್ಥನನ್ನು ಆಕ್ರಮಣಿಸಿದರು. ಅಭೀಷಾಹರು, ಶೂರಸೇನರು, ಶಿಬಯರು ಮತ್ತು ವಸಾತಯರು ಧನಂಜಯನ ಮೇಲೆ ಶರವರ್ಷಗಳನ್ನು ಸುರಿಸಿದರು. ಆ ಆರುಸಾವಿರ ಆರ್ಯರನ್ನು ಪಾಂಡವನು ಶರಗಳಿಂದ ನಾಶಪಡಿಸಿದನು. ಅವರಾದರೋ ವ್ಯಾಘ್ರದಿಂದ ಭೀತಿಗೊಂಡ ಕ್ಷುದ್ರಮೃಗಗಳಂತೆ ಪಲಾಯನಗೈದರು. ಹಿಂದಿರುಗಿ ಬಂದು ಪುನಃ ರಣಯುದ್ಧದಲ್ಲಿ ದಾಯಾದಿ ಶತ್ರುಗಳನ್ನು ಕೊಲ್ಲಲು ಬಯಸಿದ್ದ ಪಾರ್ಥನನ್ನು ಎಲ್ಲ ಕಡೆಗಳಿಂದ ಸುತ್ತುವರೆದರು. ಧನಂಜಯನು ಬೇಗನೇ ಗಾಂಡೀವದಿಂದ

ಬಿಡಲ್ಪಟ್ಟ ಶರಗಳಿಂದ ಅವರ ಬಾಹುಗಳನ್ನೂ ಶಿರಗಳನ್ನೂ ಬೀಳಿಸಿದನು. ಅಲ್ಲಿ ನಿರಂತರವಾಗಿ ಬೀಳುತ್ತಿದ್ದ ಶರಗಳಿಂದ ಭೂಮಿಯು ತುಂಬಿಹೋಗಿತ್ತು. ಹದ್ದು-ಕಾಗೆ-ಗಿಡುಗಗಳು ಮೇಲೆ ಹಾರಾಡಿಕೊಂಡಿತ್ತು ಚಪ್ಪರಗಳಂತೆ ನೆರಳನ್ನು ನೀಡುತ್ತಿದ್ದವು. ಅವರ ಜನರು ಹಾಗೆ ನಾಶವಾಗುತ್ತಿರಲು ಕ್ರೋಧ-ಅಸಹನೆಯಿಂದ ಕೂಡಿದ ಶ್ರುತಾಯು ಮತ್ತು ಅಚ್ಯುತಾಯು ಇಬ್ಬರೂ ಧನಂಜಯನನ್ನು ಎದುರಿಸಿ ಯುದ್ಧ ಮಾಡಿದರು. ಬಲಿಗಳಾದ, ಸ್ಪರ್ಧಿಗಳಾದ, ಕುಲಜರಾದ, ಬಾಹುಶಾಲಿಗಳಾದ ಆ ವೀರರಿಬ್ಬರೂ ಅವನ ಎಡ-ಬಲಗಳಲ್ಲಿ ಶರವರ್ಷಗಳನ್ನು ಸುರಿಸಿದರು. ಅವಸರದಲ್ಲಿದ್ದ, ಮಹಾ ಯಶಸ್ಸನ್ನು ಬಯಸಿದ್ದ, ದುರ್ಯೋಧನನಿಗಾಗಿ ಅರ್ಜುನನ ವಧೆಯನ್ನು ಬಯಸಿದ್ದ ಆ ಇಬ್ಬರು ಧನ್ವಿಗಳೂ ಕ್ರುದ್ಧರಾಗಿ ಎರಡು ದೊಡ್ಡ ದೊಡ್ಡ ಮೋಡಗಳು ಸರೋವರವೊಂದರ ಮೇಲೆ ಬಿದ್ದು ತುಂಬಿಬಿಡುವಂತೆ ಸಹಸ್ರಾರು ಪತ್ರಿ ನತಪರ್ವಗಳನ್ನು ಅರ್ಜುನನ ಮೇಲೆ ಸುರಿಸಿದರು. ಆಗ ಕ್ರುದ್ಧನಾದ ರಥಶ್ರೇಷ್ಠ ಶ್ರುತಾಯುವು ಹರಿತವಾದ ಹಿತ್ತಾಳೆಯ ತೋಮರದಿಂದ ಧನಂಜಯನನ್ನು ಹೊಡೆದನು. ಬಲಶಾಲಿ ಶತ್ರುವಿನಿಂದ ಅತಿಯಾಗಿ ನೋವುಗೊಂಡ ಅರ್ಜುನನು ರಣದಲ್ಲಿ ಕೇಶವನನ್ನೂ ದುಗುಡಗೊಳಿಸುತ್ತಾ ಮೂರ್ಛಿತನಾದನು.

ಇದೇ ಸಮಯದಲ್ಲಿ ಮಹಾರಥ ಅಚ್ಯುತಾಯುವು ತುಂಬಾ ತೀಕ್ಷ್ಣವಾಗಿದ್ದ ಶೂಲದಿಂದ ಅರ್ಜುನನನ್ನು ಹೊಡೆಯತೊಡಗಿದನು. ಹೀಗೆ ಪಾಂಡವನ ಗಾಯದ ಮೇಲೆ ಉಪ್ಪನ್ನು ಎರಚಿದನು. ಪಾರ್ಥನಾದರೋ ತುಂಬಾ ಗಾಯಗೊಂಡು ಧ್ವಜಸ್ತಂಭಕ್ಕೆ ಒರಗಿದನು. ಆಗ ಕೌರವ ಸೇನೆಗಳಲ್ಲೆಲ್ಲ ಧನಂಜಯನು ಹತನಾದನೆಂದು ತಿಳಿದು ಮಹಾ ಸಿಂಹನಾದವುಂಟಾಯಿತು. ಕೃಷ್ಣನೂ ಕೂಡ ಪಾರ್ಥನು ಮೂರ್ಛಿತನಾದುದನ್ನು ನೋಡಿ ತುಂಬಾ ಸಂತಪ್ತನಾಗಿ ಸ್ನೇಹಿತ ಧನಂಜಯನನ್ನು ನೀರಿನಿಂದ ಆರೈಸಿದನು.

ಆಗ ಅವರಿಬ್ಬರೂ ಧನಂಜಯ ಮತ್ತು ವಾರ್ಷ್ಣೇಯ ವಾಸುದೇವರನ್ನು ಗುರಿಯಾಗಿಟ್ಟುಕೊಂಡು ಎಲ್ಲ ಕಡೆಗಳಿಂದ ಶರವರ್ಷಗಳನ್ನು ಸುರಿಸಿದರು. ಚಕ್ರ-ಕೂಬರ-ರಥದೊಂದಿಗೆ ಮತ್ತು ಅಶ್ವ-ಧ್ವಜ-ಪತಾಕೆಗಳೊಂದಿಗೆ ಅವರು ಯುದ್ಧದಲ್ಲಿ ಅದೃಶ್ಯರಾಗಿಬಿಟ್ಟರು! ಅದೊಂದು ಅದ್ಭುತವಾಗಿತ್ತು. ಮೆಲ್ಲನೇ ಬೀಭತ್ಸುವು ಪ್ರೇತರಾಜನ ಪುರಕ್ಕೆ ಹೋಗಿ ಪುನಃ ಹಿಂದಿರುಗಿ ಬಂದನೋ ಎನ್ನುವಂತೆ ಎಚ್ಚೆತ್ತನು. ಕೇಶವನೊಂದಿಗೆ ರಥವು ಶರಜಾಲಗಳಿಂದ ಮುಚ್ಚಿಹೋಗಿರುವುದನ್ನು ಮತ್ತು ಎದಿರು ಅಗ್ನಿ-ವಾಯುಗಳಂತೆ ದೀಪ್ಯಮಾನರಾಗಿ ನಿಂತಿರುವ ಶತ್ರುಗಳನ್ನೂ ಕಂಡು ಮಹಾರಥ ಪಾರ್ಥನು ಶಕ್ರಾಸ್ತ್ರವನ್ನು

ಪ್ರಯೋಗಿಸತೊಡಗಿದನು. ಅದರಿಂದ ಸಹಸ್ರಾರು ನತಪರ್ವಣ ಶರಗಳು ಉದ್ಭವಿಸಿದವು. ಅವು ಆ ಇಬ್ಬರು ಮಹೇಷ್ವಾಸರನ್ನೂ ಹೊಡೆದವು. ಅವರು ಬಿಟ್ಟ ಬಾಣಗಳು ಪಾರ್ಥನ ಬಾಣಗಳಿಂದ ತುಂಡಾಗಿ ಆಕಾಶಕ್ಕೆ ಹಾರಿದವು. ಅವರ ಶರಗಳನ್ನು ವೇಗದ ಶರಗಳಿಂದ ತುಂಡರಿಸಿ ಪಾಂಡವನು ಅಲ್ಲಲ್ಲಿಯೇ ಆ ಮಹಾರಥರೊಂದಿಗೆ ಹೋರಾಡಿದನು. ಫಲ್ಗುನನ ಬಾಣಗಳಿಂದ ಬಾಹು-ಶಿರಸ್ಸುಗಳನ್ನು ಕತ್ತರಿಸಲ್ಪಟ್ಟು ಅವರಿಬ್ಬರೂ ಭಿರುಗಾಳಿಗೆ ಸಿಕ್ಕ ಮರಗಳಂತೆ ನೆಲದ ಮೇಲೆ ಬಿದ್ದರು. ನೋಡುವವರಿಗೆ ಶ್ರುತಾಯು ಮತ್ತು ಅಚ್ಯುತಾಯುಗಳ ನಿಧನವು ಸಮುದ್ರವನ್ನು ಒಣಗಿಸಿದಷ್ಟೇ ವಿಸ್ಮಯದಾಯಕವಾಗಿತ್ತು. ಅವರ ಪದಾನುಗರಾದ ಐದುನೂರು ರಥರನ್ನು ಸಂಹರಿಸಿ ಪಾರ್ಥನು ಭಾರತೀ ಸೇನೆಯನ್ನು ಹೊಕ್ಕು ಶ್ರೇಷ್ಠರಲ್ಲಿ ಶ್ರೇಷ್ಠರನ್ನೂ ಸಂಹರಿಸಿದನು.

ಶ್ರುತಾಯು ಮತ್ತು ಅಚ್ಯುತಾಯು ಇವರು ಹತರಾದುದನ್ನು ನೋಡಿ ಆಯುತಾಯು ಮತ್ತು ದೀರ್ಘಾಯುಗಳು ಕೂಡ ಸಂಕ್ರುದ್ಧರಾದರು. ಅವರಿಬ್ಬರ ಮಕ್ಕಳಾದ ಆ ನರಶ್ರೇಷ್ಠರು ಪಿತೃಗಳ ನಿಯೋಗದಿಂದ ಚಿಂತಿತರಾಗಿ ವಿವಿಧ ಬಾಣಗಳನ್ನು ಚೆಲ್ಲುತ್ತಾ ಕೌಂತೇಯನನ್ನು ತಿರುಗಿ ಆಕ್ರಮಣಿಸಿದರು. ಅರ್ಜುನನು ಪರಮಕ್ರುದ್ಧನಾಗಿ ಅವರನ್ನು

ಕ್ಷಣದಲ್ಲಿಯೇ ಸನ್ನತಪರ್ವ ಶರಗಳಿಂದ ಯಮನ ಸದನಕ್ಕೆ ಕಳುಹಿಸಿದನು. ಸಲಗವು ಪದ್ಮಸರೋವರನ್ನು ಹೇಗೋ ಹಾಗೆ ಸೇನೆಗಳನ್ನು ಕದಡುತ್ತಿದ್ದ ಪಾರ್ಥನನ್ನು ತಡೆಯಲು ಕ್ಷತ್ರಿಯಪುಂಗವರಿಗೆ ಅಸಾಧ್ಯವಯಿತು. ಆಗ ಅಂಗದೇಶಕ್ಕೆ ಸೇರಿದ್ದ ಕ್ರುದ್ಧರಾದ ಸಹಸ್ರಾರು ಪ್ರಶಿಕ್ಷಿತ ಗಜಾರೋಹೀ ಯೋಧರು ತಮ್ಮ ಗಜಸೇನೆಯೊಂದಿಗೆ ಮತ್ತು ದುರ್ಯೋಧನನು ಕಳುಹಿಸಿದ್ದ ಪರ್ವತೋಪಮ ಆನೆಗಳೊಂದಿಗೆ ಪೂರ್ವದವರು ಮತ್ತು ದಕ್ಷಿಣದವರು ಹಾಗೂ ಕಲಿಂಗ ಪ್ರಮುಖ ನೃಪರು ಪಾಂಡವನನ್ನು ಸುತ್ತುವರೆದರು. ಗಾಂಡೀವದಿಂದ ಹೊರಟ ಉಗ್ರ ಶರಗಳು ಅವರ ಶಿರಗಳನ್ನೂ ಮತ್ತು ಅಲಂಕೃತ ಬಾಹುಗಳನ್ನೂ ಶೀಘ್ರವಾಗಿ ಕತ್ತರಿಸಿದವು. ರಣಭೂಮಿಯಲ್ಲಿ ಹರಡಿಹೋಗಿದ್ದ ಅವರ ಶಿರಗಳೂ ಅಂಗದಗಳೊಂದಿಗಿನ ಬಾಹುಗಳೂ ಸರ್ಪಗಳಿಂದ ಆವೃತವಾದ ಬಂಗಾರದ ಕಲ್ಲುಗಳಂತೆ ಕಾಣುತ್ತಿದ್ದವು. ವೃಕ್ಷಗಳಿಂದ ಪಕ್ಷಿಗಳು ಕೆಳಕ್ಕೆ ಬೀಳುವಂತೆ ವಿಶಿಖಗಳಿಂದ ಕತ್ತರಿಸಲ್ಪಟ್ಟ ಬಾಹುಗಳು ಮತ್ತು ಶಿರಸ್ಸುಗಳು ಆನೆಗಳ ಮೇಲಿಂದ ತೊಪತೊಪನೆ ಬೀಳುತ್ತಿರುವುದು ಕಂಡುಬಂದಿತು. ಮಳೆಗಾಲದಲ್ಲಿ ಪರ್ವತಗಳಿಂದ ಗೈರಿಕಾದಿ ಧಾತು ಮಿಶ್ರಿತ ಕೆಂಪು ಬಣ್ಣದ ನೀರು ಹರಿದು ಬರುವಂತೆ ಸಾವಿರಾರು ಶರಗಳಿಂದ ಹೊಡೆಯಲ್ಪಟ್ಟ ಆನೆಗಳ ಶರೀರಗಳಿಂದ ರಕ್ತವು ಹರಿದು ಬರುತ್ತಿರುವುದು ಕಾಣುತ್ತಿತ್ತು. ನಾನಾರೀತಿಯಲ್ಲಿ

ವಿಕೃತರಾಗಿ ಕಾಣುತ್ತಿದ್ದ ಮ್ಲೇಚ್ಛರು ಬೀಭತ್ಸುವಿನ ನಿಶಿತ ಶರಗಳಿಂದ ಹತರಾಗಿ ಆನೆಗಳ ಮೇಲೆಯೇ ಮಲಗಿದ್ದರು. ನಾನಾ ವಿಧದ ವೇಷಗಳನ್ನು ಧರಿಸಿದ್ದ, ನಾನ್ನ ಶಸ್ತ್ರ ಸಮೂಹಗಳಿಂದ ಕೂಡಿದ್ದ ಅವರು ವಿಚಿತ್ರ ಶರಗಳಿಂದ ಹತರಾಗಿ ರಕ್ತದಿಂದ ತೋಯ್ದ ಅಂಗಗಳಿಂದ ಹೊಳೆಯುತ್ತಿದ್ದರು.

ಸವಾರರು ಮತ್ತು ಅನುಚರರೊಂದಿಗೆ ಸಹಸ್ರಾರು ಆನೆಗಳು ಪಾರ್ಥನ ಶರಗಳಿಂದ ಹತರಾಗಿ, ಶರೀರಗಳು ಚೂರು ಚೂರಾಗಿ ರಕ್ತವನ್ನು ಕಾರುತ್ತಿದ್ದವು. ಕೆಲವು ಕೂಗಿಕೊಳ್ಳುತ್ತಿದ್ದವು, ಕೆಲವು ಬಿದ್ದಿದ್ದವು, ಇನ್ನು ಕೆಲವು ದಿಕ್ಕು ದಿಕ್ಕುಗಳಲ್ಲಿ ಓಡುತ್ತಿದ್ದವು. ಅನೇಕ ಆನೆಗಳು ತುಂಬಾ ನೋವನ್ನು ಅನುಭವಿಸಿ ಭಯದಿಂದ ತಮ್ಮವರನ್ನೇ ತುಳಿದು ಧ್ವಂಸಮಾಡಿದವು. ಕೆಲವು ತೀಕ್ಷ್ಣ ವಿಷವನ್ನು ಅಡಗಿಸಿಟ್ಟುಕೊಂಡಿರುವ ಸರ್ಪಗಳಂತೆ ಆಯುಧಪಾಣಿಗಳನ್ನು ಹೊಟ್ಟೆಯ ಕೆಳಗೆ ಅಡಗಿಸಿಕೊಂಡಿಕೊಂಡಿದ್ದವು. ಘೋರರಾದ, ಘೋರದೃಷ್ಟಿಯುಳ್ಳ ಯವನರು, ಪಾರದರು, ಶಕರು, ಸುನಿಕರೊಂದಿಗೆ ಗೋಯೋನಿಯಲ್ಲಿ ಜನಿಸಿದ ಮ್ಲೇಚ್ಛರು, ಪ್ರಹಾರಿಗಳಾದ ಕಾಲಕಲ್ಪರು, ದಾರ್ವಾಭಿಸಾರರು, ದರದರು, ಬಾಹ್ಲಿಕರೊಂದಿಗೆ ಪೌಂಡ್ರರು ಅಸುರಮಾಯೆಯನ್ನು ಬಳಸಿ ಯುದ್ಧ ಮಾಡುತ್ತಿದ್ದರು. ಲೆಖ್ಕಮಾಡಲೂ

ಸಾಧ್ಯವಾಗದ ನೂರಾರು ಸಹಸ್ರಾರು ವ್ರಾತರು ಮಿಡಿತೆಗಳ ಹಿಂಡಿನಂತೆ ತೋರುತ್ತಿದ್ದರು. ಬಾಣಗಳಿಂದ ಸೇನೆಯ ಮೇಲೆ ಚಪ್ಪರವನ್ನೇ ನಿರ್ಮಿಸಿ ಧನಂಜಯನು ಅಸ್ತ್ರಮಾಯೆಯಿಂದ ಅರ್ಧಮುಂಡನ ಮಾಡಿಕೊಂಡಿದ್ದ, ಜಟಾಧಾರಿಗಳಾಗಿದ್ದ, ಅಶುಚರಾಗಿದ್ದ, ಗಡ್ಡಬಿಟ್ಟುಕೊಂಡಿದ್ದ ಮ್ಲೇಚ್ಛರೆಲ್ಲರನ್ನೂ ಒಟ್ಟಿಗೇ ನಾಶಪಡಿಸಿದನು. ನೂರಾರು ಶರಗಳಿಂದ ಗಾಯಗೊಂಡ ಆ ಗಿರಿಗಹ್ವರ ವಾಸಿಗಳು ಭೀತರಾಗಿ ರಣದಿಂದ ಗುಂಪು ಗುಂಪಾಗಿ ಓಡತೊಡಗಿದರು.

ನೂರಾರು ಶರಗಳಿಂದ ಬೀಳಿಸಲ್ಪಟ್ಟಿದ್ದ ಆನೆ-ಕುದುರೆಗಳ ಸವಾರಿ ಮ್ಲೇಚ್ಛರ ರಕ್ತವನ್ನು ಬಕಪಕ್ಷಿಗಳು, ಕಾಗೆಗಳು ಮತ್ತು ತೋಳಗಳು ಸಂತೋಷದಿಂದ ಕುಡಿಯುತ್ತಿದ್ದವು. ಪದಾತಿ-ಅಶ್ವ-ಗಜ-ರಥಗಳ ಸಮೂಹಗಳಿಂದ ಮುಚ್ಚಿಹೋಗಿದ್ದ, ಒಂದೇ ಸಮನೆ ಸುರಿಯುತ್ತಿದ್ದ ಶರವರ್ಷಗಳೇ ದೋಣಿಯಾಗುಳ್ಳ, ಕೇಶಗಳೇ ಪಾಚಿಹುಲ್ಲಾಗಿರುವ, ರಕ್ತವೇ ಸುರುಳಿಗಳೊಂದಿಗೆ ಅಲೆಅಲೆಯಾಗಿ ಹರಿಯುತ್ತಿರುವ ಘೋರವಾದ ಉಗ್ರವಾದ ನದಿಯು ಹುಟ್ಟಿಕೊಂಡಿದು. ಶಿರಸ್ತ್ರಾಣಗಳೇ ಸಣ್ಣ ಸಣ್ಣ ಮೀನುಗಳಾಗಿದ್ದವು. ಯುಗಾಂತದಲ್ಲಿ ಹುಟ್ಟುವ ಕಾಲನಂತೆ ಇತ್ತು. ಆನೆಗಳ ಶರೀರಗಳಿಂದ ತುಂಬಿಕೊಂಡಿದ್ದ ಆ ರಕ್ತದ ನದಿಯು ರಾಜಪುತ್ರರ, ಆನೆ-ಕುದುರೆಗಳ ಆರೋಹಿ ಯೋಧರ ದೇಹಗಳಿಂದ

ಸುರಿಯುತ್ತಿದ್ದ ರಕ್ತದಿಂದ ಮಾಡಲ್ಪಟ್ಟಿತ್ತು. ಇಂದ್ರನು ಮಳೆಗಳೆಯುವಾಗ ಭೂಮಿಯ ಹಳ್ಳ-ತಿಟ್ಟುಗಳು ಒಂದೇ ಸಮನಾಗಿ ಕಾಣುವಂತೆ ರಕ್ತದಿಂದ ತುಂಬಿಹೋಗಿದ್ದ ರಣಭೂಮಿಯೆಲ್ಲವೂ ಒಂದೇ ಸಮನಾಗಿ ತೋರುತ್ತಿತ್ತು. ಆ ಕ್ಷತ್ರಿಯರ್ಷಭನು ಆರು ಸಾವಿರ ವೀರಶ್ರೇಷ್ಠರನ್ನೂ, ಪುನಃ ಒಂದು ಸಾವಿರ ಶ್ರೇಷ್ಠ ಕ್ಷತ್ರಿಯರನ್ನು ಮೃತ್ಯುಲೋಕಕ್ಕೆ ಕಳುಹಿಸಿದನು. ವಜ್ರದಿಂದ ಹತವಾದ ಪರ್ವತಗಳಂತೆ ಶರಗಳಿಂದ ಹೊಡೆಯಲ್ಪಟ್ಟ ಸಹಸ್ರಾರು ಆನೆಗಳು ನೆಲಕ್ಕುರುಳಿ ವಿಧಿವತ್ತಾಗಿ ಮಲಗಿಕೊಂಡಿವೆಯೋ ಎಂದು ತೋರುತ್ತಿದ್ದವು. ಮದಿಸಿದ ಸಲಗವು ಬೆಂಡಿನ ವನವನ್ನು ನಾಶಪಡಿಸುವಂತೆ ಆ ಆನೆ-ಕುದುರೆ-ರಥಗಳನ್ನು ನಾಶಗೊಳಿಸುತ್ತಾ ಅರ್ಜುನನು ತಿರುಗುತ್ತಿದ್ದನು. ಹೇರಳವಾದ ಮರ-ಬಳ್ಳಿ-ಪೊದರುಗಳಿರುವ ಮತ್ತು ಒಣಗಿದ ಕಟ್ಟಿಗೆ-ಹುಲ್ಲುಗಳಿರುವ ಅರಣ್ಯವನ್ನು ವಾಯುವಿನ ಸಹಾಯದಿಂದ ಅಗ್ನಿಯು ಹೇಗೆ ಸುಡುವನೋ ಹಾಗೆ ಕೌರವ ಸೇನೆಯೆಂಬ ಅರಣ್ಯವನ್ನು ಕೃಷ್ಣನೆಂಬ ಅನಿಲನ ಸಹಾಯದಿಂದ ಕ್ರುದ್ಧ ಧನಂಜಯನ ರೂಪದ ಅಗ್ನಿಯು ಬಾಣಗಳೆಂಬ ಜ್ವಾಲೆಗಳಿಂದ ದಹಿಸಿದನು. ರಥಗಳ ಆಸನಗಳನ್ನು ಬರಿದು ಮಾಡುತ್ತಾ ಅಸುನೀಗಿದ ನರರಿಂದ ಭೂಮಿಯನ್ನು ತುಂಬುತ್ತಾ ಚಾಪವನ್ನು ಹಿಡಿದ ಧನಂಜಯನು ರಣರಂಗದಲ್ಲಿ ನರ್ತಿಸುತ್ತಿರುವನೋ ಎಂದು ಕಾಣುತ್ತಿದ್ದನು. ವಜ್ರದಂತಿದ್ದ

ಬಾಣಗಳಿಂದ ರಣಾಂಗಣವನ್ನು ರಕ್ತದಲ್ಲಿ ಮುಳುಗಿಸಿ ಸಂಕ್ರುದ್ಧನಾದ ಧನಂಜಯನು ಭಾರತೀ ಸೇನೆಯನ್ನು ಪ್ರವೇಶಿಸಿದನು.

## ಅಂಬಷ್ಠ ಶ್ರುತಾಯುವಿನ ವಧೆ

ಮುಂದುವರಿಯುತ್ತಿದ್ದ ಅವನನ್ನು ಅಂಬಷ್ಠ ಶ್ರುತಾಯುವು ತಡೆದನು. ಪ್ರಯತ್ನಿಸುತ್ತಿದ್ದ ಅವನ ಕುದುರೆಗಳನ್ನು ಅರ್ಜುನನು ಶೀಘ್ರವಾಗಿ ತೀಕ್ಷ್ಣ ಬಾಣಗಳಿಂದ ಬೀಳಿಸಿದನು. ಅನ್ಯ ಬಾಣಗಳಿಂದ ಅವನ ಧನುಸ್ಸನ್ನೂ ಕತ್ತರಿಸಿ ಅರ್ಜುನನು ತನ್ನ ವಿಕ್ರಮವನ್ನು ಪ್ರದರ್ಶಿಸಿದನು. ಆಗ ಅಂಬಷ್ಠನು ಗದೆಯನ್ನು ಹಿಡಿದು ಕ್ರೋಧದಿಂದ ಕಣ್ಣುಗಳನ್ನು ತಿರುಗಿಸುತ್ತಾ ರಣದಲ್ಲಿ ಪಾರ್ಥ-ಕೇಶವರನ್ನು ಸಮೀಪಿಸಿದನು. ಆಗ ಆ ವೀರನು ಜೋರಾಗಿ ನಗುತ್ತ ಗದೆಯನ್ನು ಎತ್ತಿ ರಥವನ್ನು ತಡೆದು ಗದೆಯಿಂದ ಕೇಶವನನ್ನು ಹೊಡೆದನು. ಗದೆಯಿಂದ ಕೇಶವನನ್ನು ಹೊಡೆದುದನ್ನು ನೋಡಿ ಅರ್ಜುಜನು ಅಂಬಷ್ಠನ ಮೇಲೆ ತುಂಬಾ ಕ್ರುದ್ಧನಾದನು.

ಆಗ ಸಮರದಲ್ಲಿ ಹೇಮಪುಂಖದ ಶರಗಳಿಂದ ಗದೆಯೊಂದಿಗೆ ಆ ರಥಿಗಳಲ್ಲಿ ಶ್ರೇಷ್ಠನನ್ನು ಮೇಘವು ಉದಿಸುವ ಸೂರ್ಯನನ್ನು ಹೇಗೋ ಹಾಗೆ ಮುಚ್ಚಿಬಿಟ್ಟನು. ಇತರ ಶರಗಳಿಂದ ಅರ್ಜುನನು ಅವನ ಗದೆಯನ್ನೂ ಚೂರು ಚೂರು ಮಾಡಿದನು. ಅದು ಅದ್ಭುತವಾಗಿತ್ತು.

ಅದು ಕೆಳಗೆ ಬಿದ್ದುದನ್ನು ನೋಡಿ ಅವನು ಇನ್ನೊಂದು ದೊಡ್ಡ ಗದೆಯನ್ನು ಎತ್ತಿಕೊಂಡು ಅರ್ಜುನ ಮತ್ತು ವಾಸುದೇವರನ್ನು ಪುನಃ ಪುನಃ ಹೊಡೆದನು. ಅರ್ಜುನನು ಎರಡು ಕ್ಷುರಪ್ರಗಳಿಂದ ಎತ್ತಿದ ಇಂದ್ರಧ್ವಜದ ಆಕಾರದ ಅವನ ಭುಜಗಳೆರಡನ್ನೂ ಗದೆಯೊಂದಿಗೆ ಕತ್ತರಿಸಿದನು. ಇನ್ನೊಂದು ಪತ್ರಿಯಿಂದ ಅವನ ಶಿರವನ್ನು ತುಂಡರಿಸಿದನು. ಯಂತ್ರದ ಬಂಧನದಿಂದ ಕಳಚಿದ ಇಂದ್ರಧ್ವಜದಂತೆ ಅವನು ಜೋರಾಗಿ ಕೂಗುತ್ತಾ ಹತನಾಗಿ ನೆಲದ ಮೇಲೆ ಬಿದ್ದನು. ಗಾಢವಾದ ರಥಗಳ ಸೇನೆ, ಆನೆ-ಕುದುರೆಗಳಿಂದ ಆವೃತನಾಗಿದ್ದ ಪಾರ್ಥನು ಆಗ ಘನ ಮೋಡಗಳಿಂದ ಆವೃತನಾದ ಸೂರ್ಯನಂತೆ ಕಂಡನು.

## ದುರ್ಯೋಧನ ಕವಚಬಂಧನ

ಕೌಂತೇಯನು ಸಿಂಧುರಾಜನನ್ನು ಕೊಲ್ಲಲು ಬಯಸಿ ದ್ರೋಣನ ಸೇನೆಯನ್ನು ಮತ್ತು ದುಸ್ತರವಾದ ಭೋಜನ ಸೇನೆಯನ್ನೂ ಭೇದಿಸಿ ಪ್ರವೇಶಿಸಲು, ಕಾಂಬೋಜ ಮತ್ತು ಅವನ ಮಗ ಸುದಕ್ಷಿಣರು ಹತರಾಗಲು, ಸವ್ಯಸಾಚಿಯಿಂದ ವಿಕ್ರಾಂತ ಶ್ರುತಾಯುಧನೂ ಹತನಾಗಲು, ಸದೆಬಡಿಯಲ್ಪಟ್ಟ ಕೌರವ ಸೇನೆಗಳು ಎಲ್ಲ ಕಡೆ ಓಡಿ ಹೋಗುತ್ತಿರಲು, ತನ್ನ ಸೇನೆಯು ಭಗ್ನವಾದುದನ್ನು ನೋಡಿ

ದುರ್ಯೋಧನನು ದ್ರೋಣನ ಬಳಿ ಬಂದನು. ತ್ವರೆಮಾಡಿ ರಥದಲ್ಲಿ ಒಬ್ಬನೇ ದ್ರೋಣನ ಬಳಿಬಂದು ಹೇಳಿದನು:

“ಪುರುಷವ್ಯಾಘ್ರ! ಈ ಮಹಾಸೇನೆಯು ನುಚ್ಚುನೂರಾಗುತ್ತಿದೆ. ಈ ದಾರುಣ ಜನಕ್ಷಯವು ನಡೆಯುತ್ತಿರುವಾಗ ಅರ್ಜುನನ್ನು ಕೊಲ್ಲಲು ನಾವು ಏನು ಮಾಡಬೇಕೆಂಬುದನ್ನು ಬುದ್ಧಿಯಿಂದ ಕೂಲಂಕುಶವಾಗಿ ವಿಮರ್ಶಿಸಿ. ಆ ಪುರುಷವ್ಯಾಘ್ರನು ಜಯದ್ರಥನನ್ನು ಕೊಲ್ಲಲಾರದ ಹಾಗೆ ಉಪಾಯವನ್ನು ಮಾಡಿ. ನಿಮಗೆ ಮಂಗಳವಾಗಲಿ! ನೀವೇ ನಮಗೆ ಪರಮ ಗತಿ. ಕೋಪವೆಂಬ ಭಿರುಗಾಳಿಯಿಂದ ಪ್ರಚೋದಿತನಾಗಿ ಧನಂಜಯನೆಂಬ ಅಗ್ನಿಯು, ಒಣಪೊದೆಯನ್ನು ಸುಡುವಂತೆ ನನ್ನ ಸೇನೆಯೆಂಬ ಪೊದೆಯನ್ನು ಸುಡುತ್ತಿದೆ. ಸೇನೆಯನ್ನು ಭೇದಿಸಿ ದಾಟಿ ಹೋಗುತ್ತಿರುವ ಕೌಂತೇಯನಿಂದ ಜಯದ್ರಥನನ್ನು ರಕ್ಷಿಸುವುದು ಪರಮ ಸಂಶಯವಾಗಿ ಕಾಣುತ್ತಿದೆ. ದ್ರೋಣರನ್ನು ಅತಿಕ್ರಮಿಸಿ ಧನಂಜಯನು ಜೀವವನ್ನಿಟ್ಟುಕೊಂಡು ಹೋಗುವುದಿಲ್ಲವೆಂದು ನರೇಂದ್ರರ ನಿಶ್ಚಲ ಯೋಚನೆಯಾಗಿತ್ತು. ಆದರೆ ನಿಮ್ಮ ಕಣ್ಣೆದುರಿಗೇ ಪಾರ್ಥನು ನಿಮ್ಮನ್ನೂ ಅತಿಕ್ರಮಿಸಿ ಹೋಗಿದ್ದಾನೆ. ನನ್ನ

ಸೇನೆಯು ಉಳಿಯಲಾರದೆಂದು ಅಭಿಪ್ರಾಯಪಟ್ಟು ಎಲ್ಲರೂ ಪೀಡಿತರಾಗಿದ್ದಾರೆ. ನೀವು ಪಾಂಡವರ ಹಿತದಲ್ಲಿಯೇ ಆಸಕ್ತಿಯನ್ನಿಟ್ಟಿರುವಿರೆಂದು ನನಗೆ ತಿಳಿದಿದೆ. ಆದುದರಿಂದಲೇ ನೀವು ಎಷ್ಟು ಕಾರ್ಯಮಗ್ನರಾಗಿರುವರೆಂದು ಚಿಂತಿಸಿ ಭ್ರಾಂತನಾಗಿದ್ದೇನೆ. ನಿಮ್ಮ ಉತ್ತಮ ವೃತ್ತಿಗೆ ಯಥಾಶಕ್ತಿಯಾಗಿ ಏರ್ಪಡಿಸಿದ್ದೇನೆ. ನಿಮ್ಮ ಸಂತೋಷಕ್ಕೂ ಯಥಾಶಕ್ತಿ ಮಾಡುತ್ತಿದ್ದೇನೆ. ಆದರೂ ನೀವು ಅದರ ಕುರಿತು ಯೋಚಿಸುತ್ತಿಲ್ಲ. ನಾವು ಸದಾ ನಿಮ್ಮ ಭಕ್ತರಾಗಿದ್ದರೂ ನೀವು ನಮ್ಮ ಒಳ್ಳೆಯದನ್ನು ಬಯಸುತ್ತಿಲ್ಲ. ಪಾಂಡವರನ್ನು ಸತತವೂ ಪ್ರೀತಿಸುತ್ತಿರುವಿರಿ ಮತ್ತು ನಮಗೆ ವಿಪ್ರಿಯವನ್ನು ಮಾಡುವುದರಲ್ಲಿ ನಿರತರಾಗಿರುವಿರಿ. ನಮ್ಮಿಂದ ನಿಮ್ಮ ಉಪಜೀವವನ್ನು ಪಡೆಯುತ್ತಿದ್ದರೂ ನಮಗೆ ವಿಪ್ರಿಯವಾದುದನ್ನು ಮಾಡುವುದರಲ್ಲಿ ನಿರತರಾಗಿರುವಿರಿ. ನೀವು ಜೇನುತುಪ್ಪದಲ್ಲಿ ಅದ್ದಿಸಿದ ಖಡ್ಗವೆಂದು ನನಗೆ ತಿಳಿದಿರಲಿಲ್ಲ. ನೀವು ನನಗೆ ಪಾಂಡವನನ್ನು ನಿಗ್ರಹಿಸುತ್ತೇನೆ ಎನ್ನುವ ವರವನ್ನು ಕೊಟ್ಟಿರದೇ ಇದ್ದರೆ ನಾನು ಮನೆಗೆ ಹೋಗುತ್ತಿದ್ದ ಸಿಂಧುಪತಿಯನ್ನು ತಡೆಯುತ್ತಿರಲಿಲ್ಲ. ನನ್ನ ದಡ್ಡತನದಿಂದಾಗಿ ನಿಮ್ಮಿಂದ ರಕ್ಷಣೆಯನ್ನು ನಿರೀಕ್ಷಿಸಿ,

ತಿಳಿಯದೇ ಸಿಂಧುಪತಿಗೆ ಆಶ್ವಾಸನೆಯನ್ನಿತ್ತು ಅವನನ್ನು ಮೃತ್ಯುವಿನ ದವಡೆಗೆ ದೂಡಿದಂತಾಯಿತಲ್ಲ! ಯಮನ ದವಡೆಯಲ್ಲಿ ಸಿಲುಕಿದ ಮನುಷ್ಯನಾದರೂ ಬಿಡುಗಡೆ ಹೊಂದಬಲ್ಲನು. ಆದರೆ ಆರ್ಜುನನ ವಶಕ್ಕೆ ಬಂದ ಜಯದ್ರಥನು ಬಿಡುಗಡೆ ಹೊಂದಲಾರ. ಸೈಂಧವನನ್ನು ರಕ್ಷಿಸುವಂತೆ ಏನಾದರೂ ಮಾಡಿ. ನನ್ನ ಈ ಆರ್ತ ಪ್ರಲಾಪಗಳಿಂದ ಕ್ರೋಧಿತರಾಗಬೇಡಿ. ಸೈಂಧವನನ್ನು ರಕ್ಷಿಸಿರಿ!”

ದ್ರೋಣನು ಹೇಳಿದನು:

“ವಿಶಾಂಪತೇ! ನಿನ್ನ ಮಾತಿನಲ್ಲಿ ನಾನು ತಪ್ಪನ್ನು ಕಾಣುತ್ತಿಲ್ಲ. ನೀನು ನನಗೆ ಅಶ್ವತ್ಥಾಮನ ಸಮನಾಗಿದ್ದೀಯೆ. ಆದರೆ ನಿನಗೆ ನಾನು ಸತ್ಯವನ್ನು ಹೇಳುತ್ತಿದ್ದೇನೆ. ಅದರಂತೆಯೇ ನಡೆದುಕೋ. ಕೃಷ್ಣನು ಎಲ್ಲ ಸಾರಥಿಗಳಲ್ಲಿ ಶ್ರೇಷ್ಠನಾದವನು. ಅವನ ಉತ್ತಮ ಕುದುರೆಗಳು ಶೀಘ್ರವಾಗಿ ಓಡಬಲ್ಲವು. ಸ್ವಲ್ಪವೇ ಜಾಗವನ್ನೂ ಮಾಡಿಕೊಂಡರೂ ಧನಂಜಯನು ವೇಗವಾಗಿ ಹೋಗಬಲ್ಲನು. ಮುಂದುವರೆಯುತ್ತಿರುವ ಅವನ ಮೇಲೆ ನಾವು ಪ್ರಯೋಗಿಸುವ ಬಾಣಗಳ ಸಮೂಹಗಳು ಅವನಿಗಿಂತ

ಎರಡು ಕ್ರೋಶ ಹಿಂದೆಯೇ ಬೀಳುತ್ತಿರುವುದನ್ನು ನೀನು ನೋಡುತ್ತಿಲ್ಲವೇ? ವಯಸ್ಸಾದ ನಾನು ಇಂದು ಅಷ್ಟೊಂದು ಶೀಘ್ರವಾಗಿ ಹೋಗಲು ಅಸಮರ್ಥನಾಗಿದ್ದೇನೆ. ಪಾರ್ಥರ ಸೇನೆಗಳ ಮುಂಬಾಗವೂ ಈಗ ನಮ್ಮ ಸೇನೆಯ ಹತ್ತಿರ ಬಂದುಬಿಟ್ಟಿದೆ! ಎಲ್ಲ ಧನ್ವಿಗಳೂ ನೋಡುತ್ತಿರುವಂತೆ ಯುಧಿಷ್ಠಿರನನ್ನು ನಾನು ಸೆರೆಹಿಡಿಯುತ್ತೇನೆ ಎನ್ನುವುದು ಕ್ಷತ್ರಿಯರ ಮಧ್ಯದಲ್ಲಿ ನಾನು ಮಾಡಿದ ಪ್ರತಿಜ್ಞೆಯಾಗಿದೆ. ಅವನು ಧನಂಜಯನಿಂದ ದೂರನಾಗಿ ಈಗ ನನ್ನ ಎದುರೇ ಬರುತ್ತಿದ್ದಾನೆ. ಆದುದರಿಂದ ನಾನು ವ್ಯೂಹದ ಮುಂಭಾಗವನ್ನು ಬಿಟ್ಟು ಫಲ್ಗುನನ ಹಿಂದೆ ಹೋಗುವುದಿಲ್ಲ. ಹುಟ್ಟು ಮತ್ತು ಕರ್ಮಗಳಲ್ಲಿ ನಿನಗೆ ಸಮನಾಗಿರುವ, ಒಬ್ಬಂಟಿಯಾಗಿರುವ ಆ ಶತ್ರುವನ್ನು ನೀನೇ ಸಾಹಾಯವನ್ನು ಪಡೆದು ಹೋರಾಡಬೇಕು. ಹೋಗಿ ಹೋರಾಡು! ಹೆದರ ಬೇಡ! ನೀನು ಈಗ ಜಗತ್ತಿಗೇ ಒಡೆಯನಾಗಿದ್ದೀಯೆ! ನೀನು ರಾಜ. ಶೂರ. ಕೃತ್ಯಗಳಲ್ಲಿ ಯಶಸ್ವಿಯಾದವನು. ದಕ್ಷ. ಪಾಂಡವರೊಂದಿಗೆ ವೈರವನ್ನು ಬೆಳೆಸಿಕೊಂಡು ಬಂದವನು. ವೀರ! ಧನಂಜಯನು ಎಲ್ಲಿ ಹೋಗುತ್ತಿದ್ದಾನೋ ಅಲ್ಲಿಗೆ ಸ್ವಯಂ ನೀನೇ ಹೋಗಿ ಯುದ್ಧಮಾಡು!”

ದುರ್ಯೋಧನನು ಹೇಳಿದನು:

“ಆಚಾರ್ಯ ! ನಿಮ್ಮನ್ನೇ ಅತಿಕ್ರಮಿಸಿ ಹೋದ ಆ ಧನಂಜಯನನ್ನು ಹೇಗೆ ತಾನೇ ನಾನು ಹಿಂದಿರುಗಿ ಹೋಗಿ ಬಾಧಿಸಬಲ್ಲೆ? ರಣದಲ್ಲಿ ವಜ್ರಹಸ್ತ ಪುರಂದರನನ್ನಾದರೂ ಗೆಲ್ಲಲು ಶಕ್ಯನಾಗಿರಬಹುದು. ಆದರೆ ಸಮರದಲ್ಲಿ ಪರಪುರಂಜಯ ಅರ್ಜುನನನ್ನು ಗೆಲ್ಲುವುದು ಶಕ್ಯವಿಲ್ಲ. ಯಾರ ಅಸ್ತ್ರಪ್ರತಾಪದಿಂದ ಹಾರ್ದಿಕ್ಯ ಮತ್ತು ತ್ರಿದಶರಿಗೆ ಸಮರಾದ ನಿಮ್ಮನ್ನೂ ಸೋಲಿಸಿ, ಶ್ರುತಾಯುವನ್ನು ಸಂಹರಿಸಿ, ಸುದಕ್ಷಿಣನನ್ನೂ ಶ್ರುತಾಯುಧನನ್ನೂ ಸಂಹರಿಸಿ, ಶ್ರುತಾಯು-ಅಚ್ಯುತಾಯು ಇವರನ್ನೂ, ನೂರಾರು ಮ್ಲೇಚ್ಛರನ್ನೂ ಸಂಹರಿಸಿದ, ಅನೇಕರನ್ನು ಅಹಿತವಾಗಿ ಸುಡುತ್ತಿರುವ ದುರ್ಧರ್ಷ ಪಾಂಡವನನ್ನು ಯುದ್ಧದಲ್ಲಿ ನಾನು ಹೇಗೆ ಎದುರಿಸಬಲ್ಲೆ? ಇಂದು ನಾನು ಅವನೊಂದಿಗೆ ಯುದ್ಧಮಾಡಲು ಸಮರ್ಥನೆಂದು ನೀವು ಹೇಗೆ ಹೇಳುತ್ತಿರುವಿರಿ? ನಾನು ನಿಮ್ಮ ಗುಲಾಮನಾಗಿದ್ದೇನೆ. ನನ್ನ ಯಶಸ್ಸನ್ನು ರಕ್ಷಿಸಿರಿ !”

ದ್ರೋಣನು ಹೇಳಿದನು:

“ಕೌರವ್ಯ ! ಸತ್ಯವನ್ನೇ ಹೇಳುತ್ತಿರುವೆ. ಧನಂಜಯನು ದುರಾಧರ್ಷ. ಆದರೆ ಅವನನ್ನು ನೀನು ಸಹಿಸಿಕೊಳ್ಳುವಂತೆ ನಾನು ಮಾಡುತ್ತೇನೆ. ಲೋಕದಲ್ಲಿ ಸರ್ವಧನುರ್ಧರರೂ ಇಂದು ಒಂದು ಅದ್ಭುತವನ್ನು ನೋಡಲಿ ! ಕೌಂತೇಯನನ್ನು ನೀನು ತಡೆಯುವುದನ್ನು ವಾಸುದೇವನೂ ನೋಡಲಿ ! ರಣದಲ್ಲಿ ನಿನ್ನನ್ನು ಅಸ್ತ್ರಗಳು ಮತ್ತು ಬಾಣಗಳು ತಾಗದ ಹಾಗೆ ಇದೋ ಈ ಕಾಂಚನ ಕವಚವನ್ನು ಕಟ್ಟುತ್ತೇನೆ. ಒಂದುವೇಳೆ ನೀನು ಸುರಾಸುರ, ಯಕ್ಷೋರಗರಾಕ್ಷಸರು ಮತ್ತು ನರರೊಂದಿಗೆ ಈ ಮೂರೂ ಲೋಕಗಳ ವಿರುದ್ಧ ಯುದ್ಧಮಾಡಿದರೂ ನಿನಗೆ ಭಯವಿರುವುದಿಲ್ಲ. ಕೃಷ್ಣನಾಗಲೀ, ಕೌಂತೇಯನಾಗಲೀ, ಅನ್ಯ ಶಸ್ತ್ರಧಾರಿಯಾಗಲೀ ರಣದಲ್ಲಿ ಯಾರೂ ನಿನ್ನ ಈ ಕವಚವನ್ನು ಶರಗಳಿಂದ ಬೇಧಿಸಲಾರರು. ನೀನು ಕವಚವನ್ನು ತೊಟ್ಟು ತ್ವರೆಮಾಡಿ ಸ್ವಯಂ ನೀನೇ ಇಂದು ರಣದಲ್ಲಿ ಕ್ರುದ್ಧನಾದ ಅರ್ಜುನನನ್ನು ಎದುರಿಸು. ಅವನು ನಿನ್ನನ್ನು ಸಹಿಸಿಕೊಳ್ಳಲಾರ !”

ಹೀಗೆ ಹೇಳಿ ದ್ರೋಣನು ತ್ವರೆಯಲ್ಲಿ ಆಚಮನ ಮಾಡಿ ಯಥಾವಿಧಿಯಾಗಿ ಮಂತ್ರವನ್ನು ಜಪಿಸಿ ಅತ್ಯದ್ಭುತವಾಗಿ

ಹೊಳೆಯುತ್ತಿರುವ ಕವಚವನ್ನು ದುರ್ಯೋಧನನಿಗೆ ತೊಡಿಸಿದನು. ಆ ಮಹಾರಣದಲ್ಲಿ ಅವನ ವಿಜಯಕ್ಕಾಗಿ ಬ್ರಹ್ಮವಿತ್ತಮನು ತನ್ನ ವಿದ್ಯೆಯಿಂದ ಲೋಕವನ್ನು ವಿಸ್ಮಯಗೊಳಿಸಿದನು.

ದ್ರೋಣನು ಹೇಳಿದನು:

> “ಭಾರತ! ಬ್ರಹ್ಮನು ನಿನಗೆ ಮಂಗಳವನ್ನುಂಟುಮಾಡಲಿ. ದ್ವಿಜರು ನಿನಗೆ ಮಂಗಳವನ್ನುಂಟು ಮಾಡಲಿ. ಶ್ರೇಷ್ಠ ನಾಗಗಳೂ ಕೂಡ ನಿನಗೆ ಮಂಗಳವನ್ನುಂಟುಮಾಡಲಿ. ಯಯಾತಿ, ನಹುಷ, ದುಂಧುಮಾರ, ಭಗೀರಥ, ಮತ್ತು ಎಲ್ಲ ರಾಜರ್ಷಿಗಳೂ ನಿನ್ನನ್ನು ಎಲ್ಲದರಲ್ಲಿಯೂ ಮಂಗಳವನ್ನುಂಟುಮಾಡಲಿ. ಮಹಾರಣ್ಯದಲ್ಲಿ ನಿತ್ಯವೂ ನಿನಗೆ ಒಂದುಕಾಲಿನ, ಅನೇಕ ಕಾಲಿನ ಮತ್ತು ಕಾಲೇ ಇಲ್ಲದಿರುವವು ಮಂಗಳವನ್ನುಂಟುಮಾಡಲಿ. ಸ್ವಾಹಾ, ಸ್ವಧಾ, ಮತ್ತು ಶಚೀ ಇವರೂ ಸದಾ ನಿನಗೆ ಮಂಗಳವನ್ನುಂಟುಮಾಡಲಿ. ಲಕ್ಷ್ಮೀ ಮತ್ತು ಅರುಂಧತಿಯರೂ ಕೂಡ ನಿನಗೆ ಮಂಗಳವನ್ನುಂಟುಮಾಡಲಿ. ಅಸಿತ-ದೇವಲರೂ, ವಿಶ್ವಾಮಿತ್ರ-ಅಂಗಿರಸರೂ, ವಸಿಷ್ಠ-ಕಶ್ಯಪರೂ ನಿನಗೆ ಮಂಗಳವನ್ನುಂಟುಮಾಡಲಿ. ಲೋಕೇಶ್ವರರಾದ ಧಾತಾ-

ವಿಧಾತರೂ, ದಿಕ್ಕು-ಉಪದಿಕ್ಕುಗಳ ಈಶ್ವರರೂ, ಕಾರ್ತಿಕೇಯ ಷಣ್ಮುಖನೂ ಇಂದು ನಿನಗೆ ಮಂಗಳವನ್ನು ನೀಡಲಿ. ಭಗವಾನ್ ವಿವಸ್ವಂತ, ನಾಲ್ಕು ದಿಗ್ಗಜಗಳೂ, ಭೂಮಿ, ಆಕಾಶ, ಗಗನ ಮತ್ತು ಗ್ರಹಗಳೂ ಸರ್ವಶಃ ನಿನಗೆ ಮಂಗಳವನ್ನುಂಟುಮಾಡಲಿ. ಧರಣಿಯನ್ನು ಕೆಳಗಿನಿಂದ ಸದಾ ಹೊರುತ್ತಿರುವ ಆ ಪನ್ನಗಶ್ರೇಷ್ಠ ಶೇಷನು ನಿನಗೆ ಮಂಗಳವನ್ನು ನೀಡಲಿ.

ಗಾಂಧಾರೇ! ಹಿಂದೆ ಸುರಸತ್ತಮರು ಯುದ್ಧದಲ್ಲಿ ದೈತ್ಯ ವೃತ್ರನ ವಿಕ್ರಮದಿಂದ ಗೆಲಲ್ಪಟ್ಟು ಸಹಸ್ರಾರು ಭಿನ್ನದೇಹರಾದರು. ಆಗ ತೇಜೋಬಲಗಳನ್ನು ಕಳೆದುಕೊಂಡು ಮಹಾಸುರ ವೃತ್ರನಿಂದ ಭೀತರಾಗಿ ಎಲ್ಲ ದಿವೌಕಸರೂ ಇಂದ್ರನೊಂದಿಗೆ ಬ್ರಹ್ಮನ ಶರಣು ಹೊಕ್ಕು ಹೇಳಿದರು: “ದೇವಸತ್ತಮ! ವೃತ್ರನಿಂದ ಸದೆಬಡಿಯಲ್ಪಟ್ಟ ದೇವತೆಗಳಿಗೆ ನೀನೇ ಗತಿ! ನಮ್ಮನ್ನು ಈ ಮಹಾಭಯದಿಂದ ಪಾರುಮಾಡು!” ಆಗ ಅವನು ಪಕ್ಕದಲ್ಲಿಯೇ ನಿಂತಿದ್ದ ವಿಷ್ಣುವಿಗೂ, ವಿಷಣ್ಣರಾಗಿದ್ದ ಶುಕ್ರರೇ ಮೊದಲಾದ ಸುರಸತ್ತಮರಿಗೆ ಇದನ್ನು ಹೇಳಿದನು: “ಇಂದ್ರನೊಂದಿಗೆ

ದೇವತೆಗಳನ್ನೂ, ಉತ್ತಮ ದ್ವಿಜಾತಿಯವರನ್ನೂ ನಾನು ಸತತವಾಗಿ ರಕ್ಷಿಸಬೇಕು. ಆದರೆ ಯಾವುದರಿಂದ ವೃತ್ರನು ನಿರ್ಮಿತನಾಗಿರುವನೋ ಆ ತ್ವಷ್ಟನ ತೇಜಸ್ಸು ಸಹಿಸಲು ತುಂಬಾ ಅಸಾಧ್ಯವಾದುದು. ಹಿಂದೆ ತ್ವಷ್ಟನು ಹತ್ತು ಲಕ್ಷ ವರ್ಷಗಳ ತಪಸ್ಸನ್ನು ತಪಿಸಿ ಮಹೇಶ್ವರನ ಅನುಜ್ಞೆಯನ್ನು ಪಡೆದು ವೃತ್ರನನ್ನು ನಿರ್ಮಿಸಿದನು. ಅವನದೇ ಪ್ರಸಾದದಿಂದ ಈ ಬಲಶಾಲೀ ರಿಪುವು ಸಂಹರಿಸುತ್ತಿದ್ದಾನೆ. ಶಂಕರನ ಸ್ಥಾನಕ್ಕೆ ಹೋಗದೇ ಭಗವಾನ್ ಹರನನ್ನು ಕಾಣಲಾರಿರಿ. ಅವನನ್ನು ನೋಡಿ ನೀವು ಆ ಶತ್ರುವನ್ನು ಸಂಹರಿಸಬಲ್ಲಿರಿ. ಆದುದರಿಂದ ಕ್ಷಿಪ್ರವಾಗಿ ಮಂದರಕ್ಕೆ ಹೋಗಿ. ಅಲ್ಲಿ ಆ ತಪಸ್ಸಿನ ಯೋನಿ, ದಕ್ಷಯಜ್ಞ ವಿನಾಶಕ, ಪಿನಾಕೀ, ಸರ್ವ ಭೂತೇಶ, ಭಗನೇತ್ರನನ್ನು ಸಂಹರಿಸಿದವನಿದ್ದಾನೆ."

ಆ ದೇವತೆಗಳು ಬ್ರಹ್ಮನೊಂದಿಗೆ ಮಂದರಕ್ಕೆ ಹೋಗಿ ಸೂರ್ಯಕೋಟಿಸಮಪ್ರಭನಾದ ತೇಜಸ್ಸಿನ ರಾಶಿಯನ್ನು ಕಂಡರು. ಅವನು ಹೇಳಿದನು: "ದೇವತೆಗಳೇ! ಸ್ವಾಗತ! ಹೇಳಿ! ನಾನೇನು ಮಾಡಬೇಕು? ನನ್ನ ಈ ಅಮೋಘ ದರ್ಶನವು ನೀವು ಬಯಸಿದುದನ್ನು ಪಡೆಯುವಂತವರಾಗಿ!"

ಹೀಗೆ ಹೇಳಲು ದಿವೌಕಸರೆಲ್ಲರೂ ಅವನಿಗೆ ಉತ್ತರಿಸಿದರು: “ವೃತ್ರನ ತೇಜಸ್ಸನ್ನು ಅಪಹರಿಸಿ ದಿವೌಕಸರ ಗತಿಯಾಗು! ಮಹೇಶ್ವರ! ದೇವ! ಅವನ ಪ್ರಹಾರಗಳಿಂದ ಜರ್ಜರಿತವಾಗಿ ಮಾಡಲ್ಪಟ್ಟ ಈ ಶರೀರಗಳನ್ನು ನೋಡು! ನಾವು ನಿನಗೇ ಶರಣು ಬಂದಿದ್ದೇವೆ. ನಮ್ಮ ಗತಿಯಾಗು!” ಆಗ ಮಹೇಶ್ವರನು ಹೇಳಿದನು: “ದೇವತೆಗಳೇ! ತ್ವಷ್ಟನ ತೇಜಸ್ಸಿನಿಂದ ಈ ಸುಮಹಾಬಲ ಘೋರ ಕೃತಾತ್ಮರಿಂದಲೂ ತಡೆಯಲು ಅಸಾಧ್ಯನಾದವನು ಮಾಡಲ್ಪಟ್ಟನು ಎನ್ನುವುದು ತಿಳಿದಿದೆ. ಆದರೆ ಸರ್ವ ದಿವೌಕಸರಿಗೆ ಸಹಾಯವನ್ನು ಮಾಡುವುದು ನನ್ನ ಅವಶ್ಯ ಕಾರ್ಯವಾಗಿದೆ. ನನ್ನ ದೇಹದಿಂದ ಹುಟ್ಟಿದ ಹೊಳೆಯುತ್ತಿರುವ ಕವಚವನ್ನು ತೆಗೆದುಕೋ! ಮನಸ್ಸಿನಲ್ಲಿಯೇ ಈ ಮಂತ್ರಗಳನ್ನು ಹೇಳಿ ಧರಿಸು!”

ಹೀಗೆ ಹೇಳಿ ಆ ವರದನು ಆ ಕವಚವನ್ನೂ ಆ ಮಂತ್ರವನ್ನೂ ನೀಡಿದನು. ಅವನು ಆ ಕವಚದಿಂದ ರಕ್ಷಿತನಾಗಿ ವೃತ್ರನ ಸೇನೆಯ ಕಡೆ ಹೋದನು. ಮಹಾರಣದಲ್ಲಿ ಬೀಳುವ ನಾನಾವಿಧದ ಶಸ್ತ್ರೌಘಗಳು ತಾಗಿದರೂ ಈ ಕವಚವನ್ನು

ಧರಿಸಿದವನನ್ನು ಭೇದಿಸಲು ಸಾಧ್ಯವಿಲ್ಲ. ಆಗ ಸ್ವಯಂ ದೇವಪತಿಯು ವೃತ್ರನನ್ನು ಸಮರದಲ್ಲಿ ಸಂಹರಿಸಿದನು. ಅನಂತರ ಆ ಮಂತ್ರಮಯವಾಗಿ ಕಟ್ಟುವ ಕವಚವನ್ನು ಆಂಗಿರಸನಿಗೆ ನೀಡಿದನು. ಆಂಗಿರಸನು ಅದನ್ನು ಬೃಹಸ್ಪತಿಗೆ ಹೇಳಿದನು. ಬೃಹಸ್ಪತಿಯು ಧೀಮತ ಅಗ್ನಿವೇಶನಿಗೆ ಹೇಳಿದನು. ಅಗ್ನಿವೇಶ್ಯನು ನನಗೆ ನೀಡಿದ ಕವಚವನ್ನು ನಾನು ನಿನಗೆ ಇಂದು ನಿನ್ನ ದೇಹರಕ್ಷಣಾರ್ಥವಾಗಿ ಮಂತ್ರಗಳಿಂದ ಕಟ್ಟಿದ್ದೇನೆ."

ಹೀಗೆ ದುರ್ಯೋಧನನಿಗೆ ಹೇಳಿ ಆಚಾರ್ಯಪುಂಗವ ದ್ರೋಣನು ಪುನಃ ಮೆಲ್ಲನೇ ಈ ಮಾತನ್ನಾಡಿದನು:

"ಪಾರ್ಥಿವ! ಹಿಂದೆ ರಣದಲ್ಲಿ ಹಿರಣ್ಯಗರ್ಭನು ವಿಷ್ಣುವಿಗೆ ಹೇಗೆ ಇದನ್ನು ಕಟ್ಟಿದ್ದನೋ ಹಾಗೆ ನಿನಗೆ ನಾನು ಈ ಕವಚವನ್ನು ಬ್ರಹ್ಮಸೂತ್ರದಿಂದ ಕಟ್ಟುತ್ತಿದ್ದೇನೆ. ಹೇಗೆ ತಾರಕಸುರನ ಸಂಗ್ರಾಮದಲ್ಲಿ ಬ್ರಹ್ಮನು ಹೇಗೆ ಶಕ್ರನಿಗೆ ಕಟ್ಟಿದ್ದನೋ ಹಾಗೆ ಕವಚವನ್ನು ನಿನಗೆ ನಾನು ಕಟ್ಟುತ್ತಿದ್ದೇನೆ."

ಮಂತ್ರದಿಂದ ವಿಧಿಪೂರ್ವಕವಾಗಿ ಅವನಿಗೆ ಕವಚವನ್ನು ಕಟ್ಟಿ ದ್ವಿಜನು ರಾಜನನ್ನು ಮಹಾ ಯುದ್ಧಕ್ಕೆ ಕಳುಹಿಸಿದನು. ಆಚಾರ್ಯ

ಮಹಾತ್ಮನಿಂದ ಸನ್ನದ್ಧಗೊಂಡು ಆ ಮಹಾಬಾಹುವು ಪ್ರಹಾರಿಗಳಾದ ಸಹಸ್ರ ತ್ರಿಗರ್ತರ ರಥರೊಂದಿಗೆ, ಹಾಗೆಯೇ ವೀರ್ಯಶಾಲಿಗಳಾದ ಮದಿಸಿದ ಸಹಸ್ರ ಆನೆಗಳಿಂದ, ಹತ್ತು ಸಾವಿರ ಅಶ್ವಗಳಿಂದ ಮತ್ತು ಅಷ್ಟೇ ಮಹಾರಥಿಗಳಿಂದ ಸುತ್ತುವರೆಯಲ್ಪಟ್ಟು, ನಾನಾ ವಾದ್ಯಗಳ ಘೋಷಗಳೊಂದಿಗೆ, ವೈರೋಚನಿಯು ಹೇಗೋ ಹಾಗೆ, ಮಹಾಬಾಹು ಅರ್ಜುನನ ರಥದ ಕಡೆ ಹೊರಟನು. ಅಗಾಧ ಸಮುದ್ರದಂತೆ ಹೊರಟ ಕೌರವನನ್ನು ನೋಡಿ ಕೌರವ ಸೇನೆಯಲ್ಲಿ ಮಹಾ ಶಬ್ಧವುಂಟಾಯಿತು.

## ದ್ರೋಣ-ಪಾಂಚಾಲರ ಯುದ್ಧ

ವ್ಯೂಹವನ್ನು ಪ್ರವೇಶಿಸಿದ್ದ ಪುರುಷರ್ಷಭ ಪಾರ್ಥ-ವಾರ್ಷ್ಣೇಯರ ಹಿಂದೆ ದುರ್ಯೋಧನನು ಹೋದ ನಂತರ ಪಾಂಡವರು ಸೋಮಕರೊಡಗೂಡಿ ಮಹಾ ಶಬ್ಧಗಳಿಂದ ವೇಗವಾಗಿ ದ್ರೋಣನನ್ನು ಆಕ್ರಮಣಿಸಿದರು. ಆಗ ಅವರೊಡನೆ ಯುದ್ಧವು ನಡೆಯಿತು. ವ್ಯೂಹದ ಮುಂದೆಯೇ ಪಾಂಚಾಲರ ಮತ್ತು ಕುರುಗಳ ನಡುವೆ ಘೋರ ಅದ್ಭುತ ಲೋಮಹರ್ಷಣ ತುಮುಲ ಯುದ್ಧವು ನಡೆಯಿತು. ಸೂರ್ಯನು ಮಧ್ಯಾಹ್ನಕ್ಕೇರಲು ಎಂದೂ ಕಂಡಿರದಂತಹ ಮತ್ತು ಕೇಳಿರದಂತಹ ಯುದ್ಧವು ನಡೆಯಿತು. ಸೇನೆಗಳ ವ್ಯೂಹದೊಂದಿಗೆ ಪ್ರಹಾರಿಗಳಾದ ಪಾರ್ಥರು ಎಲ್ಲರೂ ಧೃಷ್ಟದ್ಯುಮ್ನನನ್ನು ಮುಂದಿರಿಸಿಕೊಂಡು

ದ್ರೋಣನ ಸೈನ್ಯವನ್ನು ಶರವರ್ಷಗಳಿಂದ ಮುಸುಕಿದರು. ದ್ರೋಣನನ್ನು ಮುಂದಿರಿಸಿಕೊಂಡು ಕೌರವರು ಪಾರ್ಷತ ಪ್ರಮುಖರಾದ ಪಾರ್ಥರ ಮೇಲೆ ಸಾಯಕಗಳನ್ನು ಸುರಿಸಿದರು. ಸುಂದರ ಅಲಂಕೃತ ರಥಗಳಲ್ಲಿ ಸೇನೆಗಳ ಅಗ್ರಭಾಗಗಳಲ್ಲಿದ್ದ ಅವರಿಬ್ಬರೂ ಬೇಸಿಗೆಯಲ್ಲಿ ವಿರುದ್ಧ ದಿಕ್ಕುಗಳಲ್ಲಿ ಬೀಸುವ ಚಂಡಮಾರುತದಿಂದ ಪರಸ್ಪರ ತಾಗುವ ಮಹಾ ಮೇಘಗಳಂತೆ ಪ್ರಕಾಶಿಸುತ್ತಿದ್ದರು. ಮಳೆಗಾಲದಲ್ಲಿ ಪ್ರವಾಹತುಂಬಿ ರಭಸದಿಂದ ಪರಸ್ಪರರ ಕಡೆ ಹರಿಯುವ ಜಾಹ್ನವೀ-ಯಮುನಾ ನದಿಗಳಂತೆ ಆ ಎರಡು ಮಹಾಸೇನೆಗಳು ಅತಿ ವೇಗದಿಂದ ಪರಸ್ಪರರನ್ನು ಕೂಡಿ ಯುದ್ಧ ಮಾಡಿದರು. ನಾನಾ ಶಸ್ತ್ರಗಳೇ ಮೊದಲು ಬೀಸುವ ಚಂಡಮಾರುತವಾಗಿ, ಆನೆ-ಕುದುರೆ-ರಥಗಳ ಸಂಕುಲಗಳೆಂಬ ಮಿಂಚು ಮತ್ತು ಮಹಾರೌದ್ರವಾದ ಗದೆಗಳೇ ಮಹಾ ಮೇಘಗಳಾಗಿರಲು, ಭಾರದ್ವಾಜನೆಂಬ ಚಂಡಮಾರುತದಿಂದ ಹೊತ್ತುತಂದ ಸಹಸ್ರಾರು ಶರಗಳ ಧಾರೆಗಳನ್ನು ಪಾಂಡುಸೇನೆಯಿಂದ ಉಂಟಾದ ಮಹಾರೌದ್ರ ಅಗ್ನಿಯ ಮೇಲೆ ಸುರಿಸಿ ಆರಿಸಲು ಪ್ರಯತ್ನಿಸುತ್ತಿರುವಂತಿತ್ತು.

ಬೇಸಗೆಯ ಕೊನೆಯಲ್ಲಿ ಘೋರವಾದ ಚಂಡಮಾರುತವು ಸಮುದ್ರವನ್ನು ಕ್ಷೋಭೆಗೊಳಿಸುವಂತೆ ದ್ವಿಜೋತ್ತಮನು ಪಾಂಡವರ

ಸೇನೆಗಳನ್ನು ಅಲ್ಲೋಲಕಲ್ಲೋಲಗೊಳಿಸಿದನು. ಅವರೂ ಕೂಡ ಪ್ರಬಲ ಅಲೆಗಳೊಂದಿಗೆ ಮಹಾಸೇತುವೆಯನ್ನು ಕೊಚ್ಚಿಕೊಂಡು ಹೋಗಲು ಪ್ರಯತ್ನಿಸುವಂತೆ ಸರ್ವ ಪ್ರಯತ್ನದಿಂದ ದ್ರೋಣನನ್ನು ಆಕ್ರಮಣಿಸಿದರು. ಜೋರಾಗಿ ಬಂದು ಅಪ್ಪಳಿಸುವ ಅಲೆಗಳನ್ನು ಪರ್ವತವು ಹೇಗೆ ತಡೆಯುತ್ತದೆಯೋ ಹಾಗೆ ದ್ರೋಣನು ಸಮರದಲ್ಲಿ ಕ್ರುದ್ಧರಾಗಿದ್ದ ಪಾಂಡವರನ್ನೂ, ಪಾಂಚಾಲರನ್ನೂ, ಕೇಕಯರನ್ನೂ ತಡೆದನು. ಇತರ ಮಹಾಬಲಶಾಲೀ ಶೂರ ರಾಜರೂ ಕೂಡ ರಣದಲ್ಲಿ ಎಲ್ಲ ಕಡೆಗಳಿಂದ ಮುತ್ತಿಗೆ ಹಾಕುತ್ತಾ ಪಾಂಚಾಲರನ್ನು ತಡೆದರು. ಆಗ ರಣದಲ್ಲಿ ಪಾರ್ಷತನು ಪಾಂಡವರೊಂದಿಗೆ ಅರಿಸೇನೆಯನ್ನು ಒಡೆಯಲು ಬಯಸಿ ದ್ರೋಣನನ್ನು ಹೊಡೆಯಲು ಪ್ರಾರಂಭಿಸಿದನು. ದ್ರೋಣನು ಹೇಗೆ ಪಾರ್ಷತನ ಮೇಲೆ ಶರವರ್ಷಗಳನ್ನು ಸುರಿಸುತ್ತಿದ್ದನೋ ಹಾಗೆ ಧೃಷ್ಟದ್ಯುಮ್ನನೂ ಕೂಡ ಶರವರ್ಷಗಳನ್ನು ಸುರಿಸಿದನು. ಖಡ್ಗ ತೋಮರಗಳೇ ಮೊದಲು ಬೀಸುವ ಚಂಡಮಾರುತವಾಗಿ, ಶಕ್ತಿ-ಪ್ರಾಸ-ಋಷ್ಟಿಗಳಿಂದ ಸಜ್ಜಾಗಿ, ಶಿಂಜಿನಿಯೇ ಮಿಂಚು ಮತ್ತು ಚಾಪದ ಟೇಂಕಾರವೇ ಗುಡುಗಾಗಿರುವ, ಧೃಷ್ಟದ್ಯುಮ್ನನೆಂಬ ಮೋಡವು, ಶರಧಾರೆಗಳೇ ಮಳೆಗಲ್ಲುಗಳನ್ನಾಗಿಸಿ ಎಲ್ಲಕಡೆ ಚೆಲ್ಲುತ್ತ ರಥಶ್ರೇಷ್ಠರ ಸಮೂಹಗಳನ್ನು ಸಂಹರಿಸುತ್ತಾ ಸೇನೆಯನ್ನು ಮುಸುಕಿತು.

ಎಲ್ಲೆಲ್ಲಿ ದ್ರೋಣನು ಪಾಂಡವರ ರಥದ ಸಾಲನ್ನು ಶರಗಳಿಂದ ಹೊಡೆದು ಮುನ್ನುಗ್ಗಲು ಪ್ರಯತ್ನಿಸುತ್ತಿದ್ದನೋ ಅಲ್ಲಲ್ಲಿ ಪಾರ್ಷತನು ಶರಗಳಿಂದ ದ್ರೋಣನನ್ನು ತಡೆಯುತ್ತಿದ್ದನು. ಯುದ್ಧದಲ್ಲಿ ದ್ರೋಣನು ಎಷ್ಟೇ ಪ್ರಯತ್ನಿಸಿದರೂ ಧೃಷ್ಟದ್ಯುಮ್ನನನ್ನು ಸಮೀಪಿಸಿ ಸೇನೆಯು ಮೂರಾಗಿ ಒಡೆಯಿತು. ಒಂದು ಭೋಜನ ಹಿಂದೆ ಹೋಯಿತು, ಇನ್ನೊಂದು ಜಲಸಂಧನ ಹಿಂದೆ ಹೋಯಿತು. ಇನ್ನೊಂದು ಭಾಗವು ಪಾಂಡವರನ್ನು ಸದೆಬಡಿಯುತ್ತಿದ್ದ ದ್ರೋಣನನ್ನು ಹಿಂಬಾಲಿಸಿತು. ದ್ರೋಣನು ಸೇನೆಗಳನ್ನು ಸಂಘಟಿಸುತ್ತಿದ್ದ ಹಾಗೆಯೇ ಧೃಷ್ಟದ್ಯುಮ್ನನು ಅವನ್ನು ಧ್ವಂಸಿಸುತ್ತಿದ್ದನು. ಅರಣ್ಯದಲ್ಲಿ ರಕ್ಷಕರಿಲ್ಲದೆ ಹಸುಗಳು ಅನೇಕ ಹಿಂಸ್ರಮೃಗಗಳಿಂದ ವಧಿಸಲ್ಪಡುವಂತೆ ಧಾರ್ತರಾಷ್ಟ್ರರ ಸೇನೆಯು ಪಾಂಡು-ಸೃಂಜಯರಿಂದ ವಧಿಸಲ್ಪಡುತ್ತಿತ್ತು. ಕಾಲನೇ ಧೃಷ್ಟದ್ಯುಮ್ನನ ಮೂಲಕ ಯೋಧರನ್ನು ಮೋಹಿಸಿ ಕಬಳಿಸುತ್ತಿದ್ದಾನೋ ಏನೋ ಎಂದು ಆ ತುಮುಲ ಸಂಗ್ರಾಮವನ್ನು ವೀಕ್ಷಿಸುವ ಜನರು ಅಂದುಕೊಂಡರು. ದುಷ್ಟ ನೃಪನ ರಾಷ್ಟ್ರವು ಹೇಗೆ ದುರ್ಭಿಕ್ಷ, ವ್ಯಾಧಿ ಮತ್ತು ಚೋರರ ಭಯದಿಂದ ಹೇಗೆ ಆಪತ್ತಿಗಳಗಾಗುವುದೋ ಹಾಗೆ ಕೌರವ ಸೇನೆಯು ಪಾಂಡವ ಸೇನೆಯನ್ನು ಎದುರಿಸಿ ಪಲಾಯನ ಮಾಡಿತು. ಸೇನೆಗಳ ಶಸ್ತ್ರ ಮತ್ತು ಕವಚಗಳ ಮೇಲೆ ಸೂರ್ಯನ ಕಿರಣಗಳು ಬಿದ್ದು ಅವುಗಳ ಹೊಳಪು ಕಣ್ಣುಗಳನ್ನು ಕೋರೈಸುತ್ತಿದ್ದವು ಮತ್ತು ಧೂಳು ಕಣ್ಣುಗಳನ್ನು

ಮುಸುಕಿತ್ತು.

ಮೂರು ಭಾಗಗಳಾದ ಸೈನ್ಯವನ್ನು ಪಾಂಡವರು ವಧಿಸುತ್ತಿರಲು ಕುಪಿತನಾದ ದ್ರೋಣನು ಪಾಂಚಾಲರನ್ನು ಶರಗಳಿಂದ ಸಂಹರಿಸತೊಡಗಿದನು. ಅವನ ಸಾಯಕಗಳಿಂದ ಸಂಹರಿಸಲ್ಪಟ್ಟ ಆ ಸೇನೆಗಳು ಮಣ್ಣು ಮುಕ್ಕಿದವು. ಅಗ ದ್ರೋಣನ ರೂಪವು ಉರಿಯುತ್ತಿರುವ ಕಾಲಾಗ್ನಿಯಂತೆ ಆಯಿತು. ಆ ಮಹಾರಥನು ರಥ, ಆನೆ, ಕುದುರೆ, ಪದಾತಿಗಳನ್ನು ಒಂದೊಂದೇ ಬಾಣಗಳಿಂದ ರಣದಲ್ಲಿ ಸಂಹರಿಸಿದನು. ಆಗ ರಣದಲ್ಲಿ ದ್ರೋಣನ ಚಾಪದಿಂದ ಹೊರಡುತ್ತಿದ್ದ ನಿಶಿತ ಬಾಣಗಳನ್ನು ಸಹಿಸಿಕೊಳ್ಳುವವರು ಪಾಂಡವರ ಸೇನೆಯಲ್ಲಿ ಯಾರೂ ಇರಲಿಲ್ಲ. ಸೂರ್ಯನಿಂದ ಬೇಯಿಸಲ್ಪಡುತ್ತಿದ್ದವರಂತೆ ದ್ರೋಣನ ಸಾಯಕಗಳಿಂದ ಬೆಂದು ಪಾರ್ಷತನ ಸೇನೆಯು ಅಲ್ಲಲ್ಲಿಯೇ ತಿರುಗತೊಡಗಿತು. ಹಾಗೆಯೇ ಪಾರ್ಷತನಿಂದ ಸಂಹರಿಸಲ್ಪಡುತ್ತಿದ್ದ ಕೌರವ ಸೇನೆಯು ಉರಿಯುತ್ತಿರುವ ಅಗ್ನಿಯಿಂದ ಎಲ್ಲ ಕಡೆಗಳಲ್ಲಿ ಸುಟ್ಟುಹೋಗುತ್ತಿರುವ ಒಣ ವನದಂತಾಯಿತು. ದ್ರೋಣ ಮತ್ತು ಪಾರ್ಷತರ ಸಾಯಕಗಳಿಂದ ವಧಿಸಲ್ಪಡುತ್ತಿದ್ದ ಸೇನೆಗಳಲ್ಲಿ ಸೈನಿಕರು ಪ್ರಾಣಗಳನ್ನೂ ತೊರೆದು ಪರಮ ಶಕ್ತಿಯಿಂದ ಯುದ್ಧಮಾಡುತ್ತಿದ್ದರು. ಯುದ್ಧಮಾಡುತ್ತಿರುವ ಕೌರವರಲ್ಲಿ ಅಥವಾ ಅವರಲ್ಲಿ ಭಯದಿಂದ

ಸಂಗ್ರಾಮವನ್ನು ಬಿಟ್ಟು ಓಡಿ ಹೋದವರು ಯಾರೂ ಇರಲಿಲ್ಲ.

ಭೀಮಸೇನನನ್ನಾದರೋ ಸೋದರರಾದ ಮಹಾರಥ ವಿವಿಂಶತಿ-ಚಿತ್ರಸೇನ-ವಿಕರ್ಣರೂ, ಅವಂತಿಯ ವಿಂದಾನುವಿಂದರೂ, ವೀರ್ಯವಾನ್ ಕ್ಷೇಮಧೂರ್ತಿಯೂ - ನಿನ್ನ ಮೂವರು ಪುತ್ರರೂ ಮತ್ತು ಅವರ ಮೂವರು ಅನುಯಾಯಿಗಳೂ - ಸುತ್ತುವರೆದರು. ಕುಲಪುತ್ರ ಮಹಾರಥಿ ತೇಜಸ್ವೀ ಬಾಹ್ಲೀಕನು ಸೇನೆಯೊಂದಿಗೆ ಅಮಾತ್ಯರೊಂದಿಗೆ ದ್ರೌಪದೇಯರನ್ನು ತಡೆದನು. ಶೈಭ್ಯ ಗೋವಾಸನ ರಾಜನು ಒಂದುಸಾವಿರ ಯೋಧರೊಂದಿಗೆ ಕಾಶ್ಯ ಅಭಿಭುವಿನ ಪರಾಕ್ರಾಂತ ಮಗನನ್ನು ತಡೆದನು. ಪಾವಕನಂತೆ ಪ್ರಜ್ವಲಿಸುತ್ತಿದ್ದ ಕೌಂತೇಯ ಅಜಾತಶತ್ರು ರಾಜನನ್ನು ಶಲ್ಯರಾಜನು ಎದುರಿಸಿದನು. ಕ್ರುದ್ಧನಾಗಿದ್ದ ಅಮರ್ಷಣ, ಶೂರ ದುಃಶಾಸನನು ತನ್ನ ಸೇನೆಯನ್ನು ವ್ಯವಸ್ಥೆಯಲ್ಲಿರಿಸಿಕೊಂಡು ರಥವರ ಸಾತ್ಯಕಿಯನ್ನು ಎದುರಿಸಿದನು. ಸಂಜಯನೂ ಕೂಡ ಸೇನೆಯೊಂದಿಗೆ ಸನ್ನದ್ಧನಾಗಿ ಕವಚವನ್ನು ತೊಟ್ಟು ನಾಲ್ಕುನೂರು ಮಹೇಷ್ವಾಸರೊಂದಿಗೆ ಚೇಕಿತಾನನನ್ನು ತಡೆದನು. ಶಕುನಿಯಾದರೋ ಏಳುನೂರು ಗಾಂಧಾರರ ಸೇನೆಯೊಡಗೂಡಿ ಚಾಪ-ಶಕ್ತಿ-ಖಡ್ಗಗಳೊಂದಿಗೆ ಮಾದ್ರೀಪುತ್ರರನ್ನು ತಡೆದನು.

ಅವಂತಿಯ ಮಹೇಷ್ವಾಸ ವಿಂದಾನುವಿಂದರು ಮಿತ್ರರಿಗಾಗಿ

ಪ್ರಾಣಗಳನ್ನು ತ್ಯಜಿಸಿ ಯುದ್ಧದಲ್ಲಿ ವಿರಾಟ ಮತ್ಸ್ಯನನ್ನು ಬಾಣಗಳಿಂದ ಹೊಡೆದು ಯದ್ಧಮಾಡುತ್ತಿದ್ದರು. ದಾರಿಯನ್ನು ಮಾಡಿಕೊಂಡು ಹೋಗಲು ಪ್ರಯತ್ನಿಸುತ್ತಿದ್ದ ಶಿಖಂಡಿಯನ್ನು ಬಾಹ್ಲೀಕನು ಪ್ರಯತ್ನಿಸಿ ತಡೆದನು. ಅಂತಿಯವನು ಸೌವೀರರೊಂದಿಗೆ ಕ್ರೂರರಾದ ಪ್ರಭದ್ರಕರೊಡನಿದ್ದ ಕ್ರುದ್ಧ ರೂಪಿ ಪಾಂಚಾಲ್ಯ ಧೃಷ್ಟದ್ಯುಮ್ನನನ್ನು ತಡೆದನು. ಕ್ರೂರಯೋಧಿನಿ ರಾಕ್ಷಸ ಶೂರ ಘಟೋತ್ಕಚನನ್ನು ಅಲಾಯುಧನು ಆಕ್ರಮಣಿಸಿದನು. ಕ್ರುದ್ರರೂಪಿ ರಾಕ್ಷಸೇಂದ್ರ ಅಲಂಬುಸನನ್ನು ಮಹಾ ಸೇನೆಯೊಡಗೂಡಿ ಕುಂತಿಭೋಜನು ತಡೆದನು. ಸೈಂಧವನು ಕೃಪನೇ ಮೊದಲಾದ ಪರಮೇಷ್ವಾಸ ರಥರಿಂದ ರಕ್ಷಿತನಾಗಿ ಎಲ್ಲ ಸೇನೆಗಳ ಹಿಂದೆ ಇದ್ದನು. ಸೈಂಧವನ ಬೃಹತ್ತಮ ಚಕ್ರಗಳನ್ನು ಬಲದಲ್ಲಿ ದ್ರೌಣಿಯೂ ಎಡದಲ್ಲಿ ಸೂತಪುತ್ರನೂ ರಕ್ಷಿಸುತ್ತಿದ್ದರು. ಸೌಮದತ್ತಿಯ ನಾಯಕತ್ವದಲ್ಲಿ ನೀತಿವಂತರಾದ ಮಹೇಷ್ವಾಸರಾದ ಎಲ್ಲ ಯುದ್ಧವಿಶಾರದರಾದ ಕೃಪ, ವೃಷಸೇನ, ಶಲ, ಶಲ್ಯ ಮತ್ತು ದುರ್ಜಯರು ಸೈಂಧವನ ಹಿಂಭಾಗದ ರಕ್ಷಕರಾಗಿದ್ದರು. ಸೈಂಧವನಿಗೆ ರಕ್ಷಣೆಯ ಈ ವ್ಯವಸ್ಥೆಯನ್ನು ಮಾಡಿ ಅವರು ಯುದ್ಧಮಾಡಿದರು.

ದ್ರೋಣನ ಸೇನೆಯನ್ನು ಭೇದಿಸಲೋಸುಗ ರಣದಲ್ಲಿ ಪಾರ್ಥರು

ವ್ಯೂಹದ ಎದಿರು ನಿಂತಿದ್ದ ಭಾರದ್ವಾಜನನ್ನು ಎದುರಿಸಿ ಅವನೊಂದಿಗೆ ಯುದ್ಧಮಾಡತೊಡಗಿದರು. ತನ್ನ ವ್ಯೂಹವನ್ನೂ ಸೈನಿಕರನ್ನೂ ರಕ್ಷಿಸುತ್ತಾ ರಣದಲ್ಲಿ ಮಹಾ ಯಶಸ್ಸನ್ನು ಬಯಸುತ್ತಾ ದ್ರೋಣನೂ ಕೂಡ ಪಾರ್ಥರೊಂದಿಗೆ ಹೋರಾಡಿದನು.

ಕೌರವ ಪುತ್ರರ ಹಿತೈಷಿಗಳಾದ ಅವಂತಿಯ ವಿಂದಾನುವಿಂದರು ಕ್ರುದ್ಧರಾಗಿ ವಿರಾಟನನ್ನು ಹತ್ತು ಶರಗಳಿಂದ ಹೊಡೆದರು. ವಿರಾಟನಾದರೋ ಅನುಗರೊಂದಿಗೆ ನಿಂತಿದ್ದ ಆ ಇಬ್ಬರು ಪರಾಕ್ರಾಂತರನ್ನು ಪರಾಕ್ರಮದೊಂದಿಗೆ ಯುದ್ಧಮಾಡತೊಡಗಿದನು. ವನದಲ್ಲಿ ಸಿಂಹಕ್ಕೂ ಮದಿಸಿದ ಎರಡು ಸಲಗಗಳಿಗೂ ನಡೆಯುವಂತೆ ಅವರ ನಡುವೆ ನೀರಿನಂತೆ ರಕ್ತವನ್ನು ಸುರಿಸುವ ದಾರುಣವಾದ ಯುದ್ಧವು ನಡೆಯಿತು.

ಯಾಜ್ಞಸೇನಿಯು ಬಾಹ್ಲೀಕನನ್ನು ಮರ್ಮ-ಅಸ್ತಿಗಳನ್ನು ಭೇದಿಸಬಲ್ಲ ಘೋರವಾದ ತೀಕ್ಷ್ಣವಾದ ವಿಶಿಖಗಳಿಂದ ಹೊಡೆದನು. ಆಗ ಬಾಹ್ಲೀಕನು ಕ್ರುದ್ಧನಾಗಿ ಯಾಜ್ಞಸೇನಿಯನ್ನು ಒಂಭತ್ತು ಹೇಮಪುಂಖಗಳಿರುವ ಶಿಲಾಶಿತ ನತಪರ್ವಗಳಿಂದ ಜೋರಾಗಿ ಹೊಡೆದನು. ಆಗ ಅಲ್ಲಿ ಹೇಡಿಗಳಿಗೆ ಭಯವನ್ನುಂಟುಮಾಡುವ, ಶೂರರ ಹರ್ಷವನ್ನು ಹೆಚ್ಚಿಸುವ ಶರ-ಶಕ್ತಿ ಸಮೂಹಗಳ ಘೋರ

ಯುದ್ಧವು ನಡೆಯಿತು. ಅವರಿಬ್ಬರೂ ಬಿಡುತ್ತಿದ್ದ ಬಾಣಗಳಿಂದ ಅಂತರಿಕ್ಷ ಮತ್ತು ದಿಕ್ಕುಗಳೂ ಮುಚ್ಚಿಹೋಗಿ ಎಲ್ಲಿ ಏನಾಗುತ್ತದೆಯೆಂದು ಯಾರಿಗೂ ತಿಳಿಯುತ್ತಿರಲಿಲ್ಲ. ಆನೆಯು ಮತ್ತೊಂದು ಆನೆಯೊಂದಿಗೆ ಹೇಗೋ ಹಾಗೆ ಶೈಬ್ಯ ಗೋವಾಸನು ಯುದ್ಧದಲ್ಲಿ ಸೈನ್ಯದೊಂದಿಗೆ ಮಹಾರಥ ಕಾಶ್ಯಪುತ್ರನೊಡನೆ ಯುದ್ಧಮಾಡಿದನು. ಮನಸ್ಸು ಪಂಚೇಂದ್ರಿಯಗಳೊಡನೆ ಹೇಗೋ ಹಾಗೆ ಸಂರಬ್ಧನಾದ ಬಾಹ್ಲೀಕ ರಾಜನು ರಣದಲ್ಲಿ ಮಹಾರಥ ದ್ರೌಪದೇಯರೊಡನೆ ಹೋರಾಡುತ್ತಾ ಶೋಭಿಸಿದನು. ಇಂದ್ರಿಯ ವಿಷಯಗಳು ಹೇಗೆ ದೇಹವನ್ನು ಕಲಕುತ್ತಿರುತ್ತವೆಯೋ ಹಾಗೆ ಯುದ್ಧಮಾಡುತ್ತಿದ್ದ ಅವರು ಅವನನ್ನು ಎಲ್ಲ ಕಡೆಗಳಿಂದ ಶರೌಘಗಳಿಂದ ಪೀಡಿಸುತ್ತಿದ್ದರು.

ಸಾತ್ಯಕಿಯನ್ನು ದುಃಶಾಸನನು ತೀಕ್ಷ್ಣ ಸಾಯಕಗಳಿಂದ ಮತ್ತು ಒಂಭತ್ತು ನತಪರ್ವಗಳಿಂದ ಹೊಡೆದನು. ಮಹೇಷ್ವಾಸ ಧನ್ವಿಯಿಂದ ಬಲವತ್ತಾಗಿ ಬಾಣಗಳಿಂದ ಹೊಡೆಯಲ್ಪಟ್ಟು ಅತಿಯಾಗಿ ಗಾಯಗೊಂಡ ಸಾತ್ಯಕಿಯು ಕ್ಷಣಕಾಲ ಮೂರ್ಛಿತನಾದನು. ತಕ್ಷಣವೇ ಎಚ್ಚೆತ್ತು ವಾರ್ಷ್ಣೇಯನು ಹತ್ತು ಕಂಕಪತ್ರಿ ಸಾಯಕಗಳಿಂದ ದುಃಶಾಸನನನ್ನು ಹೊಡೆದನು. ಅನ್ಯೋನ್ಯರನ್ನು ದೃಢವಾಗಿ ಹೊಡೆದು ಗಾಯಗೊಳಿಸಿ ಗಾಯಗೊಂಡ ಅವರಿಬ್ಬರೂ ಸಮರದಲ್ಲಿ ಹೂಬಿಟ್ಟ ಮುತ್ತುಗದ ಮರಗಳಂತೆ

ರಾರಾಜಿಸುತ್ತಿದ್ದರು.

ಕುಂತಿಭೋಜನ ಶರಗಳಿಂದ ಗಾಯಗೊಂಡಿದ್ದ ಅಲಂಬುಸನಾದರೋ ಪರಮ ಸೊಬಗಿನಿಂದ ಹೂಬಿಟ್ಟ ಮುತ್ತುಗದ ಮರದಂತೆ ಶೋಭಿಸಿದನು. ಅವನು ಕುಂತಿಭೋಜನನ್ನು ಅನೇಕ ಆಯಸಗಳಿಂದ ಹೊಡೆದು ಗಾಯಗೊಳಿಸಿ ಕೌರವ ಸೇನೆಗಳ ಎದಿರು ಭೈರವ ಕೂಗನ್ನು ಕೂಗಿದನು. ಹಿಂದೆ ಶಕ್ರ-ಜಂಭಾಸುರರಂತೆ ಸಮರದಲ್ಲಿ ಪರಸ್ಪರರೊಡನೆ ಯುದ್ಧಮಾಡುತ್ತಿದ್ದ ಆ ಇಬ್ಬರು ಶೂರರನ್ನು ಎಲ್ಲರೂ ನೋಡಿದರು.

ವೈರವನ್ನು ಸಾಧಿಸಿದ್ದ ರಭಸದ ಶಕುನಿಯನ್ನು ಸಂಗ್ರಾಮದಲ್ಲಿ ಕ್ರುದ್ಧರಾದ ಮಾದ್ರೀಪುತ್ರರಿಬ್ಬರೂ ಶರಗಳಿಂದ ಅರೆದರು. ಧೃತರಾಷ್ಟ್ರನಿಂದ ಹುಟ್ಟಿದ, ಕರ್ಣನಿಂದ ವೃದ್ಧಿಸಲ್ಪಟ್ಟ, ಧೃತರಾಷ್ಟ್ರ ಪುತ್ರರು ಇರಿಸಿಕೊಂಡಿದ್ದ ಕ್ರೋಧವೆಂಬ ಆ ಅಗ್ನಿಯು ಇಡೀ ಭೂಮಿಯ ಎಲ್ಲವನ್ನೂ ಭಸ್ಮಮಾಡಲು ತೊಡಗಿತು. ಆ ಮೂಲದಿಂದ ಜನಕ್ಷಯಯವು ನಡೆಯಿತು. ಪಾಂಡುಪುತ್ರರಿಬ್ಬರ ಶರಗಳಿಂದ ವಿಮುಖನಾಗಿಸಿಕೊಂಡ ಯುದ್ಧದಲ್ಲಿ ಸ್ವಲ್ಪವೇ ಪರಾಕ್ರಮವುಳ್ಳ ಶಕುನಿಯು ಏನು ಮಾಡಬೇಕೆಂದು ತಿಳಿಯಲಾರದೇ ಹೋದನು. ಅವನು ವಿಮುಖನಾಗಿದ್ದುದನ್ನು ನೋಡಿ ಮಾದ್ರೀಪುತ್ರರು

ಮಹಾಗಿರಿಯ ಮೇಲೆ ಮೋಡಗಳು ಹೇಗೋ ಹಾಗೆ ಅವನ ಮೇಲೆ ಪುನಃ ಬಾಣಗಳ ಮಳೆಯನ್ನು ಸುರಿಸಿದರು. ಅನೇಕ ಸನ್ನತಪರ್ವ ಶರಗಳಿಂದ ಹೊಡೆಯಲ್ಪಟ್ಟ ಸೌಬಲನು ವೇಗವಾಗಿ ಹೋಗುವ ಕುದುರೆಗಳ ಸಹಾಯದಿಂದ ದ್ರೋಣನ ಸೇನೆಯನ್ನು ಬಿಟ್ಟು ಓಡಿಹೋದನು. ಆಗ ಘಟೋತ್ಕಚನು ರಾಕ್ಷಸ ಅಲಂಬುಸನನ್ನು ಯುದ್ಧದಲ್ಲಿ ಮಧ್ಯಮ ವೇಗವನ್ನು ಬಳಸಿ ಆಕ್ರಮಣಿಸಿದನು. ಅವರ ಯುದ್ಧವು ಹಿಂದೆ ರಾಮ-ರಾವಣರ ನಡುವೆ ನಡೆದ ಯುದ್ಧದಂತೆ ವಿಚಿತ್ರವಾಗಿ ಕಾಣುತ್ತಿತ್ತು. ಯುಧಿಷ್ಠಿರನು ಮದ್ರರಾಜನನ್ನು ಐನೂರು ಬಾಣಗಳಿಂದ ಹೊಡೆದು ಪುನಃ ಏಳರಿಂದ ಹೊಡೆದನು. ಆಗ ಅವರ ನಡುವೆ ಹಿಂದೆ ಶಂಬರ ಮತ್ತು ಅಮರರಾಜರ ನಡುವೆ ಮಹಾಯುದ್ಧವು ನಡೆದಂತೆ ಅತ್ಯದ್ಭುತ ಯುದ್ಧವು ನಡೆಯಿತು. ವಿವಿಂಶತಿ, ಚಿತ್ರಸೇನ ಮತ್ತು ವಿಕರ್ಣರು ಮಹಾಸೇನೆಗಳಿಂದ ಸುತ್ತುವರೆಯಲ್ಪಟ್ಟು ಭೀಮಸೇನನೊಂದಿಗೆ ಯುದ್ಧಮಾಡಿದರು.

## ದ್ರೋಣ-ಧೃಷ್ಟದ್ಯುಮ್ನರ ಯುದ್ಧ

ಆಗ ಆ ಲೋಮಹರ್ಷಣ ಸಂಗ್ರಾಮವು ಪ್ರಾರಂಭವಾಗಲು ಪಾಂಡವರು ಮೂರು ಭಾಗಗಳಾಗಿ ಒಡೆದಿದ್ದ ಕೌರವೇಯರ ಸೇನೆಯೊಂದಿಗೆ ಹೋರಾಡಿದರು. ಭೀಮಸೇನನು ಜಲಸಂಧನನ್ನು

ಎದುರಿಸಿದನು. ಯಧಿಷ್ಠಿರನು ಸೇನೆಯೊಂದಿಗೆ ಕೃತವರ್ಮನನ್ನು ಎದುರಿಸಿದನು. ಸೂರ್ಯನು ಕಿರಣಗಳನ್ನು ಪಸರಿಸುವಂತೆ ಬಾಣಗಳ ಮಳೆಯನ್ನು ಸುರಿಸುತ್ತಿದ್ದ ಧೃಷ್ಟದ್ಯುಮ್ನನು ದ್ರೋಣನನ್ನು ಆಕ್ರಮಣಿಸಿದನು. ಆಗ ತ್ವರೆಯಲ್ಲಿದ್ದ ಪರಸ್ಪರ ಸಂಕ್ರುದ್ಧರಾಗಿದ್ದ ಕುರುಗಳ ಮತ್ತು ಸೋಮಕರ ಸರ್ವಧನ್ವಿಗಳ ನಡುವೆ ಯುದ್ಧವು ನಡೆಯಿತು. ಹಾಗೆ ಮಹಾಭಯದ ವಿನಾಶವು ನಡೆಯುತ್ತಿರಲು ಎರಡೂ ಸೇನೆಗಳಲ್ಲಿ ಭಯಗೊಳ್ಳದೇ ಯುದ್ಧಮಾಡುತ್ತಿದ್ದರು. ಬಲೀ ದ್ರೋಣನು ಬಲವಂತನಾದ ಪಾಂಚಾಲಪುತ್ರನೊಂದಿಗೆ ಯುದ್ಧಮಾಡಿದನು. ಅವನು ಕಳುಹಿಸಿದ ಬಾಣಗಳ ಸಮೂಹಗಳು ಎಲ್ಲಕಡೆ ತುಂಬಿಕೊಳ್ಳಲು ಅದೊಂದು ಅದ್ಭುತವಾಯಿತು. ಕಮಲಗಳ ವನವನ್ನು ಎಲ್ಲಕಡೆಗಳಿಂದ ಧ್ವಂಸಗೊಳಿಸುವಂತೆ ದ್ರೋಣ ಮತ್ತು ಪಾಂಚಾಲ್ಯರು ಅನೇಕ ನರರ ಶಿರಗಳನ್ನು ಉರುಳಿಸಿದರು.

ಸೇನೆಗಳಲ್ಲಿ ಎಲ್ಲ ಕಡೆಗಳಲ್ಲಿ ವೀರರ ವಸ್ತ್ರಾಭರಣ ಶಸ್ತ್ರಗಳು, ಧ್ವಜ-ಕವಚ-ಆಯುಧಗಳು ಹರಡಿ ಬಿದ್ದಿದ್ದವು. ಬಂಗಾರದ ಕವಚಗಳು ರಕ್ತದಿಂದ ತೋಯ್ದು ಹೋಗಿ ಮಿಂಚಿನಿಂದ ಕೂಡಿದ ಮೇಘಗಳ ರಾಶಿಗಳಂತೆ ಕಾಣುತ್ತಿದ್ದವು. ಮಹಾರಥರು ತಾಲಮಾತ್ರದ ಚಾಪಗಳನ್ನು ಸೆಳೆಯುತ್ತಾ ಪತತ್ರಿಗಳಿಂದ ಯುದ್ಧದಲ್ಲಿ ಆನೆ-ಕುದುರೆ-

ನರರನ್ನು ಬೀಳಿಸುತ್ತಿದ್ದರು. ಮಹಾತ್ಮ ಶೂರರು ಪ್ರಹರಿಸುತ್ತಿದ್ದ ಖಡ್ಗ, ಗುರಾಣಿ, ಬಿಲ್ಲುಗಳು, ಶಿರಗಳು, ಕವಚಗಳು ಹರಡಿ ಬಿದ್ದಿದ್ದವು. ಆ ಪರಮ ಸಂಕುಲಯುದ್ಧದಲ್ಲಿ ಎಲ್ಲ ಕಡೆಗಳಲ್ಲಿ ಮೇಲೆ ಏಳುತ್ತಿದ್ದ ಅನೇಕ ಕಬಂಧಗಳು ಕಾಣುತ್ತಿದ್ದವು. ಹದ್ದುಗಳು, ಕಂಕಗಳು, ತೋಳಗಳು, ನರಿಗಳು, ಕಾಗೆಗಳು, ಜಂಬುಕಗಳು ಮತ್ತು ಇನ್ನೂ ಅನೇಕ ಮಾಂಸಾಹಾರಿಗಳು ಮಾಂಸಗಳನ್ನು ಭಕ್ಷಿಸುತ್ತಿರುವುದು, ರಕ್ತವನ್ನು ಕುಡಿಯುತ್ತಿರುವುದು, ಕೇಶಗಳನ್ನೂ, ಎಲುಬುಗಳನ್ನು ನೆಕ್ಕುತ್ತಿರುವುದು, ಅನೇಕ ಶರೀರಗಳಿಂದ ಶರೀರದ ಅವಯವಗಳನ್ನು ಕಿತ್ತು ಎಳೆಯುತ್ತಿರುವುದು, ನರರು-ಅಶ್ವ-ಗಜ ಸಮೂಹಗಳ ಶಿರಗಳನ್ನೂ ಎಳೆಯುತ್ತಿರುವುದು ಅಲ್ಲಲ್ಲಿ ಕಂಡಿತು. ಅಸ್ತ್ರವಿದರಾದ, ರಣದೀಕ್ಷೆಯ ದೀಕ್ಷಿತರಾದ, ರಣದಲ್ಲಿ ಜಯವನ್ನು ಬಂiಸುವ ಶರಧಾರಿಗಳು ಜೋರಾಗಿ ಯುದ್ಧ ಮಾಡಿದರು. ಯುದ್ಧರಂಗದಲ್ಲಿ ಇಳಿದಿದ್ದ ನರರು ರಣದಲ್ಲಿ ನಿನ್ನವರು ಬಹುವಿಧದ ವರಸೆಗಳಲ್ಲಿ ಖಡ್ಗಗಳನ್ನು ತಿರುಗಿಸುತ್ತಾ, ಋಷ್ಟಿ-ಶಕ್ತಿ-ಪ್ರಾಸ-ಶೂಲ-ತೋಮರ-ಪಟ್ಟಿಶ-ಗದೆ-ಪರಿಘ ಮತ್ತು ಇನ್ನೂ ಇತರ ಆಯುಧಗಳಿಂದ ಮತ್ತು ಭುಜಗಳಿಂದಲೂ ಅನ್ಯೋನ್ಯರನ್ನು ಕ್ರುದ್ಧರಾಗಿ ಸಂಹರಿಸಿದರು. ರಥಿಗಳು ರಥಿಗಳೊಡನೆ, ಅಶ್ವಾರೋಹಿಗಳು ಅಶ್ವಾರೋಹಿಗಳೊಂದಿಗೆ, ಮಾತಂಗರು ಶ್ರೇಷ್ಠ ಮಾತಂಗರೊಂಡನೆ, ಪದಾತಿಗಳು ಪದಾತಿಗಳೊಡನೆ, ಮತ್ತು ಇತರರು

ಉನ್ಮತ್ತರಾದವರಂತೆ ಕ್ರೀಡಾಂಗಣದಲ್ಲಿ ಸಂಚರಿಸುತ್ತಿರೋ ಎನ್ನುವವರಂತೆ ಅನ್ಯೋನ್ಯರನ್ನು ಕಿರುಚಾಡಿ ಕರೆದರು ಮತ್ತು ಅನ್ಯೋನ್ಯರನ್ನು ಸಂಹರಿಸಿದರು.

ಮರ್ಯಾದೆಗಳಿಲ್ಲದೇ ನಡೆಯುತ್ತಿರುವ ಆ ಯುದ್ಧದಲ್ಲಿ ಧೃಷ್ಟದ್ಯುಮ್ನನು ತನ್ನ ಕುದುರೆಗಳು ದ್ರೋಣನ ಕುದುರೆಗಳೊಡನೆ ಸೇರಿಸಿದನು. ಗಾಳಿಯ ವೇಗದಲ್ಲಿ ಹೋಗಬಲ್ಲ ಆ ಪಾರಿವಾಳದ ಬಣ್ಣದ ಕುದುರೆಗಳು ಕೆಂಪುಬಣ್ಣದ ಕುದುರೆಗಳೊಡನೆ ಸೇರಿ ರಣರಂಗದಲ್ಲಿ ಅವು ಮಿಂಚಿನಿಂದೊಡಗೂಡಿದ ಮೋಡಗಳಂತೆ ಚೆನ್ನಾಗಿ ಶೋಭಿಸಿದವು. ದ್ರೋಣನು ತುಂಬಾ ಹತ್ತಿರ ಬಂದುದನ್ನು ನೋಡಿದ ವೀರ ಧೃಷ್ಟದ್ಯುಮ್ನನು ಧನುಸ್ಸನ್ನು ಬಿಸುಟು ಖಡ್ಗ-ಗುರಾಣಿಗಳನ್ನು ತೆಗೆದುಕೊಂಡನು. ಪಾರ್ಷತನು ಈಶಾದಂಡವನ್ನು ಹಿಡಿದು ಹಾರಿ ದ್ರೋಣನ ರಥವನ್ನು ಪ್ರವೇಶಿಸಿ, ದುಷ್ಕರವಾದ ಕರ್ಮವನ್ನೇ ಮಾಡಿದನು. ನೊಗದ ಮೇಲೆ, ಸ್ವಲ್ಪ ಸಮಯ ನೊಗದ ಜೋಡಿನ ಮೇಲೆ ಮತ್ತು ಕುದುರೆಗಳ ಮೇಲೆ ನಿಂತುಕೊಂಡು ಸಂಚರಿಸುತ್ತಿದ್ದನು. ಕೆಂಪುಕುದುರೆಗಳ ಮೇಲೆ ನಿಂತು ಖಡ್ಗವನ್ನು ತಿರುಗಿಸುತ್ತಿದ್ದ ಅವನನ್ನು ಹೊಡೆಯಲು ದ್ರೋಣನಿಗೆ ಅವಕಾಶವೇ ಸಿಗಲಿಲ್ಲ. ಅದೊಂದು ಅದ್ಭುತವಾಗಿತ್ತು. ವನದಲ್ಲಿ ಮಾಂಸದ ಆಸೆಯಿಂದ ಗಿಡುಗವು ಹಾರಿ

ಎರಗುವಂತೆ ದ್ರೋಣನನ್ನು ಕೊಲ್ಲಲು ಬಯಸಿದ ಅವನ ವರ್ತನೆಯಾಗಿತ್ತು. ಆಗ ಬಲೀ ದ್ರೋಣನು ನೂರು ಶರಗಳಿಂದ ದ್ರುಪದಪುತ್ರನ ನೂರುಚಂದ್ರರಿದ್ದ ಗುರಾಣಿಯನ್ನೂ, ಹತ್ತು ಶರಗಳಿಂದ ಖಡ್ಗವನ್ನೂ, ಅರವತ್ನಾಲ್ಕು ಬಾಣಗಳಿಂದ ಕುದುರೆಗಳನ್ನೂ, ಭಲ್ಲಗಳೆರಡರಿಂದ ಧ್ವಜ-ಚತ್ರಗಳನ್ನು ಮತ್ತು ಇನ್ನೆರಡರಿಂದ ಅವನ ಪಾರ್ಷ್ಣಿಸಾರಥಿಗಳನ್ನೂ ಹೊಡೆದನು. ತ್ವರೆಮಾಡಿ ಇನ್ನೊಂದು ಜೀವಿತವನ್ನು ಅಂತ್ಯಗೊಳಿಸಬಲ್ಲ ಬಾಣವನ್ನು ವಜ್ರಧರನು ವಜ್ರವನ್ನು ಹೇಗೋ ಹಾಗೆ ಆಕರ್ಣಪೂರ್ಣಾಂತವಾಗಿ ಎಳೆದು ಪ್ರಯೋಗಿಸಿದನು. ಆ ಬಾಣವನ್ನು ಹದಿನಾಲ್ಕು ಬಾಣಗಳಿಂದ ತುಂಡರಿಸಿ ಸಾತ್ಯಕಿಯು ಆಚಾರ್ಯಮುಖ್ಯನ ಹಿಡಿತದಿಂದ ಧೃಷ್ಟದ್ಯುಮ್ನನನ್ನು ಬಿಡುಗಡೆಗೊಳಿಸಿದನು.

ಸಿಂಹದಿಂದ ಹಿಡಿಯಲ್ಪಟ್ಟಿದ್ದ ಜಿಂಕೆಯನ್ನು ಹೇಗೋ ಹಾಗೆ ಆ ಶಿನಿಪುಂಗವನು ಪಾಂಚಾಲ್ಯನನ್ನು ದ್ರೋಣನಿಂದ ಬಿಡುಗಡೆಗೊಳಿಸಿದನು. ಮಹಾಹವದಲ್ಲಿ ಪಾಂಚಾಲ್ಯನನ್ನು ಸಾತ್ಯಕಿಯು ರಕ್ಷಿಸಿದುದನ್ನು ನೋಡಿ ದ್ರೋಣನು ತ್ವರೆಮಾಡಿ ಇಪ್ಪತ್ತಾರು ಬಾಣಗಳಿಂದ ಅವನನ್ನು ಹೊಡೆದನು. ಆಗ ಶಿನಿಯ ಪೌತ್ರನು ಸೃಂಜಯರನ್ನು ನುಂಗುವಂತಿದ್ದ ದ್ರೋಣನ ಎದೆಗೆ ಗುರಿಯಿಟ್ಟು

ನಿಶಿತವಾದ ಇಪ್ಪತ್ತಾರು ಬಾಣಗಳಿಂದ ತಿರುಗಿ ಹೊಡೆದನು. ದ್ರೋಣನು ಸಾತ್ವತನೊಡನೆ ಯುದ್ಧದಲ್ಲಿ ತೊಡಗಲು ವಿಜಯೇಚ್ಛಿಗಳಾದ ಪಾಂಚಾಲ ರಥರು ಧೃಷ್ಟದ್ಯುಮ್ನನನ್ನು ಬೇಗನೆ ಬಿಡಿಸಿದರು.

## ದ್ರೋಣ-ಸಾತ್ಯಕಿಯರ ಯುದ್ಧ

ಆಗ ಕ್ರೋಧವೇ ವಿಷವಾಗುಳ್ಳ, ಧನುಸ್ಸೇ ತೆರೆದ ಬಾಯಿಯಂತಿರುವ, ತೀಕ್ಷ್ಣ ಬಾಣಗಳೇ ಹಲ್ಲುಗಳಾಗುಳ್ಳ, ನಿಶಿತ ನಾರಾಚಗಳೇ ದವಡೆಗಳಾಗುಳ್ಳ, ಕೋಪ-ಅಸಹನೆಗಳಿಂದ ಕಣ್ಣು ಕೆಂಪಾಗಿರುವ ದ್ರೋಣನು ಮಹಾ ಹೆಬ್ಬಾವಿನಂತೆ ನಿಟ್ಟುಸಿರು ಬಿಡುತ್ತಾ ಪರ್ವತಗಳನ್ನೂ ದಾಟಿ ಆಕಾಶದಲ್ಲಿ ಹಾರಿಹೋಗಬಲ್ಲ ಮಹಾವೇಗವುಳ್ಳ ಕೆಂಪು ಕುದುರೆಗಳೊಂದಿಗೆ ಮುದಿತನಾಗಿ ಎಲ್ಲ ಕಡೆ ರುಕ್ಮಪುಂಖ ಶರಗಳನ್ನು ಪ್ರಯೋಗಿಸುತ್ತಾ ಯುಯುಧಾನನನ್ನು ಆಕ್ರಮಣಿಸಿದನು. ಶರಗಳ ಪತನವೇ ಮಹಾಮಳೆಯಂತಿದ್ದ, ರಥಘೋಷವೇ ಗುಡುಗಿನಂತಿರುವ, ಬಿಲ್ಲಿನ ಟೇಂಕಾರವೇ ಸಿಡುಲಿನಂತಿರುವ, ಅನೇಕ ನಾರಾಚಗಳೇ ಮಿಂಚಿನಂತಿರುವ, ಶಕ್ತಿ-ಖಡ್ಗಗಳೇ ಮಿಂಚಿನ ಮಾಲೆಗಳಂತಿರುವ, ಕ್ರೋಧವೆಂಬ ವೇಗದಿಂದ ಹುಟ್ಟಿದ, ಕುದುರೆಗಳೆಂಬ ಗಾಳಿಯಿಂದ ಪ್ರಚೋದಿಸಲ್ಪಟ್ಟ

ದ್ರೋಣನೆಂಬ ಮಹಾಮೇಘವನ್ನು ತಡೆಯಲಾಗುತ್ತಿರಲಿಲ್ಲ. ಅವನು ಹೀಗೆ ಮೇಲೇರಿ ಬರುತ್ತಿರುವುದನ್ನು ನೋಡಿ ಶೂರ ಶೈನೇಯನು ಜೋರಾಗಿ ನಕ್ಕು ಸೂತನಿಗೆ ಹೇಳಿದನು: “ಈತನು ತನ್ನ ಕರ್ಮಗಳನ್ನು ಬಿಟ್ಟಿರುವ ಕ್ರೂರ ಬ್ರಾಹ್ಮಣನಲ್ಲವೇ? ದುಃಖ-ಭಯಗಳಿಂದ ರಾಜ ಧಾರ್ತರಾಷ್ಟ್ರನ ಆಶ್ರಯದಲ್ಲಿರುವ, ರಾಜಪುತ್ರರ ಆಚಾರ್ಯ, ಸತತವೂ ತಾನೇ ಶೂರನೆಂದು ತಿಳಿದುಕೊಂಡಿರುವ ಅವನ ಬಳಿ ಶೀಘ್ರವಾದ ಕುದುರೆಗಳನ್ನು ಸಂತೋಷದಿದ ಕೊಂಡೊಯ್ಯಿ!”

ಆಗ ಬೆಳ್ಳಿಯ ಬಣ್ಣದ, ಗಾಳಿಯ ವೇಗವುಳ್ಳ, ಮಾಧವನ ಉತ್ತಮ ಕುದುರೆಗಳನ್ನು ದ್ರೋಣನ ಎದುರಿಗೆ ಶೀಘ್ರವಾಗಿ ಕೊಂಡೊಯ್ದನು. ಬಾಣಗಳ ಜಾಲಗಳಿಂದ ಆವೃತವಾಗಿ ಘೋರ ಅಂಧಕಾರವು ಕವಿಯಲು ಇನ್ನೊಬ್ಬರಿಗೆ ಕಾಣದಂತೆ ಆ ಶೂರರ ಯುದ್ಧವು ನಡೆಯಿತು. ಆಗ ಅಸ್ತ್ರವಿದರಾದ ನರಸಿಂಹರಾದ ದ್ರೋಣ-ಸಾತ್ವತರು ಸುರಿಸುತ್ತಿದ್ದ ಶರವೃಷ್ಟಿಗಳಲ್ಲಿ ವ್ಯತ್ಯಾಸವೇ ಕಾಣುತ್ತಿರಲಿಲ್ಲ. ಮಳೆಯ ನೀರು ಬೀಳುವಂತೆ ಬಾಣಗಳು ಬೀಳುವ ಶಬ್ಧವು ಶಕ್ರನು ಬಿಡುಗಡೆ ಮಾಡಿದ ಮಿಂಚಿನ ಶಬ್ಧದಂತೆ ಕೇಳುತ್ತಿತ್ತು. ನಾರಾಚಗಳೇ ಬಹುವಾಗಿದ್ದ ಶರಗಳ ರೂಪವು ಸರ್ಪಗಳ ವಿಷದ ಹಲ್ಲುಗಳಂತಿದ್ದವು. ಅವರ ಧನುಸ್ಸಿನ ಸುದಾರುಣ ಟೇಂಕಾರ ಶಬ್ಧವು ವಜ್ರದಿಂದ ಹೊಡೆಯಲ್ಪಟ್ಟ

ಶೈಲಶೃಂಗಗಳಲ್ಲಿ ಉಂಟಾಗುವ ಶಬ್ಧಕ್ಕೆ ಸಮನಾಗಿತ್ತು. ಇಬ್ಬರ ರಥಗಳೂ, ಕುದುರೆಗಳೂ ಮತ್ತು ಸಾರಥಿಯರೂ ಅವರು ಬಿಡುತ್ತಿದ್ದ ರುಕ್ಮಪುಂಖದ ಶರಗಳಿಂದ ಹೊಡೆಯಲ್ಪಟ್ಟು ವಿಚಿತ್ರರೂಪವನ್ನು ತಾಳಿದ್ದವು. ಪೊರೆಕಳಚಿದ ಸರ್ಪಗಳಂತೆ ನಿರ್ಮಲವಾಗಿದ್ದ ಮತ್ತು ನೇರವಾಗಿ ಹೋಗುವ ನಾರಾಚಗಳ ಪರಸ್ಪರ ಸಂಘರ್ಷವು ಮಹಾ ಭಯಂಕರವಾಗಿತ್ತು.

ಇಬ್ಬರೂ ವಿಜಯಾಕಾಂಕ್ಷಿಗಳ ಚತ್ರಗಳು ಬಿದ್ದವು, ಧ್ವಜಗಳೂ ಬಿದ್ದವು. ಇಬ್ಬರ ಅಂಗಾಂಗಗಳೂ ರಕ್ತದಿಂದ ತೋಯ್ದುಹೋಗಿದ್ದವು. ಜೀವವನ್ನು ಅಂತ್ಯಗೊಳಿಸಬಲ್ಲ ಶರಗಳಿಂದ ಅನ್ಯೋನ್ಯರನ್ನು ಹೊಡೆಯುತ್ತಿದ್ದ ಅವರ ದೇಹಗಳಿಂದ ಆನೆಗಳಿಂದ ಸುರಿಯುವ ಮದೋದಕದಂತೆ ರಕ್ತವು ಸುರಿಯುತ್ತಿತ್ತು. ಗರ್ಜನ, ಕೂಗುಗಳೂ ಶಂಖದುಂದುಭಿಗಳ ನಿಸ್ವನವೂ ನಿಂತಿತು. ಯಾರೂ ಶಬ್ಧವನ್ನು ಮಾಡಲಿಲ್ಲ. ಸೇನೆಗಳು ಮತ್ತು ಯೋಧರು ಯುದ್ಧವನ್ನು ನಿಲ್ಲಿಸಿ ಸುಮ್ಮನಾದರು. ಕುತೂಹಲದಿಂದ ಜನರು ಅವರಿಬ್ಬರ ದ್ವೈರಥಯುದ್ಧವನ್ನು ನೋಡತೊಡಗಿದರು. ರಥಿಗಳು, ಗಜಾರೋಹಿಗಳು, ಅಶ್ವಾರೋಹಿಗಳು ಮತ್ತು ಪದಾತಿಗಳು ಆ ಇಬ್ಬರು ರಥರ್ಷಭರನ್ನೂ ಸುತ್ತುವರೆದು ಎವೆಯಿಕ್ಕದೇ ನೋಡುತ್ತಿದ್ದರು. ಗಜಸೇನೆಗಳೂ ಹಾಗೆಯೇ ಅಶ್ವಸೇಸೆಗಳೂ

ತಟಸ್ಥವಾದವು. ಹಾಗೆಯೇ ರಥವಾಹಿನಿಗಳೂ ಇನ್ನೊಂದು ವ್ಯೂಹವಾಗಿ ವ್ಯವಸ್ಥಿತಗೊಂಡವು. ಮುಕ್ತಾವಿದ್ರುಮಚಿತ್ರಗಳಿಂದ, ಮಣಿಕಾಂಚನಭೂಷಣಗಳಿಂದ, ಬಣ್ಣಬಣ್ಣದ ಧ್ವಜ-ಆಭರಣಗಳಿಂದ, ಬಂಗಾರದ ಕವಚಗಳಿಂದ, ವೈಜಯಂತೀ ಪತಾಕೆಗಳಿಂದ, ಪರಿಸ್ತೋಮಗಳಿಗೆ ಹಾಸಿದ ಕಂಬಳಿಗಳಿಂದ, ಹೊಳೆಯುತ್ತಿದ್ದ ನಿಶಿತ ಶಸ್ತ್ರಗಳಿಂದ, ಕುದುರೆಗಳ ನೆತ್ತಿಯ ಮೇಲೆ ಕಟ್ಟಿದ್ದ ಬಂಗಾರದ ಮತ್ತು ಬೆಳ್ಳಿಯ ಪ್ರಕೀರ್ಣಗಳಿಂದ, ಆನೆಗಳ ಕುಂಭಮಾಲೆಗಳಿಂದ, ದಂತಾಭರಣಗಳಿಂದ ಕೂಡಿದ ಸೇನೆಗಳು ಬೇಸಗೆಯ ಕೊನೆಯಲ್ಲಿ ಬಲಾಕ ಪಕ್ಷಿಗಳ ಮತ್ತು ಮಿಂಚಿನ ಹುಳುಗಳಿಂದ ಕೂಡಿದ ಮೇಘಗಳ ಸಾಲುಗಳಂತೆ ಕಾಣುತ್ತಿದ್ದವು. ಮಹಾತ್ಮ ದ್ರೋಣನ ಮತ್ತು ಯುಯುಧಾನನ ಯುದ್ಧವನ್ನು ನೋಡಲು ಕೌರವರು ಮತ್ತು ಯುಧಿಷ್ಠಿರನ ಕಡೆಯವರು ಮತ್ತು ವಿಮಾನಗಳಲ್ಲಿ ಬ್ರಹ್ಮ-ಶಕ್ರರ ನಾಯಕತ್ವದಲ್ಲಿ ದೇವತೆಗಳು, ಸಿದ್ಧ-ಚಾರಣ ಸಮೂಹಗಳು ಮತ್ತು ವಿದ್ಯಾಧರರು, ಮಹಾ ನಾಗಗಳು ನಿಂತರು.

ಆ ಪುರುಷಸಿಂಹರ ಮುಂದೆ ಹೋಗುವ ಹಿಂದೆಬರುವ ವಿವಿಧ ರೀತಿಗಳನ್ನೂ, ವಿಚಿತ್ರವಾಗಿ ಬಾಣಗಳನ್ನು ಪ್ರಯೋಗಿಸುವುದನ್ನೂ, ಶಸ್ತ್ರಗಳಿಂದ ಗಾಯಗೊಳಿಸುತ್ತಿರುವುದನ್ನೂ ನೋಡಿ

ವಿಸ್ಮಯವುಂಟಾಯಿತು. ಆ ಮಹಾಬಲಶಾಲಿಗಳಾದ ದ್ರೋಣ-ಸಾತ್ಯಕಿಯರು ತಮ್ಮ ಕೈಚಳಕವನ್ನು ಪ್ರದರ್ಶಿಸುತ್ತಾ ಅನ್ಯೋನ್ಯರನ್ನು ಶರಗಳಿಂದ ಹೊಡೆದರು. ಆಗ ಮಹಾದ್ಯುತಿ ದಾಶಾರ್ಹನು ಸುದೃಢ ಪತ್ರಿಗಳಿಂದ ದ್ರೋಣನ ಶರಗಳನ್ನೂ ಧನುಸ್ಸನ್ನೂ ಕತ್ತರಿಸಿದನು. ನಿಮಿಷಮಾತ್ರದಲ್ಲಿ ಭಾರದ್ವಾಜನು ಇನ್ನೊಂದು ಧನುಸ್ಸನ್ನು ಸಿದ್ಧಗೊಳಿಸಲು ಸಾತ್ಯಕಿಯು ಅದನ್ನೂ ತುಂಡರಿಸಿದನು. ಆಗ ಪುನಃ ತ್ವರೆಮಾಡಿ ದ್ರೋಣನು ಧನುಸ್ಸನ್ನು ಕೈಗೆತ್ತಿಕೊಂಡು ಸಜ್ಜುಗೊಳಿಸಲು, ಪುನಃ ಅದನ್ನು ನಿಶಿತ ಶರಗಳಿಂದ ತುಂಡುಮಾಡುತ್ತಿದ್ದನು. ಯುಯುಧಾನನ ಅತಿಮಾನುಷ ಕರ್ಮವನ್ನು ನೋಡಿ ದ್ರೋಣನು ಮನಸ್ಸಿನಲ್ಲಿಯೇ ಚಿಂತಿಸಿದನು:

> “ಪುರುಷವ್ಯಾಘ್ರರಾದ ರಾಮ, ಕಾರ್ತವೀರ್ಯ, ಧನಂಜಯ ಮತ್ತು ಭೀಷ್ಮರಲ್ಲಿರುವ ಅಸ್ತ್ರಬಲವು ಈ ಸಾತ್ವತಶ್ರೇಷ್ಠನಲ್ಲಿಯೂ ಇದೆ.”

ವಾಸವನದಂತಿದ ಅವನ ಹಸ್ತ ಚಳಕ ಮತ್ತು ವಿಕ್ರಮವನ್ನು ನೋಡಿ ದ್ವಿಜಸತ್ತಮ ದ್ರೋಣನು ಮನಸ್ಸಿನಲ್ಲಿಯೇ ಗೌರವಿಸಿದನು. ವಾಸವನೊಂದಿಗೆ ದೇವತೆಗಳೂ ಆ ಅಸ್ತ್ರವಿದನ ಶ್ರೇಷ್ಠತೆಯಿಂದ ತೃಪ್ತರಾದರು. ಆ ಶೀಘ್ರಕಾರಿ ಯುಯುಧಾನನ ಹಸ್ತ ಲಘುತ್ವವನ್ನು ಈ

ಮೊದಲು ದೇವ-ಗಂಧರ್ವ-ಸಿದ್ಧ-ಚಾರಣ ಸಂಘಗಳು ನೋಡಿರಲಿಲ್ಲ. ಅವರಿಗೆ ದ್ರೋಣನ ಪರಾಕ್ರಮವು ತಿಳಿದಿತ್ತು. ಆಗ ದ್ರೋಣನು ಅಸ್ತ್ರಗಳಿಂದ ಯುದ್ಧಮಾಡತೊಡಗಿದನು. ಅವನ ಅಸ್ತ್ರಗಳನ್ನು ಅಸ್ತ್ರಗಳಿಂದ ಉತ್ತರಿಸಿ ಆ ಸಾತ್ಯಕಿಯು ನಿಶಿತ ಬಾಣಗಳಿಂದ ಹೊಡೆದನು. ಅದೊಂದು ಅದ್ಭುತವಾಗಿತ್ತು. ರಣದಲ್ಲಿ ಅವನ ಆ ಅತಿಮಾನುಷಕರ್ಮವನ್ನು ನೋಡಿ ಕೌರವ ಸೇನೆಯಲ್ಲಿದ್ದ ಯೋಗಜ್ಞರು ಗೌರವಿಸಿದರು. ದ್ರೋಣನು ಯಾವ ಅಸ್ತ್ರವನ್ನು ಪ್ರಯೋಗಿಸುತ್ತಿದ್ದನೋ ಅದೇ ಅಸ್ತ್ರವನ್ನು ಸಾತ್ಯಕಿಯೂ ಬಳಸುತ್ತಿದ್ದನು. ಅದರಿಂದ ಆಚಾರ್ಯನು ಸಂಭ್ರಾಂತನಾಗಿ ಯುದ್ಧಮಾಡಿದನು. ಆಗ ಆ ಧನುರ್ವೇದದ ಪಾರಂಗತನು ಕ್ರುದ್ಧನಾಗಿ ಯುಯುಧಾನನ ವಧೆಗಾಗಿ ದಿವ್ಯ ಅಸ್ತ್ರವನ್ನು ಪ್ರಕಟಿಸಿದನು.

ಆ ಮಹಾಘೋರವಾದ, ಶತ್ರುವನ್ನು ಕೊಲ್ಲಬಲ್ಲ ಆಗ್ನೇಯಾಸ್ತ್ರವನ್ನು ನೋಡಿ ಮಹೇಷ್ವಾಸ ಸಾತ್ಯಕಿಯು ದಿವ್ಯ ವರುಣಾಸ್ತ್ರವನ್ನು ಪ್ರಕಟಿಸಿದನು. ಆ ದಿವ್ಯಾಸ್ತ್ರಗಳನ್ನು ಧರಿಸಿದುದನ್ನು ನೋಡಿ ಮಹಾ ಹಾಹಾಕಾರವುಂಟಾಯಿತು. ಆಕಾಶದಲ್ಲಿ ಯಾವುವೂ, ಆಕಾಶಗಳಲ್ಲಿ ಸಂಚರಿಸುವವರೂ, ಸಂಚರಿಸುತ್ತಿರಲಿಲ್ಲ. ಆ ವಾರುಣ ಮತ್ತು ಆಗ್ನೇಯಾಸ್ತ್ರಗಳ ಬಾಣಗಳು ಒಂದುಗೂಡಿದಾಗ ಅವು

ನಿಷ್ಫಲಗೊಂಡವು. ಆಗ ಭಾಸ್ಕರನೂ ಇಳಿಮುಖನಾದನು. ಆಗ ರಾಜಾ ಯುಧಿಷ್ಠಿರ, ಪಾಂಡವ ಭೀಮಸೇನ, ನಕುಲ ಸಹದೇವರು ಸಾತ್ಯಕಿಯನ್ನು ಸುತ್ತುವರೆದು ರಕ್ಷಿಸಿದರು. ಧೃಷ್ಟದ್ಯುಮ್ನ ಮುಖ್ಯರೊಂದಿಗೆ ವಿರಾಟನೂ, ಜೊತೆಯಲ್ಲಿ ಕೇಕಯನೂ, ಮತ್ಸ್ಯರೂ, ಶಾಲ್ವೇಯ ಸೇನೆಗಳೂ ದ್ರೋಣನ ಕಡೆ ವೇಗವಾಗಿ ಮುಂದುವರಿದರು. ದುಃಶಾಸನನನ್ನು ಮುಂದಿರಿಸಿಕೊಂಡು ಸಹಸ್ರ ರಾಜಪುತ್ರರು ದ್ರೋಣನ ಬಳಿ ಧಾವಿಸಿ ಬಂದು ತಮ್ಮವರಿಂದ ಸುತ್ತುವರೆದರು. ಆಗ ಕೌರವ ಮತ್ತು ಪಾಂಡವ ಧನ್ವಿಗಳ ನಡುವೆ ಯುದ್ಧವು ನಡೆಯಿತು. ಶರಜಾಲಗಳಿಂದ ಮೇಲೆದ್ದ ಧೂಳು ಲೋಕಗಳನ್ನು ಆವರಿಸಿತು. ಧೂಳಿನಿಂದ ಎಲ್ಲವೂ ಮುಚ್ಚಿಹೋಗಿ ಏನೂ ತಿಳಿಯದಂತಾಯಿತು. ಸೇನೆಗಳು ಮರ್ಯಾದೆಯನ್ನು ಕಳೆದುಕೊಂಡು ಯುದ್ಧವು ನಡೆಯಿತು.

## ಅರ್ಜುನನಿಂದ ವಿಂದಾನುವಿಂದರ ವಧೆ

ಆದಿತ್ಯನು ಅಲ್ಲಿ ಮರಳಿ ಹೋಗುತ್ತಿರಲು, ಮೇಲೆದ್ದ ಧೂಳಿನಿಂದ ಸೂರ್ಯನ ರಶ್ಮಿಯು ಕುಂದಿತವಾಗುತ್ತಿರಲು, ಸೈನಿಕರು ನಿಂತಿದ್ದರು, ಯುದ್ಧಮಾಡುತ್ತಿದ್ದರು, ಜಯವನ್ನು ಬಯಸಿ ಪುನಃ ಹಿಂದಿರುಗಿ ಬರುತ್ತಿದ್ದರು. ಹಾಗೆ ದಿನವು ಮೆಲ್ಲಗೆ ಕಳೆಯತೊಡಗಿತು. ಆ ಸೇನೆಗಳು ಜಯವನ್ನು ಬಯಸಿ ಹೋರಾಡುತ್ತಿರಲು ಅರ್ಜುನ ಮತ್ತು

ವಾಸುದೇವರು ಸೈಂಧವನ ಕಡೆ ಹೊರಟರು. ಕೌಂತೇಯನು ನಿಶಿತ ಶರಗಳಿಂದ ರಥಕ್ಕೆ ಬೇಕಾದಷ್ಟು ಮಾರ್ಗವನ್ನು ಮಾಡಿಕೊಡುತ್ತಿದ್ದನು. ಆ ಮಾರ್ಗದಲ್ಲಿ ಜನಾರ್ದನನು ಹೋಗುತ್ತಿದ್ದನು. ಎಲ್ಲೆಲ್ಲಿ ಮಹಾತ್ಮ ಪಾಂಡವನ ರಥವು ಹೋಗುತ್ತಿತ್ತೋ ಅಲ್ಲಲ್ಲಿ ಕೌರವ ಸೇನೆಯು ಸೀಳಿ ಹೋಗುತ್ತಿತ್ತು. ದಾಶಾರ್ಹನು ತನ್ನ ರಥಶಿಕ್ಷಣವನ್ನು ತೋರಿಸಿದನು. ಉತ್ತಮ, ಅಧಮ ಮತ್ತು ಮಧ್ಯಮ ಮಂಡಲಗಳನ್ನು ಪ್ರದರ್ಶಿಸಿದನು. ಹೋಗುತ್ತಿರುವ ರಥದಲ್ಲಿ ನಿಂತ ಅರ್ಜುನನು ತನ್ನ ನಾಮಾಂಕಿತವಾಗಿದ್ದ, ಹಿತ್ತಾಳೆಯ, ಕಾಲಜ್ವಲನದಂತಿರುವ, ಸ್ನಾಯುಗಳಿಂದ ಬಂಧಿಸಲ್ಪಟ್ಟ, ನೇರವಾದ, ದಪ್ಪನಾದ, ದೂರಹೋಗಬಲ್ಲ, ಬಿದಿರು ಅಥವಾ ಉಕ್ಕಿನಿಂದ ಮಾಡಲ್ಪಟ್ಟ, ವಿವಿಧ ಶತ್ರುಗಳ ಜೀವವನ್ನು ತೆಗೆದ, ಪಕ್ಷಿಗಳೊಡನೆ ಯುದ್ಧದಲ್ಲಿ ಪ್ರಾಣಿಗಳ ರಕ್ತವನ್ನು ಕುಡಿಯುವ ಶರಗಳನ್ನು ಕ್ರೋಶಮಾತ್ರ ದೂರ ಪ್ರಯೋಗಿಸಲು ಅವುಗಳು ಅವನ ರಥವು ಆ ಕ್ರೋಶ ದೂರವನ್ನು ದಾಟಿ ಬರುವಷ್ಟರಲ್ಲಿ ಶತ್ರುಗಳನ್ನು ಸಂಹರಿಸುತ್ತಿದ್ದವು. ಗರುಡ-ಮಾರುತರಂತೆ ವೇಗವುಳ್ಳ ಸಾಧುವಾಹನಗಳಾqದ ಕುದುರೆಗಳನ್ನು ಹೃಷೀಕೇಶನು ಹೇಗೆ ಓಡಿಸುತ್ತಿದ್ದನೆಂದರೆ ಅದರಿಂದ ಇಡೀ ಜಗತ್ತನ್ನೇ ವಿಸ್ಮಯಗೊಳಿಸಿತು. ಅದರಂತೆ ಸೂರ್ಯನ ರಥವಾಗಲೀ ಇಂದ್ರನ, ರುದ್ರನ ಅಥವಾ ವೈಶ್ರವಣನ ರಥವಾಗಲೀ ಓಡುವುದಿಲ್ಲ. ಹೇಗೆ ಅರ್ಜುನನ ರಥವು

ಮನಸ್ಸಿನ ಅಭಿಪ್ರಾಯಗಳಷ್ಟೇ ಶೀಘ್ರವಾಗಿ ಹೋಗುತ್ತಿತ್ತೋ ಹಾಗೆ ಬೇರೆ ಯಾರ ರಥವೂ ಈ ಹಿಂದೆ ರಣದಲ್ಲಿ ಓಡುತ್ತಿರಲಿಲ್ಲ. ರಣವನ್ನು ಪ್ರವೇಶಿಸಿ ಪರವೀರಹ ಕೇಶವನು ಸೇನೆಗಳ ಮಧ್ಯದಲ್ಲಿ ತಕ್ಷಣವೇ ಕುದುರೆಗಳನ್ನು ಪ್ರಚೋದಿಸಿದನು. ಆಗ ಆ ರಥಸಮೂಹಗಳ ಮಧ್ಯೆ ಬಂದು ಆ ಉತ್ತಮ ಕುದುರೆಗಳಿಗೆ ಹಸಿವು-ಬಾಯಾರಿಕೆ-ಬಳಲಿಕೆಗಳಿಂದ ರಥವನ್ನು ಹೊರಲು ಕಷ್ಟವಾಯಿತು. ಅವು ಅನೇಕ ಶಸ್ತ್ರಗಳಿಂದ, ಅನೇಕ ಯುದ್ಧಶೌಂಡರಿಂದ ಗಾಯಗೊಂಡಿದ್ದವು. ಪುನಃ ಪುನಃ ವಿಚಿತ್ರ ಮಂಡಲಗಳಲ್ಲಿ ತಿರುಗಿ ಬಳಲಿದ್ದವು. ಹತವಾಗಿದ್ದ ಸಾವಿರಾರು ಕುದುರೆ-ಆನೆ-ರಥ-ನರರ ಹೆಣಗಳ ರಾಶಿಗಳನ್ನು ಹಾರಿ ಓಡಿ ಬಳಲಿದ್ದವು.

ಈ ಮಧ್ಯದಲ್ಲಿ ಬಳಲಿದ ಕುದುರೆಗಳಿದ್ದ ಪಾಂಡವನನ್ನು ವೀರರಾದ ಅವಂತಿಯ ಸಹೋದರರು ಸೇನೆಗಳೊಂದಿಗೆ ಆಕ್ರಮಣಿಸಿದರು. ಮುದಾನ್ವಿತರಾದ ಅವರು ಅರ್ಜುನನನ್ನು ಅರವತ್ನಾಲ್ಕು ಮತ್ತು ಜನಾರ್ದನನನ್ನು ಎಪ್ಪತ್ತು ಬಾಣಗಳಿಂದ ಹಾಗೂ ನೂರರಿಂದ ಕುದುರೆಗಳನ್ನು ಹೊಡೆದರು. ಅರ್ಜುನನು ಕ್ರುದ್ಧನಾಗಿ ಒಂಭತ್ತು ಮರ್ಮಭೇದಿ ನತಪರ್ವಗಳಿಂದ ಅವರನ್ನು ಹೊಡೆದನು. ಆಗ ಅವರಿಬ್ಬರೂ ಕ್ರೋಧಿತರಾಗಿ ಶರ ಸಮೂಹಗಳಿಂದ ಕೇಶವನೊಂದಿಗೆ

ಬೀಭತ್ಸುವನ್ನು ಮುಚ್ಚಿ, ಸಿಂಹನಾದಗೈದರು. ಶ್ವೇತವಾಹನನಾದರೋ ಕೂಡಲೇ ಭಲ್ಲಗಳೆರಡರಿಂದ ಅವರ ಬಣ್ಣದ ಧನುಸ್ಸುಗಳನ್ನೂ ಕನಕೋಜ್ಜ್ವಲ ಧ್ವಜಗಳನ್ನೂ ಕತ್ತರಿಸಿದನು. ಆಗ ಬೇರೆ ಧನುಸ್ಸುಗಳನ್ನು ತೆಗೆದು ಕೊಂಡು, ತುಂಬಾ ಕ್ರುದ್ಧರಾಗಿ, ಪಾಂಡವನನ್ನು ಶರಗಳಿಂದ ಹೊಡೆಯತೊಡಗಿದರು. ಅವರ ಮೇಲೆ ತುಂಬಾ ಸಂಕ್ರುದ್ಧನಾದ ಪಾಂಡುನಂದನ ಧನಂಜಯನು ಬೇಗನೆ ಎರಡು ಶರಗಳಿಂದ ಅವರ ಧನುಸ್ಸುಗಳನ್ನು ಮತ್ತೊಮ್ಮೆ ತುಂಡರಿಸಿದನು. ಅನಂತರ ಕೂಡಲೇ ಹೇಮಪುಂಖವುಳ್ಳ, ಶಿಲಾಶಿತ ವಿಶಿಖಗಳಿಂದ ಅವರ ಕುದುರೆಗಳನ್ನೂ, ಪದಾತಿಗಳೊಂದಿಗೆ ಅವರ ಪಾರ್ಷ್ಣಿಸಾರಥಿಗಳನ್ನೂ ಸಂಹರಿಸಿದನು.

ಕ್ಷುರಪ್ರದಿಂದ ಹಿರಿಯವನ ಶಿರವನ್ನು ಕಾಯದಿಂದ ಬೇರ್ಪಡಿಸಲು ಅವನು ಭಿರುಗಾಳಿಗೆ ಸಿಕ್ಕ ವೃಕ್ಷದಂತೆ ಹತನಾಗಿ ಭೂಮಿಯ ಮೇಲೆ ಬಿದ್ದನು. ವಿಂದನು ಹತನಾದುದನ್ನು ನೋಡಿ ಮಹಾರಥ ಅನುವಿಂದನು ಅಣ್ಣನ ವಧೆಯನ್ನು ನೆನೆದುಕೊಳ್ಳುತ್ತಾ, ಕುದುರೆಗಳನ್ನು ಕಳೆದುಕೊಂಡಿದ್ದ ರಥದಿಂದ ಇಳಿದು ಗದೆಯನ್ನು ಹಿಡಿದು ಗದೆಯೊಂದಿಗೆ ನೃತ್ಯವಾಡುತ್ತಿರುವನೋ ಎನ್ನುವಂತೆ ಸಂಗ್ರಾಮದಲ್ಲಿ ಮುನ್ನುಗ್ಗಿದ್ದನು. ಅನುವಿಂದನು ಕೋಪಗೊಂಡು ಗದೆಯಿಂದ ಮಧುಸೂದನನ ಹಣೆಯ ಮೇಲೆ ಹೊಡೆಯಲು ಅವನು ಮೈನಾಕ

ಪರ್ವತದಂತೆ ಹಂದಾಡಲಿಲ್ಲ. ಅರ್ಜುನನು ಆರು ಶರಗಳಿಂದ ಅವನ ಕುತ್ತಿಗೆಯನ್ನೂ, ಪಾದಗಳೆರಡನ್ನೂ, ಭುಜಗಳೆರಡನ್ನೂ ಮತ್ತು ಶಿರವನ್ನೂ ಕತ್ತರಿಸಲು ಅವನು ಪುಡಿಪುಡಿಯಾದ ಪರ್ವತದಂತೆ ತುಂಡಾಗಿ ಕೆಳಗೆ ಬಿದ್ದನು. ಅವರು ಹತರಾದುದನ್ನು ನೋಡಿ ಅವರ ಪದಾನುಗರು ಸಂಕ್ರುದ್ಧರಾಗಿ ನೂರಾರು ಶರಗಳನ್ನು ಎರಚುತ್ತಾ ಆಕ್ರಮಣಿಸಿದರು. ಅವರನ್ನು ಕೂಡಲೇ ಶರಗಳಿಂದ ಸಂಹರಿಸಿ ಛಳಿಗಾಲದ ಕೊನೆಯಲ್ಲಿ ಅರಣ್ಯವನ್ನು ದಹಿಸಿ ಪ್ರಜ್ವಲಿಸುವ ಅಗ್ನಿಯಂತೆ ಅರ್ಜುನನು ವಿರಾಜಿಸಿದನು. ಕಷ್ಟದಿಂದ ಅವರ ಸೇನೆಯನ್ನು ಅತಿಕ್ರಮಿಸಿ ಮೋಡದ ಆವರಣವನ್ನು ಒಡೆದು ಉದಯಿಸುವ ಸೂರ್ಯನಂತೆ ಕಂಡನು. ಅವನು ಬಳಲಿದುದನ್ನು ಕಂಡು ಸಂತೋಷಗೊಂಡು ಕುರುಗಳು ಪುನಃ ಪಾರ್ಥನನ್ನು ಎಲ್ಲ ಕಡೆಗಳಿಂದ ಆಕ್ರಮಣಿಸಿದರು. ಅವನು ಆಯಾಸಗೊಂಡಿದುದನ್ನು ಮತ್ತು ಸೈಂಧವನು ಇನ್ನೂ ದೂರದಲ್ಲಿರುವುದನ್ನು ತಿಳಿದು ಮಹಾ ಸಿಂಹನಾದದಿಂದ ಅವನನ್ನು ಎಲ್ಲಕಡೆಗಳಿಂದ ಸುತ್ತುವರೆದರು.

## ರಣರಂಗದಲ್ಲಿ ಸರೋವರ ನಿರ್ಮಾಣ

ಸುಸಂರಬ್ಧರಾಗಿರುವ ಅವರನ್ನು ನೋಡಿ ನಸುನಕ್ಕು ಅರ್ಜುನನು ದಾಶಾರ್ಹನಿಗೆ ಮೆಲ್ಲನೆ ನುಡಿದನು:



“ಕುದುರೆಗಳು ಬಾಣಗಳಿಂದ ಗಾಯಗೊಂಡಿವೆ ಮತ್ತು ಬಳಲಿವೆ. ಸೈಂಧವನೂ ದೂರದಲ್ಲಿದ್ದಾನೆ. ಈಗ ಮತ್ತು ಮುಂದೆ ಮಾಡಬೇಕಾಗಿರುವ ಕೆಲಸವ್ಯಾವುದು? ನಿನಗೆ ಏನು ಅನಿಸುತ್ತದೆ? ಕೃಷ್ಣ! ಇದ್ದುದನ್ನು ಇದ್ದಹಾಗೆ ಹೇಳು. ಸದಾ ನಿನಗೆ ಹೆಚ್ಚಾಗಿ ತಿಳಿದಿರುತ್ತದೆ. ರಣದಲ್ಲಿ ಶತ್ರುಗಳನ್ನು ಜಯಿಸುವ ಪಾಂಡವರಿಗೆ ನೀನೇ ನೇತಾರ. ಈಗ ನಾನು ಏನನ್ನು ಮಾಡಬೇಕೆಂದು ನನಗೆ ಹೇಳು. ಕುದುರೆಗಳನ್ನು ಬಿಚ್ಚಿ

ಅವುಗಳಿಗಳಿಗೆ ಅಂಟಿಕೊಂಡಿರುವ ಬಾಣಗಳನ್ನು ಕೀಳು !”

ಪಾರ್ಥನು ಹೀಗೆ ಹೇಳಲು ಕೇಶವನು ಅವನಿಗೆ ಉತ್ತರಿಸಿದನು:

“ಪಾರ್ಥ ! ನೀನು ಏನು ಹೇಳುತ್ತಿದ್ದೀಯೋ ಅದು ನನ್ನ ಮತವೂ ಆಗಿದೆ.”

ಅರ್ಜುನನು ಹೇಳಿದನು:

“ಕೇಶವ ! ನಾನು ಸರ್ವ ಸೇನೆಗಳನ್ನೂ ತಡೆಯುತ್ತೇನೆ. ನೀನು ಈಗ ಮಾಡಬೇಕಾದುದನ್ನು ಮಾಡು !”

ಧನಂಜಯನು ಗಾಬರಿಗೊಳ್ಳದೇ ರಥದಿಂದ ಕೆಳಗಿಳಿದು ಗಾಂಡೀವ ಧನುಸ್ಸನ್ನು ಹಿಡಿದು ಗಿರಿಯಂತೆ ಅಚಲವಾಗಿ ನಿಂತನು. ಆಗ ಇದೇ ಅವಕಾಶವೆಂದು ತಿಳಿದು ಕ್ಷತ್ರಿಯರು ಕೂಗುತ್ತಾ ಅವನನ್ನು ಆಕ್ರಮಣಿಸಿದರು. ಅವನೊಬ್ಬನನ್ನು ಮಹಾ ರಥಸಮೂಹಗಳೊಂದಿಗೆ, ಚಾಪಗಳನ್ನು ಎಳೆಯುತ್ತಾ ಸಾಯಕಗಳನ್ನು ಬಿಡುತ್ತಾ ಸುತ್ತುವರೆದರು. ಕ್ರುದ್ಧರಾಗಿ ವಿಚಿತ್ರ ಅಸ್ತ್ರಗಳನ್ನು ಪ್ರದರ್ಶಿಸುತ್ತಾ ಸೂರ್ಯನನ್ನು ಮೋಡಗಳಂತೆ ಪಾರ್ಥನನ್ನು ಶರಗಳಿಂದ ಮುಚ್ಚಿದರು. ಸಿಂಹವನ್ನು ಮದಿಸಿದ ಆನೆಗಳು ಹೇಗೋ ಹಾಗೆ ವೇಗದಿಂದ ಕ್ಷತ್ರಿಯ ರಥೋದಾರರು ಆ ಕ್ಷತ್ರಿಯರ್ಷಭ ರಥಸಿಂಹನನ್ನು ಆಕ್ರಮಣಿಸಿದರು.

ಹೀಗೆ ಕ್ರುದ್ಧವಾಗಿದ್ದ ಅನೇಕ ಸೇನೆಗಳಿಂದ ಎಲ್ಲಕಡೆಗಳಿಂದ ಸುತ್ತುವರೆಯಲ್ಪಟ್ಟಿದ್ದ ಪಾರ್ಥನ ಭುಜಗಳ ಮಹಾಬಲವನ್ನು ಅಲ್ಲಿ ಎಲ್ಲರೂ ನೋಡಿದರು. ಅಸ್ತ್ರಗಳಿಂದ ಅಸ್ತ್ರಗಳನ್ನು ನಿವಾರಿಸಿ ವಿಭುವು ಕೂಡಲೇ ಎಲ್ಲರೂ ನೋಡುತ್ತಿದ್ದಂತೆಯೇ ಅನೇಕ ಬಾಣಗಳಿಂದ ಎಲ್ಲರನ್ನೂ ಮುಚ್ಚಿಬಿಟ್ಟನು. ಅಂತರಿಕ್ಷದಲ್ಲಿ ಬಹುಸಂಖ್ಯಾತ ಬಾಣಗಳ ಸಂಘರ್ಷದಿಂದಾಗಿ ಜೋರಾಗಿ ಜ್ವಾಲೆಗಳ ಬೆಂಕಿಯು ಹುಟ್ಟಿಕೊಂಡಿತು. ರಕ್ತದಿಂದ ತೋಯ್ದು ಹೋಗಿ ನಿಟ್ಟುಸಿರು ಬಿಡುತ್ತಿದ್ದ ಮಹೇಷ್ವಾಸರಿಂದಲೂ, ಶತ್ರುನಾಶಕ ಬಾಣಗಳಿಂದ ಹೊಡೆಯಲ್ಪಟ್ಟು ಕಿರುಚಿಕೊಳ್ಳುತ್ತಿರುವ ಕುದುರೆ-ಆನೆಗಳಿಂದಲೂ, ಯುದ್ಧದಲ್ಲಿ ಜಯವನ್ನು ಬಯಸಿ ಗಾಬರಿಯಿಂದ ಹೋರಾಡುತ್ತಿದ್ದ ಶತ್ರುವೀರರಿಂದಲೂ, ಕ್ರುದ್ಧರಾಗಿ ಅನೇಕರು ಒಂದೇ ಸ್ಥಳದಲ್ಲಿ ನಿಂತಿರುವ ಅಲ್ಲಿ ಬಿಸಿಯು ಹುಟ್ಟಿಕೊಂಡಿತು. ಆಗ ಬಾಣಗಳೇ ಅಲೆಗಳಾಗಿದ್ದ, ಧ್ವಜಗಳೇ ಸುಳಿಗಳಂತಿದ್ದ, ಆನೆಗಳೇ ಮೊಸಳೆಗಳಂತಿದ್ದ, ಪದಾತಿಗಳೇ ಮೀನಿನ ಸಮೂಹಗಳಂತಿದ್ದ, ಶಂಖದುಂದುಭಿಗಳೇ ಭೋರ್ಗರೆತವಾಗಿದ್ದ, ಶಿರಸ್ತ್ರಾಣಗಳೇ ಆಮೆಗಳಂತಿದ್ದ, ಪತಾಕೆಗಳೇ ನೊರೆಗಳ ಸಾಲಿನಂತಿದ್ದ, ಆನೆಗಳೇ ಕಲ್ಲುಬಂಡೆಗಳಂತಿದ್ದ ಆ ದಾಟಲಸಾಧ್ಯವಾದ, ಅಸಂಖ್ಯವಾದ, ಅಪಾರವಾದ, ಉಕ್ಕಿ ಬರುತ್ತಿರುವ ರಥಸಾಗರವನ್ನು ಪಾರ್ಥನು ತೀರದಂತಾಗಿ ಪತ್ರಿಗಳಿಂದ ತಡೆದನು.

ಆಗ ರಣರಂಗದಲ್ಲಿ ಜನಾರ್ದನನು ಗಾಬರಿಗೊಳ್ಳದೇ ಇದ್ದ ಪ್ರಿಯ ಅರ್ಜುನನಿಗೆ ಹೇಳಿದನು:

> "ಅರ್ಜುನ ! ಕದಡಿದ ನೀರಿದೆ. ಸ್ನಾನಮಾಡಿಸಬಹುದು. ಆದರೆ ರಣದಲ್ಲಿ ಕುದುರೆಗಳು ಕುಡಿಯಲು ಯೋಗ್ಯವಾದ ನೀರನ್ನು ಬಯಸುತ್ತವೆ. ಸ್ನಾನಮಾಡುವಂತಹುದನ್ನಲ್ಲ !"

"ಇದೋ ಇಲ್ಲಿದೆ !" ಎಂದು ಹೇಳಿ ಅರ್ಜುನನು ಅಸ್ತ್ರದಿಂದ ಮೇದಿನಿಯನ್ನು ಭೇದಿಸಿ ಕುದುರೆಗಳು ಕುಡಿಯಲು ಯೋಗ್ಯವಾದ ಶುಭ ಸರೋವರವನ್ನು ನಿರ್ಮಿಸಿದನು. ಅದ್ಭುತಕರ್ಮಿ ಪಾರ್ಥನು ತ್ವಷ್ಟನಂತೆ ಬಾಣಗಳಿಂದಲೇ ಗಳುಗಳನ್ನೂ, ಬಾಣಗಳಿಂದಲೇ ಕಂಬಗಳನ್ನೂ, ಬಾಣಗಳಿಂದಲೇ ಚಪ್ಪರವನ್ನೂ ಮಾಡಿ ಶರಗಳ ಒಂದು ಮನೆಯನ್ನೇ ನಿರ್ಮಿಸಿದನು. ಆ ಮಹಾರಣದಲ್ಲಿ ಪಾರ್ಥನು ಮಾಡಿದ ಶರಗಳ ಮನೆಯನ್ನು ನೋಡಿ ಗೋವಿಂದನು ನಕ್ಕು "ಸಾಧು ! ಸಾಧು !" ಎಂದು ಹೊಗಳಿದನು.

ಮಹಾತ್ಮ ಕೌಂತೇಯನು ನೀರನ್ನು ಹುಟ್ಟಿಸಿ, ಶತ್ರುಸೇನೆಯನ್ನು ತಡೆಗಟ್ಟಿ, ಶರಗೃಹವನ್ನು ನಿರ್ಮಿಸಲು ಮಹಾದ್ಯುತಿ ವಾಸುದೇವನು ತಕ್ಷಣವೇ ರಥದಿಂದ ಇಳಿದು ಕಂಕಪತ್ರಿಗಳಿಂದ ಗಯಗೊಂಡಿದ್ದ ಕುದುರೆಗಳನ್ನು ಬಿಚ್ಚಿದನು. ಹಿಂದೆ ಎಂದೂ ನೋಡಿರದ ಅದನ್ನು

ನೋಡಿ ಎಲ್ಲಕಡೆಗಳಲ್ಲಿ ಸಿದ್ಧಚಾರಣರ ಸಮೂಹಗಳ ಮತ್ತು ಸೈನಿಕರ ಮಹಾ ಸಿಂಹನಾದವು ಕೇಳಿಬಂದಿತು. ಪದಾತಿಯಾಗಿ ಯುದ್ಧಮಾಡುತ್ತಿದ್ದ ಕೌಂತೇಯನನ್ನು ತಡೆಯಲು ನರರ್ಷಭರಿಗೆ ಸಾಧ್ಯವಾಗಲಿಲ್ಲ. ಅದೊಂದು ಅದ್ಭುತವಾಗಿತ್ತು. ರಥಸೇನೆಗಳು, ಅನೇಕ ಆನೆ-ಕುದುರೆಗಳು ಮೇಲೆ ಬಂದು ಎರಗಿದರೂ ಅತಿಪುರುಷನಾದ ಪಾರ್ಥನು ಕಿಂಚಿತ್ತೂ ಗಾಬರಿಗೊಳ್ಳಲಿಲ್ಲ. ಪಾಂಡವನ ಮೇಲೆ ಪಾರ್ಥಿವರು ಶರೌಘಗಳನ್ನು ಪ್ರಯೋಗಿಸುತ್ತಿದ್ದರೂ ವಾಸವಿಯು ವ್ಯಥಿತನಾಗಲಿಲ್ಲ. ಆ ಶರಜಾಲಗಳನ್ನೂ, ಗದೆಗಳನ್ನೂ ಮತ್ತು ಪ್ರಾಸಗಳನ್ನೂ ಪಾರ್ಥನು ಸಾಗರವು ಹೇಗೆ ನದಿಗಳನ್ನು ಬರಮಾಡಿಕೊಳ್ಳುತ್ತದೆಯೋ ಹಾಗೆ ಬಂದವುಗಳನ್ನು ನಿರಸನಗೊಳಿಸಿದನು. ಮಹಾ ಅಸ್ತ್ರವೇಗದಿಂದ ಮತ್ತು ಬಾಹುಬಲದಿಂದ ಪಾರ್ಥನು ಎಲ್ಲ ಪಾರ್ಥಿವೇಂದ್ರರೂ ಕಳುಹಿಸುತ್ತಿದ್ದ ಉತ್ತಮ ಬಾಣಗಳನ್ನೂ ನಾಶಗೊಳಿಸಿದನು. ಪಾರ್ಥ ಮತ್ತು ವಾಸುದೇವ ಈ ಇಬ್ಬರ ವಿಕ್ರಾಂತವನ್ನು ಪರಮಾದ್ಭುತವನ್ನು ಕೌರವರು ಹೊಗಳಿದರು.

> “ರಣದ ಮಧ್ಯದಲ್ಲಿ ಪಾರ್ಥ-ಗೋವಿಂದರು ಕುದುರೆಗಳನ್ನು ಬಿಚ್ಚಿದರು! ಇದಕ್ಕಿಂತಲೂ ಪರಮ ಅದ್ಭುತವಾದುದು

ಲೋಕದಲ್ಲಿ ಯಾವುದಿದೆ? ಇಂತಹುದು ಹಿಂದೆ ನಡೆಯಲೂ ಇಲ್ಲ. ಮುಂದೆ ನಡೆಯುವುದೂ ಇಲ್ಲ.”

ರಣಮೂರ್ದನಿಯಲ್ಲಿ ಅತ್ಯುಗ್ರವಾದ ತೇಜಸ್ಸನ್ನು ಪ್ರದರ್ಶಿಸಿ ಆ ನರೋತ್ತಮರು ಕೌರವರಲ್ಲಿ ಅತಿಯಾದ ಭಯವನ್ನು ಉಂಟುಮಾಡಿದರು. ಅರ್ಜುನನು ರಣದಲ್ಲಿ ಶರಗಳಿಂದ ನಿರ್ಮಿಸಿದ ಗರ್ಭಗೃಹದಲ್ಲಿ ಹೃಷೀಕೇಶನು ಸ್ತ್ರೀಗಳ ಮಧ್ಯದಲ್ಲಿಯೋ ಎಂಬಂತೆ ನಸುನಗುತ್ತಾ ಇದ್ದನು. ಪುಷ್ಕರೇಕ್ಷಣನು ಕೌರವ ಕಡೆಯ ಎಲ್ಲ ಸೇನೆಗಳೂ ನೋಡುತ್ತಿದ್ದಂತೆಯೇ ಸ್ವಲ್ಪವೂ ಉದ್ವೇಗಗೊಳ್ಳದೇ ಕುದುರೆಗಳನ್ನು ಅಡ್ಡಾಡಿಸಿದನು. ಕುದುರೆಗಳ ಕೆಲಸದಲ್ಲಿ ಕುಶಲನಾಗಿದ್ದ ಕೃಷ್ಣನು ಅವುಗಳ ಪರಿಶ್ರಮ, ಬಳಲಿಕೆ, ವೇಪನ-ಕಂಪನಗಳನ್ನೂ ಗಾಯಗಳನ್ನೂ ಸಂಪೂರ್ಣವಾಗಿ ಹೋಗಲಾಡಿಸಿದನು. ಬಾಣಗಳನ್ನು ಎರಡೂ ಕೈಗಳಿಂದ ನಿಧಾನವಾಗಿ ಕಿತ್ತು, ಮೈತೊಳೆಯಿಸಿ, ನೆಲದ ಮೇಲೆ ಹೊರಳಾಡಿಸಿ, ಯಥಾನ್ಯಾಯವಾಗಿ ನೀರು ಕುಡಿಸಿದನು. ನೀರನ್ನು ಕುಡಿದು, ಸ್ನಾನಮಾಡಿ, ಮೇಯ್ದು, ಆಯಾಸವನ್ನು ಕಳೆದುಕೊಂಡ ಅವುಗಳನ್ನು ಸಂಹೃಷ್ಟನಾಗಿ ಪುನಃ ಆ ಉತ್ತಮ ರಥಕ್ಕೆ ಕಟ್ಟಿದನು. ಆ ಶ್ರೇಷ್ಠ ರಥವನ್ನು ಶೌರಿಯು ಅರ್ಜುನನೊಂದಿಗೆ ಏರಿ ವೇಗವಾಗಿ ಹೊರಟನು. ನೀರು ಕುಡಿಸಿದ ಕುದುರೆಗಳಿಂದ ಯುಕ್ತವಾದ

ರಥದಲ್ಲಿ ಆ ರಥವರರಿಬ್ಬರೂ ಹೋಗುತ್ತಿರುವುದನ್ನು ನೋಡಿ ಕುರುಬಲಶ್ರೇಷ್ಠರು ಪುನಃ ವಿಮನಸ್ಕರಾದರು.

ಹಲ್ಲುಮುರಿದ ಉರಗಗಳಂತೆ ನಿಟ್ಟುಸಿರು ಬಿಡುತ್ತಿದ್ದ ಅವರು ಮತ್ತೆ ಮತ್ತೆ “ನಮಗೆ ಧಿಕ್ಕಾರ! ಧಿಕ್ಕಾರ! ಪಾರ್ಥ ಕೃಷ್ಣರು ಹೊರಟೇ ಹೋದರಲ್ಲ!” ಎಂದು ಅಂದುಕೊಳ್ಳುತ್ತಿದ್ದರು. ಎಲ್ಲ ಕ್ಷತ್ರಿಯರೂ ನೋಡುತ್ತಿದ್ದಂತೆ ಒಂದೇ ರಥದಲ್ಲಿ ಕುಳಿತು ಕವಚಧಾರಿಗಳಾದ ಅವರಿಬ್ಬರು ಕೌರವ ಸೇನೆಯನ್ನು ಬಾಲಕ್ರೀಡೆಯಂತೆ ತಿರಸ್ಕರಿಸಿ ಮುಂದುವರೆದರು. ಕೂಗಿಕೊಳ್ಳುತ್ತಿದ್ದರೂ ಪ್ರಯತ್ನಿಸುತ್ತಿದ್ದರೂ ಅವರೊಡನೆ ಯುದ್ಧಮಾಡದೇ ಆ ಪರಂತಪರು ಎಲ್ಲರಾಜರಿಗೆ ತಮ್ಮ ವೀರ್ಯವನ್ನು ತೋರಿಸುತ್ತಾ ಮುಂದುವರೆದರು. ಅವರು ಹೋಗುತ್ತಿರುವುದನ್ನು ನೋಡಿ ಅನ್ಯ ಸೈನಿಕರು ಪುನಃ ಹೇಳಿದರು:

> “ತ್ವರೆಮಾಡಿ! ಎಲ್ಲರೂ ಸೇರಿ ಕೃಷ್ಣ-ಕಿರೀಟಿಯರನ್ನು ವಧಿಸೋಣ! ಸರ್ವಧನ್ವಿಗಳು ನೋಡುತ್ತಿದ್ದಂತೆಯೇ ದಾಶಾರ್ಹನು ರಥವನ್ನು ಕಟ್ಟಿ ರಣದಲ್ಲಿ ನಮ್ಮನ್ನು ತಿರಸ್ಕರಿಸಿ ಜಯದ್ರಥನ ಕಡೆ ಹೋಗುತ್ತಿದ್ದಾನೆ!”

ಸಂಗ್ರಾಮದಲ್ಲಿ ಹಿಂದೆಂದೂ ನೋಡಿರದ ಆ ಮಹಾ ಅದ್ಭುತವನ್ನು ನೋಡಿ ಅಲ್ಲಿದ್ದ ಕೆಲವು ಭೂಮಿಪರು ಯೋಚಿಸುತ್ತಿದ್ದರು.

> “ದುರ್ಯೋಧನನ ಅಪರಾಧದಿಂದ ರಾಜಾ ಧೃತರಾಷ್ಟ್ರನೂ ಅವನ ಸಂಪೂರ್ಣ ಸೇನೆಗಳೂ ಮತ್ತು ಮೇದಿನಿಯ ಸರ್ವ ಕ್ಷತ್ರಿಯರೂ ಮಹಾ ವಿಪತ್ತಿಗೆ ಒಳಗಾಗಿದ್ದಾರೆ! ಇವರು ವಿಲಯವನ್ನು ಹೊಂದುತ್ತಿದ್ದಾರೆ ಎನ್ನುವುದು ರಾಜನಿಗೆ ತಿಳಿದಿಲ್ಲ!”

ಅಲ್ಲಿರುವ ಅನ್ಯ ಕ್ಷತ್ರಿಯರು ಹೀಗೆ ಹೇಳಿಕೊಳ್ಳುತ್ತಿದ್ದರು:

> “ದೃಷ್ಟಿಯಿಲ್ಲದ ಧಾರ್ತರಾಷ್ಟ್ರನು ಸಿಂಧುರಾಜನು ಯಮಸಾದನಕ್ಕೆ ಹೋದನಂತರ ಮಾಡಬೇಕಾದ ಕಾರ್ಯಗಳ ಕುರಿತು ಉಪಾಯಗಳನ್ನು ಮಾಡಲಿ!”

## ಕೃಷ್ಣಾರ್ಜುನರು ಕೌರವ ಸೇನೆಯನ್ನು ದಾಟಿ ಜಯದ್ರಥನ ಬಳಿಸಾರಿದುದು

ಸೂರ್ಯನು ಇಳಿಮುಖನಾಗಿರಲು ಪಾಂಡವನು ನೀರನ್ನು ಕುಡಿದು ಹರ್ಷಿತಗೊಂಡಿದ ಕುದುರೆಗಳೊಂದಿಗೆ ಅತ್ಯಂತ ಶೀಘ್ರವಾಗಿ ಸೈಂಧವನ ಕಡೆ ಹೋದನು. ಅಂತಕನಂತೆ ಕ್ರುದ್ಧನಾಗಿ ಹೋಗುತ್ತಿರುವ ಆ ಮಹಾಬಾಹುವನ್ನು ಯೋಧರು ತಡೆಯಲು ಶಕ್ತರಾಗಲಿಲ್ಲ. ಸಿಂಹವು ಜಿಂಕೆಗಳ ಗುಂಪನ್ನು ಮಥಿಸಿಬಿಡುವಂತೆ ಪಾಂಡವನು ಸೈಂಧವನಿಗಾಗಿ

ಕೌರವ ಸೇನೆಯನ್ನು ತರುಬಿ ಓಡಿಸಿದನು. ಸೇನೆಗಳ ಮಧ್ಯದಲ್ಲಿ ಬಲಾಕವರ್ಣದ ಕುದುರೆಗಳನ್ನು ಇನ್ನೂ ಜೋರಾಗಿ ಚಪ್ಪರಿಸಿ ಓಡಿಸುತ್ತಾ ದಾಶಾರ್ಹನು ಪಾಂಚಜನ್ಯವನ್ನು ಊದಿದನು. ಕೌಂತೇಯನು ಬಿಟ್ಟ ಬಾಣಗಳೆಲ್ಲವೂ ಅವನ ಹಿಂದೆ ಬೀಳುತ್ತಿದ್ದವು. ಬಾಣಗಳ ವೇಗಕ್ಕಿಂತಲೂ ಹೆಚ್ಚಿನ ವೇಗದಲ್ಲಿ ಆ ಗಾಳಿಯ ವೇಗವುಳ್ಳ ಕುದುರೆಗಳು ಓಡುತ್ತಿದ್ದವು. ಗಾಳಿಯಲ್ಲಿ ಹಾರಾಡುತ್ತಿದ್ದ ಪತಾಕೆಗಳನ್ನೂ, ರಥದ ಗುಡುಗಿನ ಶಬ್ಧವನ್ನೂ, ಘೋರವಾದ ಕಪಿಧ್ವಜವನ್ನೂ ನೋಡಿ ರಥಿಗಳು ವಿಷಣ್ಣರಾದರು. ಎಲ್ಲಕಡೆಗಳಲ್ಲಿ ಮುಸುಕಿದ ಧೂಳಿನಿಂದ ದಿವಾಕರನೂ ಕಾಣದಿರಲಾಗಿ, ರಣದಲ್ಲಿ ಶರಗಳಿಂದ ಆರ್ತರಾದ ಯೋಧರು ಕೃಷ್ಣರೀರ್ವರನ್ನೂ ನೋಡಲೂ ಶಕ್ಯರಾಗಿರಲಿಲ್ಲ. ಆಗ ಕ್ರುದ್ಧರಾದ ನೃಪತಿಗಳೂ ಅನೇಕ ಅನ್ಯ ಕ್ಷತ್ರಿಯರೂ ಜಯದ್ರಥನನ್ನು ವಧಿಸಲು ಇಚ್ಛಿಸಿದ್ದ ಧನಂಜಯನನ್ನು ಸುತ್ತುಗಟ್ಟಿದರು. ಅವರು ಪ್ರಯೋಗಿಸುತ್ತಿದ್ದ ಬಾಣಗಳಿಂದ ಆ ಪುರುಷರ್ಷಭನ ಗಮನವು ಕುಂಠಿತವಾಗಲು ದುರ್ಯೋಧನನು ಪಾರ್ಥನನ್ನು ಮಹಾಹವದಲ್ಲಿ ತ್ವರೆಮಾಡಿ ಹಿಂಬಾಲಿಸಿ ಬರುತ್ತಿದ್ದನು.

ವಾಸುದೇವ-ಧನಂಜಯರಿಬ್ಬರೂ ದಾಟಿ ಹೋದುದನ್ನು ನೋಡಿ ಕೌರವರು ಭಯದಿಂದ ಓಡಿಹೋದರು. ಆದರೆ ಸತ್ತ್ವಚೋದಿತರಾದ

ಮಹಾತ್ಮರು ಗಾಬರಿಗೊಳ್ಳದೇ ನಾಚಿಕೆಗೊಂಡು ಮನಸ್ಸನ್ನು ಸ್ಥಿರಗೊಳಿಸಿಕೊಂಡು ಧನಂಜಯನ ಹಿಂದೆ ಹೋದರು. ಕ್ರೋಧ ಮತ್ತು ಅಸಹನೆಗಳೊಂದೊಡಗೂಡಿ ಯುದ್ಧದಲ್ಲಿ ಪಾಂಡವನ ಹಿಂದೆ ಹೋದವರು ಸಾಗರದಿಂದ ನದಿಗಳು ಹೇಗೋ ಹಾಗೆ ಹಿಂದಿರುಗಿ ಬರಲೇ ಇಲ್ಲ. ಅಸಂತ ನಾಸ್ತಿಕರು ವೇದದಿಂದ ಹಿಂದೆಸರಿಯುವಂತೆ ರಣದಿಂದ ಹಿಂದೆ ಸರಿದು ನರಕವನ್ನು ಆರಿಸಿಕೊಂಡರು ಮತ್ತು ಪಾಪವನ್ನು ಕಟ್ಟಿಕೊಂಡರು. ಅವರಿಬ್ಬರು ಪುರುಷರ್ಷಭರೂ ರಥಸೇನೆಯಿಂದ ವಿಮುಕ್ತರಾಗಿ ರಾಹುವಿನ ಬಾಯಿಯಿಂದ ಹೊರಬಂದ ಇಬ್ಬರು ಸೂರ್ಯರಂತೆ ಪ್ರಕಾಶಿಸಿದರು. ಕೃಷ್ಣರಿಬ್ಬರೂ ಆ ಸೇನಾಜಾಲದಿಂದ ತಪ್ಪಿಸಿಕೊಂಡು ಹೊರಬಂದಾಗ ಮಹಾಜಾಲದಿಂದ ತಪ್ಪಿಸಿಕೊಂಡ ಮೀನುಗಳಂತೆ ವಿಗತಜ್ವರರಾಗಿ ತೋರಿದರು. ದುರ್ಭೇದ್ಯವಾಗಿದ್ದ ಶಸ್ತ್ರಗಳಿಂದ ದಟ್ಟವಾಗಿದ್ದ ದ್ರೋಣನ ಸೇನೆಯಿಂದ ಹೊರಬಂದ ಆ ಮಹಾತ್ಮರು ಉದಯಿಸುವ ಕಾಲ-ಸೂರ್ಯರಂತೆ ಕಂಡುಬಂದರು. ಅಸ್ತ್ರಗಳ ಬಾಧೆಗಳಿಂದ ನಿರ್ಮುಕ್ತರಾದ, ಶಸ್ತ್ರಸಂಕಟದಿಂದ ವಿಮುಕ್ತರಾದ, ಸ್ವತಃ ಶತ್ರುಗಳನ್ನು ಬಾಧೆಗೊಳಿಸಿದ ಆ ಮಹಾತ್ಮರಿಬ್ಬರೂ ಮುಟ್ಟಿದರೆ ಉರಿಯುವ ಮಕರದ ದವಡೆಗಳಿಂದ ತಪ್ಪಿಸಿಕೊಂಡು ಬಂದವರಂತೆ ಕಂಡರು. ಅವರಿಬ್ಬರೂ ಸೇನೆಯೆಂಬ ಸಮುದ್ರವನ್ನು ಮಕರಗಳಂತೆ

ಕ್ಷೋಭೆಗೊಳಿಸಿದ್ದರು.

ಅವರಿಬ್ಬರೂ ದ್ರೋಣನ ಸೇನೆಯ ಮಧ್ಯದಲ್ಲಿದ್ದಾಗ ಕೌರವರು ಅವರು ದ್ರೋಣನನ್ನು ದಾಟಿ ಬರುವುದಿಲ್ಲವೆಂದು ಅಂದುಕೊಂಡಿದ್ದರು. ಅವರಿಬ್ಬರೂ ದ್ರೋಣನ ಸೇನೆಯನ್ನು ಅತಿಕ್ರಮಿಸಿದುದನ್ನು ನೋಡಿ ಅವರು ಸಿಂಧುರಾಜನ ಜೀವಿತದ ಆಸೆಯನ್ನೇ ತೊರೆದರು. ಆಗ ದ್ರೋಣ ಮತ್ತು ಹಾರ್ದಿಕ್ಯರಿಂದ ಆ ಕೃಷ್ಣರಿಬ್ಬರೂ ಬಿಡುಗಡೆಹೊಂದುವುದಿಲ್ಲವೆಂದು ಅವರ ಬಲವಾದ ಆಶಯವಾಗಿತ್ತು. ಅವರ ಆಶಯವನ್ನು ವಿಫಲಗೊಳಿಸಿ ಆ ಇಬ್ಬರು ಪರಂತಪರೂ ದುಸ್ತರವಾದ ದ್ರೋಣನ ಸೇನೆಯನ್ನೂ ಭೋಜನ ಸೇನೆಯನ್ನೂ ದಾಟಿ ಬಂದಿದ್ದರು. ಪ್ರಜ್ವಲಿಸುತ್ತಿರುವ ಪಾವಕರಂತೆ ಅವರಿಬ್ಬರೂ ಅತಿಕ್ರಮಿಸಿ ಬಂದುದನ್ನು ನೋಡಿ ನಿರಾಶರಾದ ಅವರು ಸಿಂಧುರಾಜನ ಜೀವಿತದ ಕುರಿತಾದ ಆಸೆಯನ್ನೇ ತೊರೆದರು. ಭಯವರ್ಧನರಾದ ಕೃಷ್ಣ-ಧನಂಜಯರು ಆಗ ಜಯದ್ರಥನ ವಧೆಯ ಕುರಿತು ಮಾತನಾಡಿಕೊಂಡರು.

> “ಆರು ಧಾರ್ತರಾಷ್ಟ್ರರ ಮಧ್ಯೆ ಸೈಂಧವನಿದ್ದಾನೆ. ನನ್ನ ದೃಷ್ಟಿಗೆ ಸಿಲುಕಿದರೆ ಅವನು ಜೀವಂತ ಉಳಿಯಲಾರ! ಇಂದು ಸಮರದಲ್ಲಿ ಅವನನ್ನು ದೇವಗಣಗಳ ಸಹಿತ ಶಕ್ರನೇ

ರಕ್ಷಿಸುತ್ತಿದ್ದರೂ ನಾವು ಅವನನ್ನು ಸಂಹರಿಸುತ್ತೇವೆ”

ಎಂದು ಕೃಷ್ಣರು ಮಾತನಾಡಿಕೊಂಡರು.

ಹೀಗೆ ಕೃಷ್ಣರಿಬ್ಬರೂ ಸಿಂಧುರಾಜನನ್ನು ಹುಡುಕುತ್ತಾ ಮಾತನಾಡಿಕೊಳ್ಳಲು ಧೃತರಾಷ್ಟ್ರನ ಪುತ್ರರು ಅದನ್ನು ಕೇಳಿಸಿಕೊಂಡರು. ಬಾಯಾರಿದ ಗಜಗಳೆರಡು ಮರುಭೂಮಿಯನ್ನು ದಾಟಿಬಂದು ನೀರನ್ನು ಕುಡಿದು ಪುನಃ ವಿಶ್ವಾಸಹೊಂದಿದವರಂತೆ ಆ ಇಬ್ಬರು ಅರಿಂದಮರೂ ಕಂಡರು. ಮೃತ್ಯು-ವೃದ್ಧಾಪ್ಯಗಳನ್ನು ದಾಟಿದ ಅವರು ಹುಲಿ-ಸಿಂಹ-ಆನೆಗಳ ಗುಂಪುಗಳಿರುವ ಪರ್ವತಗಳನ್ನು ದಾಟಿಬಂದವರಂತೆ ತೋರಿದರು. ಮುಕ್ತರಾದ ಅವರ ಭಯಂಕರ ಮುಖವರ್ಣವನ್ನು ನೋಡಿ ಕೌರವರೆಲ್ಲರೂ ಎಲ್ಲಕಡೆಗಳಲ್ಲಿ ಕೂಗಿಕೊಂಡರು. ಪಾವಕನಂತೆ ಮತ್ತು ಘೋರ ಸರ್ಪದ ವಿಷದಂತೆ ಜ್ವಲಿಸುತ್ತಿದ್ದ ದ್ರೋಣನಿಂದ ಮತ್ತು ಇತರ ಪಾರ್ಥಿವರಿಂದ ಹೊರಬಂದ ಅವರಿಬ್ಬರು ಭಾಸ್ಕರರಂತೆ ಪ್ರಕಾಶಿಸುತ್ತಿದ್ದರು. ಸಾಗರವೆಂದು ಕರೆಯಲ್ಪಟ್ಟ ದ್ರೋಣನ ಸೇನೆಯಿಂದ ಮುಕ್ತರಾಗಿ ಬಂದ ಅವರಿಬ್ಬರು ಸಮುದ್ರವನ್ನು ದಾಟಿಬಂದವರಂತೆ ಮುದಿತರಾಗಿ ಕಂಡುಬಂದರು. ರಣದಲ್ಲಿ ದ್ರೋಣ ಮತ್ತು ಹಾರ್ದಿಕ್ಯರಿಂದ ರಕ್ಷಿತರಾದವರು ಬಿಟ್ಟ ಮಹಾ ಶಸ್ತ್ರೌಘಗಳಿಂದ ಮುಕ್ತರಾದ

ಅವರಿಬ್ಬರು ಇಂದ್ರ-ಅಗ್ನಿಯರಂತೆ ತೋರಿದರು. ಭಾರದ್ವಾಜನ ನಿಶಿತ ಸಾಯಕಗಳಿಂದ ಗಾಯಗೊಂಡು ರಕ್ತಸೋರುತ್ತಿರುವ ಅವರಿಬ್ಬರು ಕೃಷ್ಣರೂ ಕರ್ಣಿಕ ವೃಕ್ಷಗಳಿರುವ ಪರ್ವತಗಳಂತೆ ಕಂಡರು. ದ್ರೋಣನೇ ಮೊಸಳೆಯಾಗಿದ್ದ, ಶಕ್ತಿಗಳೇ ಸರ್ಪಗಳಾಗಿದ್ದ, ಶರಗಳೇ ಮಕರಗಳಾಗಿದ್ದ, ಕ್ಷತ್ರಿಯ ಪ್ರವರರೇ ನೀರಾಗಿದ್ದ ಮಡುವನ್ನು ದಾಟಿ ಬಂದ; ಶಿಂಜಿನಿಯ ಟೇಂಕಾರ ಮತ್ತು ಚಪ್ಪಳೆಗಳೇ ಗುಡುಗಾಗಿದ್ದ, ಗದೆ-ಖಡ್ಗಗಳೇ ಮಿಂಚುಗಳಾಗಿದ್ದ ದ್ರೋಣನ ಅಸ್ತ್ರಗಳೆಂಬ ಮೇಘಗಳಿಂದ ಹೊರಬಂದ ಅವರಿಬ್ಬರೂ ಕತ್ತಲೆಯಿಂದ ಆಚೆ ಬಂದ ಸೂರ್ಯ-ಚಂದ್ರರಂತೆ ಕಂಡರು. ಮಳೆಗಾಲದಲ್ಲಿ ತುಂಬಿ ಹರಿಯುತ್ತಿರುವ ಮತ್ತು ಮಹಾ ಮೊಸಳೆಗಳ ಸಮಾಕುಲದಿಂದಿರುವ ಸಿಂದುವೇ ಮೊದಲಾದ ಐದು ನದಿಗಳು ಮತ್ತು ಆರನೆಯದಾಗಿ ಸಮುದ್ರವನ್ನು ಎರಡೂ ಬಾಹುಗಳಿಂದ ಈಜಿ ಬಂದಿರುವವರಂತೆ ದ್ರೋಣನ ಅಸ್ತ್ರಬಲದಿಂದ ಉಳಿದು ಬಂದಿರುವ ಆ ಯಶಸ್ಸಿನಲ್ಲಿ ಲೋಕವಿಶ್ರುತರಾದ ಮಹೇಷ್ವಾಸ ಕೃಷ್ಣರು ಎಂದು ಎಲ್ಲ ಭೂತಗಳೂ ಅಂದುಕೊಂಡವು. ಕೊಲ್ಲುವ ಆಸೆಯಿಂದ ಸಮೀಪದಲ್ಲಿದ್ದ ಜಯದ್ರಥನನ್ನು ನೋಡುತ್ತಾ ನಿಂತಿದ್ದ ಅವರಿಬ್ಬರು ರುರು ಜಿಂಕೆಯನ್ನು ತಿನ್ನಲು ಬಾಯಿ ನೆಕ್ಕುತ್ತಿರುವ ಹುಲಿಗಳಂತೆ ಕಂಡರು. ಅವರ ಮುಖವರ್ಣವೇ ಹಾಗಿರಲು ಕೌರವ ಯೋಧರು ಜಯದ್ರಥನು ಹತನಾದನೆಂದೇ ಭಾವಿಸಿದರು.

ಲೋಹಿತಾಕ್ಷರಾದ ಆ ಕೃಷ್ಣ-ಪಾಡವರಿಬ್ಬರೂ ಸಿಂಧುರಾಜನನ್ನು ಕಂಡು ಹೃಷ್ಟರಾಗಿ ಮತ್ತೆ ಮತ್ತೆ ಗರ್ಜಿಸಿದರು. ಕೈಯಲ್ಲಿ ಕಡಿವಾಣಗಳನ್ನು ಹಿಡಿದಿದ್ದ ಶೌರಿ ಮತ್ತು ಧನುಸ್ಸನ್ನು ಹಿಡಿದಿದ್ದ ಪಾರ್ಥ ಇಬ್ಬರೂ ಸೂರ್ಯ-ಪಾವಕರಂತೆ ಪ್ರಕಾಶಿಸಿದರು. ದ್ರೋಣನ ಸೇನೆಯಿಂದ ಮುಕ್ತರಾಗಿ ಸಮೀಪದಲ್ಲಿಯೇ ಸೈಂಧವನನ್ನು ನೋಡಿದ ಅವರಿಗೆ ಆಮಿಷವನ್ನು ಕಂಡ ಗಿಡುಗಗಳಿಗಾಗುವಷ್ಟೇ ಆನಂದವಾಯಿತು. ಸದ್ಯ ಹತ್ತಿರದಲ್ಲಿಯೇ ಇದ್ದ ಸೈಂಧವನನ್ನು ನೋಡಿ ಕ್ರುದ್ಧರಾದ ಅವರಿಬ್ಬರೂ ಆಮಿಷದ ಮೇಲೆ ಗಿಡುಗವು ಬೀಳುವಂತೆ ಕ್ಷಿಪ್ರವಾಗಿ ಅವನ ಮೇಲೆ ಬಿದ್ದರು.

## ದುರ್ಯೋಧನನ ಯುದ್ಧ

ಹೃಷೀಕೇಶ-ಧನಂಜಯರು ಅತಿಕ್ರಮಿಸಿದುದನ್ನು ನೋಡಿ ದ್ರೋಣನಿಂದ ಕವಚವನ್ನು ಕಟ್ಟಿಸಿಕೊಂಡಿದ್ದ, ಹಯಸಂಸ್ಕಾರಗಳನ್ನು ತಿಳಿದಿದ್ದ ಪರಾಕ್ರಾಂತನಾಗಿದ್ದ ರಾಜಾ ದುರ್ಯೋಧನನು ಒಂದೇ ರಥದಲ್ಲಿ ಕುಳಿತು ಸಿಂಧುರಾಜನ ರಕ್ಷಣಾರ್ಥವಾಗಿ ಮುಂದೆ ಬಂದನು. ಮಹೇಷ್ವಾಸ ಕೃಷ್ಣ-ಪಾರ್ಥರನ್ನು ದಾಟಿ ಮುಂದೆ ಹೋಗಿ ಪುನಃ ಹಿಂದಿರುಗಿ ದುರ್ಯೋಧನನು ಪುಂಡರೀಕಾಕ್ಷನ ಮುಂದೆ ಬಂದನು. ಹೀಗೆ ಅವನು ಧನಂಜಯನನ್ನು ಅತಿಕ್ರಮಿಸಿ ಮುಂದೆ ಬರಲು ಎಲ್ಲ

ಸೇನೆಗಳಲ್ಲಿ ಸಂತೋಷದಿಂದ ವಾದ್ಯಗಳು ಮೊಳಗಿದವು. ಅಲ್ಲಿ ಕೃಷ್ಣರ ಮುಂದೆ ನಿಂತಿರುವ ದುರ್ಯೋಧನನನ್ನು ನೋಡಿ ಶಂಖದುಂದುಭಿಗಳೊಂದಿಗೆ ಮಿಶ್ರಿತವಾದ ಸಿಂಹನಾದಗಳೂ ಕೇಳಿಬಂದವು. ಸಮರದಲ್ಲಿ ನಿನ್ನ ಮಗನನ್ನು ನೋಡಿ ಸಿಂಧುರಾಜನ ಪಾವಕೋಪಮ ರಕ್ಷಕರು ಹರ್ಷಿತರಾದರು. ಅನುಯಾಯಿಗಳೊಂದಿಗೆ ತಮ್ಮನ್ನು ಅತಿಕ್ರಮಿಸಿದ ದುರ್ಯೋಧನನನ್ನು ಕೃಷ್ಣನು ಕಾಲಕ್ಕೆ ತಕ್ಕುದಾದ ಈ ಮಾತನ್ನು ಅರ್ಜುನನಿಗೆ ನುಡಿದನು.

ವಾಸುದೇವನು ಹೇಳಿದನು:

> “ಧನಂಜಯ! ನಮ್ಮನ್ನು ಅತಿಕ್ರಮಿಸಿರುವ ಸುಯೋಧನನನ್ನು ನೋಡು! ಇದನ್ನು ಅತ್ಯದ್ಭುತವೆಂದು ಪರಿಗಣಿಸುತ್ತೇನೆ. ಇವನ ಸದೃಶನಾದ ರಥನಿಲ್ಲ! ಈ ಧಾರ್ತರಾಷ್ಟ್ರನು ದೂರ ಬಾಣವನ್ನು ಬೀಳಿಸಬಲ್ಲ. ಮಹೇಷ್ವಾಸ. ಕೃತಾಸ್ತ್ರ. ಯುದ್ಧ ದುರ್ಮದ. ದೃಢಾಸ್ತ್ರ. ಚಿತ್ರಯೋಧೀ ಮತ್ತು ಮಹಾಬಲಶಾಲೀ. ಇವನು ಅತ್ಯಂತ ಸುಖದಲ್ಲಿ ಬೆಳೆದವನು. ಮಹಾರಥರಿಂದಲೂ ಗೌರವಿಸಲ್ಪಡುವವನು. ಯಶಸ್ವಿಯಾದ ಇವನು ನಿತ್ಯವೂ ಪಾಂಡವರನ್ನು ದ್ವೇಷಿಸುತ್ತಾ ಬಂದವನು. ಅವನೊಂದಿಗೆ ನೀನು ಯುದ್ಧಮಾಡುವ ಸರಿಯಾದ ಸಮಯ

ಬಂದೊದಗಿದೆಯೆಂದು ನನಗನ್ನಿಸುತ್ತದೆ. ಅಲ್ಲಿ ದ್ಯೂತದಲ್ಲಿ ಪಣವಿದ್ದಂತೆ ಇವನ ಮೇಲೆ ಜಯವಿದೆ ಅಥವಾ ಇನ್ನೊಂದಿದೆ. ತುಂಬಾ ಸಮಯ ಸಂಗ್ರಹಿಸಿಟ್ಟುಕೊಂಡಿರುವ ನಿನ್ನ ಕ್ರೋಧವೆಂಬ ವಿಷವನ್ನು ಇವನ ಮೇಲೆ ಎರಚು. ಪಾಂಡವರ ಅನರ್ಥಗಳಿಗೆ ಈ ಮಹಾರಥನೇ ಮೂಲ. ಈಗ ಇವನು ನಿನ್ನ ಬಾಣಗಳ ಸಿಲುಕಿನಲ್ಲಿಯೇ ಇದ್ದಾನೆ. ನೋಡು. ನಿನ್ನನ್ನು ನೀನೇ ಸಾಫಲ್ಯನಾಗಿಸಿಕೋ! ರಾಜ್ಯವನ್ನು ಬಯಸುವ ಈ ರಾಜನು ರಣದಲ್ಲಿ ನಿನ್ನ ಎದುರಿಗೆ ಏಕೆ ಬಂದಿದ್ದಾನೆ? ಅದೃಷ್ಟ! ಇಂದು ಇವನು ನಿನ್ನ ಬಾಣಗಳಿಗೆ ಗೋಚರನಾಗಿ ಒದಗಿದ್ದಾನೆ. ಅವನ ಜೀವಿತವನ್ನು ಅಪಹರಿಸುವಂತೆ ಮಾಡು. ಐಶ್ವರ್ಯ ಮದದಿಂದ ಸಮ್ಮೂಢನಾಗಿರುವ ಇವನು ದುಃಖವೆನ್ನುವುದನ್ನೇ ಅನುಭವಿಸಿಲ್ಲ. ಅವನು ಸಂಯುಗದಲ್ಲಿ ನಿನ್ನ ವೀರ್ಯವನ್ನೂ ತಿಳಿದಿಲ್ಲ. ಸುರಾಸುರಮನುಷ್ಯರೊಡನೆ ಮೂರು ಲೋಕಗಳೂ ರಣದಲ್ಲಿ ನಿನ್ನನ್ನು ಜಯಿಸಲು ಉತ್ಸುಕರಾಗುವುದಿಲ್ಲ. ಇನ್ನು ಒಬ್ಬ ಸುಯೋಧನನೆಲ್ಲಿ? ಒಳ್ಳೆಯದಾಯಿತು ಪಾರ್ಥ! ಇವನು ನಿನ್ನ ರಥದ ಬಳಿ ಬಂದೊದಗಿದ್ದಾನೆ! ಪುರಂದರನು ವೃತ್ರನನ್ನು ಹೇಗೋ ಹಾಗೆ ಇವನನ್ನು ಸಂಹರಿಸು! ಇವನು ಸತತವೂ ನಿಮಗೆ

ಅನರ್ಥವನ್ನುಂಟುಮಾಡಲು ಮುಂದಿದ್ದವನು. ಮೋಸದಿಂದ ಇವನು ದ್ಯೂತದಲ್ಲಿ ಧರ್ಮರಾಜನನ್ನು ವಂಚಿಸಿದನು. ಅಪಾಪಿಗಳಾದ ನಿಮ್ಮ ಮೇಲೆ ಪಾಪಮತಿಯಾದ ಇವನು ನಿತ್ಯವೂ ಅನೇಕ ಅತಿಕ್ರೂರ ಕೃತ್ಯಗಳನ್ನು ಮಾಡುತ್ತಾ ಬಂದಿದ್ದಾನೆ. ಯುದ್ಧದಲ್ಲಿ ಆರ್ಯನಂತೆ ನಿಶ್ಚಯವನ್ನು ಮಾಡಿ, ವಿಚಾರಮಾಡದೇ ಈ ಅನಾರ್ಯ, ಸದಾ ಕ್ಷುದ್ರನಾಗಿರುವ, ಬೇಕಾದಂತೆ ನಡೆದುಕೊಳ್ಳುವ ಪುರುಷನನ್ನು ಸಂಹರಿಸು! ಮೋಸದಿಂದ ರಾಜ್ಯಹರಣ, ವನವಾಸ, ಕೃಷ್ಣೆಯ ಪರಿಕ್ಲೇಶ ಇವುಗಳನ್ನು ಹೃದಯದಲ್ಲಿಟ್ಟುಕೊಂಡು ಪರಾಕ್ರಮವನ್ನು ತೋರಿಸು! ಅದೃಷ್ಟವಶಾತ್ ಅವನು ನಿನ್ನ ಬಾಣಗಳಿಗೆ ಗೋಚರಿಸಿಯೇ ಇದ್ದಾನೆ. ಇನ್ನೂ ಅದೃಷ್ಟವೆಂದರೆ ಅವನು ನಿನ್ನ ಕಾರ್ಯಕ್ಕೆ ವಿಘ್ನವನ್ನುಂಟು ಮಾಡಲು ನಿನ್ನ ಎದುರಿಗೇ ಬಂದು ನಿಂತಿದ್ದಾನೆ. ಅದೃಷ್ಟವಶಾತ್ ಅವನು ಸಂಗ್ರಾಮದಲ್ಲಿ ನಿನ್ನೊಂಡನೆ ಯುದ್ಧಮಾಡಬೇಕೆಂದು ತಿಳಿದುಕೊಂಡೇ ಬಂದಿದ್ದಾನೆ. ಅದೃಷ್ಟವೆಂದರೆ ನೀನು ಬಯಸದೇ ಇದ್ದಿದ್ದರೂ ನಿನ್ನ ಬಯಕೆಗಳನ್ನು ಪೂರೈಸುವ ಸಮಯವು ಬಂದೊದಗಿದೆ. ಹಿಂದೆ ದೇವಾಸುರರ ಯುದ್ಧದಲ್ಲಿ ಇಂದ್ರನು ಜಂಭಾಸುರನನ್ನು ಹೇಗೆ ಕೊಂದನೋ ಹಾಗೆ ನೀನು ರಣದಲ್ಲಿ ಈ ಕುಲಾಧಮ

ಧಾರ್ತರಾಷ್ಟ್ರನನ್ನು ಸಂಹರಿಸು. ಇವನು ಹತನಾಗಲು ನೀನು ಈ ಅನಾಥ ಸೇನೆಯನ್ನೂ ಭೇದಿಸು. ದುರಾತ್ಮರ ಮೂಲವಾಗಿರುವ ಇವನನ್ನು ಚಿಂದಿ ಚಿಂದಿ ಮಾಡಿ ವೈರದ ಅವಭೃತಸ್ನಾನವನ್ನು ಮಾಡು!"

ಹಾಗೆಯೇ ಆಗಲೆಂದು ಪಾರ್ಥನು ಹೇಳಿದನು:

"ನಾನು ಮಾಡಿ ತೋರಿಸಬೇಕಾದುದು ಇದು. ಬೇರೆ ಎಲ್ಲರನ್ನೂ ಕಡೆಗಣಿಸಿ ಸುಯೋಧನನಿರುವಲ್ಲಿಗೆ ಹೋಗು. ದೀರ್ಘಕಾಲದವರೆಗೆ ಯಾವ ಕಂಟಕವೂ ಇಲ್ಲದೇ ನಮ್ಮ ರಾಜ್ಯವನ್ನು ಭೋಗಿಸಿದ ಇವನನ್ನು ರಣಮೂರ್ಧನಿಯಲ್ಲಿ ಯುದ್ಧದಲ್ಲಿ ವಿಕ್ರಮದಿಂದ ಕತ್ತರಿಸಿಬಿಡುತ್ತೇನೆ. ಮಾಧವ! ಕಷ್ಟಗಳಿಗೆ ಅನರ್ಹಳಾಗಿದ್ದ ಕೃಷ್ಣೆಯ ಕೂದಲನ್ನೆಳೆದುದರ ಪ್ರತೀಕಾರವನ್ನು ನಾನು ಮಾಡಬಲ್ಲೆನೇ?"

ಕೃಷ್ಣಬ್ಬರೂ ಹೃಷ್ಟರಾಗಿ ಹೀಗೆ ಮಾತನಾಡಿಕೊಳ್ಳುತ್ತಾ ಆ ಉತ್ತಮ ಶ್ವೇತಾಶ್ವಗಳನ್ನು ರಣದಲ್ಲಿ ಆ ನರಾಧಿಪನನ್ನೇ ತಮ್ಮ ಲಕ್ಷ್ಯವನ್ನಾಗಿರಿಸಿಕೊಳ್ಳಲು ಅವನಲ್ಲಿಗೆ ಹೋದರು. ಅವರು ಸಮೀಪಕ್ಕೆ ಬರಲು ದುರ್ಯೋಧನನು ಮಹಾ ಭಯವು ಪ್ರಾಪ್ತವಾದರೂ ಸ್ವಲ್ಪವೂ ಭಯಪಡಲಿಲ್ಲ. ಎದುರಾಗಿ ಬಂದಿರುವ ಅರ್ಜುನ-ಹೃಷೀಕೇಶರನ್ನು

ವಿಚಾರ ಮಾಡದೇ ಎದುರಿಸಿದ ಅವನನ್ನು ಅಲ್ಲಿದ್ದ ಕ್ಷತ್ರಿಯರೆಲ್ಲರೂ ಪ್ರಶಂಸಿಸಿದರು. ರಣದಲ್ಲಿ ರಾಜನನ್ನು ನೋಡಿ ಕೌರವ ಸೈನ್ಯಗಳಲೆಲ್ಲಾ ಮಹಾನಾದವುಂಟಾಯಿತು. ಹೀಗೆ ಜನರು ಭಯಂಕರ ಕೋಲಾಹಲವನ್ನು ಮಾಡುತ್ತಿರಲು ದುರ್ಯೋಧನನು ಅಮಿತ್ರರನ್ನು ಕಡೆಗಣಿಸಿ ಎದುರಿಸಿ ತಡೆದನು. ಆ ಧನ್ವಿಯಿಂದ ತಡೆಯಲ್ಪಟ್ಟ ಕೌಂತೇಯನು ಅತ್ಯಂತ ಕುಪಿತನಾದನು. ದುರ್ಯೋಧನ-ಧನಂಜಯರು ಪರಸ್ಪರ ಮೇಲೆ ಕುಪಿತರಾದದನ್ನು ಸುತ್ತಲಿದ್ದ ರಾಜರು ನೋಡಿದರು. ಕೃದ್ಧರಾಗಿರುವ ಪಾರ್ಥನನ್ನೂ ವಾಸುದೇವನನ್ನೂ ನೋಡಿ ದುರ್ಯೋಧನನು ಜೋರಾಗಿ ನಕ್ಕು, ಯುದ್ದಮಾಡಲು ಬಯಸಿ ಆಹ್ವಾನಿಸಿದನು.

ಆಗ ಪ್ರಹೃಷ್ಟರಾದ ದಾಶಾರ್ಹ ಮತ್ತು ಧನಂಜಯರು ಮಹಾ ಸಿಂಹನಾದ ಮಾಡಿದರು ಮತ್ತು ಉತ್ತಮ ಶಂಖಗಳನ್ನು ಊದಿದರು. ಹೃಷ್ಟರೂಪರಾದ ಅವರನ್ನು ನೋಡಿ ಕೌರವೇಯರೆಲ್ಲರು ದುರ್ಯೋಧನನ ಜೀವಿತದ ಕುರಿತು ನಿರಾಶರಾದರು. ಇತರರು ಕೂಡ ಶೋಕಿತರಾದರು. ದುರ್ಯೋಧನನು ರಣಯಜ್ಞದ ವೈಶ್ವಾನರನಲ್ಲಿ ಆಹುತಿಯಾದನೆಂದೇ ಅವರೆಲ್ಲರೂ ಪರಿಗಣಿಸಿದರು. ಪ್ರಹೃಷ್ಟರಾದ ಕೃಷ್ಣ-ಪಾಂಡವರನ್ನು ನೋಡಿ ಕೌರವ ಯೋಧರು ಭಯಾರ್ದಿತರಾಗಿ

“ರಾಜನು ಹತನಾದ! ರಾಜನು ಹತನಾದ!” ಎಂದೂ ಕೂಗತೊಡಗಿದರು. ಜನರ ಆ ಕೋಲಾಹಲವನ್ನು ಕೇಳಿ ದುರ್ಯೋಧನನು ಅವರಿಗೆ “ಹೆದರಬೇಡಿ! ಕೃಷ್ಣರಿಬ್ಬರನ್ನೂ ನಾನು ಮೃತ್ಯುವಿಗೆ ಕಳುಹಿಸುತ್ತೇನೆ.” ಎಂದು ಹೇಳಿದನು. ಹೀಗೆ ಸೈನಿಕರೆಲ್ಲರಿಗೆ ಹೇಳಿ ಜಯಾಪೇಕ್ಷೀ ನರಾಧಿಪನು ಕೋಪದಿಂದ ಪಾರ್ಥನಿಗೆ ಈ ಮಾತನ್ನಾಡಿದನು:

> “ಪಾರ್ಥ! ನೀನು ಪಾಂಡುವಿಗೇ ಹುಟ್ಟಿದವನಾಗಿದ್ದರೆ ನೀನು ಕಲಿತಿರುವ ದಿವ್ಯ ಮತ್ತು ಮಾನುಷ ಅಸ್ತ್ರಗಳನ್ನು ನನಗೆ ಬೇಗನೇ ತೋರಿಸು! ನಿನ್ನಲ್ಲಿ ಮತ್ತು ಹಾಗೆಯೇ ಕೇಶವನಲ್ಲಿ ಎಷ್ಟು ಬಲ-ವೀರ್ಯಗಳಿವೆಯೋ ಬೇಗನೆ ನನ್ನ ಎದಿರು ಮಾಡಿ ತೋರಿಸು. ನಿನ್ನ ಪೌರುಷವನ್ನು ನೋಡುತ್ತೇನೆ! ಪರೋಕ್ಷವಾಗಿ ನೀನು ಮಾಡಿದ ಕರ್ಮಗಳ ಕುರಿತು ಹೇಳಿದುದನ್ನು ಕೇಳಿದ್ದೇನೆ. ಸ್ವಾಮಿಯ ಸತ್ಕಾರಗಳಿಗೆ ಯೋಗ್ಯವಾದ ಅವುಗಳನ್ನು ಇಲ್ಲಿಯೂ ಪ್ರದರ್ಶಿಸು!”

ಹೀಗೆ ಹೇಳಿ ರಾಜನು ಅರ್ಜುನನನ್ನು ಮೂರು ಮರ್ಮಾತಿಗ ಶರಗಳಿಂದ ಹೊಡೆದು ಮಹಾವೇಗದಿಂದ ನಾಲ್ಕು ಕುದುರೆಗಳನ್ನೂ ಹೊಡೆದನು. ವಾಸುದೇವನನ್ನೂ ಅವನ ಎದೆಗೆ ಗುರಿಯಿಟ್ಟು ಹತ್ತು

ಬಾಣಗಳಿಂದು ಹೊಡೆದು, ಭಲ್ಲದಿಂದ ಅವನ ಕೈಯಲ್ಲಿದ್ದ ಬಾರಿಕೋಲನ್ನು ಕಿತ್ತು ಭೂಮಿಗೆ ಬೀಳಿಸಿದನು. ತಕ್ಷಣವೇ ಪಾರ್ಥನು ಅವ್ಯಗ್ರನಾಗಿ ಹದಿನಾಲ್ಕು ಚಿತ್ರಪುಂಖಗಳುಳ್ಳ ಶಿಲಾಶಿತಗಳಿಂದ ಹೊಡೆಯಲು ಅವುಗಳನ್ನು ಅವನ ಕವಚವು ಹಿಂದಿರುಗಿಸಿದವು. ಅವುಗಳನ್ನು ವಿಫಲವಾದುದನ್ನು ನೋಡಿ ಪುನಃ ಒಂಭತ್ತು ಮತ್ತು ಐದು ಪ್ರಾಣಗಳನ್ನು ಹಾರಿಸಬಲ್ಲ ನಿಶಿತ ಬಾಣಗಳನ್ನು ಪ್ರಯೋಗಿಸಲು ಅವೂ ಕೂಡ ಅವನ ಕವಚದಿಂದಾಗಿ ನಿರರ್ಥಕವಾದವು. ಆ ಇಪ್ಪತ್ತೆಂಟು ಬಾಣಗಳು ನಿಷ್ಫಲವಾದುದನ್ನು ನೋಡಿ ಕೃಷ್ಣನು ಅರ್ಜುನನಿಗೆ ಇದನ್ನು ಹೇಳಿದನು:

> “ಪಾರ್ಥ! ಶಿಲೆಗಳು ಹರಿದುಹೋಗುವಂತೆ ಹಿಂದೆ ಕಂಡಿರದೇ ಇದ್ದುದನ್ನು ನಾನು ನೋಡುತ್ತಿದ್ದೇನೆ. ನೀನು ಪ್ರಯೋಗಿಸಿದ ಪತ್ರಿಗಳು ನಿರರ್ಥಕವಾಗುತ್ತಿವೆ. ಗಾಂಡೀವದಲ್ಲಿದ್ದ ಪ್ರಾಣ ಮತ್ತು ಹಾಗೆಯೇ ನಿನ್ನ ಮುಷ್ಟಿ ಮತ್ತು ಭುಜಗಳ ಬಲವು ಮೊದಲಿನಂತೆಯೇ ಇದೆ ತಾನೇ? ಇದು ನಿನ್ನ ಮತ್ತು ಈ ಶತ್ರುವಿನ ಕೊನೆಯ ಭೇಟಿಯಲ್ಲವೇ? ನಾನು ಕೇಳುತ್ತಿದ್ದೇನೆ. ಹೇಳು. ಈ ರೀತಿ ರಣದಲ್ಲಿ ದುರ್ಯೋಧನನ ರಥದ ಕಡೆ ಕಳುಹಿಸಿದ ಈ ಶರಗಳು ವ್ಯರ್ಥವಾಗಿ ಬೀಳುತ್ತಿವೆಯೆಂದರೆ

ನನಗೆ ಮಹಾ ವಿಸ್ಮಯವಾಗುತ್ತಿದೆ. ಇಂದು ಇದೇನು ವಿಡಂಬನೆ! ವಜ್ರದಂತೆ ಘೋರವಾಗಿರುವ, ಶತ್ರುಗಳ ಕಾಯವನ್ನು ಭೇದಿಸಬಲ್ಲ ನಿನ್ನ ಈ ಶರಗಳು ಮಾಡಬೇಕಾದುದನ್ನು ಮಾಡುತ್ತಿಲ್ಲವಲ್ಲ!"

ಅರ್ಜುನನು ಹೇಳಿದನು:

"ಕೃಷ್ಣ! ನನಗನಿಸುತ್ತದೆ - ಧಾರ್ತರಾಷ್ಟ್ರನಿಗೆ ದ್ರೋಣನು ಕವಚವನ್ನು ತೊಡಿಸಿದ್ದಾನೆ. ಇವನು ಧರಿಸಿರುವ ಈ ಕವಚವು ಅಸ್ತ್ರಗಳಿಗೆ ಅಭೇದ್ಯವಾದುದು. ಈ ಕವಚದೊಳಗೆ ಮೂರು ಲೋಕಗಳೂ ಅಡಗಿವೆ. ದ್ರೋಣನೊಬ್ಬನಿಗೇ ಇದು ತಿಳಿದಿದೆ. ಮತ್ತು ಆ ಸತ್ತಮನಿಂದ ನಾನೂ ಇದನ್ನು ಕಲಿತಿದ್ದೇನೆ. ಈ ಕವಚವನ್ನು ಬಾಣಗಳಿಂದ - ಯುದ್ಧದಲ್ಲಿ ಸ್ವಯಂ ಮಘವತನಿಗೂ ವಜ್ರದಿಂದ ಕೂಡ - ಎಂದೂ ಭೇದಿಸಲು ಸಾಧ್ಯವಿಲ್ಲ. ಮೂರು ಲೋಕಗಳಲ್ಲಿ ನಡೆಯುವ ಎಲ್ಲವೂ ನಿನಗೆ ತಿಳಿದಿದ್ದರೂ ಏಕೆ ಹೀಗೆ ನನ್ನನ್ನು ಮೋಹಗೊಳಿಸುತ್ತಿರುವೆ? ಹಾಗೆಯೇ ಮುಂದೆ ಆಗುವವೆಲ್ಲವೂ ನಿನಗೆ ತಿಳಿದೇ ಇದೆ. ನಿನಗೆ ತಿಳಿಯದೇ ಇರುವುದು ಯಾವುದೂ ಇಲ್ಲ. ಈ ದುರ್ಯೋಧನನು ದ್ರೋಣನು ತೊಡಿಸಿದ ಈ ಹೊಳೆಯುವ

ಕವಚವನ್ನು ಧರಿಸಿ ರಣದಲ್ಲಿ ಭಯವಿಲ್ಲದೇ ನಿಂತಿದ್ದಾನೆ. ಆದರೆ ಆ ಕವಚವನ್ನು ಧರಿಸಿದವನು ಏನು ಮಾಡಬೇಕು ಎನ್ನುವುದು ಅವನಿಗೆ ತಿಳಿದಿಲ್ಲ! ಸ್ತ್ರೀಯಂತೆ ಇವನು ಇದನ್ನು ಧರಿಸಿ ಮಿರುಗುತ್ತಿದ್ದಾನೆ ಅಷ್ಟೆ! ನನ್ನ ಬಾಹುಗಳ ಮತ್ತು ಧನುಸ್ಸಿನ ವೀರ್ಯವನ್ನು ನೋಡು! ಕವಚದಿಂದ ರಕ್ಷಿತನಾಗಿದ್ದರೂ ಕೂಡ ಕೌರವ್ಯನನ್ನು ಪರಾಜಯಗೊಳಿಸುತ್ತೇನೆ. ಹೊಳೆಯುವ ಈ ಕವಚವನ್ನು ದೇವೇಶನು ಅಂಗಿರಸನಿಗೆ ಕೊಟ್ಟಿದ್ದನು. ಪುನಃ ಸುರಪತಿಯು ನನಗೆ ಈ ಕವಚವನ್ನು, ತೊಡುವ ಮಂತ್ರಗಳೊಡನೆ, ನನಗೆ ಕೊಟ್ಟಿದ್ದನು. ಈ ಕವಚವು ದೈವವಾಗಿದ್ದರೂ, ಸ್ವಯಂ ಬ್ರಹ್ಮನಿಂದ ನಿರ್ಮಿತವಾಗಿದ್ದರೂ, ನನ್ನ ಬಾಣಗಳಿಂದ ಹತನಾಗುವ ಈ ದುರ್ಬುದ್ಧಿಯನ್ನು ಇಂದು ರಕ್ಷಿಸುವುದಿಲ್ಲ!”

ಹೀಗೆ ಹೇಳಿ ಅರ್ಜುನನು ಬಾಣಗಳನ್ನು ಅಭಿಮಂತ್ರಿಸಿ, ಶಿಂಜಿನಿಯನ್ನು ಎಳೆದು ಧನುಸ್ಸಿನ ಮಧ್ಯದಲ್ಲಿ ಹೂಡುತ್ತಿರಲು ದ್ರೌಣಿಯು ಆ ಶರಗಳನ್ನು ಸರ್ವಾಸ್ತ್ರಗಳನ್ನೂ ನಿರಸನಗೊಳಿಸಬಲ್ಲ ಅಸ್ತ್ರದಿಂದ ತುಂಡರಿಸಿದನು. ದೂರದಿಂದಲೇ ಆ ಬ್ರಹ್ಮವಾದಿಯು ಅವುಗಳನ್ನು ಕತ್ತರಿಸಿದುದನ್ನು ನೋಡಿ ವಿಸ್ಮಿತನಾದ ಶ್ವೇತವಾಹನನು ಕೇಶವನಿಗೆ

ನಿವೇದಿಸಿದನು:

> “ಜನಾರ್ದನ! ಈ ಅಸ್ತ್ರವನ್ನು ನಾನು ಎರಡನೆಯ ಬಾರಿ ಪ್ರಯೋಗಿಸಲು ಶಕ್ಯನಿಲ್ಲ. ಈ ಅಸ್ತ್ರವು ನನ್ನನ್ನೇ ನನ್ನ ಬಲವನ್ನೇ ಕೊಂದುಬಿಡುತ್ತದೆ!”

ಆಗ ದುರ್ಯೋಧನನು ಕೃಷ್ಣರಿಬ್ಬರನ್ನೂ ಒಂಭತ್ತು ಸರ್ಪಗಳ ವಿಷದಂತಿರುವ ನತಪರ್ವ ಶರಗಳಿಂದ ಹೊಡೆದನು. ಪುನಃ ಕೃಷ್ಣ-ಪಾಂಡವರ ಮೇಲೆ ಶರಗಳನ್ನು ಸುರಿಸಿದನು. ಆ ಮಹಾ ಶರವರ್ಷದಿಂದ ಕೌರವರು ಹರ್ಷಗೊಂಡರು. ಅವರು ವಾದ್ಯಗಳನ್ನು ಬಾರಿಸಿದರು ಮತ್ತು ಸಿಂಹನಾದವನ್ನು ಕೂಗಿದರು. ಆಗ ಕ್ರುದ್ಧನಾಗಿ ಪಾರ್ಥನು ಕಟವಾಯಿಯನ್ನು ನೆಕ್ಕುತ್ತಾ ಕವಚವು ರಕ್ಷಿಸುತ್ತಿದ್ದ ಅವನ ಅಂಗಗಳನ್ನು ನೋಡದೆಯೇ ಉತ್ತಮವಾಗಿ ಹೂಡಿದ ಅಂತಕನಂತಿರುವ ನಿಶಿತ ಬಾಣಗಳಿಂದ ಅವನ ಎರಡು ಕುದುರೆಗಳನ್ನೂ ಪಾರ್ಷ್ಣಸಾರಥಿಗಳನ್ನೂ ನಿರ್ದೇಹರನ್ನಾಗಿಸಿದನು. ಸವ್ಯಸಾಚಿಯು ಅವನ ಚಿತ್ರ ಧನುಸ್ಸನ್ನೂ, ಹಸ್ತವಾಪವನ್ನೂ ಕತ್ತರಿಸಿ, ರಥವನ್ನೂ ಚೂರು ಚೂರು ಮಾಡಲು ಉಪಕ್ರಮಿಸಿದನು. ಆಗ ತೀಕ್ಷ್ಣವಾದ ಎರಡು ಬಾಣಗಳಿಂದ ದುರ್ಯೋಧನನನ್ನು ವಿರಥನನ್ನಾಗಿ ಮಾಡಿ ಅರ್ಜುನನನು ಅವನ ಎರಡೂ ಅಂಗೈಗಳ ಮಧ್ಯದಲ್ಲಿ

ಹೊಡೆದನು.

ಆ ಪರಮಧನ್ವಿಯಿಂದ ಅವನು ಕಷ್ಟಹೊಂದಿದುದನ್ನು ನೋಡಿ ಧನಂಜಯನ ಶರಗಳಿಂದ ಪೀಡಿತನಾದ ಅವನನ್ನು ರಕ್ಷಿಸಲು ಇತರರು ಮುಂದಾದರು. ಅವರು ಅನೇಕ ಸಹಸ್ರ ಸಜ್ಜಾಗಿದ್ದ ರಥಗಳಿಂದ, ಕುದುರೆ-ಆನೆಗಳಿಂದ ಮತ್ತು ಸಂರಬ್ಧ ಪದಾತಿಗಳಿಂದ ಧನಂಜಯನನ್ನು ಸುತ್ತುವರೆದರು. ಮಹಾ ಅಸ್ತ್ರವರ್ಷಗಳಿಂದ ಮತ್ತು ಜನರ ಗುಂಪುಗಳಿಂದ ಆವೃತರಾದ ಅರ್ಜುನ-ಗೋವಿಂದರಾಗಲೀ, ಅವರ ರಥವಾಗಲೀ ಕಾಣಿಸಲಿಲ್ಲ. ಆಗ ಅರ್ಜುನನು ಅಸ್ತ್ರವೀರ್ಯದಿಂದ ಆ ವರೂಥಿಗಳನ್ನು ಸಂಹರಿಸಿದನು. ಅಲ್ಲಿ ನೂರಾರು ರಥಗಳೂ ಆನೆಗಳು ತುಂಡಾಗಿ ಬಿದ್ದವು. ಕೊಲ್ಲಲು ಬಂದವರು ಅವನ ಉತ್ತಮ ರಥದ ಸಮೀಪ ಬರುವ ಮೊದಲೇ ಹತರಾದರು. ಅವರ ರಥವು ಸುತ್ತುವರೆಯಲ್ಪಟ್ಟು ಒಂದು ಕ್ರೋಶ ದೂರದವರೆಗೆ ಹಾಗೆಯೇ ನಿಂತಿತ್ತು. ಆಗ ತ್ವರೆಮಾಡಿ ವೃಷ್ಣಿವೀರನು ಅರ್ಜುನನಿಗೆ ಹೇಳಿದನು:

“ಧನುಸ್ಸನ್ನು ಟೇಂಕರಿಸು. ನಾನು ಶಂಖವನ್ನು ಊದುತ್ತೇನೆ.”

ಆಗ ಅರ್ಜುನನು ಬಲವಾಗಿ ಗಂಡೀವವನ್ನು ಟೇಂಕರಿಸಿ ಮಹಾ ಶರವರ್ಷಗಳಿಂದ ಮತ್ತು ಚಪ್ಪಾಳೆಗಳಿಂದ ಶತ್ರುಗಳನ್ನು ಸಂಹರಿಸಿದನು. ಧೂಳಿನಿಂದ ಮುಖವು ಮಸುಕಾಗಿದ್ದ ಕೇಶವನು

ಜೋರಾಗಿ ಬಲವನ್ನುಪಯೋಗಿಸಿ ಪಾಂಚಜನ್ಯವನ್ನು ಊದಿದನು. ಅವನ ಶಂಖದ ನಾದದಿಂದ ಮತ್ತು ಧನುಸ್ಸಿನ ನಿಸ್ವನದಿಂದ ಸತ್ತ್ವವಿಲ್ಲದ ಮತ್ತು ಸತ್ತ್ವವಿದ್ದ ಜನರು ನೆಲದ ಮೇಲೆ ಬಿದ್ದರು. ಅವರಿಂದ ವಿಮುಕ್ತವಾದ ಅವರ ರಥವು ಗಾಳಿಯಿಂದ ತೂರಲ್ಪಟ್ಟ ಮೋಡಗಳಿಂದ ಹೊರಬಂದಿತು.

ಆಗ ಜಯದ್ರಥನ ಗೋಪ್ತಾರರು ಅವರ ಅನುಯಾಯಿಗಳೊಂದಿಗೆ ತಲ್ಲಣಿಸಿದರು. ಪಾರ್ಥನನ್ನು ನೋಡಿದೊಡನೆಯೇ ಸೈಂಧವನ ರಕ್ಷಕರು ವಸುಂಧರೆಯನ್ನು ನಡುಗಿಸುತ್ತಾ ಬಹುವಿಧದ ನಾದಗೈದರು. ಬಾಣದ ಶಬ್ಧ, ಉಗ್ರ ಕೂಗುಗಳು ಶಂಖನಿಸ್ವನಗಳೊಂದಿಗೆ ಸೇರಲು ಆ ಮಹಾತ್ಮರು ಸಿಂಹನಾದಗಳನ್ನೂ ಕೂಗಿದರು. ಕೌರವರಿಂದ ಹೊರಹೊಮ್ಮಿದ ಆ ಘೋರ ನಿನಾದವನ್ನು ಕೇಳಿ ವಾಸುದೇವ-ಧನಂಜಯರು ಶಂಖಗಳನ್ನು ಊದಿದರು. ಆ ಮಹಾ ಶಬ್ಧದಿಂದ ಶೈಲ-ಸಾಗರ-ದ್ವೀಪ-ಪಾತಾಲಗಳೊಂದಿಗೆ ಈ ಭೂಮಿಯು ತುಂಬಿಕೊಂಡಿತು. ಆ ಶಬ್ದವು ಸರ್ವ ದಶ ದಿಶಗಳನ್ನೂ ತಲುಪಿ ಅಲ್ಲಿಯೇ ಕುರು-ಪಾಂಡವರ ಸೇನೆಗಳಲ್ಲಿ ಪ್ರತಿಧ್ವನಿಸಿತು. ಅಲ್ಲಿ ಕೌರವ ರಥಿಗಳನ್ನು ನೋಡಿ ಮಹಾರಥ ಕೃಷ್ಣ-ಧನಂಜಯರು ಪರಮ ಕುಪಿತರಾಗಿ ತ್ವರೆಮಾಡಿ ಮುಂದುವರೆದರು. ಆಗ ಮಹಾಭಾಗರಾದ

ಕೃಷ್ಣರಿಬ್ಬರೂ ಕವಚಧಾರಿಗಳಾದ ಕೌರವರನ್ನು ನೋಡಿ ಸಂಕ್ರುದ್ಧರಾಗಿ ಆಕ್ರಮಣಿಸಿದರು. ಅದೊಂದು ಅದ್ಭುತವಾಗಿತ್ತು.

## ಸಂಕುಲಯುದ್ಧ

ವೃಷ್ಣಿ-ಅಂಧಕ-ಮತ್ತು ಕುರು ಉತ್ತಮರನ್ನು ನೋಡಿ ಕೌರವರು ಅವರನ್ನು ಕೊಲ್ಲಲು ನಾಮುಂದು ತಾಮುಂದು ಎಂದು ಮುನ್ನುಗ್ಗಲು ವಿಜಯನೂ ಶತ್ರುಗಳ ಮೇಲೆ ಎರಗಿದನು. ಸುವರ್ಣ ಚಿತ್ರಗಳಿಂದ, ವ್ಯಾಘ್ರಚರ್ಮಗಳಿಂದ ಅಲಂಕೃತಗೊಂಡ, ಉತ್ತಮ ಶಬ್ಧಮಾಡುತ್ತಿರುವ ಮಹಾರಥಗಳಲ್ಲಿ, ಎಲ್ಲ ದಿಕ್ಕುಗಳನ್ನೂ ಪ್ರಜ್ವಲಿಸುತ್ತಿರುವ ಪಾವಕನಂತೆ ಬೆಳಗಿಸುತ್ತಾ, ಬಂಗಾರದ ಹಿಡಿಯನ್ನುಳ್ಳ ಕಾರ್ಮುಕಗಳನ್ನು ಎತ್ತಿ ತೋರಿಸುತ್ತಾ, ಸರಿಸಾಟಿಯಿಲ್ಲದ ಕೂಗುಗಳನ್ನು ಕೂಗುತ್ತಾ, ಕ್ರುದ್ಧರಾದ ಕುದುರೆಗಳಂತೆ ಭೂರಿಶ್ರವ, ಶಲ, ಕರ್ಣ, ವೃಷಸೇನ, ಜಯದ್ರಥ, ಕೃಪ, ಮದ್ರರಾಜ, ಮತ್ತು ದ್ರೌಣಿ ಈ ಎಂಟು ಮಹಾರಥರು ಇಡೀ ಆಕಾಶವನ್ನೇ ಕುಡಿದು ಬಿಡುತ್ತಾರೋ ಎನ್ನುವಂತೆ ವೈಯಾಘ್ರ-ಹೇಮಚಂದ್ರಕಗಳಿಂದ ದಶ-ದಿಶಗಳನ್ನೂ ಬೆಳಗಿಸಿದರು. ತುಂಬಾ ಕುಪಿತರಾಗಿದ್ದ ಆ ಕವಚಧಾರಿಗಳು ಮೋಡಗಳ ಗುಂಪುಗಳಂತೆ ಗುಡುಗುತ್ತಿದ್ದ ರಥಗಳಲ್ಲಿ ಎಲ್ಲ ದಿಕ್ಕುಗಳನ್ನೂ ಪಾರ್ಥನನ್ನೂ ಹರಿತ ವಿಶಿಖಗಳಿಂದ ಮುಚ್ಚಿಬಿಟ್ಟರು. ಆ

ಮಹಾರಥರನ್ನು ಕೊಂಡೊಯ್ಯುತ್ತಿದ್ದ ಉತ್ತಮ ಥಳಿಯ ಸುಂದರ ಶೀಘ್ರ ಕುದುರೆಗಳು ಹತ್ತು ದಿಕ್ಕುಗಳನ್ನೂ ಬೆಳಗಿಸುತ್ತಿರುವಂತೆ ಪ್ರಕಾಶಿಸುತ್ತಿದ್ದವು. ಮಹಾವೇಗವುಳ್ಳವುಗಳಾಗಿದ್ದ ಆ ಉತ್ತಮ ಕುದುರೆಗಳು ನಾನಾ ದೇಶಗಳಲ್ಲಿ ಹುಟ್ಟಿದ್ದವು; ಪರ್ವತಗಳಲ್ಲಿ, ನದಿಗಳಲ್ಲಿ ಮತ್ತು ಸಿಂಧುದೇಶಗಳಲ್ಲಿ ಹುಟ್ಟಿದ್ದವು. ದುರ್ಯೋಧನನನ್ನು ರಕ್ಷಿಸುವ ಕುರುಯೋಧ ಶ್ರೇಷ್ಠರು ಶೀಘ್ರದಲ್ಲಿಯೇ ಧನಂಜಯನ ರಥವನ್ನು ಎಲ್ಲ ಕಡೆಗಳಿಂದ ಸುತ್ತುವರೆದರು. ಆ ಪುರುಷಸತ್ತಮರು ಮಹಾ ಶಂಖಗಳನ್ನು ತೆಗೆದುಕೊಂಡು ಸಾಗರಗಳೊಂದಿಗೆ ಪೃಥ್ವಿಯನ್ನೂ ದಿವವನ್ನೂ ತುಂಬುತ್ತಾ ಊದಿದರು. ಹಾಗೆಯೇ ಸರ್ವಭೂತಗಳಲ್ಲಿ ಶ್ರೇಷ್ಠರಾದ ವಾಸುದೇವ ಧನಂಜಯರು ಭುವಿಯಲ್ಲಿರುವ ಎಲ್ಲ ಶಂಖಗಳಲ್ಲಿ ಶ್ರೇಷ್ಠವಾದ ಶಂಖಗಳನ್ನು – ಕೌಂತೇಯನು ದೇವದತ್ತವನ್ನೂ ಕೇಶವನು ಪಾಂಚಜನ್ಯವನ್ನೂ – ಊದಿದರು. ಧನಂಜಯನು ಊದಿದ ದೇವದತ್ತದ ಶಬ್ಧವು ಪೃಥ್ವಿಯನ್ನೂ, ಅಂತರಿಕ್ಷವನ್ನೂ, ಮತ್ತು ದಿಕ್ಕುಗಳನ್ನೂ ತುಂಬಿತು. ಹಾಗೆಯೇ ವಾಸುದೇವನು ಊದಿದ ಪಾಂಚಜನ್ಯವೂ ಕೂಡ ಎಲ್ಲ ಶಬ್ಧಗಳನ್ನೂ ಮೀರಿಸಿ ಭೂಮಿ ಅಂತರಿಕ್ಷಗಳನ್ನು ತುಂಬಿತು. ಹಾಗೆ ದಾರುಣವಾದ ನಾದಸಂಕುಲವು ನಡೆಯುತ್ತಿರಲು - ಭೇರಿಗಳು, ಝರ್ಝರಗಳು, ಅನಕಗಳು, ಮೃದಂಗಗಳು ಮತ್ತು ಅನೇಕ ವಾದ್ಯಗಳು

ಬಾರಿಸಲ್ಪಡಲು - ಹೇಡಿಗಳಿಗೆ ಭಯವುಂಟಾಯಿತು ಮತ್ತು ಶೂರರಿಗೆ ಹರ್ಷವು ಹೆಚ್ಚಾಯಿತು. ಅಲ್ಲಿ ಸೇರಿದ್ದ ದುರ್ಯೋಧನನ ಹಿತೈಷಿಣಿಗಳಾದ, ತಮ್ಮ ಸೇನೆಗಳನ್ನೂ ಪರಿರಕ್ಷಿಸುತ್ತಿದ್ದ ನಾನಾ ದೇಶದ ಮಹೀಪಾಲ ಮಹಾರಥ ವೀರರು ಆ ಪರಮಧನ್ವಿಯ ಶಬ್ಧವನ್ನು ಸಹಿಸಲಾರದೇ ಕ್ರುದ್ಧರಾಗಿ ಅಸಹನೆಯಿಂದ ಕೇಶವಾರ್ಜುನರನ್ನು ಮೀರಿಸಬೇಕೆಂದು ತಮ್ಮ ತಮ್ಮ ಶಂಖಗಳನ್ನು ಊದಿದರು. ಶಂಖಶಬ್ಧದಿಂದ ತುಂಬಿಹೋದ ಸೈನ್ಯವು - ರಥ, ಆನೆ, ಕುದುರೆಗಳು ಅಸ್ವಸ್ಥರಾದವರಂತೆ ಉದ್ವಿಗ್ನಗೊಂಡರು. ಶೂರರ ಆ ಶಂಖನಿನಾದವು ಆಕಾಶವೇ ಕೆಳಗೆ ಬಿದ್ದರೆ ಹೇಗೋ ಹಾಗೆ ಶಬ್ಧಗೊಳ್ಳಲು ತುಂಬಾ ಉದ್ವಿಗ್ನತೆಯುಂಟಾಯಿತು. ಆ ಮಹಾ ಶಬ್ಧವು ಯುಗವೇ ಅಂತ್ಯವಾಗುತ್ತಿದೆಯೋ ಎನ್ನುವಂತೆ ಎಲ್ಲ ದಿಕ್ಕುಗಳಲ್ಲಿಯೂ ಮೊಳಗಿ ಆ ಸೈನ್ಯವನ್ನು ಭ್ರಾಂತಗೊಳಿಸಿ ತತ್ತರಿಸುವಂತೆ ಮಾಡಿತು.

ಆಗ ದುರ್ಯೋಧನ ಮತ್ತು ಆ ಎಂಟು ಮಂದಿಗಳು ಜಯದ್ರಥನನ್ನು ರಕ್ಷಿಸಲು ಪಾಂಡವನನ್ನು ಸುತ್ತುವರೆದರು. ಆಗ ದ್ರೌಣಿಯು ಎಪ್ಪತ್ಮೂರರಿಂದ ವಾಸುದೇವನನ್ನು ಹೊಡೆದನು. ಅರ್ಜುನನನ್ನು ಮೂರು ಭಲ್ಲೆಗಳಿಂದ ಮತ್ತು ಐದರಿಂದ ಅವನ ಧ್ವಜ-ಅಶ್ವಗಳನ್ನು ಹೊಡೆದನು. ಜನಾರ್ದನನಿಗೆ ಹೊಡೆದುದನ್ನು ನೋಡಿ ಸಂಕ್ರುದ್ಧನಾದ

ಅರ್ಜುನನು ಅವನನ್ನು ನೂರಾ ಆರು ಬಾಣಗಳಿಂದ ಹೊಡೆದನು. ಕರ್ಣನನ್ನು ಹನ್ನೆರಡರಿಂದ ಮತ್ತು ವೃಷಸೇನನನ್ನು ಮೂರರಿಂದ ಹೊಡೆದು ಆ ವೀರ್ಯವಾನನು ಶಲ್ಯನ ಮುಷ್ಟಿಯಲ್ಲಿದ್ದ ಶರಗಳೊಡನೆ ಚಾಪವನ್ನು ಕತ್ತರಿಸಿದನು. ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಶಲ್ಯನು ಪಾಂಡವನನ್ನು ಹೊಡೆದನು. ಭೂರಿಶ್ರವನು ಮೂರು ಶಿಲಾಶಿತ ಹೇಮಪುಂಖಗಳ ಬಾಣಗಳಿಂದ, ಕರ್ಣನು ಮೂವತ್ತೆರಡರಿಂದ, ವೃಷಸೇನನು ಐದರಿಂದ, ಜಯದ್ರಥನು ಎಪ್ಪತ್ಮೂರರಿಂದ, ಕೃಪನು ಹತ್ತರಿಂದ ಮತ್ತು ಮದ್ರರಾಜನು ಹತ್ತು ಶರಗಳಿಂದ ಫಲ್ಗುನನನ್ನು ರಣದಲ್ಲಿ ಹೊಡೆದರು. ಆಗ ದ್ರೌಣಿಯು ಅರವತ್ತು ಶರಗಳಿಂದ ಪಾರ್ಥನನ್ನು, ಎಪ್ಪತ್ತರಿಂದ ವಾಸುದೇವನನ್ನೂ, ಪುನಃ ಪಾರ್ಥನನ್ನು ಐದರಿಂದ ಮುಚ್ಚಿದನು. ನರವ್ಯಾಘ್ರ ಶ್ವೇತಾಶ್ವ ಕೃಷ್ಣಸಾರಥಿಯು ಜೋರಾಗಿ ನಕ್ಕು ಅವರೆಲ್ಲರನ್ನು ತಿರುಗಿ ಹೊಡೆದು ತನ್ನ ಹಸ್ತಲಾಘವವನ್ನು ಪ್ರದರ್ಶಿಸಿದನು. ಕರ್ಣನನ್ನು ಹನ್ನೆರಡು ಮತ್ತು ವೃಷಸೇನನನ್ನು ಮೂರು ಶರಗಳಿಂದ ಹೊಡೆದು ಶಲ್ಯನ ಮುಷ್ಟಿದೇಶದಲ್ಲಿ ಅವನ ಚಾಪವನ್ನು ಕತ್ತರಿಸಿದನು. ಸೌಮದತ್ತಿಯನ್ನು ಮೂರರಿಂದ ಮತ್ತು ಶಲ್ಯನನ್ನು ಹತ್ತು ಶರಗಳಿಂದ ಹೊಡೆದು ದ್ರೌಣಿಯನ್ನು ಎಂಟು ಅಗ್ನಿಶಿಖೆಗಳಂತೆ ತೀಕ್ಷ್ಣವಾಗಿರುವ ಎಂಟರಿಂದ ಹೊಡೆದನು. ಗೌತಮನನ್ನು ಇಪ್ಪತ್ತೈದರಿಂದ, ಸೈಂಧವನನ್ನು

ನೂರರಿಂದ ಮತ್ತೆ ಪುನಃ ದ್ರೌಣಿಯನ್ನು ಎಪ್ಪತ್ತು ಶರಗಳಿಂದ ಅವನು ಹೊಡೆದನು. ಭೂರಿಶ್ರವನಾದರೋ ಸಂಕ್ರುದ್ಧನಾಗಿ ಹರಿಯ ಬಾರಿಕೋಲನ್ನು ತುಂಡರಿಸಿ ಅರ್ಜುನನನ್ನು ಎಪ್ಪತ್ಮೂರು ಬಾಣಗಳಿಂದ ಹೊಡೆದನು. ಆಗ ಶ್ವೇತವಾಹನನು ಕ್ರುದ್ಧನಾಗಿ ಭಿರುಗಾಳಿಯಿಂದ ಚಲಿಸಲ್ಪಟ್ಟ ಮೋಡಗಳಂತೆ ಶತ್ರುಗಳ ಮೇಲೆ ನೂರಾರು ತೀಕ್ಷ್ಣವಾದ ಶರಗಳನ್ನು ಸುರಿಸಿದನು.

## ಧ್ವಜವರ್ಣನೆ

ಆ ರಥಮುಖ್ಯರ ರಥಗಳಲ್ಲಿ ಅಗ್ನಿಗಳಂತೆ ಪ್ರಜ್ವಲಿಸುತ್ತಿದ್ದ ವಿವಿಧ ಧ್ವಜಗಳು ಕಾಣಿಸುತ್ತಿದ್ದವು. ಕಾಂಚನದ ಮಹಾಗಿರಿಯ ಕಾಂಚನ ಶಿಖರಗಳಂತೆ ಅವು ಸುವರ್ಣಮಯವಾಗಿಯೂ, ಸುವರ್ಣಗಳಿಂದ ಅಲಂಕೃತವಾಗಿಯೂ, ಸುವರ್ಣದ ಮಾಲೆಗಳಿಂದ ಭೂಷಿತವಾಗಿದ್ದವು. ಆ ಧ್ವಜಗಳು ಎಲ್ಲಕಡೆಗಳಿಂದ ಸುತ್ತಲೂ ನಾನಾ ಬಣ್ಣಗಳ ಪತಾಕೆಗಳಿಂದ ಸುತ್ತುವರೆಯಲ್ಪಟ್ಟು ಶೋಭಿಸುತ್ತಿದ್ದವು. ಆ ಪತಾಕೆಗಳು ಗಾಳಿಯಿಂದ ಪಟ ಪಟನೆ ಹಾರಾಡುತ್ತಿದ್ದು ರಂಗಮಧ್ಯದಲ್ಲಿ ನರ್ತಿಸುವ ವಿಲಾಸಿನಿಯರಂತೆ ಕಾಣುತ್ತಿದ್ದವು. ಕಾಮನ ಬಿಲ್ಲಿನ ಬಣ್ಣಗಳಿಂದ ಹೊಳೆಯುತ್ತಿದ್ದ ಪತಾಕೆಗಳು ಹಾರಾಡುತ್ತಾ ಮಹಾರಥರ ರಥಗಳನ್ನು ಶೋಭಿಸುತ್ತಿದ್ದವು. ಸಿಂಹದ

ಪುಚ್ಛವನ್ನು ಹೊಂದಿದ್ದ, ಉಗ್ರವಾದ ಮುಖವುಳ್ಳ ವಾನರ ಚಿಹ್ನೆಯುಳ್ಳ ಧನಂಜಯನ ಭೈರವ ಧ್ವಜವು ಕಂಡಿತು. ಗಾಂಡೀವಧನ್ವಿನಿಯ ಧ್ವಜದಲ್ಲಿದ್ದ, ಪತಾಕೆಗಳಿಂದ ಅಲಂಕೃತಗೊಂಡಿದ್ದ ಆ ವಾನರವರನು ಆ ಸೈನ್ಯವನ್ನು ಭಯಪಡಿಸುತ್ತಿದ್ದನು. ಹಾಗೆಯೇ ಬಾಲಸೂರ್ಯನ ಪ್ರಭೆಯುಳ್ಳ ದ್ರೋಣಪುತ್ರನ ಸಿಂಹದ ಪುಚ್ಛವುಳ್ಳ ಧ್ವಜವೂ ಅಲ್ಲಿ ಕಂಡಿತು. ಗಾಳಿಯಲ್ಲಿ ತೇಲುವಂತಿದ್ದ, ಪ್ರಭೆಯಲ್ಲಿ ಶಕ್ರಧ್ವಜಕ್ಕೆ ಸಮನಾದ, ದ್ರೌಣಿಯ ಲಕ್ಷಣಯುಕ್ತವಾದ ಬಂಗಾರದ ಧ್ವಜವು ಕೌರವೇಂದ್ರರನ್ನು ಹರ್ಷಗೊಳಿಸುತ್ತಿತ್ತು. ಆಧಿರಥ ಕರ್ಣನ ಧ್ವಜದಲ್ಲಿ ಬಂಗಾರದ ಗಜಶಾಲೆಯಿದ್ದಿತು. ಅದು ರಣರಂಗದಲ್ಲಿ ಆಕಾಶವನ್ನೇ ತುಂಬಿಬಿಡುವಂತಿತ್ತು. ಸಂಯುಗದಲ್ಲಿ ಕರ್ಣನ ಕಾಂಚನ ಮಾಲೆಗಳಿಂದ ಅಲಂಕೃತವಾದ ಪತಾಕೆಯಲ್ಲಿದ್ದ ಧ್ವಜವು ಗಾಳಿಯಿಂದ ಹಾರಾಡಿ ರಥದ ಮೇಲೆ ನರ್ತಿಸುತ್ತಿರುವಂತೆ ಕಾಣುತ್ತಿತ್ತು. ಪಾಂಡವರ ಆಚಾರ್ಯನೂ ಆಗಿರುವ ಯಶಸ್ವಿ ಬ್ರಾಹ್ಮಣ ಗೌತಮ ಕೃಪನ ಧ್ವಜದಲ್ಲಿ ಸುಪರಿಷ್ಕೃತವಾದ ಎತ್ತಿನ ಹೋರಿಯ ಚಿಹ್ನೆಯಿತ್ತು. ಆ ಎತ್ತಿನ ಹೋರಿಯ ಧ್ವಜದಿಂದ ಆ ಮಹಾರಥನು ರಥದಲ್ಲಿ ಎತ್ತಿನ ಹೋರಿಯ ರಥದಲ್ಲಿ ಕುಳಿತಿದ್ದ ತ್ರಿಪುರಘ್ನ ಶಿವನಂತೆ ವಿರಾಜಿಸುತ್ತಿದ್ದನು. ವೃಷಸೇನನದು ಕಾಂಚನದ, ಮಣಿರತ್ನಗಳಿಂದ ಅಲಂಕೃತವಾದ ಮಯೂರ ಧ್ವಜ. ಸೇನೆಗಳ ಮೇಲೆ ಹಾರಾಡುತ್ತಿದ್ದ ಅದು

ಶೋಭಿಸುತ್ತಿತ್ತು. ಸ್ಕಂದನ ಮಯೂರದಂತೆ ಆ ಮಹಾತ್ಮನ ಮಯೂರವು ರಥದ ಮೇಲೆ ವಿರಾಜಿಸುತ್ತಿತ್ತು. ಮದ್ರರಾಜ ಶಲ್ಯನ ಧ್ವಜಾಗ್ರದಲ್ಲಿ ಅಗ್ನಿಶಿಖೆಯಂತೆ ಸುವರ್ಣಮಯದ ಅಪ್ರತಿಮ ಶುಭವಾದ ನೇಗಿಲಿತ್ತು. ಎಲ್ಲ ಬೀಜಗಳನ್ನೇರಿ ಶ್ರೀಯಿಂದ ಆವೃತವಾದ ನೇಗಿಲಿನಂತೆ ಅವನ ರಥದ ಮೇಲೆ ಆ ನೇಗಿಲು ಹೊಳೆಯುತ್ತಿತ್ತು. ಸಿಂಧುರಾಜನ ಧ್ವಜಾಗ್ರದಲ್ಲಿ ಸೂರ್ಯನ ಕೆಂಪಿನ ಹೇಮಜಾಲಗಳಿಂದ ಅಲಂಕೃತವಾದ ರಜತ ವರಾಹವು ವಿರಾಜಿಸುತ್ತಿತ್ತು. ಆ ರಜತ ಕೇತುವಿನಿಂದಾಗಿ ಜಯದ್ರಥನು ಹಿಂದೆ ದೇವಾಸುರರ ಯುದ್ಧದಲ್ಲಿ ಸೂರ್ಯನು ಹೇಗೋ ಹಾಗೆ ಶೋಭಿಸಿದನು. ಯಜ್ಞಶೀಲ, ಧೀಮತ ಸೌಮದತ್ತಿಯ ಸೂರ್ಯನಂತೆ ಪ್ರಕಾಶಿಸುತ್ತಿದ್ದ ಧ್ವಜದಲ್ಲಿ ಯೂಪಸ್ತಂಭದ ಮತ್ತು ಚಂದ್ರನ ಚಿಹ್ನೆಗಳು ಕಾಣುತ್ತಿದ್ದವು. ಸೌಮದತ್ತಿಯ ಕಾಂಚನದ ಯೂಪವು ಮಖಶ್ರೇಷ್ಠವಾದ ರಾಜಸೂಯದಲ್ಲಿ ಎತ್ತರ ಯೂಪವು ಹೇಗೋ ಹಾಗೆ ವಿರಾಜಿಸುತ್ತಿತ್ತು. ಶಲನ ಧ್ವಜದಲ್ಲಿ ದೊಡ್ಡದಾದ ಆನೆಯ ಚಿಹ್ನೆಯಿತ್ತು. ಆ ಕೇತುವು ಬಂಗಾರದ ಚಿತ್ರಾಂಗ ಮಯೂರಗಳಿಂದ ಶೋಭಿಸುತ್ತಿತ್ತು. ಆ ಕೇತುವು ಕೌರವ ಸೇನೆಯನ್ನು ಶೋಭೆಗೊಳಿಸುತ್ತಿತ್ತು. ಬಿಳಿಯ ಮಹಾ ಆನೆಯು ದೇವರಾಜನ ಸೇನೆಯನ್ನು ಹೇಗೋ ಹಾಗಿ ರಾಜನ ಮಣಿಮಯಧ್ವಜದಲ್ಲಿ ಕನಕಸಂವೃತವಾದ ಆನೆಯ ಚಿಹ್ನೆಯಿತ್ತು.

ನೂರಾರು ಸಣ್ಣ ಸಣ್ಣ ಗಂಟೆಗಳ ಕಿಲಕಿಲನಿನಾದದಿಂದ ಕೂಡಿದ ಆ ಧ್ವಜವು ದುರ್ಯೋಧನನ ಉತ್ತಮ ರಥದಲ್ಲಿ ಶೋಭಾಯಮಾನವಾಗಿ ಕಾಣುತ್ತಿತ್ತು. ರಣದಲ್ಲಿ ಕುರುವೃಷಭರ ಈ ಒಂಭತ್ತು ಮಹಾ ಪರಮಧ್ವಜಗಳು ಕೌರವ ಸೇನೆಯ ಮೇಲೆ ಎತ್ತರದಲ್ಲಿ ಹಾರಾಡುತ್ತಾ ಯುಗಾಂತದ ಆದಿತ್ಯನ ಪ್ರಕಾಶದಂತೆ ಸೇನೆಗಳನ್ನು ಬೆಳಗಿಸುತ್ತಿದ್ದವು. ಹತ್ತನೆಯದಾದ ಅರ್ಜುನನ ಮಹಾಕಪಿ ಒಬ್ಬನೇ ಅಗ್ನಿಯು ಹಿಮವಂತನನ್ನು ಬೆಳಗಿಸುವಂತೆ ಅರ್ಜುನನನ್ನು ಬೆಳಗಿಸುತ್ತಿದ್ದನು. ಆಗ ತಕ್ಷಣವೇ ಆ ಮಹಾರಥ ಪರಂತಪರು ಅರ್ಜುನನೊಡನೆ ಹೋರಾಡುವುದಕ್ಕಾಗಿ ವಿಚಿತ್ರವಾದ ಶುಭ್ರವಾದ ದೊಡ್ಡ ಕಾರ್ಮುಕಗಳನ್ನು ಕೈಗೆತ್ತಿಕೊಂಡರು. ದಿವ್ಯಕರ್ಮಿ ಶತ್ರುವಿನಾಶಕ ಪಾರ್ಥನು ಗಾಂಡೀವ ಧನುಸ್ಸನ್ನು ಎತ್ತಿಕೊಂಡನು.

ನಾನಾ ದಿಕ್ಕುಗಳಿಂದ ಆಹ್ವಾನಿತರಾದ ಬಹಳಷ್ಟು ನರರು ರಥ-ಕುದುರೆ-ಆನೆಗಳೊಂದಿಗೆ ಯುದ್ಧದಲ್ಲಿ ಹತರಾದರು. ಇತರೇತರರ ಮೇಲೆ ಗುರಿಯಿಟ್ಟು ಗರ್ಜಿಸುತ್ತಿರುವ ದುರ್ಯೋಧನ ಪ್ರಮುಖರ ಮತ್ತು ಪಾಂಡವ ವೃಷಭನ ಮಧ್ಯೆ ಅತಿ ಘೋರ ಯುದ್ಧವು ನಡೆಯಿತು. ಕೃಷ್ಣಸಾರಥಿ ಕೌಂತೇಯನು ಒಬ್ಬನೇ ಅನೇಕರೊಂದಿಗೆ ಭಯಗೊಳ್ಳದೇ ಹೋರಾಡಿ ಅಲ್ಲಿ ಪರಮ ಅದ್ಭುತವಾದುದನ್ನು ಮಾಡಿದನು. ಆ

ನರವ್ಯಾಘ್ರರನ್ನು ಗೆಲ್ಲಲು ಬಯಸಿದ ಜಯದ್ರಥನನ್ನು ಕೊಲ್ಲಲು ಬಯಸಿದ ಆ ಮಹಾಬಾಹುವು ಗಾಂಡೀವ ಧನುಸ್ಸನ್ನು ಸೆಳೆಯುತ್ತಾ ಶೋಭಿಸಿದನು. ಅಲ್ಲಿ ಶತ್ರುತಾಪನ ಅರ್ಜುನನು ಪ್ರಯೋಗಿಸಿದ ಸಹಸ್ರಾರು ಶರಗಳು ಕೌರವ ಯೋಧರೇ ಕಾಣದಂತೆ ಮಾಡಿದವು. ಆಗ ಆ ಮಹಾರಥ ನರವ್ಯಾಘ್ರರೆಲ್ಲರೂ ಕೂಡ ಸಾಯಕಗಳಿಂದ ಎಲ್ಲಕಡೆ ಪಾರ್ಥನನ್ನು ಮುಚ್ಚಿ ಅದೃಶ್ಯನನ್ನಾಗಿಸಿದರು. ಕುರುಗಳ ಋಷಭ ಅರ್ಜುನನನ್ನು ಆ ನರಸಿಂಹರು ಸುತ್ತುವರೆದಿರಲು ಆಗ ಆ ಸೇನೆಯ ಮಧ್ಯದಲ್ಲಿ ದೊಡ್ಡದಾದ ಕೋಲಾಹಲ ಶಬ್ಧವೆದ್ದಿತು.

## ದ್ರೋಣ-ಯುಧಿಷ್ಠಿರರ ಯುದ್ಧ

ಸಂಗ್ರಾಮದ ಅಪರಾಹ್ಣದಲ್ಲಿ ದ್ರೋಣನನ್ನೇ ಪಣವಾಗಿದ್ದ ಲೋಮಹರ್ಷಣ ಯುದ್ಧವು ಪಾಂಚಾಲ-ಕುರುಗಳ ಮಧ್ಯೆ ನಡೆಯಿತು. ಹೃಷ್ಟಚೇತಸರಾದ ಪಾಂಚಾಲರು ದ್ರೋಣನನ್ನು ಸಂಹರಿಸಲು ಬಯಸಿ ಗರ್ಜಿಸುತ್ತಾ ಬಾಣಗಳ ಮಳೆಯನ್ನು ಸುರಿಸಿದರು. ಆಗ ಪಾಂಚಾಲರು ಮತ್ತು ಕುರುಗಳ ನಡುವೆ ದೇವಾಸುರರಂತೆ ಘೋರವಾದ ಅದ್ಭುತ ತುಮುಲ ಸಂಗ್ರಾಮವು ನಡೆಯಿತು. ಎಲ್ಲ ಪಾಂಚಾಲರೂ ಪಾಂಡವರೊಂದಿಗೆ ದ್ರೋಣನ ರಥವನ್ನು ಸಮೀಪಿಸಿ ಆ ಸೇನೆಯನ್ನು ಬೆದರಿಸುತ್ತಾ ಮಹಾ ಅಸ್ತ್ರಗಳನ್ನು ಪ್ರದರ್ಶಿಸಿದರು. ದ್ರೋಣನ ರಥದ

ವರೆಗೂ ರಥಗಳಲ್ಲಿದ್ದ ರಥಿಗಳು ಮಧ್ಯಮ ವೇಗದಲ್ಲಿ ಭೂಮಿಯನ್ನು ನಡುಗಿಸುತ್ತಾ ಮುಂದುವರೆಯುತ್ತಿದ್ದರು. ಆಗ ಕೇಕಯರ ಮಹಾರಥ ಬೃಹತ್ಕ್ಷತ್ರನು ಮಹೇಂದ್ರನ ವಜ್ರದಂತಿರುವ ನಿಶಿತ ಬಾಣಗಳನ್ನು ಪ್ರಯೋಗಿಸುತ್ತಾ ಆಕ್ರಮಣಿಸಿದನು. ಮಹಾಯಶಸ್ವಿ ಕ್ಷೇಮಧೂರ್ತಿಯು ನೂರಾರು ಸಹಸ್ರಾರು ನಿಶಿತ ಬಾಣಗಳನ್ನು ಬಿಡುತ್ತಾ ಶೀಘ್ರವಾಗಿ ಅವನನ್ನು ಎದುರಿಸಿದನು. ಅತಿಬಲಾನ್ವಿತನಾದ ಚೇದಿಗಳ ಋಷಭ ಧೃಷ್ಟಕೇತುವು ತ್ವರೆಮಾಡಿ ಶಂಬರನನ್ನು ಮಹೇಂದ್ರನಂತೆ ದ್ರೋಣನನ್ನು ಆಕ್ರಮಣಿಸಿದನು. ಒಮ್ಮೆಗೇ ಬಾಯಿಕಳೆದ ಅಂತಕನಂತೆ ಮೇಲೆಬೀಳುತ್ತಿದ್ದ ಅವನನ್ನು ತ್ವರೆಮಾಡಿ ಮಹೇಷ್ವಾಸ ವೀರಧನ್ವನು ಎದುರಿಸಿದನು. ಸೇನೆಗಳೊಂದಿಗೆ ವ್ಯವಸ್ಥಿತನಾದ ಯುಧಿಷ್ಠಿರನನ್ನು ಗೆಲ್ಲಲು ಬಯಸಿ ವೀರ್ಯವಾನ್ ದ್ರೋಣನು ತಡೆದನು. ವಿಕರ್ಣನು ಯುದ್ಧದಲ್ಲಿ ಕುಶಲನಾದ ನಕುಲನನ್ನು ಎದುರಿಸಿ ಯುದ್ಧಮಾಡಿದನು. ಹಾಗೆಯೇ ಮುಂದುವರೆದು ಬರುತ್ತಿದ್ದ ಸಹದೇವನನ್ನು ದುರ್ಮುಖನು ಅನೇಕ ಸಾವಿರ ಆಶುಗ ಶರಗಳಿಂದ ಮುಚ್ಚಿಬಿಟ್ಟನು.
ಸಾತ್ಯಕಿಯನ್ನಾದರೋ ವ್ಯಾಘ್ರದತ್ತನು ತೀಕ್ಷ್ಣವಾದ ನಿಶಿತ ಶರಗಳಿಂದ ಪುನಃ ಪುನಃ ಕಂಪಿಸುತ್ತಾ ತಡೆದನು. ಸಂರಬ್ಧರಾದ, ನರವ್ಯಾಘ್ರ ದ್ರೌಪದೇಯರು ಸೌಮದತ್ತಿಯನ್ನು ಎದುರಿಸಿದರು. ಹಾಗೆಯೇ ಕ್ರುದ್ಧನಾಗಿ ಭೀಮರೂಪನಾಗಿ ಭಯಾನಕನಾಗಿ ಕಾಣುತ್ತಾ ಮುಂದೆ

ಬರುತ್ತಿದ್ದ ಭೀಮಸೇನನನ್ನು ಮಹಾರಥ ಆರ್ಷ್ಯಶೃಂಗಿಯು ತಡೆದನು. ರಣರಂಗದಲ್ಲಿ ಅವರಿಬ್ಬರು ನರ-ರಾಕ್ಷಸರ ನಡುವೆ, ಹಿಂದೆ ರಾಮ-ರಾವಣರ ನಡುವೆ ನಡೆದಂತೆ, ಯುದ್ಧವು ನಡೆಯಿತು.

ಆಗ ಯುಧಿಷ್ಠಿರನು ತೊಂಭತ್ತು ನತಪರ್ವಗಳಿಂದ ದ್ರೋಣನ ಸರ್ವಮರ್ಮಗಳಿಗೆ ಹೊಡೆದನು. ಯಶಸ್ವಿ ಕೌಂತೇಯನಿಂದ ರೋಷಗೊಂಡ ದ್ರೋಣನು ಅವನನ್ನು ಇಪ್ಪತ್ತೈದು ಬಾಣಗಳಿಂದ ಅವನ ಎದೆಯ ಮಧ್ಯೆ ಹೊಡೆದನು. ಮತ್ತೆ ಇಪ್ಪತ್ತು ಸಾಯಕಗಳನ್ನು ಕಳುಹಿಸಿ ದ್ರೋಣನು ಸರ್ವಧನ್ವಿಗಳೂ ನೋಡುತ್ತಿರುವಂತೆ, ಅವನ ಕುದುರೆ-ಸೂತ-ಧ್ವಜಗಳನ್ನು ತುಂಡರಿಸಿದನು. ದ್ರೋಣನು ಬಿಟ್ಟ ಆ ಶರಗಳನ್ನು ಧರ್ಮಾತ್ಮ ಪಾಂಡವನು ಶರವಷದಿಂದ ತಡೆದು ತನ್ನ ಕೈಚಳಕವನ್ನು ತೋರಿಸಿದನು. ಆಗ ಧರ್ಮರಾಜನ ಮೇಲೆ ತುಂಬಾ ಕ್ರೋಧಿತನಾಗಿ ಧನ್ವೀ ದ್ರೋಣನು ತಕ್ಷಣವೇ ಆ ಮಹಾತ್ಮನ ಧನುಸ್ಸನ್ನು ಕತ್ತರಿಸಿದನು. ಅವನ ಧನುಸ್ಸನ್ನು ಕತ್ತರಿಸಿ ತ್ವರೆಮಾಡಿ ಮಹಾರಥನು ಅವನನ್ನು ಅನೇಕ ಸಹಸ್ರ ಶರಗಳಿಂದ ಸುತ್ತಲೂ ಮುಚ್ಚಿಬಿಟ್ಟನು. ಭಾರದ್ವಾಜನ ಸಾಯಕಗಳಿಂದ ರಾಜನು ಅದೃಶ್ಯನಾದುದನ್ನು ನೋಡಿ ಸರ್ವಭೂತಗಳೂ ಯುಧಿಷ್ಠಿರನು ಹತನಾದನೆಂದೇ ತಿಳಿದುಕೊಂಡರು. ಕೆಲವರು ಅವನು ಪಲಾಯನ

ಮಾಡಿದನೆಂದು ಅಂದುಕೊಂಡರು. ಇನ್ನು ಕೆಲವರು "ಯಶಸ್ವಿ ಬ್ರಾಹ್ಮಣನು ರಾಜನನ್ನು ಕೊಂದುಬಿಟ್ಟನು!" ಎಂದು ಕೊಂಡರು. ಆ ಪರಮ ಕಷ್ಟವನ್ನು ಅನುಭವಿಸಿದ ಧರ್ಮರಾಜ ಯುಧಿಷ್ಠಿರನು ಭಾರದ್ವಾಜನಿಂದ ಕತ್ತರಿಸಲ್ಪಟ್ಟ ಆ ಧನುಸ್ಸನು ತ್ಯಜಿಸಿ, ಇನ್ನೊಂದು ದಿವ್ಯವಾದ, ಭಾರವತ್ತಾದ, ವೇಗವತ್ತರವಾದ ಧನುಸ್ಸನ್ನು ಎತ್ತಿಕೊಂಡನು. ಆಗ ದ್ರೋಣನು ಬಿಟ್ಟ ಆ ಎಲ್ಲ ಸಹಸ್ರಾರು ಸಾಯಕಗಳನ್ನೂ ತುಂಡರಿಸಿ ಆ ವೀರನು ಸಮರದಲ್ಲಿ ಅದ್ಭುತವನ್ನೆಸಗಿದನು. ಆ ಶರಗಳನ್ನು ತುಂಡರಿಸಿ ರಾಜನು ಕ್ರೋಧದಿಂದ ರಕ್ತಲೋಚನನಾಗಿ ಗಿರಿಗಳನ್ನೂ ಸೀಳಬಲ್ಲಂತಹ, ಬಂಗಾರದ ದಂಡವುಳ್ಳ, ಮಹಾಘೋರವಾದ, ಭಯವನ್ನುಂಟುಮಾಡುವ, ಎಂಟು ಗಂಟೆಗಳನ್ನುಳ್ಳ ಶಕ್ತಿಯನ್ನು ತೆಗೆದುಕೊಂಡನು. ಅದನ್ನು ಬಿಸುಟು ಆ ಬಲಿಯು ನಾದದಿಂದ ಸರ್ವಭೂತಗಳನ್ನು ಬೆದರಿಸುತ್ತಿರುವನಂತೆ ಸಂತೋಷದಿಂದ ಜೋರಾಗಿ ಕೂಗಿದನು. ಧರ್ಮರಾಜನು ಶಕ್ತಿಯನ್ನು ಹಿಡಿದಿದ್ದುದನ್ನು ಕಂಡ ಸರ್ವಭೂತಗಳೂ ಒಮ್ಮೆಲೇ "ಸ್ವಸ್ತಿ!" ಎಂದು ದ್ರೋಣನಿಗೆ ಹೇಳಿದರು.

ಬಿಡುಗಡೆಗೊಳಿಸಲ್ಪಟ್ಟ ಸರ್ಪದಂತೆ ರಾಜನ ಭುಜದಿಂದ ಹೊರಟ ಆ

ಶಕ್ತಿಯು ಗಗನ, ದಿಕ್ಕು, ಉಪದಿಕ್ಕುಗಳನ್ನು ಪ್ರಜ್ವಲಗೊಳಿಸುತ್ತಾ ಉರಿಯುತ್ತಿರುವ ಬಾಯಿಯುಳ್ಳ ಪನ್ನಗಿಯಂತೆ ದ್ರೋಣನ ಬಳಿ ಹೋಯಿತು. ಒಮ್ಮಿಂದೊಮ್ಮೆಲೇ ಬೀಳುತ್ತಿದ್ದ ಅದನ್ನು ನೋಡಿ ಅಸ್ತ್ರವಿದರಲ್ಲಿ ಶ್ರೇಷ್ಠ ದ್ರೋಣನು ಬ್ರಹ್ಮಾಸ್ತ್ರವನ್ನು ಪ್ರಕಟಿಸಿದನು. ಆ ಅಸ್ತ್ರವು ಘೋರವಾಗಿ ಕಣುತ್ತಿದ್ದ ಆ ಶಕ್ತಿಯನ್ನು ಭಸ್ಮೀಕರಿಸಿ ಬೇಗನೆ ಯಶಸ್ವಿ ಪಾಂಡವನ ರಥದ ಕಡೆ ಹೋಯಿತು. ಆಗ ಯುಧಿಷ್ಠಿರನು ದ್ರೋಣನ ಅಸ್ತ್ರವನ್ನು ಬ್ರಹ್ಮಾಸ್ತ್ರದಿಂದಲೇ ಶಾಂತಗೊಳಿಸಿದನು. ಅವನು ಐದು ನತಪರ್ವಗಳಿಂದ ದ್ರೋಣನನ್ನು ಹೊಡೆದು, ತೀಕ್ಷ್ಣ ಕ್ಷುರಪ್ರದಿಂದ ಅವನ ಮಹಾಧನುಸ್ಸನ್ನು ಕತ್ತರಿಸಿದನು. ಧನುಸ್ಸು ತುಂಡಾಗಲು ಕ್ಷತ್ರಿಯಮರ್ದನ ದ್ರೋಣನು ತಕ್ಷಣವೇ ಧರ್ಮಪುತ್ರನ ಮೇಲೆ ಗದೆಯನ್ನು ಎಸೆದನು. ಮೇಲೆ ಬೀಳುತ್ತಿರುವ ಆ ಗದೆಯನ್ನು ನೋಡಿ ತಕ್ಷಣವೇ ಕ್ರುದ್ಧನಾಗಿ ಯುಧಿಷ್ಠಿರನು ತಾನೂ ಗದೆಯನ್ನು ತೆಗೆದು ಕೊಂಡು ಬೀಸಿ ಎಸೆದನು. ವೇಗವಾಗಿ ಎಸೆಯಲ್ಪಟ್ಟ ಆ ಎರಡೂ ಗದೆಗಳೂ ಪರಸ್ಪರರನ್ನು ತಾಗಿ, ಸಂಘರ್ಷದಿಂದ ಬೆಂಕಿಯನ್ನು ಬಿಟ್ಟು ನೆಲಕ್ಕೆ ಸೇರಿಕೊಂಡವು. ಆಗ ದ್ರೋಣನು ತುಂಬಾ ಕ್ರುದ್ಧನಾಗಿ ನಾಲ್ಕು ನಿಶಿತ ತೀಕ್ಷ್ಣ ಉತ್ತಮ ಶರಗಳಿಂದ ಧರ್ಮರಾಜನ ಕುದುರೆಗಳನ್ನು ಸಂಹರಿಸಿದನು. ಇಂದ್ರಧ್ವಜೋಪಮವಾದ ಅವನ ಧನುಸ್ಸನ್ನು ಒಂದೇ ಬಾಣದಿಂದ ಕತ್ತರಿಸಿದನು. ಇನ್ನೊಂದರಿಂದ

ಕೇತುವನ್ನು ತುಂಡರಿಸಿ ಮೂರರಿಂದ ಪಾಂಡವನನ್ನು ಗಾಯಗೊಳಿಸಿದನು. ಆಗ ಕುದುರೆಗಳನ್ನು ಕಳೆದುಕೊಂಡ ರಥದಿಂದ ತಕ್ಷಣವೇ ಕೆಳಗೆ ಹಾರಿ ರಾಜಾ ಯುಧಿಷ್ಠಿರನು ಭುಜಗಳನ್ನು ಮೇಲೆತ್ತಿ ಆಯುಧಗಳಿಲ್ಲದೇ ನಿಂತುಕೊಂಡನು. ಅವನು ಹೀಗೆ ದ್ರೋಣನು ಅವನನ್ನು ವಿರಥನಾಗಿಸಿದುದನ್ನು, ಅದರಲ್ಲೂ ವಿಶೇಷವಾಗಿ ನಿರಾಯುಧನಾಗಿ ಮಾಡಿದುದನ್ನು ನೋಡಿ ಶತ್ರು ಸೇನೆಗಳೆಲ್ಲವೂ ಮೂರ್ಛೆಗೊಂಡಿತು. ಆಗ ತೀಕ್ಷ್ಣವಾದ ಶರಗುಂಪುಗಳನ್ನು ಪ್ರಯೋಗಿಸುತ್ತಾ ಆ ಲಘುಹಸ್ತ ದೃಢವ್ರತನು ಸಿಂಹವು ಜಿಂಕೆಯ ಮೇಲೆ ಬೀಳುವಂತೆ ರಾಜನ ಮೇಲೆ ಎರಗಿದನು.

ಅಮಿತ್ರಘಾತಿ ದ್ರೋಣನಿಂದ ಅವನು ಆಕ್ರಮಣಿಸಲ್ಪಟ್ಟಿದುದನ್ನು ನೋಡಿ ಒಮ್ಮಿಂದೊಮ್ಮೆಲೇ ಪಾಂಡವರ ಕಡೆ ಹಾಹಾಕಾರದ ಶಬ್ಧವು ಕೇಳಿಬಂದಿತು. “ರಾಜನು ಹತನಾದನು! ಭಾರದ್ವಾಜನಿಂದ ರಾಜನು ಹತನಾದನು!” ಎಂದು ಪಾಂಡವ ಸೇನೆಯ ಎಲ್ಲಕಡೆ ಮಹಾ ಶಬ್ಧವುಂಟಾಯಿತು. ಆಗ ಯುಧಿಷ್ಠಿರನು ಸಹದೇವನ ರಥವನ್ನೇರಿ ವೇಗ ಅಶ್ವಗಳಿಂದ ಪಲಾಯನಗೈದನು.

## ಕೇಕಯ ಕ್ಷೇಮಧೂರ್ತಿಯ ವಧೆ

ಮುಂದೆ ಬರುತ್ತಿದ್ದ ದೃಢವಿಕ್ರಮಿ ಕೇಕಯನನ್ನು ಕ್ಷೇಮಧೂರ್ತಿಯು

ಎದೆಗೆ ಗುರಿಯಿಟ್ಟು ಮಾರ್ಗಣಗಳಿಂದ ಹೊಡೆದನು. ರಾಜ ಬೃಹತ್ಕ್ಷತ್ರನಾದರೋ ಯುದ್ಧದಲ್ಲಿ ದ್ರೋಣನ ಸೇನೆಯನ್ನು ಭೇದಿಸಲು ಬಯಸಿ ತ್ವರೆಮಾಡಿ ಅವನನ್ನು ತೊಂಭತ್ತು ನತಪರ್ವಗಳಿಂದ ಪ್ರಹರಿಸಿದನು. ಸಂಕ್ರುದ್ಧನಾದ ಕ್ಷೇಮಧೂರ್ತಿಯಾದರೋ ಎಣ್ಣೆಕುಡಿದ ನಿಶಿತ ಭಲ್ಲದಿಂದ ಮಹಾತ್ಮ ಕೇಕಯನ ಧನುಸ್ಸನ್ನು ಕತ್ತರಿಸಿದನು. ಮತ್ತು ತಕ್ಷಣವೇ ಧನುಸ್ಸನ್ನು ಕಳೆದುಕೊಂಡ ಆ ಸರ್ವಧನ್ವಿಗಳಲ್ಲಿ ಶ್ರೇಷ್ಠನಾದ ಅವನ ಎದೆಗೆ ನತಪರ್ವ ಶರದಿಂದ ಹೊಡೆದನು. ಆಗ ಬೃಹತ್ಕ್ಷತ್ರನು ನಸುನಕ್ಕು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಮಹಾರಥ ಕ್ಷೇಮಧೂರ್ತಿಯನ್ನು ಕುದುರೆ, ಸೂತ ಮತ್ತು ಧ್ವಜಗಳಿಂದ ವಿಹೀನನನ್ನಾಗಿ ಮಾಡಿದನು. ಇನ್ನೊಂದು ಎಣ್ಣೆಯನ್ನು ಕುಡಿದ ನಿಶಿತ ಭಲ್ಲದಿಂದ ಆ ನೃಪತಿಯ ಕುಂಡಲಗಳಿಂದ ಪ್ರಕಾಶಿಸುತ್ತಿದ್ದ ಶಿರಸ್ಸನ್ನು ದೇಹದಿಂದ ಕತ್ತರಿಸಿದನು. ಗುಂಗುರುಕೂದಲಿನ ಅವನ ತಲೆಯು ಕಿರೀಟದೊಂದಿಗೆ ಕ್ಷಣದಲ್ಲಿಯೇ ತುಂದಾಗಿ ಅಂಬರದಲ್ಲಿಂದ ನಕ್ಷತ್ರದಂತೆ, ಭೂಮಿಯನ್ನು ಸೇರಿತು. ರಣದಲ್ಲಿ ಅವನನ್ನು ಸಂಹರಿಸಿ ಹೃಷ್ಟನಾದ ಮಹಾರಥ ಬೃಹತ್ಕ್ಷತ್ರನು ಪಾರ್ಥನ ಕಾರಣದಿಂದ ತಕ್ಷಣವೇ ಕೌರವ ಸೇನೆಯ ಮೇಲೆ ಎರಗಿದನು.

## ವೀರಧನ್ವನ ವಧೆ

ದ್ರೋಣನ ಸಲುವಾಗಿ ಮುಂದುವರೆಯುತ್ತಿದ್ದ ಪರಾಕ್ರಮೀ ಧೃಷ್ಟಕೇತುವನ್ನು ಮಹೇಷ್ವಾಸ ವೀರಧನ್ವನು ತಡೆದನು. ಪರಸ್ಪರರನ್ನು ಎದುರಿಸಿದ ಅವರಿಬ್ಬರು ಶರದಂಷ್ಟ್ರ ತರಸ್ವಿಗಳು ಅನೇಕ ಸಹಸ್ರ ಶರಗಳಿಂದ ಅನ್ಯೋನ್ಯರನ್ನು ಹೊಡೆದರು. ಅವರಿಬ್ಬರೂ ನರಶರ್ದೂಲರೂ ಮಹಾವನದಲ್ಲಿ ತೀವ್ರವಾದ ಮದವೇರಿದ ಎರಡು ಸಲಗಗಳಂತೆ ಪರಸ್ಪರರೊಡನೆ ಯುದ್ಧಮಾಡಿದರು. ಗಿರಿಗಹ್ವರಗಳನ್ನು ಸೇರಿ ರೋಷಿತರಾಗಿ ಪರಸ್ಪರರನ್ನು ಕೊಲ್ಲಲು ಬಯಸಿದ ಶಾರ್ದೂಲಗಳಂತೆ ಆ ಮಹಾವೀರರು ಹೋರಾಡಿದರು. ಆಗ ಪ್ರೇಕ್ಷಣೀಯವಾದ ತುಮುಲ ಯುದ್ಧವು ನಡೆಯಿತು. ಆ ಅದ್ಭುತ ದರ್ಶನದಿಂದ ಸಿದ್ಧ-ಚಾರಣ ಸಂಘಗಳು ವಿಸ್ಮಯಗೊಂಡವು. ಆಗ ವೀರಧನ್ವನು ಕ್ರುದ್ಧನಾಗಿ, ನಗುತ್ತಿರುವವನಂತೆ ಭಲ್ಲದಿಂದ ಧೃಷ್ಟಕೇತುವಿನ ಧನುಸ್ಸನ್ನು ಎರಡಾಗಿ ತುಂಡರಿಸಿದನು. ತುಂಡಾದ ಆ ಧನುಸ್ಸನ್ನು ಎಸೆದು ಮಹಾರಥ ಚೇದಿರಾಜನು ದಪ್ಪನೆಯ ಉಕ್ಕಿನಿಂದ ಮಾಡಲ್ಪಟ್ಟ, ಬಂಗಾರದ ದಂಡವುಳ್ಳ, ಶಕ್ತಿಯನ್ನು ಹಿಡಿದನು. ಆ ಶಕ್ತಿಯನ್ನು ಎರಡು ಭುಜಗಳಿಂದಲೂ ಮೇಲೆತ್ತಿ ಮಹಾವೀರ್ಯದಿಂದ ಪ್ರಯತ್ನಪಟ್ಟು ತಕ್ಷಣವೇ ವೀರಧನ್ವನ ರಥದ ಮೇಲೆ ಎಸೆದನು. ಆ ವೀರಘಾತಿ ಶಕ್ತಿಯಿಂದ ತುಂಬಾ ಗಾಯಗೊಂಡ ಅವನು ತಕ್ಷಣವೇ ಹೃದಯವು ಒಡೆದು ರಥದಿಂದ ನೆಲಕ್ಕೆ ಬಿದ್ದನು. ಆ ತ್ರಿಗರ್ತರ

ಮಹಾರಥ ಶೂರನು ಹತನಾಗಲು ಪಾಂಡವೇಯರು ಕೌರವ ಸೇನೆಯನ್ನು ಎಲ್ಲ ಕಡೆಗಳಿಂದ ಸದೆಬಡಿದರು.

## ಸಹದೇವನ ಯುದ್ಧ

ಆಗ ದುರ್ಮುಖನು ಸಹದೇವನ ಮೇಲೆ ಅರವತ್ತು ಸಾಯಕಗಳನ್ನು ಪ್ರಯೋಗಿಸಿ ಪಾಂಡವನನ್ನು ಹೆದರಿಸುತ್ತಾ ರಣದಲ್ಲಿ ಮಹಾನಾದವನ್ನು ಗರ್ಜಿಸಿದನು. ಮದ್ರೇಯನಾದರೋ ಕ್ರುದ್ಧನಾಗಿ ಎದುರಿಸಿ ಬರುತ್ತಿದ್ದ ಭ್ರಾತಾ ದುರ್ಮುಖನನ್ನು ನಸುನಗುತ್ತಿರುವನೋ ಎನ್ನುವಂತೆ ಹತ್ತು ಶರಗಳಿಂದ ಹೊಡೆದನು. ರಣದಲ್ಲಿ ರಭಸನಾಗಿದ್ದ ಆ ಸಹದೇವನನ್ನು ನೋಡಿ ದುರ್ಮುಖನು ಅವನನ್ನು ಒಂಭತ್ತು ಬಾಣಗಳಿಂದ ಹೊಡೆದನು. ಆ ಮಹಾಬಲನು ಭಲ್ಲದಿಂದ ದುರ್ಮುಖನ ಕೇತುವನ್ನು ತುಂಡರಿಸಿ ನಾಲ್ಕು ನಿಶಿತ ಶರಗಳಿಂದ ಅವನ ನಾಲ್ಕು ಕುದುರೆಗಳನ್ನು ಸಂಹರಿಸಿದನು. ಅನಂತರ ಇನ್ನೊಂದು, ಎಣ್ಣೆಕುಡಿದ, ನಿಶಿತ ಭಲ್ಲದಿಂದ ಅವನ ಸಾರಥಿಯ ಹೊಳೆಯುವ ಕುಂಡಲಗಳುಳ್ಳ ಶಿರವನ್ನು ಕಾಯದಿಂದ ಕತ್ತರಿಸಿದನು. ಸಹದೇವನು ತೀಕ್ಷ್ಣವಾದ ಕ್ಷುರಪ್ರದಿಂದ ರಣದಲ್ಲಿ ಕೌರವ್ಯನ ಮಹಾ ಧನುಸ್ಸನ್ನು ಕತ್ತರಿಸಿ ಅವನನ್ನೂ ಐದರಿಂದ ಹೊಡೆದನು. ಅಶ್ವಗಳು ಹತವಾದ ರಥವನ್ನು ತ್ಯಜಿಸಿ ದುರ್ಮುಖನು ವಿಮನಸ್ಕನಾಗಿ ನಿರಮಿತ್ರನ ರಥವನ್ನು ಏರಿದನು.

ಆಗ ಪರವೀರಹ ಸಹದೇವನು ಕ್ರುದ್ಧನಾಗಿ ಸೇನೆಗಳ ಮಧ್ಯದಲ್ಲಿ ನಿರಮಿತ್ರನನ್ನು ಭಲ್ಲದಿಂದ ಹೊಡೆದನು. ಜನೇಶ್ವರ ತ್ರಿಗರ್ತರಾಜನ ಮಗನಾದ ನಿರಮಿತ್ರನು ರಥದ ಆಸನದಿಂದ ಕೆಳಗುರುಳಿದನು. ಅವನನ್ನು ಸಂಹರಿಸಿ ಸಹದೇವನು ಖರನನ್ನು ಸಂಹರಿಸಿ ರಾಮ ದಾಶರಥಿಯು ಹೇಗೋ ಹಾಗೆ ವಿರಾಜಿಸಿದನು. ರಾಜಪುತ್ರ ಮಹಾಬಲ ನಿರಮಿತ್ರನು ಹತನಾದುದನ್ನು ನೋಡಿ ತ್ರಿಗರ್ತರಲ್ಲಿ ಮಹಾ ಹಾಹಾಕಾರವುಂಟಾಯಿತು.

ನಕುಲನು ರಣರಂಗದಲ್ಲಿ ಧೃತರಾಷ್ಟ್ರನ ಮಗ ವಿಕರ್ಣನನ್ನು ಕ್ಷಣಮಾತ್ರದಲ್ಲಿ ಗೆದ್ದನು. ಅದೊಂದು ಅದ್ಭುತವಾಗಿತ್ತು.

## ಸಾತ್ಯಕಿಯ ಯುದ್ಧ

ರಣದ ಇನ್ನೊಂದು ಕಡೆ ವ್ಯಾಘ್ರದತ್ತನು ಸನ್ನತಪರ್ವ ಶರಗಳಿಂದ ಸಾತ್ಯಕಿಯನ್ನು ಅವನ ಕುದುರೆಗಳು, ಸಾರಥಿ ಮತ್ತು ಧ್ವಜಗಳೊಂದಿಗೆ ಕಾಣದಂತೆ ಮಾಡಿಬಿಟ್ಟನು. ಆ ಶರಗಳನ್ನು ತಡೆದು ಕೈಚಳಕವುಳ್ಳ ಶೂರ ಶೈನೇಯನು ಬಾಣಗಳಿಂದ ವ್ಯಾಘ್ರದತ್ತನನ್ನು ಅವನ ಕುದುರೆಗಳು, ಸಾರಥಿ ಮತ್ತು ಧ್ವಜಗಳಿಂದ ಉರುಳಿಸಿದನು. ಮಗಧನ ಮಗ ಕುಮಾರನು ಹತನಾಗಲು ಮಾಗಧರು ಪ್ರಯತ್ನಿಸಿ ಯುಯುಧಾನನನ್ನು ಎಲ್ಲಕಡೆಗಳಿಂದ ಆಕ್ರಮಣಿಸಿದರು. ಆ ಶೂರರು

ರಣದಲ್ಲಿ ಯುದ್ಧದುರ್ಮದ ಸಾತ್ವತನೊಂದಿಗೆ ಸಹಸ್ರಾರು ಶರ-ತೋಮರ-ಭಿಂಡಿಪಾಲ-ಪ್ರಾಸ-ಮುದ್ಗರ-ಮುಸಲಗಳನ್ನು ಪ್ರಯೋಗಿಸುತ್ತಾ ಯುದ್ಧಮಾಡಿದರು. ಅವರೆಲ್ಲರನ್ನೂ ಸಾತ್ಯಕಿಯು ಸ್ವಲ್ಪವೂ ಕಷ್ಟಪಡದೇ ನಗುತ್ತಲೇ ಪರಾಜಯಗೊಳಿಸಿದನು. ಹತಶೇಷರಾದ ಮಾಗಧರು ಓಡಿ ಹೋಗುತ್ತಿರುವುದನ್ನು ನೋಡಿ ಯುಯುಧಾನನ ಶರಗಳಿಂದ ಪೀಡಿತರಾದ ಕೌರವ ಸೇನೆಯು ಧೃತಿಗೆಟ್ಟಿತು. ಹೀಗೆ ರಣದಲ್ಲಿ ಕೌರವ ಸೈನ್ಯವನ್ನು ನಾಶಗೊಳಿಸುತ್ತಾ ಮಾಧವೋತ್ತಮ ಮಹಾಯಶಸ್ವಿಯು ತನ್ನ ಶ್ರೇಷ್ಠ ಧನುಸ್ಸನ್ನು ಟೇಂಕರಿಸುತ್ತಾ ಪ್ರಕಾಶಿಸಿದನು. ಸಾತ್ವತನಿಂದ ಸದೆಬಡಿಯಲ್ಪಟ್ಟ ಸೇನೆಯು ಆ ದೀರ್ಘಬಾಹುವಿನಿಂದ ಭಯಗೊಂಡು ಯುದ್ಧಕ್ಕೆ ಹಿಂದಿರುಗಿ ಬರಲಿಲ್ಲ.

ಆಗ ದ್ರೋಣನು ತುಂಬಾ ಕುಪಿತನಾಗಿ ಒಮ್ಮೆಲೇ ಅವನ ಮೇಲೆ ಕಣ್ಣುಹಾಯಿಸಿ ಆ ಸಾತ್ಯಕಿ ಸತ್ಯಕರ್ಮಿಯನ್ನು ಸ್ವಯಂ ತಾನೇ ಆಕ್ರಮಣಿಸಿದನು.

## ಸೌಮದತ್ತಿ ಶಲನ ವಧೆ

ಮಹಾಯಶಸ್ವಿ ಸೌಮದತ್ತಿ ಶಲನು ದ್ರೌಪದೇಯರು ಒಬ್ಬೊಬ್ಬರನ್ನೂ ಐದೈದು ಬಾಣಗಳಿಂದ ಹೊಡೆದು ಪುನಃ ಏಳರಿಂದ

ಗಾಯಗೊಳಿಸಿದನು. ರೌದ್ರನಾದ ಅವನಿಂದ ಒಮ್ಮೆಲೇ ತುಂಬಾ ಪೀಡಿತರಾದ ಅವರು ಯುದ್ಧದಲ್ಲಿ ಏನು ಮಾಡಬೇಕೆಂದು ತಿಳಿಯದೇ ಸ್ವಲ್ಪ ಹೊತ್ತು ವಿಮೂಢರಾದರು. ಶತ್ರುತಾಪನ ನಾಕುಲಿ ಶತಾನೀಕನಾದರೋ ಸೌಮದತ್ತಿಯನ್ನು ಎರಡು ಬಾಣಗಳಿಂದ ಪ್ರಹರಿಸಿ ಹೃಷ್ಟನಾಗಿ ನಾದಗೈದನು. ಆಗ ಇತರರು ಸಮರದಲ್ಲಿ ತಕ್ಷಣವೇ ಮೂರು ಮೂರು ಜಿಹ್ಮಗಗಳಿಂದ ಪ್ರಯತ್ನಪಟ್ಟು ಅಸಹನಶೀಲ ಸೌಮದತ್ತಿಯನ್ನು ಹೊಡೆದರು. ಆ ಮಹಾಯಶನೂ ಕೂಡ ಅವುಗಳಿಗೆ ಪ್ರತಿಯಾಗಿ ಐದು ಸಾಯಕಗಳನ್ನು ಪ್ರಯೋಗಿಸಿ ಒಂದೊಂದರಿಂದ ಒಬ್ಬೊಬ್ಬರ ಹೃದಯವನ್ನೂ ಹೊಡೆದನು. ಆ ಮಹಾತ್ಮನ ಶರಗಳಿಂದ ಗಾಯಗೊಂಡ ಆ ಐವರು ಸಹೋದರರು ರಥಗಳಿಂದ ಆ ವೀರನ ರಥವನ್ನು ಸುತ್ತುವರೆದು ಸಾಯಕಗಳಿಂದ ಬಹುವಾಗಿ ಅವನನ್ನು ಪ್ರಹರಿಸಿದರು. ಆರ್ಜುನಿಯಾದರೋ ಸಂಕ್ರುದ್ಧನಾಗಿ ಅವನ ಕುದುರೆಗಳನ್ನು ನಾಲ್ಕು ನಿಶಿತ ಶರಗಳಿಂದ ಯಮಸದನಕ್ಕೆ ಕಳುಹಿಸಿಕೊಟ್ಟನು. ಭೈಮಸೇನಿಯು ಮಹಾತ್ಮ ಸೌಮದತ್ತಿಯ ಧನುಸ್ಸನ್ನು ಕತ್ತರಿಸಿ ನಿಶಿತ ಶರಗಳಿಂದ ಅವನನ್ನು ಹೊಡೆದು ಜೋರಾಗಿ ಸಿಂಹನಾದಗೈದನು. ಯುಧಿಷ್ಠಿರನ ಮಗನು ಅವನ ಧ್ವಜವನ್ನು ತುಂಡರಿಸಿ ಬೀಳಿಸಿದನು. ನಕುಲನ ಮಗನು ಅವನ ಸಾರಥಿಯನ್ನು ರಥದಿಂದ ಕೆಳಗೆ ಉರುಳಿಸಿದನು. ಸಹದೇವನ ಮಗನಾದರೋ ತನ್ನ

ಸಹೋದರರು ಅವನನ್ನು ಪರಾಙ್ಮುಖಗೊಳಿಸಿದ್ದಾರೆಂದು ತಿಳಿದು ಕ್ಷುರಪ್ರದಿಂದ ಅವನ ಶಿರವನ್ನು ಕತ್ತರಿಸಿದನು. ಬಂಗಾರದಿಂದ ವಿಭೂಷಿತವಾಗಿದ್ದ ಆ ನೃಪತಿಯ ಶಿರವು ಬಾಲಸೂರ್ಯನ ಸಮನಾದ ಪ್ರಭೆಯಿಂದ ರಣಭೂಮಿಯನ್ನು ಪ್ರಕಾಶಗೊಳಿಸುತ್ತಾ ಭೂಮಿಯ ಮೇಲೆ ಬಿದ್ದಿತು.

ಕೆಳಗೆಬಿದ್ದ ಸೌಮದತ್ತಿಯ ಶಿರಸ್ಸನ್ನು ನೋಡಿ ಕೌರವರು ಬೆದರಿ ಅನೇಕ ದಾರಿಗಳಲ್ಲಿ ಓಡಿಹೋದರು.

## ಅಲಂಬುಸ ವಧೆ

ಅಲಂಬುಸನಾದರೋ ಸಂಕ್ರುದ್ಧನಾಗಿ ಸಮರದಲ್ಲಿ ರಾವಣಿ ಇಂದ್ರಜಿತುವು ಲಕ್ಷ್ಮಣನನ್ನು ಹೇಗೋ ಹಾಗೆ ಮಹಾಬಲ ಭೀಮಸೇನನೊಂದಿಗೆ ಯುದ್ಧಮಾಡತೊಡಗಿದನು. ಆ ಇಬ್ಬರು ನರ-ರಾಕ್ಷಸರೂ ರಣದಲ್ಲಿ ಯುದ್ಧಕ್ಕೆ ತೊಡಗಿರುವುದನ್ನು ನೋಡಿ ಸರ್ವಭೂತಗಳಿಗೆ ವಿಸ್ಮಯವೂ ಹರ್ಷವೂ ಉಂಟಾಯಿತು. ಆಗ ಭೀಮನು ಜೋರಾಗಿ ನಗುತ್ತಾ ಒಂಭತ್ತು ನಿಶಿತ ಶರಗಳಿಂದ ಅಸಹನಶೀಲ ರಾಕ್ಷಸೇಂದ್ರ ಆರ್ಷ್ಯಶೃಂಗಿಯನ್ನು ಹೊಡೆದನು. ಪ್ರಹೃತನಾದ ಆ ರಾಕ್ಷಸನು ಭಯಾನಕವಾಗಿ ಗರ್ಜನೆ ಮಾಡುತ್ತಾ ಭೀಮ ಮತ್ತು ಅವನ ಅನುಯಾಯಿಗಳ ಮೇಲೆ ಎರಗಿದನು.

ಭೀಮನನ್ನು ಐದು ಸನ್ನತಪರ್ವ ಶರಗಳಿಂದ ಹೊಡೆದು ಭೀಮನನ್ನು ಅನುಸರಿಸಿ ಬಂದಿದ್ದ ಮುನ್ನೂರು ರಥಿಕರನ್ನು ಸಂಹರಿಸಿದನು. ಪುನಃ ನಾಲ್ಕುನೂರು ಮಂದಿಯನ್ನು ಸಂಹರಿಸಿ ಭೀಮನನ್ನು ಪತ್ರಿಗಳಿಂದ ಹೊಡೆದನು. ಹಾಗೆ ರಾಕ್ಷಸನಿಂದ ಗಯಗೊಂಡ ಭೀಮನು ಒಂದು ಕ್ಷಣ ಮೂರ್ಛೆಹೋಗಿ ರಥದಲ್ಲಿಯೇ ಒರಗಿದನು. ಆಗ ಪುನಃ ಸಂಜ್ಞೆಗಳನ್ನು ಪಡೆದುಕೊಂಡು ಮಾರುತಿಯು ಕ್ರೋಧಮೂರ್ಛಿತನಾಗಿ, ಭಾರವನ್ನು ಹೊರಬಲ್ಲ ಉತ್ತಮ ಘೋರ ಕಾರ್ಮುಕವನ್ನು ಎಳೆದು ತೀಕ್ಷ್ಣ ಶರಗಳಿಂದ ಅಲಂಬುಸನನ್ನು ಎಲ್ಲಕಡೆಗಳಿಂದ ಹೊಡೆಯತೊಡಗಿದನು. ಅಂಜನದ ರಾಶಿಯಂತೆ ನೀಲ ಮೈವರ್ಣದ ಅವನು ಅನೇಕ ಬಾಣಗಳಿಂದ ಗಾಯಗೊಂಡು ಕುಂಶುಕದ ಮರದಲ್ಲಿ ಎಲ್ಲಕಡೆಗಳಲ್ಲಿ ಶೋಭಿಸಿದನು. ಭೀಮಸೇನನ ಚಾಪದಿಂದ ಬಿಡಲ್ಪಟ್ಟ ಶರಗಳಿಂದ ಗಾಯಗೊಂಡ ಅವನು ಪಾಂಡವನಿಂದಾದ ತನ್ನ ಸಹೋದರನ ವಧೆಯನ್ನು ಸ್ಮರಿಸಿಕೊಂಡು, ಘೋರರೂಪವನ್ನು ತಾಳಿ ಭೀಮಸೇನನಿಗೆ ಹೇಳಿದನು:

“ಪಾರ್ಥ ! ಈ ರಣದಲ್ಲಿ ನಿಲ್ಲು ! ಇಂದು ನನ್ನ ಪರಾಕ್ರಮವನ್ನು ನೋಡು ! ಸುದುರ್ಬುದ್ಧೇ ! ನನ್ನ ಪರೋಕ್ಷದಲ್ಲಿ ನನ್ನ ಸಹೋದರ ಬಕನೆಂಬ ಹೆಸರಿನ ಬಲಶಾಲೀ

ರಾಕ್ಷಸಪ್ರವರನನ್ನು ಸಂಹರಿಸಿದ್ದೀಯೆ!”

ಭೀಮನಿಗೆ ಹೀಗೆ ಹೇಳಿ ಅವನು ಅಂತರ್ಧಾನನಾಗಿ ಮಹಾ ಶರವರ್ಷಗಳಿಂದ ಅವನನ್ನು ತುಂಬಾ ಮುಸುಕಿ ಹಾಕಿದನು. ರಾಕ್ಷಸನು ಅದೃಶ್ಯನಾಗಲು ಭೀಮನಾದರೋ ಸನ್ನತಪರ್ವ ಶರಗಳಿಂದ ಆಕಾಶವನ್ನು ತುಂಬಿಬಿಟ್ಟನು. ಭೀಮನಿಂದ ಹೊಡೆಯಲ್ಪಟ್ಟ ಆ ಕ್ಷುದ್ರನು ಆಕಾಶವನ್ನೇರಿದ್ದರೂ ನಿಮಿಷಮಾತ್ರದಲ್ಲಿ ಭೂಮಿಗಿಳಿದು ಒಮ್ಮೆಲೇ ರಥವನ್ನೇರಿದನು. ಪುನಃ ಮೇಲೇರಿ ಅನೇಕ ರೂಪಗಳನ್ನು ಧರಿಸಿ, ಜೋರಾಗಿ ಗರ್ಜಿಸುತ್ತಾ, ಎಲ್ಲಾಕಡೆ ಸಂಚರಿಸುತ್ತಿದ್ದನು. ಅವನ ಸಾಯಕಗಳಿಂದ ಯುದ್ಧದಲ್ಲಿ ಪಾಂಡವಸೇನೆಯ ಅನೇಕ ಆನೆಗಳು, ಕುದುರೆಗಳು ಮತ್ತು ಪದಾತಿಗಳು ಹತವಾದವು; ರಥಗಳಿಂದ ರಥಿಗಳು ಕೆಳಗುರುಳಿದರು. ಆ ರಾಕ್ಷಸನು ರಕ್ತವೇ ನೀರಾದ, ರಥಗಳೇ ಸುಳಿಗಳಾಗಿರುವ, ಆನೆಗಳೇ ಮೊಸಳೆಗಳ ಸಮಾಕುಲಗಳಂತಿರುವ, ಚತ್ರಗಳೇ ಹಂಸಗಳಂತಿರುವ, ಕೆಸರಿರುವ, ಬಾಹುಗಳೇ ಹಾವುಗಳ ಸಂಕುಲಗಳಂತಿರುವ, ಅನೇಕ ಚೇದಿ-ಪಾಂಚಾಲ-ಸೃಂಜಯರು ತೇಲುತ್ತಿರುವ ನದಿಯನ್ನೇ ಹರಿಸಿದನು. ಹೀಗೆ ಸಮರದಲ್ಲಿ ಭೀತಿಯಿಲ್ಲದೇ ಸಂಚರಿಸುತ್ತಿದ್ದ ಅವನ ವಿಕ್ರಮವನ್ನು ಪಾಂಡವರು ತುಂಬಾ ಸಂವಿಗ್ನರಾಗಿ ನೋಡತೊಡಗಿದರು. ಕೌರವರ

ಸೇನೆಗಳಲ್ಲಂತೂ ತುಂಬಾ ಹರ್ಷದ ವಾದ್ಯದ ಜೋರಾದ ಧ್ವನಿಯು, ಲೋಮಹರ್ಷಣ ಮಹಾಧ್ವನಿಯು ಹುಟ್ಟಿಕೊಂಡಿತು. ಕೌರವ ಸೇನೆಯ ಆ ಘೋರ ನಿನಾದವನ್ನು ಕೇಳಿ ಚಪ್ಪಾಳೆಯ ಶಬ್ಧವನ್ನು ಆನೆಗಳು ಸಹಿಸಿಕೊಳ್ಳಲಾರದಂತೆ ಪಾಂಡವನು ಸಹಿಸಿಕೊಳ್ಳಲಿಲ್ಲ. ಆಗ ಕ್ರೋಧದಿಂದ ಕಣ್ಣುಗಳು ಕೆಂಪಾದ ಅವನು ಸುಡುತ್ತಿರುವ ಪಾವಕನಂತೆ, ಸ್ವಯಂ ತ್ವಷ್ಟನಂತೆ ತ್ವಾಷ್ಟ್ರ ಅಸ್ತ್ರವನ್ನು ಹೂಡಿದನು. ಆಗ ಸಾವಿರಾರು ಶರಗಳು ಸುತ್ತಲೂ ಹೊರಬಂದು ಹರಡಿಕೊಂಡವು. ಆ ಶರಗಳಿಂದಾಗಿ ಕೌರವ ಸೈನ್ಯವು ಓಡಿಹೋಯಿತು. ಅದೊಂದು ಅತಿ ದೊಡ್ಡದಾಗಿತ್ತು. ಆ ಅಸ್ತ್ರವನ್ನು ಪ್ರಯೋಗಿಸಿ ಭೀಮಸೇನನು ರಾಕ್ಷಸನ ಮಹಾಮಾಯೆಯನ್ನು ನಾಶಗೊಳಿಸಿ ರಾಕ್ಷಸನನ್ನು ಪೀಡಿಸಿದನು. ಭೀಮಸೇನನಿಂದ ಬಹಳವಾಗಿ ವಧಿಸಲ್ಪಟ್ಟ ರಾಕ್ಷಸನು ಸಂಯುಗದಲ್ಲಿ ಭೀಮನನ್ನು ಬಿಟ್ಟು ದ್ರೋಣನ ಸೇನೆಯ ಕಡೆ ಓಡಿ ಹೋದನು.

ಹೀಗೆ ಆ ರಾಕ್ಷಸೇಂದ್ರನನ್ನು ಮಹಾತ್ಮನು ಸೋಲಿಸಲು ಪಾಂಡವರು ಎಲ್ಲ ದಿಕ್ಕುಗಳಲ್ಲಿ ಸಿಂಹನಾದಗೈದರು. ಸಮರದಲ್ಲಿ ಪ್ರಹ್ರಾದನನ್ನು ಗೆದ್ದ ಶಕ್ರನನ್ನು ಮರುದ್ಗಣಗಳು ಹೇಗೋ ಹಾಗೆ ಸಂತೋಷದಿಂದ ಆ ಮಹಾಬಲ ಮಾರುತಿಯನ್ನು ಗೌರವಿಸಿದರು.

ಹೀಗೆ ಅಲಂಬುಸನು ಯುದ್ಧದಲ್ಲಿ ಭೀತಿಯಿಲ್ಲದವನಂತೆ

ಸಂಚರಿಸುತ್ತಿರಲು ಹೈಡಿಂಬನು ಬೇಗನೆ ಬಂದು ನಿಶಿತ ಶರಗಳಿಂದ ಹೊಡೆದನು. ಆ ಇಬ್ಬರು ರಾಕ್ಷಸಸಿಂಹರ ನಡುವೆ ಪರಸ್ಪರರಿಗೆ ಭಯವನ್ನುಂಟುಮಾಡುವ ಯುದ್ಧವು ನಡೆಯಿತು. ಶಕ್ರ-ಶಂಬರರಂತೆ ಅವರು ವಿವಿಧ ಮಾಯೆಗಳನ್ನು ನಿರ್ಮಿಸಿದರು. ಅಲಂಬುಸನು ತುಂಬಾ ಕ್ರುದ್ಧನಾಗಿ ಘಟೋತ್ಕಚನನ್ನು ಹೊಡೆದನು. ಘಟೋತ್ಕಚನಾದರೋ ಅಲಂಬುಸನ ಎದೆಗೆ ಇಪ್ಪತ್ತು ನಾರಾಚಗಳಿಂದ ಹೊಡೆದು ಮತ್ತೆ ಮತ್ತೆ ಸಿಂಹನಾದಗೈದನು. ಹಾಗೆಯೇ ಅಲಂಬುಸನು ಹೈಡಿಂಬನನ್ನು ಹೊಡೆದು ಆಕಾಶವನ್ನು ಎಲ್ಲಕಡೆ ತುಂಬುವಂತೆ ಜೋರಾಗಿ ಗರ್ಜಿಸಿದನು. ಹಾಗೆ ತುಂಬಾ ಸಂಕ್ರುದ್ಧರಾಗಿದ್ದ ಆ ಇಬ್ಬರು ಮಹಾಬಲ ರಾಕ್ಷಸೇಂದ್ರರು ಮಾಯಾಯುದ್ಧದಲ್ಲಿ ತೊಡಗಿದರು. ಆದರೆ ಅವರಿಬ್ಬರಲ್ಲಿ ಯಾರೂ ಒಬ್ಬರನ್ನೊಬ್ಬರು ಮೀರಿಸುವಂತಿರಲಿಲ್ಲ. ನೂರಾರು ಮಾಯೆಗಳನ್ನು ಸೃಷ್ಟಿಸಿ ಪರಸ್ಪರರನ್ನು ಮರುಳುಮಾಡಿದರು. ಮಾಯಾಯುದ್ಧದಲ್ಲಿ ಕುಶಲರಾದ ಅವರಿಬ್ಬರೂ ಮಾಯಾಯುದ್ಧವನ್ನಾಡಿದರು. ಘಟೋತ್ಕಚನು ಯುದ್ಧದಲ್ಲಿ ಏನೇನು ಮಾಯೆಗಳನ್ನು ತೋರಿಸುತ್ತಿದ್ದನೋ ಅವುಗಳನ್ನು ಅಲಂಬುಸನು ಮಾಯೆಯಿಂದಲೇ ನಾಶಗೊಳಿಸುತ್ತಿದ್ದನು. ಹಾಗೆ ಯುದ್ಧಮಾಡುತ್ತಿದ್ದ ಆ ಮಾಯಾಯುದ್ಧವಿಶಾರದ ರಾಕ್ಷಸೇಂದ್ರ ಅಲಂಬುಸನನ್ನು ನೋಡಿ ಪಾಂಡವರು ಕ್ರುದ್ಧರಾದರು. ಆಗ ತುಂಬಾ ಸಂಕ್ರುದ್ಧರಾದ

ಭೀಮಸೇನಾದಿ ರಥಪ್ರವರರು ಸಂಕ್ರುದ್ಧರಾಗಿ ಧಾವಿಸಿ ಬಂದು ಅವನನ್ನು ಸುತ್ತುವರೆದರು. ಅವನನ್ನು ರಥಸಮೂಹಗಳಿಂದ ಸುತ್ತುವರೆದು ಎಲ್ಲಕಡೆಗಳಿಂದಲೂ ಆನೆಯನ್ನು ಉಲ್ಕೆಗಳಿಂದಲೋ ಎಂಬಂತೆ ಬಾಣಗಳಿಂದ ಮುಚ್ಚಿದರು. ಅವನು ಅವರ ಅಸ್ತ್ರವೇಗವನ್ನು ತನ್ನ ಅಸ್ತ್ರಮಾಯೆಯಿಂದ ನಾಶಗೊಳಿಸಿ ಕಾಡ್ಗಿಚ್ಚಿನಿಂದ ಆನೆಯು ಬಿಡಿಸಿಕೊಳ್ಳುವಂತೆ ಆ ರಥಸಮೂಹಗಳಿಂದ ಮುಕ್ತನಾದನು. ಅವನು ಇಂದ್ರನ ವಜ್ರಾಯುಧದಂತ ಧ್ವನಿಯುಳ್ಳ ಘೋರ ಧನುಸ್ಸನ್ನು ಟೇಂಕರಿಸಿ ಮಾರುತಿಯನ್ನು ಇಪ್ಪತ್ತೈದು, ಭೈಮಸೇನಿಯನ್ನು ಐದು, ಮತ್ತು ಯುಧಿಷ್ಠಿರನನ್ನು ಮೂರರಿಂದ ಹೊಡೆದು, ಸಹದೇವನನ್ನು ಏಳರಿಂದ, ನಕುಲನನ್ನು ಇಪ್ಪತ್ತೊಂದರಿಂದ, ಮತ್ತು ಐವರು ದ್ರೌಪದೇಯರನ್ನು ಐದೈದು ಶರಗಳಿಂದ ಹೊಡೆದು ಘೋರವಾಗಿ ಸಿಂಹನಾದಗೈದನು. ಅದಕ್ಕೆ ಪ್ರತಿಯಾಗಿ ಆ ರಾಕ್ಷಸನನ್ನು ಭೀಮಸೇನನು ಒಂಭತ್ತು, ಸಹದೇವನು ಐದು, ನಕುಲನು ಅರವತ್ನಾಲ್ಕು, ದ್ರೌಪದೇಯರು ತಲಾ ಮೂರು ಮತ್ತು ಯುಧಿಷ್ಠಿರನು ನೂರರಿಂದ ಹೊಡೆದರು.

ಮಹಾಬಲ ಹೈಡಿಂಬನು ರಾಕ್ಷಸನನ್ನು ಐನೂರು ಶರಗಳಿಂದ ಹೊಡೆದು ಪುನಃ ಎಪ್ಪತ್ತರಿಂದ ಹೊಡೆದು ಗರ್ಜಿಸಿದನು. ಎಲ್ಲ

ಮಹಾರಥರಿಂದ ಎಲ್ಲಕಡೆಗಳಿಂದ ಹಾಗೆ ಪ್ರಹರಿಸಲ್ಪಟ್ಟ ಆ ಮಹೇಷ್ವಾಸನು ಅವರೆಲ್ಲರನ್ನೂ ಐದೈದು ಶರಗಳಿಂದ ತಿರುಗಿ ಹೊಡೆದನು. ಕ್ರುದ್ಧನಾಗಿರುವ ಆ ರಾಕ್ಷಸನನ್ನು ತಿರುಗಿ ಕ್ರುದ್ಧನಾದ ಹೈಡಿಂಬನು ಏಳು ಶರಗಳಿಂದ ಹೊಡೆದನು. ಅತಿಯಾಗಿ ಗಾಯಗೊಂಡ ಆ ಮಹಾಬಲ ರಾಕ್ಷಸೇಂದ್ರನು ತಕ್ಷಣವೇ ಬಲವನ್ನು ಉಪಯೋಗಿಸಿ ಸ್ವರ್ಣಪುಂಖಗಳ ಶಿಲಾಶಿತ ಬಾಣಗಳನ್ನು ಪ್ರಯೋಗಿಸಿದನು. ಆ ನತಪರ್ವ ಶರಗಳು ರೋಷಗೊಂಡ ಮಹಾಬಲಶಾಲಿ ಉಗ್ರ ಸರ್ಪಗಳು ಗಿರಿಗಳನ್ನು ಹೊಗುವಂತೆ ರಾಕ್ಷಸನನ್ನು ಪ್ರವೇಶಿಸಿದವು. ಆಗ ಆ ಪಾಂಡವರು ಮತ್ತು ಘಟೋತ್ಕಚರು ಉದ್ವಿಗ್ನರಾಗಿ ಎಲ್ಲಕಡೆಗಳಿಂದ ನಿಶಿತ ಶರಗಳನ್ನು ಪ್ರಯೋಗಿಸಿದರು. ಸಮರದಲ್ಲಿ ವಿಜಯಾಕಾಂಕ್ಷಿಗಳಾದ ಪಾಂಡವರಿಂದ ಪ್ರಹರಿಸಲ್ಪಡುತ್ತಿರುವ ಅವನು ಸುಟ್ಟುಹೋದ ಪರ್ವತದ ಶಿಖರದಂತೆ ಮತ್ತು ಒಡೆದುಹೋದ ಕಾಡಿಗೆಯ ರಾಶಿಯಂತೆ ಹೊಳೆಯುತ್ತಿದ್ದನು. ಘಟೋತ್ಕಚನು ಅವನನ್ನು ಎರಡೂ ಬಾಹುಗಳಿಂದ ಮೇಲಕ್ಕೆತ್ತಿ, ಪುನಃ ಪುನಃ ಹೊಡೆದು, ತುಂಬಿದ ಕೊಡವನ್ನು ಕಲ್ಲಮೇಲೆ ಅಪ್ಪಳಿಸಿ ಒಡೆಯುವಂತೆ ಬೇಗನೇ ನೆಲಕ್ಕೆ ಕುಕ್ಕಿದನು. ಬಲ ಮತ್ತು ಲಘುತ್ವಗಳ ಸಂಪನ್ನನಾಗಿದ್ದ, ವಿಕ್ರಮದಿಂದಲೂ ಸಂಪನ್ನನಾದ ಭೈಮಸೇನಿಯು ರಣದಲ್ಲಿ ಕ್ರುದ್ಧನಾಗಿ ಸರ್ವಸೇನೆಗಳನ್ನೂ ಹೆದರಿಸಿದನು.

ಸರ್ವಾಂಗಗಳೂ ಒಡೆದುಹೋಗಿರುವ, ಮಾಂಸ-ಎಲುಬುಗಳಿಂದ ವಿಭೂಷಿತನಾಗಿದ್ದ, ಘಟೋತ್ಕಚನಿಂದ ಹತನಾದ ಆ ವೀರನು ಮುರಿದು ಬಿದ್ದ ಸಾಲವೃಕ್ಷದಂತೆ ತೋರಿದನು.

ಆ ನಿಶಾಚರನು ಹತನಾಗಲು ಸುಮನಸ್ಕರಾದ ಪಾರ್ಥರು ಸಿಂಹನಾದ ಮಾಡಿದರು ಮತ್ತು ಉತ್ತರೀಯಗಳನ್ನು ಮೇಲೆ ಹಾರಿಸಿದರು. ಆ ಬೀಮರೂಪ ಮಹಾಬಲ ರಾಕ್ಷಸೇಂದ್ರ ಅಲಂಬುಸನು ಸೀಳಿಹೋದ ಪರ್ವತದಂತೆ ಹತನಾದುದನ್ನು ಕಂಡು ಕೌರವ ಸೇನೆಗಳು ಹಾಹಾಕಾರಗೈದವು. ಕುತೂಹಲವಿದ್ದ ಜನರು ಭೂಮಿಯ ಮೇಲೆ ಅಂಗಾರಕನಂತೆ (ಇದ್ದಿಲಿನಂತೆ) ಬಿದ್ದಿರುವ ಆ ರಕ್ಷಸನನ್ನು ನೋಡಲಿಕ್ಕೇ ಬಂದರು. ಘಟೋತ್ಕಚನಾದರೋ ಆ ರಾಕ್ಷಸನನ್ನು ಕೊಂದು ಬಲನನ್ನು ಸಂಹರಿಸಿದ ವಾಸವನಂತೆ ಬಲವತ್ತಾಗಿ ಕೂಗಿದನು. ಆ ದುಷ್ಕರ ಕರ್ಮವನ್ನೆಸಗಿದ ಘಟೋತ್ಕಚನನ್ನು ಅವನ ಪಿತೃಗಳು ಬಾಂಧವರು ಗೌರವಿಸಿದರು. ಗಳಿತ ಅಲಂಬುಸ ಹಣ್ಣನ್ನು ಹೇಗೋ ಹಾಗೆ ಶತ್ರು ಅಲಂಬುಸನನ್ನು ಸಂಹರಿಸಿದ ಅವನು ಬಹಳವಾಗಿ ಆನಂದಿಸಿದನು. ಆಗ ಮಹಾ ಶಬ್ಧವು - ಶಂಖ ಮತ್ತು ನಾನಾ ವಿಧದ ಬಾಣಗಳ ಘೋಷವು ಉಂಟಾಯಿತು. ಅದನ್ನು ಕೇಳಿ ಕೌರವರು ಪ್ರತಿಯಾಗಿ ಕೂಗಲು, ಅವರ ಧ್ವನಿಯು ಭುವನಗಳನ್ನೂ

ಮುಟ್ಟುವಂತಿತ್ತು.

## ದ್ರೋಣ-ಸಾತ್ಯಕಿಯರ ಯುದ್ಧ

ಯುಯುಧಾನನಿಂದ ಸೇನೆಯು ನಾಶಗೊಳ್ಳುತ್ತಿರುವುದನ್ನು ನೋಡಿ ಸ್ವಯಂ ದ್ರೋಣನು ಸತ್ಯವಿಕ್ರಮ ಸಾತ್ಯಕಿಯನ್ನು ಆಕ್ರಮಣಿಸಿದನು. ಒಮ್ಮೆಲೇ ಮೇಲೆ ಬೀಳುತ್ತಿದ್ದ ಭಾರದ್ವಾಜನನ್ನು ಸಾತ್ಯಕಿಯು ಇಪ್ಪತ್ತೈದು ಕ್ಷುದ್ರಕಗಳಿಂದ ಹೊಡೆದನು. ದ್ರೋಣನೂ ಕೂಡ ಕೂಡಲೇ ಯುಯುಧಾನನನ್ನು ಐದು ಹೇಮಪುಂಖ ಶಿಲಾಶಿತಗಳಿಂದ ಹೊಡೆದನು. ಶತ್ರುವಿನ ರಕ್ತವನ್ನು ಕುಡಿಯಬಲ್ಲ ಅವು ಅವನ ಸುದೃಢ ಕವಚವನ್ನು ಭೇದಿಸಿ, ಬುಸುಗುಟ್ಟುವ ಸರ್ಪಗಳಂತೆ ಭೂಮಿಯನ್ನು ಹೊಕ್ಕವು. ಅಂಕುಶದಿಂದ ಪೀಡಿತನಾದ ಸಲಗದಂತೆ ಕ್ರುದ್ಧನಾದ ಆ ದೀರ್ಘಬಾಹುವು ದ್ರೋಣನನ್ನು ಐನೂರು ಅಗ್ನಿಸನ್ನಿಭ ನಾರಾಚಗಳಿಂದ ಹೊಡೆದನು. ರಣದಲ್ಲಿ ಯುಯುಧಾನನಿಂದ ಪ್ರಹರಿಸಲ್ಪಟ್ಟ ಭಾರದ್ವಾಜನು ಪ್ರಯತ್ನಪಟ್ಟು ಸಾತ್ಯಕಿಯನ್ನು ಅನೇಕ ಬಾಣಗಳಿಂದ ಹೊಡೆದನು. ಆಗ ಪುನಃ ಕ್ರುದ್ಧನಾದ ಮಹೇಷ್ವಾಸನು ನೂರಾರು ನತಪರ್ವಗಳಿಂದ ಸಾತ್ವತನನ್ನು ಪೀಡಿಸಿದನು. ಭಾರದ್ವಾಜನಿಂದ ಸಮರದಲ್ಲಿ ಪ್ರಹರಿಸಲ್ಪಡುತ್ತಿದ್ದ ಸಾತ್ಯಕಿಯು ತನ್ನ ಕರ್ತವ್ಯದಿಂದ ಸ್ವಲ್ಪವೂ ಹಿಂಜರಿಯಲಿಲ್ಲ. ರಣದಲ್ಲಿ ನಿಶಿತಶರಗಳನ್ನು

ಬಿಡುತ್ತಿರುವ ಭಾರದ್ವಾಜನನ್ನು ನೋಡಿ ಯುಯುಧಾನನು ವಿಷಣ್ಣವದನನಾದನು. ಅವನನ್ನು ಹಾಗೆ ನೋಡಿದ ಕೌರವ ಪುತ್ರರು ಮತ್ತು ಸೈನಿಕರು ಪ್ರಹೃಷ್ಟಮನಸ್ಕರಾಗಿ ಪುನಃ ಪುನಃ ಸಿಂಹನಾದಗೈದರು. ಆ ಘೋರ ನಿನಾದವನ್ನು ಮತ್ತು ಮಾಧವನನ್ನು ಪೀಡಿಸುತ್ತಿರುವುದನ್ನು ಕೇಳಿ ಯುಧಿಷ್ಠಿರನು ತನ್ನ ಸರ್ವ ಸೇನೆಗಳಿಗೆ ಹೇಳಿದನು:

> "ಇಗೋ! ವೃಷ್ಣಿವರ ವೀರ ಸಾತ್ಯಕಿಯು ಯುದ್ಧದಲ್ಲಿ ರಾಹುವಿನಿಂದ ಸೂರ್ಯನು ಹೇಗೋ ಹಾಗೆ ವೀರನಿಂದ ಕಬಳಿಸಲ್ಪಡುತ್ತಿದ್ದಾನೆ. ಸಾತ್ಯಕಿಯು ಎಲ್ಲಿ ಯುದ್ಧಮಾಡುತ್ತಿದ್ದಾನೋ ಅಲ್ಲಿಗೆ ಧಾವಿಸಿ ಹೋಗಿ."

ಜನಾಧಿಪನು ಧೃಷ್ಟದ್ಯುಮ್ನನಿಗೆ ಇದನ್ನು ಹೇಳಿದನು:

> "ಪಾರ್ಷತ! ಇನ್ನೂ ಏಕೆ ನಿಂತಿದ್ದೀಯೆ? ದ್ರೋಣನಿರುವಲ್ಲಿ ಬೇಗ ಹೋಗು! ಬರಲಿರುವ ಘೋರ ಭಯವನ್ನು ದ್ರೋಣನು ಇನ್ನೂ ಕಂಡಿರಲಿಕ್ಕಿಲ್ಲ. ಈ ದ್ರೋಣನು ಯುಯುಧಾನನೊಡನೆ ದಾರಕ್ಕೆ ಕಟ್ಟಿದ ಪಕ್ಷಿಯೊಡನೆ ಬಾಲಕನು ಆಡುವಂತೆ ಆಡುತ್ತಿದ್ದಾನೆ! ಅಲ್ಲಿಗೇ ಭೀಮಸೇನನೇ ಮೊದಲಾದ ಎಲ್ಲ ರಥರೂ, ನಿನ್ನನ್ನೂ ಸೇರಿ, ಯುಯುಧಾನನ ರಥದ ಕಡೆ

ಹೋಗಲಿ. ಸೈನಿಕರೊಡನೆ ನಾನು ನಿಮ್ಮನ್ನು ಹಿಂಬಾಲಿಸಿ ಬರುತ್ತೇನೆ. ಯಮನ ದವಡೆಗಳಲ್ಲಿ ಸಿಲುಕಿರುವ ಸಾತ್ಯಕಿಯನ್ನು ಬಿಡಿಸಿ!”

ಹೀಗೆ ಹೇಳಿ ರಾಜಾ ಪಾಂಡವನು ಸರ್ವಸೈನ್ಯಗಳೊಡನೆ ರಣದಲ್ಲಿ ಯುಯುಧಾನನ ಕಾರಣದಿಂದಾಗಿ ದ್ರೋಣನನ್ನು ಆಕ್ರಮಣಿಸಿದನು. ಆಗ ಅಲ್ಲಿ ದ್ರೋಣನೊಬ್ಬನೊಡನೆ ಪಾಂಡವರ ಮತ್ತು ಸೃಂಜಯರೊಡನೆ ಯುದ್ಧವು ನಡೆಯಿತು. ಆ ನರವ್ಯಾಘ್ರರೆಲ್ಲ ಸೇರಿ ಭಾರದ್ವಾಜನ ಮೇಲೆ ತೀಕ್ಷ್ಣವಾದ ಕಂಕ ಮತ್ತು ನವಿಲುಗರಿಗಳಿಂದ ಮಾಡಲ್ಪಟ್ಟ ಶರಗಳನ್ನು ಸುರಿಸಿದರು. ನಸುನಗುತ್ತಾಲೇ ಸ್ವಯಂ ದ್ರೋಣನು ಆ ವೀರರನ್ನು ಬಂದಿರುವ ಅತಿಥಿಗಳನ್ನು ನೀರು-ಆಸನಗಳನ್ನಿತ್ತು ಬರಮಾಡಿಕೊಳ್ಳುವಂತೆ ಬರಮಾಡಿಕೊಂಡನು. ಅತಿಥಿಗೃಹವನ್ನು ಸೇರಿದ ಅತಿಥಿಗಳು ಹೇಗೋ ಹಾಗೆ ಅವರು ಧನ್ವಿ ಭಾರದ್ವಾಜನ ಶರಗಳಿಂದ ತೃಪ್ತರಾದರು. ಮಧ್ಯಾಹ್ನವನ್ನು ತಲುಪಿದ ಸಹಸ್ರಾಂಶು ಸೂರ್ಯನಂತಿರುವ ಆ ಭಾರದ್ವಾಜನನ್ನು ಅವರೆಲ್ಲರೂ ನೋಡಲೂ ಕೂಡ ಶಕ್ಯರಾಗಿರಲಿಲ್ಲ. ಆ ಎಲ್ಲ ಮಹೇಷ್ವಾಸರನ್ನೂ ದ್ರೋಣನು ಸೂರ್ಯನು ತನ್ನ ಕಿರಣಗಳಿಂದ ಭುವನಗಳನ್ನು ಸುಡುವಂತೆ ಶರವ್ರಾತಗಳಿಂದ ಸುಟ್ಟನು. ಹೀಗೆ ರಣದಲ್ಲಿ

ವಧಿಸಲ್ಪಡುತ್ತಿದ್ದ ಆ ಪಾಂಡವ-ಸೃಂಜಯರು ಕೆಸರಿನಲ್ಲಿ ಹುಗಿದುಹೋದ ಆನೆಗಳಂತೆ ತ್ರಾತಾರನನ್ನು ಕಾಣದೇ ಹೋದರು. ದ್ರೋಣನಿಂದ ಹರಿದು ಬರುತ್ತಿದ್ದ ಆ ಮಹಾಶರಗಳು ಸೂರ್ಯನ ಕಿರಣಗಳಂತೆ ಎಲ್ಲಕಡೆ ಸುಡುತ್ತಿದ್ದವು. ಅಲ್ಲಿ ದ್ರೋಣನು–ಮಹಾರಥರೆಂದು ಸಮಾಖ್ಯಾತರಾದ ಮತ್ತು ಧೃಷ್ಟದ್ಯುಮ್ನನಿಂದ ಸಮ್ಮತರಾದ ಇಪ್ಪತ್ತೈದು ಪಾಂಚಾಲರನ್ನು ಸಂಹರಿಸಿದನು.

ಪಾಂಡವರ ಮತ್ತು ಪಾಂಚಾಲರ ಎಲ್ಲ ಸೇನೆಗಳಲ್ಲಿ ಶ್ರೇಷ್ಠ ಶ್ರೇಷ್ಠರಾದವರನ್ನು ಶೂರನು ಸಂಹರಿಸುತ್ತಿರುವುದು ಕಾಣುತ್ತಿತ್ತು. ಕೇಕಯರ ನೂರರನ್ನು ಸಂಹಸಿ, ಉಳಿದವರು ಎಲ್ಲಕಡೆ ಓಡಿ ಹೋಗುತ್ತಿರಲು ದ್ರೋಣನು ಅಲ್ಲಿ ಬಾಯಿಕಳೆದ ಅಂತಕನಂತೆ ನಿಂತಿದ್ದನು. ದ್ರೋಣನು ನೂರಾರು ಸಹಸ್ರಾರು ಪಾಂಚಾಲ-ಸೃಂಜಯ-ಮತ್ಸ್ಯ-ಕೇಕಯ-ಪಾಂಡವರನ್ನು ಗೆದ್ದನು. ದ್ರೋಣನ ಸಾಯಕಗಳಿಂದ ವಧಿಸಲ್ಪಡುತ್ತಿದ್ದ ಅವನ ಶಬ್ಧವು ಅರಣ್ಯದಲ್ಲಿ ಬೆಂಕಿಯಿಂದ ಸುಟ್ಟುಹೋಗುತ್ತಿದ್ದ ವನವಾಸಿಗಳದಂತಿತ್ತು. ಅಲ್ಲಿ ಗಂಧರ್ವರು ಮತ್ತು ಪಿತೃಗಳೊಂದಿಗೆ ದೇವತೆಗಳು

> “ಇದೋ! ಪಾಂಚಾಲರು ಮತ್ತು ಪಾಂಡವರು
> ಸೈನಿಕರೊಂದಿಗೆ ಓಡಿ ಹೋಗುತ್ತಿದ್ದಾರೆ!”

ಎಂದು ಹೇಳಿಕೊಂಡರು. ಹೀಗೆ ಸಮರದಲ್ಲಿ ದ್ರೋಣನು ಸೋಮಕರನ್ನು ಸಂಹರಿಸುತ್ತಿರುವಾಗ ರಣದಲ್ಲಿ ಯಾರೂ ಅವನನ್ನು ಎದುರಿಸಲಿಲ್ಲ ಮತ್ತು ಯಾರೂ ಅವನನ್ನು ಗಾಯಗೊಳಿಸಲಿಲ್ಲ.

## ಯುಧಿಷ್ಠಿರನು ಸಾತ್ಯಕಿಯನ್ನು ಅರ್ಜುನನ ಸಹಾಯಕ್ಕೆ ಕಳುಹಿಸಿದುದು

ಹಾಗೆ ರೌದ್ರವಾದ ವೀರಶ್ರೇಷ್ಠರ ವಿನಾಶವು ನಡೆಯುತ್ತಿರಲು ಯುಧಿಷ್ಠಿರನು ಒಮ್ಮೆಲೇ ಪಾಂಚಜನ್ಯದ ಧ್ವನಿಯನ್ನು ಕೇಳಿದನು. ವಾಸುದೇವನಿಂದ ಊದಲ್ಪಟ್ಟ ಆ ಶಂಖರಾಜನ ಧ್ವನಿಯು ಜೋರಾಗಿತ್ತು. ಯುದ್ಧಮಾಡುತ್ತಿದ್ದ ಸೈಂಧವನ ರಕ್ಷಕ ವೀರ ಧಾರ್ತರಾಷ್ಟ್ರರು ಅರ್ಜುನನ ರಥದ ಬಳಿ ಕೂಗಾಡುತ್ತಿದ್ದುದರಿಂದ ಗಾಂಡೀವದ ನಿರ್ಘೋಷವು ಎಲ್ಲಕಡೆ ಕೇಳಿಬರುತ್ತಿರಲಿಲ್ಲ. ಆಗ ರಾಜಾ ಪಾಂಡವನು ಎಚ್ಚರ ತಪ್ಪಿ ಚಿಂತಿತನಾದನು:

> "ಶಂಖರಾಜನು ಹೇಗೆ ಧ್ವನಿಸುತ್ತಿರುವನೋ ಮತ್ತು ಹೇಗೆ ಕೌರವರು ಮತ್ತೆ ಮತ್ತೆ ಕೂಗಾಡುತ್ತಿದ್ದಾರೆ ಅಂದರೆ ಪಾರ್ಥನಿಗೆ ಏನೋ ಒಳ್ಳೆಯದಾಗಿರಲಿಕ್ಕಿಲ್ಲ!"

ಹೀಗೆ ಚಿಂತಿಸುತ್ತಾ ಒಳಗಿಂದೊಳಗೇ ವ್ಯಾಕುಲನಾಗಿ ಅಜಾತಶತ್ರು

ಕೌಂತೇಯನು ಮತ್ತೆ ಮತ್ತೆ ಮೂರ್ಛೆಹೋಗುತ್ತಾ ಕಣ್ಣೀರಿನಿಂದ ಗದ್ಗದ ಕಂಠನಾಗಿ ಮುಂದೆ ಮಾಡಬೇಕಾದನ್ನು ಅಪೇಕ್ಷಿಸುತ್ತಾ ಸಾತ್ಯಕಿಗೆ ಹೇಳಿದನು:

"ಶೈನೇಯ! ಹಿಂದೆ ಸದಾಚಾರಿಗಳು ಯಾವುದನ್ನು ಶಾಶ್ವತ ಧರ್ಮವೆಂದು ಕಂಡುಕೊಂಡಿದ್ದರೋ ಆ ಆಪತ್ತಿನಲ್ಲಿರುವ ಸುಹೃದಯರಿಗೆ ಮಾಡಬೇಕಾದ ಕರ್ತವ್ಯದ ಕಾಲವು ಬಂದೊದಗಿದೆ. ಸಾತ್ಯಕೇ! ಎಲ್ಲ ಯೋಧರ ಕುರಿತು ಯೋಚಿಸಿದರೂ ನಿನ್ನಂತಹ ಉತ್ತಮನಾದ ಬೇರೆ ಯಾರನ್ನೂ ನಾನು ತಿಳಿಯೆನು. ಯಾರು ನಿತ್ಯವೂ ಪ್ರೀತಮನಸ್ಕನಾಗಿರುತ್ತಾನೋ, ನಿತ್ಯವೂ ಅನುವ್ರತನಾಗಿರುತ್ತಾನೋ ಅವನಿಗೇ ಆಪತ್ತಿನಲ್ಲಿ ಕಾರ್ಯವನ್ನು ನಿಯೋಜಿಸಬೇಕು ಎಂದು ನನ್ನ ಅಭಿಪ್ರಾಯ. ಕೇಶವನು ಹೇಗೆ ನಿತ್ಯವೂ ಪಾಂಡವರನ್ನೇ ನೆನೆಯುತ್ತಿರುತ್ತಾನೋ ಹಾಗೆ ಪರಾಕ್ರಮದಲ್ಲಿ ಕೃಷ್ಣನ ಸಮನಾದ ನೀನೂ ಕೂಡ. ನಾನು ನಿನ್ನ ಮೇಲೆ ಒಂದು ಭಾರವನ್ನು ಹೊರಿಸುತ್ತಿದ್ದೇನೆ. ಅದನ್ನು ನೀನು ಹೊರಬೇಕು. ಎಂದೂ ಇದನ್ನು ನಿರ್ವಹಿಸದೇ ಇರಬಾರದೆಂದು ನನ್ನ

ಅಭಿಪ್ರಾಯ. ಅರ್ಜುನನು ನಿನಗೆ ಸಹೋದರನಂತೆ. ಗೆಳೆಯನಂತೆ. ಮತ್ತು ಗುರುವಿನಂತೆ ಕೂಡ. ಕಷ್ಟದಲ್ಲಿರುವ ಅವನಿಗೆ ನೀನು ಸಹಾಯಮಾಡು. ನೀನು ಸತ್ಯವ್ರತ, ಶೂರ, ಮಿತ್ರರಿಗೆ ಅಭಯವನ್ನುಂಟುಮಾಡುವವನು. ಲೋಕದಲ್ಲಿ ನೀನು ಸತ್ಯ ಕರ್ಮ ಮತ್ತು ಮಾತುಗಳಿಗೆ ವಿಖ್ಯಾತನಾಗಿದ್ದೀಯೆ. ಯಾರು ಮಿತ್ರನಿಗಾಗಿ ಯುದ್ಧಮಾಡುತ್ತಾ ದೇಹವನ್ನು ತ್ಯಜಿಸುತ್ತಾನೋ ಅವನು ದ್ವಿಜಾತಿಯವರಿಗೆ ಭೂಮಿಯನ್ನು ದಾನವನ್ನಾಗಿತ್ತವನಿಗೆ ಸಮ. ನಾವೂ ಕೂಡ ಬಹಳಷ್ಟು ರಾಜರು ಈ ಭೂಮಿಯನ್ನು ಸಂಪೂರ್ಣವಾಗಿ ಯಥಾವಿಧಿಯಾಗಿ ಬ್ರಾಹ್ಮಣರಿಗೆ ಕೊಟ್ಟು ಸ್ವರ್ಗಕ್ಕೆ ಹೋಗಿದುದನ್ನು ಕೇಳಿದ್ದೇವೆ. ಹೀಗೆ ನೀನೂ ಕೂಡ ಭೂದಾನಕ್ಕೆ ಸಮಾನವಾದ ಅಥವಾ ಅದಕ್ಕೂ ಅಧಿಕವಾದ ಫಲವನ್ನು ಪಡೆ ಎಂದು ಕೈಮುಗಿದು ಕೇಳಿಕೊಳ್ಳುತ್ತಿದ್ದೇನೆ. ಒಬ್ಬನಿದ್ದಾನೆ- ರಣದಲ್ಲಿ ಪ್ರಾಣಗಳನ್ನು ತೊರೆದೂ ಸದಾ ಮಿತ್ರರಿಗೆ ಅಭಯವನ್ನುಂಟುಮಾಡುವ ಕೃಷ್ಣ. ಇನ್ನೊಬ್ಬನು ನೀನು ಸಾತ್ಯಕಿ. ಯಶಸ್ಸನ್ನು ಬಯಸುವ ವೀರ ವಿಕ್ರಾಂತನಿಗೆ ಯುದ್ಧದಲ್ಲಿ ಶೂರನು ಮಾತ್ರ ಸಹಾಯಮಾಡಬಲ್ಲ, ಸಾಧಾರಣ ಜನರಲ್ಲ. ನಡೆಯುತ್ತಿರುವ ಈ ಸಂಕಟದಲ್ಲಿ ನೀನು

ಮಾತ್ರ ರಣದಲ್ಲಿ ವಿಜಯನನ್ನು ರಕ್ಷಿಸಬಲ್ಲೆ. ಬೇರೆ ಯಾರೂ ಇಲ್ಲ. ನಿನ್ನ ನೂರಾರು ಕರ್ಮಗಳನ್ನು ಹೊಗಳುತ್ತ ಅರ್ಜುನನು ನನಗೆ ನಿನ್ನ ಕುರಿತು ಹರ್ಷದಿಂದ ಕಣ್ಣುಗಳು ತೇವಗೊಂಡಿರಲು ಪುನಃ ಪುನಃ ವರ್ಣಿಸಿದ್ದನು. “ಯುಯುಧಾನನು ಅಸ್ತ್ರಗಳಲ್ಲಿ ಚಾಕಚಕ್ಯತೆಯುಳ್ಳವನು. ಚಿತ್ರಯೋಧೀ. ಹಾಗೆಯೇ ಲಘು ಪರಾಕ್ರಮಿ. ಪ್ರಾಜ್ಞ. ಸರ್ವಾಸ್ತ್ರಗಳನ್ನೂ ತಿಳಿದವನು. ಯುದ್ಧದಲ್ಲಿ ಎಂದೂ ಮರುಳಾಗದವನು. ಅವನು ವಿಶಾಲ ಭುಜವುಳ್ಳವನು. ವಿಶಾಲ ಎದೆಯುಳ್ಳವನು. ಮಹಾಬಾಹು ಮತ್ತು ಮಹಾಧನುಸ್ಸುಳ್ಳವನು. ನನ್ನ ಶಿಷ್ಯ ಮತ್ತು ಸಖನೂ ಕೂಡ. ನಾನು ಅವನಿಗೆ ಪ್ರಿಯನಾಗಿದ್ದೇನೆ. ಅವನು ನನಗೆ ಪ್ರಿಯನಾಗಿದ್ದಾನೆ. ಕೌರವರನ್ನು ಸದೆಬಡಿಯುವುದರಲ್ಲಿ ಅವನು ನನಗೆ ಸಹಾಯ ಮಾಡುತ್ತಾನೆ. ನಮಗಾಗಿ ಒಂದುವೇಳೆ ಕೇಶವ, ರಾಮ, ಅನಿರುದ್ಧ, ಪ್ರದ್ಯುಮ್ನ, ಗದ, ಸಾರಣ, ಸಾಂಬ ಅಥವಾ ಇತರ ವೃಷ್ಣಿಗಳು ಸಹಾಯಕ್ಕೆಂದು ಸಂಗ್ರಾಮದಲ್ಲಿ ಸನ್ನದ್ಧರಾಗಿದ್ದರೆ ಆಗಲೂ ಕೂಡ ನಾನು ನರವ್ಯಾಘ್ರ ಶೈನೆಯ ಸತ್ಯವಿಕ್ರಮನನ್ನು ಸಹಾಯಕ್ಕೆಂದು ಆರಿಸಿಕೊಳ್ಳುತ್ತೇನೆ. ಏಕೆಂದರೆ ಅವನ ಸರಿಸಮನಾದವನು

ಬೇರೆ ಇಲ್ಲ.”

ಹೀಗೆ ದ್ವೈತವನದಲ್ಲಿ ಧನಂಜಯನು ನೀನಿಲ್ಲದಿರುವಾಗ ಒಮ್ಮೆ ಆರ್ಯರ ಸಂಸದಿಯಲ್ಲಿ ನಿನ್ನ ಗುಣಗಳನ್ನು ಹೊಗಳುತ್ತಾ ಹೇಳಿದ್ದನು. ಆ ಧನಂಜಯನ ಹಾಗೂ ನನ್ನ ಮತ್ತು ಭೀಮರಿಬ್ಬರ ಸಂಕಲ್ಪಗಳನ್ನು ನೀನು ಹಾಳುಮಾಡಬಾರದು. ತೀರ್ಥಗಳಲ್ಲಿ ತಿರುಗಾಡಿ ದ್ವಾರಕೆಯ ಕಡೆ ಬಂದಿದ್ದಾಗ ಅಲ್ಲಿ ಕೂಡ ಅರ್ಜುನನ ಕುರಿತು ನಿನಗಿರುವ ಭಕ್ತಿಯನ್ನು ನಾನು ನೋಡಿದ್ದೇನೆ. ನಾವು ಉಪಪ್ಲವದಲ್ಲಿ ಇರುವಾಗ ನೀನು ನಮ್ಮನ್ನು ಪ್ರೀತಿಸುವಷ್ಟು ಬೇರೆ ಯಾರನ್ನೂ ನಾನು ಕಂಡಿರಲಿಲ್ಲ. ಉತ್ತಮ ಕುಲದಲ್ಲಿ ಜನ್ಮವಿತ್ತಿದ್ದೀಯೆ. ನಿನ್ನ ಭಕ್ತಿ, ಸಖ್ಯ, ಆಚಾರ್ಯಕತ್ವ, ಸೌಹೃದತ್ವ, ವೀರ್ಯ ಮತ್ತು ಸತ್ಯ-ಅನುಕಂಪಗಳಿಗೆ ಅನುರೂಪವಾದ ಕರ್ಮವನ್ನು ನೀನು ಮಾಡಬೇಕು. ಸುಯೋಧನನು ತ್ವರೆಮಾಡಿ ದ್ರೋಣನಿಂದ ಕವಚವನ್ನು ಕಟ್ಟಿಸಿಕೊಂಡು ಮತ್ತು ಅದಕ್ಕೆ ಮೊದಲೇ ಕೌರವ ಮಹಾರಥರು ಹೋಗಿದ್ದಾರೆ. ವಿಜಯ ಅರ್ಜುನನ ಕಡೆಯಿಂದ ಮಹಾ ನಿನಾದವು ಕೇಳಿ ಬರುತ್ತಿದೆ. ವೇಗದಿಂದ ಅಲ್ಲಿಗೆ ಹೋಗಬೇಕಾಗಿದೆ. ಅವನ ಕಡೆ ನೀನು

ಹೋದರೆ ಭೀಮಸೇನ ಮತ್ತು ಸೈನಿಕರೊಂದಿಗೆ ನಾವು ಪ್ರಯತ್ನಪಟ್ಟು ದ್ರೋಣನನ್ನು ತಡೆಯುತ್ತೇವೆ. ರಣರಂಗದಲ್ಲಿ ಸೈನ್ಯಗಳು ಓಡಿಹೋಗುತ್ತಿರುವುದನ್ನು ನೋಡು! ರಣದಲ್ಲಿ ಮಹಾ ಶಬ್ಧವು ಕೇಳಿಬರುತ್ತಿದೆ. ಭಾರತೀಸೇನೆಯು ಸೀಳಿಹೋದಂತೆ ತೋರುತ್ತಿದೆ. ಪರ್ವದಲ್ಲಿ ಮಹಾ ಚಂಡಮಾರುತದ ವೇಗದಿಂದ ಸಮುದ್ರವು ಹೇಗೋ ಹಾಗೆ ಸವ್ಯಸಾಚಿಯಿಂದ ಧಾರ್ತರಾಷ್ಟ್ರನ ಬಲವು ಅಲ್ಲೋಲಕಲ್ಲೋಲಗೊಂಡಿದೆ. ಅತ್ತಿತ್ತ ರಭಸದಿಂದ ಓಡಾಡುತ್ತಿರುವ ರಥ-ಕುದುರೆ-ಮನುಷ್ಯರಿಂದ ಮೇಲೆದ್ದ ಧೂಳಿನಿಂದ ಸೈನ್ಯವು ಮುಚ್ಚಿಹೋಗಿಬಿಟ್ಟಿದೆ. ಪರವೀರಹ ಫಲ್ಗುನನು ಪ್ರಾಸಗಳಿಂದ ಯುದ್ಧಮಾಡುತ್ತಿರುವ ಸಂಘಟಿತರಾಗಿರುವ ಸಿಂಧು-ಸೌವೀರ ಶೂರರಿಂದ ಸುತ್ತುವರೆಯಲ್ಪಟ್ಟಿದ್ದಾನೆ. ಸೈಂಧವನಿಗಾಗಿ ಜೀವವನ್ನೇ ತೊರೆದು ಇರುವ ಈ ಸೈನ್ಯವನ್ನು ದಾಟದೇ ಜಯದ್ರಥನನ್ನು ಕೊಲ್ಲುವುದು ಅಶಕ್ಯ. ಶರ-ಶಕ್ತಿ-ಧ್ವಜಗಳ ವನದಂತಿರುವ, ಕುದುರೆ-ಆನೆಗಳ ಸಮಾಕುಲಗಳಿಂದ ಕೂಡಿರುವ, ತುಂಬಾ ದುರಾಸದವಾಗಿರುವ ಧಾರ್ತರಾಷ್ಟ್ರರ ಈ ಸೇನೆಯನ್ನಾದರೂ ನೋಡು! ದುಂದುಭಿಗಳ ನಿರ್ಘೋಷವನ್ನೂ, ಪುಷ್ಕಲವಾದ

ಶಂಖಶಬ್ಧಗಳನ್ನೂ, ಸಿಂಹನಾದ ಕೂಗುಗಳನ್ನೂ, ರಥಚಕ್ರಗಳ ಧ್ವನಿಗಳನ್ನೂ ಕೇಳು! ಸಹಸ್ರಾರು ಆನೆಗಳ ಮತ್ತು ಪದಾತಿಗಳ ಶಬ್ಧವನ್ನು ಕೇಳು. ಓಡುತ್ತಿರುವ ಅಶ್ವಾರೋಹಿಗಳಿಂದ ಭೂಮಿಯು ಕಂಪಿಸುತ್ತಿರುವುದನ್ನೂ ಕೇಳು. ಮುಂದೆ ಸೈಂಧವನ ಸೇನೆಯಿದೆ. ಹಿಂದೆ ದ್ರೋಣನ ಸೇನೆಯಿದೆ. ಈ ಬಹುಸೇನೆಗಳು ದೇವೇಂದ್ರನನ್ನೂ ಪೀಡಿಸಬಲ್ಲವು ಎಂದು ತಿಳಿ. ಅಪಾರವಾದ ಈ ಸೇನೆಯಲ್ಲಿ ಮುಳುಗಿಹೋದ ಅವನು ಜೀವಿತವನ್ನೂ ತೊರೆಯಬಹುದು. ಯುದ್ಧದಲ್ಲಿ ಅವನು ಹತನಾದರೆ ನನ್ನಂತವನು ಹೇಗೆ ಜೀವಿಸಿಯಾನು? ನೀನು ಬದುಕಿರುವಾಗಲೇ ನಾನು ಸರ್ವಥಾ ಮಹಾ ಸಂಕಟದಲ್ಲಿ ಸಿಲುಕಿಕೊಂಡಿದ್ದೇನೆ. ಶ್ಯಾಮಲವರ್ಣದ ಯುವಕ ಗುಡಾಕೇಶ ಸುಂದರ ಅಸ್ತ್ರಗಳಲ್ಲಿ ಪರಿಣಿತ ಚಿತ್ರಯೋಧೀ ಪಾಂಡವನು ಸೂರ್ಯೋದಯದಲ್ಲಿಯೇ ಭಾರತೀ ಸೇನೆಯನ್ನು ಪ್ರವೇಶಿಸಿದ್ದನು. ದಿವಸವು ಕಳೆಯುತ್ತಾ ಬಂದಿದೆ. ಅವನು ಜೀವಿತನಾಗಿರುವನೋ ಇಲ್ಲವೋ ಎನ್ನುವುದು ನನಗೆ ತಿಳಿದಿಲ್ಲ. ಕುರುಗಳ ಆ ಸೇನೆಯಾದರೋ ಸಾಗರದಂತೆ ವಿಶಾಲವಾಗಿದೆ. ಯುದ್ಧದಲ್ಲಿ ದೇವತೆಗಳಿಂದಲೂ ಎದುರಿಸಲಾಗದ ಭಾರತೀ ಸೇನೆಯನ್ನು ಮಹಾಬಾಹು

ಬೀಭತ್ಸುವು ಒಬ್ಬನೇ ಪ್ರವೇಶಿಸಿದ್ದಾನೆ. ನನಗೀಗ ಯುದ್ಧದಲ್ಲಿ ಆಸಕ್ತಿಯೇ ಹೊರಟು ಹೋಗಿದೆ. ದ್ರೋಣರು ರಭಸದಿಂದ ಯುದ್ಧಮಾಡುತ್ತಾ ನನ್ನ ಸೇನೆಯನ್ನು ಪೀಡಿಸುತ್ತಿದ್ದಾರೆ. ಈ ದ್ವಿಜನು ಹೇಗೆ ಸಂಚರಿಸುತ್ತಿದ್ದಾನೆ ಎನ್ನುವುದನ್ನು ನೀನೇ ನೋಡುತ್ತಿರುವೆ. ಹೀಗೆ ಎರಡು ಕಾರ್ಯಗಳೂ ಒಟ್ಟಿಗೇ ಬಂದೊದಗಿದಾಗ ವಿವೇಕಿಯಾದ ನೀನು ಹಗುರವಾದುದನ್ನು ಬಿಟ್ಟು ಮಹಾರ್ಥವಿದ್ದುದನ್ನು ಮಾಡಬೇಕು. ಸರ್ವಕಾರ್ಯಗಳಲ್ಲಿ ಅರ್ಜುನನ ರಕ್ಷಣೆಯು ಸದಾ ಮಹತ್ತರವಾದುದು ಎಂದು ನನಗನ್ನಿಸುತ್ತದೆ. ಯುದ್ಧದಲ್ಲಿ ಅದು ನಿನ್ನ ಕರ್ತವ್ಯವಾಗಿದೆ. ದಾಶಾರ್ಹ, ಜಗತ್ತಿನ ಪ್ರಭು, ರಕ್ಷಕನು ರಣದಲ್ಲಿ ಶಕ್ತನಿಲ್ಲವೆಂದು ನಾನು ಯೋಚಿಸುತ್ತಿಲ್ಲ. ಮೂರುಲೋಕಗಳು ಒಟ್ಟಾಗಿ ಬಂದರೂ ಅವನು ಜಯಿಸಬಲ್ಲ. ಸತ್ಯವನ್ನು ಹೇಳುತ್ತಿದ್ದೇನೆ. ಇನ್ನು ದರ್ಬಲವಾಗಿರುವ ಧಾರ್ತರಾಷ್ಟ್ರನ ಸೇನೆಯು ಯಾವ ಲೆಖ್ಕಕ್ಕೆ? ಅರ್ಜುನನಾದರೋ ಯುದ್ಧದಲ್ಲಿ ಅನೇಕರಿಂದ ಪೀಡಿತನಾಗಿದ್ದಾನೆ. ಹೀಗಿರುವಾಗ ಅವನು ಸಮರದಲ್ಲಿ ಪ್ರಾಣವನ್ನೇ ತ್ಯಜಿಸಬಹುದು. ಇದರಿಂದಾಗಿ ನಾನು ತುಂಬಾ ಅಸ್ವಸ್ಥನಾಗಿದ್ದೇನೆ. ನೀನು ಅವನು ಇರುವಲ್ಲಿಗೆ ಹೋಗು!

ಅವನಂತವನು ಕಷ್ಟದಲ್ಲಿರುವಾಗ ನನ್ನಂತವನು ಹೇಳಿದಂತೆ ನಿನ್ನಂತವನು ಮಾಡಬೇಕಾದ ಸಮಯವಿದು. ರಣದಲ್ಲಿ ವೃಷ್ಣಿಪ್ರವೀರರಲ್ಲಿ ಇಬ್ಬರೇ ಅತಿರಥರೆಂದು ಕೇಳಿಕೊಂಡು ಬಂದಿದ್ದೇವೆ. ಮಹಾಬಾಹು ಪ್ರದ್ಯುಮ್ನ ಮತ್ತು ಸಾತ್ವತನಾದ ನೀನು. ಅಸ್ತ್ರಗಳಲ್ಲಿ ನಾರಾಯಣನ ಸಮನಾಗಿರುವೆ. ಬಲದಲ್ಲಿ ಸಂಕರ್ಷಣನ ಸಮನಾಗಿರುವೆ. ವೀರತನದಲ್ಲಿ ನೀನು ಧನಂಜಯನ ಸಮನಾಗಿರುವೆ. ಭೀಷ್ಮ-ದ್ರೋಣರನ್ನು ಬಿಟ್ಟರೆ ಇಂದು ನೀನೇ ಪುರುಷವ್ಯಾಘ್ರ, ಸರ್ವಯುದ್ಧವಿಶಾರದನೆಂದು ಲೋಕದ ಸಂತರು ಹೇಳುತ್ತಾರೆ. ಸಾತ್ಯಕಿಗೆ ಅಸಾಧ್ಯವೆನ್ನುವುದೇ ಇಲ್ಲ ಎಂದು ಲೋಕದಲ್ಲಿ ತಿಳಿದುಕೊಂಡಿದ್ದಾರೆ. ಆದುದರಿಂದ ನಾನು ಕೇಳಿಕೊಂಡಂತೆ ಮಾಡು. ಜನರಿಗೆ ನಿನ್ನ ಮತ್ತು ಪಾರ್ಥ ಇಬ್ಬರ ಮೇಲೂ ಈ ಸದ್ಭಾವನೆಯಿದೆ. ಇದಕ್ಕೆ ಹೊರತಾಗಿ ನೀನು ಮಾಡಬಾರದು. ರಣದಲ್ಲಿ ಪ್ರಿಯ ಪ್ರಾಣಗಳನ್ನು ಪರಿತ್ಯಜಿಸಿ ವೀರನಂತೆ ವಿಚರಿಸು. ದಾಶಾರ್ಹರು ರಣದಲ್ಲಿ ಜೀವವನ್ನು ರಕ್ಷಿಸಿಕೊಳ್ಳುವುದಿಲ್ಲ. ಯುದ್ಧಮಾಡದೇ ಇರುವುದು ಮತ್ತು ಸಂಗ್ರಾಮದಿಂದ ಪಲಾಯನ ಮಾಡುವುದು ಇವು ಹೇಡಿಗಳ ಮತ್ತು ಕೆಟ್ಟವರ ಮಾರ್ಗಗಳು. ದಾಶಾರ್ಹರು

ಹೋಗುವವುಗಳಲ್ಲ. ಅರ್ಜುನನು ನಿನ್ನ ಗುರು. ಧೀಮತ ವಾಸುದೇವನು ನಿನ್ನ ಮತ್ತು ಪಾರ್ಥನ ಗುರು. ಈ ಎರಡು ಕಾರಣಗಳಿಂದ ನಿನ್ನನ್ನೇ ನಾನು ಈ ಕೆಲಸಕ್ಕೆ ಹೇಳುತ್ತಿದ್ದೇನೆ. ನನ್ನ ಈ ಮಾತನ್ನು ನಿರಾದರಿಸಬೇಡ. ನಾನು ನಿನ್ನ ಗುರುವಿಗೂ ಗುರು. ವಾಸುದೇವನ ಮತವೇ ನನ್ನ ಮತ್ತು ಅರ್ಜುನನದೂ ಹೌದು. ಸತ್ಯವನ್ನು ಹೇಳುತ್ತಿದ್ದೇನೆ. ಧನಂಜಯನಿರುವಲ್ಲಿಗೆ ಹೋಗು. ನನ್ನ ಈ ಮಾತನ್ನು ತಿಳಿದುಕೊಂಡು ದುರ್ಮತಿ ಧಾರ್ತರಾಷ್ಟ್ರನ ಸೇನೆಯನ್ನು ಪ್ರವೇಶಿಸು. ಸೇನೆಯೊಳಗೆ ಪ್ರವೇಶಿಸಿ ಯಥಾನ್ಯಾಯವಾಗಿ ಮಹಾರಥರೊಡನೆ ಯುದ್ಧಮಾಡಿ ರಣದಲ್ಲಿ ನಿನಗೆ ಅರ್ಹವಾಗಿರುವ ಕರ್ಮಗಳನ್ನು ಮಾಡಿ ತೋರಿಸು!”

ಪ್ರೀತಿಯುಕ್ತವಾದ, ಹೃದಯಂಗಮವಾದ, ಮಧುರ ಅಕ್ಷರಗಳಿಂದ ಕೂಡಿದ, ಕಾಲಕ್ಕೆ ಸರಿಯಾದ, ವಿಚಿತ್ರವಾಗಿ ಮತ್ತು ಸ್ವತಃ ತಾನೇ ಮಾತನಾಡಿದ ಧರ್ಮರಾಜನ ಆ ಮಾತನ್ನು ಕೇಳಿ ಶಿನಿಪುಂಗವ ಸಾತ್ಯಕಿಯು ಯುಧಿಷ್ಠಿರನಿಗೆ ಉತ್ತರಿಸಿದನು:

“ಅಚ್ಯುತ! ನೀನು ಹೇಳಿದ ನ್ಯಾಯಯುಕ್ತವಾದ, ವಿಚಿತ್ರವಾದ, ಫಲ್ಗುನನಿಗೆ ಯಶಸ್ಸನ್ನುಂಟುಮಾಡುವಂತಹ ಎಲ್ಲ

ಮಾತುಗಳನ್ನೂ ನಾನು ಕೇಳಿದೆ. ಇಂಥಹ ಸಮಯದಲ್ಲಿ ನನ್ನಂಥವನು ಸಮ್ಮತವಾಗಿರುವುದೇನೆಂದು ನೋಡಿ ಹೇಳಬೇಕಾಗುತ್ತದೆ. ಧನಂಜಯನಿಗಾಗಿ ನಾನು ನನ್ನ ಪ್ರಾಣಗಳನ್ನು ಎಂದೂ ರಕ್ಷಿಸಿಕೊಳ್ಳುವುದಿಲ್ಲ. ಹೀಗಿರುವಾಗ ಮಹಾಹವದಲ್ಲಿ ನಾನು ನಿನಗಾಗಿ ಏನನ್ನು ಮಾಡದೇ ಇರಬಲ್ಲೆ? ನಿನಗೋಸ್ಕರವಾಗಿ ದೇವಾಸುರಮಾನುಷ ಈ ಮೂರುಲೋಕಗಳೊಡನೆಯೂ ಯುದ್ಧಮಾಡಬಲ್ಲೆ. ಈ ಸುದುರ್ಬಲರೊಂದಿಗೆ ಇನ್ನೇನು? ಇಂದು ರಣದಲ್ಲಿ ಎಲ್ಲಕಡೆಗಳಿಂದ ಸುಯೋಧನನ ಸೇನೆಯೊಂದಿಗೆ ಯುದ್ಧಮಾಡಿ ಜಯಿಸುತ್ತೇನೆ. ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ಕುಶಲಿ ಧನಂಜಯನ ಬಳಿಸಾರಿ ಜಯದ್ರಥನನು ಹತನಾದನಂತರವೇ ಹಿಂದಿರುಗುತ್ತೇನೆ. ಆದರೆ ನಾನು ನಿನಗೆ ವಾಸುದೇವನ ಮತ್ತು ಧೀಮತ ಫಲ್ಗುನನ ಮಾತುಗಳೆಲ್ಲವನ್ನೂ ವಿಜ್ಞಾಪಿಸುವುದು ಅವಶ್ಯವಾಗಿದೆ. ಸರ್ವ ಸೇನೆಗಳ ಮಧ್ಯೆ ವಾಸುದೇವನು ಕೇಳುವಂತೆ ಅರ್ಜುನನು ನನಗೆ ಪುನಃ ಪುನಃ ದೃಢವಾಗಿ ಆದೇಶವನ್ನಿತ್ತಿದ್ದನು: “ಮಾಧವ! ಇಂದು ನಾನು ಜಯದ್ರಥನನ್ನು ಕೊಂದು ಬರುವವರೆಗೂ ರಾಜನನ್ನು ಅಪ್ರಮತ್ತನಾಗಿ ಆರ್ಯನಂತೆ ಯುದ್ಧದಲ್ಲಿ ಬುದ್ಧಿಯನ್ನಿರಿಸಿ

ಪರಿಪಾಲಿಸು. ನಿನ್ನಲ್ಲಿ ಅಥವಾ ಮಹಾರಥ ಪ್ರದ್ಯುಮ್ನನ ಬಳಿ ನೃಪನನ್ನಿಟ್ಟು ನಾನು ನಿರಪೇಕ್ಷನಾಗಿ ಜಯದ್ರಥನಿದ್ದಲ್ಲಿಗೆ ಹೋಗಬಹುದು. ರಣದಲ್ಲಿ ಶ್ರೇಷ್ಠಸಮ್ಮತ ದ್ರೋಣರ ರಭಸವನ್ನು ತಿಳಿದಿದ್ದೀಯೆ. ಹಾಗೆಯೇ ನಿತ್ಯವೂ ಅವರು ಮಾಡಿಕೊಂಡು ಬಂದಿರುವ ಪ್ರತಿಜ್ಞೆಯನ್ನೂ ಕೇಳಿದ್ದೀಯೆ. ಭಾರದ್ವಾಜರು ಧರ್ಮರಾಜನನ್ನು ಸೆರೆಹಿಡಿಯಲು ನೋಡುತ್ತಿದ್ದಾರೆ. ರಣದಲ್ಲಿ ಯುಧಿಷ್ಠಿರನನ್ನು ಸೆರೆಹಿಡಿಯಲು ದ್ರೋಣರು ಶಕ್ತರು ಕೂಡ. ಹೀಗಿದ್ದಾಗ ನಾನು ಧರ್ಮರಾಜನನ್ನು ಇಂದು ನಿನಗೆ ಒಪ್ಪಿಸಿ ಸೈಂಧವನ ವಧೆಗಾಗಿ ಹೋಗುತ್ತಿದ್ದೇನೆ. ಒಂದುವೇಳೆ ದ್ರೋಣರು ಧರ್ಮರಾಜನನ್ನು ಬಲಾತ್ಕಾರವಾಗಿ ಸೆರೆಹಿಡಿಯದಿದ್ದರೆ ಖಂಡಿತವಾಗಿಯೂ ನಾನು ಜಯದ್ರಥನನ್ನು ಸಂಹರಿಸಿ ಹಿಂದಿರುಗುತ್ತೇನೆ. ನರಶ್ರೇಷ್ಠನು ಭಾರದ್ವಾಜರಿಂದ ಸೆರೆಹಿಡಿಯಲ್ಪಟ್ಟರೆ ಸೈಂಧವನ ವಧೆಯು ನಡೆಯುವುದಿಲ್ಲ. ನನಗೆ ಒಳ್ಳೆಯದಾಗದಿರುವುದು ನಡೆದುಹೋಗುತ್ತದೆ. ಈ ಸತ್ಯವಾದಿ ಪಾಂಡವನು ಹೊರಟುಹೋದರೆ ನಾವು ಪುನಃ ವನಕ್ಕೆ ಹೋಗಬೇಕಾಗುತ್ತದೆ. ಒಂದುವೇಳೆ ರಣದಲ್ಲಿ ಕ್ರುದ್ಧರಾಗಿ ದ್ರೋಣರು ಯುಧಿಷ್ಠಿರನನ್ನು ಹಿಡಿದಿದ್ದೇ ಆದರೆ

ನನ್ನ ವಿಜಯವೂ ಕೂಡ ವ್ಯರ್ಥವೇ ಆಗಿಬಿಡುತ್ತದೆ. ಆದುದರಿಂದ ನನಗೆ ಬೇಕಾಗಿ, ಜಯ ಮತ್ತು ಯಶಸ್ಸಿಗಾಗಿ ರಾಜನನ್ನು ಯುದ್ಧದಲ್ಲಿ ರಕ್ಷಿಸು!”

ಭಾರದ್ವಾಜನಿಂದ ನಿತ್ಯವೂ ನಿನಗಿರುವ ಭಯವನ್ನು ನೋಡಿಯೇ ಸವ್ಯಸಾಚಿಯು ನಿನ್ನನ್ನು ನ್ಯಾಸರೂಪದಲ್ಲಿ ನನ್ನ ಬಳಿ ಇರಿಸಿದ್ದಾನೆ. ಯುದ್ಧದಲ್ಲಿ ಧೀಮತ ಭಾರದ್ವಾಜನೊಡನೆ ಪ್ರತಿಯಾಗಿ ಯುದ್ಧಮಾಡುವವನು ರೌಕ್ಮಿಣೇಯನನ್ನು ಬಿಟ್ಟರೆ ಬೇರೆ ಯಾರೂ ಇಲ್ಲ ಎಂದು ನನಗೆ ನಿತ್ಯವೂ ಕಾಣುತ್ತಿದೆ. ನಾನು ಆಚಾರ್ಯ ಅರ್ಜುನನ ವಚನದಂತೆ ಮಾಡುವುದು ಲೇಸು. ಮಹೀಪತೇ! ನಿನ್ನನ್ನು ಹಿಂದೆಮಾಡುವ ಅಥವಾ ಬಿಟ್ಟುಹೋಗುವ ಕೆಲಸವನ್ನು ಮಾಡಲು ಬಯಸುವುದಿಲ್ಲ. ಆಚಾರ್ಯನು ಅಭೇದ್ಯ ಕವಚದಿಂದ ಮತ್ತು ಕೈಚಳಕದಿಂದ ನಿನ್ನನ್ನು ಹಿಡಿದು ಬಾಲಕನು ದಾರಕ್ಕೆ ಕಟ್ಟಿದ ಪಕ್ಷಿಯೊಡನೆ ಹೇಗೋ ಹಾಗೆ ಆಡುತ್ತಾನೆ. ಒಂದುವೇಳೆ ಕಾರ್ಷ್ಣಿ ಮಕರಧ್ವಜನು ಇಲ್ಲಿ ಇರುತ್ತಿದ್ದರೆ ನಾನು ನಿನ್ನ ರಕ್ಷಣೆಗೆ ಒಪ್ಪಿಸಿ ಅರ್ಜುನನ ರಕ್ಷಣೆಗೆ ಹೋಗುತ್ತಿದ್ದೆ. ನೀನು ನಿನ್ನನ್ನು ರಕ್ಷಿಸಿಕೊಳ್ಳಬೇಕು. ನಾನು ಪಾಂಡವನ ಕಡೆ ಹೋದರೆ

ರಣದಲ್ಲಿ ದ್ರೋಣನನ್ನು ಎದುರಿಸಿ ಯುದ್ಧಮಾಡಿ ನಿನ್ನನ್ನು ರಕ್ಷಿಸುವವರು ಯಾರು? ಅರ್ಜುನನ ಕಾರಣದಿಂದಾಗಿ ನಿನಗೆ ಇಂದು ಯಾವ ಭಯವೂ ಬೇಕಾಗಿಲ್ಲ. ಆ ಮಹಾಬಾಹುವು ಎಂತಹ ಕಷ್ಟದಲ್ಲಿಯೂ ಕುಸಿಯುವುದಿಲ್ಲ. ಈ ಸೌವೀರಕ ಯೋಧರು, ಹಾಗೆಯೇ ಸೈಂಧವ-ಪೌರವರು, ಉತ್ತರದವರು, ದಕ್ಷಿಣದವರು, ಅನ್ಯ ಮಹಾರಥರು, ಕರ್ಣನೇ ಮೊದಲಾದ ರಥೋದಾರರೆಂದು ಹೇಳಿಸಿಕೊಂಡವರು ಕ್ರುದ್ಧನಾದ ಈ ಅರ್ಜುನನ ಹದಿನಾರರಲ್ಲಿ ಒಂದಂಶಕ್ಕೂ ಸಮರಲ್ಲ. ಭೂಮಿಯ ಎಲ್ಲರೂ ಮೇಲೆದ್ದು, ಸುರಾಸುರಮನುಷ್ಯರೊಂದಿಗೆ ರಾಕ್ಷಸಗಣಗಳೂ, ಕಿನ್ನರ ಮಹೋರಗಗಳೂ, ಸ್ಥಾವರ ಜಂಗಮಗಳೂ ಸೇರಿ ಒಟ್ಟಾದರು ಅವರು ಸಂಯುಗದಲ್ಲಿ ಪಾರ್ಥನನ್ನು ಮೀರಿಸಲಾರರು. ಇದನ್ನು ತಿಳಿದು ಧನಂಜಯನಿಗಾಗಿ ನೀನು ಹೆದರಿ ಕಂಪಿಸಬೇಕಾಗಿಲ್ಲ. ಎಲ್ಲಿ ವೀರ ಮಹೇಷ್ವಾಸ ಸತ್ಯಪರಾಕ್ರಮರಾದ ಇಬ್ಬರು ಕೃಷ್ಣರು ಇರುವರೋ ಅಲ್ಲಿ ಎಂದೂ ಆಪತ್ತಿನ ವಿಷಯವು ಬರುವುದಿಲ್ಲ ಎನ್ನುವುದನ್ನು ತಿಳಿದುಕೊಳ್ಳಬೇಕು. ನಿನ್ನ ತಮ್ಮನ ದೈವತ್ವವನ್ನೂ, ಅಸ್ತ್ರಗಳಲ್ಲಿ ಪರಿಣಿತಿಯನ್ನೂ, ಯುದ್ಧದಲ್ಲಿ ಅವನ ಯೋಗತ್ವ ಮತ್ತು ಅಸಹನೆ, ಕೃತಜ್ಞತೆ, ದಯೆಗಳನ್ನು

ಜ್ಞಾಪಿಸಿಕೋ! ಒಂದುವೇಳೆ ನಾನು ಅರ್ಜುನನಿದ್ದಲ್ಲಿಗೆ ಹೋದರೆ ದ್ರೋಣನು ರಣದಲ್ಲಿ ಪ್ರಯೋಗಿಸುವ ಚಿತ್ರಾಸ್ತ್ರಗಳ ಕುರಿತು ಯೋಚಿಸು! ಆಚಾರ್ಯನು ನಿನ್ನನ್ನು ಹಿಡಿಯಲು ತುಂಬಾ ಆತುರನಾಗಿದ್ದಾನೆ. ತನ್ನನ್ನು ರಕ್ಷಿಸಿಕೊಂಡು ಪ್ರತಿಜ್ಞೆಯನ್ನು ಸತ್ಯವನ್ನಾಗಿಸಲು ಪ್ರಯತ್ನಿಸುತ್ತಾನೆ. ನಿನ್ನನ್ನು ನೀನು ರಕ್ಷಿತನನ್ನಾಗಿಸಿಕೋ! ನಾನು ಹೋದರೆ ನಿನ್ನನ್ನು ಯಾರು ರಕ್ಷಿಸುತ್ತಾರೆ? ನಿನ್ನನ್ನು ಯಾರಿಗೆ ಒಪ್ಪಿಸಿ ನಾನು ಫಲ್ಗುನನಿದ್ದಲ್ಲಿಗೆ ಹೋಗಲಿ? ಈ ಮಹಾಹವದಲ್ಲಿ ನಿನ್ನನ್ನು ಬೇರೆ ಯಾರಿಗಾದರೂ ಒಪ್ಪಿಸದೇ ನಾನು ಹೋಗುವುದಿಲ್ಲ. ನಾನು ನಿಜವಾದುದನ್ನೇ ನಿನಗೆ ಹೇಳುತ್ತಿದ್ದೇನೆ. ಇವೆಲ್ಲವನ್ನು ಬಹಳಬಾರಿ ಬುದ್ಧಿಯನ್ನುಪಯೋಗಿಸಿ ಯೋಚಿಸು! ಪರಮ ಶ್ರೇಯಸ್ಕರವಾದು ಏನೆಂದು ಬುದ್ಧಿಯಿಂದ ಕಂಡುಕೊಂಡು ನನಗೆ ಆದೇಶವನ್ನು ನೀಡು!”

ಯುಧಿಷ್ಠಿರನು ಹೇಳಿದನು:

“ಮಹಾಬಾಹೋ! ನೀನು ಹೇಳಿದುದೆಲ್ಲವೂ ಸರಿಯೇ! ಆದರೆ ಅರ್ಜುನನ ಕುರಿತು ನನ್ನ ಭಾವವು ಅಳುಕದೇ ಇರುವುದಿಲ್ಲ. ನನ್ನ ರಕ್ಷಣೆಯ ಕುರಿತು ಪರಮ ಯತ್ನವನ್ನು ಮಾಡುತ್ತೇನೆ.

ನೀನು ಅಪ್ಪಣೆಯಂತೆ ಧನಂಜಯನು ಎಲ್ಲಿ ಯುದ್ಧಮಾಡುತ್ತಿದ್ದಾನೋ ಅಲ್ಲಿಗೆ ಹೋಗು. ರಣದಲ್ಲಿ ನನ್ನ ಆತ್ಮರಕ್ಷಣೆ ಮತ್ತು ಅರ್ಜುನನ ಬಳಿ ಹೋಗುವುದು - ಈ ಎರಡನ್ನೂ ಬುದ್ಧಿಯಿಂದ ವಿಚಾರಿಸಿ, ಅಲ್ಲಿಗೆ ಹೋಗುವುದೇ ಸರಿಯೆಂದು ಬಯಸಿದ್ದೇನೆ. ಧನಂಜಯನು ಎಲ್ಲಿ ಯುದ್ಧಮಾಡುತ್ತಿದ್ದಾನೋ ಅಲ್ಲಿಗೆ ಹೋಗಲು ಸಿದ್ಧನಾಗು. ಭೀಮನು ನನ್ನ ರಕ್ಷಣೆಯನ್ನು ಮಾಡುತ್ತಾನೆ. ಸೋದರರೊಂದಿಗೆ ಪಾರ್ಷತ, ಮಹಾಬಲ ಪಾರ್ಥಿವರು ಮತ್ತು ದ್ರೌಪದೇಯರೂ ನನ್ನನ್ನು ರಕ್ಷಿಸುತ್ತಾರೆ. ಅದರಲ್ಲಿ ಸಂಶಯವಿಲ್ಲ. ಐವರು ಕೇಕಯ ಸಹೋದರರು, ರಾಕ್ಷಸ ಘಟೋತ್ಕಚ, ವಿರಾಟ, ದ್ರುಪದ, ಶಿಖಂಡೀ, ಧೃಷ್ಟಕೇತು, ಕುಂತಿಭೋಜ, ನಕುಲ, ಸಹದೇವ ಮತ್ತು ಪಾಂಚಲ-ಸೃಂಜಯರು ಒಟ್ಟಾಗಿ ನನ್ನನ್ನು ರಕ್ಷಿಸುತ್ತಾರೆ. ಅದರಲ್ಲಿ ಸಂಶಯವಿಲ್ಲ. ಸೈನ್ಯಸಮೇತ ದ್ರೋಣರಾಗಲೀ ಕೃತವರ್ಮನಾಗಲೀ ಸಂಯುಗದಲ್ಲಿ ನನ್ನ ಬಳಿ ಬರಲೂ ಶಕ್ತರಾಗುವುದಿಲ್ಲ. ನನ್ನನ್ನು ಸೋಲಿಸುವುದು ಹೇಗೆ? ಧೃಷ್ಟದ್ಯುಮ್ನನು ಕ್ರುದ್ಧ ದ್ರೋಣನನ್ನು ವಿಕ್ರಮದಿಂದ ತೀರವು ಸಮುದ್ರವನ್ನು ತಡೆಯುವಂತೆ ನಿಲ್ಲಿಸುವನು. ರಣರಂಗದಲ್ಲಿ

ಎಲ್ಲಿ ಪರವೀರಹ ಪಾರ್ಷತನು ನಿಲ್ಲುತ್ತಾನೋ ಅಲ್ಲಿ ಎಂದೂ ದ್ರೋಣ ಸೇನೆಯು ಬಲಾತ್ಕಾರವಾಗಿ ಅತಿಕ್ರಮಿಸಲು ಸಾಧ್ಯವಿಲ್ಲ. ಇವನು ದ್ರೋಣನ ವಿನಾಶಕ್ಕಾಗಿಯೇ ಕವಚ, ಧನುರ್ಬಾಣಗಳು, ಖಡ್ಗ ಮತ್ತು ಶ್ರೇಷ್ಠ ಭೂಷಣಗಳನ್ನು ಧರಿಸಿ ಅಗ್ನಿಯಿಂದ ಸಮುತ್ಪನ್ನನಾದವನು. ವಿಶ್ವಾಸದಿಂದ ಹೋಗು. ನಾನಿಲ್ಲದಿದ್ದರೆ ಇಲ್ಲಿ ಏನಾಗುವುದೋ ಎಂದು ಭ್ರಾಂತನಾಗದಿರು. ಕ್ರುದ್ಧನಾದ ಧೃಷ್ಟದ್ಯುಮ್ನನು ರಣದಲ್ಲಿ ದ್ರೋಣರನ್ನು ತಡೆಯುತ್ತಾನೆ.”

ಧರ್ಮರಾಜನ ಆ ಮಾತನ್ನು ಕೇಳಿ ಶಿನಿಪುಂಗವನು ಮಹೀಪತಿಯನ್ನು ಬಿಟ್ಟುಹೋದರೆ ಪಾರ್ಥನು ಏನು ಹೇಳುವನೋ ಎಂದು ಹೆದರಿ ಶಂಕಿಸಿದನು.

“ಭೀತಿಯಿಂದ ನಾನು ಫಲ್ಗುನನನ್ನು ರಕ್ಷಿಸಲು ಹೋಗಲಿಲ್ಲ ಎಂದು ಜನರು ನನ್ನ ಮೇಲೆ ವಿಶೇಷ ಅಪರಾಧವನ್ನು ಹೊರಿಸದಿರಲಿ”

ಎಂದು ಅಂದುಕೊಂಡನು. ಬಹುವಿಧದಲ್ಲಿ ಯೋಚಿಸಿ ನಿರ್ಧರಿಸಿ ಸಾತ್ಯಕಿಯು ಧರ್ಮರಾಜನಿಗೆ ಈ ಮಾತನ್ನಾಡಿದನು:

“ವಿಶಾಂಪತೇ! ನಿನ್ನ ರಕ್ಷಣೆಗೆ ವ್ಯವಸ್ಥೆ ಮಾಡಿಯಾಗಿದೆ ಎಂದು ನಿನಗನ್ನಿಸಿದರೆ, ನಿನ್ನ ಮಾತಿನಂತೆ ಮಾಡುತ್ತೇನೆ. ಬೀಭತ್ಸುವನ್ನು ಅನುಸರಿಸಿ ಹೋಗುತ್ತೇನೆ. ನಿನಗೆ ಮಂಗಳವಾಗಲಿ! ಆ ಪಾಂಡವನಿಗಿಂತ ಪ್ರಿಯರಾದವರು ಈ ಮೂರು ಲೋಕಗಳಲ್ಲಿ ಯಾರೂ ಇಲ್ಲ. ನಿಜವನ್ನೇ ನಿನಗೆ ಹೇಳುತ್ತಿದ್ದೇನೆ. ನಿನ್ನ ಸಂದೇಶದಂತೆ ನಾನು ಅವನಿದ್ದಲ್ಲಿಗೆ ಹೋಗುತ್ತೇನೆ. ನೀನು ಏನು ಹೇಳಿದರೂ ಅದನ್ನು ನಾನು ಎಂದೂ ಮಾಡದೇ ಇರುವುದಿಲ್ಲ. ಹಿರಿಯರ ವಾಕ್ಯವು ನನಗೆ ವಿಶಿಷ್ಟವಾದುದು. ಅದರಲ್ಲೂ ನಿನ್ನ ವಚನವು ನನಗೆ ಅತ್ಯಂತ ವಿಶಿಷ್ಟವಾದುದು. ಸಹೋದರರಾದ ಕೃಷ್ಣ-ಪಾಂಡವರು ನಿನ್ನ ಮಾತಿನಂತೆಯೇ ನಡೆದುಕೊಳ್ಳುವವರು. ನಿನಗೆ ಪ್ರಿಯವಾದುದರಲ್ಲಿಯೇ ತೊಡಗಿರುತ್ತಾರೆ. ಅದು ನನಗೆ ತಿಳಿದಿದೆ. ನಿನ್ನ ಆಜ್ಞೆಯನ್ನು ಶಿರಸಾ ಧರಿಸಿ ಪಾಂಡವನಿಗೋಸ್ಕರವಾಗಿ ನಾನು ಈ ದುರ್ಭೇದ್ಯ ಸೇನೆಯನ್ನು ಭೇದಿಸಿ ಹೋಗುತ್ತೇನೆ. ತಿಮಿಂಗಿಲವು ಸಮುದ್ರವನ್ನು ಹೇಗೋ ಹಾಗೆ ಈ ದ್ರೋಣಸೇನೆಯನ್ನು ಪ್ರವೇಶಿಸಿ ಎಲ್ಲಿ ಪಾಂಡವನಿಗೆ ಹೆದರಿ ರಾಜಾ ಜಯದ್ರಥನು ದ್ರೌಣಿ-ಕರ್ಣ-ಕೃಪಾದಿಗಳಿಂದ ರಕ್ಷಿತನಾಗಿ ಸೇನೆಗಳನ್ನು

ಆಶ್ರಯಿಸಿ ನಿಂತಿದ್ದಾನೋ ಅಲ್ಲಿಗೆ ಹೋಗುತ್ತೇನೆ. ಜಯದ್ರಥನ ವಧೆಗೆ ಸಿದ್ಧನಾಗಿ ಪಾರ್ಥನು ನಿಂತಿರುವ ಸ್ಥಳವು ಇಲ್ಲಿಂದ ಮೂರು ಯೋಜನೆಗಳಿವೆ ಎಂದು ನನಗನ್ನಿಸುತ್ತದೆ. ಮೂರು ಯೋಜನೆಗಳು ಹೋಗಬೇಕಾದರೂ ನಾನು ಅಂತರಾತ್ಮದಲ್ಲಿ ಸುದೃಢನಾಗಿದ್ದು ಸೈಂಧವನ ವಧೆಯಾಗುವವರೆಗೆ ಅಲ್ಲಿ ಇರುತ್ತೇನೆ. ಹಿರಿಯರ ಆದೇಶವಿಲ್ಲದೇ ಯಾವ ಮನುಷ್ಯನು ಯುದ್ಧಮಾಡುತ್ತಾನೆ? ನಿನ್ನಿಂದ ಆದೇಶವನ್ನು ಪಡೆದು ನನ್ನಂತಹ ಯಾರು ತಾನೇ ಯುದ್ಧಮಾಡುವುದಿಲ್ಲ? ನಾನು ಎಲ್ಲಿಗೆ ಹೋಗುತ್ತಿರುವೆನೋ ಆ ಪ್ರದೇಶವನ್ನು ನಾನು ತಿಳಿದಿದ್ದೇನೆ. ಕೊಡಲಿ, ಶಕ್ತಿ, ಗದೆ, ಪ್ರಾಸ, ಖಡ್ಗ, ಚರ್ಮ, ಋಷ್ಟಿ, ತೋಮರ, ಮತ್ತು ಶ್ರೇಷ್ಠ ಶರಗಳಿಂದ ಈ ಸೇನಾಸಾಗರವನ್ನು ಬಾಧಿಸಿ ಕ್ಷೋಭೆಗೊಳಿಸುತ್ತೇನೆ.

ಇಗೋ ನೀನು ನೋಡುತ್ತಿರುವ ಆ ಸಹಸ್ರ ಆನೆಗಳ ಸೇನೆಯು ವೀರ್ಯಶಾಲಿ ಅಂಜನಕ ಎಂಬ ಹೆಸರಿನ ಕುಲದವು. ನೀರು ಸುರಿಸುವ ಮೋಡಗಳಂತೆ ಮದೋದಕವನ್ನು ಸುರಿಸುವ ಆ ಆನೆಗಳ ಮೇಲೆ ಅನೇಕ ಯುದ್ಧಶೌಂಡ ಪ್ರಹಾರಿ ಮ್ಲೇಚ್ಛರಿದ್ದಾರೆ. ಮಾವುತರಿಂದ ಕಳುಹಿಸಲ್ಪಡದೇ ಇವು

ಪಲಾಯನಮಾಡುವುದಿಲ್ಲ. ಇವುಗಳನ್ನು ಕೊಲ್ಲದೆಯೇ ಪರಾಜಯಗೊಳಿಸಲಾಗುವುದಿಲ್ಲ. ಅದೋ ನೀನು ನೋಡುತ್ತಿರುವ ರಥಿಗಳ ಗುಂಪಿದೆಯಲ್ಲ ಅದು ರುಕ್ಮರಥರೆಂಬ ಹೆಸರಿನ ರಾಜಪುತ್ರರು. ಅವರು ರಥಯುದ್ಧದಲ್ಲಿ, ಅಸ್ತ್ರಗಳಲ್ಲಿ ಮತ್ತು ಆನೆಗಳ ಮೇಲಿಂದ ಯುದ್ಧಮಾಡುವುದರಲ್ಲಿ ನಿಪುಣರು; ಧನುರ್ವೇದದಲ್ಲಿ ಪಾರಂಗತರು ಮತ್ತು ಮುಷ್ಟಿಯುದ್ಧದಲ್ಲಿ ಕೋವಿದರು. ಗದಾಯುದ್ಧದಲ್ಲಿ ವಿಶೇಷಜ್ಞರಾದ ಅವರು ಸಮೀಪಯುದ್ಧದಲ್ಲಿಯೂ ಕುಶಲರು. ಖಡ್ಗಪ್ರಹರಣದಲ್ಲಿ ಮತ್ತು ಖಡ್ಗ-ಗುರಾಣಿಗಳ ಪ್ರಹಾರದಲ್ಲಿ ಪರಿಣತರು. ತರಬೇತಿ ಹೊಂದಿದ ಆ ಶೂರರು ಪರಸ್ಪರರೊಡನೆ ಸ್ಪರ್ಧಿಸುತ್ತಾರೆ. ನಿತ್ಯವೂ ಸಮರದಲ್ಲಿ ಮನುಷ್ಯರನ್ನು ಗೆಲ್ಲುತ್ತಾರೆ. ಹಿಂದೆ ಕರ್ಣನಿಂದ ಸೋಲಿಸಲ್ಪಟ್ಟ ಮತ್ತು ಈಗ ದುಃಶಾಸನನನ್ನು ಅನುಸರಿಸುವ ಈ ರಥೋದಾರರನ್ನು ವಾಸುದೇವನೂ ಕೂಡ ಪ್ರಶಂಸಿಸುತ್ತಾನೆ. ಸತತವೂ ಕರ್ಣನ ವಶದಲ್ಲಿದ್ದುಕೊಂಡು ಅವನಿಗೆ ಪ್ರಿಯವಾದುದನ್ನೇ ಬಯಸುವ ಅವರು ಅವನದೇ ಮಾತಿನಂತೆ ಶ್ವೇತವಾಹನನೆಡೆಗೆ ತೆರಳಿದ್ದಾರೆ. ಆಯಾಸಗೊಳ್ಳದ ಮತ್ತು ಗಾಯಗೊಳ್ಳದ ಅವರು

ದೃಢ ಕವಚ-ಕಾರ್ಮುಕಧಾರಿಗಳಾಗಿ ಧಾರ್ತರಾಷ್ಟ್ರನ ಶಾಸನದಂತೆ ನನಗಾಗಿಯೇ ಕಾದುಕೊಂಡಿರುವಂತಿದ್ದಾರೆ. ನಿನ್ನ ಪ್ರೀತಿಗಾಗಿ ಇವರನ್ನು ಸಂಗ್ರಾಮದಲ್ಲಿ ಮಥಿಸಿ ನಂತರ ಸವ್ಯಸಾಚಿಯ ಬಳಿಗೆ ಹೋಗುತ್ತೇನೆ. ಅಲ್ಲಿರುವ ಇತರ ಏಳು ನೂರು ಆನೆಗಳನ್ನು ನೋಡು! ಕವಚಧಾರಿಗಳಾದ ಕಿರಾತರು ಅವುಗಳನ್ನು ಏರಿದ್ದಾರೆ. ಅಲಂಕೃತನಾಗಿರುವ ಆ ಕಿರಾತರಾಜನು ಹಿಂದೆ ಸವ್ಯಸಾಚಿಗೆ ಸೇವಕರನ್ನಿತ್ತು ತನ್ನ ಜೀವವನ್ನು ಉಳಿಸಿಕೊಂಡಿದ್ದನು. ಹಿಂದೆ ಇವನು ನಿನ್ನ ದೃಢ ಸೇವಕನಾಗಿದ್ದನು. ಆದರೆ ಇಂದು ನಿನ್ನೊಡನೆ ಯುದ್ಧಮಾಡುತ್ತಿದ್ದಾನೆ. ಕಾಲದ ಪರ್ಯಾಯವನ್ನು ನೋಡು! ಈ ಯುದ್ಧದುರ್ಮದ ಕಿರಾತರು ದೊಡ್ಡ ದೇಹದವರು. ಆನೆಗಳನ್ನು ಪಳಗಿಸುವುದರಲ್ಲಿ ಪರಿಣಿತರು. ಎಲ್ಲರೂ ಅಗ್ನಿಯಂತಹ ಕಣ್ಣುಳ್ಳವರು. ಇವರೆಲ್ಲರೂ ಸಂಗ್ರಾಮದಲ್ಲಿ ಸವ್ಯಸಾಚಿಯಿಂದ ಸೋತು, ದುರ್ಯೋಧನನ ವಶಕ್ಕೆ ಬಂದು ನನಗಾಗಿ ಇಂದು ಸೇರಿ ಕಾಯುತ್ತಿದ್ದಾರೆ. ಈ ಯುದ್ಧದುರ್ಮದ ಕಿರಾತರನ್ನು ಶರಗಳಿಂದ ಭೇದಿಸಿ ಸೈಂಧವನ ವಧೆಯಲ್ಲಿ ತೊಡಗಿರುವ ಪಾಂಡವನ ಬಳಿ ಹೋಗುತ್ತೇನೆ. ಈ ಅಂಜನ ಕುಲದಲ್ಲಿ ಹುಟ್ಟಿದ ಬಾಯಿಯಿಂದ ಮದೋದಕವನ್ನು

ಸುರಿಸುತ್ತಿರುವ ಮಹಾ ಆನೆಗಳು ಕರ್ಕಶವಾಗಿವೆ ಮತ್ತು ವಿನೀತವಾದವು ಕೂಡ. ಬಂಗಾರದ ಕವಚಗಳಿಂದ ವಿಭೂಷಿತಗೊಂಡ ಅವೆಲ್ಲವೂ ರಣದಲ್ಲಿ ಐರಾವತದಂತೆ ಗುರಿಯಿಟ್ಟು ಹೋರಾಡುತ್ತವೆ. ಅವು ಉತ್ತರ ಪರ್ವತದೇಶದಿಂದ ಬಂದಿವೆ. ಅವುಗಳನ್ನು ತೀಕ್ಷ್ಣ ಕರ್ಕಶ, ಶ್ರೇಷ್ಠಯೋಧರಾದ ದಸ್ಯುಗಳನ್ನು ಉಕ್ಕಿನ ಕವಚಗಳನ್ನು ಧರಿಸಿ ಏರಿದ್ದಾರೆ. ಅವರಲ್ಲಿ ಗೋವಿನ ಯೋನಿಯಲ್ಲಿ, ವಾನರ ಯೋನಿಯಲ್ಲಿ, ಮತ್ತು ಇನ್ನೂ ಅನೇಕ ಯೋನಿಗಳಲ್ಲಿ ಜನಿಸಿದವರೂ, ಮನುಷ್ಯ ಯೋನಿಯವರೂ ಇದ್ದಾರೆ. ಹಿಮಾಲಯದ ದುರ್ಗಗಳಲ್ಲಿ ವಾಸಿಸುವ ಆ ಪಾಪಕರ್ಮಿಗಳ, ಕೆಟ್ಟವರ ಸೇನೆಯು ದೂರದಿಂದ ಹೊಗೆಯ ಬಣ್ಣವನ್ನು ಹೊಂದಿರುವಂತೆ ಕಾಣಿಸುತ್ತದೆ. ಇವರ ಈ ಸಮಗ್ರ ಗಜಸೇನೆಯನ್ನು ಹೊಂದಿದ ದುರ್ಯೋಧನನು ಪಾಂಡವರನ್ನು ಕೀಳಾಗಿ ಕಾಣುತ್ತಾನೆ. ಕಾಲದಿಂದ ಪ್ರಚೋದಿತನಾಗಿ ತನ್ನನ್ನು ತಾನೇ ಕೃತಾರ್ಥನೆಂದು ತಿಳಿದುಕೊಂಡಿದ್ದಾನೆ. ಇವರೆಲ್ಲರೂ ನನ್ನ ನಾರಾಚಗಳ ದಾರಿಯಲ್ಲಿ ಬರುತ್ತಾರೆ. ಒಂದುವೇಳೆ ಇವರು ಮನೋವೇಗವನ್ನು ಹೊಂದಿದ್ದರೂ ನನ್ನಿಂದ ತಪ್ಪಿಸಿಕೊಳ್ಳಲಾರರು. ನಿತ್ಯವೂ ಇತರರ

ವೀರ್ಯವನ್ನವಲಂಬಿಸಿ ಜೀವಿಸುವ ದುರ್ಯೋಧನನು ನನ್ನ ಶರೌಘಗಳಿಂದ ಪೀಡಿತನಾಗಿ ವಿನಾಶಹೊಂದುತ್ತಾನೆ. ಈ ಮೂವರು ಕಾಂಚನಧ್ವಜವುಳ್ಳ ರಥಿಗಳು ಕಾಣುತ್ತಾರಲ್ಲಾ ಅವರು ತಡೆಯಲಸಾಧ್ಯರಾದ ಕಾಂಬೋಜರೆಂಬ ಹೆಸರುಳ್ಳವರು. ನೀನು ಇವರ ಕುರಿತು ಕೇಳಿರಬಹುದು. ಅವರು ಶೂರರು, ವಿದ್ಯಾವಂತರು, ಧನುರ್ವೇದದಲ್ಲಿ ನಿಷ್ಠೆಯನ್ನಿಟ್ಟುಕೊಂಡಿರುವವರು. ಅನ್ಯೋನ್ಯರ ಹಿತೈಷಿಗಳಾದ ಇವರು ತುಂಬಾ ಸಂಘಟಿತರಾಗಿದ್ದಾರೆ. ಕುರುವೀರರಿಂದ ರಕ್ಷಿತವಾದ ಧಾರ್ತರಾಷ್ಟ್ರನ ಅಕ್ಷೌಹಿಣಿಯೂ ಕೂಡ ಸಂರಬ್ಧವಾಗಿ ನನಗಾಗಿ ನಿಂತಿದೆ. ನನ್ನ ಮೇಲೆಯೇ ಕಣ್ಣನ್ನಿಟ್ಟು ಜಾಗರೂಕರಾಗಿ ಕಾಯುತ್ತಿದ್ದಾರೆ. ಹುತಾಶನನು ಹುಲ್ಲುಮೆದೆಯನ್ನು ಹೇಗೋ ಹಾಗೆ ನಾನು ಅವರನ್ನು ನಾಶಗೊಳಿಸುತ್ತೇನೆ.

ರಥವನ್ನು ಸಿದ್ಧಗೊಳಿಸುವವರು ಎಲ್ಲ ಉಪಕರಣಗಳನ್ನೂ, ಆಯುಧಗಳನ್ನೂ ಇರಿಸಿ ರಥವನ್ನು ಸಿದ್ಧಪಡಿಸಲಿ. ಈ ಸಂಗ್ರಾಮದಲ್ಲಿ ವಿವಿಧ ಆಯುಧಗಳನ್ನು ಹಿಡಿದು ಹೋಗಿರಬೇಕು. ಆಚಾರ್ಯರು ಒಂದು ರಥದಲ್ಲಿ

ಎಷ್ಟಿರಬೇಕೆಂದು ಉಪದೇಶಿಸುತ್ತಾರೋ ಅದಕ್ಕೂ ಐದು ಪಟ್ಟು ನನ್ನ ರಥದಲ್ಲಿರಿಸಲಿ. ಏಕೆಂದರೆ ಕ್ರುದ್ಧ ಸರ್ಪಗಳ ವಿಷದಂತಿರುವ, ನಾನಾ ಶಸ್ತ್ರಗಳಿಂದ ಕೂಡಿರುವ, ವಿವಿಧ ಆಯುಧಗಳನ್ನು ಹಿಡಿದ ಯೋಧರಿಂದ ಕೂಡಿದ ಕಾಂಬೋಜರನ್ನು ಎದುರಿಸುತ್ತೇನೆ. ದುರ್ಯೋಧನನ ಹಿತೈಷಿಗಳಾದ, ಅವನಿಂದ ಲಾಲಿಸಲ್ಪಟ್ಟ, ವಿಷಸಮಾನ ಪ್ರಹಾರಿಗಳಾದ ಕಿರಾತರನ್ನು ಎದುರಿಸುವವನಿದ್ದೇನೆ. ಪಾವಕನಂತೆ ಉರಿಯುತ್ತಿರುವ, ಅಗ್ನಿಯಂತೆ ದುರಾಧರ್ಷರಾಗಿರುವ, ಶಕ್ರನ ಸಮನಾದ ಪರಾಕ್ರಮವುಳ್ಳ ಶಕರನ್ನು ಕೂಡ ಎದುರಿಸಲಿದ್ದೇನೆ. ರಣದಲ್ಲಿ ಕಾಲನಂತೆ ದುರಾಸದರಾಗಿರುವ ಇನ್ನೂ ಅನ್ಯ ವಿವಿಧ ಯೋಧರೊಂದಿಗೆ ಮತ್ತು ಅನೇಕ ಯುದ್ಧ ದುರ್ಮದರೊಂದಿಗೆ ಹೋರಾಡುವವನಿದ್ದೇನೆ. ಆದುದರಿಂದ ನನ್ನ ರಥಕ್ಕೆ ಪ್ರಮುಖ ಶುಭಲಕ್ಷಣಗಳನ್ನು ಹೊಂದಿದ, ವಿಶ್ರಾಂತಿಹೊಂದಿರುವ, ತಿನಿಸು-ಪಾನೀಯಗಳನ್ನು ತೆಗೆದುಕೊಂಡಿರುವ ಕುದುರೆಗಳನ್ನು ಪುನಃ ಕಟ್ಟಲಿ.”

ಅನಂತರ ರಾಜನು ಅವನ ರಥದಲ್ಲಿ ಸರ್ವ ಉಪಾಸಂಗಗಳನ್ನೂ,

ಸರ್ವ ಉಪಕರಣಗಳನ್ನೂ, ಮತ್ತು ವಿವಿಧ ಶಸ್ತ್ರಗಳನ್ನೂ ಇರಿಸಿದನು. ಜನರು ಎಲ್ಲಕಡೆಗಳಿಂದ ಆ ನಾಲ್ಕು ಉತ್ತಮ ಕುದುರೆಗಳನ್ನು ಬಿಚ್ಚಿ, ರಸವತ್ತಾದ ಪಾನೀಯವನ್ನು ಕುಡಿಸಿದರು. ಕುಡಿಸಿದ ನಂತರ ತಿರುಗಾಡಿಸಿ, ಬಾಣಗಳನ್ನು ಕಿತ್ತು, ಸ್ನಾನಮಾಡಿಸಿ ಆ ನಾಲ್ಕೂ ಕುದುರೆಗಳನ್ನು ಬಂಗಾರದ ಮಾಲೆಗಳಿಂದ ಅಲಂಕರಿಸಿದರು. ಆ ಬೆಳ್ಳಿಯಬಣ್ಣದಿಂದ ಹೊಳೆಯುತ್ತಿದ್ದ, ವಿನೀತವದ, ಶೀಘ್ರಗಾಮಿಗಳಾದ, ಸಂಹೃಷ್ಟ ಮನಸ್ಕರಾದ, ಅವ್ಯಗ್ರವಾದ ಆ ಕುದುರೆಗಳನ್ನು ವಿಧಿವತ್ತಾಗಿ ರಥಕ್ಕೆ ಕಟ್ಟಲಾಯಿತು. ರಥವನ್ನು ಸಿಂಹದ ಮಹಾಧ್ವಜದಿಂದ, ಹೇಮಕೇಸರ ಮಾಲೆಗಳಿಂದ, ಬಂಗಾರ-ಮಣಿ-ವಿದ್ರುಮ-ಚಿತ್ರಗಳಿಂದ ಕೂಡಿದ ಕೇತುಗಳಿಂದ, ಬಿಳಿಯ ಮೋಡಗಳಂತೆ ಪ್ರಕಾಶಿಸುವ ಪತಾಕೆಗಳಿಂದ ಅಲಂಕರಿಸಿದರು. ಬಂಗಾರದ ದಂಡದ ಮೇಲೆ ಚತ್ರವಿದ್ದಿತು. ಬಹುಶಸ್ತ್ರಗಳಿಂದ ತುಂಬಿದ್ದ ಅದಕ್ಕೆ ವಿಧಿವತ್ತಾಗಿ ಬಂಗಾರದ ತಗಡನ್ನು ಮುಚ್ಚಲಾಯಿತು. ವಾಸವನಿಗೆ ಮಾತಲಿಯು ಹೇಗೋ ಹಾಗೆ ದಾರುಕನ ತಮ್ಮ, ಅವನ ಪ್ರಿಯ ಸಖ, ಸೂತನು ರಥವು ಸಿದ್ಧವಾಗಿದೆಯೆಂದು ನಿವೇದಿಸಿದನು.

ಅನಂತರ ಶ್ರೀಮತರಲ್ಲಿ ಶ್ರೇಷ್ಠ ಸಾತ್ಯಕಿಯು ಸ್ನಾನಮಾಡಿ ಶುಚಿರ್ಭೂತನಾಗಿ, ಕೌತುಕಮಂಗಲವನ್ನು ಮಾಡಿಕೊಂಡು, ಸಾವಿರ

ಸ್ನಾತಕರಿಗೆ ಬಂಗಾರದ ಮೊಹರುಗಳನ್ನಿತ್ತು ಅವರ ಆಶೀರ್ವಾದಗಳಿಂದ ಆವೃತನಾದನು. ಆಗ ಅವನು ಮಧುಪರ್ಕವನ್ನು ಸೇವಿಸಿ, ಕೈಲಾವತ ಮಧುವನ್ನು ಕುಡಿದು ಮದವಿಹ್ವಲಲೋಚನನಾಗಿ ಲೋಹಿತಾಕ್ಷನಾದನು. ವೀರರು ಮುಟ್ಟಬೇಕಾದ ಕಂಚಿನ ಪಾತ್ರೆಯನ್ನು ಮುಟ್ಟಿ ಹರ್ಷದಿಂದ ಉಬ್ಬಿ ತೇಜಸ್ಸಿನಲ್ಲಿ ದ್ವಿಗುಣಿತನಾಗಿ ಪಾವಕನಂತೆ ಪ್ರಜ್ವಲಿಸಿದನು. ಅನಂತರ ಆ ರಥಿಗಳಲ್ಲಿ ಶ್ರೇಷ್ಠನು ಶರದೊಂದಿಗೆ ಧನುಸ್ಸನ್ನೆತ್ತಿಕೊಂಡನು. ವಿಪ್ರರಿಂದ ಸ್ವಸ್ತಿವಾಚನಗಳನ್ನು ಮಾಡಿಸಿಕೊಂಡು ಕವಚದಿಂದ ಸಮಲಂಕೃತಗೊಂಡು ಕನ್ಯೆಯರಿಂದ ಲಾಜ-ಗಂಧ-ಮಾಲೆಗಳಿಂದ ಅಭಿನಂದಿತನಾದನು. ಯುಧಿಷ್ಠಿರನ ಚರಣಗಳಿಗೆ ಕೈಮುಗಿದು ಅಭಿವಂದಿಸಿ, ಅವನು ನೆತ್ತಿಯನ್ನು ಆಘ್ರಾಣಿಸಲು, ಮಹಾರಥವನ್ನು ಏರಿದನು.

ಆಗ ಅವನ ಹೃಷ್ಟ ಸುಪುಷ್ಟ ಗಾಳಿಯ ವೇಗವುಳ್ಳ ಅಜೇಯ ಸಿಂಧುದೇಶದ ಕುದುರೆಗಳು ಕೆನೆದವು. ಆಗ ಹರ್ಷಪರೀತಾಂಗನಾದ ಸಾತ್ಯಕಿಯು ಭೀಮನಿಗೆ ಹೇಳಿದನು:

> “ಭೀಮ! ನೀನು ರಾಜನನ್ನು ರಕ್ಷಿಸು. ಈಗ ಇದೇ ನಿನ್ನ ಅತಿಮುಖ್ಯ ಕಾರ್ಯವಾಗಿದೆ. ಸಮಯವು ಮುಗಿದಿರುವ ಈ ಸೇನೆಯನ್ನು ಭೇದಿಸಿ ಪ್ರವೇಶಿಸುತ್ತೇನೆ. ಈಗ ಮತ್ತು ಅನಂತರ

ರಾಜನನ್ನು ರಕ್ಷಿಸುವುದು ಶ್ರೇಯಸ್ಕರವಾದುದು. ನನ್ನ ವೀರ್ಯವು ನಿನಗೆ ತಿಳಿದಿದೆ. ನಿನ್ನದು ನನಗೆ ತಿಳಿದಿದೆ. ಆದುದರಿಂದ ಭೀಮ! ನನಗೆ ಪ್ರಿಯವಾದುದನ್ನು ಬಯಸುವೆಯಾದರೆ ಹಿಂದಿರುಗು!"

ಆಗ ಅವನು ಸಾತ್ಯಕಿಗೆ ಹೇಳಿದನು:

"ನಿನ್ನ ಕಾರ್ಯಸಿದ್ಧಿಗೆ ಹೊರಡು! ನಾನು ರಾಜನ ರಕ್ಷಣೆಯನ್ನು ಮಾಡುತ್ತೇನೆ."

ಹೀಗೆ ಹೇಳಲು ಮಾಧವನು ಭೀಮಸೇನನಿಗೆ ಉತ್ತರಿಸಿದನು:

"ಪಾರ್ಥ! ಇಂದು ನನ್ನ ವಿಜಯವು ನಿಶ್ಚಿತವಾಗಿದೆ. ನನ್ನಲ್ಲೇ ಅನುರಕ್ತನಾದ ನೀನು ಇಂದು ನನ್ನ ವಶದಲ್ಲಿ ಬಂದಿದ್ದೀಯೆ. ಭೀಮ! ನಿಮಿತ್ತಗಳು ಕೂಡ ಧನ್ಯನಾಗುವೆನೆಂದೇ ನನಗೆ ಹೇಳುತ್ತಿವೆ. ಪಾಪಿ ಸೈಂಧವನು ಮಹಾತ್ಮ ಪಾಂಡವನಿಂದ ಹತನಾದನಂತರ ಧರ್ಮಾತ್ಮ ರಾಜನನ್ನು ಅಪ್ಪಿಕೊಳ್ಳುತ್ತೇನೆ ಎನ್ನುವುದರಲ್ಲಿ ಸಂಶಯವಿಲ್ಲ."

ಹೀಗೆ ಹೇಳಿ ಭೀಮನನ್ನು ಬೀಳ್ಕೊಂಡು ಆ ಮಹಾಮನನು ಹುಲಿಯೊಂದು ಜಿಂಕೆಗಳ ಹಿಂಡನ್ನು ಎವೆಯಿಕ್ಕದೇ ಕೌರವ ಸೇನೆಯನ್ನು

ನೋಡಿದನು. ಅವನು ಹಾಗೆ ಕೌರವ ಸೇನೆಯನ್ನು ಪ್ರವೇಶಿಸಲು ಪ್ರಯತ್ನಿಸುತ್ತಿರಲು ಅದು ಮೂಢವಾಗಿ ಪುನಃ ಏನು ಮಾಡಬೇಕೆಂದು ತೋಚದೇ ಕಂಪಿಸಿತು. ಧರ್ಮರಾಜನ ಶಾಸನದಂತೆ ಅರ್ಜುನನನ್ನು ಕಾಣಲು ಒಮ್ಮೆಲೇ ಸಾತ್ಯಕಿಯು ಕೌರವ ಸೇನೆಯ ಮೇಲೆರಗಿದನು.

## ಸಾತ್ಯಕಿಯು ದ್ರೋಣನನ್ನು ದಾಟಿ ಮುಂದುವರೆದುದು

ಯುದ್ಧಮಾಡಲು ಉತ್ಸಾಹದಿಂದ ಕೌರವ ಸೈನ್ಯದ ಕಡೆ ಯುಯುಧಾನನು ಹೊರಡಲು ಧರ್ಮರಾಜನು ತನ್ನ ಸೇನೆಯಿಂದ ಪರಿವೃತನಾಗಿ ದ್ರೋಣನ ರಥದ ಕಡೆ ಹೊರಟನು. ಆಗ ಪಾಂಚಾಲರಾಜನ ಮಗ ವಸುದಾನನು ಪಾಂಡವರ ಸೇನೆಗೆ ಕೂಗಿ ಹೇಳಿದನು:

> “ಬೇಗ ಬನ್ನಿ! ಸಾತ್ಯಕಿಯು ಸುಲಭವಾಗಿ ಹೋಗಬಲ್ಲಂತೆ ಮಾಡಲು ವೇಗದಿಂದ ಆಕ್ರಮಿಸಿ! ಅನೇಕ ಮಹಾರಥರು ಅವನನ್ನು ಜಯಿಸಲು ಪ್ರಯತ್ನಿಸುತ್ತಾರೆ!”

ಹೀಗೆ ಹೇಳುತ್ತಾ ವೇಗದಿಂದ ಕೌರವ ಸೇನೆಯ ಮೇಲೆ ಆಕ್ರಮಣಿಸಿ “ಅವನನ್ನು ಗೆಲ್ಲಲು ಬಯಸುವವರನ್ನು ಸೋಲಿಸುತ್ತೇವೆ!” ಎಂದು ಎರಗಿದರು. ಆಗ ಯುಯುಧಾನನ ರಥದ ಬಳಿ ಮಹಾ

ಶಬ್ಧವುಂಟಾಯಿತು. ಕಂಪಿಸುತ್ತಿದ್ದ ಕೌರವ ಮಹಾ ಸೇನೆಯು ಸಾತ್ವತನಿಂದ ನೂರು ವಾಹಿನಿಗಳಾಗಿ ಒಡೆಯಲ್ಪಟ್ಟಿತು. ಅವರು ಹೀಗೆ ಒಡೆದು ಹೋಗಲು ಶಿನಿಯ ಮೊಮ್ಮಗ ಮಹಾರಥನು ಸೇನೆಯ ಎದುರಿನಲ್ಲಿದ್ದ ಏಳು ಮಹೇಷ್ವಾಸ ವೀರರನ್ನು ಉರುಳಿಸಿದನು. ಆ ದೀರ್ಘಬಾಹುವಿನಿಂದ ಸದೆಬಡಿಯಲ್ಪಟ್ಟ ಅವರು ಹೆದರಿ, ಅವನ ಅತಿಮಾನುಷತ್ವವನ್ನು ಕಂಡು ವೀರರು ಯುದ್ಧಮಾಡುವುದನ್ನೇ ತೊರೆದರು. ನುಚ್ಚುನೂರಾದ ರಥಗಳಿಂದ, ಮುರಿದ ನೊಗಗಳಿಂದ, ಪುಡಿಪುಡಿಯಾದ ಚಕ್ರಗಳಿಂದ, ತುಂಡಾಗಿ ಬಿದ್ದ ಧ್ವಜಗಳಿಂದ, ಅನುಕರ್ಷಗಳಿಂದ, ಪತಾಕೆಗಳಿಂದ, ಕಾಂಚನ ಶಿರಸ್ತ್ರಾಣಗಳಿಂದ, ಚಂದನಲೇಪಿತ ಅಂಗದಗಳೊಂದಿಗೆ, ಆನೆಯ ಸೊಂಡಲಿನಂತಿರುವ ಬಾಹುಗಳಿಂದ, ಹಾವಿನ ಹೆಡೆಗಳಂತಿರುವ ಮನುಷ್ಯರ ಭುಜಗಳಿಂದ, ತೊಡೆಗಳಿಂದ ಭೂಮಿಯು ಸುಂದರವಾಗಿ ಕಾಣುತ್ತಿತ್ತು. ಬಿದ್ದಿರುವ ವೃಷಭಾಕ್ಷಣರ ಚಂದ್ರನ ಪ್ರಭೆಯುಳ್ಳ, ಸುಂದರ ಕುಂಡಲಗಳಿಂದ ಅಲಂಕೃತಗೊಂಡ ಮುಖಗಳಿಂದ ಮೇದಿನಿಯು ಶೋಭಿಸುತ್ತಿತ್ತು. ಪರ್ವತೋಪಮ ಅನೇಕ ಆನೆಗಳು ನಾಶಗೊಂಡು ಮಲಗಿದ್ದಿರಲು ಭೂಮಿಯು ಪರ್ವತಗಳು ಬಿದ್ದು ಹರಡಿರುವಂತೆ ರಾರಾಜಿಸುತ್ತಿತ್ತು. ಬಂಗಾರದಿಂದ ಮಾಡಲಟ್ಟ ಮುಕ್ತಾಜಾಲಗಳಿಂದ ವಿಭೂಷಿತವಾದ, ಬಣ್ಣ ಬಣ್ಣದ ಜಿನಸುಗಳಿಂದ ಶೋಭಿಸುತ್ತಿದ್ದ ತುರಂಗಗಳು ಆ

ದೀರ್ಘಬಾಹುವಿನಿಂದ ಜೀವವನ್ನು ಕಳೆದುಕೊಂಡು ನೆಲವನ್ನು ಮುಕ್ಕಿದ್ದವು.

ಯಾವ ಮಾರ್ಗದಿಂದ ಧನಂಜಯನು ಹೋಗಿದ್ದನೋ ಅದೇ ಮಾರ್ಗದಲ್ಲಿ ಹೋಗಲು ಪ್ರಯತ್ನಿಸುತ್ತಿದ್ದ ಸಾತ್ಯಕಿಯನ್ನು ದ್ರೋಣನು ತಡೆದನು. ಭರಧ್ವಾಜನನ್ನು ಎದುರಿಸಿದ ಯುಯುಧಾನನಾದರೋ ಸಂಕ್ರುದ್ಧನಾಗಿ ಅಲೆಗಳನ್ನು ಜಲಾಶಯವು ಹೇಗೋ ಹಾಗೆ ಹಿಂದೆಸರಿಯಲಿಲ್ಲ. ಯುಯುಧಾನನನ್ನು ರಣದಲ್ಲಿ ತಡೆದು ದ್ರೋಣನು ಅವನನ್ನು ಐದು ಮರ್ಮಭೇದಿ ನಿಶಿತ ಬಾಣಗಳಿಂದ ಹೊಡೆದನು. ಸಾತ್ಯಕಿಯಾದರೋ ರಣದಲ್ಲಿ ದ್ರೋಣನನ್ನು ಏಳು ಹೇಮಪುಂಖಗಳ ಶಿಲಾಧೌತ ಕಂಕಬರ್ಹಿಣ ಬಾಣಗಳಿಂದ ಹೊಡೆದನು. ದ್ರೋಣನು ಕುದುರೆ-ಸಾರಥಿಗಳೊಂದಿಗೆ ಅವನನ್ನು ಆರು ಸಾಯಕಗಳಿಂದ ಹೊಡೆದನು. ಆಗ ಯುಯುಧಾನನು ದ್ರೋಣನನ್ನು ಸಹಿಸಿಕೊಳ್ಳಲಿಲ್ಲ. ಸಿಂಹನಾದವನ್ನು ಮಾಡಿ ದ್ರೋಣನನ್ನು ಹತ್ತು ಸಾಯಕಗಳಿಂದ ಮತ್ತು ಅನ್ಯ ಹದಿನಾಲ್ಕರಿಂದ ಹೊಡೆದನು. ಪುನಃ ಯುಯುಧಾನನು ಹತ್ತು ಶರಗಳಿಂದ ಹೊಡೆದನು. ಒಂದರಿಂದ ಸಾರಥಿಯನ್ನೂ, ನಾಲ್ಕರಿಂದ ನಾಲ್ಕು ಕುದುರೆಗಳನ್ನೂ, ಒಂದು ಬಾಣದಿಂದ ಧ್ವಜವನ್ನೂ ಹೊಡೆದನು. ದ್ರೋಣನು ತ್ವರೆಮಾಡಿ ಅವನನ್ನು, ಕುದುರೆ-ಸಾರಥಿ-

ರಥ-ಧ್ವಜಗಳನ್ನು ಮಿಡಿತೆಯ ಹಿಂಡಿನಂತಿರುವ ಆಶುಗ ಬಾಣಗಳಿಂದ ಮುಚ್ಚಿಬಿಟ್ಟನು. ಹಾಗೆಯೇ ಯುಯುಧಾನನೂ ಕೂಡ ಅನೇಕ ಆಶುಗಗಳಿಂದ ದ್ರೋಣನನ್ನು ಮುಸುಕಿದನು. ಆಗ ಸಂಭ್ರಾಂತನಾದ ದ್ರೋಣನು ಹೇಳಿದನು:

> “ನಿನ್ನ ಆಚಾರ್ಯನು ಕಾಪುರುಷನಂತೆ ರಣವನ್ನು ತೊರೆದು ಹೊರಟುಹೋದನು. ಯುದ್ಧಮಾಡುತ್ತಿದ್ದ ನನ್ನನ್ನು ಪ್ರದಕ್ಷಿಣೆಮಾಡಿ ಮುಂದೆಸಾರಿದನು. ಒಂದುವೇಳೆ ನಿನ್ನ ಆಚಾರ್ಯನಂತೆ ನನ್ನನ್ನು ರಣದಲ್ಲಿ ಬಿಟ್ಟು ಹೋಗದೇ ನನ್ನೊಡನೆ ಯುದ್ಧಮಾಡಿದರೆ ಇಂದು ನೀನು ಜೀವಂತ ಉಳಿಯುವುದಿಲ್ಲ!”

ಸಾತ್ಯಕಿಯು ಹೇಳಿದನು:

> “ಬ್ರಹ್ಮನ್! ನಿನಗೆ ಮಂಗಳವಾಗಲಿ! ಧರ್ಮರಾಜನ ಶಾಸನದಂತೆ ಧನಂಜಯನ ಬಳಿ ಹೋಗುತ್ತಿದ್ದೇನೆ. ಕಾಲವು ಕಳೆದುಹೋಗುತ್ತಿದೆ!”

ಶೈನೇಯನು ಹೀಗೆ ಹೇಳಿ ಆಚಾರ್ಯನನ್ನು ಅಲ್ಲಿಯೇ ಬಿಟ್ಟು ಒಮ್ಮೆಲೇ ಹೊರಟು ಹೋಗುವಾಗ ಸಾರಥಿಗೆ ಇದನ್ನು ಹೇಳಿದನು:

“ಸೂತ! ನನ್ನನ್ನು ತಡೆಯುವಲ್ಲಿ ದ್ರೋಣನು ಸರ್ವಥಾ ಪ್ರಯತ್ನಮಾಡುತ್ತಾನೆ. ಪ್ರಯತ್ನ ಪಟ್ಟು ರಣದಲ್ಲಿ ಓಡಿಸು! ಇನ್ನೂ ಹೆಚ್ಚಿನ ಈ ಮಾತನ್ನು ಕೇಳು! ಇಲ್ಲಿಂದ ಮಹಾಪ್ರಭೆಯುಳ್ಳ ಅವಂತಿಯವ ಸೇನೆಯು ಕಾಣುತ್ತಿದೆ. ಅದರ ನಂತರ ದಾಕ್ಷಿಣಾತ್ಯರ ಮಹಾಸೇನೆಯಿದೆ. ಅದರ ನಂತರವಿರುವುದು ಬಾಹ್ಲಿಕರ ಮಹಾ ಸೇನೆ. ಬಾಹ್ಲಿಕರ ಹತ್ತಿರವಿರುವುದು ಕರ್ಣನಿಂದೊಡಗೂಡಿದ ಮಹಾಸೇನೆ. ಆ ಸೇನೆಗಳು ಒಂದಕ್ಕಿಂದ ಒಂದು ಭಿನ್ನವಾಗಿವೆ. ಅನ್ಯೋನ್ಯರನ್ನು ಅವಲಂಬಿಸಿಕೊಂಡಿರುವುದರಿಂದ ಅವು ರಣರಂಗವನ್ನು ಬಿಟ್ಟುಕೊಡುವುದಿಲ್ಲ. ಇವುಗಳ ಮಧ್ಯದ ಜಾಗವನ್ನು ಬಳಸಿ ಸಂತೋಷದಿಂದ ಕುದುರೆಗಳನ್ನು ಓಡಿಸು. ಮಧ್ಯಮವೇಗವನ್ನು ಬಳಲಿ ನನ್ನನ್ನು ಅಲ್ಲಿಗೆ - ಎಲ್ಲಿ ನಾನಾಪ್ರಹರಣಗಳನ್ನು ಎತ್ತಿಹಿಡಿದಿರುವ ಬಾಹ್ಲಿಕರು ಕಾಣುತ್ತಾರೋ, ಅನೇಕ ದಾಕ್ಷಿಣಾತ್ಯರು ಇರುವರೋ, ಸೂತಪುತ್ರನ ನಾಯಕತ್ವದಲ್ಲಿ ಕಾಣುತ್ತಿರುವ ಆನೆ-ಕುದುರೆ-ರಥಗಳಿಂದ ಕೂಡಿದ ನಾನಾ ದೇಶಗಳಿಂದ ಒಂದುಗೂಡಿಸಿದ ಪದಾತಿಗಳಿಂದ ಕೂಡಿದ ಯಾವ ಸೇನೆಯು ಕಾಣಿಸುತ್ತದೆಯೋ ಅಲ್ಲಿಗೆ - ಕೊಂಡೊಯ್ಯಿ.”

## ಸಾತ್ಯಕಿಯು ಕೃತವರ್ಮನನ್ನು ದಾಟಿ ಮುಂದುವರೆದುದು

ಹೀಗೆ ಸಾರಥಿಗೆ ಹೇಳಿ ಬ್ರಾಹ್ಮಣನನ್ನು ಪರಿತ್ಯಜಿಸಿ ಅವನು ಎಲ್ಲಿ ಕರ್ಣನ ಉಗ್ರ ಮಹಾಸೇನೆಯಿದೆಯೋ ಅಲ್ಲಿಗೆ ಹೊರಟನು. ಹಾಗೆ ಹೋಗುತ್ತಿರುವ ಯುಯುಧಾನನನ್ನು ಕ್ರುದ್ಧನಾದ ದ್ರೋಣನು ಅನೇಕ ವಿಶಿಖಗಳನ್ನು ಹರಡುತ್ತಾ ಹಿಂಬಾಲಿಸಿ ಹೋದನು. ಕರ್ಣನ ಸೇನೆಯನ್ನು ನಿಶಿತ ಶರಗಳಿಂದ ಜೋರಾಗಿ ಹೊಡೆದು ಆ ಸಾತ್ಯಕಿಯು ಅಪಾರವಾದ ಭಾರತೀಸೇನೆಯನ್ನು ಪ್ರವೇಶಿಸಿದನು.

ಯುಯುಧಾನನು ಪ್ರವೇಶಿಸಿಸಲು ಸೈನಿಕರು ಓಡತೊಡಗಿದರು. ಆಗ ಅಸಹನಶೀಲ ಕೃತವರ್ಮನು ಸಾತ್ಯಕಿಯನ್ನು ಮುತ್ತಿದನು. ಮೇಲೆ ಎರಗುತ್ತಿದ್ದ ಅವನನ್ನು ಸಾತ್ಯಕಿಯು ಆರು ವಿಶಿಖಗಳಿಂದ ಹೊಡೆದನು ಮತ್ತು ಆ ವೀರ್ಯವಾನನು ನಾಲ್ಕರಿಂದ ಅವನ ನಾಲ್ಕು ಕುದುರೆಗಳನ್ನು ಹೊಡೆದನು. ಅನಂತರ ಪುನಃ ಹದಿನಾರು ನತಪರ್ವ ಆಶುಗಗಳಿಂದ ಸಾತ್ಯಕಿಯು ಕೃತವರ್ಮನ ಎದೆಗೆ ಹೊಡೆದನು. ಸಾತ್ವತನ ಬಹಳ ತೀಕ್ಷ್ಣ ತೇಜಸ್ಸುಳ್ಳ ಅನೇಕ ವಿಶಿಖಗಳಿಂದ ಪೆಟ್ಟುತಿಂದ ಕೃತವರ್ಮನು ಸಹಿಸಿಕೊಳ್ಳಲಿಲ್ಲ. ಅವನು ಅಗ್ನಿಯ ಜ್ವಾಲೆಗೆ ಸಮನಾದ ವತ್ಸದಂತವನ್ನು ಹೂಡಿ ಕಿವಿಯವರೆಗೂ ಎಳೆದು ಸಾತ್ಯಕಿಯ ಎದೆಗೆ ಹೊಡೆದನು. ಅದು ಅವನ ಕವಚ-ಶರೀರಗಳನ್ನು ಭೇದಿಸಿ

ಪತ್ರಪುಂಖಗಳೊಂದಿಗೆ ರಕ್ತದಲ್ಲಿ ತೋಯ್ದು ಭೂಮಿಯನ್ನು ಪ್ರವೇಶಿಸಿತು. ಆಗ ಪರಮಾಸ್ತ್ರವಿದು ಕೃತವರ್ಮನು ಅನೇಕ ಬಾಣಗಳಿಂದ ಅವನ ಧನುಸ್ಸನ್ನು ಕತ್ತರಿಸಿದನು. ರಣದಲ್ಲಿ ಕ್ರುದ್ಧನಾಗಿ ಅವನು ಸಾತ್ಯಕಿಯ ಎದೆಗೆ ಹತ್ತು ತೀಕ್ಷ್ಣ ವಿಶಿಖಗಳಿಂದ ಹೊಡೆದನು. ಧನುಸ್ಸು ತುಂಡಾಗಿ ಹೋಗಲು ಶಕ್ತಿಮತರಲ್ಲಿ ಶ್ರೇಷ್ಠ ಸಾತ್ಯಕಿಯು ಶಕ್ತಿಯಿಂದ ಕೃತವರ್ಮನ ಬಲತೋಳಿಗೆ ಹೊಡೆದನು. ಅನಂತರ ವೀರ ಸಾತ್ಯಕಿಯು ತಕ್ಷಣವೇ ಇನ್ನೊಂದು ಸುದೃಢ ಧನುಸ್ಸನ್ನು ತೆಗೆದುಕೊಂಡು ನೂರಾರು ಸಹಸ್ರಾರು ವಿಶಿಖಗಳನ್ನು ಬಿಟ್ಟನು. ಕೃತವರ್ಮನ ರಥವನ್ನು ಎಲ್ಲ ಕಡೆಗಳಿಂದ ಆಕ್ರಮಣಿಸಿ, ಆ ಸಾತ್ಯಕಿಯು ರಣದಲ್ಲಿ ಹಾರ್ದಿಕ್ಯನನ್ನು ಸಂಪೂರ್ಣವಾಗಿ ಮುಚ್ಚಿಬಿಟ್ಟನು. ಆಗ ಭಲ್ಲದಿಂದ ಸಾರಥಿಯ ಶಿರವನ್ನು ಕತ್ತರಿಸಲು ಹಾರ್ದಿಕ್ಯನ ಸೂತನು ಮಹಾರಥದಿಂದ ಹತನಾಗಿ ಬಿದ್ದನು. ಸಾರಥಿಯು ಹತನಾಗಲು ಕುದುರೆಗಳು ಓಡತೊಡಗಿದವು. ಆಗ ಭೋಜನು ಸಂಭ್ರಾಂತನಾಗದೇ ಸ್ವಯಂ ತಾನೇ ಕುದುರೆಗಳನ್ನು ನಿಯಂತ್ರಿಸಿ, ಧನುಸ್ಸನ್ನು ಹಿಡಿದು ರಥದಲ್ಲಿ ಕುಳಿತನು. ಅವನನ್ನು ಸೇನೆಗಳು ಶ್ಲಾಘಿಸಿದವು. ಕ್ಷಣಕಾಲ ಸುಧಾರಿಸಿಕೊಂಡು ಕುದುರೆಗಳನ್ನು ಚಪ್ಪರಿಸಿ, ಹೇಡಿಗಳಿಗೂ ಶತ್ರುಗಳಿಗೂ ಮಹಾಭಯವನ್ನುಂಟುಮಾಡಿದನು.

ಅಷ್ಟರಲ್ಲಿಯೇ ಸಾತ್ಯಕಿಯು ಅಲ್ಲಿಂದ ಹೋದನು. ಆದರೆ. ಭೀಮನು ಅವನನ್ನು ಆಕ್ರಮಣಿಸಿದನು. ಯುಯುಧಾನನಾದರೋ ದ್ರೋಣನ ಸೇನೆಯಿಂದ ಬಿಡುಗಡೆಹೊಂದಿ ತಕ್ಷಣವೇ ತ್ವರೆಮಾಡಿ ಕಾಂಬೋಜರ ಮಹಾಸೇನೆಯತ್ತ ತೆರಳಿದನು. ಅಲ್ಲಿ ಅವನು ಶೂರರಾದ ಅನೇಕ ಮಹಾರಥರಿಂದ ತಡೆಯಲಟ್ಟನು. ಆಗ ಸಾತ್ಯಕಿಯು ಸ್ವಲ್ಪವೂ ವಿಚಲಿತನಾಗಲಿಲ್ಲ. ದ್ರೋಣನು ಸೇನೆಗಳನ್ನು ಒಂದುಗೂಡಿಸಿ ಅವುಗಳ ಭಾರವನ್ನು ಭೋಜನಿಗೆ ಒಪ್ಪಿಸಿ ಯುಯುಧಾನನೊಡನೆ ಯುದ್ಧಮಾಡಲು ಬಯಸಿ ಅವನ ಹಿಂದೆ ಹೋದನು. ಹಾಗೆ ಯುಯುಧಾನನ ಹಿಂದೆ ಹೋಗುತ್ತಿದ್ದ ಅವನನ್ನು ಸಂಕ್ರುದ್ಧ ಪಾಂಡವರ ಸೇನೆಯು ತಡೆಯಿತು. ರಥಿಗಳಲ್ಲಿ ಪ್ರವರನಾದ ಹಾರ್ದಿಕ್ಯನ ರಥದ ಬಳಿ ಭೀಮಸೇನನನ್ನು ಮುಂದಿಟ್ಟುಕೊಂಡು ಹೋದ ಪಾಂಚಾಲರು ವೀರ ಕೃತವರ್ಮನ ವಿಕ್ರಮದಿಂದ ತಡೆಯಲ್ಪಟ್ಟು ಉತ್ಸಾಹವನ್ನು ಕಳೆದುಕೊಂಡರು. ಪ್ರಯತ್ನಿಸುತ್ತಿದ್ದ ಆ ಎಲ್ಲ ಸೇನೆಗಳನ್ನೂ ಅವನು ಶರೌಘಗಳಿಂದ ಹೊಡೆದು ಮೂರ್ಛೆಗೊಳಿಸಿ ಸೋಲಿಸಿ ತಡೆದನು. ಭೋಜ ಕೃತವರ್ಮನಿಂದ ಹೀಗೆ ತಡೆಹಿಡಿಯಲ್ಪಟ್ಟ ಆ ವೀರರು ಮಹಾಯಶಸ್ಸನ್ನು ಬಯಸುತ್ತಾ ರಣದಲ್ಲಿ ಭೋಜನ ಸೇನೆಯೊಂದಿಗೆ ಯುದ್ಧಮಾಡತೊಡಗಿದರು.

ಸತ್ಯವಿಕ್ರಮ ಶ್ಯೆನೇಯನು ಕೌರವ ಸೇನೆಯನ್ನು ಪ್ರವೇಶಿಸಿದ ನಂತರ ಭೀಮಸೇನ ಪ್ರಮುಖರಾದ ಪಾರ್ಥರು ಕೌರವ ಸೇನೆಯನ್ನು ಆಕ್ರಮಣಿಸಿದರು. ಅನುಗರೊಂದಿಗೆ ಕ್ರುದ್ಧರಾಗಿ ಒಮ್ಮೆಲೇ ಎರಗಿದ ಪಾಂಡವರನ್ನು ರಣದಲ್ಲಿ ಮಹಾರಥ ಕೃತವರ್ಮನು ಒಬ್ಬನೇ ಎದುರಿಸಿದನು. ಉಕ್ಕಿಬರುವ ಸಾಗರದ ನೀರನ್ನು ದಡವು ತಡೆಹಿಡಿಯುವಂತೆ ಹಾರ್ದಿಕ್ಯನು ಪಾಂಡುಸೇನೆಯನ್ನು ರಣದಲ್ಲಿ ತಡೆಹಿಡಿದನು. ಆಹವದಲ್ಲಿ ಪಾರ್ಥರು ಒಟ್ಟಿಗೇ ಅತಿಕ್ರಮಿಸಲಾಗದ ಹಾರ್ದಿಕ್ಯನ ಪರಾಕ್ರಮವು ಅದ್ಭುತವಾಗಿತ್ತು. ಮಹಾಬಾಹು ಭೀಮನು ಕೃತವರ್ಮನನ್ನು ಮೂರು ಆಯಸಗಳಿಂದ ಹೊಡೆದು ಪಾಂಡವರನ್ನು ಹರ್ಷಗೊಳಿಸುತ್ತಾ ಶಂಖವನ್ನೂದಿದನು. ಸಹದೇವನು ಇಪ್ಪತ್ತರಿಂದ, ಧರ್ಮರಾಜನು ಐದರಿಂದ, ನಕುಲನು ನೂರರಿಂದ ಹಾರ್ದಿಕ್ಯನನ್ನು ಹೊಡೆದರು. ದ್ರೌಪದೇಯರು ಎಪ್ಪತ್ಮೂರರಿಂದ, ಘಟೋತ್ಕಚನು ಎಪ್ಪತ್ತರಿಂದ ಮತ್ತು ಧೃಷ್ಟದ್ಯುಮ್ನನು ಮೂರರಿಂದ, ವಿರಾಟ ಮತ್ತು ದ್ರುಪದರು ಐದರಿಂದ ಕೃತವರ್ಮನನ್ನು ಹೊಡೆದರು. ಶಿಖಂಡಿಯೂ ಕೂಡ ಹಾರ್ದಿಕ್ಯನನ್ನು ಐದು ಆಶುಗಗಳಿಂದ ಹೊಡೆದು ಪುನಃ ನಗುತ್ತಾ ಅವನ ಮೇಲೆ ಇಪ್ಪತ್ತು ಸಾಯಕಗಳನ್ನು ಪ್ರಯೋಗಿಸಿದನು. ಆಗ ಕೃತವರ್ಮನು ಸುತ್ತುವರೆದಿದ್ದ ಆ ಒಬ್ಬೊಬ್ಬ ಮಹಾರಥರನ್ನೂ ಐದೈದು ಬಾಣಗಳಿಂದ ಹೊಡೆದು ಭೀಮನನ್ನು ಏಳರಿಂದ

ಹೊಡೆದನು. ಅವನ ಧ್ವಜವನ್ನೂ ಧನುಸ್ಸನ್ನೂ ರಥದಿಂದ ಭೂಮಿಗೆ ಬೀಳಿಸಿದನು. ಕೃತವರ್ಮನು ಕ್ರುದ್ಧನಾಗಿ ತ್ವರೆಮಾಡಿ ಧನುಸ್ಸನ್ನು ಕಳೆದುಕೊಂಡಿದ್ದ ಭೀಮಸೇನನ ಎದೆಗೆ ಎಪ್ಪತ್ತು ನಿಶಿತ ಬಾಣಗಳಿಂದ ಹೊಡೆದನು. ಹಾರ್ದಿಕ್ಯನ ಉತ್ತಮ ಶರಗಳಿಂದ ಆಳವಾಗಿ ಗಾಯಗೊಂಡ ರಥದ ಮಧ್ಯದಲ್ಲಿದ್ದ ಭೀಮನು ಭೂಕಂಪದಲ್ಲಿ ಪರ್ವತದಂತೆ ನಡುಗಿದನು.

ಭೀಮಸೇನನು ಹಾಗಾದುದನ್ನು ನೋಡಿ ಧರ್ಮರಾಜನೇ ಮೊದಲಾದವರು ಕೃತವರ್ಮನ ಮೇಲೆ ಘೋರ ಬಾಣಗಳನ್ನು ಪ್ರಯೋಗಿಸಿದರು. ಅವರು ಮಾರುತಿಯನ್ನು ರಕ್ಷಿಸಲೋಸುಗ ಕೃತವರ್ಮನನ್ನು ರಥಸಮೂಹಗಳ ಮಧ್ಯೆ ಸೇರಿಸಿಕೊಂಡು ಸಾಯಕಗಳಿಂದ ಅವನನ್ನು ಹೊಡೆದರು. ಆಗ ಭೀಮಸೇನನು ಪುನಃ ಪ್ರಜ್ಞೆಯನ್ನು ಪಡೆದು ಸುವರ್ಣಮಯ ದಂಡದಿಂದ ಕೂಡಿದ ಲೋಹಮಹ ಶಕ್ತಿಯನ್ನು ಕೈಗೆತ್ತಿಕೊಂಡು ಶೀಘ್ರವಾಗಿ ತನ್ನ ರಥದಿಂದ ಕೃತವರ್ಮನ ರಥದ ಕಡೆ ಎಸೆದನು. ಭೀಮನ ಭುಜದಿಂದ ಹೊರಟ ಪೊರೆಬಿಟ್ಟ ಸರ್ಪದಂತಿದ್ದ ಆ ಸುದಾರುಣ ಶಕ್ತ್ಯಾಯುಧವು ಪ್ರಜ್ವಲಿಸುತ್ತಾ ಕೃತವರ್ಮನ ಸಮೀಪಕ್ಕೆ ಬಂದಿತು. ತನ್ನ ಮೇಲೆ ರಭಸದಿಂದ ಬೀಳಲಿದ್ದ ಪ್ರಳಯಕಾಲದ ಅಗ್ನಿಯ ಪ್ರಭೆಗೆ ಸಮನಾಗಿದ್ದ

ಆ ಶಕ್ತಿಯನ್ನು ಹಾರ್ದಿಕ್ಯನು ಎರಡು ಬಾಣಗಳಿಂದ ಎರಡಾಗಿ ಕತ್ತರಿಸಿದನು. ಕತ್ತರಿಸಲ್ಪಟ್ಟ ಆ ಕನಕಭೂಷಣ ಶಕ್ತಿಯು ದಿವದಿಂದ ಚ್ಯುತಗೊಂಡ ಮಹಾ ಉಲ್ಕೆಯಂತೆ ದಿಕ್ಕುಗಳನ್ನು ಬೆಳಗಿಸುತ್ತಾ ಭೂಮಿಯ ಮೇಲೆ ಬಿದ್ದಿತು.

ಶಕ್ತಿಯು ವಿನಾಶವಾದುದನ್ನು ಕಂಡು ಭೀಮನು ತುಂಬಾ ಕುಪಿತನಾದನು. ಕ್ರುದ್ಧ ಭೀಮಸೇನನು ಮಹಾಶಬ್ಧವುಳ್ಳ ವೇಗವತ್ತಾದ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಹಾರ್ದಿಕ್ಯನನ್ನು ಹೊಡೆದನು. ಭೀಮನು ಐದು ಬಾಣಗಳಿಂದ ಅವನ ವಕ್ಷಸ್ಥಳಕ್ಕೆ ಹೊಡೆದನು. ಭೋಜನಾದರೋ ಭೀಮಸೇನನಿಂದ ಸರ್ವಾಂಗಗಳಲ್ಲಿಯೂ ಗಾಯಗೊಂಡು ಕೆಂಪು ಹೂಬಿಟ್ಟ ಅಶೋಕವೃಕ್ಷದಂತೆ ರಣಾಜಿರದಲ್ಲಿ ಪ್ರಕಾಶಿಸಿದನು. ಕ್ರುದ್ಧ ಕೃತವರ್ಮನು ನಗುತ್ತಿರುವನೋ ಎಂಬಂತೆ ಭೀಮಸೇನನನ್ನು ದೃಢವಾಗಿ ಪ್ರಹರಿಸಿದನು. ಹಾಗೆಯೇ ತನ್ನೊಡನೆ ಪ್ರಯತ್ನಪಟ್ಟು ಯುದ್ಧಮಾಡುತ್ತಿದ್ದ ಆ ಎಲ್ಲ ಮಹಾರಥರನ್ನು ಮೂರು ಮೂರು ಬಾಣಗಳಿಂದ ಹೊಡೆದನು. ಅವರೂ ಕೂಡ ತಿರುಗಿ ಅವನನ್ನು ಏಳೇಳು ಬಾಣಗಳಿಂದ ಹೊಡೆದರು. ಅನಂತರ ಆ ಮಹಾರಥನು ಕ್ರುದ್ಧನಾಗಿ ನಗುತ್ತಾ ಕ್ಷುರಪ್ರದಿಂದ ಶಿಖಂಡಿಯ ಧನುಸ್ಸನ್ನು ತುಂಡರಿಸಿದನು. ಭಾರವುಳ್ಳ ಧನುಸ್ಸು ತುಂಡಾಗಲು ಕ್ರುದ್ಧ

ಶಿಖಂಡಿಯು ನೂರುಚಂದ್ರಗಳಂತೆ ಹೊಳೆಯುತ್ತಿದ್ದ ಖಡ್ಗವನ್ನು ಕೈಯಲ್ಲಿ ತೆಗೆದುಕೊಂಡನು. ಸುವರ್ಣಭೂಷಿತ ವಿಶಾಲ ಗುರಾಣಿಯನ್ನು ತಿರುಗಿಸುತ್ತಾ ಕತ್ತಿಯನ್ನು ಕೃತವರ್ಮನ ರಥದ ಕಡೆ ಎಸೆದನು. ಆ ಮಹಾಖಡ್ಗವು ಶರದೊಂದಿಗೆ ಅವನ ಧನುಸ್ಸನ್ನು ತುಂಡರಿಸಿ ಅಂಬರದಿಂದ ಬಿದ್ದ ನಕ್ಷತ್ರದೋಪಾದಿಯಲ್ಲಿ ಭೂಮಿಯ ಮೇಲೆ ಬಿದ್ದಿತು.

ಇದೇ ಸಮಯದಲ್ಲಿ ಮಹಾರಥರು ತ್ವರೆಮಾಡಿ ಕೃತವರ್ಮನನ್ನು ಸಾಯಕಗಳಿಂದ ಗಾಢವಾಗಿ ಹೊಡೆದರು. ಪರವೀರಹ ಹಾರ್ದಿಕ್ಯನು ತುಂಡಾದ ಧನುಸ್ಸನ್ನು ತೊರೆದು ಇನ್ನೊಂದು ಮಹಾ ಧನುಸ್ಸನ್ನು ತೆಗೆದುಕೊಂಡು ಪಾಂಡವರನ್ನು ಮೂರು ಮೂರು ಜಿಹ್ಮಗಗಳಿಂದ ಹೊಡೆದನು. ಶಿಖಂಡಿಯನ್ನು ಮೂರು ಮತ್ತು ಐದು ಬಾಣಗಳಿಂದ ಹೊಡೆದನು. ಮಹಾಯಶಸ್ವೀ ಶಿಖಂಡಿಯಾದರೋ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಆಮೆಯ ಉಗುರಿನಂತೆ ಮೊನಚಾದ ಆಶುಗಗಳಿಂದ ಹಾರ್ದಿಕಾತ್ಮಜನನ್ನು ಹೊಡೆದನು. ಆಗ ಹೃದಿಕನ ಆತ್ಮಸಂಭವ ಶೂರನು ಕ್ರುದ್ಧನಾಗಿ ವೇಗದಿಂದ ಆನೆಯನ್ನು ಆಕ್ರಮಣಿಸುವ ಸಿಂಹದಂತೆ ಮಹಾತ್ಮ ಭೀಷ್ಮನ ಮೃತ್ಯುವಿಗೆ ಕಾರಣನಾದ ಮಹಾರಥ ಯಾಜ್ಞಸೇನಿಯನ್ನು ಆಕ್ರಮಣಿಸಿದನು.

ದಿಗ್ಗಜಗಳಂತಿದ್ದ, ಅಗ್ನಿಗಳಂತೆ ಪ್ರಜ್ವಲಿಸುತ್ತಿದ್ದ ಆ ಇಬ್ಬರು ಅರಿಂದಮರೂ ಅನ್ಯೋನ್ಯರನ್ನು ಶರಸಂಘಗಳಿಂದ ಸಂಘರ್ಷಿಸಿದರು. ತಮ್ಮ ತಮ್ಮ ಶ್ರೇಷ್ಠ ಧನುಸ್ಸುಗಳನ್ನು ಟೇಂಕರಿಸುತ್ತಾ ಸಾಯಕಗಳನ್ನು ಹೂಡುತ್ತಾ ಇಬ್ಬರು ಸೂರ್ಯರು ತಮ್ಮ ತಮ್ಮ ಕಿರಣಗಳನ್ನು ಪಸರಿಸುವಂತೆ ನೂರಾರು ಬಾಣಗಳನ್ನು ಪರಸ್ಪರರ ಮೇಲೆ ಸುರಿಸಿದರು. ಆ ಇಬ್ಬರು ಅಪ್ರತಿಮ ವೀರ ಮಹಾರಥರು ತೀಕ್ಷ್ಣ ಶರಗಳಿಂದ ಅನ್ಯೋನ್ಯರನ್ನು ಸಂತಾಪಗೊಳಿಸುತ್ತಾ ಪ್ರಳಯಕಾಲದ ಭಾಸ್ಕರರಂತೆ ಪ್ರಕಾಶಿಸಿದರು. ಕೃತವರ್ಮನಾದರೋ ಯಾಜ್ಞಸೇನಿಯನ್ನು ರಭಸದಿಂದ ಎಪ್ಪತ್ಮೂರು ಬಾಣಗಳಿಂದ ಹೊಡೆದು ಪುನಃ ಏಳು ಬಾಣಗಳಿಂದ ಹೊಡೆದನು. ಅದರಿಂದ ವಿಪರೀತವಾಗಿ ಗಾಯಗೊಂಡ ಶಿಖಂಡಿಯು ವ್ಯಥಿತನಾಗಿ ರಥದಲ್ಲಿ ಆಸನದ ಪಕ್ಕಕ್ಕೆ ಜರುಗಿ ಕುಳಿತನು. ಧನುರ್ಬಾಣಗಳನ್ನು ಬಿಟ್ಟು ಮೂರ್ಛಿತನಾದನು. ರಥದಲ್ಲಿ ವಿಷಣ್ಣನಾಗಿದ್ದ ಶಿಖಂಡಿಯನ್ನು ನೋಡಿ ಕೌರವರು ಹಾರ್ದಿಕ್ಯನನ್ನು ಗೌರವಿಸಿ ಅಂಗವಸ್ತ್ರಗಳನ್ನು ಮೇಲಕ್ಕೆ ಹಾರಿಸಿದರು.

ಶಿಖಂಡಿಯು ಹಾರ್ದಿಕ್ಯನ ಶರಗಳಿಂದ ಹಾಗೆ ಪೀಡಿತನಾದುದನ್ನು ಕಂಡು ಅವನ ಸಾರಥಿಯು ಆ ಮಹಾರಥನನ್ನು ತ್ವರೆಮಾಡಿ ರಣದಿಂದ

ದೂರಕ್ಕೆ ಕೊಂಡೊಯ್ದನು. ರಥದಲ್ಲಿ ಒರಗಿದ್ದ ಶಿಖಂಡಿಯನ್ನು ನೋಡಿದ ಪಾರ್ಥರು ತಕ್ಷಣವೇ ಕೃತವರ್ಮನನ್ನು ಸುತ್ತುವರೆದರು. ಅಲ್ಲಿ ಮಹಾರಥ ಕೃತವರ್ಮನು ಒಬ್ಬನೇ ಅನುಯಾಯಿಗಳೊಡನಿದ್ದ ಪಾರ್ಥರನ್ನು ತಡೆದು ಪರಮ ಅದ್ಭುತ ಕೃತ್ಯವನ್ನೆಸಗಿದನು. ಮಹಾರಥ ಕೃತವರ್ಮನು ಚೇದಿ-ಪಾಂಚಾಲ-ಸೃಂಜಯ-ಕೇಕಯ ಮಹಾವೀರ್ಯರನ್ನು ಸೋಲಿಸಿ ಪಾರ್ಥರನ್ನೂ ಗೆದ್ದನು. ಸಮರದಲ್ಲಿ ಹಾರ್ದಿಕ್ಯನಿಂದ ವಧಿಸಲ್ಪಡುತ್ತಿದ್ದ ಪಾಂಡವ ಯೋಧರು ರಣಾಂಗಣದಲ್ಲಿ ನಿಲ್ಲುವ ಮನಸ್ಸು ಮಾಡದೇ ಇಲ್ಲಿಂದಲ್ಲಿಗೆ ಓಡುತ್ತಿದ್ದರು. ಭೀಮಸೇನನ ನಾಯಕತ್ವದಲ್ಲಿದ್ದ ಪಾಂಡುಸುತರನ್ನು ಯುದ್ಧದಲ್ಲಿ ಗೆದ್ದು ಹಾರ್ದಿಕ್ಯನು ರಣದಲ್ಲಿ ಹೊಗೆಯಿಲ್ಲದ ಬೆಂಕಿಯಂತೆ ಪ್ರಕಾಶಿಸಿದನು. ಸಮರದಲ್ಲಿ ಹಾರ್ದಿಕ್ಯನಿಂದ ಪಲಾಯನಗೊಳಿಸಲ್ಪಟ್ಟ ಆ ಮಹಾರಥರು ಅವನ ಶರವೃಷ್ಟಿಯಿಂದ ಪೀಡಿತರಾಗಿ ವಿಮುಖರಾದರು.

ಮಹಾತ್ಮ ಹಾರ್ದಿಕ್ಯನಿಂದ ಪಲಾಯನಗೊಳಿಸಲ್ಪಟ್ಟ ಪಾಂಡವ ಸೇನೆಯು ನಾಚಿಕೆಯಿಂದ ತಲೆತಗ್ಗಿಸಿತು ಮತ್ತು ಕೌರವರು ಸಂತೋಷದಿಂದ ಕುಣಿದಾಡಿದರು. ಅಗಾಧ ಸಮುದ್ರದಲ್ಲಿ ಆಶ್ರಯವನ್ನು ಪಡೆಯಲು ಬಯಸಿದ ಪಾಂಡವರಿಗೆ ದ್ವೀಪವೊಂದು

ದೊರಕಿತು. ಕೌರವರ ಕಡೆಯವರು ಮಾಡಿದ ಭಯಂಕರ ಜಯಘೋಷವನ್ನು ಕೇಳಿಸಿಕೊಂಡ ಸಾತ್ಯಕಿಯು ಕೃತವರ್ಮನ ಬಳಿಗೆ ಧಾವಿಸಿದನು. ಕೃತವರ್ಮನು ಶೈನೇಯನನ್ನು ನಿಶಿತ ಬಾಣಗಳಿಂದ ಮುಚ್ಚಿದನು. ಅದರಿಂದಾಗಿ ಸಾತ್ಯಕಿಯು ಅತ್ಯಂತ ಕ್ರೋಧಿತನಾದನು. ಆಗ ಶೈನೇಯನು ನಿಶಿತವಾದ ಭಲ್ಲವೊಂದನ್ನು ಕೃತವರ್ಮನ ಮೇಲೆ ಪ್ರಯೋಗಿಸಿ, ಪುನಃ ನಾಲ್ಕು ಬಾಣಗಳನ್ನು ಪ್ರಯೊಗಿಸಿದನು. ಅವನು ಕೃತವರ್ಮನ ಕುದುರೆಗಳನ್ನು ಕೊಂದು, ಭಲ್ಲದಿಂದ ಧನುಸ್ಸನ್ನು ಕತ್ತರಿಸಿದನು. ಹಾಗೆಯೇ ನಿಶಿತ ಶರಗಳಿಂದ ಅವನ ಪೃಷ್ಠರಕ್ಷಕನನ್ನೂ ಸಾರಥಿಯನ್ನೂ ಸಂಹರಿಸಿದನು. ಸತ್ಯವಿಕ್ರಮಿ ಸಾತ್ಯಕಿಯು ಅವನನ್ನು ವಿರಥನನ್ನಾಗಿ ಮಾಡಿ ಸನ್ನತಪರ್ವ ಶರಗಳಿಂದ ಸೇನೆಗಳನ್ನು ಸದೆಬಡಿಯತೊಡಗಿದನು. ಶೈನೇಯನ ಶರಗಳಿಂದ ಪೀಡಿತವಾದ ಸೇನೆಯು ಸಂಪೂರ್ಣವಾಗಿ ಭಗ್ನವಾಯಿತು. ಆಗ ಸತ್ಯವಿಕ್ರಮಿ ಸಾತ್ಯಕಿಯು ತ್ವರೆಮಾಡಿ ಮುಂದೆ ಸಾಗಿದನು. ಮಹಾಸಮುದ್ರದಂತಿದ್ದ ದ್ರೋಣನ ಸೇನೆಯನ್ನು ದಾಟಿ ಮುಂದುವರೆದ ಆ ವೀರ್ಯವಾನನು ಕೌರವ ಸೇನೆಯನ್ನು ಧ್ವಂಸಮಾಡತೊಡಗಿದನು.

## ಸಾತ್ಯಕಿಯಿಂದ ಮಾಗಧ ಜಲಸಂಧನ ವಧೆ

ಯುದ್ಧದಲ್ಲಿ ಕೃತವರ್ಮನನ್ನು ಪರಾಜಯಗೊಳಿಸಿ ಸಂಹೃಷ್ಟನಾದ

ಸಾತ್ಯಕಿಯು ಸಾರಥಿಗೆ "ಗಾಬರಿಗೊಳ್ಳದೇ ನಿಧಾನವಾಗಿ ಮುಂದೆ ಸಾಗು!" ಎಂದು ಹೇಳಿದನು. ರಥ-ಕುದುರೆ-ಆನೆಗಳ ಸಮೂಹಗಳಿಂದ ಮತ್ತು ಪದಾತಿ ಸೈನಿಕರಿಂದ ಸಂಪೂರ್ಣವಾಗಿದ್ದ ಆ ಕೌರವ ಸೈನ್ಯವನ್ನು ನೋಡಿ ಪುನಃ ಸಾರಥಿಗೆ ಹೇಳಿದನು:

> "ದ್ರೋಣನ ಸೇನೆಯ ಎಡಭಾಗಕ್ಕೆ ನೀನು ನೋಡುತ್ತಿರುವ ಮೋಡಗಳಂತಿರುವ ಸೇನೆಯು ಆನೆಗಳ ಸೇನೆ. ರುಕ್ಮರಥನು ಅದರ ನಾಯಕನು. ಸೂತ! ಬಹಳಷ್ಟು ಸಂಖ್ಯೆಯಲ್ಲಿರುವ ಆ ಸೇನೆಯನ್ನು ದಾಟಿ ಹೋಗುವುದು ಕಷ್ಟ. ದುರ್ಯೋಧನನಿಂದ ಆಜ್ಞಪ್ತರಾಗಿ ಅವು ನನಗಾಗಿ ಜೀವವನ್ನೇ ತೊರೆದು ಕಾಯುತ್ತಿವೆ. ಆ ಮಹೇಷ್ವಾಸ ತ್ರಿಗರ್ತರ ರಾಜಪುತ್ರರೆಲ್ಲರೂ ವೀರ ಯೋಧರು. ರಥೋದಾರರು. ಸುವರ್ಣಮಯ ವಿಕೃತ ಧ್ವಜವುಳ್ಳವರು. ನನ್ನೊಡನೆ ಯುದ್ಧಮಾಡಲು ನನ್ನನ್ನೇ ಎದುರಿಸಿ ಆ ವೀರರು ನಿಂತಿರುವರು. ಕುದುರೆಗಳನ್ನು ಓಡಿಸು. ಅಲ್ಲಿಗೆ ನನ್ನನ್ನು ತಲುಪಿಸು. ಭಾರದ್ವಾಜನು ನೋಡುತ್ತಿರುವಂತೆಯೇ ನಾನು ತ್ರಿಗರ್ತರೊಡನೆ ಯುದ್ಧಮಾಡುತ್ತೇನೆ."

ಸಾತ್ವತನ ಮಾತಿನಂತೆ ನಡೆಯುವ ಸೂತನು ಹೊಳೆಯುತ್ತಿರುವ

ಪತಾಕೆಗಳಿಂದ ಕೂಡಿದ ಆದಿತ್ಯವರ್ಣದ ರಥವನ್ನು ನಿಧಾನವಾಗಿ ನಡೆಸಿದನು. ಅವನು ಹೇಳಿದಂತೆಯೇ ಆ ಸಾರಥಿಯ ವಶದಲ್ಲಿದ್ದ ವಾಯುವೇಗ ಸಮ, ಕುಂದಪುಷ್ಪ ಅಥವಾ ಚಂದ್ರ ಅಥವಾ ಬೆಳ್ಳಿಯ ಬಣ್ಣದ ಉತ್ತಮ ಕುದುರೆಗಳು ರಣದಲ್ಲಿ ಮುಂದುವರೆದವು. ಆ ಶಂಖವರ್ಣದ ಉತ್ತಮ ಕುದುರೆಗಳೊಂದಿಗೆ ಆಕ್ರಮಣ ಮಾಡಿದ ಸಾತ್ಯಕಿಯನ್ನು ಆ ಶೂರರು ಆನೆಗಳ ಸೇನೆಗಳೊಂದಿಗೆ ಸುಲಭವಾಗಿ ಭೇದಿಸಬಲ್ಲ ವಿವಿಧ ತೀಕ್ಷ್ಣ ಸಾಯಕಗಳನ್ನು ಎರಚುತ್ತಾ ಅವನನ್ನು ಸುತ್ತುವರೆದರು. ಸಾತ್ವತನಾದರೋ ವರ್ಷಾಕಾಲದಲ್ಲಿ ಮಹಾಮೇಘವು ಜಲವರ್ಷದಿಂದ ಪರ್ವತಗಳನ್ನು ಮುಚ್ಚಿಬಿಡುವಂತೆ ನಿಶಿತ ಬಾಣಗಳಿಂದ ಆ ಗಜಸೇನೆಯನ್ನು ಮುಚ್ಚಿ ಯುದ್ಧಮಾಡಿದನು. ಶಿನಿವೀರನು ಬಿಟ್ಟ ವಜ್ರಸ್ಪರ್ಷಕ್ಕೆ ಸಮನಾದ ಶರಗಳಿಂದ ವಧಿಸಲ್ಪಡುತ್ತಿದ್ದ ಆನೆಗಳು ರಣವನ್ನು ಬಿಟ್ಟು ಓಡಿ ಹೋದವು. ಕತ್ತರಿಸಿಹೋದ ದಂತಗಳಿಂದಲೂ, ರಕ್ತಸಿಕ್ತವಾದ ಅಂಗಾಂಗಗಳಿಂದಲೂ, ಒಡೆದು ಹೋಗಿದ್ದ ತಲೆ-ಗಂಡಸ್ಥಲಗಳಿಂದಲೂ, ಸೀಳಿಹೋದ ಕಿವಿ-ಮುಖ-ಸೊಂಡಿಲುಗಳಿಂದಲೂ, ಸತ್ತುಹೋಗಿದ್ದ ಮಾವಟಿಗರಿಂದಲೂ, ಬಿದ್ದುಹೋಗಿದ್ದ ಪತಾಕೆಗಳಿಂದಲೂ, ಛಿನ್ನವಾದ ಮರ್ಮಸ್ಥಲಗಳಿಂದಲೂ, ಭಿನ್ನವಾದ ಗಂಟೆಗಳಿಂದಲೂ, ಕತ್ತರಿಸಲ್ಪಟ್ಟ

ಮಹಾಧ್ವಜಗಳಿಂದಲೂ, ಹತಯೋಧರಿಂದಲೂ, ಜಾರಿಹೋಗಿದ್ದ ರತ್ನಗಂಬಳಿಗಳಿಂದಲೂ ಕೂಡಿದ್ದ ಆನೆಗಳು ಎಲ್ಲ ದಿಕ್ಕುಗಳಲ್ಲಿಯೂ ಪ್ರಕಾಶಿಸಿದವು. ಸಾತ್ವತನ ವಿವಿಧ ನಾರಾಚ-ವತ್ಸದಂತಗಳಿಂದ ಗಾಯಗೊಂಡ ಮೋಡಗಳಂತಿದ್ದ ಆನೆಗಳು ರೋದಿಸುತ್ತಾ ಸುತ್ತಲೂ ತಿರುಗುತ್ತಿದ್ದವು. ಹಾಗೆ ಆ ಗಜಸೇನೆಯು ದಿಕ್ಕಾಪಾಲಾಗಿ ಓಡಿಹೋಗುತ್ತಿರಲು ಮಹಾರಥ ಜಲಸಂಧನು ತನ್ನ ಆನೆಯನ್ನು ರಜತಾಶ್ವ ಸಾತ್ಯಕಿಯ ಬಳಿಗೆ ಕೊಂಡೊಯ್ದನು. ಸುವರ್ಣಮಯ ಕವಚವನ್ನು ಧರಿಸಿದ್ದ, ಶೂರ, ಶುಚಿ, ಕುಂಡಲೀ, ಮುಕುಟಿ, ಶಂಖೀ, ರಕ್ತಚಂದನಲೇಪಿತನಾಗಿದ್ದ, ಕತ್ತಿನಲ್ಲಿ ಜ್ವಾಜ್ವಲ್ಯಮಾನ ಚಿನ್ನದ ಸರವನ್ನು ಧರಿಸಿದ್ದ, ವಕ್ಷಃಸ್ಥಲವನ್ನು ಪದಕದಿಂದ ಅಲಂಕರಿಸಿಕೊಂಡಿದ್ದ, ಪ್ರಕಾಶಮಾನವಾದ ಕಂಠಸೂತ್ರವನ್ನು ಧರಿಸಿದ್ದ ಜಲಸಂಧನು ರಣಾಂಗಣದಲ್ಲಿ ಸುವರ್ಣಮಯ ಧನುಸ್ಸನ್ನು ಠೇಂಕರಿಸುತ್ತಾ ವಿದ್ಯುತ್ತಿನಿಂದ ಕೂಡಿದ ಮೇಘದಂತೆ ಪ್ರಕಾಶಿಸಿದನು,

ಅತ್ಯಂತ ತ್ವರೆಯಿಂದ ತನ್ನ ಮೇಲೆ ಬೀಳಲು ಬರುತ್ತಿದ್ದ ಮಗಧರಾಜನ ಆ ಗಜನಾಯಕನನ್ನು ಸಾತ್ಯಕಿಯು ಉಕ್ಕಿ ಬರುತ್ತಿರುವ ಸಮುದ್ರವನ್ನು ತೀರವು ತಡೆಯುವಂತೆ ತಡೆದು ನಿಲ್ಲಿಸಿದನು. ಶೈನೇಯನ ಉತ್ತಮ ಶರಗಳಿಂದ ಆ ಅನೆಯು ತಡೆಯಲ್ಪಟ್ಟಿದುದನ್ನು ನೋಡಿ ಮಹಾಬಲ

ಜಲಸಂಧನು ಕ್ರುದ್ಧನಾದನು. ಜಲಸಂಧನು ಭಾರವನ್ನು ಹೊರಬಲ್ಲ ಮಾರ್ಗಣಗಳಿಂದ ಶಿನಿಯ ಮೊಮ್ಮೊಗನ ಮಹಾವಕ್ಷಸ್ಥಳಕ್ಕೆ ಹೊಡೆದನು. ಅನಂತರ ಇನ್ನೊಂದು ಹಿತ್ತಾಳೆಯ ನಿಶಿತ ಭಲ್ಲದಿಂದ ವೃಷ್ಣಿವೀರನ ಧನುಸ್ಸನ್ನು ಕತ್ತರಿಸಿದನು. ಅನಂತರ ನಗುತ್ತಾ ಧನುಸ್ಸಿನಿಂದ ವಿಹೀನನಾಗಿದ್ದ ಸಾತ್ಯಕಿಯನ್ನು ವೀರ ಮಾಗಧನು ನಗುತ್ತಾ ಐದು ನಿಶಿತ ಶರಗಳಿಂದ ಹೊಡೆದನು. ವೀರ್ಯವಾನ್ ಜಲಸಂಧನ ಅನೇಕ ಬಾಣಗಳಿಂದ ಗಾಯಗೊಂಡರೂ ಮಹಾಬಾಹು ಸಾತ್ಯಕಿಯು ವಿಚಲಿತನಾಗಲಿಲ್ಲ. ಅದೊಂದು ಮಹಾ ಅದ್ಭುತವಾಯಿತು. ತನ್ನಮೇಲೆ ಬೀಳುತ್ತಿರುವ ಬಾಣಗಳನ್ನು ಪರಿಗಣಿಸದೇ, ಗಾಬರಿಗೊಳ್ಳದೆ ಸಾತ್ಯಕಿಯು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು 'ನಿಲ್ಲು! ನಿಲ್ಲು!' ಎಂದು ಜಲಸಂಧನಿಗೆ ಕೂಗಿ ಹೇಳಿದನು. ಹೀಗೆ ಹೇಳಿ ನಗುತ್ತಾ ಶೈನೇಯನು ಜಲಸಂಧನ ಎದೆಗೆ ಗುರಿಯಿಟ್ಟು ಅರವತ್ತು ಬಾಣಗಳಿಂದ ಹೊಡೆದನು. ಸುತೀಕ್ಷ್ಣ ಕ್ಷುರಪ್ರದಿಂದ ಜಲಸಂಧನ ಮಹಾಧನುಸ್ಸನ್ನು ಮುಷ್ಟಿಪ್ರದೇಶದಲ್ಲಿ ಕತ್ತರಿಸಿ ಬಳಿಕ ಮೂರು ಬಾಣಗಳಿಂದ ಅವನನ್ನು ಹೊಡೆದನು. ಜಲಸಂಧನಾದರೋ ಬಾಣಗಳಿಂದ ಯುಕ್ತವಾಗಿದ್ದ ಆ ಧನುಸ್ಸನ್ನು ಕೂಡಲೇ ವಿಸರ್ಜಿಸಿ ತೋಮರವನ್ನು ಕೈಗೆತ್ತಿಕೊಂಡು ಸಾತ್ಯಕಿಯ ಕಡೆಗೆ ರಭಸದಿಂದ ಎಸೆದನು. ಅದು ಮಾಧವನ ಎಡಭುಜವನ್ನು

ಗಾಯಗೊಳಿಸಿ ಮಹಾಸರ್ಪವು ಭುಸುಗುಟ್ಟುವಂತೆ ಸೊಯ್ ಶಬ್ಧದೊಡನೆ ಭೂಮಿಯನ್ನು ಸೇರಿತು. ಎಡಭುಜವು ಗಾಯಗೊಳ್ಳಲು ಸಾತ್ಯಕಿಯು ಮೂವತ್ತು ತೀಕ್ಷ್ಣ ವಿಶಿಖಗಳಿಂದ ಜಲಸಂಧನನ್ನು ಹೊಡೆದನು. ಅದಕ್ಕೆ ಪ್ರತಿಯಾಗಿ ಮಹಾಬಲ ಜಲಸಂಧನು ಖಡ್ಗವನ್ನೂ, ಎತ್ತಿನ ಚರ್ಮದಿಂದ ಮಾಡಿದ್ದ ಚಂದ್ರಾಕಾರದ ನೂರು ಚಿಹ್ನೆಗಳನ್ನುಳ್ಳ ಗುರಾಣಿಯನ್ನೂ ತೆಗೆದುಕೊಂಡು ಖಡ್ಗವನ್ನು ತಿರುಗಿಸಿ ಸಾತ್ವತನ ಮೇಲೆ ಎಸೆದನು. ಆ ಖಡ್ಗವು ಶೈನೇಯನ ಧನುಸ್ಸನ್ನು ತುಂಡರಿಸಿ ಭೂಮಿಯ ಮೇಲೆ ಬಿದ್ದಿತು. ಭೂಮಿಯ ಮೇಲೆ ಬಿದ್ದಿದ್ದ ಆ ಖಡ್ಗವು ಕೊಳ್ಳಿಯ ಚಕ್ರದಂತೆ ತೋರುತ್ತಿತ್ತು.

ಒಡನೆಯೇ ಸಾತ್ಯಕಿಯು ಕ್ರುದ್ಧನಾಗಿ ಎಲ್ಲ ಶರೀರಗಳನ್ನೂ ತುಂಡರಿಸಬಲ್ಲ, ಶಾಲವೃಕ್ಷದ ಕೊಂಬೆಯಂತೆ ದೀರ್ಘವಾದ ಇಂದ್ರನ ವಜ್ರಾಯುಧಕ್ಕೆ ಸಮನಾದ ಠೇಂಕಾರಶಬ್ಧವುಳ್ಳ ಧನುಸ್ಸಿನ ಶಿಂಜಿನಿಯನ್ನು ಮೀಟಿ ನಿಶಿತ ಬಾಣದಿಂದ ಜಲಸಂಧನನ್ನು ಪ್ರಹರಿಸಿದನು. ಆಗ ಮಾಧವೋತ್ತಮನು ನಗುತ್ತಾ ಆಭರಣಗಳಿಂದ ಕೂಡಿದ್ದ ಜಲಸಂಧನ ಎರಡು ತೋಳುಗಳನ್ನೂ ಎರಡು ಕ್ಷುರಪ್ರಗಳಿಂದ ಕತ್ತರಿಸಿಬಿಟ್ಟನು. ಜಲಸಂಧನ ಪರಿಘೋಪಮ ಎರಡು ತೋಳುಗಳೂ ಪರ್ವತದ ಮೇಲಿಂದ ಜಾರಿಬಿದ್ದ ಐದು ಹೆಡೆಗಳುಳ್ಳ ಸರ್ಪಗಳಂತೆ

ಆನೆಯ ಮೇಲಿಂದ ವಸುಂಧರೆ ಧರೆಯ ಮೇಲೆ ಬಿದ್ದವು. ಅನಂತರ ಸಾತ್ಯಕಿಯು ಮೂರನೆಯ ಕ್ಷುರದಿಂದ ಮುತ್ತಿನಂಥಹ ಸುಂದರ ಹಲ್ಲುಗಳನ್ನು ಹೊಂದಿದ್ದ ಮನೋಹರ ಕರ್ಣಕುಂಡಲಗಳಿಂದ ಸಮಲಂಕೃತವಾಗಿದ್ದ ಜಲಸಂಧನ ವಿಶಾಲ ಶಿರಸ್ಸನ್ನು ಕತ್ತರಿಸಿದನು. ತಲೆ ಮತ್ತು ಬಾಹುಗಳು ಕೆಳಗೆ ಬೀಳಲು ಅತ್ಯಂತ ಭಯಂಕರವಾಗಿ ಕಾಣುತ್ತಿದ್ದ ಜಲಸಂಧನ ಕಬಂಧವು ಚಿಮ್ಮುತ್ತಿರುವ ರಕ್ತದಿಂದ ಆ ಮಹಾಗಜವನ್ನು ತೋಯಿಸಿತು. ಈ ರೀತಿ ಜಲಸಂಧನನ್ನು ಸಂಹರಿಸಿ ಸಾತ್ವತನು ತ್ವರೆಮಾಡಿ ಆನೆಯ ಭುಜದ ಮೇಲಿಂದ ಅದರ ಅಂಬಾರಿಯನ್ನೂ ಕೆಳಗುರುಳಿಸಿದನು.

ಆದರೆ ರಕ್ತದಿಂದ ತೋಯ್ದು ಹೋಗಿದ್ದ ದೇಹದ ಜಲಸಂಧನ ಆನೆಯು ಅದಕ್ಕೆ ಕಟ್ಟಿದ್ದ ಆ ಶ್ರೇಷ್ಠ ಅಂಬಾರಿಯನ್ನು ಜೋತಾಡಿಸುತ್ತಾ ಎಳೆದು ಕೊಂಡೇ ಓಡಿಹೋಯಿತು. ಸಾತ್ವತನ ಬಾಣಗಳಿಂದ ಪುನಃ ಪೀಡಿತವಾದ ಆ ದೊಡ್ಡ ಆನೆಯು ಭಯಂಕರವಾಗಿ ಚೀತ್ಕಾರ ಮಾಡುತ್ತಾ ತನ್ನ ಕಡೆಯ ಸೇನೆಯನ್ನೇ ಪದಾಘಾತದಿಂದ ಮರ್ದಿಸುತ್ತಾ ಓಡಿಹೋಯಿತು. ವೃಷ್ಣಿಯರ ವೃಷಭನಿಂದ ಜಲಸಂಧನು ಹತನಾದುದನ್ನು ಕಂಡು ಕೌರವ ಸೇನೆಯಲ್ಲಿ ಮಹಾ ಹಾಹಾಕಾರವುಂಟಾಯಿತು. ಶತ್ರುವನ್ನು ಜಯಿಸುವುದರಲ್ಲಿ

ನಿರುತ್ಸಾಹರಾಗಿದ್ದ ಪಲಾಯನದಲ್ಲಿ ಉತ್ಸಾಹಿತರಾಗಿದ್ದ ಕೌರವ ಯೋಧರು ಎಲ್ಲ ದಿಕ್ಕುಗಳಲ್ಲಿ ಹಿಮ್ಮೆಟ್ಟಿ ಓಡಿಹೋದರು.

ಈ ಮಧ್ಯದಲ್ಲಿ ದ್ರೋಣನು ವೇಗವಾದ ಕುದುರೆಗಳ ಮೂಲಕ ಮಹಾರಥ ಸಾತ್ಯಕಿಯ ಸಮೀಪ ಬಂದನು. ಅಡಿಗಡಿಯೂ ಜಯಶಾಲಿಯಾಗುತ್ತಿದ್ದ ಶೈನೇಯನನ್ನು ನೋಡಿ ಕ್ರುದ್ಧರಾದ ಕುರುಪುಂಗವರು ದ್ರೋಣನನ್ನು ಸೇರಿಕೊಂಡು ಸಾತ್ಯಕಿಯನ್ನು ಸುತ್ತುವರೆದರು. ಆಗ ದ್ರೋಣನೊಂದಿಗಿದ್ದ ಕುರುಗಳ ಮತ್ತು  ಸಾತ್ವತನ ನಡುವೆ  ದೇವಾಸುರರ ಮಧ್ಯೆ ನಡೆದಂತೆ ಘೋರವಾದ ಯುದ್ಧವು ನಡೆಯಿತು.

## ಸಾತ್ಯಕಿಯಿಂದ ದುರ್ಯೋಧನ-ಕೃತವರ್ಮರ ಪರಾಜಯ

ಪ್ರಹಾರಕುಶಲರಾದ ಅವರೆಲ್ಲರೂ ಬಾಣಗಳ ಸಮೂಹಗಳನ್ನು ಪ್ರಯೋಗಿಸುತ್ತಾ ತ್ವರೆಮಾಡಿ ಯುಯುಧಾನನೊಡನೆ ಯುದ್ಧ ಮಾಡಿದರು. ಅವನನ್ನು ದ್ರೋಣನು ಎಪ್ಪತ್ತೇಳು ನಿಶಿತ ಬಾಣಗಳಿಂದ, ದುರ್ಮರ್ಷಣನು ಹನ್ನೆರಡು ಮತ್ತು ದುಃಸ್ಸಹನು ಹತ್ತು ಬಾಣಗಳಿಂದ ಹೊಡೆದರು. ಹಾಗೆಯೇ ವಿಕರ್ಣನೂ ಕೂಡ ರಣಹದ್ದಿನ ರೆಕ್ಕೆಗಳ ಮೂವತ್ತು ನಿಶಿತ ಕಂಕಪತ್ರಗಳಿಂದ ಅವನ ಎಡಪಾರ್ಶ್ವವನ್ನೂ ಮತ್ತು ವಕ್ಷಸ್ಥಳವನ್ನೂ ಪ್ರಹರಿಸಿದನು. ದುರ್ಮುಖನು ಹತ್ತು ಬಾಣಗಳಿಂದ,

ಹಾಗೆಯೇ ದುಃಶಾಸನನು ಎಂಟು ಬಾಣಗಳಿಂದ ಮತ್ತು ಚಿತ್ರಸೇನನು ಎರಡರಿಂದ ಶೈನೇಯನನ್ನು ಹೊಡೆದರು. ದುರ್ಯೋಧನನೂ ಮತ್ತು ಅನ್ಯ ಮಹಾರಥ ಶೂರರೂ ಮಾಧವನನ್ನು ಮಹಾ ಶರವರ್ಷದಿಂದ ಪೀಡಿಸಿದರು. ಕೌರವ ಪುತ್ರರಿಂದ ಎಲ್ಲ ಕಡೆಗಳಿಂದ ಹೀಗೆ ಹೊಡೆಯಲ್ಪಡುತ್ತಿದ್ದ ಶೈನೇಯನು ಅವರಿಗೆ ಪ್ರತಿಯಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಒಬ್ಬೊಬ್ಬರನ್ನೂ ಜಿಹ್ಮಗಗಳಿಂದ ಹೊಡೆದನು. ಭಾರದ್ವಾಜನನ್ನು ಮೂರು ಬಾಣಗಳಿಂದ, ದುಃಸ್ಸಹನನ್ನು ಒಂಭತ್ತರಿಂದ, ವಿಕರ್ಣನನ್ನು ಇಪ್ಪತ್ತೈದರಿಂದ, ಚಿತ್ರಸೇನನನ್ನು ಏಳರಿಂದ, ದುರ್ಮರ್ಷಣನನ್ನು ಹನ್ನೆರಡರಿಂದ, ವಿವಿಂಶತಿಯನ್ನು ನಾಲ್ಕರಿಂದ, ಸತ್ಯವ್ರತನನ್ನು ಒಂಭತ್ತರಿಂದ ಮತ್ತು ವಿಜಯನನ್ನು ಹತ್ತು ಶರಗಳಿಂದ ಹೊಡೆದನು. ಆಗ ತಕ್ಷಣವೇ ಮಹಾರಥಿ ಸಾತ್ಯಕಿಯು ಧನುಸ್ಸನ್ನು ಟೇಂಕರಿಸುತ್ತಾ ದುರ್ಯೋಧನನನ್ನು ಎದುರಿಸಿ ಶರಗಳಿಂದ ಗಾಢವಾಗಿ ಪ್ರಹರಿಸಿದನು. ಹೀಗೆ ಅವರಿಬ್ಬರ ನಡುವೆ ಯುದ್ಧವು ನಡೆಯಿತು. ಆ ಇಬ್ಬರು ಮಹಾರಥರು ತೀಕ್ಷ್ಣ ಶರಗಳನ್ನು ಅನುಸಂಧಾನ ಮಾಡುತ್ತಾ, ಪ್ರಹರಿಸುತ್ತಾ, ಸಮರದಲ್ಲಿ ಅನ್ಯೋನ್ಯರನ್ನು ಬಾಣಗಳಿಂದ ಮುಚ್ಚಿ ಅದೃಶ್ಯರನ್ನಾಗಿಸಿಬಿಟ್ಟರು. ಕುರುರಾಜನಿಂದ ಬಹಳವಾಗಿ ಗಾಯಗೊಂಡ ಸಾತ್ಯಕಿಯು ರಕ್ತವನ್ನು ಸುರಿಸುತ್ತಾ ಕೆಂಪು ರಸವನ್ನು ಸುರಿಸುವ ಚಂದನ ವೃಕ್ಷದಂತೆ ಶೋಭಿಸಿದನು. ಸಾತ್ವತನ ಬಾಣಗಳ

ಗುಂಪುಗಳಿಂದ ಗಾಯಗೊಂಡ ದುರ್ಯೋಧನನು ಸುವರ್ಣಮಯ ಶಿರೋಭೂಷಣವಿರುವ ಎತ್ತರವಾದ ಯೂಪಸ್ಥಂಭದಂತೆ ಶೋಭಿಸಿದನು.

ಮಾಧವನಾದರೋ ರಣದಲ್ಲಿ ಒಮ್ಮೆಲೇ ನಗುತ್ತಾ ಕುರುರಾಜನ ಧನುಸ್ಸನ್ನು ಕ್ಷುರಪ್ರದಿಂದ ಕತ್ತರಿಸಿದನು. ಕೂಡಲೇ ಧನುಸ್ಸನ್ನು ಕಳೆದುಕೊಂಡ ಅವನನ್ನು ಬಹಳ ಶರಗಳಿಂದ ಪ್ರಹರಿಸಿದನು. ಕ್ಷಿಪ್ರಕಾರೀ ಶತ್ರುವಿನ ಶರಗಳಿಂದ ತನ್ನ ಧನುಸ್ಸು ತುಂಡಾದುದನ್ನು ಮತ್ತು ಶತ್ರುವಿನ ವಿಜಯಲಕ್ಷಣವನ್ನು ದುರ್ಯೋಧನನು ಸಹಿಸಿಕೊಳ್ಳಲಿಲ್ಲ. ಆಗ ಅವನು ಹೇಮಪೃಷ್ಠದ ಇನ್ನೊಂದು ದುರಾಸದ ಧನುಸ್ಸನ್ನು ತೆಗೆದುಕೊಂಡು ತಕ್ಷಣವೇ ನೂರು ಸಾಯಕಗಳಿಂದ ಸಾತ್ಯಕಿಯನ್ನು ಹೊಡೆದನು. ಅವನಿಂದ ಅತಿಯಾಗಿ ಗಾಯಗೊಂಡ ಸಾತ್ಯಕಿಯು ಸಹಿಸಿಕೊಳ್ಳಲಾಗದೇ ದುರ್ಯೋಧನನನ್ನೂ ಬಹಳವಾಗಿ ಪೀಡಿಸಿದನು. ನೃಪತಿಯು ಪೀಡಿತನಾಗಿದ್ದುದನ್ನು ನೋಡಿ ದುರ್ಯೋಧನನ ಸಹೋದರರು ಸಾತ್ವತನನ್ನು ಶರವರ್ಷಗಳಿಂದ ಮುಚ್ಚಿಬಿಟ್ಟರು. ಅವರಿಂದ ಬಹಳವಾಗಿ ಗಾಯಗೊಂಡ ಸಾತ್ಯಕಿಯು ಒಬ್ಬೊಬ್ಬರನ್ನೂ ಐದೈದು ಮತ್ತು ಪುನಃ ಏಳೇಳರಿಂದ ಹೊಡೆದನು. ತ್ವರೆಮಾಡಿ ದುರ್ಯೋಧನನನ್ನೂ ಎಂಟು ಆಶುಗಗಳಿಂದ ಹೊಡೆದು

ನಗುತ್ತಾ ರಿಪುಭೀಷಣವಾಗಿದ್ದ ಅವನ ಧನುಸ್ಸನ್ನು ತುಂಡರಿಸಿದನು. ಅನಂತರ ಆನೆಯ ಚಿಹ್ನೆಯುಳ್ಳ ಮಣಿಮಯವಾದ ಅವನ ಧ್ವಜವನ್ನು ಶರಗಳಿಂದ ಕೆಳಗುರುಳಿಸಿದನು. ಆ ಮಹಾಯಶಸ್ವಿಯು ನಿಶಿತ ಶರಗಳಿಂದ ನಾಲ್ಕು ಕುದುರೆಗಳನ್ನೂ ಕೊಂದು ಕ್ಷುರಪ್ರದಿಂದ ಸಾರಥಿಯನ್ನೂ ಕೆಳಗುರುಳಿಸಿದನು. ಇದರ ಮಧ್ಯದಲ್ಲಿಯೇ ಮಹಾರಥ ಕುರುರಾಜನನ್ನು ಹೃಷ್ಟನಾದ ಸಾತ್ಯಕಿಯು ಅನೇಕ ಮರ್ಮಭೇದಿ ಬಾಣಗಳಿಂದ ಮುಚ್ಚಿಬಿಟ್ಟನು. ಶೈನೇಯನ ಉತ್ತಮ ಶರಗಳಿಂದ ಗಾಯಗೊಂಡ ದುರ್ಯೋಧನನು ತಕ್ಷಣವೇ ಓಡಿಹೋದನು. ಓಡಿಹೋಗುವಾಗ ಧನ್ವಿ ಚಿತ್ರಸೇನನ ರಥವನ್ನು ಏರಿದನು. ಆಕಾಶದಲ್ಲಿ ರಾಹುವಿನಿಂದ ಗ್ರಸ್ತನಾದ ಸೂರ್ಯನಂತೆ ಸಾತ್ಯಕಿಯಿಂದ ಗ್ರಸ್ತನಾದ ರಾಜನನ್ನು ನೋಡಿ ಹಾಹಾಕಾರವುಂಟಾಯಿತು.

ಆ ಮಹಾಶಬ್ಧವನ್ನು ಕೇಳಿ ಮಹಾರಥ ಕೃತವರ್ಮನು ಧನುಸ್ಸನ್ನು ಟೇಂಕರಿಸಿ ಅಲ್ಲಾಡಿಸುತ್ತಾ, ಕುದುರೆಗಳನ್ನು ಬೇಗ ಹೋಗುವಂತೆ ಚಪ್ಪರಿಸುತ್ತಾ, “ಬೇಗ ಹೋಗು!” ಎಂದು ಸಾರಥಿಯನ್ನು ಗದರಿಸುತ್ತಾ ತಕ್ಷಣವೇ ಮಾಧವನು ಎಲ್ಲಿದ್ದನೋ ಅಲ್ಲಿಗೆ ಧಾವಿಸಿ ಬಂದನು. ಬಾಯ್ದೆರೆದ ಅಂತಕನಂತೆಯೇ ತನ್ನ ಮೇಲೆ ಬೀಳಲು ಬರುತ್ತಿದ್ದ ಅವನನ್ನು ನೋಡಿ ಯುಯುಧಾನನು ಸಾರಥಿಗೆ ಹೀಗೆ ಹೇಳಿದನು:

“ಕೃತವರ್ಮನು ಕೈಯಲ್ಲಿ ಬಾಣವನ್ನು ಹಿಡಿದು ರಥದಲ್ಲಿ ಕುಳಿತು ತೀವ್ರ ವೇಗದಿಂದ ನನ್ನ ಕಡೆಗೇ ಬರುತ್ತಿದ್ದಾನೆ. ಅವನನ್ನು ನಮ್ಮ ರಥದೊಂದಿಗೆ ಎದುರಿಸು!”

ಅನಂತರ ವಿಧಿವತ್ತಾಗಿ ಸಜ್ಜುಗೊಳಿಸಿದ್ದ ವೇಗದ ಕುದುರೆಗಳಿಂದ ಯುಕ್ತವಾಗಿದ್ದ ರಥದಲ್ಲಿ ಕುಳಿತು ಸಾತ್ಯಕಿಯು ಧನುಷ್ಮಂತರಿಗೆ ಆದರ್ಶಪ್ರಾಯನಾಗಿದ್ದ ಭೋಜನ ಸಮೀಪಕ್ಕೆ ಹೋದನು. ಆಗ ಪರಮ ಕ್ರುದ್ಧರಾಗಿದ್ದ, ಪ್ರಜ್ವಲಿಸುವ ಅಗ್ನಿಗಳಂತೆಯೇ ಕಾಣುತ್ತಿದ್ದ, ವೇಗಶಾಲಿಗಳಾದ, ಆ ನರಶ್ರೇಷ್ಠ ಸಾತ್ಯಕಿ-ಕೃತವರ್ಮರಿಬ್ಬರೂ ಕೊಬ್ಬಿದ ಎರಡು ವ್ಯಾಘ್ರಗಳೋಪಾದಿಯಲ್ಲಿ ಯುದ್ಧಕ್ಕೆ ತೊಡಗಿದರು. ಕೃತವರ್ಮನಾದರೋ ಶೈನೇಯನನ್ನು ಇಪ್ಪತ್ತಾರು ಬಾಣಗಳಿಂದ ಪ್ರಹರಿಸಿ ಅವನ ಸಾರಥಿಯನ್ನು ಏಳು ನಿಶಿತ ಬಾಣಗಳಿಂದ ಹೊಡೆದನು. ಪುನಃ ಶ್ರೇಷ್ಠವಾದ ನಾಲ್ಕು ಬಾಣಗಳಿಂದ ಸಾತ್ವತನ ಸುಶಿಕ್ಷಿತವೂ ವಿನೀತವೂ ಆಗಿದ್ದ ಸಿಂಧುದೇಶದ ನಾಲ್ಕು ಕುದುರೆಗಳನ್ನೂ ಗಾಯಗೊಳಿಸಿದನು. ಬಂಗಾರದ ಧ್ವಜವುಳ್ಳ, ಬಂಗಾರದ ಅಂಗದವನ್ನು ತೊಟ್ಟಿದ್ದ, ಬಂಗಾರದ ಕವಚವನ್ನು ತೊಟ್ಟಿದ್ದ ಕೃತವರ್ಮನು ಬಂಗಾರದ ಬೆನ್ನುಳ್ಳ ಧನುಸ್ಸನ್ನು ಟೇಂಕರಿಸಿ ಬಂಗಾರದ ರೆಕ್ಕೆಗಳನ್ನು ಹೊಂದಿದ್ದ ಬಾಣಗಳಿಂದ ಸಾತ್ಯಕಿಯನ್ನು

ಮುಚ್ಚಿ ಬಿಟ್ಟನು. ಧನಂಜಯನನ್ನು ನೋಡುವ ಅವಸರದಲ್ಲಿದ್ದ ಶಿನಿಯ ಮೊಮ್ಮೊಗನು ಎಂಭತ್ತು ಬಾಣಗಳನ್ನು ಕೃತವರ್ಮನ ಮೇಲೆ ಪ್ರಯೋಗಿಸಿದನು. ಬಲಿಷ್ಠ ಶತ್ರುವಿನ ಬಾಣಗಳಿಂದ ಬಹಳವಾಗಿ ಗಾಯಗೊಂಡ ಕೃತವರ್ಮನು ಭೂಕಂಪವಾದಾಗ ಪರ್ವತವು ನಡುಗುವಂತೆ ತತ್ತರಿಸಿದನು. ಅದೇ ಸಮಯದಲ್ಲಿ ಸಾತ್ಯಕಿಯು ತಕ್ಷಣವೇ ಅರವತ್ಮೂರು ನಿಸಿತ ಬಾಣಗಳಿಂದ ಕೃತವರ್ಮನ ಕುದುರೆಗಳನ್ನೂ, ಏಳು ಬಾಣಗಳಿಂದ ಅವನ ಸಾರಥಿಯನ್ನೂ ಹೊಡೆದನು. ಅನಂತರ ಸಾತ್ಯಕಿಯು ಚಿನ್ನದ ರೆಕ್ಕೆಗಳನ್ನು ಹೊಂದಿದ್ದ ಕೋಪಗೊಂಡ ಸರ್ಪದಂತಿದ್ದ ಮಹಾಜ್ವಾಲೆಯಿಂದ ಯುಕ್ತವಾಗಿದ್ದ ವಿಶಿಖವನ್ನು ಹೂಡಿ ಕೃತವರ್ಮನ ಮೇಲೆ ಪ್ರಯೋಗಿಸಿದನು. ಯಮದಂಡ ಸದೃಶವಾಗಿದ್ದ ಆ ಅತ್ಯುಗ್ರ ಬಾಣವು ಸುವರ್ಣಮಯವೂ, ಚಿತ್ರಿತವೂ, ಪ್ರಕಾಶಮಾನವೂ ಆಗಿದ್ದ ಕೃತವರ್ಮನ ಕವಚವನ್ನು ಭೇದಿಸಿ, ಅವನ ಶರೀರವನ್ನು ಹೊಕ್ಕು, ರಕ್ತದಲ್ಲಿ ತೋಯ್ದು ಹೊರಬಂದು ಭೂಮಿಯ ಮೇಲೆ ಬಿದ್ದಿತು.

ಸಾತ್ವತನ ಬಾಣದಿಂದ ಗಾಯಗೊಂಡ ಕೃತವರ್ಮನ ದೇಹದಿಂದ ರಕ್ತವು ಧಾರಾಕಾರವಾಗಿ ಸುರಿಯತೊಡಗಿತು. ಧನುರ್ಬಾಣಗಳು ಶಕ್ತಿಗುಂದಿದ ಅವನ ಕೈಗಳಿಂದ ಜಾರಿದವು. ಅವನೂ ಕೂಡ ಉತ್ತಮ

ರಥದಲ್ಲಿ ಕುಸಿದು ಬಿದ್ದನು. ಅಮಿತವಿಕ್ರಮಿ ಸಾತ್ಯಕಿಯ ಬಾಣಗಳಿಂದ ಪೀಡಿತನಾದ ಕೃತವರ್ಮನು ಮಂಡಿಗಳನ್ನು ಊರಿದ್ದಂತೆಯೇ ಆಸನದಲ್ಲಿ ಪಕ್ಕಕ್ಕೆ ಬಿದ್ದನು. ಸಹಸ್ರಬಾಹು ಕಾರ್ತವೀರ್ಯಾರ್ಜುನನಿಗೆ ಸಮಾನನಾಗಿದ್ದ, ಸಾಗರೋಪಾದಿಯಲ್ಲಿ ಕದಲಿಸಲು ಅಶಕ್ಯನಾಗಿದ್ದ ಕೃತವರ್ಮನನ್ನು ಪರಾಜಯಗೊಳಿಸಿ ಸಾತ್ಯಕಿಯು ಅಲ್ಲಿಂದ ಹೊರಟುಬಿಟ್ಟನು. ಖಡ್ಗ-ಶಕ್ತಿ-ಧನುಸ್ಸುಗಳಿಂದ ತುಂಬಿಹೋಗಿದ್ದ, ಗಜ-ಅಶ್ವ-ರಥ ಸಂಕುಲಗಳಿಂದ ಕೂಡಿದ್ದ, ನೂರಾರು ಕ್ಷತ್ರಿಯರ್ಷಭರಿಂದ ಪ್ರವರ್ತಿತವಾದ, ಭಯಂಕರ ರಕ್ತದ ಕೋಡಿಯೇ ಹರಿದುಹೋಗುತ್ತಿದ್ದ ಆ ಸೇನೆಯ ಮಧ್ಯದಿಂದಲೇ ಎಲ್ಲರೂ ನೋಡುತ್ತಿದ್ದಂತೆಯೇ, ಇಂದ್ರನು ಅಸುರರ ಸೇನೆಯನ್ನು ಹೇಗೋ ಹಾಗೆ, ಶಿನಿಪುಂಗವನು ಹೊರಟುಹೋದನು. ಬಲವಾನ್ ಹಾರ್ದಿಕ್ಯನಾದರೋ ಚೇತರಿಸಿಕೊಂಡು ಮತ್ತೊಂದು ಮಹಾಧನುಸ್ಸನ್ನು ಕೈಗೆತ್ತಿಕೊಂಡು ಪಾಂಡವರು ಮುಂದೆ ಹೋಗದಂತೆ ತಡೆಯುತ್ತಾ ಅಲ್ಲಿಯೇ ನಿಂತನು.

## ದ್ರೋಣ-ಸಾತ್ಯಕಿಯರ ಯುದ್ಧ

ಶೈನೇಯನು ಅಲ್ಲಲ್ಲಿ ಸೇನೆಗಳನ್ನು ನಾಶಪಡಿಸುತ್ತಿರಲು ಭಾರದ್ವಾಜ ದ್ರೋಣನು ಮಹಾ ಶರವ್ರಾತಗಳಿಂದ ಅವನನ್ನು ಮುಚ್ಚಿದನು. ಆಗ ಎಲ್ಲ ಸೇನೆಗಳೂ ನೋಡುತ್ತಿದ್ದಂತೆ ಬಲಿ ಮತ್ತು ವಾಸವರ ನಡುವೆ

ನಡೆದ ಯುದ್ಧದಂಥಹ ಸಂಪ್ರಹಾರ ತುಮುಲ ಯುದ್ಧವು ದ್ರೋಣ ಮತ್ತು ಸಾತ್ಯಕಿಯರ ನಡುವೆ ನಡೆಯಿತು. ದ್ರೋಣನು ಶಿನಿಯ ಮೊಮ್ಮೊಗನ ಹಣೆಗೆ ಚಿತ್ರಿತವಾದ, ಲೋಹಮಯವಾದ, ಸರ್ಪಸದೃಶವಾಗಿದ್ದ ಮೂರು ಬಾಣಗಳನ್ನು ಪ್ರಹರಿಸಿದನು. ಹಣೆಗೆ ಚುಚ್ಚಿಕೊಂಡ ಆ ಜಿಃಮಗಗಳಿಂದ ಯುಯುಧಾನನು ತ್ರಿಶೃಂಗ ಪರ್ವತದಂತೆ ಶೋಭಿಸಿದನು. ಶತ್ರುವಿನ ದುರ್ಬಲ ಛಿದ್ರವನ್ನೇ ಹುಡುಕುತ್ತಿದ್ದ ದ್ರೋಣನು ಇಂದ್ರನ ವಜ್ರಾಯುಧಕ್ಕೆ ಸಮಾನವಾದ ಧ್ವನಿಯಿಂದ ಕೂಡಿದ ಇನ್ನೂ ಅನೇಕ ಬಾಣಗಳನ್ನು ಸಂಯುಗದಲ್ಲಿ ಸಾತ್ಯಕಿಯ ಮೇಲೆ ಸಮಯವರಿತು ಪ್ರಯೋಗಿಸಿದನು. ದ್ರೋಣನ ಧನುಸ್ಸಿನಿಂದ ಹೊರಟು ಬೀಳುತ್ತಿದ್ದ ಆ ಶರಗಳನ್ನು ಪರಮಾಸ್ತ್ರವಿದು ದಾಶಾರ್ಹನು ಪುಂಖಗಳುಳ್ಳ ಎರೆಡೆರಡು ಬಾಣಗಳಿಂದ ಕತ್ತರಿಸಿದನು. ಅವನ ಹಸ್ತಲಾಘವವನ್ನು ನೋಡಿದ ದ್ರೋಣನು ಜೋರಾಗಿ ನಕ್ಕು ತಕ್ಷಣವೇ ಶಿನಿಪುಂಗವನನ್ನು ಇಪ್ಪತ್ತು ಬಾಣಗಳಿಂದ ಹೊಡೆದನು. ಯುಯುಧಾನನ ಹಸ್ತಲಾಘವವನ್ನು ತನ್ನ ಹಸ್ತಲಾಘವದಿಂದ ಮೀರಿಸುತ್ತಾ ದ್ರೋಣನು ಪುನಃ ಐವತ್ತು ನಿಶಿತ ಬಾಣಗಳಿಂದ ಪ್ರಹರಿಸಿದನು. ಕ್ರುದ್ಧ ಮಹಾಸರ್ಪಗಳು ಹುತ್ತದಿಂದ ಹೇಗೆ ಒಂದೊಂದಾಗಿ ಹೊರಬರುತ್ತವೆಯೋ ಹಾಗೆ ದ್ರೋಣನ ರಥದಿಂದ ದೇಹವನ್ನು ಸೀಳಬಲ್ಲ ಬಾಣಗಳು ಹೊರಬರುತ್ತಿದ್ದವು. ಅದೇ

ರೀತಿಯಲ್ಲಿ ಯುಯುಧಾನನು ಸೃಷ್ಟಿಸಿದ ನೂರಾರು ಸಾವಿರಾರು ರಕ್ತವನ್ನು ಕುಡಿಯುವ ಶರಗಳು ದ್ರೋಣನ ರಥವನ್ನು ಮುತ್ತಿದವು.

ದ್ವಿಜಮುಖ್ಯ ದ್ರೋಣ ಮತ್ತು ಸಾತ್ವತ ಇವರಿಬ್ಬರು ನರರ್ಷಭರ ನಡುವೆ ಹಸ್ತ ಲಾಘವದಲ್ಲಿ ಯಾವ ರೀತಿಯ ವ್ಯತ್ಯಾಸವೂ ಕಾಣುತ್ತಿರಲಿಲ್ಲ. ಸಾತ್ಯಕಿಯು ದ್ರೋಣನನ್ನು ಒಂಭತ್ತು ನತಪರ್ವಗಳಿಂದ ಹೊಡೆದನು. ಮತ್ತು ಅತ್ಯಂತ ಕ್ರುದ್ಧನಾಗಿ ಭಾರದ್ವಾಜನು ನೋಡುತ್ತಿದ್ದಂತೆಯೇ ನೂರು ನಿಶಿತ ಶರಗಳಿಂದ ಅವನ ಧ್ವಜವನ್ನೂ ಸಾರಥಿಯನ್ನೂ ಹೊಡೆದನು. ಯುಯುಧಾನನ ಹಸ್ತಲಾಘವವನ್ನು ಕಂಡು ಮಹಾರಥ ದ್ರೋಣನು ಸಾತ್ಯಕಿಯನ್ನು ಎಪ್ಪತ್ತು ಬಾಣಗಳಿಂದ ಹೊಡೆದು, ಮೂರರಿಂದ ಕುದುರೆಗಳನ್ನೂ, ಒಂದರಿಂದ ಮಾಧವನ ರಥದಲ್ಲಿದ್ದ ಧ್ವಜವನ್ನೂ ಹೊಡೆದನು. ದ್ರೋಣನು ಚಿನ್ನದ ರೆಕ್ಕೆಗಳಿದ್ದ ಇನ್ನೊಂದು ಭಲ್ಲದಿಂದ ಮಾಧವನ ಧನುಸ್ಸನ್ನು ತುಂಡರಿಸಿದನು. ಆಗ ಸಾತ್ಯಕಿಯಾದರೋ ಕ್ರುದ್ಧನಾಗಿ ಧನುಸ್ಸನ್ನು ಬಿಸುಟು ಮಹಾ ಗದೆಯೊಂದನ್ನು ಹಿಡಿದು ಭಾರದ್ವಾಜನ ಮೇಲೆ ಎಸೆದನು. ತನ್ನ ಮೇಲೆ ರಭಸದಿಂದ ಬರುತ್ತಿದ್ದ ಆ ಚಿನ್ನದ ಪಟ್ಟಿಯಿಂದ ಸುತ್ತಲ್ಪಟ್ಟಿದ್ದ ಲೋಹಮಯ ಗದೆಯನ್ನು ದ್ರೋಣನು ಅನೇಕ ಬಹುರೂಪೀ ಬಾಣಗಳಿಂದ ನಿರಸನಗೊಳಿಸಿದನು. ಅನಂತರ

ಸತ್ಯವಿಕ್ರಮಿ ಸಾತ್ಯಕಿಯು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ವೀರ ಭಾರದ್ವಾಜನನ್ನು ಅನೇಕ ಶಿಲಾಶಿತ ಶರಗಳಿಂದ ಗಾಯಗೊಳಿಸಿದನು. ದ್ರೋಣನನ್ನು ಹಾಗೆ ಗಾಯಗೊಳಿಸಿ ಸಾತ್ಯಕಿಯು ಸಿಂಹನಾದಗೈದನು. ದ್ರೋಣನು ಅವನ ಆ ಕೃತ್ಯವನ್ನು ಸಹಿಸಿಕೊಳ್ಳಲಿಲ್ಲ. ಚಿನ್ನದ ದಂಡದಿಂದ ಕೂಡಿದ್ದ ಲೋಹಮಯ ಶಕ್ತ್ಯಾಯುಧವನ್ನೆತ್ತಿಕೊಂಡು ಮಾಧವನ ರಥದ ಮೇಲೆ ರಭಸದಿಂದ ಎಸೆದನು. ಕಾಲನಂತಿದ್ದ ಆ ಶಕ್ತಿಯು ಶೈನೇಯನನ್ನು ಮುಟ್ಟದೇ ಅವನ ರಥವನ್ನು ಮಾತ್ರ ಭೇದಿಸಿ ಉಗ್ರ ದಾರುಣ ಸ್ವರದೊಂದಿಗೆ ಭೂಮಿಯ ಮೇಲೆ ಬಿದ್ದಿತು. ಆಗ ಶಿನಿಯ ಮೊಮ್ಮಗನು ದ್ರೋಣನನ್ನು ಪತ್ರಿಗಳಿಂದ ಹೊಡೆದನು. ಅದು ದ್ರೋಣನ ಬಲಭುಜಕ್ಕೆ ತಾಗಿ ಪೀಡೆಯನ್ನುಂಟುಮಾಡಿತು. ದ್ರೋಣನಾದರೋ ಮಾಧವನ ಮಹಾ ಧನುಸ್ಸನ್ನು ಅರ್ಧಚಂದ್ರದಿಂದ ತುಂಡರಿಸಿ ರಥಶಕ್ತಿಯಿಂದ ಸಾರಥಿಯನ್ನು ಹೊಡೆದನು.

ರಥಶಕ್ತಿಯಿಂದ ಪ್ರಹೃತನಾದ ಸಾರಥಿಯು ಮೂರ್ಛೆಹೊಂದಿ ಮುಹೂರ್ತಕಾಲ ರಥಪೀಠದ ಹಿಂಬದಿಯಲ್ಲಿ ಸುಮ್ಮನೇ ಕುಳಿತುಕೊಂಡನು. ಆಗ ಸಾತ್ಯಕಿಯು ಅಲ್ಲಿ ಅತಿಮಾನುಷ ಕರ್ಮವನ್ನು ಮಾಡಿದನು. ಸ್ವಯಂ ತಾನೇ ಕುದುರೆಗಳ ಕಡಿವಾಣಗಳನ್ನು ಹಿಡಿದುಕೊಂಡು ದ್ರೋಣನೊಂದಿಗೆ ಯುದ್ಧಮಾಡಿದನು. ಮಹಾರಥ

ಯುಯುಧಾನನು ಬ್ರಾಹ್ಮಣನನ್ನು ನೂರು ಬಾಣಗಳಿಂದ ಹೊಡೆದನು. ಆಗ ದ್ರೋಣನು ಅವನ ಮೇಲೆ ಐದು ಬಾಣಗಳನ್ನು ಪ್ರಯೋಗಿಸಲು ಅವು ಅವನ ಕವಚವನ್ನು ಕತ್ತರಿಸಿ ರಕ್ತವನ್ನು ಕುಡಿದವು. ಘೋರ ಶರಗಳಿಂದ ಗಾಯಗೊಂಡ ಸಾತ್ಯಕಿಯು ತುಂಬಾ ಕ್ರುದ್ಧನಾದನು. ಆ ವೀರನು ದ್ರೋಣನ ರಥದ ಮೇಲೆ ಸಾಯಕಗಳ ಮಳೆಯನ್ನೇ ಸುರಿಸಿದನು. ಅನಂತರ ಅವನು ಒಂದೇ ಬಾಣದಿಂದ ಮಹಾತ್ಮ ದ್ರೋಣನ ಸಾರಥಿಯನ್ನು ಹೊಡೆದು ನೆಲಕ್ಕೆ ಬೀಳಿಸಿದನು. ಸೂತನು ಹತನಾಗಲು ಬಾಣಗಳಿಂದ ಹೊಡೆದು ಕುದುರೆಗಳನ್ನು ಓಡಿಸಿದನು. ಬೆಳ್ಳಿಯಂತೆ ಹೊಳೆಯುತ್ತಿದ್ದ ಆ ರಥವು ರಣದಲ್ಲಿ ಸಹಸ್ರಾರು ಸುತ್ತುಗಳನ್ನು ಹಾಕಿ, ಸೂರ್ಯನಂತೆ ಪ್ರಕಾಶಿಸಿತು. ಆಗ ಅಲ್ಲಿದ್ದ ರಾಜರು ಮತ್ತು ರಾಜಪುತ್ರರು ಎಲ್ಲರೂ “ಓಡಿಹೋಗಿ! ಹಿಡಿಯಿರಿ! ದ್ರೋಣನ ಕುದುರೆಗಳನ್ನು ತಡೆಯಿರಿ!” ಎಂದು ಕೂಗಿಕೊಳ್ಳುತ್ತಿದ್ದರು.

ಯುದ್ಧದಲ್ಲಿ ಸಾತ್ಯಕಿಯನ್ನು ಅಲ್ಲಿಯೇ ಬಿಟ್ಟು ಮಹಾರಥರೆಲ್ಲರೂ ಕೂಡಲೇ ದ್ರೋಣನ ರಥವು ಹೋಗುತ್ತಿದ್ದ ಕಡೆಗೇ ತಮ್ಮ ರಥಗಳನ್ನೂ ಓಡಿಸಿದರು. ಸಾತ್ವತನ ಶರಗಳಿಂದ ಪೀಡಿತವಾಗಿದ್ದ ಕೌರವ ಸೈನ್ಯ ಸಮಾಕುಲವು ಅವರು ಓಡಿ ಹೋಗುತ್ತಿದ್ದುದನ್ನು ನೋಡಿ ಪುನಃ ಪ್ರಭಗ್ನವಾಯಿತು. ವೃಷ್ಣಿಯ ಶರಗಳಿಂದ ಪೀಡಿತಗೊಂಡು

ವಾಯುವೇಗದಿಂದ ಓಡಿ ಹೋಗುತ್ತಿದ್ದ ಕುದುರೆಗಳಿಂದಲೇ ಪುನಃ ಹಿಂದಕ್ಕೆ ಕರತರಲ್ಪಟ್ಟ ದ್ರೋಣನು ವ್ಯೂಹದ ಮಹಾದ್ವಾರಕ್ಕೆ ಹೋಗಿ ಪುನಃ ಅಲ್ಲಿಯೇ ವ್ಯವಸ್ಥಿತನಾದನು. ಪಾಂಡವರು ಮತ್ತು ಪಾಂಚಾಲರಿಂದ ತನ್ನ ವ್ಯೂಹವು ಭಗ್ನವಾಗುತ್ತಿರುವುದನ್ನು ನೋಡಿ ವೀರ್ಯವಾನ್ ದ್ರೋಣನು ಶೈನೇಯನನ್ನು ಹಿಂಬಾಲಿಸಿ ಹೋಗದೇ ವ್ಯೂಹದ ರಕ್ಷಣೆಯಲ್ಲಿಯೇ ನಿರತನಾದನು. ಕೋಪವೆಂಬ ಕಟ್ಟಿಗೆಯಿಂದ ಪ್ರಜ್ವಲಿಸುತ್ತಿದ್ದ ದ್ರೋಣನು ಪಾಂಡು ಪಾಂಚಾಲ ಯೋಧರನ್ನು ದಹಿಸಿಬಿಡುವನೋ ಎಂಬಂತೆ ವ್ಯೂಹದ ಅಗ್ರಭಾಗದಲ್ಲಿ ನಿಂತು ಪ್ರಳಯಕಾಲದ ಸೂರ್ಯನಂತೆ ಪ್ರಕಾಶಿಸುತ್ತಿದ್ದನು.

## ಸಾತ್ಯಕಿಯಿಂದ ಸುದರ್ಶನನ ವಧೆ

ದ್ರೋಣ ಮತ್ತು ಹಾರ್ದಿಕ್ಯನೇ ಮೊದಲಾದ ಕೌರವರನ್ನು ಜಯಿಸಿ ಪುರುಷಪ್ರವೀರ ಶಿನಿಪ್ರವೀರನು ನಗುತ್ತಾ ಸೂತನಿಗೆ ಈ ಮಾತನ್ನಾಡಿದನು:

> “ಸೂತ! ಈ ಶತ್ರುಗಳ ಸಂಹಾರದಲ್ಲಿ ನಾವು ನಿಮಿತ್ತಮಾತ್ರ. ಕೇಶವ-ಫಲ್ಗುನರಿಂದ ಇವರು ಈಗಾಗಲೇ ಸುಡಲ್ಪಟ್ಟಿದ್ದಾರೆ. ಸುರೇಶಾತ್ಮಜ ಅರ್ಜುನನಿಂದ ಕೊಲ್ಲಲ್ಪಟ್ಟ ಇವರನ್ನು ನಾವು ಈಗ ನೆಪಮಾತ್ರಕ್ಕೆ ಕೊಲ್ಲುತ್ತಿದ್ದೇವೆ.”

ಹೀಗೆ ಹೇಳಿ ಅಗ್ರ ಧನುರ್ಧರ ಶಿನಿಪುಂಗವನು ಎಲ್ಲಕಡೆ ಶರಗಳನ್ನು ಎರಚುತ್ತಾ ಗಿಡುಗವು ಮಾಂಸದ ಮೇಲೆ ಎರಗುವಂತೆ ಶತ್ರುಗಳ ಮೇಳೆ ಎರಗಿದನು. ಚಂದ್ರ ಮತ್ತು ಶಂಖದ ಬಣ್ಣಗಳ ಕುದುರೆಗಳೊಂದಿಗೆ ಕುರುಸೇನೆಯನ್ನು ಪ್ರವೇಶಿಸುತ್ತಿದ್ದ ಆ ಪುರುಷಪ್ರವೀರ, ಸೂರ್ಯನ ರಶ್ಮಿಯಂತೆ ಬೆಳಗುತ್ತಿದ್ದ ನರಾಗ್ರ್ಯನನ್ನು ಸುತ್ತಲೂ ಯಾರೂ ತಡೆಯಲಾರದಾದರು. ಸಹಿಸಲು ಅಸಾಧ್ಯವಾದ ಪರಾಕ್ರಮವನ್ನು ಹೊಂದಿದ್ದ, ಮಹಾಬಲಶಾಲಿಯಾಗಿದ್ದ, ಸಹಸ್ರನೇತ್ರ ಇಂದ್ರನ ಸಮಾನ ಪರಾಕ್ರಮವನ್ನು ಹೊಂದಿದ್ದ, ಮೋಡಗಳಿಲ್ಲದ ಶರತ್ಕಾಲದ ಆಕಾಶದಲ್ಲಿ ಬೆಳಗುವ ಸೂರ್ಯನ ತೇಜಸ್ಸಿಗೆ ಸಮಾನ ತೇಜಸ್ಸನ್ನು ಹೊಂದಿದ್ದ ಸಾತ್ಯಕಿಯನ್ನು ಸಂಘಟಿತರಾದ ಕೌರವರ ಎಲ್ಲ ಸೈನಿಕರೂ ತಡೆಯಲಾರದೇ ಹೋದರು. ಆಗ ಕ್ರೋಧಪೂರ್ಣನಾಗಿದ್ದ, ವಿಚಿತ್ರರೀತಿಯಲ್ಲಿ ಯುದ್ಧಮಾಡುತ್ತಿದ್ದ, ಶರಾಸನೀ, ಕಾಂಚನ ಕವಚವನ್ನು ಧರಿಸಿದ್ದ ಸುದರ್ಶನನು ತನ್ನ ಕಡೆಗೆ ಬರುತ್ತಿದ್ದ ಸಾತ್ಯಕಿಯನ್ನು ನಗುತ್ತಾ ಬಲಪೂರ್ವಕವಾಗಿ ತಡೆದನು. ಅವರಿಬ್ಬರ ನಡುವೆ ಸುದಾರುಣವಾದ ಪ್ರಹಾರಗಳುಳ್ಳ ಯುದ್ಧವು ನಡೆಯಿತು. ಅವರ ನಡುವಿನ ಈ ಯುದ್ಧವನ್ನು ವೃತ್ರ-ಇಂದ್ರರ ಯುದ್ಧವನ್ನು ಅಮರಗಣಗಳು ಹೇಗೋ ಹಾಗೆ ಕೌರವರು ಮತ್ತು ಸೋಮಕರು ಪ್ರಶಂಸಿಸುತ್ತಾ ನೋಡತೊಡಗಿದರು.

ಸುತೀಕ್ಷ್ಣವಾದ ನೂರಾರು ಬಾಣಗಳಿಂದ ಸುದರ್ಶನನು ಸಾತ್ವತಮುಖ್ಯನನ್ನು ಹೊಡೆದನು. ಆದರೆ ಅವು ಬರುವುದರೊಳಗೇ ಶಿನಿಪುಂಗವನು ಅವುಗಳನ್ನು ಬಾಣಗಳಿಂದ ತುಂಡರಿಸಿ ಬಿಡುತ್ತಿದ್ದನು. ಹಾಗೆಯೇ ಶಕ್ರಪ್ರತಿಮನಾದ ಸಾತ್ಯಕಿಯೂ ಕೂಡ ಸುದರ್ಶನನ ಮೇಲೆ ಯಾವ ಸಾಯಕಗಳನ್ನು ಪ್ರಯೋಗಿಸುತ್ತಿದ್ದನೋ ಅವುಗಳನ್ನು ರಥದಲ್ಲಿ ಕುಳಿತಿದ್ದ ಸುದರ್ಶನನು ಉತ್ತಮ ಶರಗಳಿಂದ ಎರಡು-ಮೂರು ಭಾಗಗಳಾಗಿ ಕತ್ತರಿಸುತ್ತಿದ್ದನು. ಸಾತ್ಯಕಿಯ ಬಾಣಗಳ ವೇಗದಿಂದ ತಾನು ಬಿಡುತ್ತಿದ್ದ ಬಾಣಗಳು ವ್ಯರ್ಥವಾಗುತ್ತಿರುವುದನ್ನು ಕಂಡು ಸುದರ್ಶನನು ರೋಷದಿಂದ ಸಾತ್ಯಕಿಯನ್ನು ದಹಿಸಿಬಿಡುವನೋ ಎನ್ನುವಂತೆ ಆವೇಶಪೂರ್ಣನಾಗಿ ಸುವರ್ಣ ರೇಖೆಗಳಿಂದ ಚಿತ್ರಿತವಾಗಿದ್ದ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದನು. ಪುನಃ ಸುದರ್ಶನನು ಅಗ್ನಿಸ್ವರೂಪದ ಸುಂದರ ಪುಂಖಗಳನ್ನು ಹೊಂದಿದ್ದ ಮೂರು ನಿಶಿತ ಬಾಣಗಳನ್ನು ಕಿವಿಯ ವರೆಗೂ ಸೆಳೆದು ಬಿಡಲು, ಅವು ಸಾತ್ಯಕಿಯ ದೇಹಾವರಣವನ್ನು ಭೇದಿಸಿ ಅವನ ಶರೀರವನ್ನು ಹೊಕ್ಕವು. ಹಾಗೆಯೇ ಸುದರ್ಶನನು ನಗುತ್ತಾ ಪ್ರಜ್ವಲಿಸುತ್ತಿದ್ದ ನಾಲ್ಕು ಬಾಣಗಳನ್ನು ಅನುಸಂಧಾನ ಮಾಡಿ ಬೆಳ್ಳಿಯಂತೆ ಪ್ರಕಾಶಿಸುತ್ತಿದ್ದ ನಾಲ್ಕು ಕುದುರೆಗಳನ್ನೂ ಬಲಪೂರ್ವಕವಾಗಿ ಪ್ರಹರಿಸಿದನು. ಹೀಗೆ ಅವನಿಂದ ಪ್ರಹರಿಸಲ್ಪಟ್ಟ ಶಿನಿಯ ಮೊಮ್ಮಗನು ತೀಕ್ಷ್ಣ ಬಾಣಗಳಿಂದ

ಸುದರ್ಶನನ ಕುದುರೆಗಳನ್ನು ಸಂಹರಿಸಿ ಸಿಂಹನಾದಗೈದನು. ಕೂಡಲೇ ವಜ್ರಾಶನಿಸನ್ನಿಭ ಭಲ್ಲದಿಂದ ಅವನ ಸೂತನ ಶಿರವನ್ನು ಕತ್ತರಿಸಿ ಶಿನಿಪ್ರವೀರನು ಕ್ಷುರದಿಂದ ಸುದರ್ಶನನ ಶಿರವನ್ನು ತುಂಡರಿಸಿ ಗಹಗಹಿಸಿ ನಕ್ಕನು. ಹಿಂದೆ ವಜ್ರಧರನು ನಗುತ್ತಾ ರಣದಲ್ಲಿ ಬಲಸ್ಯ ಶಿರವನ್ನು ಹೇಗೋ ಹಾಗೆ ಸಾತ್ಯಕಿಯು ಸುದರ್ಶನನ ಕುಂಡಲಯುಕ್ತವಾದ, ಪೂರ್ಣಶಶಿಯ ಪ್ರಕಾಶವನ್ನು ಹೊಂದಿದ್ದ, ಭ್ರಾಜಿಷ್ಣು ವಕ್ತ್ರವನ್ನು ಅವನ ದೇಹದಿಂದ ಬೇರ್ಪಡಿಸಿದನು.

ರಣದಲ್ಲಿ ಆ ರಾಜಪುತ್ರ, ರಾಜನ ಮೊಮ್ಮಗನನ್ನು ಸಂಹರಿಸಿ ಸಾತ್ಯಕಿಯು ಪರಮ ಸಂತೋಷದಿಂದ ವಿರಾಜಿಸಿದನು. ಲೋಕವನ್ನೇ ಆಶ್ಚರ್ಯಚಕಿತವನ್ನಾಗಿ ಮಾಡುವ ಇಚ್ಛೆಯುಳ್ಳ ನರವೀರ ಸಾತ್ಯಕಿಯು ಉತ್ತಮ ಕುದುರೆಗಳೊಂದಿಗೆ ಅರ್ಜುನನು ಯಾವ ಮಾರ್ಗದಲ್ಲಿ ಹೋಗಿದ್ದನೋ ಅದೇ ಮಾರ್ಗದ ಮೂಲಕವಾಗಿ ತಡೆಯಲು ಬರುತ್ತಿದ್ದ ಕೌರವ ಸೇನೆಗಳನ್ನು ನಿವಾರಿಸುತ್ತಾ ಮುಂದುವರೆದನು. ವಿಸ್ಮಯನೀಯರಲ್ಲಿ ಅಗ್ರ್ಯನಾದ ಸಾತ್ಯಕಿಯನ್ನು ಯೋಧಶ್ರೇಷ್ಠರು ಒಟ್ಟಾಗಿ ಪ್ರಶಂಸಿಸಿದರು. ಅವನು ತನ್ನ ಮಾರ್ಗದಲ್ಲಿ ಗೋಚರಿಸುತ್ತಿದ್ದ ಅರಿಗಳನ್ನು ಅಗ್ನಿಯಂತಿದ್ದ ತನ್ನ ಬಾಣಗಳಿಂದ ದಹಿಸಿಬಿಡುತ್ತಿದ್ದನು.

## ಸಾತ್ಯಕಿಯಿಂದ ಯವನರ ಪರಾಜಯ

ಸಾತ್ಯಕಿಯು ಸುದರ್ಶನನನ್ನು ಸಂಹರಿಸಿ ತನ್ನ ಸಾರಥಿಗೆ ಹೇಳಿದನು:

"ಅಯ್ಯಾ! ರಥಾಶ್ವಗಜಸೈನಿಕರಿಂದ ಸಮೃದ್ಧವಾಗಿದ್ದ, ಬಾಣ-ಶಕ್ತ್ಯಾಯುಧಗಳೇ ಅಲೆಗಳಿಂತಿದ್ದ, ಖಡ್ಗಗಳೇ ಮತ್ಸ್ಯಗಳಂತಿದ್ದ, ಗದೆಗಳೇ ಮೊಸಳೆಗಳಂತಿದ್ದ, ಶೂರಯೋಧರ ಕೂಗೇ ಭೋರ್ಗರೆತವಾಗಿದ್ದ, ಪ್ರಾಣವನ್ನೇ ಅಪಹರಿಸಿಬಿಡುವ, ರೌದ್ರವಾದ, ರಣವಾದ್ಯಗಳಿಂದ ನಿನಾದಿತವಾಗಿದ್ದ, ಯೋಧರಿಗೆ ಸುಖಸ್ಪರ್ಷಿಯಾಗಿರದ, ದುರ್ಧರ್ಷವಾದ, ಜಯಿಸಲಸಾಧ್ಯವಾ, ಜಲಸಂಧನ ಸೈನ್ಯದ ಉಪಸ್ಥಿತಿಯಲ್ಲಿದ್ದ ದೈತ್ಯರಿಂದ ಆವೃತವಾದ ದ್ರೋಣನ ಮಹಾಸೇನೆಯನ್ನು ನಾವು ದಾಟಿ ಬಂದಿದ್ದೇವೆ. ಇನ್ನೂ ಜಯಿಸದೇ ಇರುವ ಇನ್ನೊಂದು ಸೈನ್ಯವಿದೆ. ಆದರೆ ಆ ಸೈನ್ಯದ ವಿಷಯದಲ್ಲಿ ಗಾಬರಿಯಾಗಬೇಕಾದುದು ಏನೂ ಇಲ್ಲ. ಸ್ವಲ್ಪವೇ ನೀರಿನಿಂದ ಕೂಡಿದ ಚಿಕ್ಕ ನದಿಯಂತೆ ಸುಲಭವಾಗಿ ಅದನ್ನು ದಾಟಬಹುದು. ದುರ್ಧರನಾದ ದ್ರೋಣನನ್ನು ಸೈನ್ಯಸಮೇತ ಸೋಲಿಸಿ ನಮಗೆ ಸವ್ಯಸಾಚಿಯು ಕೈಗೆ ಸಿಕ್ಕಿದ ಹಾಗೆಯೇ! ಯೋಧಶ್ರೇಷ್ಠ ಹಾರ್ದಿಕ್ಯನನ್ನೂ ಸೋಲಿಸಿದ ನಂತರ ನಮಗೆ ಧನಂಜಯನು ಸಿಕ್ಕಿದ

ಹಾಗೆಯೇ! ಗ್ರೀಷ್ಮ ಋತುವಿನಲ್ಲಿ ಉರಿಯುತ್ತಿರುವ ಅಗ್ನಿಯ ಮುಂದೆ ಒಣಹುಲ್ಲು ಹೇಗೋ ಹಾಗೆ ಈ ಅನೇಕ ಸೇನೆಗಳನ್ನು ನೋಡಿ ನನಗೆ ಕಷ್ಟವಾಗುತ್ತದೆ ಎಂದು ಅನ್ನಿಸುವುದೇ ಇಲ್ಲ. ಪಾಂಡವಮುಖ್ಯ ಕಿರೀಟಿಯು ಕೆಳಗುರುಳಿಸಿರುವ ಪದಾತಿ, ಅಶ್ವ, ರಥ, ಆನೆಗಳ ಸಮೂಹಗಳಿಂದ ರಣಭೂಮಿಯು ಏರಿಳಿತಗಳಿಂದ ಕೂಡಿರುವುದನ್ನು ನೋಡು! ಕೃಷ್ಣನ ಸಾರಥ್ಯದಲ್ಲಿರುವ ಶ್ವೇತಾಶ್ವನು ಹತ್ತಿರದಲ್ಲಿಯೇ ಇರುವನೆಂದು ತೋರುತ್ತದೆ. ಆ ಅಮಿತತೇಜಸ್ವಿಯ ಗಾಂಡಿವದ ಶಬ್ಧವೂ ಕೇಳಿ ಬರುತ್ತಿದೆ. ನನಗೆ ತೋರುತ್ತಿರುವ ನಿಮಿತ್ತಗಳ ಪ್ರಕಾರ ಸೂರ್ಯನು ಅಸ್ತಂಗತನಾಗುವುದರೊಳಗೇ ಅರ್ಜುನನು ಸೈಂಧವನನ್ನು ಸಂಹರಿಸುತ್ತಾನೆ! ನಿಧಾನವಾಗಿ ಕುದುರೆಗಳಿಗೆ ಸ್ವಲ್ಪ ವಿಶ್ರಾಂತಿಯನ್ನಿತ್ತು ಸುಯೋಧನನ ನಾಯಕತ್ವದಲ್ಲಿ ಕವಚಗಳನ್ನು ಧರಿಸಿ ನಿಂತಿರುವ ಶತ್ರುಸೇನೆಯ ಕಡೆಗೆ ಹೋಗು. ಕ್ರೂರಕರ್ಮಗಳನ್ನೆಸಗುವ ಯುದ್ಧದುರ್ಮದರಾದ ಕವಚಗಳನ್ನು ಧರಿಸಿರುವ ಕಾಂಬೋಜರು, ಧನುಸ್ಸು-ಬಾಣಗಳನ್ನು ಧರಿಸಿರುವ ಪ್ರಹಾರಿಗಳಾದ ಯವನರು, ಶಕರು, ಕಿರಾತರು, ದರದರು, ಬರ್ಬರರು, ತಾಮ್ರಲಿಪ್ತಕರು ಮತ್ತು ಇನ್ನೂ ಇತರ ಅನೇಕ ಮ್ಲೇಚ್ಛರು ಎಲ್ಲರೂ ವಿವಿಧ

ಆಯುಧಗಳನ್ನು ಹಿಡಿದು ಸಮರಾರ್ಥಿಗಳಾಗಿ ನನ್ನನ್ನೇ ಎದುರಾಗಿಸಿಕೊಂಡು ನಿಂತಿದ್ದಾರೆ. ರಥ-ಆನೆ-ಕುದುರೆ ಪತ್ತಿಗಳಿಂದ ಕೂಡಿದ ಇವರನ್ನು ಯುದ್ಧದಲ್ಲಿ ಸಂಹರಿಸಿದ ನಂತರ ಮಹಾಘೋರವಾದ ಅತ್ಯಂತ ದರ್ಗಮವಾದ ಸಂಕಟದಿಂದ ಪಾರಾದೆವೆಂದು ಭಾವಿಸು!"

ಸೂತನು ಹೇಳಿದನು:

"ವಾರ್ಷ್ಣೇಯ! ಕ್ರುದ್ಧನಾದ ಪರಶುರಾಮನೇ ಯುದ್ಧದಲ್ಲಿ ನಿನ್ನ ಎದುರಾದರೂ ನಾನು ಗಾಬರಿಗೊಳ್ಳುವವನಲ್ಲ! ರಥಿಗಳಲ್ಲಿ ಶ್ರೇಷ್ಠರಾದ ದ್ರೋಣ ಅಥವಾ ಕೃಪ ಅಥವಾ ಮದ್ರೇಶ್ವರ ಶಲ್ಯ ಇವರುಗಳೇ ನಿನ್ನೊಡನೆ ಯುದ್ಧಮಾಡಲು ಬಂದರೂ ನಿನ್ನ ಆಶ್ರಯವಿರುವ ನನಗೆ ಭಯವೆಂಬುದಿಲ್ಲ. ಯುದ್ಧದಲ್ಲಿ ನೀನು ಅನೇಕರನ್ನು ಸೋಲಿಸಿದ್ದೀಯೆ. ಹಿಂದೆ ಎಂದೂ ನನಗೆ ಯಾವರೀತಿಯ ಭಯವೂ ಆಗಿರಲಿಲ್ಲ. ಇನ್ನು ಗೋವುಗಳ ಹಿಂಡಿನಂತಿರುವ ಇವರನ್ನು ಎದುರಿಸಿ ಎತ್ತಣ ಭಯ? ನಿನ್ನನ್ನು ಯಾವ ಮಾರ್ಗದಿಂದ ಧನಂಜಯನಲ್ಲಿಗೆ ಕರೆದೊಯ್ಯಲಿ? ಇಂದು ನೀನು ಯಾರ ಮೇಲೆ ಕ್ರುದ್ಧನಾಗಿರುವೆ? ಯಾರ ಮೃತ್ಯುವು ಸನ್ನಿಹಿತವಾಗಿದೆ? ಯಾರ ಮನಸ್ಸು ಇಂದು

ಯಮಸದನಕ್ಕೆ ಹೋಗಲು ಉತ್ಸುಕಗೊಂಡಿದೆ? ಯುದ್ಧದಲ್ಲಿ ಕಾಲಾಂತಕಯಮನಂತಿರುವ ವಿಕ್ರಮಸಂಪನ್ನನಾದ ನಿನ್ನನ್ನು ನೋಡಿ ಯಾರುತಾನೇ ಪಲಾಯನಮಾಡುವವರಿದ್ದಾರೆ? ಮತ್ತು ಇಂದು ಯಾರು ವೈವಸ್ವತ ರಾಜ ಯಮನನ್ನು ಸ್ಮರಿಸಿಕೊಳ್ಳುತ್ತಿದ್ದಾರೆ?”

ಸಾತ್ಯಕಿಯು ಹೇಳಿದನು:

“ವಾಸವನು ದಾನವರನ್ನು ಹೇಗೋ ಹಾಗೆ ನಾನು ಇಂದು ಮುಂಡನಮಾಡಿಕೊಂಡಿರುವ ಕಾಂಬೋಜರನ್ನು ಸಂಹರಿಸಿ ನನ್ನ ಪ್ರತಿಜ್ಞೆಯನ್ನು ಪೂರೈಸಿಕೊಳ್ಳುತ್ತೇನೆ. ಇಂದು ಇವರೊಂದಿಗೆ ಬೇಗನೆ ಯುದ್ಧಮಾಡಿ ಅರ್ಜುನನ ಸಮೀಪಕ್ಕೆ ಹೋಗುತ್ತೇನೆ. ಸೂತ! ತಲೆಬೋಳಿಸಿಕೊಂಡಿರುವ ಈ ಸರ್ವ ಸೇನೆಗಳನ್ನು ಸಂಹರಿಸುವ ನನ್ನ ವೀರ್ಯವನ್ನು ಸುಯೋಧನನೊಂದಿಗೆ ಕೌರವರು ಇಂದು ನೋಡುವವರಿದ್ದಾರೆ. ಇಂದು ಕೌರವಸೇನೆಯು ಸೀಳಿ ಹೋಗಿ ಬಹುರೀತಿಯಲ್ಲಿ ರೋಧಿಸುವುದನ್ನು ಕೇಳಿ ಸುಯೋಧನನು ದುಃಖಪಡುವವನಿದ್ದಾನೆ! ನನ್ನ ಆಚಾರ್ಯ ಪಾಂಡವಮುಖ್ಯ, ಮಹಾತ್ಮ ಶ್ವೇತಾಶ್ವನು ತೋರಿಸಿದ ಮಾರ್ಗವನ್ನೇ ಇಂದು

ನಾನು ಯುದ್ಧದಲ್ಲಿ ತೋರಿಸಿಕೊಡುತ್ತೇನೆ. ಇಂದು ನನ್ನ ಬಾಣದಿಂದ ಸಹಸ್ರಾರು ಪ್ರಮುಖ ಯೋಧರು ಹತರಾದುದನ್ನು ನೋಡಿ ದುರ್ಯೋಧನನು ಪಶ್ಚಾತ್ತಾಪ ಪಡುವವನಿದ್ದಾನೆ. ಇಂದು ಕ್ಷಿಪ್ರಹಸ್ತನಾದ ನನ್ನಿಂದ ಬಿಡಲ್ಪಡುವ ಉತ್ತಮ ಸಾಯಕಗಳನ್ನೂ, ಬೆಂಕಿಯ ಕೊಳ್ಳಿಯ ಚಕ್ರದಂತೆ ತಿರುಗುವ ನನ್ನ ಧನುಸ್ಸನ್ನೂ ಕೌರವರು ನೋಡುವರು! ನನ್ನ ಸಾಯಕಗಳಿಂದ ತುಂಡಾದ ಅಂಗಗಳಿಂದ ರಕ್ತವು ಬಹಳವಾಗಿ ಸುರಿಯುವುದನ್ನು, ಮತ್ತು ಸೈನಿಕರ ವಧೆಯನ್ನು ನೋಡಿ ಇಂದು ಸುಯೋಧನನು ಸಂತಾಪಪಡುವವನಿದ್ದಾನೆ! ಇಂದು ನನ್ನ ಕ್ರುದ್ಧರೂಪವನ್ನು ಮತ್ತು ಶ್ರೇಷ್ಠರ ವಧೆಯನ್ನು ನೋಡಿ ಲೋಕದಲ್ಲಿ ಇಬ್ಬರು ಅರ್ಜುನರಿರುವರೋ ಎಂದು ಸುಯೋಧನನು ಯೋಚಿಸಲಿದ್ದಾನೆ. ಇಂದು ರಣದಲ್ಲಿ ಸಹಸ್ರಾರು ರಾಜರು ನನ್ನಿಂದ ಹತರಾಗುವುದನ್ನು ನೋಡಿ ದುರ್ಯೋಧನನು ಮಹಾಯುದ್ಧದಲ್ಲಿ ಸಂತಾಪಪಡುವವನಿದ್ದಾನೆ. ಇಂದು ಸಹಸ್ರಾರು ರಾಜರನ್ನು ಸಂಹರಿಸಿ ಮಹಾತ್ಮ ಪಾಂಡವ ರಾಜನಲ್ಲಿ ನನಗಿರುವ ಸ್ನೇಹ ಮತ್ತು ಭಕ್ತಿಯನ್ನು ತೋರಿಸಿಕೊಡುತ್ತೇನೆ!”

ಹೀಗೆ ಹೇಳಲು ಸೂತನು ಒಳ್ಳೆಯ ಶಿಕ್ಷಣವನ್ನು ಹೊಂದಿದ್ದ, ಒಳ್ಳೆಯ ರೀತಿಯಲ್ಲಿ ರಥವನ್ನು ಒಯ್ಯುವ, ಚಂದ್ರನ ಪ್ರಭೆಗೆ ಸಮಾನ ಪ್ರಭೆಯುಳ್ಳ ಕುದುರೆಗಳನ್ನು ಮುಂದೆ ಹೋಗುವಂತೆ ಹುರಿದುಂಬಿಸಿದನು. ವಾಯುವೇಗದಲ್ಲಿ ಹೋಗುತ್ತಿರುವ ಆ ಉತ್ತಮ ಕುದುರೆಗಳು ಆಕಾಶವನ್ನೇ ಕುಡಿಯುತ್ತಿವೆಯೋ ಎನ್ನುವಂತೆ ಶೀಘ್ರವಾಗಿ ಯುಯುಧಾನನನ್ನು ಯವನರ ಬಳಿ ಕರೆದೊಯ್ದವು. ಯುದ್ಧದಿಂದ ಹಿಂದಿರುಗದೇ ಇದ್ದ ಆ ಲಘುಹಸ್ತರು ಸಾತ್ಯಕಿಯನ್ನು ನೋಡಿ ಅವನನ್ನು ಅನೇಕ ಶರವರ್ಷಗಳಿಂದ ಮುಚ್ಚಿಬಿಟ್ಟರು. ಅವರ ಬಾಣಗಳು ಮತ್ತು ಅಸ್ತ್ರಗಳು ತನಗೆ ತಾಗುವುದರೊಳಗೇ ವೇಗವಾನ್ ಸಾತ್ಯಕಿಯು ಸನ್ನತಪರ್ವಗಳಿಂದ ಕತ್ತರಿಸಿದನು. ಬಂಗಾರದ ಪುಂಖಗಳುಳ್ಳ ಹರಿತಾದ ಹದ್ದಿನಗರಿಯ ಜಿಹ್ಮಗಗಳಿಂದ ಆ ಉಗ್ರನು ಯವನರ ಶಿರಗಳನ್ನೂ ಭುಜಗಳನ್ನೂ ಕತ್ತರಿಸಿದನು. ಎಲ್ಲ ಕಡೆ ಕೆಂಪು ಲೋಹಗಳಿಂದಲೂ ಕಂಚಿನಿಂದಲೂ ನಿರ್ಮಿತವಾದ ಕವಚಗಳನ್ನು ಬೇಧಿಸಿ, ಯೋಧರ ದೇಹಗಳನ್ನು ಸೀಳಿ ಬಾಣಗಳು ಭೂಮಿಯನ್ನು ಸೇರಿದವು. ರಣದಲ್ಲಿ ಸಾತ್ಯಕಿಯಿಂದ ಸಂಹರಿಸಲ್ಪಟ್ಟ ನೂರಾರು ವೀರ ಮ್ಲೇಚ್ಛರು ಪ್ರಾಣಗಳನ್ನು ತೊರೆದು ಭೂಮಿಯ ಮೇಲೆ ಉರುಳಿದರು. ಶಿಂಜಿನಿಯನ್ನು ಕಿವಿಯ ತುದಿಯವರೆಗೂ ಸೆಳೆದು ಮಧ್ಯೆ ಸ್ವಲ್ಪವೂ ಅಂತರವಿಲ್ಲದಂತೆ ಒಂದಕ್ಕೊಂದು ಅಂಟಿಕೊಂಡಿರುವಂತೆ

ಬಾಣಗಳನ್ನು ಬಿಟ್ಟು ಸಾತ್ಯಕಿಯು ಐದು, ಆರು, ಏಳು ಮತ್ತು ಒಮ್ಮೊಮ್ಮೆ ಎಂಟು ಯವನರನ್ನು ಒಂದೇ ಬಾರಿಗೆ ಸಂಹರಿಸುತ್ತಿದ್ದನು.

ಸಹಸ್ರಾರು ಕಾಂಬೋಜರನ್ನೂ, ಶಕರನ್ನೂ, ಶಬರರನ್ನೂ, ಕಿರಾತರನ್ನೂ, ಹಾಗೆಯೇ ಬರ್ಬರರನ್ನೂ ಸಂಹರಿಸಿ, ರಣಭೂಮಿಯನ್ನು ಮಾಂಸ-ರಕ್ತ ಮಿಶ್ರಿತ ಕೆಸರಿನಿಂದ ಸಂಚರಿಸಲು ದುಃಸಾಧ್ಯವನ್ನಾಗಿ ಮಾಡಿದನು. ನೀಳವಾದ ಗಡ್ಡಗಳನ್ನೂ, ಶಿರಸ್ತ್ರಾಣಗಳನ್ನು ಧರಿಸಿದ್ದ ಬೋಳು ತಲೆಗಳ ದಸ್ಯುಗಳ ಶಿರಗಳು ರಣಾಂಗಣದ ಸುತ್ತಲೂ ಪುಕ್ಕಗಳನ್ನು ಪರಚಿದ ಪಕ್ಷಿಗಳಂತೆ ವ್ಯಾಪ್ತವಾಗಿ ಹರಡಿದ್ದವು. ರಕ್ತದಿಂದ ತೋಯ್ದ ಸರ್ವಾಂಗಗಳ ಕಬಂಧಗಳಿಂದ ಆ ರಣಾಂಗಣವು ಕೆಂಪಾದ ಮೇಘಗಳಿಂದ ಆವೃತವಾದ ಆಕಾಶದಂತೆ ತೋರುತ್ತಿತ್ತು. ವಜ್ರಾಯುಧಕ್ಕೂ ಸಿಡಿಲಿಗೂ ಸಮಾನ ಸ್ಪರ್ಶವುಳ್ಳ, ಉತ್ತಮ ಗಿಣ್ಣುಗಳನ್ನುಳ್ಳ, ನೇರವಾಗಿ ಹೋಗುವ ಬಾಣಗಳ ಮೂಲಕ ಹತರಾದ ಯವನರು ರಣಾಂಗಣವನ್ನು ಆವರಿಸಿಕೊಂಡಿದ್ದರು. ಉಳಿದ ಅಲ್ಪಸಂಖ್ಯಾತ ಕವಚಧಾರಿ ಯವನರನ್ನೂ ಕೂಡ ಯುಯುಧಾನನು ಮೂರ್ಛೆಗೊಳಿಸಿ ಸಂಹರಿಸಿ ಗೆದ್ದನು. ಉಳಿದಿದ್ದವರು ಹಿಮ್ಮಡಿಗಳಿಂದಲೂ, ಚಾವಟಿಗಳಿಂದಲೂ ಕುದುರೆಗಳನ್ನು ಪ್ರಹರಿಸುತ್ತಾ ಅತ್ಯಂತ ವೇಗದಲ್ಲಿ ಸಾತ್ಯಕಿಯಿಂದ ಎಲ್ಲ ಕಡೆ ಓಡಿ

ಹೋದರು. ಸಾತ್ಯಕಿಯು ಹೀಗೆ ಜಯಿಸಲಸಾಧ್ಯ ಯವನರ ಮತ್ತು ಶಕರ ಮಹಾಸೇನೆಯನ್ನು ಯುದ್ಧದಲ್ಲಿ ಸೋಲಿಸಿ, ಕೌರವರನ್ನು ಗೆದ್ದು ಪ್ರಹೃಷ್ಟನಾಗಿ ಸೂತನಿಗೆ ಮುಂದುವರೆಯಲು ಹೇಳಿದನು. ಅರ್ಜುನನ ಪೃಷ್ಟರಕ್ಷಕನಾದ ಆ ಸಾತ್ಯಕಿಯು ಹಾಗೆ ಹೋಗುತ್ತಿರುವುದನ್ನು ನೋಡಿ ಸಂಹೃಷ್ಟರಾದ ಚಾರಣರೂ ಮತ್ತು ಕೌರವರೂ ಬಹಳವಾಗಿ ಪ್ರಶಂಸಿಸಿದರು.

## ದ್ರೋಣ-ಪಾಂಚಾಲರ ಯುದ್ಧ

ಯುಯುಧಾನನು ಯವನರನ್ನೂ ಕಾಂಬೋಜರನ್ನೂ ಗೆದ್ದು ಕೌರವ ಸೇನೆಯ ಮಧ್ಯದಿಂದಲೇ ಅರ್ಜುನನ ಕಡೆಗೆ ಹೋದನು. ವಿಚಿತ್ರ ಕವಚವನ್ನೂ ಧ್ವಜವನ್ನೂ ಹೊಂದಿದ್ದ ಆ ಶರದಂಷ್ಟ್ರ ನರವ್ಯಾಘ್ರನು ಮೂಸುತ್ತಾ ಹೋಗುವ ಹುಲಿಯು ಜಿಂಕೆಗಳನ್ನು ಹೇಗೋ ಹಾಗೆ ಕೌರವ ಸೇನೆಗಳಿಗೆ ಭಯವನ್ನುಂಟುಮಾಡುತ್ತಿದ್ದನು. ರಥದ ಮೇಲೆ ಕುಳಿತು ಬಂಗಾರದ ಬೆನ್ನುಳ್ಳ ಬಂಗಾರದ ಚಂದ್ರಾಕಾರದ ಚಿಹ್ನೆಗಳನ್ನುಳ್ಳ ಮಹಾವೇಗಯುಕ್ತ ಧನುಸ್ಸನ್ನು ಜೋರಾಗಿ ತಿರುಗಿಸುತ್ತ ಅವನು ಅನೇಕ ಮಾರ್ಗಗಳಲ್ಲಿ ಸಂಚರಿಸುತ್ತಿದ್ದನು. ಸುವರ್ಣಮಯ ಭುಜಕೀರ್ತಿಯನ್ನೂ, ಸುವರ್ಣಮಯ ಕಿರೀಟವನ್ನೂ, ಸುವರ್ಣಮಯ ಕವಚವನ್ನೂ ಧರಿಸಿದ್ದ, ಸುವರ್ಣಮಯ ಧ್ವಜವನ್ನೂ ಧನುಸ್ಸನ್ನೂ

ಹೊಂದಿದ್ದ ಆ ಶೂರನು ಮೇರುಶೃಂಗದಂತೆಯೇ ಪ್ರಕಾಶಿಸುತ್ತಿದ್ದನು. ಧನುಸ್ಸನು ಮಂಡಲಾಕಾರವಾಗಿ ತಿರುಗಿಸುತ್ತಿದ್ದ ಸೂರ್ಯನ ರಶ್ಮಿಗೆ ಸಮಾನ ತೇಜಸ್ಸಿನಿಂದ ಕೂಡಿದ್ದ ಆ ನರಸೂರ್ಯನು ಶರತ್ಕಾಲದ ನಿರಭ್ರ ಆಕಾಶದಲ್ಲಿ ಉದಯಿಸಿದ ಸೂರ್ಯನಂತೆ ವಿರಾಜಿಸುತ್ತಿದ್ದನು. ಆ ವೃಷಭಸ್ಕಂಧ, ವೃಷಭಾಕ್ಷ, ವಿಕ್ರಾಂತ, ನರರ್ಷಭನು ಕೌರವರ ಮಧ್ಯೆ ಗೋವುಗಳ ನಡುವೆ ಕಾಣುವ ಹೋರಿಯಂತೆ ಕಾಣಿಸಿದನು. ಕೌರವ ಸೇನೆಗಳ ಮಧ್ಯೆ ಮದಿಸಿದ ಆನೆಯಂತಿದ್ದ, ಮದಿಸಿದ ಆನೆಯ ನಡುಗೆಯುಳ್ಳ, ಮದೋದಕವನ್ನು ಸುರಿಸುತ್ತಿದ್ದ ಸಲಗದಂತಿದ್ದ ಸಾತ್ಯಕಿಯ ಮೇಲೆ ಕೌರವರು ಹುಲಿಗಳಂತೆ ಎರಗಿದರು. ದ್ರೋಣನ ಸೇನೆಯನ್ನೂ, ಭೋಜನ ದುಸ್ತರ ಸೇನೆಯನ್ನೂ ದಾಟಿ, ಜಲಸಂಧನೆನ್ನುವ ಸಮುದ್ರವನ್ನೂ, ಕಾಂಬೋಜರ ಸೇನೆಯನ್ನೂ ದಾಟಿ, ಹಾರ್ದಿಕ್ಯನೆಂಬ ಮೊಸಳೆಯಿಂದಲೂ ಮುಕ್ತನಾಗಿ ಸೈನ್ಯಸಾಗರವನ್ನೇ ದಾಟಿಬಂದ ಆ ಸಾತ್ಯಕಿಯನ್ನು ಕೌರವರ ಕಡೆಯ ಮಹಾರಥರು ಸುತ್ತುವರೆದರು. ದುರ್ಯೋಧನ, ಚಿತ್ರಸೇನ, ದುಃಶಾಸನ, ವಿವಿಂಶತೀ, ಶಕುನಿ, ದುಃಸ್ಸಹ, ದುರ್ಮರ್ಷಣ, ಕ್ರಥ ಮತ್ತು ಇನ್ನೂ ಅನೇಕ ದುರಾಸದ ಶಸ್ತ್ರವಂತ ಅಸಹನಶೀಲ ಶೂರರು ಹೋಗುತ್ತಿದ್ದ ಸಾತ್ಯಕಿಯನ್ನು ಬೆನ್ನಟ್ಟಿದರು. ಆಗ ಪರ್ವಕಾಲದಲ್ಲಿ ಭಿರುಗಾಳಿಯ ವೇಗಕ್ಕೆ ಸಿಲುಕಿದ ಸಮುದ್ರದಂತೆ ಕೌರವ ಸೇನೆಯಿಂದ ಮಹಾಶಬ್ಧವು

ಕೇಳಿಬಂದಿತು. ತನ್ನನ್ನು ಆಕ್ರಮಿಸಲು ಹಿಂದಿನಿಂದ ವೇಗವಾಗಿ ಬರುತ್ತಿದ್ದ ಅವರೆಲ್ಲರನ್ನು ನೋಡಿ ಶಿನಿಪುಂಗವನು ನಗುತ್ತಾ ಮೆಲ್ಲನೆ ಹೋಗೆಂದು ತನ್ನ ಸಾರಥಿಗೆ ಹೇಳಿದನು.

ದುಃಶಾಸನನ ರಥವು ಸಮೀಪದಲ್ಲಿಯೇ ನಿಂತಿರುವುದನ್ನು ನೋಡಿ ಭಾರದ್ವಾಜನು ದುಃಶಾಸನನಿಗೆ ಈ ಮಾತುಗಳನ್ನಾಡಿದನು:

> “ದುಃಶಾಸನ! ಈ ಮಹಾರಥರೆಲ್ಲರೂ ಏಕೆ ಇಲ್ಲಿಗೆ ಓಡಿ ಧಾವಿಸಿ ಬರುತ್ತಿದ್ದಾರೆ? ನೃಪತಿ ದುರ್ಯೋಧನನು ಕ್ಷೇಮದಿಂದಿರುವನೇ? ಸೈಂಧವನು ಬದುಕಿದ್ದಾನೆಯೇ? ನೀನು ರಾಜಪುತ್ರ. ರಾಜನ ಸಹೋದರ. ಮಹಾರಥ. ಯುವರಾಜತ್ವವನ್ನು ಪಡೆದು ಹೀಗೆ ಏಕೆ ಯುದ್ಧದಿಂದ ಓಡಿ ಬಂದಿರುವೆ? ಪಾಂಚಲರು ಮತ್ತು ಪಾಂಡವರೊಂದಿಗೆ ಮಹಾ ವೈರವನ್ನು ಸ್ವಯಂ ನೀನೇ ಕಟ್ಟಿಕೊಂಡು ಈಗ ಏಕೆ ಯುದ್ಧದಲ್ಲಿ ಸಾತ್ಯಕಿಯೊಬ್ಬನನ್ನೇ ಎದುರಿಸಿ ಭಯಪಟ್ಟಿರುವೆ? ಹಿಡಿದಿದ್ದ ದಾಳಗಳೇ ಮುಂದೆ ಯುದ್ಧದಲ್ಲಿ ದಾರುಣ ಸರ್ಪವಿಷದಂತಿರುವ ಬಾಣಗಳಾಗುತ್ತವೆ ಎಂದು ನಿನಗೆ ಹಿಂದೆ ತಿಳಿದಿರಲಿಲ್ಲವೇ? ಹಿಂದೆ ನೀನು ಪಾಂಡವರಿಗೆ ಅಪ್ರಿಯ ಮಾತುಗಳನ್ನಾಡಿದೆ. ಅದರಲ್ಲೂ ವಿಶೇಷವಾಗಿ

ದ್ರೌಪದಿಯ ಕಷ್ಟಗಳಿಗೆ ಕಾರಣನಾದೆ. ಅಂದಿನ ನಿನ್ನ ಅಭಿಮಾನವು ಈಗ ಎಲ್ಲಿ ಹೋಯಿತು? ದರ್ಪವೆಲ್ಲಿ ಹೋಯಿತು? ವೀರ್ಯವೆಲ್ಲಿ ಅಡಗಿಹೋಯಿತು? ಅಂದಿನ ಗರ್ಜನೆಯು ಈಗ ಎಲ್ಲಿ ಹೋಯಿತು? ವಿಷಸರ್ಪಸದೃಶರಾದ ಪಾರ್ಥರನ್ನು ಈ ರೀತಿ ಕೋಪಗೊಳಿಸಿ ಈಗ ಎಲ್ಲಿ ಹೋಗುತ್ತಿರುವೆ? ಈಗ ಭಾರತೀಸೇನೆಗಾಗಿ ಶೋಕಿಸಬೇಕಾಗಿದೆ. ರಾಜಾ ಸುಯೋಧನನಿಗಾಗಿ ಶೋಕಿಸಬೇಕಾಗಿದೆ. ಏಕೆಂದರೆ ಅವನ ತಮ್ಮನಾದ ಕರ್ಕಶನಾದ ನೀನು ಯುದ್ಧದಿಂದ ಪಲಾಯನಮಾಡುತ್ತಿರುವೆ! ವೀರ! ಸೀಳಿಹೋಗಿರುವ ಭಯಾರ್ದಿತರದ ಈ ಸೇನೆಗಳನ್ನು ಸ್ವಬಾಹುಬಲವನ್ನುಪಯೋಗಿಸಿ ನೀನು ರಕ್ಷಿಸಬೇಕಲ್ಲವೇ? ಭೀತನಾಗಿ ರಣವನ್ನು ತೊರೆದು ನೀನು ಶತ್ರುಗಳಿಗೆ ಆನಂದವನ್ನುಂಟುಮಾಡುತ್ತಿದ್ದೀಯೆ. ಸೈನ್ಯದ ನಾಯಕನಾಗಿರುವ ನೀನೇ ಓಡಿಹೋದರೆ ಬೇರೆ ಯಾರುತಾನೇ ಸಂಗ್ರಾಮದಲ್ಲಿ ಉಳಿದಾರು? ಯಾರ ಆಶ್ರಯದಲ್ಲಿರುವರೋ ಅವರೇ ಭೀತರಾದರೆ ಇಡೀ ಸೇನೆಯೇ ಭೀತಿಗೊಳ್ಳುವುದಿಲ್ಲವೇ? ಇಂದು ಸಾತ್ವತನೊಬ್ಬನೊಡನೆ ಯುದ್ಧಮಾಡುವಾಗಲೇ ನೀನು ಸಂಗ್ರಾಮದಿಂದ ಪಲಾಯನದ

ಕುರಿತು ಮನಸ್ಸು ಮಾಡಿದೆ. ಇನ್ನು ಗಾಂಡೀವ ಧನ್ವಿ ಅರ್ಜುನ, ಭೀಮಸೇನ ಮತ್ತು ಯಮಳರಾದ ನಕುಲ-ಸಹದೇವರನ್ನು ಯುದ್ಧದಲ್ಲಿ ಎದುರಿಸಿದರೆ ಆಗ ನೀನು ಏನು ಮಾಡುವೆ? ಯಾವುದರಿಂದ ನೀನು ಭೀತನಾಗಿ ಪಲಾಯನಮಾಡುತ್ತಿರುವೆಯೋ ಆ ಸಾತ್ಯಕಿಯ ಶರಗಳು ಯುದ್ಧದಲ್ಲಿ ಸೂರ್ಯಾಗ್ನಿಸಮ ತೇಜಸ್ಸುಳ್ಳ ಫಲ್ಗುನನ ಬಾಣಗಳ ತುಲನೆಗೆ ಸಮನಾದವುಗಳಲ್ಲ. ಒಂದುವೇಳೆ ನೀನು ಪಲಾಯನ ಮಾಡುವ ನಿರ್ಧಾರವನ್ನೇ ಮಾಡಿದ್ದರೆ ಈ ಭೂಮಿಯನ್ನು ಧರ್ಮರಾಜನಿಗೆ ಶಾಂತಿಯಿಂದ ನೀಡಬೇಕು. ಫಲ್ಗುನನು ಬಿಟ್ಟ ಉರಗಸನ್ನಿಭ ನಾರಾಚಗಳು ನಿನ್ನ ಶರೀರವನ್ನು ಹೊಗುವ ಮೊದಲೇ ಪಾಂಡವರೊಂದಿಗೆ ಸಂಧಿಮಾಡಿಕೋ! ರಣದಲ್ಲಿ ನೂರು ಸಹೋದರರರನ್ನೂ ಕೊಂದು ಆ ಮಹಾತ್ಮರು ಈ ಭೂಮಿಯನ್ನು ಕಿತ್ತುಕೊಳ್ಳುವುದರೊಳಗಾಗಿ ಪಾಂಡವರೊಡನೆ ಸಂಧಿಮಾಡಿಕೋ! ಧರ್ಮಪುತ್ರ ರಾಜಾ ಯುಧಿಷ್ಠಿರ ಮತ್ತು ಸಮರಶ್ಲಾಘೀ ಕೃಷ್ಣರು ಕ್ರುದ್ಧರಾಗುವ ಮೊದಲೇ ಪಾಂಡವರೊಡನೆ ಸಂಧಿಮಾಡಿಕೋ! ಮಹಾಬಾಹು ಭೀಮನು ಈ ಮಹಾಸೇನೆಯನ್ನು ಒಳಹೊಕ್ಕಿ ನಿನ್ನ

ಸೋದರರನ್ನು ಸದೆಬಡಿಯುವುದರೊಳಗಾಗಿ ಪಾಂಡವರೊಡನೆ ಸಂಧಿಮಾಡಿಕೋ! ಹಿಂದೆ ನಿನ್ನ ಅಣ್ಣ ಸುಯೋಧನನಿಗೆ ಭೀಷ್ಮನು "ಸೌಮ್ಯ! ಯುದ್ಧದಲ್ಲಿ ಪಾಂಡವರು ಅಜೇಯರು. ಪಾಂಡವರೊಂದಿಗೆ ಸಂಧಿಮಾಡಿಕೋ!" ಎಂದು ಹೇಳಿದ್ದನು. ಆದರೆ ನಿನ್ನ ಅಣ್ಣ ಮೂಢ ಸುಯೋಧನನು ಹಾಗೆ ಮಾಡಲಿಲ್ಲ! ಆದುದರಿಂದ ಯುದ್ಧದಲ್ಲಿ ಧೈರ್ಯವನ್ನು ತಂದುಕೊಂಡು ಪ್ರಯತ್ನಪಟ್ಟು ಪಾಂಡವರೊಂದಿಗೆ ಯುದ್ಧಮಾಡು. ಬೇಗನೇ ಇದೇ ರಥದಲ್ಲಿ ಸಾತ್ಯಕಿಯೆಲ್ಲಿ ನಿಂತಿರುವನೋ ಅಲ್ಲಿಗೆ ಹೋಗು! ನೀನಿಲ್ಲದೇ ನಮ್ಮ ಸೇನೆಯು ದಿಕ್ಕಾಪಾಲಾಗಿ ಓಡಿಹೋಗುತ್ತಿದೆ. ನಿನಗಾಗಿಯಾದರೂ ರಣದಲ್ಲಿ ಸತ್ಯವಿಕ್ರಮಿ ಸಾತ್ಯಕಿಯೊಂದಿಗೆ ಯುದ್ಧಮಾಡು!"

ಇಷ್ಟು ಹೇಳಿದರೂ ದುಃಶಾಸನನು ಏನನ್ನೂ ಮಾತನಾಡಲಿಲ್ಲ. ಕೇಳಿದರೂ ಕೇಳದಂತೆ ಮಾಡಿ ಸಾತ್ಯಕಿಯು ಹೋದ ದಾರಿಯಲ್ಲಿ ಹೊರಟು ಹೋದನು. ಯುದ್ಧದಿಂದ ಹಿಮ್ಮೆಟ್ಟದಿದ್ದ ಮ್ಲೇಚ್ಛರ ಮಹಾ ಸೇನೆಯನ್ನು ಕೂಡಿಕೊಂಡು ದುಃಶಾಸನನು ಸಾತ್ಯಕಿಯೊಡನೆ ಯುದ್ಧಮಾಡತೊಡಗಿದನು. ದ್ರೋಣನೂ ಕೂಡ ಮಧ್ಯಮ ವೇಗವನ್ನು

ಬಳಸಿ ಸಂಕ್ರುದ್ಧನಾಗಿ ಪಾಂಚಾಲ-ಪಾಂಡವರನ್ನು ಆಕ್ರಮಣಿಸಿದನು. ರಣದಲ್ಲಿ ಪಾಂಚಾಲರ ಸೇನೆಯನ್ನು ಪ್ರವೇಶಿಸಿ ದ್ರೋಣನು ನೂರಾರು ಸಾವಿರಾರು ಯೋಧರನ್ನು ಪಲಾಯನಗೊಳಿಸಿದನು. ಆಗ ದ್ರೋಣನು ತನ್ನ ಹೆಸರನ್ನು ಕೂಗಿ ಹೇಳಿಕೊಳ್ಳುತ್ತಾ ಪಾಂಡವ-ಪಾಂಚಾಲ-ಮತ್ಸ್ಯರೊಂದಿಗೆ ಮಹಾ ಕದನವನ್ನು ನಡೆಸಿದನು. ಅಲ್ಲಲ್ಲಿ ಸೇನೆಗಳನ್ನು ಸೋಲಿಸುತ್ತಿದ್ದ ಭಾರದ್ವಾಜನನ್ನು ಪಾಂಚಾಲಪುತ್ರ ವೀರಕೇತುವು ಎದುರಿಸಿದನು. ಅವನು ದ್ರೋಣನನ್ನು ಐದು ಸನ್ನತಪರ್ವ ಶರಗಳಿಂದ ಹೊಡೆದು ಒಂದರಿಂದ ಅವನ ಧ್ವಜವನ್ನೂ ಏಳರಿಂದ ಸಾರಥಿಯನ್ನೂ ಹೊಡೆದನು. ರಭಸವಾಗಿ ಯುದ್ಧಮಾಡುತ್ತಿದ್ದ ಆ ಪಾಂಚಾಲ್ಯನನ್ನು ದ್ರೋಣನಿಗೆ ಅತಿಕ್ರಮಿಸಿ ಹೋಗಲಾಗಲಿಲ್ಲ.

ದ್ರೋಣನನ್ನು ಪಾಂಚಾಲನು ತಡೆದುದನ್ನು ನೋಡಿ ಧರ್ಮಪುತ್ರನ ಹಿತೈಷಿಗಳು ದ್ರೋಣನನ್ನು ಸುತ್ತಲಿನಿಂದ ಆಕ್ರಮಣಿಸಿದರು. ಅವರು ಅಗ್ನಿಸಂಕಾಶ ಶರಗಳಿಂದಲೂ, ಬಹು ಮೂಲ್ಯ ತೋಮರಗಳಿಂದಲೂ, ವಿವಿಧ ಶಸ್ತ್ರಗಳಿಂದಲೂ ದ್ರೋಣನೊಬ್ಬನನ್ನೇ ಮುಚ್ಚಿಬಿಟ್ಟರು. ದ್ರೋಣನು ಆಕಾಶದಲ್ಲಿ ಅಪಾರ ಮಳೆನೀರಿನಿಂದ ತುಂಬಿದ ಮೋಡಗಳನ್ನು ಚದುರಿಸುವ ವಾಯುದೇವನಂತೆ ಎಲ್ಲೆಡೆಯಿಂದ ಮುಸುಕಿದ ಆ ಬಾಣಗಣಗಳನ್ನು ನಾಶಗೊಳಿಸಿದನು.

ಅನಂತರ ದ್ರೋಣನು ಸೂರ್ಯ-ಪಾವಕದಂತಿರುವ ಮಹಾಘೋರ ಬಾಣವನ್ನು ವೀರಕೇತುವಿನ ರಥದ ಕಡೆ ಹೂಡಿ ಹೊಡೆದನು. ಆ ಶರವು ಪಾಂಚಾಲ್ಯ ಕುಲನಂದನನನ್ನು ಭೇದಿಸಿ ಕೂಡಲೇ ರಕ್ತದಿಂದ ತೋಯ್ದು ಪ್ರಜ್ವಲಿಸುತ್ತಿರುವಂತೆ ಭೂಮಿಯ ಮೇಲೆ ಬಿದ್ದಿತು. ಕೂಡಲೇ ವೀರಕೇತುವು ಚಂಡಮಾರುತದಿಂದ ಹೊಡೆಯಲ್ಪಟ್ಟ ದೊಡ್ಡ ಸಂಪಿಗೆಯ ಮರವು ಪರ್ವತದ ಮೇಲಿಂದ ಕೆಳಕ್ಕೆ ಬೀಳುವಂತೆ ರಥದಿಂದ ಬಿದ್ದನು. ಆ ರಾಜಪುತ್ರನು ಹತನಾಗಲು ಪಾಂಚಾಲರು ತ್ವರೆಮಾಡಿ ದ್ರೋಣನನ್ನು ಎಲ್ಲಕಡೆಗಳಿಂದ ಸುತ್ತುವರೆದರು. ಭ್ರಾತೃವ್ಯಸನದಿಂದ ದುಃಖಿತರಾದ ಚಿತ್ರಕೇತು, ಸುಧನ್ವಾ, ಚಿತ್ರವರ್ಮ, ಮತ್ತು ಚಿತ್ರರಥರು ಸಂಘಟಿತರಾಗಿ ಭಾರದ್ವಾಜನೊಂದಿಗೆ ಯುದ್ಧಮಾಡಲು ಉತ್ಸುಕರಾಗಿ ಬೇಸಗೆಯ ಕೊನೆಯಲ್ಲಿ ಮೋಡಗಳು ಮಳೆಗರೆಯುವಂತೆ ಬಾಣಗಳ ಮಳೆಗರೆಯುತ್ತಾ ದ್ರೋಣನನ್ನು ಆಕ್ರಮಣಿಸಿದರು. ಆ ಮಹಾರಥ ರಾಜಪುತ್ರರಿಂದ ಬಹಳವಾಗಿ ಪೀಡಿಸಲ್ಪಟ್ಟ ದ್ರೋಣನು ಕುಪಿತನಾಗಿ ಆ ಕುಮಾರರನ್ನು ಅಶ್ವ-ಸೂತ-ರಥ ವಿಹೀನರನ್ನಾಗಿ ಮಾಡಿದನು. ಮಹಾಯಶಸ್ವಿ ದ್ರೋಣನು ಇತರ ಭಲ್ಲಗಳಿಂದ ಗಿಡಗಳಿಂದ ಹೂವನ್ನು ಕೊಯ್ಯುವಂತೆ ಅವರ ತಲೆಗಳನ್ನು ಕತ್ತರಿಸಿ ಬೀಳಿಸಿದನು. ಹಿಂದೆ ದೇವಾಸುರರ ಯುದ್ಧದಲ್ಲಿ ದೈತ್ಯ-ದಾನವರು ರಥಗಳಿಂದ ಕೆಳಗುರುಳಿದಂತೆ ಆ ಸುವರ್ಚಸ

ಪಂಚಾಲರಾಜಕುಮಾರರು ಹತರಾಗಿ ರಥಗಳಿಂದ ಭೂಮಿಯ ಮೇಲೆ ಬಿದ್ದರು. ರಣದಲ್ಲಿ ಅವರನ್ನು ಸಂಹರಿಸಿ ಪ್ರತಾಪವಾನ್ ಭಾರದ್ವಾಜನು ಬಂಗಾರದ ಬೆನ್ನುಳ್ಳ ತನ್ನ ದುರಾಸದ ಧನುಸ್ಸನ್ನು ತಿರುಗಿಸತೊಡಗಿದನು.

ದೇವತೆಗಳಿಗೆ ಸಮಾನರಾದ ಆ ಮಹಾರಥ ಪಾಂಚಲರು ಹತರಾದುದನ್ನು ನೋಡಿ ತುಂಬಾ ಕ್ರುದ್ಧನಾಗಿ, ನೇತ್ರಗಳೆರಡರಿಂದ ನೀರನ್ನು ಸುರಿಸುತ್ತಾ ಧೃಷ್ಟದ್ಯುಮ್ನನು ಸಂಗ್ರಾಮದಲ್ಲಿ ದ್ರೋಣನ ರಥದ ಮೇಲೆ ಆಕ್ರಮಣಿಸಿದನು. ರಣದಲ್ಲಿ ಪಾಂಚಾಲ್ಯನು ದ್ರೋಣನನ್ನು ಶರಗಳಿಂದ ಮುಸುಕಿದುದನ್ನು ನೋಡಿ ಒಮ್ಮೆಲೇ ಹಾಹಾಕಾರವುಂಟಾಯಿತು. ಮಹಾತ್ಮ ಪಾರ್ಷತನಿಂದ ಬಹಳವಾಗಿ ಮುಚ್ಚಲ್ಪಟ್ಟರೂ ದ್ರೋಣನು ವ್ಯಥಿತನಾಗಲಿಲ್ಲ. ನಗುತ್ತಲೇ ಅವನೊಡನೆ ಯುದ್ಧಮಾಡತೊಡಗಿದನು. ಆಗ ಕ್ರೋಧಮೂರ್ಛಿತನಾದ ಪಾಂಚಾಲ್ಯನು ದ್ರೋಣನನ್ನು ಕ್ರುದ್ಧನಾಗಿ ತೊಂಭತ್ತು ನತಪರ್ವಣ ಶರಗಳಿಂದ ಎದೆಯ ಮೇಲೆ ಪ್ರಹರಿಸಿದನು. ಆ ಬಲಶಾಲಿ ಧೃಷ್ಟದ್ಯುಮ್ನನಿಂದ ಗಾಢವಾಗಿ ಹೊಡೆಯಲ್ಪಟ್ಟ ಮಹಾಯಶಸ್ವಿ ದ್ರೋಣನು ರಥಪೀಠದ ಪಕ್ಕಕ್ಕೆ ಸರಿದು ಕುಳಿತು ಮೂರ್ಛೆಹೋದನು.

ಅವನು ಹಾಗಾದುದನ್ನು ನೋಡಿ ಧೃಷ್ಟದ್ಯುಮ್ನನು ಕೂಡಲೇ ಧನುಸ್ಸನ್ನು ಬಿಸುಟು ಖಡ್ಗವನ್ನು ಕೈಗೆತ್ತಿಕೊಂಡನು. ಬೇಗನೇ ತನ್ನ ರಥದಿಂದ ಹಾರಿ ತ್ವರೆಮಾಡಿ ಕ್ರೋಧದಿಂದ ಕೆಂಗಣ್ಣನಾಗಿದ್ದ ಆ ಧೃಷ್ಟದ್ಯುಮ್ನನು ದ್ರೋಣನ ಶಿರವನ್ನು ದೇಹದಿಂದ ಅಪಹರಿಸಲು ಬಯಸಿ ಭಾರದ್ವಾಜನ ರಥವನ್ನೇರಿದನು. ಅಷ್ಟರಲ್ಲಿಯೇ ದ್ರೋಣನು ಸುಧಾರಿಸಿಕೊಂಡು ಧನುಸ್ಸನ್ನೆತ್ತಿಕೊಂಡು ಹತ್ತಿರದ ಲಕ್ಷ್ಯವನ್ನು ಭೇದಿಸುವ ವೈತಸ್ತಿಕ ಬಾಣಗಳಿಂದ ಸಮರದಲ್ಲಿ ಧೃಷ್ಟದ್ಯುಮ್ನನೊಂದಿಗೆ ಯುದ್ಧಮಾಡತೊಡಗಿದನು. ದೃಷ್ಟದ್ಯುಮ್ನನ ಮೇಲೆ ಬಿಟ್ಟ, ಹತ್ತಿರದಲ್ಲಿರುವ ಯೋಧರನ್ನು ಭೇದಿಸಬಲ್ಲ ಆ ವೈತಸ್ತಿಕ ಎಂಬ ಹೆಸರಿನ ಬಾಣಗಳನ್ನು ದ್ರೋಣನೇ ನಿರ್ಮಿಸಿದ್ದನು. ಅನೇಕ ಸಾಯಕಗಳಿಂದ ಪ್ರಹರಿಸಲ್ಪಟ್ಟು ಭಗ್ನವೇಗನಾದ ಧೃಷ್ಟದ್ಯುಮ್ನನು ಬೇಗನೇ ದ್ರೋಣನ ರಥದಿಂದ ಧುಮುಕಿದನು. ಆ ವೀರ ಧೃಷ್ಟದ್ಯುಮ್ನನು ತನ್ನದೇ ರಥವನ್ನೇರಿ ಮಹಾಧನುಸ್ಸನ್ನು ಹಿಡಿದು ದ್ರೋಣನನ್ನು ಹೊಡೆದನು. ಅದ್ಭುತವಾಗಿದ್ದ ಅವರಿಬ್ಬರ ಯುದ್ಧವನ್ನು ಪ್ರಾಣಿಗಣಗಳೆಲ್ಲವೂ, ಕ್ಷತ್ರಿಯರೂ ಮತ್ತು ಅಲ್ಲಿದ್ದ ಇತರ ಸೈನಿಕರೂ ಪ್ರಶಂಸಿಸಿದರು. “ಧೃಷ್ಟದ್ಯುಮ್ನನೊಡನೆ ಯುದ್ಧಮಾಡುತ್ತಿರುವ ದ್ರೋಣನು ಅವಶ್ಯವಾಗಿಯೂ ನಮ್ಮ ರಾಜನ ವಶನಾಗಿದ್ದಾನೆ!” ಎಂದು ಪಾಂಚಾಲರು ಕೂಗಿಕೊಳ್ಳುತ್ತಿದ್ದರು.

ಆಗ ದ್ರೋಣನಾದರೋ ತಡಮಾಡದೇ ಧೃಷ್ಟದ್ಯುಮ್ನನ ಸಾರಥಿಯ ಶಿರವನ್ನು – ಮರದಲ್ಲಿರುವ ಹಣ್ಣನ್ನು ಕೆಳಗೆ ಬೀಳಿಸುವಂತೆ - ದೇಹದಿಂದ ಕೆಳಕ್ಕೆ ಕೆಡವಿದನು. ಆಗ ಧೃಷ್ಟದ್ಯುಮ್ನನ ಕುದುರೆಗಳು ದಿಕ್ಕಾಪಾಲಾಗಿ ಓಡಿಹೋದವು. ಅವುಗಳು ಓಡಿಹೋಗಲು ದ್ರೋಣನು ಪಾಂಚಾಲ ಸೃಂಜಯರೊಡನೆ ಅಲ್ಲಲ್ಲಿ ಯುದ್ಧಮಾಡತೊಡಗಿದನು. ಪಾಂಡವ-ಪಾಂಚಾಲರನ್ನು ಗೆದ್ದು ಭಾರದ್ವಾಜ ಅರಿಂದಮನು ತನ್ನ ವ್ಯೂಹವನ್ನು ಪುನಃ ಸ್ಥಿರವಾಗಿರುವಂತೆ ಮಾಡಿದನು. ಆಗ ಪಾಂಡವರು ಅವನೊಡನೆ ಯುದ್ಧಮಾಡಲು ಉತ್ಸಾಹಿತರಾಗಿರಲಿಲ್ಲ.

## ಸಾತ್ಯಕಿ-ದುಃಶಾಸನರ ಯುದ್ಧ

ಅನಂತರ ದುಃಶಾಸನನು ಮಳೆಗರೆಯುತ್ತಿರುವ ಮೋಡದಂತೆ ಸಹಸ್ರಾರು ಬಾಣಗಳನ್ನು ಸುರಿಸುತ್ತಾ ಶೈನೇಯ ಸಾತ್ಯಕಿಯನ್ನು ಆಕ್ರಮಣಿಸಿದನು. ಸಾತ್ಯಕಿಯನ್ನು ಅರವತ್ತು ಮತ್ತು ಹಾಗೆಯೇ ಹದಿನಾರು ಶರಗಳಿಂದ ಹೊಡೆದರೂ ಯುದ್ಧದಲ್ಲಿ ಮೈನಾಕಪರ್ವತದಂತೆ ಸ್ಥಿರನಾಗಿ ನಿಂತಿದ್ದ ಅವನನ್ನು ಅಲುಗಾಡಿಸಲೂ ಆಗಲಿಲ್ಲ. ಆ ವೀರನು ಉಕ್ಕಿಬರುತ್ತಿರುವ ಸಾಗರದಂತೆ ಆಕ್ರಮಣಿಸುತ್ತಿರುವ ದುಃಶಾಸನನನ್ನು ಸಾಯಕಗಳಿಂದ ಗಾಯಗೊಳಿಸಿದನು.  ದುಃಶಾಸನನು ಹಾಗೆ ಬಾಣಗಳಿಂದ

ಪೀಡಿತನಾದುದನ್ನು ನೋಡಿ ದುರ್ಯೋಧನನು ಸಾತ್ಯಕಿಯ ರಥದ ಕಡೆ ಧಾವಿಸುವಂತೆ ತ್ರಿಗರ್ತರನ್ನು ಪ್ರಚೋದಿಸಿದನು. ಆ ಯುದ್ಧವಿಶಾರದ ತ್ರಿಗರ್ತರು ಮೂರು ಸಾವಿರ ರಥಗಳನ್ನು ಕೂಡಿಕೊಂಡು ಯುಯುಧಾನನ ಬಳಿ ಹೋದರು. ಅವರು ಯುದ್ಧದಲ್ಲಿ ಸ್ಥಿರಬುದ್ಧಿಯನ್ನಿರಿಸಿಕೊಂಡು ಪಲಾಯನಮಾಡುವುದಿಲ್ಲವೆಂದು ಶಪಥವನ್ನು ತೊಟ್ಟು ಆ ಮಹಾ ರಥಗುಂಪಿನಿಂದ ಸಾತ್ಯಕಿಯನ್ನು ಸುತ್ತುವರೆದರು. ಬಾಣಗಳ ಮಳೆಯನ್ನು ಸುರಿಸುತ್ತಾ ಯುದ್ಧದಲ್ಲಿ ಪ್ರಯತ್ನಪಡುತ್ತಿದ್ದ ಅವರ ಸೇನೆಗಳ ಎದುರಿರುವ ಐನೂರು ಯೋಧರನ್ನು ಸಾತ್ಯಕಿಯು ಉರುಳಿಸಿಬಿಟ್ಟನು. ಕೂಡಲೇ ಅವರು ವೇಗವಾಗಿ ಬೀಸುತ್ತಿದ್ದ ಮಹಾಚಂಡಮಾರುತಕ್ಕೆ ಸಿಲುಕಿ ಮುರಿದುಬಿದ್ದ ಮಹಾಮರಗಳಂತೆ ಶಿನಿಪ್ರವರನ ಸಾಯಕಗಳಿಗೆ ಸಿಲುಕಿ ಹತರಾಗಿ ಬಿದ್ದರು. ಅನೇಕ ರಥಗಳು ಮತ್ತು ಧ್ವಜಗಳೂ ತುಂಡಾಗಿ ಮತ್ತು ಬಂಗಾರದಿಂದ ಅಲಂಕೃತ ಕುದುರೆಗಳು ಹತವಾಗಿ ರಣಭೂಮಿಯಮೇಲೆ ಬಿದ್ದಿದ್ದವು. ಶೈನೇಯನ ಶರಗಳಿಂದ ಗಾಯಗೊಂಡು ರಕ್ತದಿಂದ ತೋಯ್ದುಹೋಗಿದ್ದ ಅವು ಹೂಬಿಟ್ಟ ಕಿಂಶುಕ ವೃಕ್ಷಗಳಂತೆ ಶೋಭಿಸಿದವು. ಯುಯುಧಾನನಿಂದ ವಧಿಸಲ್ಪಡುತ್ತಿದ್ದ ಕೌರವರು ಕೆಸರಿನಲ್ಲಿ ಸಿಲುಕಿದ್ದ ಆನೆಗಳಂತೆ ತ್ರಾತರನ್ಯಾರನ್ನೂ ಪಡೆಯಲಿಲ್ಲ. ಆಗ ಅವರೆಲ್ಲರೂ ಪತಗರಾಜನ

ಭಯದಿಂದ ಬಿಲಗಳನ್ನು ಸೇರುವ ಮಹೋರಗಗಳಂತೆ ದ್ರೋಣನ ರಥದ ಬಳಿ ಸೇರಿದರು. ವಿಷಸರ್ಪಗಳಂತಿರುವ ಶರಗಳಿಂದ ಆ ಐನೂರು ಯೋಧರನ್ನು ಸಂಹರಿಸಿ ವೀರ ಸಾತ್ಯಕಿಯು ನಿಧಾನವಾಗಿ ಧನಂಜಯನ ರಥದ ಕಡೆ ಪ್ರಯಾಣಿಸಿದನು.

ಮುಂದೆ ಸಾಗುತ್ತಿದ್ದ ಆ ನರಶ್ರೇಷ್ಠನನ್ನು ದುಶಾಸನನು ಕೂಡಲೇ ಒಂಭತ್ತು ಸನ್ನತಪರ್ವ ಶರಗಳಿಂದ ಹೊಡೆದನು. ಸಾತ್ಯಕಿಯಾದರೋ ಅವನನ್ನು ಐದು ರುಕ್ಮಪುಂಖಗಳ, ಹದ್ದಿನ ಗರಿಗಳ ನಿಶಿತ ಜಿಹ್ಮಗ ಶರಗಳಿಂದ ತಿರುಗಿ ಹೊಡೆದನು. ದುಃಶಾಸನನಾದರೋ ನಗುತ್ತಿರುವನೋ ಎನ್ನುವಂತೆ ಸಾತ್ಯಕಿಯನ್ನು ಮೂರರಿಂದ ಹೊಡೆದು ಪುನಃ ಐದರಿಂದ ಹೊಡೆದನು. ಶೈನೇಯನು ದುಃಶಾಸನನನ್ನು ಐದು ಆಶುಗಗಳಿಂದ ಹೊಡೆದು ಅವನ ಧನುಸ್ಸನ್ನು ಕತ್ತರಿಸಿ ವಿಸ್ಮಯನನ್ನಾಗಿಸಿ ಅರ್ಜುನನ ಕಡೆ ಹೋದನು. ವೃಷ್ಣಿವೀರನು ಹಾಗೆ ಹೋಗಲು ಕ್ರುದ್ಧನಾದ ದುಃಶಾಸನನು ಅವನನ್ನು ಕೊಲ್ಲಲು ಬಯಸಿ ಸರ್ವವೂ ಉಕ್ಕಿನ ಮಯವಾಗಿರುವ ಶಕ್ತಿಯನ್ನು ಅವನ ಮೇಲೆ ಪ್ರಯೋಗಿಸಿದನು. ಅವನ ಆ ಘೋರ ಶಕ್ತಿಯನ್ನಾದರೋ ಸಾತ್ಯಕಿಯು ನಿಶಿತ ಕಂಕಪತ್ರಿಗಳಿಂದ ನೂರುತುಂಡುಗಳನ್ನಾಗಿ ಕತ್ತರಿಸಿದನು. ಆಗ ದುಃಶಾಸನನು ಇನ್ನೊಂದು ಧನುಸ್ಸನ್ನೆತ್ತಿಕೊಂಡು ಸಾತ್ಯಕಿಯನ್ನು ಹತ್ತು

ಬಾಣಗಳಿಂದ ಹೊಡೆದು ಸಿಂಹನಾದಗೈದನು. ಕ್ರುದ್ಧ ಸಾತ್ಯಕಿಯಾದರೋ ಅವನನ್ನು ಮೂರ್ಛೆಗೊಳಿಸುತ್ತಾ ಅಗ್ನಿಶಿಖೆಗಳ ಆಕಾರದಲ್ಲಿದ್ದ ಶರಗಳನ್ನು ಅವನ ಎದೆಗೆ ಗುರಿಯಿಟ್ಟು ಹೊಡೆದನು. ಪುನಃ ಎಂಟು ತೀಕ್ಷ್ಣಮುಖಗಳುಳ್ಳ ಉಕ್ಕಿನ ಬಾಣಗಳಿಂದ ಹೊಡೆದನು. ಅದಕ್ಕೆ ಪ್ರತಿಯಾಗಿ ದುಃಶಾಸನನೂ ಕೂಡ ಸಾತ್ಯಕಿಯನ್ನು ಇಪ್ಪತ್ತು ಬಾಣಗಳಿಂದ ಹೊಡೆದನು. ತಿರುಗಿ ಸಾತ್ವತನೂ ಕೂಡ ಮಹಾವೇಗದಿಂದ ಅವನ ಎದೆಗೆ ಮೂರು ಸನ್ನತಪರ್ವ ಶರಗಳಿಂದ ಹೊಡೆದನು. ಆಗ ತುಂಬಾ ಕ್ರೋಧಿತನಾದ ಸಾತ್ಯಕಿಯು ದುಃಶಾಸನನ ಕುದುರೆಗಳನ್ನು ನಿಶಿತ ಬಾಣಗಳಿಂದ ಮತ್ತು ಸಾರಥಿಯನ್ನು ಕೂಡ ಸನ್ನತ ಪರ್ವ ಶರಗಳಿಂದ ಹೊಡೆದು ಸಂಹರಿಸಿದನು.

ಒಂದೇ ಭಲ್ಲದಿಂದ ಅವನ ಧನುಸ್ಸನ್ನೂ, ಹಸ್ತಾವಾಪವನ್ನೂ ಕತ್ತರಿಸಿ, ಎರಡು ಭಲ್ಲೆಗಳಿಂದ ಧ್ವಜವನ್ನೂ ರಥಶಕ್ತಿಯನ್ನೂ ತುಂಡರಿಸಿ ಆ ಪರಮಾಸ್ತ್ರವಿದುವು ತೀಕ್ಷ್ಣ ವಿಶಿಖಗಳಿಂದ ಅವನ ಇಬ್ಬರು ಪಾರ್ಷ್ಣಿಸಾರಥಿಗಳನ್ನೂ ಸಂಹರಿಸಿದನು. ಧನುಸ್ಸು ಮುರಿದ, ವಿರಥನಾದ, ಕುದುರೆ-ಸಾರಥಿಗಳನ್ನು ಕಳೆದುಕೊಂಡ ದುಃಶಾಸನನನ್ನು ತ್ರಿಗರ್ತಸೇನಾಪತಿಯು ತನ್ನ ರಥದಲ್ಲಿ ಏರಿಸಿಕೊಂಡನು. ಮಹಾಬಾಹು ಭೀಮಸೇನನ ಮಾತನ್ನು ನೆನಪಿಸಿಕೊಂಡು ಒಂದು ಕ್ಷಣ ದೊರಕಿದ್ದರೂ

ಶೈನೇಯನು ದುಃಶಾಸನನನ್ನು ಕೊಲ್ಲಲಿಲ್ಲ. ಯುದ್ಧದಲ್ಲಿ ಧೃತರಾಷ್ಟ್ರನ ಎಲ್ಲ ಮಕ್ಕಳ ವಧೆಯನ್ನೂ ತಾನೇ ಮಾಡುತ್ತೇನೆಂದು ಸಭಾಮಧ್ಯದಲ್ಲಿ ಭೀಮಸೇನನು ಪ್ರತಿಜ್ಞೆಮಾಡಿದ್ದನು. ಹಾಗೆ ಸಂಯುಗದಲ್ಲಿ ದುಃಶಾಸನನನ್ನು ಗೆದ್ದ ಸಾತ್ಯಕಿಯು ತ್ವರೆಮಾಡಿ ಧನಂಜಯನು ಹೋಗಿರುವಲ್ಲಿಗೆ ಹೋದನು.

ರಥ-ಗಜ-ಅಶ್ವ-ಪದಾತಿಗಳಿಂದ ಸಮೃದ್ಧವಾದ ಕೌರವ ಸೇನೆಗಳು ಉದ್ಯೋಗಶೀಲರಾಗಿದ್ದು, ಅವುಗಳ ತುಮುಲವು ಯುಗಾಂತವೋ ಎಂಬಂತೆ ಇದ್ದಿತು. ಅಲ್ಲಿ ಸೇರಿದ್ದ ದೇವತೆಗಳೂ ಮತ್ತು ಚಾರಣರೂ

> “ಭೂಮಿಯಲ್ಲಿ ಇಂತಹ ಸೇನಾ ಸಮೂಹವು ಇದೇ
> ಕೊನೆಯದಾಗುತ್ತದೆ!”

ಎಂದು ಹೇಳಿಕೊಳುತ್ತಿದ್ದರು. ಜಯದ್ರಥನ ವಧೆಯ ಸಮಯದಲ್ಲಿ ದ್ರೋಣನು ನಿರ್ಮಿಸಿದ ಅದರಂಥಹ ವ್ಯೂಹವು ಎಂದೂ ರಚನೆಗೊಂಡಿರಲಿಲ್ಲ. ರಣದಲ್ಲಿ ಅನ್ಯೋನ್ಯರನ್ನು ಪ್ರಹರಿಸುತ್ತಿದ್ದ ಆ ಸೇನೆಗಳಿಂದ ಹೊರಟ ಶಬ್ಧವು ಚಂಡಮಾರುತಕ್ಕೆ ಸಿಲುಕಿದ ಸಮುದ್ರದ ಭೋರ್ಗರೆತಕ್ಕೆ ಸಮನಾಗಿತ್ತು. ಸೇರಿರುವ ಕೌರವ ಮತ್ತು ಪಾಂಡವರ ಸೇನೆಗಳಲ್ಲಿ ನೂರಾರು ಸಹಸ್ರಾರು ಪಾರ್ಥಿವರಿದ್ದರು. ಸಮರದಲ್ಲಿ ಕ್ರುದ್ಧರಾಗಿರುವ ದೃಢಕರ್ಮಿ ಪ್ರವೀರರ ರೋಮಾಂಚಕಾರೀ ಮಹಾ

ತುಮುಲಶಬ್ಧವು ಉಂಟಾಯಿತು. ಭೀಮಸೇನ, ಧೃಷ್ಟದ್ಯುಮ್ನ, ನಕುಲ, ಸಹದೇವ ಮತ್ತು ಪಾಂಡವ ಧರ್ಮರಾಜರು ಜೋರಾಗಿ ಕೂಗಿಕೊಳ್ಳುತ್ತಿದ್ದರು:

> "ಬೇಗಬನ್ನಿರಿ! ಶಕ್ತಿಯನ್ನುಪಯೋಗಿಸಿ ಪ್ರಹರಿಸಿ! ವೀರರಾದ ಮಾಧವ-ಪಾಂಡವರು ಅರಿಸೇನೆಯನ್ನು ಪ್ರವೇಶಿಸಿಬಿಟ್ಟಿದ್ದಾರೆ! ಜಯದ್ರಥನ ವಧೆಯು ಸುಲಭವಾಗಿ ನಡೆಯುವಂತೆ ಮಾಡಲು ಅವಸರಮಾಡಿರಿ!"

ಎಂದು ಸೇನೆಗಳನ್ನು ಯುಧಿಷ್ಠಿರನು ಹುರಿದುಂಬಿಸಿದನು.

> "ಅವರಿಬ್ಬರೂ ಇಲ್ಲದಿರುವಾಗ ಕುರುಗಳು ನಮ್ಮನ್ನು ಜಯಿಸಿ ಯಶಸ್ವಿಗಳಾಗಿಬಿಡಬಹುದು! ಭಿರುಗಾಳಿಯು ಹೇಗೆ ಮಹಾವೇಗದಿಂದ ಬೀಸಿ ಸಾಗರವನ್ನು ಅಲ್ಲೋಲಕಲ್ಲೋಲಮಾಡುವುದೋ ಹಾಗೆ ನೀವು ಎಲ್ಲರೂ ಒಟ್ಟಾಗಿ ಬೇಗನೇ ಕುರುಸೇನೆಯನ್ನು ಕಲಕಿಬಿಡಿ!"

ಹೀಗೆ ಭೀಮಸೇನ ಮತ್ತು ಪಾಂಚಾಲ್ಯ ಧೃಷ್ಟದ್ಯುಮ್ನರು ಪ್ರಚೋದಿಸಲು ಅವರು ಪ್ರಿಯಪ್ರಾಣಗಳನ್ನೂ ತೊರೆದು ರಣದಲ್ಲಿ ಕೌರವರನ್ನು ಸಂಹರಿಸಿದರು. ಆ ಉತ್ತಮತೇಜಸ್ಸುಳ್ಳವರು ಯುದ್ಧ ಶಸ್ತ್ರಗಳಿಂದ

ಸಾವನ್ನು ಬಯಸಿ, ಮಿತ್ರಕಾರ್ಯಾರ್ಥವಾಗಿ ಮತ್ತು ಸ್ವರ್ಗಾರ್ಥವಾಗಿ ತಮ್ಮ ಜೀವವನ್ನೇ ರಕ್ಷಿಸಿಕೊಳ್ಳುತ್ತಿರಲಿಲ್ಲ. ಹಾಗೆಯೇ ಕೌರವರ ಕಡೆಯವರೂ ಕೂಡ ಮಹಾ ಯಶಸ್ಸನ್ನು ಬಯಸಿ ಯುದ್ಧದಲ್ಲಿಯೇ ಶ್ರೇಷ್ಠ ಬುದ್ಧಿಯನ್ನಿರಿಸಿ ಯುದ್ಧದಲ್ಲಿಯೇ ನಿರತರಾಗಿದ್ದರು. ಮಹಾಭಯವನ್ನುಂಟುಮಾಡಿ ನಡೆಯುತ್ತಿದ್ದ ಆ ತುಮುಲ ಯುದ್ಧದಲ್ಲಿ ಸರ್ವ ಸೇನೆಗಳನ್ನೂ ಸಂಹರಿಸಿ ಸಾತ್ಯಕಿಯು ಅರ್ಜುನನಿದ್ದಲ್ಲಿಗೆ ನಡೆದನು.

## ದುರ್ಯೋಧನನ ಯುದ್ಧ

ಅಲ್ಲಿ ಕವಚಗಳ ಮೇಲೆ ಬಿದ್ದ ಸೂರ್ಯನ ರಶ್ಮಿಗಳು ಹೊರಸೂಸಿ ರಣದ ಎಲ್ಲಕಡೆಗಳಲ್ಲಿ ಸೈನಿಕರ ದೃಷ್ಟಿಯನ್ನೇ ಕೋರೈಸಿದವು. ಹಾಗೆ ನಿರ್ಭಯವಾಗಿ ಪ್ರಯತ್ನಿಸಿ ಹೋರಡುತ್ತಿದ್ದ ಪಾಂಡವೇಯರ ಆ ಮಹಾಬಲವನ್ನು ದುರ್ಯೋಧನನು ಪ್ರವೇಶಿಸಿದನು. ಅವನು ಆಕ್ರಮಣಿಸಲು ನಡೆದ ಅವನ ಮತ್ತು ಅವರ ನಡುವೆ ನಡೆದ ಮಹಾಯುದ್ಧವು ಸರ್ವಸೈನ್ಯಗಳ ಕ್ಷಯಕರವಾಗಿ ಪರಿಣಮಿಸಿತು. ಕಮಲಗಳಿಂದ ಕೂಡಿದ ಸರೋವರವನ್ನು ಆನೆಯೊಂದು ಮಥಿಸಿಬಿಡುವಂತೆ ರಣದಲ್ಲಿ ಪಾಂಡವರ ಸೇನೆಯನ್ನು ದುರ್ಯೋಧನನು ಒಮ್ಮೆಲೇ ಎಲ್ಲ ಕಡೆಗಳಿಂದ ಕದಡಿ

ಅಲ್ಲೋಲಕಲ್ಲೋಲಗೊಳಿಸಿಬಿಟ್ಟನು. ಅವನು ಹಾಗೆ ಮಾಡಿದುದನ್ನು ನೋಡಿ ಭೀಮಸೇನನನ್ನು ಮುಂದಿರಿಸಿಕೊಂಡು ಪಾಂಚಾಲರು ಅವನನ್ನು ಆಕ್ರಮಣಿಸಿದರು. ದುರ್ಯೋಧನನು ಭೀಮಸೇನನನ್ನು ಹತ್ತರಿಂದ, ಮಾದ್ರೀಪುತ್ರರನ್ನು ಮೂರು-ಮೂರರಿಂದ, ವಿರಾಟ-ದ್ರುಪದರನ್ನು ಆರರಿಂದ, ನೂರರಿಂದ ಶಿಖಂಡಿಯನ್ನು. ಧೃಷ್ಟದ್ಯುಮ್ನನನ್ನು ಇಪ್ಪತ್ತರಿಂದ, ಧರ್ಮಪುತ್ರನನ್ನು ಏಳರಿಂದ, ಕೇಕಯರನ್ನು ಹತ್ತರಿಂದ ಮತ್ತು ದ್ರೌಪದೇಯರನ್ನು ಮೂರು-ಮೂರರಿಂದ ಹೊಡೆದು, ರಣದಲ್ಲಿ ಇತರ ಇನ್ನೂ ನೂರಾರು ಆನೆಗಳನ್ನು ರಥಗಳನ್ನು ಮತ್ತು ಯೋಧರನ್ನು ಕ್ರುದ್ಧನಾದ ಅಂತಕನಂತೆ ತನ್ನ ಉಗ್ರ ಬಾಣಗಳಿಂದ ಕತ್ತರಿಸಿ ಹಾಕಿದನು. ಅವನು ಧನುಸ್ಸನ್ನು ಮಂಡಲಾಕಾರವಾಗಿ ಹೂಡಿ, ತನ್ನ ಅಸ್ತ್ರಬಲ ಶಿಕ್ಷಣದಿಂದ ಶತ್ರುಗಳನ್ನು ಸಂಹರಿಸುತ್ತಿರುವಂತೆ ಕಂಡನು. ಶತ್ರುಗಳನ್ನು ಸಂಹರಿಸುತ್ತಿರುವ ಅವನ ಆ ಬಂಗಾರದ ಬೆನ್ನುಳ್ಳ ಮಹಾಧನುಸ್ಸನ್ನು ಜ್ಯೇಷ್ಠ ಪಾಂಡವ ಯುಧಿಷ್ಠಿರನು ಎರಡು ಭಲ್ಲಗಳಿಂದ ಮೂರು ಭಾಗಗಳನ್ನಾಗಿ ತುಂಡರಿಸಿದನು. ಇನ್ನೂ ಅನೇಕ ನಿಶಿತ ಶರಗಳಿಂದ ಅವನನ್ನು ಹೊಡೆಯಲು ಅವು ದುರ್ಯೋಧನನ ಕವಚಕ್ಕೆ ತಾಗಿ, ಕವಚವನ್ನು ಸೀಳಿ, ಭೂಮಿಯನ್ನು ಹೊಕ್ಕವು. ಆಗ ಸಂತೋಷಗೊಂಡ ಪಾರ್ಥರು ವೃತ್ರವಧೆಯ ನಂತರ ದೇವತೆಗಳು ಮತ್ತು ಮಹರ್ಷಿಗಳು ಶಕ್ರನನ್ನು

ಹೇಗೋ ಹಾಗೆ ಯುಧಿಷ್ಠಿರನನ್ನು ಸುತ್ತುವರೆದರು. ಆಗ ದುರ್ಯೋಧನನು ದೃಢವಾದ ಬಿಲ್ಲನ್ನು ಎತ್ತಿಕೊಂಡು “ನಿಲ್ಲು! ನಿಲ್ಲು!” ಎಂದು ಹೇಳುತ್ತಾ ರಾಜಾ ಪಾಂಡವನನ್ನು ಆಕ್ರಮಣಿಸಿದನು. ಆ ಮಹಾರಥನು ಹೀಗೆ ಮುಂದುವರೆಯುತ್ತಿರಲು ಜಯವನ್ನು ಬಯಸುತ್ತಿದ್ದ ಪಾಂಚಾಲರು ಸಂತೋಷದಿಂದ ಅವನನ್ನು ಎದುರಿಸಿದರು. ಆಗ ಯುದ್ಧದಲ್ಲಿ ಪಾಂಡವರನ್ನು ರಕ್ಷಿಸುತ್ತಿದ್ದ ಅವರನ್ನು ದ್ರೋಣನು ಚಂಡಮಾರುತದಿಂದುಂಟಾದ ಮೇಘಗಳನ್ನೂ ಮೋಡಗಳನ್ನೂ ಸ್ವೀಕರಿಸುವ ಪರ್ವತದಂತೆ ಬರಮಾಡಿಕೊಂಡನು. ಅಲ್ಲಿ ಭೂರಿವರ್ಧನ ಸರ್ವದೇಹಿಗಳ ಸಂಹಾರಕ ರುದ್ರನ ಕ್ರೀಡೆಯಂತಿರುವ ಮಹಾ ಸಂಗ್ರಾಮವು ನಡೆಯಿತು.

## ಕೇಕಯ ಬೃಹತ್ಕ್ಷತ್ರನ ವಧೆ

ಅವತ್ತಿನ ಅಪರಾಹ್ಣದಲ್ಲಿ ಮೋಡಗಳ ಗುಡುಗಿನಂತೆ ಮೊಳಗುತ್ತಿರುವ ಸಂಗ್ರಾಮವು ಪುನಃ ದ್ರೋಣ ಮತ್ತು ಸೋಮಕರ ನಡುವೆ ನಡೆಯಿತು. ಆ ನರವೀರನು ಸಮಾಹಿತನಾಗಿ ಕೆಂಪು ಕುದುರೆಗಳನ್ನು ಕಟ್ಟಿದ್ದ ರಥವನ್ನೇರಿ ಮಧ್ಯಮ ವೇಗವನ್ನು ಬಳಸಿ ಪಾಂಡವರನ್ನು ಆಕ್ರಮಣಿಸಿದನು. ಆ ಮಹೇಷ್ವಾಸ ಕಲಶೋತ್ತಮಸಂಭವ ಭಾರದ್ವಾಜನು ರಣದಲ್ಲಿ ಆಟವಾಡುತ್ತಿರುವನೋ ಎಂಬಂತೆ ಬಣ್ಣದ

ಪುಂಖಗಳುಳ್ಳ ನಿಶಿತ ಬಾಣಗಳಿಂದ ಶ್ರೇಷ್ಠ ಶ್ರೇಷ್ಠ ಯೋಧರನ್ನು ತುಂಡರಿಸಿದನು. ಆಗ ಕೇಕಯರ ಮಹಾರಥ ಐವರು ಸಹೋದರರ ವೀರ ಶ್ರೇಷ್ಠ, ಸಮರ ಕರ್ಕಶ ಬೃಹತ್ಕ್ಷತ್ರನು ದ್ರೋಣನನ್ನು ಎದುರಿಸಿದನು. ತೀಕ್ಷ್ಣ ವಿಶಿಖಗಳನ್ನು ಬಿಡುತ್ತಾ ಅವನು ಮಹಾಮೇಘವು ಗಂಧಮಾದನ ಪರ್ವತದ ಮೇಲೆ ಮಳೆಸುರಿಸುವಂತೆ ಆಚಾರ್ಯನ ಮೇಲೆ ಸುರಿಸಿ ಮುಚ್ಚಿಬಿಟ್ಟನು. ಕ್ರುದ್ಧನಾದ ದ್ರೋಣನು ಅವನ ಮೇಲೆ ಸ್ವರ್ಣಪುಂಖಗಳುಳ್ಳ, ಕಲ್ಲಿನ ಮೇಲೆ ಮಸೆದ ಹದಿನೇಳು ಸಾಯಕಗಳನ್ನು ಪ್ರಯೋಗಿಸಿದನು. ದ್ರೋಣನು ಬಿಟ್ಟ ಆ ಘೋರ ಸರ್ಪದ ವಿಷಗಳಂತಿರುವ ಒಂದೊಂದು ಬಾಣಗಳನ್ನೂ ಬೃಹತ್ಕ್ಷತ್ರನು ಸಂತೋಷದಿಂದ ಹತ್ತು ಬಾಣಗಳಿಂದ ಕತ್ತರಿಸಿದನು. ಅವನ ಆ ಕೈಚಳಕವನ್ನು ನೋಡಿ ನಕ್ಕ ದ್ವಿಜಸತ್ತಮನು ಎಂಟು ಸನ್ನತಪರ್ವ ವಿಶಿಖಗಳನ್ನು ಪ್ರಯೋಗಿಸಿದನು. ದ್ರೋಣನಿಂದ ಬಿಡಲ್ಪಟ್ಟ ಆ ಶರಗಳು ಬೀಳುವುದನ್ನು ನೋಡಿ ಬೃಹತ್ಕ್ಷತ್ರನು ಅವುಗಳನ್ನು ದೃಢವಾದ ಮತ್ತು ನಿಶಿತ ಶರಗಳಿಂದಲೇ ತಡೆದುಬಿಟ್ಟನು. ಆಗ ಬೃಹತ್ಕ್ಷತ್ರನು ಮಾಡಿದ ಆ ಸುದುಷ್ಕರ ಕೆಲಸವನ್ನು ನೋಡಿ ಕೌರವ ಸೈನ್ಯವು ವಿಸ್ಮಯಗೊಂಡಿತು. ಮಹಾತಪ ದ್ರೋಣನು ರಣದಲ್ಲಿ ಕೇಕಯನನ್ನು ಮೀರಿಸುತ್ತಾ ದಿವ್ಯ ಬ್ರಹ್ಮಾಸ್ತ್ರವನ್ನು ಹೂಡಿ ಪ್ರಯೋಗಿಸಿದನು. ಮಹಾಬಾಹು ಕೈಕೇಯನು ರಣದಲ್ಲಿ ಅದನ್ನು

ತಿರುಗಿ ಬ್ರಹ್ಮಾಸ್ತ್ರದಿಂದಲೇ ತಡೆದನು. ಸಂಯುಗದಲ್ಲಿ ಭಾರದ್ವಾಜನ ಆ ಅಸ್ತ್ರವನ್ನು ಪ್ರತಿಸಂಹರಿಸಿ ಬೃಹತ್ಕ್ಷತ್ರನು ಆ ಬ್ರಾಹ್ಮಣನನ್ನು ಅರವತ್ತು ಸ್ವರ್ಣಪುಂಖ ಶಿಲಾಶಿತಗಳಿಂದ ಹೊಡೆದನು.

ದ್ರೋಣನು ಅವನನ್ನು ನಾರಾಚದಿಂದ ಹೊಡೆಯಲು ಅದು ಅವನ ಕವಚವನ್ನು ಭೇದಿಸಿ ಧರಣೀತಲವನ್ನು ಪ್ರವೇಶಿಸಿತು. ಕೃಷ್ಣಸರ್ಪವು ಹೇಗೆ ಹುತ್ತದಿಂದ ಹೊರಬರುತ್ತದೆಯೋ ಹಾಗೆ ಆಹವದಲ್ಲಿ ಆ ಬಾಣವು ಕೈಕೇಯನನ್ನು ಭೇದಿಸಿ ಭೂಮಿಯನ್ನು ಹೊಕ್ಕಿತು. ಅಸ್ತ್ರವಿದ ದ್ರೋಣನಿಂದ ಹಾಗೆ ತುಂಬಾ ಗಾಯಗೊಂಡ ಬೃಹತ್ಕ್ಷತ್ರನು ಮಹಾ ಕ್ರೋಧದಿಂದ ಆವಿಷ್ಟನಾಗಿ ಶುಭನಯನಗಳನ್ನು ತಿರುಗಿಸುತ್ತಾ ದ್ರೋಣನನ್ನು ಎಪ್ಪತ್ತು ಸ್ವರ್ಣಪುಂಖ ಶಿಲಾಶಿತಗಳಿಂದ ಹೊಡೆದನು ಮತ್ತು ಭಲ್ಲದಿಂದ ಅವನ ಸಾರಥಿಯ ಬಾಹು-ಎದೆಗಳಿಗೆ ಹೊಡೆದನು. ಬೃಹತ್ಕ್ಷತ್ರನಿಂದ ಬಹುವಾಗಿ ಗಾಯಗೊಂಡ ದ್ರೋಣನಾದರೋ ಕೇಕಯನ ರಥದ ಮೇಲೆ ತೀಕ್ಷ್ಣ ವಿಶಿಖಗಳನ್ನು ಬಿಟ್ಟನು. ಮಹಾರಥ ಬೃಹತ್ಕ್ಷತ್ರನನ್ನು ವ್ಯಾಕುಲಗೊಳಿಸಿ ದ್ರೋಣನು ಕೇಕಯನ ಮೇಲೆ ತೀಕ್ಷ್ಣ ಸಾಯಕವನ್ನು ಪ್ರಯೋಗಿಸಿದನು. ಅದು ಅವನ ಎದೆಯನ್ನು ಗಾಢವಾಗಿ ಚುಚ್ಚಿಕೊಳ್ಳಲು ಪುರುಷಶಾರ್ದೂಲ ಬೃಹತ್ಕ್ಷತ್ರನು ಹೃದಯವು ಒಡೆದು ರಥದಿಂದ ಕೆಳಕ್ಕೆ ಬಿದ್ದನು.

## ಚೇದಿರಾಜ ಧೃಷ್ಟಕೇತುವಿನ ವಧೆ

ಕೇಕಯರ ಮಹಾರಥ ಬೃಹತ್ಕ್ಷತ್ರನು ಹತನಾಗಲು ಶಿಶುಪಾಲನ ಮಗ ಧೃಷ್ಟಕೇತುವು ಸುಸಂಕ್ರುದ್ಧನಾಗಿ ತನ್ನ ಸಾರಥಿಗೆ ಹೇಳಿದನು:

> “ಸಾರಥೇ! ಕೇಕಯರೆಲ್ಲರನ್ನೂ ಮತ್ತು ಪಾಂಚಾಲರ ವಾಹಿನಿಯನ್ನೂ ಸಂಹರಿಸಿ ಕವಚಧರಿಸಿದ ದ್ರೋಣನು ಎಲ್ಲಿ ನಿಂತಿರುವನೋ ಅಲ್ಲಿಗೆ ರಥವನ್ನೊಯ್ಯಿ!”

ಅವನ ಆ ಮಾತನ್ನು ಕೇಳಿ ಸಾರಥಿಯು ರಥಿಗಳಲ್ಲಿ ಶ್ರೇಷ್ಠ ಧೃಷ್ಟಕೇತುವನ್ನು ಕಾಂಬೋಜದ ವೇಗಯುಕ್ತ ಕುದುರೆಗಳ ಸಹಾಯದಿಂದ ದ್ರೋಣನಿದ್ದಲ್ಲಿಗೆ ತಲುಪಿಸಿದನು. ಚೇದಿಗಳ ವೃಷಭ, ಅತಿಬಲೋದಿತ ಧೃಷ್ಟಕೇತುವಾದರೋ ಬೆಂಕಿಯನ್ನು ಹೊಗುವ ಪತಂಗದಂತೆ ಒಮ್ಮೆಲೇ ದ್ರೋಣನ ಮೇಲೆ ಎರಗಿದನು. ಅಶ್ವ-ರಥ-ಧ್ವಜಗಳೊಂದಿಗೆ ದ್ರೋಣನನ್ನು ಅರವತ್ತು ಬಾಣಗಳಿಂದ ಹೊಡೆದು ಅವನು ಮಲಗಿರುವ ಹುಲಿಯನ್ನು ತಿವಿದು ಎಬ್ಬಿಸುವಂತೆ ಪುನಃ ಇತರ ತೀಕ್ಷ್ಣ ಶರಗಳಿಂದ ಹೊಡೆದನು. ಆಗ ಹೋರಾಡುತ್ತಿದ್ದ ರಾಜರಲ್ಲಿಯೇ ಬಲಶಾಲೀ ಧೃಷ್ಟಕೇತುವಿನ ಧನುಸ್ಸನ್ನು ಮಧ್ಯದಲ್ಲಿಯೇ ದ್ರೋಣನು ತುಂಡರಿಸಿದನು. ಆಗ ಮಹಾರಥ ಶೈಶುಪಾಲಿಯು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಪುನಃ ದ್ರೋಣನನ್ನು ನಿಶಿತವಾದ ದೃಢ

ಸಾಯಕಗಳಿಂದ ಹೊಡೆದನು. ಮಹಾಬಲ ದ್ರೋಣನು ಅವನ ಕುದುರೆಗಳನ್ನೂ ಸಾರಥಿಯನ್ನೂ ಸಂಹರಿಸಿ, ಧೃಷ್ಟಕೇತುವಿನ ಮೇಲೆ ಇಪ್ಪತ್ತೈದು ಸಾಯಕಗಳನ್ನು ಪ್ರಯೋಗಿಸಿದನು. ರಣದಲ್ಲಿ ರಥ-ಧನುಸ್ಸುಗಳನ್ನು ಕಳೆದುಕೊಂಡ ಚೇದಿರಾಜನೂ ಕೂಡ ಸಂಕ್ರುದ್ಧನಾಗಿ ಭಾರಧ್ವಾಜನ ರಥದ ಮೇಲೆ ಗದೆಯನ್ನು ಎಸೆದನು. ಒಮ್ಮೆಲೇ ಬೀಳುತ್ತಿರುವ ಆ ಘೋರರೂಪದ ಭಯಾವಹ ಉಕ್ಕಿನಿಂದ ಮಾಡಲ್ಪಟ್ಟ ಭಾರವಾದ ಬಂಗಾರದಿಂದ ವಿಭೂಷಿತವಾದ ಗದೆಯನ್ನು ಭಾರದ್ವಾಜನು ಒಂದೇ ಶರದಿಂದ ಸಹಸ್ರ ಚೂರುಗಳನ್ನಾಗಿಸಿ ಬೀಳಿಸಿದನು. ಭಾರದ್ವಾಜನಿಂದ ಒಡೆಯಲ್ಪಟ್ಟ ಆ ಗದೆಯು ಕೆಂಪುಮಾಲೆಯನ್ನು ಧರಿಸಿದ ನಭಸ್ತಲದಿಂದ ತಾರೆಯು ಬೀಳುವಂತೆ ಭೂಮಿಯ ಮೇಲೆ ಬಿದ್ದಿತು.

ಗದೆಯು ನಾಶವಾದುದನ್ನು ನೋಡಿ ಅಮರ್ಷಣ ಧೃಷ್ಟಕೇತುವು ತಕ್ಷಣವೇ ಬಂಗಾರದಂತೆ ಪ್ರಜ್ವಲಿಸುತ್ತಿರುವ ತೋಮರ ಶಕ್ತಿಯನ್ನು ಎಸೆದನು. ದ್ರೋಣನಾದರೋ ಮಹಾರಣದಲ್ಲಿ ಆ ತೋಮರವನ್ನು ಮೂರು ಬಾಣಗಳಿಂದ ತುಂಡರಿಸಿ ಕೂಡಲೇ ಪಳಗಿದ ಕೈಯುಳ್ಳ ಮಹಾಬಲನು ಶಕ್ತಿಯನ್ನೂ ಕತ್ತರಿಸಿದನು. ಆಗ ಧೃಷ್ಟಕೇತುವಿನ ವಧೆಯನ್ನು ಬಯಸಿದ ಪ್ರತ್ಮವಾನ್ ಭಾರದ್ವಾಜನು ಅವನ

ವಧೆಗೋಸ್ಕರ ತೀಕ್ಷ್ಣ ವಿಶಿಖವನ್ನು ಪ್ರಯೋಗಿಸಿದನು. ಆ ಅಮಿತೌಜಸ ಬಾಣವು ಅವನ ಕವಚವನ್ನು ಭೇದಿಸಿ ಹೃದಯವನ್ನು ಸೀಳಿ ಹಂಸವು ಪದ್ಮಸರೋವರವನ್ನು ಹೇಗೋ ಹಾಗೆ ಭೂಮಿಯನ್ನು ಸೇರಿತು. ಹಸಿದ ಹಲ್ಲಿಯು ಪತಂಗವನ್ನು ಹೇಗೆ ನುಂಗಿಬಿಡುತ್ತದೆಯೋ ಹಾಗೆ ಆ ಮಹಾರಣದಲ್ಲಿ ಶೂರ ದ್ರೋಣನು ಧೃಷ್ಟಕೇತುವನ್ನು ನುಂಗಿಬಿಟ್ಟನು.

ಚೇದಿರಾಜನು ಹೀಗೆ ಹತನಾಗಲು ಅವನ ಪರಮಾಸ್ತ್ರಗಳನ್ನು ತಿಳಿದಿದ್ದ ಮಗನು ತುಂಬಾ ಕೋಪದಿಂದ ಆವೇಶಗೊಂಡು ತಂದೆಯನ್ನು ಸಂಹರಿಸಿದ ದ್ರೋಣನನ್ನು ಆಕ್ರಮಣಿಸಿದನು. ಮಹಾರಣ್ಯದಲ್ಲಿ ಮಹಾವ್ಯಾಘ್ರವೊಂದು ಜಿಂಕೆಯ ಮರಿಯನ್ನು ಹೇಗೋ ಹಾಗೆ ಬಲಶಾಲೀ ದ್ರೋಣನು ಶರಗಳಿಂದ ಅವನನ್ನು ಯಮಲೋಕಕ್ಕೆ ಕಳುಹಿಸಿದನು. ಪಾಂಡವರ ಸೇನೆಯು ಹಾಗೆ ಕ್ಷೀಣವಾಗುತ್ತಿರಲು ಜರಾಸಂಧನ ವೀರ ಮಗನು ಸ್ವಯಂ ತಾನೇ ದ್ರೋಣನನ್ನು ಆಕ್ರಮಣಿಸಿದನು. ಅವನಾದರೋ ಕೂಡಲೇ ದ್ರೋಣನನ್ನು ಹರಿತ ಸಾಯಕಗಳಿಂದ ಮುಚ್ಚಿ ಮೋಡವು ಸೂರ್ಯನನ್ನು ಹೇಗೋ ಹಾಗೆ ಅವನನ್ನು ಕಾಣದಂತಾಗಿಸಿಬಿಟ್ಟನು. ಅವನ ಕೈಚಳಕವನ್ನು ನೋಡಿ ಕ್ಷತ್ರಿಯಮರ್ದನ ದ್ರೋಣನು ಕೂಡಲೇ ಅವನ ಮೇಲೆ ನೂರಾರು ಸಹಸ್ರಾರು ಸಾಯಕಗಳನ್ನು ಪ್ರಯೋಗಿಸಿದನು. ರಣದಲ್ಲಿ ರಥವನ್ನೇರಿದ್ದ

ರಥಿಗಳಲ್ಲಿ ಶ್ರೇಷ್ಠ ಜರಾಸಂಧನ ಮಗನನ್ನು ಸರ್ವಧನ್ವಿಗಳೂ ನೋಡುತ್ತಿರುವಂತೆಯೇ ದ್ರೋಣನು ಸಂಹರಿಸಿದನು. ಅಂತ್ಯವು ಪ್ರಾಪ್ತವಾದಾಗ ಸರ್ವಭೂತಗಳನ್ನೂ ಅಂತಕನು ಹೇಗೆ ನುಂಗುವನೋ ಹಾಗೆ ಅಂತಕನಂತಿದ್ದ ದ್ರೋಣನನ್ನು ಯಾರ್ಯಾರು ಎದುರಿಸಿದರೋ ಅವರೆಲ್ಲರನ್ನೂ ದ್ರೋಣನು ಸಂಹರಿಸಿಬಿಟ್ಟನು. ಆಗ ಮಹೇಷ್ವಾಸ ದ್ರೋಣನು ರಣದಲ್ಲಿ ತನ್ನ ಹೆಸರನ್ನು ಕೂಗಿ ಕೇಳಿಸುತ್ತಾ ಅನೇಕ ಸಹಸ್ರ ಶರಗಳಿಂದ ಪಾಂಡವೇಯರನ್ನು ಮೂರ್ಛೆಗೊಳಿಸಿದನು. ಆಗ ಸ್ವರ್ಣಪುಂಖಗಳ ದ್ರೋಣಾಂಕಿತ ಶಿಲಾಶಿತ ಬಾಣಗಳು ರಣದ ಎಲ್ಲಕಡೆ ಮನುಷ್ಯರನ್ನು, ಆನೆಗಳನ್ನು ಮತ್ತು ಕುದುರೆಗಳನ್ನೂ ಸಂಹರಿಸಿದವು. ಶಕ್ರನ ಆಕ್ರಮಣಕ್ಕೊಳಗಾದ ಮಹಾಸುರರಂತೆ ದ್ರೋಣನಿಂದ ವಧಿಸಲ್ಪಡುತ್ತಿದ್ದ ಪಾಂಚಾಲರು, ಛಳಿಯಿಂದ ಪೀಡಿತರಾದ ಗೋವುಗಳಂತೆ ನಡುಗತೊಡಗಿದರು. ದ್ರೋಣನಿಂದ ವಧಿಸಲ್ಪಡುತ್ತಿರುವ ಪಾಂಡವರ ಸೇನೆಗಳಲ್ಲಿ ಘೋರವಾದ ಆಕ್ರಂದನವು ಕೇಳಿ ಬಂದಿತು. ಸಂಯುಗದಲ್ಲಿ ಭಾರದ್ವಾಜನ ಶರವರ್ಷಗಳಿಂದ ಪೀಡಿತರಾದ ಪಾಂಚಾಲರ ಮಹಾರಥರು ಮೊಸಳೆಯ ಬಾಯಿಗೆ ಸಿಕ್ಕ ತೊಡೆಗಳುಳ್ಳವರಂತೆ ಸ್ತಬ್ಧರಾಗಿಬಿಟ್ಟಿದ್ದರು. ಆಗ ಚೇದಿದೇಶದವರು, ಸೃಂಜಯರು ಮತ್ತು ಸೋಮಕರು ಯುದ್ಧದ ಉತ್ಸಾಹದಿಂದ ಸಂಹೃಷ್ಟರಾಗಿ ಭಾರದ್ವಾಜನನ್ನು ಆಕ್ರಮಣಿಸಿದರು.

“ದ್ರೋಣನನ್ನು ಕೊಲ್ಲಿ! ದ್ರೋಣನನ್ನು ಕೊಲ್ಲಿ!” ಎಂದು ಹೇಳುತ್ತಾ ದ್ರೋಣನನ್ನು ಯಮಸದನಕ್ಕೆ ಕಳುಹಿಸಬೇಕೆಂದು ಬಯಸಿ ಪ್ರಯತ್ನಿಸುತ್ತಾ ಆ ಪುರುಷವ್ಯಾಘ್ರರು ಸರ್ವಶಕ್ತಿಯನ್ನುಪಯೋಗಿಸಿ ಮಹಾದ್ಯುತಿ ದ್ರೋಣನ ಮೇಲೆ ಎರಗಿದರು.

ಪ್ರಯತಿಸುತ್ತಿದ್ದ ಆ ವೀರರರನ್ನು, ಅವರಲ್ಲೂ ವಿಶೇಷವಾಗಿ ಚೇದಿಪ್ರಮುಖರನ್ನು ಭಾರದ್ವಾಜನು ಶಿಲೀಮುಖಿಗಳಿಂದ ಯಮಲೋಕಕ್ಕೆ ಕಳುಹಿಸಿದನು. ಚೇದಿಪ್ರಮುಖರು ಕಡಿಮೆಯಾಗುತ್ತಿರುವುದನ್ನು ಕಂಡು ದ್ರೋಣನ ಸಾಯಕಗಳಿಂದ ಪೀಡಿತರಾದ ಪಾಂಚಾಲರು ನಡುಗಿದರು. ದ್ರೋಣನ ಆ ರೀತಿಯ ಕೃತ್ಯಗಳನ್ನು ನೋಡಿ ಅವರು ಧೃಷ್ಟದ್ಯುಮ್ನನ ರಥದ ಬಳಿಯಿದ್ದ ಭೀಮಸೇನನನ್ನು ಕೂಗಿ ಕರೆದರು: “ಬಹಳಷ್ಟು ತಪಸ್ಸನ್ನು ಆಚರಿಸಿದ ಈ ಬ್ರಾಹ್ಮಣನು ಕೆಟ್ಟದಾಗಿ ನಡೆದುಕೊಂಡು ಯುದ್ಧದಲ್ಲಿ ವಿಕ್ರಮದಿಂದ ಕ್ಷತ್ರಿಯರ್ಷಭರನ್ನು ಸುಡುತ್ತಿದ್ದಾನೆ! ಕ್ಷತ್ರಿಯನ ಧರ್ಮ ಯುದ್ಧ. ಬ್ರಾಹ್ಮಣನ ಧರ್ಮ ತಪಸ್ಸು. ತಪಸ್ವಿಯಾದ ಮತ್ತು ಯುದ್ಧದಲ್ಲಿ ಪಾರಂಗತನಾದವನು ಕಣ್ಣಿನ ನೋಟದಿಂದಲೇ ಸುಟ್ಟುಬಿಡಹಬಹುದು. ದ್ರೋಣನ ಅಸ್ತ್ರವೆಂಬ ಅಗ್ನಿಯು ತಾಗಿ ಅನೇಕ ಕ್ಷತ್ರಿಯರ್ಷಭರು ದುಸ್ತರವಾದ ಘೋರ ಅಗ್ನಿಯಲ್ಲಿ

ಸುಟ್ಟುಹೋಗುತ್ತಿದ್ದಾರೆ. ಮಹಾದ್ಯುತಿ ದ್ರೋಣನು ಬಲವಿದ್ದಷ್ಟು, ಉತ್ಸಾಹವಿದ್ದಷ್ಟು, ಸತ್ತ್ವವಿದ್ದಷ್ಟೂ ಹೋರಾಡುತ್ತಿರುವ ನಮ್ಮ ಸೇನೆಗಳಲ್ಲಿ ಸರ್ವರನ್ನೂ ಮೂರ್ಛೆಗೊಳಿಸಿ ಸಂಹರಿಸುತ್ತಿದ್ದಾನೆ.”

ಅವರ ಆ ಮಾತನ್ನು ಕೇಳಿ ಅಲ್ಲಿಯೇ ನಿಂತಿದ್ದ ಕ್ಷತ್ರಧರ್ಮನು ಅರ್ಧಚಂದ್ರದಿಂದ ದ್ರೋಣನ ಧನುಸ್ಸನ್ನು ಬಾಣದೊಂದಿಗೆ ಕತ್ತರಿಸಿದನು. ಆಗ ಗಾಭರಿಗೊಂಡು ಕ್ಷತ್ರಿಯಮರ್ದನ ದ್ರೋಣನು ಇನ್ನೊಂದು ಹೊಳೆಯುವ ವೇಗವತ್ತರವಾದ ಬಿಲ್ಲನ್ನು ಎತ್ತಿಕೊಂಡನು. ಆಗ ಒಂದು ತೀಕ್ಷ್ಣವಾದ, ಭಾರವಾದುದನ್ನೂ ಹೊಡೆಯಬಲ್ಲ, ವಿಮಲವಾದ ಮತ್ತು ದೃಢವಾದ ಬಾಣವೊಂದನ್ನು ಹೂಡಿ ಆಚಾರ್ಯನು ಆಕರ್ಣಪೂರ್ಣವಾಗಿ ಎಳೆದು ಪ್ರಯೋಗಿಸಿದನು. ಅದು ಕ್ಷತ್ರಧರ್ಮನನ್ನು ಸಂಹರಿಸಿ ನೆಲವನ್ನು ಹೊಕ್ಕಿತು. ಅವನು ಹೃದಯವು ಒಡೆದು ವಾಹನದಿಂದ ಭೂಮಿಯ ಮೇಲೆ ಬಿದ್ದನು.

ಧೃಷ್ಟದ್ಯುಮ್ನನ ಮಗ ಕ್ಷತ್ರಧರ್ಮನು ಹಾಗೆ ಹತನಾಗಲು ಸೇನೆಗಳು ನಡುಗಿದವು. ಆಗ ಮಹಾರಥ ಚೇಕಿತಾನನು ದ್ರೋಣನ ಮೇಲೆ ಎರಗಿದನು. ಅವನನ್ನು ದ್ರೋಣನ ಎದೆಗೆ ಗುರಿಯಿಟ್ಟು ಹತ್ತು ಬಾಣಗಳಿಂದ ಹೊಡೆದನು. ನಾಲ್ಕರಿಂದ ಸಾರಥಿಯನ್ನೂ ಮತ್ತು ನಾಲ್ಕರಿಂದ ನಾಲ್ಕು ಕುದುರೆಗಳನ್ನೂ ಹೊಡೆದನು. ಆಚಾರ್ಯನು

ಚೇಕಿತಾನನ ಬಲಭುಜಕ್ಕೆ ಹದಿನಾರು ಬಾಣಗಳಿಂದ ಹೊಡೆದು, ಇನ್ನೂ ಹದಿನಾರರಿಂದ ಧ್ವಜವನ್ನೂ, ಏಳರಿಂದ ಸಾರಥಿಯನ್ನೂ ಹೊಡೆದನು. ಭಾರದ್ವಾಜನ ಬಾಣಗಳಿಂದ ಹೊಡೆಯಲ್ಪಟ್ಟು ಚೇಕಿತಾನನ ಸೂತನು ಹತನಾಗಲು ಕುದುರೆಗಳು ಅವನ ರಥವನ್ನೊಯ್ದು ದಿಕ್ಕಾಪಾಲಾಗಿ ಓಡತೊಡಗಿದವು. ಸಾರಥಿಯನ್ನು ಕಳೆದುಕೊಂಡು ಒಡಿಹೋಗುತ್ತಿರುವ ಚೇಕಿತಾನನ ರಥವನ್ನು ಕಂಡು ಪಾಂಚಾಲರು ಮತ್ತು ಪಾಂಡವರನ್ನು ಮಹಾ ಭಯವು ಆವರಿಸಿತು. ರಣದಲ್ಲಿ ಶೂರರಾದ ಪಾಂಚಾಲ-ಸೃಂಜಯರು ಒಟ್ಟಿಗೇ ಸುತ್ತಲಿನಿಂದ ಆಕ್ರಮಣ ಮಾಡಲು ದ್ರೋಣನು ತುಂಬಾ ಶೋಭಿಸಿದನು. ವಯಸ್ಸಿನಲ್ಲಿ ಎಂಭತ್ತು ವರ್ಷಕ್ಕೂ ಹೆಚ್ಚಿನ, ಶ್ಯಾಮವರ್ಣದ, ಕಿವಿಯವರೆಗೂ ಇಳಿಬಿದ್ದಿದ್ದ ಬಿಳಿಕೂದಲಿನ ವೃದ್ಧ ದ್ರೋಣನು ಹದಿನಾರು ವರ್ಷದವನಂತೆ ರಣದಲ್ಲಿ ಸಂಚರಿಸುತ್ತಿದ್ದನು. ಭೀತಿಯಿಲ್ಲದೇ ಸಂಚರಿಸುತ್ತಿದ್ದ ಶತ್ರುಸೂದನ ದ್ರೋಣನನ್ನು ಶತ್ರುಗಳೂ ಕೂಡ ಇವನು ವಜ್ರಹಸ್ತ ಇಂದ್ರನೇ ಹೌದು ಎಂದು ಅಂದುಕೊಂಡರು. ಆಗ ಬುದ್ಧಿಮಾನ್ ನೃಪ ದ್ರುಪದನು ಹೇಳಿದನು:

> “ಲುಬ್ಧನಾಗಿರುವ ಇವನು ಹುಲಿಯು ಕ್ಷುದ್ರಮೃಗಗಳನ್ನು ಕೊಲ್ಲುವಂತೆ ಕ್ಷತ್ರಿಯರನ್ನು ಸಂಹರಿಸುತ್ತಾನೆ. ಯಾರ

ಲೋಭದಿಂದಾಗಿ ಈ ಸಮರದಲ್ಲಿ ಕ್ಷತ್ರಿಯರ್ಷಭರು ಹತರಾಗುತ್ತಿದ್ದಾರೋ ಆ ದುರ್ಮತಿ ದುರ್ಯೋಧನನು ಪಾಪ ಲೋಕಗಳನ್ನೂ ಕಷ್ಟಗಳನ್ನು ಅನುಭವಿಸುತ್ತಾನೆ. ಅವನಿಂದಾಗಿಯೇ ಈ ಕ್ಷತ್ರಿಯರು ಗಾಯಗೊಂಡ ಗೂಳಿಗಳಂತೆ ರಕ್ತದಿಂದ ತೋಯ್ದು ಭೂಮಿಯ ಮೇಲೆ ಮಲಗಿ ನಾಯಿ-ನರಿಗಳ ಪಾಲಾಗಿದ್ದಾರೆ!”

ಹೀಗೆ ಹೇಳಿ ಅಕ್ಷೌಹಿಣೀಪತಿ ದ್ರುಪದನು ರಣದಲ್ಲಿ ಪಾರ್ಥರನ್ನು ಮುಂದಿಟ್ಟುಕೊಂಡು ದ್ರೋಣನನ್ನು ಆಕ್ರಮಣಿಸಿದನು.

## ಯುಧಿಷ್ಠಿರನು ಭೀಮಸೇನನನ್ನು ಅರ್ಜುನ-ಸಾತ್ಯಕಿಯರಿದ್ದಲ್ಲಿಗೆ ಕಳುಹಿಸಿದುದು

ಪಾಂಡವರ ವ್ಯೂಹವು ಅಲ್ಲಲ್ಲಿಯೇ ಅಲ್ಲೋಲಕಲ್ಲೋಲಗೊಳ್ಳುತ್ತಿರಲು ಸೋಮಕ-ಪಾಂಚಾಲರೊಂದಿಗೆ ಪಾರ್ಥರು ದೂರದಲ್ಲಿ ಸೇರಿದರು. ಹಾಗೆ ರೌದ್ರವಾದ, ರೋಮಾಂಚಕಾರೀ ಸಂಗ್ರಾಮವು ನಡೆಯುತ್ತಿರಲು, ಪ್ರಲಯವೋ ಎಂಬಂತೆ ತೀವ್ರವಾಗಿ ಜನರ ನಾಶವಾಗುತ್ತಿರಲು, ಯುದ್ಧದಲ್ಲಿ ಪರಾಕ್ರಾಂತನಾದ ದ್ರೋಣನು ಮತ್ತೆ ಮತ್ತೆ ಗರ್ಜಿಸುತ್ತಿರಲು, ವಧಿಸಲ್ಪಡುತ್ತಿರುವ ಪಾಂಚಾಲ ಮತ್ತು ಪಾಂಡವರ ಸೇನೆಗಳು ಕ್ಷೀಣಿಸುತ್ತಿರಲು, ಮೊರೆಹೊಗಲು ಯಾರನ್ನೂ ಕಾಣದೇ

ರಾಜಾ ಯುಧಿಷ್ಠಿರನು ಇದು ಹೇಗಾಗುತ್ತದೆ ಎಂದು ಚಿಂತಿಸತೊಡಗಿದನು. ಸವ್ಯಸಾಚಿಯನ್ನು ಹುಡುಕುತ್ತಾ ಎಲ್ಲ ದಿಕ್ಕುಗಳಲ್ಲಿಯೂ ಕಣ್ಣು ಹಾಯಿಸಿದನು. ಆದರೆ ಯುಧಿಷ್ಠಿರನು ಪಾರ್ಥನನ್ನಾಗಲೀ ಮಾಧವನನ್ನಾಗಲೀ ಕಾಣಲಿಲ್ಲ. ಆ ನರಶಾರ್ದೂಲ ವಾನರರ್ಷಭಲಕ್ಷಣನನ್ನು ಕಾಣದೇ ಗಾಂಡೀವದ ನಿರ್ಘೋಷವನ್ನು ಕೇಳದೇ ಅವನು ವ್ಯಥಿತನಾದನು. ವೃಷ್ಣಿಯರ ರಥರಲ್ಲಿ ಶ್ರೇಷ್ಠನಾದ ಸಾತ್ಯಕಿಯನ್ನೂ ಕಾಣದೇ ಧರ್ಮರಾಜ ಯುಧಿಷ್ಠಿರನು ಚಿಂತೆಯಿಂದ ತಳಮಳಗೊಂಡನು. ಆ ಇಬ್ಬರು ನರರ್ಷಭರನ್ನು ಕಾಣದೇ ಶಾಂತಿಯನ್ನು ಹೊಂದಲಿಲ್ಲ. ಲೋಕದ ಕಟುಮಾತಿಗೆ ಹೆದರಿ ಧರ್ಮರಾಜನು ಶೈನೇಯನ ರಥದ ಕುರಿತು ಚಿಂತಿಸತೊಡಗಿದನು:

> “ಫಲ್ಗುನನು ಹೋದದಾರಿಯಲ್ಲಿಯೇ ಹೋಗೆಂದು ನಾನು ಮಿತ್ರರಿಗೆ ಅಭಯವನ್ನುಂಟುಂಮಾಡುವ ಶಿನಿಯ ಮೊಮ್ಮಗ ಸಾತ್ಯಕಿಯನ್ನು ಕಳುಗಿಸಿ ಕೊಟ್ಟೆನು. ಮೊದಲು ಒಬ್ಬನ ಕುರಿತು ಮಾತ್ರ ಚಿಂತೆಯಿತ್ತು. ಈಗ ಇಬ್ಬರ ಕುರಿತು ನನಗೆ ಚಿಂತೆಯಾಗುತ್ತಿದೆ. ಸಾತ್ಯಕಿ ಮತ್ತು ಧನಂಜಯ ಇಬ್ಬರ ಕುರಿತೂ ನಾನು ತಿಳಿದುಕೊಳ್ಳಬೇಕಾಗಿದೆ. ಪಾಂಡವನಿಗೆ ಸಹಾಯಕನಾಗಿ ಅವನ ದಾರಿಯನ್ನೇ ಅನುಸರಿಸಿ ಹೋಗೆಂದು

ಸಾತ್ಯಕಿಯನ್ನು ಕಳುಹಿಸಿ, ಈಗ ಯುದ್ಧದಲ್ಲಿ ಸಾತ್ಯಕಿಯ ಕುರುಹನ್ನರಿಯಲು ಯಾರನ್ನು ಕಳುಹಿಸಿಕೊಡಲಿ? ಯುದ್ಧದಲ್ಲಿ ಯುಯುಧಾನನನ್ನು ಹುಡುಕದೇ ಕೇವಲ ಸಹೋದರ ಅರ್ಜುನನನ್ನು ಮಾತ್ರ ಹುಡುಕಲು ಪ್ರಯತ್ನಿಸಿದೆನೆಂದರೆ "ಸಹೋದರನ ಅನ್ವೇಷಣೆಯನ್ನು ಮಾಡಲು ಧರ್ಮರಾಜ ಯುಧಿಷ್ಠಿರನು ವಾರ್ಷ್ಣೇಯ ಸತ್ಯವಿಕ್ರಮಿ ಸಾತ್ಯಕಿಯನ್ನು ತ್ಯಜಿಸಿಬಿಟ್ಟನು!" ಎಂದು ಜನರು ನನ್ನನ್ನು ನಿಂದಿಸುತ್ತಾರೆ. ಜನರಿಂದ ಅಪವಾದವು ಬರಬಾರದೆಂದು ನಾನು ಮಹಾತ್ಮ ಮಾಧವನು ಹೋದ ದಾರಿಯಲ್ಲಿ ಪಾರ್ಥ ವೃಕೋದರನನ್ನು ಕಳುಹಿಸುತ್ತೇನೆ. ನನಗೆ ಅರ್ಜುನನ ಮೇಲೆ ಎಷ್ಟು ಪ್ರೀತಿಯಿದೆಯೋ ಅಷ್ಟೇ ಸಾತ್ಯಕಿಯ ಮೇಲೂ ಇದೆ. ಮಿತ್ರನಿಗೆ ಸಹಾಯಮಾಡಬೇಕೆಂದು ಗೌರವದಿಂದ ಶೈನೇಯನಂದನನು ನನ್ನಿಂದ ಅತಿಯಾದ ಭಾರವನ್ನು ಹೊತ್ತು ಮೊಸಳೆಯು ಸಮುದ್ರವನ್ನು ಹೇಗೋ ಹಾಗೆ ಭರತರ ಸೇನೆಯನ್ನು ಪ್ರವೇಶಿಸಿರುವನು. ವೃಷ್ಣಿವೀರನೊಂದಿಗೆ ಯುದ್ಧಮಾಡುತ್ತಿರುವ ಪಲಾಯನ ಮಾಡದ ಶೂರರ ಶಬ್ಧವು ಇಗೋ ಕೇಳಿಬರುತ್ತಿದೆ. ಅವನಿಗೆ ಆ ಸೇನೆಯು ಬಹಳವಾಗಿದೆ ಎಂದು ನನಗನ್ನಿಸುತ್ತದೆ. ಆ ಮಹಾರಥರಿಬ್ಬರು ಎಲ್ಲಿಗೆ

ಹೋಗಿದ್ದಾರೋ ಅಲ್ಲಿಗೆ ಭೀಮಸೇನನನ್ನೂ ಕಳುಹಿಸಲು ಇದು ಸರಿಯಾದ ಸಮಯವೆಂದು ನನಗನ್ನಿಸುತ್ತದೆ. ಭೀಮಸೇನನಿಗೆ ಸಹಿಸಲಸಾಧ್ಯವಾದದು ಭೂಮಿಯಲ್ಲಿ ಏನೂ ಇಲ್ಲ. ಪ್ರಯತ್ನಪಟ್ಟು ರಣದಲ್ಲಿ ಯುದ್ಧಮಾಡಿದರೆ ಇವನು ಭೂಮಿಯ ಸರ್ವಧನ್ವಿಗಳನ್ನೂ ಎದುರಿಸಬಲ್ಲ. ತನ್ನದೇ ಬಾಹುಬಲವನ್ನು ಆಶ್ರಯಿಸಿ ಸೇನೆಗಳನ್ನು ನಿರಾಯಾಸವಾಗಿ ಎದುರಿಸಬಲ್ಲನು. ಯಾರ ಬಾಹುಬಲವನ್ನು ಆಶ್ರಯಿಸಿ ನಾವೆಲ್ಲರೂ ವನವಾಸವನ್ನು ಪೂರೈಸಿ ಹಿಂದಿರುಗಿದೆವೋ ಆ ಮಹಾತ್ಮನಿಗೆ ಸೋಲೇ ಇಲ್ಲ. ಈಗ ಸಾತ್ವತನಿರುವಲ್ಲಿಗೆ ಭೀಮನು ಹೋದರೆ ಯುದ್ಧದಲ್ಲಿ ಸಾತ್ವತ-ಫಲ್ಗುನರಿಬ್ಬರಿಗೂ ಸಹಾಯಕನಿದ್ದಾನೆಂದಾಗುತ್ತದೆ. ನಿಜವಾಗಿಯೂ ನಾನು ರಣದಲ್ಲಿ ವಾಸುದೇವನಿಂದ ರಕ್ಷಿತರಾದ, ಸ್ವಯಂ ಅಸ್ತ್ರವಿಶಾರದರಾದ ಸಾತ್ವತ-ಫಲ್ಗುನರ ಕುರಿತು ಚಿಂತಿಸಬಾರದು. ನನ್ನ ಶೋಕವನ್ನು ನಾಶಗೊಳಿಸಿಕೊಳ್ಳಬೇಕಾದುದು ಅವಶ್ಯಕವಾಗಿದೆ. ಆದುದರಿಂದ ಸಾತ್ವತನನ್ನು ಹಿಂಬಾಲಿಸಲು ಭೀಮನನ್ನು ನಿಯೋಜಿಸುತ್ತೇನೆ. ಆಗ ಸಾತ್ಯಕಿಗೆ ಪ್ರತೀಕಾರವನ್ನು ಮಾಡಿದಂತಾಗುತ್ತದೆ ಎಂದು ನನಗನ್ನಿಸುತ್ತದೆ.”

ಹೀಗೆ ಮನಸ್ಸಿನಲ್ಲಿಯೇ ನಿಶ್ಚಯಿಸಿ ಧರ್ಮಪುತ್ರ ಯುಧಿಷ್ಠಿರನು "ನನ್ನನ್ನು ಭೀಮನಿರುವಲ್ಲಿಗೆ ಕರೆದೊಯ್ಯಿ!" ಎಂದು ಸಾರಥಿಗೆ ಹೇಳಿದನು. ಧರ್ಮರಾಜನ ಮಾತನ್ನು ಕೇಳಿ ಹಯಕೋವಿದ ಸಾರಥಿಯು ಹೇಮಮಯ ರಥವನ್ನು ಭೀಮಸೇನನ ಬಳಿಗೆ ಕೊಂಡೊಯ್ದನು. ಭೀಮಸೇನನ ಬಳಿಸಾರಿ ಸಮಯಕ್ಕೆ ಸರಿಯಾದುದನ್ನು ನೆನಪಿಸಿಕೊಂಡು ಕಳವಳಗೊಂಡು ರಾಜನು ಅಲ್ಲಿ ಅವನಿಗೆ ಬಹುರೀತಿಗಳಲ್ಲಿ ಹೇಳಿಕೊಂಡನು.

> "ಭೀಮಸೇನ! ಯಾರು ಗಂಧರ್ವ-ದೈತ್ಯರೊಂದಿಗೆ ದೇವತೆಗಳನ್ನು ಕೂಡ ಪರಾಯಜಗೊಳಿಸುತ್ತಾನೋ ಆ ನಿನ್ನ ತಮ್ಮನ ಕುರುಹು ನನಗೆ ಕಾಣುತ್ತಿಲ್ಲ."

ಆಗ ಧರ್ಮರಾಜನಿಗೆ ಭೀಮಸೇನನು ಹೇಳಿದನು:

> "ಈ ರೀತಿ ನೀನು ತಳಮಳಗೊಂಡಿರುವುದನ್ನು ನಾನು ಈ ಮೊದಲು ನೋಡಿರಲಿಲ್ಲ ಕೇಳಿರಲಿಲ್ಲ. ಹಿಂದೆ ದುಃಖದಿಂದ ದೀನರಾಗಿದ್ದ ನಮಗೆ ನೀನೇ ಗತಿಯಾಗಿದ್ದೆಯಲ್ಲವೇ? ರಾಜೇಂದ್ರ! ನಿನಗೇನು ಮಾಡಬೇಕು ಹೇಳು! ಏಕೆಂದರೆ ಅಸಾಧ್ಯವೆಂಬ ಯಾವ ಕಾರ್ಯವೂ ನನಗೆ ತಿಳಿಯದು. ಕುರುಶ್ರೇಷ್ಠ! ಆಜ್ಞಾಪಿಸು! ಮನಸ್ಸನ್ನು ಶೋಕಗೊಳಿಸಬೇಡ!"

ಆಗ ಕಣ್ಣೀರುತುಂಬಿದವನಾಗಿ, ಕೃಷ್ಣಸರ್ಪದಂತೆ ನಿಟ್ಟುಸಿರುಬಿಡುತ್ತಾ, ಕಂದಿದ ಮುಖವುಳ್ಳ ನೃಪನು ಭೀಮಸೇನನಿಗೆ ಈ ಮಾತನ್ನಾಡಿದನು.

“ಯಶಸ್ವಿ ವಾಸುದೇವನು ಉದ್ವೇಗದಿಂದ ಊದಿದ ಪಾಂಚಜನ್ಯ ಶಂಖದ ನಿರ್ಘೋಷವು ಕೇಳಿ ಬರುತ್ತಿದೆಯೆಂದರೆ ನಿನ್ನ ತಮ್ಮ ಧನಂಜಯನು ಹತನಾಗಿ ಮಲಗಿರಬಹುದೇ? ಅವನು ಹತನಾಗಲು ಜನಾರ್ದನನೇ ಈಗ ಯುದ್ಧಮಾಡುತ್ತಿರಬಹುದು. ಯಾವ ಸತ್ವವತನ ವೀರ್ಯವನ್ನು ಅವಲಂಬಿಸಿ ಪಾಂಡವರು ಜೀವಿಸುತ್ತಿರುವರೋ, ಭಯವಾದಾಗ ಅಮರರು ಸಹಸ್ರಾಕ್ಷನಲ್ಲಿ ಮೊರೆಹೊಗುವಂತೆ ಯಾರನ್ನು ಪಾಂಡವರು ಮೊರೆಹೊಡುವರೋ ಆ ಶೂರ ಅರ್ಜುನನು ಸೈಂಧವನಿಗಾಗಿ ಭಾರತರ ಸೇನೆಯನ್ನು ಹೊಕ್ಕಿದ್ದಾನೆ. ಭೀಮ! ಆ ಶ್ಯಾಮವರ್ಣದ, ಯುವಕ, ಗುಡಾಕೇಶ, ಸುಂದರ, ಮಹಾಭುಜ, ವಿಶಾಲ ಎದೆಯ, ಮಹಾಸ್ಕಂಧ, ಮದಿಸಿದ ಆನೆಯ ನಡುಗೆಯುಳ್ಳ, ಚಕೋರಪಕ್ಷಿಗಳಂಥ ಕಣ್ಣುಗಳುಳ್ಳ, ಎಣ್ಣೆಗೆಂಪಿನ ಕಣ್ಣುಳ್ಳ, ಶತ್ರುಗಳ ಭಯವನ್ನು ಹೆಚ್ಚಿಸುವ ಅರ್ಜುನನು ಹೋಗಿದ್ದುದು ನಮಗೆ ತಿಳಿದಿದೆ. ಆದರೆ ಅವನು

ಪುನಃ ಹಿಂದಿರುಗಿಲ್ಲ. ನಿನಗೆ ಮಂಗಳವಾಗಲಿ! ಇದೇ ನನ್ನ ಶೋಕಕ್ಕೆ ಕಾರಣ. ಮಹಾಬಾಹೋ! ಅರ್ಜುನನಿಗಾಗಿ ಮತ್ತು ಸಾತ್ವತನ ಕಾರಣದಿಂದಾಗಿ ನನ್ನ ಶೋಕವು ತುಪ್ಪದ ಆಹುತಿಯಂತೆ ಹತ್ತಿ ಉರಿಯುವ ಅಗ್ನಿಯಂತೆ ಪುನಃ ಪುನಃ ಹೆಚ್ಚಾಗುತ್ತಿದೆ. ಅವನನ್ನು ಕಾಣದೇ ನಾನು ಶೋಕದಲ್ಲಿ ಮುಳುಗಿಹೋಗಿದ್ದೇನೆ. ನಿನ್ನ ಅನುಜನನ್ನು ಅನುಸರಿಸಿಹೋದ ಆ ಸಾತ್ವತನನ್ನು ಕಾಣದೆ ಕೂಡ ನಾನು ಶೋಕದಲ್ಲಿ ಮುಳುಗಿಹೋಗಿದ್ದೇನೆ. ಆದುದರಿಂದ ಯಾವ ವೀರ್ಯವತನ ವೀರ್ಯವನ್ನು ಅವಲಂಬಿಸಿ ಪಾಂಡವರು ಜೀವಿಸುತ್ತಿದ್ದಾರೋ ಆ ಯುದ್ಧಕೋವಿದ ಕೃಷ್ಣನೇ ರಣದಲ್ಲಿ ಯುದ್ಧಮಾಡುತ್ತಿರಬೇಕು. ನಿನ್ನ ಹಿರಿಯ ಅಣ್ಣನಾಗಿರುವ ನನ್ನ ಮಾತಿನಂತೆ ಮಾಡಬೇಕೆಂದು ನಿನಗನ್ನಿಸಿದರೆ ಎಲ್ಲಿ ಧನಂಜಯ ಮತ್ತು ಸಾತ್ಯಕಿಯರು ಹೋಗಿರುವರೋ ಅಲ್ಲಿಗೆ ಹೋಗು. ಸವ್ಯಸಾಚಿಯು ಹೋದ ದುರ್ಗಮವೂ ಘೋರವೂ ಮತ್ತು ಪಳಗಿಲ್ಲದವರು ಹೋಗಲು ಅಸಾಧ್ಯವೂ ಆದ ದಾರಿಯನ್ನು ಅನುಸರಿಸಿ ಹೋಗಿ ಅರ್ಜುನನ ಕುರಿತೂ ಸತ್ಯಕಿಯ ಕುರಿತೂ ತಿಳಿದುಕೊಂಡು ನನಗೆ ತಿಳಿಸು. ನನಗೆ ಪ್ರಿಯವಾದ ಈ ಕೆಲಸವನ್ನು ಮಾಡು.”

ಆಗ ಭೀಮಸೇನನು ಹೇಳಿದನು:

> “ಹಿಂದೆ ಬ್ರಹ್ಮ, ಈಶಾನ, ಇಂದ್ರ ಮತ್ತು ವರುಣರು ಏರಿದ್ದ ಆ ರಥವನ್ನು ಏರಿ ಕೃಷ್ಣರಿಬ್ಬರೂ ಹೋಗಿದ್ದಾರೆ. ಅವರಿಗೆ ಭಯವೆಂಬುದೇ ಇಲ್ಲ. ಆದರೆ ನಿನ್ನ ಆಜ್ಞೆಯನ್ನು ಶಿರಸಾ ವಹಿಸಿ ಅಲ್ಲಿಗೆ ಹೋಗುತ್ತೇನೆ. ಆ ನರವ್ಯಾಘ್ರರನ್ನು ಸೇರಿ ನಿನಗೆ ಸೂಚನೆಯನ್ನು ನೀಡುತ್ತೇನೆ.””

ಹೀಗೆ ಹೇಳಿ ಬಲವಾನ ಭೀಮಸೇನನು ಯುಧಿಷ್ಠಿರನನ್ನು ಧೃಷ್ಟದ್ಯುಮ್ನ ಮತ್ತು ಇತರ ಸುಹೃದರಿಗೆ ಪುನಃ ಪುನಃ ಒಪ್ಪಿಸುತ್ತಾ ಹೊರಡಲು ಸಿದ್ಧನಾದನು. ಆ ಮಹಾಬಲನು ಧೃಷ್ಟದ್ಯುಮ್ನನಿಗೆ ಹೀಗೆ ಹೇಳಿದನು:

> “ಮಹಾಬಾಹೋ! ನಿನಗೆ ತಿಳಿದೇ ಇದೆ. ದ್ರೋಣನು ಸರ್ವೋಪಾಯಗಳಿಂದ ಧರ್ಮರಾಜನನ್ನು ಬಂಧಿಸುವ ಪ್ರಯತ್ನದಲ್ಲಿದ್ದಾನೆ. ನನಗೆ ಅಲ್ಲಿಗೆ ಹೋಗುವುದಕ್ಕಿಂತಲೂ ಮಾಡಲಿಕ್ಕೆ ಮುಖ್ಯವಾದುದು ಇಲ್ಲಿದೆ ಎಂದು ತಿಳಿದಿದೆ. ರಾಜನನ್ನು ರಕ್ಷಿಸುವ ಕಾರ್ಯವು ನಮ್ಮೆಲ್ಲರದ್ದೂ ಆಗಿದೆ. ಆದರೆ ಯುಧಿಷ್ಠಿರನು ಸೈಂಧವನು ಇರುವಲ್ಲಿಗೆ ಹೋಗಬೇಕೆಂದು ಹೇಳಿದ್ದಾನೆ. ಅದಕ್ಕೆ ವಿರುದ್ಧವಾಗಿ ಮಾಡಲು ಮನಸ್ಸಿಲ್ಲ. ಯಾವುದೇ ಶಂಕೆಯಿಲ್ಲದೇ

ಧರ್ಮರಾಜನ ಮಾತಿನಂತೆಯೇ ನಡೆದುಕೊಳ್ಳಬೇಕು. ಆದುದರಿಂದ ನೀನು ರಣದಲ್ಲಿ ಪ್ರಯತ್ನಪೂರ್ವಕವಾಗಿ ಪಾರ್ಥ ಯುಧಿಷ್ಠಿರನನ್ನು ರಕ್ಷಿಸು. ಏಕೆಂದರೆ ಇದೇ ರಣದಲ್ಲಿ ಮಾಡಬೇಕಾದ ಸರ್ವಕಾರ್ಯಗಳಲ್ಲಿ ಅತಿ ಮುಖ್ಯವಾದುದು."

ಆಗ ಧೃಷ್ಟದ್ಯುಮ್ನನು ವೃಕೋದರನಿಗೆ ಹೇಳಿದನು:

"ಮಹಾಬಾಹೋ! ಏನನ್ನೂ ವಿಚಾರಿಸದೇ ನೀನು ಇಷ್ಟಪಟ್ಟು ಪಾರ್ಥನಲ್ಲಿಗೆ ಹೋಗು. ಧೃಷ್ಟದ್ಯುಮ್ನನನ್ನು ಸಂಹರಿಸದೇ ದ್ರೋಣನು ಎಂದೂ ರಣದಲ್ಲಿ ಯುಧಿಷ್ಠಿರನನ್ನು ಸೆರೆಹಿಡಿಯಬಲ್ಲನು."

ಆಗ ರಾಜನನ್ನು ಧೃಷ್ಟದ್ಯುಮ್ನನಿಗೊಪ್ಪಿಸಿ ಪಾಂಡವ ಭೀಮನು ಗುರು, ಹಿರಿಯಣ್ಣ ಯುಧಿಷ್ಠಿರನಿಗೆ ನಮಸ್ಕರಿಸಿ ಫಲ್ಗುನನಿದ್ದಲ್ಲಿಗೆ ಹೊರಟನು. ಕೌಂತೇಯ ಧರ್ಮರಾಜನು ಅವನನ್ನು ಬಿಗಿದಪ್ಪಿ, ನೆತ್ತಿಯನ್ನು ಆಘ್ರಾಣಿಸಿ ಶುಭ ಆಶೀರ್ವಾದಗಳನ್ನಿತ್ತನು. ರಥಿಗಳಲ್ಲಿ ಮಹಾಬಾಹು ಭೀಮಸೇನನು ಕವಚವನ್ನು ಧರಿಸಿ, ಶುಭಕುಂಡಲಗಳನ್ನೂ, ಭುಜಕೀರ್ತಿಗಳನ್ನೂ ಧರಿಸಿ, ಕೈಚೀಲಗಳನ್ನು ಹಾಕಿಕೊಂಡನು. ಕಪ್ಪು ಲೋಹದಿಂದ ಮಾಡಲ್ಪಟ್ಟಿದ್ದ ಅವನ ಕವಚವು ಬಂಗಾರದ ಚಿತ್ರಗಳಿಂದ ಕೂಡಿದ್ದು, ಮಹಾ ಅಮೂಲ್ಯದ್ದಾಗಿತ್ತು. ಅವನ ಮೈಗೆ

ಅಂಟಿಕೊಂಡೇ ಇದ್ದ ಅದು ಮಿಂಚಿನಿಂದ ಕೂಡಿದ ಮೇಘದಂತೆ ತೋರುತ್ತಿತ್ತು. ಹಳದಿ, ಕೆಂಪು, ಕಪ್ಪು ಮತ್ತು ಬಿಳಿಯ ವಸ್ತ್ರಗಳನ್ನು ಧರಿಸಿದ್ದ ಮತ್ತು ಕಂಠತ್ರಾಣವನ್ನು ಧರಿಸಿದ್ದ ಭೀಮಸೇನನು ಕಾಮನಬಿಲ್ಲಿನಿಂದ ಕೂಡಿದ ಮೋಡದಂತೆ ಕಂಗೊಳಿಸಿದನು.

ಯುದ್ಧೋತ್ಸಾಹದಿಂದ ಕೌರವ ಸೇನೆಯ ಕಡೆ ಭೀಮಸೇನನು ಹೊರಡುತ್ತಿರುವ ಪುನಃ ಇನ್ನೊಂದು ಸಲ ಪಾಂಚಜನ್ಯದ ಘೋರ ಧ್ವನಿಯು ಕೇಳಿಸಿತು. ಮೂರುಲೋಕಗಳನ್ನೂ ತಲ್ಲಣಿಸುವ ಆ ಘೋರ ನಿನಾದವನ್ನು ಕೇಳಿ ಧರ್ಮಪುತ್ರನು ಪುನಃ ಭೀಮನಿಗೆ ಹೇಳಿದನು:

> "ಇದು ವೃಷ್ಣಿಪ್ರವೀರ ಕೃಷ್ಣನ ಪಾಂಚಜನ್ಯದ ಧ್ವನಿಯೇ ಹೌದು. ಆ ಶಂಖರಾಜನು ಭೂಮಿ-ಅಂತರಿಕ್ಷಗಳನ್ನು ಮೊಳಗಿಸುತ್ತಿದ್ದಾನೆ. ಸವ್ಯಸಾಚಿಯು ಮಹಾ ವ್ಯಸನದಲ್ಲಿ ಸಿಲುಕಿಕೊಂಡಿರುವುದರಿಂದಲೇ ಚಕ್ರಗದಾಧರ ಕೃಷ್ಣನೇ ಎಲ್ಲ ಕುರುಗಳೊಂದಿಗೆ ಯುದ್ಧಮಾಡುತ್ತಿದ್ದಾನೆ. ನಿಶ್ಚಯವಾಗಿಯೂ ಆರ್ಯೆ ಕುಂತಿಯು ಇಂದು ಅನೇಕ ಅಪಶಕುನಗಳನ್ನೇ ಕಂಡಿರಬೇಕು. ದ್ರೌಪದೀ-ಸುಭದ್ರೆಯರೂ ತಮ್ಮ ಬಂಧುಗಳೊಡನೆ ಅವುಗಳನ್ನು ಕಂಡಿರಬಹುದು. ಆದುದರಿಂದ ಭೀಮ! ತ್ವರೆಮಾಡಿ ಧನಂಜಯನಿರುವಲ್ಲಿಗೆ

ಹೋಗು. ಧನಂಜಯನನ್ನು ನೋಡಲು ಬಯಸಿದ ನನಗೆ ಮತ್ತು ಸಾತ್ವತನ ಕಾರಣದಿಂದಲೂ ಎಲ್ಲ ದಿಕ್ಕು-ಉಪದಿಕ್ಕುಗಳೂ ಅಂಧಕಾರಮಯವಾಗಿ ತೋರುತ್ತಿದೆ.”

“ಹೋಗು ! ಹೋಗು !” ಎಂದು ಪುನಃ ಅವನು ಭೀಮಸೇನನಿಗೆ ಹೇಳಿದನು. ಅಣ್ಣನಿಗೆ ಪ್ರಿಯವಾದುದನ್ನು ಮಾಡಲು ಹೊರಟ ತಮ್ಮನನ್ನು ಅಣ್ಣನು ಚೆನ್ನಾಗಿ ಬೀಳ್ಕೊಟ್ಟನು. ಹೊರಡುವಾಗ ಭೀಮನು ದುಂದುಭಿಯನ್ನು ಮೊಳಗಿಸಿ ಶಂಖವನ್ನು ಊದಿದನು. ಸಿಂಹನಾದವನ್ನೂ ಮಾಡಿ ಪುನಃ ಪುನಃ ಧನುಷ್ಟೇಂಕಾರ ಮಾಡುತ್ತಿದ್ದನು. ತನ್ನ ಘೋರರೂಪವನ್ನು ಪ್ರದರ್ಶಿಸುತ್ತಾ ಶತ್ರುಗಳ ಮೇಲೆ ಒಮ್ಮೆಲೇ ಆಕ್ರಮಣಿಸಿದನು. ವಿಶೋಕನೆಂಬ ಸಾರಥಿಯಿಂದ ಸಂಚಾಲಿತವಾದ, ಮನೋವೇಗ-ವಾಯುವೇಗಗಳುಳ್ಳ ಸುಶಿಕ್ಷಿತವಾದ, ಉತ್ತಮ ಕುದುರೆಗಳು ಸಂತೋಷಸೂಚಕ ಶಬ್ಧಮಾಡುತ್ತಾ ಭೀಮನನ್ನು ಕರೆದೊಯ್ದುವು. ಪಾರ್ಥನು ಕೈಯಿಂದ ಧನುಸ್ಸಿನ ಮೌರ್ವಿಯನ್ನು ತೀಡುತ್ತಾ, ಎಳೆಯುತ್ತಾ, ಬಾಣಗಳ ಮಳೆಗರೆಯುತ್ತಾ ಸೇನೆಯ ಅಗ್ರಭಾಗವನ್ನು ಮಥಿಸಿಬಿಟ್ಟನು. ಹಾಗೆ ಮುಂದುವರೆಯುತ್ತಿದ್ದ ಮಹಾಬಾಹು ಭೀಮಸೇನನನ್ನು ಇಂದ್ರನನ್ನು ಅಮರರು ಹೇಗೋ ಹಾಗೆ ಶೂರ ಸೋಮಕರೊಂದಿಗೆ ಪಾಂಚಾಲರು ಅವನ ಹಿಂದೆಯೇ

ಅನುಸರಿಸಿ ಹೋದರು.

## ಭೀಮಸೇನನ ಪರಾಕ್ರಮ

ಭೀಮಸೇನನನ್ನು ಸೇನಾಸಮೇತರಾಗಿ ದುಃಶಲ, ಚಿತ್ರಸೇನ, ಕುಂಡಭೇದೀ, ವಿವಿಂಶತಿ, ದುರ್ಮುಖ, ದುಃಸ್ಸಹ, ವಿಕರ್ಣ, ಶಲ, ವಿಂದ, ಅನುವಿಂದ, ಸುಮುಖ, ದೀರ್ಘಬಾಹು, ಸುದರ್ಶನ, ವೃಂದಾರಕ, ಸುಹಸ್ತ, ಸುಷೇಣ, ದೀರ್ಘಲೋಚನ, ಅಭಯ, ರೌದ್ರಕರ್ಮ, ಸುವರ್ಮ, ಮತ್ತು ದುರ್ವಿಲೋಚನರು ಸುತ್ತುವರೆದರು. ಈ ಶೂರ ರಥಶ್ರೇಷ್ಠರು ವಿವಿಧ ಸೇನೆಗಳೊಂದಿಗೆ ಮತ್ತು ಅನುಯಾಯಿಗಳೊಂದಿಗೆ ಸಮರದಲ್ಲಿ ಒಂದಾಗಿ ಭೀಮಸೇನನನ್ನು ಆಕ್ರಮಣಿಸಿದರು. ಅವರನ್ನು ನೋಡಿ ಪರಾಕ್ರಮೀ ಭೀಮಸೇನನು ಸಿಂಹವು ಕ್ಷುದ್ರಮೃಗಗಳನ್ನು ಹೇಗೋ ಹಾಗೆ ವೇಗವಾಗಿ ಅವರ ಮೇಲೆರಗಿದನು. ಆ ವೀರರು ಮಹಾ ದಿವ್ಯಾಸ್ತ್ರಗಳನ್ನು ಪ್ರದರ್ಶಿಸುತ್ತಾ ಉದಯಿಸುತ್ತಿರುವ ಸೂರ್ಯನನ್ನು ಮೇಘಗಳು ಹೇಗೋ ಹಾಗೆ ಭೀಮನನ್ನು ಶರಗಳಿಂದ ತಡೆದರು. ವೇಗವಾಗಿ ಅವರನ್ನು ದಾಟಿ ಭೀಮನು ದ್ರೋಣನ ಸೇನೆಯನ್ನು ಆಕ್ರಮಣಿಸಿದನು ಮತ್ತು ಅಲ್ಲಿದ್ದ ಗಜಸೇನೆಯನ್ನು ಶರವರ್ಷಗಳಿಂದ ಮುಚ್ಚಿಬಿಟ್ಟನು. ಸ್ವಲ್ಪವೇ ಸಮಯದಲ್ಲಿ ಪವನಾತ್ಮಜನು ಆಶುಗಗಳಿಂದ ಆ ಗಜಸೇನೆಯನ್ನು ಎಲ್ಲ

ದಿಕ್ಕುಗಳಿಗೂ ಚದುರಿಸಿ ಸಂಹರಿಸಿದನು. ವನದಲ್ಲಿ ಗರ್ಜಿಸುತ್ತಿರುವ ಸಿಂಹಕ್ಕೆ ಹೆದರಿ ಓಡುಹೋಗುವ ಜಿಂಕೆಗಳಂತೆ ಆ ಆನೆಗಳೆಲ್ಲವೂ ಭೈರವ ಕೂಗನ್ನು ಕೂಗಿಕೊಳ್ಳುತ್ತಾ ಓಡಿ ಹೋದವು. ಅವುಗಳನ್ನು ದಾಟಿ ಅವನು ಪುನಃ ವೇಗದಿಂದ ದ್ರೋಣನ ಸೇನೆಯನ್ನು ಆಕ್ರಮಣಿಸಿದನು. ಮೇಲೇರಿ ಬರುತ್ತಿದ್ದ ಸಮುದ್ರದ ಅಲೆಗಳನ್ನು ದಡವು ತಡೆಯುವಂತೆ ಆಚಾರ್ಯನು ಅವನನ್ನು ತಡೆದನು. ದ್ರೋಣನು ನಸುನಗುತ್ತಾ ಭೀಮನ ನೆತ್ತಿಗೆ ನಾರಾಚಗಳಿಂದ ಹೊಡೆಯಲು ಪಾಂಡವನು ಕಿರಣಗಳನ್ನು ಸೂಸುವ ಆದಿತ್ಯನಂತೆ ಕಂಗೊಳಿಸಿದನು. ಫಲ್ಗುನನಂತೆ ಭೀಮನೂ ಕೂಡ ತನ್ನನ್ನು ಗೌರವಿಸಿ ಮುಂದುವರೆಯುತ್ತಾನೆಂದು ತಿಳಿದುಕೊಂಡ ಆಚಾರ್ಯನು ವೃಕೋದರನಿಗೆ ಹೀಗೆ ಹೇಳಿದನು.

> “ಭೀಮಸೇನ! ಸಮರದಲ್ಲಿ ಶತ್ರುಗಳ ಮಧ್ಯದಲ್ಲಿ ನನ್ನನ್ನು ಗೆಲ್ಲದೇ ಈ ಅರಿವಾಹಿನಿಯನ್ನು ಪ್ರವೇಶಿಸಲು ಶಕ್ಯನಾಗುವುದಿಲ್ಲ. ನಿನ್ನ ತಮ್ಮ ಅರ್ಜುನನು ನನ್ನ ಅನುಮತಿಯನ್ನು ಪಡೆದು ಪ್ರವೇಶಿಸಿದನೆಂದರೆ ನಿನಗೆ ಇದನ್ನು ಪ್ರವೇಶಿಸಲು ಸಾಧ್ಯವಿಲ್ಲ!”

ಭೀಮನಾದರೋ ಗುರುವಿನ ಆ ಮಾತನ್ನು ಕೇಳಿ ಕ್ರೋಧದಿಂದ

ಕಣ್ಣುಗಳನ್ನು ಕೆಂಪುಮಾಡಿಕೊಂಡು ನಿಟ್ಟುಸಿರು ಬಿಡುತ್ತಾ ದ್ರೋಣನಿಗೆ ಹೇಳಿದನು:

“ಬ್ರಹ್ಮಬಂಧೋ! ಅರ್ಜುನನು ನಿನ್ನ ಅನುಮತಿಯನ್ನು ತೆಗೆದುಕೊಂಡು ರಣವನ್ನು ಪ್ರವೇಶಿಸಿಲ್ಲ! ಶಕ್ರನಿಗೂ ದುರ್ಧರ್ಷನಾದ ಅವನು ತನ್ನದೇ ಬಲದಿಂದ ಸೇನೆಯನ್ನು ಪ್ರವೇಶಿಸಿದ್ದಾನೆ. ಈ ರೀತಿಯ ಪರಮ ಪೂಜೆಯನ್ನು ಮಾಡಿದನೆಂದರೆ ಅವನು ನಿನ್ನನ್ನು ಗೌರವಿಸುತ್ತಾನೆಂದು ಅರ್ಥ. ಆದರೆ ದ್ರೋಣ! ನಾನು ದಯಾವಂತನಾದ ಅರ್ಜುನನಲ್ಲ. ನಿನ್ನ ಶತ್ರುವಾದ ಭೀಮಸೇನ! ನಾವು ನಿನ್ನನ್ನು ನಮ್ಮ ತಂದೆ, ಗುರು ಮತ್ತು ಬಂಧುವೆಂದೂ ಹಾಗೆಯೇ ನಾವು ನಿನ್ನ ಮಕ್ಕಳೆಂದೂ ಎಲ್ಲರೂ ತಿಳಿದುಕೊಂಡು ಬಂದಿದ್ದೆವು ಮತ್ತು ನಿನಗೆ ನಮಸ್ಕರಿಸಿ ನಿಲ್ಲುತ್ತಿದ್ದೆವು. ಆದರೆ ಈಗ ನೀನು ನಮ್ಮೊಡನೆ ಮಾತನಾಡುವುದನ್ನು ನೋಡಿದರೆ ಅವೆಲ್ಲವೂ ಬದಲಾದಂತಿವೆ. ನೀನು ನಮ್ಮನ್ನು ಶತ್ರುವೆಂದು ತಿಳಿದುಕೊಂಡಿದ್ದರೆ ಅದು ಹಾಗೆಯೇ ಆಗಲಿ. ಇಗೋ ಶತ್ರುವಾದ ಭೀಮನು ಏನನ್ನು ಮಾಡಬೇಕೋ ಅದನ್ನು ನಾನು ಮಾಡುತ್ತೇನೆ.”

ಇದನ್ನು ಹೇಳಿದ ಕೂಡಲೇ ಭೀಮನು ಅಂತಕನು ಕಾಲದಂಡವನ್ನು ಹೇಗೋ ಹಾಗೆ ಗದೆಯನ್ನು ದ್ರೋಣನಮೇಲೆ ಎಸೆದನು. ಆದರೆ ಅಷ್ಟರಲ್ಲಿಯೇ ದ್ರೋಣನು ರಥದಿಂದ ಕೆಳಕ್ಕೆ ಹಾರಿಕೊಂಡುಬಿಟ್ಟಿದ್ದನು. ಆ ಗದೆಯು ದ್ರೋಣನ ರಥವನ್ನು ಕುದುರೆ-ಸಾರಥಿಗಳೊಂದಿಗೆ ಅಪ್ಪಳಿಸಿ ಹಾಕಿ ವಾಯುವು ಓಜಸ್ಸಿನಿಂದ ಮರಗಳನ್ನು ಕಡಿದುರುಳಿಸುವಂತೆ ಅನೇಕ ಯೋಧರನ್ನು ಅಪ್ಪಳಿಸಿ ಬೀಳಿಸಿತು. ಪುನಃ ಆ ರಥೋತ್ತಮ ಭೀಮನನ್ನು ಧೃತರಾಷ್ಟ್ರನ ಪುತ್ರರು ಆವರಿಸಿದರು. ದ್ರೋಣನು ಇನ್ನೊಂದು ರಥವನ್ನೇರಿದನು. ಆಗ ಕ್ರುದ್ಧ ಭೀಮನು ಮುಂದಿದ್ದ ಆ ರಥಸೇನೆಯನ್ನು ಶರವರ್ಷಗಳಿಂದ ಮುಚ್ಚಿಬಿಟ್ಟನು. ಸಮರದಲ್ಲಿ ಅವನನ್ನು ಹೊಡೆಯುತ್ತಿದ್ದ ಧೃತರಾಷ್ಟ್ರನ ಮಹಾರಥ ಪುತ್ರರು ಜಯವನ್ನೇ ಬಯಸಿ ಭೀಮನೊಂದಿಗೆ ಭೀಮಬಲದಿಂದ ಯುದ್ಧದಲ್ಲಿ ಹೋರಾಡತೊಡಗಿದರು. ಆಗ ಕ್ರುದ್ಧ ದುಃಶಾಸನನು ಭೀಮನನ್ನು ಸಂಹರಿಲೋಸುಗ, ಎಲ್ಲ ಲೋಹಮಯವಾದ, ತೀಕ್ಷ್ಣವಾದ ರಥಶಕ್ತಿಯನ್ನು ಅವನ ಮೇಲೆ ಎಸೆದನು. ಅವನು ಪ್ರಯೋಗಿಸಿದ ಆ ಮಹಾಶಕ್ತಿಯು ಬೀಳುತ್ತಿರಲು ಭೀಮನು ಅದನ್ನು ಎರಡಾಗಿ ಕತ್ತರಿಸಿದನು. ಅದೊಂದು ಅದ್ಭುತವಾಗಿತ್ತು. ಕೂಡಲೆ ಬಲೀ ಭೀಮನು ಸಂಕ್ರುದ್ಧನಾಗಿ ಕುಂಡಭೇದಿ, ಸುಷೇಣ ಮತ್ತು ದೀರ್ಘನೇತ್ರ ಈ ಮೂವರನ್ನು ಮೂರು ಮೂರು ಅನ್ಯ ನಿಶಿತ ಬಾಣಗಳಿಂದ ವಧಿಸಿದನು.

ಅನಂತರ ಪುನಃ ವೀರ ವೃಂದಾರಕನನ್ನು ಕೊಂದು ಯುದ್ಧಮಾಡುತ್ತಿರುವ ಧೃತರಾಷ್ಟ್ರನ ವೀರ ಪುತ್ರರಾದ ಅಭಯ, ರೌದ್ರಕರ್ಮ, ಮತ್ತು ದುರ್ವಿಮೋಚನ ಈ ಮೂವರನ್ನು ಮೂರು ಮೂರು ಬಾಣಗಳಿಂದ ಸಂಹರಿಸಿದನು. ವಧಿಸಲ್ಪಡುತ್ತಿದ್ದ ಅವರು ಬಲವನ್ನುಪಯೋಗಿಸಿ ಭೀಮನನ್ನು ಎಲ್ಲ ಕಡೆಗಳಿಂದ ಸುತ್ತುವರೆದರು.

ಆಗ ಒಟ್ಟಿಗೇ ಇದ್ದ ವಿಂದಾನುವಿಂದರನ್ನೂ, ಧೃತರಾಷ್ಟ್ರನ ಇನ್ನೊಬ್ಬ ಮಗ ಸುವರ್ಮನನ್ನೂ ನಗುತ್ತಾ ಕೌಂತೇಯನು ಶರಗಳಿಂದ ಯಮಕ್ಷಯಕ್ಕೆ ಕಳುಹಿಸಿದನು. ಅನಂತರ ಭೀಮನು ಧೃತರಾಷ್ಟ್ರನ ವೀರ ಪುತ್ರ ಸುದರ್ಶನನ್ನೂ ಹೊಡೆದನು. ತಕ್ಷಣವೇ ಅವನು ಬಿದ್ದು ಮರಣಹೊಂದಿದನು. ಹೀಗೆ ಪಾಂಡುನಂದನನು ಸ್ವಲ್ಪವೇ ಸಮಯದಲ್ಲಿ ಆ ರಥಸೇನೆಯನ್ನು ಆಶುಗಗಳಿಂದ ಎಲ್ಲ ದಿಕ್ಕುಗಳಲ್ಲಿ ಚದುರಿಸಿ ಸಂಹರಿಸಿದನು. ರಥಘೋಷದಿಂದ ಗರ್ಜಿಸಿ ಮೃಗಗಳಂತೆ ವಧಿಸಲ್ಪಡುತ್ತಿದ್ದ ಧೃತರಾಷ್ಟ್ರನ ಮಕ್ಕಳೆಲ್ಲರೂ ಭೀಮಸೇನನ ಭಯದಿಂದ ಪೀಡಿತರಾಗಿ ರಥಗಳೊಂದಿಗೆ ಸಮರದಿಂದ ಪಲಾಯನಗೈದರು. ಕೌಂತೇಯನು ಕೌರವೇಯರ ಆ ಮಹಾಸೇನೆಯನ್ನು ಎಲ್ಲಕಡೆ ಅಟ್ಟಿಸಿಕೊಂಡು ಹೋಗಿ ಸಂಹರಿಸಿದನು. ಭೀಮಸೇನನಿಂದ ವಧಿಸಲ್ಪಡುತ್ತಿದ್ದ ಕೌರವರು ರಣದಲ್ಲಿ ಭೀಮನನ್ನು ಬಿಟ್ಟು ಅವರು

ಉತ್ತಮ ಕುದುರೆಗಳನ್ನು ಪುಸಲಾಯಿಸುತ್ತಾ ಓಡಿ ಹೋಗುತ್ತಿದ್ದರು. ಅವರನ್ನು ಸೋಲಿಸಿ ಮಹಾಬಲ ಪಾಂಡವ ಭೀಮಸೇನನು ಸಿಂಹನಾದಗೈದನು ಮತ್ತು ಬಾಹುಗಳನ್ನು ತಟ್ಟಿ ಶಬ್ಧಮಾಡಿದನು. ಜೋರಾಗಿ ಚಪ್ಪಾಳೆಗಳ ಶಬ್ಧವನ್ನೂ ಮಾಡುತ್ತಾ ಮಹಾಬಲ ಭೀಮನು ರಥಿಗಳನ್ನೂ ದಾಟಿ ದ್ರೋಣನ ಸೇನೆಯನ್ನು ಆಕ್ರಮಣಿಸಿದನು.

## ಭೀಮ-ದ್ರೋಣರ ಯುದ್ಧ

ಕತ್ತಲೆಯನ್ನು ಅತಿಕ್ರಮಿಸಿದ ಭಾಸ್ಕರನಂತೆ ಆ ರಥಸೇನೆಯನ್ನು ದಾಟಿಬಂದ ಭೀಮಸೇನನನ್ನು ತಡೆಯಲು ಆಚಾರ್ಯ ದ್ರೋಣನು ಅವನ ಮೇಲೆ ಬಾಣಗಳ ಮಳೆಯನ್ನೇ ಸುರಿಸಿದನು. ದ್ರೋಣನ ಬಿಲ್ಲಿನಿಂದ ಹೊರಟುಬಂದ ಆ ಶರ ಸಮೂಹಗಳನ್ನು ಕುಡಿಯುವನೋ ಎಂಬಂತೆ ತನ್ನ ಮಾಯೆಯಿಂದ ಆ ಸೇನೆಯನ್ನು ಭ್ರಾಂತಗೊಳಿಸಿ ಭೀಮನು ತನ್ನ ಸೋದರ ಧಾರ್ತರಾಷ್ಟ್ರರ ಮೇಲೆ ನುಗ್ಗಿದನು. ಆಗ ರಣದಲ್ಲಿ ಧೃತರಾಷ್ಟ್ರನ ಮಕ್ಕಳಿಂದ ಪ್ರಚೋದಿತರಾದ ಪರಮ ಧನ್ವಿಗಳು ಅತ್ಯಂತ ವೇಗದಿಂದ ಭೀಮನನ್ನು ಎಲ್ಲ ಕಡೆಗಳಿಂದ ಸುತ್ತುವರೆದರು. ಹಾಗೆ ಮುತ್ತಿಗೆ ಹಾಕಲ್ಪಟ್ಟ ಬಲಶಾಲೀ ಭೀಮನು ನಗುತ್ತಾ ಸಿಂಹನಾದಗೈದು ಘೋರವಾದ ಗದೆಯನ್ನು ತೆಗೆದುಕೊಂಡು ವೇಗದಿಂದ ಎಸೆದು ಅವರನ್ನು ನುಚ್ಚುನೂರು ಮಾಡಿದನು.

ಇಂದ್ರನಿಂದಲೇ ಪ್ರಹರಿಸಲ್ಪಟ್ಟ ಇಂದ್ರನ ವಜ್ರಾಯುಧದಂತೆ ಎಸೆಯಲ್ಪಟ್ಟ ಆ ಅತಿ ಸಾಮರ್ಥ್ಯದ ಗದೆಯು ತನ್ನ ಘೋಷದಿಂದ ಇಡೀ ಮೇದಿನಿಯನ್ನೇ ತುಂಬಿಸಿಬಿಟ್ಟಿತು. ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವ ಆ ಭಯಂಕರ ಗದೆಯು ಧೃತರಾಷ್ಟ್ರನ ಸುತರನ್ನು ಭೀತರನ್ನಾಗಿಸಿತು. ತೇಜಸ್ಸಿನಿಂದ ಸುತ್ತುವರೆಯಲ್ಪಟ್ಟು ಮಹಾವೇಗದಿಂದ ಬೀಳುತ್ತಿರುವ ಆ ಗದೆಯನ್ನು ನೋಡಿ ಕೌರವರೆಲ್ಲರೂ ಭೈರವ ಕೂಗನ್ನು ಕೂಗುತ್ತಾ ಓಡತೊಡಗಿದರು. ಸಹಿಸಲಾಧ್ಯವಾದ ಅದರ ಶಬ್ಧದಿಂದಾಗಿ ಮನುಷ್ಯರು ನಿಂತಲ್ಲಿಯೇ ಬಿದ್ದುಬಿಟ್ಟರು ಮತ್ತು ರಥಿಗಳು ರಥಗಳ ಮೇಲಿಂದ ಬಿದ್ದರು. ದುರಾಸದ ಕೌಂತೇಯನು ತನ್ನ ಶತ್ರುಗಳನ್ನು ಸದೆಬಡಿಯುತ್ತಾ ಗರುಡನಂತೆ ವೇಗದಿಂದ ಆ ಸೇನೆಯನ್ನು ಅತಿಕ್ರಮಿಸಿದನು. ರಥಯೋಧಿಗಳ ನಾಯಕರ ನಾಯಕನಾದ ಭೀಮಸೇನನು ಹಾಗೆ ಸೇನೆಯನ್ನು ನಾಶಪಡಿಸುತ್ತಿರಲು ಅವನನ್ನು ಆಕ್ರಮಣಿಸಲು ಭಾರದ್ವಾಜ ದ್ರೋಣನು ಮುನ್ನುಗ್ಗಿದನು.

ದ್ರೋಣನಾದರೋ ಸಮರದಲ್ಲಿ ಭೀಮನನ್ನು ತೀಕ್ಷ್ಣ ಶರಗಳಿಂದ ತಡೆಯುತ್ತಾ ಒಮ್ಮೆಂದೊಮ್ಮೆಲೇ ಜೋರಾಗಿ ಗರ್ಜಿಸಿ ಪಾಂಡವರಿಗೆ ಭಯವನ್ನು ತಂದನು. ಆಗ ಮಹಾತ್ಮ ದ್ರೋಣ ಮತ್ತು ಭೀಮರ

ನಡುವೆ ದೇವಾಸುರರ ಯುದ್ಧದಂತೆ ಘೋರವಾದ ಯುದ್ಧವು ನಡೆಯಿತು. ದ್ರೋಣನ ಚಾಪದಿಂದ ಹೊರಟ ತೀಕ್ಷ್ಣ ವಿಶಿಖಗಳು ಸಮರದಲ್ಲಿ ನೂರಾರು ಸಹಸ್ರಾರು ವೀರರನ್ನು ವಧಿಸಿದವು. ಆಗ ಪಾಂಡವನು ರಥದಿಂದ ಹಾರಿ ವೇಗವನ್ನು ಬಳಸಿ ಕಣ್ಣುಗಳನ್ನು ಮುಚ್ಚಿಕೊಂಡು ಓಡಿಕೊಂಡು ದ್ರೋಣನ ಕಡೆ ಮುನ್ನುಗ್ಗಿದ್ದನು. ಹೋರಿಯೊಂದು ಬಹುಲೀಲೆಯಿಂದ ಜೋರಾಗಿ ಸುರಿಯುವ ಮಳೆಯನ್ನು ತಡೆದುಕೊಳ್ಳುವ ಹಾಗೆ ಭೀಮನು ಆ ಶರಗಳ ಮಳೆಯನ್ನು ತಡೆದುಕೊಂಡನು. ವಧಿಸುತ್ತಿರುವ ಆ ಮಹಾಬಲನು ದ್ರೋಣನ ರಥದ ಮೂಕನ್ನು ಕೈಯಿಂದ ಹಿಡಿದು ಹಿಂದಕ್ಕೆ ನೂಕಿ ಎಸೆದನು. ಭೀಮನಿಂದ ಎಸೆಯಲ್ಪಟ್ಟ ದ್ರೋಣನಾದರೋ ತ್ವರೆಮಾಡಿ ಇನ್ನೊಂದು ರಥದಲ್ಲಿ ಕುಳಿತು ವ್ಯೂಹದ್ವಾರದಲ್ಲಿ ಮತ್ತೆ ಕಾಣಿಸಿಕೊಂಡನು. ಅವನ ಸಾರಥಿಯು ಕುದುರೆಗಳನ್ನು ಬೇಗನೆ ಓಡಿಸಿದನು. ಭೀಮಸೇನನ ಆ ಕೃತ್ಯವು ಅದ್ಭುತವಾಗಿತ್ತು.

ಆಗ ಮಹಾಬಲ ಭೀಮಸೇನನು ತನ್ನ ರಥವನ್ನೇರಿ ವೇಗದಿಂದ ಕೌರವ ಸೇನೆಯ ಮೇಲೆ ಎರಗಿದನು. ಭಿರುಗಾಳಿಯು ವೃಕ್ಷಗಳನ್ನು ಧ್ವಂಸಗೊಳಿಸುವಂತೆ ಅವನು ಕ್ಷತ್ರಿಯರನ್ನು ಧ್ವಂಸಗೊಳಿಸಿದನು. ಮತ್ತು ವೇಗವಾಗಿ ಹರಿದು ಬರುತ್ತಿರುವ ನದಿಯನ್ನು ಪರ್ವತವು ಹೇಗೋ

ಹಾಗೆ ಅವರ ಆ ಸೇನೆಗಳನ್ನು ತಡೆಗಟ್ಟಿದನು. ಅನಂತರ ಹಾರ್ದಿಕ್ಯ ಕೃತವರ್ಮನಿಂದ ರಕ್ಷಿತವಾದ ಭೋಜಸೇನೆಯನ್ನು ಚೆನ್ನಾಗಿ ಸದೆಬಡಿದು ದಾಟಿ ಮುಂದುವರೆದನು. ಚಪ್ಪಾಳೆ ಶಬ್ಧದಿಂದ ಸೇನೆಗಳನ್ನು ಬೆದರಿಸುತ್ತಾ ಭೀಮನು ಹುಲಿಯು ಹಸು ಹೋರಿಗಳನ್ನು ಹೇಗೋ ಹಾಗೆ ಎಲ್ಲ ಸೇನೆಗಳನ್ನೂ ಜಯಿಸಿದನು. ಭೋಜರ ಮತ್ತು ಕಾಂಬೋಜರ ಸೇನೆಗಳನ್ನು ಅತಿಕ್ರಮಿಸಿ ಹಾಗೆಯೇ ಯುದ್ಧವಿಶಾರದರಾದ ಅನೇಕ ಮ್ಲೇಚ್ಛಗಣಗಳನ್ನೂ ಅನ್ಯರನ್ನೂ ಸೋಲಿಸಿ, ಯುದ್ಧಮಾಡುತ್ತಿರುವ ನರರ್ಷಭ ಸಾತ್ಯಕಿಯನ್ನು ಕೂಡ ನೋಡಿ, ಧನಂಜಯನನ್ನು ಕಾಣಲು ಬಯಸಿ ಕೌಂತೇಯ ಭೀಮಸೇನನು ವೇಗವಾಗಿ ರಥದಲ್ಲಿ ಪ್ರಯಾಣಿಸಿದನು.

ಕೌರವರ ಕಡೆಯ ಯೋಧರನ್ನು ಸಮರದಲ್ಲಿ ಅತಿಕ್ರಮಿಸಿ ಪರಾಕ್ರಮೀ ಭೀಮನು ಸೈಂಧವನ ವಧೆಗೋಸ್ಕರವಾಗಿ ಯುದ್ಧಮಾಡುತ್ತಿದ್ದ ಅರ್ಜುನನನ್ನು ಅಲ್ಲಿ ನೋಡಿದನು. ಅರ್ಜುನನನ್ನು ನೋಡಿ ಮಹಾ ಕೂಗನ್ನು ಕೂಗಿದನು. ಕೂಗುತ್ತಿರುವ ಅವನ ಮಹಾನಾದವು ಅರ್ಜುನನಿಗೆ ಕೇಳಿತು. ಆ ಮಹಾನಾದವನ್ನು ಕೇಳಿ ಪಾರ್ಥ ಮತ್ತು ಮಾಧವರಿಬ್ಬರೂ ಗೂಳಿಗಳಂತೆ ಜೋರಾಗಿ ಕೂಗಿದರು. ಭೀಮಸೇನನ ಗರ್ಜನೆಯನ್ನು ಕೇಳಿ ವಾಸುದೇವ-ಅರ್ಜುನರು ವೃಕೋದರನನ್ನು

ಕಾಣಲೋಸುಗ ಪುನಃ ಪುನಃ ಗರ್ಜಿಸಿದರು. ಭೀಮಸೇನನ ಮತ್ತು ಅರ್ಜುನನ ಕೂಗುಗಳನ್ನು ಕೇಳಿ ಯುಧಿಷ್ಠಿರನು ಅತ್ಯಂತ ಪ್ರೀತನಾದನು. ಭೀಮನ ಮತ್ತು ಧನಂಜಯನ ಮಹಾನಿನಾದವನ್ನು ಕೇಳಿ ರಾಜನು ಶೋಕವನ್ನು ಕಳೆದುಕೊಂಡು ಜಯದ ಆಸೆಯನ್ನು ಹೊತ್ತನು. ರಣೋತ್ಕಟನಾದ ಭೀಮಸೇನನು ಹಾಗೆ ಗರ್ಜಿಸುತ್ತಿರಲು ಮಹಾಬಾಹು ಯುಧಿಷ್ಠಿರನು ನಸುನಕ್ಕನು. ಆ ಧರ್ಮಭೃತರಲ್ಲಿ ಶ್ರೇಷ್ಠನು ಹೃದಯದಿಂದ ಹೊರಟ ಮಾತನ್ನು ಮನಸ್ಸಿನಲ್ಲಿಯೇ ಅಂದುಕೊಂಡನು:

> “ಭೀಮ! ನೀನು ನನಗೆ ಈ ಸಂದೇಶವನ್ನಿತ್ತು ಹಿರಿಯನ ವಚನದಂತೆಯೇ ಮಾಡಿದ್ದೀಯೆ! ನಿನ್ನನ್ನು ದ್ವೇಷಿಸುವವರಿಗೆ ಯುದ್ಧದಲ್ಲಿ ಜಯವೆಂಬುದೇ ಇಲ್ಲ. ಅದೃಷ್ಟವಶಾತ್ ಧನಂಜಯನು ಸಂಗ್ರಾಮದಲ್ಲಿ ಜೀವಂತವಿದ್ದಾನೆ. ಒಳ್ಳೆಯದಾಯಿತು! ವೀರ ಸತ್ಯವಿಕ್ರಮ ಸಾತ್ಯಕಿಯು ಕುಶಲನಾಗಿದ್ದಾನೆ. ಅದೃಷ್ಟವಶಾತ್ ವಾಸುದೇವ-ಧನಂಜಯರ ಗರ್ಜನೆಯನ್ನು ಕೇಳುತ್ತಿದ್ದೇನೆ! ಒಳ್ಳೆಯದಾಯಿತು! ರಣದಲ್ಲಿ ಶಕ್ರನನ್ನು ಗೆದ್ದು ಹವ್ಯವಾಹನನನ್ನು ತೃಪ್ತಿಪಡಿಸಿದ ಫಲ್ಗುನನು ರಣದಲ್ಲಿ

ದ್ವೇಷಿಗಳನ್ನು ಸಂಹರಿಸಿ ಜೀವಂತನಿದ್ದಾನೆ! ಒಳ್ಳೆಯದಾಯಿತು! ಯಾರ ಬಾಹುಬಲವನ್ನು ಆಶ್ರಯಿಸಿ ನಾವು ಜೀವಿತರಾಗಿದ್ದೆವೋ ಆ ಫಲ್ಗುನನು ಶತ್ರುಸೇನೆಗಳನ್ನು ಸಂಹರಿಸಿ ಜೀವಂತವಿದ್ದಾನೆ! ಒಳ್ಳೆಯದಾಯಿತು! ದೇವತೆಗಳಿಗೂ ದುರ್ಜಯರಾದ ನಿವಾತಕವಚರನ್ನು ಯಾವ ಒಬ್ಬನೇ ರಥಿಯು ಗೆದ್ದನೋ ಆ ಪಾರ್ಥನು ಜೀವಿಸಿದ್ದಾನೆ. ಒಳ್ಳೆಯದಾಯಿತು! ಮತ್ಸ್ಯನಗರದಲ್ಲಿ ಗೋವುಗಳನ್ನು ಹಿಡಿಯಲು ಒಟ್ಟಿಗೇ ಸೇರಿದ್ದ ಕೌರವರೆಲ್ಲರನ್ನೂ ಜಯಿಸಿದ ಪಾರ್ಥನು ಜೀವಿಸಿದ್ದಾನೆ. ಒಳ್ಳೆಯದಾಯಿತು! ಮಹಾರಣದಲ್ಲಿ ಹದಿನಾಲ್ಕು ಸಾವಿರ ಕಾಲಕೇಯರನ್ನು ಭುಜವೀರ್ಯದಿಂದ ವಧಿಸಿದ ಪಾರ್ಥನು ಜೀವಿಸಿದ್ದಾನೆ. ಒಳ್ಳೆಯದಾಯಿತು! ದುರ್ಯೋಧನನಿಗಾಗಿ ಬಲಶಾಲೀ ಗಂಧರ್ವರಾಜನನ್ನು ಅಸ್ತ್ರವೀರ್ಯದಿಂದ ಜಯಿಸಿದ ಪಾರ್ಥನು ಜೀವಿಸಿದ್ದಾನೆ. ಒಳ್ಳೆಯದಾಯಿತು! ನನಗೆ ಸತತವೂ ಪ್ರಿಯನಾಗಿರುವ ಕಿರೀಟಮಾಲೀ, ಬಲವಾನ್, ಶ್ವೇತಾಶ್ವ, ಕೃಷ್ಣಸಾರಥಿ ಫಲ್ಗುನನು ಜೀವಿಸಿದ್ದಾನೆ. ಪುತ್ರಶೋಕದಿಂದ ಸಂತಪ್ತನಾಗಿ ಜಯದ್ರಥನ ವಧೆಯಂಥಹ ದುಷ್ಕರ ಕರ್ಮವನ್ನು ಮಾಡಲು ಬಯಸಿ ಪ್ರತಿಜ್ಞೆಯನ್ನು

ಕೈಗೊಂಡಿರುವ ಧನಂಜಯನು ರಣದಲ್ಲಿ ಸೈಂಧವನನ್ನು ಕೊಲ್ಲುತ್ತಾನೆಯೇ? ವಾಸುದೇವನಿಂದ ರಕ್ಷಿತನಾಗಿ, ಆದಿತ್ಯನು ಅಸ್ತನಾಗುವುದರೊಳಗೇ ಪ್ರತಿಜ್ಞೆಯನ್ನು ಪೂರೈಸಿದ ಅರ್ಜುನನನ್ನು ನಾನು ಭೇಟಿಯಾಗಬಲ್ಲೆನೇ? ದುರ್ಯೋಧನನ ಹಿತದಲ್ಲಿಯೇ ನಿರತನಾಗಿರುವ ರಾಜಾ ಸೈಂಧವನು ಫಲ್ಗುನನಿಂದ ಹತನಾಗಿ ಬಿದ್ದು ಶತ್ರುಗಳಿಗೆ ಆನಂದವನ್ನುಂಟು ಮಾಡುತ್ತಾನೆಯೇ? ರಣದಲ್ಲಿ ಫಲ್ಗುನನು ಉರುಳಿಸಿದ ಸೈಂಧವಕನನ್ನು ನೋಡಿಯಾದರೂ ರಾಜಾ ದುರ್ಯೋಧನನು ನಮ್ಮೊಡನೆ ಸಂಧಾನವನ್ನು ಮಾಡಿಕೊಳ್ಳುವನೇ? ರಣದಲ್ಲಿ ಭೀಮಸೇನನು ಸಂಹರಿಸಿದ ಸಹೋದರರನ್ನು ನೋಡಿಯಾದರೂ ಮಂದಬುದ್ಧಿಯ ದುರ್ಯೋಧನನು ನಮ್ಮೊಡನೆ ಸಂಧಾನವನ್ನು ಮಾಡಿಕೊಳ್ಳುವನೇ? ಇನ್ನೂ ಅನೇಕ ಯೋಧರು ರಣಭೂಮಿಯಲ್ಲಿ ಹತರಾಗಿ ಬಿದ್ದಿರುವುದನ್ನು ನೋಡಿಯಾದರೂ ಮಂದಬುದ್ಧಿಯ ದುರ್ಯೋಧನನು ಪಶ್ಚಾತ್ತಾಪ ಪಡುತ್ತಾನೆಯೇ? ಭೀಷ್ಮನೊಬ್ಬನ ಪತನದೊಂದಿಗೇ ನಮ್ಮ ಈ ವೈರವು ಕೊನೆಗೊಳ್ಳುತ್ತದೆಯೇ? ಮತ್ತು ಉಳಿದವರ ರಕ್ಷಣೆಗಾಗಿಯಾದರೂ ಸುಯೋಧನನು

ಸಂಧಿಮಾಡಿಕೊಳ್ಳುತ್ತಾನೆಯೇ?”

ಹೀಗೆ ಬಹುವಿಧವಾಗಿ ಕೃಪೆಯಿಂದ ತುಂಬಿ ತುಳುಕುತ್ತಿದ್ದ ರಾಜ ಯುಧಿಷ್ಠಿರನು ಯೋಚಿಸುತ್ತಿರಲು, ಇನ್ನೊಂದುಕಡೆ ಘೋರವಾದ ಯುದ್ಧವು ನಡೆಯಿತು.

## ಕರ್ಣ-ಭೀಮಸೇನರ ಯುದ್ಧ

ಹಾಗೆ ಗರ್ಜಿಸುತ್ತಿದ್ದ ಮಹಾರಥ ಭೀಮಸೇನನನ್ನು ಅಷ್ಟೇ ತುಮುಲ ಶಬ್ಧದಿಂದ ಬಲೀ ಕರ್ಣನು ಎದುರಿಸಿದನು. ಭೀಮನನ್ನು ಸಹಿಸಲಾರದೇ ಬಲವತ್ತಾಗಿ ಚಾಪವನ್ನು ಸೆಳೆದು ಯುದ್ಧಾಕಾಂಕ್ಷಿಯಾಗಿ ಕರ್ಣನು ಬಲವನ್ನು ಪ್ರದರ್ಶಿಸಿದನು. ಕರ್ಣ-ಭೀಮಸೇನರ ಆ ಸಮಾಗಮದಲ್ಲಿ ಅವರಿಬ್ಬರ ಚಪ್ಪಾಳೆ ಶಬ್ಧವನ್ನು ಕೇಳಿಯೇ ರಥಿಗಳು ಮತ್ತು ಅಶ್ವಾರೋಹಿಗಳ ಶರೀರಗಳು ಕಂಪಿಸಿದವು. ರಣರಂಗದಲ್ಲಿ ಭೀಮಸೇನನ ಘೋರ ನಿನಾದವನ್ನು ಕೇಳಿ ಭೂಮಿ-ಆಕಾಶಗಳು ಗಾಭರಿಗೊಂಡಿವೆಯೋ ಎಂದು ಕ್ಷತ್ರಿಯರ್ಷಭರು ತಿಳಿದುಕೊಂಡರು. ಪುನಃ ಮಹಾತ್ಮ ಪಾಂಡವನ ಘೋರನಾದದಿಂದಾಗಿ ಸಮರದಲ್ಲಿದ್ದ ಸರ್ವಯೋಧರ ಧನುಸ್ಸುಗಳು ನೆಲದ ಮೇಲೆ ಬಿದ್ದವು. ವಾಹಕ ಪ್ರಾಣಿಗಳೆಲ್ಲವೂ ಹೆದರಿ ಮಲ-ಮೂತ್ರಗಳನ್ನು ವಿಸರ್ಜಿಸಿದವು. ಲವಲವಿಕೆಯನ್ನೂ ಕಳೆದುಕೊಂಡವು. ಭೀಮ ಮತ್ತು ಕರ್ಣರ ಆ

ತುಮುಲ ಸಮಾಗಮದಲ್ಲಿ ಅನೇಕ ಘೋರ ನಿಮಿತ್ತಗಳು ಉಂಟಾದವು.

ಕರ್ಣನು ಇಪ್ಪತ್ತು ಶರಗಳಿಂದ ಭೀಮನನ್ನು ಗಾಯಗೊಳಿಸಿದನು. ತ್ವರೆಮಾಡಿ ಅವನ ಸಾರಥಿಯನ್ನು ಕೂಡ ಐದು ಆಶುಗಗಳಿಂದ ಹೊಡೆದನು. ಮಹಾಬಲ ಭೀಮಸೇನನಾದರೋ ಜೋರಾಗಿ ನಕ್ಕು ಅರವತ್ನಾಲ್ಕು ಕ್ಷಿಪ್ರಕಾರೀ ಸಾಯಕಗಳಿಂದ ಕರ್ಣನನ್ನು ಹೊಡೆದನು. ಕರ್ಣನು ಅವನ ಮೇಲೆ ನಾಲ್ಕು ಸಾಯಕಗಳನ್ನು ಪ್ರಯೋಗಿಸಿದನು. ಅವು ತಲುಪುವುದರೊಳಗೇ ಅವುಗಳನ್ನು ಭೀಮನು ಸಾಯಕ ನತಪರ್ವಗಳಿಂದ ಅನೇಕ ಚೂರುಗಳಾಗಿ ತುಂಡರಿಸಿ ತನ್ನ ಕೈಚಳಕವನ್ನು ತೋರಿಸಿದನು. ಕರ್ಣನಿಂದ ಬಹಳ ಬಾರಿ ಮುಚ್ಚಲ್ಪಟ್ಟ ಪಾಂಡುನಂದನನು ಕರ್ಣನನ್ನೂ ಕೂಡ ಅನೇಕ ಶರಸಮೂಹಗಳಿಂದ ಮುಚ್ಚಿದನು. ಭೀಮನು ಕರ್ಣನ ಧನುಸ್ಸನ್ನು ಮುಷ್ಟಿದೇಶದಲ್ಲಿ ಕತ್ತರಿಸಿದನು ಮತ್ತು ಅನೇಕ ನತಪರ್ವ ಸಾಯಕಗಳಿಂದ ಅವನನ್ನೂ ಹೊಡೆದನು. ಆಗ ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಶಿಂಜನಿಯನ್ನು ಬಿಗಿದು ಸೂತಜ ಕರ್ಣನು ಭೀಮನನ್ನು ಹೊಡೆದನು. ಅವನ ಮೇಲೆ ತುಂಬಾ ಕ್ರುದ್ಧನಾದ ಭೀಮನು ಮೂರು ನತಪರ್ವ ಶರಗಳನ್ನು ವೇಗದಿಂದ ಸೂತಪುತ್ರನ ಎದೆಗೆ ಗುರಿಯಿಟ್ಟು ಹೊಡೆದು ನಾಟಿಸಿದನು.

ಅವನ ಎದೆಯ ಮಧ್ಯವನ್ನು ಹೊಕ್ಕ ಆ ಬಾಣಗಳಿಂದ ಕರ್ಣನು ಮೂರು ಶೃಂಗಗಳುಳ್ಳ ಪರ್ವತದಂತೆ ಕಂಗೊಳಿಸಿದನು. ಆ ತೀಕ್ಷ್ಣ ಶರಗಳಿಂದ ಗಾಯಗೊಂಡ ಅವನು ಧಾತುಗಳು ತುಂಬಿದ ನೀರನ್ನು ಪ್ರಸವಿಸುವ ಪರ್ವತದಂತೆ ರಕ್ತವನ್ನು ಸುರಿಸಿದನು. ಉತ್ತಮ ಪ್ರಹಾರದಿಂದ ತುಂಬಾ ಪೀಡಿತನಾಗಿದ್ದರೂ ಕರ್ಣನು ಸ್ವಲ್ಪವೂ ವಿಚಲಿತನಾಗಲಿಲ್ಲ. ಧನುಸ್ಸನ್ನೇ ಸಹಾಯವಾಗಿರಿಸಿಕೊಂಡು ಕರ್ಣನು ಪುನಃ ನೂರಾರು ಸಹಸ್ರಾರು ಬಾಣಗಳನ್ನು ಭೀಮನ ಮೇಲೆ ಪ್ರಯೋಗಿಸಿದನು. ದೃಢಧನ್ವಿ ಕರ್ಣನಿಂದ ಹಾಗೆ ಒಮ್ಮೆಲೇ ಮುಚ್ಚಿಹೋದ ಭೀಮನು ನಗುತ್ತಾ ಬಿಲ್ಲನ್ನು ಸೆಳೆದು ಭಲ್ಲದಿಂದ ಕರ್ಣನ ಸಾರಥಿಯನ್ನು ಯಮಸಾದನಕ್ಕೆ ಕಳುಹಿಸಿದನು. ಅವನ ನಾಲ್ಕು ಕುದುರೆಗಳನ್ನೂ ಸಂಹರಿಸಿದನು. ಕುದುರೆಗಳು ಹತವಾದ ಆ ರಥದಿಂದ ಹಾರಿ ಇಳಿದು ಮಹಾರಥ ಕರ್ಣನು ಮಗ ವೃಷಸೇನನ ರಥವನ್ನು ಏರಿದನು.

ಕರ್ಣನನ್ನು ಸೋಲಿಸಿ ಭೀಮಸೇನನು ಮಳೆಗಾಲದ ಗುಡುಗಿನಂತೆ ಜೋರಾಗಿ ಗರ್ಜಿಸಿದನು. ಅವನ ಆ ಕೂಗನ್ನು ಕೇಳಿ, ಭೀಮಸೇನನಿಂದ ಕರ್ಣನು ಸೋತನು ಎಂದು ತಿಳಿದು ಯುಧಿಷ್ಠಿರನು ಪರಮ ಹರ್ಷಿತನಾದನು. ಆಗ ಪಾಂಡವರ ಸೇನೆಯಲ್ಲಿ ಎಲ್ಲ ಕಡೆ ಶಂಖವನ್ನು

ಊದಿದರು. ಶತ್ರುಸೇನೆಗಳ ಧ್ವನಿಯನ್ನು ಕೇಳಿ ಕೌರವರೂ ಕೂಡ ಕೂಗಿದರು. ಪಾರ್ಥನು ಗಾಂಡೀವವನ್ನು ಮೊಳಗಿಸಿದನು ಮತ್ತು ಕೃಷ್ಣನು ಶಂಖವನ್ನೂದಿದನು. ಆ ಎಲ್ಲ ಕೂಗುಗಳನ್ನೂ ಅಡಗಿಸಿ ಗರ್ಜಿಸುತ್ತಿದ್ದ ಭೀಮಸೇನನ ಕೂಗಿನ ಧ್ವನಿಯು ಎಲ್ಲ ಸೇನೆಗಳಲ್ಲೂ ಕೇಳಿಬಂದಿತು. ಆಗ ಆ ಇಬ್ಬರು ಅರಿಂದಮ ಕರ್ಣ-ಭೀಮರು ಬೇರೆ ಬೇರೆ ಅಸ್ತ್ರಗಳಿಂದ - ರಾಧೇಯನು ಮೃದುವಾಗಿಯೂ ಪಾಂಡವನು ಜೋರಾಗಿಯೂ - ಹೋರಾಡಿದರು.

## ದುರ್ಯೋಧನನ ಯುದ್ಧ

ಆ ಸೇನೆಯು ಚದುರಿಹೋಗಲು, ಸೈಂಧವನಿಗಾಗಿ ಅರ್ಜುನ, ಸಾತ್ಯಕಿ ಮತ್ತು ಭೀಮಸೇನರು ಹೊರಟು ಹೋಗಲು ದುರ್ಯೋಧನನು ದ್ರೋಣನ ಬಳಿಸಾರಿದನು. ಆಗ ಅವನು ಒಬ್ಬನೇ ರಥದಲ್ಲಿ ಕುಳಿತುಕೊಂಡು ಅನೇಕ ಕೆಲಸಗಳ ಕುರಿತು ಚಿಂತಿಸುತ್ತಾ ಅತ್ಯಂತ ವೇಗದಿಂದ ಹೊರಟನು. ಮನಸ್ಸು-ಮಾರುತಗಳ ವೇಗದಿಂದ ಬೇಗನೆ ದ್ರೋಣನನ್ನು ಸಮೀಪಿಸಿದ ದುರ್ಯೋಧನನು ಕ್ರೋಧದಿಂದ ರಕ್ತಲೋಚನನಾಗಿ ಹೀಗೆ ಹೇಳಿದನು:

> “ಅರಿಕರ್ಶನರಾದ ಅರ್ಜುನ, ಭೀಮಸೇನ ಮತ್ತು ಸಾತ್ಯಕಿಯರು ಎಲ್ಲ ಮಹಾ ಸೇನೆಗಳನ್ನೂ, ಮಹಾರಥರನ್ನೂ

ಸೋಲಿಸಿ ಸಿಂಧುರಾಜನ ಸಮೀಪಕ್ಕೆ ಹೋಗಿಯಾಯಿತು! ಅಲ್ಲಿಯೂ ಕೂಡ ಈ ಅಪರಾಜಿತರು ಎಲ್ಲರೂ ನಮ್ಮ ಮೇಲೆ ಆಕ್ರಮಣ ನಡೆಸಿದ್ದಾರೆ. ಮಹಾರಥ ಪಾರ್ಥನಾದರೋ ರಣದಲ್ಲಿ ತಮ್ಮನ್ನು ಅತಿಕ್ರಮಿಸಿ ಹೋರಟು ಹೋಗಿರಬಹುದು. ಆದರೆ ಸಾತ್ಯಕಿ-ಭೀಮಸೇನರು ನಿಮ್ಮನ್ನು ಹೇಗೆ ಅತಿಕ್ರಮಿಸಿ ಹೋದರು? ಸಾತ್ವತನಿಂದ ಮತ್ತು ಅರ್ಜುನನಿಂದ ಹಾಗೆಯೇ ಭೀಮಸೇನನಿಂದ ನೀವು ಸೋತಿರೆಂದರೆ ಈ ಲೋಕದಲ್ಲಿ ಸಮುದ್ರವು ಒಣಗಿಹೋದಷ್ಟೇ ಆಶ್ಚರ್ಯಕರವಾದ ವಿಷಯವಾಗಿದೆ. ಲೋಕದಲ್ಲಿ ಜನರು ಜೋರಾಗಿ ಕೇಳುತ್ತಿದ್ದಾರೆ - ಧನುರ್ವೇದದಲ್ಲಿ ಪಾರಂಗತನಾದ ದ್ರೋಣನು ಯುದ್ಧದಲ್ಲಿ ಹೇಗೆ ಸೋತ? – ಎಂದು. ಆ ಮೂವರು ಪುರುಷವ್ಯಾಘ್ರ ರಥರು ನಿಮ್ಮನ್ನು ಅತಿಕ್ರಮಿಸಿ ಹೋದರೆಂದರೆ ಈ ಮಂದಭಾಗ್ಯನ ನಾಶವಾಯಿತೆಂದೇ ಅಲ್ಲವೇ? ಹೀಗೆ ನಡೆದಿರುವಾಗ ಮುಂದೇನು ಮಾಡುವುದಿದೆ ಎನ್ನುವುದನ್ನು ಹೇಳಿ. ಆದದ್ದು ಆಗಿಹೋಯಿತು. ಈಗ ಏನು ಮಾಡಬೇಕು ಎನ್ನುವುದನ್ನು ಯೋಚಿಸಿ. ಈ ಪರಿಸ್ಥಿತಿಯಲ್ಲಿ ಸಿಂಧುರಾಜನು ಏನು ಮಾಡಬೇಕು ಎನ್ನುವುದನ್ನು ಹೇಳಿ. ಅದನ್ನು ಬೇಗನೆ

ವಿಧಿವತ್ತಾಗಿ ಕಾರ್ಯಗತಗೊಳಿಸಲಿ!”

ದ್ರೋಣನು ಹೇಳಿದನು:

“ಮಹಾರಾಜ! ಬಹಳವಾಗಿ ಯೋಚಿಸಿ ಏನು ಮಾಡಬೇಕೆಂದು ನಾನು ಹೇಳುವುದನ್ನು ಕೇಳು. ಕೇವಲ ಮೂವರು ಪಾಂಡವ ಮಹಾರಥರೇ ನನ್ನನ್ನು ಅತಿಕ್ರಮಿಸಿ ಹೋಗಿದ್ದಾರೆ. ಮುಂದೆ ಹೋಗಿರುವವರ ಕುರಿತು ಭಯಪಡುವಷ್ಟೇ ಹಿಂದೆ ಉಳಿದಿರುವವರ ಕುರಿತು ಭಯಪಡಬೇಕು. ಆದರೆ ಎದಿರು ಕೃಷ್ಣ-ಧನಂಜಯರಿರುವಲ್ಲಿ ಇನ್ನೂ ಹೆಚ್ಚಿನ ಜಾಗ್ರತೆಯಿರಬೇಕೆಂದು ಅನಿಸುತ್ತದೆ. ಭಾರತೀ ಸೇನೆಯು ಮುಂದಿನಿಂದ ಮತ್ತು ಹಿಂದಿನಿಂದ ಎರಡೂ ಕಡೆಗಳಿಂದ ಆಕ್ರಮಣಿಸಲ್ಪಟ್ಟಿದೆ. ಸೈಂಧವನ ರಕ್ಷಣೆಯು ನಮ್ಮ ಮೊದಲ ಕರ್ತವ್ಯವೆಂದು ನಾನು ತಿಳಿಯುತ್ತೇನೆ. ಅಯ್ಯಾ! ಧನಂಜಯನಿಂದ ಭೀತನಾದ ಅವನು ನಮ್ಮ ರಕ್ಷಣೆಗೆ ಅರ್ಹನಾಗಿದ್ದಾನೆ. ವೀರರಾದ ಯುಯುಧಾನ-ವೃಕೋದರರರಿಬ್ಬರೂ ಸೈಂಧವನಲ್ಲಿಗೆ ತಲುಪಿದ್ದಾರೆ. ಶಕುನಿಯ ಬುದ್ಧಿಯಿಂದ ಹುಟ್ಟಿದ ದ್ಯೂತದಿಂದಲೇ ನಮಗೆ ಈ ಪರಿಸ್ಥಿತಿಯು ಬಂದೊದಗಿದೆ. ಸಭೆಯಲ್ಲಿ ಆಟವಾಡಿದಾಗ

ಅಲ್ಲಿ ಜಯವೂ ಇರಲಿಲ್ಲ, ಸೋಲೂ ಇರಲಿಲ್ಲ. ಆದರೆ ಆಡುತ್ತಿರುವ ಈ ಆಟದಲ್ಲಿ ಜಯ-ಪರಾಜಯಗಳಿವೆ. ಕುರುಸಂಸದಿಯಲ್ಲಿ, ಅನೇಕ ಕುರುಗಳು ಸೇರಿದ್ದಲ್ಲಿ, ದಾಳಗಳೆಂದು ತಿಳಿದು ಆಟವಾಡುತ್ತಿದ್ದುದು ಮುಗ್ಧ ದಾಳಗಳಾಗಿರಲಿಲ್ಲ. ಅವು ಕಣ್ಣಿಗೆ ಕಾಣದೇ ಇರುವ ಘೋರ ದುರಾಸದ ಬಾಣಗಳಾಗಿದ್ದವು. ಈ ಸೇನೆಗಳೇ ಆಟಗಾರರೆಂದೂ, ಶರಗಳೇ ದಾಳಗಳೆಂದೂ, ಸೈಂಧವನೇ ದ್ಯೂತವನ್ನು ನಿಶ್ಚಯಿಸುವ ಪಣವೆಂದೂ ತಿಳಿ. ಸೈಂಧವನೇ ಈಗ ನಾವು ಶತ್ರುಗಳೊಂದಿಗೆ ಹೋರಾಡುತ್ತಿರುವ ಈ ಮಹಾದ್ಯೂತದ ಪಣ. ಆದುದರಿಂದ ನಾವೆಲ್ಲರೂ ನಮ್ಮ ಜೀವವನ್ನೇ ಮುಡುಪಾಗಿಟ್ಟು ಅವನನ್ನು ವಿಧಿವತ್ತಾಗಿ ರಕ್ಷಣೆಯನ್ನು ಮಾಡಬೇಕಾಗಿದೆ. ಅಲ್ಲಿ ಆಟವಾಡುವ ನಮ್ಮವರ ಜಯ-ಅಪಜಯಗಳು ನಿರ್ಧರಿಸಲ್ಪಡುತ್ತದೆ. ಎಲ್ಲಿ ಆ ಪರಮೇಷ್ವಾಸರು ಸೈಂಧವನನ್ನು ಪ್ರಯತ್ನಪಟ್ಟು ರಕ್ಷಿಸುತ್ತಿದ್ದಾರೋ ಅಲ್ಲಿಗೆ ಶೀಘ್ರವಾಗಿ ಸ್ವಯಂ ನೀನು ಹೋಗು. ಆ ರಕ್ಷಕರನ್ನು ರಕ್ಷಿಸು! ನಾನು ನಿನ್ನೊಂದಿಗೆ ಇತರರನ್ನು ಅಲ್ಲಿಗೆ ಕಳುಹಿಸುತ್ತೇನೆ ಮತ್ತು ಇಲ್ಲಿಯೇ ಇದ್ದುಕೊಂಡು ಪಾಂಚಾಲರೊಂದಿಗೆ ಪಾಂಡವ-ಸೃಂಜಯರನ್ನು

ತಡೆಯುತ್ತೇನೆ.”

ಆಗ ದುರ್ಯೋಧನನು ತಕ್ಷಣವೇ ಆಚಾರ್ಯನ ಶಾಸನದಂತೆ, ತನ್ನ ಅನುಯಾಯಿಗಳೊಂದಿಗೆ ಆ ಉಗ್ರ ಕರ್ಮವನ್ನು ಮಾಡಲು ಉತ್ಸಾಹಿತನಾಗಿ ಹೊರಟನು. ಆ ಸಮಯದಲ್ಲಿ ಚಕ್ರರಕ್ಷಕರಾದ ಪಾಂಚಾಲ್ಯ ಯುಧಾಮನ್ಯು ಉತ್ತಮೌಜಸರು ಸೇನೆಯನ್ನು ಹೊರಗಿನಿಂದ ಭೇದಿಸಿ ಸವ್ಯಸಾಚಿಯ ಬಳಿ ಹೋಗುತ್ತಿದ್ದರು. ಇದಕ್ಕೂ ಮೊದಲು ಅರ್ಜುನನು ಯುದ್ಧಮಾಡುತ್ತಾ ಕೌರವ ಸೇನೆಯನ್ನು ಪ್ರವೇಶಿಸಿದಾಗ ಕೃತವರ್ಮನು ಅವರಿಬ್ಬರನ್ನೂ ತಡೆದಿದ್ದನು. ಆಗ ಭಾರತ ಬಲಶಾಲೀ ದುರ್ಯೋಧನನು ಉತ್ತಮವಾಗಿ ಯುದ್ಧಮಾಡುತ್ತಾ ತ್ವರೆಮಾಡಿ ಒಟ್ಟಿಗೇ ಮುಂದುವರೆಯುತ್ತಿದ್ದ ಅವರಿಬ್ಬರು ಸಹೋದರರನ್ನು ಎದುರಿಸಿದನು. ಮಹಾರಥರೆಂದು ಪ್ರಸಿದ್ಧರಾದ ಅವರಿಬ್ಬರು ಕ್ಷತ್ರಿಯ ಪ್ರವರರೂ ಧನುಸ್ಸನ್ನು ಸೆಳೆದು ದುರ್ಯೋಧನನೊಂದಿಗೆ ಯುದ್ಧಕ್ಕೆ ತೊಡಗಿದರು. ಯುಧಾಮನ್ಯುವಾದರೋ ಸಂಕ್ರುದ್ಧನಾಗಿ ತ್ವರೆಮಾಡಿ ದುರ್ಯೋಧನನ ಸ್ತನಾಂತರದಲ್ಲಿ ಮುನ್ನೂರು ಉಕ್ಕಿನ ಶರಗಳನ್ನು ಪ್ರಯೋಗಿಸಿದನು. ದುರ್ಯೋಧನನಾದರೋ ಉತ್ತಮೌಜಸನ ನಾಲ್ಕು ಕುದುರೆಗಳನ್ನೂ ಇಬ್ಬರು ಪಾರ್ಷ್ಣಿಸಾರಥಿಗಳನ್ನೂ ಸಂಹರಿಸಿದನು. ಕುದುರೆಗಳು,

ಸೂತರೂ ಹತರಾಗಲು ಉತ್ತಮೌಜಸನು ತ್ವರೆಮಾಡಿ ಸಹೋದರ ಯುಧಾಮನ್ಯುವಿನ ರಥವನ್ನೇರಿದನು. ಸಹೋದರನ ರಥವನ್ನೇರಿ ಅವನು ದುರ್ಯೋಧನನ ಕುದುರೆಗಳನ್ನು ಅನೇಕ ಶರಗಳಿಂದ ಹೊಡೆಯುತ್ತಿರಲು ಅವು ಹತವಾಗಿ ಭೂಮಿಯ ಮೇಲೆ ಬಿದ್ದವು. ಕುದುರೆಗಳು ಬೀಳಲು ಯುಧಾಮನ್ಯುವು ಶೀಘ್ರವಾಗಿ ಪರಮ ಧನುಸ್ಸಿನಿಂದ ದುರ್ಯೋಧನನ ಧನುಸ್ಸನ್ನೂ ಶರಾವಾಪವನ್ನೂ ಕತ್ತರಿಸಿದನು. ಕುದುರೆ-ಸಾರಥಿಯರು ಸತ್ತುಹೋದ ರಥದಿಂದ ಧುಮುಕಿ ದುರ್ಯೋಧನನು ಗದೆಯನ್ನೆತ್ತಿಕೊಂಡು ಪಾಂಚಾಲ್ಯರ ಕಡೆ ಧಾವಿಸಿದನು. ಎರಗಿ ಬೀಳುತ್ತಿರುವ ಆ ಕ್ರುದ್ಧ ಪರಪುರಂಜಯನನ್ನು ನೋಡಿ ಯುಧಾಮನ್ಯು-ಉತ್ತಮೌಜಸರು ರಥದಿಂದ ಕೆಳಗೆ ಹಾರಿದರು. ಆಗ ಅವರು ಗದೆಯಿಂದ ಹೇಮಚಿತ್ರಿತವಾದ ರಥಗಳಲ್ಲಿಯೇ ದುರ್ಯೋಧನನ ರಥವನ್ನು ಕುದುರೆ-ಸಾರಥಿ-ಧ್ವಜಗಳೊಂದಿಗೆ ಪುಡಿ ಪುಡಿ ಮಾಡಿದರು. ಹೀಗೆ ಹತಾಶ್ವ ಹತಸಾರಥಿಯಾದ ಪರಂತಪ ದುರ್ಯೋಧನನು ಬೇಗನೇ ಮದ್ರರಾಜನ ರಥವನ್ನೇರಿದನು. ಪಾಂಚಾಲ ನಾಯಕರಾದ ಅವರಿಬ್ಬರು ಮಹಾಬಲಿ ರಾಜಪುತ್ರರೂ ಇನ್ನೊಂದು ರಥವನ್ನೇರಿ ಧನಂಜಯನ ಬಳಿ ತಲುಪಿದರು.

## ಕರ್ಣ-ಭೀಮಸೇನರ ಯುದ್ಧ ಮುಂದುವರೆದುದು

ಭೀಮಸೇನನಾದರೋ ರಥಿಗಳಲ್ಲಿ ಶ್ರೇಷ್ಠ ರಾಧೇಯನನ್ನು ಬಿಟ್ಟು ವೀರರಾದ ಕೃಷ್ಣ-ಧನಂಜಯರು ಇರುವಲ್ಲಿ ಹೋಗ ಬಯಸಿದನು. ಹಾಗೆ ಹೋಗುತ್ತಿರುವ ಅವನನ್ನು ತಡೆಗಟ್ಟಿ ರಾಧೇಯನು ಮೇಘಗಳು ಪರ್ವತದ ಮೇಲೆ ಹೇಗೋ ಹಾಗೆ ಭೀಮಸೇನನ ಮೇಲೆ ಕಂಕಪತ್ರಿಗಳನ್ನು ಸುರಿಸಿದನು. ಬಲಶಾಲಿ ಆಧಿರಥಿಯು ಅರಳುತ್ತಿರುವ ಕಮಲದಂತಹ ಮುಖದಲ್ಲಿ ನಗೆಯಾಡುತ್ತಾ ಹೋಗುತ್ತಿದ್ದ ಭೀಮನನ್ನು ಯುದ್ಧಕ್ಕೆ ಆಹ್ವಾನಿಸಿದನು. ಕರ್ಣನು ಯುದ್ಧಕ್ಕೆ ನೀಡಿದ ಆ ಆಹ್ವಾನವನ್ನು ಕೇಳಿ ರೋಷಗೊಂಡ ಭೀಮಸೇನನು ಅರ್ಧಮಂಡಲಪರ್ಯಂತ ತಿರುಗಿ ಸೂತಪುತ್ರನನ್ನು ಎದುರಿಸಿ ಯುದ್ಧಮಾಡತೊಡಗಿದನು. ದ್ವೈರಥಯುದ್ಧಕ್ಕೆ ಪ್ರಯತ್ನಿಸುತ್ತಿದ್ದ ಕವಚಧಾರಿಯಾದ ಸರ್ವ ಶಸ್ತ್ರಭೃತರಲ್ಲಿ ಶ್ರೇಷ್ಠನಾದ ಕರ್ಣನನ್ನು ಭೀಮಸೇನನು ನೇರವಾಗಿ ಹೋಗುವ ಬಾಣಗಳ ಮಳೆಗರೆದು ಮುಚ್ಚಿಬಿಟ್ಟನು. ಶೀಘ್ರವಾಗಿ ಕಲಹವನ್ನು ಕಡೆಗಾಣಿಸಲು ಮತ್ತು ಕರ್ಣ ಹಾಗೂ ಅವನ ಇತರ ಅನುಯಾಯಿಗಳೆಲ್ಲರನ್ನೂ ಸಂಹರಿಸಿಬಿಡಲು ಮಹಾಬಲ ಭೀಮಸೇನನು ಯೋಚಿಸಿದನು. ಅಸಹನೆಯಿಂದ ಪರಮ ಕ್ರುದ್ಧನಾದ ಪರಂತಪ ಪಾಂಡವನು ಕರ್ಣನ ಮೇಲೆ ಉಗ್ರವಾದ ವಿವಿಧ ಬಾಣಗಳ ಮಳೆಯನ್ನೇ ಸುರಿಸಿದನು. ಸುಮಹಾಯಶಸ್ವಿಯಾದ ಸೂತಪುತ್ರನು ಮತ್ತಗಜದ ನಡುಗೆಯುಳ್ಳ ಭೀಮಸೇನನ ಆ ಬಾಣಗಳ

ಮಳೆಯನ್ನೂ ಅಸ್ತ್ರಮಾಯೆಗಳನ್ನೂ ನಿರಸನಗೊಳಿಸಿಬಿಟ್ಟನು. ವಿದ್ಯೆಯಲ್ಲಿ ಆಚಾರ್ಯನಷ್ಟೇ ಗೌರವಾನ್ವಿತನಾದ ಮಹೇಷ್ವಾಸ ಕರ್ಣನು ರಣದಲ್ಲಿ ಸಂಚರಿಸುತ್ತಿದ್ದನು. ಕ್ರೋಧದಿಂದ ಯುದ್ಧಮಾಡುತ್ತಿದ್ದ ಅಸಹನಶೀಲ ವೃಕೋದರ ಭೀಮಸೇನನನ್ನು ರಾಧೇಯನು ನಗುತ್ತಲೇ ಎದುರಿಸಿದನು. ಸುತ್ತಲೂ ಯುದ್ಧಮಾಡುತ್ತಿರುವ ವೀರರೆಲ್ಲರೂ ನೋಡುತ್ತಿರುವಾಗ ರಣದಲ್ಲಿ ಕರ್ಣನು ನಗುತ್ತಿರುವುದನ್ನು ಕೌಂತೇಯ ಭೀಮಸೇನನು ಸಹಿಸಿಕೊಳ್ಳಲಿಲ್ಲ. ಮಾವುತನು ಮಹಾ ಗಜವನ್ನು ಅಂಕುಶದಿಂದ ತಿವಿಯುವಂತೆ ಬಲವಾನ್ ಭೀಮಸೇನನು ಕ್ರುದ್ಧನಾಗಿ ಕರ್ಣನ ಎದೆಗೆ ಕರುವಿನ ದಂತಗಳಿಂದ ತಯಾರಿಸಿದ ಬಾಣಗಳಿಂದ ಹೊಡೆದನು. ಬಣ್ಣದ ಕವಚವನ್ನು ಧರಿಸಿದ್ದ ಸೂತಪುತ್ರನ ಸಾರಥಿಯನ್ನೂ ಸುಂದರ ಪುಂಖಗಳುಳ್ಳ ಎಪ್ಪತ್ಮೂರು ನಿಶಿತ ಶರಗಳಿಂದ ಭೇದಿಸಿದನು. ಅನಂತರ ಗಾಳಿಯ ವೇಗದಲ್ಲಿ ಹೋಗುವ ಬಂಗಾರದ ಬಾಣಗಳ ಜಾಲದಿಂದ ಕರ್ಣನನ್ನೂ, ಐದೈದು ಬಾಣಗಳಿಂದ ಅವನ ಕುದುರೆಗಳನ್ನೂ ಭೀಮನು ಹೊಡೆದನು. ಆಗ ನಿಮಿಷಾರ್ಧದಲ್ಲಿ ಭೀಮಸೇನನ ರಥದ ಬಳಿ ಕರ್ಣನು ಪ್ರಯೊಗಿಸಿದ ಬಾಣಮಯ ಜಾಲವು ಕಂಡಿತು.

ಕರ್ಣನ ಧನುಸ್ಸಿನಿಂದ ಹೊರಟ ಬಾಣಗಳಿಂದ ಪಾಂಡವನು ರಥ-

ಧ್ವಜ-ಸೂತನೊಂದಿಗೆ ಮುಚ್ಚಿ ಹೋದನು. ಕರ್ಣನು ಕ್ರುದ್ಧನಾಗಿ ಅರವತ್ನಾಲ್ಕರಿಂದ ಭೀಮನ ದೃಢವಾದ ಕವಚವನ್ನು ಹೊಡೆದನು. ಹಾಗೆಯೇ ಮರ್ಮಭೇದೀ ನಾರಾಚಗಳಿಂದ ಅವನನ್ನೂ ಹೊಡೆದನು. ಆದರೆ ಕರ್ಣನ ಬಿಲ್ಲಿನಿಂದ ಹೊರಟ ಮಹಾವೇಗದ ಬಾಣಗಳ ಕುರಿತು ಯೋಚಿಸದೇ ಸ್ವಲ್ಪವೂ ಗಾಬರಿಗೊಳ್ಳದೇ ವೃಕೋದರನು ಸೂತಪುತ್ರನನ್ನು ಆಕ್ರಮಣಿಸಿದನು. ಕರ್ಣನ ಚಾಪದಿಂದ ಹೊರಟ ಹಾವಿನ ವಿಷಗಳಂತಿದ್ದ ಬಾಣಗಳಿಂದ ಭೀಮನು ಭಯಪಡಲಿಲ್ಲ ಮತ್ತು ವ್ಯಥೆಗೊಳ್ಳಲಿಲ್ಲ. ಆಗ ಭೀಮಸೇನನು ತಿಗ್ಮ ತೇಜಸ್ಸುಳ್ಳ ನಿಶಿತ ಮೂವತ್ತೆರಡು ಭಲ್ಲಗಳಿಂದ ಕರ್ಣನನ್ನು ಹೊಡೆದನು. ಅದಕ್ಕೆ ಪ್ರತಿಯಾಗಿ ಕರ್ಣನು ಹೆಚ್ಚೇನೂ ಪ್ರಯತ್ನಪಡದೇ ಸೈಂಧವನ ವಧೈಷಿಣಿಯಾದ ಭೀಮಸೇನನನ್ನು ಶರಗಳಿಂದ ಮುಚ್ಚಿಬಿಟ್ಟನು. ರಾಧೇಯನು ಭೀಮನೊಂದಿಗೆ ಮೃದುವಾಗಿ ಹೋರಾಡುತ್ತಿದ್ದನು. ಆದರೆ ಹಿಂದಿನ ವೈರವನ್ನು ಸ್ಮರಿಸಿಕೊಳ್ಳುತ್ತಾ ಭೀಮನು ಕ್ರೋಧದಿಂದ ಹೋರಾಡುತ್ತಿದ್ದನು. ಭೀಮಸೇನನು ಅವನ ಆ ಅಪಮಾನವನ್ನು ಸ್ವಲ್ಪವೂ ಸಹಿಸಿಕೊಳ್ಳಲಿಲ್ಲ. ಆ ಅಮಿತ್ರಜಿತುವು ಕರ್ಣನ ಮೇಲೆ ಬೇಗನೇ ಶರವರ್ಷವನ್ನು ಸುರಿಸಿದನು. ರಣದಲ್ಲಿ ಭೀಮಸೇನನಿಂದ ಕಳುಹಿಸಲ್ಪಟ್ಟ ಆ ಬಾಣಗಳು ಕರ್ಣನ ಮೇಲೆ ಎಲ್ಲ ಕಡೆ ಕೂಗುತ್ತಿರುವ ಪಕ್ಷಿಗಳಂತೆ ಬಿದ್ದವು. ಭೀಮಸೇನನ ಧನುಸ್ಸಿನಿಂದ ಹೊರಟ ಆ

ಹೇಮಪುಂಖದ ಬಾಣಗಳು ತೋಳಗಳು ಕ್ಷುದ್ರ ಮೃಗವನ್ನು ಹೇಗೋ ಹಾಗೆ ಆಕ್ರಮಣಿಸಿದವು. ಎಲ್ಲ ಕಡೆಯಿಂದ ಮುತ್ತಲ್ಪಟ್ಟ ರಥಿಗಳಲ್ಲಿ ಶ್ರೇಷ್ಠ ಕರ್ಣನಾದರೋ ಭೀಮನ ಮೇಲೆ ಉಗ್ರವಾದ ಶರವರ್ಷಗಳನ್ನು ಸುರಿಸಿದನು.

ಅವನ ಆ ವಜ್ರಗಳಂತಿರುವ ಬಾಣಗಳನ್ನು ಅವು ತನಗೆ ತಾಗುವುದರೊಳಗೇ ಅನೇಕ ಭಲ್ಲಗಳಿಂದ ಸಮರಶೋಭಿ ವೃಕೋದರನು ಕತ್ತರಿಸಿಬಿಟ್ಟನು. ಯುದ್ಧದಲ್ಲಿ ಪುನಃ ಕರ್ಣ ವೈಕರ್ತನನು ಮಹಾರಥ ಭೀಮಸೇನನನ್ನು ಶರವರ್ಷಗಳಿಂದ ಮುಚ್ಚಿ ಬಿಟ್ಟನು. ಮುಳ್ಳುಗಳು ನಿಗುರಿನಿಂತ ಮುಳ್ಳು ಹಂದಿಯಂತೆ ಸಾಯಕಗಳಿಂದ ಚುಚ್ಚಲ್ಪಟ್ಟ ಭೀಮನು ಕಂಡುಬಂದನು. ಕರ್ಣನ ಚಾಪದಿಂದ ಹೊರಟ ಹೇಮಪುಂಖಗಳ ಶಿಲಾಧೌತ ಶರಗಳನ್ನು ಭೀಮನು ಭಾಸ್ಕರನು ತನ್ನ ಕಿರಣಗಳನ್ನು ಹೇಗೋ ಹಾಗೆ ಸಹಿಸಿಕೊಂಡನು. ರಕ್ತದಲ್ಲಿ ಸರ್ವಾಂಗಗಳೂ ತೋಯ್ದುಹೋಗಿರಲು ಭೀಮಸೇನನು ಕಾನನದಲ್ಲಿರುವ ಕೆಂಪುಹೂಗಳು ಬಿಟ್ಟಿರುವ ಪಲಾಶ ವೃಕ್ಷದಂತೆ ರಾರಾಜಿಸಿದನು. ಆದರೆ ಕರ್ಣನ ನಡತೆಯನ್ನು ಭೀಮನು ಸ್ವಲ್ಪವೂ ಸಹಿಸಿಕೊಳ್ಳಲಿಲ್ಲ. ಕ್ರೋಧದಿಂದ ಕಣ್ಣುಗಳನ್ನು ತಿರುಗಿಸಿದನು. ಅವನು ಕರ್ಣನನ್ನು ಇಪ್ಪತ್ತೈದು ನಾರಾಚಗಳಿಂದ ಹೊಡೆದನು. ಆಗ

ಅವನು ವಿಷಯುಕ್ತವಾದ ಸರ್ಪಗಳಿಂದ ಕೂಡಿದ ಶ್ವೇತಪರ್ವತದಂತೆ ಶೋಭಿಸಿದನು. ಅಮರವಿಕ್ರಾಂತನಾದ ಭೀಮನು ಮಹಾರಣದಲ್ಲಿ ಸೂತಪುತ್ರನ ಮರ್ಮಗಳಿಗೆ ಹದಿನಾಲ್ಕು ಬಾಣಗಳಿಂದ ಹೊಡೆದನು. ಆಗ ತಕ್ಷಣವೇ ಭೀಮಸೇನನು ಕರ್ಣನ ಧನುಸ್ಸನ್ನೂ ಸರ್ವೋಪಕರಣಗಳನ್ನೂ ತುಂಡರಿಸಿದನು. ಅನಂತರ ತ್ವರೆಮಾಡಿ ಶರಗಳಿಂದ ಅವನ ನಾಲ್ಕು ಕುದುರೆಗಳನ್ನೂ ಸಾರಥಿಯನ್ನೂ ಸಂಹರಿಸಿದನು. ಸೂರ್ಯನ ರಶ್ಮಿಗಳಂತೆ ಪ್ರಕಾಶಿಸುವ ನಾರಾಚಗಳಿಂದ ಕರ್ಣನ ಎದೆಗೂ ಹೊಡೆದನು. ಸೂರ್ಯನ ರಶ್ಮಿಗಳು ಮೋಡವನ್ನು ಭೇದಿಸುವಂತೆ ಆ ಶರಗಳು ಎಲ್ಲವೂ ಕರ್ಣನನ್ನು ಭೇದಿಸಿ ನೆಲವನ್ನು ಹೊಕ್ಕವು. ಧನುಸ್ಸು ತುಂಡಾಗಿ, ಶರಗಳಿಂದ ನೋವುತಿಂದು ಅತೀವ ಕಷ್ಟಕ್ಕೊಳಗಾದ ಆ ಪುರುಷಮಾನೀ ಕರ್ಣನು ಮತ್ತೊಂದು ರಥವನ್ನೇರಿ ಅಲ್ಲಿಂದ ಹೊರಟುಹೋದನು.

ಪ್ರಜ್ವಲಿಸುತ್ತಿರುವ ಅಗ್ನಿಯಂತಿರುವ ಭೀಮಸೇನನನ್ನು ರಣದಲ್ಲಿ ನೋಡಿ ಕರ್ಣನು ವಿಧಿವತ್ತಾಗಿ ಸಿದ್ಧಗೊಳಿಸಿದ ಇನ್ನೊಂದು ರಥವನ್ನೇರಿ ಬಿರುಗಾಳಿಗೆ ಸಿಲುಕಿದ ಸಾಗರದಂತೆ ಪಾಂಡವನನ್ನು ಆಕ್ರಮಣಿಸಿದನು. ಕ್ರುದ್ಧನಾದ ಆಧಿರಥಿಯನ್ನು ನೋಡಿ ಭೀಮಸೇನನು ವೈವಸ್ವತನ ಯಾಗದಲ್ಲಿ ಹುತನಾದನೆಂದೇ ತಿಳಿದುಕೊಂಡರು. ಧನುಸ್ಸನ್ನು

ಜೋರಾಗಿ ಟೇಂಕರಿಸುತ್ತಾ ಭೈರವವಾದ ಚಪ್ಪಾಳೆ ಶಬ್ಧವನ್ನು ಮಾಡುತ್ತಾ ರಾಧೇಯನು ಭೀಮಸೇನನ ರಥದ ಕಡೆ ನುಗ್ಗಿದನು. ಆಗ ಪುನಃ ಸೂತಪುತ್ರ ಮತ್ತು ಭೀಮಸೇನರ ನಡುವೆ ದಾರುಣವಾದ ಮಹಾ ಹೋರಾಟವು ನಡೆಯಿತು. ಪರಸ್ಪರರನ್ನು ವಧಿಸಲು ಬಯಸಿ ಸಂರಬ್ಧರಾದ ಅವರಿಬ್ಬರೂ ಕಣ್ಣುಗಳಿಂದಲೇ ಅನ್ಯೋನ್ಯರನ್ನು ಸುಟ್ಟುಬಿಡುವರೋ ಎನ್ನುವಂತೆ ನೋಡುತ್ತಾ ತಿರುಗುತ್ತಿದ್ದರು. ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡ, ಕ್ರುದ್ಧರಾಗಿ ನಿಟ್ಟುಸಿರುಬಿಡುತ್ತಿದ್ದ ಆ ಮಹಾರಥ ಅರಿಂದಮರು ಯುದ್ಧದಲ್ಲಿ ಎದುರಿಸಿ ಅನ್ಯೋನ್ಯರನ್ನು ಗಾಯಗೊಳಿಸಿದರು. ವ್ಯಾಘ್ರಗಳಂತೆ ಸಂರಬ್ಧರಾಗಿ, ಗಿಡುಗಳಂತೆ ಶೀಘ್ರವಾಗಿ, ಶರಭಗಳಂತೆ ಸಂಕ್ರುದ್ಧರಾಗಿ ಪರಸ್ಪರರೊಡನೆ ಯುದ್ಧಮಾಡಿದರು. ಆಗ ಭೀಮನು ಅಕ್ಷದ್ಯೂತದಲ್ಲಿ, ನಂತರ ವನದಲ್ಲಿ ಮತ್ತು ವಿರಾಟನಗರದಲ್ಲಿಯೂ ಪಡೆದ ದುಃಖಗಳನ್ನು ಸ್ಮರಿಸಿಕೊಂಡು; ರತ್ನಗಳಿಂದ ಸಮೃದ್ಧವಾಗಿದ್ದ ರಾಷ್ಟ್ರಗಳನ್ನು ಧೃತರಾಷ್ಟ್ರನ ಪುತ್ರರು ಅಪಹರಿಸಿದುದನ್ನೂ, ಮಕ್ಕಳೊಂದಿಗೆ ಧೃತರಾಷ್ಟ್ರನು ಸತತವೂ ಅವರಿಗೆ ನೀಡಿದ ಪರಿಕ್ಲೇಶಗಳನ್ನೂ, ಮುಗ್ಧಳಾಗಿದ ಕುಂತಿಯನ್ನು ಅವಳ ಮಕ್ಕಳೊಂದಿಗೆ ಸುಟ್ಟುಬಿಡಲು ಬಯಸಿದ ಧೃತರಾಷ್ಟ್ರನನ್ನೂ, ಸಭಾಮಧ್ಯದಲ್ಲಿ ದುರಾತ್ಮರು ಕೃಷ್ಣೆ ದ್ರೌಪದಿಗೆ ನೀಡಿದ ಕಷ್ಟಗಳನ್ನೂ, “ಪೊಳ್ಳು ಎಳ್ಳಿನಂತಿರುವ

ಪಾರ್ಥರೆಲ್ಲರೂ ನರಕದಲ್ಲಿ ಬಿದ್ದಿದ್ದಾರೆ! ಇವರು ನಿನ್ನ ಗಂಡಂದಿರಾಗಿ ಉಳಿದಿಲ್ಲ! ಬೇರೆಯೇ ಪತಿಯನ್ನು ಸ್ವೀಕರಿಸು!” ಎಂದು ಕುರುಗಳು ಹೇಳಿದ್ದುದನ್ನೂ; ಕೃಷ್ಣೆಯನ್ನು ದಾಸಿಯನ್ನಾಗಿಸಿಕೊಂಡು ಭೋಗಿಸಲು ಬಯಸಿದ ಧೃತರಾಷ್ಟ್ರನ ಮಕ್ಕಳನ್ನೂ; ಕೃಷ್ಣಾಜಿನಗಳನ್ನು ಧರಿಸಿ ಅವರು ಹೊರಡುತ್ತಿರುವಾಗ ಸಭೆಯಲ್ಲಿ ಕರ್ಣನಾಡಿದ ಕಠೋರ ಮಾತುಗಳನ್ನೂ; ಕಷ್ಟದಲ್ಲಿರುವ ಪಾರ್ಥರನ್ನು ತೃಣೀಕರಿಸಿ ದರ್ಪದಿಂದ ಅವಹೇಳನ ಮಾಡಿದ ಆ ಅಲ್ಪತೇಜಸನನ್ನೂ; ಬಾಲ್ಯದಿಂದಲೂ ನೀಡಿದ ಆ ದುಃಖಗಳನ್ನು ನೆನೆದು ಆ ಅರಿಘ್ನ ಧರ್ಮಾತ್ಮ ವೃಕೋದರನು ಜೀವವನ್ನೂ ಕಡೆಗಣಿಸಿದನು. ಬಂಗಾರದ ಬೆನ್ನುಳ್ಳ ದುರಾಸದ ಮಹಾ ಧನುಸ್ಸನ್ನು ಟೇಂಕರಿಸಿ ಆ ಭರತಶಾರ್ದೂಲನು ತನ್ನ ಜೀವವನ್ನೇ ಕಡೆಗಣಿಸಿ ಕರ್ಣನನ್ನು ಆಕ್ರಮಣಿಸಿದನು. ಕರ್ಣನ ರಥದ ಮೇಲೆ ಪ್ರಭೆಯುಳ್ಳ ಶಿಲಾಧೌತ ಸಾಯಕಗಳ ಜಾಲಗಳನ್ನು ಪ್ರಯೋಗಿಸಿ ಭೀಮನು ಸೂರ್ಯನ ಪ್ರಭೆಯನ್ನೇ ಮಂಕುಗೊಳಿಸಿದನು.

ಆಗ ಆಧಿರಥಿಯು ನಗುತ್ತಾ ತಕ್ಷಣವೇ ನಿಶಿತ ಶರಗಳಿಂದ ಭೀಮಸೇನನ ಪತ್ರಿಗಳ ಶರಜಾಲಗಳನ್ನು ನಾಶಗೊಳಿಸಿದನು. ಅಧಿರಥಿಯು ಭೀಮನನ್ನು ಒಂಭತ್ತು ನಿಶಿತಶರಗಳಿಂದ ಹೊಡೆದನು. ಅಂಕುಶದಿಂದ

ತಿವಿಯಲ್ಪಟ್ಟ ಆನೆಯಂತೆ ಈ ಪತತ್ರಿಗಳಿಂದ ಹೊಡೆಯಲ್ಪಟ್ಟ ವೃಕೋದರನು ಸ್ವಲ್ಪವೂ ಗಾಭರಿಗೊಳ್ಳದೇ ಸೂತಪುತ್ರನನ್ನು ಆಕ್ರಮಣಿಸಿದನು. ವೇಗದಿಂದ ರಭಸವಾಗಿ ತನ್ನ ಮೇಲೆ ಬೀಳುತ್ತಿದ್ದ ಪಾಂಡವರ್ಷಭನೊಂದಿಗೆ, ಮದಿಸಿದ ಆನೆಯನ್ನು ಹೋರಾಡುವ ಇನ್ನೊಂದು ಮದಿಸಿದ ಆನೆಯಂತೆ, ಕರ್ಣನು ಪ್ರತಿಯಾಗಿ ಯುದ್ಧಮಾಡಿದನು. ಆಗ ಕರ್ಣನು ನೂರಾರು ಭೇರಿಗಳು ಒಮ್ಮೆಲೇ ಬಾರಿಸಿದರೆ ಉಂಟಾಗುವಷ್ಟು ಶಬ್ಧವನ್ನು ನೀಡುವ ಶಂಖವನ್ನು ಊದಿ ಹರ್ಷದಿಂದ ಸಾಗರದಂತಿರುವ ಭೀಮನ ಸೇನೆಯನ್ನು ಕ್ಷೋಭೆಗೊಳಿಸಿದನು. ರಥ-ಗಜ-ಅಶ್ವ-ಪದಾತಿಗಳ ತನ್ನ ಸೇನೆಯು ಹೀಗೆ ಕ್ಷೋಭೆಗೊಂಡಿದುದನ್ನು ನೋಡಿ ಭೀಮನು ಹತ್ತಿರದಿಂದಲೇ ಕರ್ಣನನ್ನು ಸಾಯಕಗಳಿಂದ ಮುಚ್ಚಿದನು. ಆಗ ಕರ್ಣನು ತನ್ನ ಹಂಸವರ್ಣದ ಕುದುರೆಗಳು ಭೀಮನ ಕರಡೀಬಣ್ಣದ ಕುದುರೆಗಳೊಂದಿಗೆ ಬೆರೆಯುವಷ್ಟು ಹತ್ತಿರಕ್ಕೆ ಬಂದು ಪಾಂಡವನನ್ನು ಶರಗಳಿಂದ ಮುಚ್ಚಿಬಿಟ್ಟನು. ಆ ಕರಡೀ ಬಣ್ಣದ ಕುದುರೆಗಳು ಗಾಳಿಯ ವೇಗದಲ್ಲಿ ಚಲಿಸುತ್ತಿರುವ ಹಂಸವರ್ಣದ ಕುದುರೆಗಳೊಂದಿಗೆ ಬೆರೆತುದನ್ನು ನೋಡಿ ಕೌರವ ಸೇನೆಯಲ್ಲಿ ಹಾಹಾಕಾರವುಂಟಾಯಿತು. ಬೆರೆತುಹೋದ ಆ ಗಾಳಿಯವೇಗದ ಕುದುರೆಗಳು ಆಕಾಶದಲ್ಲಿ ತೋರುವ ಕಪ್ಪು-ಬಿಳೀ ಮೋಡಗಳಂತೆ ಅಧಿಕವಾಗಿ ಶೋಭಿಸಿದವು. ಕ್ರೋಧದಿಂದ ಕಣ್ಣುಗಳು

ಕೆಂಪಾದ ಸಂರಬ್ಧರಾದ ಕರ್ಣ-ವೃಕೋದರರನ್ನು ನೋಡಿ ಕೌರವ ಮಹಾರಥರು ಭಯದಿಂದ ತತ್ತರಿಸಿದರು. ಅವರಿಬ್ಬರೂ ಹೋರಾಡುತ್ತಿದ್ದ ಯುದ್ಧಭೂಮಿಯು ಯಮರಾಷ್ಟ್ರದಂತೆ ಘೋರವಾಗಿ ಪರಿಣಮಿಸಿತು. ಪ್ರೇತರಾಜನ ಪುರದಂತೆ ದುರ್ದರ್ಶವಾಯಿತು. ಚಿತ್ರವನ್ನು ನೋಡುತ್ತಿರುವ ಪ್ರೇಕ್ಷಕರಂತಿದ್ದ ಆ ಮಹಾರಥರ ಸಮಾಜವು ಯಾರೊಬ್ಬರಿಗೂ ನಿಶ್ಚಯಪೂರ್ವಕ ಜಯವು ದೊರಕುತ್ತದೆಯೆಂದು ಕಾಣಲಿಲ್ಲ. ಅವರು ಧೃತರಾಷ್ಟ್ರ ಮತ್ತು ಅವನ ಮಗ ದುರ್ಯೋಧನನ ದುರ್ಮಂತ್ರದಿಂದಾಗಿ ನಡೆಯುತ್ತಿದ್ದ ಮಹಾ ಅಸ್ತ್ರಗಳ ಆ ಹೋರಾಟವನ್ನು ಮಾತ್ರ ನೋಡುತ್ತಿದ್ದರು. ಅವರಿಬ್ಬರು ಶತ್ರುಘ್ನರೂ ಪರಸ್ಪರರನ್ನು ನಿಶಿತ ಸಾಯಕಗಳಿಂದ ಮುಚ್ಚಿದರು. ಆಕಾಶವನ್ನು ಶರಜಾಲಗಳಿಂದ ತುಂಬಿಸಿ, ಬಾಣಗಳ ಮಳೆಯನ್ನೂ ಸುರಿಸಿದರು. ಅನ್ಯೋನ್ಯರನ್ನು ಸಂಹರಿಸಲು ಬಯಸಿ ತೀಕ್ಷ್ಣಶರಗಳಿಂದ ಹೊಡೆದಾಡುತ್ತಿರುವ ಆ ಮಹಾರಥರಿಬ್ಬರೂ ಜೋರಾಗಿ ಮಳೆಸುರಿಸುತ್ತಿದ್ದ ಮೋಡಗಳಂತೆ ತುಂಬಾ ಪ್ರೇಕ್ಷಣೀಯರಾಗಿ ಕಾಣುತ್ತಿದ್ದರು. ಬಂಗಾರದಿಂದ ಮಾಡಲ್ಪಟ್ಟ ಬಾಣಗಳನ್ನು ಬಿಡುತ್ತಾ ಆ ಅರಿಂದಮರು ಆಕಾಶವನ್ನು ಉಲ್ಕೆಗಳಿಂದ ಪ್ರಕಾಶಿಸುವಂತೆ ಪ್ರಕಾಶಗೊಳಿಸಿದರು. ಅವರು ಬಿಟ್ಟ ಹದ್ದಿನ ಗರಿಗಳ ಬಾಣಗಳು ಶರತ್ಕಾಲದ ಅಂಬರದಲ್ಲಿ ಸಾಗುತ್ತಿರುವ ಮದಿಸಿದ ಸಾರಂಗಗಳ

ಸಾಲುಗಳಂತೆ ಶೋಭಿಸುತ್ತಿದ್ದವು.

ಆಗ ಸೂತಪುತ್ರನೊಡನೆ ಯುದ್ಧಮಾಡುತ್ತಿರುವ ಅರಿಂದಮನನ್ನು ನೋಡಿ ಕೃಷ್ಣ-ಧನಂಜಯರು ಕರ್ಣನು ಭೀಮನಿಗೆ ಅತಿ ಭಾರಿ ಎಂದು ಅಂದುಕೊಂಡರು. ಹೀಗೆ ಆಧಿರಥಿ ಮತ್ತು ಭೀಮರು ಶರಗಳನ್ನು ಪರಸ್ಪರರ ಮೇಲೆ ಬಿಡುತ್ತಿರಲು ಆ ಬಾಣಗಳಿಗೆ ಸಿಲುಕಿದ ಅನೇಕ ಕುದುರೆ, ಮನುಷ್ಯ, ಆನೆಗಳು ಸತ್ತು ಬಿದ್ದರು. ಸತ್ತು ಬಿದ್ದ ಮತ್ತು ಇನ್ನೂ ಬೀಳುತ್ತಿದ್ದ ಅನೇಕರಿಂದ ಕೌರವರ ಕಡೆ ಮಹಾ ಜನಕ್ಷಯವುಂಟಾಯಿತು. ಕ್ಷಣದಲ್ಲಿಯೇ ರಣಭೂಮಿಯು ಜೀವವನ್ನು ಕಳೆದುಕೊಂಡ ಮನುಷ್ಯ-ಅಶ್ವ-ಗಜಗಳಿಂದ ತುಂಬಿಬಿಟ್ಟಿತು.

ಕ್ರುದ್ಧನಾದ ವೈಕರ್ತನನು ಕ್ರುದ್ಧನಾದ ಭೀಮನ ಪರಾಕ್ರಮವನ್ನು ಮೀರಿಸಿ ಅವನನ್ನು ಮುನ್ನೂರು ಬಾಣಗಳಿಂದ ಹೊಡೆದನು. ವೈಕರ್ತನನು ಭೀಮನ ಮೇಲೆ ಮಹಾವೇಗದಿಂದ ಮೊನಚಾಗಿದ್ದ ಬಂಗಾರದಿಂದ ಮಾಡಲ್ಪಟ್ಟಿದ್ದ ಶರಗಳನ್ನು ಪ್ರಯೋಗಿಸಿದನು. ಆಗ ಭೀಮನು ಮೂರು ನಿಶಿತ ಭಲ್ಲಗಳಿಂದ ಕರ್ಣನ ಧನುಸ್ಸನ್ನು ಕತ್ತರಿಸಿ, ರಥನೀಡೆಯನ್ನೂ ಮತ್ತು ಸಾರಥಿಯನ್ನೂ ನೆಲಕ್ಕುರುಳಿಸಿದನು. ಭೀಮಸೇನನ ವಧೆಯನ್ನು ಬಯಸಿ ವೃಷಸೇನ ವೈಕರ್ತನನು ಕನಕ-ವೈಡೂರ್ಯಗಳಿಂದ ಚಿತ್ರಿತ ಹಿಡಿಯುಳ್ಳ ಶಕ್ತಿಯನ್ನು ತೆಗೆದುಕೊಂಡನು.

ಕಾಲಶಕ್ತಿಯಂತಿರುವ ಆ ಮಹಾಶಕ್ತಿಯನ್ನು ಹಿಡಿದು ಸಂಧಾನಮಾಡಿ ಭೀಮಸೇನನ ಜೀವವನ್ನೇ ಕೊನೆಗೊಳಿಸುವನೋ ಎಂಬಂತೆ ರಾಧೇಯನು ಅವನ ಮೇಲೆ ಎಸೆದನು. ಪುರಂದರನು ವಜ್ರವನ್ನು ಹೇಗೋ ಹಾಗೆ ಆ ಶಕ್ತಿಯನ್ನು ಪ್ರಯೋಗಿಸಿ ಸೂತನಂದನ ರಾಧೇಯನು ಜೋರಾಗಿ ಮಹಾನಾದಗೈದನು. ಆಗ ಅವನ ಆ ಕೂಗನ್ನು ಕೇಳಿ ಕೌರವರಿಗೆ ಹರ್ಷವುಂಟಾಯಿತು. ಕರ್ಣನ ಭುಜದಿಂದ ಹೊರಟ ಆ ಸೂರ್ಯ-ಅಗ್ನಿಯರ ಪ್ರಭೆಯುಳ್ಳ ಶಕ್ತಿಯನ್ನು ಭೀಮನು ಏಳು ಆಶುಗಗಳಿಂದ ತುಂಡರಿಸಿಬಿಟ್ಟನು. ಪೊರೆಬಿಟ್ಟ ಹಾವಿನಂತಿರುವ ಆ ಶಕ್ತಿಯನ್ನು ತುಂಡರಿಸಿ ರಣದಲ್ಲಿ ಸಂರಬ್ಧನಾದ ಭೀಮನು ಸೂತಪುತ್ರನ ಪ್ರಾಣಗಳನ್ನು ಹೀರುವವೋ ಎಂತಿರುವ ನವಿಲುಗರಿಗಳನ್ನು ಹೊಂದಿರುವ, ಸ್ವರ್ಣಪುಂಖಗಳ, ಶಿಲೆಗಳಲ್ಲಿ ಮಸೆದ, ಯಮದಂಡಗಳಂತಿರುವ ಮಾರ್ಗಣ ಶರಗಳನ್ನು ಪ್ರಯೋಗಿಸಿದನು. ಕರ್ಣನು ಆಗ ಇನ್ನೊಂದು ಬಂಗಾರದ ಬೆನ್ನುಳ್ಳ ದುರಾಸದವಾದ ಧನುಸ್ಸನ್ನು ಹಿಡಿದು ಜೋರಾಗಿ ಎಳೆದು ಒಂಭತ್ತು ಸಾಯಕಗಳನ್ನು ಪ್ರಯೋಗಿಸಿದನು. ವಸುಷೇಣನು ಪ್ರಯೋಗಿಸಿದ ಆ ಒಂಭತ್ತು ಒಂಭತ್ತು ನತಪರ್ವ ಮಹಾಶರಗಳನ್ನೂ ಪಾಂಡುಪುತ್ರನು ಕತ್ತರಿಸಿದನು. ಕತ್ತರಿಸಿ ಭೀಮನು ಸಿಂಹದಂತೆ ಜೋರಾಗಿ ಗರ್ಜಿಸಿದನು.

ಕಾವಿಗೆ ಬಂದಿರುವ ಹಸುವಿಗಾಗಿ ಹೊಡೆದಾಡುವ ಬಲಶಾಲೀ ಹೋರಿಗಳಂತೆ ಅಥವಾ ಒಂದೇ ಮಾಂಸದ ತುಂಡಿಗೆ ಸೆಣಸಾಡುವ ಹುಲಿಗಳಂತಿರುವ ಅವರಿಬ್ಬರೂ ಗರ್ಜಿಸುತ್ತಾ ಅನ್ಯೋನ್ಯರನ್ನು ಗೆಲ್ಲಲು ಅನ್ಯೋನ್ಯರಲ್ಲಿ ಅವಕಾಶವನ್ನು ಹುಡುಕುತ್ತಿದ್ದರು. ಕೊಟ್ಟಿಗೆಯಲ್ಲಿರುವ ಎರಡು ಮಹಾ ಹೋರಿಗಳಂತೆ ಅನ್ಯೋನ್ಯರನ್ನು ದುರುಗುಟ್ಟಿ ನೋಡುತ್ತಿದ್ದರು. ಅನಂತರ ಪರಸ್ಪರರನ್ನು ದಂತಗಳ ತುದಿಯಿಂದ ತಿವಿಯುತ್ತಿರುವ ಎರಡು ಆನೆಗಳಂತೆ ಸಂಪೂರ್ಣವಾಗಿ ಎಳೆದ ಬಿಲ್ಲಿನಿಂದ ಪ್ರಯೋಗಿಸಿದ ಶರಗಳಿಂದ ಅನ್ಯೋನ್ಯರನ್ನು ಹೊಡೆದರು. ಅವರಿಬ್ಬರೂ ಪರಸ್ಪರರನ್ನು ಶರವೃಷ್ಟಿಯಿಂದ ಸುಡುತ್ತಾ ಕೋಪದಿಂದ ಕಣ್ಣುಗಳನ್ನು ತಿರುಗಿಸುತ್ತಾ ಅನ್ಯೋನ್ಯರನ್ನು ದುರುಗುಟ್ಟಿ ನೋಡುತ್ತಿದ್ದರು. ಅನ್ಯೋನ್ಯರನ್ನು ನೋಡಿ ನಗುತ್ತಾ, ಮತ್ತೆ ಮತ್ತೆ ಬೈದಾಡುತ್ತಾ, ಶಂಖಗಳನ್ನು ಊದಿ ಶಬ್ಧಮಾಡುತ್ತಾ ಪರಸ್ಪರರೊಂದಿಗೆ ಯುದ್ಧಮಾಡುತ್ತಿದ್ದರು. ಪುನಃ ಭೀಮನು ಅವನ ಧನುಸ್ಸನ್ನು ಹಿಡಿಯಲ್ಲಿಯೇ ತುಂಡರಿಸಿದನು. ಶಂಖದ ಬಿಳುಪಿನ ಅವನ ಕುದುರೆಗಳನ್ನೂ ಬಾಣಗಳಿಂದ ಯಮಕ್ಷಯಕ್ಕೆ ಕಳುಹಿಸಿದನು. ಹಾಗೆ ಕಷ್ಟದಲ್ಲಿ ಸಿಲುಕಿದ ಕರ್ಣನನ್ನು ನೋಡಿ ಕ್ರೋಧದಿಂದ ಕಂಪಿಸುತ್ತಿರುವಂತಿದ್ದ ನೃಪ ದುರ್ಯೋಧನನು ದುರ್ಜಯನಿಗೆ ಆದೇಶವನ್ನಿತ್ತನು:

> “ದುರ್ಜಯ! ಹೋಗು! ಅಲ್ಲಿ ಪಾಂಡವನು ರಥೇಯನನ್ನು ನುಂಗಿಬಿಡುವಂತಿದ್ದಾನೆ. ಆ ಗಡ್ಡವಿಲ್ಲದವನನ್ನು ಬೇಗನೆ ಕೊಲ್ಲು! ಕರ್ಣನ ಬಲವನ್ನು ಹೆಚ್ಚಿಸು!”

ಇದನ್ನು ಕೇಳಿದ ದುರ್ಜಯನು ದುರ್ಯೋಧನನಿಗೆ ಹಾಗೆಯೇ ಆಗಲೆಂದು ಹೇಳಿ ಕರ್ಣನೊಡನೆ ಹೋರಾಡುತ್ತಿದ್ದ ಭೀಮಸೇನನನ್ನು ಆಕ್ರಮಣಿಸಿ ಅವನ ಮೇಲೆ ಶರಗಳನ್ನು ಚೆಲ್ಲಿದನು. ಅವನು ಭೀಮನನ್ನು ಒಂಭತ್ತು ಬಾಣಗಳಿಂದ ಮತ್ತು ಕುದುರೆಗಳನ್ನು ಎಂಟರಿಂದ ಹೊಡೆದನು. ಆರರಿಂದ ಸಾರಥಿಯನ್ನು, ಮೂರರಿಂದ ಕೇತುವನ್ನು ಮತ್ತು ಏಳರಿಂದ ಅವನನ್ನೂ ಪುನಃ ಹೊಡೆದನು. ಸಂಕ್ರುದ್ಧನಾದ ಭೀಮಸೇನನೂ ಕೂಡ ಆಶುಗಗಳಿಂದ ದುರ್ಜಯನ ಮರ್ಮಗಳನ್ನು ಭೇದಿಸಿ ಅವನನ್ನೂ, ಅವನ ಕುದುರೆಗಳನ್ನೂ, ಸಾರಥಿಯನ್ನೂ ಯಮಸಾದನಕ್ಕೆ ಕಳುಹಿಸಿದನು. ಗಾಯಗೊಂಡ ಹಾವಿನಂತೆ ಹೊರಳಾಡಿ ಆರ್ತನಾಗಿ ರೋದಿಸಿ ನೆಲದ ಮೇಲೆ ಬಿದ್ದಿದ್ದ ಅಲಂಕೃತನಾಗಿದ್ದ ಧೃತರಾಷ್ಟ್ರನ ಆ ಮಗನನ್ನು ಕರ್ಣನು ಪ್ರದಕ್ಷಿಣೆ ಮಾಡಿದನು. ಆಗ ಭೀಮಸೇನನು ಅತ್ಯಂತ ವೈರಿಯಾದ ಕರ್ಣನನ್ನು ವಿರಥನನ್ನಾಗಿ ಮಾಡಿ ಬಾಣಗಣಗಳಿಂದ ಅವನನ್ನು ಚುಚ್ಚಿ ಮುಳ್ಳುಗಳಿಂದ ತುಂಬಿರುವ ಶತಘ್ನಿಯಂತೆ ಮಾಡಿದನು.

ಸಾಯಕಗಳಿಂದ ಭೇದಿಸಲ್ಪಟ್ಟರೂ ಪರಂತಪ ಅತಿರಥ ಕರ್ಣನು ಸಮರದಲ್ಲಿ ಕ್ರುದ್ಧರೂಪನಾದ ಭೀಮನನ್ನು ಬಿಟ್ಟು ಹೋಗಲಿಲ್ಲ.

ಭೀಮನಿಂದ ಹೀಗೆ ಸೋತು ವಿರಥನಾದ ಕರ್ಣನು ಪುನಃ ಇನ್ನೊಂದು ರಥವನ್ನೇರಿ ಸದ್ಯದಲ್ಲಿಯೇ ಪಾಂಡವನನ್ನು ಹೊಡೆದನು. ತಮ್ಮ ದಂತಗಳ ತುದಿಯಿಂದ ಪರಸ್ಪರರನ್ನು ಚುಚ್ಚಿ ಸೆಣಸಾಡುವ ಮಹಾಗಜಗಳಂತೆ ಅವರಿಬ್ಬರೂ ಪೂರ್ಣವಾಗಿ ಸೆಳೆದು ಬಿಟ್ಟ ಬಾಣಗಳಿಂದ ಅನ್ಯೋನ್ಯರನ್ನು ಹೊಡೆದರು. ಆಗ ಕರ್ಣನು ಶರವ್ರಾತಗಳಿಂದ ಭೀಮನನ್ನು ಜೋರಾಗಿ ಹೊಡೆದನು. ಪುನಃ ಅವನ ಎದೆಯ ಮೇಲೆ ಹೊಡೆದು ಜೋರಾಗಿ ಗರ್ಜಿಸಿದನು. ಪ್ರತಿಯಾಗಿ ಭೀಮನು ಅವನನ್ನು ಹತ್ತು ಬಾಣಗಳಿಂದ ಹೊಡೆದನು. ಪುನಃ ಇಪ್ಪತ್ತು ನತಪರ್ವಣ ಶರಗಳಿಂದ ಹೊಡೆದನು. ಕರ್ಣನಾದರೋ ಭೀಮನ ಸ್ತನಾಂತರವನ್ನು ಒಂಭತ್ತರಿಂದ ಹೊಡೆದು ಒಂದೇ ನಿಶಿತ ಸಾಯಕದಿಂದ ಧ್ವಜಕ್ಕೂ ಹೊಡೆದನು. ಆಗ ಪ್ರತಿಯಾಗಿ ಪಾರ್ಥ ಭೀಮನು ಅಂಕುಶದಿಂದ ಮಹಾ ಆನೆಯನ್ನು ಅಥವಾ ಚಾವಟಿಯಿಂದ ಕುದುರೆಯನ್ನು ಹೊಡೆಯುವ ಹಾಗೆ ಕರ್ಣನನ್ನು ಅರತ್ಮೂರು ಸಾಯಕಗಳಿಂದ ಹೊಡೆದನು. ಯಶಸ್ವೀ ಪಾಂಡವನಿಂದ ಅತಿಯಾಗಿ ಗಾಯಗೊಂಡ ವೀರ ಕರ್ಣನು ಕ್ರೋಧದಿಂದ ಕಣ್ಣುಗಳನ್ನು

ಕೆಂಪುಮಾಡಿಕೊಂಡು ಕಟವಾಯಿಯನ್ನು ನೆಕ್ಕತೊಡಗಿದನು. ಆಗ ಕರ್ಣನು ಭೀಮಸೇನನನ್ನು ಕೊಲ್ಲಲು ಇಂದ್ರನು ವಜ್ರವನ್ನು ಹೇಗೋ ಹಾಗೆ ಸರ್ವ ದೇಹಗಳನ್ನೂ ಭೇದಿಸಬಲ್ಲ ಶರವನ್ನು ಬಲವಾಗಿ ಪ್ರಯೋಗಿಸಿದನು.

ರಣದಲ್ಲಿ ಸೂತಪುತ್ರನ ಧನುಸ್ಸಿನಿಂದ ಹೊರಟ ಚಿತ್ರಪುಂಖವುಳ್ಳ ಶಿಲೀಮುಖ ಬಾಣವು ಪಾರ್ಥ ಭೀಮನನ್ನು ಭೇದಿಸಿ ಭೂಮಿಯನ್ನು ಅಗೆದು ಹೊಕ್ಕಿತು. ಆಗ ಒಂದು ಕ್ಷಣವೂ ವಿಚಾರಿಸದೇ ಭೀಮನು ಪೂರ್ಣವಾಗಿ ನಾಲ್ಕು ಕಿಷ್ಕು ಉದ್ದವಿರುವ ಆರು ಕಡೆಗಳಲ್ಲಿ ಮೊನಚಾಗಿರುವ, ಬಂಗಾರದ ಹಿಡಿಯುಳ್ಳ ಭಾರವಾದ ಗದೆಯನ್ನು ಸೂತಪುತ್ರನ ಮೇಲೆ ಎಸೆದನು. ಕ್ರುದ್ಧನಾದ ಇಂದ್ರನು ವಜ್ರದಿಂದ ಅಸುರರನ್ನು ಹೇಗೋ ಹಾಗೆ ಭಾರತ ಭೀಮನು ಆ ಗದೆಯಿಂದ ಆಧಿರಥ ಕರ್ಣನ ಉತ್ತಮ ಕುದುರೆಗಳನ್ನು ಸಂಹರಿಸಿದನು. ಆಗ ಮಹಾಬಾಹು ಭೀಮನು ಎರಡು ಕ್ಷುರಗಳಿಂದ ಆದಿರಥಿಯ ಧ್ವಜವನ್ನು ಕತ್ತರಿಸಿ ಸೂತನನ್ನು ಸಂಹರಿಸಿದನು. ಕುದುರೆ-ಸಾರಥಿಗಳು ಹತರಾಗಿದ್ದ, ಧ್ವಜವೂ ಬಿದ್ದುಹೋಗಿದ್ದ ಆ ರಥವನ್ನು ಬಿಟ್ಟು ಕರ್ಣನು ಧನುಸ್ಸನ್ನು ಟೇಂಕರಿಸಿ ದುಃಖದಿಂದ ನಿಂತುಬಿಟ್ಟನು. ಅಲ್ಲಿ ನಾವು ವಿರಥನಾಗಿದ್ದರೂ ಶತ್ರುವನ್ನು ತಡೆದು ಎದುರಿಸಿದ ರಥಿಗಳಲ್ಲಿ ಶ್ರೇಷ್ಠ

ರಾಧೇಯನ ಪರಾಕ್ರಮವನ್ನು ನೋಡಿದೆವು. ಆಹವದಲ್ಲಿ ವಿರಥನಾಗಿರುವ ರಥಶ್ರೇಷ್ಠ ಆಧಿರಥಿಯನ್ನು ನೋಡಿದ ದುರ್ಯೋಧನನು ದುರ್ಮುಖನಿಗೆ ಹೇಳಿದನು:

> “ದುರ್ಮುಖ! ಇಗೋ ರಾಧೇಯನು ಭೀಮನಿಂದ ವಿರಥೀಕೃತನಾಗಿದ್ದಾನೆ. ಆ ನರಶ್ರೇಷ್ಠ ಮಹಾರಥನಿಗೆ ರಥವನ್ನು ಒದಗಿಸಿ ಕೊಡು!”

ದುರ್ಯೋಧನನ ಮಾತನ್ನು ಕೇಳಿ ದುರ್ಮುಖನು ತ್ವರೆಮಾಡಿ ಕರ್ಣನ ಬಳಿಸಾರಿ ಭೀಮನನ್ನು ಶರಗಳಿಂದ ಮುಚ್ಚಿದನು. ಸಂಗ್ರಾಮದಲ್ಲಿ ಸೂತಪುತ್ರನ ಸಹಾಯಕ್ಕೆಂದು ಬಂದ ದುರ್ಮುಖನನ್ನು ನೋಡಿ ವಾಯುಪುತ್ರನು ಹರ್ಷಗೊಂಡು ನಾಲಿಗೆಯಿಂದ ಕಟವಾಯಿಯನ್ನು ಸವರಿದನು. ಆಗ ಪಾಂಡವ ಭೀಮನು ಶಿಲೀಮುಖಗಳಿಂದ ಕರ್ಣನನ್ನು ತಡೆದು ಶೀಘ್ರದಲ್ಲಿಯೇ ರಥವನ್ನು ದುರ್ಮುಖನ ಕಡೆ ತಿರುಗಿಸಿದನು. ಅದೇ ಕ್ಷಣದಲ್ಲಿಯೇ ಭೀಮನು ಸುಂದರ ಪುಂಖಗಳುಳ್ಳ ಒಂಭತ್ತು ನತಪರ್ವ ಶರಗಳಿಂದ ದುರ್ಮುಖನನ್ನು ಯಮಕ್ಷಯಕ್ಕೆ ಕಳುಹಿಸಿಬಿಟ್ಟನು. ದುರ್ಮುಖನು ಹತನಾಗಲು ಆಧಿರಥಿಯು ಅವನ ರಥವನ್ನೇರಿ ಸೂರ್ಯನಂತೆ ಬೆಳಗುತ್ತಾ ಪ್ರಕಾಶಿಸಿದನು. ಕವಚವು ಒಡೆದು ರಕ್ತದಲ್ಲಿ ತೋಯ್ದು ಮಲಗಿದ್ದ ದುರ್ಮುಖನನ್ನು ನೋಡಿ

ಕರ್ಣನು ಕಣ್ಣೀರು ತುಂಬಿದವನಾಗಿ ಕ್ಷಣಕಾಲ ಯುದ್ಧವನ್ನೇ ಮಾಡಲಿಲ್ಲ. ಸತ್ತು ಬಿದ್ದಿರುವ ಅವನನ್ನು ಪ್ರದಕ್ಷಿಣೆ ಮಾಡಿ ಮುಂದುವರೆದು ವೀರ ಕರ್ಣನು ದೀರ್ಘವಾದ ಬಿಸಿ ನಿಟ್ಟುಸಿರನ್ನು ಬಿಟ್ಟನು. ಏನು ಮಾಡಬೇಕೆಂದೇ ಅವನಿಗೆ ತೋಚದಾಯಿತು. ಅದರ ಮಧ್ಯದಲ್ಲಿ ಭೀಮಸೇನನು ಸೂತಪುತ್ರನ ಮೇಲೆ ಹದ್ದಿನ ಗರಿಗಳುಳ್ಳ ಹದಿನಾಲ್ಕು ನಾರಾಚಗಳನ್ನು ಪ್ರಯೋಗಿಸಿದನು. ಆ ಬಣ್ಣದ ಸ್ವರ್ಣಪುಂಖಗಳ ಮಹೌಜಸ ರಕ್ತವನ್ನು ಕುಡಿಯುವ ಕಾಲಚೋದಿತ ಬಾಣಗಳು ಕ್ರುದ್ಧರಾದ ಸರ್ಪಗಳಂತೆ ಹತ್ತು ದಿಕ್ಕುಗಳನ್ನೂ ಬೆಳಗಿಸುತ್ತ ಸೂತಪುತ್ರ ಕರ್ಣನ ಕವಚವನ್ನು ಒಡೆದು ಅವನ ರಕ್ತವನ್ನು ಕುಡಿದು ಭೂಮಿಯನ್ನು ಕೊರೆದು ಒಳಹೊಕ್ಕಿದವು. ಆ ಮಾರ್ಗಣಗಳು ಬಿಲವನ್ನು ಅರ್ಧವೇ ಪ್ರವೇಶಿಸಿದ ಕ್ರುದ್ಧ ಮಹಾಸರ್ಪಗಳಂತೆ ಕಂಡವು.

ಅದಕ್ಕೆ ಪ್ರತಿಯಾಗಿ ರಾಧೇಯನು ಏನೊಂದನ್ನೂ ವಿಚಾರಿಸದೇ ಬಂಗಾರದಿಂದ ವಿಭೂಷಿತವಾದ ಹದಿನಾಲ್ಕು ಉಗ್ರ ನಾರಾಚಗಳಿಂದ ಭೀಮನನ್ನು ಹೊಡೆದನು. ಆ ಭಯಂಕರ ಪತ್ರಿಗಳು ಭೀಮಸೇನನ ಬಲಭುಜವನ್ನು ಸೀಳಿ ಕ್ರೌಂಚ ಪಕ್ಷಿಗಳು ವೃಕ್ಷಸಮೂಹಗಳನ್ನು ಹೊಗುವಂತೆ ಮೇದಿನಿಯನ್ನು ಪ್ರವೇಶಿಸಿದವು. ವಸುಂಧರೆಯನ್ನು ಪ್ರವೇಶಿಸಿದ ಆ ನಾರಾಚಗಳು ಅಸ್ತಗಿರಿಯನ್ನು ಸೇರುವ ದಿನಕರನ

ಕಿರಣಗಳಂತೆ ಬೆಳಗಿ ರಾರಾಜಿಸಿದವು. ಆ ಮರ್ಮಭೇದಿ ನಾರಾಚಗಳಿಂದ ಗಾಯಗೊಂಡ ಭೀಮನು ರಣದಲ್ಲಿ ಪರ್ವತವು ನದಿಯನ್ನು ಸುರಿಸುವಂತೆ ರಕ್ತವನ್ನು ಸುರಿಸಿದನು. ಆಗ ಭೀಮನು ಸೂತಪುತ್ರನನ್ನು ಗರುಡನ ವೇಗವುಳ್ಳ ಏಳು ಪತತ್ರಿಗಳಿಂದ ಮತ್ತು ಅವನ ಸಾರಥಿಯನ್ನು ಏಳರಿಂದ ಹೊಡೆದನು. ಭೀಮನ ಬಲದಿಂದ ಪೀಡಿತನಾದ ಮಹಾಯಶಸ್ವಿ ಕರ್ಣನು ವೇಗವಾಗಿ ಹೋಗುವ ಕುದುರೆಗಳೊಂದಿಗೆ ರಣವನ್ನು ತೊರೆದು ಹೊರಟುಹೋದನು. ಅತಿರಥ ಭೀಮಸೇನನಾದರೋ ಬಂಗಾರದಿಂದ ಮಾಡಲ್ಪಟ್ಟ ಧನುಸ್ಸನ್ನು ಟೇಂಕರಿಸಿ ಪ್ರಜ್ವಲಿಸುತ್ತಿರುವ ಹುತಾಶನನಂತೆ ರಣರಂಗದಲ್ಲಿ ನಿಂತುಬಿಟ್ಟನು.

ಭೀಮಸೇನನಿಂದ ಕರ್ಣನು ಸೋತುದನ್ನು ನೋಡಿ ಧೃತರಾಷ್ಟ್ರನ ಐವರು ಮಕ್ಕಳು ಸಹಿಸಿಕೊಳ್ಳಲಿಲ್ಲ. ಬಣ್ಣದ ಕವಚಗಳನ್ನು ಧರಿಸಿದ ದುರ್ಮರ್ಷಣ, ದುಃಸ್ಸಹ, ದುರ್ಮದ, ದುರ್ಧರ ಮತ್ತು ಜಯ ಇವರು ಬೆಳಗುತ್ತಿರುವ ಪಾಂಡವನನ್ನು ಆಕ್ರಮಣಿಸಿದರು. ಅವರು ಮಹಾಬಾಹು ವೃಕೋದರನನ್ನು ಎಲ್ಲಕಡೆಗಳಿಂದ ಸುತ್ತುವರೆದು ಹಾರಾಡುವ ಮಿಡಿತೆಗಳಂತಿರುವ ಶರಗಳಿಂದ ದಿಕ್ಕುಗಳನ್ನೇ ತುಂಬಿಬಿಟ್ಟರು. ಒಮ್ಮಿಂದೊಮ್ಮೆಲೇ ಮೇಲೆ ಎರಗಿದ ಆ ದೇವರೂಪೀ

ಕುಮಾರರನ್ನು ಸಮರದಲ್ಲಿ ಭೀಮಸೇನನು ನಗುತ್ತಲೇ ಎದುರಿಸಿದನು. ಧೃತರಾಷ್ಟ್ರನ ಮಕ್ಕಳು ಭೀಮಸೇನನ ಸಮೀಪಹೋದುದನ್ನು ನೋಡಿ ರಾಧೇಯನು ಭೀಮಸೇನನನ್ನು ಪುನಃ ಆಕ್ರಮಣಿಸಿದನು. ಸ್ವರ್ಣಪುಂಖಗಳ ಶಿಲಾಶಿತ ವಿಶಿಖಗಳನ್ನು ಬಿಡುತ್ತಾ ಅವನು ಧೃತರಾಷ್ಟ್ರನ ಮಕ್ಕಳು ತಡೆಯುತ್ತಿದ್ದ ಭೀಮಸೇನನನ್ನು ಬೇಗನೆ ಆಕ್ರಮಣಿಸಿದನು. ಆಗ ಕುರುಗಳು ಕರ್ಣನನ್ನು ಎಲ್ಲಕಡೆಗಳಿಂದ ಸುತ್ತುವರೆದು ಭೀಮಸೇನನನ್ನು ಸನ್ನತಪರ್ವ ಶರಗಳಿಂದ ಮುಚ್ಚಿದರು. ಭೀಮಧನುಷೀ ಭೀಮನು ಇಪ್ಪತ್ತೈದು ಬಾಣಗಳಿಂದ ಆ ನರರ್ಷಭರನ್ನು ಅವರ ಕುದುರೆ-ಸಾರಥಿಯರೊಂದಿಗೆ ಯಮಲೋಕಕ್ಕೆ ಕಳುಹಿಸಿದನು. ರಥದ ಮೇಲಿಂದ ಅಸುನೀಗಿ ಅವರು ಸೂತರೊಂದಿಗೆ ರಥದ ಮೇಲಿಂದ ಬೀಳುವಾಗ ಅವರು ಬಣ್ಣ ಬಣ್ಣದ ಹೂಗಳು ತುಂಬಿದ್ದ ಮಹಾವೃಕ್ಷವು ಭಿರುಗಾಳಿಗೆ ತುಂಡಾಗಿ ಬಿದ್ದಂತೆ ತೋರಿದರು.

ಅಧಿರಥಿ ಕರ್ಣನ ಸುತ್ತಲೂ ಇದ್ದ ಧಾರ್ತರಾಷ್ಟ್ರರನ್ನು ಸಂಹರಿಸಿದ ಭೀಮಸೇನನ ವಿಕ್ರಮವನ್ನು ಅಮೋಘವಾಗಿತ್ತು. ಭೀಮನ ನಿಶಿತ ಬಾಣಗಳಿಂದ ಎಲ್ಲ ಕಡೆಗಳಿಂದಲೂ ತಡೆಯಲ್ಪಟ್ಟ ಸೂತಪುತ್ರನು ಭೀಮಸೇನನನ್ನು ನೋಡುತ್ತ ನಿಂತುಬಿಟ್ಟನು. ಭೀಮಸೇನನೂ ಕೂಡ

ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ಮಹಾ ಚಾಪವನ್ನು ಮತ್ತೆ ಮತ್ತೆ ಟೇಂಕರಿಸುತ್ತಾ ಕರ್ಣನನ್ನು ದುರುಗುಟ್ಟಿ ನೋಡಿದನು.

ಧಾರ್ತರಾಷ್ಟ್ರರು ಬಿದ್ದಿರುವುದನ್ನು ನೋಡಿ ಪ್ರತಾಪವಾನ ಕರ್ಣನು ಮಹಾ ಕ್ರೋಧದಿಂದ ಆವಿಷ್ಟನಾದನು ಮತ್ತು ತನ್ನ ಜೀವನದಲ್ಲಿಯೇ ಜಿಗುಪ್ಸೆತಾಳಿದನು. ಆಗ ಅಧಿರಥನು ತಾನೇ ತಪ್ಪಿತಸ್ಥನು ಎಂದು ಕೊಂಡನು. ಅನಂತರ ಕ್ರುದ್ಧನಾಗಿ ಉತ್ತೇಜದಿಂದ ಭೀಮಸೇನನನ್ನು ಆಕ್ರಮಣಿಸಿದನು. ರಾಧೇಯನು ನಗುತ್ತಾ ಭೀಮನನ್ನು ಐದರಿಂದ ಹೊಡೆದು ಪುನಃ ಏಳು ಸ್ವರ್ಣಪುಂಖ ಶಿಲಾಶಿತಬಾಣಗಳಿಂದ ಹೊಡೆದನು. ಅವನ ಆ ಅವಹೇಳನವನ್ನು ಪಾರ್ಥ ವೃಕೋದರನು ಸಹಿಸಿಕೊಳ್ಳಲಿಲ್ಲ. ಅವನು ರಾಧೇಯನನ್ನು ನೂರು ನತಪರ್ವಗಳಿಂದ ಹೊಡೆದನು. ಪುನಃ ಅವನು ಐದು ತೀಕ್ಷ್ಣವಾದ ವಿಶಿಖ ಆಶುಶುಗಗಳಿಂದ ಹೊಡೆದು ಭಲ್ಲದಿಂದ ಸೂತಪುತ್ರನ ಬಿಲ್ಲನ್ನು ಕತ್ತರಿಸಿದನು. ಆಗ ದುಃಖಿತನಾದ ಕರ್ಣನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಬಾಣಗಳಿಂದ ಭೀಮಸೇನನನ್ನು ಎಲ್ಲ ಕಡೆಗಳಿಂದ ಮುಚ್ಚಿದನು. ಭೀಮನು ಅವನ ಕುದುರೆಗಳನ್ನು ಕೊಂದು, ಸಾರಥಿಯನ್ನೂ ಸಂಹರಿಸಿ ಮಾಡಿದುದಕ್ಕೆ ಪ್ರತೀಕಾರ ಮಾಡಿದನೆಂದು ಅಟ್ಟಹಾಸದ ನಗುವನ್ನು ನಕ್ಕನು. ಭೀಮನು ಬಾಣಗಳಿಂದ ಕರ್ಣನ

ಧನುಸ್ಸನ್ನು ಕತ್ತರಿಸಲು ಆ ಸ್ವರ್ಣದ ಹಿಡಿಯಿದ್ದ, ಜೋರಾಗಿ ಟೇಂಕರಿಸುತ್ತಿದ್ದ ಬಿಲ್ಲು ಕೆಳಕೆ ಬಿದ್ದಿತು. ಆಗ ಮಹಾರಥಿ ಕರ್ಣನು ರಥದಿಂದ ಇಳಿದು ಸಮರದಲ್ಲಿ ಗದೆಯನ್ನು ಹಿಡಿದು ಭೀಮಸೇನನ ಮೇಲೆ ಎಸೆದನು. ಮೇಲಿಂದ ಬೀಳುತ್ತಿದ್ದ ಆ ಗದೆಯನ್ನು ನೋಡಿ ಕೂಡಲೇ ವೃಕೋದರನು ಸರ್ವಸೇನೆಗಳೂ ನೋಡುತ್ತಿರುವಂತೆಯೇ ಶರಗಳಿಂದ ಅದನ್ನು ತಡೆದನು. ಆಗ ಪರಾಕ್ರಮೀ ಪಾಂಡವನು ಸೂತಪುತ್ರನ ವಧೆಯನ್ನು ಬಯಸಿ ತ್ವರೆಮಾಡಿ ಸಹಸ್ರಾರು ಬಾಣಗಳನ್ನು ಪ್ರಯೋಗಿಸಿದನು. ಮಹಾರಣದಲ್ಲಿ ಆ ಬಾಣಗಳನ್ನು ಬಾಣಗಳಿಂದಲೇ ತಡೆದು ಕರ್ಣನು ಸಾಯಕಗಳಿಂದ ಭೀಮಸೇನನ ಕವಚವನ್ನು ಬೀಳಿಸಿದನು. ಇಪ್ಪತ್ತೈದು ಕ್ಷುದ್ರಕ ಬಾಣಗಳನ್ನೂ ಅವನ ಮೇಲೆ ಪ್ರಯೋಗಿಸಿದನು. ನೋಡುತ್ತಿರುವ ಸರ್ವಭೂತಗಳಿಗೂ ಅದೊಂದು ಅದ್ಭುತವೆನಿಸಿತು. ಆಗ ಕ್ರುದ್ಧ ಭೀಮನು ಒಂಭತ್ತು ನತಪರ್ವಗಳನ್ನು ಸೂತಪುತ್ರನ ಮೇಲೆ ಪ್ರಯೋಗಿಸಿದನು.

ಆ ತೀಕ್ಷ್ಣ ಬಾಣಗಳು ಅವನ ಕವಚವನ್ನು ಮತ್ತು ಬಲ ಬಾಹುವನ್ನು ಸೀಳಿ ಹಾವುಗಳು ಹುತ್ತವನ್ನು ಹೊಗುವಂತೆ ನೆಲವನ್ನು ಹೊಕ್ಕವು. ರಾಧೇಯನು ಭೀಮಸೇನನಿಂದ ಗಾಬರಿಗೊಂಡು ನೆಲದಮೇಲೆ ನಿಂತಿರುವುದನ್ನು ನೋಡಿ ದುರ್ಯೋಧನನು

“ಎಲ್ಲರೂ ರಾಧೇಯನ ರಥದ ಕಡೆ ತ್ವರೆಮಾಡಿ!”

ಎಂದು ಹೇಳಿದನು. ಅಣ್ಣನ ಮಾತನ್ನು ಕೇಳಿದ ಧಾರ್ತರಾಷ್ಟ್ರರು - ಚಿತ್ರ, ಉಪಚಿತ್ರ, ಚಿತ್ರಾಕ್ಷ, ಚಾರುಚಿತ್ರ, ಶರಾಸನ, ಚಿತ್ರಾಯುಧ ಮತ್ತು ಚಿತ್ರವರ್ಮ – ಇವರು ನಿಶಿತ ಶರಗಳನ್ನು ಪ್ರಯೋಗಿಸುತ್ತಾ ಪಾಂಡವನನ್ನು ಆಕ್ರಮಣಿಸಿದರು. ಭೀಮನು ಬರುತ್ತಿರುವ ಅವರನ್ನು ಕೂಡಲೇ ಕುದುರೆಗಳು, ಸೂತರು ಮತ್ತು ಧ್ವಜಗಳೊಂದಿಗೆ ಉರುಳಿಸಿದನು. ಭಿರುಗಾಳಿಗೆ ಸಿಲುಕಿದ ಮರಗಳಂತೆ ಅವರು ಹತರಾಗಿ ನೆಲದ ಮೇಲೆ ಬಿದ್ದರು. ಮಹಾರಥ ಧಾರ್ತರಾಷ್ಟ್ರರು ಹತರಾದುದನ್ನು ಕಂಡು ಕರ್ಣನು ಕಣ್ಣೀರುತುಂಬಿದವನಾಗಿ ಶೋಕಭರಿತನಾದನು. ಆ ಪರಾಕ್ರಮಿಯು ವಿಧಿವತ್ತಾಗಿ ಸಜ್ಜುಗೊಳಿಸಿದ್ದ ಇನ್ನೊಂದು ರಥವನ್ನೇರಿ ಯುದ್ಧದಲ್ಲಿ ತ್ವರೆಮಾಡುತ್ತಾ ಪುನಃ ಪಾಂಡವ ಭೀಮನನ್ನು ಎದುರಿಸಿದನು.

ಅನ್ಯೋನ್ಯರನ್ನು ಸ್ವರ್ಣಪುಂಖಗಳ ಶಿಲಾಶಿತ ಶರಗಳಿಂದ ಹೊಡೆದು ಗಾಯಗೊಳಿಸಿದ ಅವರು ಹೂಬಿಟ್ಟ ಕಿಂಶುಕ ವೃಕ್ಷಗಳಂತೆ ಕಂಗೊಳಿಸಿದರು. ಆಗ ಪಾಂಡವನು ಕ್ರುದ್ಧನಾಗಿ ತಿಗ್ಮತೇಜಸ್ಸಿನಿಂದ ಕೂಡಿದ ನಿಶಿತವಾದ ಮೂವತ್ತಾರು ಭಲ್ಲಗಳಿಂದ ಸೂತಪುತ್ರನ ಕವಚವನ್ನು ತುಂಡರಿಸಿದನು. ರಕ್ತ-ಚಂದನಗಳಿಂದ ಲೇಪಿತಗೊಂಡ,

ಶರಗಳಿಂದ ತುಂಬಾ ಗಾಯಮಾಡಿಕೊಂಡು ಕೆಂಪಾಗಿದ್ದ ಅವರಿಬ್ಬರೂ ಉದಯಿಸುತ್ತಿರುವ ಪ್ರಳಯಕಾಲದ ಸೂರ್ಯರಂತೆ ರಾರಾಜಿಸಿದರು. ರಕ್ತದಿಂದ ಅಂಗಾಂಗಳು ತೋಯ್ದುಹೋಗಿದ್ದ, ಶರಗಳು ತಾಗಿ ಚರ್ಮವು ಹರಿದುಹೋಗಿದ್ದ, ಕವಚಗಳನ್ನು ಕಳೆದುಕೊಂಡಿದ್ದ ಅವರಿಬ್ಬರು ಪೊರೆಬಿಟ್ಟ ಸರ್ಪಗಳಂತೆ ರಾಜಿಸುತ್ತಿದ್ದರು. ಹುಲಿಗಳು ತಮ್ಮ ಕೋರೆದಾಡೆಗಳಿಂದ ಪರಸ್ಪರರನ್ನು ಗಾಯಗೊಳಿಸುವಂತೆ ಆ ಇಬ್ಬರು ಅರಿಂದಮ ನರವ್ಯಾಘ್ರರು ಶರಗಳೆಂಬ ತಮ್ಮ ಹಲ್ಲುಗಳಿಂದ ಪರೆದಾಡಿಕೊಂಡು ಗಾಯಮಾಡಿದರು. ರಂಗಮಧ್ಯದಲ್ಲಿ ತಮ್ಮ ದಂತಗಳಿಂದ ತಿವಿದು ಕಾದಾಡುತ್ತಿರುವ ಆನೆಗಳಂತೆ ಆ ಇಬ್ಬರು ಮತ್ತವಾರಣವಿಕ್ರಮಿಗಳು ತೀಕ್ಷ್ಣ ವಿಶಿಖಗಳಿಂದ ಕಾದಾಡಿ ವಿರಾಜಿಸಿದರು. ಸಮರದಲ್ಲಿ ಪರಸ್ಪರರನ್ನು ಶರಜಾಲಗಳಿಂದ ಮುಚ್ಚಿಬಿಡುತ್ತಾ, ಗರ್ಜಿಸುತ್ತಾ ಅವರಿಬ್ಬರೂ ರಥಗಳೆರಡರಲ್ಲಿ ಎಲ್ಲ ದಿಕ್ಕುಗಳಲ್ಲಿಯೂ ಸಂಚರಿಸುತ್ತಿದ್ದರು. ಮಂಡಲಾಕಾರದಲ್ಲಿ ಆ ಎರಡು ರಥಗಳೂ ತಿರುಗುತ್ತಿರಲು ಅವರಿಬ್ಬರು ಮಹಾತ್ಮರೂ ವೃತ-ವಜ್ರಧರರಂತೆ ರಾರಾಜಿಸಿದರು. ಹಸ್ತಾಭರಣಗಳಿಂದ ಯುಕ್ತವಾದ ಎರಡೂ ಭುಜಗಳಿಂದ ಧನುಸ್ಸನ್ನು ಸೆಳೆಯುತ್ತಿದ್ದ ಭೀಮನು ರಣದಲ್ಲಿ ಮಿಂಚಿನಿಂದ ಕೂಡಿದ ಮೋಡದಂತೆ ಪ್ರಕಾಶಿಸಿದನು. ಗುಡುಗುತ್ತಿರುವ ಮಳೆಸುರಿಸುವ ಮಹಾ ಮೋಡದಂತೆ ಚಾಪಘೋಷಯುಕ್ತನಾದ

ಭೀಮನೆಂಬ ಮೇಘವು ಕರ್ಣವೆಂಬ ಪರ್ವತವನ್ನೇ ಮುಸುಕಿ ಹಾಕಿತು. ಆಗ ಧನುಸ್ಸಿನಿಂದ ಬಿಟ್ಟ ಸಹಸ್ರ ಬಾಣಗಳಿಂದ ಪಾಂಡವನು ಕರ್ಣನನ್ನು ಮೋಡವು ಪರ್ವತವನ್ನು ಮಳೆಯಿಂದ ಹೇಗೋ ಹಾಗೆ ಮುಚ್ಚಿಬಿಟ್ಟನು. ಪುಂಖಗಳಿರುವ ಕಂಕವಾಸ ಶರಗಳಿಂದ ಕರ್ಣನನ್ನು ಮುಸುಕಿಹಾಕಿದ ಭೀಮಸೇನನ ವಿಕ್ರಮವನ್ನು ಎಲ್ಲರೂ ನೋಡುತ್ತಿದ್ದರು. ಕರ್ಣನೊಡನೆ ಯುದ್ಧಮಾಡಿ ಭೀಮನು ರಣದಲ್ಲಿ ಅರ್ಜುನ ಮತ್ತು ಕೇಶವನಿಗೂ, ಸಾತ್ಯಕಿಗೂ, ಚಕ್ರರಕ್ಷಕರಿಗೂ ಆನಂದವನ್ನುಂಟುಮಾಡಿದನು. ಪಾಂಡವ ಭೀಮನ ವಿಕ್ರಮವನ್ನೂ, ಭುಜಗಳ ವೀರ್ಯವನ್ನೂ, ಧೈರ್ಯವನ್ನೂ ಧಾರ್ತರಾಷ್ಟ್ರರು ತಾವೇ ನೋಡಿ ಅರ್ಥಮಾಡಿಕೊಂಡರು.

ಭೀಮಸೇನನ ಮೌರ್ವಿಯ ಟೇಂಕಾರಶಬ್ಧವನ್ನು ಕೇಳಿ ರಾಧೇಯನು ಮದಿಸಿದ ಆನೆಯು ಎದುರಾಳಿ ಸಲಗದ ಘೀಂಕಾರವನ್ನು ಹೇಗೋ ಹಾಗೆ ಸಹಿಸಿಕೊಳ್ಳಲಿಲ್ಲ. ಮುಹೂರ್ತಕಾಲ ಆಧಿರಥನು ಭೀಮಸೇನನ ಬಾಣಗಳ ದೃಷ್ಟಿಗೆ ದೂರದಲ್ಲಿಯೇ ಇದ್ದು ಭೀಮಸೇನನಿಂದ ನಿಹತರಾಗಿ ರಥದಿಂದ ಬಿದ್ದಿದ್ದ ಧಾರ್ತರಾಷ್ಟ್ರರನ್ನು ನೋಡಿ ವಿಮನಸ್ಕನೂ ದುಃಖಿತನೂ ಆದನು. ದೀರ್ಘವಾದ ಬಿಸಿ ನಿಟ್ಟುಸಿರನ್ನು ಬಿಡುತ್ತಾ ಪುನಃ ಪಾಂಡವ ಭೀಮನನ್ನು ಆಕ್ರಮಣಿಸಿದನು.

ಕ್ರೋಧದಿಂದ ರಕ್ತಾಕ್ಷನಾದ ಕರ್ಣನು ಘಸರ್ಪದಂತೆ ಭುಸುಗುಟ್ಟುತ್ತಾ ಶರಗಳನ್ನು ಪ್ರಯೋಗಿಸುತ್ತಿದ್ದ ಕರ್ಣನು ಕಿರಣಗಳನ್ನು ಸೂಸುವ ಭಾಸ್ಕರನಂತೆ ಪ್ರಕಾಶಿಸಿದನು. ಸೂರ್ಯನ ಕಿರಣಗಳ ಜಾಲಗಳಿಂದ ಪರ್ವತವು ಆಚ್ಛಾದಿದವಾಗುವಂತೆ ಕರ್ಣನ ಚಾಪದಿಂದ ಹೊರಟ ಬಾಣಗಳಿಂದ ವೃಕೋದರನು ಆಚ್ಛಾದಿತನಾದನು. ಕರ್ಣನ ಚಾಪದಿಂದ ಹೊರಟ ಬಣ್ಣದ ನವಿಲುಗರಿಗಳನ್ನು ಹೊಂದಿರುವ ಶರಗಳು ಪಕ್ಷಿಗಳು ವೃಕ್ಷವನ್ನು ಹೊಗುವಂತೆ ಪಾರ್ಥನನ್ನು ಎಲ್ಲಕಡೆಗಳಿಂದ ಪ್ರವೇಶಿಸಿದವು. ಕರ್ಣನ ಚಾಪದಿಂದ ಹೊರಟ ರುಕ್ಮಪುಂಖ ಬಾಣಗಳು ಅಲ್ಲಿಂದ ಇಲ್ಲಿಗೆ ಹಾರಾಡುತ್ತಿದ್ದ ಹಂಸಗಳ ಸಾಲಿನಂತೆ ವಿರಾಜಿಸಿದವು. ಆಧಿರಥನ ಶರಗಳು ಧನುಸ್ಸು, ಧ್ವಜ, ಇತರ ಸಾಮಗ್ರಿಗಳು, ಚತ್ರ, ಈಷಾದಂಡ, ಮೂಕಿ, ನೊಗ ಇವುಗಳಿಂದಲೂ ಬರುತ್ತಿವೆಯೋ ಎಂಬಂತೆ ಕಾಣುತ್ತಿದ್ದವು. ಆಧಿರಥಿಯು ರಣಹದ್ದಿನ ರೆಕ್ಕೆಗಳನ್ನು ಹೊಂದಿದ್ದ ಸುವರ್ಣದಿಂದ ಚಿತ್ರಿತವಾದ ಮಹಾವೇಗಯುಕ್ತವಾದ, ಆಕಾಶಗಾಮೀ ಬಾಣಗಳಿಂದ ಆಕಾಶವನ್ನೇ ತುಂಬಿಸಿ ಪ್ರಯೋಗಿಸಿದನು. ಅಂತಕನಂತೆ ಮೇಲೆ ಬೀಳುತ್ತಿದ್ದ ಕರ್ಣನನ್ನು ವೃಕೋದರನು ಪ್ರಾಣಗಳನ್ನೂ ಕಡೆಗಣಿಸಿ ಕ್ರೋಧದಿಂದ ಒಂಭತ್ತು ಶರಗಳಿಂದ ಹೊಡೆದನು. ಕರ್ಣನ ವೇಗವು ಅಸಹನೀಯವಾದುದೆಂದು ನೋಡಿದ ವೀರ್ಯವಾನ್ ಪಾಂಡವನು

ಮಹತ್ತರವಾದ ಅನ್ಯ ಶರೌಘಗಳಿಂದ ಅವನ ಶರಗಳನ್ನು ನಿರಸನಗೊಳಿಸಿದನು. ಆಗ ಆಧಿರಥ ಕರ್ಣನ ಶರಜಾಲಗಳನ್ನು ಧ್ವಂಸಮಾಡಿ ಪಾಂಡವನು ಪುನಃ ಅನ್ಯ ಇಪ್ಪತ್ತು ನಿಶಿತ ಶರಗಳಿಂದ ಕರ್ಣನನ್ನು ಹೊಡೆದನು. ಸೂತಪುತ್ರನ ಶರಗಳಿಂದ ಹೇಗೆ ಭೀಮನು ಮುಚ್ಚಲ್ಪಟ್ಟಿದ್ದನೋ ಅದೇ ರೀತಿಯಲ್ಲಿ ಪಾಂಡವನು ಕರ್ಣನನ್ನು ಮುಚ್ಚಿದನು. ಯುದ್ಧದಲ್ಲಿ ಭೀಮಸೇನನ ವಿಕ್ರಮವನ್ನು ನೋಡಿ ನಿನ್ನವರು ಆನಂದಿತರಾದರು ಮತ್ತು ಚಾರಣರು ಹರ್ಷಿತರಾದರು.

ಕುರುಪಾಂಡವರ ಹತ್ತು ಪ್ರವರ ಮಹಾರಥರು - ಭೂರಿಶ್ರವ, ಕೃಪ, ದ್ರೌಣಿ, ಮದ್ರರಾಜ, ಜಯದ್ರಥ, ಉತ್ತಮೌಜ, ಯುಧಾಮನ್ಯು, ಸಾತ್ಯಕಿ ಮತ್ತು ಕೇಶವ-ಅರ್ಜುನರು - ವೇಗದಿಂದ “ಸಾಧು! ಸಾಧು!” ಎಂದು ಸಿಂಹನಾದಗೈದರು. ರೋಮಾಂಚಕಾರಿ ಆ ತುಮುಲ ಶಬ್ಧವು ಹುಟ್ಟಿಕೊಳ್ಳಲು ದುರ್ಯೋಧನನು ಸಹೋದರರಿಗೆ ತ್ವರೆಮಾಡಿ ಹೇಳಿದನು:

> “ರಾಜರು, ರಾಜಪುತ್ರರು ಮತ್ತು ವಿಶೇಷವಾಗಿ ಸೋದರರು ಕರ್ಣನಲ್ಲಿಗೆ ಹೋಗಿ ವೃಕೋದರನಿಂದ ಅವನನ್ನು ರಕ್ಷಿಸಿ. ನಿಮಗೆ ಮಂಗಳವಾಗಲಿ! ಭೀಮಸೇನನ ಚಾಪದಿಂದ ಹೊರಟ ಶರಗಳು ರಾಧೇಯನನ್ನು ಸಂಹರಿಸುವ ಮೊದಲೇ

ಸೂತಪುತ್ರನ ರಕ್ಷಣೆಗೆ ಪ್ರಯತ್ನಿಸಿ!”

ದುರ್ಯೋಧನನಿಂದ ಆದೇಶಪಡೆದ ಏಳು ಸಹೋದರರು ಸಂರಬ್ಧರಾಗಿ ಭೀಮಸೇನನನ್ನು ಸುತ್ತುವರೆದು ಆಕ್ರಮಣಿಸಿದರು. ಅವರು ಕೌಂತೇಯನನ್ನು ಎದುರಿಸಿ ಮೋಡಗಳು ಪರ್ವತವನ್ನು ಮಳೆಯ ನೀರಿನಿಂದ ಮುಚ್ಚಿಬಿಡುವಂತೆ ಶರವೃಷ್ಟಿಗಳಿಂದ ಅವನನ್ನು ಮುಚ್ಚಿದರು. ಪ್ರಜಾಸಂಹರಣಕಾಲದಲ್ಲಿ ಏಳು ಗ್ರಹಗಳು ಸೇರಿಕೊಂಡು ಚಂದ್ರನನ್ನು ಕಾಡುವಂತೆ ಕ್ರುದ್ಧರಾದ ಆ ಏಳು ಮಹಾರಥರು ಭೀಮಸೇನನನ್ನು ಪೀಡಿಸಿದರು. ಆಗ ಭೀಮಸೇನನು ಎಡ ಮುಷ್ಟಿಯಿಂದ ಸುಪರಿಷ್ಕೃತವಾದ ಧನುಸ್ಸನ್ನು ದೃಢವಾಗಿ ಮೀಟಿ, ಅವರು ಸಾಮಾನ್ಯ ಮನುಷ್ಯರೆಂದೇ ತಿಳಿದುಕೊಂಡು, ಹಿಂದಿನ ವೈರವನ್ನು ಸ್ಮರಿಸಿಕೊಂಡು, ಏಳು ಸಾಯಕಗಳನ್ನು ಹೂಡಿ ಸೂರ್ಯನ ಕಿರಣಗಳಂತೆ ಪ್ರಕಾಶಿಸುತ್ತಿರುವ ಅವುಗಳನ್ನು ಧೃತರಾಷ್ಟ್ರನ ಪುತ್ರರ ದೇಹದಿಂದ ಪ್ರಾಣಗಳನ್ನು ಹೀರುತ್ತಿರುವನೋ ಎಂಬಂತೆ ಅವರ ಮೇಲೆ ಪ್ರಯೋಗಿಸಿದನು. ಭೀಮಸೇನನು ಎಸೆದ ಆ ಸ್ವರ್ಣಪುಂಖ ಶಿಲಾಶಿತ ಬಾಣಗಳು ಆ ಭಾರತರನ್ನು ಭೇದಿಸಿ ಆಕಾಶಕ್ಕೆ ಹಾರಿದವು. ಅವರ ಚೇತನಗಳನ್ನು ಸೀಳಿದ ಆ ಹೇಮವಿಭೂಷಿತ ಶರಗಳು ಪಕ್ಷಿ ಗರುಡನಂತೆ ರಾಜಿಸಿದವು. ಆ ಏಳು ಸುವರ್ಣಭೂಷಿತ ಬಾಣಗಳು

ಧೃತರಾಷ್ಟ್ರನ ಪುತ್ರರ ರಕ್ತವನ್ನು ಕುಡಿದು ಹೊರಬಂದು ರಕ್ತದಿಂದ ಲೇಪಿತವಾದ ಅಗ್ರಭಾಗ-ರೆಕ್ಕೆಗಳಿಂದ ಪ್ರಕಾಶಿಸಿದವು. ಪರ್ವತದ ತಪ್ಪಲು ಪ್ರದೇಶದಲ್ಲಿದ್ದ ಮಹಾವೃಕ್ಷಗಳು ಆನೆಗಳಿಂದ ಮುರಿದು ಬೀಳುವಂತೆ ಆ ಶರಗಳಿಂದ ಕವಚಗಳು ಒಡೆದು ಧೃತರಾಷ್ಟ್ರನ ಆ ಮಕ್ಕಳು ರಥದಿಂದ ಉರುಳಿ ಭೂಮಿಯಮೇಲೆ ಬಿದ್ದರು. ಶತ್ರುಂಜಯ, ಶತ್ರುಸಹ, ಚಿತ್ರ, ಚಿತ್ರಾಯುಧ, ದೃಢ, ಚಿತ್ರಸೇನ, ವಿಕರ್ಣ – ಈ ಏಳುಮಂದಿ ಕೆಳಗುರುಳಿದರು.

ರಾಧೇಯನು ನೋಡುತ್ತಿದ್ದಂತೆಯೇ ಅವರನ್ನು ಸಂಹರಿಸಿದ ಪಾಂಡುನಂದನನು ಘೋರವಾಗಿ ಸಿಂಹನಾದಗೈದನು. ಶೂರನಾದ ಅವನ ಆ ಕೂಗು ಯುದ್ಧದಲ್ಲಿ ಅವನು ಗಳಿಸಿರುವ ತನ್ಮೂಲಕವಾಗಿ ತನಗೂ ದೊರಕಿರುವ ಮಹಾ ವಿಜಯವನ್ನು ಧರ್ಮರಾಜನಿಗೆ ಸೂಚಿಸಿತು. ಧನ್ವಿ ಭೀಮಸೇನನ ಆ ಸುಮಹಾನಾದವನ್ನು ಕೇಳಿ ರಣದಲ್ಲಿದ್ದ ಧರ್ಮರಾಜನಿಗೆ ಮಹದಾನಂದವುಂಟಾಯಿತು. ಆಗ ಹೃಷ್ಟನಾದ ಯುಧಿಷ್ಠಿರನು ಎಲ್ಲಕಡೆ ರಣವಾದ್ಯ ಘೋಷಗಳನ್ನು ಮೊಳಗಿಸಿ ಭೀಮಸೇನನ ಸಿಂಹನಾದವನ್ನು ಪ್ರತಿಗ್ರಹಿಸಿದನು. ತಾನು ಮಹಾ ಸಂತೋಷಗೊಂಡಿದ್ದೇನೆ ಎಂದು ವೃಕೋದರನಿಗೆ ಸಂಜ್ಞೆಯನ್ನಿತ್ತು ಧರ್ಮರಾಜನು ಸಮರದಲ್ಲಿ ಶಸ್ತ್ರಭೃತರಲ್ಲಿ ಶ್ರೇಷ್ಠನಾದ

ದ್ರೋಣನನ್ನು ಎದುರಿಸಿದನು.

ಧೃತರಾಷ್ಟ್ರನ ಮೂವತ್ತೊಂದು ಮಹಾರಥ ಪುತ್ರರು ಹತರಾದುದನ್ನು ನೋಡಿ ದುರ್ಯೋಧನನು ಕ್ಷತ್ತ ವಿದುರನ ಆ ಮಾತುಗಳನ್ನು ನೆನಪಿಸಿಕೊಂಡನು.

> "ಕ್ಷತ್ತನ ಹಿತಕರವಚನವನ್ನೇನು ಹೇಳಿದ್ದನೋ ಅವೆಲ್ಲವೂ
> ಈಗ ನಡೆಯುತ್ತಿವೆ!"

ಎಂದು ಚಿಂತಿಸಿದ ರಾಜನಿಗೆ ಉತ್ತರವೊಂದೂ ದೊರಕಲಿಲ್ಲ.

ಮಹಾಯುದ್ಧದಲ್ಲಿ ಪರಾಕ್ರಾಂತರಾದ ಕರ್ಣ-ಭೀಮರಿಬ್ಬರೂ ಮಳೆಗರೆಯುವ ಮೋಡಗಳಂತೆ ಪರಸ್ಪರರ ಮೇಲೆ ಬಾಣಗಳ ಮಳೆಯನ್ನು ಸುರಿಸಿದರು. "ಭೀಮ!" ಎಂಬ ನಾಮಾಂಕಿತ ಸ್ವರ್ಣಪುಂಖಗಳ ಶಿಲಾಶಿತ ಬಾಣಗಳು ಜೀವವನ್ನೇ ಹರಣಮಾಡುವವೋ ಎಂಬಂತೆ ಕರ್ಣನ ಶರೀರವನ್ನು ಹೊಕ್ಕವು. ಹಾಗೆಯೇ ರಣದಲ್ಲಿ ಕರ್ಣನು ಪ್ರಯೋಗಿಸಿದ ಹಾವಿನ ವಿಷಗಳಂತಿರುವ ನೂರಾರು ಸಹಸ್ರಾರು ಬಾಣಗಳು ಭೀಮನನ್ನು ಮುಚ್ಚಿಬಿಟ್ಟವು. ಎಲ್ಲಕಡೆಗಳಲ್ಲಿ ಬೀಳುತ್ತಿದ್ದ ಅವರ ಶರಗಳಿಂದಾಗಿ ಕೌರವ ಸೇನೆಯಲ್ಲಿ ಸಾಗರದಂತೆ ಅಲ್ಲೋಲಕಲ್ಲೋಲವುಂಟಾಯಿತು.

ಭೀಮನ ಚಾಪದಿಂದ ಹೊರಟ ಘೋರ ಸರ್ಪಗಳ ವಿಷಕ್ಕೆ ಸಮಾನವಾದ ಬಾಣಗಳು ಕೌರವ ಸೇನೆಗಳ ಚಮೂಮಧ್ಯದಲ್ಲಿ ಅನೇಕರನ್ನು ಸಂಹರಿದವು. ಹರಡಿ ಬಿದ್ದಿರುವ ಆನೆಗಳಿಂದ, ಕುದುರೆಗಳಿಂದ ಮತ್ತು ಮನುಷ್ಯರಿಂದ ರಣಭೂಮಿಯು ಚಂಡಮಾರುತಕ್ಕೆ ಸಿಲುಕಿ ಮರಗಳು ಉರುಳಿ ಬಿದ್ದಿರುವಂತೆ ತೋರಿತು. ಭೀಮನ ಚಾಪದಿಂದ ಹೊರಟ ಶರಗಳಿಂದ ವಧಿಸಲ್ಪಡುತ್ತಿದ್ದ ಕೌರವರ ಕಡೆಯ ಯೋಧರು "ಇದೇನಿದು?" ಎಂದು ಹೇಳುತ್ತಾ ಓಡಿಹೋಗುತ್ತಿದ್ದರು. ಹೀಗೆ ಕರ್ಣ-ಪಾಂಡವರ ಶರಗಳ ಮಹಾವೇಗದಿಂದ ಸಿಂಧು-ಸೌವೀರ-ಕೌರವ ಸೇನೆಗಳು ಭಗ್ನವಾಗಿ ಪಲಾಯನಗೈದವು.

ಅವರ ಶರಗಳಿಂದ ಹತರಾಗದೇ ಉಳಿದಿದ್ದ ಅಶ್ವ-ರಥ-ಗಜ-ಪದಾತಿಗಳು ಕರ್ಣ-ಭೀಮರನ್ನು ಅಲ್ಲಿಯೇ ಬಿಟ್ಟು ಎಲ್ಲ ದಿಕ್ಕುಗಳಿಗೂ ಓಡಿ ಹೋದವು.

> "ನಿಜವಾಗಿಯೂ ಪಾರ್ಥರ ಹಿತಕ್ಕಾಗಿಯೇ ದಿವೌಕಸರು ನಮ್ಮನ್ನು ಹೀಗೆ ಭ್ರಾಂತರನ್ನಾಗಿಸಿದ್ದಾರೆ! ಕರ್ಣ-ಭೀಮರಿಂದ ಹೊರಟ ಬಾಣಗಳು ನಮ್ಮ ಸೇನೆಗಳನ್ನೇ ವಧಿಸುತ್ತಿವೆ."

ಹೀಗೆ ಹೇಳುತ್ತಾ ಭಯಪೀಡಿತರಾದ ಕೌರವರು ಶರಗಳು ಬೀಳುತ್ತಿರುವ

ಪ್ರದೇಶವನ್ನು ಬಿಟ್ಟು ದೂರದಲ್ಲಿ ಯುದ್ಧಪ್ರೇಕ್ಷಕರಾಗಿ ನಿಂತುಬಿಟ್ಟರು. ಆಗ ಮಹಾಹವದಲ್ಲಿ ವಿಶೇಷವಾಗಿ ರಣಹೇಡಿಗಳ ಭಯವನ್ನು ಹೆಚ್ಚಿಸುವ ಘೋರರೂಪವಾದ ನದಿಯು ಪ್ರವಹಿಸತೊಡಗಿತು. ಆನೆ-ಕುದುರೆ-ಮನುಷ್ಯರ ರಕ್ತದಿಂದ ಹುಟ್ಟಿದ ಆ ನದಿಯು ಸತ್ತುಹೋಗಿದ್ದ ಮನುಷ್ಯ-ಆನೆ-ಕುದುರೆಗಳಿಂದ ತುಂಬಿಹೋಗಿತ್ತು. ತೋಳುಮರಗಳು, ಪತಾಕೆಗಳು, ಆನೆ-ಕುದುರೆ-ರಥಗಳ ಭೂಷಣಗಳು, ಪುಡಿಯಾಗಿದ್ದ ರಥಗಳು, ಮುರಿದುಹೋಗಿದ್ದ ರಥಚಕ್ರಗಳು, ನೊಗಗಳು, ಬಂಗಾರದಿಂದ ಮಾಡಲ್ಪಟ್ಟ ಮಹಾಮೌಲ್ಯದ ಧನುಸ್ಸುಗಳು, ಕರ್ಣ-ಪಾಂಡವರು ಬಿಟ್ಟ ಪೊರೆಬಿಟ್ಟ ಹಾವುಗಳಂತಿರುವ ಸಾವಿರಾರು ಸುವರ್ಣಪುಂಖಗಳ ನಾರಾಚ ಬಾಣಗಳು, ಒಡೆದು ಬಿದ್ದಿದ್ದ ಪ್ರಾಸ-ತೋಮರ-ಖಡ್ಗ ಮತ್ತು ಪರಶಾಯುಧಗಳು, ಬಂಗಾರದಿಂದ ಮಾಡಲ್ಪಟ್ಟ ಗದೆ-ಮುಸಲ-ಪಟ್ಟಿಶಗಳು, ವಿವಿಧಾಕಾರದ ವಜ್ರಗಳು, ಪರಿಘ-ಶಕ್ತಿಗಳು, ಶತಘ್ನೀ-ಚಿತ್ರಗಳು, ಕನಕಾಂಗದ-ಕೇಯೂರಗಳು, ಶುಭ ಕುಂಡಲ ಮಣಿಗಳು, ಕವಚಗಳು, ಬಳೆಗಳು, ಉಂಗುರಗಳು, ಕೈಚೀಲಗಳಿಂದ, ಹಾರಗಳಿಂದ, ನಿಷ್ಕಗಳಿಂದ, ವಸ್ತ್ರ-ಚತ್ರಗಳಿಂದ, ಮುರಿದಿದ್ದ ಚಾಮರ-ವ್ಯಜಗಳಿಂದ, ಛಿನ್ನ-ಭಿನ್ನರಾಗಿದ ಗಜ-ಅಶ್ವ-ಮನುಷ್ಯರಿಂದ, ಶಸ್ತ್ರಗಳಿಂದ, ರಥಭೂಷಣಗಳಿಂದ, ವಿವಿಧ ಭಾವ್ಗಳಿಂದ ಅಲ್ಲಲ್ಲಿ ಬಿದ್ದಿದ್ದ ಇನ್ನೂ ಅನೇಕ ವಸ್ತುಗಳಿಂದ

ವ್ಯಾಪ್ತವಾಗಿದ್ದ ರಣಾಂಗಣವು ಗ್ರಹಗಳಿಂದ ತುಂಬಿದ್ದ ಆಕಾಶದಂತೆ ಪ್ರಕಾಶಿಸುತ್ತಿತ್ತು. ಅವರಿಬ್ಬರ ಯೋಚನೆಗೆ ಸಿಲುಕದ ಅದ್ಭುತವೂ ಅಮಾನುಷವೂ ಆದ ಕೃತ್ಯಗಳನ್ನು ನೋಡಿ ಚಾರಣ-ಸಿದ್ಧರಲ್ಲಿ ವಿಸ್ಮಯವುಂಟಾಯಿತು. ಒಣಮರಗಳಿರುವ ವನದಲ್ಲಿ ಅಗ್ನಿಯ ಮುನ್ನಡೆಯು ಗಾಳಿಯ ಸಹಾಯದಿಂದ ಬಹಳ ಭಯಂಕರವಾಗಿ ಪರಿಣಮಿಸುವಂತೆ ಯುದ್ಧದಲ್ಲಿ ಭೀಮನ ಸಹಾಯವನ್ನು ಪಡೆದ ಆಧಿರಥ ಕರ್ಣನ ಗಮನವು ಬಹಳ ಭಯಂಕರವಾಗಿ ಪರಿಣಮಿಸಿತು. ಅಂಕುಶಪ್ರಹಾರದಿದ ಪ್ರೇರಿತವಾದ ಎರಡು ಆನೆಗಳು ಜೊಂಡುಹುಲ್ಲಿನ ವನವನ್ನು ಧ್ವಂಸಮಾಡುವಂತೆ ಅವರಿಬ್ಬರು ಧ್ವಜ-ರಥಗಳನ್ನು ಕೆಳಗುರುಳಿಸಿ ಅಶ್ವ-ನರ-ಗಜಗಳನ್ನು ಸಂಹರಿಸಿದರು. ಆಗ ಸಂಯುಗದಲ್ಲಿ ಕರ್ಣ-ಭೀಮರಿಂದ ಆ ಮಹಾಸೇನೆಯು ಸಂಪೂರ್ಣವಾಗಿ ನಾಶಗೊಂಡಿತು.

ಆಗ ಕರ್ಣನು ಭೀಮನನ್ನು ಮೂರು ಶರಗಳಿಂದ ಹೊಡೆದು ವಿಚಿತ್ರವಾದ ಅನೇಕ ಶರವರ್ಷಗಳನ್ನು ಸುರಿಸಿದನು. ಸೂತಪುತ್ರನಿಂದ ಪ್ರಹರಿಸಲ್ಪಡುತ್ತಿರುವ ಭೀಮನೇನನು ಭೇದಿಸಲ್ಪಡುವ ಪರ್ವತದಂತೆ ಸ್ವಲ್ಪವೂ ಅಲುಗಾಡಲಿಲ್ಲ. ಭೀಮಸೇನನು ಕರ್ಣನ ಕಿವಿಯ ಪ್ರದೇಶಕ್ಕೆ ನಿಶಿತವಾದ ಪತತ್ರಿ ಕರ್ಣಿಗಳಿಂದ ಹೊಡೆದನು. ಅದು ಕರ್ಣನ

ಕಿವಿಯಿಂದ ಬಂಗಾರದ ಮಹಾ ಕುಂಡಲವನ್ನು ಅಂಬರದಿಂದ ಉರಿಯುತ್ತಿರುವ ನಕ್ಷತ್ರದಂತೆ ಭೂಮಿಯ ಮೇಲೆ ಬೀಳಿಸಿತು. ಕೂಡಲೇ ಇನ್ನೊಂದು ಭಲ್ಲದಿಂದ ನಗುತ್ತಾ ಭೀಮನು ಸೂತಪುತ್ರನ ಎದೆಗೆ ಹೊಡೆದನು. ಪುನಃ ಬೇಗನೆ ಭೀಮನು ರಣದಲ್ಲಿ ಯಮದಂಡಗಳಂತಿರುವ ಮಹಾವೇಗವುಳ್ಳ ಹತ್ತು ನಾರಾಚಗಳನ್ನು ಪ್ರಯೋಗಿಸಿದನು. ಅವು ಸೂತಪುತ್ರನ ಹಣೆಯನ್ನು ಹೊಕ್ಕು, ಹಾವುಗಳು ಹುತ್ತವನ್ನು ಹೊಗುವಂತೆ ಹೊಕ್ಕು ನಾಟಿಕೊಂಡವು. ಹಣೆಯಲ್ಲಿದ್ದ ಆ ಬಾಣಗಳಿಂದ ಸೂತಪುತ್ರನು ಹಿಂದೆ ನೀಲಪುಷ್ಪಗಳ ಮಾಲೆಯನ್ನು ಧರಿಸಿದ್ದಾಗ ಹೇಗೋ ಹಾಗೆ ಕಂಗೊಳಿಸಿದನು. ಆಗ ದೃಢಧನ್ವನಿಂದ ಪೀಡಿತನಾಗಿ ಕ್ರುದ್ಧನಾದ ಮಹಾವೇಗಿ ಕರ್ಣನು ಭೀಮಸೇನನ ವಧೆಗೆ ತ್ವರೆಮಾಡಿದನು. ಅಮರ್ಷೀ ಬಲವಾನ್ ಕ್ರುದ್ಧ ಕರ್ಣನು ನೂರು ಗಾರ್ಧ್ರವಾಸಸಗಳನ್ನು ಅವನ ಮೇಲೆ ಪ್ರಯೋಗಿಸಿದನು. ಆಗ ಪಾಂಡವನು ಸಮರದಲ್ಲಿ ಅವನನ್ನು ಅನಾದರಿಸಿ, ಅವನ ವೀರ್ಯದ ಕುರಿತು ಚಿಂತಿಸದೇ ಅವನ ಮೇಲೆ ಶರವರ್ಷಗಳನ್ನು ಸುರಿಸಿದನು.

ಕ್ರುದ್ಧ ಕರ್ಣನು ಕ್ರುದ್ಧರೂಪೀ ಪಾಂಡವನ ಎದೆಗೆ ನಿಶಿತ ಬಾಣಗಳಿಂದ ಹೊಡೆದನು. ಮೋಡಗಳಂತೆ ಅವರಿಬ್ಬರು ಅನ್ಯೋನ್ಯರ ಮೇಲೆ

ಬಾಣಗಳ ಮಳೆಗಳನ್ನು ಸುರಿಸಿದರು ಮತ್ತು ರಣದಲ್ಲಿ ಚಪ್ಪಾಳೆಯ ಶಬ್ಧ ಮತ್ತು ಕೂಗುಗಳಿಂದ ಪರಸ್ಪರರನ್ನು ಬೆದರಿಸಿದರು. ರಣದಲ್ಲಿ ವಿವಿಧ ಶರಜಾಲಗಳಿಂದ ಅನ್ಯೋನ್ಯರನ್ನು ಮುಚ್ಚಿದರು ಮತ್ತು ಸಮರದಲ್ಲಿ ಕ್ರುದ್ಧರಾಗಿ ಅನ್ಯೋನ್ಯರನ್ನು ಮೀರಿಸುವಂತಿದ್ದರು. ಆಗ ಭೀಮನು ಕ್ಷುರಪ್ರದಿಂದ ರಾಧೇಯ ಕರ್ಣನ ಧನುಸ್ಸನ್ನು ತುಂಡರಿಸಿ ಪತ್ರಿಗಳಿಂದ ಅವನನ್ನು ಹೊಡೆದನು. ತನ್ನ ಧನುಸ್ಸು ತುಂಡಾಗಲು ಸೂತಪುತ್ರನು ಇನ್ನೊಂದು ವೇಗವುಳ್ಳ, ಭಾರಸಾಧನ ಬಿಲ್ಲನ್ನು ಎತ್ತಿಕೊಂಡನು. ಕುರು-ಸೌವೀರ-ಸೈಂಧವರ ಸೇನೆಗಳು ನಾಶವಾಗುತ್ತಿರುವುದನ್ನು ನೋಡಿ, ಕವಚ-ಧ್ವಜ-ಶಸ್ತ್ರಗಳೊಂದಿಗೆ ನೆಲದಮೇಲೆ ಬಿದ್ದು ಅಸುನೀಗಿದ ಆನೆ-ಕುದುರೆ-ನರರ ದೇಹಗಳನ್ನು ಎಲ್ಲ ಕಡೆ ನೋಡಿ ಸೂತಪುತ್ರನ ಮುಖವು ಕ್ರೋಧದಿಂದ ಉರಿದು ಬೆಳಗತೊಡಗಿತು. ಬಂಗಾರದಿಂದ ವಿಭೂಷಿತವಾದ ಆ ಮಹಾ ಧನುಸ್ಸನ್ನು ಟೇಂಕರಿಸಿ ರಾಧೇಯನು ಭೀಮನನ್ನು ಘೋರ ದೃಷ್ಟಿಯಿಂದ ನೋಡಿದನು. ಬಾಣಗಳನ್ನು ಬಿಡುವಾಗ ಕ್ರುದ್ಧನಾದ ಸೂತಪುತ್ರನು ಶರತ್ಕಾಲದ ಮಧ್ಯಾಹ್ನದ ಅರ್ಚಿಷ್ಮಾನ್ ದಿವಾಕರನಂತೆ ರಾರಾಜಿಸಿದನು. ನೂರಾರು ಶರಗಳನ್ನು ಬಿಡುತ್ತಿರುವ ಆಧಿರಥನ ಘೋರ ಮುಖವು ಕಿರಣಗಳನ್ನು ಹೊರಸೂಸುವ ಭಾನುಮತನ ಮುಖದಂತಾಯಿತು. ರಣದಲ್ಲಿ ಅವನು ಕೈಯಿಂದ ಶರಗಳನ್ನು ತೆಗೆದುಕೊಳ್ಳುವುದಾಗಲೀ, ಹೂಡುವುದಾಗಲೀ,

ಎಳೆಯುವುದಾಗಲೀ ಅಥವಾ ಬಿಡುವುದರಲ್ಲಾಗಲೀ ಅಂತರವನ್ನೇ ಕಾಣುತ್ತಿರಲಿಲ್ಲ.

ಆಯುಧವನ್ನು ಘೋರವಾದ ಅಗ್ನಿಚಕ್ರದಂತೆ ಗೋಲಾಕಾರವಾಗಿ ಮಾಡಿ ಕರ್ಣನು ಎಡ-ಬಲಗಳಲ್ಲಿ ಒಂದೇ ಸಮನಾಗಿ ಕಾಣುತ್ತಿದ್ದನು. ಕರ್ಣನ ಚಾಪದಿಂದ ಬಿಡಲ್ಪಟ್ಟ ಸ್ವರ್ಣಪುಂಖದ ನಿಶಿತ ಶರಗಳು ಸೂರ್ಯನ ಪ್ರಭೆಯಂತೆ ದಿಕ್ಕುಗಳನ್ನು ಮುಸುಕಿದವು. ಅವನ ಧನುಸ್ಸಿನಿಂದ ಹೊರಟ ಕನಕಪುಂಖಗಳ ನತಪರ್ವ ಶರಗಳು ಅನೇಕ ಸಂಖ್ಯೆಗಳಲ್ಲಿ ಹಾರಾಡುತ್ತಿರುವುದು ಕಂಡಿತು. ಆಧಿರಥನ ಧನುಸ್ಸಿನಿಂದ ಹೊರಟ ಸಾಯಕಗಳು ಆಕಾಶದಲ್ಲಿ ಸಾಲುಕಟ್ಟಿದ ಕ್ರೌಂಚಪಕ್ಷಿಗಳಂತೆ ರಾಜಿಸಿದವು. ಆಧಿರಥನು ಗಾರ್ಧ್ರಪತ್ರಗಳ, ಶಿಲೆಗಳ ಮೇಲೆ ಮಸೆದ, ಬಂಗಾರದಿಂದ ವಿಭೂಷಿತವಾದ, ಮಹಾವೇಗವುಳ್ಳ, ಬೆಳಗುತ್ತಿರುವ ಉಗ್ರ ಶರಗಳನ್ನು ಪ್ರಯೋಗಿಸುತ್ತಿದ್ದನು. ಧನುಸ್ಸಿನ ಬಲದಿಂದ ಕೊಂಡೊಯ್ಯಲ್ಪಟ್ಟ ಆ ಬಂಗಾರದಿಂದ ವಿಭೂಷಿತ ಶರಗಳು ಆಕಾಶದಲ್ಲಿ ಗೀರೆಳೆಯುತ್ತಾ ಪಾರ್ಥನ ರಥದ ಕಡೆ ಹೋಗುತ್ತಿದ್ದವು. ಕರ್ಣನು ಬಿಟ್ಟ ರತ್ನವಿಕೃತ ಬಾಣಗಳು ಆಕಾಶದಲ್ಲಿ ಸಾವಿರಾರು ಹಾರುತ್ತಾ ಸಹಸ್ರಾರು ಮಿಡಿತೆಗಳಂತೆ ತೋರುತ್ತಿದ್ದವು. ಆದಿರಥನ ಧನುಸ್ಸಿನಿಂದ ಬಿಡಲ್ಪಟ್ಟ ಉರಿಯುತ್ತಿರುವ ಸಾಯಕಗಳು ಉದ್ದವಾದ

ಒಂದೇ ಶರದಂತಾಗಿ ಕಾಣುತ್ತಿದ್ದವು. ಮೋಡವು ಪರ್ವತವನ್ನು ಮಳೆಯ ನೀರಿನಿಂದ ಮುಚ್ಚಿಬಿಡುವಂತೆ ಕ್ರುದ್ಧನಾದ ಕರ್ಣನು ಸಾಯಕಗಳ ಮಳೆಯಿಂದ ಭೀಮನನ್ನು ಮುಚ್ಚಿಬಿಟ್ಟನು. ಅಲ್ಲಿ ಭೀಮನ ಬಲವೀರ್ಯ ಪರಾಕ್ರಮವನ್ನೂ ಅವನ ಕಸರತ್ತನ್ನೂ ಕುರುಗಳೊಂದಿಗೆ ಧಾರ್ತರಾಷ್ಟ್ರರು ನೋಡಿದರು. ಉಕ್ಕಿಬರುವ ಸಮುದ್ರದಂತೆ ಮೇಲಿಂದ ಬೀಳುತ್ತಿರುವ ಶರವೃಷ್ಟಿಯನ್ನು ಲೆಕ್ಕಿಸದೇ ಕ್ರುದ್ಧನಾದ ಭೀಮನು ಕರ್ಣನನ್ನು ಆಕ್ರಮಿಣಿಸಿದನು.

ಭೀಮನ ಮಹಾಚಾಪವು ಬಂಗಾರದ ಹಿಂಬದಿಯುಳ್ಳದ್ದಾಗಿತ್ತು. ಇನ್ನೊಂದು ಶಕ್ರಚಾಪವೋ ಎಂಬಂತಿದ್ದ ಅದನ್ನು ಮಂಡಲಾಕರದಲ್ಲಿ ಸೆಳೆದು ಅದರಿಂದ ಬಾಣಗಳನ್ನು ಬಿಟ್ಟು ಇಡೀ ಅಂಬರವನ್ನೇ ತುಂಬಿಸಿಬಿಟ್ಟನು. ಭೀಮನ ಸುವರ್ಣಪುಂಖಗಳುಳ್ಳ ಸಾಯಕ-ನತಪರ್ವಗಳು ಗಗನದಲ್ಲಿ ರಚಿಸಿದ ಬಂಗಾರದ ಮಾಲೆಯಂತೆ ಕಂಗೊಳಿಸಿದವು. ಆಗ ಕರ್ಣನ ಶರಜಾಲಗಳು ವ್ಯೋಮವನ್ನೇ ತುಂಬಿಬಿಡಲು ಅವುಗಳ ಭಾಗಶವನ್ನು ಭೀಮಸೇನನ ಪತ್ರಿಗಳು ಹೊಡೆದುರುಳಿಸಿದವು. ರಣದಲ್ಲಿ ಕರ್ಣ ಮತ್ತು ಭೀಮಸೇನ ಇಬ್ಬರದ್ದೂ ವೇಗದಿಂದ ಕೂಡಿದ ಕನಕ ಪುಂಖಗಳ ಶರಜಾಲಗಳು ಆಕಾಶದಲ್ಲಿ ಹಾರಾಡುವಾಗ ಒಂದಕ್ಕೊಂದು ತಾಗಿ ಬೆಂಕಿಯ ಕಿಡಿಗಳನ್ನು

ಹಾರಿಸುತ್ತಿದ್ದವು. ಸೂತಪುತ್ರನು ಭೀಮಸೇನನ ವೀರ್ಯವನ್ನು ಕಡೆಗಣಿಸಿ ಇನ್ನೂ ಹೆಚ್ಚು ಬಾಣಗಳಿಂದ ಅವನನ್ನು ಮುಚ್ಚಿ ಮೀರಿಸಿದನು. ಅಲ್ಲಿ ಅವರಿಬ್ಬರು ಬಿಟ್ಟ ಶರಜಾಲಗಳು ಒಂದು ಇನ್ನೊಂದನ್ನು ಟಕ್ಕರಿಸುತ್ತಿರುವ ವಿರೋಧದಿಕ್ಕುಗಳಲ್ಲಿ ಬೀಸುತ್ತಿರುವ ಎರಡು ಭಿರುಗಾಳಿಗಳಂತೆ ತೋರಿದವು. ಭೀಮನನ್ನು ವಧಿಸಲು ಬಯಸಿದ ಕರ್ಣನು ಕ್ರುದ್ಧನಾಗಿ ಕರ್ಮ್ಮಾರರಿಂದ ಸಾಣೆಹಿಡಿಸಲ್ಪಟ್ಟ ಬಂಗಾರದಿಂದ ಮಾಡಿದ ನಿಶಿತ ಬಾಣಗಳನ್ನು ಪ್ರಯೋಗಿಸಿದನು. ಅವುಗಳನ್ನು ಅಂತರಿಕ್ಷದಲ್ಲಿಯೇ ವಿಶಿಖಗಳಿಂದ ಒಂದೊಂದನ್ನೂ ಮೂರು ಮೂರು ತುಂಡುಗಳನ್ನಾಗಿ ಕತ್ತರಿಸಿ, ಸೂತಪುತ್ರನನ್ನು ಮೀರಿಸುತ್ತಾ ಭೀಮಸೇನನು “ನಿಲ್ಲು!” ಎಂದು ಹೇಳಿದನು.

ಭಸ್ಮಮಾಡಿಬಿಡುವನೋ ಎನ್ನುವ ಪಾವಕನಂತೆ ಕ್ರುದ್ಧನಾದ ಪಾಂಡವನು ಪುನಃ ಉಗ್ರ ಶರವರ್ಷಗಳನ್ನು ಸುರಿಸಿದನು. ಆದರೆ ಕರ್ಣನು ಭಯಪಡದೇ ಭೀಮನ ಎಲ್ಲ ಅಸ್ತ್ರಗಳನ್ನೂ ತಡೆದನು. ಸೂತಪುತ್ರನು ಪಾಂಡುಪುತ್ರನೊಡನೆ ಅಸ್ತ್ರಮಾಯೆಯಿಂದ ಯುದ್ಧಮಾಡತೊಡಗಿದನು. ಕರ್ಣನು ಸನ್ನತ ಪರ್ವ ಬಾಣಗಳಿಂದ ಅವನ ಭತ್ತಳಿಕೆಗಳನ್ನೂ, ಧನುಸ್ಸಿನ ಶಿಂಜನಿಯನ್ನೂ, ಧನುಸ್ಸನ್ನೂ, ಹಗ್ಗಗಳನ್ನೂ, ಕುದುರೆಗಳ ಕಡಿವಾಣಗಳನ್ನೂ ಕತ್ತರಿಸಿದನು. ಪುನಃ

ಅವನ ಕುದುರೆಗಳನ್ನು ಸಂಹರಿಸಿ, ಮೂರರಿಂದ ಸಾರಥಿಯನ್ನು ಹೊಡೆದನು. ಆ ಸಾರಥಿಯು ಕೂಡಲೇ ರಥದಿಂದ ಹಾರಿ ಸಾತ್ಯಕಿಯ ರಥಕ್ಕೆ ಹೋದನು. ಕ್ರುದ್ಧನಾದ ಪ್ರಳಯಾಗ್ನಿಯ ಪ್ರಭೆಯಿಂದ ಪ್ರಕಾಶಿಸುತ್ತಿದ್ದ ರಾಧೇಯನು ಭೀಮನನ್ನು ಗೇಲಿಮಾಡುತ್ತಾ ಅವನ ಧ್ವಜವನ್ನೂ ಪತಾಕೆಯನ್ನೂ ಕತ್ತರಿಸಿ ಬೀಳಿಸಿದನು. ಧನುಸ್ಸನ್ನು ಕಳೆದುಕೊಂಡ ಕ್ರುದ್ಧ ಭೀಮನು ಪರಮ ರೋಷದಿಂದ ಕರ್ಣನ ರಥದ ಕಡೆಗೆ ಶಕ್ತ್ಯಾಯುಧವನ್ನು ಬೀಸಿ ಪ್ರಯೋಗಿಸಿದನು. ಮೇಲೆ ಬೀಳುತ್ತಿದ್ದ ಮಹಾಉಲ್ಕೆಯ ಪ್ರಭೆಯನ್ನುಳ್ಳ ಹೇಮಪರಿಷ್ಕೃತವಾಗಿದ್ದ ಆ ಶಕ್ತಿಯನ್ನು ಆಯಾಸಗೊಂಡಿದ್ದ ಕರ್ಣನು ಹತ್ತು ಶರಗಳಿಂದ ಕತ್ತರಿಸಿದನು. ಮಿತ್ರನಿಗಾಗಿ ವಿಚಿತ್ರವಾಗಿ ಯುದ್ಧಮಾಡುತ್ತಿದ್ದ ಸೂತಪುತ್ರನ ಕರ್ಣನ ಸಾಯಕಗಳಿಂದ ಆ ಶಕ್ತಿಯು ಹತ್ತು ತುಂಡುಗಳಾಗಿ ಬಿದ್ದಿತು. ಯುದ್ಧದಲ್ಲಿ ಬೇಗನೇ ಮೃತ್ಯು ಅಥವಾ ಜಯವನ್ನು ಬಯಸಿ ಭೀಮನು ಬಂಗಾರದಿಂದ ಮಾಡಲ್ಪಟ್ಟ ಖಡ್ಗವನ್ನೂ ಗುರಾಣಿಯನ್ನೂ ಎತ್ತಿಕೊಂಡನು. ಕೂಡಲೆ ಕರ್ಣನು ನಗುತ್ತಾ ಗುರಾಣಿಯನ್ನು ತುಂಡರಿಸಿದನು. ಗುರಾಣಿಯನ್ನು ಕಳೆದುಕೊಂಡ ಮತ್ತು ವಿರಥನಾಗಿದ್ದ ಭೀಮನು ಕ್ರೋಧಮೂರ್ಚಿತನಾಗಿ ತ್ವರೆಮಾಡಿ ಖಡ್ಗವನ್ನೇ ತಿರುಗಿಸುತ್ತಾ ಕರ್ಣನ ರಥದ ಕಡೆ ಎಸೆದನು. ಆ ಖಡ್ಗವು ಮೌರ್ವಿಯಿಂದ ಯುಕ್ತವಾಗಿದ್ದ ಸೂತಪುತ್ರನ ಧನುಸ್ಸನ್ನು ಕತ್ತರಿಸಿ

ಕೋಪಗೊಂಡ ಸರ್ಪವು ಆಕಾಶದಿಂದ ಕೆಳಕ್ಕೆ ಬೀಳುವಂತೆ ಭೂಮಿಯ ಮೇಲೆ ಬಿದ್ದಿತು. ಆಗ ಕ್ರುದ್ಧನಾದ ಅಧಿರತನು ಜೋರಾಗಿ ನಗುತ್ತಾ ಶತ್ರುವನ್ನು ಕೊಲ್ಲಬಲ್ಲಂತಹ, ದೃಢವಾದ ಮೌರ್ವಿಯುಳ್ಳ, ವೇಗವತ್ತರವಾದ ಇನ್ನೊಂದು ಧನುಸ್ಸನ್ನು ಎತ್ತಿಕೊಂಡನು.

ಕುಪಿತನಾದ ಸತ್ಯವಿಕ್ರಮಿ ಭೀಮಸೇನನು ಕರ್ಣನ ಮನಸ್ಸನ್ನು ವ್ಯಥೆಗೊಳಿಸುತ್ತಾ ಆಕಾಶಕ್ಕೆ ಹಾರಿದನು. ಅವನ ಆ ನಡತೆಯನ್ನು ನೋಡಿ ಸಂಗ್ರಾಮದಲ್ಲಿ ವಿಜಯವನ್ನು ಬಯಸುತ್ತಿದ್ದ ರಾಧೇಯನು ಶರೀರವನ್ನು ಸಂಕುಚಿಸಿಕೊಂಡು ಭೀಮಸೇನನನ್ನು ಮೋಸಗೊಳಿಸಿದನು. ವ್ಯಥಿತ ಮನಸ್ಕನಾಗಿ ರಥದ ಹಿಂಭಾಗದಲ್ಲಿ ಅಡಗಿದ್ದ ಕರ್ಣನನ್ನು ನೋಡಿ ಭೀಮಸೇನನು ರಥದ ಧ್ವಜಸ್ತಂಭವನ್ನು ಹಿಡಿದು ಭೂಮಿಯಮೇಲೆ ನಿಂತನು. ಗರುಡನು ಸರ್ಪವೊಂದನ್ನು ಎತ್ತಿಕೊಂಡು ಹೋಗುವಂತೆ ರಥದಿಂದ ಕರ್ಣನನ್ನು ಎತ್ತಿಕೊಂಡು ಹೋಗುವಂತಿರುವ ಭೀಮನನ್ನು

> "ಧನುಸ್ಸನ್ನು ಕಳೆದುಕೊಂಡಿದ್ದರೂ ವಿರಥನಾಗಿದ್ದರೂ ತನ್ನ ಧರ್ಮವನ್ನು ಅನುಸರಿಸಿ ಇವನು ತನ್ನ ರಥವನ್ನು ಹಿಂದಕ್ಕೆ ಬಿಟ್ಟು, ಯುದ್ಧದಲ್ಲಿಯೇ ನಿರತನಾಗಿದ್ದಾನೆ!"

ಎಂದು ಕುರುಗಳು ಮತ್ತು ಚಾರಣರು ಎಲ್ಲರೂ ಪ್ರಶಂಸಿಸಿದರು.

ಆಕಾಶದಿಂದ ಹಾರಿ ಹೀಗೆ ತನ್ನ ಹತ್ತಿರುವೇ ಬಂದಿರುವ ಪಾಂಡವನನ್ನು ನೋಡಿ ಕ್ರೋಧಿತನಾದ ರಾಧೇಯನು ಅವನೊಂದಿಗೆ ಪುನಃ ಯುದ್ಧವನ್ನು ಮುಂದುವರಿಸಿದನು. ಬೇಸಗೆಯ ಕೊನೆಯಲ್ಲಿ ನಭಸ್ಥಲದಲ್ಲಿ ಗರ್ಜಿಸುತ್ತಿರುವ ಮೋಡಗಳಂತೆ ಅವರಿಬ್ಬರೂ ಮಹಬಲಶಾಲಿಗಳು ಮಹಾರಂಗದಲ್ಲಿ ಜೊತೆಗೂಡಿ ಸ್ಪರ್ಧಿಸುತ್ತಿದ್ದರು. ರಣದಲ್ಲಿ ಕ್ರುದ್ಧರಾಗಿದ್ದ, ಅಸಹನಶೀಲರಾಗಿದ್ದ ಆ ನರಸಿಂಹರ ನಡುವೆ ದೇವ-ದಾನವರ ನಡುವಿನಂತೆ ಪ್ರಹಾರಗಳು ನಡೆದವು.

ಕರ್ಣನಿಂದ ಆಕ್ರಮಣಿಸಿಸಲ್ಪಟ್ಟ ಶಸ್ತ್ರಗಳನ್ನು ಕಳೆದುಕೊಂಡಿದ್ದ ಕೌಂತೇಯ ಭೀಮನು ಅರ್ಜುನನಿಂದ ಹತವಾಗಿ ಬಿದ್ದಿದ್ದ ಪರ್ವತೋಪಮ ಆನೆಗಳನ್ನು ನೋಡಿ ಕರ್ಣನ ರಥಮಾರ್ಗವನ್ನು ತಡೆಯಲೋಸುಗ ಆ ಪ್ರದೇಶವನ್ನು ಪ್ರವೇಶಿಸಿದನು. ರಥವು ಬರಲು ಕಷ್ಟವಾಗಿದ್ದ ಸತ್ತ ಆನೆಗಳ ರಾಶಿಗಳನ್ನು ಪ್ರವೇಶಿಸಿ ಜೀವಿತಾಕಾಂಕ್ಷಿಯಾದ ಪಾಂಡವನು ರಾಧೇಯನನ್ನು ಪ್ರಹರಿಸಲಿಲ್ಲ. ಹೋರಾಡಲು ಸರಿಯಾದ ಸ್ಥಾನದಲ್ಲಿ ನಿಲ್ಲಲು ಬಯಸಿ ಪರಪುರಂಜಯ ಪಾರ್ಥ ಭೀಮನು ಧನಂಜಯನ ಶರಗಳಿಂದ ಹತವಾಗಿ ಬಿದ್ದಿದ್ದ ಆನೆಯೊಂದನ್ನು ಎತ್ತಿ ನಿಂತನು. ಆ ಕುಂಜರವನ್ನು ಕರ್ಣನು ವಿಶಿಖಗಳಿಂದ ತುಂಡುಮಾಡಲು ಪಾಂಡವನು ಇತರ ಆನೆಗಳನ್ನು

ಹಿಡಿದು ಕರ್ಣನ ಮೇಲೆ ಎಸೆದು ಗರ್ಜಿಸಿದನು. ಕ್ರುದ್ಧನಾದ ಪಾಂಡವನು ಆಗ ರಣಭೂಮಿಯ ಮೇಲೆ ಏನೆಲ್ಲ ಕಂಡನೋ - ರಥಚಕ್ರಗಳು, ಕುದುರೆಗಳು, ರಥಗಳು - ಅವುಗಳನ್ನು ಕರ್ಣನ ಮೇಲೆ ಎಸೆಯುತ್ತಿದ್ದನು. ಎಸೆದಹಾಗೆ ಅವೆಲ್ಲವನ್ನೂ ಕರ್ಣನು ನಿಶಿತ ಶರಗಳಿಂದ ಚೂರು ಚೂರು ಮಾಡಿ ಕತ್ತರಿಸಿದನು.

ಕುಂತಿಯ ವಚನವನ್ನು ಸ್ಮರಿಸಿಕೊಂಡ ಕರ್ಣನು ನಿರಾಯುಧನಾಗಿ ಜ್ಞಾನತಪ್ಪಿದ್ದ ಭೀಮನನ್ನು ಕೊಲ್ಲಲಿಲ್ಲ. ಪರಮ ಕ್ರೋಧದಿಂದ ರಾಧೇಯ ಕರ್ಣನು ಧನುಸ್ಸಿನ ತುದಿಯಿಂದ ಭೀಮಸೇನನನ್ನು ತಿವಿದನು ಮತ್ತು ನಗುತ್ತಾ ಅವನಿಗೆ ಹೇಳಿದನು:

> “ಪುರುಷರಿಗಿರಬೇಕಾದ ಗಡ್ಡ-ಮೀಸೆಗಳಿಲ್ಲದ ನಪುಂಸಕನೇ! ಮೂಢ! ಹೊಟ್ಟೆಬಾಕ! ಅಸ್ತ್ರಗಳನ್ನು ಕಲಿಯದವನೇ! ಯುದ್ಧಹೇಡಿಯೇ! ಬಾಲಸ್ವಭಾವದವನೇ! ಸಂಗ್ರಾಮಕಾತರ! ಪುನಃ ಪುನಃ ಯುದ್ಧಕ್ಕೆ ಬರಬೇಡ! ಎಲ್ಲಿ ಭೋಜಿಸಲು ಬಹುವಿಧದ ಭಕ್ಷ್ಯ ಪಾನೀಯಗಳಿರುತ್ತವೋ ಅಲ್ಲಿಗೆ ನೀನು ಯೋಗ್ಯನೇ ಹೊರತು ಯುದ್ಧದಲ್ಲಿ ಎಂದೂ ಅಲ್ಲ! ನೀನು ಯುದ್ಧವಿಶಾರದನಲ್ಲ! ಭೀಮ! ಮುನಿಯಾಗು ಅಥವಾ ವನಕ್ಕೆ ಹೋಗಿ ಫಲಗಳನ್ನಾದರೂ ಸೇವಿಸಿ ಜೀವಿಸಿಕೊಂಡಿರು! ನೀನು

ಫಲಮೂಲಗಳನ್ನು ತಿನ್ನುವುದಕ್ಕೆ ಮತ್ತು ಅತಿಥಿಭೋಜನಕ್ಕೆ ಯೋಗ್ಯ! ಆದರೆ ಶಸ್ತ್ರಗಳನ್ನೆತ್ತಿ ಯುದ್ಧಮಾಡುವುದರಲ್ಲಿ ಯೋಗ್ಯನೆಂದು ನಿನ್ನನ್ನು ಮನ್ನಿಸುವುದಿಲ್ಲ. ವನದಲ್ಲಿ ಪುಷ್ಪ-ಮೂಲ-ಫಲಾಹಾರಗಳು ಮತ್ತು ವ್ರತ-ನಿಯಮಗಳೇ ನಿನಗೆ ಉಚಿತವಾದವುಗಳು. ನೀನು ಯುದ್ಧವಿಶಾರದನಲ್ಲ! ಅಯ್ಯಾ! ಯುದ್ಧವೆಲ್ಲಿ? ಮುನಿತ್ವವೆಲ್ಲಿ? ವನಕ್ಕೆ ತೆರಳು! ಯುದ್ಧವು ನಿನಗೆ ಉಚಿತವಾದುದಲ್ಲ! ವನವಾಸವೇ ನಿನಗೆ ಅತಿಯಾಗಿ ಯೋಗ್ಯವಾದುದು! ಭೋಜನಾರ್ಥವಾಗಿ ನೀನು ಕ್ರೋಧದಿಂದ ಮನೆಯಲ್ಲಿರುವ ಅಡುಗೆಯವರನ್ನು ಮತ್ತು ಭೃತ್ಯಜನ-ದಾಸರನ್ನು ತುಂಬಾ ಅವಸರ ಪಡಿಸಿ ಹೊಡೆಯಲು ಮಾತ್ರ ನೀನು ಯೋಗ್ಯ!”

ಹಿಂದೆ ಬಾಲತನದಲ್ಲಿ ಏನು ಅಪ್ರಿಯವಾದವುಗಳು ನಡೆದಿದ್ದವೋ ಅವುಗಳನ್ನು ಕೂಡ ಎತ್ತಿ ಹೇಳುತ್ತಾ ಕರ್ಣನು ಭೀಮನೊಡನೆ ನಿಷ್ಠೂರವಾಗಿ ಮಾತನಾಡಿದನು. ಶರೀರವನ್ನು ಸಂಕುಚಿತಗೊಳಿಸಿಕೊಂಡಿದ್ದ ಭೀಮನನ್ನು ವೃಷಸೇನ ಕರ್ಣನು ಪುನಃ ಧನುಸ್ಸಿನಿಂದ ತಿವಿದು ಜೋರಾಗಿ ನಕ್ಕು ಈ ಮಾತನ್ನಾಡಿದನು:

“ಎಲ್ಲಿ ಅಲ್ಪಬಲವುಳವುಳ್ಳವರಿದ್ದಾರೋ ಅಲ್ಲಿ

ಹೋರಾಡಬೇಕು. ನನ್ನಂಥವರೊಂದಿಗೆ ಹೋರಾಡಬಾರದು. ನನ್ನೊಡನೆ ಯುದ್ಧಮಾಡುವವರಿಗೆ ಹೀಗಿರುವ ಮತ್ತು ಇನ್ನೂ ಕೆಟ್ಟ ಅವಸ್ಥೆಯಾಗುತ್ತದೆ. ಕೌಂತೇಯ! ರಣದಲ್ಲಿ ನಿನ್ನನ್ನು ರಕ್ಷಿಸಲಿರುವ ಆ ಇಬ್ಬರು ಕೃಷ್ಣರು ಎಲ್ಲಿದ್ದಾರೋ ಅಲ್ಲಿಗೆ ಹೋಗು! ಅಥವಾ ಮನೆಗಾದರೂ ಹೋಗು! ನಿನ್ನಂತಹ ಬಾಲಕನೊಂದಿಗೇನು ಯುದ್ಧ!"

ಹೀಗೆ ಕರ್ಣನು ವೃಷ್ಣಿಸಿಂಹ ಕೃಷ್ಣನ ಎದುರಿಗೇ ಮಹಾತ್ಮ ಪಾರ್ಥ ಭೀಮನನ್ನು ವಿರಥನನ್ನಾಗಿ ಮಾಡಿ ಕೊಚ್ಚಿಕೊಂಡನು. ಆಗ ಕೇಶವನಿಂದ ಪ್ರಚೋದಿತನಾದ ಕಪಿಧ್ವಜ ಅರ್ಜುನನು ಸೂತಪುತ್ರನ ಮೇಲೆ ಮಸೆಗಲ್ಲಿನಿಂದ ಶುದ್ಧಪಡಿಸಿದ್ದ ಶರಗಳನ್ನು ಪ್ರಯೋಗಿಸಿದನು. ಪಾರ್ಥನ ಭುಜಗಳಿಂದ ಬಿಡಲ್ಪಟ್ಟ, ಗಾಂಡೀವದಿಂದ ಹೊರಟ ಕಾಂಚನಭೂಷಣ ಶರಗಳು ಹಂಸಗಳು ಕ್ರೌಂಚಪರ್ವತವನ್ನು ಹೇಗೋ ಹಾಗೆ ಕರ್ಣನ ಶರೀರದ ಒಳಹೊಕ್ಕವು. ಧನಂಜಯನು ಗಾಂಡೀವದಿಂದ ಪ್ರಯೋಗಿಸಿದ ಭುಜಂಗಗಳಂತಿದ್ದ ಆ ಬಾಣಗಳಿಂದ ಸೂತಪುತ್ರನು ಭೀಮಸೇನನಿಂದ ದೂರಸರಿಯುವಂತೆ ಮಾಡಿದನು. ಮೊದಲು ಭೀಮನಿಂದ ಧನುಸ್ಸನ್ನು ಕಳೆದುಕೊಂಡಿದ್ದ ಮತ್ತು ಈಗ ಧನಂಜಯನ ಶರಗಳಿಂದ ಪೀಡಿತನಾದ ಕರ್ಣನು ತನ್ನ

ಮಹಾರಥದಲ್ಲಿ ಕುಳಿತು ಭೀಮನಿರುವಲ್ಲಿಂದ ದೂರ ಹೊರಟುಹೋದನು. ನರರ್ಷಭ ಭೀಮನೂ ಕೂಡ ಸಾತ್ಯಕಿಯ ರಥವನ್ನೇರಿ ತಮ್ಮ ಸವ್ಯಸಾಚಿಯನ್ನು ರಣದಲ್ಲಿ ಅನುಸರಿಸಿಹೋದನು. ಆಗ ಕ್ರೋಧದಿಂದ ಕಣ್ಣುಗಳು ಕೆಂಪಾಗಿದ್ದ ಧನಂಜಯನು ತ್ವರೆಮಾಡಿ ಕರ್ಣನನ್ನು ಗುರಿಯಿಟ್ಟು ಅಂತಕ ಮೃತ್ಯುವಿನಂತಿರುವ ನಾರಾಚವನ್ನು ಪ್ರಯೋಗಿಸಿದನು. ಆಕಾಶದಲ್ಲಿ ಗರುಡವು ಸರ್ಪವನ್ನು ಹುಡುಕಿಕೊಂಡು ಹೋಗುವಂತೆ ಗಾಂಡೀವದಿಂದ ಬಿಡಲ್ಪಟ್ಟ ಆ ನಾರಾಚವು ವೇಗವಾಗಿ ಕರ್ಣನನ್ನು ಹುಡುಕಿಕೊಂಡು ಹೋಯಿತು. ಅಂತರಿಕ್ಷದಲ್ಲಿ ಹೋಗುತ್ತಿದ್ದ ಆ ನಾರಾಚವನ್ನು ಮಹಾರಥ ದ್ರೌಣಿಯು ಧನಂಜಯನ ಭಯದಿಂದ ಕರ್ಣನನ್ನು ಉಳಿಸಲು ಬಯಸಿ ಪತ್ರಿಯಿಂದ ತುಂಡರಿಸಿದನು. ಆಗ ಕುಪಿತನಾದ ಅರ್ಜುನನು ಅರವತ್ನಾಲ್ಕು ಶಿಲೀಮುಖಗಳಿಂದ ದ್ರೌಣಿಯನ್ನು ಹೊಡೆದು "ಹೋಗಬೇಡ! ನಿಲ್ಲು!" ಎಂದು ಹೇಳಿದನು. ಧನಂಜಯ ಶರಗಳಿಂದ ಪೀಡಿತನಾದ ದ್ರೌಣಿಯಾದರೋ ಮತ್ತಗಜಗಳಿಂದಲೂ ರಥಸಂಕುಲಗಳಿಂದ ಸೇನೆಯಲ್ಲಿ ನುಸುಳಿಕೊಂಡನು. ಆಗ ರಣದಲ್ಲಿ ಸುವರ್ಣದ ಹಿಡಿಗಳುಳ್ಳ ಧನುಸ್ಸುಗಳ ಟೇಂಕಾರ ಶಬ್ಧವನ್ನು ತನ್ನ ಗಾಂಡೀವ ಘೋಷದಿಂದ ಬಲಶಾಲಿ ಕೌಂತೇಯನು ಮೀರಿಸಿದನು. ಹಾಗೆ ಧನಂಜಯನು ಶರಗಳಿಂದ ಸೇನೆಗಳನ್ನು ಪೀಡಿಸುತ್ತಾ ಸ್ವಲ್ಪದೂರದವರೆಗೆ

ಹೋಗುತ್ತಿದ್ದ ದ್ರೌಣಿಯನ್ನು ಹಿಂಬಾಲಿಸಿದನು. ನಾರಾಚಗಳಿಂದ ಮನುಷ್ಯರು, ಕುದುರೆಗಳು ಮತ್ತು ಆನೆಗಳ ದೇಹಗಳನ್ನು ಸೀಳುತ್ತಾ ಅರ್ಜುನನು ಕಂಕಬರ್ಹಿಣಗಳಿಂದ ಸೇನೆಯನ್ನು ಮರ್ದಿಸಿದನು. ಕುದುರೆ-ಆನೆ-ಮನುಷ್ಯರೊಂದಿಗೆ ಆ ಬಲವನ್ನು ಪಾಕಶಾಸನಿ ಪಾರ್ಥ ಅರ್ಜುನನು ಪ್ರಯತ್ನಿಸಿ ಧ್ವಂಸಮಾಡಿದನು.

## ಸಾತ್ಯಕಿಯಿಂದ ಅಲಂಬುಸನ ವಧೆ

ಹಾಗೆ ವೈಕರ್ತನನಿಂದ ಪೀಡಿತನಾಗಿ ನರವೀರರ ಮಧ್ಯೆ ಹೋಗುತ್ತಿರುವ ಪುರುಷಪ್ರವೀರ ಭೀಮನನ್ನು ನೋಡಿ ಶಿನಿಪ್ರವೀರನು ಅವನನ್ನು ರಥದಲ್ಲಿ ಹಿಂಬಾಲಿಸಿದನು. ಬೇಸಗೆಯ ಅಂತ್ಯದಲ್ಲಿ ವಜ್ರಧರನು ಹೇಗೆ ಗುಡುಗುವನೋ, ಮಳೆಗಾಲದ ಅಂತ್ಯದಲ್ಲಿ ಸೂರ್ಯನು ಹೇಗೆ ಸುಡುವನೋ ಹಾಗೆ ದೃಢವಾದ ಧನುಸ್ಸಿನಿಂದ ಶತ್ರುಗಳನ್ನು ವಧಿಸುತ್ತಾ ಅವನು ದುರ್ಯೋಧನನ ಸೇನೆಯನ್ನು ನಡುಗಿಸಿದನು. ಬೆಳ್ಳಿಯ ಪ್ರಕಾಶದ ಕುದುರೆಗಳೊಂದಿಗೆ ಗರ್ಜಿಸುತ್ತಾ ಬರುತ್ತಿದ್ದ, ರಣದಲ್ಲಿ ಸಂಚರಿಸುತ್ತಿದ್ದ ನರವೀರ ಮಾಧವಾಗ್ರನನ್ನು ಕೌರವರ ಕಡೆಯ ಎಲ್ಲ ರಥರಿಗೂ ತಡೆಯಲು ಸಾದ್ಯವಾಗಲಿಲ್ಲ. ಆಗ ರಾಜವರ, ಧನುಸ್ಸನ್ನು ಹಿಡಿದ, ಕಾಂಚನದ ಕವಚವನ್ನು ಧರಿಸಿದ್ದ ಅಲಂಬುಸನು ಸಾತ್ಯಕಿಯನ್ನು ಎದುರಿಸಿ ತಡೆದನು. ಅವರಿಬ್ಬರ ನಡುವೆ

ಹಿಂದೆಂದೂ ನಡೆಯದ ಪ್ರಹಾರಗಳು ನಡೆದವು. ಈ ಇಬ್ಬರು ಆಹವಶೋಭರನ್ನು ಕೌರವರು ಮತ್ತು ಪಾಂಡವರು ನೋಡುತ್ತಿದ್ದರು. ರಾಜವರ ಅಲಂಬುಸನು ಜೋರಾಗಿ ನಕ್ಕು ಅವನನ್ನು ಹತ್ತು ಪೃಷತ್ಕರಗಳಿಂದ ಹೊಡೆದನು. ಆದರೆ ಶಿನಿಪುಂಗವನು ಆ ಪೃಷತ್ಕಗಳನ್ನು ಬಂದು ತಲುಪುವುದರೊಳಗೇಬಾಣಗಳಿಂದ ತುಂಡರಿಸಿದನು. ಪುನಃ ಅವನು ಅಗ್ನಿಯಂತಿರುವ ಪುಂಖಗಳಿರುವ ಮೂರು ನಿಶಿತ ಬಾಣಗಳನ್ನು ಆಕರ್ಣಪೂರ್ಣವಾಗಿ ಎಳೆದು ಹೊಡೆಯಲು ಅವು ಸಾತ್ಯಕಿಯ ಕವಚವನ್ನು ಸೀಳಿ ಶರೀರವನ್ನು ಪ್ರವೇಶಿಸಿದವು. ಅನಿಲ-ಅಗ್ನಿಯರ ಪ್ರಭಾವವುಳ್ಳ ಆ ಬಾಣಗಳಿಂದ ಅವನ ದೇಹವನ್ನು ಸೀಳಿ, ಅಲಂಬುಸನು ಉರಿಯುತ್ತಿರುವ ಬಾಣಗಳಿಂದ ಬೆಳ್ಳಿಯ ಪ್ರಕಾಶವುಳ್ಳ ಅವನ ನಾಲ್ಕು ಕುದುರೆಗಳನ್ನೂ ಹೊಡೆದು ಜೋರಾಗಿ ನಕ್ಕನು. ಹಾಗೆ ಅವನಿಂದ ಹೊಡೆಯಲ್ಪಟ್ಟ ಚಕ್ರಧರ ಕೃಷ್ಣನ ಪ್ರಭಾವವುಳ್ಳ ತರಸ್ವೀ ಶಿನಿಯು ಉತ್ತಮ ವೇಗವುಳ್ಳ ಬಾಣಗಳಿಂದ ಅಲಂಬುಸನ ನಾಲ್ಕು ಕುದುರೆಗಳನ್ನು ಸಂಹರಿಸಿದನು. ಆಗ ಅವನ ಸೂತನ ಶಿರವನ್ನು ಕತ್ತರಿಸಿ, ಕಾಲಾಗ್ನಿಯಂತೆ ಬೆಳಗುತ್ತಿದ್ದ ಭಲ್ಲದಿಂದ ಕುಂಡಲಸಹಿತವಾಗಿದ್ದ, ಪೂರ್ಣಚಂದ್ರನಂತೆ ಪ್ರಕಾಶಿಸುತ್ತಿ, ಎಲ್ಲೆಡೆ ಹೊಳೆಯುತ್ತಿದ್ದ ಅವನ ಮುಖವನ್ನು ದೇಹದಿಂದ ಕತ್ತರಿಸಿದನು.

ರಣದಲ್ಲಿ ಆ ರಾಜಪುತ್ರಪೌತ್ರನನ್ನು ಸಂಹರಿಸಿ ಮಧುಗಳ ಋಷಭ ಪ್ರಮಾಥಿ ವೀರನು ಕೌರವ ಸೇನೆಗಳನ್ನು ಹಿಂದೆಸರಿಸಿ ಅರ್ಜುನನ ಬಳಿ ಹೋದನು. ಮುಂದೆಹೋಗುತ್ತಿರುವ ಆ ವೃಷ್ಣಿವರನು ಶತ್ರುಗಳ ಮಧ್ಯೆ ಹೋಗುವಾಗ ಪುನಃ ಪುನಃ ಭಿರುಗಾಳಿಯು ಮೋಡಗಳ ರಾಶಿಯನ್ನು ಚದುರಿಬಿಡುವಂತೆ ಬಾಣಗಳಿಂದ ಕುರುಗಳ ಸೇನೆಯನ್ನು ಸಂಹರಿಸುತ್ತಿದ್ದನು. ಆ ನರಸಿಂಹನು ಎಲ್ಲೆಲ್ಲಿ ಹೋಗಲು ಬಯಸುತ್ತಿದ್ದನೋ ಅಲ್ಲಲ್ಲಿಗೆ ಸಿಂಧುದೇಶದ, ಸಾಧು, ತಾಳ್ಮೆಯುಳ್ಳ, ಗೋವಿನ ಹಾಲು-ಕುಂದ-ಚಂದ್ರ-ಹಿಮಗಳ ಪ್ರಕಾಶವುಳ್ಳ, ಸುವರ್ಣಜಾಲೆಗಳಿಂದ ಅಲಂಕೃತಗೊಂಡ ಅವನ ಕುದುರೆಗಳು ಕೊಂಡೊಯ್ಯುತ್ತಿದ್ದವು. ಆಗ ದುಃಶಾಸನನ್ನು ಯೋಧಮುಖ್ಯನನ್ನಾಗಿ ಮಾಡಿಕೊಂಡು ಧೃತರಾಷ್ಟ್ರನ ಮಕ್ಕಳು ಮತ್ತು ಅನ್ಯ ಯೋಧರು ತ್ವರೆಮಾಡಿ ಅವನನ್ನು ಮುತ್ತಿದರು. ಅವರು ಶೈನೇಯನನ್ನು ಎಲ್ಲ ಕಡೆಗಳಿಂದ ಸುತ್ತುವರೆದು ರಣದಲ್ಲಿ ಸೇನೆಗಳ ಸಹಾಯದಿಂದ ಆಕ್ರಮಣಿಸಿದರು. ಸಾತ್ವತರ ಪ್ರವರ ಆ ವೀರನೂ ಕೂಡ ಬಾಣಜಾಲಗಳಿಂದ ಅವರನ್ನು ತಡೆದನು. ಆ ಅಮಿತ್ರಘಾತಿ ಶೈನಿಯು ತಕ್ಷಣವೇ ಅಗ್ನಿಕಲ್ಪ ಪತ್ರಿಯಿಂದ ಅವರನ್ನು ತಡೆದು ಬಿಲ್ಲನ್ನು ಎತ್ತಿ ದುಃಶಾಸನನ ಕುದುರೆಗಳನ್ನು ಸಂಹರಿಸಿದನು.

## ಅರ್ಜುನನು ಸಾತ್ಯಕಿಯನ್ನು ನೋಡಿದುದು

ದುಃಶಾಸನನ ರಥದ ಮೇಲೆ ಆಕ್ರಮಣಿಸಲು ಸಿದ್ಧನಾಗಿದ್ದ, ಸೇನಾಸಮುದ್ರವನ್ನು ಧೈರ್ಯದಿಂದ ಪ್ರವೇಸಿದ, ಅವಸರದಲ್ಲಿದ್ದವರಲ್ಲಿಯೇ ಹೆಚ್ಚು ತ್ವರೆಮಾಡುತ್ತಿದ್ದ, ಧನಂಜಯನ ಹಿತೈಷಿಯಾದ ಆ ಮಹಾಬಾಹುವನ್ನು ಸುವರ್ಣವಿಕೃತ ಧ್ವಜರಾದ ಮಹೇಷ್ವಾಸ ತ್ರಿಗರ್ತರು ಸುತ್ತುವರೆದರು. ಕ್ರುದ್ಧರಾದ ಆ ಪರಮಧನ್ವಿಗಳು ರಥಗುಂಪುಗಳಿಂದ ಅವನನ್ನು ಎಲ್ಲಕಡೆಗಳಿಂದ ಸುತ್ತುವರೆದು ಶರವ್ರಾತಗಳಿಂದ ಮುಚ್ಚಿ ತಡೆದರು. ಮಹಾರಣದಲ್ಲಿ ಪ್ರಯತ್ನಿಸುತ್ತಿದ್ದ ಆ ಐನೂರು ಶತ್ರು ರಾಜಪುತ್ರರನ್ನು ಸತ್ಯವಿಕ್ರಮಿ ಸಾತ್ಯಕಿಯೊಬ್ಬನೇ ಸೋಲಿಸಿದನು. ಚಪ್ಪಾಳೆಯ ಘೋಷಗಳಿಂದ ತುಂಬಿಹೋಗಿದ್ದ, ಖಡ್ಗ-ಶಕ್ತಿ-ಗದೆಗಳಿಂದ ತುಂಬಿಹೋಗಿದ್ದ, ನೌಕೆಯೇ ಇಲ್ಲದ ಸಮುದ್ರದಂತಿದ್ದ ಭಾರತೀ ಸೇನೆಯ ಮಧ್ಯದಲ್ಲಿ ಪ್ರವೇಶಿಸಿದ ಶೈನೇಯನು ರಣದಲ್ಲಿ ನಡೆಸಿದ ಅದ್ಭುತವು ಕಂಡುಬಂದಿತು. ಅವನ ಲಾಘವವು ಎಷ್ಟಿತ್ತೆಂದರೆ ಪಶ್ಚಿಮದಲ್ಲಿ ಅವನನ್ನು ನೋಡಿದರೆ ಪೂರ್ವದಲ್ಲಿಯೂ ಅವನು ಕಾಣುತ್ತಿದ್ದನು. ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಗಳಲ್ಲಿ ಮತ್ತು ಇತರ ದಿಕ್ಕುಗಳಲ್ಲಿ ನೂರು ರಥಗಳೂ ಒಂದರಲ್ಲಿಯೇ ಇವೆಯೋ ಎನ್ನುವಂತೆ ಆ ಶೂರನು ಸಂಚರಿಸಿ ಕಾಣಿಸಿಕೊಳ್ಳುತ್ತಿದ್ದನು. ಸಿಂಹದಂತೆ ನಡೆಯುತ್ತಿದ್ದ ಆ ವಿಕ್ರಾಂತನ

ಚರಿತವನ್ನು ನೋಡಿ ಸಂತಪ್ತರಾದ ತ್ರಿಗರ್ತರು ತಮ್ಮವರ ಕಡೆ ಪಲಾಯನಮಾಡಿದರು. ಆಗ ಶೂರಸೇನರ ಇತರ ಶೂರರು ರಣದಲ್ಲಿ ಮದಿಸಿದ ಆನೆಯನ್ನು ಅಂಕುಶಗಳಿಂದ ಹೇಗೋ ಹಾಗೆ ಅವನನ್ನು ಶರವ್ರಾತಗಳಿಂದ ತಡೆದರು. ಮುಹೂರ್ತದಲ್ಲಿಯೇ ಅವರನ್ನು ಹಿಂದೆಸರಿಸಿ ಅಚಿಂತ್ಯಬಲವಿಕ್ರಮಿ ಸಾತ್ಯಕಿಯು ಕಲಿಂಗರೊಂದಿಗೆ ಯುದ್ಧಮಾಡಿದನು.

ಸೋಲಿಸಲು ಕಷ್ಟವಾದ ಕಲಿಂಗರ ಆ ಸೇನೆಯನ್ನೂ ಅತಿಕ್ರಮಿಸಿ ಆ ಮಹಾಬಾಹುವು ಪಾರ್ಥ ಧನಂಜಯನ ಬಳಿ ಬಂದನು. ನೀರಿನಲ್ಲಿ ಈಜಿ ಬಳಲಿದ ಈಜುಗಾರನು ದಡವನ್ನು ಸೇರಿದವನಂತೆ ಆ ಪುರುಷವ್ಯಾಘ್ರನನ್ನು ಕಂಡು ಯುಯುಧಾನನು ಆಶ್ವಾಸಿತನಾದನು. ಬರುತ್ತಿರುವ ಅವನನ್ನು ನೋಡಿ ಕೇಶವನು ಅರ್ಜುನನಿಗೆ ಹೇಳಿದನು:

> “ಪಾರ್ಥ! ಇಗೋ ನಿನ್ನನ್ನೇ ಅನುಸರಿಸಿ ಶೈನೇಯನು ಇಲ್ಲಿಗೆ ಬಂದಿದ್ದಾನೆ. ಇವನು ನಿನ್ನ ಶಿಷ್ಯ. ಸಖನೂ ಕೂಡ. ಈ ಸತ್ಯಪರಾಕ್ರಮೀ ಪುರುಷರ್ಷಭನು ಸರ್ವಯೋಧರನ್ನೂ ತೃಣೀಕರಿಸಿ ಜಯಿಸಿದ್ದಾನೆ. ನಿನ್ನ ಪ್ರಾಣಗಳಿಗಿಂತಲೂ ಹೆಚ್ಚು ಪ್ರಿಯ ಸಾತ್ಯಕಿಯು ಕೌರವಯೋಧರಿಗೆ ಘೋರವಾದ ಉಪದ್ರವವನ್ನು ನೀಡಿ ಇಲ್ಲಿಗೆ ಬಂದಿದ್ದಾನೆ. ಇಗೋ!

ಸಾತ್ಯಕಿಯು ದ್ರೋಣ ಮತ್ತು ಭೋಜ ಕೃತವರ್ಮನನ್ನೂ ವಿಶಿಖಗಳಿಂದ ಅಲ್ಲಗಾಣಿಸಿ ಫಲ್ಗುನನ ಬಳಿಗೆಂದು ಬಂದಿದ್ದಾನೆ. ಧರ್ಮರಾಜನಿಗೆ ಪ್ರಿಯವಾದುದನ್ನು ಮಾಡಬಯಸಿ, ಶ್ರೇಷ್ಠರಲ್ಲಿ ಶ್ರೇಷ್ಠ ಯೋಧರನ್ನು ಸಂಹರಿಸಿ ಕೃತಾಸ್ತ್ರ ಸಾತ್ಯಕಿಯು ಫಲ್ಗುನನ ಬಳಿಗೆಂದು ಬಂದಿದ್ದಾನೆ. ಸೇನೆಯ ಮಧ್ಯದಲ್ಲಿ ಸುದುಷ್ಕರ ಕರ್ಮಗಳನ್ನು ಮಾಡಿ ನಿನ್ನ ದರ್ಶನವನ್ನು ಬಯಸಿ ಮಹಾಬಲ ಸಾತ್ಯಕಿಯು ಬಂದಿದ್ದಾನೆ. ಏಕರಥನಾಗಿ ಆಚಾರ್ಯನೇ ಮೊದಲಾದ ಮಹಾರಥರೊಡನೆ ಯುದ್ಧಮಾಡಿ ಸಾತ್ಯಕಿಯು ಇಲ್ಲಿಗೆ ಬಂದಿದ್ದಾನೆ. ಧರ್ಮಪುತ್ರನಿಂದ ಕಳುಹಿಸಲ್ಪಟ್ಟ ಸಾತ್ಯಕಿಯು ಸ್ವಬಾಹುಬಲವನ್ನೇ ಆಶ್ರಯಿಸಿ ಸೇನೆಯನ್ನು ಭೇದಿಸಿ ನಿನ್ನ ಬಳಿ ಬಂದಿದ್ದಾನೆ. ಇಲ್ಲಿಗೆ ಬಂದ ಸತ್ಯವಿಕ್ರಮಿ ಸಾತ್ಯಕಿಯ ಸಮನಾದ ಯೋಧನು ಕೌರವರಲ್ಲಿ ಯಾರೂ ಇಲ್ಲ. ಗೋವುಗಳ ಮಧ್ಯದಿಂದ ಬರುವ ಸಿಂಹದಂತೆ ಸಾತ್ಯಕಿಯು ಬಹಳ ಸೇನೆಗಳನ್ನು ಸಂಹರಿಸಿ ಇಲ್ಲಿಗೆ ಬಂದಿದ್ದಾನೆ. ಕಮಲಗಳಂತಿರುವ ಸಹಸ್ರಾರು ರಾಜರ ಶಿರಗಳನ್ನು ಕತ್ತರಿಸಿ ಭೂಮಿಯ ಮೇಲೆ ಚೆಲ್ಲಿ ಬೇಗನೇ ಸಾತ್ಯಕಿಯು ಇಲ್ಲಿಗೆ ಬಂದಿದ್ದಾನೆ. ಈ ಸಾತ್ಯಕಿಯು ರಣದಲ್ಲಿ ಸಹೋದರರೊಂದಿಗೆ

ದುರ್ಯೋಧನನನ್ನು ಸೋಲಿಸಿ, ಜಲಸಂಧನನ್ನೂ ಸಂಹರಿಸಿ ಬೇಗನೆ ಇಲ್ಲಿಗೆ ಬಂದಿದ್ದಾನೆ. ರಕ್ತ-ಮಾಂಸಗಳ ನದಿಯು ರಕ್ತದ ಪ್ರವಾಹದಿಂದ ಹರಿಯುವಂತೆ ಮಾಡಿ, ಕೌರವರನ್ನು ಹುಲ್ಲುಗಳಂತೆ ಮಾಡಿ ಸಾತ್ಯಕಿಯು ಬರುತ್ತಿದ್ದಾನೆ.”

ಆಗ ಅಸಂತೋಷದಿಂದ ಕೌಂತೇಯನು ಕೇಶವನಿಗೆ ಹೇಳಿದನು:

“ಮಹಾಬಾಹೋ! ಸಾತ್ಯಕಿಯು ನನ್ನ ಬಳಿ ಬಂದಿರುವುದು ನನಗೆ ಒಳ್ಳೆಯದೆನಿಸುತ್ತಿಲ್ಲ. ಸಾತ್ವತನಿಲ್ಲದೇ ಧರ್ಮರಾಜನು ಜೀವಂತವಾಗಿದ್ದಾನೋ ಅಥವಾ ಇಲ್ಲವೋ ಎಂಬ ವೃತ್ತಾಂತವನ್ನು ನಾನು ಅರಿತಿಲ್ಲ. ಇವನೇ ಪಾರ್ಥಿವನನ್ನು ರಕ್ಷಿಸಬೇಕಾಗಿತ್ತು. ಹಾಗಿರುವಾಗ ಕೃಷ್ಣ! ಅವನನ್ನು ಬಿಟ್ಟು ಇವನು ಏಕೆ ನನ್ನನ್ನು ಅನುಸರಿಸಿ ಬಂದಿದ್ದಾನೆ? ರಾಜನನ್ನು ದ್ರೋಣನಿಗಾಗಿ ಬಿಟ್ಟು ಬಿಟ್ಟಿದ್ದಾನೆ. ಸೈಂಧವನು ಪತನವಿನ್ನೂ ಆಗಿಲ್ಲ. ರಣದಲ್ಲಿ ಭೂರಿಶ್ರವನು ಶೈನೆಯನನ್ನು ಆಕ್ರಮಣಿಸಲು ಮುಂದೆ ಬರುತ್ತಿದ್ದಾನೆ. ಸೈಂಧವನ ಕುರಿತಾದ ಈ ಗುರುತರ ಭಾರವನ್ನು ಹೊತ್ತಿರುವ ನಾನು ರಾಜನ ಕುರಿತೂ ಚಿಂತಿಸಬೇಕು ಮತ್ತು ಸಾತ್ಯಕಿಯನ್ನೂ ರಕ್ಷಿಸಬೇಕಾಗಿದೆ. ದಿವಾಕರನು ಇಳಿಯುತ್ತಿದ್ದಾನೆ. ಜಯದ್ರಥನನ್ನೂ

ಕೊಲ್ಲಬೇಕಾಗಿದೆ. ಮಹಾಬಾಹು ಸಾತ್ಯಕಿಯಾದರೋ ಬಳಲಿದ್ದಾನೆ. ಆಯುಧಗಳು ಕಡಿಮೆಯಾಗಿವೆ. ಅವನ ಕುದುರೆಗಳು ಸಾರಥಿಯೂ ಬಳಲಿದ್ದಾರೆ. ಸಹಾಯವುಳ್ಳ ಭೂರಿಶ್ರವನು ಬಳಲಿಲ್ಲ. ಈ ಸಮಾಗಮದಲ್ಲಿ ಅವನು ಸುರಕ್ಷಿತನಾಗಿರಬಲ್ಲನೇ? ಸಾಗರವನ್ನು ಈಜಿಬಂದಿರುವ ಸತ್ಯವಿಕ್ರಮಿ ಸಾತ್ಯಕಿ ಶಿನಿಪುಂಗವನು ಈಗ ಗೋವಿನ ಪಾದದ ಗುಳಿಯನ್ನು ತಲುಪಿ ಎಡವಿ ಬೀಳಬಲ್ಲನೇ? ಕೌರವ ಮುಖ್ಯ ಕೃತಾಸ್ತ್ರ ಮಹಾತ್ಮ ಭೂರಿಶ್ರವನನ್ನು ಎದುರಿಸಿ ಸಾತ್ಯಕಿಯು ಕ್ಷೇಮದಿಂದಿರಬಲ್ಲನೇ? ಆಚಾರ್ಯನ ಭಯವನ್ನು ಕಡೆಗಣಿಸಿ ಸಾತ್ಯಕಿಯನ್ನು ಕಳುಹಿಸಿರುವುದು ಧರ್ಮರಾಜನ ಒಂದು ದೊಡ್ಡ ತಪ್ಪೆಂದು ಭಾವಿಸುತ್ತೇನೆ. ಪಕ್ಷಿ ಗಿಡುಗವು ಮಾಂಸವನ್ನು ಹೇಗೋ ಹಾಗೆ ದ್ರೋಣನು ಧರ್ಮರಾಜನನ್ನು ಹಿಡಿಯಲು ಸದಾ ಬಯಸುತ್ತಿರುತ್ತಾನೆ. ನೃಪನು ಕುಶಲನಾಗಿರುವನೋ ಏನೋ!”

## ಅರ್ಜುನನು ಭೂರಿಶ್ರವನ ಬಾಹುಗಳನ್ನು ತುಂಡರಿಸಿದುದು

ಯುದ್ಧದುರ್ಮದ ಸಾತ್ವತನು ಮೇಲೆ ಬೀಳುತ್ತಿರುವುದನ್ನು ನೋಡಿದ ಭೂರಿಶ್ರವನು ಕ್ರೋಧದಿಂದ ಅವನನ್ನು ಒಮ್ಮೆಲೇ ಆಕ್ರಮಣಿಸಿದನು. ಆ

ಮಹಾಬಾಹು ಕೌರವ್ಯನು ಶಿನಿಪುಂಗವನಿಗೆ ಹೇಳಿದನು:

“ಇಂದು ನಿನ್ನನ್ನು ಪಡೆದೆ! ಒಳ್ಳೆಯದಾಯಿತು ಇಂದು ನೀನು ಕಣ್ಣಿಗೆ ಬಿದ್ದೆ! ಬಹಳ ಸಮಯದಿಂದ ಬಯಸುತ್ತಿದ್ದ ನನಗೆ ಇಂದು ದೊರಕಿದ್ದೀಯೆ! ಇಂದು ರಣವನ್ನು ಬಿಟ್ಟು ಹೋಗದೇ ಇದ್ದರೆ ನೀನು ನನ್ನಿಂದ ಜೀವಂತ ಹೋಗಲಾರೆ. ಶೂರನೆಂದು ನಿತ್ಯವೂ ಅಭಿಮಾನಿಯಾಗಿರುವ ನಿನ್ನನ್ನು ಇಂದು ಸಮರದಲ್ಲಿ ಕೊಂದು ಕುರುರಾಜ ಸುಯೋಧನನನ್ನು ಹರ್ಷಗೊಳಿಸುತ್ತೇನೆ. ಇಂದು ರಣದಲ್ಲಿ ನನ್ನ ಬಾಣಗಳಿಂದ ದಗ್ಧನಾಗಿ ಧರಣೀತಲದಲ್ಲಿ ಬಿದ್ದಿರುವ ನಿನ್ನನ್ನು ವೀರರಾದ ಕೇಶವ-ಅರ್ಜುನರು ಒಟ್ಟಿಗೇ ನೋಡಲಿದ್ದಾರೆ. ಇಂದು ನೀನು ನನ್ನಿಂದ ಹತನಾದೆಯೆಂದು ಕೇಳಿ ಸೇನೆಯನ್ನು ಪ್ರವೇಶಿಸಲು ಹೇಳಿದ ರಾಜಾ ಧರ್ಮಸುತನು ಸದ್ಯದಲ್ಲಿಯೇ ನಾಚಿಗೆಪಡುವವನಿದ್ದಾನೆ. ಇಂದು ನೀನು ರಕ್ತದಲ್ಲಿ ತೋಯ್ದು ಹತನಾಗಿ ಭೂಮಿಯಮೇಲೆ ಮಲಗಿರಲು ಪಾರ್ಥ ಧನಂಜಯನು ನನ್ನ ವಿಕ್ರಮವನ್ನು ತಿಳಿದುಕೊಳ್ಳುತ್ತಾನೆ. ಹಿಂದೆ ದೇವಾಸುರರ ಯುದ್ಧದಲ್ಲಿ ಶಕ್ರನು ಬಲಿಯೊಂದಿಗೆ ಯುದ್ಧಮಾಡಿದಂತೆ ನಿನ್ನೊಡನೆ ಯುದ್ಧಮಾಡಬೇಕೆಂಬ

ಬಹುಕಾಲದ ನನ್ನ ಅಭಿಲಾಷೆಯು ಇಂದು ಪೂರೈಸಲಿದೆ. ಸಾತ್ವತ! ಇಂದು ನಿನಗೆ ಮಹಾಘೋರವಾದ ಯುದ್ಧವನ್ನು ನೀಡುತ್ತೇನೆ. ಆಗ ನಿನಗೆ ನನ್ನ ಬಲಪೌರುಷವೇನೆಂದು ತಿಳಿಯುತ್ತದೆ. ರಾಮಾನುಜ ಲಕ್ಷ್ಮಣನಿಂದ ರಾವಣಿಯು ಹೇಗೆ ಯಮಲೋಕಕ್ಕೆ ಕಳುಹಿಸಲ್ಪಟ್ಟನೋ ಹಾಗೆ ಇಂದು ನೀನೂ ಕೂಡ ರಣದಲ್ಲಿ ನನ್ನಿಂದ ಹತನಾಗಿ ಯಮಲೋಕಕ್ಕೆ ಹೋಗುವೆ. ಇಂದು ನೀನು ಹತನಾಗಲು ಕೃಷ್ಣ, ಪಾರ್ಥ ಮತ್ತು ಧರ್ಮರಾಜರು ನಿರುತ್ಸಾಹರಾಗಿ ರಣವನ್ನು ತೊರೆಯುವುದು ಖಂಡಿತ. ನಿಶಿತ ಸಾಯಕಗಳಿಂದ ಇಂದು ನಿನಗೆ ಪೂಜೆಗೈದು ನಿನ್ನಿಂದ ರಣದಲ್ಲಿ ಹತರಾದವರ ಸ್ತ್ರೀಯರಿಗೆ ಆನಂದವನ್ನುಂಟುಮಾಡುತ್ತೇನೆ. ಸಿಂಹದ ಆಹಾರವಾಗಿ ಬಂದ ಕ್ಷುದ್ರಮೃಗವು ಹೇಗೋ ಹಾಗೆ ನನ್ನ ದೃಷ್ಟಿಯ ಪರಿಧಿಯಲ್ಲಿ ಬಂದಿರುವ ನೀನು ಬಿಡುಗಡೆ ಹೊಂದಲಾರೆ."

ಯುಯುಧಾನನಾದರೋ ಅವನಿಗೆ ನಗುತ್ತಾ ಉತ್ತರಿಸಿದನು:

"ಕೌರವೇಯ! ಯುದ್ಧದಲ್ಲಿ ನನಗೆ ಭಯವೆಂಬುದೇ ಗೊತ್ತಿಲ್ಲ. ಸಂಗ್ರಾಮದಲ್ಲಿ ಯಾರು ನನ್ನನ್ನು ನಿರಾಯುಧನನ್ನಾಗಿ ಮಾಡುತ್ತಾರೋ ಅವರೇ ನನ್ನನ್ನು ಸಂಹರಿಸಬಲ್ಲರು. ಬಹಳ

ವರ್ಷಗಳ ವರೆಗೆ ನನ್ನನ್ನು ಸಂಹರಿಸದಿದ್ದ ನೀನು ಇಂದು ಕೊಲ್ಲಲಾರೆ. ಸೊಕ್ಕಿನಿಂದ ಹೇಳಿದ ಬಹಳ ಮಾತುಗಳನ್ನು ಕರ್ಮದಲ್ಲಿ ಮಾಡಿತೋರಿಸು. ಶರದೃತುವಿನ ಮೋಡದ ಗುಡುಗಿನಂತೆ ನಿನ್ನ ಈ ಕೂಗಾಟವು ನಿಷ್ಫಲವಾದುದು. ವೀರ! ನಿನ್ನ ಈ ಗರ್ಜನೆಯನ್ನು ಕೇಳಿ ನನಗೆ ನಗು ಬರುತ್ತಿದೆ. ಬಹುಕಾಲದಿಂದ ನೀನು ಬಯಸುತ್ತಿರುವ ಈ ಯುದ್ಧವು ಇಂದು ನಡೆಯಲಿ. ನಿನ್ನೊಡನೆ ಯುದ್ಧಮಾಡಲು ಬಯಸಿದ ನನ್ನ ಮತಿಯು ತ್ವರೆಮಾಡುತ್ತಿದೆ. ನಿನ್ನನ್ನು ಕೊಲ್ಲದೇ ನಾನಿಂದು ಹಿಂದಿರುಗುವುದಿಲ್ಲ."

ಹೀಗೆ ಅನ್ಯೋನ್ಯರನ್ನು ವಾಗ್ಬಾಣಗಳಿಂದ ಗಾಯಗೊಳಿಸುತ್ತಾ ಆ ನರಪುಂಗವರು ಪರಮ ಕ್ರುದ್ಧರಾಗಿ ಪರಸ್ಪರರ ಪ್ರಾಣಗಳನ್ನು ತೆಗೆಯಲು ಬಯಸಿ ರಣರಂಗದಲ್ಲಿ ಹೋರಾಡಿದರು. ಆ ಇಬ್ಬರು ನರವ್ಯಾಘ್ರ ಯೋಧರು ರಣದಲ್ಲಿ ಸ್ಪರ್ಧಿಸುತ್ತಾ ಹೆಣ್ಣಾನೆಗೆ ಮದೋತ್ಕಟ ಸಲಗಗಳೆರಡು ಸಂಕ್ರುದ್ಧರಾಗಿ ಹೋರಾಡುವಂತೆ ಪರಸ್ಪರರ ಮೇಲೆ ಎರಗಿದರು. ಭೂರಿಶ್ರವ ಮತ್ತು ಸಾತ್ಯಕಿಯರು ಭಯಂಕರ ಮೋಡಗಳಂತೆ ಪರಸ್ಪರರ ಮೇಲೆ ಶರವರ್ಷಗಳನ್ನು ಸುರಿಸಿದರು. ಸೌಮದತ್ತಿಯಾದರೋ ಶೈನೇಯನನ್ನು ಆಶುಗಗಳಿಂದ

ಮುಚ್ಚಿ ಸಂಹರಿಸಲು ಬಯಸಿ ನಿಶಿತ ಶರಗಳಿಂದ ಹೊಡೆದನು. ಇನ್ನೂ ಬೇರೆ ಹತ್ತರಿಂದ ಸಾತ್ಯಕಿಯನ್ನು ಹೊಡೆದು, ಆ ಶಿನಿಪುಂಗವನನ್ನು ಕೊಲ್ಲಲು ನಿಶಿತ ಬಾಣಗಳನ್ನು ಬಿಟ್ಟನು. ಆ ತೀಕ್ಷ್ಣ ವಿಶಾಖಗಳು ಬರುವುದರೊಳಗೆ ಅಂತರಿಕ್ಷದಲ್ಲಿಯೇ ಸಾತ್ಯಕಿಯು ಅಸ್ತ್ರಗಳಿಂದ ತುಂಡರಿಸಿದನು. ಕುರು-ವೃಷ್ಣಿಯರ ಯಶಸ್ಕರರಾದ, ಉತ್ತಮ ಕುಲದಲ್ಲಿ ಜನಿಸಿದವರೂ ಆದ ಆ ವೀರರಿಬ್ಬರೂ ಮತ್ತೆ ಪರಸ್ಪರರ ಮೇಲೆ ಶರವರ್ಷಗಳನ್ನು ಸುರಿಸಿದರು. ಎರಡು ಹುಲಿಗಳು ತಮ್ಮ ಉಗುರುಗಳಿಂದ ಮತ್ತು ಮಹಾಗಜಗಳು ತಮ್ಮ ದಂತಗಳಿಂದ ಹೇಗೋ ಹಾಗೆ ಅವರಿಬ್ಬರೂ ರಥಶಕ್ತಿಗಳಿಂದ ಮತ್ತು ವಿಶಿಖಗಳಿಂದ ಅನ್ಯೋನ್ಯರನ್ನು ಗಾಯಗೊಳಿಸಿದರು. ದೇಹಗಳನ್ನು ಜರ್ಝರಿಸುತ್ತಾ, ಗಾಯಗಳಿಂದ ರಕ್ತವನ್ನು ಸುರಿಸುತ್ತಾ ಅವರಿಬ್ಬರೂ ಅನ್ಯೋನ್ಯರ ಪ್ರಾಣಗಳನ್ನು ಪಣವಾಗಿಟ್ಟು ಜೂಜಾಡುತ್ತಿದ್ದರು.

ಹೀಗೆ ಆ ಇಬ್ಬರು ಉತ್ತಮಕರ್ಮಿ ಕುರು-ವೃಷ್ಣಿ ಯಶಸ್ಕರರು ಪರಸ್ಪರರೊಂದಿಗೆ ಆನೆಗಳ ಹಿಂಡಿನ ಸಲಗಗಳಂತೆ ಹೋರಾಡಿದರು. ಪರಮ ಸ್ಥಾನವಾದ ಬ್ರಹ್ಮಲೋಕವನ್ನೇ ಬಯಸಿದ್ದ ಅವರು ಅನ್ಯೋನ್ಯರನ್ನು ಕೊಲ್ಲಲು ಬಯಸಿ ಬಹಳ ಕಾಲ ಯುದ್ಧಮಾಡುತ್ತಿದ್ದರು. ಸಾತ್ಯಕಿ ಸೌಮದತ್ತಿಯರು ಪರಸ್ಪರರನ್ನು ಶರವೃಷ್ಟಿಗಳಿಂದ ಸುರಿಸಿ

ಮುಚ್ಚಿಸಿ ನೋಡುತ್ತಿರುವ ಧಾರ್ತರಾಷ್ಟ್ರರ ಸಂತೋಷವನ್ನು ಹೆಚ್ಚಿಸಿದರು. ಹೆಣ್ಣಾನೆಯ ಸಲುವಾಗಿ ಗುಂಪುಗಳ ಒಡೆತನವನ್ನು ಹೊಂದಿರುವ ಎರಡು ಸಲಗಗಳು ಸೆಣೆಸಾಡುವಂತೆ ಪರಸ್ಪರರೊಡನೆ ಸೆಣಸಾಡುತ್ತಿದ್ದ ಸೇನಾಪತಿಗಳನ್ನು ನೋಡುತ್ತಾ ನಿಂತುಬಿಟ್ಟರು. ಪರಸ್ಪರರ ಕುದುರೆಗಳನ್ನು ಸಂಹರಿಸಿ ಧನುಸ್ಸನ್ನು ಕತ್ತರಿಸಿ ಅವರು ವಿರಥರನ್ನಾಗಿಸಿ ಮಹಾರಣದಲ್ಲಿ ಒಟ್ಟಿಗೆ ಹೋರಾಡಿದನು. ಎತ್ತಿನ ಚರ್ಮದಿಂದ ಮಾಡಿದ ಚಿತ್ರಿತವಾದ ವಿಶಾಲವಾದ ಶುಭವಾದ ಗುರಾಣಿಯನ್ನು ಇಬ್ಬರೂ ಹಿಡಿದು ಕತ್ತಿಯನ್ನು ಒರೆಯಿಂದ ತೆಗೆದು ಸಮರದಲ್ಲಿ ಸಂಚರಿಸತೊಡಗಿದರು. ಖಡ್ಗಗಳನ್ನೂ, ಬಣ್ಣದ ಗುರಾಣಿಗಳನ್ನು ಹಿಡಿದು ಬಂಗಾರದ ಅಂಗದಗಳಿಂದ ಭೂಷಿತರಾದ ರಣೋತ್ಕಟರಾದ ಆ ಅರಿಮರ್ದನರಿಬ್ಬರೂ ವಿವಿಧ ಮಾರ್ಗಗಳಲ್ಲಿ, ಮಂಡಲಗಳಲ್ಲಿ ಸಂಚರಿಸುತ್ತಾ ಅನ್ಯೋನ್ಯರನ್ನು ಪ್ರಹರಿಸಿದರು. ಪರಸ್ಪರರೊಡನೆ ಸೆಣೆಸಾಡಿ, ಒಂದು ಕ್ಷಣ ವಿಶ್ರಾಂತಿ ಪಡೆದು ಸರ್ವ ಸೇನೆಗಳು ನೋಡುತ್ತಿದ್ದಂತೆ ಆ ವೀರರು ಪುನಃ ಹೋರಾಡ ತೊಡಗಿದರು. ಆ ಪುರುಷವ್ಯಾಘ್ರರು ಖಡ್ಗಗಳಿಂದ ಗುರಾಣಿಗಳನ್ನು ಕತ್ತರಿಸಿ ವಿಶಾಲ ಖಡ್ಗಗಳನ್ನು ಎಸೆದು ಆ ಪುರುಷವ್ಯಾಘ್ರರು ಬಾಹು ಯುದ್ಧದಲ್ಲಿ ತೊಡಗಿದರು.

ವಿಶಾಲ ಎದೆಯ, ನೀಳವಾದ ಭುಜಗಳ, ಬಾಹುಯುದ್ಧಕುಶಲರಾದ ಅವರಿಬ್ಬರೂ ಕಬ್ಬಿಣದ ಪರಿಘಗಳಂತಿರುವ ಬಾಹುಗಳಿಂದ ಪರಸ್ಪರರನ್ನು ಪ್ರಹರಿಸಿದರು. ಶಿಕ್ಷಾಬಲದಿಂದ ಕೂಡಿದ ಅವರ ಭುಜಾಘಾತ, ನಿಗ್ರಹ-ಪ್ರಗ್ರಹಗಳು ಸರ್ವಯೋಧರಿಗೂ ಹರ್ಷವನ್ನುಂಟುಮಾಡುತ್ತಿದ್ದವು. ಆ ನರಶ್ರೇಷ್ಠರು ಸಮರದಲ್ಲಿ ಯುದ್ಧಮಾಡುತ್ತಿರುವಾಗ ವಜ್ರಾಯುಧಕ್ಕೂ ಪರ್ವತಕ್ಕೂ ತಾಗುವ ಹಾಗೆ ಮಹಾ ಭಯಂಕರ ಶಬ್ಧವುಂಟಾಯಿತು. ಆನೆಗಳು ದಂತಗಳ ತುದಿಯಿಂದ, ಮಹಾ ಹೋರಿಗಳು ಕೋಡಿನ ತುದಿಯಿಂದ ಹೇಗೋ ಹಾಗೆ ಆ ಕುರು-ಸಾತ್ವತ ಪುಂಗವ ಮಹಾತ್ಮರು ಸೆಣಸಾಡಿದರು. ಸಾತ್ವತನು ಆಯುಧಗಳನ್ನು ಕಳೆದುಕೊಂಡು ಯುದ್ಧಮಾಡುತ್ತಿರಲು ವಾಸುದೇವನು ಅರ್ಜುನನಿಗೆ ಹೇಳಿದನು:

> “ಸರ್ವಧನುರ್ಧರರಲ್ಲಿ ಶ್ರೇಷ್ಠನಾದವನು ರಣದಲ್ಲಿ ವಿರಥನಾಗಿ ಯುದ್ಧಮಾಡುತ್ತಿರುವುದನ್ನು ನೋಡು! ನಿನ್ನ ಹಿಂದೆಯೇ ಭಾರತೀ ಸೇನೆಯನ್ನು ಪ್ರವೇಶಿಸಿ ಇವನು ಮಹಾವೀರ್ಯದಿಂದ ಎಲ್ಲ ಭಾರತರೊಂದಿಗೆ ಯುದ್ಧಮಾಡುತ್ತಿದ್ದಾನೆ. ಆಯಾಸಗೊಂಡಿರುವ ಯೋಧಶ್ರೇಷ್ಠನನ್ನು ಯುದ್ಧಾಕಾಂಕ್ಷಿಯಾದ ಭೂರಿದಕ್ಷಿಣನು

ತಡೆದಿರುವನು. ಅರ್ಜುನ! ಇದು ಸಮಾನರ ಯುದ್ಧವಲ್ಲ!”

ಆಗ ಭೂರಿಶ್ರವನು ಕ್ರುದ್ಧನಾಗಿ ಯುದ್ಧದುರ್ಮದ ಸಾತ್ಯಕಿಯನ್ನು ಮದಿಸಿದ ಆನೆಯು ಇನ್ನೊಂದು ಮದಿಸಿದ ಆನೆಯನ್ನು ಹೇಗೋ ಹಾಗೆ ಪ್ರಯತ್ನಪೂರ್ವಕವಾಗಿ ಪ್ರಹರಿಸಿದನು. ಕ್ರುದ್ಧರಾದ ಆ ಯೋಧಮುಖ್ಯರ ಯುದ್ಧವನ್ನು ಸಮರದಲ್ಲಿ ರಥಸ್ಥರಾಗಿ ಕೇಶವಾರ್ಜುನರು ನೋಡುತ್ತಿದ್ದರು. ಆಗ ಮಹಾಬಾಹು ಕೃಷ್ಣನು ಅರ್ಜುನನಿಗೆ ಪುನಃ ಹೇಳಿದನು:

“ವೃಷ್ಣಿ-ಅಂಧಕರ ವ್ಯಾಘ್ರನು ಸೌಮದತ್ತಿಯ ವಶನಾಗಿರುವುದನ್ನು ನೋಡು! ದುಷ್ಕರವಾದ ಕರ್ಮಗಳನ್ನು ಮಾಡಿ ಬಳಲಿ ಭೂಮಿಗೆ ಕುಸಿದಿರುವ ನಿನ್ನ ಶೂರ ಶಿಷ್ಯ ಸಾತ್ಯಕಿಯನ್ನು ಪಾಲಿಸು ಅರ್ಜುನ! ನಿನಗಾಗಿ ಹೋರಾಡುತ್ತಿರುವ ಇವನು ಯಜ್ಞಶೀಲನ ವಶನಾಗದಂತೆ ಪ್ರಯತ್ನಿಸು!”

ಆಗ ಸಂತೋಷದಿಂದ ಧನಂಜಯನು ವಾಸುದೇವನಿಗೆ ಹೇಳಿದನು:

“ಸಿಂಹರಾಜನು ವನದಲ್ಲಿ ಗಜರಾಜನೊಂದಿಗೆ ಸೆಣಸಾಡುವಂತೆ ವೃಷ್ಣಿಪ್ರವೀರನೊಡನೆ ಆಟವಾಡುತ್ತಿರುವ

ಕುರುಪುಂಗವನನ್ನು ನೋಡು !”

ಆ ಮಹಾಬಾಹು ಭೂರಿಶ್ರವನು ಸಾತ್ಯಕಿಯನ್ನು ಕುಕ್ಕಿ ನೆಲಕ್ಕೆ ಕೆಡವಲು ಸೇನೆಗಳಲ್ಲಿ ಮಹಾ ಹಾಹಾಕಾರವುಂಟಾಯಿತು. ಕುರುಶ್ರೇಷ್ಠ ಭೂರಿದಕ್ಷಿಣನು ಸಿಂಹವೊಂದು ಆನೆಯನ್ನು ಹೇಗೋ ಹಾಗೆ ಯುದ್ಧದಲ್ಲಿ ಸಾತ್ವತಪ್ರವರನನ್ನು ಗಿರಗಿರನೆ ತಿರುಗಿಸಿದನು. ಆಗ ರಣದಲ್ಲಿ ಭೂರಿಶ್ರವನು ಒರೆಯಿಂದ ಖಡ್ಗವನ್ನು ಎಳೆದು ತೆಗೆದು, ಅವನ ಮುಡಿಯನ್ನು ಹಿಡಿದು ಕಾಲಿನಿಂದ ಎದೆಗೆ ಒದೆದನು. ಹಾಗೆ ಎಳೆದಾಡಲ್ಪಡುತ್ತಿದ್ದ ಸಾತ್ವತನನ್ನು ನೋಡಿ ವಾಸುದೇವನು ಇನ್ನೊಮ್ಮೆ ಅರ್ಜುನನಿಗೆ ಹೇಳಿದನು:

“ಮಹಾಬಾಹೋ ! ವೃಷ್ಣಿ-ಅಂಧಕರ ವ್ಯಾಘ್ರ, ಧನುರ್ವಿದ್ಯೆಯಲ್ಲಿ ನಿನಗಿಂಥ ಕಡಿಮೆಯಿಲ್ಲದ ನಿನ್ನ ಶಿಷ್ಯನು ಸೌಮದತ್ತಿಯ ವಶನಾಗಿರುವುದನ್ನು ನೋಡು ! ಪಾರ್ಥ ! ರಣದಲ್ಲಿ ಭೂರಿಶ್ರವನು ವಾರ್ಷ್ಣೇಯ ಸತ್ಯವಿಕ್ರಮ ಸಾತ್ಯಕಿಯನ್ನು ಮೀರಿಸಿದನೆಂದರೆ ವಿಕ್ರಮವೆಂಬುದೇ ಅಸತ್ಯವಾಗಿಬಿಡುತ್ತದೆ.”

ರಣದಲ್ಲಿ ಮಹಾಬಾಹು ವಾಸುದೇವನು ಹೀಗೆ ಹೇಳಲು ಪಾಂಡವನು ಮನಸ್ಸಿನಲ್ಲಿಯೇ ಭೂರಿಶ್ರವನನ್ನು ಪ್ರಶಂಸಿಸಿದನು.

“ಕುರುಗಳ ಕೀರ್ತಿವರ್ಧನನು ಸಾತ್ವತಶ್ರೇಷ್ಠನನ್ನು ಎಳೆದಾಡಿ ರಣಕ್ರೀಡೆಯಾಡುವಂತಿದ್ದಾನೆ. ಅರಣ್ಯದಲ್ಲಿ ಸಿಂಹವು ಮಹಾ ಆನೆಯೊಂದನ್ನು ಹೇಗೋ ಹಾಗೆ ಅವನು ವೃಷ್ಣಿವೀರರಲ್ಲಿ ಶ್ರೇಷ್ಠ ಸಾತ್ಯಕಿಯನ್ನು ಎಳೆದಾಡುತ್ತಿದ್ದಾನೆ. ಅವನನ್ನು ಇನ್ನೂ ಕೊಲ್ಲದೇ ನನ್ನ ಸಂತೋಷವನ್ನು ಹೆಚ್ಚಿಸುತ್ತಿದ್ದಾನೆ!”

ಹೀಗೆ ಮನಸ್ಸಿನಲ್ಲಿಯೇ ಕೌರವನನ್ನು ಗೌರವಿಸಿ ಪಾರ್ಥ ಅರ್ಜುನನು ವಾಸುದೇವನಿಗೆ ಉತ್ತರಿಸಿದನು:

“ಸೈಂಧವನಲ್ಲಿಯೇ ಆಸಕ್ತನಾಗಿ ಗುರಿಯಿಟ್ಟಿರುವ ನಾನು ಇವನನ್ನು ನೋಡಲಿಲ್ಲ ಮಾಧವ! ಇದು ಒಳ್ಳೆಯ ಕೆಲಸವಲ್ಲದಿದ್ದರೂ ನಾನು ಇದನ್ನು ಯಾದವನಿಗಾಗಿ ಮಾಡುತ್ತೇನೆ!”

ಹೀಗೆ ಹೇಳಿ ವಾಸುದೇವನ ಮಾತಿನಂತೆ ಮಾಡುತ್ತಾ ಪಾಂಡವನು ಪತ್ರಿಯಿಂದ ಖಡ್ಗವನ್ನು ಹಿಡಿದಿರುವ ಯಜ್ಞಶೀಲನ ಬಾಹುವನ್ನು ಕತ್ತರಿಸಿದನು.

## ಸಾತ್ಯಕಿಯಿಂದ ಭೂರಿಶ್ರವನ ವಧೆ

ಅಂಗದದಿಂದ ಸುಶೋಭಿತವಾಗಿದ್ದ, ಖಡ್ಗವನ್ನು ಹಿಡಿದಿದ್ದ ಅವನ

ಉತ್ತಮ ಬಾಹುವು ಜೀವಲೋಕಗಳಿಗೆ ತುಂಬಾ ದುಃಖವನ್ನು ನೀಡುತ್ತಾ ಭೂಮಿಯ ಮೇಲೆ ಬಿದ್ದಿತು. ಅದೃಶ್ಯನಾಗಿದ್ದ ಕಿರೀಟಿಯಿಂದ ಹೊಡೆಯಲ್ಪಟ್ಟು ಕತ್ತರಿಸಲ್ಪಟ್ಟ ಆ ಬಾಹುವು ಐದು ಹೆಡೆಗಳುಳ್ಳ ಸರ್ಪದಂತೆ ವೇಗದಿಂದ ಭೂಮಿಯ ಮೇಲೆ ಬಿದ್ದಿತು. ತನ್ನ ಕೆಲಸವನ್ನು ಪಾರ್ಥನು ವ್ಯರ್ಥಗೊಳಿಸಿದುದನ್ನು ನೋಡಿ ಕೌರವನು ಸಾತ್ಯಕಿಯನ್ನು ಬಿಟ್ಟು ಕ್ರೋಧದಿಂದ ಪಾಂಡವನನ್ನು ನಿಂದಿಸತೊಡಗಿದನು.

"ಕೌಂತೇಯ! ಕಾಣಿಸಿಕೊಳ್ಳದೇ, ನಿನ್ನೊಡನೇ ಯುದ್ಧಮಾಡುತ್ತಿರದ ನನ್ನ ಬಾಹುವನ್ನು ಕತ್ತರಿಸಿ ನೀನು ಈಗ ಅತ್ಯಂತ ಕ್ರೂರಕರ್ಮವನ್ನು ಮಾಡಿರುವೆ! ರಾಜ ಧರ್ಮಪುತ್ರ ಯುಧಿಷ್ಠಿರನಿಗೆ ಏನೆಂದು ಹೇಳುವೆ? ರಣದಲ್ಲಿ ನನ್ನಿಂದಾಗಿ ಭೂರಿಶ್ರವನು ಹತನಾದನು. ಏನು ಮಾಡಲಿ ಎಂದೇ? ಮಹಾತ್ಮ ಸಾಕ್ಷಾತ್ ಇಂದ್ರನು ಇದನ್ನೇ ನಿನಗೆ ಉಪದೇಶಿಸಿದ್ದನೇ? ಪಾರ್ಥ! ರುದ್ರ ಅಥವಾ ದ್ರೋಣ ಅಥವಾ ಕೃಪರು ಈ ಅಸ್ತ್ರವಿದ್ಯೆಯನ್ನೇ ನಿನಗೆ ನೀಡಿದರೇ? ನೀನು ನಿನ್ನದಾದ ಕ್ಷತ್ರಿಯಧರ್ಮವನ್ನು ಲೋಕದಲ್ಲಿ ಇತರರಿಗಿಂತ ಅಧಿಕವಾಗಿ ತಿಳಿದುಕೊಂಡಿದ್ದೀಯೆ. ರಣದಲ್ಲಿ ನಿನ್ನೊಡನೆ ಯುದ್ಧಮಾಡುತ್ತಿರದವನನ್ನು ನೀನು ಹೇಗೆ

ಪ್ರಹರಿಸಿದೆ? ಅಜಾಗರೂಕತೆಯಿಂದ ಇರುವವರನ್ನು, ಭೀತರಾದವರನ್ನು, ವಿರಥರಾದವರನ್ನು, ಯಾಚಿಸುತ್ತಿರುವವರನ್ನು, ವ್ಯಸನದಲ್ಲಿರುವವರನ್ನು ಮನಸ್ವಿಗಳು ಪ್ರಹರಿಸುವುದಿಲ್ಲ. ನೀಚರು ಆಚರಿಸುವ, ಅಸತ್ಪುರುಷರು ತಮ್ಮದಾಗಿಸಿಕೊಳ್ಳುವಂತ ಈ ಸುದುಷ್ಕರ್ಮವಾದ ಕರ್ಮವನ್ನು ನೀನು ಹೇಗೆ ಮಾಡಿಬಿಟ್ಟೆ? ಆರ್ಯರಿಗೆ ಒಳ್ಳೆಯದನ್ನು ಮಾಡುವುದು ತುಂಬಾ ಸುಲಭವೆಂದು ಹೇಳುತ್ತಾರೆ. ಅಂತೆಯೇ ಭುವಿಯಲ್ಲಿ ಆರ್ಯರಿಗೆ ಅನಾರ್ಯಕರ್ಮವನ್ನು ಮಾಡುವುದು ಅಷ್ಟೇ ಕಷ್ಟವಾದುದು. ಮನುಷ್ಯನು ಯಾರು ಯಾರೊಡನೆ ಎಲ್ಲೆಲ್ಲಿ ನಡೆದುಕೊಳ್ಳುತ್ತಾನೋ ಅವರ ನಡತೆಗಳನ್ನೇ ತನ್ನದಾಗಿಸಿಕೊಳ್ಳುತ್ತಾನೆ ಎನ್ನುವುದು ನನಗೆ ನಿನ್ನಲ್ಲಿ ಕಾಣುತ್ತಿದೆ. ರಾಜವಂಶದಲ್ಲಿ, ಅದರಲ್ಲೂ ವಿಶೇಷವಾಗಿ, ಕೌರವರಲ್ಲಿ ಜನಿಸಿದ, ಉತ್ತಮವಾಗಿ ನಡೆದುಕೊಂಡು ಬಂದಿರುವ ನೀನು ಹೇಗೆ ತಾನೇ ಕ್ಷತ್ರಧರ್ಮವನ್ನು ಮೀರಿ ವರ್ತಿಸಿದೆ? ವಾರ್ಷ್ಣೇಯನಿಗೋಸ್ಕರವಾಗಿ ನೀನು ಮಾಡಿದ ಈ ಅತಿ ಕ್ಷುದ್ರ ಕಾರ್ಯದಲ್ಲಿ ವಾಸುದೇವನ ಅಭಿಪ್ರಾಯವು ಇದ್ದೇ ಇದೆ. ನೀನಾಗಿಯೇ ಇದನ್ನು ಮಾಡಿರಲಿಕ್ಕಿಲ್ಲ.

> ಅಜಾಗರುಕನಾಗಿರುವ, ಇನ್ನೊಬ್ಬನೊಡನೆ ಯುದ್ಧಮಾಡುತ್ತಿರುವವನಿಗೆ ಈ ರೀತಿಯ ವ್ಯಸನವನ್ನು ಕೃಷ್ಣಸಖನಲ್ಲದೇ ಬೇರೆ ಯಾರುತಾನೇ ಇಂದು ಕೊಡಬಲ್ಲರು? ಪಾರ್ಥ! ವೃಷ್ಣಿ-ಅಂಧಕರು ಸಂಸ್ಕಾರಹೀನರು. ಹಿಂಸೆಯನ್ನೇ ಮಾಡುವವರು. ಸ್ವಭಾವದಲ್ಲಿ ನಿಂದ್ಯರು. ಅವರನ್ನು ನೀನು ಹೇಗೆ ತಾನೇ ಪ್ರಮಾಣಭೂತರೆಂದು ಮಾಡಿಕೊಂಡೆ?"

ಹೀಗೆ ಹೇಳಿ ಮಹಾಬಾಹು ಮಹಾಯಶಸ್ವಿ ಯೂಪಕೇತುವು ಯುಯುಧಾನನನ್ನು ಬಿಟ್ಟು ರಣದಲ್ಲಿ ಪ್ರಾಯೋಪವೇಶಮಾಡಿದನು. ಆ ಪುಣ್ಯಲಕ್ಷಣನು ತನ್ನ ಎಡಗೈಯಿಂದ ಬಾಣಗಳನ್ನು ಹರಡಿ, ಬ್ರಹ್ಮಲೋಕವನ್ನು ಪಡೆದುಕೊಳ್ಳಬೇಕೆಂಬ ಇಚ್ಛೆಯಿಂದ ಪ್ರಾಣಗಳನ್ನು ಪ್ರಾಣಗಳಲ್ಲಿ ಆಹುತಿಯನ್ನಾಗಿತ್ತನು. ಅವನು ಯೋಗಯುಕ್ತನಾದ ಮುನಿಯಾಗಿ ಸೂರ್ಯನಲ್ಲಿ ದೃಷ್ಟಿಯನ್ನಿರಿಸಿ ಪ್ರಸನ್ನ ಶುಭ್ರ ಮನಸ್ಸಿನಲ್ಲಿ ಮಹಾ ಉಪನಿಷತ್ತನ್ನು ಧ್ಯಾನಿಸತೊಡಗಿದನು. ಆಗ ಆ ಸರ್ವ ಸೇನೆಗಳ ಜನರೂ ಕೃಷ್ಣ-ಧನಂಜಯರನ್ನು ನಿಂದಿಸತೊಡಗಿದರು ಮತ್ತು ಆ ಪುರುಷರ್ಷಭನನ್ನು ಪ್ರಶಂಸಿಸಿದರು. ಹಾಗೆ ನಿಂದಿಸಲ್ಪಟ್ಟರೂ ಕೃಷ್ಣರೀರ್ವರು ಏನೊಂದು ಅಪ್ರಿಯವಾದುದನ್ನೂ ಹೇಳಲಿಲ್ಲ. ಹಾಗೆ ಅವರು ಪ್ರಶಂಸಿಸುತ್ತಿದ್ದರೂ ಯೂಪಕೇತನನು ಹರ್ಷಗೊಳ್ಳಲಿಲ್ಲ.

ಕೌರವ ಪುತ್ರರು ಹಾಗೆ ಮಾತನಾಡುತ್ತಿರಲು ಮತ್ತು ಭೂರಿಶ್ರವಸನು ಹಾಗೆ ಮಾತನಾಡಿದುದನ್ನೂ ಧನಂಜಯನು ಮನಸ್ಸಿನಲ್ಲಿ ಸಹಿಸಿಕೊಳ್ಳಲಿಲ್ಲ. ಆದರೆ ಮನಸ್ಸಿನಿಂದ ಕ್ರುದ್ಧನಾಗದೇ, ಹಿಂದಿನ ಮಾತುಗಳನ್ನು ಸ್ಮರಿಸಿಕೊಳ್ಳುತ್ತಿರುವಂತೆ ಫಲ್ಗುನನು ಆಕ್ಷೇಪಿಸುವಂತೆ ಹೇಳಿದನು:

> "ನನ್ನ ಈ ಮಹಾವ್ರತವು ಎಲ್ಲ ರಾಜರಿಗೂ ತಿಳಿದೇ ಇದೆ. ನನ್ನ ಬಾಣವು ಹೋಗಬಲ್ಲಷ್ಟು ದೂರದವರೆಗೆ ನನ್ನವರನ್ನು ಕೊಲ್ಲಲು ಯಾರಿಗೂ ಶಕ್ಯವಿಲ್ಲ. ಯೂಪಕೇತುವೇ! ಇದನ್ನು ತಿಳಿದುಕೊಂಡೂ ನನ್ನನ್ನು ನೀನು ನಿಂದಿಸಬಾರದು. ಧರ್ಮವನ್ನು ತಿಳಿಯದೆಯೇ ಇತರರನ್ನು ನಿಂದಿಸುವುದು ಯುಕ್ತವಲ್ಲ. ರಣದಲ್ಲಿ ಖಡ್ಗವನ್ನು ಮೇಲೆತ್ತಿ ವೃಷ್ಣಿವೀರನನ್ನು ಕೊಲ್ಲಲು ಬಂದವನ ಬಾಹುಗಳನ್ನು ನಾನು ಕತ್ತರಿಸಿವುದು ನನ್ನ ಧರ್ಮ. ನಿಂದನೀಯವಾದುದಲ್ಲ. ಶಸ್ತ್ರಗಳನ್ನು ಕಳೆದುಕೊಂಡಿದ್ದ, ವಿರಥನಾಗಿದ್ದ, ಕವಚವನ್ನು ಕಳೆದುಕೊಂಡಿದ್ದ ಅಭಿಮನ್ಯುವನ್ನು ವಧಿಸಿದುದು ಯಾವ ಧಾರ್ಮಿಕವಾದುದೆಂದು ಗೌರವಿಸಬೇಕು?"

ಪಾರ್ಥನು ಹೀಗೆ ಹೇಳಲು ಭೂರಿಶ್ರವನು ತನ್ನ ತಲೆಯಿಂದ

ಭೂಮಿಯನ್ನು ಸ್ಪರ್ಶಿಸಿ ಬಲಗೈಯನ್ನು ಎಡಗೈಯನ್ನು ಎತ್ತಿಕೊಂಡನು. ಪಾರ್ಥನ ಈ ಮಾತನ್ನು ಕೇಳಿ ಮಹಾದ್ಯುತಿ ಯೂಪಕೇತುವು ಮುಖಕೆಳಗೆ ಮಾಡಿಕೊಂಡು ಸುಮ್ಮನಾದನು.

ಅರ್ಜುನನು ಹೇಳಿದನು:

> "ಶಲಾಗ್ರಜ! ಧರ್ಮರಾಜ, ಭೀಮ, ಮತ್ತು ನಕುಲ-ಸಹದೇವರಲ್ಲಿ ಎಷ್ಟು ಪ್ರೀತಿಯಿದೆಯೋ ಅಷ್ಟೇ ಪ್ರೀತಿಯು ನನಗೆ ನಿನ್ನ ಮೇಲೂ ಇದೆ. ಮಹಾತ್ಮ ಕೃಷ್ಣನ ಮತ್ತು ನನ್ನ ಅನುಜ್ಞಾತನಾಗಿ ಶಿಬಿ-ಔಶೀನರರು ಹೋಗಿರುವ ಪುಣ್ಯಕೃತರ ಲೋಕಗಳಿಗೆ ಹೋಗು!"

ಆಗ ಸೌಮದತ್ತಿಯಿಂದ ವಿಮುಕ್ತನಾದ ಶೈನೇಯನು ಖಡ್ಗವನ್ನೆಳೆದು ಆ ಮಹಾತ್ಮನ ಶಿರಸ್ಸನ್ನು ಕತ್ತರಿಸಲು ನಿರ್ಧರಿಸಿದನು. ಪಾಂಡುಪುತ್ರನಿಂದ ಹೊಡೆಯಲ್ಪಟ್ಟ, ಪ್ರಮತ್ತನಾಗಿದ್ದ ಭೂರಿದಕ್ಷಿಣ, ಶಲಾಗ್ರಜ ಅಕಲ್ಮಶನನ್ನು ಸಂಹರಿಸಲು ಸಾತ್ಯಕಿಯು ಇಚ್ಛಿಸಿದನು. ಸೊಂಡಿಲುಕತ್ತರಿಸಲ್ಪಟ್ಟ ಆನೆಯಂತೆ ಭುಜವು ತುಂಡಾಗಿ ಕುಳಿತಿದ್ದ, ರಣದಲ್ಲಿ ಪಾರ್ಥನಿಂದ ಬಾಹುವು ಕತ್ತರಿಸಲ್ಪಡಲು ಪ್ರಾಯೋಪವಿಷ್ಟನಾಗಿರುವ ಕೌರವೇಂದ್ರನ ಶಿರವನ್ನು ಸಾತ್ಯಕಿಯು, ಸರ್ವಸೇನೆಗಳೂ ದುರ್ಮನಸ್ಸುಗಳಿಂದ ಕೂಗಿ ನಿಂದಿಸುತ್ತಿರಲು,

ಮಹಾತ್ಮ ಕೃಷ್ಣ ಮತ್ತು ಪಾರ್ಥರು ತಡೆಯುತ್ತಿದ್ದರೂ, ಭೀಮ, ಚಕ್ರರಕ್ಷಕರಿಬ್ಬರು, ಅಶ್ವತ್ಥಾಮ, ಕೃಪ, ಕರ್ಣ, ವೃಷಸೇನ, ಸೈಂಧವನೂ ಕೂಡ ಕೂಗಿ ತಡೆಯುತ್ತಿದ್ದರೂ, ಖಡ್ಗದಿಂದ ಕತ್ತರಿಸಿದನು. ಅರ್ಜುನನಿಂದ ಮೊದಲೇ ಹತನಾದ ಕುರೂದ್ವಹನನ್ನು ಕೊಂದ ಸಾತ್ಯಕಿಯ ಆ ಕರ್ಮವನ್ನು ಸೇನೆಗಳು ಗೌರವಿಸಲಿಲ್ಲ. ಅಲ್ಲಿ ಸಿದ್ಧ-ಚಾರಣ-ಮಾನವರು ಯುದ್ಧದಲ್ಲಿ ಪ್ರಾಯಗತನಾಗಿ ಹತನಾದ ಸಹಸ್ರಾಕ್ಷನ ಸಮನಾದ ಭೂರಿಶ್ರವಸನನ್ನು ನೋಡಿ ಪೂಜಿಸಿದರು. ಅವನ ಕರ್ಮಗಳ ಕುರಿತು ದೇವತೆಗಳೂ ವಿಸ್ಮಿತರಾದರು. ಇದರ ಕುರಿತು ಸೈನಿಕರಲ್ಲಿ ಅನೇಕ ಪಕ್ಷವಾದಗಳು ನಡೆದವು.

> “ಇದು ವಾರ್ಷ್ಣೇಯನ ಅಪರಾಧವಲ್ಲ. ಹೇಗೆ ಆಗಬೇಕಿತ್ತೋ ಹಾಗೆಯೇ ಆಯಿತು. ಆದುದರಿಂದ ಈ ವಿಷಯದಲ್ಲಿ ಯಾರೂ ಕೋಪಗೊಳ್ಳುವ ಕಾರಣವಿಲ್ಲ. ಕ್ರೋಧವು ಮನುಷ್ಯರ ದುಃಖವನ್ನು ಹೆಚ್ಚಿಸುತ್ತದೆ. ವೀರನಾದನು ಹತನಾಗಲೇ ಬೇಕು. ಅದರಲ್ಲಿ ವಿಚಾರ ಮಾಡುವುದೇನಿದೆ? ಧಾತ್ರುವೇ ಇವನ ಮೃತ್ಯುವನ್ನು ಆಹವದಲ್ಲಿ ಸಾತ್ಯಕಿಗೆ ವಹಿಸಿರಬಹುದು.”

ಸಾತ್ಯಕಿಯು ಹೇಳಿದನು:

“ಕೊಲ್ಲಬೇಡ! ಕೊಲ್ಲಬೇಡ! ಎಂದು ಯಾರೆಲ್ಲ ಹೇಳುತ್ತಿದ್ದೀರೋ ನೀವು ಅಧರ್ಮಿಷ್ಠರಾಗಿದ್ದುಕೊಂಡು ಧರ್ಮದ ಕುರಿತು ವಾದಮಾಡುವವರು. ಧರ್ಮದ ಸೋಗಿನಲ್ಲಿರುವವರು. ಸುಭದ್ರೆಯ ಮಗ ಬಾಲಕನು ಶಸ್ತ್ರಗಳನ್ನು ಕಳೆದುಕೊಂಡಿರುವಾಗ ಯುದ್ಧದಲ್ಲಿ ನಿಮ್ಮಿಂದ ಹತನಾದನಲ್ಲ! ಆಗ ನಿಮ್ಮ ಧರ್ಮವು ಎಲ್ಲಿ ಹೋಗಿತ್ತು? ನನ್ನನ್ನು ಸಂಗ್ರಾಮದಲ್ಲಿ ಬಹಳವಾಗಿ ಪೀಡಿಸಿ ಜೀವಿಸಿರುವಾಗಲೇ ಕೋಪದಿಂದ ಒದೆಯುವವನನ್ನು ಯಾರೇ ಆಗಿರಲಿ - ಮುನಿಯ ವ್ರತದಲ್ಲಿದ್ದರೂ - ಸಂಹರಿಸುತ್ತೇನೆಂದು ನಾನು ಪ್ರತಿಜ್ಞೆ ಮಾಡಿದ್ದೆ. ಭುಜವನ್ನೆತ್ತಿ ನನ್ನನ್ನು ಸಂಹರಿಸಲು ಅವನು ಬರಲು ನೋಡುತ್ತಿದ್ದರೂ ಕೂಡ ನಾನು ಮೃತನಾದೆನೆಂದೇ ನೀವು ತಿಳಿದುಕೊಂಡಿರಿ. ಇದು ನಿಮ್ಮ ಬುದ್ಧಿಯ ಚಾಕಚಕ್ಯತೆಯಿರಬಹುದು. ಕುರುಪುಂಗವರೇ! ಅವನಿಗೆ ನಾನು ಪ್ರತೀಕಾರವನ್ನು ಮಾಡಿರುವುದು ಯುಕ್ತವೇ ಆಗಿದೆ. ಪಾರ್ಥನು ನನ್ನ ಮೇಲಿನ ಸ್ನೇಹದಿಂದ ತನ್ನ ಪ್ರತಿಜ್ಞೆಯನ್ನು ರಕ್ಷಿಸಿ ಖಡ್ಗವನ್ನು ಹಿಡಿದಿದ್ದ ಅವನ ಬಾಹುವನ್ನು ಕತ್ತರಿಸಿದನು. ಇದರಿಂದ ನಾನು ವಂಚಿತನಾಗಿದ್ದೇನೆ. ಆಗುವಂಥಹುದು ಹಾಗೆಯೇ ಆಗುತ್ತದೆ.

ದೈವವೇ ಅದನ್ನು ಹಾಗೆ ಮಾಡಿಸುತ್ತದೆ. ಈ ಸಂಗ್ರಾಮದಲ್ಲಿ ಇವನು ಹತನಾದನು. ಇದರಲ್ಲಿ ಅಧರ್ಮವಾದದ್ದಾದರೂ ಏನಿದೆ? ಹಿಂದೆ ಭುವಿಯಲ್ಲಿ ವಾಲ್ಮೀಕಿಯು ಈ ಗೀತವನ್ನು ಶ್ಲೋಕದಲ್ಲಿ ಹೇಳಿದ್ದನು: ಅಮಿತ್ರರನ್ನು ಪೀಡಿಸುವುದು ಕರ್ತವ್ಯವೇ ಸರಿಯೆಂದು!”

ಹೀಗೆ ಹೇಳಲು ಸರ್ವ ಕೌರವ ಪಾಂಡವರೂ ಏನನ್ನೂ ಹೇಳದೇ ಮನಸ್ಸಿನಲ್ಲಿಯೇ ಅವನನ್ನು ಗೌರವಿಸಿದರು. ಮಹಾ ಯಾಗಗಳಲ್ಲಿ ಮಂತ್ರಗಳಿಂದ ಪೂತನಾಗಿದ್ದ ಆ ಯಶಸ್ವಿ, ಅರಣ್ಯಕ್ಕೆ ಹೋದ ಮುನಿಯಂತೆ ಕುಳಿತಿದ್ದ ಅವನ ವಧೆಯನ್ನು ಅಲ್ಲಿದ್ದ ಯಾರೂ ಅಭಿನಂದಿಸಲಿಲ್ಲ. ಆ ವರದ ಶೂರನ ನೀಲಕೇಶವುಳ್ಳ, ಪಾರಿವಾಳದಂತೆ ಕೆಂಪಾದ ಕಣ್ಣುಳ್ಳ ಶಿರವನ್ನು ಅಶ್ವಮೇಧದ ಕುದುರೆಯ ಶಿರವನ್ನು ಕತ್ತರಿಸಿ ಹವಿರ್ಧಾನನದ ನಡುವೆ ಇಡುವಂತೆ ಇಡಲಾಯಿತು. ಮಹಾಹವದಲ್ಲಿ ಶಸ್ತ್ರದ ತೇಜಸ್ಸಿನಿಂದ ಹತನಾಗಿ ಪೂತನಾದ ಆ ವರದ ವರಾರ್ಹನು ಶ್ರೇಷ್ಠ ದೇಹವನ್ನು ತೊರೆದು ಧರ್ಮದಿಂದ ಪೃಥ್ವಿಯನ್ನೂ ಆಕಾಶವನ್ನೂ ಅತಿಕ್ರಮಿಸಿ ಊರ್ಧ್ವಲೋಕಕ್ಕೆ ಪ್ರಯಾಣಿಸಿದನು.

## ಸಾತ್ಯಕಿ-ಭೂರಿಶ್ರವಸರ ಉತ್ಪತ್ತಿ; ವೃಷ್ಣಿಗಳ ಪ್ರಶಂಸೆ

ಅತ್ರಿಯ ಮಗನು ಸೋಮ. ಸೋಮನ ಮಗ ಬುಧ. ಬುಧನಿಗೆ ಮಹೇಂದ್ರನ ಪ್ರಕಾಶವುಳ್ಳ ಪುರೂರವನೆಂಬ ಒಬ್ಬ ಮಗನಿದ್ದನು. ಪುರೂರವನ ಮಗ ಆಯು. ಆಯುವಿನ ಮಗ ನಹುಷನೆಂದು ಹೇಳುತ್ತಾರೆ. ನಹುಷನಿಗೆ ಯಯಾತಿಯು ಮಗನು. ಯಯಾತಿಗೆ ದೇವಯಾನಿಯಲ್ಲಿ ಯದುವೆಂಬ ಜ್ಯೇಷ್ಠಮಗನಾದನು. ಯದುವಿನ ವಂಶದಲ್ಲಿ ದೇವಮೀಢನೆಂಬ ಪ್ರಸಿದ್ಧನಾದವನು ಹುಟ್ಟಿದನು. ಯಾದವನಾದ ಅವನ ಮಗನೇ ತ್ರೈಲೋಕ್ಯಸಮನಾದ ಶೂರ. ಶೂರನ ಮಗ ಶೌರಿ - ವಾಸುದೇವನೆಂದೂ ಪ್ರಸಿದ್ಧನಾದವನು. ಅವನು ಧನುರ್ವಿದ್ಯೆಯಲ್ಲಿ ಶ್ರೇಷ್ಠನೂ, ಯುದ್ಧದಲ್ಲಿ ಕಾರ್ತವೀರ್ಯಸಮನೂ ಆಗಿದ್ದನು. ಅದೇ ವೀರ್ಯ ಕುಲದಲ್ಲಿ ಶಿನಿಯೆಂಬ ರಾಜನೂ ಹುಟ್ಟಿದನು. ಇದೇ ಸಮಯದಲ್ಲಿ ಮಹಾತ್ಮ ದೇವಕನ ಮಗಳ ಸ್ವಯಂವರಕ್ಕೆ ಸರ್ವ ಕ್ಷತ್ರಿಯರೂ ಬಂದು ಸೇರಿದ್ದರು. ಅಲ್ಲಿ ದೇವಕಿಯನ್ನು ವಸುದೇವನಿಗೋಸ್ಕರವಾಗಿ ಶಿನಿಯು ಸರ್ವ ಪಾರ್ಥಿವರನ್ನೂ ಸೋಲಿಸಿ ತನ್ನ ರಥದ ಮೇಲೆ ಏರಿಸಿಕೊಂಡನು. ಶೌರಿ ಶಿನಿಯ ರಥದಲ್ಲಿ ದೇವಕಿಯನ್ನು ಕಂಡು ನೃಪ ಸೋಮದತ್ತನು ಸಹಿಸಿಕೊಳ್ಳಲಿಲ್ಲ. ಅವರಿಬ್ಬರು ಬಲಶಾಲಿಗಳ ನಡುವೆ ಶಕ್ರ-ಪ್ರಹ್ರಾದರ ನಡುವೆ ಹೇಗೋ ಹಾಗೆ ಅರ್ಧದಿನದ ವಿಚಿತ್ರವೂ ಅದ್ಭುತವೂ ಆದ ಬಾಹುಯುದ್ಧವು ನಡೆಯಿತು. ಶಿನಿಯು ಜೋರಾಗಿ ನಗುತ್ತಾ

ಸೋಮದತ್ತನನ್ನು ನೆಲದ ಮೇಲೆ ಕೆಡವಿ ಕೂದಲುಗಳನ್ನು ಹಿಡಿದು ಖಡ್ಗವನ್ನೆತ್ತಿ ಕಾಲಿನಿಂದ ಒದೆದನು. ಸುತ್ತಲೂ ನೆರೆದಿದ್ದ ಸಹಸ್ರಾರು ರಾಜರುಗಳು ನೋಡುತ್ತಿರಲು ಮಧ್ಯದಲ್ಲಿದ್ದ ಅವನನ್ನು ಪುನಃ ಜೀವಿಸು ಎಂದು ಹೇಳಿ ಬಿಟ್ಟುಬಿಟ್ಟನು. ಅವನಿಂದ ಆ ಅವಸ್ಥೆಗೆ ತರಿಸಲ್ಪಟ್ಟ ಸೋಮದತ್ತನು ಕೋಪಾವಿಷ್ಟನಾಗಿ ಮಹಾದೇವನನ್ನು ಒಲಿಸಿದನು. ಆಗ ವರಗಳ ವರದ ಪ್ರಭು ಮಹಾದೇವನು ಅವನ ಮೇಲೆ ತುಷ್ಟನಾಗಿ ವರವನ್ನು ನೀಡಲು ಆ ನೃಪನು ಈ ವರವನ್ನು ಬೇಡಿಕೊಂಡನು:

> “ಭಗವನ್! ರಾಜಸಹಸ್ರರ ಮಧ್ಯೆ ಶಿನಿಯ ಮಗನನ್ನು ಸಂಯುಗದಲ್ಲಿ ಕಾಲಿನಿಂದ ಒದೆದು ಸಂಹರಿಸುವಂಥಹ ಮಗನನ್ನು ಬಯಸುತ್ತೇನೆ.”

ಸೋಮದತ್ತನ ಆ ಮಾತನ್ನು ಕೇಳಿ “ಹೀಗೆಯೇ ಆಗಲಿ!” ಎಂದು ಹೇಳಿ ದೇವನು ಅಂತರ್ಧಾನನಾದನು. ಅದೇ ವರದಾನದಿಂದ ಅವನು ಭೂರಿದಕ್ಷಿಣನನ್ನು ಪಡೆದನು. ಮತ್ತು ಸಮರದಲ್ಲಿ ಸೌಮದತ್ತಿಯು ಶಿನಿಯ ಮಗನನ್ನು ಕೆಡವಿದನು.

## ಅರ್ಜುನನ ಯುದ್ಧ

ಭೂರಿಶ್ರವಸನು ಪರಲೋಕಕ್ಕೆ ಹೊರಟುಹೋಗಲು ಮಹಾಬಾಹು

ಅರ್ಜುನನು ವಾಸುದೇವನನ್ನು ಒತ್ತಾಯಿಸಿ ಹೇಳಿದನು:

> “ಕೃಷ್ಣ! ರಾಜಾ ಜಯದ್ರಥನಿರುವಲ್ಲಿಗೆ ಕುದುರೆಗಳನ್ನು ಓಡಿಸು. ದಿವಾಕರನು ಅಸ್ತನಾಗುತ್ತಿದ್ದಾನೆ. ತ್ವರೆಮಾಡು! ಈ ಮಹಾ ಕಾರ್ಯವನ್ನು ನಾನು ಮಾಡಲೇಬೇಕಾಗಿದೆಯೆಂದು ತಿಳಿ. ಇವನಾದರೋ ಕುರುಸೇನೆಯ ಮಹಾರಥರಿಂದ ರಕ್ಷಿಸಲ್ಪಟ್ಟಿದ್ದಾನೆ. ಸೂರ್ಯನು ಅಸ್ತನಾಗುವುದರೊಳಗೆ ಜಯದ್ರಥನನ್ನು ಕೊಂದು ನನ್ನ ವಚನವನ್ನು ಸತ್ಯವಾಗಿಸುವಂತೆ ಕುದುರೆಗಳನ್ನು ಓಡಿಸು!”

ಆಗ ಹಯಜ್ಞ ಕೃಷ್ಣನು ಬೆಳ್ಳಿಯ ಪುತ್ಥಳಿಗಳಂತಿರುವ ಕುದುರೆಗಳನ್ನು ಜಯದ್ರಥನ ರಥದ ಕಡೆ ಓಡಿಸಿದನು. ಅಮೋಘವಾದ ಆಶುಗಗಳನ್ನು ದಿಕ್ಕು ದಿಕ್ಕುಗಳಲ್ಲಿ ತುಂಬಿಸುತ್ತಾ ವೇಗದಿಂದ ಬರುತ್ತಿದ್ದ ಅವನನ್ನು ಸೇನಮುಖ್ಯರಾದ ದುರ್ಯೋಧನ, ಕರ್ಣ, ವೃಷಸೇನ, ಮದ್ರರಾಜ, ಅಶ್ವತ್ಥಾಮ, ಕೃಪ ಮತ್ತು ಸ್ವಯಂ ಸೈಂಧವನೂ ಕೂಡ ಸುತ್ತುವರೆದರು. ಎದಿರು ನಿಂತಿರುವ ಸೈಂಧವನನ್ನು ಬೀಭತ್ಸುವು ಅವನನ್ನು ಸುಟ್ಟುಬಿಡುವನೋ ಎನ್ನುವಂತೆ ಕ್ರೋಧದಿಂದ ಉರಿಯುತ್ತಿದ್ದ ಕಣ್ಣುಗಳಿಂದ ನೋಡಿದನು. ಅಗ ಜಯದ್ರಥನ ರಥದ ಬಳಿ ಬರುತ್ತಿದ್ದ ಅರ್ಜುನನನ್ನು ವೀಕ್ಷಿಸಿ ದುರ್ಯೋಧನನು ತ್ವರೆಮಾಡಿ ರಾಧೇಯನಿಗೆ

ಹೇಳಿದನು:

“ವೈಕರ್ತನ! ಇಗೋ ಯುದ್ಧಮಾಡುವ ಸಮಯವು ಬಂದಿದೆ. ನಿನ್ನ ಬಲವನ್ನು ಪ್ರದರ್ಶಿಸು. ರಣದಲ್ಲಿ ಅರ್ಜುನನಿಂದ ಜಯದ್ರಥನು ವಧಿಸಲ್ಪಡದಂತೆ ಮಾಡು! ಸ್ವಲ್ಪವೇ ಹಗಲು ಉಳಿದುಕೊಂಡಿದೆ. ಇಂದು ಶರೌಘಗಳಿಂದ ಶತ್ರುವನ್ನು ಸಂಹರಿಸು! ಹಗಲು ಮುಗಿಯಿತೆಂದರೆ ನಮಗೆ ಖಂಡಿತವಾಗಿಯೂ ಜಯವಾಗುತ್ತದೆ! ಸೂರ್ಯಾಸ್ತವಾಗುವ ವರೆಗೆ ಸೈಂಧವನನ್ನು ರಕ್ಷಿಸಿದೆವೆಂದಾದರೆ ಪ್ರತಿಜ್ಞೆಯನ್ನು ಸುಳ್ಳಾಗಿಸಿದ ಕೌಂತೇಯನು ಅಗ್ನಿಯನ್ನು ಪ್ರವೇಶಿಸುತ್ತಾನೆ. ಭೂಮಿಯಲ್ಲಿ ಅರ್ಜುನನು ಮುಹೂರ್ತಕಾಲವೂ ಇಲ್ಲನೆಂದಾದರೆ ಅವನ ಸಹೋದರರು, ಅನುಯಾಯಿಗಳೊಂದಿಗೆ, ಜೀವಿಸಿರಲು ಬಯಸುವುದಿಲ್ಲ. ಪಾಂಡವೇಯರು ವಿನಷ್ಟರಾಗಲು, ಕಂಟಕರು ಹತರಾಗಿ ಗಿರಿ-ವನ-ಕಾನನಗಳೊಂದಿಗೆ ಈ ವಸುಂಧರೆಯನ್ನು ನಾವು ಭೋಗಿಸಬಲ್ಲೆವು. ಕಾರ್ಯಾಕಾರ್ಯಗಳನ್ನು ತಿಳಿದುಕೊಳ್ಳದೇ ರಣದಲ್ಲಿ ಈ ಪ್ರತಿಜ್ಞೆಯನ್ನು ಪಾರ್ಥನು ಮಾಡಿದ್ದಾನೆಂದರೆ ಈ ವಿಪರೀತವನ್ನು ದೈವವೇ ಅವನಿಗೆ ತಂದೊಡ್ಡಿದಂತಿದೆ.

ಕಿರೀಟಿ ಪಾಂಡವನು ತನ್ನ ವಿನಾಶಕ್ಕಾಗಿಯೇ ಜಯದ್ರಥನ ವಧೆಯ ಕುರಿತು ಪ್ರತಿಜ್ಞೆಯನ್ನು ಮಾಡಿರಬೇಕು. ನೀನು ಬದುಕಿರುವಾಗ ಹೇಗೆ ತಾನೇ ಆ ಫಲ್ಗುನನು ಆದಿತ್ಯನು ಅಸ್ತಂಗತನಾಗುವುದರೊಳಗೆ ನೃಪ ಸೈಂಧವನನ್ನು ಕೊಂದಾನು? ರಣಮುಖದಲ್ಲಿ ಮದ್ರರಾಜನಿಂದ ಮತ್ತು ಮಹಾತ್ಮ ಕೃಪನಿಂದ ರಕ್ಷಿತನಾಗಿರುವ ಜಯದ್ರಥನನ್ನು ಧನಂಜಯನು ಹೇಗೆ ಕೊಲ್ಲಬಲ್ಲನು? ದ್ರೌಣಿ, ನಾನು ಮತ್ತು ದುಃಶಾಸನರಿಂದ ರಕ್ಷಿಸಲ್ಪಡುತ್ತಿರುವ ಸೈಂಧವನನ್ನು ಬೀಭತ್ಸುವು ಹೇಗೆ ತಾನೇ ತಲುಪಬಲ್ಲನು? ಅನೇಕ ಶೂರರು ಯುದ್ಧಮಾಡುತ್ತಿದ್ದಾರೆ. ದಿವಾಕರನು ಇಳಿಯುತ್ತಿದ್ದಾನೆ. ಹೀಗಿರುವ ಪಾರ್ಥನು ಜಯದ್ರಥನನ್ನು ತಲುಪುವುದೇ ಶಂಕೆಯಾಗಿಬಿಟ್ಟಿದೆ. ನೀನು ನನ್ನ ಮತ್ತು ಇತರ ಶೂರ ಮಹಾರಥರೊಂದಿಗೆ ಪರಮ ಯತ್ನವನ್ನು ಮಾಡಿ ಪಾರ್ಥನೊಡನೆ ಯುದ್ಧಮಾಡು!”

ದುರ್ಯೋಧನನು ಹೀಗೆ ಹೇಳಲು ರಾಧೇಯನು ಅವನಿಗೆ ಈ ಮಾತನ್ನಾಡಿದನು:

“ಗುರಿಯಲ್ಲಿ ದೃಢನಾದ ಶೂರ ಧನ್ವಿ ಭೀಮಸೇನನ ಅನೇಕ

ಶರಜಾಲಗಳಿಂದ ರಣದಲ್ಲಿ ನಾನು ತುಂಬಾ ನೋವನ್ನನುಭವಿಸುತ್ತಿದ್ದೇನೆ. ನನ್ನಂಥವನು ರಣದಲ್ಲಿರಬೇಕು ಎಂಬ ಒಂದೇ ಕಾರಣದಿಂದ ನಾನಿನ್ನೂ ಇಲ್ಲಿ ನಿಂತಿದ್ದೇನೆ. ರಣದಲ್ಲಿಯ ಬಾಣಗಳಿಂದ ನನ್ನ ಅಂಗಾಂಗಗಳೆಲ್ಲವೂ ಅತಿ ನೋವನ್ನು ಅನುಭವಿಸುತ್ತಿವೆ. ಆದರೆ ರಾಜನ್! ನಾನು ರಣದಲ್ಲಿ ಪರಮ ಶಕ್ತಿಯನ್ನು ಬಳಸಿ ಪಾಂಡವಮುಖ್ಯನು ಸೈಂಧವನನ್ನು ಕೊಲ್ಲದಂತೆ ಯುದ್ಧಮಾಡುತ್ತೇನೆ. ನಾನು ನಿಶಿತ ಸಾಯಕಗಳನ್ನು ಪ್ರಯೋಗಿಸಿ ಯುದ್ಧಮಾಡುವಾಗ ಧನಂಜಯನು ಸೈಂಧವನನ್ನು ತಲುಪಲಾರನು. ಸತತವೂ ಹಿತಕಾರಿಗಳಾಗಿರುವವರಿಗೆ ಎಷ್ಟು ಮಾಡಬೇಕೋ ಅಷ್ಟನ್ನೂ ಯಥಾಶಕ್ತಿ ಮಾಡುತ್ತೇನೆ. ಜಯವು ದೈವದ ಮೇಲೆ ನಿಂತಿದೆ! ನನ್ನ ಪೌರುಷವನ್ನು ಆಶ್ರಯಿಸಿ ನಿನಗಾಗಿ ಇಂದು ಅರ್ಜುನನೊಡನೆ ಯುದ್ಧಮಾಡುತ್ತೇನೆ. ಆದರೆ ಜಯವು ದೈವಾಧೀನವಾದುದು. ಇಂದು ನನ್ನ ಮತ್ತು ಪಾರ್ಥ ಇಬ್ಬರ ನಡುವಿನ ದಾರುಣ ಲೋಮಹರ್ಷಣ ಯುದ್ಧವನ್ನು ಸರ್ವಭೂತಗಳೂ ನೋಡಲಿ!”

ರಣದಲ್ಲಿ ಹೀಗೆ ಕರ್ಣ-ಕೌರವರು ಮಾತನಾಡಿಕೊಳ್ಳುತ್ತಿರಲು

ಅರ್ಜುನನು ಕೌರವ ಸೇನೆಯನ್ನು ನಿಶಿತ ಬಾಣಗಳಿಂದ ಹೊಡೆದನು. ಅವನು ತೀಕ್ಷ್ಣ ಅಗ್ರಮುಖಗಳಿಂದ ರಣದಲ್ಲಿ ಪಲಾಯನಮಾಡದಿರುವ ಶೂರರ ಪರಿಘದಂತಿದ್ದ ಆನೆಯ ಸೊಂಡಲಿನಂತಿದ್ದ ಭುಜಗಳನ್ನು ಕತ್ತರಿಸಿದನು. ಆ ಮಹಾಬಾಹುವು ನಿಶಿತ ಶರಗಳಿಂದ ಶಿರಗಳನ್ನು, ಆನೆಗಳ ಸೊಂಡಿಲುಗಳನ್ನು, ಕುದುರೆಗಳ ಕತ್ತುಗಳನ್ನು ಮತ್ತು ರಥಗಳ ಅಚ್ಚುಮಣೆಗಳನ್ನು ಎಲ್ಲೆಡೆ ಕತ್ತರಿಸಿದನು. ಬೀಭತ್ಸುವು ಪ್ರಾಸ-ತೋಮರಗಳನ್ನು ಹಿಡಿದಿದ್ದ, ರಕ್ತದಿಂದ ತೋಯ್ದುಹೋಗಿದ್ದ ಅಶ್ವಾರೋಹಿಗಳು ಒಬ್ಬೊಬ್ಬರನ್ನೂ ಎರಡಾಗಿ ಅಥವಾ ಮೂರಾಗಿ ಕ್ಷುರಗಳಿಂದ ತುಂಡರಿಸಿದನು. ಸಹಸ್ರಾರು ಪ್ರಮುಖ ಆನೆ-ಕುದುರೆಗಳು, ಧ್ವಜ-ಚತ್ರಗಳು, ಚಾಪಗಳು, ಚಾಮರಗಳು ಮತ್ತು ಶಿರಗಳು ಬೀಳುತ್ತಿದ್ದವು. ಬೆಂಕಿಯು ಒಣಹುಲ್ಲನ್ನು ಹೇಗೋ ಹಾಗೆ ಕೌರವ ಸೇನೆಯನ್ನು ಭಸ್ಮಮಾಡಿ ಪಾರ್ಥನು ಕ್ಷಣಮಾತ್ರದಲ್ಲಿ ರಣಭೂಮಿಯನ್ನು ರಕ್ತದಲ್ಲಿ ಮುಳುಗಿಸಿಬಿಟ್ಟನು.

ಆ ಬಲಶಾಲೀ ದುರಾಧರ್ಷ ಸತ್ಯವಿಕ್ರಮಿಯು ಕೌರವ ಸೇನೆಯ ಹೆಚ್ಚುಭಾಗ ಯೋಧರನ್ನು ಸಂಹರಿಸಿ ಸೈಂಧವನ ಬಳಿಬಂದನು. ಭೀಮಸೇನ ಮತ್ತು ಸಾತ್ವತರಿಂದ ರಕ್ಷಿತನಾದ ಬೀಭತ್ಸುವು ಪ್ರಜ್ವಲಿಸುತ್ತಿರುವ ಹುತಾಶನನಂತಿದ್ದನು. ಹಾಗಿರುವ ಫಲ್ಗುನನನ್ನು

ನೋಡಿ ವೀರ್ಯಸಮ್ಮತರಾದ ಮಹೇಷ್ವಾಸರಾದ ಕೌರವ ಪುರುಷರ್ಷಭರು ಸಹಿಸಿಕೊಳ್ಳಲಿಲ್ಲ. ದುರ್ಯೋಧನ, ಕರ್ಣ, ವೃಷಸೇನ, ಮದ್ರರಾಜ, ಅಶ್ವತ್ಥಾಮ, ಕೃಪ ಮತ್ತು ಸ್ವಯಂ ಸೈಂಧವ ಇವರು ಸೈಂಧವನಿಗಾಗಿ ಸಂರಬ್ಧರಾಗಿ ರಥಮಾರ್ಗದಲ್ಲಿ ನರ್ತಿಸುವಂತಿದ್ದ, ಜೋರಾಗಿ ಧನುಸ್ಸನ್ನು ಟೇಂಕರಿಸುತ್ತಿದ್ದ ಮತ್ತು ಚಪ್ಪಾಳೆಹಾಕುತ್ತಿದ್ದ ಕಿರೀಟಿಯನ್ನು ಸುತ್ತುವರೆದರು. ಎಲ್ಲ ಯುದ್ಧವಿಶಾರದರೂ ಬಾಯಿಕಳೆದ ಅಂತಕನಂತಿದ್ದ ಸಂಗ್ರಾಮಕೋವಿದ ಪಾರ್ಥನನ್ನು ಸುತ್ತುವರೆದರು. ಭಾಸ್ಕರನು ಕೆಂಪಾಗುತ್ತಿರಲು, ಈಗಲೇ ಸೂರ್ಯಾಸ್ತವಾಗಲೆಂದು ಬಯಸುತ್ತಾ ಅವರು ಸೈಂಧವನನ್ನು ಹಿಂದಿರಿಸಿಕೊಂಡು ಅರ್ಜುನ-ಅಚ್ಯುತರನ್ನು ಆಕ್ರಮಣಿಸಿದರು. ಅವರು ತಮ್ಮ ಸರ್ಪಗಳಂತಿದ್ದ ಬಾಹುಗಳಿಂದ ಧನುಸ್ಸುಗಳನ್ನು ಎಳೆದು ಸೂರ್ಯನ ರಶ್ಮಿಗಳಂತಿದ್ದ ನೂರಾರು ಸಾಯಕಗಳನ್ನು ಫಲ್ಗುನನ ಮೇಲೆ ಪ್ರಯೋಗಿಸಿದರು.

ಯುದ್ಧದುರ್ಮದ ಕಿರೀಟಿಯು ಅವರ ಪ್ರತಿಯೊಂದು ಬಾಣವನ್ನೂ ಎರಡು-ಮೂರಾಗಿ ತುಂಡರಿಸಿ ರಣದಲ್ಲಿ ಅವರನ್ನು ಹೊಡೆದನು. ಸಿಂಹದ ಬಾಲದ ಧ್ವಜವುಳ್ಳ ಶಾರದ್ವತೀಸುತನು ತನ್ನ ಶಕ್ತಿಯನ್ನು ತೋರಿಸುತ್ತಾ ಅರ್ಜುನನನ್ನು ಎದುರಿಸಿ ತಡೆದನು. ಅವನು ಹತ್ತರಿಂದ

ಪಾರ್ಥನನ್ನೂ, ಏಳರಿಂದ ವಾಸುದೇವನನ್ನೂ ಹೊಡೆದು ಸೈಂಧವನನ್ನು ಪರಿಪಾಲಿಸುತ್ತಾ ರಥಮಾರ್ಗದಲ್ಲಿ ನಿಂತನು. ಆಗ ಅವರನ್ನು ಕೌರವಶ್ರೇಷ್ಠ ಮಹಾರಥರೆಲ್ಲರೂ ಅತಿದೊಡ್ಡ ರಥಗುಂಪುಗಳೊಡನೆ ಎಲ್ಲ ಕಡೆಗಳಿಂದ ಸುತ್ತುವರೆದರು. ಚಾಪಗಳನ್ನು ಸೆಳೆಯುತ್ತಾ, ಸಾಯಕಗಳನ್ನು ಬಿಡುತ್ತಾ ಅವರು ದುರ್ಯೋಧನನ ಶಾಸನದಂತೆ ಸೈಂಧವನ್ನು ಪರಿರಕ್ಷಿಸುತ್ತಿದ್ದರು. ಪಾರ್ಥನು ದ್ರೌಣಿ ಮತ್ತು ಶಾರದ್ವತರ ಅಸ್ತ್ರಗಳನ್ನು ಅಸ್ತ್ರಗಳಿಂದ ತಡೆದು, ತಲಾ ಒಂಭತ್ತರಂತೆ ಎಲ್ಲರನ್ನೂ ಬಾಣಗಳಿಂದ ಹೊಡೆದನು. ಅವನು ದ್ರೌಣಿಯನ್ನು ಇಪ್ಪತ್ತೈದರಿಂದ, ವೃಷಸೇನನನ್ನು ಏಳರಿಂದ, ದುರ್ಯೋಧನನನ್ನು ಇಪ್ಪತ್ತರಿಂದ ಮತ್ತು ಕರ್ಣ-ಶಲ್ಯರನ್ನು ಮೂರು-ಮೂರರಿಂದ ಹೊಡೆದನು. ಪುನಃ ಪುನಃ ಗರ್ಜಿಸುತ್ತಾ ಹೊಡೆಯುತ್ತಾ ಧನುಸ್ಸುಗಳನ್ನು ಟೇಂಕರಿಸುತ್ತಾ ಅವರು ಅವನನ್ನು ಎಲ್ಲ ಕಡೆಗಳಿಂದ ಮುತ್ತಿಗೆ ಹಾಕಿದರು. ಸೂರ್ಯಾಸ್ತವನ್ನು ಬಯಸುತ್ತಾ ತ್ವರೆಮಾಡುತ್ತಿದ್ದ ಆ ಮಹಾರಥರು ಎಲ್ಲರೂ ಒಬ್ಬರಿಗೊಬ್ಬರು ತಾಗಿಕೊಂಡು ರಥಗಳ ಮಂಡಲವನ್ನು ಮಾಡಿಕೊಂಡು ಯುದ್ಧಮಾಡುತ್ತಿದ್ದರು.

ಅವನನ್ನು ಎದುರಿಸಿ ಗರ್ಜಿಸುತ್ತಾ, ಧನುಸ್ಸುಗಳನ್ನು ಟೇಂಕರಿಸುತ್ತಾ, ಘೋರ ಮಾರ್ಗಣಗಳಿಂದ ಮೋಡಗಳು ಪರ್ವತದ ಮೇಲೆ

ಮಳೆನೀರನ್ನು ಸುರಿಸುವಂತೆ ಮುಚ್ಚಿದರು. ಪರಿಘಗಳಂತೆ ಬಾಹುಗಳನ್ನು ಹೊಂದಿದ್ದ ಆ ಶೂರರು ಧನಂಜಯದ ಶರೀರದ ಮೇಲೆ ಮಹಾ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದರು. ಆ ಬಲಶಾಲೀ ದುರಾಧರ್ಷ ಸತ್ಯವಿಕ್ರಮಿಯು ಕೌರವ ಸೇನೆಯ ಹೆಚ್ಚುಭಾಗ ಯೋಧರನ್ನು ಸಂಹರಿಸಿ ಸೈಂಧವನ ಬಳಿಬಂದನು. ಆಗ ಕರ್ಣನು ಭೀಮಸೇನ-ಸಾತ್ಯಕಿಯರು ನೋಡುತ್ತಿದ್ದಂತೆಯೇ ಅವನನ್ನು ಆಶುಗಗಳಿಂದ ತಡೆದನು. ಆ ಸೂತಪುತ್ರನನ್ನು ಪಾರ್ಥನು ಎಲ್ಲ ಸೈನ್ಯಗಳೂ ನೋಡುತ್ತಿರುವಂತೆ ಹತ್ತು ಬಾಣಗಳಿಂದ ಹೊಡೆದನು. ಸಾತ್ವತನೂ ಕರ್ಣನನ್ನು ಮೂರು ಬಾಣಗಳಿಂದ, ಭೀಮಸೇನನು ಮೂರರಿಂದ ಮತ್ತು ಪಾರ್ಥನು ಪುನಃ ಏಳರಿಂದ ಹೊಡೆದರು.

ಮಹಾರಥ ಕರ್ಣನು ಅವರನ್ನು ಅರವತ್ತು-ಅರವತ್ತು ಶರಗಳಿಂದ ತಿರುಗಿ ಹೊಡೆದನು. ಆಗ ಅನೇಕರೊಂದಿಗೆ ಕರ್ಣನ ಯುದ್ಧವು ನಡೆಯಿತು. ಸಮರದಲ್ಲಿ ಒಬ್ಬನೇ ಕ್ರುದ್ಧನಾಗಿ ಮೂರು ರಥರನ್ನು ಸುತ್ತುವರೆಯುತ್ತಿದ್ದ ಸೂತಪುತ್ರನ ಅದ್ಭುತವು ಕಾಣದೊರಕಿತು. ಮಹಾಬಾಹು ಫಲ್ಗುನನಾದರೋ ನೂರು ಶರಗಳಿಂದ ವೈಕರ್ತನ ಕರ್ಣನ ಸರ್ವ ಮರ್ಮಗಳಿಗೆ ಹೊಡೆದನು. ಸರ್ವಾಂಗಗಳೂ ರಕ್ತದಿಂದ ತೋಯ್ದ ಪ್ರತಾಪವಾನ್ ವೀರ ಸೂತಪುತ್ರನು ಐನೂರು

ಶರಗಳಿಂದ ಫಲ್ಗುನನನ್ನು ತಿರುಗಿ ಹೊಡೆದನು. ರಣದಲ್ಲಿ ಅವನ ಲಾಘವವನ್ನು ಕಂಡು ಅರ್ಜುನನು ಸಹಿಸಿಕೊಳ್ಳಲಿಲ್ಲ. ಆಗ ತ್ವರೆಮಾಡಿ ವೀರ ಧನಂಜಯನು ಅವನ ಧನುಸ್ಸನ್ನು ತುಂಡರಿಸಿ, ಎದೆಯ ಮೇಲೆ ಒಂಭತ್ತು ಸಾಯಕಗಳಿಂದ ಹೊಡೆದನು. ಸಮರದಲ್ಲಿ ಅವನ ವಧೆಗೋಸ್ಕರ ಧನಂಜಯನು ತ್ವರೆಮಾಡಿ ವೇಗವುಳ್ಳ ಸೂರ್ಯವರ್ಚಸ ಸಾಯಕವನ್ನು ಎಸೆದನು. ವೇಗದಿಂದ ಬರುತ್ತಿದ್ದ ಆ ಸಾಯಕವನ್ನು ದ್ರೌಣಿಯು ತೀಕ್ಷ್ಣವಾದ ಅರ್ಧಚಂದ್ರದಿಂದ ಕತ್ತರಿಸಿ ಭೂಮಿಗೆ ಕೆಡವಿದನು. ಆಗ ಸೂತಪುತ್ರ ಕರ್ಣನು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಪ್ರತೀಕಾರವನ್ನು ಮಾಡಲು ಬಯಸಿ ಫಲ್ಗುನನನ್ನು ಅನೇಕ ಸಾವಿರ ಸಾಯಕಗಳಿಂದ ಮುಚ್ಚಿಬಿಟ್ಟನು. ಗೂಳಿಗಳಂತೆ ಗುರುಟುಹಾಕುತ್ತಿದ್ದ ಆ ನರಸಿಂಹ ಮಹಾರಥರು ಸಾಯಕಗಳ ಸಮೂಹಗಳಿಂದ ಪರಸ್ಪರರನ್ನು ಮತ್ತು ಜಿಹ್ಮಗಗಳಿಂದ ಆಕಾಶವನ್ನು ಮುಚ್ಚಿ, ಪರಸ್ಪರರನ್ನು ಕೊಲ್ಲಲು ಬಯಸಿ ಶರೌಘಗಳಿಂದ ಅದೃಶ್ಯರನ್ನಾಗಿಸಿದರು. “ನಾನು ಪಾರ್ಥ ! ನಿಲ್ಲು !” ಎಂದೂ “ನಾನು ಕರ್ಣ ! ನಿಲ್ಲು ಫಲ್ಗುನ !” ಎಂದೂ ಕೂಗಿಕೊಳ್ಳುತ್ತಾ ವಾಕ್ಶಲ್ಯಗಳಿಂದ ಚುಚ್ಚುತ್ತಿರುವುದು ಕೇಳಿಬರುತ್ತಿತ್ತು.

ಸಮರದಲ್ಲಿ ವಿಚಿತ್ರವಾಗಿ, ಲಘುವಾಗಿ ಮತ್ತು ದೃಢವಾಗಿ

ಯುದ್ಧಮಾಡುತ್ತಿದ್ದ ಆ ವೀರರು ಸರ್ವಯೋಧರ ಸಮಾಗಮದಲ್ಲಿ ಪ್ರೇಕ್ಷಣೀಯವಾಗಿತ್ತು. ಸಮರದಲ್ಲಿ ಪರಸ್ಪರರನ್ನು ವಧಿಸಲು ಬಯಸಿ ಯುದ್ಧಮಾಡುತ್ತಿದ್ದ ಅವರನ್ನು ಸಿದ್ಧ-ಚಾರಣರು ಪ್ರಶಂಸಿಸಿದರು. ಆಗ ದುರ್ಯೋಧನನು ನಿನ್ನವರಿಗೆ

> "ರಾಧೇಯನನ್ನು ರಕ್ಷಿಸಿರಿ! ಸಮರದಲ್ಲಿ ಅರ್ಜುನನ್ನು ಸಂಹರಿಸದೇ ಹಿಂದಿರುಗುವುದಿಲ್ಲವೆಂದು ವೃಷನೇ ನನಗೆ ಹೇಳಿದ್ದಾನೆ"

ಎಂದು ಹೇಳಿದನು. ಇದರ ನಡುವೆ ಕರ್ಣನ ವಿಕ್ರಮವನ್ನು ನೋಡಿ ಅರ್ಜುನನು ಆಕರ್ಣವಾಗಿ ಸೆಳೆದು ಬಿಟ್ಟ ನಾಲ್ಕು ಉತ್ತಮ ಸಾಯಕಗಳಿಂದ ಕರ್ಣನ ನಾಲ್ಕೂ ಕುದುರೆಗಳನ್ನು ಮೃತ್ಯುಲೋಕಕ್ಕೆ ಕಳುಹಿಸಿಬಿಟ್ಟನು. ಭಲ್ಲದಿಂದ ಅವನ ಸಾರಥಿಯನ್ನು ರಥದ ನೊಗದ ಮೇಲಿಂದ ಬೀಳಿಸಿದನು. ನಿನ್ನ ಮಗನು ನೋಡುತ್ತಿದ್ದಂತೆಯೇ ಶರಗಳಿಂದ ಅವನನ್ನು ಮುಚ್ಚಿಬಿಟ್ಟನು. ಸಮರದಲ್ಲಿ ಹೀಗೆ ಕುದುರೆಗಳು ಮತ್ತು ಸಾರಥಿಯು ಹತರಾಗಲು, ಶರಜಾಲಗಳಿಂದ ಮುಚ್ಚಲ್ಪಟ್ಟು ಮೋಹಿತನಾದ ಅವನಿಗೆ ಏನು ಮಾಡಬೇಕೆಂದು ತೋಚದಾಯಿತು. ಆಗ ಅವನು ವಿರಥನಾದುದನ್ನು ಕಂಡು ಅಶ್ವತ್ಥಾಮನು ಅವನನ್ನು ತನ್ನ ರಥದಲ್ಲಿ ಏರಿಸಿಕೊಂಡು ಮತ್ತೆ ಅರ್ಜುನನೊಂದಿಗೆ ಯುದ್ಧದಲ್ಲಿ

ತೊಡಗಿದನು.

ಮದ್ರರಾಜನಾದರೋ ಕೌಂತೇಯನನ್ನು ಮೂವತ್ತು ಬಾಣಗಳಿಂದ ಪ್ರಹರಿಸಿದನು. ಶಾರದ್ವತನಾದರೋ ಇಪ್ಪತ್ತರಿಂದ ವಾಸುದೇವನನ್ನು ಹೊಡೆದು, ಹನ್ನೆರಡು ಶಿಲೀಮುಖಗಳಿಂದ ಹೊಡೆದನು. ಸಿಂಧುರಾಜನು ನಾಲ್ಕರಿಂದ ಮತ್ತು ವೃಷಸೇನನು ಏಳರಿಂದ ಪ್ರತ್ಯೇಕ ಪ್ರತ್ಯೇಕವಾಗಿ ಕೃಷ್ಣ-ಪಾರ್ಥರನ್ನು ಹೊಡೆದರು. ಹಾಗೆಯೇ ಅವರನ್ನು ಧನಂಜಯನು ಪ್ರತಿಯಾಗಿ ಹೊಡೆದನು. ದ್ರೋಣಪುತ್ರನನ್ನು ಅರವತ್ನಾಲ್ಕರಿಂದ, ಮದ್ರರಾಜನನ್ನು ನೂರರಿಂದ, ಸೈಂಧವನನ್ನು ಹತ್ತು ಭಲ್ಲಗಳಿಂದ, ವೃಷಸೇನನನ್ನು ಮೂರು ಶರಗಳಿಂದ, ಶಾರದ್ವತನನ್ನು ಇಪ್ಪತ್ತರಿಂದ ಹೊಡೆದು ಪಾರ್ಥನು ಜೋರಾಗಿ ಗರ್ಜಿಸಿದನು. ಸವ್ಯಸಾಚಿಯ ಪ್ರತಿಜ್ಞೆಯನ್ನು ಪ್ರತೀಘಾತಗೊಳಿಸಲು ಇಚ್ಛಿಸಿ ಕೌರವರೆಲ್ಲರೂ ಒಟ್ಟಿಗೇ ತಕ್ಷಣವೇ ಧನಂಜಯನ ಮೇಲೆ ಎರಗಿದರು.

ಆಗ ಅರ್ಜುನನು ಧಾರ್ತರಾಷ್ಟ್ರರನ್ನು ಭಯಪಡಿಸುತ್ತ ಸರ್ವತ್ರ ವಾರುಣಾಸ್ತ್ರವನ್ನು ಪ್ರಕಟಪಡಿಸಿದನು. ಅದಕ್ಕೆ ಪ್ರತಿಯಾಗಿ ಕುರುಗಳು ಮಹಾಮೂಲ್ಯ ರಥಗಳ ಮೇಲಿಂದ ಪಾಂಡುಪುತ್ರನ ಮೇಲೆ ಶರವರ್ಷಗಳನ್ನು ಸುರಿಸಿದರು. ಭ್ರಾಂತಗೊಳಿಸುವ, ಸುದಾರುಣವಾದ

ಆ ತುಮುಲ ಯುದ್ಧವು ಪ್ರಾರಂಭವಾಗಲು ರಾಜಪುತ್ರ ಕಿರೀಟಮಾಲಿಯು ಮಾತ್ರ ಸ್ವಲ್ಪವೂ ಭ್ರಾಂತನಾಗದೇ ಬಾಣಗಳ ಸಮೂಹಗಳನ್ನು ಪ್ರಯೋಗಿಸುತ್ತಲೇ ಇದ್ದನು. ರಾಜ್ಯವನ್ನು ಪಡೆಯಬೇಕೆಂದು ಬಯಸುತ್ತಿದ್ದ ಸವ್ಯಸಾಚಿಯು, ಹನ್ನೆರಡು ವರ್ಷಗಳು ಕುರುಗಳು ನೀಡಿದ ಕ್ಲೇಶಗಳನ್ನು ಸ್ಮರಿಸಿಕೊಳ್ಳುತ್ತಾ ಗಾಂಡೀವದಿಂದ ಹೊರಟ ಬಾಣಗಳಿಂದ ಸರ್ವ ದಿಕ್ಕುಗಳನ್ನೂ ಮುಚ್ಚಿದನು. ಕ್ರುದ್ಧನಾದ ಕಿರೀಟಿಯು ಪಿಂಗಳವರ್ಣದ ಮೌರ್ವಿಯಿಂದ ವೇಗವಾಗಿ ಶತ್ರುಗಳನ್ನು ಕೊಲ್ಲುತ್ತಿರುವಾಗ ಆಕಾಶವು ಉಲ್ಕೆಗಳಿಂದಲೋ ಎಂಬಂತೆ ಪ್ರದೀಪ್ತವಾಗಿತ್ತು. ಕೆಳಗೆ ಬಿದ್ದ ದೇಹಗಳ ಮೇಲೆ ಕಾಗೆಗಳು ಬಂದು ಬೀಳುತ್ತಿದ್ದವು. ಮಹಾಯಶಸ್ವೀ ಸೇನೆಗಳನ್ನು ಗೆಲ್ಲುವ ಕಿರೀಟಮಾಲಿಯು ಮಹಾ ಧನುಸ್ಸಿನಿಂದ ಬಿಟ್ಟ ಬಾಣಗಳಿಂದ ಕುದುರೆಗಳ ಮೇಲೆ ಮತ್ತು ಉತ್ತಮ ಆನೆಗಳ ಮೇಲೆ ಕುಳಿತಿದ್ದ ಕುರುಪ್ರವೀರರನ್ನು ಕೆಡವಿದನು. ನರಾಧಿಪರು ಭಾರವಾದ ಗದೆಗಳನ್ನೂ, ಕಬ್ಬಿಣದ ಪರಿಘಗಳನ್ನೂ, ಖಡ್ಗಗಳನ್ನೂ, ಶಕ್ತಿಗಳನ್ನೂ, ಭೀಮದರ್ಶನ ಮಹಾ ಶಸ್ತ್ರಗಳನ್ನೂ ಹಿಡಿದು ಪಾರ್ಥನ ಮೇಲೆ ಒಮ್ಮೆಲೇ ಆಕ್ರಮಣ ಮಾಡಿದರು. ಯಮರಾಷ್ಟ್ರವರ್ಧಕ ಮಹಾಧನುರ್ಧರ ವೀರನು ನುಗ್ಗಿಬರುತ್ತಿರುವ ರಥ-ಕುದುರೆ-ಆನೆ-ಪದಾತಿಸಂಘಗಳನ್ನು ಆಯುಧರಹಿತರನ್ನಾಗಿಯೂ ಜೀವರಹಿತರನ್ನಾಗಿಯೂ ಮಾಡಿದನು.

## ಜಯದ್ರಥವಧೆ

ಆ ಪಾರ್ಥ ಧನಂಜಯನು ರಣದಲ್ಲಿ ವಿಚಿತ್ರ ಅಸ್ತ್ರಗಳನ್ನು ಪ್ರದರ್ಶಿಸುತ್ತಾ ಒಂದೇ ಸಮಯದಲ್ಲಿ ಎಲ್ಲ ದಿಕ್ಕುಗಳಲ್ಲಿ ಕಾಣಿಸಿಕೊಳ್ಳುತ್ತಾ ಸಂಚರಿಸುತ್ತಿದ್ದನು. ಅಂಬರದಲ್ಲಿ ಮಧ್ಯಾಹ್ನವನ್ನು ತಲುಪಿದ ಸೂರ್ಯನಂತೆ ಪ್ರತಾಪಿಸುತ್ತಿರುವ ಪಾಂಡವನನ್ನು ಸರ್ವಭೂತಗಳೂ ಎವೆಯಿಕ್ಕಿ ನೋಡಲು ಶಕ್ಯರಾಗುತ್ತಿರಲಿಲ್ಲ. ಆ ಮಹಾತ್ಮನು ಗಾಂಡೀವದಿಂದ ಹೊರಬಿಡುತ್ತಿದ್ದ ಶರಸಮೂಹಗಳನ್ನು ಅಂಬರದಲ್ಲಿ ಹಂಸಗಳ ಪಂಗ್ತಿಗಳಂತೆ ಕಾಣುತ್ತಿದ್ದವು. ಅವನು ಎಲ್ಲಕಡೆ ವೀರರ ಅಸ್ತ್ರಗಳನ್ನು ಅಸ್ತ್ರಗಳಿಂದ ತಡೆಯುತ್ತಾ ತನ್ನನ್ನು ಉಗ್ರಕರ್ಮದಲ್ಲಿ ತೊಡಗಿಸಿಕೊಂಡು ರೌದ್ರನಾಗಿ ತೋರಿದನು. ಆ ಅರ್ಜುನನು ಜಯದ್ರಥನ ವಧೆಯನ್ನು ಬಯಸಿ ನಾರಾಚಗಳಿಂದ ಮೋಹಗೊಳಿಸುತ್ತಿರುವಂತೆ ಆ ರಥವರರನ್ನು ಅತಿಕ್ರಮಿಸಿದನು. ಅಸಿತಸಾರಥಿ ಧನಂಜಯನು ಎಲ್ಲ ದಿಕ್ಕುಗಳಲ್ಲಿ ಶರಗಳನ್ನು ಪ್ರಯೋಗಿಸುತ್ತಾ ವೇಗವಾಗ ರಣದಲ್ಲಿ ಸಂಚರಿಸುತ್ತಿರುವಂತೆ ತೋರುತ್ತಿದ್ದನು. ಆ ಮಹಾತ್ಮ ಶೂರನ ನೂರಾರು ಸಹಸ್ರಾರು ಶರಸಮೂಹಗಳು ಅಂತರಿಕ್ಷದಲ್ಲಿ ಅಲ್ಲಲ್ಲಿಯೇ ತಿರುಗುತ್ತಿರುವಂತೆ ತೋರುತ್ತಿದ್ದವು. ಆಗ ಪಾಂಡವ ಮಹೇಷ್ವಾಸನು ಬಾಣಗಳನ್ನು ತೆಗೆದುಕೊಳ್ಳುವುದನ್ನಾಗಲಿ, ಹೂಡುವುದನ್ನಾಗಲೀ,

ಬಿಡುವುದನ್ನಾಗಲೀ ಯಾರೂ ಕಾಣುತ್ತಿರಲಿಲ್ಲ. ಹಾಗೆ ಸರ್ವ ದಿಕ್ಕುಗಳನ್ನೂ ಸರ್ವ ರಥಿಗಳನ್ನೂ ರಣದಲ್ಲಿ ವಿಮೋಹಿತರನ್ನಾಗಿ ಮಾಡಿ ಕೌಂತೇಯನು ಜಯದ್ರಥನ ಬಳಿ ಬಂದೇಬಿಟ್ಟನು ಮತ್ತು ಅರತ್ನಾಲ್ಕು ನತಪರ್ವಶರಗಳಿಂದ ಅವನನ್ನು ಹೊಡೆದನು. ಗಾಂಡೀವಧನ್ವಿಯ ಶರಗಳಿಂದ ಪೀಡಿತನಾದ ಸೈಂಧವನಾದರೋ ಗಾಯಗೊಂಡು ಕೋಪಗೊಂಡ ಸಲಗದಂತೆ ಸಹಿಸಿಕೊಳ್ಳಲಿಲ್ಲ. ಆ ವರಾಹಧ್ವಜನು ಕೂಡಲೇ ಹದ್ದಿನ ಗರಿಗಳನ್ನುಳ್ಳ ಹಾವಿನ ವಿಷಕ್ಕೆ ಸಮಾನ ಪ್ರಖರವುಳ್ಳ, ಕಮ್ಮಾರನಲ್ಲಿಂದ ಮಾಡಿಸಲ್ಪಟ್ಟ ನಿಶಿತ ಜಿಹ್ಮಗ ಸಾಯಕಗಳನ್ನು ಸವ್ಯಸಾಚಿಯ ಮೇಲೆ ಪ್ರಯೋಗಿಸಿದನು.

ಮೂರರಿಂದ ಗಾಂಡೀವವನ್ನು ಹೊಡೆದು, ಆರು ನಾರಾಚಗಳಿಂದ ಅರ್ಜುನನನ್ನೂ, ಎಂಟರಿಂದ ಕುದುರೆಗಳನ್ನೂ, ಮತ್ತು ಒಂದು ಪತ್ರಿಯಿಂದ ಧ್ವಜವನ್ನೂ ಹೊಡೆದನು. ಸೈಂಧವನು ಕಳುಹಿಸಿದ ಆ ತೀಕ್ಷ್ಣ ಶರಗಳನ್ನು ತುಂಡರಿಸಿ ಅರ್ಜುನನು ಎರಡು ಬಾಣಗಳಿಂದ ಸೈಂಧವನ ಸಾರಥಿಯ ಶಿರವನ್ನು ಕಾಯದಿಂದ ಮತ್ತು ಸಮಲಂಕೃತವಾದ ಧ್ವಜವನ್ನು ಕತ್ತರಿಸಿದನು. ಅವನ ಶರದಿಂದ ಹೊಡೆಯಲ್ಪಟ್ಟು ದಂಡವು ತುಂಡಾಗಲು ಸಿಂಧುರಾಜನ ಆ ದೊಡ್ಡ, ಅಗ್ನಿಶಿಖೆಯಂತಿದ್ದ ವರಾಹವು ಕೆಳಗೆ ಬಿದ್ದಿತು.

ಇದೇ ಸಮಯದಲ್ಲಿ ಭಾಸ್ಕರನು ಶೀಘ್ರವಾಗಿ ಹೋಗುತ್ತಿರಲು, ತ್ವರೆಮಾಡಿ ಜನಾರ್ದನನು ಪಾಂಡವನಿಗೆ ಹೇಳಿದನು:

"ಧನಂಜಯ! ದುರಾತ್ಮ ಸೈಂಧವನ ಶಿರಸ್ಸನ್ನು ಕತ್ತರಿಸು. ದಿವಾಕರನು ಅಸ್ತಾಚಲವನ್ನು ಸೇರುತ್ತಿದ್ದಾನೆ. ಜಯದ್ರಥನ ವಧೆಯ ಕುರಿತಾದ ನನ್ನ ಈ ಮಾತನ್ನೂ ಕೇಳು! ಜಗತ್ತಿನಲ್ಲಿ ವಿಶ್ರುತನಾಗಿದ್ದ ಸೈಂಧವನ ತಂದೆ ವೃದ್ಧಕ್ಷತ್ರನು ಬಹಳ ಸಮಯದ ನಂತರ ಮಗನನ್ನಾಗಿ ಈ ಜಯದ್ರಥನನ್ನು ಪಡೆದನು. ಆಗ ಮೇಘದುಂಧುಭಿಯಂತೆ ಮೊಳಗುತ್ತಿದ್ದ ಅಶರೀರವಾಣಿಯು ಅವನಿಗೆ ಹೇಳಿತು: "ನಿನ್ನ ಈ ಮಗನು ಮನುಷ್ಯರಲ್ಲಿ ಕುಲ-ಶೀಲ-ದಮಗಳಲ್ಲಿ ಗುಣಶೀಲನಾಗಿ ಎರಡೂ ಕುಲಗಳಿಗೆ ಸದೃಶನಾಗಿರುತ್ತಾನೆ. ಲೋಕದಲ್ಲಿ ಕ್ಷತ್ರಿಯಪ್ರವರನೆಂದೆನಿಸಿಕೊಳ್ಳುತ್ತಾನೆ. ಶೂರರೂ ಇವನನ್ನು ಸದಾ ಸತ್ಕರಿಸುತ್ತಾರೆ. ಆದರೆ ಶತ್ರುವಾಗಿ ಯುದ್ಧಮಾಡುತ್ತಿರುವಾಗ ಸಂಗ್ರಾಮದಲ್ಲಿ ಸಂಕ್ರುದ್ಧನಾಗಿ ಧನ್ವಿಯೋರ್ವನು ಇವನ ಶಿರವನ್ನು ಕತ್ತರಿಸುತ್ತಾನೆ." ಇದನ್ನು ಕೇಳಿ ತುಂಬಾ ಸಮಯ ಚಿಂತಿಸಿದ ಅರಿಂದಮ ಸಿಂಧುರಾಜನು ಪುತ್ರಸ್ನೇಹದಿಂದ ಪೀಡಿತನಾಗಿ ತನ್ನ ಎಲ್ಲ ದಾಯಾದಿ-

ಬಾಂಧವರಿಗೆ ಹೇಳಿದನು: “ಸಂಗ್ರಾಮದಲ್ಲಿ ಮಹಾ ಭಾರವನ್ನು ಹೊತ್ತು ಯುದ್ಧಮಾಡುತ್ತಿದ್ದ ನನ್ನ ಮಗನ ಶಿರವನ್ನು ಯಾರು ಭೂಮಿಯ ಮೇಲೆ ಬೀಳಿಸುತ್ತಾರೋ ಅವನ ಶಿರವೂ ಕೂಡ ನೂರು ಚೂರಾಗುತ್ತದೆ. ಇದು ಖಂಡಿತ!” ಹೀಗೆ ಹೇಳಿ ಜಯದ್ರಥನನ್ನು ರಾಜ್ಯದಲ್ಲಿ ಸ್ಥಾಪಿಸಿ ವೃದ್ಧಕ್ಷತ್ರನು ವನಕ್ಕೆ ತೆರಳಿ ತಪಸ್ಸಿನಲ್ಲಿ ತೊಡಗಿದನು. ಆ ತೇಜಸ್ವಿಯು ಸಮಂತಪಂಚಕದ ಹೊರಗೆ ಘೋರವಾದ ದುರಾಸದ ತಪಸ್ಸನ್ನು ತಪಿಸುತ್ತಿದ್ದಾನೆ. ಆದುದರಿಂದ ನೀನು ಘೋರವೂ ಅದ್ಭುತವೂ ಆದುದನ್ನು ಮಾಡಬಲ್ಲ ದಿವ್ಯಾಸ್ತ್ರದಿಂದ ಜಯದ್ರಥನ ಕುಂಡಲಗಳೊಂದಿಗೆ ಶಿರಸ್ಸನ್ನು ಕತ್ತರಿಸಿ ವೃದ್ಧಕ್ಷತ್ರನ ತೊಡೆಯ ಮೇಲೆ ಕೆಡವು. ಆದರೆ ಈಗ ನೀನು ಅವನ ತಲೆಯನ್ನು ನೆಲದ ಮೇಲೆ ಬೀಳಿಸಿದರೆ ನಿನ್ನ ತಲೆಯೂ ಕೂಡ ನೂರು ಚೂರಾಗಿ ಒಡೆಯುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಇದು ರಾಜಾ ಪೃಥಿವೀಪತಿಗೆ ತಿಳಿಯದಂತೆ ದಿವ್ಯ ಅಸ್ತ್ರದ ಆಶ್ರಯದಲ್ಲಿ ಇದನ್ನು ಮಾಡು. ಸಮಸ್ತವಾದ ಈ ಮೂರು ಲೋಕಗಳಲ್ಲಿಯೂ ನಿನಗೆ ಅಸಾಧ್ಯವಾದ ಕಾರ್ಯವೆನ್ನುವುದು ಯಾವುದೂ ಇಲ್ಲ.”



ಈ ಮಾತನ್ನು ಕೇಳಿ ಅರ್ಜುನನು ತಕ್ಷಣವೇ ಕಟವಾಯಿಗಳನ್ನು ಸವರುತ್ತಾ ಇಂದ್ರನ ವಜ್ರಾಯುಧದಂತೆ ಕಠಿನಸ್ಪರ್ಶಿಯಾದ, ದಿವ್ಯಮಂತ್ರಗಳಿಂದ ಅಭಿಮಂತ್ರಿತವಾದ, ಸರ್ವಭಾರಗಳನ್ನೂ ಸಹಿಸಿಕೊಳ್ಳಬಲ್ಲ, ಗಂಧ-ಮಾಲೆಗಳಿಂದ ಅರ್ಚಿತವಾದ ಶರವನ್ನು ಸೈಂಧವನ ವಧೆಗಾಗಿ ಬಿಟ್ಟನು. ಗಾಂಡೀವದಿಂದ ಹೊರಟ ಆ ಶರವು ಮರದ ಮೇಲಿಂದ ಆಹಾರವನ್ನು ಎತ್ತಿಕೊಂಡು ಹೋಗುವ ಗಿಡುಗ ಪಕ್ಷಿಯಂತೆ ಸೈಂಧವನ ಶಿರವನ್ನು ಅಪಹರಿಸಿ ಮೇಲೆ ಹಾರಿತು. ಪುನಃ ಶರಗಳಿಂದ ಅದನ್ನು ಇನ್ನೂ ಮೇಲಕ್ಕೆ ಏರಿಸಿ ಧನಂಜಯನು ದುಹೃದರ ಸಂತೋಷವನ್ನು ಅಪಹರಿಸಿ ಸುಹೃದರಿಗೆ ಹರ್ಷವನ್ನಿತ್ತನು.

ಶರಗಳಿಂದ ಸೇತುವೆಯಂತೆ ಮಾಡಿ ಪಾಂಡವನು ಅವನ ಶಿರವನ್ನು ಸಮಂತಪಂಚಕದ ಹೊರಗೆ ಕಳುಹಿಸಿದನು. ಇದೇ ಸಮಯದಲ್ಲಿ ಧೃತರಾಷ್ಟ್ರನ ಸಂಬಂಧಿ ತೇಜಸ್ವಿ ಮಹೀಪತಿ ವೃದ್ಧಕ್ಷತ್ರನು ಸಂಧ್ಯಾವಂದನೆಯಲ್ಲಿ ತೊಡಗಿದ್ದನು. ಕುಳಿತಿದ್ದ ಅವನ ತೊಡೆಗಳ ಮೇಲೆ ಸಿಂಧುರಾಜನ ಕಪ್ಪು ಕೂದಲಿನ, ಕುಂಡಲಗಳೊಂದಿಗಿನ ರುಂಡವು ಬಿದ್ದಿತು. ತನ್ನ ತೊಡೆಯಮೇಲೆ ಬಿದ್ದಿದ್ದ ಕುಂಡಲಗಳಿಂದ ಸುಂದರವಾಗಿದ್ದ ತಲೆಯನ್ನು ನೃಪತಿ ವೃದ್ಧಕ್ಷತ್ರನು ಗಮನಿಸಲೇ ಇಲ್ಲ. ಜಪವನ್ನು ಮುಗಿಸಿ ಧೀಮತ ವೃದ್ಧಕ್ಷತ್ರನು ಎದ್ದು ನಿಲ್ಲಲು ಒಮ್ಮೆಲೇ

ಶಿರವು ನೆಲದಮೇಲೆ ಬಿದ್ದಿತು. ಆಗ ಅವನ ಮಗನ ಶಿರವು ನೆಲವನ್ನು ಮುಟ್ಟಲು ನರೇಂದ್ರನ ತಲೆಯೂ ಕೂಡ ನೂರು ಚೂರುಗಳಾಯಿತು.

ಆಗ ಸರ್ವ ಭೂತಗಳೂ ಉತ್ತಮ ವಿಸ್ಮಿತರಾದರು. ವಾಸುದೇವನು ಮಹಾರಥ ಬೀಭತ್ಸುವನ್ನು ಹೊಗಳಿದನು. ಸಿಂಧುರಾಜ ಜಯದ್ರಥನು ಹತನಾದುದನ್ನು ನೋಡಿ ಧೃತರಾಷ್ಟ್ರ ಪುತ್ರರು ದುಃಖದಿಂದ ಕಣ್ಣೀರು ಸುರಿಸಿದರು. ಭೀಮಸೇನನೂ ಕೂಡ ಸಂಗ್ರಾಮದಲ್ಲಿ ಪಾಂಡವನಿಗೆ ಕೇಳುವಂತೆ ಎದೆ ತುಂಬಿ ಜೋರಾಗಿ ಸಿಂಹನಾದಗೈದನು. ಆ ಮಹಾನಾದವನ್ನು ಕೇಳಿ ಧರ್ಮಪುತ್ರ ಯುಧಿಷ್ಠಿರನು ಫಲ್ಗುನನಿಂದ ಸೈಂಧವನು ಹತನಾದನೆಂದು ತಿಳಿದುಕೊಂಡನು.

ಆಗ ವಾದ್ಯಘೋಷಗಳಿಂದ ತನ್ನವರನ್ನು ಹರ್ಷಗೊಳಿಸುತ್ತಾ ಅರ್ಜುನನು ಯುದ್ಧೇಚ್ಛೆಯಿಂದ ಭಾರದ್ವಾಜನನ್ನು ಆಕ್ರಮಣಿಸಿದನು. ಭಾಸ್ಕರನು ಅಸ್ತಂಗತನಾಗುತ್ತಿರಲು ಸೋಮಕರೊಂದಿಗೆ ದ್ರೋಣನ ಲೋಮಹರ್ಷಣ ಸಂಗ್ರಾಮವು ನಡೆಯಿತು. ಸೈಂಧವನು ಹತನಾದ ನಂತರ ಭಾರದ್ವಾಜನನ್ನು ಸಂಹರಿಸಲು ಬಯಸಿ ಆ ಮಹಾರಥರು ಸರ್ವ ಪ್ರಯತ್ನದಿಂದ ಯುದ್ಧಮಾಡುತ್ತಿದ್ದರು. ಸೈಂಧವನನ್ನು ಸಂಹರಿಸಿ ಜಯವನ್ನು ಪಡೆದ ಪಾಂಡವರಾದರೋ ಜಯೋನ್ಮತ್ತರಾಗಿ ಅಲ್ಲಲ್ಲಿ ದ್ರೋಣನೊಂದಿಗೆ ಯುದ್ಧಮಾಡಿದರು. ನೃಪ ಸೈಂಧವನನ್ನು ಕೊಂದು

ಅರ್ಜುನನಾದರೋ ಕೌರವ ರಥಸತ್ತಮ ಯೋಧರೊಂದಿಗೆ ಯುದ್ಧಮಾಡಿದನು. ಹಿಂದೆ ಮಾಡಿದ ಪ್ರತಿಜ್ಞೆಯನ್ನು ಪೂರೈಸಿದ ಆ ವೀರ ಕಿರೀಟಮಾಲಿಯು ದೇವರಾಜನು ದೇವಶತ್ರುಗಳನ್ನು ಹೇಗೋ ಹಾಗೆ ಮತ್ತು ಸೂರ್ಯನು ಉದಯಿಸಿ ಕತ್ತಲೆಯನ್ನು ಹೇಗೆ ಕಳೆಯುವನೋ ಹಾಗೆ ಎಲ್ಲಕಡೆ ವಧಿಸುತ್ತಿದ್ದನು.

ಪಾರ್ಥನಿಂದ ರಣದಲ್ಲಿ ಸೈಂಧವನು ಹತನಾದುದನ್ನು ಕಂಡು ಕೃಪ ಶಾರದ್ವತನು ಕ್ರೋಧವಶನಾದನು. ಅವನು ಮಹಾ ಶರವರ್ಷದಿಂದ ಪಾಂಡವನನ್ನು ಮುಸುಕಿದನು. ದ್ರೌಣಿಯೂ ಕೂಡ ಪಾರ್ಥ ಫಲ್ಗುನನ ರಥವನ್ನು ಆಕ್ರಮಣಿಸಿದನು. ಅವರಿಬ್ಬರು ರಥಿಶ್ರೇಷ್ಠರೂ ಆ ರಥಸತ್ತಮನ ಎರಡೂ ಕಡೆಯಗಳಿಂದ ತೀಕ್ಷ್ಣ ವಿಶಿಖಗಳನ್ನು ಸುರಿಸಿದರು. ಆಗ ರಥಿಗಳಲ್ಲಿ ಶ್ರೇಷ್ಠ ಮಹಾಭುಜನು ಎರಡೂ ಕಡೆಗಳಿಂದ ಬೀಳುತ್ತಿರುವ ಮಹಾ ಶರವರ್ಷಗಳಿಂದ ಪೀಡಿತನಾಗಿ ಸಂಕಟಕ್ಕೊಳಗಾದನು. ಅಲ್ಲಿ ಧನಂಜಯನು ಗುರುವನ್ನಾಗಲೀ ಗುರುಪುತ್ರನನ್ನಾಗಲೀ ಸಂಹರಿಸಲು ಬಯಸದೇ ಕೇವಲ ಚಮತ್ಕಾರಗಳನ್ನು ತೋರಿಸುತ್ತಿದ್ದನು. ದ್ರೌಣಿ ಮತ್ತು ಶಾರದ್ವತರ ಅಸ್ತ್ರಗಳನ್ನು ಅಸ್ತ್ರಗಳಿಂದ ತಡೆಯುತ್ತಾ, ಅವರನ್ನು ಕೊಲ್ಲಬಾರದೆಂದು, ಮಂದವೇಗದಲ್ಲಿ ಬಾಣಗಳನ್ನು ಬಿಡುತ್ತಿದ್ದನು. ಅವನು ತುಂಬಾ

ಜೋರಾಗಿ ಬಿಡದಿದ್ದರೂ ಕೂಡ ಜಯನಿಂದ ಬಿಡಲ್ಪಟ್ಟ ವಿಶಿಖ ಬಾಣಗಳು ಅವರಲ್ಲಿ ಬಹಳ ಆಳದವರೆಗೂ ತಾಗಿ ಗಾಯಗಳನ್ನುಂಟುಮಾಡಿದವು. ಆಗ ಕೌಂತೇಯನ ಶರಗಳಿಂದ ಪೀಡಿತನಾಗಿ ಶಾರದ್ವತನು ರಥದಲ್ಲಿ ಮೂರ್ಛೆಹೊಂದಿ ಆಸನದಲ್ಲಿಯೇ ಒರಗಿದನು. ತನ್ನ ಒಡೆಯನು ಶರಪೀಡಿತರಾಗಿ ಮೂರ್ಛೆ ಹೋಗಿದ್ದಾರೆ ಎಂದು ತಿಳಿಯದೇ ಇವನು ಹತನಾದನೆಂದೇ ತಿಳಿದು ಸಾರಥಿಯು ಅಲ್ಲಿಂದ ಪಲಾಯನಗೈದನು.

ಕೃಪ ಶಾರದ್ವತನು ಯುದ್ಧದಲ್ಲಿ ಮೂರ್ಛೆಹೋಗಲು ಅಶ್ವತ್ಥಾಮನು ಪಾಂಡವನನ್ನು ಬಿಟ್ಟು ಬೇರೆಯವರೊಡನೆ ಯುದ್ಧಮಾಡತೊಡಗಿದನು. ಶರಪೀಡಿತನಾದ ಶಾರದ್ವತನು ಮೂರ್ಛಿತನಾದುದನ್ನು ನೋಡಿ ರಥದಲ್ಲಿಯೇ ಅರ್ಜುನನು ಕೃಪಾವಿಷ್ಟನಾಗಿ ವಿಲಪಿಸಿದನು:

> “ಹೀಗಾಗುವುದೆಂದು ಕಂಡೇ ಮಹಾಪ್ರಜ್ಞ ಕ್ಷತ್ತನು ಕುಲಾಂತಕನಾದ ಪಾಪೀ ಸುಯೋಧನನು ಹುಟ್ಟಿದಾಗಲೇ ರಾಜನಿಗೆ ಹೇಳಿದ್ದನು: “ಈ ಕುಲಪಾಂಸನನನ್ನು ಈಗಲೇ ಪರಲೋಕಕ್ಕೆ ಕಳುಹಿಸಿಬಿಡು! ಇವನ ಬುದ್ಧಿಯಿಂದಾಗಿ ಕುರುಮುಖ್ಯರಿಗೆ ಮಹಾ ಭಯವು ಉಂಟಾಗುತ್ತದೆ!” ಆ ಸತ್ಯವಾದಿಯ ಮಾತೇ ಈಗ ಸತ್ಯವಾದಂತಿದೆ. ಅವನ

ಕೃತ್ಯದಿಂದಾಗಿಯೇ ನಾನು ಇಂದು ಬಾಣದಿಂದ ಮಲಗಿರುವ ಕೃಪನನ್ನು ನೋಡುತ್ತಿದ್ದೇನೆ. ಕ್ಷತ್ರಿಯ ಧರ್ಮಕ್ಕೆ ಧಿಕ್ಕಾರ! ಬಲಪೌರುಷಕ್ಕೆ ಧಿಕ್ಕಾರ! ನನ್ನಂಥಹ ಯಾರು ತಾನೇ ಆಚಾರ್ಯ ಬ್ರಾಹ್ಮಣನಿಗೆ ದ್ರೋಹವೆಸಗುತ್ತಾನೆ? ಋಷಿಪುತ್ರ ನನ್ನ ಆಚಾರ್ಯ, ದ್ರೋಣನ ಪ್ರಿಯ ಸಖನಾದ ಇವನು ನನ್ನ ಬಾಣಗಳಿಂದ ಪೀಡಿತನಾಗಿ ರಥದಲ್ಲಿಯೇ ಒರಗಿ ಮಲಗಿದ್ದಾನೆ. ಬಯಸದಿದ್ದರೂ ನಾನು ಅವರನ್ನು ವಿಶಿಖಗಳಿಂದ ತುಂಬಾ ಪೀಡಿಸಿದೆನು. ಅವರು ರಥದಲ್ಲಿಯೇ ಕುಸಿದು ಬಿದ್ದುದು ನನ್ನ ಪಣಗಳನ್ನು ಅತೀವವಾಗಿ ಪೀಡಿಸುತ್ತಿದೆ. ಶರಾರ್ದಿತನಾದ ನಾನು ಆ ಮಹಾದ್ಯುತಿಯನ್ನು ಸುಮ್ಮನೇ ನೋಡುತ್ತಿರಬೇಕಿತ್ತು. ಆದರೆ ನನ್ನ ಅನೇಕ ಬಾಣಗಳಿಂದ ಹೊಡೆಯಲ್ಪಟ್ಟು ಅವನು ಎಲ್ಲ ಜೀವಿಗಳೂ ಹೋಗುವ ದಾರಿಯಲ್ಲಿ ಹೋಗಿದ್ದಾನೆ. ಅವನು ಬಿದ್ದು ನನ್ನ ಮಗನ ವಧೆಗಿಂತಲೂ ಹೆಚ್ಚಿನ ಶೋಕವನ್ನು ಇವನು ನೀಡಿದ್ದಾನೆ. ಕೃಷ್ಣ! ಅವನು ತನ್ನ ರಥದಲ್ಲಿಯೇ ಜೀವತೊರೆದು ಹೋಗುತ್ತಿರುವುದನ್ನು ನೋಡು! ವಿದ್ಯೆಯನ್ನು ನೀಡಿದ ಆಚಾರ್ಯರಿಗೆ ಇಷ್ಟವಾದ ಉಡುಗೊರೆಗಳನ್ನಿತ್ತು ನರರ್ಷಭರು ದೇವತ್ವವನ್ನು ಹೊಂದುತ್ತಾರೆ. ಆದರೆ

ವಿದ್ಯೆಯನ್ನು ಪಡೆದು ಗುರುವನ್ನು ಕೊಲ್ಲುವ ಕೆಟ್ಟ ನಡತೆಯುಳ್ಳ ಪುರುಷಾಧಮರು ನರಕಕ್ಕೆ ಹೋಗುತ್ತಾರೆ. ಖಂಡಿತವಾಗಿಯೂ ಇಂದಿನ ನನ್ನ ಈ ಕೆಲಸದಿಂದಾಗಿ ನಾನು ನರಕಕ್ಕೆ ಹೋಗುವವನಿದ್ದೇನೆ. ಆಚಾರ್ಯ ಕೃಪನ ರಥವನ್ನು ಶರವರ್ಷದಿಂದ ಮುಚ್ಚಿಬಿಟ್ಟೆನಲ್ಲ! ಹಿಂದೆ ಅಸ್ತ್ರಗಳನ್ನು ಹೇಳಿಕೊಡುವಾಗ ಕೃಪನು ನನಗೆ "ಕೌರವ್ಯ! ಗುರುವನ್ನು ಎಂದೂ ಹೊಡೆಯಬಾರದು!" ಎಂದು ಹೇಳಿದ್ದನು. ಅವನ ಆ ವಚನದಂತೆ ನಡೆದುಕೊಂಡಿಲ್ಲ! ಇಂದು ನಾನು ಮಹಾತ್ಮ ಆಚಾರ್ಯನ ಮೇಲೆ ನನ್ನ ವಿಶಿಖಗಳನ್ನು ಸುರಿದೆನಲ್ಲ! ಪೂಜ್ಯನಾದ, ಪಲಾಯನಮಾಡದಿರುವ ಗೌತಮನಿಗೆ ನಮಸ್ಕರಿಸುತ್ತೇನೆ. ವಾರ್ಷ್ಣೇಯ! ಅವರ ಮೇಲೆ ಪ್ರಹರಿಸಿದ ನನಗೆ ಧಿಕ್ಕಾರ!"

ಹೀಗೆ ವಿಲಪಿಸುತ್ತಿರುವ ಸವ್ಯಸಾಚಿಯ ಬಳಿ ಸೈಂಧವನು ಹತನಾದುದನ್ನು ನೋಡಿದ ರಾಧೇಯನು ಬಂದು ಆಕ್ರಮಿಸಿದನು. ಹತ್ತಿರಬರುತ್ತಿದ್ದ ರಾಧೇಯನನ್ನು ನೋಡಿ ಪಾರ್ಥನು ನಕ್ಕು, ದೇವಕೀ ಪುತ್ರನಿಗೆ ಈ ಮಾತನ್ನಾಡಿದನು:

"ಇಗೋ! ಅಧಿರಥಿಯು ಸಾತ್ಯಕಿಯ ರಥದ ಕಡೆ

ಹೋಗುತ್ತಿದ್ದಾನೆ. ಭೂರಿಶ್ರವನು ಹತನಾದುದನ್ನು ಇನ್ನೂ ಸಹಿಸಿಕೊಂಡಿಲ್ಲವೆಂದು ತೋರುತ್ತದೆ. ಜನಾರ್ದನ! ಅವನು ಎಲ್ಲಿ ಹೋಗುತ್ತಿದ್ದಾನೋ ಅಲ್ಲಿಗೆ ಕುದುರೆಗಳನ್ನು ಓಡಿಸು! ವೃಷಸೇನನು ಸಾತ್ಯಕಿಯನ್ನು ಸೋಮದತ್ತನ ಪದವಿಗೆ ಕಳುಹಿಸದೇ ಇರಲಿ!"

ಹೀಗೆ ಹೇಳಲು ಮಹಾಬಾಹು ಮಹಾತೇಜಸ್ವಿ ಕೇಶವನು ಸವ್ಯಸಾಚಿಗೆ ಕಾಲಯುಕ್ತವಾದ ಈ ಮಾತನ್ನಾಡಿದನು:

"ಪಾಂಡವ! ಆ ಮಹಾಬಾಹು ಸಾತ್ವತರ್ಷಭನೊಬ್ಬನೇ ಕರ್ಣನಿಗೆ ಸಾಕು. ದ್ರುಪದನ ಇಬ್ಬರು ಮಕ್ಕಳೊಂದಿರುವಾಗ ಇನ್ನೇನು? ಮಹಾಉಲ್ಕೆಯಂತೆ ಪ್ರಜ್ವಲಿಸುತ್ತಿರುವ ವಾಸವನ ಶಕ್ತಿಯು ಅವನಲ್ಲಿ ಇರುವಾಗ ಕರ್ಣನ ಜೊತೆ ನೀನು ಯುದ್ಧಮಾಡುವುದು ಸರಿಯಲ್ಲ. ಆ ಪರವೀರಹನು ನಿನಗಾಗಿಯೇ ಅದನ್ನು ಪೂಜಿಸಿ ರಕ್ಷಿಸುತ್ತಾ ಬಂದಿದ್ದಾನೆ. ಈಗ ಕರ್ಣನು ಸಾತ್ವತನ ಕಡೆ ಹೇಗೆ ಹೋಗುತ್ತಿದ್ದಾನೋ ಹಾಗೆ ಹೋಗಲಿ. ಕೌರವ್ಯ! ಆ ದುರಾತ್ಮನ ಸಮಯವನ್ನು ನಾನು ತಿಳಿದಿದ್ದೇನೆ."

## ಕರ್ಣ-ಸಾತ್ಯಕಿಯರ ಯುದ್ಧ

ವೀರ ಸಾತ್ಯಕಿಯು ಭೂರಿಶ್ರವನಿಂದ ಸೋಲುತ್ತಾನೆಂದು ಮೊದಲೇ ಶ್ರೀಕೃಷ್ಣನಿಗೆ ಮನೋಗತವಾಗಿತ್ತು. ಜನಾರ್ದನನಿಗೆ ಅತೀತವೂ ಅನಾಗತವೂ ತಿಳಿದಿದೆ. ಆದುದರಿಂದಲೇ ಆ ಮಹಾಬಲನು ಸೂತ ದಾರುಕನನ್ನು ಕರೆದು "ನಾಳೆಗೆ ನನ್ನ ರಥವನ್ನು ಸಜ್ಜುಗೊಳಿಸು!" ಎಂಬ ಸಂದೇಶವನ್ನಿತ್ತಿದ್ದನು. ದೇವತೆಗಳಾಗಲೀ, ಗಂಧರ್ವರಾಗಲೀ, ಯಕ್ಷ-ಉರಗ-ರಾಕ್ಷಸರಾಗಲೀ, ಮಾನವರಾಗಲೀ ಈ ಕೃಷ್ಣರನ್ನು ಗೆಲ್ಲುವವರು ಯಾರೂ ಇಲ್ಲ. ಅವರಿಬ್ಬರ ಅತುಲ ಪ್ರಭಾವವನ್ನು ಪಿತಾಮಹನೇ ಮೊದಲಾಗಿ ದೇವತೆಗಳೂ ಸಿದ್ಧರೂ ಬಲ್ಲರು. ಸಾತ್ಯಕಿಯು ವಿರಥನಾದುದನ್ನು ಮತ್ತು ಕರ್ಣನು ಆಯುಧವನ್ನೆತ್ತಿ ಬರುತ್ತಿರುವುದನ್ನು ಕಂಡು ಮಾಧವನು ಮಹಾವೇಗದಿಂದ ಋಷಭ ಸ್ವರದಲ್ಲಿ ಶಂಖವನ್ನು ಊದಿದನು. ಶಂಖದ ಆ ನಾದವನ್ನು ಕೇಳಿ ಸಂದೇಶವನ್ನು ಅರ್ಥಮಾಡಿಕೊಂಡ ದಾರುಕನು ಅವನಿಗಾಗಿ ಗರುಡನು ನೆಲೆಸಿರುವ ಧ್ವಜವುಳ್ಳ ರಥವನ್ನು ತಂದನು. ಆಗ ಶಿನಿಯ ಪೌತ್ರನು ಕೇಶವನ ಅನುಮತಿಯಂತೆ ದಾರುಕ ಸಂಯುಕ್ತವಾದ ಆ ಆದಿತ್ಯನಂತೆ ಪ್ರಜ್ವಲಿಸುತ್ತಿರುವ ರಥವನ್ನು ಏರಿದನು. ಬೇಕಾದಲ್ಲಿಗೆ ಹೋಗಬಲ್ಲ, ಮಹಾವೇಗಶಾಲಿಗಳಾದ, ಹೇಮಭಾಂಡಗಳಿಂದ ವಿಭೂಷಿತವಾದ, ಸೈನ್ಯ-ಸುಗ್ರೀವ-ಮೇಘಪುಷ್ಪ-ಬಲಾಹಕಗಳೆಂಬ ಅಗ್ರ ಅಶ್ವಗಳನ್ನು

ಕಟ್ಟಿದ್ದ ವಿಮಾನದಂತಿದ್ದ ರಥವನ್ನು ಏರಿ ಅವನು ಅನೇಕ ಸಾಯಕಗಳನ್ನು ಪ್ರಹರಿಸುತ್ತಾ ರಾಧೇಯನನ್ನು ಆಕ್ರಮಣಿಸಿದನು. ಚಕ್ರರಕ್ಷಕರಾದ ಯುಧಾಮನ್ಯು ಉತ್ತಮೌಜಸರೂ ಕೂಡ ಧನಂಜಯನ ರಥವನ್ನು ತೊರೆದು ರಾಧೇಯನೊಂದಿಗೆ ಯುದ್ಧಕ್ಕೆ ತೊಡಗಿದರು. ರಾಧೇಯನೂ ಕೂಡ ರಣದಲ್ಲಿ ಸಂಕ್ರುದ್ಧನಾಗಿ ಶರವರ್ಷವನ್ನು ಸುರಿಸುತ್ತಾ ಶೈನೇಯನನ್ನು ಆಕ್ರಮಣಿಸಿದನು. ಇದೂವರೆಗೆ ಅಂಥಹ ಯುದ್ಧದ ಕುರಿತು ಭೂಮಿಯಲ್ಲಾಗಲೀ, ದಿವಿಯಲ್ಲಾಗಲೀ, ದೇವ-ಗಂಧರ್ವ-ಅಸುರ-ಉರಗ-ರಾಕ್ಷಸರಲ್ಲಿಯಾಗಲೀ ಕೇಳಿರಲಿಲ್ಲ. ಅವರಿಬ್ಬರ ಯುದ್ಧವನ್ನೂ ನೋಡಿ ಸಮ್ಮೂಢಚೇತನರಾಗಿ ರಥ-ಕುದುರೆ-ಪದಾತಿ-ಆನೆಗಳೊಂದಿಗೆ ಆ ಸೇನೆಯು ಏನೂ ಮಾಡದೇ ನೋಡುತ್ತಾ ನಿಂತುಬಿಟ್ಟಿತು.

ಎಲ್ಲರೂ ಆ ಇಬ್ಬರು ನರವರರ ಅತಿಮಾನುಷ ಯುದ್ಧವನ್ನೂ ದಾರುಕನ ಸಾರಥ್ಯವನ್ನೂ ನೋಡತೊಡಗಿದರು. ಸಾರಥಿ ಕಾಶ್ಯಪನು ರಥವನ್ನು ಮುಂದೆ, ಹಿಂದೆ, ಮಂಡಲಾಕಾರದಲ್ಲಿ ಮತ್ತು ತಿರುಗಿ ತರುವುದನ್ನು ನೋಡಿ ವಿಸ್ಮಿತರಾದರು. ನಭಸ್ತಲದಲ್ಲಿ ಕೂಡ ದೇವ-ಗಂಧರ್ವ-ದಾನವರು ರಣದಲ್ಲಿ ಕರ್ಣ-ಶೈನೇಯರು ಯುದ್ಧಮಾಡುವುದನ್ನು ನೋಡಲು ಸೇರಿದರು. ಮಿತ್ರರಿಗಾಗಿ ಕರ್ಣ ಮತ್ತು ಸಾತ್ಯಕಿಯರು

ಪರಾಕ್ರಾಂತರಾಗಿ ಸ್ಪರ್ಧಿಸುತ್ತಾ ಬಲವನ್ನುಪಯೋಗಿಸಿ ಹೋರಾಡಿದರು. ಅವರಿಬ್ಬರೂ ಅನ್ಯೋನ್ಯರನ್ನು ಶರವರ್ಷಗಳಿಂದ ಮುಚ್ಚಿದರು. ಆಗ ಕರ್ಣನು ಶಿನಿಯ ಮೊಮ್ಮಗನನ್ನು ಸಾಯಕಗಳ ಮಳೆಯಿಂದ ಆಕ್ರಮಣಿಸಿದನು. ಕೌರವ್ಯ ಜಲಸಂಧನ ನಿಧನವನ್ನು ಸಹಿಸಿಕೊಳ್ಳಲಾರದೇ ಶೋಕಸಮಾವಿಷ್ಟನಾಗಿ, ಮಹಾನಾಗದಂತೆ ನಿಟ್ಟುಸಿರು ಬಿಡುತ್ತಾ ಕರ್ಣನು, ರಣದಲ್ಲಿ ಕೋಪದಿಂದ ಸುಟ್ಟುಬಿಡುವನೋ ಎಂಬಂತೆ ಶೈನೇಯನನ್ನು ನೋಡುತ್ತಾ ಪುನಃ ಪುನಃ ವೇಗದಿಂದ ಆಕ್ರಮಣಿಸಿದನು. ಅವನು ಸಂಕ್ರುದ್ಧನಾದುದನ್ನು ನೋಡಿ ಸಾತ್ಯಕಿಯು ಆನೆಯನ್ನು ಎದುರಿಸಿದ ಇನ್ನೊಂದು ಆನೆಯು ಹೇಗೋ ಹಾಗೆ ಮಹಾ ಶರವರ್ಷದಿಂದ ತಿರುಗಿ ಆಕ್ರಮಣಿಸಿದನು. ವ್ಯಾಘ್ರಗಳಂತೆ ಕಾತರರಾದ ಆ ಇಬ್ಬರು ನರವ್ಯಾಘ್ರ ಅನುಪಮ ವಿಕ್ರಮರು ಎದುರಿಸಿ ರಣದಲ್ಲಿ ಅನ್ಯೋನ್ಯರನ್ನು ತುಂಬಾ ಗಾಯಗೊಳಿಸಿದರು. ಆಗ ಶಿನಿಯ ಮೊಮ್ಮಗನು ಎಲ್ಲವೂ ಉಕ್ಕಿನಿಂದ ಮಾಡಲ್ಪಟ್ಟ ಶರಗಳಿಂದ ಕರ್ಣನ ಎಲ್ಲ ಅಂಗಾಂಗಗಳಿಗೆ ಚುಚ್ಚುವಂತೆ ಪುನಃ ಪುನಃ ಹೊಡೆದನು. ಭಲ್ಲದಿಂದ ಅವನ ಸಾರಥಿಯನ್ನೂ ರಥದ ನೊಗದ ಮೇಲಿಂದ ಬೀಳಿಸಿದನು. ಮತ್ತು ನಿಶಿತ ಶರಗಳಿಂದ ಅವನ ನಾಲ್ಕು ಶ್ವೇತಾಶ್ವಗಳನ್ನೂ ಸಂಹರಿಸಿದನು.

ನೂರು ಬಾಣಗಳಿಂದ ಅವನ ಧ್ವಜವನ್ನು ನೂರುಚೂರುಗಳನ್ನಾಗಿ ಮಾಡಿ ಆ ಪುರುಷರ್ಷಭನು ಕರ್ಣನನ್ನು ವಿರಥನನ್ನಾಗಿ ಮಾಡಿದನು. ಆಗ ಕೌರವ ಪುರುಷರ್ಷಭರು - ಕರ್ಣಸುತ ವೃಷಸೇನ, ಮದ್ರಾಧಿಪ ಶಲ್ಯ ಮತ್ತು ದ್ರೋಣಪುತ್ರರು -ವಿಮನಸ್ಕರಾಗಿ ಶೈನೇಯನನ್ನು ಎಲ್ಲ ಕಡೆಗಳಿಂದ ಸುತ್ತುವರೆದರು. ಆಗ ಎಲ್ಲ ಗೊಂದಲವುಂಟಾಗಿ ಏನೂ ತಿಳಿಯಲಾಗಲಿಲ್ಲ. ಹೀಗೆ ವೀರ ಸೂತಜನು ಸಾತ್ಯಕಿಯಿಂದ ವಿರಥನಾಗಲು ಸರ್ವ ಸೇನೆಗಳಲ್ಲಿ ಹಾಹಾಕಾರವುಂಟಾಯಿತು. ಕರ್ಣನೂ ಕೂಡ ಸಾತ್ವತನ ಶರಗಳಿಂದ ಪೀಡಿತನಾಗಿ ವಿಹ್ವಲನಾಗಿ ನಿಟ್ಟುಸಿರು ಬಿಡುತ್ತಾ, ಬಾಲ್ಯದಿಂದಲೂ ದುರ್ಯೋಧನನು ತೋರಿದ ಸೌಹಾರ್ದತೆ ಮತ್ತು ಅವನಿಗೆ ರಾಜ್ಯವನ್ನು ಕೊಡಿಸುತ್ತೇನೆ ಎನ್ನುವ ಪರಿಪಾಲಿಸಬೇಕಾದ ಪ್ರತಿಜ್ಞೆಯನ್ನು ಮನ್ನಿಸಿ, ದುರ್ಯೋಧನನ ರಥವನ್ನೇರಿದನು. ಕರ್ಣನನ್ನು ವಿರಥನನ್ನಾಗಿ ಮಾಡಿ ನಿಯಂತ್ರಣದಲ್ಲಿದ್ದ ಸಾತ್ಯಕಿಯು ದುಃಶಾಸನ ನಾಯಕತ್ವದಲ್ಲಿದ್ದ ಧೃತರಾಷ್ಟ್ರನ ಶೂರಪುತ್ರರನ್ನು ಕೊಲ್ಲಲಿಲ್ಲ. ಹಿಂದೆ ಭೀಮಸೇನನು ಮಾಡಿದ್ದ ಪ್ರತಿಜ್ಞೆಯನ್ನು ರಕ್ಷಿಸಲೋಸುಗ ಅವರನ್ನು ವಿರಥರನ್ನಾಗಿಸಿ ವಿಹ್ವಲರನ್ನಾಗಿಸಿ, ಪ್ರಾಣಗಳೊಂದಿಗೆ ಬಿಟ್ಟನು. ಪುನಃ ದ್ಯೂತದಲ್ಲಿ ಕರ್ಣನ ವಧೆಯ ಕುರಿತು ಪಾರ್ಥನಿಂದ ಕೇಳಿದ್ದನು. ಕರ್ಣನ ನಾಯಕತ್ವದಲ್ಲಿ ರಥಿಗಳಲ್ಲಿ ಪ್ರವರ ಸಾತ್ಯಕಿಯನ್ನು ಸಂಹರಿಸಲು

ಪ್ರಯತ್ನಿಸಿದರೂ ಅದಕ್ಕೆ ಅವನು ಅಶಕ್ಯರಾದರು. ಒಂದೇ ಒಂದು ಧನುಸ್ಸಿನಿಂದ ಪರಲೋಕವನ್ನೂ ಧರ್ಮರಾಜನಿಗೆ ಪ್ರಿಯವಾದದನ್ನು ಮಾಡಬೇಕೆಂದೂ ಅವನು ದ್ರೌಣಿ, ಕೃತವರ್ಮ, ಮತ್ತು ಇತರ ಅನ್ಯ ನೂರಾರು ಕ್ಷತ್ರಿಯರ್ಷಭ ಮಹಾರಥರನ್ನು ಸೋಲಿಸಿದನು.

ಮಹಾಮತಿ ದಾರುಕನ ತಮ್ಮನು ಕೂಡಲೇ ವಿಧಿವತ್ತಾಗಿ ಸಜ್ಜುಗೊಳಿಸಿದ ಅವನ ಇನ್ನೊಂದು ರಥವನ್ನು ತಂದನು. ಉಕ್ಕಿನಿಂದ ಮಾಡಲ್ಪಟ್ಟ, ಕಾಂಚನದ ಪಟ್ಟಿಯನ್ನು ಕಟ್ಟಿದ್ದ ಮೂಕಿರುವ, ಸಾವಿರ ನಕ್ಷತ್ರಗಳು ಖಚಿತಗೊಂಡಿರುವ ಸಿಂಹಧ್ವಜ ಪತಾಕೆಗಳನ್ನುಳ್ಳ, ಗಾಳಿಯ ವೇಗದ ಕುದುರೆಗಳನ್ನು ಕಟ್ಟಿದ್ದ, ಬಂಗಾರದ ತಗಡಿನಿಂದ ಮುಚ್ಚಿದ್ದ, ಚಂದ್ರನಂತೆ ಬಿಳುಪಾಗಿದ್ದ, ಎಲ್ಲವುಗಳಿಗಿಂತ ದೃಢಶಬ್ಧವುಳ್ಳ, ಚಿತ್ರ-ಕಾಂಚನಗಳಿಂದ ಸನ್ನದ್ಧವಾಗಿದ್ದ ಪ್ರಮುಖ ಕುದುರೆಗಳನ್ನು ಕಟ್ಟಿದ್ದ, ಧ್ವನಿಗೈಯುತ್ತಿದ್ದ ಗಂಟೆಗಳ ಮಾಲೆಗಳಿರುವ, ಶಕ್ತಿ-ತೋಮರಗಳಿಂದ ಕೂಡಿದ್ದ, ಅನೇಕ ವಿವಿಧ ಸಾಮಾಗ್ರಿ, ದ್ರವ್ಯ, ಶಸ್ತ್ರಗಳಿಂದ ತುಂಬಿದ್ದ, ಮೇಘದಂತೆ ಗಂಭೀರ ಧ್ವನಿಯುಳ್ಳ ರಥವನ್ನು ತೆಗೆದುಕೊಂಡು ಬಂದನು. ಅದನ್ನು ಏರಿ ಶೈನೇಯನು ಕೌರವ ಸೇನೆಯನ್ನು ಆಕ್ರಮಣಿಸಿದನು. ದಾರುಕನೂ ಕೂಡ ಬಯಸಿದಂತೆ ಕೇಶವನ ಬಳಿ ಹೋದನು. ಕರ್ಣನಿಗೆ ಕೂಡ ಶಂಖ ಮತ್ತು ಹಸುವಿನ ಹಾಲಿನ ಬಣ್ಣದ,

ಚಿತ್ರಕಾಂಚನಗಳಿಂದ ಸಜ್ಜುಪಡೆಸಿದ್ದ, ವೇಗಶಾಲಿಗಳಾದ ಕುದುರೆಗಳನ್ನು ಕಟ್ಟಿದ, ಬಂಗಾರದ ಕೋಣೆ-ಧ್ವಜಗಳನ್ನುಳ್ಳ, ಪತಾಕೆಯನ್ನು ಏರಿಸುವ ಯಂತ್ರವುಳ್ಳ, ಉತ್ತಮ ಸಾರಥಿಯಿರುವ, ಅನೇಕ ಶಸ್ತ್ರಗಳಿಂದ ತುಂಬಿದ ಅಗ್ರ ರಥವನ್ನು ತರಲಾಯಿತು. ಅದರಲ್ಲಿ ಕುಳಿತು ಕರ್ಣನು ಶತ್ರುಗಳೊಂದಿಗೆ ಹೋರಾಡಿದನು.

ವಿರಥನಾದ ಭಿಮಸೇನನು ಕರ್ಣನ ಮಾತಿನ ಈಟಿಯಿಂದ ಪೀಡಿತನಾಗಿ, ಕೋಪಾವಿಷ್ಟನಾಗಿ ಫಲ್ಗುನನಿಗೆ ಈ ಮಾತನಾಡಿದನು:

> “ಧನಂಜಯ! ನೀನು ನೋಡುತ್ತಿದ್ದಂತೆಯೇ ಕರ್ಣನು ನನಗೆ ಪುನಃ ಪುನಃ “ಗಡ್ಡಮೀಸೆಗಳಿಲ್ಲದವನೇ! ಮೂಢನೇ! ಹೊಟ್ಟೆಬಾಕ!” ಎಂದೂ “ಅಸ್ತ್ರವಿದ್ಯೆಯಲ್ಲಿ ಪರಿಣಿತಿಯಿಲ್ಲದವನೇ! ಬಾಲಕನಂತೆ ಯುದ್ಧಮಾಡುವವನೇ! ಸಂಗ್ರಾಮಭೀರೋ!” ಎಂದೂ ಹೇಳಿದನು. ಹೀಗೆ ನನ್ನನ್ನು ನಿಂದಿಸುವವನನ್ನು ವಧಿಸುತ್ತೇನೆ ಎಂದು ಹೇಳಿದ್ದೆ. ಆ ವ್ರತವನ್ನು ನನ್ನೊಂದಿಗೆ ನೀನೂ ಕೂಡ ಕೈಗೊಂಡಿದ್ದೆ. ಆದುದರಿಂದ ಇದು ನನ್ನ ಕರ್ತವ್ಯದಂತೆ ನಿನ್ನದೂ ಆಗಿದೆ. ಅದರಲ್ಲಿ ಸಂಶಯವಿಲ್ಲ. ಅವನ ವಧೆಯ ಕುರಿತು ನನ್ನ ವಚನವನ್ನು ಸ್ಮರಿಸಿಕೋ. ಧನಂಜಯ! ಅದು

ಸತ್ಯವಾಗುವಹಾಗೆ ಮಾಡು!”

ಭೀಮನ ಆ ಮಾತನ್ನು ಕೇಳಿ ಅರ್ಜುನನು ಕರ್ಣನ ಬಳಿ ಹೋಗಿ ಹೇಳಿದನು:

“ಕರ್ಣ! ವ್ಯರ್ಥವಾದ ದೃಷ್ಟಿಯುಳ್ಳವನೇ! ಸೂತಪುತ್ರ! ಆತ್ಮಸಂಸ್ತುತನೇ! ಅಧರ್ಮಬುದ್ಧೇ! ನಾನು ಈಗ ಹೇಳುವುದನ್ನು ಕೇಳು! ಯುದ್ಧದಲ್ಲಿ ಶೂರರ ಎರಡು ರೀತಿಯ ಕರ್ಮಗಳು: ಜಯ ಮತ್ತು ಪರಾಜಯ. ಯುದ್ಧಮಾಡುವ ವಾಸವನಿಗೆ ಕೂಡ ಇವೆರಡೂ ಅನಿತ್ಯ. ಯುಯುಧಾನನಿಂದ ವಿರಥನಾಗಿ, ಮೂರ್ಛಿತನಾಗಿ ವಿಸರ್ಜಿಸಲ್ಪಟ್ಟ ನೀನು ಕಷ್ಟಪಟ್ಟು ವಿರಥನನ್ನಾಗಿ ಮಾಡಿದೆ. ಅನಂತರ ನೀನು ಭೀಮನಿಗೆ ಮಾತನಾಡಿದ ರೀತಿಯು ಅಧರ್ಮವಾದುದು. ಯುದ್ಧದರ್ಮವನ್ನು ತಿಳಿದು ಪಲಾಯನ ಮಾಡದೇ ಯುದ್ಧಮಾಡುತ್ತಿರುವ, ಯಥಾಶಕ್ತಿಯಾಗಿ ಯುದ್ಧದಲ್ಲಿ ಹೋರಾಡುತ್ತಾ ಸರ್ವ ಸೇನೆಗಳು, ಕೇಶವ ಮತ್ತು ನಾನು ನೋಡುತ್ತಿರುವಂತೆ ಭೀಮಸೇನನು ನಿನ್ನನ್ನು ರಣದಲ್ಲಿ ಅನೇಕ ಬಾರಿ ವಿರಥನನ್ನಾಗಿ ಮಾಡಿದ್ದಾನೆ. ಆದರೆ ಆ ಪಾಂಡುನಂದನನು ಕಠೋರವಾದ ಏನನ್ನೂ ನಿನಗೆ

ಹೇಳಿರಲಿಲ್ಲ. ಆದರೆ ನೀನು ಬಹಳ ಕಠೋರವಾಗಿ ವೃಕೋದರನಿಗೆ ಮಾತನಾಡಿದ್ದೀಯೆ. ಮತ್ತು ನನ್ನ ಪರೋಕ್ಷದಲ್ಲಿ ನೀವು ಸೌಭದ್ರನನ್ನು ಸಂಹರಿಸಿದಿರಲ್ಲವೇ! ಆದುದರಿಂದ ಈ ನಿನ್ನ ಅವಹೇಳನೆಗೆ ಸದ್ಯವೇ ಫಲವನ್ನು ಹೊಂದುತ್ತೀಯೆ. ದುರ್ಮತೇ! ನೀನು ಅವನ ಧನುಸ್ಸನ್ನು ತುಂಡರಿಸಿ ನಿನ್ನದೇ ನಾಶವನ್ನು ನಿಶ್ಚಯಿಸಿರುವೆ. ಆದುದರಿಂದ ಮೂಢ! ನಿನ್ನನ್ನು ನಾನು ಸೇವಕ-ಸೇನೆ-ವಾಹನಗಳೊಂದಿಗೆ ವಧಿಸುತ್ತೇನೆ. ನಿನ್ನ ಎಲ್ಲ ಕೆಲಸಗಳನ್ನೂ ಮಾಡಿಕೋ! ಮಹಾ ಭಯವು ಬರಲಿದೆ. ನೀನು ನೋಡುತ್ತಿರುವಂತೆಯೇ ವೃಷಸೇನನನ್ನು ಸಂಹರಿಸುತ್ತೇನೆ. ಬುದ್ಧಿಮೋಹದಿಂದ ಬೇರೆ ಯಾವನೃಪರು ನನ್ನೊಡನೆ ಯುದ್ಧಮಾಡುತ್ತಾರೋ ಅವರೆಲ್ಲರನ್ನೂ ಸಂಹರಿಸುತ್ತೇನೆ. ಹಿಡಿದಿರುವ ಆಯುಧದ ಮೇಲೆ ಆಣೆಯಿಡುತ್ತೇನೆ. ಕೃತಜ್ಞನಾದ, ಅತಿಮಾನಿನಿಯಾದ ನೀನೂ ಕೂಡ ಯುದ್ಧದಲ್ಲಿ ಬೀಳುವುದನ್ನು ನೋಡಿ ಮಂದ ದುರ್ಯೋಧನನು ತಪಿಸುತ್ತಾನೆ!”

ಅರ್ಜುನನು ಕರ್ಣನ ಮಗನ ವಧೆಯ ಪ್ರತಿಜ್ಞೆಯನ್ನು ಮಾಡಲು ರಥಿಗಳ ಮಹಾ ತುಮುಲ ಶಬ್ಧವು ಉಂಟಾಯಿತು.

ಮಹಾಭಯಂಕರವಾದ ಯುದ್ಧವು ಎಲ್ಲಕಡೆ ನಡೆಯುತ್ತಿರಲು, ಮಂದರಶ್ಮಿ ಸಹಸ್ರಾಂಶುವು ಅಸ್ತಾಚಲವನ್ನು ಸೇರಿದನು. ಆಗ ಹೃಷೀಕೇಶನು ಪ್ರತಿಜ್ಞೆಯನ್ನು ಪೂರೈಸಿ ಸಂಗ್ರಾಮದ ಶಿರಸ್ಸಿನ ಭಾಗದಲ್ಲಿ ನಿಂತಿದ್ದ ಬೀಭತ್ಸುವನ್ನು ಬಿಗಿದಪ್ಪಿ ಹೇಳಿದನು:

> "ಒಳ್ಳೆಯದಾಯಿತು ಜಿಷ್ಣೋ! ನಿನ್ನ ಮಹಾ ಪ್ರತಿಜ್ಞೆಯನ್ನು ಪೂರೈಸಿದೆ! ಒಳ್ಳೆಯದಾಯಿತು ವೃದ್ಧಕ್ಷತ್ರನು ಪಾಪಿ ಮಗನೊಂದಿಗೆ ಹತನಾದನು. ಧಾರ್ತರಾಷ್ಟ್ರನ ಸೇನೆಯನ್ನು ಎದುರಿಸಿ ಸಮರದಲ್ಲಿ ದೇವಸೇನೆಯೂ ಕೂಡ ಕುಸಿಯುತ್ತದೆ. ಅದರಲ್ಲಿ ವಿಚಾರಮಾಡಬೇಕಾಗಿಯೇ ಇಲ್ಲ. ನಾನು ಎಷ್ಟೇ ಯೋಚಿಸಿದರೂ, ನಿನ್ನನ್ನು ಬಿಟ್ಟು ಈ ಸೇನೆಯೊಂದಿಗೆ ಯುದ್ಧಮಾಡಬಲ್ಲ ಬೇರೆ ಯಾವ ಪುರುಷನನ್ನೂ ನಾನು ಕಾಣುತ್ತಿಲ್ಲ. ಮಹಾಪ್ರಭಾವುಳ್ಳ, ನಿನ್ನ ಸಮನಾದ ಅಥವ ಅಧಿಕರಾದ ಪೃಥಿವೀಪಾಲರು ಧಾರ್ತರಾಷ್ಟ್ರನ ಕಾರಣದಿಂದ ಒಂದುಗೂಡಿದ್ದಾರೆ. ಕವಚಧಾರಿಗಳಾದ ಅವರು ರಣದಲ್ಲಿ ಕ್ರುದ್ಧನಾದ ನಿನ್ನನ್ನು ಎದುರಿಸಲಾರರು. ನಿನ್ನ ವೀರ್ಯ ಮತ್ತು ಬಲವು ರುದ್ರ-ಶಕ್ರರ ಸಮನಾಗಿದೆ. ಶತ್ರುತಾಪನನಾದ ನೀನೊಬ್ಬನೇ ಇಂದು ಮಾಡಿ ತೋರಿಸಿದ ಪರಾಕ್ರಮವನ್ನು

ರಣದಲ್ಲಿ ಬೇರೆ ಯಾರೂ ತೋರಿಸಲು ಶಕ್ಯರಿಲ್ಲ. ದುರಾತ್ಮ ಕರ್ಣನು ಅವನ ಅನುಯಾಯಿಗಳೊಂದಿಗೆ ಹತನಾದಾಗ ಪುನಃ ಶತ್ರುವನ್ನು ಗೆದ್ದ, ದ್ವೇಷಿಯನ್ನು ಸಂಹರಿಸಿದ ನಿನ್ನನ್ನು ಇನ್ನೂ ಹೊಗಳುತ್ತೇನೆ."

ಅರ್ಜುನನು ಅವನಿಗೆ ಉತ್ತರಿಸಿದನು:

"ಮಾಧವ! ನಿನ್ನ ಪ್ರಸಾದದಿಂದ ದೇವತೆಗಳಿಗೂ ದುಸ್ತರವಾದ ಈ ಪ್ರತಿಜ್ಞೆಯನ್ನು ನಾನು ಪೂರೈಸಿದ್ದೇನೆ. ಯಾರ ನಾಥನು ನೀನೋ ಅವರ ಜಯವು ಆಶ್ಚರ್ಯವಾದುದೇನಲ್ಲ! ನಿನ್ನ ಪ್ರಸಾದದಿಂದ ಯುಧಿಷ್ಠಿರನು ಈ ಸಂಪೂರ್ಣ ಮಹಿಯನ್ನು ಪಡೆಯುತ್ತಾನೆ. ನೀನೇ ಪೊರೆಯುವವನು. ನೀನೇ ವಿಜಯ. ಮಧುಸೂದನ! ನಿನ್ನಿಂದ ನಾವು ವರ್ಧಿಸುತ್ತಿದ್ದೇವೆ. ನಾವು ನಿನ್ನ ಸೇವಕರು!"

ಹೀಗೆ ಹೇಳಲು ಕೃಷ್ಣನು ಮುಗುಳ್ನಕ್ಕು, ಕುದುರೆಗಳನ್ನು ಮೆಲ್ಲನೆ ನಡೆಸುತ್ತಾ ಕ್ರೂರವಾದ ಮಹಾ ರಣವನ್ನು ಪಾರ್ಥನಿಗೆ ತೋರಿಸಿದನು. ಶ್ರೀಕೃಷ್ಣನು ಹೇಳಿದನು:

"ಯುದ್ಧದಲ್ಲಿ ಜಯವನ್ನು ಬಯಸಿ, ಮಹಾ ಯಶಸ್ಸನ್ನು

ಕಾಣಲು ಈ ಶೂರ ಪಾರ್ಥಿವರು ನಿನ್ನ ಶರಗಳಿಂದ ಹತರಾಗಿ ಭೂಮಿಯ ಮೇಲೆ ಮಲಗಿದ್ದಾರೆ. ಶಸ್ತ್ರಾಭರಣಗಳು ಚೆಲ್ಲಿಬಿದ್ದಿವೆ. ಕುದುರೆ-ರಥ-ಆನೆಗಳು ಮುರಿದು ಬಿದ್ದಿವೆ. ಅವರ ಕವಚಗಳು ತುಂಡಾಗಿ ಅಥವಾ ಒಡೆದು ಪರಮ ದುಃಖವನ್ನು ಪಡೆದಿದ್ದಾರೆ. ಕೆಲವರು ಇನ್ನೂ ಜೀವದಿಂದಿದ್ದಾರೆ. ಕೆಲವರು ಜೀವವನ್ನು ಕಳೆದುಕೊಂಡಿದ್ದಾರೆ. ತೀರಿಹೋದ ನರಾಧಿಪರೂ ಕೂಡ ಪರಮ ಪ್ರಭೆಯಿಂದ ಕೂಡಿದವರಾಗಿದ್ದು ಜೀವದಿಂದಿರುವರೋ ಎನ್ನುವಂತೆ ಕಾಣುತ್ತಿದ್ದಾರೆ. ಅವರ ಸ್ವರ್ಣಪುಂಖ ಶರಗಳಿಂದ, ವಿವಿಧ ನಿಶಿತ ಶಸ್ತ್ರಗಳಿಂದ, ವಾಹನ-ಆಯುಧಗಳಿಂದ ಮೇದಿನಿಯು ತುಂಬಿಹೋಗಿರುವುದನ್ನು ನೋಡು! ಕವಚ-ಗುರಾಣಿ-ಹಾರಗಳಿಂದ, ಕುಂಡಲಯುಕ್ತ ಶಿರಗಳಿಂದ, ಶಿರಸ್ತ್ರಾಣ-ಮುಕುಟಗಳಿಂದ, ಮಾಲೆಗಳು-ಚೂಡಾಮಣಿಗಳು-ವಸ್ತ್ರಗಳಿಂದ, ಕಂಠಸೂತ್ರ-ಅಂಗದಗಳಿಂದ, ಪ್ರಭೆಯುಳ್ಳ ನಿಷ್ಕಗಳಿಂದ, ಅನ್ಯ ಬಣ್ಣದ ಆಭರಣಗಳಿಂದ ಮೇದಿನಿಯು ಥಳಥಳಿಸುತ್ತಿದೆ. ಚಾಮರಗಳಿಂದ, ಬಣ್ಣದ ಕೇತುಗಳಿಂದ, ಧ್ವಜಗಳಿಂದ, ಕುದುರೆ-ರಥ-ಆನೆಗಳಿಂದ, ಕುದುರೆಗಳ ವಿವಿಧ ಪರಿಸ್ತೋಮ-ಪ್ರಕೀರ್ಣಕಗಳಿಂದ, ಕುಥಗಳಿಂದ,

ಮಹಾಧನಗಳ ವಿಚಿತ್ರ ವರೂಥಗಳಿಂದ ತುಂಬಿರುವ ಈ ವಸುಧೆಯು ಚಿತ್ರಪಟವನ್ನು ಹೊಡೆದಂತೆ ಕಾಣುತ್ತಿದೆ ನೋಡು! ಆನೆಗಳ ಮೇಲಿಂದ, ಅನ್ಯರು ಆನೆಗಳೊಡನೆ ಬಿದ್ದಿರುವವರು ಸಿಡಿಲುಬಡಿದ ಪರ್ವತದಿಂದ ಬಿದ್ದ ಸಿಂಹಗಳಂತೆ ತೋರುತ್ತಿದ್ದಾರೆ. ಸವಾರಿ ಮಾಡುತ್ತಿರುವ ಕುದುರೆಗಳೊಂದಿಗೆ ಧರಣಿಯ ಮೇಲೆ ಬಿದ್ದಿರುವ ಪದಾತಿ-ಅಶ್ವಾರೋಹಿಗಳು ಗಾಯಗೊಂಡು ರಕ್ತದಲ್ಲಿ ತೋಯ್ದುಹೋಗಿರುವುದನ್ನು ನೋಡು!”

ಹೀಗೆ ರಣಭೂಮಿಯನ್ನು ಕಿರೀಟಿಗೆ ತೋರಿಸುತ್ತಾ ಕೃಷ್ಣನು ತನ್ನವರೊಂದಿಗೆ ಮುದಿತನಾಗಿ ಪಾಂಚಜನ್ಯವನ್ನು ಮೊಳಗಿಸಿದನು.

## ಯುಧಿಷ್ಠಿರನ ಹರ್ಷ

ಆಗ ರಾಜಾ ಯುಧಿಷ್ಠಿರನು ರಥದಿಂದ ಹಾರಿ ಇಳಿದು ಆನಂದಾಶ್ರುಗಳಿಂದ ತುಂಬಿದವನಾಗಿ ಕೃಷ್ಣರನ್ನು ಅಪ್ಪಿಕೊಂಡನು. ಕಮಲಕ್ಕೆ ಸಮಾನ ಪ್ರಭೆಯುಳ್ಳ ಶುಭ್ರ ಮುಖವನ್ನು ಒರೆಸಿಕೊಂಡು ವಾಸುದೇವ ಮತ್ತು ಪಾಂಡವ ಧನಂಜಯನಿಗೆ ಹೇಳಿದನು:

“ಅದೃಷ್ಟವಶಾತ್ ಸಂಗ್ರಾಮದಲ್ಲಿ ಇಬ್ಬರು ಮಹಾರಥರೂ

ಪ್ರತಿಜ್ಞೆಯ ಭಾರದಿಂದ ಮುಕ್ತರಾಗಿರುವುದನ್ನು ನೋಡುತ್ತಿದ್ದೇನೆ! ಒಳ್ಳೆಯದಾಯಿತು - ಪುರುಷಾಧಮ ಪಾಪಿ ಸೈಂಧವನು ಹತನಾದನು. ಕೃಷ್ಣ! ಸೌಭಾಗ್ಯವಶಾತ್ ನನ್ನ ಸಂತೋಷವು ತುಂಬಾ ಹೆಚ್ಚಾಗಿದೆ. ಒಳ್ಳೆಯದಾಯಿತು - ಶತ್ರುಗಣಗಳು ಶೋಕಸಾಗರದಲ್ಲಿ ಮುಳುಗಿವೆ. ಸರ್ವಲೋಕಗಳಿಗೆ ಗುರುವಾಗಿರುವ ನೀನು ಯಾರ ನಾಥನೋ ಅವರಿಗೆ ಈ ಮೂರು ಲೋಕಗಳಲ್ಲಿಯು ದುಷ್ಕರವಾದ ಕಾರ್ಯವೆನ್ನುವುದೂ ಯಾವುದೂ ಇಲ್ಲ. ಹಿಂದೆ ನಿನ್ನ ಪ್ರಸಾದದಿಂದ ಪಾಕಶಾಸನನು ದಾನವರನ್ನು ಹೇಗೋ ಹಾಗೆ ಗೋವಿಂದ! ನಿನ್ನ ಪ್ರಸಾದದಿಂದ ನಾವು ಶತ್ರುಗಳನ್ನು ಗೆಲ್ಲುತ್ತೇವೆ. ಯಾರಿಂದ ನೀನು ತೃಪ್ತನಾಗಿದ್ದೀಯೋ ಅವರಿಗೆ ಪೃಥ್ವೀ ವಿಜಯ ಅಥವಾ ತ್ರೈಲೋಕ್ಯಗಳ ವಿಜಯವೂ ನಿಶ್ಚಯವಾದುದೇ! ತ್ರಿದಶೇಶ್ವರನ ನಾಥನಾದ ನೀನು ಯಾರಮೇಲೆ ತುಷ್ಟನಾಗಿರುವೆಯೋ ಅವರಿಗೆ ಸಂಗ್ರಾಮದಲ್ಲಿ ಪ್ಪವೆನ್ನುವುದಾಗಲೀ ಪರಾಜಯವಾಗಲೀ ಇರುವುದಿಲ್ಲ. ನಿನ್ನ ಪ್ರಸಾದದಿಂದ ಶ್ರೀಮಾನ್ ಸುರಗಣೇಶ್ವರ ಶಕ್ರನು ರಣಮೂರ್ಧನಿಯಲ್ಲಿ ತ್ರೈಲೋಕ್ಯವಿಜಯವನ್ನು ಪಡೆದನು. ನಿನ್ನ ಪ್ರಸಾದದಿಂದಲೇ ತ್ರಿದಶರು ಅಮರತ್ವವನ್ನು ಪಡೆದರು

ಮತ್ತು ಅಕ್ಷಯ ಲೋಕಗಳನ್ನು ಹೊಂದಿದರು. ನಿನ್ನ ಪ್ರಸಾದದಿಂದ ಮೇಲೆದ್ದ ವಿಕ್ರಮದಿಂದ ಶಕ್ರನು ಸಹಸ್ರಾರು ದೈತ್ಯರನ್ನು ಸಂಹರಿಸಿ ಸುರೇಶತ್ವವನ್ನು ಹೊಂದಿದನು. ನಿನ್ನ ಪ್ರಸಾದದಿಂದ ಸ್ಥಾವರಜಂಗಮಗಳ ಈ ಜಗತ್ತು ತನ್ನ ಮಾರ್ಗದಲ್ಲಿ ಸ್ಥಿರವಾಗಿ ನಿಂತಿದೆ; ಜಪ-ಹೋಮಗಳಲ್ಲಿ ತೊಡಗಿದೆ. ಹಿಂದೆ ಇದು ಒಂದೇ ಸಾಗರವಾಗಿದ್ದು ಎಲ್ಲಕಡೆ ಅತ್ಯಂತ ಕತ್ತಲೆಯು ಆವರಿಸಿತ್ತು. ನರೋತ್ತಮ! ಆಗ ನಿನ್ನ ಪ್ರಸಾದದಿಂದ ಜಗತ್ತು ಪ್ರಕಾಶತ್ವವನ್ನು ಪಡೆಯಿತು. ಸರ್ವಲೋಕಗಳ ಸೃಷ್ಟಾರ, ಪರಮಾತ್ಮ, ಅಚ್ಯುತ, ಹೃಷೀಕೇಶನನ್ನು ಯಾರು ಮೊರೆಹೊಗುತ್ತಾರೋ ಅವರು ಎಂದೂ ಮೋಹಗೊಳ್ಳುವುದಿಲ್ಲ. ಅನಾದಿನಿಧನ, ದೇವ, ಲೋಕಕರ್ತಾರ, ಅವ್ಯಯನಾಗಿರುವ ನಿನ್ನ ಭಕ್ತರು ಕ್ಷಷ್ಟಗಳನ್ನು ದಾಟುತ್ತಾರೆ. ಪರಮ, ಪುರಾಣ, ಪುರಾಣಗಳ ಪುರುಷ, ಪರಮ ಪದವನ್ನು ಯಾರು ಮೊರೆಹೋಗುತ್ತಾರೋ ಅವರು ಪರಮ ಪದವಿಯನ್ನು ಪಡೆಯುತ್ತಾರೆ. ಯಾರನ್ನು ನಾಲ್ಕು ವೇದಗಳೂ ಹಾಡುವವೋ, ಯಾರು ವೇದಗಳಲ್ಲಿ ಹಾಡಲ್ಪಟ್ಟಿರುವನೋ ಆ ಮಹಾತ್ಮನನ್ನು ಶರಣುಹೊಕ್ಕು ಅನುತ್ತಮವಾದ ಗತಿಯನ್ನು ಪಡೆಯುವರು. ಯಾರು

ಧನಂಜಯನ ಸಖನಾಗಿರುವನೋ, ಯಾರು ಧನಂಜಯನ ಹಿತೈಷಿಯೋ ಆ ಧನಂಜಯರಕ್ಷಕನನ್ನು ಮೊರೆಹೊಕ್ಕರೆ ಸುಖವು ದೊರೆಯುತ್ತದೆ.”

ಹೀಗೆ ಅವನು ಆ ಮಹಾತ್ಮ ಕೇಶವ-ಪಾಂಡವರಿಗೆ ಹೇಳಲು ಅವರಿಬ್ಬರೂ ಹೃಷ್ಟರಾಗಿ ರಾಜಾ ಪೃಥಿವೀಪತಿಗೆ ಹೇಳಿದರು:

“ರಾಜಾ! ನಿನ್ನ ಕೋಪಾಗ್ನಿಯಿಂದ ಪಾಪಿ ಜಯದ್ರಥನು ಸುಟ್ಟುಹೋದನು ಮತ್ತು ರಣದಲ್ಲಿ ಧಾರ್ತರಾಷ್ಟ್ರನ ಅತಿದೊಡ್ಡ ಬಲವು ಪುಡಿಪುಡಿಯಾಯಿತು. ನಿನ್ನ ಕೋಪಾಗ್ನಿಯಿಂದ ಹತರಾದವರು ಹತರಾದರು. ಇನ್ನೂ ಹತರಾಗಲಿದ್ದಾರೆ. ದೃಷ್ಟಿಹಾಯಿಸುವುದರಿಂದ ಮಾತ್ರ ನಾಶಪಡಿಸಬಲ್ಲ ವೀರ ನಿನ್ನನ್ನು ಕೋಪಗೊಳಿಸಿ ದುರ್ಮತಿ ಸುಯೋಧನನು ಸಮರದಲ್ಲಿ ಮಿತ್ರ-ಬಂಧುಗಳೊಡನೆ ಪ್ರಾಣಗಳನ್ನು ಕಳೆದುಕೊಳ್ಳುತ್ತಾನೆ. ಈ ಹಿಂದೆಯೇ ನಿನ್ನ ಕ್ರೋಧದಿಂದ ಹತನಾಗಿ ದೇವತೆಗಳಿಗೂ ಸುದುರ್ಜಯನಾದ ಕುರುಪಿತಾಮಹ ಭೀಷ್ಮನು ಶರತಲ್ಪಗತನಾಗಿದ್ದಾನೆ. ಯಾರ ಮೇಲೆ ನೀನು ಕ್ರುದ್ಧನಾಗಿದ್ದೀಯೋ ಅವರಿಗೆ ಸಂಗ್ರಾಮದಲ್ಲಿ ಜಯವು ದುರ್ಲಭವೇ ಸರಿ. ಅವರು ಈಗಾಗಲೇ

ಮೃತ್ಯುವಶರಾಗಿಬಿಟ್ಟಿದ್ದಾರೆ. ಯಾರ ಮೇಲೆ ನೀನು ಕ್ರುದ್ಧನಾಗಿದ್ದೀಯೋ ಅವರ ರಾಜ್ಯ, ಪ್ರಾಣಗಳು, ಪ್ರಿಯರು, ಪುತ್ರರು ಮತ್ತು ವಿವಿಧ ಸುಖಗಳು ಬೇಗನೇ ನಾಶವಾಗುತ್ತವೆ. ನಿತ್ಯವೂ ರಾಜಧರ್ಮದಲ್ಲಿ ನಿರತನಾಗಿರುವ ನೀನು ಕ್ರುದ್ಧನಾಗಿರಲು ಕೌರವರು ಪುತ್ರ-ಪಶು-ಬಾಂಧವರೊಂದಿಗೆ ವಿನಷ್ಟರಾದರೆಂದೇ ತಿಳಿದುಕೋ."

ಆಗ ಮಾರ್ಗಣಗಳಿಂದ ಕ್ಷತ-ವಿಕ್ಷತರಾಗಿದ್ದ ಮಹಾಬಾಹು ಭೀಮ ಮತ್ತು ಮಹಾರಥ ಸಾತ್ಯಕಿಯರು ಹಿರಿಯ ಜ್ಯೇಷ್ಠನಿಗೆ ವಂದಿಸಿದರು. ಅವರಿಬ್ಬರು ಮಹೇಷ್ವಾಸರೂ ಪಾಂಚಾಲರಿಂದ ಪರಿವೃತರಾಗಿ ಅಲ್ಲಿ ನಿಂತುಕೊಂಡರು. ಕೈಮುಗಿದು ಮುಂದೆ ನಿಂತುಕೊಂಡಿದ್ದ ಆ ಮುದಿತ ವೀರರಾದ ಭೀಮ-ಸಾತ್ಯಕಿಯರನ್ನು ನೋಡಿ ಕೌಂತೇಯನು ಅವರಿಬ್ಬರನ್ನೂ ಅಭಿನಂದಿಸಿದನು:

"ಒಳ್ಳೆಯದಾಯಿತು! ದುರಾಧರ್ಷನಾದ ದ್ರೋಣನೆಂಬ ತಿಮಿಂಗಿಲ ಮತ್ತು ಹಾರ್ದಿಕ್ಯನೆಂಬ ಮೊಸಳೆಯಿದ್ದ ಸೈನ್ಯ ಸಾಗರದಿಂದ ಉತ್ತೀರ್ಣರಾಗಿ ಬಂದಿರುವ ನೀವಿಬ್ಬರು ವೀರರನ್ನೂ ಕಾಣುತ್ತಿದ್ದೇನೆ. ಒಳ್ಳೆಯದಾಯಿತು! ರಣದಲ್ಲಿ ಪೃಥ್ವಿಯ ಸರ್ವಪಾರ್ಥಿವರೂ ಸೋತುಹೋದರು.

ಒಳ್ಳೆಯದಾಯಿತು! ರಣದಲ್ಲಿ ವಿಜಯವನ್ನು ಗಳಿಸಿಬಂದ ನಿಮ್ಮಿರ್ವರನ್ನೂ ನೋಡುತ್ತಿದ್ದೇನೆ. ಒಳ್ಳೆಯದಾಯಿತು! ಯುದ್ಧದಲ್ಲಿ ದ್ರೋಣ ಮತ್ತು ಮಹಾಬಲ ಹಾರ್ದಿಕ್ಯರು ಗೆಲ್ಲಲ್ಪಟ್ಟರು. ಒಳ್ಳೆಯದಾಯಿತು! ಸೈನ್ಯಸಮುದ್ರವನ್ನು ಚೆನ್ನಾಗಿ ದಾಟಿಬಂದ, ಅನಘ, ಸಮರಶ್ಲಾಘೀ, ವೀರ, ಸಮರದಲ್ಲಿ ಪಲಾಯನ ಮಾಡದೇ ಇರುವ, ನನ್ನ ಪ್ರಾಣಸಮರಾದ ನಿಮ್ಮಿಬ್ಬರನ್ನು ನನ್ನ ಪಕ್ಕದಲ್ಲಿ ಕಾಣುತ್ತಿದ್ದೇನೆ!"

ಹೀಗೆ ಹೇಳಿ ರಾಜಾ ಪಾಂಡವನು ಪುರುಷವ್ಯಾಘ್ರರಾದ ಯುಯುಧಾನ-ವೃಕೋದರರರನ್ನು ಬಿಗಿದಪ್ಪಿದನು ಮತ್ತು ಆನಂದಾಶ್ರುಗಳನ್ನು ಸುರಿಸಿದನು. ಆಗ ಪಾಂಡವರ ಜಯವನ್ನು ನೋಡಿ ಎಲ್ಲ ಸೇನೆಗಳೂ ಮುದಿತರಾಗಿ ಯುದ್ಧದ ಮನಸ್ಸು ಮಾಡಿದರು.

## ದುರ್ಯೋಧನನ ಅನುತಾಪ

ಸೈಂಧವನು ಹತನಾಗಲು ಸುಯೋಧನನು ಕಣ್ಣೀರುತುಂಬಿ, ಬೇಸರದ ಮುಖದಲ್ಲಿ ದೀನನೂ, ಶತ್ರುಗಳನ್ನು ಜಯಿಸಲು ನಿರುತ್ಸಾಹಿಯೂ ಆದನು. ಅರ್ಜುನನ ಸಮನಾದ ಯೋಧನು ಭುವಿಯಲ್ಲಿಯೇ ಇಲ್ಲ ಮತ್ತು ಕ್ರುದ್ಧನಾದ ಅವನನ್ನು ಎದುರಿಸಿ ನಿಲ್ಲನು ದ್ರೋಣನಾಗಲೀ,

ರಾಧೇಯನಾಗಲೀ, ಅಶ್ವತ್ಥಾಮನಾಗಲೀ ಪರ್ಯಾಪ್ತರಲ್ಲ ಎಂದು ಅವನು ಒಪ್ಪಿಕೊಂಡನು.

> "ನನ್ನ ಸರ್ವ ಮಹಾರಥರನ್ನೂ ರಣದಲ್ಲಿ ಸೋಲಿಸಿ ಅರ್ಜುನನು ಸೈಂಧವನನ್ನು ಸಂಹರಿಸಿದನು. ರಣದಲ್ಲಿ ಯಾರೂ ಅವನನ್ನು ತಡೆಯಲಾಗಲಿಲ್ಲ. ಕೌರವರ ಈ ಮಹಾಸೇನೆಯು ಸರ್ವಥಾ ನಾಶವಾಗಿಹೋಯಿತು. ಸಾಕ್ಷಾತ್ ಪುರಂದರನೇ ಬಂದರೂ ಇದನ್ನು ರಕ್ಷಿಸಲಾರನು! ಯಾರನ್ನು ಉಪಾಶ್ರಯಿಸಿ ನಾನು ಈ ಸಂಗ್ರಾಮಕ್ಕೆ ಶಸ್ತ್ರಗಳನ್ನು ಸಂಗ್ರಹಿಸಲು ಪ್ರಾರಂಭಿಸಿದೆನೋ ಅದೇ ಕರ್ಣನೇ ರಣದಲ್ಲಿ ಪರಾಜಿತನಾಗಿ ಜಯದ್ರಥನು ಹತನಾದನು! ಸಭಾಮಧ್ಯದಲ್ಲಿ ಪಾಂಡವರಿಗೆ ಕ್ರೂರವಾಗಿ ಮಾತನಾಡಿದ ಆ ಕರ್ಣನೇ ರಣದಲ್ಲಿ ಪರಾಜಿತನಾಗಿ ಜಯದ್ರಥನು ಹತನಾದನು! ಯಾರ ವೀರ್ಯವನ್ನು ಆಶ್ರಯಿಸಿ ಶಾಂತಿಯನ್ನು ಯಾಚಿಸುತ್ತಿದ್ದ ಅಚ್ಯುತನನ್ನು ತೃಣಕ್ಕೆ ಸಮಾನವಾಗಿ ಕಂಡೆನೋ ಆ ಕರ್ಣನೇ ಯುದ್ಧದಲ್ಲಿ ಪರಾಜಿತನಾಗಿದ್ದಾನೆ!"

ಹೀಗೆ ಬೇಸತ್ತ ಮನಸ್ಸಿನಿಂದ ದುರ್ಯೋಧನನು ಸರ್ವಲೋಕವನ್ನೂ ತಿರಸ್ಕರಿಸಿ ದ್ರೋಣನನ್ನು ಕಾಣಲು ಹೋದನು. ಆಗ ಅವನಿಗೆ ಕುರುಗಳ

ಮಹಾನಾಶವನ್ನೂ, ಶತ್ರುಗಳ ವಿಜಯವನ್ನೂ, ಧಾರ್ತರಾಷ್ಟ್ರರು ಶೋಕದಲ್ಲಿ ಮುಳುಗಿರುವುದನ್ನೂ ಹೇಳಿದನು:

"ಆಚಾರ್ಯ! ನಾಯಕನಾಗಿ ಅಭಿಷೇಕಗೊಂಡು ಕದನವನ್ನಾಡಿದ ನನ್ನ ಪಿತಾಮಹ ಶೂರ ಭೀಷ್ಮನನ್ನು ನೋಡಿರಿ! ಅವನನ್ನು ಕೊಂದು ಪ್ರಲುಬ್ಧನಾದ ಈ ಶಿಖಂಡಿಯು ಸಂಪೂರ್ಣ ಮನಸ್ಕನಾಗಿ ಎಲ್ಲ ಪಾಂಚಾಲರೊಂದಿಗೆ ಎದಿರುನಿಂತು ಸೇನೆಗಳನ್ನು ನಡೆಸುತ್ತಿದ್ದಾನೆ! ಅನಂತರವೂ ಕೂಡ ನಿಮ್ಮ ಶಿಷ್ಯ ದುರ್ಧರ್ಷ ಸವ್ಯಸಾಚಿಯು ಏಳು ಅಕ್ಷೌಹಿಣಿಗಳನ್ನು ಸಂಹರಿಸಿ, ರಾಜಾ ಜಯದ್ರಥನನ್ನು ವಧಿಸಿದನು. ನಮಗೆ ವಿಜಯವನ್ನು ಬಯಸಿ ಯಮಸಾದನಕ್ಕೆ ಹೋದ ಆ ಉಪಕಾರೀ ಸುಹೃದಯರ ಋಣವನ್ನು ಹೇಗೆ ತೀರಿಸಲಿ? ನನಗಾಗಿ ಈ ವಸುಂಧರೆಯನ್ನು ಬಯಸಿದ್ದರೋ ಆ ವಸುಧಾಧಿಪರೇ ಈ ವಸುಧೆಯ ಐಶ್ವರ್ಯವನ್ನು ತೊರೆದು ವಸುಧೆಯ ಮೇಲೆ ಮಲಗಿದ್ದಾರೆ! ಮಿತ್ರರ ಈ ರೀತಿಯ ವಿನಾಶವನ್ನೆಸಗಿ ಹೇಡಿಯಾದ ನಾನು ಸಹಸ್ರ ಅಶ್ವಮೇಧಗಳನ್ನು ಮಾಡಿಯೂ ನನ್ನ ಈ ಪಾಪವನ್ನು

ತೊಳೆದು ಪುನೀತನಾಗಲಾರೆನು. ಲುಬ್ಧನಾದ, ಪಾಪಿಯಾದ, ಮತ್ತು ಧರ್ಮನಾಶಕನಾದ ನನಗೆ ವಿಜಯವನ್ನು ಬಯಸಿ ಹೋರಾಡುತ್ತಿದ್ದವರು ಯಮಲೋಕಕ್ಕೆ ಹೊರಟುಹೋದರು. ಪತಿತನಂತೆ ನಡೆದುಕೊಂಡಿರುವ, ಸುಹೃದರಿಗೆ ದ್ರೋಹವನ್ನೆಸಗಿದ ನನಗೆ ಪಾರ್ಥಿವಸಂಸದಿಯಲ್ಲಿ ಈ ಭೂಮಿಯು ಏಕೆ ಸೀಳಿಹೋಗಿ ಅವಕಾಶಮಾಡಿಕೊಡುವುದಿಲ್ಲ? ರಾಜರ ಮಧ್ಯೆ ಯುದ್ಧಮಾಡುತ್ತಾ, ಅವನ ಅಂಗಗಳು ರಕ್ತದಿಂದ ತೋಯುತ್ತಿರಲು ಪಿತಾಮಹ ಭೀಷ್ಮನು ಹತನಾಗಿ ಮಲಗಿದಾಗ ನಾನು ಅವನನ್ನು ರಕ್ಷಿಸಲು ಶಕ್ತನಾಗಲಿಲ್ಲ. ಆ ದುರ್ಧರ್ಷ ಪರಲೋಕವನ್ನು ಜಯಿಸಿರುವವನು ಅನಾರ್ಯಪುರುಷನಾದ, ಮಿತ್ರದ್ರೋಹಿಯಾದ, ಅಧಾರ್ಮಿಕನಾದ ನನಗೆ ಏನು ಹೇಳಿಯಾನು? ನನಗಾಗಿ ಪ್ರಾಣವನ್ನು ತ್ಯಜಿಸಿ ಹೋರಾಡಿದ ಮಹಾರಥ ಶೂರ ಮಹೇಷ್ವಾಸ ಜಲಸಂಧನನ್ನು ಸಾತ್ಯಕಿಯು ಸಂಹರಿಸಿದುದನ್ನು ನೋಡು! ಕಾಂಬೋಜ, ಅಲಂಬುಸ ಮತ್ತು ಇನ್ನೂ ಅನೇಕ ಸುಹೃದಯರು ಹತರಾದುದನ್ನು ನೋಡಿ ಇಂದು ನಾನು ಬದುಕಿರುವುದರ ಅರ್ಥವೇನು? ನನ್ನ ವಿಜಯಕ್ಕಾಗಿ

ಹಿತಕ್ಕಾಗಿ ಪರಾಙ್ಮುಖರಾಗದೇ ಪರಮ ಶಕ್ತಿಯಿಂದ ಪ್ರಯತ್ನಮಾಡಿದ ಶೂರರು ಹತರಾದರು. ಇಂದು ನಾನು ಹೊರಟುಹೋಗಿರುವ ಅವರ ಋಣವನ್ನು ಶಕ್ತಿಯಿಂದ ಯಮುನೆಯ ಜಲದಿಂದ ತರ್ಪಣಗಳನ್ನಿತ್ತು ತೀರಿಸಿಕೊಳ್ಳುತ್ತೇನೆ. ಸರ್ವಶಸ್ತ್ರಧಾರಿಗಳಲ್ಲಿ ಶ್ರೇಷ್ಠನೇ! ನಿನಗೆ ಸತ್ಯವಾದುದನ್ನು ಪ್ರತಿಜ್ಞೆಮಾಡಿ ಹೇಳುತ್ತೇನೆ. ನನ್ನ ವೀರ್ಯ ಮತ್ತು ಸುತರ ಮೇಲೆ ಆಣೆಯಿಟ್ಟು ಇಷ್ಟಾಪೂರ್ತಿಯಿಂದ ಶಪಥ ಮಾಡುತ್ತೇನೆ. ರಣದಲ್ಲಿ ಆ ಎಲ್ಲ ಪಾಂಚಾಲರನ್ನೂ ಪಾಂಡವರೊಂದಿಗೆ ಸಂಹರಿಸಿ ಶಾಂತಿಯನ್ನು ಪಡೆಯುತ್ತೇನೆ ಅಥವಾ ಅವರು ಹೋಗಿರುವ ಲೋಕಗಳಿಗೆ ಹೋಗುತ್ತೇನೆ. ನನ್ನನ್ನು ಅನುಸರಿಸಿಬಂದವರು ಈಗ ನನಗೆ ಸಹಾಯವನ್ನು ಮಾಡಲು ಬಯಸುತ್ತಿಲ್ಲ. ಏಕೆಂದರೆ ಈಗ ಅವರು ನಮ್ಮನ್ನಲ್ಲ - ಪಾಂಡವರನ್ನೇ ಶ್ರೇಷ್ಠರೆಂದು ತಿಳಿದಿದ್ದಾರೆ. ಆ ಸತ್ಯಸಂಧ ಭೀಷ್ಮನು ಸಂಯುಗದಲ್ಲಿ ತಾನೇ ತನಗೆ ಮೃತ್ಯುವನ್ನು ತಂದುಕೊಂಡನು. ನೀವು ನಿಮ್ಮ ಪ್ರಿಯ ಶಿಷ್ಯ ಧನಂಜಯನಿಂದಾಗಿ ಉಪೇಕ್ಷೆ ಮಾಡುತ್ತಿದ್ದೀರಿ. ನಮಗೆ ಜಯವನ್ನು ಬಯಸಿದವರೆಲ್ಲರೂ ಈಗ ಹತರಾಗಿಬಿಟ್ಟಿದ್ದಾರೆ. ಆದರೆ ಸದ್ಯದಲ್ಲಿ ಕರ್ಣನಲ್ಲಿ ಮಾತ್ರ ನನಗೆ ಜಯವನ್ನು

ತರುವ ಬಯಕೆಯನ್ನು ಕಾಣುತ್ತಿದ್ದೇನೆ. ಯಾವ ಮಂದಬುದ್ಧಿಯು ಮಿತ್ರನು ಹೇಗಿದ್ದಾನದೆಂದು ಸರಿಯಾಗಿ ತಿಳಿದುಕೊಳ್ಳದೇ ಮಿತ್ರರು ಮಾಡುವ ಕೆಲಸವನ್ನು ಅವನಿಗೆ ವಹಿಸಿದರೆ ಅದು ಹಾಳಾಗಿ ಹೋಗುತ್ತದೆ. ಲುಬ್ಧ, ಪಾಪಿ, ಕುಟಿಲ, ಧನಲೋಭಿಯಾದ ನನ್ನ ಕಾರ್ಯಗಳೂ ಸುಹೃದಯರೆಂದು ಹೇಳಿಸಿಕೊಳ್ಳುವವರಿಂದ ಹೀಗೆಯೇ ಹಾಳಾಗಿ ಹೋಯಿತು. ಜಯದ್ರಥ, ವೀರ್ಯವಾನ್ ಸೌಮದತ್ತಿ, ಅಭೀಷಾಹರು, ಶೂರಸೇನರು, ಶಿಬಿಗಳು ಮತ್ತು ವಸಾಹತರು ಹತರಾದರು. ನನಗಾಗಿ ಸಂಗ್ರಾಮದಲ್ಲಿ ಹೋರಾಡುತ್ತಾ ಆ ಪುರುಷರ್ಷಭರು ಕಿರೀಟಿಯಿಂದ ಹತರಾಗಿ ಎಲ್ಲಿಗೆ ಹೋಗಿರುವರೋ ಅಲ್ಲಿಗೆ ನಾನೂ ಕೂಡ ಇಂದು ಹೋಗುತ್ತೇನೆ. ಆ ಪುರುಷರ್ಷಭರು ಇಲ್ಲದೇ ನಾನು ಬದುಕಿರುವುದರಲ್ಲಿ ಅರ್ಥವಿಲ್ಲ. ಪಾಂಡುಪುತ್ರರ ಆಚಾರ್ಯರಾದ ನೀವು ನನಗೆ ಅನುಮತಿಯನ್ನು ನೀಡಬೇಕು."

## ದ್ರೋಣನ ಮಾತು

ಸೈಂಧವನೂ ಭೂರಿಶ್ರವಸನೂ ಹತರಾದುದನ್ನು ಕಂಡು ಕೌರವ ಸೇನೆಗಳಲ್ಲಿ ಮಹಾ ಶೋಕವುಂಟಾಯಿತು. ಯಾರ ಸಲಹೆಯಿಂದ

ನೂರಾರು ಕ್ಷತ್ರಿಯರ್ಷಭರು ಹತರಾದರೋ ಆ ದುರ್ಯೋಧನನ ಸಲಹೆಯನ್ನು ಎಲ್ಲರೂ ಅನಾದರಿಸಿದರು. ದ್ರೋಣನಾದರೋ ದುರ್ಯೋಧನನ ಆ ಮಾತನ್ನು ಕೇಳಿ ದುಃಖಿತ ಮನವುಳ್ಳವರಾಗಿ, ಒಂದು ಮುಹೂರ್ತಕಾಲ ಯೋಚಿಸಿ, ತುಂಬಾ ಆರ್ತನಾಗಿ ಹೇಳಿದನು:

"ದುರ್ಯೋಧನ! ಮಾತಿನ ಶರಗಳಿಂದ ನನ್ನನ್ನೇಕೆ ತುಂಡು ತುಂಡು ಮಾಡುತ್ತಿರುವೆ? ಸಮರದಲ್ಲಿ ಸವ್ಯಸಾಚಿಯು ಅಜೇಯನೆಂದು ಯಾವಾಗಲೂ ಹೇಳಿಕೊಂಡು ಬಂದಿದ್ದೇನೆ. ಅರ್ಜುನನ ಅತುಲ ಪರಾಕ್ರಮವನ್ನು ತಿಳಿದುಕೊಳ್ಳಲು ಕಿರೀಟಿಯಿಂದ ರಕ್ಷಿಸಲ್ಪಟ್ಟ ಶಿಖಂಡಿಯು ಭೀಷ್ಮನನ್ನು ವಧಿಸಿದುದೊಂದೇ ಸಾಕು. ದೇವಮಾನುಷರಿಂದಲೂ ಅವಧ್ಯನಾಗಿದ್ದ ಅವನು ಹತನಾದುದನ್ನು ನೋಡಿದಾಗಲೇ ಭಾರತೀ ಸೇನೆಯು ಉಳಿಯುವುದಿಲ್ಲವೆಂದು ತಿಳಿದುಕೊಂಡಿದ್ದೆ. ಮೂರುಲೋಕಗಳಲ್ಲಿರುವ ಎಲ್ಲ ಪುರುಷರಲ್ಲಿ ಯಾರನ್ನು ಶೂರನೆಂದು ನಾವು ಪರಿಗಣಿಸಿದ್ದೇವೋ ಆ ಶೂರನೇ ಹತನಾದ ಮೇಲೆ ಬೇರೆ ಯಾರನ್ನು ಶರಣುಹೋಗಬಲ್ಲೆವು? ಮಗೂ!

"ಕುರುಸಂಸದಿಯಲ್ಲಿ ಶಕುನಿಯು ಯಾವ ಪಗಡೆಕಾಯಿಗಳನ್ನು

ನಡೆಸುತ್ತಿದ್ದನೋ ಅವು ನಿಜವಾದ ಪಗಡೆಕಾಯಿಗಳಲ್ಲ, ಶತ್ರುಗಳನ್ನು ಸುಡುವಂತಹ ಬಾಣಗಳು, ಅಯ್ಯಾ! ಜಯಚೋದಿತರಾದ ಇವು ವಿಶಿಖೆಗಳಾಗಿ ಕೊಲ್ಲುವುದಿಲ್ಲ!" ಎಂದು ಹೇಳಿದ ವಿದುರನನ್ನು ನೀನು ಅಂದು ಅರ್ಥಮಾಡಿಕೊಳ್ಳಲಿಲ್ಲ. ನಿನ್ನ ಕ್ಷೇಮಕ್ಕಾಗಿ ಮಹಾತ್ಮ ವಿದುರನು ವಿಲಪಿಸುತ್ತಿದ್ದರೂ, ಮಂಗಳ ಮಾತನ್ನು ಆಡುತ್ತಿದ್ದರೂ ನೀನು ಅವನ ಮಾತನ್ನು ಕೇಳಲಿಲ್ಲ. ದುರ್ಯೋಧನ! ಅವನ ಆ ಮಾತುಗಳನ್ನು ಅನಾದರಿಸಿದುದರಿಂದ ಬಂದಿರುವ ಮತ್ತು ನಡೆಯುತ್ತಿರುವ ಈ ಘೋರ ಮಹಾ ನಾಶವು ನೀನೇ ಮಾಡಿದ ಕೆಲಸದಿಂದಾಗಿ! ನಾವೆಲ್ಲರೂ ನೋಡುತ್ತಿದ್ದಂತೆಯೇ ಅನರ್ಹಳಾದ, ಉತ್ತಮ ಕುಲದಲ್ಲಿ ಹುಟ್ಟಿದ, ಸರ್ವಧರ್ಮಾನುಚಾರಿಣಿ ಕೃಷ್ಣೆಯನ್ನು ಸಭೆಗೆ ಸೆಳೆದು ತರಿಸಿ ಅಪಮಾನಿಸಿದೆ. ಗಾಂಧಾರೇ! ಆ ಅಧರ್ಮದ ಫಲವನ್ನು ನೀನು ಪಡೆಯುತ್ತಿದ್ದೀಯೆ. ಇಲ್ಲವಾದರೆ ನೀನು ಪರಲೋಕದಲ್ಲಿ ಇದಕ್ಕೂ ಅಧಿಕವಾದ ಫಲವನ್ನು ಅನುಭವಿಸಬೇಕಾಗಿದ್ದಿತು. ಆ ಪಾಂಡವರನ್ನು ದ್ಯೂತದಲ್ಲಿ ಮೋಸದಿಂದ ಗೆದ್ದು ಮೃಗಚರ್ಮಧರರನ್ನಾಗಿ ಮಾಡಿ ಅರಣ್ಯಕ್ಕೆ ಕಳುಹಿಸಿದೆ.

ನನಗೆ ಪುತ್ರರಂತಿರುವ, ಸದಾ ಧರ್ಮಾಚರಣೆಯಲ್ಲಿರುವ ಅವರಿಗೆ ನಾನು ದ್ರೋಹವೆಸಗುತ್ತಿದ್ದೇನೆ. ಲೋಕದ ಮನುಷ್ಯರು ನನ್ನಂತಹ ಬೇರೆ ಯಾರನ್ನು ತಾನೇ ಬ್ರಾಹ್ಮಣನೆಂದು ಕರೆಯುತ್ತಾರೆ? ಕುರುಸಂಸದಿಯಲ್ಲಿ ಧೃತರಾಷ್ಟ್ರನ ಸಮ್ಮತಿಯಲ್ಲಿ ಶಕುನಿಯೊಂದಿಗೆ ನೀನೇ ಪಾಂಡವರ ಈ ಕೋಪವನ್ನು ಬರಮಾಡಿಕೊಂಡೆ. ದುಃಶಾಸನ-ಕರ್ಣರ ಸಹಾಯದಿಂದ ಅದನ್ನು ಹೆಚ್ಚಿಸಿದೆ. ಕ್ಷತ್ತನ ವಾಕ್ಯಗಳನ್ನು ಪುನಃ ಪುನಃ ಅನಾದರಿಸಿ ನೀನು ಇದನ್ನು ವೃದ್ಧಿಸಿದೆ. ನೀವೆಲ್ಲರೂ ಒಟ್ಟಾಗಿ, ಸಿಂಧುರಾಜನನ್ನು ಆಶ್ರಯಿಸಿ ಆರ್ಜುನಿಯನ್ನು ಸುತ್ತುವರೆದು ಮಧ್ಯದಲ್ಲಿದ್ದ ಅವನನ್ನು ಹೇಗೆ ಕೊಂದಿರಿ? ಕೌರವ್ಯ! ನೀನು, ಕರ್ಣ, ಕೃಪ, ಶಲ್ಯ ಮತ್ತು ಅಶ್ವತ್ಥಾಮರು ಜೀವಿತರಾಗಿರುವಾಗ ಸೈಂಧವನು ಹೇಗೆ ನಿಧನವನ್ನು ಹೊಂದಿದನು? ಯಾವಾಗ ಎಲ್ಲ ರಾಜರೂ ತಿಗ್ಮ ತೇಜಸ್ಸನ್ನು ಬಳಸಿ ಸಿಂಧುರಾಜನನ್ನು ರಕ್ಷಿಸಲು ಪ್ರಯತ್ನಿಸುತ್ತಿರುವಾಗ ಮಧ್ಯದಲ್ಲಿದ್ದ ಅವನು ಹೇಗೆ ಹತನಾದನು? ದುರ್ಯೋಧನ! ಆ ಮಹೀಪತಿಯು ಅರ್ಜುನನಿಂದ ರಕ್ಷಣೆಯನ್ನು ವಿಶೇಷವಾಗಿ ನನ್ನಿಂದ ಮತ್ತು ನಿನ್ನಿಂದ ಆಶಿಸಿದ್ದನು. ಫಲ್ಗುನನಿಂದ ಅವನಿಗೆ ರಕ್ಷಣೆಯನ್ನು

ಒದಗಿಸದೇ ಇದ್ದ ನಾನು ನನ್ನ ಜೀವನದ ರಕ್ಷಣೆಯನ್ನೂ ಹೇಗೆ ಮಾಡಿಕೊಳ್ಳುವೆನೋ! ಆ ಶಿಖಂಡಿಯೊಡನೆ ಪಾಂಚಾಲರನ್ನು ಸಂಹರಿಸದೇ ನನ್ನನ್ನು ನಾನು ಧೃಷ್ಟದ್ಯುಮ್ನನೆಂಬ ಕಿಲ್ಬಿಷದಲ್ಲಿ ಮುಳುಗಿ ಹೋಗಿರುವೆನೋ ಎಂದು ನನಗೆ ತೋರುತ್ತಿದೆ. ಸಿಂಧುರಾಜನಿಗೆ ರಕ್ಷಣೆಯನ್ನು ನೀಡಲು ಅಶಕ್ತನಾದ ನೀನು ಏನು ಮಾಡಬೇಕೆಂದು ಪರಿತಪಿಸುತ್ತಿರುವ ನನ್ನನ್ನು ಏಕೆ ಮಾತಿನ ಶರಗಳಿಂದ ಚುಚ್ಚುತ್ತಿರುವೆ? ಯುದ್ಧದಲ್ಲಿ ಸತ್ಯಸಂಧ ಅಕ್ಲಿಷ್ಟಕರ್ಮಿ ಭೀಷ್ಮನ ಸುವರ್ಣಧ್ವಜವನ್ನು ಕಾಣದೇ ನಾವು ಹೇಗೆ ಜಯವನ್ನು ಆಶಿಸಬಲ್ಲೆವು? ಮಹಾರಥರ ಮಧ್ಯದಲ್ಲಿದ್ದ ಸೈಂಧವನು ಹತನಾಗಲು, ಭೂರಿಶ್ರವಸನೂ ಕೂಡ ಹತನಾಗಲು ಯೋಚಿಸಲು ಇನ್ನೇನು ಉಳಿದಿದೆ? ಸಿಂಧುರಾಜನ ಗತಿಯಲ್ಲಿಯೇ ಹೋಗದೇ ಜೀವಿಸಿರುವ ಕೃಪನೇ ದುರ್ಧರ್ಷನೆಂದು ನಾನು ಗೌರವಿಸುತ್ತೇನೆ. ಸಂಗ್ರಾಮದಲ್ಲಿ ವಾಸವನೊಂದಿಗೆ ದೇವತೆಗಳಿಗೂ ಅವಧ್ಯನೆಂದೆನಿಸಿಕೊಂಡಿರುವ, ದುಷ್ಕರ ಕರ್ಮಗಳನ್ನೆಸಗುವ ಭೀಷ್ಮನು ನಿನ್ನ ಅನುಜ ದುಃಶಾಸನನು ನೋಡುತ್ತಿರುವಂತೆಯೇ ಹತನಾದುದನ್ನು ಕಂಡಾಗಲೇ ನಾನು ಈ ವಸುಂಧರೆಯು ನಿನ್ನದಾಗುವುದಿಲ್ಲವೆಂದು ನಾನು

ಯೋಚಿಸಿದ್ದೆ. ಈ ಪಾಂಡವರು ಮತ್ತು ಸೃಂಜಯರ ಸೇನೆಗಳು ಒಟ್ಟಾಗಿ ಇಂದು ನನ್ನ ಮೇಲೆ ಬಂದು ಬೀಳಲಿ. ಸರ್ವಪಾಂಚಾಲರನ್ನು ಸಂಹರಿಸದೆಯೇ ನಾನು ಈ ಕವಚವನ್ನು ಬಿಚ್ಚುವುದಿಲ್ಲ. ಸಮರದಲ್ಲಿ ನಿನಗೆ ಹಿತವಾದ ಈ ಕಾರ್ಯವನ್ನು ಮಾಡುತ್ತೇನೆ. ಆಹವದಲ್ಲಿ ನನ್ನ ಮಗ ಅಶ್ವತ್ಥಾಮನಿಗೆ ನೀನು ಇದನ್ನು ಹೇಳಬೇಕು: "ಜೀವವನ್ನು ರಕ್ಷಿಸಿಕೊಳ್ಳುವ ಆಸೆಯಿಂದ ಸೋಮಕರನ್ನು ವಧಿಸದೇ ಬಿಟ್ಟುಬಿಡಬಾರದು! ಹೀಗೆ ತಂದೆಯಿಂದ ಅನುಶಾಸಿತನಾಗಿರುವೆ. ಆ ವಚನವನ್ನು ಪರಿಪಾಲಿಸು. ದಯೆ, ದಮ, ಸತ್ಯ ಮತ್ತು ಆರ್ಜವಗಳಲ್ಲಿ ನೀನು ಸ್ಥಿರನಾಗಿರು. ಧರ್ಮಾರ್ಥಕುಶಲನಾಗಿದ್ದೀಯೆ! ಧರ್ಮಾರ್ಥಗಳನ್ನು ಪೀಡಿಸಬೇಡ! ಧರ್ಮಪ್ರಧಾನವಾದ ಕಾರ್ಯಗಳನ್ನೇ ಪುನಃ ಪುನಃ ಮಾಡುತ್ತಿರು!" ಎಂದು. ನೋಟ ಮತ್ತು ಮನಸ್ಸುಗಳಿಂದ ಶಕ್ತಿಯಿದ್ದಷ್ಟು ವಿಪ್ರರ ಸೇವೆಮಾಡಿ ಸಂತೋಷಗೊಳಿಸಬೇಕು. ಬೆಂಕಿಯ ಜ್ವಾಲೆಗಳಂತಿರುವ ಅವರಿಗೆ ವಿಪ್ರಿಯವಾದ ಕೆಲಸಗಳನ್ನು ಮಾಡಬಾರದು. ಇದೋ! ನಿನ್ನ ಈ ಮಾತಿನ ಈಟಿಯಿಂದ ತುಂಬಾ ಪೀಡಿತನಾಗಿ ನಾನು ರಣದಲ್ಲಿ ಸೇನೆಗಳನ್ನು ಸೇರುತ್ತಿದ್ದೇನೆ.

ಸಧ್ಯವಾದರೆ ನೀನೂ ಕೂಡ ಸೇನೆಯನ್ನು ರಕ್ಷಿಸು. ರಾತ್ರಿಯಾದರೂ ಕೂಡ ಸಂರಬ್ಧರಾದ ಕುರು-ಸೃಂಜಯರು ಯುದ್ಧಮಾಡುತ್ತಾರೆ.”

ಹೀಗೆ ಹೇಳಿ ದ್ರೋಣನು ಸೂರ್ಯನು ನಕ್ಷತ್ರಗಳಿಂದ ಹೇಗೋ ಹಾಗೆ ಕ್ಷತ್ರಿಯರ ತೇಜಸ್ಸನ್ನು ಅಪಹರಿಸುತ್ತಾ ಪಾಂಡವ-ಸೃಂಜಯರ ಕಡೆ ತೆರಳಿದನು.

## ಹದಿನಾಲ್ಕನೆಯ ದಿನದ ಸಂಜೆ: ಪುನಃ ಯುದ್ಧಾರಂಭ

ಆಗ ದುರ್ಯೋಧನನು ದ್ರೋಣನಿಂದಲೇ ಪ್ರಚೋದಿತನಾಗಿ ಕೋಪಾವಿಷ್ಟನಾಗಿ ಯುದ್ಧದ ಕುರಿತೇ ಮನಸ್ಸು ಮಾಡಿದನು. ಆಗ ದುರ್ಯೋಧನನು ಕರ್ಣನಿಗೆ ಹೇಳಿದನು:

“ದೇವತೆಗಳಿಗೂ ದುರ್ಭೇದ್ಯವಾದ ಆಚಾರ್ಯರು ರಚಿಸಿದ ವ್ಯೂಹವನ್ನೂ ಕೂಡ ಪಾಂಡವ ಕಿರೀಟಿಯು ಕೃಷ್ಣನ ಸಹಾಯದಿಂದ ಒಡೆದುದನ್ನು ನೋಡು! ಮಹಾತ್ಮರಾದ ನೀನು ಮತ್ತು ದ್ರೋಣರು ಯುದ್ಧಮಾಡುತ್ತಿರುವಾಗ ಯೋಧಪ್ರಮುಖರು ನೋಡುತ್ತಿರುವಂತೆಯೇ ಸೈಂಧವನನ್ನು ಬೀಳಿಸಿದುದನ್ನು ನೋಡು! ಯುದ್ಧದಲ್ಲಿ ಪೃಥ್ವಿಯ ಪ್ರಮುಖ

ರಾಜರು ಪಾರ್ಥನೊಬ್ಬನಿಂದಲೇ ಸಿಂಹದಿಂದ ಇತರ ಮೃಗಗಳಂತೆ ಹತರಾಗಿರುವುದನ್ನು ನೋಡು! ಸಮರದಲ್ಲಿ ನಾನೇ ಯುದ್ಧಮಾಡುತ್ತಿದ್ದರೂ ಈ ಶಕ್ರಾತ್ಮಜನು ನನ್ನ ಸೇನೆಯಲ್ಲಿ ಸ್ವಲ್ಪವೇ ಉಳಿದುಕೊಳ್ಳುವಂತೆ ಮಾಡಿಬಿಟ್ಟಿದ್ದಾನೆ! ಯುದ್ಧದಲ್ಲಿ ದ್ರೋಣರಿಂದ ಬಿಟ್ಟುಕೊಡದೇ ಇದ್ದಿದ್ದರೆ ಫಲ್ಗುನನು ಸಂಯುಗದಲ್ಲಿ ಎಷ್ಟೇ ಪ್ರಯತ್ನಿಸಿದ್ದರೂ ಹೇಗೆ ತಾನೇ ದುರ್ಭೇದ್ಯವಾದ ಈ ವ್ಯೂಹವನ್ನು ಭೇದಿಸುತ್ತಿದ್ದನು? ಮಹಾತ್ಮ ಫಲ್ಗುನನು ಯಾವಾಗಲೂ  ಪ್ರಿಯನಲ್ಲವೇ? ಆದುದರಿಂದಲೇ ಅವರು ಅವನೊಂದಿಗೆ ಯುದ್ಧಮಾಡದೇ ದಾರಿಮಾಡಿಕೊಟ್ಟರು! ಪರಂತಪ ದ್ರೋಣರು ಸೈಂಧವನಿಗೆ ಅಭಯವನ್ನಿತ್ತು ಕಿರೀಟಿಗೆ ದ್ವಾರವನ್ನು ತೆರೆದರು. ನನ್ನ ನಿರ್ಗುಣತೆಯನ್ನು ನೋಡು! ಒಂದುವೇಳೆ ಮೊದಲೇ ಅವರು ಮನೆಗೆ ಹೋಗಲು ಸಿಂಧುರಾಜನಿಗೆ ಅನುಮತಿಯನ್ನಿತ್ತಿದ್ದರೆ ಸಮರದಲ್ಲಿ ಈ ಜನಕ್ಷಯವು ನಡೆಯುತ್ತಿರಲಿಲ್ಲ. ಆದರೆ ನಾನು ಅನಾರ್ಯನಂತೆ ರಣದಲ್ಲಿ ಸಂರುದ್ಧರಾದ ದ್ರೋಣರಿಂದ ಅಭಯವನ್ನು ಪಡೆದು ಜೀವಿತಾರ್ಥನಾದ ಜಯದ್ರಥನನ್ನು ಮನೆಗೆ ಹೋಗದಂತೆ ತಡೆದೆನು. ನಾವೆಲ್ಲ ದುರಾತ್ಮರು ನೋಡುತ್ತಿದ್ದಂತೆಯೇ ಇಂದು ಯುದ್ಧದಲ್ಲಿ ಭೀಮಸೇನನನ್ನು

ಎದುರಿಸಿ ಚಿತ್ರಸೇನನೇ ಮೊದಲಾದ ನನ್ನ ತಮ್ಮಂದಿರು ಅಸುನೀಗಿದರು!”

ಕರ್ಣನು ಹೇಳಿದನು:

“ಆಚಾರ್ಯನನ್ನು ನಿಂದಿಸದಿರು. ಆ ದ್ವಿಜನು ಪರಮ ಶಕ್ತಿಯಿಂದ ಯುದ್ಧಮಾಡುತ್ತಿದ್ದಾನೆ. ಯುದ್ಧದಲ್ಲಿ ಪಾಂಡವರು ಅಸ್ತ್ರವಿದ ದ್ರೋಣನಿಂದ ಅಜೇಯರೆಂದು ತಿಳಿ. ಹೇಗೆ ಅವನನ್ನು ಅತಿಕ್ರಮಿಸಿ ಶ್ವೇತವಾಹನನು ಪ್ರವೇಶಿಸಿದನೋ ಅದು ದೈವದೃಷ್ಟವೇ ಹೊರತು ಅನ್ಯಥಾ ಅದನ್ನು ತಿಳಿದುಕೊಳ್ಳಬಾರದು. ಬೇರೆ ಏನೂ ಅದರಲ್ಲಿಲ್ಲ. ಸುಯೋಧನ! ಪರಮ ಶಕ್ತಿಯಿಂದ ನಾವು ಯುದ್ಧಮಾಡುತ್ತಿದ್ದರೂ ಸೈಂಧವನು ಹತನಾದನೆಂದರೆ ಅದರಲ್ಲಿ ದೈವವೇ ಮೇಲು ಎನ್ನುವುದನ್ನು ನೆನಪಿಸಿಕೊಳ್ಳಬೇಕು. ರಣಾಂಗಣದಲ್ಲಿ ನಿನ್ನ ಜೊತೆಗೇ ಪರಮ ಯತ್ನವನ್ನು ಮಾಡುತ್ತಿರುವ, ಸತತವೂ ಮೋಸದಿಂದ ಅಥವಾ ವಿಕ್ರಮದಿಂದ ನಡೆದುಕೊಳ್ಳುತ್ತಿರುವ ನಮ್ಮ ಈ ಪೌರುಷವನ್ನು ಕೊಂದು ದೈವವು ಮೇಲುಗೈ ಮಾಡುತ್ತಿದೆ. ದೈವದಿಂದ ಪೀಡಿತನಾದ ಪುರುಷನು ಯಾವುದೇ ಕರ್ಮವನ್ನು ಮಾಡಲು

ತೊಡಗಿದರೂ ಅವನ ಒಂದೊಂದು ಕೆಲಸವನ್ನೂ ದೈವವು ಹಾಳುಮಾಡುತ್ತದೆ. ಮನುಷ್ಯನು ಸದಾ ಉದ್ಯೋಗಶೀಲನಾಗಿ ಕಾರ್ಯವು ಸಿದ್ಧಿಯಾಗುವುದೋ ಇಲ್ಲವೋ ಎಂಬ ಶಂಕೆಯಿಲ್ಲದೇ ಕರ್ತವ್ಯವನ್ನು ಮಾಡುತ್ತಿರಬೇಕು. ಅದರ ಸಿದ್ಧಿಯು ದೈವಾಧೀನವಾದುದು. ಪಾರ್ಥರನ್ನು ನಾವು ವಿಷ ಮತ್ತು ಯೋಗಗಳಿಂದ ಮೋಸದಿಂದ ವಂಚಿಸಿದ್ದೇವೆ. ಜತುಗೃಹದಲ್ಲಿ ಸುಟ್ಟೆವು ಮತ್ತು ದ್ಯೂತದಲ್ಲಿ ಸೋಲಿಸಿದೆವು. ರಾಜನೀತಿಯನ್ನು ಆಶ್ರಯಿಸಿ ಅವರನ್ನು ಕಾನನಕ್ಕೆ ಕಳುಹಿಸಿಯೂ ಆಯಿತು. ಪ್ರಯತ್ನಪೂರ್ವಕವಾಗಿ ಮಾಡಿದ ಈ ಎಲ್ಲವನ್ನು ದೈವವು ಮಣ್ಣುಗೂಡಿಸಿತು. ಮೃತ್ಯುವನ್ನು ಹಿಂದೆ ಹಾಕಿ ಪ್ರಯತ್ನಪೂರ್ವಕವಾಗಿ ಯುದ್ಧಮಾಡು. ಪ್ರಯತ್ನಿಸುತ್ತಿರುವ ನಿನ್ನ ಮತ್ತು ಅವರ ಮಾರ್ಗದಲ್ಲಿ ದೈವವು ಹೋಗುತ್ತದೆ. ಅವರು ಬುದ್ಧಿಪೂರ್ವಕವಾಗಿ ಮಾಡಿರಬಹುದಾದ ಸುಕೃತವು ನಮಗೆ ಏನೂ ಕಾಣುವುದಿಲ್ಲ. ಹಾಗೆಯೇ ವೀರ! ಬುದ್ಧಿಹೀನತೆಯಿಂದ ನೀನು ಮಾಡಿರುವ ದುಷ್ಕೃತಗಳೂ ಕಾಣುವುದಿಲ್ಲ. ಸುಕೃತ-ದುಷ್ಕೃತಗಳೆಲ್ಲವಕ್ಕೂ ದೈವವೇ ಪ್ರಮಾಣವಾಗಿರುತ್ತದೆ. ನಿದ್ದೆಮಾಡುತ್ತಿರುವಾಗಲೂ ಜಾಗೃತವಾಗಿದ್ದು ದೈವವು ಅನನ್ಯವಾಗಿ ಇದೇ ಕೆಲಸವನ್ನು

ಮಾಡುತ್ತಿರುತ್ತದೆ. ಆಗ ನಿನ್ನಲ್ಲಿ ಸೈನ್ಯಗಳೂ ಬಹಳವಾಗಿದ್ದವು. ಯೋಧರೂ ಬಹಳವಾಗಿದ್ದರು. ಪಾಂಡುಪುತ್ರರದ್ದು ಹಾಗಿರದಿದ್ದರೂ ಯುದ್ಧವು ನಡೆಯಿತು. ಅಲ್ಪರಾಗಿದ್ದ ಅವರಿಂದ ಬಹಳವಾಗಿದ್ದ ನಾವು ಕ್ಷಯಹೊಂದುತ್ತಿದ್ದೇವೆ. ನಮ್ಮ ಪೌರುಷವನ್ನು ನಾಶಮಾಡಿದ ಇದು ದೈವದ ಕೆಲಸವೆಂದು ಶಂಕೆಯಾಗುತ್ತಿದೆ.”

ಹೀಗೆ ಅವರು ಬಹಳವಾಗಿ ಮಾತನಾಡಿಕೊಳ್ಳುತ್ತಿದ್ದಾಗ ಪಾಂಡವರ ಸೇನೆಗಳು ಕಾಣಿಸಿಕೊಂಡವು. ಆಗ ಕೌರವರ ಮತ್ತು ಪರರ ನಡುವೆ ರಥ-ಗಜಗಳ ಸಮ್ಮಿಶ್ರ ಯುದ್ಧವು ಪ್ರಾರಂಭವಾಯಿತು.

# ಹದಿನಾಲ್ಕನೆಯ ದಿನದ ರಾತ್ರಿಯುದ್ಧ - ಘಟೋತ್ಕಚವ ವಧೆ

ಹದಿನಾಲ್ಕನೆಯ ದಿನದ ರಾತ್ರಿಯುದ್ಧದಲ್ಲಿ ಕೌರವರ ಪ್ರಚಂಡ ಗಜಸೇನೆಯು ಪಾಂಡವರ ಸೇನೆಗಳನ್ನು ಎಲ್ಲಕಡೆಗಳಿಂದ ಆಕ್ರಮಣಿಸಿ ಯುದ್ಧಮಾಡತೊಡಗಿತು. ಪರಲೋಕದ ದೀಕ್ಷೆಯನ್ನು ತೊಟ್ಟಿದ್ದ ಪಾಂಚಾಲ-ಕುರುಗಳು ಯಮರಾಷ್ಟ್ರವನ್ನು ವರ್ಧಿಸಲು

ಪರಸ್ಪರರೊಡನೆ ಯುದ್ಧಮಾಡಿದರು. ಸಮರದಲ್ಲಿ ಶೂರರು ಶೂರರನ್ನು ಎದುರಿಸಿ ಶರ-ತೋಮರ-ಶಕ್ತಿಗಳಿಂದ ಹೊಡೆದು ಬೇಗನೇ ಯಮಕ್ಷಯಕ್ಕೆ ಕಳುಹಿಸುತ್ತಿದ್ದರು. ಪರಸ್ಪರರನ್ನು ಸಂಹರಿಸುವುದರಲ್ಲಿ ತೊಡಗಿದ ರಥಿಗಳು ರಥಿಗಳನ್ನು ಎದುರಿಸಿ ರಕ್ತದ ದಾರುಣ ಕೋಡಿಯನ್ನೇ ಹರಿಸುವ ಮಯಾಯುದ್ಧವು ಪ್ರಾರಂಭವಾಯಿತು. ಮದೋತ್ಕಟ ಸಂಕ್ರುದ್ಧ ಆನೆಗಳು ಪರಸ್ಪರರನ್ನು ಎದುರಿಸಿ ಕೋರೆದಾಡೆಗಳಿಂದ ಇರಿಯುತ್ತಿದ್ದವು. ಆ ತುಮುಲ ಯುದ್ಧದಲ್ಲಿ ಯಶಸ್ಸನ್ನು ಅರಸುತ್ತಾ ಅಶ್ವಾರೋಹಿಗಳು ಅಶ್ವಾರೋಹಿಗಳೊಂದಿಗೆ ಪ್ರಾಸ-ಶಕ್ತಿ-ಪರಶಾಯುಧಗಳಿಂದ ಹೊಡೆದಾಡಿದರು. ನೂರಾರು ಶಸ್ತ್ರಪಾಣೀ ಪದಾತಿ ಸೈನಿಕರು ಸತತವಾಗಿ ಪ್ರಯತ್ನಿಸಿ ತಮ್ಮ ಪರಾಕ್ರಮವನ್ನು ತೋರ್ಪಡಿಸುತ್ತಾ ಅನ್ಯೋನ್ಯರನ್ನು ಹೊಡೆಯುತ್ತಿದ್ದರು. ಗೋತ್ರ-ನಾಮಧೇಯ-ಕುಲಗಳನ್ನು ಕೇಳಿಯೇ ಕುರುಗಳೊಡನೆ ಹೋರಾಡುತ್ತಿದ್ದವರು ಪಾಂಚಾಲರು ಎಂದು ತಿಳಿಯುತ್ತಿತ್ತು. ಯೋಧರು ಶರ-ಶಕ್ತಿ-ಪರಶಾಯುಧಗಳಿಂದ ಅನ್ಯೋನ್ಯರನ್ನು ಪರಲೋಕಗಳಿಗೆ ಕಳುಹಿಸುತ್ತಾ ನಿರ್ಭೀತರಾಗಿ ಸಂಚರಿಸುತ್ತಿದ್ದರು. ಅವರು ಬಿಡುತ್ತಿದ್ದ ಸಹಸ್ರಾರು ಬಾಣಗಳಿಂದಾಗಿ ಮತ್ತು ಭಾಸ್ಕರನು ಅಸ್ತಂಗತನಾಗಿದುದಕ್ಕಾಗಿ ಹತ್ತು ದಿಕ್ಕುಗಳೂ ಮೊದಲಿನಂತೆ ಪ್ರಕಾಶಿಸುತ್ತಿರಲಿಲ್ಲ.

## ದುರ್ಯೋಧನನ ಯುದ್ಧ

ಹಾಗೆ ಪಾಂಡವರು ಯುದ್ಧಮಾಡುತ್ತಿರುವಾಗ ದುರ್ಯೋಧನನು ನಿರ್ಭಯನಾಗಿ ಅವರ ಸೇನೆಯೊಳಗೆ ನುಗ್ಗಿದನು. ಸೈಂಧವನ ವಧೆಯಿಂದಾಗಿ ಅತೀವ ದುಃಖಸಮನ್ವಿತನಾದ ಅವನು ಸಾಯಬೇಕೆಂದು ಯೋಚಿಸಿ ಶತ್ರುಸೈನ್ಯವನ್ನು ಪ್ರವೇಶಿಸಿದನು. ಮೇದಿನಿಯನ್ನೇ ನಡುಗಿಸುವಂತಹ ರಥಘೋಷದಿಂದ ಅವನು ಪಾಂಡವರ ಸೇನೆಯನ್ನು ಆಕ್ರಮಣಿಸಿ ಗರ್ಜಿಸಿದನು. ಅವನ ಮತ್ತು ಪಾಂಡವರ ನಡುವೆ ನಡೆದ ಆ ಮಹಾ ತುಮುಲ ಯುದ್ಧವು ಸರ್ವಸೇನೆಗಳಿಗೆ ವಿನಾಶಕಾರಿಯಾಗಿ ಪರಿಣಮಿಸಿತು. ತೀಕ್ಷ್ಣ ಕಿರಣಗಳ ಮಧ್ಯಾಹ್ನದ ಸೂರ್ಯನನ್ನು ಹೇಗೆ ನೋಡಲಿಕ್ಕಾಗುವುದಿಲ್ಲವೋ ಹಾಗೆ ಕಿರಣಗಳಂತೆ ಹೊರಬೀಳುತ್ತಿದ್ದ ಬಾಣಗಳ ಮಧ್ಯದಲ್ಲಿದ್ದ ದುರ್ಯೋಧನನನ್ನು ಪಾಂಡವರಿಗೆ ಕಣ್ಣೆತ್ತಿ ನೋಡಲೂ ಆಗುತ್ತಿರಲಿಲ್ಲ. ದುರ್ಯೋಧನನಿಂದ ವಧಿಸಲ್ಪಡುತ್ತಿದ್ದ ಪಾಂಚಾಲರು ಶತ್ರುವನ್ನು ಗೆಲ್ಲುವುದರಲ್ಲಿ ನಿರುತ್ಸಾಹಿಗಳಾಗಿ ಪಲಾಯನ ಮಾಡುವುದರಲ್ಲಿಯೇ ಉತ್ಸಾಹ ತಳೆದು ಓಡಿ ಹೋಗುತ್ತಿದ್ದರು. ದುರ್ಯೋಧನನ ಮೊನಚಾದ ರುಕ್ಮಪುಂಖ ಶರಗಳಿಂದ ಗಾಯಗೊಂಡು ಬೇಗ ಬೇಗನೇ ಪಾಂಡವ ಸೈನಿಕರು ಬೀಳುತ್ತಿದ್ದರು. ಆಗ ದುರ್ಯೋಧನನು ಮಾಡಿದ ಸಾಹಸ ಕಾರ್ಯವನ್ನು ಅವನ ಕಡೆಯ ಯಾವ ಯೋಧನೂ

ಮಾಡಿರಲಿಲ್ಲ. ಅರಳಿದ ಕಮಲಗಳುಳ್ಳ ಸರೋವರವನ್ನು ಹೊಕ್ಕು ಆನೆಯೊಂದು ಎಲ್ಲಕಡೆ ಧ್ವಂಸಮಾಡುವಂತೆ ಅವನು ರಣದಲ್ಲಿ ಪಾಂಡವ ಸೇನೆಯನ್ನು ಮಥಿಸಿದನು. ದುರ್ಯೋಧನನ ತೇಜಸ್ಸಿನಿಂದಾಗಿ ಪಾಂಡವ ಸೇನೆಯು ಕಮಲಗಳ ಸರೋವರವು ಸೂರ್ಯನ ಪ್ರಖರ ಕಿರಣಗಳಿಂದ ಬತ್ತಿಹೋಗಿ ಅಥವಾ ಭಿರುಗಾಳಿಗೆ ಸಿಲುಕಿ ನಾಶವಾಗುವಂತೆ ಹತಾಶಗೊಂಡಿತು. ಪಾಂಡುಸೇನೆಯು ದುರ್ಯೋಧನನಿಂದಾಗಿ ಹತಾಶಗೊಂಡಿದುದನ್ನು ನೋಡಿ ಪಾಂಚಾಲರು ಭೀಮಸೇನನನ್ನು ಮುಂದಿರಿಸಿಕೊಂಡು ಅವನನ್ನು ಆಕ್ರಮಣಿಸಿದರು.

ದುರ್ಯೋಧನನು ಭೀಮಸೇನನನ್ನು ಹತ್ತರಿಂದ, ಮಾದ್ರೀಪುತ್ರರನ್ನು ಮೂರು-ಮೂರು ಬಾಣಗಳಿಂದ, ವಿರಾಟ-ದ್ರುಪದರನ್ನು ಆರರಿಂದ, ನೂರರಿಂದ ಶಿಖಂಡಿಯನ್ನು, ಧೃಷ್ಟದ್ಯುಮ್ನನನ್ನು ಎಪ್ಪತ್ತರಿಂದ, ಧರ್ಮಪುತ್ರನನ್ನು ಏಳರಿಂದ, ಅನೇಕ ನಿಶಿತ ಶರಗಳಿಂದ ಕೇಕಯ-ಚೇದಿಯರನ್ನೂ, ಸಾತ್ಯಕಿಯನ್ನು ಐದರಿಂದ, ದ್ರೌಪದೇಯರನ್ನು ಮೂರು-ಮೂರರಿಂದ ಮತ್ತು ಘಟೋತ್ಕಚನನ್ನು ಹೊಡೆದು ಸಿಂಹದಂತೆ ಗರ್ಜಿಸಿದನು. ಕ್ರುದ್ಧ ಅಂತಕನು ಪ್ರಜೆಗಳನ್ನು ಹೇಗೋ ಹಾಗೆ ದುರ್ಯೋಧನನು ಉಗ್ರ ಶರಗಳಿಂದ ಆನೆ-ಕುದುರೆ-

ರಥಗಳೊಂದಿಗೆ ನೂರಾರು ಶತ್ರು ಸೈನಿಕರನ್ನು ಕತ್ತರಿಸಿ ಹಾಕಿದನು. ಹಾಗೆ ಶತ್ರುಗಳನ್ನು ಸಂಹರಿಸುತ್ತಿದ್ದ ಅವನ ಬಂಗಾರದ ಮಹಾಧನುಸ್ಸನ್ನು ಜ್ಯೇಷ್ಠ ಪಾಂಡವನು ಭಲ್ಲಗಳೆರಡರಿಂದ ಮೂರು ಭಾಗಗಳನ್ನಾಗಿ ಕತ್ತರಿಸಿದನು. ಸುಪ್ರಯುಕ್ತ ನಿಶಿತ ಹತ್ತು ಬಾಣಗಳಿಂದ ಅವನನ್ನು ಹೊಡೆಯಲು ಅವೆಲ್ಲವೂ ದುರ್ಯೋಧನನ ಮರ್ಮಸ್ಥಾನಗಳನ್ನು ಪ್ರವೇಶಿಸಿಸ್ ಶರೀರವನ್ನು ಭೇದಿಸಿ ಭೂಮಿಯ ಮೇಲೆ ಬಿದ್ದವು. ಆಗ ವೃತ್ರನನ್ನುಸ್ ಅಂಹರಿಸಿದಾಗ ಪುರಂದರನನ್ನು ದೇವತೆಗಳು ಹೇಗೋ ಹಾಗೆ ಸಂತೋಷಗೊಂಡ ಯೋಧರು ಯುಧಿಷ್ಠಿರನನ್ನು ಸುತ್ತುವರೆದರು.

ಆಗ ಯುಧಿಷ್ಠಿರನು ತಡೆಯಲು ಅಸಾಧ್ಯವಾದ ಪರಮ ಶರವನ್ನು ದುರ್ಯೋಧನನ ಮೇಲೆ ಪ್ರಯೋಗಿಸಲು ಅದರಿಂದ ಅವನು ಬಹಳ ಪ್ರಹೃತನಾಗಿ ತನ್ನ ಉತ್ತಮ ರಥದಲ್ಲಿಯೇ ಕುಸಿದು ಬಿದ್ದನು. ಆಗ "ರಾಜನು ಹತನಾದನು!" ಎಂಬ ಜೋರಾದ ಕೂಗು ಹರ್ಷಗೊಂಡ ಪಾಂಚಾಲಸೇನೆಗಳಲ್ಲಿ ಕೇಳಿಬಂದಿತು. ಅಷ್ಟರಲ್ಲಿಯೇ ದ್ರೋಣನು ಅಲ್ಲಿಗೆ ಬಂದು ಕಾಣಿಸಿಕೊಂಡನು. ದುರ್ಯೋಧನನು ಹರ್ಷಗೊಂಡು ಧೃಢ ಬಿಲ್ಲನ್ನು ಎತ್ತಿಕೊಂಡು "ನಿಲ್ಲು! ನಿಲ್ಲು!" ಎನ್ನುತ್ತಾ ಪಾಂಡವನನ್ನು ಆಕ್ರಮಣಿಸಿದನು. ರಾಜನನ್ನು ಸಂಹರಿಸಲು ಬಯಸಿದ ಪಾಂಚಾಲರು

ತ್ವರೆಮಾಡಿ ಅವನನ್ನು ಎದುರಿಸಿ ಯುದ್ಧಮಾಡತೊಡಗಿದರು. ದ್ರೋಣನು ಕುರುಸತ್ತಮನನ್ನು ರಕ್ಷಿಸುತ್ತಾ ಚಂಡಮಾರುತದಿಂದ ಬೀಸಿಬಂದ ಮೋಡಗಳನ್ನು ಸೂರ್ಯನು ತನ್ನ ರಶ್ಮಿಗಳಿಂದ ಕರಗಿಸಿಬಿಡುವಂತೆ ಪಾಂಚಾಲಾರನ್ನು ತಡೆದನು. ಆಗ ಯುದ್ಧೋತ್ಸಾಹದಿಂದ ಸೇರಿದ್ದ ಕೌರವರ ಮತ್ತು ಶತ್ರುಗಳ ನಡುವೆ ಶ್ರೇಯಸ್ಸನ್ನು ಹೆಚ್ಚಿಸುವ ಮಹಾ ಸಂಗ್ರಾಮವು ನಡೆಯಿತು.

ಅರ್ಜುನ-ಸಾತ್ಯಕಿಯರು ದ್ರೋಣನನ್ನು ಆಕ್ರಮಣಿಸಿದರು. ಯುಧಿಷ್ಠಿರ-ಭೀಮಸೇನರೂ ಕೂಡ ತಮ್ಮ ತಮ್ಮ ಸೇನೆಗಳಿಂದೊಡಗೂಡಿ ದ್ರೋಣನನ್ನೇ ಆಕ್ರಮಣಿಸಿದರು. ನಕುಲ, ಸಹದೇವ, ಧೃಷ್ಟದ್ಯುಮ್ನ, ಶತಾನೀಕ, ವಿರಾಟರು, ಕೇಕಯ, ಮತ್ಸ್ಯ, ಶಾಲ್ವೇಯ ಸೇನೆಗಳು ದ್ರೋಣನನ್ನೇ ಎದುರಿಸಿದರು. ದ್ರುಪದನೂ ಕೂಡ ಪಾಂಚಾಲ್ಯರಿಂದ ರಕ್ಷಿತನಾಗಿ ದ್ರೋಣನನ್ನೇ ಆಕ್ರಮಣಿಸಿದನು. ದ್ರೌಪದೇಯರೂ ಮತ್ತು ರಾಕ್ಷಸ ಘಟೋತ್ಕಚನೂ ಸ್ವ-ಸೈನ್ಯಗಳೊಂದಿಗೆ ದ್ರೋಣನನ್ನೇ ಆಕ್ರಮಣಿಸಿದರು. ಶಿಖಂಡಿಯನ್ನು ಮುಂದಿರಿಸಿಕೊಂಡು ಆರುಸಾವಿರ ಪ್ರಭದ್ರಕ-ಪಾಂಚಾಲ ಪ್ರಹಾರಿಗಳು ದ್ರೋಣನನ್ನೇ ಮುತ್ತಿದರು. ಪಾಂಡವರ ಕಡೆಯ ಇತರ ಮಹಾರಥರೂ ಒಟ್ಟಾಗಿ ದ್ರೋಣನನ್ನೇ ಸುತ್ತುವರೆದು ಯುದ್ಧಮಾಡಿದರು. ಆ ಶೂರರು

ಯುದ್ಧಮಾಡುತ್ತಿರುವಾಗ ರಾತ್ರಿಯು ಹೇಡಿಗಳ ಭಯವನ್ನು ಹೆಚ್ಚಿಸಿ ಘೋರವಾಗಿ ಪರಿಣಮಿಸಿತು.

## ರಾತ್ರಿಯುದ್ಧದ ವರ್ಣನೆ

ಆ ರೌದ್ರ-ಅಮಂಗಳಕರ ರಾತ್ರಿಯು ಯೋಧರನ್ನು ಅಂತಕನಲ್ಲಿಗೆ ಕರೆದೊಯ್ಯುತ್ತಿತ್ತು. ಆನೆ-ಕುದುರೆ-ಮನುಷ್ಯರ ಪ್ರಾಣಗಳನ್ನು ಕೊನೆಗೊಳಿಸುತ್ತಿತ್ತು. ಆ ಘೋರ ರಾತ್ರಿಯಲ್ಲಿ ಎಲ್ಲಕಡೆ ನರಿಗಳು ಜ್ವಾಲಾಯುಕ್ತ ಬಾಯಿಗಳಿಂದ ಜೋರಾಗಿ ಕೂಗುತ್ತಾ ಮುಂದೆಬರುವ ಮಹಾಭಯವನ್ನು ಸೂಚಿಸುತ್ತಿದ್ದವು. ಮುಂಬರುವ ಅತಿದಾರುಣ ವಿಪುಲ ಭಯವನ್ನು ಸಾರುವ ಗೂಬೆಗಳು ವಿಶೇಷವಾಗಿ ಕೌರವರ ಧ್ವಜಗಳ ಮೇಲೆ ಕಾಣಿಸಿಕೊಂಡವು. ಆಗ ಸೇನೆಗಳಲ್ಲಿ ಅತಿಜೋರಾದ ಭೇರಿಶಬ್ಧಗಳ ಮತ್ತು ಮೃದಂಗನಾದಗಳಿಂದ ಮಹಾ ಶಬ್ಧವುಂಟಾಯಿತು. ಎಲ್ಲಕಡೆ ಆನೆಗಳ ಘೀಂಕಾರ, ಕುದುರೆಗಳ ಹೇಷಾರವ, ಮತ್ತು ಖುರಪುಟಗಳ ತುಮುಲ ಶಬ್ಧವು ತುಂಬಿಕೊಂಡಿತು. ಆ ಸಾಯಂಕಾರ ದ್ರೋಣ-ಸೃಂಜಯರ ನಡುವೆ ಅತಿದಾರುಣ ಯುದ್ಧವು ನಡೆಯಿತು.

ಕತ್ತಲೆಯು ಲೋಕವನ್ನೇ ಅವರಿಸಿರಲು ಮತ್ತು ಸೇನೆಗಳ ತುಳಿತದಿಂದ ಮೇಲೆದ್ದ ಧೂಳಿನಿಂದಾಗಿ ಏನಾಗುತ್ತದೆಯೆಂದೇ ತಿಳಿಯುತ್ತಿರಲಿಲ್ಲ.

ಕ್ಷಣದಲ್ಲಿಯೇ ಸೈನಿಕರು, ಕುದುರೆಗಳು ಮತ್ತು ಆನೆಗಳು ಸುರಿಸಿದ ರಕ್ತದಿಂದಾಗಿ ಭೂಮಿಯನ್ನು ಕಲ್ಮಶಗಳಿಂದ ತುಂಬಿದ್ದ ಧೂಳೇ ಕಾಣದಂತಾಯಿತು. ರಾತ್ರಿಯ ವೇಲೆ ಪರ್ವತದ ಮೇಲಿನ ಬಿದಿರಿನ ಅಕಡು ಸುಡುವಾಗ ಕೇಳಿಬರುವ ಘೋರ ಚಟ ಚಟಾ ಶಬ್ಧದಂತೆ ಶಸ್ತ್ರಗಳು ಬೀಳುತ್ತಿರುವುದು ಕೇಳಿಬರುತ್ತಿತ್ತು. ಆ ಕತ್ತಲೆಯಲ್ಲಿ ಸೈನಿಕರಿಗೆ ನಮ್ಮವರ್ಯಾರು ಶತ್ರುಗಳ್ಯಾರು ಎನ್ನುವುದೇ ತಿಳಿಯುತ್ತಿರಲಿಲ್ಲ. ಆ ರಾತ್ರಿ ಅವರೆಲ್ಲರೂ ಅಮಲಿನಲ್ಲಿದ್ದವರಂತೆ ತೋರುತ್ತಿದ್ದರು. ಭೂಮಿಯ ಮೇಲೆ ಬೀಳುತ್ತಿರುವ ರಕ್ತದಿಂದಾಗಿ ಧೂಳು ಸ್ವಲ್ಪ ಉಡುಗಿದಂತಾಯಿತು. ಸುವರ್ಣಮಯ ಕವಚ-ಭೂಷಣಗಳ ಹೊಳೆತದಿಂದಾಗಿ ಕತ್ತಲೆಯೂ ದೂರವಾದಂತಾಯಿತು. ಆಗ ಮಣಿಹೇಮವಿಭೂಷಿತ ಭಾರತೀ ಸೇನೆಯು ನಕ್ಷತ್ರಗಳಿಂದೊಡಗೂಡಿದ ರಾತ್ರಿಯ ಆಕಾಶದಂತೆ ತೋರಿತು. ಶಕ್ತಿ-ಧ್ವಜಗಳಿಂದ ತುಂಬಿದ್ದ ಆ ಸೇನೆಗಳ ಪಕ್ಕದಲ್ಲಿಯೇ ಗುಳ್ಳೆನರಿಗಳ ಸಮೂಹಗಳು ಭಯಂಕರವಾಗಿ ಕಿರುಚಿಕೊಳ್ಳುತ್ತಿದ್ದವು. ಆಗ ಅಲ್ಲಿ ಮಹೇಂದ್ರನ ಸಿಡಿಲಿಗೆ ಸಮಾನ ರೋಮಾಂಚನಗೊಳಿಸುವ ಮಹಾ ಶಬ್ಧವು ಎಲ್ಲ ದಿಕ್ಕುಗಳಲ್ಲಿಯೂ ಪ್ರತಿಧ್ವನಿಸಿತು. ಆ ರಾತ್ರಿ ಭಾರತೀ ಸೇನೆಯು ಅಂಗದಗಳಿಂದ, ಕುಂಡಲಗಳಿಂದ ಮತ್ತು ಥಳಥಳಿಸುವ ಶಸ್ತ್ರಗಳಿಂದ ಪ್ರಕಾಶಮಾನವಾಗಿ ಕಾಣುತ್ತಿತ್ತು. ಅಲ್ಲಿ ಬಂಗಾರದಿಂದ ವಿಭೂಷಿತಗೊಂಡಿದ್ದ ರಥ ಮತ್ತು

ಆನೆಗಳು ರಾತ್ರಿಯವೇಳೆ ಮಿಂಚಿನಿಂದೊಡಗೂಡಿದ ಕಪ್ಪು ಮೋಡಗಳಂತೆ ಕಾಣಬರುತ್ತಿದ್ದವು. ಅಲ್ಲಿ ಮೇಲಿಂದ ಬೀಳುತ್ತಿದ್ದ ಋಷ್ಟಿ, ಶಕ್ತಿ, ಗದೆ, ಬಾಣ, ಮುಸಲ, ಪ್ರಾಸ ಮತ್ತು ಪಟ್ಟಿಶಗಳು ಉರಿಯುತ್ತಿರುವ ಅಗ್ನಿಗಳಂತೆ ಹೊಳೆಯುತ್ತಿದ್ದವು. ದುರ್ಯೋಧನನೇ ಮುಂದಾಳಾಗಿದ್ದ, ಆನೆ-ರಥಗಳೇ ಮೋಡಗಳಾಗಿದ್ದ, ರಣವಾದ್ಯಗಳೇ ಗುಡುಗಿನಂತಿದ್ದ, ಧನುಸ್ಸು-ಧ್ವಜಗಳೇ ಮಿಂಚುಗಳಂತಿದ್ದ, ದ್ರೋಣ-ಪಾಂಡವರೇ ಪರ್ಜನ್ಯಗಳಂತಿದ್ದ, ಖಡ್ಗ-ಶಕ್ತಿ-ಗದೆಗಳೇ ಸಿಡುಲಿನಂತಿದ್ದ, ಬಾಣಗಳೇ ಜಲಧಾರೆಗಳಾಗಿದ್ದ, ಅಸ್ತ್ರಗಳೇ ಭಿರುಗಾಳಿಯಂತಿದ್ದ, ಶೀತೋಷ್ಣಸಂಕುಲವಾಗಿದ್ದ, ಘೋರವಾಗಿದ್ದ, ವಿಸ್ಮಯಕಾರಿಯಾಗಿದ್ದ, ಉಗ್ರವಾಗಿದ್ದ, ಜೀವಿತವನ್ನೇ ಅಂತ್ಯಗೊಳಿಸುವಂತಿದ್ದ, ದಾಟಲು ದೋಣಿಗಳೇ ಇಲ್ಲವಾಗಿದ್ದ ಆ ಅತಿ ಭಯಂಕರ ಸೇನೆಯನ್ನು ಯುದ್ಧಮಾಡಲು ಬಯಸಿದವರು ಪ್ರವೇಶಿಸಿದರು. ಆ ರಾತ್ರಿವೇಳೆಯ ಘೋರ ಯುದ್ಧದಲ್ಲಿ ಉಂಟಾದ ಮಹಾಶಬ್ಧಗಳು ಹೇಡಿಗಳಲ್ಲಿ ಭಯವನ್ನುಂಟುಮಾಡುತ್ತಿದ್ದವು ಮತ್ತು ಶೂರರ ಸಂತೋಷವನ್ನು ಹೆಚ್ಚಿಸುತ್ತಿದ್ದವು. ಘೋರವಾಗಿ ನಡೆಯುತ್ತಿದ್ದ ಆ ಸುದಾರುಣ ರಾತ್ರಿಯುದ್ಧದಲ್ಲಿ ಕ್ರುದ್ಧ ಪಾಂಡು-ಸೃಂಜಯರು ಒಂದಾಗಿ ದ್ರೋಣನನ್ನು ಆಕ್ರಮಣಿಸಿದರು. ಆ ಮಹಾತ್ಮನಾದರೋ ತನ್ನನ್ನು ಎದುರಿಸಿ ಬಂದವರನ್ನೆಲ್ಲಾ ಪಲಾಯನಗೊಳಿಸುತ್ತಿದ್ದನು. ಯಾರು

ವಿಮುಖರಾಗಲಿಲ್ಲವೋ ಅವರನ್ನು ಯಮಕ್ಷಯಕ್ಕೆ ಕಳುಹಿಸುತ್ತಿದ್ದನು.

## ದ್ರೋಣನಿಂದ ಶಿಬಿಯ ವಧೆ; ಭೀಮನಿಂದ ದುರ್ಮುಖ-ದುಷ್ಕರ್ಣರ ಸಂಹಾರ

ಆ ಸುದಾರುಣ ರಾತ್ರಿಯುದ್ಧವು ನಡೆಯುತ್ತಿರಲು ಸೈನಿಕರೊಂದಿಗೆ ಪಾಂಡವರು ದ್ರೋಣನನ್ನು ಆಕ್ರಮಣಿಸಿದರು. ಆಗ ದ್ರೋಣನು ಕೇಕಯರನ್ನೂ, ಧೃಷ್ಟದ್ಯುಮ್ನನ ಎಲ್ಲ ಮಕ್ಕಳನ್ನೂ ಆಶುಗಗಳಿಂದ ಮೃತ್ಯುಲೋಕಕ್ಕೆ ಕಳುಹಿಸಿದನು. ಅವನ ಎದುರಾದ ಎಲ್ಲ ಮಹಾರಥರನ್ನೂ ಅವನು ಪರಲೋಕಕ್ಕೆ ಕಳುಹಿಸಿದನು. ಆಗ ಸಂಕ್ರುದ್ಧ ಪ್ರತಾಪವಾನ ಶಿಬಿಯು ವೀರ ಮಹಾರಥ ಭಾರದ್ವಾಜನ ಮೇಲೆ ದಾಳಿ ಮಾಡಿದನು. ಪಾಂಡವರ ಮಹಾರಥನು ತನ್ನ ಮೇಲೆ ಆಕ್ರಮಣ ಮಾಡುತ್ತಿರುವನ್ನು ನೋಡಿ ದ್ರೋಣನು ಹತ್ತು ಲೋಹಮಯ ಬಾಣಗಳಿಂದ ಅವನನ್ನು ಹೊಡೆದನು. ಆಗ ಶಿಬಿಯು ನಸುನಗುತ್ತಾ ಮೂವತ್ತು ನಿಶಿತ ಶರಗಳಿಂದ ಅವನನ್ನು ಹೊಡೆದು, ಭಲ್ಲದಿಂದ ಸಾರಥಿಯನ್ನು ರಥದಿಂದ ಉರುಳಿಸಿದನು. ದ್ರೋಣನು ಅವನ ಕುದುರೆಗಳನ್ನೂ ಸಾರಥಿಯನ್ನೂ ಸಂಹರಿಸಿ ಕಿರೀಟದೊಂದಿಗಿನ ಅವನ ಶಿರವನ್ನು ಕಾಯದಿಂದ ಬೇರ್ಪಡಿಸಿದನು.

ಹಿಂದೆ ತಂದೆಯನ್ನು ಸಂಹರಿಸಿದುದರಿಂದ ಭೀಮಸೇನನ ಮೇಲೆ

ಕ್ರುದ್ಧನಾಗಿದ್ದ ಕಲಿಂಗನ ಮಗನು ಕಲಿಂಗ ಸೇನೆಯೊಂದಿಗೆ ರಣದಲ್ಲಿ ಭೀಮಸೇನನನ್ನು ಆಕ್ರಮಣಿಸಿದನು. ಅವನು ಭೀಮನನ್ನು ಮೊದಲು ಐದರಿಂದ ಮತ್ತು ಪುನಃ ಏಳರಿಂದ ಹೊಡೆದು ಸಾರಥಿ ವಿಶೋಕನನ್ನು ಮೂರರಿಂದಲೂ ಒಂದು ಪತ್ರಿಯಿಂದ ಧ್ವಜವನ್ನೂ ಹೊಡೆದನು. ಕಲಿಂಗರ ಆ ಕ್ರುದ್ಧ ಶೂರನನ್ನು ಕ್ರುದ್ಧ ವೃಕೋದರನು ಅವನ ರಥಕ್ಕೆ ಹಾರಿ ಮುಷ್ಟಿಯಿಂದಲೇ ಗುದ್ದಿ ಸಂಹರಿಸಿದನು. ಬಲಿಷ್ಟ ಭೀಮಸೇನನ ಮುಷ್ಟಿಯಿಂದ ಹತನಾದ ಅವನ ಎಲ್ಲ ಮೂಳೆಗಳೂ ಚೂರಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಕೆಳಗೆ ಬಿದ್ದವು. ಆ ಕೃತ್ಯವನ್ನು ಮಹಾರಥ ಕರ್ಣನೂ ಕಳಿಂಗನ ಸಹೋದರರೂ ಸಹಿಸಿಕೊಳ್ಳಲಿಲ್ಲ. ಅವರು ಭೀಮಸೇನನನ್ನು ಸರ್ಪಗಳಂತಿದ್ದ ನಾರಾಚಗಳಿಂದ ಪ್ರಹರಿಸಿದರು. ಆಗ ಭೀಮನು ಶತ್ರುವಿನ ರಥವನ್ನು ಬಿಟ್ಟು ಧ್ರುವನ ರಥಕ್ಕೆ ಹಾರಿ ಒಂದೇ ಸಮನೆ ಬಾಣಗಳನ್ನು ಬಿಡುತ್ತಿದ್ದ ಧ್ರುವನನ್ನು ಕೂಡ ಮುಷ್ಟಿಯಿಂದ ಜಜ್ಜಿದನು. ಬಲಶಾಲಿ ಪಾಂಡುಪುತ್ರನ ಪೆಟ್ಟಿಗೆ ಸಿಲುಕಿದ ಅವನು ಕೂಡ ಹತನಾದನು. ಅವನನ್ನು ಸಂಹರಿಸಿ ಮಹಾಬಲ ಭೀಮಸೇನನು ಜಯರಾತನ ರಥಕ್ಕೆ ಹಾರಿ ಸಿಂಹನಾದಗೈದನು.

ಆಗ ಜಯರಾತನ ತಲೆಯನ್ನು ಎಡಗೈಯಿಂದ ಹಿಡಿದುಕೊಂಡು ಬಲಗೈಯಿಂದ ಅವನನ್ನು ಪ್ರಹರಿಸಿ ಕೊಂದು ಕರ್ಣನ ಎದುರೇ

ಹೋಗಿ ನಿಂತುಕೊಂಡನು. ಕರ್ಣನಾದರೋ ಸುವರ್ಣಮಯ ಶಕ್ತ್ಯಾಯುಧವನ್ನು ಪಾಂಡವನ ಮೇಲೆ ಪ್ರಯೋಗಿಸಿದನು. ಅದನ್ನು ಕೂಡ ಪಾಂಡುನಂದನನು ನಸುನಗುತ್ತಾ ಹಿಡಿದುಕೊಂಡನು. ಅದನ್ನೇ ವೃಕೋದರನು ಕರ್ಣನ ಮೇಲೆ ಎಸೆಯಲು ಶಕುನಿಯು ಅದನ್ನು ಅಂತರಿಕ್ಷದಲ್ಲಿಯೇ ತುಂಡರಿಸಿದನು. ಆಗ ಧೃತರಾಷ್ಟ್ರನ ಮಕ್ಕಳು ಭೀಮನ ರಥವನ್ನು ಸುತ್ತುವರೆದು ಮಹಾ ಶರವರ್ಷಗಳಿಂದ ವೃಕೋದರನನ್ನು ಮುಚ್ಚಿದರು. ಆಗ ರಣದಲ್ಲಿ ಭೀಮನು ನಗುತ್ತಾ ದುರ್ಮದನ ಸಾರಥಿಯನ್ನೂ ಕುದುರೆಗಳನ್ನೂ ಬಾಣಗಳಿಂದ ಹೊಡೆದು ಯಮಸದನಕ್ಕೆ ಕಳುಹಿಸಿದನು. ಆಗ ದುರ್ಮದನಾದರೋ ಹಾರಿ ದುಷ್ಕರ್ಣನ ರಥವನ್ನೇರಿದನು. ಆ ಇಬ್ಬರು ಪರತಾಪನ ಸಹೋದರರೂ ಒಂದೇ ರಥವನ್ನೇರಿ ಯುದ್ಧಭೂಮಿಯ ಮಧ್ಯದಲ್ಲಿ ಮಿತ್ರಾವರುಣರು ದೈತ್ಯಸತ್ತಮ ತಾರಕನನ್ನು ಎದುರಿಸಿ ಯುದ್ಧಮಾಡಿದಂತೆ ಭೀಮನನ್ನು ಆಕ್ರಮಣಿಸಿದರು. ಧೃತರಾಷ್ಟ್ರನ ಮಕ್ಕಳಾದ ದುರ್ಮದ-ದುಷ್ಕರ್ಣರು ಒಂದೇ ರಥವನ್ನೇರಿ ಬಾಣಗಳಿಂದ ಭೀಮನನ್ನು ಪ್ರಹರಿಸಿದರು. ಆಗ ಕರ್ಣ, ದುರ್ಯೋಧನ, ಕೃಪ, ಸೋಮದತ್ತ ಮತ್ತು ಬಾಹ್ಲೀಕರು ನೋಡುತ್ತಿದ್ದಂತೆಯೇ ಪಾಂಡವನು ವೀರ ದುರ್ಮದ-ದುಷ್ಕರ್ಣರ ಆ ರಥವನ್ನು ಕಾಲಿನಿಂದಲೇ ಒದೆದು ಭೂಮಿಗುರುಳಿಸಿದನು. ಸಂಕ್ರುದ್ಧನಾದ ಅವನು

ಆ ಬಲಶಾಲೀ ದುಷ್ಕರ್ಣ-ದುರ್ಮದರನ್ನು ಮುಷ್ಟಿಯಿಂದ ಹೊಡೆದು ಕಾಲಿನಿಂದ ತುಳಿದು ಸಂಹರಿಸಿದನು. ಆಗ ಭೀಮನನ್ನು ಕಂಡು ಸೈನ್ಯದಲ್ಲಿದ್ದ ನೃಪರು "ಭೀಮರೂಪದ ರುದ್ರನೇ ಧಾರ್ತರಾಷ್ಟ್ರರನ್ನು ಸಂಹರಿಸುತ್ತಿದ್ದಾನೆ!" ಎಂದು ಹೇಳಿಕೊಳ್ಳುತ್ತಾ ಹಾಹಾಕಾರಗೈದರು. ಹೀಗೆ ಮಾತನಾಡಿಕೊಳ್ಳುತ್ತ ಎಲ್ಲರೂ ಬುದ್ಧಿಗೆಟ್ಟವರಾಗಿ ಕಂಡ ಕಂಡ ಕಡೆಗೆ ತಮ್ಮ ವಾಹನಗಳನ್ನು ಓಡಿಸಿಕೊಂಡು ಪಲಾಯನಮಾಡಿದರು.

ಆಗ ರಾತ್ರಿಯ ಪ್ರಥಮ ಯಾಮದಲ್ಲಿ ನೃಪರು ವೃಕೋದರನನ್ನು ಗೌರವಿಸಿದರು. ಮಹಾಬಲ, ಕಮಲಲೋಚನ ಬಲಶಾಲೀ ಭೀಮನೂ ಕೂಡ ನೃಪತಿ ಯುಧಿಷ್ಠಿರನನ್ನು ಪೂಜಿಸಿದನು. ಆಗ ಯಮಳರೂ, ದ್ರುಪದ-ವಿರಾಟ-ಕೇಕಯರೂ ಮತ್ತು ಯುಧಿಷ್ಠಿರನೂ ಪರಮ ಸಂತೋಷಗೊಂಡರು. ಅಂಧಕನನ್ನು ಸಂಹರಿಸಿದ ಹರನನ್ನು ಸುರರು ಹೇಗೋ ಹಾಗೆ ಅವರು ವೃಕೋದರನನ್ನು ತುಂಬಾ ಗೌರವಿಸಿದರು. ಆಗ ವರುಣನ ಮಕ್ಕಳ ಪರಾಕ್ರಮವುಳ್ಳ ಧೃತರಾಷ್ಟ್ರನ ಮಕ್ಕಳು ರೋಷಾನ್ವಿತರಾಗಿ ಗುರು ದ್ರೋಣನೊಂದಿಗೆ ರಥ-ಪದಾತಿ-ಕುಂಜರಗಳೊಂದಿಗೆ ಯುದ್ಧವನ್ನು ಮಾಡಲು ಬಯಸಿ ವೃಕೋದರನನ್ನು ಸುತ್ತುವರೆದರು. ಆಗ ದಟ್ಟ ಕತ್ತಲೆಯಿಂದ ಆವೃತ ರಾತ್ರಿವೇಳೆಯಲ್ಲಿ ಮಹಾಭಯಂಕರ, ಭಯದಾಯಕ, ದಾರುಣ, ತೋಳ-ಕಾಗೆ-

ರಣಹದ್ದುಗಳಿಗೆ ಆನಂದದಾಯಕ ಮಹಾತ್ಮ ನೃಪವರರ ಅದ್ಭುತ ಯುದ್ಧವು ಪುನಃ ಪ್ರಾರಂಭವಾಯಿತು.

## ಸಾತ್ಯಕಿ ಸೋಮದತ್ತರ ಯುದ್ಧ

ಆಗ ಪ್ರಯೋಪವಿಷ್ಟನಾಗಿದ್ದ ತನ್ನ ಮಗನನ್ನು ಸಾತ್ಯಕಿಯು ಕೊಂದುದರಿಂದ ತುಂಬಾ ಕೋಪಾವಿಷ್ಟನಾಗಿದ್ದ ಸೋಮದತ್ತನು ಸಾತ್ಯಕಿಗೆ ಈ ಮಾತನ್ನಾಡಿದನು:

> “ಸಾತ್ವತ! ಹಿಂದೆ ಮಹಾತ್ಮ ದೇವತೆಗಳು ನಿರ್ಣಯಿಸಲ್ಪಟ್ಟ ಕ್ಷತ್ರಧರ್ಮವನ್ನು ಪರಿತ್ಯಜಿಸಿ ನೀನು ಹೇಗೆ ತಾನೇ ದಸ್ಯುಗಳ ಧರ್ಮದಲ್ಲಿ ನಿರತನಾಗಿರುವೆ? ಯುದ್ಧದಿಂದ ವಿಮುಖನಾದವನನ್ನು, ಅದೀನನನ್ನು, ಶಸ್ತ್ರಗಳನ್ನು ಕೆಳಗಿಟ್ಟವನನ್ನು, ಯಾಚಿಸುವವನನ್ನು ಕ್ಷತ್ರಧರ್ಮನಿರತ ಪ್ರಾಜ್ಞನು ಹೇಗೆ ತಾನೇ ರಣದಲ್ಲಿ ಪ್ರಹರಿಸಬಲ್ಲನು? ವೃಷ್ಣಿವಂಶೀಯರಲ್ಲಿ ಇಬ್ಬರೇ ಮಹಾರಥರೆಂದು ಯುದ್ಧದಲ್ಲಿ ಖ್ಯಾತರಾಗಿದ್ದಾರೆ. ಪ್ರದ್ಯುಮ್ನ ಮತ್ತು ನೀನು. ಅರ್ಜುನನು ಬಾಹುವನ್ನು ಕತ್ತರಿಸಲು ಪ್ರಾಯೋಪವಿಷ್ಟನಾದವನನ್ನು ನಿನ್ನಂಥವನು ಕ್ರೂರನಾಗಿ ಹೇಗೆತಾನೇ ಬೀಳಿಸಿದನು? ವೃಷ್ಣಿಕುಲಕಳಂಕ! ನಾನು ನನ್ನ ಇಬ್ಬರು ಮಕ್ಕಳ ಮೇಲೆ,

ನಾನು ಮಾಡಿದ ಯಾಗಗಳ ಮೇಲೆ ಮತ್ತು ನನ್ನ ಸುಕೃತಗಳ ಮೇಲೆ ಆಣೆಯಿಟ್ಟು ಹೇಳುತ್ತಿದ್ದೇನೆ – ಅರ್ಜುನನು ನಿನ್ನನ್ನು ರಕ್ಷಿಸಲು ಬರದೇ ಇದ್ದರೆ – ಲೋಕೈಕವೀರನೆಂದು ಭಾವಿಸಿರುವ ನಿನ್ನನ್ನೂ, ನಿನ್ನ ಮಕ್ಕಳನ್ನೂ, ಅನುಜರನ್ನೂ ಈ ರಾತ್ರಿ ಕಳೆಯುವುದರೊಳಗಾಗಿ ಸಂಹರಿಸದೇ ಇದ್ದರೆ ನಾನು ಅತಿಘೋರ ನರಕದಲ್ಲಿ ಬೀಳುವಂತಾಗಲಿ!"

ಹೀಗೆ ಹೇಳಿ ಸಂಕ್ರುದ್ಧ ಮಹಾಬಲ ಸೋಮದತ್ತನು ತಾರಸ್ವರದಲ್ಲಿ ಶಂಖವನ್ನು ಊದಿ ಸಿಂಹನಾದಗೈದನು. ಆಗ ಸಾತ್ವತನು ತುಂಬಾ ಕುಪಿತನಾಗಿ ಸೋಮದತ್ತನಿಗೆ ಹೀಗೆ ಹೇಳಿದನು:

"ನಿನ್ನ ವೀರ ಮಗ ಮಹಾರಥ ಭೂರಿಶ್ರವನು ಹತನಾದನು. ಸಹೋದರನು ಹತನಾದನೆಂಬ ವ್ಯಸನದಿಂದ ದುಃಖಿತನಾಗಿದ್ದ ಶಲನೂ ಕೂಡ ಹತನಾದನು. ಇಂದು ಪುತ್ರ-ಪಶು-ಬಾಂಧವರ ಸಹಿತನಾಗಿ ನಿನ್ನನ್ನೂ ವಧಿಸುತ್ತೇನೆ. ರಣದಲ್ಲಿ ನಿಂತು ವಿಶೇಷವಾಗಿ ಪ್ರಯತ್ನಿಸಿ ನನ್ನೊಡನೆ ಯುದ್ಧಮಾಡು! ಯಾವ ಯುಧಿಷ್ಠಿರನಲ್ಲಿ ದಾನ, ದಮ, ಶೌಚ, ಅಹಿಂಸೆ, ಲಜ್ಜೆ, ಧೃತಿ, ಕ್ಷಮೆ – ಇವೇ ಮೊದಲಾದ ಸರ್ವ ಸದ್ಗುಣಗಳು ನಿತ್ಯವೂ ಇವೆಯೋ ಆ ಮೃದಂಗಕೇತು ರಾಜನ

ತೇಜಸ್ಸಿನಿಂದ ಈಗಾಗಲೇ ನೀನು ಹತನಾಗಿರುವೆ! ಈಗ ಯುದ್ಧದಲ್ಲಿ ಕರ್ಣ-ಸೌಬಲರೊಂದಿಗೆ ವಿನಾಶವನ್ನು ಹೊಂದುತ್ತೀಯೆ! ನಾನೂ ಕೂಡ ಶ್ರೀಕೃಷ್ಣನ ಚರಣಗಳ ಮೇಲೆ ಮತ್ತು ನಾನು ಮಾಡಿದ ಇಷ್ಟಾಪೂರ್ತಗಳ ಮೇಲೆ ಆಣೆಯಿಟ್ಟು ಹೇಳುತ್ತೇನೆಃ ನಾನೇನಾದರೂ ಪಾಪಿಷ್ಟ ನಿನ್ನನ್ನು ನಿನ್ನ ಮಗನ ಸಹಿತ ಸಂಹರಿಸದಿದ್ದರೆ ಸದ್ಗತಿಯನ್ನು ಹೊಂದದಿರಲಿ! ಇಷ್ಟು ಆತ್ಮಶ್ಲಾಘನೆ ಮಾಡಿಕೊಳ್ಳುತ್ತಿರುವ ನೀನು ಭಯಪಟ್ಟು ಯುದ್ಧವನ್ನು ಬಿಟ್ಟು ಹೋದರೆ ಮಾತ್ರ ನನ್ನಿಂದ ಬಿಡುಗಡೆಯನ್ನು ಹೊಂದುವೆ!”

ಕೋಪದಿಂದ ಕೆಂಪಾದ ಕಣ್ಣುಗಳಿಂದ ಕೂಡಿದ್ದ ಪುರುಷಶ್ರೇಷ್ಠರಾದ ಅವರಿಬ್ಬರೂ ಹೀಗೆ ಅನ್ಯೋನ್ಯರೊಡನೆ ಮಾತನಾಡುತ್ತಾ ಪರಸ್ಪರರ ಮೇಲೆ ಬಾಣಗಳನ್ನು ಪ್ರಯೋಗಿಸಲು ಪ್ರಾರಂಭಿಸಿದರು. ಆಗ ದುರ್ಯೋಧನನು ಒಂದು ಸಾವಿರ ಆನೆಗಳಿಂದಲೂ ಹತ್ತುಸಾವಿರ ರಥಗಳಿಂದಲೂ ಕೂಡಿದವನಾಗಿ ಸೋಮದತ್ತನನ್ನು ಸುತ್ತುವರೆದು ನಿಂತನು. ಮಹಾಬಾಹು ಶಕುನಿಯೂ ಕೂಡ ಸಂಕ್ರುದ್ಧನಾಗಿ ತನ್ನ ಮಕ್ಕಳು, ಮೊಮ್ಮಕ್ಕಳು ಮತ್ತು ಇಂದ್ರನ ವಿಕ್ರಮಕ್ಕೆ ಸಮಾನ ಸಹೋದರರೊಂದಿಗೆ ಸೋಮದತ್ತನನ್ನು ಸುತ್ತುವರೆದನು. ಆ

ಧೀಮತನು ನೂರುಸಾವಿರ ಕುದುರೆಸವಾರರೊಂದಿಗೆ ಸೋಮದತ್ತನನ್ನು ಎಲ್ಲಕಡೆಗಳಿಂದ ಸುತ್ತುವರೆದು ರಕ್ಷಿಸುತ್ತಿದ್ದನು. ಬಲಶಾಲಿಗಳಿಂದ ರಕ್ಷಿತ ಸೋಮದತ್ತನು ಸಾತ್ಯಕಿಯನ್ನು ಬಾಣಗಳಿಂದ ಮುಚ್ಚಿಬಿಟ್ಟನು. ಸಾತ್ಯಕಿಯು ವಿಶಿಖ ಸನ್ನತಪರ್ವಗಳಿಂದ ಮುಚ್ಚಿಹೋದುದನ್ನು ನೋಡಿದ ಧೃಷ್ಟದ್ಯುಮ್ನನು ಕ್ರುದ್ಧನಾಗಿ ಮಹಾ ಸೇನೆಯೊಡನೆ ಅಲ್ಲಿಗೆ ಧಾವಿಸಿದನು. ಅನ್ಯೋನ್ಯರನ್ನು ಪ್ರಹರಿಸುತ್ತಿದ್ದ ಸೈನಿಕರ ಸಮೂಹದಲ್ಲುಂಟಾದ ಕೋಲಾಹಲವು ಚಂಡಮಾರುತಕ್ಕೆ ಸಿಲುಕಿ ಅಲ್ಲೋಲಕಲ್ಲೋಲವಾಗುವ ಸಮುದ್ರದ ಭೋರ್ಗರೆತಕ್ಕೆ ಸಮಾನವಾಗಿ ಕೇಳಿಬರುತ್ತಿತ್ತು. ಸೋಮದತ್ತನಾದರೋ ಸಾತ್ವತನನ್ನು ಒಂಭತ್ತು ಶರಗಳಿಂದ ಹೊಡೆದನು. ಸಾತ್ಯಕಿಯೂ ಕೂಡ ಕುರುಪುಂಗವನನ್ನು ಹತ್ತು ಬಾಣಗಳಿಂದ ಪ್ರಹರಿಸಿದನು. ದೃಢಧನ್ವಿ ಸಾತ್ಯಕಿಯಿಂದ ಬಲವಾಗಿ ಗಾಯಗೊಂಡ ಸೋಮದತ್ತನು ರಥದಮೇಲೆಯೇ ಮೂರ್ಛಿತನಾಗಿ ಒರಗಿದನು. ಅವನು ಪ್ರಜ್ಞಾಹೀನನಾದುದನ್ನು ನೋಡಿದ ಸಾರಥಿಯು ಮಹಾರಥ ವೀರ ಸೋಮದತ್ತನನ್ನು ರಣದಿಂದ ದೂರಕ್ಕೆ ಕೊಂಡೊಯ್ದನು.

## ಅಶ್ವತ್ಥಾಮ-ಘಟೋತ್ಕಚರ ಯುದ್ಧ; ಘಟೋತ್ಕಚನ ಮಗ ಅಂಜನಪರ್ವನ ವಧೆ

ಯುಯುಧಾನನ ಶರಗಳಿಂದ ಗಾಯಗೊಂಡು ಸೋಮದತ್ತನು ಮೂರ್ಛಿತನಾದುದನ್ನು ಕಂಡು ಕ್ರುದ್ಧನಾದ ದ್ರೌಣಿ ಅಶ್ವತ್ಥಾಮನು ರಣಮಧ್ಯದಲ್ಲಿ ಸಾತ್ವತನನ್ನು ಆಕ್ರಮಣಿಸಿದನು. ಶೈನೇಯನ ರಥದ ಕಡೆಗೆ ಬರುತ್ತಿದ್ದ ಅವನನ್ನು ನೋಡಿ ಸಂಕ್ರುದ್ಧ ಭೈಮಸೇನಿ ಘಟೋತ್ಕಚನು ಶತ್ರುವನ್ನು ತಡೆದನು. ಆ ಘೋರ ಕತ್ತಲೆಯಲ್ಲಿ ವಿಶಾಲ ಕರಡಿಯ ಚರ್ಮವನ್ನು ಹೊದಿಸಿದ್ದ, ಆನೆಗಳಷ್ಟೇ ದೊಡ್ಡ ಆದರೆ ಆನೆಗಳೂ ಕುದುರೆಗಳೂ ಅಲ್ಲದ ವಾಹನಗಳನ್ನು ಕಟ್ಟಿದ್ದ, ಎಂಟು ಚಕ್ರಗಳಿಂದ ಮತ್ತು ನೊಗಗಳಿಂದ ಕೂಡಿದ, ಅತಿ ಎತ್ತರದ ದಂಡದ ಮೇಲೆ ರಣಹದ್ದುಗಳ ರಾಜನಂತೆ ರಾರಾಜಿಸುವ ಧ್ವಜದಿಂದ ಯುಕ್ತವಾದ, ರಕ್ತದಿಂದ ತೋಯ್ದ ಪತಾಕೆಯುಳ್ಳ, ಕರುಳಿನ ಮಾಲೆಗಳಿಂದ ಅಲಂಕೃತಗೊಂಡಿದ್ದ, ಶೂಲ-ಮುದ್ಗರಗಳನ್ನು ಹಿಡಿದು, ಕೈಗಳಲ್ಲಿ ಮರಗಳನ್ನೂ ಹಿಡಿದು ಬರುತ್ತಿದ್ದ ಒಂದು ಅಕ್ಷೌಹಿಣೀ ರಾಕ್ಷಸ ಸೇನೆಯಿಂದ ಸುತ್ತುವರೆಯಲ್ಪಟ್ಟು ಎಂಟು ಚಕ್ರಗಳ ಮೇಲಿದ್ದ ವಿಶಾಲರಥದಲ್ಲಿ ಯುಗಾಂತಕಾಲಸಮಯದಲ್ಲಿ ದಂಡವನ್ನು ಹಿಡಿದ ಅಂತಕನಂತೆ ಮಹಾಚಾಪವನ್ನು ಟೇಂಕರಿಸಿ ಬರುತ್ತಿದ್ದ ಘಟೋತ್ಕಚನನ್ನು ಕಂಡು ನೃಪರು ವ್ಯಥಿತರಾದರು. ಭಿರುಗಾಳಿಗೆ ಸಿಲುಕಿ ಪ್ರಕ್ಷೋಭೆಗೊಂಡ ಗಂಗಾನದಿಯ ಸುಳಿಯಂತೆ ದುರ್ಯೋಧನನ ಸೇನೆಯು ತಳಮಳಗೊಂಡಿತು. ಘಟೋತ್ಕಚನು ಮಾಡಿದ

ಸಿಂಹನಾದದಿಂದಲೇ ಭಯಗೊಂಡ ಆನೆಗಳು ಮೂತ್ರವಿಸರ್ಜನೆ ಮಾಡಿದವು. ಸೈನಿಕರು ಬಹಳ ವ್ಯಥಿತರಾದರು. ಸಂಧ್ಯಾಕಾಲದಲಿ ಅಧಿಕಬಲವನ್ನು ಹೊಂದುವ ರಾಕ್ಷಸರು ಪ್ರಯೋಗಿಸಿದ ಕಲ್ಲುಗಳ ಮಳೆಯು ರಣರಂಗದ ಸುತ್ತಲೂ ಸುರಿಯಿತು. ಲೋಹದ ಚಕ್ರಗಳು, ಭುಶಂಡಗಳು, ಪ್ರಾಸ-ತೋಮರಗಳು ಮೇಲಿಂದ ಬೀಳುತ್ತಿದ್ದ ಆ ಅತಿರೌದ್ರ ಉಗ್ರ ಯುದ್ಧವನ್ನು ನೋಡಿ ಕೌರವನ ಕಡೆಯ ರಾಜರುಗಳು, ಧೃತರಾಷ್ಟ್ರನ ಮಕ್ಕಳೂ ಮತ್ತು ಕರ್ಣನೂ ಕೂಡ ವ್ಯಥಿತರಾಗಿ ದಿಕ್ಕಾಪಾಲಾಗಿ ಓಡಿ ಹೋದರು.

ಆದರೆ ಅಲ್ಲಿ ತನ್ನ ಅಸ್ತ್ರಬಲವನ್ನು ಸದಾ ಹೊಗಳಿಕೊಳ್ಳುತ್ತಿದ್ದ ಸೊಕ್ಕಿನ ದ್ರೌಣಿ ಅಶ್ವತ್ಥಾಮನು ಮಾತ್ರ ವಿವ್ಯಥನಾಗದೆ ಘಟೋತ್ಕಚನು ನಿರ್ಮಿಸಿದ ಆ ಮಾಯೆಯನ್ನು ಬಾಣಗಳಿಂದ ನಾಶಮಾಡಿದನು. ತನ್ನ ಮಾಯೆಯು ಹೀಗೆ ಹತವಾದುದನ್ನು ಸಹಿಸಿಕೊಳ್ಳದೇ ಇದ್ದ ಘಟೋತ್ಕಚನು ಅಶ್ವತ್ಥಾಮನ ಮೇಲೆ ಘೋರ ಶರಗಳನ್ನು ಪ್ರಯೋಗಿಸಿದನು. ಕ್ರೋಧಮೂರ್ಛಿತ ಸರ್ಪಗಳು ವೇಗದಿಂದ ಹುತ್ತವನ್ನು ಹೊಗುವಂತೆ ಶೀಗ್ರವಾಗಿ ಹೋಗುತ್ತಿರುವ ಆ ರುಕ್ಮಪುಂಖಗಳ, ಶಿಲಾಶಿತ ಬಾಣಗಳು ಅಶ್ವತ್ಥಾಮನನ್ನು ಭೇದಿಸಿ ರಕ್ತವನ್ನು ಕುಡಿದು ನೆಲವನ್ನು ಹೊಕ್ಕವು. ಲಘುಹಸ್ತ

ಅಶ್ವತ್ಥಾಮನಾದರೋ ಸಂಕ್ರುದ್ಧನಾಗಿ ಇನ್ನೂ ಕುಪಿತನಾಗಿದ್ದ ಘಟೋತ್ಕಚನನ್ನು ಹತ್ತು ಶರಗಳಿಂದ ಹೊಡೆದನು. ದ್ರೋಣಪುತ್ರನಿಂದ ಮರ್ಮಗಳಲ್ಲಿ ಗಾಯಗೊಂಡ ಘಟೋತ್ಕಚನು ಅತ್ಯಂತ ವ್ಯಥಿತನಾಗಿ ನೂರುಸಾವಿರ ಅರೆಕಾಲುಗಳನ್ನು ಹೊಂದಿದ್ದ ಚಕ್ರವನ್ನು ಕೈಗೆತ್ತಿಕೊಂಡನು. ಅಶ್ವತ್ಥಾಮನನ್ನು ಕೊಲ್ಲಲು ಬಯಸಿ ಅವನ ಮೇಲೆ ಭೀಮಸೇನನ ಮಗನು ಬೇಸಗೆಯ ಕೊನೆಯಲ್ಲಿ ಉದಯಿಸುವ ಸೂರ್ಯನಂತಿದ್ದ ಮಣಿವಜ್ರವಿಭೂಷಿತ ಆ ಚಕ್ರವನ್ನು ಎಸೆದನು. ಅತ್ಯಂತ ವೇಗವಾಗಿ ಬಂದ ಆ ಚಕ್ರವು ದ್ರೌಣಿಯ ಶರಗಳಿಂದ ಬಹಳ ದೂರಕ್ಕೆ ಎಸೆಯಲ್ಪಟ್ಟು ನಿರ್ಭಾಗ್ಯನ ಸಂಕಲ್ಪವು ನಿಷ್ಫಲವಾಗುವಂತೆ ನಿಷ್ಫಲವಾಗಿ ಭೂಮಿಯಮೇಲೆ ಬಿದ್ದಿತು. ಚಕ್ರವು ಕೆಳಗುರುಳಿದುದನ್ನು ನೋಡಿ ಘಟೋತ್ಕಚನು ತಕ್ಷಣವೇ ರಾಹುವು ಸೂರ್ಯನನ್ನು ಹೇಗೋ ಹಾಗೆ ದ್ರೌಣಿಯನ್ನು ಬಾಣಗಳಿಂದ ಮುಚ್ಚಿದನು.

ಆಗ ಕಾಡಿಗೆಯ ಭಿನ್ನರಾಶಿಯಂತಿದ್ದ ಘಟೋತ್ಕಚನ ಮಗ ಅಂಜನಪರ್ವನು ಅದ್ರಿರಾಜ ಹಿಮಾಲಯನು ಚಂಡಮಾರುತವನ್ನು ಹೇಗೋ ಹಾಗೆ ದ್ರೌಣಿಯನ್ನು ತಡೆದು ನಿಲ್ಲಿಸಿದನು. ಭೀಮಸೇನನ ಮೊಮ್ಮಗ ಅಂಜನಪರ್ವನ ಬಾಣಗಳು ಚುಚ್ಚಿ ಅಶ್ವತ್ಥಾಮನು ಮೇಘದ ಜಲಧಾರೆಗಳಿಂದ ಆವೃತ ಮೇರುಪರ್ವತದಂತೆ ಕಂಡನು.

ವಿಕ್ರಮದಲ್ಲಿ ರುದ್ರ ಮತ್ತು ಇಂದ್ರರ ಸಮನಾಗಿದ್ದ ಅಶ್ವತ್ಥಾಮನಾದರೋ ಸ್ವಲ್ಪವೂ ವಿಭ್ರಾಂತನಾಗದೇ ಒಂದೇ ಬಾಣದಿಂದ ಅಂಜನಪರ್ವನ ಧ್ವಜವನ್ನು ತುಂಡರಿಸಿದನು. ಎರಡರಿಂದ ಸಾರಥಿಯನ್ನು, ಮೂರರಿಂದ ಮೂಕಿಯನ್ನು, ಒಂದರಿಂದ ಧನುಸ್ಸನ್ನೂ ಮತ್ತು ನಾಲ್ಕರಿಂದ ನಾಲ್ಕು ಕುದುರೆಗಳನ್ನೂ ಹೊಡೆದನು. ರಥಹೀನ ಅಂಜನಪರ್ವನು ಕೈಯಿಂದ ಹಿಡಿದೆತ್ತಿದ್ದ ಸುವರ್ಣಬಿಂದುಗಳಿಂದ ಸಮಲಂಕೃತ ಖಡ್ಗವನ್ನೂ ಅಶ್ವತ್ಥಾಮನು ಸುತೀಕ್ಷ್ಣ ವಿಶಿಖದಿಂದ ಎರಡು ಮಾಡಿದನು. ಹೈಡಿಂಬಸೂನು (ಹಿಡಿಂಬಿಯ ಮಗ ಘಟೋತ್ಕಚನ ಮಗ ಅಂಜನಪರ್ವ) ವು ತಕ್ಷಣವೇ ಎಸೆದ ಗದೆಯನ್ನು ಕೂಡ ಅದು ತಿರುಗುತ್ತಾ ಹಾರಿಬಂದು ಬೀಳುವುದರೊಳಗೆ ದ್ರೌಣಿಯು ನಾಶಗೊಳಿಸಿದನು. ಒಡನೆಯೇ ಅಂತರಿಕ್ಷಕ್ಕೆ ಹಾರಿ ಕಾಲಮೇಘದಂತೆ ಕೂಗುತ್ತಾ ಅಂಜನಪರ್ವನು ಅಶ್ವತ್ಥಾಮನ ಮೇಲೆ ನಭಸ್ತಲದಿಂದ ಮರಗಳ ಮಳೆಯನ್ನು ಸುರಿಸಿದನು. ಆಗ ಆಕಾಶದಲ್ಲಿದ್ದ ಮಯಾವಿ ಘಟೋತ್ಕಚನ ಮಗನನ್ನು ದ್ರೌಣಿಯು ಘನಮೋಡಗಳನ್ನು ಸೂರ್ಯನು ತನ್ನ ರಶ್ಮಿಗಳಿಂದ ಭೇದಿಸುವಂತೆ ಮಾರ್ಗಣಗಳಿಂದ ಹೊಡೆದನು. ಬಳಿಕ ಪರ್ವತದಷ್ಟೇ ಎತ್ತರನಾಗಿದ್ದ ಅಂಜನಪರ್ವತನು ಪುನಃ ಕೆಳಗಿಳಿದು ಹೇಮಪರಿಷ್ಕೃತ ರಥದಲ್ಲಿ ಕುಳಿತುಕೊಂಡನು.

ಆಗ ಧರೆಗಿಳಿದ ಕಾಡಿಗೆಯಂತೆ ಹೊಳೆಯುವ ಪರ್ವತವೋ ಎಂಬತ್ತಿದ್ದ ಭೀಮನ ಮೊಮ್ಮಗ ಅಂಜನಪರ್ವನನ್ನು ದ್ರೌಣಿಯು ಅಂಧಕನನ್ನು ಮಹೇಶ್ವರನು ಹೇಗೋ ಹಾಗೆ ಸಂಹರಿಸಿದನು. ತನ್ನ ಮಹಾಬಲ ಮಗನು ಅಶ್ವತ್ಥಾಮನಿಂದ ಹತನಾದುದನ್ನು ಕಂಡು ರೋಷದಿಂದ ಅಂಗಾಂಗಗಳು ಥರಥರಿಸುತ್ತಿದ್ದ ಘಟೋತ್ಕಚನು ಕಾಡಾಗ್ನಿಯು ಸುಡುವಂತೆ ಪಾಂಡವರ ಸೇನೆಯನ್ನು ದಹಿಸುತ್ತಿದ್ದ ದ್ರೌಣಿಯ ಬಳಿಸಾರಿ ಸ್ವಲ್ಪವೂ ಅಳುಕದೇ ಈ ಮಾತನ್ನಾಡಿದನು:

> “ದ್ರೋಣಪುತ್ರ! ನಿಲ್ಲು! ನಿಲ್ಲು! ನನ್ನಿಂದ ಜೀವಂತನಾಗಿ ನೀನು ಹಿಂದಿರುಗುವುದಿಲ್ಲ. ಅಗ್ನಿಸುತ ಕಾರ್ತಿಕೇಯನು ಕ್ರೌಂಚಪರ್ವತವನ್ನು ಹೇಗೋ ಹಾಗೆ ನಾನು ನಿನ್ನನ್ನು ಇಂದು ಕೊಂದುಬಿಡುತ್ತೇನೆ!”

ಅಶ್ವತ್ಥಾಮನು ಹೇಳಿದನು:

> “ಅಮರವಿಕ್ರಮಿ! ಮಗೂ! ಹೈಡಿಂಬೇ! ಹೊರಟುಹೋಗು! ಬೇರೆ ಯಾರೊಡನೆಯಾದರೂ ಯುದ್ಧಮಾಡು! ತಂದೆಯು ಮಗನನ್ನು ಬಾಧಿಸುವುದು ನ್ಯಾಯವಲ್ಲ! ನಿನ್ನ ಮೇಲೆ ನನಗೆ ಯಾವರೀತಿಯ ರೋಷವೂ ಇಲ್ಲ. ಆದರೆ ರೋಷಾವಿಷ್ಟನಾದವನು ಆತ್ಮಹತ್ಯೆಯನ್ನೂ

ಮಾಡಿಕೊಳ್ಳಬಹುದು!”

ಇದನ್ನು ಕೇಳಿ ಪುತ್ರಶೋಕದಿಂದ ಆವೇಶಗೊಂಡಿದ್ದ ಭೈಮಸೇನಿಯು ಕ್ರೋಧದಿಂದ ಕಣ್ಣುಗಳನ್ನು ಕೆಂಪು ಮಾಡಿಕೊಂಡು ಅಶ್ವತ್ಥಾಮನಿಗೆ ಅಪಮಾನಿಸಿ ಹೀಗೆ ಹೇಳಿದನು:

"ದ್ರೌಣೀ! ಹೀಗೇಕೆ ಮಾತನಾಡುತ್ತಿರುವೆ? ಯುದ್ಧದಲ್ಲಿ ನಾನೊಬ್ಬ ಸಾಮಾನ್ಯನವನೆಂದು ಭಾವಿಸಿರುವೆಯಾ? ನಾನು ಸುಪ್ರಸಿದ್ಧ ಕುರುಗಳ ಕುಲದಲ್ಲಿ ಭೀಮಸೇನನಿಂದ ಹುಟ್ಟಿದವನಾಗಿದ್ದೇನೆ. ಸಮರದಿಂದ ಪಲಾಯನ ಮಾಡದ ಪಾಂಡವರ ಮಗನು ನಾನು. ಬಲದಲ್ಲಿ ದಶಗ್ರೀವನ ಸಮನಾಗಿದ್ದು ನಾನು ರಾಕ್ಷಸರ ರಾಜನು. ದ್ರೋಣಪುತ್ರ! ನಿಲ್ಲು! ನಿಲ್ಲು! ನನ್ನಿಂದ ಜೀವಿತನಾಗಿ ಹೋಗುವುದಿಲ್ಲ! ಇಂದಿನ ಯುದ್ಧದಲ್ಲಿ ನಾನು ನಿನ್ನ ಯುದ್ಧಶ್ರದ್ಧೆಯನ್ನೇ ತೊಡೆದುಹಾಕುತ್ತೇನೆ!”

ಹೀಗೆ ಹೇಳಿ, ರೋಷದಿಂದ ತಾಮ್ರಾಕ್ಷನಾಗಿದ್ದ ಸುಮಹಾಬಲಿ ರಾಕ್ಷಸನು ಕ್ರುದ್ಧ ಕೇಸರಿಯು ಗಜೇಂದ್ರನ ಮೇಲೆರಗುವಂತೆ ದ್ರೌಣಿಯನ್ನು ಆಕ್ರಮಣಿಸಿದನು. ಮೋಡವು ಪರ್ವತದ ಮೇಲೆ ಜಲಧಾರೆಯನ್ನು ಸುರಿಸುವಂತೆ ಘಟೋತ್ಕಚನು ರಥಿಗಳಲ್ಲಿ ಶ್ರೇಷ್ಠ ದ್ರೌಣಿಯ ಮೇಲೆ

ರಥದ ಅಚ್ಚುಮರದ ಗಾತ್ರದ ಬಾಣಗಳನ್ನು ಸುರಿಸಿದನು. ಆ ಶರವೃಷ್ಟಿಯು ತನ್ನ ಮೇಲೆ ಬೀಳುವುದರೊಳಗೇ ದ್ರೌಣಿಯು ಶರಗಳಿಂದ ತುಂಡುಮಾಡಿದನು. ಆಗ ಅಂತರಿಕ್ಷದಲ್ಲಿ ಬಾಣಗಳ ಸಂಗ್ರಾಮವೋ ಎಂದು ತೋರುವಂತೆ ಅವರಿಬ್ಬರೊಡನೆ ಯುದ್ಧವು ನಡೆಯಿತು. ಅಸ್ತ್ರಗಳ ಸಂಘರ್ಷದಿಂದಾಗಿ ಹೊರಬೀಳುತ್ತಿದ್ದ ಬೆಂಕಿಯ ಕಿಡಿಗಳು ಆಕಾಶವನ್ನೇ ಪ್ರಕಾಶಗೊಳಿಸುತ್ತಿದ್ದವು. ರಾತ್ರಿಯ ಆ ಪ್ರಥಮಯಾನದಲ್ಲಿ ಆಕಾಶವೆಲ್ಲವೂ ಮಿಂಚುಹುಳುಗಳಿಂದ ಚಿತ್ರಿತವಾಗಿರುವಂತೆ ತೋರುತ್ತಿತ್ತು. ಯುದ್ಧಾಭಿಮಾನಿ ದ್ರೌಣಿಯಿಂದ ತನ್ನ ಮಾಯೆಯು ನಾಶವಾದುದನ್ನು ನೋಡಿ ಘಟೋತ್ಕಚನು ಅಂತರ್ಹಿತನಾಗಿ ಪುನಃ ಮಾಯೆಯನ್ನು ಸೃಷ್ಟಿಸಿದನು. ಅವನು ಶಿಖರ-ವೃಕ್ಷಗಳಿಂದ ಕೂಡಿದ ದೊಡ್ಡ ಪರ್ವತವಾಗಿಬಿಟ್ಟನು. ಶೂಲ, ಪ್ರಾಸ, ಖಡ್ಗ, ಮುಸುಲಗಳು ಆ ಪರ್ವತದಿಂದ ಧಾರಾಕಾರವಾಗಿ ಸುರಿಯುತ್ತಿದ್ದವು. ಅಂಜನಪರ್ವತಕ್ಕೆ ಸಮಾನವಾಗಿದ್ದ ಮಾಯಾನಿರ್ಮಿತ ಆ ಪರ್ವತವನ್ನೂ ಅದರಿಂದ ಧಾರಾಕಾರವಾಗಿ ಬೀಳುತ್ತಿದ್ದ ಶಸ್ತ್ರಸಮೂಹಗಳನ್ನೂ ನೋಡಿ ದ್ರೌಣಿಯು ಸ್ವಲ್ಪವೂ ವಿಚಲಿತನಾಗಲಿಲ್ಲ. ಆಗ ನಸುನಗುತ್ತಾ ದ್ರೌಣಿಯು ವಜ್ರಾಸ್ತ್ರವನ್ನು ಪ್ರಕಟಿಸಿದನು. ಅಸ್ತ್ರದಿಂದ ಆ ಪರ್ವತವು ತಕ್ಷಣವೇ ನಾಶವಾಯಿತು. ಆಗ ಘಟೋತ್ಕಚನು ಕಾಮನಬಿಲ್ಲಿನಿಂದ ಕೂಡಿದ ಕಪ್ಪು ಮೋಡದ

ರೂಪವನ್ನು ತಾಳಿ ಆಕಾಶದಿಂದ ಕಲ್ಲುಗಳ ಮಳೆಯನ್ನೇ ಸುರಿಸಿ ದ್ರೌಣಿಯನ್ನು ಮುಚ್ಚಿಬಿಟ್ಟನು. ಕೂಡಲೇ ದ್ರೋಣತನಯನು ಮೇಲೆದ್ದ ಆ ಕಪ್ಪುಮೋಡವನ್ನು ವಾಯವ್ಯಾಸ್ತ್ರದಿಂದ ನಾಶಗೊಳಿಸಿದನು. ದ್ರೌಣಿಯು ಮಾರ್ಗಣಗಣಗಳಿಂದ ಎಲ್ಲ ದಿಕ್ಕುಗಳನ್ನೂ ಮುಚ್ಚಿ ನೂರಾರು ಸಹಸ್ರಾರು ರಾಕ್ಷಸ ರಥಗಳನ್ನು ಧ್ವಂಸಗೊಳಿಸಿದನು.

ಅಷ್ಟಾದರೂ ಭ್ರಾಂತನಾಗದೇ ರಥದಲ್ಲಿ ಕುಳಿತು ದೀರ್ಘ ಕಾರ್ಮುಕವನ್ನು ಸೆಳೆಯುತ್ತಾ, ಆನೆಗಳ ಮೇಲೂ ರಥಗಳ ಮೇಲೂ ಮತ್ತು ಕುದುರೆಗಳ ಬೆನ್ನುಗಳ ಮೇಲೆ ಕುಳಿತಿದ್ದ, ಸಿಂಹ-ಶಾರ್ದೂಲಗಳ ಬಲವುಳ್ಳ, ಮದಿಸಿದ ಆನೆಗಳ ವಿಕ್ರಮವುಳ್ಳ, ವಿಕಾರ ಮುಖ-ಶಿರ-ಕುತ್ತಿಗೆಗಳನ್ನು ಹೊಂದಿದ್ದ, ನಾನಾ ಶಸ್ತ್ರಗಳನ್ನು ನಾನಾ ಕವಚ-ಭೂಷಣಗಳನ್ನು  ಧರಿಸಿದ್ದ, ಕೋಪದಿಂದ ಕಣ್ಣುಗುಡ್ಡೆಗಳು ಮುಂದೆ ಬಂದಿದ್ದ, ಭಯಂಕರವಾಗಿ ಆರ್ಭಟಿಸುತ್ತಿದ್ದ ಅನೇಕ ಉಗ್ರವಿಕ್ರಮಿ, ವೀರ, ಮಹಾಬಲ ಪೌಲಸ್ತ್ಯ-ಯಾತುಧಾನ-ತಾಮಸ ಯುದ್ಧದುರ್ಮದ ರಾಕ್ಷಸ ಅನುಚರರಿಂದ ಸುತ್ತುವರೆಯಲ್ಪಟ್ಟು ಯುದ್ಧಕ್ಕೆ ಬರುತ್ತಿದ್ದ ಹೈಡಿಂಬಿಯನ್ನು ನೋಡಿ ವಿಷಣ್ಣನಾದ ದುರ್ಯೋಧನನಿಗೆ ದ್ರೌಣಿಯು ಹೇಳಿದನು:

“ದುರ್ಯೋಧನ! ಇಂದ್ರ ಸಮಾನ ವಿಕ್ರಮ ರಾಜರು ಮತ್ತು

ವೀರ ಸಹೋದರರೊಡನೆ ಇಂದು ನೀನು ಸುಮ್ಮನೇ ಯುದ್ಧವನ್ನು ನೋಡು! ಗಾಬರಿಗೊಳ್ಳಲು ಕಾರಣವಿಲ್ಲ. ನಿನ್ನ ಶತ್ರುಗಳೆಲ್ಲರನ್ನೂ ಈಗ ಸಂಹರಿಸುತ್ತೇನೆ. ನಿನಗೆ ಪರಾಜಯವೆಂಬುದೇ ಆಗುವುದಿಲ್ಲ. ನಿನಗೆ ಸತ್ಯವನ್ನೇ ಹೇಳುತ್ತಿದ್ದೇನೆ. ಸೇನೆಯನ್ನು ಸಮಾಧಾನಗೊಳಿಸು!"

ದುರ್ಯೋಧನನು ಹೇಳಿದನು:

"ಗೌತಮಿಯ ಮಗನೇ! ನಿನ್ನ ಮನಸ್ಸು ವಿಶಾಲವಾದುದು. ಆದುದರಿಂದ ಈ ಅದ್ಭುತವನ್ನು ನೀನು ಮಾಡುವೆ ಎನ್ನುವುದರಲ್ಲಿ ಸಂದೇಹವಿಲ್ಲ. ನಮ್ಮ ಮೇಲೆ ನಿನಗೆ ಪರಮ ಭಕ್ತಿಯಿದೆ!"

ಅಶ್ವತ್ಥಾಮನು ಹೀಗೆ ಹೇಳಲು ದುರ್ಯೋಧನನು ನೂರುಸಾವಿರ ರಣಶೋಭೀ ರಥಗಳಿಂದ ಆವೃತನಾಗಿದ್ದ ಶಕುನಿಗೆ ಹೇಳಿದನು:

"ಮಾತುಲ! ಆರು ಸಾವಿರ ಆನೆಗಳೊಂದಿಗೆ ನೀನು ಧನಂಜಯನನ್ನು ಆಕ್ರಮಣಿಸು! ಕರ್ಣ, ವೃಷಸೇನ, ಕೃಪ, ನೀಲ, ಉತ್ತರ ಸೇನೆ, ಕೃತವರ್ಮ, ಪುರುಮಿತ್ರ, ಶ್ರುತಾರ್ಪಣ, ದುಃಶಾಸನ, ನಿಕುಂಭ, ಕುಂಡಭೇದಿ, ಉರುಕ್ರಮ, ಪುರಂಜಯ,

ದೃಢರಥ, ಪತಾಕೀ, ಹೇಮಪಂಕಜ, ಶಲ್ಯ, ಅರುಣೇಂದ್ರನ ಸೇನೆ, ಸಂಜಯ, ವಿಜಯ, ಜಯ, ಕಮಲಾಕ್ಷ, ಪುರು, ಕ್ರಾಥೀ, ಜಯವರ್ಮ, ಸುದರ್ಶನರು ಆರುಸಾವಿರ ಪದಾತಿಗಳೊಂದಿಗೆ ನಿನ್ನನ್ನು ಅನುಸರಿಸಿ ಬರುತ್ತಾರೆ. ದೇವೇಂದ್ರನು ಅಸುರರನ್ನು ಜಯಿಸಿದಂತೆ ನೀವು ಭೀಮ, ಯಮಳರು ಮತ್ತು ಧರ್ಮರಾಜನನ್ನು ಜಯಿಸಿರಿ! ನನ್ನ ವಿಜಯವು ನಿಮ್ಮ ಮೇಲೆ ನಿರ್ಭರಗೊಂಡಿದೆ! ದ್ರೌಣಿಯ ಬಾಣಗಳಿಂದ ತುಂಬಾ ಗಾಯಗೊಂಡಿರುವ ಕೌಂತೇಯರನ್ನು ಪಾವಕಿಯು ಅಸುರರನ್ನು ಹೇಗೋ ಹಾಗೆ ಜಯಿಸು!"

ದುರ್ಯೋಧನನು ಹೀಗೆ ಹೇಳಲು ಸೌಬಲನು ಧೃತರಾಷ್ಟ್ರನ ಮಕ್ಕಳನ್ನು ಸಂತೋಷಗೊಳಿಸಲು ಮತ್ತು ಪಾಂಡವರನ್ನು ನಾಶಗೊಳಿಸಲು ಹೊರಟನು. ಆಗ ಹಿಂದೆ ಶಕ್ರನಿಗೂ ಪ್ರಹ್ರಾದನಿಗೂ ನಡೆದ ತುಮುಲ ಯುದ್ಧದಂತೆ ದ್ರೌಣಿ-ರಾಕ್ಷಸನ ನಡುವೆ ಯುದ್ಧವು ನಡೆಯಿತು. ಸಂಕ್ರುದ್ಧ ಘಟೋತ್ಕಚನು ವಿಷಾಗ್ನಿಯಂತಿರುವ ಹತ್ತು ಬಾಣಗಳಿಂದ ಗೌತಮೀಸುತನ ಎದೆಗೆ ಹೊಡೆದನು. ಭೀಮಸುತನ ಶರಗಳಿಂದ ಗಾಢವಾಗಿ ಗಾಯಗೊಂಡ ಅಶ್ವತ್ಥಾಮನು ರಥದ ಮಧ್ಯದಲ್ಲಿಯೇ ಭಿರುಗಾಳಿಸಿ ಸಿಲುಕಿದ ಮರದಂತೆ ತತ್ತರಿಸಿದನು. ಪುನಃ

ಘಟೋತ್ಕಚನು ಮಹಾಪ್ರಭೆಯುಳ್ಳ ಅಂಜಲೀಕವೆಂಬ ಮಾರ್ಗಣದಿಂದ ದ್ರೌಣಿಯ ಕೈಯಲ್ಲಿದ್ದ ಚಾಪವನ್ನು ತುಂಡರಿಸಿದನು. ಆಗ ದ್ರೌಣಿಯು ಮಹಾ ಭಾರವನ್ನು ಸಹಿಸಿಕೊಳ್ಳಬಲ್ಲ ಅನ್ಯ ಧನುಸ್ಸನ್ನು ತೆಗೆದುಕೊಂಡು ಮೋಡಗಳು ಮಳೆಯನ್ನು ಸುರಿಸುವಂತೆ ತೀಕ್ಷ್ಣ ವಿಶಿಖಗಳ ಮಳೆಯನ್ನು ಸುರಿಸಿದನು. ಆಗ ಶಾರದ್ವತೀಪುತ್ರನು ಆ ಆಕಾಶಗಾಮಿ ರಾಕ್ಷಸ ಶತ್ರುಗಳ ಮೇಲೆ ಸುವರ್ಣಪುಂಖಗಳುಳ್ಳ ಆಕಾಶಗಾಮೀ ಬಾಣಗಳನ್ನು ಪ್ರಯೋಗಿಸಿದನು. ಸಿಂಹದಿಂದ ಪೀಡಿಸಲ್ಪಟ್ಟ ಆನೆಗಳ ಹಿಂಡಿನಂತೆ ಪೀನವಕ್ಷಸರಾದ ರಾಕ್ಷಸರ ಆ ಸೇನೆಯು ಅಶ್ವತ್ಥಾಮನ  ಬಾಣಗಳಿಂದ ಬಹಳವಾಗಿ ಪೀಡಿತಗೊಂಡಿತು. ಯುಗಕ್ಷಯದಲ್ಲಿ ಭಗವಂತ ವಿಭುವು ಇರುವವುಗಳನ್ನು ಹೇಗೆ ಅಗ್ನಿಯಿಂದ ಸುಡುವನೋ ಹಾಗೆ ಅಶ್ವತ್ಥಾಮನು ಕುದುರೆ-ಸೂತ-ರಥಗಳೊಂದಿಗೆ ಆ ರಾಕ್ಷಸರನ್ನು ಬಾಣಗಳಿಂದ ಸುಟ್ಟು ಧ್ವಂಸಗೊಳಿಸಿದನು. ಹಿಂದೆ ದಿವಿಯಲ್ಲಿ ದೇವ ಮಹೇಶ್ವರನು ಹೇಗೆ ತ್ರಿಪುರವನ್ನು ದಹಿಸಿದ್ದನೋ ಹಾಗೆ ಬಾಣಗಳಿಂದ ರಾಕ್ಷಸರ ಅಕ್ಷೌಹಿಣಿಯನ್ನು ದಹಿಸಿ ಅಶ್ವತ್ಥಾಮನು ಬಹಳವಾಗಿ ಪ್ರಕಾಶಿಸಿದನು. ಧೃತರಾಷ್ಟ್ರನ ಹಿತವನ್ನೇ ಮಾಡುವ ವಿಜಯಿಗಳಲ್ಲಿ ಶ್ರೇಷ್ಠ ದ್ರೋಣಪುತ್ರನು ಯುಗಾಂತದಲ್ಲಿ ಸರ್ವಭೂತಗಳನ್ನು ಸುಡುವ ಅಗ್ನಿಯಂತೆ ಪ್ರಕಾಶಿಸಿದನು.

ಮಹಾಬಲೀ ರಾಕ್ಷಸೇಂದ್ರ ಘಟೋತ್ಕಚನ ಹೊರತಾಗಿ ಆಗ ರಣದಲ್ಲಿದ್ದ ಪಾಂಡವರ ಸಹಸ್ರಾರು ರಾಜರಲ್ಲಿ ಯಾರೂ ದ್ರೌಣಿಯನ್ನು ವೀಕ್ಷಿಸಲು ಶಕ್ಯರಾಗಿರಲಿಲ್ಲ. ಅವನು ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ಚಪ್ಪಾಳೆ ತಟ್ಟುತ್ತಾ "ಕ್ರುದ್ಧನಾದ ದ್ರೋಣಪುತ್ರನಲ್ಲಿಗೆ ನನ್ನನ್ನು ಕೊಂಡೊಯ್ಯಿ!" ಎಂದು ಹೇಳಿದನು. ಅನಂತರ ಆ ಘಟೋತ್ಕಚನು ವಿಚಿತ್ರ ಪತಾಕೆಗಳನ್ನುಳ್ಳ ಘೋರರೂಪದ ರಥವನ್ನೇರಿ ದ್ರೋಣಪುತ್ರನೊಂದಿಗೆ ಪುನಃ ದ್ವೈರಥಯುದ್ಧವನ್ನು ನಡೆಸಿದನು. ಆಗ ಕ್ರುದ್ಧ ರಾಕ್ಷಸನು ದ್ರೋಣಪುತ್ರನ ಮೇಲೆ ರುದ್ರನಿರ್ಮಿತ ಮಹಾರೌದ್ರಾಕಾರದ ಉಕ್ಕಿನ ಅಷ್ಟಚಕ್ರವನ್ನು ಪ್ರಯೋಗಿಸಿದನು. ಆಗ ದ್ರೌಣಿಯು ಧನುಸ್ಸನ್ನು ರಥದಲ್ಲಿಯೇ ಇರಿಸಿ, ರಥದಿಂದ ಕೆಳಕ್ಕೆ ಹಾರಿ ಆ ಚಕ್ರವನ್ನು ಹಿಡಿದು ಅದನ್ನೇ ಹಿಂದೆ ಎಸೆದನು. ಮಹಾಪ್ರಭೆಯುಳ್ಳ ಆ ಅತಿ ದಾರುಣ ಅಶನಿಯು ಘಟೋತ್ಕಚನ ವಾಹನವನ್ನು ಕುದುರೆ-ಸೂತ-ಧ್ವಜಗಳೊಂದಿಗೆ ಭಸ್ಮಗೊಳಿಸಿ ಭೂಮಿಯನ್ನು ಸೀಳಿ ಪ್ರವೇಶಿಸಿತು. ಶಂಕರ ನಿರ್ಮಿತ ಆ ಘೋರ ಅಶನಿಯನ್ನು ಹಾರಿ ಹಿಡಿದ ದ್ರೌಣಿಯ ಆ ಕರ್ಮವನ್ನು ನೋಡಿ ಸರ್ವಭೂತಗಳು ಅವನನ್ನು ಹೊಗಳಿದವು. ಭೈಮಸೇನಿಯಾದರೋ ಧೃಷ್ಟದ್ಯುಮ್ನನ ರಥವನ್ನೇರಿ ಅಲ್ಲಿಂದಲೇ ಪುನಃ ದ್ರೌಣಿಯ ಮಹಾವಕ್ಷಸ್ಥಳಕ್ಕೆ ಗುರಿಯಿಟ್ಟು ನಿಶಿತ ಬಾಣಗಳನ್ನು

ಪ್ರಯೋಗಿಸಿದನು. ಧೃಷ್ಟದ್ಯುಮ್ನನೂ ಕೂಡ ಗಾಬರಿಗೊಳ್ಳದೇ ಸರ್ಪಗಳ ವಿಷದಂತಿರುವ ಸುವರ್ಣಪುಂಖಗಳ ವಿಶಿಖಗಳನ್ನು ದ್ರೋಣಪುತ್ರನ ಎದೆಗೆ ಗುರಿಯಿಟ್ಟು ಪ್ರಯೋಗಿಸಿದನು. ದ್ರೌಣಿಯೂ ಕೂಡ ಅವರಿಬ್ಬರ ಮೇಲೆ ಸಹಸ್ರಾರು ನಾರಾಚಗಳನ್ನು ಪ್ರಯೋಗಿಸಿದನು. ಅವರೂ ಕೂಡ ಅಗ್ನಿಶಿಖೆಗಳಂತಿದ್ದ ಬಾಣಗಳಿಂದ ಅಶ್ವತ್ಥಾಮನ ಬಾಣಗಳನ್ನು ಆಕಾಶದಲ್ಲಿಯೇ ತುಂಡರಿಸಿದರು.

ಪುರುಷಸಿಂಹರು ಮತ್ತು ದ್ರೌಣಿಯ ನಡುವಿನ ಆ ಯುದ್ಧವು ಅತಿ ತೀವ್ರವೂ ಯೋಧರಿಗೆ ಪ್ರೀತಿವರ್ಧಕವೂ ಆಗಿತ್ತು. ಆಗ ಸಾವಿರ ರಥಗಳಿಂದಲೂ, ಮುನ್ನೂರು ಆನೆಗಳಿಂದಲೂ, ಆರು ಸಾವಿರ ಕುದುರೆಸವಾರರಿಂದಲೂ ಕೂಡಿಕೊಂಡು ಭೀಮನು ಆ ಪ್ರದೇಶಕ್ಕೆ ಆಗಮಿಸಿದನು. ಆ ಸಮಯದಲ್ಲಿ ಸ್ವಲ್ಪವೂ ಆಯಾಸವಿಲ್ಲದಂತೆ ಪರಾಕ್ರಮವನ್ನು ತೋರಿಸುತ್ತಿದ್ದ ದ್ರೌಣಿಯು ಭೀಮನ ರಾಕ್ಷಸ ಮಗನೊಡನೆ ಮತ್ತು ಅವನನ್ನು ಅನುಸರಿಸಿ ಬಂದ ಧೃಷ್ಟದ್ಯುಮ್ನನೊಡನೆ ಯುದ್ಧಮಾಡುತ್ತಿದ್ದನು. ಅಲ್ಲಿ ಅನ್ಯ ಸರ್ವಭೂತಗಳಿಗೂ ಮಾಡಿತೋರಿಸಲು ಅಶಕ್ಯವಾದ ಅತಿ ಅದ್ಭುತ ವಿಕ್ರಮವನ್ನು ದ್ರೌಣಿಯು ಪ್ರದರ್ಶಿಸಿದನು. ಒಂದೇ ನಿಮಿಷಮಾತ್ರದಲ್ಲಿ ಅವನು – ಭೀಮಸೇನ, ಹೈಡಿಂಬಿ, ಪಾರ್ಷತ, ಯಮಳರು,

ಧರ್ಮಪುತ್ರ, ವಿಜಯ ಮತ್ತು ಅಚ್ಯುತರು ನೋಡುತ್ತಿದ್ದಂತೆಯೇ - ನಿಶಿತಬಾಣಗಳಿಂದ ಅಶ್ವ-ಸೂತ-ರಥ-ಗಜಗಳೊಂದಿಗೆ ರಾಕ್ಷಸರ ಅಕ್ಷೌಹಿಣೀ ಸೇನೆಯನ್ನು ಧ್ವಂಸಗೊಳಿಸಿದನು. ಅಶ್ವತ್ಥಾಮನ ನಾರಾಚಗಳಿಂದ ಅತಿಗಾಢವಾಗಿ ಗಾಯಗೊಂಡ ಆನೆಗಳು ಎರಡು ಶಿಖರಗಳಿರುವ ಪರ್ವತಗಳಂತೆ ಭೂಮಿಯ ಮೇಲೆ ಉರುಳಿ ಬಿದ್ದವು. ಬಾಣಗಳಿಂದ ಕತ್ತರಿಸಲ್ಪಟ್ಟ ಆನೆಗಳ ಸೊಂಡಿಲುಗಳು ಚಲಿಸುತ್ತಿರುವಾಗ ರಣಭೂಮಿಯು ಹರಿದಾಡುತ್ತಿರುವ ಸರ್ಪಗಳಿಂದ ತುಂಬಿಹೋಗಿರುವಂತೆ ತೋರಿತು. ಅಲ್ಲಲ್ಲಿ ಬಿದ್ದಿದ್ದ ಸುವರ್ಣಮಯ ದಂಡಗಳು ಮತ್ತು ನೃಪರ ಛತ್ರಗಳಿಂದ ತುಂಬಿದ ರಣಭೂಮಿಯು ಯುಗಕ್ಷಯದಲ್ಲಿ ಸೂರ್ಯ-ಚಂದ್ರ ಗ್ರಹಗಳಿಂದ ತುಂಬಿದ ಆಕಾಶದಂತೆ ತೋರುತ್ತಿತ್ತು. ದ್ರೌಣಿಯು ಯಮಕ್ಷಯದ ಸಾಗರದಂತಿರುವ, ಮಹಾವೇಗವಾಗಿ ಹರಿಯುತ್ತಿರುವ ಮಹಾಘೋರ ರಕ್ತದ ನದಿಯನ್ನೇ ನಿರ್ಮಿಸಿದನು.

ರಾಶಿರಾಶಿಯಾಗಿ ಬಿದ್ದಿರುವ ಧ್ವಜಗಳೇ ಆ ನದಿಯ ಕಪ್ಪೆಗಳಂತಿದ್ದವು. ಒಡೆದುಹೋಗಿದ್ದ ಭೇರಿಗಳು ಆಮೆಗಳಂತಿದ್ದವು. ತುಂಡಾಗಿ ಬಿದ್ದಿದ್ದ ಚತ್ರಗಳು ಹಂಸಗಳ ಸಾಲಿನಂತಿದ್ದವು. ಚಾಮರಗಳ ಮಾಲೆಗಳು ನೊರೆಗಳಂತಿದ್ದವು. ಹದ್ದು-ರಣಹದ್ದುಗಳು ಮೊಸಳೆಗಳಂತಿದ್ದವು.

ಅನೇಕ ಆಯುಧ-ಶರಗಳು ಮೀನುಗಳಂತಿದ್ದವು. ಪ್ರಾಸ-ಶಕ್ತಿಗಳು ಉಗ್ರ ಡುಂಡುಭಗಳಂತಿದ್ದವು. ಮಜ್ಜೆ-ಮಾಂಸಗಳು ನದಿಯ ಕೆಸರಿನಂತಿದ್ದವು. ತೇಲಿಹೋಗುತ್ತಿದ್ದ ಕಬಂಧಗಳು ದೋಣಿಗಳಂತೆ ತೋರುತ್ತಿದ್ದವು. ತಲೆಗೂದಲುಗಳೇ ಪಾಚಿಯಂತಿದ್ದ ಆ ನದಿಯು ಹೇಡಿಗಳಿಗೆ ಭಯವನ್ನುಂಟುಮಾಡುವಂತಹುದಾಗಿತ್ತು. ಅಪಾರ ಸಂಖ್ಯೆಗಳಲ್ಲಿ ಗಜಾಶ್ವಯೋಧರ ಹನನದಿಂದ ಉದ್ಭವವಾದ ಆ ನದಿಯಲ್ಲಿ ಯೋಧರ ಆರ್ತಸ್ವರಗಳೇ ಕಲಕಲ ಶಬ್ಧದಂತೆ ಕೇಳಿಬರುತ್ತಿದ್ದವು. ಗಾಯಗೊಂಡವರ ಶರೀರಗಳಿಂದ ಸೋರುವ ರಕ್ತವೇ ಆ ನದಿಯ ಅಲೆಗಳಂತಿತ್ತು. ಬಾಣಗಳಿಂದ ರಾಕ್ಷಸರನ್ನು ಸಂಹರಿಸಿ ದ್ರೌಣಿಯು ಹೈಡಿಂಬಿಯನ್ನು ಗಾಯಗೊಳಿಸಿದನು. ಪುನಃ ಅತಿ ಸಂಕ್ರುದ್ಧನಾಗಿ ಮಹಾಬಲ ದ್ರೌಣಿಯು ನಾರಾಚ ಗಣಗಳಿಂದ ವೃಕೋದರ-ಪಾರ್ಷತರೊಂದಿಗೆ ಪಾರ್ಥರನ್ನು ಹೊಡೆದನು.

ಆಗ ಅಶ್ವತ್ಥಾಮನು ಸುರಥನೆಂಬ ಹೆಸರಿನ ದ್ರುಪದನ ಮಗನನ್ನು ಸಂಹರಿಸಿದನು ಮತ್ತು ಪುನಃ ಶ್ರುತಂಜಯನೆಂಬ ಹೆಸರಿನ ಸುರಥನ ಅನುಜನನ್ನೂ ರಣದಲ್ಲಿ ಸಂಹರಿಸಿದನು. ದ್ರೌಣಿಯು ಬಲಾನೀಕ, ಜಯಾನೀಕ, ಜಯ, ಶ್ರುತಾಹ್ವಯರನ್ನು ಸಂಹರಿಸಿ ಯಮಕ್ಷಯಕ್ಕೆ ಕಳುಹಿಸಿದನು. ಪುಂಖಗಳಿರುವ ಅನ್ಯ ಮೂರು ತೀಕ್ಷ್ಣ ಬಾಣಗಳಿಂದ

ಅವನು ಬಲಶಾಲಿ ಶತ್ರುಂಜಯನನ್ನೂ ರುಕ್ಮಮಾಲಿನಿಯನ್ನೂ ಶಕ್ರಲೋಕಕ್ಕೆ ಕಳುಹಿಸಿದನು. ಅವನು ಪೃಷಧ್ರ ಮತ್ತು ಮಾನಿನಿ ಚಂದ್ರದೇವರನ್ನು ಕೂಡ ಸಂಹರಿಸಿದನು. ಕುಂತಿಭೋಜನ ಹತ್ತು ಮಕ್ಕಳನ್ನೂ ಹತ್ತು ಬಾಣಗಳಿಂದ ಸಂಹರಿಸಿದನು. ಆಗ ಅಶ್ವತ್ಥಾಮನು ಸಂಕ್ರುದ್ಧನಾಗಿ ಉಗ್ರ ಜಿಹ್ಮಗವೊಂದನ್ನು ಹೂಡಿ ಧನುಸ್ಸನ್ನು ಆಕರ್ಣಪರ್ಯಂತವಾಗಿ ಎಳೆದು ಘೋರ ಯಮದಂಡದಂತಿದ್ದ ಆ ಉತ್ತಮ ಶರವನ್ನು ಘಟೋತ್ಕಚನಿಗೆ ಗುರಿಯಿಟ್ಟು ಪ್ರಯೋಗಿಸಿದನು. ಸುಂದರ ಪುಂಖಗಳುಳ್ಳ ಆ ಮಹಾಶರವು ರಾಕ್ಷಸನ ಹೃದಯವನ್ನು ಭೇದಿಸಿ ಶೀಘ್ರವಾಗಿ ನೆಲವನ್ನು ಹೊಕ್ಕಿತು. ಅದರಿಂದ ಘಟೋತ್ಕಚನು ಹತನಾಗಿ ಬಿದ್ದನೆಂದೇ ತಿಳಿದ ಮಹಾರಥ ಧೃಷ್ಟದ್ಯುಮ್ನನು ತನ್ನ ರಥವನ್ನು ದ್ರೌಣಿಯಿಂದ ದೂರಕ್ಕೆ ಕೊಂಡೊಯ್ದನು.

ಹಾಗೆ ರಣದಲ್ಲಿ ಯುಧಿಷ್ಠಿರನ ಸೇನೆಯ ಮುಖ್ಯರಥರನ್ನು ಪರಾಜಯಗೊಳಿಸಿ ಪರಾಙ್ಮುಖಗೊಳಿಸಿ ವೀರ ದ್ರೋಣಪುತ್ರನು ಸಿಂಹನಾದಗೈದನು. ನಿನ್ನ ಪುತ್ರರಿಂದಲೂ ಸರ್ವಭೂತಗಳಿಂದಲೂ ಗೌರವಿಸಲ್ಪಟ್ಟನು. ಹಾಗೆ ನೂರಾರು ಬಾಣಗಳಿಂದ ಕತ್ತರಿಸಲ್ಪಟ್ಟ ದೇಹಗಳಿಂದ, ಹತರಾಗಿ ಎಲ್ಲೆಡೆಯೂ ಬಿದ್ದಿದ್ದ, ರಾಕ್ಷಸರಿಂದ ನಿಬಿಡವಾಗಿದ್ದ ರಣಭೂಮಿಯು ಪರ್ವತ ಶಿಖರಗಳಿಂದ

ವ್ಯಾಪ್ತವಾಗಿರುವಂತೆ ಅತಿದುರ್ಗಮವಾಗಿಯೂ ರೌದ್ರವಾಗಿಯೂ ಕಾಣುತ್ತಿತ್ತು. ಆ ದ್ರೌಣಿಯನ್ನು ಸಿದ್ಧ-ಗಂಧರ್ವ-ಪಿಶಾಚ ಗಣಗಳೂ, ನಾಗ-ಸುಪರ್ಣ-ಪಿತೃದೇವ-ಪಕ್ಷಿಗಣಗಳೂ, ರಾಕ್ಷಸ-ಭೂತಗಣಗಳೂ, ಅಪ್ಸರೆಯರೂ, ಸುರರೂ ಪ್ರಶಂಸಿಸಿದರು.

## ಭೀಮನಿಂದ ಬಾಹ್ಲೀಕನ ವಧೆ

ದ್ರುಪದನ ಮಕ್ಕಳು, ಕುಂತಿಭೋಜನ ಮಕ್ಕಳು, ಮತ್ತು ಸಹಸ್ರಾರು ರಾಕ್ಷಸರು ದ್ರೋಣಪುತ್ರನಿಂದ ನಿಹತರಾದುದನ್ನು ಕಂಡು ಯುಧಿಷ್ಠಿರ, ಭೀಮಸೇನ, ಧೃಷ್ಟದ್ಯುಮ್ನ, ಮತ್ತು ಸಾತ್ಯಕಿಯರು ಒಟ್ಟಾಗಿ ಯುದ್ಧಮಾಡುವ ಮನಸ್ಸು ಮಾಡಿದರು. ರಣದಲ್ಲಿ ಪುನಃ ಸಾತ್ಯಕಿಯನ್ನು ನೋಡಿ ಕ್ರುದ್ಧನಾದ ಸೋಮದತ್ತನು ಅವನನ್ನು ಮಹಾ ಶರವರ್ಷದಿಂದ ಎಲ್ಲಕಡೆಗಳಿಂದ ಮುಚ್ಚಿಬಿಟ್ಟನು. ಆಗ ವಿಜಯಾಕಾಂಕ್ಷಿ ಕೌರವರು ಮತ್ತು ಶತ್ರುಗಳ ನಡುವೆ ಭಯವನ್ನು ಹೆಚ್ಚಿಸುವ, ಅತೀವ ಘೋರ ಯುದ್ಧವು ಪ್ರಾರಂಭವಾಯಿತು. ಸಾತ್ವತನಿಗೋಸ್ಕರ ಭೀಮನು ಕೌರವ ಸೋಮದತ್ತನನ್ನು ಹತ್ತು ಬಾಣಗಳಿಂದ ಹೊಡೆಯಲು ಸೋಮದತ್ತನೂ ಕೂಡ ಆ ವೀರನನ್ನು ನೂರರಿಂದ ತಿರುಗಿ ಹೊಡೆದನು. ಅನಂತರ ಪರಮಕ್ರುದ್ಧ ಸಾತ್ವತನು ಪುತ್ರಶೋಕದ ಮನೋರೋಗದಲ್ಲಿ ಮುಳುಗಿಹೋಗಿದ್ದ,

ಸರ್ವಗುಣಗಳಲ್ಲಿ ನಹುಷನ ಮಗ ಯಯಾತಿಯಂತಿದ್ದ ವೃದ್ಧ ಸೋಮದತ್ತನನ್ನು ವಜ್ರಾಯುಧದಂತೆ ಬೀಳುವ ಹತ್ತು ತೀಕ್ಷ್ಣ ಬಾಣಗಳಿಂದ ಪ್ರಹರಿಸಿದನು. ಪ್ರತಿಯಾಗಿ ಸೋಮದತ್ತನು ಶಕ್ತ್ಯಾಯುಧದಿಂದ ಸಾತ್ಯಕಿಯನ್ನು ಗಾಯಗೊಳಿಸಿ ಪುನಃ ಏಳು ಬಾಣಗಳಿಂದ ಪ್ರಹರಿಸಿದನು. ಆಗ ಸಾತ್ಯಕಿಗಾಗಿ ಭೀಮಸೇನನು ದೃಢ ನೂತನ ಘೋರ ಪರಿಘವನ್ನು ಸೋಮದತ್ತನ ತಲೆಯ ಮೇಲೆ ಪ್ರಹರಿಸಿದನು. ಸಾತ್ಯಕಿಯು ಕ್ರುದ್ಧನಾಗಿ ಸುಂದರ ಪುಕ್ಕಗಳುಳ್ಳ ನಿಶಿತ ಅಗ್ನಿಸಂಕಾಶ ಉತ್ತಮ ಶರವನ್ನು ಸೋಮದತ್ತನ ಎದೆಗೆ ಗುರಿಯಿಟ್ಟು ಹೊಡೆದನು. ಘೋರವಾದ ಆ ಪರಿಘ-ಮಾರ್ಗಣಗಳೆರಡು ಒಟ್ಟಿಗೇ ಸೋಮದತ್ತನ ಶರೀರವನ್ನು ಹೊಗಲು, ಆ ಮಹಾರಥನು ಬಿದ್ದನು. ತನ್ನ ಮಗನು ಮೂರ್ಛಿತನಾಗಿ ಬಿದ್ದುದನ್ನು ಕಂಡು ಬಾಹ್ಲೀಕನು ಧಾವಿಸಿ ಬಂದು ವರ್ಷಾಕಾಲದಲ್ಲಿಯ ಮೋಡದಂತೆ ಶರವರ್ಷಗಳನ್ನು ಸೃಷ್ಟಿಸಿದನು.

ಆಗ ಭೀಮನು ಸಾತ್ವತನನ್ನು ರಕ್ಷಿಸಲೋಸುಗ ರಣರಂಗದಲ್ಲಿ ಬಾಹ್ಲೀಕನನ್ನು ಪೀಡಿಸುತ್ತಾ ಒಂಭತ್ತು ಶರಗಳಿಂದ ಗಾಯಗೊಳಿಸಿದನು. ಪ್ರತೀಪನ ಮಗ ಮಹಾಬಾಹು ಬಾಹ್ಲೀಕನು ಸಂಕ್ರುದ್ಧನಾಗಿ ಭೀಮನ ಎದೆಗೆ ಪುರಂದರ ವಜ್ರದಂತಿರುವ ಶಕ್ತಿಯನ್ನು ನೆಟ್ಟಿದನು. ಹಾಗೆ ಪ್ರಹೃತನಾದ ಭೀಮನು ಕಂಪಿಸಿದನು ಮತ್ತು ಮೂರ್ಛಿತನಾದನು

ಕೂಡ. ಆ ಬಲವಾನನು ಚೇತರಿಸಿಕೊಂಡು ಗದೆಯನ್ನು ಬಾಹ್ಲೀಕನ ಮೇಲೆ ಪ್ರಯೋಗಿಸಿದನು. ಪಾಂಡವನಿಂದ ಪ್ರಯೋಗಿಸಲ್ಪಟ್ಟ ಆ ಗದೆಯು ಬಾಹ್ಲೀಕನ ಶಿರವನ್ನು ತುಂಡರಿಸಿತು. ಅವನು ವಜ್ರದಿಂದ ಹೊಡೆಯಲ್ಪಟ್ಟ ಪರ್ವತರಾಜನಂತೆ ಹತನಾಗಿ ಬಿದ್ದನು.

ಆ ಪುರುಷರ್ಷಭ ವೀರ ಬಾಹ್ಲೀಕನು ಹತನಾಗಲು ದಾಶರಥಿ ರಾಮನಿಗೆ ಸಮಾನರಾದ ಧೃತರಾಷ್ಟ್ರನ ಹತ್ತು ಮಕ್ಕಳು ಭೀಮನನ್ನು ಆಕ್ರಮಿಸಿದರು. ಆ ಹತ್ತು ಪುತ್ರರನ್ನು ಹತ್ತು ನಾರಾಚಗಳಿಂದ ಸಂಹರಿಸಿದ ಭೀಮನು ಕರ್ಣನ ಪ್ರಿಯ ಪುತ್ರ ವೃಷಸೇನನನ್ನು ಬಾಣಗಳಿಂದ ಮುಸುಕಿದನು. ಆಗ ವೃಷರಥನೆಂಬ ಹೆಸರಿನ ಕರ್ಣನ ಪ್ರಖ್ಯಾತ ಸಹೋದರನು ಭೀಮನನ್ನು ನಾರಾಚಗಳಿಂದ ಪ್ರಹರಿಸಿ ಗಾಯಗೊಳಿಸಿದನು. ಆಗ ವೀರ ಭೀಮನು ಧೃತರಾಷ್ಟ್ರನ ಬಾವಂದಿರಾದ ಏಳು ಮಂದಿ ರಥರನ್ನು ನಾರಾಚಗಳಿಂದ ಸಂಹರಿಸಿ ಶತಚಂದ್ರನನ್ನೂ ಸಂಹರಿಸಿದನು. ಮಹಾರಥ ಶತಚಂದ್ರನು ಹತನಾದುದನ್ನು ಸಹಿಸಿಕೊಳ್ಳಲಾರದೇ ಶಕುನಿಯ ವೀರ ಸಹೋದರರು - ಗಜಾಕ್ಷ, ಶರಭ ಮತ್ತು ವಿಭು - ಧಾವಿಸಿ ಬಂದು ತೀಕ್ಷ್ಣ ಶರಗಳಿಂದ ಭೀಮಸೇನನನ್ನು ಹೊಡೆದರು. ವೃಷ್ಟಿವೇಗದಿಂದ ಪರ್ವತವು ಸ್ವಲ್ಪವೂ ಕಂಪಿಸದಂತೆ ನಾರಾಚಗಳಿಂದ ಹೊಡೆಯಲ್ಪಟ್ಟು ಸ್ವಲ್ಪವೂ ವಿಚಲಿತನಾಗದೇ ಭೀಮಸೇನನು ಐದು ಬಾಣಗಳಿಂದ ಆ ಐವರು

ಅತಿಬಲ ರಥರನ್ನು ಸಂಹರಿಸಿದನು. ಆ ವೀರರು ಹತರಾದದನ್ನು ನೋಡಿ ಕೌರವನ ಕಡೆಯ ರಾಜರು ತತ್ತರಿಸಿದರು.

## ಯುಧಿಷ್ಠಿರ-ದ್ರೋಣರ ಯುದ್ಧ

ಆಗ ಕ್ರುದ್ಧ ಯುಧಿಷ್ಠಿರನು ದ್ರೋಣ ಮತ್ತು ಧೃತರಾಷ್ಟ್ರನ ಮಕ್ಕಳು ನೋಡುತ್ತಿದ್ದಂತೆಯೇ ಕೌರವ ಸೇನೆಯನ್ನು ನಾಶಗೊಳಿಸಲು ಉಪಕ್ರಮಿಸಿದನು. ಯುಧಿಷ್ಠಿರನು ಯುದ್ಧದಲ್ಲಿ ಅಂಬಷ್ಠರನ್ನು, ಮಾಲವರನ್ನು, ಶೂರ ತ್ರಿಗರ್ತರನ್ನೂ ಶಿಬಿಯರೊಂದಿಗೆ ಗುಂಪು ಗುಂಪಾಗಿ ಮೃತ್ಯುಲೋಕಕ್ಕೆ ಕಳುಹಿಸಿದನು. ಅಭಿಷಾಹಸರನ್ನೂ, ಶೂರಸೇನರನ್ನೂ, ಬಾಹ್ಲೀಕರನ್ನೂ, ಸವಸಾತಿಕಾನರನ್ನೂ ಸಂಹರಿಸಿ ರಾಜನು ಪೃಥ್ವಿಯಲ್ಲಿ ರಕ್ತ-ಮಾಂಸಗಳ ಕೆಸರನ್ನುಂಟು ಮಾಡಿದನು. ಯುದ್ಧದಲ್ಲಿ ಯುಧಿಷ್ಠಿರನು ಶೂರ ಯೌಧೇಯರನ್ನೂ ಅಟ್ಟರನ್ನೂ, ಮದ್ರಕ ಗಣಗಳನ್ನೂ ಬಾಣಗಳಿಂದ ಮೃತ್ಯುಲೋಕಕ್ಕೆ ಕಳುಹಿಸಿದನು. “ಕೊಲ್ಲಿರಿ !”, “ಅಪಹರಿಸಿರಿ !”, “ಹಿಡಿಯಿರಿ !”, “ಗಾಯಗೊಳಿಸಿ !”, “ಚೂರು ಚೂರು ಮಾಡಿ !” ಇವೇ ಮುಂತಾದ ಭಯಂಕರ ಶಬ್ಧಗಳು ಯುಧಿಷ್ಠಿರನ ರಥದ ಬಳಿ ಕೇಳಿಬರುತ್ತಿದ್ದವು.

ಸೇನೆಗಳನ್ನು ಓಡಿಸುತ್ತಿರುವ ಯುಧಿಷ್ಠಿರನನ್ನು ನೋಡಿ ದ್ರೋಣನು ಅವನನ್ನು ಸಾಯಕಗಳಿಂದ ಮುಚ್ಚಿಬಿಟ್ಟನು. ದ್ರೋಣನಾದರೋ

ಪರಮಕ್ರುದ್ಧನಾಗಿ ವಾಯವ್ಯಾಸ್ತ್ರದಿಂದ ರಾಜನನ್ನು ಹೊಡೆದನು. ಯುಧಿಷ್ಠಿರನೂ ಕೂಡ ಆ ದಿವ್ಯಾಸ್ತ್ರವನ್ನು ದಿವ್ಯಾಸ್ತ್ರದಿಂದಲೇ ನಿರಸನಗೊಳಿಸಿದನು. ಆ ಅಸ್ತ್ರವು ಹತವಾಗಲು ಪರಮಕ್ರುದ್ಧನಾದ ಭಾರದ್ವಾಜನು ಯುಧಿಷ್ಠಿರನನ್ನು ಕೊಲ್ಲಲು ಬಯಸಿ ವಾರುಣ, ಯಾಮ್ಯ, ಆಗ್ನೇಯ, ತ್ವಾಷ್ಟ್ರ, ಸಾವಿತ್ರಗಳೆಂಬ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದನು. ಸ್ವಲ್ಪವೂ ಭಯಗೊಳ್ಳದೇ ಮಹಾಬಾಹು ಧರ್ಮಜನು ಕುಂಭಯೋನಿಯು ಬಿಟ್ಟ ಮತ್ತು ಬಿಡಲಿರುವ ಎಲ್ಲ ಅಸ್ತ್ರಗಳನ್ನೂ ಪ್ರತಿ ಅಸ್ತ್ರಗಳಿಂದ ನಿರಸನಗೊಳಿಸಿದನು. ಧರ್ಮತನಯನನ್ನು ಸಂಹರಿಸುತ್ತೇನೆ ಎನ್ನುವ ತನ್ನ ಪ್ರತಿಜ್ಞೆಯನ್ನು ಸತ್ಯಮಾಡಲೋಸುಗ ಕೌರವರ ಹಿತದಲ್ಲಿಯೇ ನಿರತನಾಗಿದ್ದ ಕುಂಭಸಂಭವನು ಐಂದ್ರ ಮತ್ತು ಪ್ರಾಜಪತ್ಯ ಅಸ್ತ್ರಗಳನ್ನು ಪ್ರಯೋಗಿಸಲು ಪ್ರಾರಂಭಿಸಿದನು. ಆನೆ-ಸಿಂಹಗಳ ನಡುಗೆಯುಳ್ಳ, ವಿಶಾಲವಕ್ಷ, ವಿಶಾಲ ಕೆಂಪು ಕಣ್ಣುಗಳಿದ್ದ, ಕುರುಗಳ ಪತಿ ಯುಧಿಷ್ಠಿರನು ಮತ್ತೊಂದು ಮಹೇಂದ್ರಾಸ್ತ್ರವನ್ನು ಪ್ರಕಟಿಸಿ ಅವನ ಅಸ್ತ್ರದ ತೇಜಸ್ಸನ್ನು ಕುಂದಿಸಿದನು.

ಪ್ರಯೋಗಿಸಿದ ಅಸ್ತ್ರಗಳೆಲ್ಲವೂ ನಿರಸನಗೊಳ್ಳಲು ಕ್ರೋಧಸಮನ್ವಿತನಾದ ದ್ರೋಣನು ಯುಧಿಷ್ಠಿರನ ವಧೆಗೋಸ್ಕರ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿದನು. ಆಗ ರಣರಂಗವು ಘೋರ ಕತ್ತಲೆಯಿಂದ ಆವೃತವಾಗಿ ಎಲ್ಲಿ ಏನಿದೆಯೆನ್ನುವುದೇ ತಿಳಿಯಲಾಗಲಿಲ್ಲ.

ಸರ್ವಭೂತಗಳೂ ಪರಮ ಭಯೋದ್ವಿಗ್ನಗೊಂಡವು. ಬ್ರಹ್ಮಾಸ್ತ್ರವು ಪ್ರಯೋಗಿಸಲ್ಪಟ್ಟುದುದನ್ನು ನೋಡಿ ಯುಧಿಷ್ಠಿರನು ಬ್ರಹ್ಮಾಸ್ತ್ರದಿಂದಲೇ ಆ ಅಸ್ತ್ರವನ್ನು ನಿಷ್ಫಲಗೊಳಿಸಿದನು. ಆಗ ಅಲ್ಲಿದ್ದ ಸೈನಿಕಮುಖ್ಯರು ಆ ಇಬ್ಬರು ನರರ್ಷಭ ಮಹೇಷ್ವಾಸ ಸರ್ವಯುದ್ಧವಿಶಾರದ ದ್ರೋಣ-ಪಾರ್ಥರನ್ನು ಬಹಳವಾಗಿ ಪ್ರಶಂಸಿಸಿದರು.

ಆಗ ರೋಷದಿಂದ ರಕ್ತಾಕ್ಷನಾದ ದ್ರೋಣನು ಕೌಂತೇಯನನ್ನು ಬಿಟ್ಟು ವಾಯವ್ಯಾಸ್ತ್ರದಿಂದ ದ್ರುಪದನ ಸೇನೆಯನ್ನು ಧ್ವಂಸಮಾಡತೊಡಗಿದನು. ದ್ರೋಣನಿಂದ ಸಂಹರಿಸಲ್ಪಡುತ್ತಿದ್ದ ಪಾಂಚಾಲರು ಮಹಾತ್ಮ ಭೀಮಸೇನ ಮತ್ತು ಪಾರ್ಥನು ನೋಡುತ್ತಿದ್ದಂತೆಯೇ ಭಯದಿಂದ ಪಲಾಯನಮಾಡಿದರು. ಆಗ ಕಿರೀಟೀ ಮತ್ತು ಭೀಮರು ಒಮ್ಮೆಲೇ ಮಹಾ ರಥಸೇನೆಗಳ ಮಧ್ಯದಿಂದ ಓಡಿಹೋಗುತ್ತಿದ್ದ ಅವರನ್ನು ತಡೆದು ನಿಲ್ಲಿಸಿ ಕೌರವ ಸೇನೆಯನ್ನು ಮುತ್ತಿಗೆ ಹಾಕಿದರು. ಬೀಭತ್ಸುವು ದಕ್ಷಿಣ ಪಾರ್ಶ್ವದಿಂದಲೂ ವೃಕೋದರನು ಉತ್ತರ ಪಾರ್ಶ್ವದಿಂದಲೂ ಭಾರದ್ವಾಜನ ಮೇಲೆ ಮಹಾ ಶರೌಘಗಳನ್ನು ಸುರಿಸಿದರು. ಆಗ ಸೃಂಜಯರೂ, ಪಾಂಚಾಲರೂ, ಸಾತ್ವತರೊಂದಿಗೆ ಮತ್ಸ್ಯರೂ ಅವರಿಬ್ಬರನ್ನು ಅನುಸರಿಸಿ ಹೋದರು. ಆಗ ಕಿರೀಟಿಯಿಂದ ವಧಿಸಲ್ಪಟ್ಟು ಓಡಿ ಹೋಗುತ್ತಿದ್ದ ಆ ಭಾರತೀ ಸೇನೆಯ ಯೋಧರನ್ನು ದ್ರೋಣನಾಗಲೀ ಸ್ವಯಂ ದುರ್ಯೋಧನನಾಗಲೀ ನಿಲ್ಲಿಸಲು

ಶಕ್ಯರಾಗಲಿಲ್ಲ.

## ಕೃಪ-ಕರ್ಣರ ವಿವಾದ

ಪಾಂಡವರ ಮಹಾಸೇನೆಯು ಆ ರೀತಿ ತನ್ನ ಸೇನೆಯನ್ನು ಸೀಳುತ್ತಿರುವುದನ್ನು ನೋಡಿ ಅದನ್ನು ಎದುರಿಸಲು ಸಾಧ್ಯವಾಗಲಾರದೆಂದು ಬಗೆದು ದುರ್ಯೋಧನನು ಕರ್ಣನಿಗೆ ಹೇಳಿದನು:

"ಮಿತ್ರವತ್ಸಲ! ಕರ್ಣ! ಮಿತ್ರರಾದವರು ತಮ್ಮ ಕರ್ತವ್ಯವನ್ನು ನಿರ್ವಹಿಸುವ ಕಾಲವು ಈಗ ಸಂಪ್ರಾಪ್ತವಾಗಿದೆ. ಸಮರದಲ್ಲಿ ಸಂಕ್ರುದ್ಧ ಮಹಾ ಸರ್ಪಗಳಂತೆ ಭುಸುಗುಟ್ಟುತ್ತಿರುವ ಪಾಂಚಾಲ-ಮತ್ಸ್ಯ-ಕೇಕಯ ಮತ್ತು ಪಾಂಡವ ಮಹಾರಥರಿಂದ ಸುತ್ತುವರೆಯಲ್ಪಟ್ಟಿರುವ ಸರ್ವ ಯೋಧರ ಭಯವನ್ನು ಹೋಗಲಾಡಿಸು. ಜಯವನ್ನು ಗಳಿಸಿರುವ ಶಕ್ರನಿಗೆ ಸಮಾನ ಅನೇಕ ಪಾಂಡವ ಮತ್ತು ಪಾಂಚಾಲ ರಥಸೈನಿಕರು ಸಂಹೃಷ್ಟರಾಗಿ ಸಿಂಹನಾದಗೈಯುತ್ತಿದ್ದಾರೆ."

ಕರ್ಣನು ಹೇಳಿದನು:

"ಒಂದು ವೇಳೆ ಪುರಂದರನೇ ಪಾರ್ಥನನ್ನು ರಕ್ಷಿಸಲು ಇಲ್ಲಿಗೆ

ಬಂದರೂ ನಾನು ಆ ಪಾಂಡವನನ್ನು ಸೋಲಿಸಿ ಸಂಹರಿಸುತ್ತೇನೆ. ನಿನಗೆ ಸತ್ಯವನ್ನೇ ತಿಳಿಸುತ್ತಿದ್ದೇನೆ. ಸಮಾಧಾನಹೊಂದು. ಪಾಂಡುತನಯರನ್ನು ಮತ್ತು ಜೊತೆಗೆ ಬಂದಿರುವ ಪಾಂಚಾಲರನ್ನೂ ಸಂಹರಿಸುತ್ತೇನೆ. ಪಾವಕಿ ಷಣ್ಮುಖನು ವಾಸವನಿಗೆ ಜಯವನ್ನು ಒದಗಿಸಿ ಕೊಟ್ಟಂತೆ ನಾನು ನಿನಗೆ ಪ್ರಿಯವಾದುದನ್ನು ಮಾಡುವುದು ನನ್ನ ಕರ್ತವ್ಯವೆಂದು ಭಾವಿಸಿ ಇನ್ನೂ ಜೀವಂತವಿರುವೆನು. ಪಾರ್ಥರೆಲ್ಲರಲ್ಲಿ ಫಲ್ಗುನನೇ ಬಲಶಾಲಿಯು. ಶಕ್ರನಿಂದ ವಿನಿರ್ಮಿತ ಆ ಅಮೋಘ ಶಕ್ತಿಯನ್ನು ಅವನ ಮೇಲೆ ಪ್ರಯೋಗಿಸುತ್ತಿದ್ದೇನೆ. ಆ ಮಹೇಷ್ವಾಸನು ಹತನಾದರೆ ಅವನ ಸಹೋದರರು ನಿನ್ನ ವಶದಲ್ಲಿ ಬರುತ್ತಾರೆ ಮತ್ತು ಪುನಃ ವನಕ್ಕೆ ತೆರಳುತ್ತಾರೆ. ನಾನು ಜೀವಂತವಿರುವವರೆಗೆ ನೀನು ಖಂಡಿತವಾಗಿ ವಿಷಾದಿಸಬೇಕಾಗಿಲ್ಲ. ಸಮರದಲ್ಲಿ ನಾನು ಪಾಂಡವರೆಲ್ಲರನ್ನೂ ಪಾಂಚಾಲ-ಕೇಕಯ-ವೃಷ್ಣಿಗಳೊಂದಿಗೆ ನನ್ನ ಬಾಣ ಸಮೂಹಗಳಿಂದ ತುಂಡು ತುಂಡು ಮಾಡಿ ಈ ಮೇದಿನಿಯನ್ನು ನಿನಗೊಪ್ಪಿಸುತ್ತೇನೆ."

ಹೀಗೆ ಹೇಳುತ್ತಿದ್ದ ಸೂತಪುತ್ರ ಕರ್ಣನಿಗೆ ಮಹಾಬಾಹು ಶಾರದ್ವತ ಕೃಪನು ನಸುನಗುತ್ತಾ ಇದನ್ನು ಹೇಳಿದನು:

“ಕರ್ಣ ! ನಿನ್ನ ಮಾತುಗಳು ತುಂಬಾ ಸೊಗಸಾಗಿವೆ! ಮಾತಿನಿಂದಲೇ ಎಲ್ಲವೂ ಸಿದ್ಧವಾಗುತ್ತದೆಯಾದರೆ ನೀನು ರಕ್ಷಿಸುತ್ತಿರುವುದರಿಂದಲೇ ಕುರುಪುಂಗವನು ರಕ್ಷಿತನಾಗಿದ್ದಾನೆ! ಕೌರವನ ಹತ್ತಿರದಲ್ಲಿ ನೀನು ಕೊಚ್ಚಿಕೊಳ್ಳುತ್ತೀಯೇ ಹೊರತು ನಿನ್ನಲ್ಲಿ ಯಾವುದೇ ರೀತಿಯ ಬಲವಾದರೂ ವಿಕ್ರಮವಾದರೂ ಕಾಣುವುದಿಲ್ಲ. ಯುದ್ಧದಲ್ಲಿ ಅನೇಕಬಾರಿ ನೀನು ಪಾಂಡುಸುತರನ್ನು ಎದುರಿಸಿದುದು ಕಂಡುಬಂದರೂ ಎಲ್ಲ ಬಾರಿಯೂ ನೀನು ಪಾಂಡವರಿಂದ ಪರಾಜಿತನಾಗಿಯೇ ಹಿಂದಿರುಗಿರುವೆ. ಧೃತರಾಷ್ಟ್ರಜನು ಗಂಧರ್ವರಿಂದ ಅಪಹರಿಸಲ್ಪಟ್ಟಾಗ ಸೇನೆಗಳು ಯುದ್ಧಮಾಡುತ್ತಿರಲು ನೀನೊಬ್ಬನೇ ಪಲಾಯನಮಾಡಿದ್ದೆ! ವಿರಾಟನಗರದಲ್ಲಿ ಕೂಡ ಕೌರವರೆಲ್ಲರೂ ಒಟ್ಟಾಗಿ ಪಾರ್ಥನಿಂದ ಸೋಲನ್ನನುಭವಿಸಿದಾಗ ನೀನೂ ಕೂಡ ನಿನ್ನ ಸಹೋದರರೊಂದಿಗೆ ಪರಾಜಿತನಾಗಿದ್ದೆಯಲ್ಲವೇ? ರಣಾಂಗಣದಲ್ಲಿ ಫಲ್ಗುನನೊಬ್ಬನನ್ನೂ ಎದುರಿಸಲು ನೀನು ಅಸಮರ್ಥನಾಗಿರುವಾಗ ಕೃಷ್ಣನೊಂದಿಗೆ ಸರ್ವ ಪಾಂಡವರನ್ನೂ ನೀನು ಹೇಗೆ ಗೆಲ್ಲುತ್ತೀಯೆ? ನೀನು ಬಹಳ ಮಾತನಾಡುವವನು! ನಿನ್ನನ್ನು ನೀನೇ ಹೊಗಳಿಕೊಳ್ಳದೇ

ಯುದ್ಧಮಾಡು! ತನ್ನ ಪರಾಕ್ರಮದ ವಿಷಯವಾಗಿ ಯಾವುದೊಂದು ಮಾತನ್ನೂ ಆಡದೇ ಪರಾಕ್ರಮವನ್ನು ಕೃತಿಯಲ್ಲಿ ತೋರಿಸುವುದೇ ಸತ್ಪುರುಷರ ಮಾರ್ಗ. ಸೂತಪುತ್ರ! ಶರತ್ಕಾಲದ ಮೋಡವು ಗರ್ಜಿಸುವಂತೆ ಗರ್ಜಿಸಿ ನಿಷ್ಫಲನಾಗುತ್ತಿರುವೆ! ಇದನ್ನು ರಾಜನು ತಿಳಿದಿಲ್ಲ! ಎಲ್ಲಿಯವರೆಗೆ ಪಾರ್ಥನನ್ನು ನೀನು ಕಾಣುವುದಿಲ್ಲವೋ ಅಲ್ಲಿಯವರೆಗೆ ನೀನು ಗರ್ಜಿಸುತ್ತಲೇ ಇರುವೆ. ಏಕೆಂದರೆ ಪಾರ್ಥನನ್ನು ನೋಡಿದ ನಂತರ ನಿನಗೆ ಗರ್ಜಿಸಲಾಗುವುದಿಲ್ಲ! ಎಲ್ಲಿಯವರೆಗೆ ಫಲ್ಗುನನ ಆ ಬಾಣಗಳು ನಿನಗೆ ತಾಗುವುದಿಲ್ಲವೋ ಅಲ್ಲಿಯವರೆಗೆ ನೀನು ಗರ್ಜಿಸುತ್ತಿರುವೆ! ಪಾರ್ಥನ ಸಾಯಕಗಳು ತಾಗಿದನಂತರ ನಿನ್ನ ಗರ್ಜನೆಯು ದುರ್ಲಭವಾಗುವುದು. ಕ್ಷತ್ರಿಯರು ಬಾಹುಬಲದಿಂದ ಶೂರರೆನಿಸಿಕೊಳ್ಳುತ್ತಾರೆ. ಬ್ರಾಹ್ಮಣರು ವಾಕ್ಚಾತುರ್ಯದಿಂದ ಶೂರರೆನಿಸಿಕೊಳ್ಳುತ್ತಾರೆ. ಫಲ್ಗುನನು ಧನುರ್ವಿದ್ಯೆಯಲ್ಲಿ ಶೂರನೆನಿಸಿಕೊಂಡಿದ್ದಾನೆ. ಕರ್ಣನು ತನ್ನ ಮನೋರಥಗಳಿಂದ ಶೂರನೆನಿಸಿಕೊಂಡಿದ್ದಾನೆ!”

ಹೀಗೆ ಚುಚ್ಚುಮಾತುಗಳಿಂದ ಶಾರದ್ವತನು ರೇಗಿಸಲು ಕರ್ಣನು ಕೃಪನಿಗೆ ಹೇಳಿದನು:

“ಶೂರರು ಸತತವೂ ಗರ್ಜಿಸುತ್ತಿರುತ್ತಾರೆ ಮತ್ತು ಮೋಡಗಳಂತೆ ಮಳೆಯನ್ನೂ ಸುರಿಸುತ್ತಾರೆ. ಋತುಕಾಲದಲ್ಲಿ ಬಿತ್ತಿದ ಬೀಜವು ಫಲಕೊಡುವಂತೆ ಶೂರರಾದವರು ಫಲವನ್ನು ಕೊಡುತ್ತಾರೆ. ರಣಭೂಮಿಯಲ್ಲಿ ಯುದ್ಧದ ಭಾರವನ್ನು ಹೊತ್ತು ಸಂಹರಿಸುತ್ತಿರುವವರು ತಮ್ಮ ಪರಾಕ್ರಮದ ವಿಷಯವಾಗಿ ಹೇಳಿಕೊಳ್ಳುವ ಶೂರರಲ್ಲಿ ನಾನು ಯಾವುದೇ ರೀತಿಯ ದೋಷವನ್ನು ಕಾಣುವುದಿಲ್ಲ. ಯಾವ ಭಾರವನ್ನು ಹೊರಲು ಮನುಷ್ಯನು ಮನಸತಃ ನಿಶ್ಚಯಿಸುತ್ತಾನೋ ಅದರಲ್ಲಿ ದೈವವು ಅವನಿಗೆ ಸಹಾಯಮಾಡುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಈ ಕಾರ್ಯಭಾರವನ್ನು ವಹಿಸಿಕೊಳ್ಳಲು ನಾನು ಮನಸಾರೆ ನಿಶ್ಚಯಿಸಿದ್ದೇನೆ. ಅದರ ಕಾರ್ಯಸಿದ್ಧಿಯು ಎರಡನೆಯ ವಿಷಯ. ಒಂದುವೇಳೇ ನಾನು ಗರ್ಜಿಸಿದರೆ ಅದರಲ್ಲಿ ನಿಮಗೇನು ನಷ್ಟ? ಶೂರರು ಸುಮ್ಮ ಸುಮ್ಮನೇ ಗರ್ಜಿಸುವುದಿಲ್ಲ. ಮಳೆಯಿಂದ ತುಂಬಿರುವ ಮೋಡಗಳಂತೆ ಪಂಡಿತರು ತಮ್ಮ ಸಾಮರ್ಥ್ಯವನ್ನು ತಿಳಿದೇ ಗರ್ಜಸುತ್ತಾರೆ. ರಣಭೂಮಿಯಲ್ಲಿ ಜಯಿಸಲು ಉತ್ಸುಕರಾಗಿ ಒಟ್ಟಾಗಿ ಪ್ರಯತ್ನಿಸುತ್ತಿರುವ ಕೃಷ್ಣ-ಪಾಂಡವರನ್ನು ಜಯಿಸಲು ನಾನು

ಮನಸ್ಸಿನಿಂದಲೇ ಉತ್ಸಾಹಿತನಾಗಿ ಗರ್ಜಿಸುತ್ತಿದ್ದೇನೆ. ಈ ಗರ್ಜನೆಯ ಫಲವನ್ನು ನೀನೇ ನೋಡುವಿಯಂತೆ! ಇಂದು ನಾನು ಅನುಗರೊಂದಿಗೆ ಪಾಂಡುಸುತರನ್ನು, ಕೃಷ್ಣನೂ ಸೇರಿಕೊಂಡು ಮತ್ತು ಸಾತ್ವತರನ್ನೂ ಸೇರಿಕೊಂಡು ಸಂಹರಿಸಿ ಕಂಟಕರಹಿತ ಈ ಪೃಥ್ವಿಯನ್ನು ದುರ್ಯೋಧನನಿಗೆ ಕೊಡುತ್ತೇನೆ!”

ಕೃಪನು ಹೇಳಿದನು:

“ಸೂತಜ! ನಿನ್ನ ಈ ಮನೋರಥಪ್ರಲಾಪವು ನನಗೆ ಸ್ವಲ್ಪವೂ ಹಿಡಿಸುವುದಿಲ್ಲ. ನೀನು ಸದಾ ಕೃಷ್ಣಾರ್ಜುನರನ್ನೂ ಪಾಂಡವ ಧರ್ಮರಾಜನನ್ನೂ ನಿಂದಿಸುತ್ತಿರುತ್ತೀಯೆ. ಎಲ್ಲಿ ಯುದ್ಧವಿಶಾರದ ಕೃಷ್ಣ-ಪಾಂಡವರಿರುವರೋ ಅಲ್ಲಿಗೇ ಜಯವು ನಿಶ್ಚಿತವಾದುದು. ಇವರಿಬ್ಬರೂ ರಣದಲ್ಲಿ ಕವಚಧಾರಿಗಳಾದ ದೇವ-ಗಂಧರ್ವ-ಯಕ್ಷ-ಮನುಷ್ಯ-ಉರಗ-ರಾಕ್ಷಸರಿಗೂ ಅಜೇಯರು. ಧರ್ಮಪುತ್ರ ಯುಧಿಷ್ಠಿರನಾದರೋ ಬ್ರಹ್ಮಣ್ಯ, ಸತ್ಯವಾಗ್ಮಿ, ಜಿತೇಂದ್ರಿಯ, ಗುರು-ದೇವತೆಗಳನ್ನು ಪೂಜಿಸುವವನು. ನಿತ್ಯವೂ ಧರ್ಮನಿರತನಾಗಿರುವವನು. ವಿಶೇಷವಾಗಿ ಅಸ್ತ್ರಗಳಲ್ಲಿ ಪರಿಣಿತನೂ ಹೌದು. ಅವನು

ಧೃತಿವಂತ ಮತ್ತು ಕೃತಜ್ಞ. ಅವನ ಅನುಜರೂ ಕೂಡ ಬಲಶಾಲಿಗಳು. ಸರ್ವ ಶಸ್ತ್ರಗಳಲ್ಲಿ ಪಳಗಿದವರು. ಗುರುಸೇವೆಯಲ್ಲಿ ನಿರತರಾದವರು. ಪ್ರಾಜ್ಞರು. ಧರ್ಮನಿರತರು ಮತ್ತು ಯಶಸ್ವಿಗಳು ಕೂಡ. ಇವನ ಸಂಬಂಧಿಗಳೂ ವೀರ್ಯದಲ್ಲಿ ಇಂದ್ರನ ಸಮಾನರು. ಇವನಲ್ಲಿ ವಿಶೇಷ ಅನುರಾಗವನ್ನು ಹೊಂದಿದವರು. ಪ್ರಹಾರಿಗಳು. ಧೃಷ್ಟದ್ಯುಮ್ನ, ಶಿಖಂಡೀ, ದೌರ್ಮುಖೀ, ಜನಮೇಜಯ, ಚಂದ್ರಸೇನ, ಭದ್ರಸೇನ, ಕೀರ್ತಿಧರ್ಮ, ಧ್ರುವ, ಧರ, ವಸುಚಂದ್ರ, ದಾಮಚಂದ್ರ, ಸಿಂಹಚಂದ್ರ, ಸುವೇಧನ ಮೊದಲಾದ ದ್ರುಪದನ ಪುತ್ರರು ಮತ್ತು ಮಹಾಸ್ತ್ರವಿದು ದ್ರುಪದ ಇವರೆಲ್ಲರೂ ಮತ್ತು ಅನುಯಾಯಿಗಳೊಂದಿಗೆ ಮತ್ಸ್ಯರಾಜ ಇವರು ಯುಧಿಷ್ಠಿರನಿಗಾಗಿ ಒಂದಾಗಿದ್ದಾರೆ. ಶತಾನೀಕ, ಸುದರ್ಶನ, ಶ್ರುತಾನೀಕ, ಶ್ರುತಧ್ವಜ, ಬಲಾನೀಕ, ಜಯಾನೀಕ, ಜಯಾಶ್ವ, ರಥವಾಹನ, ಚಂದ್ರೋದಯ, ಕಾಮರಥ ಇವರು ವಿರಾಟನ ಶುಭ ಸಹೋದರರು. ಯಮಳರು, ದ್ರೌಪದೇಯರು, ಮತ್ತು ರಾಕ್ಷಸ ಘಟೋತ್ಕಚ ಇವರು ಕೂಡ ಯುಧಿಷ್ಠಿರನ ಸಲುವಾಗಿ ಯುದ್ಧಮಾಡುತ್ತಿದ್ದಾರೆ. ಇವರನ್ನು ಸಂಹರಿಸುವ ರೀತಿಯು

ತಿಳಿದಿಲ್ಲ. ಭೀಮ-ಫಲ್ಗುನರು ಬಯಸಿದರೆ ತಮ್ಮ ಅಸ್ತ್ರವೀರ್ಯದಿಂದ ದೇವ-ಅಸುರ-ಮಾನವ-ಯಕ್ಷ-ರಾಕ್ಷಸಗಣಗಳಿಂದ ಕೂಡಿರುವ ಇರುವ ಸರ್ಪಗಳು ಆನೆಗಳೊಂಡಿಗೆ ಇಡೀ ಜಗತ್ತೆಲ್ಲವನ್ನೂ ನಿಃಶೇಷವನ್ನಾಗಿ ಮಾಡಬಲ್ಲರು. ಯುಧಿಷ್ಠಿರನಾದರೋ ತನ್ನ ಘೋರ ದೃಷ್ಟಿಯಿಂದಲೇ ಈ ಭೂಮಿಯನ್ನು ಸುಡಬಲ್ಲನು. ಯಾರ ರಕ್ಷಣೆಗೆಂದು ಅಪ್ರಮೇಯಬಲಶಾಲಿ ಶೌರಿಯೇ ಇರುವನೋ ಅಂಥಹ ಶತ್ರುಗಳನ್ನು ನೀನು ರಣದಲ್ಲಿ ಹೇಗೆ ಗೆಲ್ಲಬಲ್ಲೆ? ಸಮರದಲ್ಲಿ ಶೌರಿಯೊಡನೆ ಯುದ್ಧಮಾಡುತ್ತೇನೆಂದು ನೀನು ನಿತ್ಯವೂ ತೋರಿಸಿಕೊಂಡು ಬಂದಿರುವ ಉತ್ಸಾಹವೇ ನೀನು ಮಾಡುತ್ತಿರುವ ದೊಡ್ಡ ತಪ್ಪು!”

ಇದನ್ನು ಕೇಳೀ ರಾಧೇಯ ಕರ್ಣನು ಜೋರಾಗಿ ನಗುತ್ತಾ ಗುರು ಶಾರದ್ವತ ಕೃಪನಿಗೆ ಹೇಳಿದನು:

“ಬ್ರಹ್ಮನ್! ಪಾಂಡವರ ಕುರಿತಾಗಿ ನೀನು ಏನು ಮಾತನಾಡುತ್ತಿರುವೆಯೋ ಅದು ಸತ್ಯವೇ ಆಗಿದೆ. ಇವಲ್ಲದೇ ಇನ್ನೂ ಅನೇಕ ಗುಣಗಳು ಪಾಂಡುಸುತರಲ್ಲಿ ಇವೆ ತಾನೇ? ದೈತ್ಯ-ಯಕ್ಷ-ಗಂಧರ್ವ-ಪಿಶಾಚ-ಉರಗ-ರಾಕ್ಷಸರು ಮತ್ತು

ವಾಸವನನ್ನು ಕೂಡಿ ಬಂದ ದೇವತೆಗಳಿಗೂ ಪಾರ್ಥರು ರಣದಲ್ಲಿ ಅಜೇಯರು. ಹಾಗಿದ್ದರೂ ಕೂಡ ನಾನು ವಾಸವನು ನೀಡಿರುವ ಶಕ್ತಿಯಿಂದ ಪಾರ್ಥನನ್ನು ಗೆಲ್ಲುತ್ತೇನೆ. ಶಕ್ರನು ನನಗೆ ಕೊಟ್ಟಿರುವ ಆ ಅಮೋಘ ಶಕ್ತಿಯಿಂದ ನಾನು ರಣದಲ್ಲಿ ಸವ್ಯಸಾಚಿಯನ್ನು ಸಂಹರಿಸುತ್ತೇನೆ. ಪಾಂಡವ ಕೃಷ್ಣನು ಹತನಾದನೆಂದರೆ ಅವನ ಅಣ್ಣಂದಿರು ಮತ್ತು ತಮ್ಮಂದಿರು ಅರ್ಜುನನಿಲ್ಲದೇ ಈ ಭೂಮಿಯನ್ನು ಭೋಗಿಸಲು ಶಕ್ಯರಾಗುವುದಿಲ್ಲ. ಅವರೆಲ್ಲರೂ ನಷ್ಟರಾಗಲು ಸಾಗರದೊಂದಿನ ಈ ಪೃಥ್ವಿಯು ಏನೂ ಪ್ರಯತ್ನಮಾಡದೇ ಕೌರವನ ವಶದಲ್ಲಿ ಬರುತ್ತದೆ. ಉತ್ತಮ ಉಪಾಯವು ಸರ್ವ ಉದ್ದೇಶಗಳನ್ನೂ ಸಿದ್ಧಿಗೊಳಿಸುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಇದರ ಅರ್ಥವನ್ನು ತಿಳಿದೇ ನಾನು ಗರ್ಜಿಸುತ್ತಿದ್ದೇನೆ. ನೀನಾದರೋ ಬ್ರಾಹ್ಮಣ! ಅದರಲ್ಲೂ ಮುದಿಬ್ರಾಹ್ಮಣ! ಯುದ್ಧಮಾಡಲು ಅಶಕ್ತನಾಗಿರುವೆ. ಪಾರ್ಥರೊಂದಿಗೆ ವಿಶೇಷವಾದ ಸ್ನೇಹವನ್ನಿಟ್ಟುಕೊಂಡಿರುವ ನೀನು ಮೋಹಗೊಂಡು ನನ್ನನ್ನು ಅಪಮಾನಿಸುತ್ತಿರುವೆ. ದುರ್ಮತಿ ದ್ವಿಜನೇ! ಇನ್ನೊಮ್ಮೆ ನೀನೇನಾದಾರೂ ನನಗೆ ಅಪ್ರಿಯವಾಗಿ ಈ ರೀತಿ ಮಾತನಾಡಿದರೆ ಖಡ್ಗವನ್ನೆತ್ತಿ ನಿನ್ನ

ನಾಲಿಗೆಯನ್ನು ಕತ್ತರಿಸುತ್ತೇನೆ. ಸಂಯುಗದಲ್ಲಿ ಕೌರವರ ಸರ್ವ ಸೇನೆಗಳನ್ನೂ ಹೆದರಿಸುತ್ತಾ ಪಾಂಡವರನ್ನು ಪ್ರಶಂಸಿಸಲು ಬಯಸುತ್ತಿರುವೆ. ಈ ವಿಷಯದಲ್ಲಿ ಕೆಲವೊಂದನ್ನು ಯಥಾವತ್ತಾಗಿ ಹೇಳುತ್ತೇನೆ. ಕೇಳು. ದುರ್ಯೋಧನ, ದ್ರೋಣ, ಶಕುನಿ, ದುರ್ಮುಖ, ಜಯ, ದುಃಶಾಸನ, ವೃಷಸೇನ, ಮದ್ರರಾಜ, ಮತ್ತು ನೀನು, ಸೋಮದತ್ತ, ಭೂರಿ, ದ್ರೌಣಿ, ವಿವಿಂಶತಿ, ಇವರೆಲ್ಲ ಯುದ್ಧವಿಶಾರದರೂ ಕವಚಗಳನ್ನು ಧರಿಸಿ ನಿಂತಿರುವಾಗ ಶಕ್ರನಿಗೂ ಸಮ ಬಲಶಾಲಿ ಯಾವ ಶತ್ರುವು ತಾನೇ ರಣದಲ್ಲಿ ನಮ್ಮನ್ನು ಜಯಿಸಿಯಾನು? ಇವರು ಶೂರರು. ಅಸ್ತ್ರವಿದರು. ಬಲಶಾಲಿಗಳು. ಸ್ವರ್ಗಾಭಿಲಾಷಿಗಳು. ಧರ್ಮಜ್ಞರು. ಯುದ್ಧಕುಶಲರು. ಯುದ್ಧದಲ್ಲಿ ಸುರರನ್ನೂ ಸಂಹರಿಸಬಲ್ಲರು. ಇವರೆಲ್ಲರೂ ಕೌರವೇಯನ ಜಯವನ್ನು ಬಯಸಿ ಪಾಂಡವರನ್ನು ವಧಿಸುವ ಸಲುವಾಗಿ ಕವಚಗಳನ್ನು ಧರಿಸಿ ಸಂಗ್ರಾಮದಲ್ಲಿ ನಿಂತಿದ್ದಾರೆ. ಭೀಷ್ಮನಂತಹ ಮಹಾಬಾಹುವೇ ನೂರಾರು ಬಾಣಗಳಿಂದ ಚುಚ್ಚಲ್ಪಟ್ಟವನಾಗಿ ಮಲಗಿದ್ದಾನೆಂದರೆ ಮಹಾಬಲಶಾಲಿಗಳಿಗೂ ಜಯವೆನ್ನುವುದು ದೈವದತ್ತವಾದುದು ಎಂದು ನನಗನ್ನಿಸುತ್ತದೆ. ವಿಕರ್ಣ,

ಚಿತ್ರಸೇನ, ಬಾಹ್ಲೀಕ, ಜಯದ್ರಥ, ಭೂರಿಶ್ರವ, ಜಯ, ಜಲಸಂಧ, ಸುದಕ್ಷಿಣ, ಶಲ, ಭಗದತ್ತ ಇವರು ಮತ್ತು ಅನ್ಯ ರಾಜರುಗಳು ದೇವತೆಗಳಿಗೂ ಗೆಲ್ಲಲಸಾಧ್ಯರಾಗಿದ್ದರು. ಪಾಂಡವರಿಗಿಂತಲೂ ಬಲಶಾಲಿಗಳಾದ ಈ ಶೂರರು ಸಮರದಲ್ಲಿ ಹತರಾದರು. ಇದು ದೈವ ಸಂಯೋಗವಲ್ಲದೇ ಮತ್ತೇನು? ನೀನು ಪ್ರಶಂಸಿಸುತ್ತಿರುವ ದುರ್ಯೋಧನನ ಶತ್ರುಗಳಲ್ಲಿಯೂ ಕೂಡ ನೂರಾರು ಸಹಸ್ರಾರು ಶೂರರು ಹತರಾಗಿದ್ದಾರೆ. ಕುರುಗಳ ಮತ್ತು ಪಾಂಡವರ ಎಲ್ಲ ಸೈನ್ಯಗಳೂ ಒಟ್ಟಿಗೇ ನಶಿಸುತ್ತಿವೆ. ಇದರಲ್ಲಿ ಪಾಂಡವರ ವಿಶೇಷ ಪ್ರಭಾವ ಯಾವುದನ್ನೂ ನಾನು ಕಾಣುತ್ತಿಲ್ಲ. ದ್ವಿಜಾಧಮ! ದುರ್ಯೋಧನನ ಹಿತಕ್ಕಾಗಿ ಯಾರನ್ನು ನೀನು ಎಲ್ಲರಿಗಿಂತಲೂ ಬಲವಂತರೆಂದು ಭಾವಿಸಿರುವೆಯೋ ಅವರೊಡನೆ ಯಥಾಶಕ್ತಿಯಾಗಿ ರಣದಲ್ಲಿ ಯುದ್ಧಮಾಡಲು ಪ್ರಯತ್ನಿಸುತ್ತೇನೆ. ಜಯವು ದೈವಾಧೀನವಾಗಿದೆ!”

ಸೂತಪುತ್ರನು ಹಾಗೆ ಮಾವನೊಡನೆ ಕಟುವಾದ ಮಾತನಾಡಿದುದನ್ನು ನೋಡಿ ದ್ರೌಣಿಯು ಖಡ್ಗವನ್ನು ಎತ್ತಿಕೊಂಡು ವೇಗವಾಗಿ ಅಲ್ಲಿಗೆ ಧಾವಿಸಿಬಂದನು. ಅಶ್ವತ್ಥಾಮನು ಹೇಳಿದನು:

> “ಸುದುರ್ಬುದ್ಧೇ! ಕರ್ಣ! ಸ್ವಲ್ಪ ನಿಲ್ಲು! ನಿನ್ನ ಶಿರಸ್ಸನ್ನು ಈಗಲೇ ನಾನು ಶರೀರದಿಂದ ಹಾರಿಸಿಬಿಡುತ್ತೇನೆ!”

ಹೀಗೆ ವೇಗದಿಂದ ಮೇಲೆ ಬೀಳುತ್ತಿರುವ ಅಶ್ವತ್ಥಾಮನನ್ನು ಸ್ವಯಂ ರಾಜಾ ದುರ್ಯೋಧನ ಮತ್ತು ಕೃಪರು ತಡೆದರು. ಕರ್ಣನು ಹೇಳಿದನು:

> “ಕುರುಸತ್ತಮ! ಇವನು ಶೂರ. ಸಮರಶ್ಲಾಘೀ. ದುರ್ಮತಿ ಮತ್ತು ದ್ವಿಜಾಧಮ. ನನ್ನ ವೀರ್ಯವನ್ನು ಎದುರಿಸಲಿ. ಇವನನ್ನು ಬಿಟ್ಟುಬಿಡು!”

ಅಶ್ವತ್ಥಾಮನು ಹೇಳಿದನು:

> “ಸುದುರ್ಮತೇ! ಸೂತಾತ್ಮಜ! ನಿನ್ನ ಈ ಅಪರಾಧವನ್ನು ಕ್ಷಮಿಸುತ್ತೇನೆ. ಆದರೆ ನಿನ್ನ ದರ್ಪ ಉತ್ಸಾಹವನ್ನು ಫಲ್ಗುನನು ನಾಶಗೊಳಿಸುತ್ತಾನೆ ಎನ್ನುವುದನ್ನು ನೆನಪಿನಲ್ಲಿಟ್ಟುಕೋ!”

ದುರ್ಯೋಧನನು ಹೇಳಿದನು:

> “ಅಶ್ವತ್ಥಾಮ! ಮಾನದ! ಶಾಂತನಾಗು. ಕ್ಷಮಿಸಬೇಕು. ಸೂತಪುತ್ರನೊಡನೆ ಎಂದೂ ಕೋಪಗೊಳ್ಳಬೇಡ! ನೀನು, ಕರ್ಣ, ಕೃಪ, ದ್ರೋಣ, ಮದ್ರರಾಜ ಮತ್ತು ಸೌಬಲರ ಮೇಲೆ

> ಮಹಾ ಕಾರ್ಯವನ್ನು ವಹಿಸಿದ್ದೇನೆ. ಪ್ರಯತ್ನಮಾಡಿ! ಸಮಾಧಾನಗೊಳ್ಳು ದ್ವಿಜಸತ್ತಮ! ನಮ್ಮ ಮುಂದಿರುವ ಪಾಂಡವರು ಎಲ್ಲರೂ ರಾಧೇಯನೊಡನೆ ಯುದ್ಧಮಾಡಲೋಸುಗ ಬರುತ್ತಿದ್ದಾರೆ. ಎಲ್ಲ ಕಡೆಗಳಿಂದ ಯುದ್ಧಕ್ಕೆ ಕರೆಯುತ್ತಿದ್ದಾರೆ.”

ರಥಿಗಳಲ್ಲಿ ಶ್ರೇಷ್ಠ ವೀರ್ಯವಾನ್ ಕರ್ಣನೂ ಕೂಡ ದೇವಗಣಗಳಿಂದ ಪರಿವೃತ ಶಕ್ರನಂತೆ ಕೌರವ ಮುಖ್ಯರಿಂದ ಪರಿವೃತನಾಗಿ ತನ್ನ ಬಾಹುಬಲವನ್ನು ಆಶ್ರಯಿಸಿ ತೇಜಸ್ವಿಯಾಗಿ ಯುದ್ಧಕ್ಕೆ ನಿಂತನು. ಆಗ ಪಾಂಡವರೊಡನೆ ಕರ್ಣನ ಸಿಂಹನಾದಗಳಿಂದ ಕೂಡಿದ ಭಯಂಕರ ಯುದ್ಧವು ಪ್ರಾರಂಭವಾಯಿತು.

## ಅರ್ಜುನ-ಕರ್ಣರ ಯುದ್ಧ

ಆಗ ಆ ಪಾಂಡವರು ಮತ್ತು ಯಶಸ್ವಿ ಪಾಂಚಾಲರು ಮಹಾಬಾಹು ಕರ್ಣನನ್ನು ನೋಡಿ “ಇವನೇ ಕರ್ಣ!”, “ಕರ್ಣನೆಲ್ಲಿದ್ದಾನೆ?”, “ಕರ್ಣ! ಮಹಾರಣದಲ್ಲಿ ನಿಲ್ಲು! ದುರಾತ್ಮನ್! ಪುರುಷಾಧಮ! ನಮ್ಮೊಡನೆ ಯುದ್ಧಮಾಡು!“ ಎಂದು ಉಚ್ಛ ಸ್ವರಗಳಲ್ಲಿ ಕೂಗಿದರು. ಮತ್ತೆ ಕೆಲವರು ರಾಧೇಯನನ್ನು ನೋಡಿ ಕ್ರೋಧದಿಂದ ಕೆಂಗಣ್ಣರಾಗಿ ಹೇಳಿದರು:

“ದುರಹಂಕಾರದಿಂದ ಮೆರೆಯುತ್ತಿರುವ ಈ ಅಲ್ಪಚೇತನ ಸೂತಪುತ್ರನನ್ನು ಸಂಹರಿಸಿರಿ! ಇವನು ಬದುಕಿರುವುದರಿಂದ ಯಾವ ಪ್ರಯೋಜನವೂ ಇಲ್ಲ. ಎಲ್ಲ ಪಾರ್ಥಿವಶಾರ್ದೂಲರಿಗಿಂತ ಈ ಪಾಪಪುರುಷನೇ ಸತತವೂ ಪಾರ್ಥರ ವೈರಿಯಾಗಿರುವವನು. ದುರ್ಯೋಧನನ ಮನಸ್ಸಿನಂತೆ ನಡೆದುಕೊಳ್ಳುತ್ತಿರುವ ಇವನೇ ಎಲ್ಲ ಅನರ್ಥಗಳಿಗೂ ಮೂಲ ಕಾರಣನಾಗಿದ್ದಾನೆ. ಇವನನ್ನು ಕೊಲ್ಲಿರಿ!”

ಎಂದು ಮಾತನಾಡಿಕೊಳ್ಳುತ್ತಾ ಕ್ಷತ್ರಿಯರು ಆಕ್ರಮಿಸಿದರು.

ಪಾಂಡವೇಯರಿಂದ ಪ್ರಚೋದಿತರಾಗಿ ಸೂತಪುತ್ರನನ್ನು ವಧಿಸುವ ಸಲುವಾಗಿ ಆ ಮಹಾರಥರು ಅವನನ್ನು ಮಹಾ ಶರವರ್ಷಗಳಿಂದ ಮುಚ್ಚಿಬಿಟ್ಟರು. ತನ್ನ ಕಡೆಗೆ ರಭಸದಿಂದ ಬರುತ್ತಿದ್ದ ಆ ಮಹಾರಥರೆಲ್ಲರನ್ನು ನೋಡಿ ಸೂತಪುತ್ರನು ವ್ಯಥಿತನಾಗಲಿಲ್ಲ, ಭಯಪಡಲೂ ಇಲ್ಲ. ನಗರದಂತೆ ಉಕ್ಕಿಬರುತ್ತಿರುವ ಆ ಸೈನ್ಯಸಾಗರವನ್ನು ನೋಡಿ ಸಂಗ್ರಾಮಗಳಲ್ಲಿ ಅಪರಾಜಿತ ಮಹಾಬಲ ಬಲವಾನ್ ಕ್ಷಿಪ್ರಕಾರೀ ಕರ್ಣನು ಸಾಯಕಗಳ ಗಣಗಳಿಂದ ಆ ಸೇನೆಯನ್ನು ಎಲ್ಲ ಕಡೆಗಳಿಂದಲೂ ತಡೆದು ನಿಲ್ಲಿಸಿದನು.

ಆಗ ಪಾರ್ಥಿವರು ಶರವರ್ಷಗಳಿಂದ ನೂರಾರು ಸಹಸ್ರಾರು ಧನುಸ್ಸುಗಳನ್ನು ಸೆಳೆಯುತ್ತಾ ತಡೆದು ದೈತ್ಯಗಣಗಳು ಶಕ್ರನನ್ನು ಹೇಗೋ ಹಾಗೆ ರಾಧೇಯನೊಡನೆ ಯುದ್ಧಮಾಡಿದರು. ಪಾರ್ಥಿವರು ಸುರಿಸುತ್ತಿದ್ದ ಆ ಶರವರ್ಷಗಳನ್ನು ಕರ್ಣನು ಮಹಾ ಶರವರ್ಷದಿಂದಲೇ ಎಲ್ಲಕಡೆಗಳಲ್ಲಿ ನಿವಾರಿಸಿದನು. ಮಾಡಿದುದಕ್ಕೆ ಪ್ರತಿಯಾಗಿ ಮಾಡುವುದರಲ್ಲಿ ತೊಡಗಿದ ಅವರಿಬ್ಬರ ನಡುವೆ ದೇವಾಸುರರ ಯುದ್ಧದಲ್ಲಿ ದಾನವರೊಂದಿಗೆ ಶಕ್ರನ ಯುದ್ಧದಂತೆ ಯುದ್ಧವು ನಡೆಯಿತು. ಅಲ್ಲಿ ಸೂತಪುತ್ರನ ಹಸ್ತಲಾಘವದ ಅದ್ಭುತವನ್ನು ಕಂಡಿತು. ಸಮರದಲ್ಲಿ ಶತ್ರುಗಳು ಪ್ರಯತ್ನಿಸಿದರೂ ಅವನ ಹತ್ತಿರಹೋಗಲು ಶಕ್ತರಾಗಲಿಲ್ಲ. ಪಾರ್ಥಿವರ ಶರೌಘಗಳನ್ನು ತಡೆಯುತ್ತಾ ಮಹಾರಥ ರಾಧೇಯನು ತನ್ನ ನಾಮಾಂಕಿತ ಬಾಣಗಳನ್ನು ರಥದ ನೊಗಗಳ ಮೇಲೆ, ಚತ್ರಗಳ ಮೇಲೆ, ಧ್ವಜಗಳ ಮೇಲೆ ಮತ್ತು ಕುದುರೆಗಳ ಮೇಲೆ ಪ್ರಯೋಗಿಸಿದನು. ಕರ್ಣನಿಂದ ಪೀಡಿತ ರಾಜರು ವ್ಯಾಕುಲರಾಗಿ ಛಳಿಯಿಂದ ಪೀಡಿತ ಗೋವುಗಳಂತೆ ಅಲ್ಲಿಂದಿಲ್ಲಿಗೆ ಭ್ರಮಿಸತೊಡಗಿದರು. ಕರ್ಣನಿಂದ ವಧೆಗೊಂಡು ಉರುಳಿಸಲ್ಪಟ್ಟ ಕುದುರೆ-ಆನೆ-ರಥಗಳ ಗುಂಪುಗಳು ಅಲ್ಲಲ್ಲಿ ಕಾಣುತ್ತಿದ್ದವು. ಯುದ್ಧದಲ್ಲಿ ಹಿಂದಿರುಗದೇ ಹತರಾಗಿ ಬಿದ್ದಿದ್ದ ಶೂರರ ತಲೆಗಳಿಂದಲೂ ತೋಳುಗಳಿಂದಲೂ ರಣಾಂಗಣವು ವ್ಯಾಪ್ತವಾಗಿತ್ತು. ಸತ್ತವರಿಂದಲೂ

ಸಾಯುತ್ತಿರುವವರಿಂದಲೂ ಗಾಯಗೊಂಡು ಸಂಕಟಪಡುತ್ತಿರುವವರಿಂದಲೂ ಕೂಡಿದ್ದ ಆ ರಣಭೂಮಿಯು ಯಮರಾಜನ ಪಟ್ಟಣದಂತೆ ಬಹಳ ಭಯಂಕರವಾಗಿ ಕಾಣುತ್ತಿದ್ದಿತು.

ಕರ್ಣನ ಆ ವಿಕ್ರಮವನ್ನು ಕಂಡು ರಾಜಾ ದುರ್ಯೋಧನನು ಅಶ್ವತ್ಥಾಮನ ಬಳಿಸಾರಿ ಇಂತೆಂದನು:

> "ಇಗೋ ಕರ್ಣನು ಕವಚವನ್ನು ಧರಿಸಿ ಸರ್ವ ರಾಜರೊಂದಿಗೆ ರಣದಲ್ಲಿ ಯುದ್ಧಮಾಡುತ್ತಿದ್ದಾನೆ! ಕಾರ್ತಿಕೇಯನಿಂದ ಧ್ವಂಸಿತ ಅಸುರೀ ಸೇನೆಯು ಪಲಾಯನ ಮಾಡುವಂತೆ ಕರ್ಣನ ಸಾಯಕಗಳಿಂದ ಪೀಡಿತ ಸೇನೆಯು ಓಡಿಹೋಗುತ್ತಿರುವುದನ್ನು ನೋಡು! ಧೀಮತ ಕರ್ಣನಿಂದ ರಣದಲ್ಲಿ ಸೇನೆಯು ಈ ರೀತಿ ಸೋತುಹೋಗುತ್ತಿರುವುದನ್ನು ನೋಡಿ ಸೂತಪುತ್ರನನ್ನು ಕೊಲ್ಲಲು ಬಯಸಿ ಬೀಭತ್ಸುವು ಬರುತ್ತಿರಬಹುದು. ಯುದ್ಧದಲ್ಲಿ ನಾವು ನೋಡುತ್ತಿರುವಾಗಲೇ ಮಹಾರಥ ಸೂತಪುತ್ರನನ್ನು ಪಾಂಡವನು ಕೊಲ್ಲದ ರೀತಿಯಲ್ಲಿ ಯುದ್ಧ ನೀತಿಯು ರೂಪಿಸಲ್ಪಡಲಿ!"

ಕೂಡಲೇ ದ್ರೌಣಿ, ಕೃಪ, ಶಲ್ಯ, ಮತ್ತು ಹಾರ್ದಿಕ್ಯರು ಸೂತಪುತ್ರನನ್ನು ರಕ್ಷಿಸಲೋಸುಗ ಪಾರ್ಥನೊಡನೆ ಯುದ್ಧಮಾಡತೊಡಗಿದರು.

ದೇವಸೇನೆಯಮೇಲೆ ಆಕ್ರಮಣಿಸುತ್ತಿರುವ ವೃತ್ರನನ್ನು ಶಕ್ರನು ಹೇಗೋ ಹಾಗೆ ಪ್ರತಾಪವಾನ್ ಕರ್ಣನೂ ಕೂಡ ಮುಂದೆ ಬರುತ್ತಿರುವ ಕೌಂತೇಯನೊಡನೆ ಯುದ್ಧಮಾಡತೊಡಗಿದನು.

ಒಂದು ಸಲಗವು ಮತ್ತೊಂದು ಸಲಗವನ್ನು ಎದುರಿಸಲು ಹೋಗುವಂತೆ ತನ್ನ ಕಡೆಗೆ ಬರುತ್ತಿದ್ದ ಪಾಂಡವನನ್ನು ಕಂಡು ಕರ್ಣನು ಸ್ವಲ್ಪವೂ ಗಾಬರಿಗೊಳ್ಳದೇ ಧನಂಜಯನ ಮೇಲೆ ಎರಗಿದನು. ತೇಜಸ್ವೀ ಶತ್ರುತಾಪನ ಪಾಂಡವನು ವೇಗದಿಂದ ತನ್ನಮೇಲೆ ಬೀಳುತ್ತಿದ್ದ ವೈಕರ್ತನನನ್ನು ಜಿಹ್ಮಗಗಳಿಂದ ತಡೆದನು. ಕರ್ಣನು ಅವನನ್ನು ಶರಜಾಲಗಳಿಂದ ಮುಚ್ಚಿಬಿಟ್ಟನು ಮತ್ತು ಸಂಕ್ರುದ್ಧನಾಗಿ ಮೂರು ಜಿಹ್ಮಗಗಳಿಂದ ಹೊಡೆದನು. ಅವನ ಆ ಹಸ್ತಲಾಘವವನ್ನು ಮಹಾಬಲ ಪಾರ್ಥನು ಸಹಿಸಿಕೊಳ್ಳಲಿಲ್ಲ. ಆ ಶತ್ರುತಾಪನನು ಸೂತಪುತ್ರನ ಮೇಲೆ ಮೊನಚಾದ ತುದಿಗಳುಳ್ಳ, ಕಲ್ಲಿನಮೇಲೆ ಮಸೆದ ಮುನ್ನೂರು ಜಿಹ್ಮಗ ಬಾಣಗಳನ್ನು ಪ್ರಯೋಗಿಸಿದನು.  ಕುಪಿತನಾಗಿ ವೀರ್ಯವಾನ್ ಅರ್ಜುನನು ನಸುನಗುತ್ತಾ ಒಂದೇ ಬಾಣದಿಂದ ಅವನ ಎಡಭುಜಕ್ಕೆ ಬಲವನ್ನುಪಯೋಗಿಸಿ ಹೊಡೆದನು. ವೇಗವಾಗಿ ಗಾಯಗೊಂಡ ಅವನ ಕೈಯಿಂದ ಧನುಸ್ಸು ಕಳಚಿ ಬಿದ್ದಿತು. ಆ ಚಾಪವನ್ನು ಪುನಃ ತೆಗೆದುಕೊಂಡು ಮಹಾಬಲನು ಸಿದ್ಧಹಸ್ತನಂತೆ ಬಾಣಗಳ ಸಮೂಹಗಳಿಂದ ಫಲ್ಗುನನನ್ನು ಮುಚ್ಚಿದನು. ಧನಂಜಯನು

ನಸುನಗುತ್ತಲೇ ಶರವರ್ಷಗಳಿಂದ ಸೂತಪುತ್ರನ ಶರವೃಷ್ಟಿಯನ್ನು ನಿರಸನಗೊಳಿಸಿದನು. ಶರವರ್ಷಗಳಿಂದ ಪರಸ್ಪರರನ್ನು ಮುಚ್ಚುತ್ತಾ ಆ ಮಹೇಷ್ವಾಸರು ಮಾಡಿದುದಕ್ಕೆ ಪ್ರತಿಯಾಗಿ ಮಾಡಲು ತೊಡಗಿದರು. ಕಾವಿಗೆ ಬಂದ ಹೆಣ್ಣಾನೆಯ ಸಲುವಾಗಿ ಎರಡು ಸಲಗಗಳ ನಡುವೆ ಹೇಗೋ ಹಾಗೆ ಕ್ರುದ್ಧ ಕರ್ಣ-ಪಾಂಡವರ ನಡುವೆ ಅತಿ ಅದ್ಭುತ ಯುದ್ಧವು ನಡೆಯಿತು.

ಆಗ ಮಹೇಷ್ವಾಸ ಅರ್ಜುನನು ಕರ್ಣನ ವಿಕ್ರಮವನ್ನು ಕಂಡು ತ್ವರೆಮಾಡಿ ಅವನ ಧನುಸ್ಸನ್ನು ಮುಷ್ಟಿಪ್ರದೇಶದಲ್ಲಿ ಕತ್ತರಿಸಿದನು. ಆ ಶತ್ರುತಾಪನನು ನಾಲ್ಕು ಕುದುರೆಗಳನ್ನೂ ಭಲ್ಲಗಳಿಂದ ಯಮಸಾದನಕ್ಕೆ ಕಳುಹಿಸಿ ಸಾರಥಿಯ ಶಿರವನ್ನೂ ಅವನ ದೇಹದಿಂದ ಬೇರ್ಪಡಿಸಿದನು. ಮತ್ತೆ ಧನುಸ್ಸನ್ನು ಕಳೆದುಕೊಂಡ, ಕುದುರೆಗಳನ್ನು ಕಳೆದುಕೊಂಡ ಮತ್ತು ಸಾರಥಿಯನ್ನು ಕಳೆದುಕೊಂಡ ಅವನನ್ನು ಪಾಂಡುನಂದನ ಪಾರ್ಥನು ನಾಲ್ಕು ಸಾಯಕಗಳಿಂದ ಗಾಯಗೊಳಿಸಿದನು. ಆಗ ಶರಪೀಡಿತ ನರರ್ಷಭ ಕರ್ಣನು ಕುದುರೆಗಳು ಹತವಾದ ರಥದಿಂದ ಬೇಗನೇ ಹಾರಿ ತಕ್ಷಣವೇ ಕೃಪನ ರಥವನ್ನೇರಿದನು.

## ಅಶ್ವತ್ಥಾಮ-ಪಾಂಚಾಲರ ಯುದ್ಧ

ರಾಧೇಯನು ಸೋತಿದುದನ್ನು ಕಂಡ ಕೌರವರು ಧನಂಜಯನ ಶರಗಳಿಗೆ

ಹೆದರಿ ದಿಕ್ಕು ದಿಕ್ಕುಗಳಿಗೆ ಓಡಿ ಹೋದರು. ಓಡಿ ಹೋಗುತ್ತಿರುವ ಅವರನ್ನು ನೋಡಿ ದುರ್ಯೋಧನನು ಈ ಮಾತುಗಳಿಂದ ಅವರನ್ನು ಹಿಂದಿರುಗಲು ಪ್ರಚೋದಿಸಿದನು:

“ಕ್ಷತ್ರಿಯರ್ಷಭರೇ! ಪಲಾಯನ ಮಾಡುವುದನ್ನು ನಿಲ್ಲಿಸಿ! ಶೂರರಂತೆ ಯುದ್ಧಮಾಡಿ! ಪಾರ್ಥನನ್ನು ವಧಿಸಲು ಸ್ವಯಂ ನಾನೇ ಅವನೊಡನೆ ಯುದ್ಧಕ್ಕೆ ಹೋಗುತ್ತೇನೆ. ನಾನು ಸೋಮಕ-ಪಾಂಚಾಲರೊಂದಿಗೆ ಪಾರ್ಥರನ್ನು ಸಂಹರಿಸುತ್ತೇನೆ. ಯುಗಕ್ಷಯದ ಕಾಲನಂತೆ ಗಾಂಡಿವಧನ್ವಿಯೊಡನೆ ಯುದ್ಧಮಾಡುವ ನನ್ನ ಈ ವಿಕ್ರಮವನ್ನು ಪಾರ್ಥರು ಇಂದು ನೋಡಲಿದ್ದಾರೆ! ಇಂದು ಸಮರದಲ್ಲಿ ಯೋಧರು ನನ್ನಿಂದ ಶಲಭಗಳಂತೆ ಹೊರಹೊಮ್ಮುವ ಸಹಸ್ರಾರು ಬಾಣಗಳ ಜಾಲಗಳನ್ನು ನೋಡುವವರಿದ್ದಾರೆ! ಬೇಸಗೆಯ ಕೊನೆಯಲ್ಲಿ ಮೋಡಗಳು ಮಳೆಸುರಿಸುವಂತೆ ನನ್ನ ಧನುಸ್ಸಿನಿಂದ ಬಾಣಮಯ ಮಳೆಯನ್ನು ಸೃಷ್ಟಿಸುವ ನನ್ನನ್ನು ಇಂದು ಯುದ್ಧದಲ್ಲಿ ಸೈನಿಕರು ನೋಡಲಿದ್ದಾರೆ! ಇಂದು ನತಪರ್ವಗಳಿಂದ ನಾನು ರಣದಲ್ಲಿ ಪಾರ್ಥನನ್ನು ಜಯಿಸುತ್ತೇನೆ. ಶೂರರೇ! ಫಲ್ಗುನನ ಭಯವನ್ನು ತೊರೆದು ಸಮರದಲ್ಲಿ ನಿಲ್ಲಿ! ನನ್ನ ವೀರ್ಯವನ್ನು

ಎದುರಿಸಿ ಫಲ್ಗುನನು ತೀರವನ್ನು ಮುಟ್ಟಿದ ಮಕರಾಲಯ ಸಾಗರವು ಹೇಗೋ ಹಾಗೆ ಮುಂದುವರೆಯಲಾರ!”

ಹೀಗೆ ಹೇಳಿ ಮಹಾ ಸೇನೆಯಿಂದ ಪರಿವೃತನಾಗಿ ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ದುರ್ಧರ್ಷ ರಾಜನು ಫಲ್ಗುನನಿದ್ದಲ್ಲಿಗೆ ಹೊರಟನು. ಹಾಗೆ ಹೋಗುತ್ತಿದ್ದ ಆ ಮಹಾಬಾಹುವನ್ನು ನೋಡಿ ಶಾರದ್ವತನು ಅಶ್ವತ್ಥಾಮನ ಬಳಿಸಾರಿ ಈ ಮಾತನ್ನಾಡಿದನು:

“ಈ ಮಹಾಬಾಹು ಅಸಹನಶೀಲ ರಾಜನು ಕ್ರೋಧದಿಂದ ಮೂರ್ಛಿತನಾಗಿ ಪತಂಗದ ಸ್ವಭಾವವನ್ನನ್ನುಸರಿಸಿ ಫಲ್ಗುನನೊಂದಿಗೆ ಯುದ್ಧಮಾಡಲು ಬಯಸುತ್ತಾನೆ! ನಾವು ನೋಡುತ್ತಿರುವಂತೆಯೇ ಪಾರ್ಥನೊಂದಿಗೆ ಹೋರಾಡಿ ಪ್ರಾಣಗಳನ್ನು ತ್ಯಜಿಸದಂತೆ ಕೌರವನನ್ನು ತಡೆದು ಯುದ್ಧದಿಂದ ನಿಲ್ಲಿಸು! ಸರ್ಪಗಳಂತೆ ಹೊರಬರುವ ಪಾರ್ಥನ ಶರಸಮೂಹಗಳಿಂದ ರಾಜನು ಭಸ್ಮೀಭೂತನಾಗಬಾರದೆಂದು ರಾಜನನ್ನು ನೀನು ತಡೆಯಬೇಕು! ನಾವು ಇಲ್ಲಿಯೇ ಇರುವಾಗ ನಮ್ಮ ಸಹಾಯವನ್ನು ಕೇಳದೇ ಸ್ವಯಂ ತಾನೇ ಪಾರ್ಥನೊಡನೆ ರಾಜನು ಹೋಗಿದ್ದುದು ಸರಿಯಲ್ಲವೆಂದು

ನನಗನ್ನಿಸುತ್ತದೆ. ಸಿಂಹದೊಡನೆ ಹೋರಾಡುವ ಆನೆಯಂತೆ ಕಿರೀಟಿಯೊಂದಿಗೆ ಯುದ್ಧಮಾಡುತ್ತಿರುವ ಕೌರವನನ್ನು ಪಾರ್ಥನು ಜೀವಂತವಿಡುವುದು ದುರ್ಲಭವೆಂದು ನನಗನ್ನಿಸುತ್ತದೆ.”

ಸೋದರಮಾವನು ಹೀಗೆ ಹೇಳಲು ಶಸ್ತ್ರಭೃತರಲ್ಲಿ ಶ್ರೇಷ್ಠ ದ್ರೌಣಿಯು ತ್ವರೆಮಾಡಿ ದುರ್ಯೋಧನನಿಗೆ ಈ ಮಾತನ್ನಾಡಿದನು:

“ಗಾಂಧಾರೇ! ನಿತ್ಯವೂ ನಿನ್ನ ಹಿತೈಷಿಯಾಗಿರುವ ನನ್ನನ್ನು ಅನಾದರಿಸಿ ನಾನು ಜೀವಿತವಾಗಿರುವಾಗಲೇ ನೀನು ಯುದ್ಧಕ್ಕೆ ಹೋಗುವುದು ಸರಿಯಲ್ಲ! ಪಾರ್ಥನಿಗೆ ವಿಜಯದೊರೆಯುವಂತೆ ಅವಸರದಲ್ಲಿ ಯಾವ ಕಾರ್ಯವನ್ನೂ ಮಾಡಬೇಡ. ಪಾರ್ಥನನ್ನು ನಾನು ತಡೆಯುತ್ತೇನೆ. ನಿಲ್ಲು!”

ದುರ್ಯೋಧನನು ಹೇಳಿದನು:

“ದ್ವಿಜೋತ್ತಮ! ಆಚಾರ್ಯನು ಪಾಂಡುಪುತ್ರರನ್ನು ಪುತ್ರರಂತೆ ಪರಿರಕ್ಷಿಸುತ್ತಾರೆ. ನೀನೂ ಕೂಡ ಅವರ ಕುರಿತು ನಿತ್ಯವೂ ಉಪೇಕ್ಷಿಸುತ್ತಿರುವೆ. ನೀನು ಯುದ್ಧದಲ್ಲಿ ನಿನ್ನ ವಿಕ್ರಮವನ್ನು ಕಡಿಮೆ ತೋರಿಸುತ್ತಿದ್ದೀಯೆ. ಇದು ನನ್ನ ದುರ್ಭಾಗ್ಯದಿಂದಲೋ ಅಥವಾ ಧರ್ಮರಾಜ ಅಥವಾ

ದ್ರೌಪದಿಯ ಮೇಲಿನ ಪ್ರೀತಿಯಿಂದಲೋ ಅರ್ಥವಾಗುತ್ತಿಲ್ಲ. ಯಾವುದರಿಂದಾಗಿ ಸುಖಾರ್ಹ ನನ್ನ ಸರ್ವ ಬಾಂಧವರೂ ಅಪರಾಜಿತರಾಗಿ ಪರಮ ದುಃಖವನ್ನು ಹೊಂದಿರುವರೋ ಆ ನನ್ನ ಲೋಭಕ್ಕೆ ಧಿಕ್ಕಾರ! ಶಸ್ತ್ರಭೃತರಲ್ಲಿ ಮುಖ್ಯನಾದ ಗೌತಮೀಸುತ ಅಶ್ವತ್ಥಾಮನ ಹೊರತಾಗಿ ಯುದ್ಧದಲ್ಲಿ ಮಹೇಶ್ವರಸಮನಾದ ಯಾರುತಾನೇ ಶತ್ರುಗಳನ್ನು ನಾಶಗೊಳಿಸಬಲ್ಲನು? ಅಶ್ವತ್ಥಾಮ! ನನ್ನ ಹಿತಕ್ಕಾಗಿ ಇವರನ್ನು ನಾಶಗೊಳಿಸು. ನಿನ್ನ ಅಸ್ತ್ರಗಳ ಮುಂದೆ ದೇವತೆಗಳೂ ನಿಲ್ಲಲು ಶಕ್ತರಿಲ್ಲ. ಅನುಗರೊಂದಿಗೆ ಪಾಂಚಾಲರನ್ನೂ ಸೋಮಕರನ್ನು ಕೊಲ್ಲು! ನಿನ್ನಿಂದಲೇ ರಕ್ಷಿತರಾದ ನಾವು ಉಳಿದವರನ್ನು ಸಂಹರಿಸುತ್ತೇವೆ. ಯಶಸ್ವಿ ಸೋಮಕ ಪಾಂಚಾಲರಿಂದ ಕಾಡ್ಗಿಚ್ಚಿಗೆ ಸಿಲುಕಿದವರಂತೆ ನನ್ನ ಸೈನಿಕರು ಗಾಬರಿಯಿಂದ ಓಡಿ ಹೋಗುತ್ತಿದ್ದಾರೆ. ಕಿರೀಟಿಯ ರಕ್ಷಣೆಯಲ್ಲಿ ಇವರು ಮತ್ತು ಕೇಕಯರು ನಮ್ಮವರು ನಿಃಶೇಷವಾಗುವಂತೆ ಮಾಡುವುದರೊಳಗೆ ಇವರನ್ನು ತಡೆ! ಮೊದಲಾಗಲೀ ಕಡೆಯಲ್ಲಾಗಲೀ ನೀನು ಈ ಕೆಲಸವನ್ನು ಮಾಡು. ಪಾಂಚಾಲರ ವಧೆಗೋಸ್ಕರವೇ ನೀನು ಜನ್ಮತಳೆದಿರುವೆ! ಜಗತ್ತನ್ನು ಸರ್ವ ಪಾಂಚಾಲರಿಂದ

ಮುಕ್ತಗೊಳಿಸುತ್ತೀಯೆಲ್ಲವೇ? ಹೀಗೆ ಸಿದ್ಧರು ಹೇಳಿದ್ದರು. ಅದು ಹಾಗೆಯೇ ಆಗುತ್ತದೆ. ನಿನ್ನ ಅಸ್ತ್ರಗಳ ಮಾರ್ಗದಲ್ಲಿ ವಾಸವ ಸಹಿತ ದೇವತೆಗಳೂ ನಿಲ್ಲಲು ಶಕ್ತರಲ್ಲ. ಇನ್ನು ಪಾಂಚಾಲರೊಂದಿಗೆ ಪಾರ್ಥರು ಯಾವ ಲೆಖ್ಕಕ್ಕೆ? ಇದು ನನ್ನ ಸತ್ಯನುಡಿ!"

ದುರ್ಯೋಧನನು ಹೀಗೆ ಹೇಳಲು ಯುದ್ಧದುರ್ಮದ ದ್ರೌಣಿಯು ಉತ್ತರಿಸಿದನು:

"ಮಹಾಬಾಹೋ! ನೀನು ಹೇಳಿದುದು ಸತ್ಯ. ನನಗೆ ಮತ್ತು ನನ್ನ ತಂದೆಗೆ ಕೂಡ ನಿತ್ಯವೂ ಪಾಂಡವರು ಪ್ರಿಯರು. ನಾವೂ ಕೂಡ ಅವರಿಗೆ ಪ್ರಿಯರೇ. ಆದರೆ ಯುದ್ಧದಲ್ಲಿ ಅಲ್ಲ. ಪ್ರಾಣವನ್ನೂ ತೊರೆದು ಸ್ವಲ್ಪವೂ ಭಯಪಡದೇ ಎಲ್ಲ ಶಕ್ತಿಯನ್ನುಪಯೋಗಿಸಿ ನಾವು ಯುದ್ಧಮಾಡುತ್ತಿದ್ದೇವೆ. ನಾನು, ಕರ್ಣ, ಶಲ್ಯ, ಕೃಪ ಮತ್ತು ಹಾರ್ದಿಕ್ಯರು ನಿಮಿಷಮಾತ್ರದಲ್ಲಿ ಪಾಂಡವೀ ಸೇನೆಯನ್ನು ನಾಶಗೊಳಿಸಬಲ್ಲೆವು. ಯುದ್ಧ ಸನ್ನದ್ಧರಾಗಿರದಿದ್ದರೆ ಅವರೂ ಕೂಡ ನಮ್ಮ ಈ ಕೌರವೀ ಸೇನೆಯನ್ನು ಅರ್ಧ ನಿಮಿಷದಲ್ಲಿಯೇ ಸಂಹರಿಸಬಲ್ಲರು. ಪರಮ ಶಕ್ತಿಯನ್ನುಪಯೋಗಿಸಿ ಪಾಂಡವರು ನಮ್ಮನ್ನು ಮತ್ತು

ನಾವು ಅವರನ್ನು ಎದುರಿಸಿ ಯುದ್ಧಮಾಡುತ್ತಿದ್ದೇವೆ. ತೇಜಸ್ಸು ಇನ್ನೊಂದು ತೇಜಸ್ಸನ್ನು ಎದುರಿಸಿ ಪ್ರಶಮನಗೊಳ್ಳುತ್ತಿದೆ. ಪಾಂಡುಪುತ್ರರು ಜೀವಂತವಿರುವವರೆಗೆ ಪಾಂಡವರ ಸೇನೆಯನ್ನು ಗೆಲ್ಲಲು ನಾವು ಅಶಕ್ತರಾಗಿರುತ್ತೇವೆ. ಇದು ನಾನು ಹೇಳುವ ಸತ್ಯ! ಆ ಸಮರ್ಥ ಪಾಂಡುನಂದನರು ತಮಗಾಗಿ ನಿನ್ನೊಡನೆ ಯುದ್ಧಮಾಡುತ್ತಿದ್ದಾರೆ. ಅವರು ಏಕೆ ನಿನ್ನ ಸೈನ್ಯವನ್ನು ಸಂಹರಿಸುವುದಿಲ್ಲ? ನೀನು ಅತಿ ಆಸೆಬುರುಕನಾಗಿರುವುಧರಿಂದ ಮತ್ತು ಮೋಸದಲ್ಲಿ ಪಳಗಿರುವುದರಿಂದ ಮತ್ತು ಜಂಬದವನಾಗಿರುವುದರಿಂದಲೇ ನಮ್ಮನ್ನು ಅತಿಯಾಗಿ ಶಂಕಿಸುತ್ತಿರುವೆ! ಇಗೋ! ನಾನಾದರೋ ನಿನಗೋಸ್ಕರ ಜೀವವನ್ನೂ ತೊರೆದು ಪ್ರಯತ್ನಪಟ್ಟು ನೀನು ನಡೆಸಿರುವ ಸಂಗ್ರಾಮಕ್ಕೆ ಹೋಗುತ್ತಿದ್ದೇನೆ. ನಿನ್ನ ಒಳಿತಿಗಾಗಿ ನಾನು ಸಂಗ್ರಾಮದಲ್ಲಿ ಶತ್ರುಗಳೊಂದಿಗೆ ಹೋರಾಡಿ ಶ್ರೇಷ್ಠ ಶ್ರೇಷ್ಠರಾದವರನ್ನು ಗೆಲ್ಲುತ್ತೇನೆ. ಪಾಂಚಾಲರೊಂದಿಗೆ, ಸೋಮಕರೊಂದಿಗೆ, ಹಾಗೆಯೇ ಕೇಕಯ ಮತ್ತು ಪಾಂಡವರೊಂದಿಗೆ ಹೋರಾಡುತ್ತೇನೆ. ಇಂದು ನನ್ನ ಬಾಣಗಳಿಂದ ಸುಡಲ್ಪಟ್ಟ ಪಾಂಚಾಲರು ಮತ್ತು ಸೋಮಕರು ಸಿಂಹದಿಂದ ಪೀಡಿತ

ಗೋವುಗಳಂತೆ ಎಲ್ಲಕಡೆ ಓಡಿಹೋಗಲಿದ್ದಾರೆ! ಧರ್ಮಸುತನು ಇಂದು ನನ್ನ ಪರಾಕ್ರಮವನ್ನು ನೋಡಿ ಸೋಮಕರೊಂದಿಗೆ ಈ ಲೋಕವು ಅಶ್ವತ್ಥಾಮಮಯವೇನೋ ಎಂದು ಭಾವಿಸುವವನಿದ್ದಾನೆ. ಯುದ್ಧದಲ್ಲಿ ಸೋಮಕರೊಂದಿಗೆ ಪಾಂಚಾಲರು ಸಂಹರಿಸಲ್ಪಟ್ಟಿದುದನ್ನು ನೋಡಿ ಯುಧಿಷ್ಠಿರನು ದುಃಖಹೊಂದುವವನಿದ್ದಾನೆ! ಯಾರು ನನ್ನನ್ನು ಎದುರಿಸುತ್ತಾರೋ ಅವರನ್ನು ನಾನು ಸಂಹರಿಸುತ್ತೇನೆ. ನನ್ನ ಬಾಹುಗಳ ಮಧ್ಯದಲ್ಲಿ ಬರುವವರನ್ನು ಬಿಡುವುದಿಲ್ಲ!”

ದುರ್ಯೋಧನನಿಗೆ ಹೀಗೆ ಹೇಳಿ ಆ ಮಹಾಬಾಹುವು ಕೌರವ ಪುತ್ರರಿಗೆ ಒಳ್ಳೆಯದನ್ನು ಮಾಡಲು ಬಯಸಿ ಸರ್ವ ಧನ್ವಿಗಳನ್ನೂ ಓಡಿಸುತ್ತಾ ಯುದ್ಧದಲ್ಲಿ ಧುಮುಕಿದನು. ಆಗ ಗೌತಮೀಸುತನು ಕೇಕಯರೊಂದಿಗಿದ್ದ ಪಾಂಚಾಲರಿಗೆ ಹೇಳಿದನು:

“ಮಹಾರಥರೇ! ಎಲ್ಲರೂ ನನ್ನ ಈ ದೇಹದ ಮೇಲೆ ಬಾಣಗಳನ್ನು ಪ್ರಯೋಗಿಸಿರಿ. ನಿಮ್ಮ ಅಸ್ತ್ರಲಾಘವವನ್ನು ಪ್ರದರ್ಶಿಸುತ್ತಾ ನನ್ನೊಡನೆ ಸ್ಥಿರವಾಗಿ ನಿಂತು ಯುದ್ಧಮಾಡಿರಿ!”

ಹೀಗೆ ಹೇಳಲು ಅವರೆಲ್ಲರೂ ದ್ರೌಣಿಯ ಮೇಲೆ ಮೋಡಗಳು

ಮಳೆಯನ್ನು ಸುರಿಸುವಂತೆ ಶಸ್ತ್ರಗಳ ಮಳೆಯನ್ನು ಕರೆದರು. ಆ ಶರಗಳನ್ನು ನಿರಸನಗೊಳಿಸಿ ದ್ರೌಣಿಯು ಪಾಂಡುಪುತ್ರರು ಮತ್ತು ಧೃಷ್ಟದ್ಯುಮ್ನನ ಸಮ್ಮುಖದಲ್ಲಿಯೇ ಹತ್ತು ವೀರರನ್ನು ಕೆಳಗುರುಳಿಸಿದನು. ಸಮರದಲ್ಲಿ ಅವನಿಂದ ವಧಿಸಲ್ಪಡುತ್ತಿದ್ದ ಪಾಂಚಾಲರು ಮತ್ತು ಸೃಂಜಯರು ರಣದಲ್ಲಿ ದ್ರೌಣಿಯನ್ನು ಬಿಟ್ಟು ದಿಕ್ಕು ದಿಕ್ಕುಗಳಿಗೆ ಪಲಾಯನಗೈದರು. ಸೋಮಕರೊಂದಿಗೆ ಪಾಂಚಾಲ ಶೂರರು ಓಡಿಹೋಗುತ್ತಿರುವುದನ್ನು ನೋಡಿ ಧೃಷ್ಟದ್ಯುಮ್ನನು ಯುದ್ಧದಲ್ಲಿ ದ್ರೌಣಿಯನ್ನು ಎದುರಿಸಿದನು.

ಆಗ ಬಂಗಾರದ ಚಿತ್ರಗಳನ್ನುಳ್ಳ, ಮಳೆಗಾಲದ ಮೋಡದಂತೆ ಗರ್ಜಿಸುತ್ತಿದ್ದ, ಯುದ್ಧದಿಂದ ಹಿಂದಿರುಗದಿದ್ದ ನೂರಾರು ಶೂರರ ರಥಗಳಿಂದ ಸುತ್ತುವರೆಯಲ್ಪಟ್ಟ ಪಾಂಚಾಲರಾಜನ ಮಗ ಮಹಾರಥ ಧೃಷ್ಟದ್ಯುಮ್ನನು ಕೆಳಗುರುಳಿಸಲ್ಪಟ್ಟ ಯೋಧರನ್ನು ನೋಡಿ ದ್ರೌಣಿಗೆ ಈ ಮಾತುಗಳನ್ನಾಡಿದನು:

> “ಆಚಾರ್ಯಪುತ್ರ! ದುರ್ಬುದ್ಧೇ! ಅನ್ಯರನ್ನು ಏಕೆ ಸಂಹರಿಸುತ್ತಿರುವೆ? ಶೂರನಾಗಿದ್ದರೆ ಸಂಯುಗದಲ್ಲಿ ನನ್ನೊಡನೆ ಯುದ್ಧಮಾಡಲು ಬಾ! ನನ್ನ ಎದುರಿನಲ್ಲಿ ನಿಲ್ಲು! ನಾನು ನಿನ್ನನ್ನು ಈಗಲೇ ಸಂಹರಿಸುತ್ತೇನೆ!”

ಆಗ ಪ್ರತಾಪವಾನ್ ಧೃಷ್ಟದ್ಯುಮ್ನನು ಆಚಾರ್ಯಸುತನನ್ನು ಮರ್ಮಭೇದಿ ತೀಕ್ಷ್ಣಶರಗಳಿಂದ ಹೊಡೆದನು. ಚಿನ್ನದ ರೆಕ್ಕೆಗಳುಳ್ಳ, ಚೂಪಾದ ಮೊನೆಗಳುಳ್ಳ, ಶರೀರವನ್ನು ಭೇದಿಸಬಲ್ಲ, ವೇಗವಾಗಿ ಹೋಗುವ ಆ ಬಾಣಗಳು ಸಾಲುಸಾಲಾಗಿ ಜೇನುದುಂಬಿಗಳು ಹೂಬಿಟ್ಟಿರುವ ಮರವನ್ನು ಪ್ರವೇಶಿಸುವಂತೆ ಅಶ್ವತ್ಥಾಮನನ್ನು ಪ್ರವೇಶಿಸಿದವು. ಬಹಳವಾಗಿ ಗಾಯಗೊಂಡು ಕಾಲಿನಿಂದ ತುಳಿಯಲ್ಪಟ್ಟ ಸರ್ಪದಂತೆ ಕುಪಿತನಾದ ಮಾನಿನಿ ದ್ರೌಣಿಯು ಸ್ವಲ್ಪವಾದರೂ ಗಾಬರಿಗೊಳ್ಳದೆ ಬಾಣವನ್ನು ಕೈಯಲ್ಲಿ ಹಿಡಿದು ಹೇಳಿದನು:

> "ಧೃಷ್ಟದ್ಯುಮ್ನ! ಸ್ಥಿರವಾಗಿ ನಿಂತು ಒಂದು ಕ್ಷಣ ತಾಳಿಕೋ! ಅಷ್ಟರೊಳಗೆ ನಿಸಿತಬಾಣಗಳಿಂದ ನಿನ್ನನ್ನು ಯಮಸದನಕ್ಕೆ ಕಳುಹಿಸುತ್ತೇನೆ!"

ಪರವೀರಹ ದ್ರೌಣಿಯು ಪಾರ್ಷತನಿಗೆ ಹೀಗೆ ಹೇಳಿ ಹಸ್ತಲಾಘವದಿಂದ ಬಾಣಗಳ ಮಳೆಗಳಿಂದ ಎಲ್ಲ ಕಡೆಗಳಿಂದ ಅವನನ್ನು ಮುಚ್ಚಿಬಿಟ್ಟನು. ದ್ರೌಣಿಯಿಂದ ಸಮರದಲ್ಲಿ ಪೀಡಿಸಲ್ಪಟ್ಟ ಪಾಂಚಾಲತನಯನು ದ್ರೌಣಿಯನ್ನು ಮಾತುಗಳಿಂದ ಗದರಿಸಿದನು:

> "ವಿಪ್ರ! ದುರ್ಬುದ್ಧೇ! ನನ್ನ ಪ್ರತಿಜ್ಞೆಯ ಕುರಿತು ಮತ್ತು ನನ್ನ

ಹುಟ್ಟಿನ ಕುರಿತು ನಿನಗೆ ತಿಳಿದಿಲ್ಲವೇ? ದ್ರೋಣನನ್ನು ಸಂಹರಿಸಿದ ನಂತರವೇ ನಾನು ನಿನ್ನನ್ನು ಕೊಲ್ಲುವವನಿದ್ದೆ! ದ್ರೋಣನು ಜೀವಿಸಿರುವಾಗ ನಾನು ನಿನ್ನನ್ನು ಸಂಹರಿಸುವುದಿಲ್ಲ! ಇದೇ ರಾತ್ರಿ ಅಥವಾ ಬೆಳಗಾಗುವುದರೊಳಗೆ ನಿನ್ನ ತಂದೆಯನ್ನು ಸಂಹರಿಸಿ ಅನಂತರ ಯುದ್ಧದಲ್ಲಿ ನಿನ್ನನ್ನೂ ಸಹ ಮೃತ್ಯುಲೋಕಕ್ಕೆ ಕಳುಹಿಸುತ್ತೇನೆ. ಇದು ನನ್ನ ಮನಸ್ಸಿನಲ್ಲಿ ನೆಲೆಸಿಬಿಟ್ಟಿದೆ! ಪಾರ್ಥರ ಮೇಲಿರುವ ನಿನ್ನ ದ್ವೇಷವನ್ನೂ ಕೌರವರ ಮೇಲೆ ನಿನಗಿರುವ ಭಕ್ತಿಯನ್ನೂ ಸ್ಥಿರನಾಗಿ ನಿಂತು ಪ್ರದರ್ಶಿಸು! ಜೀವಸಹಿತನಾಗಿ ನೀನು ನನ್ನಿಂದ ತಪ್ಪಿಸಿಕೊಳ್ಳಲಾರೆ! ಯಾರು ನಿನ್ನಂತೆ ಬ್ರಾಹ್ಮಣಧರ್ಮವನ್ನು ಬಿಟ್ಟು ಕ್ಷತ್ರಧರ್ಮದಲ್ಲಿ ನಿರತನಾಗಿರುವನೋ ಅವನು ಸರ್ವಲೋಕಗಳ ದೃಷ್ಟಿಯಿಂದ ವಧ್ಯನೇ ಆಗುತ್ತಾನೆ!”

ಪಾರ್ಷತನಿಂದ ಈ ರೀತಿ ಕಟುವಾಕ್ಯಗಳನ್ನು ಕೇಳಿದ ದ್ವಿಜೋತ್ತಮನು ತೀವ್ರವಾಗಿ ಕ್ರೋಧಗೊಂಡು ನಿಲ್ಲು ನಿಲ್ಲೆಂದು ಕೂಗಿ ಹೇಳಿದನು. ಕಣ್ಣುಗಳಿಂದಲೇ ದಹಿಸಿಬಿಡುವನೋ ಎನ್ನುವಂತೆ ಪಾರ್ಷತನನ್ನು ನೋಡುತ್ತಾ ಸರ್ಪದಂತೆ ಭುಸುಗುಟ್ಟುತ್ತಾ ಅವನು ಶರಗಳಿಂದ ಮುಚ್ಚಿದನು. ಸಮರದಲ್ಲಿ ಆ ರೀತಿ ದ್ರೌಣಿಯಿಂದ ಮುಚ್ಚಲ್ಪಟ್ಟ

ರಥಸತ್ತಮನನ್ನು ಸರ್ವ ಪಾಂಚಾಲಸೇನೆಗಳೂ ಸುತ್ತುವರೆದವು. ಸ್ವಧೈರ್ಯವನ್ನು ಆಶ್ರಯಿಸಿದ ಮಹಾಬಾಹು ಧೃಷ್ಟದ್ಯುಮ್ನನು ವಿಚಲಿತನಾಗದೇ ಅಶ್ವತ್ಥಾಮನ ಮೇಲೆ ವಿವಿಧ ಸಾಯಕಗಳನ್ನು ಪ್ರಯೋಗಿಸಿದನು. ಆ ಇಬ್ಬರು ಅಸಹನಶೀಲ ಮಹೇಷ್ವಾಸರು ಪರಸ್ಪರರನ್ನು ಬಾಣಗಳ ಗುಂಪುಗಳಿಂದ ತಡೆಯುತ್ತಾ ಎಲ್ಲಕಡೆ ಶರವೃಷ್ಟಿಯನ್ನು ಸುರಿಸುತ್ತಾ ಪ್ರಾಣಗಳನ್ನು ಪಣವನ್ನಾಗಿಟ್ಟುಕೊಂಡು ರಣದಲ್ಲಿ ಪುನಃ ಯುದ್ಧಮಾಡತೊಡಗಿದರು. ದ್ರೌಣಿ ಮತ್ತು ಪಾರ್ಷತರ ಆ ಭಯಾನಕ ಘೋರರೂಪೀ ಯುದ್ಧವನ್ನು ನೋಡಿ ಸಿದ್ಧ-ಚಾರಣ-ವಾತಿಕರು ಬಹಳವಾಗಿ ಪ್ರಶಂಸಿಸಿದರು. ಅವರಿಬ್ಬರೂ ಶರೌಘಗಳಿಂದ ಆಕಾಶವನ್ನೂ ದಿಕ್ಕುಗಳನ್ನೂ ತುಂಬುತ್ತಾ ಶರಗಳಿಂದ ಘೋರ ಕತ್ತಲೆಯನ್ನೇ ನಿರ್ಮಿಸಿ ಒಬ್ಬರು ಮತ್ತೊಬ್ಬರಿಗೆ ಅಗೋಚರರಾಗಿಯೇ ಯುದ್ಧಮಾಡುತ್ತಿದ್ದರು. ಪರಸ್ಪರರ ವಧೆಗೆ ಪ್ರಯತ್ನಿಸುತ್ತಿದ್ದ ಪರಸ್ಪರರಿಂದ ಜಯವನ್ನು ಬಯಸುತ್ತಿದ್ದ ಅವರಿಬ್ಬರೂ ಧನುಸ್ಸುಗಳನ್ನು ಮಂಡಲಾಕಾರವಾಗಿ ತಿರುಗಿಸುತ್ತಾ ರಣದಲ್ಲಿ ನೃತ್ಯಮಾಡುತ್ತಿರುವರೋ ಎಂಬಂತೆ ತೋರುತ್ತಿದ್ದರು. ವಿಚಿತ್ರ ಲಘುತ್ವದಿಂದ ಚೆನ್ನಾಗಿ ಯುದ್ಧಮಾಡುತ್ತಿದ್ದ ಅವರಿಬ್ಬರು ಮಹಾಬಾಹುಗಳನ್ನು ಸಮರದಲ್ಲಿ ಸಹಸ್ರಾರು ಯೋಧಪ್ರಮುಖರು ಪ್ರಶಂಸಿಸಿದರು. ವನದಲ್ಲಿ ವನ್ಯ ಗಜಗಳಂತೆ ರಣದಲ್ಲಿ ಯುದ್ಧಮಾಡುತ್ತಿದ್ದ ಅವರನ್ನು ನೋಡಿ ಎರಡೂ

ಸೇನೆಗಳಲ್ಲಿ ಹರ್ಷದಿಂದ ತುಮುಲ ಶಬ್ಧಗಳು ಕೇಳಿಬರುತ್ತಿದ್ದವು. ಸಿಂಹನಾದದ ಕೂಗುಗಳು ಕೇಳಿಬಂದವು. ಶಂಖಗಳು ಮೊಳಗಿದವು. ನೂರಾರು ಸಹಸ್ರಾರು ವಾದ್ಯಗಳನ್ನು ಬಾರಿಸಲಾಯಿತು.

ಹೇಡಿಗಳಿಗೆ ಭಯವನ್ನುಂಟು ಮಾಡುತ್ತಿದ್ದ ಆ ತುಮುಲಯುದ್ಧವು ಒಂದು ಮುಹೂರ್ತ ಸಮ-ಸಮವಾಗಿಯೇ ನಡೆಯುತ್ತಿತ್ತು. ಆಗ ರಣದಲ್ಲಿ ದ್ರೌಣಿಯು ಪಾರ್ಷತನ ಧ್ವಜವನ್ನೂ, ಧನುಸ್ಸನ್ನೂ, ಚತ್ರವನ್ನೂ, ಎರಡು ಪಾರ್ಷ್ಣಿಸಾರಥಿಗಳನ್ನೂ, ಸಾರಥಿ ಮತ್ತು ನಾಲ್ಕು ಕುದುರೆಗಳನ್ನೂ ನಾಶಗೊಳಿಸಿದನು. ಆ ಅಮೇಯಾತ್ಮನು ನೂರಾರು ಸಹಸ್ರಾರು ಸನ್ನತಪರ್ವ ಬಾಣಗಳಿಂದ ಆ ಎಲ್ಲ ಪಾಂಚಾಲರನ್ನೂ ಹೊಡೆದು ಓಡಿಸಿದನು. ಆಗ ಸಂಯುಗದಲ್ಲಿ ವಾಸವನಂಥಹ ದ್ರೌಣಿಯ ಆ ಮಹಾಕರ್ಮವನ್ನು ನೋಡಿ ಪಾಂಡವೀ ಸೇನೆಯು ವ್ಯಥೆಗೊಂಡಿತು. ಆ ಮಹಾರಥನು ನೂರುಬಾಣಗಳಿಂದ ನೂರು ಪಾಂಚಾಲ ಮಹಾರಥರನ್ನು ಸಂಹರಿಸಿ, ಪ್ರತ್ಯೇಕ ಮೂರು ನಿಶಿತ ಬಾಣಗಳಿಂದ ಮೂರು ಮಹಾರಥರನ್ನು ಸಂಹರಿಸಿದನು. ದ್ರುಪದ ಪುತ್ರ ಮತ್ತು ಫಲ್ಗುನರು ನೋಡುತ್ತಿದ್ದಂತೆಯೇ ದ್ರೌಣಿಯು ಪುನಃ ವ್ಯವಸ್ಥಿತರಾಗಿದ್ದ ಪಾಂಚಾಲರನ್ನು ನಾಶಗೊಳಿಸಿದನು. ಸಮರದಲ್ಲಿ ಆ ರೀತಿ ಅವನಿಂದ ವಧಿಸಲ್ಪಡುತ್ತಿದ್ದ ಪಾಂಚಾಲರು ಸೃಂಜಯರೊಂದಿಗೆ ರಥ-ಧ್ವಜಗಳು ಹರಡಿ ಬಿದ್ದಿರಲು ದ್ರೌಣಿಯನ್ನು ಬಿಟ್ಟು ಓಡಿ ಹೋದರು. ಸಮರದಲ್ಲಿ

ಶತ್ರುಗಳನ್ನು ಜಯಿಸಿ ಮಹಾರಥ ದ್ರೋಣಪುತ್ರನು ಬೇಸಗೆಯ ಕೊನೆಯಲ್ಲಿ ಮೋಡಗಳು ಹೇಗೋ ಹಾಗೆ ಮಹಾನಾದವನ್ನು ಕೂಗಿದನು. ಬಹಳಷ್ಟು ಶೂರರನ್ನು ಸಂಹರಿಸಿ ಅಶ್ವತ್ಥಾಮನು ಯುಗಾಂತದಲ್ಲಿ ಸರ್ವಭೂತಗಳನ್ನು ಭಸ್ಮಗೊಳಿಸಿದ ಪಾವಕನಂತೆ ವಿರಾಜಿಸಿದನು. ಯುದ್ಧದಲ್ಲಿ ಸಹಸ್ರಾರು ಶತ್ರುಸೇನೆಗಳನ್ನು ಗೆದ್ದು ಕೌರವೇಯರಿಂದ ಗೌರವಿಸಲ್ಪಟ್ಟ ದ್ರೋಣಸುತ ಪ್ರತಾಪವಾನನು ಅರಿಗಣಗಳನ್ನು ಸಂಹರಿಸಿದ ಸುರೇಂದ್ರನಂತೆ ಪ್ರಕಾಶಿಸಿದನು.

## ಕೌರವ ಸೇನೆಯ ಪಲಾಯನ

ಆಗ ಯುಧಿಷ್ಠಿರನೂ ಪಾಂಡವ ಭೀಮಸೇನನೂ ದ್ರೋಣಪುತ್ರನನ್ನು ಎಲ್ಲಕಡೆಗಳಿಂದ ಮುತ್ತಿಗೆ ಹಾಕಿದರು. ದುರ್ಯೋಧನನು ಭಾರದ್ವಾಜನಿಂದ ಸುತ್ತುವರೆಯಲ್ಪಟ್ಟು ಪಾಂಡವರನ್ನು ಆಕ್ರಮಣಿಸಿದನು. ಆಗ ರಣದಲ್ಲಿ ಹೇಡಿಗಳ ಭಯವನ್ನು ಹೆಚ್ಚಿಸುವ ಘೋರರೂಪದ ಯುದ್ಧವು ನಡೆಯಿತು. ಕ್ರುದ್ಧ ಯುಧಿಷ್ಠಿರನು ಅಂಬಷ್ಠರನ್ನೂ, ಮಾಲವರನ್ನೂ, ವಂಗರನ್ನೂ, ಶಿಬಿಗಳನ್ನೂ, ತ್ರೈಗರ್ತರ ಗಣಗಳನ್ನೂ ಮೃತ್ಯುಲೋಕಕ್ಕೆ ಕಳುಹಿಸಿದನು. ಭೀಮನು ಅಭೀಷಾಹರನ್ನೂ, ಶೂರಸೇನರನ್ನೂ, ಯುದ್ಧದುರ್ಮದ ಕ್ಷತ್ರಿಯರನ್ನೂ ಸಂಹರಿಸಿ ಪೃಥ್ವಿಯನ್ನು ರಕ್ತ ಮಾಂಸಗಳಿಂದ ತೋಯಿಸಿದನು.

ಕಿರೀಟಿಯು ಯುದ್ಧದಲ್ಲಿ ನಿಶಿತ ಶರಗಳಿಂದ ಯೌಧೇಯರನ್ನೂ, ಅಟ್ಟರಾಜರನ್ನೂ, ಮತ್ತು ಮದ್ರಕ ಗಣಗಳನ್ನೂ ಮೃತ್ಯುಲೋಕಕ್ಕೆ ಕಳುಹಿಸಿದನು. ವೇಗವಾಗಿ ಹೋಗುತ್ತಿರುವ ನಾರಾಚಗಳಿಂದ ಗಾಡವಾಗಿ ಪೀಡಿತ ಆನೆಗಳು ಎರಡು ಶೃಂಗಗಳುಳ್ಳ ಪರ್ವತಗಳಂತೆ ಭೂಮಿಯ ಮೇಲೆ ಬಿದ್ದವು. ಕತ್ತರಿಸಲ್ಪಟ್ಟು ಅಲ್ಲಲ್ಲಿ ಬಿದ್ದು ವಿಲವಿಲ ಒದ್ದಾಡುತ್ತಿದ್ದ ಆನೆಗಳ ಸೊಂಡಿಲುಗಳಿಂದ ತುಂಬಿದ ರಣಭೂಮಿಯು ಹರಿದುಹೋಗುತ್ತಿದ್ದ ಸರ್ಪಗಳಿಂದ ತುಂಬಿಕೊಂಡಿದೆಯೋ ಎಂಬಂತೆ ಕಾಣುತ್ತಿತ್ತು. ತುಂಡಾಗಿ ಕೆಳಗೆ ಬಿದ್ದಿದ್ದ ಕನಕ ಚಿತ್ರಗಳಿಂದ ಅಲಂಕೃತಗೊಂಡಿದ್ದ ರಾಜರ ಚತ್ರಗಳಿಂದ ಭೂಮಿಯು ಯುಗಾಂತದಲ್ಲಿ ಸೂರ್ಯ ಚಂದ್ರ ಮತ್ತು ಇತರ ಗ್ರಹಗಳು ಚೆಲ್ಲಿದ ಆಕಾಶದಂತೆ ತೋರುತ್ತಿತ್ತು. ಶೋಣಿತಾಶ್ವ ದ್ರೋಣನ ರಥದ ಬಳಿ “ಭಯವಿಲ್ಲದೇ ಸಂಹರಿಸಿ! ಹೊಡೆಯಿರಿ! ಬಾಣಗಳಿಂದ ಕತ್ತರಿಸಿರಿ!” ಎಂಬ ತುಮುಲ ಕೂಗುಗಳು ಕೇಳಿಬಂದವು.

ದ್ರೋಣನಾದರೋ ಸಂಯುಗದಲ್ಲಿ ಪರಮ ಕ್ರುದ್ಧನಾಗಿ ವಾಯವ್ಯಾಸ್ತ್ರದಿಂದ ಅಸಾಧ್ಯ ಚಂಡಮಾರುತವು ಮೇಘಗಳನ್ನು ಚದುರಿಸುವಂತೆ ಶತ್ರುಸೇನೆಯನ್ನು ಧ್ವಂಸಗೊಳಿಸಿದನು. ಭೀಮಸೇನ ಮತ್ತು ಪಾರ್ಥರು ನೋಡುತ್ತಿದ್ದಂತೆಯೇ ದ್ರೋಣನಿಂದ

ಸಂಹರಿಸಲ್ಪಡುತ್ತಿದ್ದ ಪಾಂಚಾಲರು ಭಯದಿಂದ ಪಲಾಯನಗೈದರು. ಆಗ ತಕ್ಷಣವೇ ಕಿರೀಟೀ ಮತ್ತು ಭೀಮರು ದೊಡ್ಡ ರಥಸೈನ್ಯದೊಂದಿಗೆ ಕೌರವ ಸೇನೆಯನ್ನು ಆಕ್ರಮಣಿಸಿದರು. ಎಡಗಡೆಯಿಂದ ಬೀಭತ್ಸುವೂ ಬಲಗಡೆಯಿಂದ ವೃಕೋದರನೂ ಮಹಾ ಶರಸಮೂಹಗಳನ್ನು ಭಾರದ್ವಾಜನ ಮೇಲೆ ಸುರಿಸಿದರು. ಆಗ ಅವರಿಬ್ಬರನ್ನೂ ಸೃಂಜಯರು, ಪಾಂಚಾಲರು, ಸೋಮಕರೊಂದಿಗೆ ಮತ್ಸ್ಯರು ಅನುಸರಿಸಿ ಹೋದರು.

ಹಾಗೆಯೇ ಧೃತರಾಷ್ಟ್ರನ ಪುತ್ರರೂ ಕೂಡ ಮಹಾ ಸೇನೆಯೊಂದಿಗೆ ದ್ರೋಣನ ರಥದ ಕಡೆ ಬಂದರು. ಆಗ ಕಿರೀಟಿಯಿಂದ ಸಂಹರಿಸಲ್ಪಡುತ್ತಿದ್ದ ಆ ಭಾರತೀ ಸೇನೆಯು ನಿದ್ರೆ ಮತ್ತು ಕತ್ತಲೆಗಳಿಂದಾಗಿ ಪುನಃ ಭಗ್ನವಾಗಿ ಹೋಯಿತು. ಓಡಿಹೋಗುತ್ತಿದ್ದವರನ್ನು ದ್ರೋಣ ಮತ್ತು ಸ್ವಯಂ ದುರ್ಯೋಧನನು ತಡೆಯಲು ಪ್ರಯತ್ನಿಸಿದರೂ ಆ ಯೋಧರನ್ನು ತಡೆಯಲು ಅವರು ಶಕ್ಯರಾಗಲಿಲ್ಲ. ಪಾಂಡುಪುತ್ರನ ಶರಗಳಿಂದ ಇರಿಯಲ್ಪಡುತ್ತಿದ್ದ ಆ ಮಹಾಸೇನೆಯು ಕತ್ತಲೆಯಿಂದ ಆವರಿಸಲ್ಪಟ್ಟಿದ್ದ ಆ ಲೋಕದಲ್ಲಿ ಸರ್ವತೋಮುಖಿಯಾಗಿ ಓಡಿಹೋಯಿತು. ಕೆಲವು ನರಾಧಿಪರು ನೂರಾರು ವಾಹನಗಳನ್ನು ಅಲ್ಲಿಯೇ ಬಿಟ್ಟು ಭಯಾವಿಷ್ಟರಾಗಿ ಎಲ್ಲಕಡೆ ಓಡಿಹೋದರು.

## ಸಾತ್ಯಕಿಯಿಂದ ಸೋಮದತ್ತನ ವಧೆ

ಮಹಾಧನುಸ್ಸನ್ನು ಟೇಂಕರಿಸುತ್ತಿದ್ದ ಸೋಮದತ್ತನನ್ನು ನೋಡಿ ಸಾತ್ಯಕಿಯು “ನನ್ನನ್ನು ಸೋಮದತ್ತನಿದ್ದಲ್ಲಿಗೆ ಒಯ್ಯಿ!” ಎಂದು ಸಾರಥಿಗೆ ಹೇಳಿದನು.

> “ಸೂತ! ಕೌರವಾಧಮ ಶತ್ರು ಬಾಹ್ಲೀಕನನ್ನು ರಣದಲ್ಲಿ ಕೊಲ್ಲದೇ ರಣದಿಂದ ನಾನು ಹಿಂದಿರುಗುವುದಿಲ್ಲ. ನನ್ನ ಈ ಮಾತು ಸತ್ಯ.”

ಆಗ ಸಾರಥಿಯು ಸೈಂಧವದೇಶದ, ಮಹಾವೇಗಶಾಲೀ, ಶಂಖವರ್ಣದ, ಸರ್ವ ಶಬ್ಧಗಳನ್ನೂ ಅತಿಕ್ರಮಿಸಬಲ್ಲ ಆ ಕುದುರೆಗಳನ್ನು ರಣದಲ್ಲಿ ಮುಂದೆ ಹೋಗುವಂತೆ ಚಪ್ಪರಿಸಿದನು. ಹಿಂದೆ ದೈತ್ಯರವಧೆಗೆ ಸಿದ್ಧನಾದ ಇಂದ್ರನನ್ನು ಹೇಗೆ ಕುದುರೆಗಳು ಕೊಂಡೊಯ್ದವೋ ಹಾಗೆ ಯುಯುಧಾನನನ್ನು ಮನಸ್ಸು ಮತ್ತು ಮಾರುತರ ವೇಗವುಳ್ಳ ಅವನ ಕುದುರೆಗಳು ಕೊಂಡೊಯ್ದವು. ರಭಸದಿಂದ ರಣದಲ್ಲಿ ಬರುತ್ತಿದ್ದ ಸಾತ್ವತನನ್ನು ನೋಡಿ ಮಹಾಬಾಹು ಸೋಮದತ್ತನು ಗಾಬರಿಗೊಳ್ಳದೇ ಅವನೆದುರು ಧಾವಿಸಿದನು. ಮೋಡಗಳು ಭಾಸ್ಕರನನ್ನು ಮುಚ್ಚಿಬಿಡುವಂತೆ ಅವನು ಮಳೆಗರೆಯುವ ಮೋಡಗಳಂತೆ ಶರವರ್ಷಗಳನ್ನು ಸುರಿಸಿ ಶೈನೇಯನನ್ನು ಮುಚ್ಚಿದನು.

ಸಮರದಲ್ಲಿ ಗಾಬರಿಗೊಳ್ಳದೇ ಸಾತ್ಯಕಿಯು ಕುರುಪುಂಗವನನ್ನು

ಬಾಣಗಳ ಗುಂಪುಗಳಿಂದ ಎಲ್ಲಕಡೆಗಳಿಂದ ಮುಚ್ಚಿದನು. ಸೋಮದತ್ತನು ಆ ಮಾಧವನ ಎದೆಗೆ ಗುರಿಯಿಟ್ಟು ಅರವತ್ತು ಬಾಣಗಳನ್ನು ಹೊಡೆದನು. ಸಾತ್ಯಕಿಯೂ ಕೂಡ ಅವನನ್ನು ನಿಶಿತ ಸಾಯಕಗಳಿಂದ ಹೊಡೆದನು. ಅನ್ಯೋನ್ಯರನ್ನು ಶರಗಳಿಂದ ಕತ್ತರಿಸಿದ ಆ ನರರ್ಷಭರಿಬ್ಬರೂ ಪುಷ್ಪಸಮಯದಲ್ಲಿ ಚೆನ್ನಾಗಿ ಹೂಬಿಟ್ಟ ಕಿಂಶುಕ ಮರಗಳಂತೆ ವಿರಾಜಿಸಿದರು. ಸರ್ವಾಂಗಗಳಿಂದಲೂ ರಕ್ತವು ಸೋರುತ್ತಿರಲು ಆ ಕುರು-ವೃಷ್ಣಿ ಯಶಸ್ಕರು ಕಣ್ಣುಗಳಿಂದಲೇ ಪರಸ್ಪರರನ್ನು ಸುಟ್ಟುಬಿಡುವರೋ ಎನ್ನುವಂತೆ ನೋಡುತ್ತಿದ್ದರು. ರಥಮಂಡಲ ಮಾರ್ಗಗಳಲ್ಲಿ ಸಂಚರಿಸುತ್ತಾ ಆ ಅರಿಮರ್ದನರು ಮಳೆಸುರಿಸುತ್ತಿರುವ ಘೋರರೂಪೀ ಮೋಡಗಳಂತೆ ತೋರುತ್ತಿದ್ದರು. ಶರೀರದ ಪೂರ್ತಿ ಬಾಣಗಳು ಚುಚ್ಚಿಕೊಂಡಿರಲು ಬಾಣಗಳಿಂದ ಕ್ಷತವಿಕ್ಷತರಾಗಿದ್ದ ಅವರಿಬ್ಬರೂ ಗಾಯಗೊಂಡ ಮುಳ್ಳುಹಂದಿಗಳಂತೆ ತೋರುತ್ತಿದ್ದರು. ಸುವರ್ಣಪುಂಖಗಳುಳ್ಳ ಬಾಣಗಳಿಂದ ಚುಚ್ಚಲ್ಪಟ್ಟ ಅವರಿಬ್ಬರೂ ವರ್ಷಾಕಾಲದಲ್ಲಿ ಮಿಣುಕುಹುಳುಗಳಿಂದ ಆವೃತ ಎರಡು ವೃಕ್ಷಗಳಂತೆ ಕಾಣುತ್ತಿದ್ದರು. ಸಾಯಕಗಳಿಂದ ಸರ್ವಾಂಗಗಳು ಉರಿಯುತ್ತಿರಲು ಆ ಮಹಾರಥರು ರಣದಲ್ಲಿ ಉಲ್ಕೆಗಳಂತೆ ಮತ್ತು ಎರಡು ಕ್ರುದ್ಧ ಆನೆಗಳಂತೆ ಕಾಣುತ್ತಿದ್ದರು.

ಆಗ ಮಹಾರಥ ಸೋಮದತ್ತನು ಅರ್ಧಚಂದ್ರಾಕಾರದ ಬಾಣದಿಂದ ಮಾಧವನ ಮಹಾಧನುಸ್ಸನ್ನು ತುಂಡರಿಸಿದನು. ಆಗ ಅವನ ಮೇಲೆ ಇಪ್ಪತ್ತೈದು ಸಾಯಕಗಳನ್ನು ಪ್ರಯೋಗಿಸಿದನು ಮತ್ತು ತ್ವರೆಮಾಡಬೇಕಾದ ಸಮಯದಲ್ಲಿ ತ್ವರೆಮಾಡುತ್ತಾ ಪುನಃ ಹತ್ತು ಶರಗಳಿಂದ ಹೊಡೆದನು. ಆಗ ಸಾತ್ಯಕಿಯು ಇನ್ನೊಂದು ವೇಗವತ್ತರ ಧನುಸ್ಸನ್ನು ಹಿಡಿದು ತಕ್ಷಣವೇ ಐದು ಸಾಯಕಗಳಿಂದ ಸೋಮದತ್ತನನ್ನು ಹೊಡೆದನು. ಆಗ ಸಾತ್ಯಕಿಯು ರಣದಲ್ಲಿ ನಗುತ್ತಾ ಇನ್ನೊಂದು ಭಲ್ಲದಿಂದ ಬಾಹ್ಲೀಕನ ಕಾಂಚನ ಧ್ವಜವನ್ನು ಕತ್ತರಿಸಿದನು. ಧ್ವಜವು ಕೆಳಗೆ ಬಿದ್ದುದನ್ನು ನೋಡಿ ಗಾಬರಿಗೊಳ್ಳದೇ ಸೋಮದತ್ತನು ಶೈನೇಯನನ್ನು ಇಪ್ಪತ್ತೈದು ಸಾಯಕಗಳಿಂದ ಹೊಡೆದನು. ಕ್ರುದ್ಧ ಧನ್ವಿ ಸಾತ್ವತನೂ ಕೂಡ ಹರಿತ ಕ್ಷುರಪ್ರದಿಂದ ಸೋಮದತ್ತನ ಧನುಸ್ಸನ್ನು ತುಂಡರಿಸಿದನು. ದಂತವನ್ನು ತುಂಡುಮಾಡಿ ಆನೆಯನ್ನು ಪುನಃ ಪುನಃ ಹೊಡೆಯುವಂತೆ ಅವನನ್ನು ರುಕ್ಮಪುಂಖಗಳ ನೂರಾರು ನತಪರ್ವಗಳಿಂದ ಬಹಳಷ್ಟು ಹೊಡೆದನು. ಆಗ ಮಹಾರಥ ಸೋಮದತ್ತನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಸಾತ್ಯಕಿಯನ್ನು ಶರವೃಷ್ಟಿಯಿಂದ ಮುಚ್ಚಿದನು. ಸಾತ್ಯಕಿಯು ಸಂಕ್ರುದ್ಧನಾಗಿ ಸೋಮದತ್ತನನ್ನು ಹೊಡೆದನು. ಸೋಮದತ್ತನೂ ಕೂಡ ಸಾತ್ಯಕಿಯನ್ನು ಬಾಣಗಳ ಜಾಲದಿಂದ ಪೀಡಿಸಿದನು.

ಸಾತ್ವತನ ಸಹಾಯಮಾಡುತ್ತಿದ್ದ ಭೀಮನು ಆಗ ಬಾಹ್ಲೀಕಾತ್ಮಜನನ್ನು ಹತ್ತು ಬಾಣಗಳಿಂದ ಹೊಡೆದನು. ಆದರೆ ಸೋಮದತ್ತನು ಗಾಬರಿಗೊಳ್ಳದೇ ಶೈನೇಯನನ್ನು ಶರಗಳಿಂದ ಹೊಡೆದನು. ಆಗ ಸಾತ್ವತನಿಗೋಸ್ಕರವಾಗಿ ಭೈಮಸೇನಿಯು ಹೊಸದಾದ ದೃಡ ಘೋರ ಪರಿಘವನ್ನು ಸೋಮದತ್ತನ ಎದೆಯಮೇಲೆ ಪ್ರಯೋಗಿಸಿದನು. ವೇಗದಿಂದ ಬೀಳುತ್ತಿದ್ದ ಘೋರವಾಗಿ ಕಾಣುತ್ತಿದ್ದ ಆ ಪರಿಘವನ್ನು ಕೌರವನು ನಸುನಗುತ್ತಾ ತುಂಡರಿಸಿದನು. ಕಬ್ಬಿಣದ ಆ ಮಹಾ ಪರಿಘವು ಎರಡಾಗಿ ವಜ್ರದಿಂದ ಸೀಳಲ್ಪಟ್ಟ ಮಹಾ ಶಿಖರದಂತೆ ಭೂಮಿಯ ಮೇಲೆ ಬಿದ್ದಿತು. ಆಗ ಸಾತ್ಯಕಿಯು ಭಲ್ಲದಿಂದ ಸೋಮದತ್ತನ ಧನುಸ್ಸನ್ನು ಕತ್ತರಿಸಿದನು ಮತ್ತು ಐದು ಬಾಣಗಳಿಂದ ಅವನ ಕೈಚೀಲವನ್ನು ಕತ್ತರಿಸಿದನು. ತಕ್ಷಣವೇ ನಾಲ್ಕು ಬಾಣಗಳಿಂದ ಅವನ ನಾಲ್ಕು ಉತ್ತಮ ಕುದುರೆಗಳನ್ನೂ ಪ್ರೇತರಾಜನ ಸಮೀಪಕ್ಕೆ ಕಳುಹಿಸಿದನು. ರಥಶಾರ್ದೂಲ ಶಿನಿಪುಂಗವನು ನಸುನಗುತ್ತಾ ನತಪರ್ವಣ ಭಲ್ಲದಿಂದ ಸಾರಥಿಯ ಶಿರವನ್ನು ಅಪಹರಿಸಿದನು. ಆಗ ಸಾತ್ವತನು ಪಾವಕನಂತೆ ಉರಿಯುತ್ತಿರುವ ಮಹಾಘೋರ ಶಿಲಾಶಿತ ಸ್ವರ್ಣಪುಂಖವನ್ನು ಪ್ರಯೋಗಿಸಿದನು. ಶೈನೇಯನಿಂದ ಬಲವತ್ತರವಾಗಿ ಪ್ರಯೋಗಿಸಲ್ಪಟ್ಟ ಆ ಉತ್ತಮ ಘೋರ ಶರವು ಸೋಮದತ್ತನ ಎದೆಯಮೇಲೆ ಬಿದ್ದು ನಾಟಿತು. ಈ ರೀತಿ ಸಾತ್ವತನಿಂದ

ಬಲವತ್ತರವಾಗಿ ಹೊಡೆಯಲ್ಪಟ್ಟ ಮಹಾರಥ ಮಹಾಬಾಹು ಸೋಮದತ್ತನು ಕೆಳಗೆ ಬಿದ್ದು ಅಸುನೀಗಿದನು.

## ಯುಧಿಷ್ಠಿರ-ದ್ರೋಣರ ಯುದ್ಧ

ಸೋಮದತ್ತನು ಅಲ್ಲಿ ಹತನಾದುದನ್ನು ನೋಡಿ ಮಹಾರಥರು ಮಹಾ ಶರವರ್ಷಗಳಿಂದ ಯುಯುಧಾನನನ್ನು ಆಕ್ರಮಣಿಸಿದರು. ಶರಗಳಿಂದ ಮುಚ್ಚಲ್ಪಟ್ಟ ಯುಯುಧಾನನನ್ನು ನೋಡಿ ಯುಧಿಷ್ಠಿರನು ಮಹಾ ಸೇನೆಯೊಂದಿಗೆ ದ್ರೋಣನ ಸೇನೆಯನ್ನು ಆಕ್ರಮಣಿಸಿದನು. ಆಗ ಕ್ರುದ್ಧ ಯುಧಿಷ್ಠಿರನು, ಭಾರದ್ವಾಜನು ನೋಡುತ್ತಿದ್ದಂತೆಯೇ, ಕೌರವ ಮಹಾಬಲವನ್ನು ಶರಗಳಿಂದ ಹೊಡೆದು ಪಲಾಯನಗೊಳಿಸಿದನು. ಸೇನೆಗಳನ್ನು ಪಲಾಯನಗೊಳಿಸುತ್ತಿದ್ದ ಯುಧಿಷ್ಠಿರನನ್ನು ನೋಡಿ ದ್ರೋಣನು ಕ್ರೋಧದಿಂದ ಕೆಂಗಣ್ಣುಗಳುಳ್ಳವನಾಗಿ ವೇಗದಿಂದ ಅವನನ್ನು ಆಕ್ರಮಣಿಸಿದನು. ಆಗ ಅವನು ಪಾರ್ಥನನ್ನು ಏಳು ನಿಶಿತ ಬಾಣಗಳಿಂದ ಹೊಡೆದನು. ಹಾಗೆ ಗಾಢವಾಗಿ ಹೊಡೆದು ಕಟವಾಯಿಯನ್ನು ಸವರುತ್ತಾ ಅವನು ಯುಧಿಷ್ಠಿರನ ಧ್ವಜವನ್ನೂ ಧನುಸ್ಸನ್ನೂ ತುಂಡರಿಸಿದನು. ತ್ವರೆಮಾಡಬೇಕಾದ ಸಮಯದಲ್ಲಿ ತ್ವರೆಮಾಡುತ್ತಾ ಆ ನೃಪೋತ್ತಮನು ವೇಗದಿಂದ ಸಮರದಲ್ಲಿ ಇನ್ನೊಂದು ದೃಢ ಧನುಸ್ಸನ್ನು ತೆಗೆದುಕೊಂಡನು. ಆಗ ಪಾರ್ಥಿವನು

ನೂರಾರು ಸಹಸ್ರಾರು ಬಾಣಗಳಿಂದ ದ್ರೋಣನನ್ನು ಹೊಡೆದನು ಮತ್ತು ಅವನ ಕುದುರೆ-ಸೂತ-ಧ್ವಜ-ರಥಗಳನ್ನು ಹೊಡೆದನು. ಅದೊಂದು ಅದ್ಭುತವಾಗಿತ್ತು. ಆಗ ಶರಘಾತದಿಂದ ಪೀಡಿತ ದ್ರೋಣನು ಮುಹೂರ್ತಕಾಲ ರಥದಲ್ಲಿಯೇ ಕುಸಿದು ಕುಳಿತುಕೊಂಡನು. ಮುಹೂರ್ತದಲ್ಲಿಯೇ ಸಂಜ್ಞೆಯನ್ನು ಪಡೆದು ದ್ವಿಜಸತ್ತಮನು ಕ್ರೋಧದಿಂದ ಮಹಾವಿಷ್ಟನಾಗಿ ವಾಯವ್ಯಾಸ್ತ್ರವನ್ನು ಪ್ರಯೋಗಿಸಿದನು. ಆಗ ವೀರ್ಯವಾನ್ ಪಾರ್ಥನು ಗಾಬರಿಗೊಳ್ಳದೇ ಧನುಸ್ಸನ್ನು ಸೆಳೆದು ರಣದಲ್ಲಿ ಆ ಅಸ್ತ್ರವನ್ನು ಅಸ್ತ್ರದಿಂದಲೇ ಸ್ತಂಭಗೊಳಿಸಿದನು. ಆಗ ವಾಸುದೇವನು ಕುಂತೀಪುತ್ರ ಯುಧಿಷ್ಠಿರನಿಗೆ ಹೇಳಿದನು:

> “ಮಹಾಬಾಹೋ! ಯುಧಿಷ್ಠಿರ! ನಾನು ಹೇಳುವುದನ್ನು ಪ್ರಯತ್ನಿಸಿ ಕೇಳು! ದ್ರೋಣನೊಡನೆ ಮಾಡುವ ಈ ಯುದ್ಧವನ್ನು ಕೊನೆಗೊಳಿಸು. ಯುದ್ಧದಲ್ಲಿ ದ್ರೋಣನು ನಿನ್ನನ್ನು ಹಿಡಿಯುವುದಕ್ಕಾಗಿಯೇ ಸದಾ ಪ್ರಯತ್ನಿಸುತ್ತಿದ್ದಾನೆ. ಆದುದರಿಂದ ನೀನು ಅವನೊಡನೆ ಯುದ್ಧಮಾಡುವುದು ನಿನಗೆ ಉಚಿತವೆಂದು ತೋರುವುದಿಲ್ಲ. ಇವನ ವಿನಾಶಕ್ಕಾಗಿ ಯಾರು ಸೃಸ್ಟಿಸಲ್ಪಟ್ಟಿರುವನೋ ಅವನು ಇವನನ್ನು ನಾಳೆ ಕೊಲ್ಲುವವನಿದ್ದಾನೆ. ಗುರುವನ್ನು ತೊರೆದು ಎಲ್ಲಿ ರಾಜಾ

ಸುಯೋಧನನು ಕೌರವರೊಡಗೂಡಿ ರಥಶಾರ್ದೂಲ
ಭೀಮನೊಡನೆ ಯುದ್ಧಮಾಡುತ್ತಿರುವನೋ ಅಲ್ಲಿಗೆ ಹೋಗು.”

ವಾಸುದೇವನ ಮಾತನ್ನು ಕೇಳಿ ಧರ್ಮರಾಜ ಯುಧಿಷ್ಠಿರನು ಮುಹೂರ್ತಕಾಲ ಆ ದಾರುಣ ಯುದ್ಧದ ಕುರಿತು ಯೋಚಿಸಿದನು. ಅನಂತರ ಬಾಯ್ದೆರೆದ ಅಂತಕನಂತೆ ಕೌರವ ಯೋಧರನ್ನು ಸಂಹರಿಸುತ್ತಾ ಆ ಅಮಿತ್ರಘ್ನನು ಭೀಮನು ಎಲ್ಲಿದ್ದನೋ ಅಲ್ಲಿಗೆ ಧಾವಿಸಿದನು. ಮಹಾರಥಘೋಷದಿಂದ ವಸುಧಾತಲವನ್ನು ಮೊಳಗಿಸುತ್ತಾ, ಬೇಸಗೆಯ ಕೊಲೆಯಲ್ಲಿನ ಮೋಡಗಳಂತೆ ದಿಕ್ಕು ದಿಕ್ಕುಗಳನ್ನು ಮೊಳಗುತ್ತಾ ಪಾಂಡವನು ಶತ್ರುಗಳನ್ನು ಸಂಹರಿಸುತ್ತಿದ್ದ ಭೀಮನ ಪಾರ್ಷ್ಣಿಯನ್ನು ಹಿಡಿದನು. ದ್ರೋಣನೂ ಕೂಡ ಆ ರಾತ್ರಿಯಲ್ಲಿ ಪಾಂಡು-ಪಾಂಚಾಲರನ್ನು ವಧಿಸತೊಡಗಿದನು.

## ದೀಪೋದ್ಯೋತನ

ಘೋರರೂಪೀ ಭಯಾವಹ ಆ ಯುದ್ಧವು ಹಾಗೆ ನಡೆಯುತ್ತಿರಲು ಲೋಕವು ಕತ್ತಲೆ ಮತ್ತು ಧೂಳಿನಿಂದ ಮುಚ್ಚಿಹೋಯಿತು. ರಣದಲ್ಲಿ ಎದುರಿಸಿದ್ದ ಯೋಧರಿಗೆ ಪರಸ್ಪರರನ್ನು ಗುರುತಿಸಲಾಗುತ್ತಿರಲಿಲ್ಲ. ಅನುಮಾನದಿಂದ ಮತ್ತು ಸಂಕೇತಗಳಿಂದ ಆ ಮನುಷ್ಯ-ಆನೆ-ಕುದುರೆಗಳ ಸಂಹಾರಕಾರ್ಯ, ರೋಮರಾಶಿಗಳು ನಿಮಿರಿ ನಿಲ್ಲುವಷ್ಟು

ರೋಮಾಂಚಕಾರಿ ಮಹಾ ಯುದ್ಧವು ನಡೆಯಿತು. ವೀರರಾದ ದ್ರೋಣ-ಕರ್ಣ-ಕೃಪರು ಮತ್ತು ಭೀಮ-ಪಾರ್ಷತ-ಸಾತ್ಯಕಿಯರು ಅನ್ಯೋನ್ಯರ ಸೇನೆಗಳನ್ನು ಅಲ್ಲೋಲಕಲ್ಲೋಲಗೊಳಿಸುತ್ತಿದ್ದರು. ಮಹಾರಥರಿಂದ ವಧಿಸಲ್ಪಟ್ಟು ಸೇನೆಗಳು ಎಲ್ಲಕಡೆ ಓಡಿಹೋಗುತ್ತಿದ್ದವು. ಹಾಗೆಯೇ ಕತ್ತಲೆ ಮತ್ತು ಧೂಳಿನಿಂದ ದಿಕ್ಕುಕಾಣದೆ ಸೇನೆಗಳು ಓಡಿ ಹೋಗುತ್ತಿದ್ದವು. ಬಳಲಿ ನಿದ್ದೆಗೆಟ್ಟಿದ್ದ ಯೋಧರು ಎಲ್ಲಕಡೆ ಓಡಿಹೋಗುತ್ತಿದ್ದವರನ್ನೂ ಯುದ್ಧದಲ್ಲಿ ಸಂಹರಿಸಿದರು. ದುರ್ಯೋಧನನ ಯೋಜನೆಯಂತೆ ಆ ರಾತ್ರಿಯ ಅಂಧಕಾರದಲ್ಲಿ ಸಹಸ್ರಾರು ಮೂಢ ಮಹಾರಥರು ರಣರಂಗದಲ್ಲಿ ಅನ್ಯೋನ್ಯರನ್ನು ಸಂಹರಿಸಿದರು. ಆಗ ರಣಾಂಗಣವು ಗಾಢಾಂಧಕಾರದಿಂದ ಆವೃತವಾಗಿರಲು ಎಲ್ಲ ಸೇನೆಗಳೂ, ಸೇನಾಧಿಪತಿಗಳೂ ಮೋಹಗೊಂಡರು.

ಅನಂತರ ದುರ್ಯೋಧನನು ಅಳಿಯದೇ ಉಳಿದಿರುವ ಎಲ್ಲ ಸೇನೆಗಳನ್ನೂ ಸೇನಾನಾಯಕರನ್ನೂ ಒಟ್ಟುಗೂಡಿಸಿ ಪುನಃ ಒಂದು ನೂತನ ವ್ಯೂಹವನ್ನೇ ಕಲ್ಪಿಸಿದನು. ಆ ವ್ಯೂಹದ ಮುಂಬಾಗದಲ್ಲಿ ದ್ರೋಣ, ಹಿಂಬಾಗದಲ್ಲಿ ಶಲ್ಯ, ಪಕ್ಕಗಳಲ್ಲಿ ದ್ರೌಣಿ-ಸೌಬಲರಿದ್ದರು. ಸ್ವಯಂ ರಾಜಾ ದುರ್ಯೋಧನನು ಆ ರಾತ್ರಿಯಲ್ಲಿ ಸರ್ವಸೇನೆಗಳನ್ನು

ರಕ್ಷಿಸುತ್ತಾ ಮುಂದೆ ಹೋಗುತ್ತಿದ್ದನು. ರಾಜಾ ದುರ್ಯೋಧನನು ಸಾಂತ್ವನಪೂರ್ವಕವಾಗಿ ಎಲ್ಲ ಪದಾತಿಪಡೆಗಳಿಗೆ ಈ ರೀತಿ ಹೇಳಿದನು:

> "ನೀವೆಲ್ಲರೂ ಪರಮ ಆಯುಧಗಳನ್ನು ಕೆಳಗಿಟ್ಟು
> ಪ್ರಜ್ವಲಿಸುತ್ತಿರುವ ಪಂಜುಗಳನ್ನು ಹಿಡಿದುಕೊಳ್ಳಿರಿ!"

ಪಾರ್ಥಿವಸತ್ತಮನಿಂದ ಹೀಗೆ ಪ್ರಚೋದನೆಗೊಂಡ ಯೋಧರು ಸಂತೋಷಗೊಂಡು ಉರಿಯುತ್ತಿರುವ ಪಂಜುಗಳನ್ನು ಹಿಡಿದುಕೊಂಡರು. ಆ ಅಗ್ನಿಪ್ರಭೆಯಿಂದ ರಾತ್ರಿಯಾಗಿದ್ದರೂ ಎರಡು ಕಡೆಯ ದಳಗಳು ಪ್ರತ್ಯೇಕವಾಗಿ ಕಾಣತೊಡಗಿದವು. ಅಮೂಲ್ಯ ದಿವ್ಯ ಆಭರಣಗಳ ಮತ್ತು ಹೊಳೆಯುತ್ತಿದ್ದ ಶಸ್ತ್ರಗಳ ಮೇಲೆ ಬೆಳಕು ಬಿದ್ದು ಎರಡೂ ಪಕ್ಷಗಳ ಸೇನೆಗಳು ಪ್ರಕಾಶಮಾನವಾಗಿ ಕಾಣುತ್ತಿದ್ದವು. ಎಣ್ಣೆಯನ್ನೂ ಪಂಜುಗಳನ್ನೂ ಹಿಡಿದಿದ್ದ ಪದಾತಿಗಳು ಬೆಳಕನ್ನು ತೋರಿಸುತ್ತಿರಲು ಎಲ್ಲ ಸೇನೆಗಳೂ ರಾತ್ರಿಯ ಆಕಾಶದಲ್ಲಿ ಮಿಂಚುಗಳಿಂದ ಬೆಳಗಿಸಲ್ಪಡುತ್ತಿದ್ದ ಕಪ್ಪು ಮೋಡಗಳಂತೆ ತೋರುತ್ತಿದ್ದವು. ಹಾಗೆ ಪ್ರಕಾಶಿತಗೊಂಡ ಸೇನೆಗಳ ಮಧ್ಯೆ ಸುವರ್ಣಕವಚವನ್ನು ಧರಿಸಿದ್ದ ದ್ರೋಣನು ಮಧ್ಯಾಹ್ನದ ಸೂರ್ಯನಂತೆ ಅಗ್ನಿಸದೃಶನಾಗಿ ಬೆಳಗುತ್ತಿದ್ದನು. ಸುವರ್ಣಮಯ ಆಭರಣಗಳಲ್ಲಿಯೂ, ಎದೆಗೆ ಹಾಕುವ ಶುದ್ಧ ನಿಷ್ಕಗಳಲ್ಲಿಯೂ,

ಧನುಸ್ಸುಗಳಲ್ಲಿಯೂ, ಪೀತಲ ಶಸ್ತ್ರಗಳಲ್ಲಿಯೂ ಪಂಜುಗಳ ಬೆಳಕು ಪ್ರತಿಬಿಂಬಿಸುತ್ತಿದ್ದವು. ಝಳಪಿಸುತ್ತಿದ್ದ ಗದೆಗಳೂ, ಶಕ್ತ್ಯಾಯುಧಗಳೂ, ಪರಿಘಗಳೂ, ರಥಶಕ್ತಿಗಳೂ ಪಂಜುಗಳನ್ನು ಪ್ರತಿಬಿಂಬಿಸುತ್ತಾ ಪುನಃ ಪುನಃ ಇನ್ನೂ ಅನೇಕ ದೀಪಗಳಿವೆಯೋ ಎನ್ನುವಂತೆ ತೋರುತ್ತಿತ್ತು. ಛತ್ರಗಳೂ, ಚಾಮರಗಳೂ, ಖಡ್ಗಗಳೂ, ಅಲ್ಲಾಡುತ್ತಿದ್ದ ಸುವರ್ಣಮಾಲೆಗಳೂ ಆಗ ದೀಪಗಳ ಬೆಳಕಿನಿಂದ ಶೋಭಾಯಮಾನವಾಗಿ ಕಾಣುತ್ತಿದ್ದವು. ಶಸ್ತ್ರಗಳ ಪ್ರಭೆಗಳಿಂದ ಮತ್ತು ದೀವಟಿಗೆಗಳ ಪ್ರಭೆಯಿಂದ ವಿರಾಜಮಾನವಾಗಿ ಕಾಣುತ್ತಿದ್ದ ಕೌರವ ಸೇನೆಯು ಆಗ ಆಭರಣ ಪ್ರಭೆಯಿಂದ ಇನ್ನೂ ಹೆಚ್ಚಿನ ಪ್ರಕಾಶದಿಂದ ಬೆಳಗುತ್ತಿತ್ತು. ಬಂಗಾರದ ಬಣ್ಣದ ಶಸ್ತ್ರಗಳೂ ಮತ್ತು ಅಲ್ಲಾಡುತಿದ್ದ ವೀರರ ಕವಚಗಳೂ ದೀವಟಿಗೆಗಳ ಪ್ರಭೆಯನ್ನು ಆಗಾಗ ಪ್ರತಿಬಿಂಬಿಸುತ್ತಿರಲು ಅಂತರಿಕ್ಷದಲ್ಲಿರುವ ಮಿಂಚುಗಳಂತೆ ಹೊಳೆಯುತ್ತಿದ್ದವು. ಹೊಡೆತಗಳ ವೇಗದಿಂದ ಪ್ರಕಂಪಿಸುತ್ತಿದ್ದ, ಪ್ರಹರಿಸಲು ವೇಗವಾಗಿ ಮುಂದೆ ಬರುತ್ತಿದ್ದ ಮನುಷ್ಯರ ಮುಖಗಳು ಗಾಳಿಯಿಂದ ವಿಚಲಿತವಾದ ದೊಡ್ಡ ದೊಡ್ಡ ಕಮಲಗಳಂತೆ ಕಾಣುತ್ತಿದ್ದವು. ಮಹಾವನದಲ್ಲಿ ಉರಿಯುತ್ತಿರುವ ಕಾಡ್ಗಿಚ್ಚು ಹೇಗೆ ಭಾಸ್ಕರನ ಪ್ರಭೆಯನ್ನೂ ಕುಂಠಿತಗೊಳಿಸುತ್ತದೆಯೋ ಹಾಗೆ ಆ ಮಹಾಭಯಂಕರ ಭೀಮರೂಪದ ಕೌರವ ಸೇನೆಯು ಬೆಳಗಿ

ಪ್ರಕಾಶಿಸುತ್ತಿತ್ತು.

ಕೌರವರ ಸೇನೆಯು ಹಾಗೆ ಬೆಳಗುತ್ತಿರುವುದನ್ನು ನೋಡಿ ಪಾರ್ಥರೂ ಕೂಡ ಕೂಡಲೇ ತಮ್ಮ ಎಲ್ಲ ಸೇನೆಗಳ ಪದಾತಿಪಡೆಗಳಿಗೆ ದೀವಟಿಗೆಗಳನ್ನು ಹಿಡಿದು ಬೆಳಕುತೋರುವಂತೆ ಪ್ರಚೋದಿಸಿದರು. ಪ್ರತಿಯೊಂದು ಆನೆಯ ಮೇಲೂ ಏಳೇಳು ದೀಪಗಳನ್ನಿಟ್ಟಿದ್ದರು. ಪ್ರತಿಯೊಂದು ರಥದಲ್ಲಿ ಹತ್ತು ಹತ್ತು ದೀಪಗಳನ್ನಿಟ್ಟಿದ್ದರು. ಪ್ರತಿಯೊಂದು ಕುದುರೆಯ ಮೇಲೂ, ಪಾರ್ಶ್ವಗಳಲ್ಲಿಯೂ, ಧ್ವಜಗಳಲ್ಲಿಯೂ ಮತ್ತು ಜಘನಗಳಲ್ಲಿಯೂ ಎರಡೆರಡು ದೀಪಗಳನ್ನು ಇಟ್ಟಿದ್ದರು. ಎಲ್ಲ ಸೇನೆಗಳ ಪಾರ್ಶ್ವಗಳಲ್ಲಿಯೂ, ಹಿಂದೆ-ಮುಂದೆ ಮತ್ತು ಸುತ್ತಲೂ, ಮಧ್ಯದಲ್ಲಿಯೂ ಉರಿಯುತ್ತಿರುವ ದೀವಟಿಗೆಗಳನ್ನು ಹಿಡಿದ ನರರು ಎರಡೂ ಸೇನೆಗಳ ಮಧ್ಯೆ ಸಂಚರಿಸುತ್ತಿದ್ದರು. ಎಲ್ಲ ಸೇನೆಗಳಲ್ಲಿಯೂ ಪದಾತಿಪಡೆಗಳು ಆನೆ-ರಥ-ಕುದುರೆಗಳ ಗುಂಪುಗಳೊಡನೆ ಮಧ್ಯ ಮಧ್ಯದಲ್ಲಿ ಮಿಶ್ರಿತವಾಗಿ ಪಾಂಡುಸುತನ ಸೇನೆಯನ್ನು ಬೆಳಗಿಸಿದರು. ಕಿರಣಗಳನ್ನು ಹೊರಸೂಸುವ ಮತ್ತು ಕಿರಣಗಳನ್ನು ಹೊಂದಿರುವ ದಿವಾಕರ ಸೂರ್ಯಗ್ರಹನಿಂದ ರಕ್ಷಿತ ಅಗ್ನಿಯು ರಾತ್ರಿಯಲ್ಲಿ ಹೆಚ್ಚು ಪ್ರಕಾಶಮಾನನಾಗಿ ಉರಿಯುವಂತೆ ಯುಧಿಷ್ಠಿರನ ಸೇನೆಗಳ ದೀಪಗಳಿಂದ ಕೌರವ ಸೇನೆಗಳ ಪ್ರಕಾಶವೂ ಹೆಚ್ಚಾಗಿ ತೋರಿತು. ಆ ಪ್ರಭೆಗಳು ಪೃಥ್ವಿ, ಅಂತರಿಕ್ಷ ಮತ್ತು ಎಲ್ಲ

ದಿಕ್ಕುಗಳನ್ನೂ ಅತಿಕ್ರಮಿಸಿ ಬೆಳೆಯಲು ಅವುಗಳ ಪ್ರಕಾಶದಿಂದ ಕೌರವರ ಮತ್ತು ಪಾಂಡವರ ಸೇನೆಗಳು ಇನ್ನೂ ಪ್ರಕಾಶಮಾನವಾಗಿ ಕಾಣುತ್ತಿದ್ದವು.

ಆ ಬೆಳಕಿನಿಂದ ಆಹ್ವಾನಿತರಾಗಿ ದಿವಂಗಮದಲ್ಲಿ ದೇವಗಣಗಳೂ, ಗಂಧರ್ವ-ಯಕ್ಷ-ಅಸುರ-ಸಿದ್ಧ ಸಂಘಗಳು ಮತ್ತು ಎಲ್ಲ ಅಪ್ಸರೆಯರೂ ಬಂದು ಸೇರಿದರು. ಆ ದೇವ-ಗಂಧರ್ವ ಸಮಾಕುಲಗಳಿಂದ, ಯಕ್ಷ-ಅಸುರ-ಇಂದ್ರ ಅಪ್ಸರ ಗಣಗಳಿಂದ ಮತ್ತು ಹತರಾಗಿ ದಿವವನ್ನು ಏರಿದ್ದ ವೀರರಿಂದ ಕೂಡಿದ್ದ ಆ ಆಕಾಶವು ಸ್ವರ್ಗಲೋಕದಂತೆಯೇ ಕಂಡಿತು. ಬೆಳಗುತ್ತಿರುವ ರಥ-ಅಶ್ವ-ಗಜ ಸಮೂಹಗಳಿಂದ, ಹತರಾಗುತ್ತಿದ್ದ ಮತ್ತು ಓಡಿಹೋಗುತ್ತಿದ್ದ ಯೋಧರಿಂದ ಕೂಡಿದ್ದ ಆ ರಥಾಶ್ವಗಜ ಸೇನೆಗಳ ಮಹಾಬಲವು ಸುರಾಸುರರ ವ್ಯೂಹಗಳ ಸಮನಾಗಿದ್ದವು. ಆ ರಾತ್ರಿಯ ಯುದ್ಧದಲ್ಲಿ ಶಕ್ತ್ಯಾಯುಧಗಳ ಪ್ರಯೋಗವೇ ಚಂಡಮಾರುತವಾಗಿತ್ತು. ಮಹಾರಥಗಳೇ ಮೋಡಗಳಾಗಿದ್ದವು. ರಥ-ಕುದುರೆಗಳ ಘೋಷವೇ ಗುಡುಗುಗಳಾಗಿದ್ದವು. ಶಸ್ತ್ರಗಳ ಪ್ರಯೋಗವೇ ಸುರಿಮಳೆಯಂತಿತ್ತು. ರಕ್ತವೇ ಮಳೆಯ ನೀರಾಗಿತ್ತು. ಮಳೆಗಾಲವು ಮುಗಿಯುತ್ತಲೇ ಹೇಗೆ ಸೂರ್ಯನು ಆಕಾಶದ ಮಧ್ಯದಲ್ಲಿಯೇ ಇರುತ್ತಾನೋ ಹಾಗೆ ಆ ಸೇನೆಯಲ್ಲಿ ಮಹಾಅಗ್ನಿಪ್ರತಿಮನಾಗಿದ್ದ ಮಹಾತ್ಮ ದ್ರೋಣನು

ಪಾಂಡವ ಪ್ರಮುಖರನ್ನು ಸಂತಾಪಗೊಳಿಸಿದನು.

## ದುರ್ಯೋಧನನು ದ್ರೋಣನನ್ನು ರಕ್ಷಿಸಲು ಆದೇಶವನ್ನಿತ್ತಿದುದು

ಕತ್ತಲೆಯು ತುಂಬಿದ್ದ ಆ ರಾತ್ರಿಯಲ್ಲಿ ಲೋಕವು ಹಾಗೆ ಪ್ರಕಾಶಿತಗೊಂಡಿರಲು ಪರಸ್ಪರರನ್ನು ವಧಿಸಲು ಬಯಸಿದ ವೀರರಥರು ಸೇರಿದರು. ಪರಸ್ಪರರನ್ನು ಅಪರಾಧಿಗಳೆಂದು ತಿಳಿದು ಶಸ್ತ್ರ-ಪ್ರಾಸಗಳನ್ನು ಹಿಡಿದ ಅವರು ರಣದಲ್ಲಿ ಒಟ್ಟಾಗಿ ಪರಸ್ಪರರನ್ನು ವೀಕ್ಷಿಸುತ್ತಿದ್ದರು. ಎಲ್ಲ ಕಡೆಗಳಲ್ಲಿ ಸಹಸ್ರಾರು ದೀಪಗಳಿಂದ ಬೆಳಗುತ್ತಿದ್ದ ಆ ರಣಭೂಮಿಯು ಗ್ರಹಗಳಿಂದ ತುಂಬಿದ ಆಕಾಶದಂತೆ ವಿರಾಜಿಸುತ್ತಿತ್ತು. ನೂರಾರು ದೀವಟಿಗೆಗಳಿಂದ ಪ್ರಜ್ವಲಿತಗೊಂಡ ಆ ರಣಭೂಮಿಯು ಪ್ರಳಯಕಾಲದಲ್ಲಿ ದಹಿಸುತ್ತಿರುವ ವಸುಂಧರೆಯಂತೆ ವಿರಾಜಿಸುತ್ತಿತ್ತು. ಸುತ್ತಲೂ ಇದ್ದ ಆ ದೀವಟಿಗೆಗಳಿಂದ ಎಲ್ಲ ದಿಕ್ಕುಗಳೂ ಬೆಳಗಿ, ವರ್ಷಾಕಾಲದ ಪ್ರದೋಷಕಾಲದಲ್ಲಿ ಮಿಂಚುಹುಳುಗಳಿಂದ ತುಂಬಿದ ವೃಕ್ಷಗಳಂತೆ ತೋರುತ್ತಿದ್ದವು. ಅಲ್ಲಿ ವೀರರು ವೀರರೊಂದಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಯುದ್ಧದಲ್ಲಿ ತೊಡಗಿದರು. ಆನೆಗಳು ಆನೆಗಳೊಡನೆಯೂ ಅಶ್ವಾರೋಹಿಗಳು ಅಶ್ವಾರೋಹಿಗಳೊಡನೆಯೂ ಯುದ್ಧದಲ್ಲಿ ತೊಡಗಿದರು. ಆ ಘೋರ ರಾತ್ರಿಯ ಪ್ರಾರಂಭದಲ್ಲಿ ದುರ್ಯೋಧನನ ಶಾಸನದಂತೆ ರಥಾರೂಢರು ಮುದಾನ್ವಿತರಾಗಿ ರಥಾರೂಢರೊಂದಿಗೇ ಯುದ್ಧದಲ್ಲಿ ತೊಡಗಿದರು. ಆಗ ಅರ್ಜುನನು ತ್ವರೆಮಾಡಿ ಎಲ್ಲ ಪಾರ್ಥಿವರನ್ನೂ ಸಂಹರಿಸುತ್ತಾ ಕೌರವರ ಸೇನೆಯನ್ನು ಧ್ವಂಸಗೊಳಿಸಲು ಉಪಕ್ರಮಿಸಿದನು.

ಆ ರಾತ್ರಿಯಲ್ಲಿ ದ್ರೋಣನು ಯುದ್ಧಮಾಡಲು ಬಯಸುತ್ತಿದ್ದಾನೆಂದು

ತಿಳಿದ ದುರ್ಯೋಧನನು ತನ್ನ ವಶವರ್ತಿಗಳಾಗಿದ್ದ ಅನುಜರಿಗೆ – ವಿಕರ್ಣ, ಚಿತ್ರಸೇನ, ದುರ್ಧರ್ಷ, ದೀರ್ಘಬಾಹು ಮತ್ತು ಅವರ ಅನುಯಾಯಿಗಳಿಗೆ ಹೇಳಿದನು:

> "ಪರಾಕ್ರಾಂತರಾದ ನೀವೆಲ್ಲರೂ ಪ್ರಯತ್ನಪಟ್ಟು ದ್ರೋಣನನ್ನು ಹಿಂದಿನಿಂದ ರಕ್ಷಿಸಿ. ಹಾಗೆಯೇ ಕೃತವರ್ಮನು ಅವನ ಬಲಚಕ್ರವನ್ನೂ ಶಲ್ಯನು ಎಡ ಚಕ್ರವನ್ನೂ ರಕ್ಷಿಸಲಿ!"

ತ್ರಿಗರ್ತರಲ್ಲಿ ಅಳಿದುಳಿದಿದ್ದ ಮಹಾರಥರೆಲ್ಲರನ್ನು ಕೂಡ ದುರ್ಯೋಧನನು ದ್ರೋಣನ ರಥದ ಮುಂಬಾಗದಲ್ಲಿ ಹೋಗುವಂತೆ ಪ್ರಚೋದಿಸಿದನು.

> "ಆಚಾರ್ಯನು ಚೆನ್ನಾಗಿ ಪ್ರಯತ್ನಿಸುತ್ತಿರುವನು. ಪಾಂಡವರೂ ಕೂಡ ಚೆನ್ನಾಗಿ ಪ್ರಯತ್ನಿಸುತ್ತಿದ್ದಾರೆ. ರಣದಲ್ಲಿ ಶತ್ರುಗಳನ್ನು ಸಂಹರಿಸುವ ದ್ರೋಣನನ್ನು ನೀವು ಅತಿ ಪ್ರಯತ್ನದಿಂದ ರಕ್ಷಿಸಿರಿ. ಏಕೆಂದರೆ ದ್ರೋಣನೇ ಬಲವಾನನು. ಯುದ್ಧದಲ್ಲಿ ವೇಗದ ಕೈಚಳಕವುಳ್ಳವನು. ಪರಾಕ್ರಮಿಯು. ಯುದ್ಧದಲ್ಲಿ ತ್ರಿದಶರನ್ನೂ ಜಯಿಸಬಲ್ಲನು. ಇನ್ನು ಸೋಮಕರೊಂದಿಗೆ ಪಾರ್ಥರು ಯಾವ ಲೆಖ್ಖಕ್ಕೆ? ನೀವೆಲ್ಲ ಮಹಾರಥರೂ ಒಟ್ಟಾಗಿ ಬಹಳ ಪ್ರಯತ್ನದಿಂದ ದ್ರೋಣನನ್ನು ಮಹಾರಥ

ಪಾಂಚಾಲ್ಯ ಧೃಷ್ಟದ್ಯುಮ್ನನಿಂದ ರಕ್ಷಿಸಿರಿ! ಧೃಷ್ಟದ್ಯುಮ್ನನನ್ನು ಬಿಟ್ಟು ಪಾಂಡವರ ಸೇನೆಯಲ್ಲಿ ರಣದಲ್ಲಿ ದ್ರೋಣನನ್ನು ಜಯಿಸಬಲ್ಲ ಬೇರೆ ಯೋಧರು ಯಾರನ್ನೂ ನಾನು ಕಾಣೆ! ಭಾರದ್ವಾಜನ ರಕ್ಷಣೆಯು ನಮ್ಮೆಲ್ಲರ ಕರ್ತವ್ಯವೆಂದು ಭಾವಿಸಿರಿ. ಹಾಗೆ ನಮ್ಮಿಂದ ರಕ್ಷಿಸಲ್ಪಟ್ಟರೆ ಅವನು ರಾಜರೊಂದಿಗೆ ಸೃಂಜಯರನ್ನು ಸಂಹರಿಸಬಲ್ಲನು. ಹಾಗೆ ಸೃಂಜಯರು ಎಲ್ಲರೂ ಹತರಾದನಂತರ ರಣಭೂಮಿಯಲ್ಲಿ ಧೃಷ್ಟದ್ಯುಮ್ನನನ್ನು ದ್ರೌಣಿ ಅಶ್ವತ್ಥಾಮನು ಸಂಹರಿಸುತ್ತಾನೆ ಎನ್ನುವುದರಲ್ಲಿ ಸಂಶಯವಿಲ್ಲ. ಹಾಗೆಯೇ ರಣದಲ್ಲಿ ಮಹಾರಥ ಕರ್ಣನು ಅರ್ಜುನನನ್ನು ಜಯಿಸುತ್ತಾನೆ. ಕವಚಧಾರಿಯಾಗಿ ನಾನು ಯುದ್ಧದಲ್ಲಿ ಭೀಮಸೇನನನ್ನು ಜಯಿಸುತ್ತೇನೆ. ಹೀಗೆ ನನ್ನ ವಿಜಯವು ದೀರ್ಘಕಾಲದವರೆಗೂ ಇರುತ್ತದೆ ಎಂದು ವ್ಯಕ್ತವಾಗುತ್ತಿದೆ. ಆದುದರಿಂದ ಮಹಾರಥರೇ! ಸಂಗ್ರಾಮದಲ್ಲಿ ದ್ರೋಣನನ್ನೇ ರಕ್ಷಿಸಿರಿ!”

ಹೀಗೆ ಹೇಳಿ ದುರ್ಯೋಧನನು ಆ ದಾರುಣ ರಾತ್ರಿಯಲ್ಲಿ ಸೈನ್ಯಕ್ಕೆ ಆದೇಶಗಳನ್ನಿತ್ತನು. ಆಗ ಆ ರಾತ್ರಿಯಲ್ಲಿ ವಿಜಯದ ಗುರಿಯನ್ನೇ ಬಯಸಿದ ಎರಡೂ ಸೇನೆಗಳ ಮಧ್ಯೆ ಘೋರ ಯುದ್ಧವು ನಡೆಯಿತು.

ಅರ್ಜುನನು ಕೌರವ ಸೇನೆಯನ್ನೂ, ಕೌರವರು ಅರ್ಜುನನನ್ನೂ ಅನ್ಯೋನ್ಯರನ್ನು ನಾನಾ ಶಸ್ತ್ರಗಳನ್ನು ಬಳಸಿ ಪೀಡಿಸಿದರು. ಯುದ್ಧದಲ್ಲಿ ದ್ರೌಣಿಯು ಪಾಂಚಾಲರಾಜರನ್ನೂ ಭಾರದ್ವಾಜನು ಸೃಂಜಯರನ್ನೂ ಸನ್ನತಪರ್ವ ಶರಗಳಿಂದ ಮುಸುಕತೊಡಗಿದರು. ಪರಸ್ಪರರನ್ನು ಸಂಹರಿಸುತ್ತಿದ್ದ ಪಾಂಡು-ಪಾಂಚಾಲ ಸೇನೆ ಮತ್ತು ಕುರು ಸೇನೆಗಳಲ್ಲಿ ಘೋರ ಆರ್ತನಾದಗಳುಂಟಾದವು. ಈಗಿನವರಾಗಲೀ ಪೂರ್ವಜರಾಗಲೀ ಅಂತಹ ಯುದ್ಧವನ್ನು ಕಂಡಿರಲಿಲ್ಲ ಕೇಳಿರಲಿಲ್ಲ. ಅಂತಹ ಮಹಾಭಯಂಕರ ಯುದ್ಧವು ಆ ರಾತ್ರಿ ನಡೆಯಿತು.

ಆ ರೌದ್ರ ಸರ್ವಭೂತಕ್ಷಯಕರ ರಾತ್ರಿಯುದ್ಧವು ನಡೆಯುತ್ತಿರಲು ಯುಧಿಷ್ಠಿರನು ಪಾಂಡವ-ಪಾಂಚಾಲ-ಸೋಮಕರನ್ನುದ್ದೇಶಿಸಿ "ದ್ರೋಣನನ್ನೇ ಸಂಹರಿಸುವ ಉದ್ದೇಶದಿಂದ ಹೋಗಿ ಆಕ್ರಮಣ ಮಾಡಿ!" ಎಂದು ಹೇಳಿದನು. ರಾಜನ ಆ ಮಾತುಗಳಂತೆ ಪಾಂಚಾಲ-ಸೋಮಕರು ಭೈರವ ಗರ್ಜನೆಯನ್ನು ಗರ್ಜಿಸುತ್ತಾ ದ್ರೋಣನನ್ನೇ ಆಕ್ರಮಣಿಸಿದರು. ಪ್ರತಿಯಾಗಿ ಗರ್ಜಿಸುತ್ತಾ ಕೋಪದಿಂದ ಕೌರವರು ಅವರನ್ನು ಎದುರಿಸಿ ಯಥಾಶಕ್ತಿಯಾಗಿ, ಯಥೋತ್ಸಾಹದಿಂದ ಮತ್ತು ಯಥಾಸತ್ತ್ವದೊಂದಿಗೆ ರಣದಲ್ಲಿ ಯುದ್ಧಮಾಡಿದರು.

ಸಂಹರಿಸಲು ದ್ರೋಣನ ಕಡೆ ಬರುತ್ತಿದ್ದ ಯುಧಿಷ್ಠಿರನನ್ನು ಮದಿಸಿದ

ಆನೆಯೊಂದನ್ನು ಇನ್ನೊಂದು ಮದಿಸಿದ ಆನೆಯು ತಡೆಯುವಂತೆ ಹಾರ್ದಿಕ್ಯ ಕೃತವರ್ಮನು ತಡೆದು ಆಕ್ರಮಣಿಸಿದನು. ಸುತ್ತಲೂ ಶರಗಳ ಮಳೆಯನ್ನು ಸುರಿಸುತ್ತಿದ್ದ ಶೈನೇಯ ಸಾತ್ಯಕಿಯನ್ನು ಸಂಗ್ರಾಮದ ನಡುವಿನಲ್ಲಿ ಕೌರವ ಭೂರಿಯು ಎದುರಿಸಿದನು. ದ್ರೋಣನ ಬಳಿಹೋಗಲು ಬರುತ್ತಿದ್ದ ಸಹದೇವನನ್ನು ಕರ್ಣನು ತಡೆದನು. ಬಾಯಿಕಳೆದ ಅಂತಕನಂತೆ ಬರುತ್ತಿದ್ದ ಮತ್ತು ಮೃತ್ಯುವಂತೆ ಬೆಳಗುತ್ತಿದ್ದ ಭೀಮಸೇನನನ್ನು ಸ್ವಯಂ ದುರ್ಯೋಧನನೇ ಯುದ್ಧದಲ್ಲಿ ಎದುರಿಸಿದನು. ಸರ್ವಯುದ್ಧವಿಶಾರದ ನಕುಲನನ್ನು ತ್ವರೆಮಾಡಿ ಶಕುನಿಯು ತಡೆದನು. ರಥದಲ್ಲಿ ಮುಂದುವರೆದು ಬರುತ್ತಿದ್ದ ಶಿಖಂಡಿಯನ್ನು ಕೃಪನು ತಡೆದನು. ನವಿಲಿನ ಬಣ್ಣದ ಕುದುರೆಗಳನ್ನು ಕಟ್ಟಿದ ರಥದಲ್ಲಿ ಬರುತ್ತಿದ್ದ ಪ್ರತಿವಿಂಧ್ಯನನ್ನು ದುಃಶಾಸನನು ತಡೆದನು. ಬರುತ್ತಿದ್ದ ಘಟೋತ್ಕಚನನ್ನು ತಂದೆಯ ಮಾನವನ್ನು ಕಾಯುತ್ತಾ ಅಶ್ವತ್ಥಾಮನು ಎದುರಿಸಿ ಯುದ್ಧಮಾಡಿದನು. ದ್ರೋಣನನ್ನು ತಲುಪಲು ಪ್ರಯತ್ನಿಸುತ್ತಿದ್ದ ಮಹಾರಥ ದ್ರುಪದನನ್ನು, ಅವನ ಸೇನೆ ಅನುಯಾಯಿಗಳೊಂದಿಗೆ ವೃಷಸೇನನು ತಡೆದನು. ದ್ರೋಣನ ಸಾವನ್ನು ಬಯಸಿ ಬರುತ್ತಿದ್ದ ವಿರಾಟನನ್ನು ಶಲ್ಯನು ತಡೆದನು. ಶರಗಳಿಂದ ದ್ರೋಣನನ್ನು ವಧಿಸಲು ಬಯಸಿ ರಭಸದಿಂದ ರಣದಲ್ಲಿ ಬರುತ್ತಿರುವ ನಕುಲನ ಮಗ ಶತಾನೀಕನನ್ನು ಚಿತ್ರಸೇನನು ತಡೆಹಿಡಿದನು.

ಧಾವಿಸಿಬರುತ್ತಿದ್ದ ಅರ್ಜುನನನ್ನು ರಾಕ್ಷಸೇಂದ್ರ ಅಲಂಬುಸನು ತಡೆದನು. ಹಾಗೆಯೇ ರಣದಲ್ಲಿ ಶತ್ರುಗಳನ್ನು ಸಂಹರಿಸುತ್ತಿದ್ದ ದ್ರೋಣನನ್ನು ಧೃಷ್ಟದ್ಯುಮ್ನನು ತಡೆದನು. ಹಾಗೆ ಒಟ್ಟಾಗಿ ಬರುತ್ತಿದ್ದ ಪಾಂಡುಪುತ್ರ ಮಹಾರಥರನ್ನು ಕೌರವ ರಥಿಗಳು ಬಹಳ ತೇಜಸ್ಸಿನಿಂದ ತಡೆದರು.

ಆ ಮಹಾಯುದ್ಧದಲ್ಲಿ ತಕ್ಷಣವೇ ನೂರಾರು ಸಹಸ್ರಾರು ಗಜಾರೋಹಿಗಳು ಅನೇಕ ಗಜಾರೋಹಿಗಳನ್ನು ಎದುರಿಸಿ ಯುದ್ಧಮಾಡುತ್ತಿರುವುದು ಕಂಡುಬಂದಿತು. ಆ ರಾತ್ರಿಯಲ್ಲಿ ಪರಸ್ಪರರನ್ನು ಆಕ್ರಮಣಿಸುತ್ತಿದ್ದ ಕುದುರೆಗಳು ರೆಕ್ಕೆಗಳುಳ್ಳ ಪರ್ವತಗಳು ವೇಗದಿಂದ ಚಲಿಸುತ್ತಿರುವಂತೆ ತೋರುತ್ತಿದ್ದವು. ಅಶ್ವಾರೋಹಿಗಳು ಅಶ್ವಾರೋಹಿಗಳೊಡನೆ ಪ್ರಾಸ-ಶಕ್ತಿ-ಋಷ್ಟಿಗಳನ್ನು ಹಿಡಿದು ಗರ್ಜಿಸುತ್ತಾ ಪ್ರತ್ಯೇಕ ಪ್ರತ್ಯೇಕವಾಗಿ ಎದುರಿಸಿ ಯುದ್ಧಮಾಡಿದರು. ಅಲ್ಲಿ ಅನೇಕ ಪದಾತಿಗಳು ಗದೆ-ಮುಸಲ ಮತ್ತು ನಾನಾ ಶಸ್ತ್ರಗಳಿಂದ ಗುಂಪು ಗುಂಪಾಗಿ ಪರಸ್ಪರರನ್ನು ಎದುರಿಸಿ ಯುದ್ಧಮಾಡತೊಡಗಿದರು.

## ಯುಧಿಷ್ಠಿರ-ಕೃತವರ್ಮರ ಯುದ್ಧ

ಕೃತವರ್ಮನಾದರೋ ಉಕ್ಕಿಬರುತ್ತಿರುವ ಸಾಗರವನ್ನು ದಡವು ತಡೆಯುವಂತೆ ಸಂಕ್ರುದ್ಧನಾಗಿ ಧರ್ಮಪುತ್ರ ಯುಧಿಷ್ಠಿರನನ್ನು ತಡೆದನು.

ಯುಧಿಷ್ಠಿರನಾದರೋ ಹಾರ್ದಿಕ್ಯನನ್ನು ಐದು ಆಶುಗಗಳಿಂದ ಮತ್ತು ಪುನಃ ಇಪ್ಪತ್ತು ಬಾಣಗಳಿಂದ ಹೊಡೆದು “ನಿಲ್ಲು! ನಿಲ್ಲು!” ಎಂದು ಹೇಳಿದನು. ಕೃತವರ್ಮನಾದರೋ ಸಂಕ್ರುದ್ಧನಾಗಿ ಧರ್ಮಪುತ್ರನ ಧನುಸ್ಸನ್ನು ಭಲ್ಲದಿಂದ ತುಂಡರಿಸಿ ಅವನನ್ನು ಏಳು ಭಲ್ಲಗಳಿಂದ ಹೊಡೆದನು. ಆಗ ಯುಧಿಷ್ಠಿರನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಹತ್ತು ಬಾಣಗಳಿಂದ ಹಾರ್ದಿಕ್ಯನ ಎದೆಗೆ ಹೊಡೆದನು. ಧರ್ಮಪುತ್ರನಿಂದ ಹೊಡೆಯಲ್ಪಟ್ಟ ಕೃತವರ್ಮನಾದರೋ ರಣದಲ್ಲಿ ನಡುಗಿದನು ಮತ್ತು ರೋಷದಿಂದ ಅವನನ್ನು ಏಳು ಶರಗಳಿಂದ ಹೊಡೆದನು. ಯುಧಿಷ್ಠಿರನು ಅವನ ಧನುಸ್ಸನ್ನು ಕತ್ತರಿಸಿ, ಹಸ್ತಾವಾಪವನ್ನು ಕಳಚುವಂತೆ ಮಾಡಿ, ಅವನ ಮೇಲೆ ಐದು ಶಿಲಾಶಿತ ನಿಶಿತ ಬಾಣಗಳನ್ನು ಪ್ರಯೋಗಿಸಿದನು. ಆ ಉಗ್ರ ಬಾಣಗಳು ಕೃತವರ್ಮನ ಬಂಗಾರದ ಕವಚವನ್ನು ಸೀಳಿ ಸರ್ಪವು ಬಿಲವನ್ನು ಪ್ರವೇಶಿಸುವಂತೆ ಧರಣಿಯನ್ನು ಕೊರೆದು ಪ್ರವೇಶಿಸಿತು. ರೆಪ್ಪೆ ಹೊಡೆಯುವುದರೊಳಗೆ ಕೃತವರ್ಮನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ಪಾಂಡವ ಯುಧಿಷ್ಠಿರನನ್ನು ಅರವತ್ತು ಬಾಣಗಳಿಂದಲೂ ಅವನ ಸಾರಥಿಯನ್ನು ಒಂಬತ್ತು ಬಾಣಗಳಿಂದಲೂ ಹೊಡೆದನು. ಆಗ ಪಾಂಡವನು ತನ್ನ ಧನುಸ್ಸನ್ನು ರಥದಲ್ಲಿರಿಸಿ ಸರ್ಪದಂತಿದ್ದ ಶಕ್ತ್ಯಾಯುಧವನ್ನು ಕೃತವರ್ಮನ ಮೇಲೆ ಎಸೆದನು.

ಪಾಂಡವನಿಂದ ಪ್ರಯೋಗಿಸಲ್ಪಟ್ಟ ಬಂಗಾರದ ಚಿತ್ರಗಳಿದ್ದ ಆ ಮಹಾ ಶಕ್ತಿಯು ಕೃತವರ್ಮನ ಬಲತೋಳನ್ನು ಭೇದಿಸಿ ಭೂಮಿಯನ್ನು ಪ್ರವೇಶಿಸಿತು. ಅಷ್ಟೇ ಸಮಯದಲ್ಲಿ ಪಾರ್ಥನು ಪುನಃ ಧನುಸ್ಸನ್ನು ಹಿಡಿದು ಸನ್ನತಪರ್ವ ಶರಗಳಿಂದ ಹಾರ್ದಿಕ್ಯನನ್ನು ಮುಚ್ಚಿದನು. ಆಗ ಸಮರ ಶೂರ ಕೃತವರ್ಮನು ನಿಮಿಷಾರ್ಧದಲ್ಲಿ ಯುಧಿಷ್ಠಿರನನ್ನು ಅಶ್ವ-ಸೂತರಹಿತನನ್ನಾಗಿ ಮಾಡಿದನು. ಆಗ ಜ್ಯೇಷ್ಠ ಪಾಂಡವನು ಖಡ್ಗ ಗುರಾಣಿಗಳನ್ನು ತೆಗೆದುಕೊಳ್ಳಲು ಅವುಗಳನ್ನು ಕೂಡ ರಣದಲ್ಲಿ ಮಾಧವನು ನಿಶಿತಬಾಣಗಳಿಂದ ಕತ್ತರಿಸಿದನು. ಆಗ ತಕ್ಷಣವೇ ಯುಧಿಷ್ಠಿರನು ಸಮರದಲ್ಲಿ ಸ್ವರ್ಣದಂಡದ ದುರಾಸದ ತೋಮರವನ್ನು ಹಿಡಿದು ಅದನ್ನು ಹಾರ್ದಿಕ್ಯನ ಮೇಲೆ ಎಸೆದನು. ಧರ್ಮರಾಜನಿಂದ ಹೊರಟು ತನ್ನ ಮೇಲೆ ಒಮ್ಮೆಲೇ ಬೀಳುತ್ತಿದ್ದ ಅದನ್ನು ಹಾರ್ದಿಕ್ಯನು ಮುಗುಳ್ನಗುತ್ತಾ ಎರಡಾಗಿ ಕತ್ತರಿಸಿದನು. ಅನಂತರ ನೂರಾರು ಶರಗಳಿಂದ ಧರ್ಮಪುತ್ರನನ್ನು ಮುಚ್ಚಿ, ಸಂಕ್ರುದ್ಧನಾಗಿ ತೀಕ್ಷ್ಣ ಶರಗಳಿಂದ ಅವನ ಕವಚವನ್ನೂ ಸೀಳಿದನು. ಹಾರ್ದಿಕ್ಯನ ಶರಗಳಿಂದ ತುಂಡಾದ ಆ ಮಹಾತ್ಮನ ಕವಚವು ತುಂಡು ತುಂಡಾಗಿ ಆಕಾಶದಿಂದ ನಕ್ಷತ್ರಗಳು ಉದುರುವಂತೆ ರಣದಲ್ಲಿ ಉದುರಿ ಬಿದ್ದಿತು. ಹಾಗೆ ಧನುಸ್ಸನ್ನು ಕತ್ತರಿಸಿಕೊಂಡು, ವಿರಥನಾಗಿ, ಕವಚವನ್ನು ತುಂಡರಿಸಿಕೊಂಡು, ಶರಗಳಿಂದ ಗಾಯಗೊಂಡು ಯುಧಿಷ್ಠಿರನು

ತಕ್ಷಣವೇ ರಣಭೂಮಿಯಿಂದ ಪಲಾಯನಮಾಡಿದನು. ಹೀಗೆ ಧರ್ಮಪುತ್ರ ಯುಧಿಷ್ಠಿರನನ್ನು ಪರಾಜಯಗೊಳಿಸಿ ಕೃತವರ್ಮನು ದ್ರೋಣನ ರಥಚಕ್ರದ ರಕ್ಷಣೆಯಲ್ಲಿ ನಿರತನಾದನು.

## ಸಾತ್ಯಕಿಯಿಂದ ಭೂರಿಯ ವಧೆ

ಮುಂದುವರೆದು ಬರುತ್ತಿರುವ ಸಾತ್ಯಕಿಯನ್ನು ಆನೆಯೊಂದನ್ನು ತಡೆಹಿಡಿಯುವಂತೆ ಸಮರದಲ್ಲಿ ಭೂರಿಯು ತಡೆದು ಯುದ್ಧಮಾಡಿದನು. ಆಗ ಕ್ರುದ್ಧ ಸಾತ್ಯಕಿಯು ಐದು ನಿಶಿತ ಶರಗಳಿಂದ ಭೂರಿಯ ಹೃದಯದಲ್ಲಿ ಪ್ರಯೋಗಿಸಲು, ಅಲ್ಲಿಂದ ರಕ್ತವು ಧಾರಾಕಾರವಾಗಿ ಸುರಿಯತೊಡಗಿತು. ಹಾಗೆಯೇ ಯುದ್ಧದಲ್ಲಿ ಕೌರವ ಭೂರಿಯೂ ಕೂಡ ಶೈನೇಯನ ಭುಜಾಂತರದಲ್ಲಿ ಹತ್ತು ತೀಕ್ಷ್ಣ ವಿಶಿಖಗಳಿಂದ ಹೊಡೆದನು. ಅವರಿಬ್ಬರೂ ಕ್ರೋಧದಿಂದ ಕೆಂಗಣ್ಣುಗಳುಳ್ಳವರಾಗಿ ಧನುಸ್ಸುಗಳನ್ನು ಟೇಂಕರಿಸುತ್ತಾ ಶರಗಳಿಂದ ಅನ್ಯೋನ್ಯರನ್ನು ಗಾಯಗೊಳಿಸಿದರು. ಯಮಾಂತಕರಂತೆ ಕ್ರುದ್ಧರಾಗಿದ್ದ ಅವರಿಬ್ಬರ ನಡುವಿನ ಸಾಯಕಗಳ ಶರವೃಷ್ಟಿಯು ಸುದಾರುಣವಾಗಿತ್ತು. ಅವರಿಬ್ಬರೂ ಅನ್ಯೋನ್ಯರನ್ನು ಸಮರದಲ್ಲಿ ಶರಗಳಿಂದ ಮುಚ್ಚಿ ನಿಂತರು. ಮುಹೂರ್ತಕಾಲ ಆ ಯುದ್ಧವು ಸಮರೂಪವಾಗಿದ್ದಿತು. ಆಗ ಸಮರದಲ್ಲಿ ಕ್ರುದ್ಧನಾದ ಶೈನೇಯನು

ನಗುತ್ತಾ ಮಹಾತ್ಮ ಕೌರವನ ಧನುಸ್ಸನ್ನು ಕತ್ತರಿಸಿದನು. ಅವನ ಧನುಸ್ಸನ್ನು ತುಂಡರಿಸಿದ ನಂತರ ತಕ್ಷಣವೇ ಒಂಭತ್ತು ನಿಶಿತ ಶರಗಳಿಂದ ಅವನ ಹೃದಯಕ್ಕೆ ಹೊಡೆದು ನಿಲ್ಲುನಿಲ್ಲೆಂದು ಕೂಗಿದನು. ಹಾಗೆ ಶತ್ರುವಿನಿಂದ ಅತಿ ಬಲವಾಗಿ ಹೊಡೆಯಲ್ಪಟ್ಟ ಆ ಶತ್ರುತಾಪನ ಭೂರಿಯು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಸಾತ್ವತನನ್ನು ಪ್ರತಿಯಾಗಿ ಹೊಡೆದನು. ಅವನು ಸಾತ್ವತನನ್ನು ಮೂರು ಬಾಣಗಳಿಂದ ಹೊಡೆದು ತೀಕ್ಷ್ಣ ಭಲ್ಲದಿಂದ ಅವನ ಧನುಸ್ಸನ್ನು ಕತ್ತರಿಸಿ ನಕ್ಕನು. ಧನುಸ್ಸು ತುಂಡಾಗಲು ಕ್ರೋಧಮೂರ್ಛಿತ ಸಾತ್ಯಕಿಯು ಅವನ ಎದೆಗೆ ಗುರಿಯಿಟ್ಟು ಮಹಾವೇಗವುಳ್ಳ ಶಕ್ತಿಯನ್ನು ಪ್ರಯೋಗಿಸಿದನು.

ಆ ಶಕ್ತಿಯಿಂದ ಭಿನ್ನಾಂಗನಾದ ಭೂರಿಯು ಉರಿಯುತ್ತಿರುವ ಕಿರಣಗಳ ಲೋಹಿತಾಂಗ ಅಂಗಾರಕನು ಆಕಾಶದಿಂದ ಬೀಳುವಂತೆ ರಥದಿಂದ ಕೆಳಗೆ ಬಿದ್ದನು. ರಣಾಂಗಣದಲ್ಲಿ ಶೂರ ಭೂರಿಯು ಹತನಾದುದನ್ನು ನೋಡಿ ಮಹಾರಥ ಅಶ್ವತ್ಥಾಮನು ವೇಗದಿಂದ ಶೈನೇಯನ ಕಡೆ ಧಾವಿಸಿ ಬಂದು ಮೋಡಗಳು ಮೇರುಪರ್ವತದ ಮೇಲೆ ಮಳೆಗರೆಯುವಂತೆ ಸಾತ್ಯಕಿಯ ಮೇಲೆ ಶರೌಘಗಳ ಮಳೆಗರೆದನು.

## ಘಟೋತ್ಕಚ-ಅಶ್ವತ್ಥಾಮರ ಯುದ್ಧ

ಅಶ್ವತ್ಥಾಮನು ಶೈನೇಯನ ರಥದಕಡೆ ಅವಸರದಿಂದ

ಹೋಗುತ್ತಿರುವುದನ್ನು ನೋಡಿ ಮಹಾರಥ ಘಟೋತ್ಕಚನು ಸಿಂಹನಾದಗೈಯುತ್ತಾ ಅಶ್ವತ್ಥಾಮನಿಗೆ ಹೇಳಿದನು:

> "ದ್ರೋಣಪುತ್ರ! ನಿಲ್ಲು ನಿಲ್ಲು! ನನ್ನಿಂದ ಜೀವಂತವಾಗಿ ಹೋಗಲಾರೆ! ಇಂದು ನಾನು ನಿನ್ನನ್ನು ಸ್ಕಂದನು ಮಹಿಷನನ್ನು ಸಂಹರಿಸಿದಂತೆ ಸಂಹರಿಸುತ್ತೇನೆ. ಇಂದು ರಣಾಂಗಣದಲ್ಲಿ ಯುದ್ದದಲ್ಲಿ ನಿನಗಿರುವ ಶ್ರದ್ಧೆಯನ್ನು ನಾಶಗೊಳಿಸುತ್ತೇನೆ!"

ರೋಷದಿಂದ ಕೆಂಗಣ್ಣನಾಗಿದ್ದ ಪರವೀರಹ ರಾಕ್ಷಸನು ಹೀಗೆ ಹೇಳಿ ಕ್ರುದ್ಧ ಕೇಸರಿಯು ಗಜೇಂದ್ರನನ್ನು ಹೇಗೋ ಹಾಗೆ ದ್ರೌಣಿಯನ್ನು ಆಕ್ರಮಣಿಸಿದನು. ಮೋಡಗಳ ಮಳೆಯಂತೆ ರಥದ ಅಚ್ಚುಗಳ ಗಾತ್ರದ ಬಾಣಗಳ ಮಳೆಯನ್ನು ಘಟೋತ್ಕಚನು ದ್ರೌಣಿಯ ಮೇಲೆ ಸುರಿಸಿದನು. ಮೇಲೆ ಬೀಳುತ್ತಿರುವ ಆ ಶರವೃಷ್ಟಿಯನ್ನು ದ್ರೌಣಿಯು ಅಲ್ಲಗಳೆಯುತ್ತಾ ಸಮರದಲ್ಲಿ ತಕ್ಷಣವೇ ಸರ್ಪಗಳ ವಿಷದಂತಿರುವ ಶರಗಳಿಂದ ನಾಶಗೊಳಿಸಿದನು. ಅನಂತರ ಆ ಅಶ್ವತ್ಥಾಮನು ನೂರು ಮರ್ಮಭೇದೀ ತೀಕ್ಷ್ಣ ಆಶುಗ ಶರಗಳಿಂದ ರಾಕ್ಷಸೇಂದ್ರ ಘಟೋತ್ಕಚನನ್ನು ಮುಚ್ಚಿದನು. ಹಾಗೆ ರಣಮೂರ್ಧನಿಯಲ್ಲಿ ಶರಗಳಿಂದ ಚುಚ್ಚಲ್ಪಟ್ಟ ರಾಕ್ಷಸನು ಮುಳ್ಳುಹಂದಿಯಂತೆಯೇ ಪ್ರಕಾಶಿಸಿದನು. ಆಗ ಕ್ರೋಧಸಮಾವಿಷ್ಟ ಭೈಮಸೇನಿಯು

ವಜ್ರಾಯುಧದ ಮತ್ತು ಸಿಡಿಲಿನ ಪ್ರಭೆಗೆ ಸಮಾನ ಪ್ರಭೆಯುಳ್ಳ ಉಗ್ರ ಕ್ಷುರಪ್ರ, ಅರ್ಧಚಂದ್ರ, ನಾರಾಚ, ಶಿಲೀಮುಖ, ಮರಾಹಕರ್ಣ, ನಾಲೀಕ ಮತ್ತು ವಿಕರ್ಣ ಇವೇ ಮೊದಲಾದ ಬಾಣಗಳಿಂದ ದ್ರೌಣಿಯನ್ನು ಬಹಳವಾಗಿ ಗಾಯಗೊಳಿಸಿದನು. ಮಹಾತೇಜಸ್ವಿ ದ್ರೌಣಿಯು ಸ್ವಲ್ಪವೂ ವ್ಯಥಿತನಾಗದೇ ಕ್ರುದ್ಧನಾಗಿ ಸಿಡಿಲಿನಂತೆ ಘೋರಶಬ್ಧಮಾಡುತ್ತಾ ತನ್ನ ಮೇಲೆ ಬೀಳುತ್ತಿದ್ದ ಸಹಿಸಲಸಾಧ್ಯ ಆ ಅತುಲ ಶಸ್ತ್ರವೃಷ್ಟಿಯನ್ನು ಮಂತ್ರಿಸಿದ ದಿವ್ಯಾಸ್ತ್ರಗಳಿಂದ ಕೂಡಿದ ಘೋರ ಶರಗಳಿಂದ ಚಂಡಮಾರುತವು ಮೋಡಗಳನ್ನು ಹೇಗೋ ಹಾಗೆ ನಾಶಗೊಳಿಸಿದನು. ಆಗ ಅಂತರಿಕ್ಷದಲ್ಲಿ ಬಾಣಗಳ ಸಂಗ್ರಾಮವೇ ನಡೆಯುತ್ತಿದೆಯೋ ಎಂದು ಅನ್ನಿಸುತ್ತಿತ್ತು. ಆ ಘೋರದೃಶ್ಯವು ಯೋಧರ ಹರ್ಷವನ್ನು ಹೆಚ್ಚಿಸುತ್ತಿತ್ತು. ಅಸ್ತ್ರಗಳ ಪರಸ್ಪರ ಸಂಘರ್ಷಣೆಯಿಂದ ಹುಟ್ಟಿದ ಕಿಡಿಗಳಿಂದ ವ್ಯಾಪ್ತವಾದ ಆಕಾಶವು ಸಾಯಂಕಾಲ ಮಿಂಚುಹುಳುಗಳಿಂದ ವ್ಯಾಪ್ತವಾಗಿರುವಂತೆ ತೋರುತ್ತಿತ್ತು.

ದ್ರೌಣಿಯು ಮಾರ್ಗಣಗಳ ರಾಶಿಯಿಂದ ಎಲ್ಲ ದಿಕ್ಕುಗಳನ್ನೂ ಮುಚ್ಚಿ, ರಾಕ್ಷಸನನ್ನೂ ಮುಚ್ಚಿದನು. ಆಗ ಆ ಗಾಢ ರಾತ್ರಿಯಲ್ಲಿ ರಣದಲ್ಲಿ ದ್ರೌಣಿ-ರಾಕ್ಷಸರ ನಡುವೆ ಶಕ್ರ-ಪ್ರಹ್ರಾದರ ನಡುವೆ ನಡೆದಂತೆ

ಯುದ್ಧವು ನಡೆಯಿತು. ಘಟೋತ್ಕಚನು ಸಂಕ್ರುದ್ಧನಾಗಿ ಕಾಲಜ್ವಲನ ಪ್ರಕಾಶವುಳ್ಳ ಹತ್ತು ಬಾಣಗಳಿಂದ ದ್ರೌಣಿಯ ಎದೆಗೆ ಹೊಡೆದನು. ರಾಕ್ಷಸನ ಆ ಉದ್ದ ಬಾಣಗಳಿಂದ ಗಾಯಗೊಂಡ ಮಹಾಬಲ ದ್ರೌಣಿಯು ಚಂಡಮಾರುತಕ್ಕೆ ಸಿಲುಕಿದ ವೃಕ್ಷದಂತೆ ಅಳ್ಳಾಡಿ ಹೋದನು. ಅವನು ಮೂರ್ಛೆಹೊಂದಿ ಧ್ವಜದಂಡವನ್ನು ಹಿಡಿದು ಕುಳಿತನು. ಆಗ ಕೌರವ ಸೈನ್ಯದಲ್ಲಿ ಎಲ್ಲರೂ ಹಾಹಾಕಾರಮಾಡಿದರು. ಅವರೆಲ್ಲರೂ ಅವನು ಹತನಾದನೆಂದೇ ಅಂದುಕೊಂಡರು. ಯುದ್ಧದಲ್ಲಿ ಅಶ್ವತ್ಥಾಮನ ಆ ಅವಸ್ಥೆಯನ್ನು ನೋಡಿ ಪಾಂಚಾಲರು ಮತ್ತು ಸೃಂಜಯರು ಸಿಂಹನಾದಗೈದರು.

ಸ್ವಲ್ಪಹೊತ್ತಿನಲ್ಲಿಯೇ ಎಚ್ಚೆತ್ತ ಮಹಾಬಲ ಅಶ್ವತ್ಥಾಮನು ಎಡಗೈಯಿಂದ ಧನುಸ್ಸನ್ನು ಮೀಟಿ ಧನುಸ್ಸನ್ನು ಆಕರ್ಣಾಂತವಾಗಿ ಸೆಳೆದು ಯಮದಂಡದಂತಿರುವ ಘೋರ ಉತ್ತಮ ಶರವನ್ನು ಘಟೋತ್ಕಚನ ಮೇಲೆ ಪ್ರಯೋಗಿಸಿದನು. ಪುಂಖಗಳುಳ್ಳ ಆ ಉಗ್ರ ಉತ್ತಮ ಶರವು ರಾಕ್ಷಸನ ಹೃದಯವನ್ನು ಭೇದಿಸಿ ವಸುಧೆಯನ್ನು ಸೇರಿತು. ದ್ರೌಣಿಯಿಂದ ಅತಿಯಾಗಿ ಗಾಯಗೊಂಡ ರಾಕ್ಷಸೇಂದ್ರನು ರಥದಲ್ಲಿಯೇ ಕುಸಿದು ಕುಳಿತುಕೊಂಡನು. ಹೈಡಿಂಬನು ವಿಮೂಢನಾಗಿದ್ದುದನ್ನು ಕಂಡು ಅವನ ಸಾರಥಿಯು ತಕ್ಷಣವೇ

ಗಾಬರಿಗೊಂಡು ಅವನನ್ನು ದ್ರೌಣಿಯ ಸಮೀಪದಿಂದ ದೂರಕ್ಕೆ ಕೊಂಡೊಯ್ದನು. ಹಾಗೆ ಸಮರದಲ್ಲಿ ರಾಕ್ಷಸೇಂದ್ರ ಘಟೋತ್ಕಚನನ್ನು ಗಾಯಗೊಳಿಸಿ ದ್ರೋಣಪುತ್ರನು ಜೋರಾಗಿ ಗರ್ಜಿಸಿದನು. ಕೌರವ ಸರ್ವಯೋಧರಿಂದ ಪ್ರಶಂಸಿಸಲ್ಪಟ್ಟ ಅಶ್ವತ್ಥಾಮನ ಮುಖವು ಮಧ್ಯಾಹ್ನದ ಭಾಸ್ಕರನಂತೆ ಬೆಳಗಿತು.

## ಭೀಮ-ದುರ್ಯೋಧನರ ಯುದ್ಧ

ಭಾರದ್ವಾಜನ ರಥದ ಬಳಿ ಯುದ್ಧಮಾಡುತ್ತಿದ್ದ ಭೀಮಸೇನನನ್ನು ಸ್ವಯಂ ರಾಜಾ ದುರ್ಯೋಧನನು ನಿಶಿತ ಶರಗಳಿಂದ ಎದುರಿಸಿದನು. ಭೀಮಸೇನನು ಅವನನ್ನು ಒಂಭತ್ತು ಶರಗಳಿಂದ ಹೊಡೆಯಲು, ದುರ್ಯೋಧನನೂ ಕೂಡ ಇಪ್ಪತ್ತು ಬಾಣಗಳಿಂದ ಅವನನ್ನು ಪ್ರತಿಯಾಗಿ ಹೊಡೆದನು. ರಣಭೂಮಿಯಲ್ಲಿ ಸಾಯಕಗಳಿಂದ ಮುಚ್ಚಿಹೋಗಿದ್ದ ಅವರಿಬ್ಬರೂ ಆಕಾಶದಲ್ಲಿ ಮೇಘಗಳಿಂದ ಮುಚ್ಚಲ್ಪಟ್ಟ ಸೂರ್ಯ-ಚಂದ್ರರಂತೆ ಕಾಣುತ್ತಿದ್ದರು. ಆಗ ದುರ್ಯೋಧನನು ಭೀಮನನ್ನು ಐದು ಪತ್ರಿಗಳಿಂದ ಹೊಡೆದು ನಿಲ್ಲು ನಿಲ್ಲೆಂದು ಹೇಳಿದನು. ಭೀಮನು ಅವನ ಧನುಸ್ಸು ಧ್ವಜಗಳನ್ನು ಒಂಬತ್ತು ಬಾಣಗಳಿಂದ ತುಂಡರಿಸಿ ಆ ಕೌರವಶ್ರೇಷ್ಠನನ್ನು ತೊಂಭತ್ತು ನತಪರ್ವಣಗಳಿಂದ ಗಾಯಗೊಳಿಸಿದನು. ಆಗ ಕ್ರುದ್ಧ

ದುರ್ಯೋಧನನು ಭೀಮಸೇನನ ಮೇಲೆ ಸರ್ವಧನ್ವಿಗಳೂ ನೋಡುತ್ತಿರುವಂತೆ ಬಾಣಗಳನ್ನು ಪ್ರಯೋಗಿಸಿದನು. ದುರ್ಯೋಧನನು ಬಿಟ್ಟ ಆ ಶರಗಳನ್ನು ನಾಶಗೊಳಿಸಿ ಭೀಮಸೇನನು ಕೌರವನ ಮೇಲೆ ಇಪ್ಪತ್ತೈದು ಕ್ಷುದ್ರಕಗಳನ್ನು ಪ್ರಯೋಗಿಸಿದನು. ದುರ್ಯೋಧನನಾದರೋ ಸಂಕ್ರುದ್ಧನಾಗಿ ಕ್ಷುರಪ್ರದಿಂದ ಭೀಮಸೇನನ ಧನುಸ್ಸನ್ನು ತುಂಡರಿಸಿ ಹತ್ತರಿಂದ ಅವನನ್ನು ಹೊಡೆದನು. ಆಗ ಮಹಾಬಲ ಭೀಮಸೇನನು ಇನ್ನೊಂದು ಧನುಸ್ಸನ್ನು ತೆಗೆದುಕೊಂಡು ತಕ್ಷಣವೇ ಏಳು ನಿಶಿತ ಶರಗಳಿಂದ ನೃಪತಿಯನ್ನು ಹೊಡೆದನು. ಆಗ ಲಘುಹಸ್ತ ದುರ್ಯೋಧನನು ಅವನ ಆ ಧನುಸ್ಸನ್ನೂ ಬೇಗನೆ ಕತ್ತರಿಸಿದನು. ಹಾಗೆಯೇ ಮದೋತ್ಕಟ, ದುರ್ಯೋಧನನು ಭೀಮನ ಎರಡನೆಯ, ಮೂರನೆಯ, ನಾಲ್ಕನೆಯ ಮತ್ತು ಐದನೆಯ ಧನುಸ್ಸುಗಳನ್ನೂ ಕ್ಷಣಮಾತ್ರದಲ್ಲಿ ಕತ್ತರಿಸಿದನು.

ಹಾಗೆ ತನ್ನ ಧನ್ನುಸ್ಸನ್ನು ಪುನಃ ಪುನಃ ತುಂಡರಿಸುತ್ತಿರಲು ಭೀಮಸೇನನು ಸಂಪೂರ್ಣವಾಗಿ ಉಕ್ಕಿನಿಂದ ಮಾಡಲ್ಪಟ್ಟಿದ್ದ ಶುಭ ಶಕ್ತಿಯನ್ನು ದುರ್ಯೋಧನನ ಮೇಲೆ ಎಸೆದನು. ಆ ಶಕ್ತಿಯು ಬಂದು ತಲುಪುವುದರೊಳಗೇ ಭೀಮ ಮತ್ತು ಸರ್ವಲೋಕಗಳೂ ನೋಡುತ್ತಿರುವಂತೆಯೇ ಮಹಾತ್ಮ ಕೌರವನು ಅದನ್ನು ಮೂರು

ಭಾಗಗಳಾಗಿ ತುಂಡರಿಸಿದನು. ಆಗ ಭೀಮನು ಮಹಾಪ್ರಭೆಯುಳ್ಳ ಭಾರ ಗದೆಯನ್ನು ವೇಗದಿಂದ ದುರ್ಯೋಧನನ ರಥದ ಮೇಲೆ ಎಸೆದನು. ಆಗ ಆ ಭಾರ ಗದೆಯು ಒಮ್ಮೆಲೇ ದುರ್ಯೋಧನನ ವಾಹನ ಮತ್ತು ಸಾರಥಿಯನ್ನು ಧ್ವಂಸಮಾಡಿತು. ದುರ್ಯೋಧನನಾದರೋ ಆ ರಥದಿಂದ ಕೆಳಕ್ಕೆ ಹಾರಿ ಒಮ್ಮೆಲೇ ನಂದಕನ ರಥಕ್ಕೆ ಹಾರಿದನು. ಆಗ ಮಹಾರಥ ದುರ್ಯೋಧನನು ಹತನಾದನೆಂದು ತಿಳಿದು ಭೀಮನು ಕೌರವರನ್ನು ಬೆದರಿಸುತ್ತಾ ಮಹಾ ಸಿಂಹನಾದವನ್ನು ಮಾಡಿದನು. ಕೌರವ ಸೈನಿಕರು ಕೂಡ ನೃಪನು ಹತನಾದನೆಂದೇ ಅಂದುಕೊಂಡರು. ಎಲ್ಲ ಕಡೆ ಎಲ್ಲರೂ ಹಾ ಹಾ ಕಾರಮಾಡಿದರು.

ಆ ಎಲ್ಲ ನಡುಗುತ್ತಿದ್ದ ಸರ್ವಯೋಧರ ನಿನಾದವನ್ನು ಕೇಳಿ, ಮಹಾತ್ಮ ಭೀಮಸೇನನ ನಾದವನ್ನೂ ಕೇಳಿ ರಾಜಾ ಯುಧಿಷ್ಠಿರನೂ ಕೂಡ ಸುಯೋಧನನು ಹತನಾದನೆಂದೇ ತಿಳಿದು ವೇಗವಾಗಿ ಪಾರ್ಥ ವೃಕೋದರರನಿದ್ದಲ್ಲಿಗೆ ಧಾವಿಸಿದನು. ದ್ರೋಣನೊಡನೆಯೇ ಯುದ್ಧಮಾಡಬೇಕೆಂದು ಪಾಂಚಾಲರು, ಕೇಕಯರು, ಮತ್ಸ್ಯರು ಮತ್ತು ಸೃಂಜಯರು ಸರ್ವ ಪ್ರಯತ್ನಗಳನ್ನೂ ಮಾಡುತ್ತಿದ್ದರು. ಆ ಘೋರ ಕತ್ತಲೆಯಲ್ಲಿ ಪರಸ್ಪರರನ್ನು ಸಂಹರಿಸುವುದರಲ್ಲಿ ಮಗ್ನರಾಗಿದ್ದ ದ್ರೋಣ

ಮತ್ತು ಶತ್ರುಗಳ ನಡುವೆ ಮಹಾ ಯುದ್ಧವು ನಡೆಯಿತು.

## ಕರ್ಣ-ಸಹದೇವರ ಯುದ್ಧ

ದ್ರೋಣನ ಬಳಿ ಬರುತ್ತಿದ್ದ ಸಹದೇವನನ್ನು ಕರ್ಣನು ಯುದ್ಧದಲ್ಲಿ ತಡೆದನು. ಸಹದೇವನಾದರೋ ರಾಧೇಯನನ್ನು ಒಂಭತ್ತು ಆಶುಗಗಳಿಂದ ಹೊಡೆದು ಪುನಃ ಹತ್ತು ನಿಶಿತ ನತಪರ್ವಗಳಿಂದ ಹೊಡೆದನು. ಅವನನ್ನು ಕರ್ಣನು ಪ್ರತಿಯಾಗಿ ನೂರು ನತಪರ್ವಗಳಿಂದ ಹೊಡೆದನು. ಮತ್ತು ಶೀಘ್ರವಾಗಿ ಕೈಚಳಕದಿಂದ ಮೌರ್ವಿಯೊಡನೆ ಅವನ ಧನುಸ್ಸನ್ನು ಕತ್ತರಿಸಿದನು. ಆಗ ಮಾದ್ರೀಪುತ್ರನು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಕರ್ಣನನ್ನು ಇಪ್ಪತ್ತು ಬಾಣಗಳಿಂದ ಹೊಡೆದನು. ಅದೊಂದು ಅದ್ಭುತವಾಗಿತ್ತು. ಕರ್ಣನು ಅವನ ಕುದುರೆಗಳನ್ನು ಸನ್ನತಪರ್ವ ಶರಗಳಿಂದ ಕೊಂದು ತಕ್ಷಣವೇ ಸಾರಥಿಯನ್ನು ಕೂಡ ಭಲ್ಲದಿಂದ ಹೊಡೆದು ಯಮಕ್ಷಯಕ್ಕೆ ಕಳುಹಿಸಿದನು. ರಥವನ್ನು ಕಳೆದುಕೊಂಡ ಸಹದೇವನು ಖಡ್ಗ ಮತ್ತು ಗುರಾಣಿಗಳನ್ನು ಕೈಗೆತ್ತಿಕೊಂಡನು. ಅವುಗಳನ್ನೂ ಸಹ ಕರ್ಣನು ನಸುನಗುತ್ತಾ ಶರಗಳಿಂದ ನಾಶಗೊಳಿಸಿದನು. ಆಗ ಸಹದೇವನು ಬಂಗಾರದ ಚಿತ್ರಗಳುಳ್ಳ ಮಹಾಘೋರ ಮಹಾಗದೆಯನ್ನು ಸಮರದಲ್ಲಿ ವೈಕರ್ತನನ ರಥದ ಮೇಲೆ ಪ್ರಯೋಗಿಸಿದನು. ಸಹದೇವನು

ಪ್ರಯೋಗಿಸಿದ ಆ ಗದೆಯನ್ನು ತನ್ನ ಮೇಲೆ ಒಮ್ಮೆಲೇ ಬೀಳುವವರೊಳಗೆ ಕರ್ಣನು ಬಾಣಗಳಿಂದ ಸ್ತಂಭನಗೊಳಿಸಿ, ಭೂಮಿಯ ಮೇಲೆ ಬೀಳುವಂತೆ ಮಾಡಿದನು. ಆ ಗದೆಯೂ ನಿರರ್ಥಕವಾದುದನ್ನು ಕಂಡು ಸಹದೇವನು ತ್ವರೆಮಾಡಿ ಕರ್ಣನ ಮೇಲೆ ಶಕ್ತಿಯನ್ನು ಎಸೆದನು. ಅದನ್ನೂ ಕೂಡ ಕರ್ಣನು ಶರಗಳಿಂದ ಕತ್ತರಿಸಿದನು. ಆಗ ಸಹದೇವನು ಸಂಭ್ರಮದಿಂದ ತನ್ನ ಶ್ರೇಷ್ಠ ರಥದಿಂದ ಧುಮುಕಿ ಕರ್ಣನು ವ್ಯವಸ್ಥಿತನಾಗಿ ನಿಂತಿರುವುದನ್ನು ನೋಡಿ ರಥದ ಚಕ್ರವನ್ನು ಹಿಡಿದು ಆಧಿರಥಿಯೆಡೆಗೆ ರಭಸದಿಂದ ಎಸೆದನು. ಒಮ್ಮೆಲೇ ತನ್ನ ಮೇಲೆ ಬೀಳುತ್ತಿದ್ದ ಕಾಲಚಕ್ರದಂತಿಂತ ಆ ಚಕ್ರವನ್ನು ಸೂತನಂದನನು ಶರಗಳಿಂದ ಅನೇಕ ಸಹಸ್ರ ಚೂರುಗಳನ್ನಾಗಿ ತುಂಡರಿಸಿದನು.

ಆ ಮಹಾತ್ಮನಿಂದ ತನ್ನ ರಥಚಕ್ರವೂ ಧ್ವಂಸಗೊಳ್ಳಲು ವಿಶಿಖಗಳಿಂದ ತಡೆಯಲ್ಪಟ್ಟು ಸಹದೇವನು ರಣರಂಗವನ್ನು ಬಿಟ್ಟು ಹೊರಟು ಹೋದನು. ಸ್ವಲ್ಪ ಸಮಯ ಅವನನ್ನು ಅಟ್ಟಿಕೊಂಡು ಹೋಗುತ್ತಾ ರಾಧೇಯನು ನಗುತ್ತಾ ಸಹದೇವನಿಗೆ ಈ ಮಾತುಗಳನ್ನಾಡಿದನು: “

> ವೀರ! ರಣದಲ್ಲಿ ನಿನಗಿಂತಲೂ ವಿಶಿಷ್ಟ ರಥಿಗಳೊಂದಿಗೆ ಯುದ್ಧಮಾಡಬೇಡ! ನಿನಗೆ ಸಮಾನರಾದವರೊಡನೆ ಮಾತ್ರ

> ಯುದ್ಧಮಾಡು. ಈ ನನ್ನ ಮಾತನ್ನು ಶಂಕಿಸಬೇಡ!”

ಅನಂತರ ಕರ್ಣನು ತನ್ನ ಧನುಸ್ಸಿನ ಅಗ್ರಭಾಗದಿಂದ ಸಹದೇವನನ್ನು ತಿವಿಯುತ್ತಾ ಪುನಃ ಹೇಳಿದನು:

> “ಮಾದ್ರೇಯ! ಎಲ್ಲಿ ಅರ್ಜುನನು ರಣದಲ್ಲಿ ಕುರುಗಳೊಂದಿಗೆ ಯುದ್ಧಮಾಡುತ್ತಿರುವನೋ ಅಲ್ಲಿಗೆ ಹೋಗು. ಅಥವಾ ನಿನಗೆ ಇಷ್ಟವಾದರೆ ಮನೆಗೆ ಹೊರಟು ಹೋಗು!”

ಹೀಗೆ ಹೇಳಿ ರಥಿಗಳಲ್ಲಿ ಶ್ರೇಷ್ಠ ಕರ್ಣನು ನಗುತ್ತಾ ರಥದಲ್ಲಿ ಕುಳಿತು ಪಾಂಚಾಲ-ಪಾಂಡುಪುತ್ರರ ಸೇನೆಗಳಿರುವಲ್ಲಿಗೆ ನಡೆದನು. ಕುಂತಿಗೆ ಕೊಟ್ಟಿದ್ದ ವಚನವನ್ನು ಸ್ಮರಿಸಿಕೊಂಡು ಸತ್ಯಸಂಧ, ಮಹಾರಥ ಆ ಅರಿಹನು ಸಮರದಲ್ಲಿ ವಧೆಗೆ ಸಿಕ್ಕಿದ್ದರೂ ಮಾದ್ರೇಯನನ್ನು ವಧಿಸಲಿಲ್ಲ. ಸಹದೇವನಾದರೋ ವಿಮನಸ್ಕನಾಗಿ, ಶರಪೀಡಿತನಾಗಿ, ಕರ್ಣನ ಮಾತಿನ ಬಾಣಗಳಿಂದ ಪರಿತಪಿಸಿ, ಜೀವನದಲ್ಲಿಯೇ ವಿರಕ್ತಿಯನ್ನು ಹೊಂದಿದನು. ಸಮರದಲ್ಲಿ ಆ ಮಹಾತ್ಮ ಮಹಾರಥನು ಪಾಂಚಾಲ್ಯ ಜನಮೇಜಯನ ರಥವನ್ನು ಅವಸರದಲ್ಲಿ ಏರಿದನು.

## ಶಲ್ಯ-ವಿರಾಟರ ಯುದ್ಧ

ದ್ರೋಣನಿಗಾಗಿ ಧಾವಿಸಿ ಸೇನೆಯೊಂದಿಗೆ ಬರುತ್ತಿದ್ದ ಧನ್ವಿ ವಿರಾಟನನ್ನು

ಮದ್ರರಾಜನು ಶರೌಘಗಳಿಂದ ಮುಚ್ಚಿದನು. ಹಿಂದೆ ಜಂಭಾಸುರ-ವಾಸವರೊಡನೆ ಹೇಗೆ ನಡೆಯಿತೋ ಹಾಗೆ ಸಮರದಲ್ಲಿ ಆ ಇಬ್ಬರು ದೃಢಧನ್ವಿಗಳ ನಡುವೆ ಯುದ್ಧವು ನಡೆಯಿತು. ವಾಹಿನೀಪತಿ ವಿರಾಟನನ್ನು ಮದ್ರರಾಜನು ತ್ವರೆಮಾಡಿ ನೂರು ತೀಕ್ಷ್ಣ ನತಪರ್ವಗಳಿಂದ ಹೊಡೆದನು. ಪ್ರತಿಯಾಗಿ ರಾಜಾ ವಿರಾಟನು ಶಲ್ಯನನ್ನು ಒಂಭತ್ತು ನಿಶಿತ ಶರಗಳಿಂದ ಹೊಡೆದು, ಪುನಃ ಮೂವತ್ತರಿಂದ ಮತ್ತು ಇನ್ನೂ ನೂರರಿಂದ ಹೊಡೆದನು. ಮದ್ರಾಧಿಪನು ಅವನ ನಾಲ್ಕು ರಥಕುದುರೆಗಳನ್ನು ಸಂಹರಿಸಿ, ಸಮರದಲ್ಲಿ ಸಾರಥಿ ಮತ್ತು ಧ್ವಜವನ್ನು ರಥದಿಂದ ಕೆಳಕ್ಕೆ ಬೀಳಿಸಿದನು. ಕುದುರೆಗಳು ಹತವಾಗಲು, ತಕ್ಷಣವೇ ರಥದಿಂದ ಕೆಳಗೆ ಹಾರಿ ಮಹಾರಥ ವಿರಾಟನು ಧನುಸ್ಸನ್ನು ಟೇಂಕರಿಸಿ ನಿಶಿತ ಶರಗಳನ್ನು ಪ್ರಯೋಗಿಸತೊಡಗಿದನು. ಹತವಾಹನನಾದ ಭ್ರಾತರನನ್ನು ನೋಡಿದ ಶತಾನೀಕನು ಸರ್ವಲೋಕಗಳೂ ನೋಡುತ್ತಿದ್ದಂತೆಯೇ ಬೇಗನೇ ರಥದಿಂದ ಅಲ್ಲಿಗೆ ಧಾವಿಸಿದನು.

ಮಹಾಯುದ್ಧದಲ್ಲಿ ಹಾಗೆ ಮುಂದುವರೆದು ಬರುತ್ತಿದ್ದ ಶತಾನೀಕನನ್ನು ಮದ್ರರಾಜನು ಅನೇಕ ವಿಶಿಖಗಳಿಂದ ಗಾಯಗೊಳಿಸಿ ಯಮಕ್ಷಯಕ್ಕೆ ಕಳುಹಿಸಿದನು. ಆ ವೀರನು ಹತನಾಗಲು ರಥಸತ್ತಮ ವಿರಾಟನು

ಬೇಗನೆ ಅದೇ ಧ್ವಜ-ಮಾಲೆಗಳಿಂದ ಅಲಂಕೃತ ರಥವನ್ನು ಏರಿದನು. ಆಗ ಕ್ರೋಧದಿಂದ ಕಣ್ಣುಗಳನ್ನು ಅರಳಿಸಿ ಆ ದ್ವಿಗುಣವಿಕ್ರಮನು ಕೂಡಲೇ ಮದ್ರರಾಜನ ರಥವನ್ನು ಪತ್ರಿಗಳಿಂದ ಮುಚ್ಚಿಬಿಟ್ಟನು. ಆಗ ಕ್ರುದ್ಧ ಮದ್ರಾಧಿಪನು ನೂರು ನತಪರ್ವಗಳಿಂದ ವಾಹಿನೀಪತಿ ವಿರಾಟನ ಎದೆಗೆ ಹೊಡೆದನು. ಹಾಗೆ ಅತಿಯಾಗಿ ಗಾಯಗೊಂಡ ವಿರಾಟನು ಅತಿ ತೀವ್ರವಾಗಿ ಬಳಲಿ ರಥದಲ್ಲಿಯೇ ಕುಸಿದನು. ಬಾಣಗಳಿಂದ ಗಾಯಗೊಂಡಿದ್ದ ಅವನನ್ನು ಅವನ ಸಾರಥಿಯು ಸಮರದಿಂದ ದೂರಕ್ಕೆ ಕೊಂಡೊಯ್ದನು. ಯುದ್ಧಶೋಭೀ ಶಲ್ಯನ ನೂರಾರು ಬಾಣಗಳಿಂದ ವಧಿಸಲ್ಪಡುತ್ತಿದ್ದ ಆ ಮಹಾಸೇನೆಯು ಆ ರಾತ್ರಿ ಪಲಾಯನಮಾಡತೊಡಗಿತು. ಸೇನೆಯು ಹಾಗೆ ಓಡಿಹೋಗುತ್ತಿರುವುದನ್ನು ನೋಡಿ ವಾಸುದೇವ-ಧನಂಜಯರು ಎಲ್ಲಿ ಶಲ್ಯನಿದ್ದನೋ ಅಲ್ಲಿಗೆ ಬಂದರು.

## ಅರ್ಜುನ ಮತ್ತು ರಾಕ್ಷಸ ಅಲಂಬುಸರ ಯುದ್ಧ

ಕೃಷ್ಣಾರ್ಜುನರೊಡನೆ ಎಂಟು ಚಕ್ರಗಳುಳ್ಳ ಶ್ರೇಷ್ಠ ರಥದಲ್ಲಿ ಕುಳಿತಿದ್ದ ರಾಕ್ಷಸೇಂದ್ರ ಅಲಂಬುಸನು ಪ್ರತಿಯಾಗಿ ಯುದ್ಧಮಾಡತೊಡಗಿದನು. ಘೋರರಾಗಿ ಕಾಣುತ್ತಿದ್ದ ಕುದುರೆಗಳ ಮುಖಗಳನ್ನೇ ಹೊಂದಿದ್ದ ಪಿಶಾಚಿಗಳಿಂದ ಎಳೆಯಲ್ಪಡುತ್ತಿದ್ದ ಆ ರಥವು ರಕ್ತದಲ್ಲಿ ತೋಯ್ದ

ಪತಾಕೆಯನ್ನು ಹೊಂದಿತ್ತು ಮತ್ತು ಕೆಂಪು ಮಾಲೆಗಳಿಂದ ವಿಭೂಷಿತವಾಗಿತ್ತು. ಸಂಪೂರ್ಣವಾಗಿ ಕಬ್ಬಿಣದಿಂದ ನಿರ್ಮಿತವಾಗಿತ್ತು. ಘೋರವಾದ ಆ ಮಹಾರಥವು ಕರಡಿಯ ಚರ್ಮದಿಂದ ಹೊದಿಸಲ್ಪಟ್ಟಿತ್ತು. ಆ ರಥ ಧ್ವಜದ ತುದಿಯಲ್ಲಿ ರೌದ್ರರೂಪದ, ಬಣ್ಣದ ರೆಕ್ಕೆಗಳುಳ್ಳ, ಕಣ್ಣುಗಳನ್ನು ಅಗಲ ತೆರೆದುಕೊಂಡಿರುವ ಹದ್ದಿನ ರಾಜನ ಚಿತ್ರವಿತ್ತು. ಆ ರಾಕ್ಷಸನು ಕಲ್ಲಿದ್ದಿನ ರಾಶಿಯಂತೆಯೇ ಕಾಣುತ್ತಿದ್ದನು. ಚಂಡಮಾರುತವನ್ನು ಪರ್ವತವು ಹೇಗೋ ಹಾಗೆ ಮುಂದೆಬರುತ್ತಿದ್ದ ಅರ್ಜುನನನ್ನು ಅಲಂಬುಸನು ನೂರಾರು ಬಾಣಗಣಗಳನ್ನು ಅವನ ತಲೆಯ ಮೇಲೆ ಎರಚಿ ತಡೆದನು. ಆಗ ರಣಾಂಗಣದಲ್ಲಿ ಆ ನರ-ರಾಕ್ಷಸರ ನಡುವೆ ನೋಡುವವರೆಲ್ಲರಿಗೆ ಸಂತೋಷವನ್ನು ನೀಡುವ ಅತಿ ತೀವ್ರ ಯುದ್ಧವು ನಡೆಯಿತು.

ಅರ್ಜುನನು ಅವನನ್ನು ನೂರು ಪತ್ರಿಗಳಿಂದ ಹೊಡೆದನು. ಮತ್ತು ಎತ್ತರ ಹಾರಾಡುತ್ತಿದ್ದ ಅವನ ಧ್ವಜವನ್ನು ಒಂಭತ್ತು ನಿಶಿತ ಬಾಣಗಳಿಂದ ತುಂಡರಿಸಿದನು. ಅವನ ಸಾರಥಿಯನ್ನು ಮೂರು ಬಾಣಗಳಿಂದಲೂ, ಇನ್ನೂ ಮೂರು ಬಾಣಗಳಿಂದ ರಥದ ಮೂಕಿಯನ್ನೂ, ಒಂದರಿಂದ ಧನುಸ್ಸನ್ನು ತುಂಡರಿಸಿ ನಾಲ್ಕು ಬಾಣಗಳಿಂದ ನಾಲ್ಕು ಕುದುರೆಗಳನ್ನು ಸಂಹರಿಸಿದನು. ಮತ್ತು

ವಿರಥನಾಗಿ ಮೇಲೆತ್ತಿದ್ದ ಅವನ ಖಡ್ಗವನ್ನು ಶರದಿಂದ ಎರಡಾಗಿ ತುಂಡರಿಸಿದನು. ಆಗ ಪಾರ್ಥನ ನಾಲ್ಕು ನಿಶಿತ ಬಾಣಗಳಿಂದ ಅತಿಯಾಗಿ ಗಾಯಗೊಂಡ ರಾಕ್ಷಸೇಂದ್ರನು ಭಯಗೊಂಡು ರಣಾಂಗಣವನ್ನೇ ಬಿಟ್ಟು ಓಡಿಹೋದನು.

ಅಲಂಬುಸನನ್ನು ಸೋಲಿಸಿ ಬೇಗನೆ ಅರ್ಜುನನು ನರ-ವಾರಣ-ವಾಜಿಗಳನ್ನು ಶರಗಣಗಳಿಂದ ಮುಚ್ಚುತ್ತಾ ದ್ರೋಣನ ಬಳಿ ಆಗಮಿಸಿದನು. ಯಶಸ್ವಿ ಪಾಂಡವನಿಂದ ವಧಿಸಲ್ಪಡುತ್ತಿದ್ದ ಸೈನಿಕರು ಚಂಡಮಾರುತಕ್ಕೆ ಸಿಲುಕಿದ ವೃಕ್ಷಗಳಂತೆ ಭೂಮಿಯಮೇಲೆ ಉರುಳಿ ಬಿದ್ದರು. ಹೀಗೆ ಮಹಾತ್ಮ ಫಲ್ಗುನನಿಂದ ಧ್ವಂಸಗೊಳ್ಳುತ್ತಿದ್ದ ಕೌರವ ಸೇನೆಯಲ್ಲಿ ಅಳಿದುಳಿದವರು ಪಲಾಯನಮಾಡಿದರು.

## ಶತಾನೀಕ-ಚಿತ್ರಸೇನರ ಯುದ್ಧ

ಬೇಗನೇ ಶರಗಳಿಂದ ಕೌರವ ಸೇನೆಯನ್ನು ಸುಡುತ್ತಿರುವ ಶತಾನೀಕನನ್ನು ಧೃತರಾಷ್ಟ್ರನ ಮಗ ಚಿತ್ರಸೇನನು ತಡೆದನು. ನಕುಲನ ಮಗನು ಚಿತ್ರಸೇನನನ್ನು ನಾರಾಚಗಳಿಂದ ಬಹಳವಾಗಿ ಗಾಯಗೊಳಿಸಿದನು. ಚಿತ್ರಸೇನನೂ ಕೂಡ ಅವನನ್ನು ಹತ್ತು ನಿಶಿತ ಶರಗಳಿಂದ ತಿರುಗಿ ಹೊಡೆದನು. ಚಿತ್ರಸೇನನು ಯುದ್ಧದಲ್ಲಿ ಪುನಃ ಶತಾನೀಕನ ಎದೆಗೆ ಒಂಭತ್ತು ನಿಶಿತ ಬಾಣಗಳನ್ನು ಪ್ರಹರಿಸಿದನು. ನಾಕುಲಿಯು ವಿಶಿಖ

ಸನ್ನತಪರ್ವಗಳಿಂದ ಅವನ ಕವಚವನ್ನು ದೇಹದಿಂದ ಬೇರ್ಪಡಿಸಿದನು. ಅದೊಂದು ಅದ್ಭುತವಾಗಿತ್ತು. ಕವಚವನ್ನು ಕಳೆದುಕೊಂಡು ಚಿತ್ರಸೇನನು ಪೊರೆಯನ್ನು ಕಳೆದುಕೊಂಡ ಸರ್ಪದಂತೆ ವಿರಾಜಿಸಿದನು. ಆಗ ನಾಕುಲಿಯು ನಿಶಿತ ಬಾಣಗಳಿಂದ ಯುದ್ಧದಲ್ಲಿ ಪ್ರತ್ಯತ್ನಪಡುತ್ತಿದ್ದ ಅವನ ಧ್ವಜವನ್ನೂ ಧನುಸ್ಸನ್ನೂ ತುಂಡರಿಸಿದನು. ಸಮರದಲ್ಲಿ ಧನುಸ್ಸನ್ನೂ ಕವಚವನ್ನೂ ಕಳೆದುಕೊಂಡ ಆ ಮಹಾರಥನು ಶತ್ರುಗಳನ್ನು ಸೀಳಬಲ್ಲ ಇನ್ನೊಂದು ಧನುಸ್ಸನ್ನು ಎತ್ತಿಕೊಂಡನು. ತಕ್ಷಣವೇ ಚಿತ್ರಸೇನನು ಕ್ರುದ್ಧನಾಗಿ ಸಮರದಲ್ಲಿ ಒಂಭತ್ತು ಶರಗಳಿಂದ ನಾಕುಲಿಯನ್ನು ಹೊಡೆದನು. ಆಗ ಸಂಕ್ರುದ್ಧ ಶತಾನೀಕನು ಚಿತ್ರಸೇನನ ನಾಲ್ಕು ಕುದುರೆಗಳನ್ನೂ ಸಾರಥಿಯನ್ನೂ ಸಂಹರಿಸಿದನು. ಚಿತ್ರಸೇನನು ಆ ರಥದಿಂದ ಹಾರಿ ಇಪ್ಪತ್ತೈದು ಶರಗಳಿಂದ ನಾಕುಲಿಯನ್ನು ಹೊಡೆದನು. ನಕುಲನ ಸುತನು ರಣದಲ್ಲಿ ಆ ಕೆಲಸವನ್ನು ಮಾಡಿದ ಚಿತ್ರಸೇನನ ರತ್ನವಿಭೂಷಿತ ಚಾಪವನ್ನು ಅರ್ಧಚಂದ್ರ ಶರದಿಂದ ತುಂಡರಿಸಿದನು. ಧನುಸ್ಸು ತುಂಡಾದ, ವಿರಥನಾದ, ಅಶ್ವ-ಸಾರಥಿಗಳನ್ನು ಕಳೆದುಕೊಂಡ ಚಿತ್ರಸೇನನು ಬೇಗನೇ ಕೃತವರ್ಮನ ರಥವನ್ನೇರಿದನು.

## ದ್ರುಪದ-ವೃಷಸೇನರ ಯುದ್ಧ

ದ್ರೋಣನ ಹತ್ತಿರ ಸೇನೆಯೊಂದಿಗೆ ಹೋಗುತ್ತಿದ್ದ ಮಹಾರಥ ದ್ರುಪದನನ್ನು ವೃಷಸೇನನು ಬೇಗನೇ ನೂರಾರು ಶರಗಳಿಂದ ಮುಚ್ಚಿಬಿಟ್ಟನು. ಯಜ್ಞಸೇನನಾದರೋ ಸಮರದಲ್ಲಿ ಮಹಾರಥ ಕರ್ಣಪುತ್ರನನ್ನು ಅರವತ್ತು ಶರಗಳಿಂದ ಬಾಹುಗಳಿಗೆ ಮತ್ತು ಎದೆಗೆ ಹೊಡೆದನು. ಸಂಕ್ರುದ್ಧ ವೃಷಸೇನನೂ ಕೂಡ ರಥದಲ್ಲಿ ನಿಂತಿದ್ದ ಯಜ್ಞಸೇನನನ್ನು ಅನೇಕ ತೀಕ್ಷ್ಣಸಾಯಕಗಳಿಂದ ಎದೆಯ ಮಧ್ಯದಲ್ಲಿ ಹೊಡೆದನು. ಶರೀರವೆಲ್ಲಾ ಶರಗಳಿಂದ ಚುಚ್ಚಲ್ಪಟ್ಟಿದ್ದ ಅವರಿಬ್ಬರೂ ರಣದಲ್ಲಿ ಮುಳ್ಳುಗಳಿಂದ ಕೂಡಿದ್ದ ಮುಳ್ಳುಹಂದಿಗಳಂತೆ ಪ್ರಕಾಶಿಸುತ್ತಿದ್ದರು. ರುಕ್ಮಪುಂಖಗಳ ಜಿಹ್ಮಾಗ್ರ ಶರಗಳಿಂದ ಕವಚಗಳು ಸೀಳಿಹೋಗಿ ರಕ್ತವು ಸುರಿಯುತ್ತಿದ್ದ ಅವರಿಬ್ಬರೂ ಮಹಾರಣದಲ್ಲಿ ಬಹಳವಾಗಿ ಪ್ರಕಾಶಿಸಿದರು. ಸುವರ್ಣಮಯ ಚಿತ್ರಿತ ಕವಚಗಳುಳ್ಳ ಅವರಿಬ್ಬರೂ ರಣರಂಗದಲ್ಲಿ ಅದ್ಭುತ ಕಲ್ಪವೃಕ್ಷಗಳಂತೆ ಮತ್ತು ಹೂಬಿಟ್ಟ ಮುತ್ತುಗದ ಮರಗಳಂತೆ ಪ್ರಕಾಶಿಸಿದರು. ಆಗ ವೃಷಸೇನನು ದ್ರುಪದನನ್ನು ಒಂಬತ್ತು ಬಾಣಗಳಿಂದ ಪ್ರಹರಿಸಿ, ಎಪ್ಪತ್ತರಿಂದ ಗಾಯಗೊಳಿಸಿ ಪುನಃ ಮೂರು ಮೂರು ಶರಗಳಿಂದ ಹೊಡೆದನು. ಆಗ ಕರ್ಣಪುತ್ರನು ಸಹಸ್ರಾರು ಬಾಣಗಳನ್ನು ಪ್ರಯೋಗಿಸಿ ಮೋಡದಂತೆ ಶರಗಳ ಮಳೆಯನ್ನು ಸುರಿಸಿದನು. ಅವನ ಶರಗಳಿಂದ ಕವಚಗಳನ್ನು ಕಳೆದುಕೊಂಡ ದ್ರುಪದನ ಸೇನೆಯು ಆ ಭೈರವ ರಾತ್ರಿಯಲ್ಲಿ ರಣದಿಂದ

ಓಡಿ ಹೋಯಿತು. ಅವರು ಎಲ್ಲಕಡೆ ಬಿಟ್ಟುಹೋಗಿದ್ದ ಉರಿಯುತ್ತಿರುವ ಪಂಜುಗಳಿಂದ ರಣಭೂಮಿಯು ಗ್ರಹ-ನಕ್ಷತ್ರಗಳಿಂದ ಕೂಡಿದ ಮೋಡಗಳಿಲ್ಲದ ಆಗಸದಂತೆ ವಿರಾಜಿಸುತ್ತಿತ್ತು. ವರ್ಷಾಕಾಲದಲ್ಲಿ ಮಿಂಚಿನಿಂದ ಕೂಡಿದ ಮೋಡದಂತೆ ವಸುಂಧರೆಯು ಬಿದ್ದಿದ್ದ ಅಂಗದಾಭರಣಗಳಿಂದ ಪ್ರಕಾಶಿಸುತ್ತಿತ್ತು. ಆ ತಾರಕಾಮಯ ಯುದ್ಧದಲ್ಲಿ ಇಂದ್ರನ ಭಯದಿಂದ ತತ್ತರಿಸಿದ ದಾನವರಂತೆ ಕರ್ಣಸುತನಿಂದ ಭಯಗೊಂಡ ಸೋಮಕರು ಪಲಾಯನಮಾಡಿದರು. ಸಮರದಲ್ಲಿ ಅವನಿಂದ ಪೀಡಿತರಾಗಿ ಪಂಜುಗಳನ್ನು ಹಿಡಿದು ಓಡಿಹೋಗುತ್ತಿರುವ ಸೋಮಕರು ಶೋಭಾಯಮಾನರಾಗಿ ಕಾಣುತ್ತಿದ್ದರು. ಸಮರದಲ್ಲಿ ಅವರನ್ನು ಗೆದ್ದ ಕರ್ಣಪುತ್ರನು ಮಧ್ಯಾಹ್ನ ನಡುನೆತ್ತಿಯ ಮೇಲಿದ್ದ ಸೂರ್ಯನಂತೆ ಪ್ರಕಾಶಿಸಿದನು. ಕೌರವರ ಮತ್ತು ಶತ್ರುಗಳ ಆ ಸಹಸ್ರಾರು ರಾಜರುಗಳ ಮಧ್ಯೆ ಪ್ರತಾಪವಾನ್ ವೃಷಸೇನನು ಒಬ್ಬನೇ ಪ್ರಜ್ವಲಿಸುತ್ತಾ ನಿಂತಿದ್ದನು. ರಣದಲ್ಲಿ ಮಹಾರಥ ಶೂರ ಸೋಮಕರನ್ನು ಗೆದ್ದು ಅವನು ತ್ವರೆಮಾಡಿ ರಾಜಾ ಯುಧಿಷ್ಠಿರನಿದ್ದಲ್ಲಿಗೆ ಹೋದನು.

## ಪ್ರತಿವಿಂಧ್ಯ-ದುಃಶಾಸನರ ಯುದ್ಧ

ಕ್ರುದ್ಧನಾಗಿ ರಣದಲ್ಲಿ ರಿಪುಗಳನ್ನು ದಹಿಸುತ್ತಿದ್ದ ಪ್ರತಿವಿಂಧ್ಯನನ್ನು

ಮಹಾರಥ ದುಃಶಾಸನನು ಹೋಗಿ ಎದುರಿಸಿದನು. ಅವರ ಸಮಾಗಮವು ಮೋಡವಿಲ್ಲದ ಆಕಾಶದಲ್ಲಿ ಬುಧ-ಸೂರ್ಯರ ಸಮಾಗಮದಂತೆ ಚಿತ್ರರೂಪವಾಗಿದ್ದಿತು. ಸಮರದಲ್ಲಿ ದುಷ್ಕರ ಕರ್ಮವನ್ನು ಮಾಡುತ್ತಿದ್ದ ಪ್ರತಿವಿಂಧ್ಯನನ್ನು ದುಃಶಾಸನನು ಬಾಣಗಳಿಂದ ಹಣೆಗೆ ಹೊಡೆದನು. ಬಲವಂತ ಧನ್ವಿ ದುಃಶಾಸನನಿಂದ ಅತಿಯಾಗಿ ಗಾಯಗೊಂಡ ಆ ಮಹಾಬಾಹುವು ಶೃಂಗವಿರುವ ಪರ್ವತದಂತೆ ವಿರಾಜಿಸಿದನು. ಮಹಾರಥ ಪ್ರತಿವಿಂಧ್ಯನಾದರೋ ದುಃಶಾಸನನನ್ನು ಒಂಬತ್ತು ಸಾಯಕಗಳಿಂದ ಹೊಡೆದು ಪುನಃ ಏಳರಿಂದ ಪ್ರಹರಿಸಿದನು. ಅಲ್ಲಿ ದುಷ್ಕರ ಕರ್ಮವನ್ನು ಮಾಡುವ ದುಃಶಾಸನನು ಉಗ್ರ ಶರಗಳಿಂದ ಪ್ರತಿವಿಂಧ್ಯನ ಕುದುರೆಗಳನ್ನು ಕೆಳಗುರುಳಿಸಿದನು.

ಆ ಧನ್ವಿಯು ಇನ್ನೊಂದು ಭಲ್ಲದಿಂದ ಅವನ ಸಾರಥಿಯನ್ನು ಮತ್ತು ಧ್ವಜವನ್ನು ಕೆಳಗುರುಳಿಸಿದನು. ಮತ್ತು ನೂರಾರು ಬಾಣಗಳಿಂದ ಅವನ ರಥವನ್ನು ಕೂಡ ಪ್ರಹರಿಸಿದನು. ಕ್ರುದ್ಧನಾದ ಅವನು ಸನ್ನತಪರ್ವ ಶರಗಳಿಂದ ಪ್ರತಿವಿಂಧ್ಯನ ಪತಾಕೆಗಳನ್ನೂ, ತೂಣೀರಗಳನ್ನೂ, ಕಡಿವಾಣಗಳನ್ನೂ, ನೊಗಪಟ್ಟಿಗಳನ್ನೂ ನುಚ್ಚುನೂರು ಮಾಡಿದನು. ವಿರಥನಾದ ಪ್ರತಿವಿಂಧ್ಯನಾದರೋ ಧನುಷ್ಪಾಣಿಯಾಗಿ ಅನೇಕ ನೂರು

ಬಾಣಗಳಿಂದ ದುಃಶಾನನನನ್ನು ಮುಚ್ಚಿ ಯುದ್ಧವನ್ನು ಮುಂದುವರೆಸಿದನು. ಆಗ ದುಃಶಾಸನನು ಕೈಚಳಕದಿಂದ ಕ್ಷುರಪ್ರವನ್ನು ಪ್ರಯೋಗಿಸಿ ಅವನ ಧನುಸ್ಸನ್ನು ಕತ್ತರಿಸಿದನು. ಧನುಸ್ಸು ತುಂಡಾದ ಅವನನ್ನು ಹತ್ತು ಭಲ್ಲಗಳಿಂದ ಹೊಡೆದನು. ವಿರಥನಾಗಿದ್ದ ಪ್ರತಿವಿಂಧ್ಯನನ್ನು ನೋಡಿ ಅವನ ಮಹಾರಥ ಸಹೋದರರು ಮಹಾ ಸೇನೆಯೊಂದಿಗೆ ವೇಗದಿಂದ ಆಗಮಿಸಿದರು. ಆಗ ಅವನು ಸುತಸೋಮನ ಹೊಳೆಯುತ್ತಿರುವ ರಥದ ಮೇಲೆ ಹಾರಿ, ಧನುಸ್ಸನ್ನೆತ್ತಿಕೊಂಡು ದುಃಶಾಸನನನ್ನು ಪ್ರಹರಿಸಿದನು. ಆಗ ಕೌರವರೆಲ್ಲರೂ ದುಃಶಾಸನನನ್ನು ಮಹಾ ಸೇನೆಯೊಂದಿಗೆ ಕೂಡಿ ಸುತ್ತುವರೆದು ಸಂಗ್ರಾಮದಲ್ಲಿ ಎರಗಿದರು. ಆಗ ಆ ದಾರುಣ ರಾತ್ರಿವೇಳೆಯಲ್ಲಿ ಕೌರವರ ಮತ್ತು ಪಾಂಡವರ ನಡುವೆ ಯಮರಾಷ್ಟ್ರವನ್ನು ವರ್ಧಿಸುವ ಯುದ್ಧವು ನಡೆಯಿತು.

## ನಕುಲ-ಶಕುನಿಯರ ಯುದ್ಧ

ರಭಸದಿಂದ ಕೌರವ ಸೇನೆಯನ್ನು ಸಂಹರಿಸುತ್ತಿದ್ದ ನಕುಲನನ್ನು ಕ್ರುದ್ಧ ಸೌಬಲನು ಆಕ್ರಮಣಿಸಿ ನಿಲ್ಲು ನಿಲ್ಲೆಂದು ಹೇಳಿದನು. ಬದ್ಧವೈರಿಗಳಾಗಿದ್ದ ಆ ವೀರರಿಬ್ಬರೂ ಅನ್ಯೋನ್ಯರನ್ನು ವಧಿಸಲು ಬಯಸಿ ಪೂರ್ಣವಾಗಿ ಸೆಳೆದು ಬಿಟ್ಟ ಬಾಣಗಳಿಂದ ಅನ್ಯೋನ್ಯರನ್ನು

ಪ್ರಹರಿಸಿದರು. ಸೌಬಲನು ಹೇಗೆ ಕ್ಷಿಪ್ರವಾಗಿ ಶರವರ್ಷಗಳನ್ನು ಸುರಿಸುತ್ತಿದ್ದನೋ ಹಾಗೆ ನಕುಲನು ತನ್ನ ಯುದ್ಧನೈಪುಣ್ಯವನ್ನು ಪ್ರದರ್ಶಿಸುತ್ತಿದ್ದನು. ಶರಗಳಿಂದ ಚುಚ್ಚಲ್ಪಟ್ಟಿದ್ದ ಆ ಇಬ್ಬರು ಶೂರರು ಮುಳ್ಳುಗಳಿದ್ದ ಮುಳ್ಳುಹಂದಿಗಳಂತೆಯೇ ವಿರಾಜಿಸಿದರು. ಅವರಿಬ್ಬರೂ ಕಣ್ಣುಗಳನ್ನು ತೆರೆದು ಕ್ರೋಧದಿಂದ ಕೆಂಪಾದ ಕಣ್ಣುಗಳಿಂದ ಪರಸ್ಪರರನ್ನು ಸುಟ್ಟುಬಿಡುವರೋ ಎನ್ನುವಂತೆ ನೋಡುತ್ತಿದ್ದರು. ಸಂಕ್ರುದ್ಧನಾದ ಶಕುನಿಯಾದರೋ ನಸುನಗುತ್ತಾ ನಿಶಿತ ಕರ್ಣಿಕದಿಂದ ಮಾದ್ರೀಪುತ್ರನ ಹೃದಯಕ್ಕೆ ಹೊಡೆದನು. ಶಕುನಿಯಿಂದ ಅತಿಯಾಗಿ ಗಾಯಗೊಂಡ ನಕುಲನಾದರೋ ಪೀಠದಿಂದ ಪಕ್ಕಕ್ಕೆ ಸರಿದು ಮೂರ್ಛಿತನಾದನು. ಅತ್ಯಂತ ವೈರಿ ಶತ್ರುವಿನ ಆ ಸ್ಥಿತಿಯನ್ನು ಕಂಡು ಶಕುನಿಯು ಬೇಸಗೆಯ ಅಂತ್ಯದಲ್ಲಿ ಮೋಡವು ಗುಡುಗುವಂತೆ ಜೋರಾಗಿ ಗರ್ಜಿಸಿದನು. ಆಗ ಪಾಂಡುನಂದನ ನಕುಲನು ಸಂಜ್ಞೆಯನ್ನು ಪಡೆದು ಬಾಯಿಕಳೆದ ಅಂತಕನಂತೆ ಸೌಬಲನನ್ನು ಇನ್ನೊಮ್ಮೆ ಆಕ್ರಮಣಿಸಿದನು. ಆ ಸಂಕ್ರುದ್ಧ ಭರತರ್ಷಭನು ಶಕುನಿಯನ್ನು ಅರವತ್ತು ನಾರಾಚಗಳಿಂದ ಹೊಡೆದು ಪುನಃ ನೂರರಿಂದ ಅವನ ಎದೆಯನ್ನು ಪ್ರಹರಿಸಿದನು. ಅನಂತರ ಶಕುನಿಯ ಶರ ಮತ್ತು ಚಾಪವನ್ನು ಮುಷ್ಟಿಪ್ರದೇಶದಲ್ಲಿ ಕತ್ತರಿಸಿ, ತ್ವರೆಮಾಡಿ ಧ್ವಜವನ್ನು ಮತ್ತು ಅವನನ್ನು ಕೂಡ ರಥದಿಂದ ಭೂಮಿಯ ಮೇಲೆ ಕೆಡವಿದನು.

ಅತಿಯಾಗಿ ಗಾಯಗೊಂಡು ಮೂರ್ಛಿತನಾಗಿ ಬಿದ್ದ ಶಕುನಿಯನ್ನು ನೋಡಿ ಅವನ ಸಾರಥಿಯು ಅವನನ್ನು ರಥದ ಮೇಲೆ ಕುಳ್ಳಿರಿಸಿ ರಥವನ್ನು ದೂರ ಕೊಂಡೊಯ್ದನು.

ರಣದಲ್ಲಿ ಶತ್ರುವನ್ನು ಸೋಲಿಸಿದ ಶತ್ರುತಾಪನ ಪಾರ್ಥ ನಕುಲ ಮತ್ತು ಅವನ ಅನುಯಾಯಿಗಳು ಜೋರಾಗಿ ಗರ್ಜಿಸಿದರು. ಕ್ರುದ್ಧನಾದ ಅವನು ದ್ರೋಣಸೇನೆಯ ಕಡೆ ತನ್ನನ್ನು ಕರೆದುಕೊಂಡು ಹೋಗುವಂತೆ ಸಾರಥಿಗೆ ಹೇಳಿದನು. ಮಾದ್ರೀಪುತ್ರನ ಆ ಮಾತನ್ನು ಕೇಳಿ ಧೀಮತ ಸಾರಥಿಯು ದ್ರೋಣನು ಯುದ್ಧಮಾಡುತ್ತಿರುವಲ್ಲಿಗೆ ಅವನನ್ನು ಕೊಂಡೊಯ್ದನು.

## ಶಿಖಂಡಿ-ಕೃಪರ ಯುದ್ಧ

ದ್ರೋಣನ ಬಳಿ ಹೋಗುತ್ತಿದ್ದ ಶಿಖಂಡಿಯನ್ನು ಪ್ರಯತ್ನಪಟ್ಟು ಕೃಪ ಶಾರದ್ವತನು ವೇಗದಿಂದ ಎದುರಿಸಿ ತಡೆದನು. ದ್ರೋಣನ ಸಮೀಪದಿಂದ ವೇಗದಿಂದ ತನ್ನ ಕಡೆಬರುತ್ತಿದ್ದ ಗೌತಮನನ್ನು ಶಿಖಂಡಿಯು ನಗುತ್ತಾ ಒಂಬತ್ತು ಭಲ್ಲಗಳಿಂದ ಪ್ರಹರಿಸಿದನು. ಆಚಾರ್ಯನು ಅವನನ್ನು ಐದು ಆಶುಗಗಳಿಂದ ಹೊಡೆದು ಪುನಃ ಇಪ್ಪತ್ತರಿಂದ ಪ್ರಹರಿಸಿದನು. ದೇವಾಸುರರ ಯುದ್ಧದಲ್ಲಿ ಶಂಬರ ಮತ್ತು ಅಮರರಾಜರ ನಡುವೆ ನಡೆದಂತೆ ಅವರಿಬ್ಬರ ನಡುವೆ

ಘೋರರೂಪದ ಮಹಾಯುದ್ಧವು ನಡೆಯಿತು.

ಆ ಇಬ್ಬರು ಮಹಾರಥರೂ ಆಕಾಶವನ್ನು ಶರಜಾಲಗಳಿಂದ ಮುಚ್ಚಿಬಿಟ್ಟರು. ಘೋರರೂಪವನ್ನು ತಾಳಿದ್ದ ಪ್ರಕೃತಿಯು ಅದರಿಂದಾಗಿ ಇನ್ನೂ ಘೋರವಾಗಿ ಕಾಣುತ್ತಿತ್ತು. ಯುದ್ಧಾಸಕ್ತರಾಗಿದ್ದ ಯೋಧರಿಗೂ ಆ ಕಾಲರಾತ್ರಿಯು ಘೋರರೂಪವನ್ನು ತಾಳಿ ಭಯವನ್ನುಂಟುಮಾಡುತ್ತಿತ್ತು. ಶಿಖಂಡಿಯಾದರೋ ಅರ್ಧಚಂದ್ರಾಕಾರದ ವಿಶಿಖವನ್ನು ಹೂಡಿ ಗೌತಮನ ಮಹಾಧನುಸ್ಸನ್ನು ತುಂಡರಿಸಿದನು. ಕ್ರುದ್ಧ ಕೃಪನು ಅವನ ಮೇಲೆ ಕಮ್ಮಾರನಿಂದ ಮಾಡಲ್ಪಟ್ಟ ಸ್ವರ್ಣದ ಹಿಡಿ ಮತ್ತು ಮುಳ್ಳಿನ ತುದಿಯುಳ್ಳ ದಾರುಣ ಶಕ್ತಿಯನ್ನು ಎಸೆದನು. ಬೀಳುತ್ತಿದ್ದ ಅದನ್ನು ಶಿಖಂಡಿಯು ಅನೇಕ ಶರಗಳಿಂದ ತುಂಡರಿಸಿದನು. ಮಹಾಪ್ರಭೆಯ ಆ ಶಕ್ತಿಯು ಬೆಂಕಿಯಿಂದ ಬೆಳಗುತ್ತಾ ಭೂಮಿಯ ಮೇಲೆ ಬಿದ್ದಿತು. ತಕ್ಷಣವೇ ರಥಿಗಳಲ್ಲಿ ಶ್ರೇಷ್ಠ ಗೌತಮನು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ನಿಶಿತ ಬಾಣಗಳಿಂದ ಶಿಖಂಡಿಯನ್ನು ಮುಚ್ಚಿಬಿಟ್ಟನು. ಗೌತಮನಿಂದ ಗಾಯಗೊಂಡ ಶಿಖಂಡಿಯು ರಥದಲ್ಲಿ ಸರಿದು ಕುಳಿತುಕೊಂಡನು. ಯುದ್ಧದಲ್ಲಿ ಅವನು ಕುಸಿದುದನ್ನು ನೋಡಿ ಕೃಪ ಶಾರದ್ವತನು ಕೊಲ್ಲುವನೋ ಎನ್ನುವಂತೆ ಅವನನ್ನು ಅನೇಕ

ಬಾಣಗಳಿಂದ ಹೊಡೆದನು. ರಣದಲ್ಲಿ ಯಾಜ್ಞಸೇನಿಯು ವಿಮುಖನಾದುದನ್ನು ನೋಡಿ ಪಾಂಚಾಲ-ಸೋಮಕರು ಎಲ್ಲಕಡೆಗಳಿಂದ ಸುತ್ತುವರೆದರು. ಹಾಗೆಯೇ ಕೌರವ ಪುತ್ರರೂ ಕೂಡ ದ್ವಿಜೋತ್ತಮನನ್ನು ಸುತ್ತುವರೆದರು. ಆಗ ಮಹಾಸೇನೆಗಳೊಡನೆ ಪುನಃ ಯುದ್ಧವು ನಡೆಯಿತು.

ರಣದಲ್ಲಿ ಅನ್ಯೋನ್ಯರನ್ನು ಆಕ್ರಮಣಿಸುತ್ತಿದ್ದ ಆ ರಥಿಗಳ ತುಮುಲಶಬ್ಧವು ಮೋಡಗಳ ಗುಡುಗುಗಳಂತೆ ಕೇಳಿಬರುತ್ತಿತ್ತು. ಓಡಿಬಂದು ಪರಸ್ಪರರನ್ನು ಆಕ್ರಮಣಿಸುತ್ತಿದ್ದ ಕುದುರೆಸವಾರರ ಮತ್ತು ಆನೆಗಳ ಯುದ್ಧವು ಕ್ರೂರವಾಗಿ ಪರಿಣಮಿಸಿತು. ಓಡುತ್ತಿದ್ದ ಪದಾತಿಗಳ ಕಾಲುಶಬ್ಧಗಳಿಂದ ಮೇದಿನಿಯು ಭಯದಿಂದ ನಡುಗುತ್ತಿದ್ದ ಅಂಗನೆಯಂತೆ ಕಂಪಿಸಿತು. ವೇಗದಿಂದ ಓಡುತ್ತಿದ್ದ ರಥಿಗಳು ರಥಿಗಳನ್ನು ತಲುಪಿ ಕಾಗೆಗಳು ಮಿಡತೆಹುಳಗಳನ್ನು ಹೇಗೋ ಹಾಗೆ ಅನೇಕರನ್ನು ಹಿಡಿದು ಸಂಹರಿಸುತ್ತಿದ್ದರು. ಹಾಗೆಯೇ ಮದೋದಕವನ್ನು ಸುರಿಸುತ್ತಿದ್ದ ಆನೆಗಳು ಮದೋದಕವನ್ನು ಸುರಿಸುತ್ತಿದ್ದ ಇತರ ಮಹಾಗಜಗಳನ್ನು ದಾರಿಯಲ್ಲಿಯೇ ಪ್ರಯತ್ನಪಟ್ಟು ಧ್ವಂಸಗೊಳಿಸುತ್ತಿದ್ದವು. ಅಶ್ವಾರೋಹಿಗಳು ಅಶ್ವಾರೋಹಿಗಳನ್ನು ಮತ್ತು ಕಾಲಾಳುಗಳು ಕಾಲಾಳುಗಳನ್ನು ರಣದಲ್ಲಿ ಎದುರಿಸಿ ಸಂರಬ್ಧರಾಗಿ

ಯಾರಿಗೂ ಮುಂದೆಹೋಗಲು ಬಿಡದೇ ಯುದ್ಧಮಾಡುತ್ತಿದ್ದರು. ಚೆಲ್ಲಾಪಿಲ್ಲಿಯಾಗಿ ಓಡಿಹೋಗುತ್ತಿದ್ದ ಮತ್ತು ಪುನಃ ಯುದ್ಧಕ್ಕೆ ಹಿಂದಿರುಗುತ್ತಿದ್ದ ಸೇನೆಗಳ ಆ ತುಮುಲಶಬ್ಧವು ರಾತ್ರಿಯಲ್ಲಿ ಕೇಳಿಬರುತ್ತಿತ್ತು. ರಥ, ಆನೆ, ಕುದುರೆಗಳ ಮೇಲೆ ಉರಿಯುತ್ತಿದ್ದ ಪಂಜುಗಳು ಆಕಾಶದಿಂದ ಕೆಳಕ್ಕೆ ಬಿದ್ದ ಮಹಾ ಉಲ್ಕೆಗಳಂತೆ ತೋರುತ್ತಿದ್ದವು. ರಣರಂಗದಲ್ಲಿ ಹತ್ತಿ ಉರಿಯುತ್ತಿದ್ದ ಪಂಜುಗಳಿಂದ ಪ್ರಕಾಶಿತಗೊಂಡ ಆ ರಾತ್ರಿಯು ಹಗಲಿನಂತೆಯೇ ಕಾಣುತ್ತಿತ್ತು. ಆದಿತ್ಯನಿಂದ ಲೋಕದಲ್ಲಿ ಕತ್ತಲೆಯು ಹೇಗೆ ನಾಶವಾಗುತ್ತದೆಯೋ ಹಾಗೆ ಉರಿಯುತ್ತಿರುವ ದೀಪಗಳಿಂದ ಅಲಂಕೃತಗೊಂಡು ಆ ಘೋರ ಕತ್ತಲೆಯು ನಾಶವಾಗಿತ್ತು. ಮಹಾತ್ಮರ ಶಸ್ತ್ರಗಳು, ಕವಚಗಳು ಮತ್ತು ಮಣಿಗಳ ಮೇಲೆ ಬಿದ್ದು ಅವುಗಳು ಒಳಗಿನಿಂದಲೇ ಪ್ರಕಾಶಗೊಳ್ಳುತ್ತಿವೆಯೋ ಎಂದು ಅನ್ನಿಸುತ್ತಿತ್ತು. ರಾತ್ರಿವೇಳೆಯಲ್ಲಿ ನಡೆಯುತ್ತಿದ್ದ ಆ ಕೋಲಾಹಲ ಯುದ್ಧದಲ್ಲಿ ತಿಳಿಯದೇ ತಂದೆಯರು ಮಕ್ಕಳನ್ನು, ಮಕ್ಕಳು ತಂದೆಯರನ್ನು, ಸಖರು ಸಖರನ್ನು, ಸಂಬಂಧಿಗಳು ಸಂಬಂಧಿಗಳನ್ನು ಮತ್ತು ಅಳಿಯರು ಮಾವರನ್ನು ವಧಿಸಿದರು. ಕೌರವರು ತಮ್ಮವರನ್ನೇ ಮತ್ತು ಶತ್ರುಗಳು ಶತ್ರುಗಳನ್ನೇ ಪರಸ್ಪರ ಕೊಲ್ಲುತ್ತಿದ್ದರು. ಮರ್ಯಾದೆಗಳಿಲ್ಲದ ಆ ರಾತ್ರಿಯುದ್ಧವು ಘೋರವೂ ಭಯಂಕರವೂ ಆಗಿತ್ತು.

## ಧೃಷ್ಟದ್ಯುಮ್ನ-ದ್ರೋಣರ ಯುದ್ಧ

ಭಯವನ್ನುಂಟುಮಾಡುವ ಆ ತುಮುಲ ಯುದ್ಧವು ನಡೆಯುತ್ತಿರಲು ಧೃಷ್ಟದ್ಯುಮ್ನನು ದ್ರೋಣನನ್ನು ಆಕ್ರಮಣಿಸಿದನು. ಶಿಂಜಿನಿಯನ್ನು ಪುನಃ ಪುನಃ ಎಳೆಯುತ್ತ ಶ್ರೇಷ್ಠ ಧನುಸ್ಸನ್ನು ಟೇಂಕರಿಸುತ್ತಾ ಅವನು ಬಂಗಾರದಿಂದ ವಿಭೂಷಿತ ದ್ರೋಣನ ರಥವನ್ನು ಆಕ್ರಮಣಿಸಿದನು. ದ್ರೋಣನನ್ನು ಕೊನೆಗಾಣಿಸಲು ಬಯಸಿ ಮುಂದೆ ಬರುತ್ತಿದ್ದ ಧೃಷ್ಟದ್ಯುಮ್ನನನ್ನು ಪಾಂಡವರೊಂದಿಗೆ ಪಾಂಚಾಲರು ಸುತ್ತುವರೆದಿದ್ದರು. ಆಚಾರ್ಯಸತ್ತಮ ದ್ರೋಣನು ಹಾಗೆ ಮುತ್ತಿಗೆಹಾಕಲ್ಪಟ್ಟಿದ್ದುದನ್ನು ನೋಡಿ ಕೌರವ ಮಕ್ಕಳು ಯುದ್ಧದಲ್ಲಿ ದ್ರೋಣನನ್ನು ರಕ್ಷಿಸಲು ಎಲ್ಲ ಕಡೆಗಳಿಂದ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದರು. ನಿಶಾಮುಖದಲ್ಲಿ ಎದುರಾಗುತ್ತಿದ್ದ ಆ ಎರಡು ಸೇನೆಗಳು ಚಂಡಮಾರುತಕ್ಕೆ ಸಿಲುಕಿ ಅಲ್ಲೋಲಕಲ್ಲೋಲಗೊಳ್ಳುವ ಭೈರವ ಸಾಗರಗಳಂತೆ ತೋರುತ್ತಿದ್ದವು. ಆಗ ಪಾಂಚಾಲ್ಯನು ಐದು ಶರಗಳನ್ನು ದ್ರೋಣನ ಎದೆಗೆ ಗುರಿಯಿಟ್ಟು ಹೊಡೆದು ತಕ್ಷಣವೇ ಸಿಂಹನಾದಗೈದನು. ಸಂಯುಗದಲ್ಲಿ ದ್ರೋಣನು ಅವನನ್ನು ಇಪ್ಪತ್ತೈದು ಬಾಣಗಳಿಂದ ಹೊಡೆದು ಇನ್ನೊಂದು ಭಲ್ಲದಿಂದ ಅವನ ಮಹಾಪ್ರಭೆಯ ಧನುಸ್ಸನ್ನು ತುಂಡರಿಸಿದನು. ದ್ರೋಣನಿಂದ ಗಾಯಗೊಂಡ ಧೃಷ್ಟದ್ಯುಮ್ನನಾದರೋ ಹಲ್ಲುಕಚ್ಚುತ್ತಾ ಬೇಗನೇ ಆ

ಧನುಸ್ಸನ್ನು ಬಿಸಾಡಿದನು. ಆಗ ಧೃಷ್ಟದ್ಯುಮ್ನನು ದ್ರೋಣನನ್ನು ಮುಗಿಸಿಬಿಡಲು ಬಯಸಿ ಇನ್ನೊಂದು ಶ್ರೇಷ್ಠ ಧನುಸ್ಸನ್ನು ಎತ್ತಿಕೊಂಡನು. ಪರವೀರಹನು ಆ ಚಿತ್ರಧನುಸ್ಸನ್ನು ಆಕರ್ಣವಾಗಿ ಸೆಳೆದು ದ್ರೋಣನನ್ನು ಅಂತ್ಯಗೊಳಿಸಬಲ್ಲ ಘೋರ ಸಾಯಕವನ್ನು ಪ್ರಯೋಗಿಸಿದನು. ಅವನು ಪ್ರಯೋಗಿಸಿದ ಬಲವುಳ್ಳ ಆ ಘೋರ ಶರವು ಉದಯಿಸುತ್ತಿರುವ ದಿವಾಕರನಂತೆ ಸೇನೆಯನ್ನು ಬೆಳಗಿಸಿತು. ಆ ಘೋರ ಶರವನ್ನು ನೋಡಿ ದೇವ-ಗಂಧರ್ವ-ಮಾನವರು ದ್ರೋಣನಿಗೆ ಮಂಗಳವಾಗಲೆಂದು ಹೇಳಿಕೊಂಡರು.

ಆ ಸಾಯಕವು ಆಚಾರ್ಯನ ರಥವನ್ನು ತಲುಪುವುದರೊಳಗೇ ಕರ್ಣನು ಕೈಚಳಕದಿಂದ ಅದನ್ನು ಹನ್ನೆರಡು ಭಾಗಗಳನ್ನಾಗಿ ತುಂಡರಿಸಿದನು. ಕರ್ಣನ ಸಾಯಕದಿಂದ ತುಂಡರಿಸಲ್ಪಟ್ಟ ಆ ಶರವು ತಕ್ಷಣವೇ ಅನೇಕ ಚೂರುಗಳಾಗಿ ಬಿದ್ದಿತು. ಸನ್ನತಪರ್ವ ಶರಗಳಿಂದ ಆ ಬಾಣವನ್ನು ಕತ್ತರಿಸಿ ಕರ್ಣನು ಧೃಷ್ಟದ್ಯುಮ್ನನನ್ನು ಹತ್ತು ಶರಗಳಿಂದ ಹೊಡೆದನು. ಆಗ ತ್ವರೆಮಾಡಿ ಎಲ್ಲ ಮಹಾರಥರೂ ಪಾಂಚಾಲ್ಯನನ್ನು ಪ್ರಹರಿಸಿದರು: ದ್ರೋಣಪುತ್ರನು ಐದರಿಂದ, ದ್ರೋಣನು ಏಳರಿಂದ, ಶಲ್ಯನು ಒಂಭತ್ತು ಬಾಣಗಳಿಂದ, ದುಃಶಾಸನನು ಮೂರರಿಂದ, ದುರ್ಯೋಧನನನು ಇಪ್ಪತ್ತರಿಂದ, ಮತ್ತು ಶಕುನಿಯು ಐದರಿಂದ

ಹೊಡೆದರು. ಯುದ್ಧದಲ್ಲಿ ದ್ರೋಣನ ಪ್ರಾಣವನ್ನು ರಕ್ಷಿಸುತ್ತಿದ್ದ ಆ ಏಳು ವೀರರಿಂದ ಪ್ರಹರಿಸಲ್ಪಟ್ಟ ಧೃಷ್ಟದ್ಯುಮ್ನನು ಸ್ವಲ್ಪವೂ ಗಾಬರಿಗೊಳ್ಳದೇ ಅವರೆಲ್ಲರನ್ನೂ ಮೂರು ಮೂರು ಬಾಣಗಳಿಂದ ಪ್ರತಿಯಾಗಿ ಪ್ರಹರಿಸಿದನು. ಅವನು ದ್ರೋಣನನ್ನು, ದ್ರೌಣಿಯನ್ನು, ಕರ್ಣನನ್ನು ಮತ್ತು ದುರ್ಯೋಧನನನ್ನೂ ಹೊಡೆದನು. ಧನ್ವಿ ಧೃಷ್ಟದ್ಯುಮ್ನನಿಂದ ಪ್ರಹರಿಸಲ್ಪಟ್ಟ ಆ ಒಬ್ಬೊಬ್ಬ ರಥಶ್ರೇಷ್ಠರೂ ಪುನಃ ಬೇಗನೆ ಧೃಷ್ಟದ್ಯುಮ್ನನನ್ನು ಐದು ಬಾಣಗಳಿಂದ ಹೊಡೆದರು. ದ್ರುಮಸೇನನಾದರೋ ಸಂಕ್ರುದ್ಧನಾಗಿ ಧೃಷ್ಟದ್ಯುಮ್ನನನ್ನು ಪತ್ರಿಗಳಿಂದ ಹೊಡೆದನು. ತಕ್ಷಣವೇ ಇತರ ಅನ್ಯ ಶರಗಳಿಂದ ಹೊಡೆದು ನಿಲ್ಲು ನಿಲ್ಲೆಂದು ಹೇಳಿದನು. ಧೃಷ್ಟದ್ಯುಮ್ನನಾದರೋ ಅವನನ್ನು ಯುದ್ಧದಲ್ಲಿ ಪ್ರಾಣಗಳನ್ನು ಅಂತ್ಯಗೊಳಿಸಬಲ್ಲ ಸ್ವರ್ಣಪುಂಖಗಳ ಶಿಲೆಗೆ ಹಚ್ಚಿ ಮೊನಚುಮಾಡಲ್ಪಟ್ಟ ಮೂರು ತೀಕ್ಷ್ಣ ಜಿಹ್ಮಗಗಳಿಂದ ತಿರುಗಿ ಹೊಡೆದನು. ಪುನಃ ಅನ್ಯ ಭಲ್ಲದಿಂದ ದ್ರುಮಸೇನನ ಸುವರ್ಣದಂತೆ ಬೆಳಗುತ್ತಿದ್ದ ಕುಂಡಲಗಳನ್ನು ಧರಿಸಿದ್ದ ಶಿರವನ್ನು ಕಾಯದಿಂದ ಕತ್ತರಿಸಿದನು. ಭಿರುಗಾಳಿಗೆ ಸಿಲುಕಿದ್ದ ಪಕ್ವ ತಾಳೆಯ ಫಲವು ಹೇಗೋ ಹಾಗೆ ಅವುಡುಗಚ್ಚಿದ್ದ ಆ ನೃಪತಿಯ ಶಿರವು ರಣಭೂಮಿಯ ಮೇಲೆ ಬಿದ್ದಿತು.

ವೀರ ಧೃಷ್ಟದ್ಯುಮ್ನನು ಆ ವೀರರನ್ನು ಪುನಃ ನಿಶಿತ ಶರಗಳಿಂದ ಹೊಡೆದು ಭಲ್ಲಗಳಿಂದ ಚಿತ್ರಯೋಧಿ ರಾಧೇಯನ ಕಾರ್ಮುಕವನ್ನು ಕತ್ತರಿಸಿದನು. ಸಿಂಹವು ತನ್ನ ಬಾಲವು ಕತ್ತರಿಸಿದುದನ್ನು ಸಹಿಸಿಕೊಳ್ಳದಂತೆ ಕರ್ಣನು ತನ್ನ ಧನುಸ್ಸು ತುಂಡಾಗಿದ್ದುದನ್ನು ಸಹಿಸಿಕೊಳ್ಳಲಿಲ್ಲ. ಅವನು ಇನ್ನೊಂದು ಧನುಸ್ಸನ್ನು ಎತ್ತಿಕೊಂಡು ಕ್ರೋಧದಿಂದ ಕಣ್ಣುಗಳನ್ನು ಕೆಂಪುಮಾಡಿಕೊಂಡು ದೀರ್ಘ ಉಸಿರುಬಿಡುತ್ತಾ ಮಹಾಬಲ ಧೃಷ್ಟದ್ಯುಮ್ನನ ಮೇಲೆ ಶರಗಳ ಮಳೆಯನ್ನೇ ಸುರಿಸಿದನು. ಕರ್ಣನು ಕುಪಿತನಾಗಿರುವುದನ್ನು ಕಂಡು ಆ ಆರು ವೀರ ರಥರ್ಷಭರು (ದ್ರೋಣ, ಅಶ್ವತ್ಥಾಮ, ದುರ್ಯೋಧನ, ಶಲ್ಯ, ದುಃಶಾಸನ ಮತ್ತು ಶಕುನಿ) ತ್ವರೆಮಾಡಿ ಸಂಹರಿಸಲು ಬಯಸಿ ಪಾಂಚಾಲ್ಯಪುತ್ರನನ್ನು ಸುತ್ತುವರೆದರು. ಕೌರವರ ಕಡೆಯ ಆ ಆರು ಯೋಧಪ್ರವೀಣರಿಂದ ಎದುರಿಸಲ್ಪಟ್ಟಿದ್ದ ಧೃಷ್ಟದ್ಯುಮ್ನನು ಮೃತ್ಯುವಿನ ಬಾಗಿಲನ್ನೇ ತಲುಪಿದ್ದಾನೆಂದು ತೋರುತ್ತಿತ್ತು.

## ಕರ್ಣ-ಸಾತ್ಯಕಿಯರ ಯುದ್ಧ

ಇದೇ ಸಮಯದಲ್ಲಿ ಶರಗಳನ್ನು ಚೆಲ್ಲುತ್ತಾ ಸಾತ್ಯಕಿಯು ಧೃಷ್ಟದ್ಯುಮ್ನನನ್ನು ಸಮೀಪಿಸಿದನು. ಮುಂದುವರೆಯುತ್ತಿದ್ದ ಸಾತ್ಯಕಿಯನ್ನು ರಾಧೇಯನು ಹತ್ತು ಜಿಹ್ಮಗ ಬಾಣಗಳಿಂದ ಹೊಡೆದನು.

ಅವನನ್ನು ಸಾತ್ಯಕಿಯು ಹತ್ತು ಶರಗಳಿಂದ ಹೊಡೆದು ಸರ್ವ ವೀರರೂ ನೋಡುತ್ತಿದ್ದಂತೆಯೇ "ಹೋಗಬೇಡ! ನಿಲ್ಲು!" ಎಂದು ಹೇಳಿದನು. ಸಾತ್ಯಕಿ ಮತ್ತು ಕರ್ಣರ ಆ ಸಮಾಗಮವು ಬಲಿ-ವಾಸವರ ಸಮಾಗಮದಂತೆ ಘೋರವಾಗಿತ್ತು. ಚಪ್ಪಾಳೆ ಘೋಷದಿಂದ ಕ್ಷತ್ರಿಯರನ್ನು ಬೆದರಿಸುತ್ತಾ ಸಾತ್ಯಕಿಯು ಕರ್ಣನನ್ನು ತಿರುಗಿ ಹೊಡೆದನು. ಧನುರ್ಘೋಷದಿಂದ ವಸುಧೆಯನ್ನು ನಡುಗಿಸುವಂತೆ ಬಲಶಾಲೀ ಸೂತಪುತ್ರನು ಸಾತ್ಯಕಿಯನ್ನು ತಿರುಗಿ ಹೊಡೆದನು. ವಿಪಾಠ, ಕರ್ಣಿ, ನಾರಾಚ, ವತ್ಸದಂತ ಮತ್ತು ಕ್ಷುರಗಳೆಂಬ ನೂರಾರು ಶರಗಳಿಂದ ಕರ್ಣನು ಶೈನೇಯನನ್ನು ಪ್ರಹರಿಸಿದನು. ಹಾಗೆಯೇ ಮಹಾರಥ ಯುಯುಧಾನನು ಕೂಡ ಶರಗಳನ್ನು ಸುರಿಸಿ ಕರ್ಣನನ್ನು ಮುಚ್ಚಿಬಿಟ್ಟನು. ಆ ಯುದ್ಧವು ಸರಿಸಮನಾಗಿತ್ತು. ತಕ್ಷಣ ಕೌರವರೂ ಕವಚಧಾರೀ ಕರ್ಣಪುತ್ರನೂ ಎಲ್ಲಕಡೆಗಳಿಂದ ಸಾತ್ಯಕಿಯನ್ನು ನಿಶಿತ ಶರಗಳಿಂದ ಹೊಡೆದರು. ಸಾತ್ಯಕಿಯು ಕರ್ಣನ ಮತ್ತು ಅವರ ಅಸ್ತ್ರಗಳನ್ನು ಅಸ್ತ್ರಗಳಿಂದಲೇ ನಾಶಗೊಳಿಸಿ ಕ್ರುದ್ಧನಾಗಿ ವೃಷಸೇನನ ವಕ್ಷಸ್ಥಳಕ್ಕೆ ಹೊಡೆದನು. ಅವನ ಬಾಣದಿಂದ ಗಾಯಗೊಂಡ ವೀರ್ಯವಾನ್ ವೃಷಸೇನನು ಮೂರ್ಛಿತನಾಗಿ ಧನುಸ್ಸನ್ನು ಬಿಸುಟು ರಥದಮೇಲೆ ಕುಸಿದುಬಿದ್ದನು. ಆಗ ವೃಷಸೇನನು ಹತನಾದನೆಂದೇ ತಿಳಿದು ಪುತ್ರಶೋಕದಿಂದ ಸಂತಪ್ತನಾದ ಕರ್ಣನು ಸಾತ್ಯಕಿಯನ್ನು

ತಿರುಗಿ ಪೀಡಿಸಿದನು. ಕರ್ಣನಿಂದ ಪೀಡಿಸಲ್ಪಟ್ಟ ಯುಯುಧಾನನು ತ್ವರೆಮಾಡಿ ಕರ್ಣನನ್ನು ಅನೇಕ ಬಾರಿ ಪುನಃ ಪುನಃ ಪ್ರಹರಿಸಿದನು. ಸಾತ್ವತನು ಕರ್ಣನನ್ನು ಹತ್ತರಿಂದ ಮತ್ತು ವೃಷಸೇನನನ್ನು ಏಳರಿಂದ ಹೊಡೆದು ಅವರ ಕೈಚೀಲಗಳನ್ನೂ ಧನುಸ್ಸುಗಳನ್ನೂ ಕತ್ತರಿಸಿದನು. ಅವರು ಶತ್ರುಭಯಂಕರ ಅನ್ಯ ಧನುಸ್ಸುಗಳನ್ನು ಸಜ್ಜುಗೊಳಿಸಿ ಎಲ್ಲಕಡೆಗಳಿಂದ ನಿಶಿತ ಶರಗಳಿಂದ ಯುಯುಧಾನನನ್ನು ಪ್ರಹರಿಸಿದರು. ಆ ವೀರವರಕ್ಷಯ ಸಂಗ್ರಾಮವು ನಡೆಯುತ್ತಿರಲು ಗಾಂಡೀವದ ಅತೀವ ಮಹಾಧ್ವನಿಯು ಕೇಳಿಬಂದಿತು.

ರಥನಿರ್ಘೋಷವನ್ನೂ ಗಾಂಡೀವ ನಿಸ್ವನವನ್ನೂ ಕೇಳಿದ ಸೂತಪುತ್ರನು ದುರ್ಯೋಧನನಿಗೆ ಹೇಳಿದನು:

> “ಇಗೋ! ಸರ್ವ ಶಿಬಿಗಳನ್ನೂ, ನರರ್ಷಭ ಮುಖ್ಯರನ್ನೂ, ಪೌರವರನ್ನೂ ಸಂಹರಿಸಿ ಅರ್ಜುನನು ಗರ್ಜಿಸುತ್ತಿರುವುದು, ಗಾಂಡೀವವನ್ನು ಟೇಂಕರಿಸುವುದು ಮತ್ತು ಅವನ ರಥಘೋಷವು ಕೇಳಿಬರುತ್ತಿದೆ. ಪಾಂಡವನು ತನಗೆ ಅನುರೂಪ ಕರ್ಮವನ್ನು ಮಾಡಿದ್ದಾನೆಂದು ವ್ಯಕ್ತವಾಗುತ್ತಿದೆ. ಇವನು ಭಾರತೀ ಸೇನೆಯನ್ನು ಅನೇಕ ಭಾಗಗಳಾಗಿ ಸೀಳುತ್ತಿದ್ದಾನೆ. ಚದುರಿಹೋದ ಸೇನೆಗಳು ಎಂದೂ

ಯುದ್ಧದಲ್ಲಿ ನಿಲ್ಲುವುದಿಲ್ಲ. ಸವ್ಯಸಾಚಿಯ ಧಾಳಿಯಿಂದ ಚಂಡಮಾರುತಕ್ಕೆ ಸಿಲುಕಿದ ಸಾಗರದಂತೆ ಅಲ್ಲೋಲಕಲ್ಲೋಲಗೊಂಡ ಸೇನೆಯು ಸಾಗರದಲ್ಲಿ ತುಂಡಾದ ನೌಕೆಯಂತೆ ಕಾಣುತ್ತಿದೆ. ಗಾಂಡೀವದಿಂದ ಹೊರಬಂದ ಶರಗಳಿಂದ ಹೊಡೆಯಲ್ಪಟ್ಟ ಯೋಧಮುಖ್ಯರು ಓಡಿ ಹೋಗುತ್ತಿರುವ ಮಹಾ ನಿನಾದವು ಕೇಳಿಬರುತ್ತಿದೆ. ಈ ರಾತ್ರಿಯಲ್ಲಿ ಆಕಾಶದಲ್ಲುಂಟಾಗುವ ಮೇಘಗಳ ಗುಡುಗಿನಂತೆ ಅರ್ಜುನನ ರಥದ ಬಳಿ ಕೇಳಿಬರುತ್ತಿರುವ ಹಾಹಾಕಾರ ಕೂಗುಗಳು ಮತ್ತು ಪುಷ್ಕಲ ಸಿಂಹನಾದಗಳನ್ನು ಕೇಳು. ನಮ್ಮ ಮಧ್ಯೆ ಈ ಸಾತ್ವತಾಧಮ ಸಾತ್ಯಕಿಯು ನಿಂತಿದ್ದಾನೆ. ಇವನು ನಮ್ಮ ಲಕ್ಷ್ಯಕ್ಕೆ ಸಿಗುತ್ತಾನಾದರೆ ಶತ್ರುಗಳೆಲ್ಲರನ್ನೂ ನಾವು ಜಯಿಸಬಲ್ಲೆವು. ಈ ಪಾಂಚಾಲರಾಜನ ಪುತ್ರನು ಸುತ್ತಲೂ ಪುರುಷಸತ್ತಮ ಯೋಧರಿಂದ ಸುತ್ತುವರೆಯಲ್ಪಟ್ಟ ದ್ರೋಣನೊಂದಿಗೆ ಯುದ್ಧಮಾಡುತ್ತಿದ್ದಾನೆ. ಒಂದುವೇಳೆ ಸಾತ್ಯಕಿಯನ್ನು ಮತ್ತು ಧೃಷ್ಟದ್ಯುಮ್ನನನ್ನು ನಾವು ಸಂಹರಿಸಿದರೆ ನಮ್ಮ ವಿಜಯವು ನಿಶ್ಚಯ. ಅದರಲ್ಲಿ ಸಂಶಯವೇ ಇಲ್ಲ. ಸೌಭದ್ರನನ್ನು ಹೇಗೋ ಹಾಗೆ ಈ ಇಬ್ಬರು ವೃಷ್ಣಿ-ಪಾರ್ಷತ ಮಹಾರಥರನ್ನೂ ಸುತ್ತುವರೆದು ಕೊಲ್ಲಲು

ಪ್ರಯತ್ನಿಸೋಣ. ಸಾತ್ಯಕಿಯು ಅನೇಕ ಕುರುಪುಂಗವರಿಂದ ಸುತ್ತುವರೆಯಲ್ಪಟ್ಟಿದ್ದಾನೆ ಎಂದು ತಿಳಿದ ಕೂಡಲೇ ಸವ್ಯಸಾಚಿಯು ದ್ರೋಣನ ಸೇನೆಯ ಬಳಿ ಮುಂದುವರೆದು ಬರುತ್ತಾನೆ. ಸಾತ್ಯಕಿಯು ಅನೇಕರಿಂದ ಸುತ್ತುವರೆಯಲ್ಪಟ್ಟಿದ್ದಾನೆ ಎಂದು ಪಾರ್ಥನಿಗೆ ತಿಳಿಯದಂತೆ ಅನೇಕ ರಥಸತ್ತಮ ಪ್ರವರರು ಅಲ್ಲಿಗೆ ಹೋಗಲಿ. ಶೂರರು ಬಹಳ ತ್ವರೆಮಾಡಿ ಶರಗಳನ್ನು ಪ್ರಯೋಗಿಸುವಂತೆ ಬೇಗನೆ ಈ ಮಾಧವನನ್ನು ಪರಲೋಕಕ್ಕೆ ಕಳುಹಿಸಿ ಬಿಡೋಣ!"

ಕರ್ಣನ ಅಭಿಪ್ರಾಯವನ್ನು ತಿಳಿದು ದುರ್ಯೋಧನನು ಇಂದ್ರನು ಯಶಸ್ವಿ ವಿಷ್ಣುವಿಗೆ ಹೇಗೋ ಹಾಗೆ ಸೌಬಲನಿಗೆ ಹೇಳಿದನು:

"ಹತ್ತು ಸಾವಿರ ಆನೆಗಳಿಂದಲೂ, ಹಿಂದಿರುಗದೇ ಇದ್ದ ಹತ್ತು ಸಾವಿರ ರಥಗಳಿಂದಲೂ ಆವೃತನಾಗಿ ಧನಂಜಯನಿದ್ದಲ್ಲಿಗೆ ಹೋಗು. ಅನೇಕ ಪದಾತಿಗಳನ್ನು ಕರೆದುಕೊಂಡು ದುಃಶಾಸನ, ದುರ್ವಿಷಹ, ಸುಬಾಹು ಮತ್ತು ದುಷ್ಪ್ರಧರ್ಷಣರು ನಿನ್ನನ್ನು ಹಿಂಬಾಲಿಸಿ ಬರುತ್ತಾರೆ. ಮಾವ! ಇಬ್ಬರು ಕೃಷ್ಣರನ್ನೂ, ಧರ್ಮರಾಜ, ನಕುಲ, ಸಹದೇವ ಮತ್ತು ಭೀಮಸೇನರನ್ನೂ ಸಂಹರಿಸು! ದೇವತೆಗಳೆಲ್ಲರೂ ದೇವೇಂದ್ರನ ಮೇಲೆ ಜಯದ

ಭರವಸೆಯನ್ನಿಡುವಂತೆ ನಾನು ನಿನ್ನಮೇಲೆ ಭರವಸೆಯನ್ನಿಟ್ಟಿದ್ದೇನೆ. ಪಾವಕಿಯು ಅಸುರರನ್ನು ಹೇಗೋ ಹಾಗೆ ಕೌಂತೇಯರನ್ನು ಸಂಹರಿಸು!”

ದುರ್ಯೋಧನನು ಹೀಗೆ ಹೇಳಲು ಸೌಬಲನು ಮಹಾ ಸೇನೆಯೊಡನೆ ಪಾರ್ಥರಿದ್ದಲ್ಲಿಗೆ ತೆರಳಿದನು. ಆಗ ಕೌರವರ ಮತ್ತು ಶತ್ರುಗಳ ನಡುವೆ ಯುದ್ಧವು ನಡೆಯಿತು.

ಸೌಬಲನು ಪಾಂಡವರ ಸೇನೆಯ ಕಡೆ ಹೊರಟುಹೋಗಲು ಯುದ್ಧದಲ್ಲಿ ಸೂತಪುತ್ರನು ತ್ವರೆಮಾಡಿ ಮಹಾ ಬಲದೊಂದಿಗೆ ಸಾತ್ವತನನ್ನು ಆಕ್ರಮಣಿಸಿ ಅನೇಕ ನೂರು ಬಾಣಗಳನ್ನು ಎರಚಿದನು. ಹಾಗೆಯೇ ಪಾಂಡವರೆಲ್ಲರೂ ಸಾತ್ಯಕಿಯನ್ನು ಸುತ್ತುವರೆದರು. ದ್ರೋಣನಿಗಾಗಿ ಆ ರಾತ್ರಿ ಮಹಾತ್ಮ ಶೂರ ಪಾಂಚಾಲ ಧೃಷ್ಟದ್ಯುಮ್ನನ ಮಹಾಯುದ್ಧವು ನಡೆಯಿತು. ಆಗ ಕೌರವ ಯುದ್ಧದುರ್ಮದರೆಲ್ಲರೂ ರೋಷಗೊಂಡು ಸಂರಬ್ಧರಾಗಿ ಯುಯುಧಾನನ ರಥದ ಬಳಿಗೆ ಧಾವಿಸಿದರು. ಚಿನ್ನ-ಬೆಳ್ಳಿಗಳಿಂದ ಅಲಂಕರಿಸಲ್ಪಟ್ಟ ರಥಗಳ ಮೇಲೆ, ಕುದುರೆ-ಆನೆಗಳ ಮೇಲೆ ಕುಳಿತು ಅವರು ಸಾತ್ವತನನ್ನು ಸುತ್ತುವರೆದರು. ಆ ಮಹಾರಥರೆಲ್ಲರೂ ಕೋಟೆಯಾಕಾರವನ್ನು ಮಾಡಿಕೊಂಡು ಸಿಂಹನಾದಗೈಯುತ್ತಾ ಸಾತ್ಯಕಿಯನ್ನು ಹೆದರಿಸುತ್ತಿದ್ದರು. ಮಾಧವನ

ವಧೆಯನ್ನು ಬಯಸಿದ ಅವರು ಮಹಾವೀರ್ಯದಿಂದ ತೀಕ್ಷ್ಣ ಶರಗಳನ್ನು ಸಾತ್ಯಕಿಯ ಮೇಲೆ ಸುರಿಸಿದರು. ಅವರು ಮೇಲೆ ಬೀಳುತ್ತಿದ್ದನ್ನು ನೋಡಿ ತಕ್ಷಣವೇ ಶೈನೇಯನು ಅನೇಕ ವಿಶಿಖಗಳನ್ನು ತೆಗೆದುಕೊಂಡು ಅವರಮೇಲೆ ಪ್ರಯೋಗಿಸಿದನು. ಅಲ್ಲಿ ವೀರ ಸಾತ್ಯಕಿಯು ಉಗ್ರ ಸನ್ನತಪರ್ವ ಶರಗಳಿಂದ ಅವರ ಶಿರಗಳನ್ನು ತುಂಡರಿಸಿದನು. ಆ ಮಾಧವನು ಕೌರವರ ಆನೆಗಳ ಸೊಂಡಿಲುಗಳನ್ನೂ, ಕುದುರೆಗಳ ಕುತ್ತಿಗೆಗಳನ್ನೂ, ಆಯುಧಧಾರಿಗಳ ಬಾಹುಗಳನ್ನೂ ಕ್ಷುರಪ್ರಗಳಿಂದ ಬೀಳಿಸಿದನು. ಬೀಳುತ್ತಿರುವ ಚಾಮರಗಳಿಂದ, ಶ್ವೇತಚತ್ರಗಳಿಂದ ಧರಣಿಯು ನಕ್ಷತ್ರಗಳಿಂದ ತುಂಬಿದ ಆಕಾಶದಂತಾಯಿತು. ಯುಯುಧಾನನೊಂದಿಗೆ ಯುದ್ಧಮಾಡುತ್ತಿರುವಾಗ ನಡೆದ ತುಮುಲ ಶಬ್ಧವು ಪ್ರೇತಗಳ ಆಕ್ರಂದನದಂತೆ ಕೇಳಿಬರುತ್ತಿತ್ತು. ಆ ಮಹಾಶಬ್ಧದಿಂದ ವಸುಂಧರೆಯು ತುಂಬಿಹೋಯಿತು. ರಾತ್ರಿಯೂ ಕೂಡ ಭಯವನ್ನುಂಟುಮಾಡುವ ತೀವ್ರರೂಪವನ್ನು ತಾಳಿತು.

## ಸಾತ್ಯಕಿ-ದುರ್ಯೋಧನರ ಯುದ್ಧ

ಯುಯುಧಾನನ ಶರಗಳ ಹೊಡೆತಕ್ಕೆ ಸಿಲುಕಿ ತನ್ನ ಬಲವು ಧ್ವಂಸವಾಗುತ್ತಿರುವುದನ್ನು ನೋಡಿ ಮತ್ತು ನಿಶಿಯಲ್ಲಿ ಕೇಳಿಬರುತ್ತಿದ್ದ ರೋಮಹರ್ಷಣ ವಿಪುಲ ನಾದವನ್ನು ಕೇಳಿ ದುರ್ಯೋಧನನು

ಸಾರಥಿಗೆ

> “ಎಲ್ಲಿಂದ ಈ ಶಬ್ಧವು ಕೇಳಿಬರುತ್ತಿದೆಯೋ ಅಲ್ಲಿಗೆ
> ಕುದುರೆಗಳನ್ನು ಪ್ರಚೋದಿಸು !”

ಎಂದು ಪುನಃ ಪುನಃ ಹೇಳಿದನು. ಅವನಿಂದ ಪ್ರಚೋದನೆಗೊಂಡು ಸೂತನು ಆ ಉತ್ತಮ ತುರುಗಗಳನ್ನು ಯುಯುಧಾನನ ರಥದ ಕಡೆ ಪ್ರಚೋದಿಸಿದನು. ಆಗ ದುರ್ಯೋಧನನು ಯುಯುಧಾನನ ಮೇಲೆ ಧಾಳಿಮಾಡಿದನು. ಆಗ ಪೂರ್ಣವಾಗಿ ಸೆಳೆದು ಬಿಟ್ಟ ಮಾಂಸ-ರಕ್ತಗಳೇ ಭೋಜನವಾಗಿರುವ ಹನ್ನೆರಡು ಬಾಣಗಳಿಂದ ಮಾಧವನು ದುರ್ಯೋಧನನನ್ನು ಗಾಯಗೊಳಿಸಿದನು. ತಾನು ಬಾಣಗಳನ್ನು ಬಿಡುವ ಮೊದಲೇ ಗಾಯಗೊಳಿಸಿದ ಶೈನೇಯನನ್ನು ಕೋಪಗೊಂಡ ದುರ್ಯೋಧನನು ಹತ್ತು ಬಾಣಗಳಿಂದ ಪ್ರತಿಯಾಗಿ ಗಾಯಗೊಳಿಸಿದನು. ಆಗ ಪಾಂಚಾಲರೆಲ್ಲರ ಮತ್ತು ಭಾರತರ ದಾರುಣ ಸಂಕುಲ ಯುದ್ಧವು ಪ್ರಾರಂಭವಾಯಿತು. ರಣದಲ್ಲಿ ಕ್ರುದ್ಧ ಶೈನೇಯನಾದರೋ ದುರ್ಯೋಧನನ ಎದೆಗೆ ಹರಿತ ಸಾಯಕಗಳಿಂದ ಹೊಡೆದು ಗಾಯಗೊಳಿಸಿದನು. ಅಗ ಅವನು ಸಮರದಲ್ಲಿ ಕುದುರೆಗಳನ್ನು ಶರಗಳಿಂದ ಯಮಕ್ಷಯಕ್ಕೆ ಕಳುಹಿಸಿದನು. ಮತ್ತು ತಕ್ಷಣವೇ ಪತ್ರಿಗಳಿಂದ ಸಾರಥಿಯನ್ನು ರಥದಿಂದ ಕೆಡವಿದನು.

ಕುದುರೆಗಳು ಹತರಾದ ರಥದ ಮೇಲೆಯೇ ನಿಂತುಕೊಂಡು ದುರ್ಯೋಧನನು ಶೈನೇಯನ ರಥದ ಕಡೆ ನಿಶಿತ ಬಾಣಗಳನ್ನು ಪ್ರಯೋಗಿಸಿದನು. ಅವನು ಕಳುಹಿಸಿದ ಆ ಐವತ್ತು ಶರಗಳನ್ನು ಕೃತಹಸ್ತ ಶೈನೇಯನು ಸಮರದಲ್ಲಿ ಕತ್ತರಿಸಿದನು.

ಅಷ್ಟರಲ್ಲಿಯೇ ಇನ್ನೊಂದು ಭಲ್ಲದಿಂದ ರಭಸವಾಗಿ ದುರ್ಯೋಧನನ ಮಹಾಧನುಸ್ಸನ್ನು ಮುಷ್ಟಿದೇಶದಲ್ಲಿ ತುಂಡರಿಸಿದನು. ವಿರಥನಾದ, ಧನುಸ್ಸನ್ನೂ ಕಳೆದುಕೊಂಡ ದುರ್ಯೋಧನನು ತಕ್ಷಣವೇ ಕೃತವರ್ಮನ ರಥವನ್ನು ಏರಿಕೊಂಡನು. ದುರ್ಯೋಧನನು ಪರಾಜಿತನಾಗಲು ಶೈನೇಯನು ಕೌರವ ಸೇನೆಯನ್ನು ಆ ರಾತ್ರಿಮಧ್ಯದಲ್ಲಿ ವಿಶಿಖಗಳಿಂದ ಪಲಾಯನಗೊಳಿಸಿದನು.

## ಶಕುನಿ-ಅರ್ಜುನರ ಯುದ್ಧ

ಶಕುನಿಯು ಅರ್ಜುನನನ್ನು ಎಲ್ಲಕಡೆಗಳಿಂದ ಸುತ್ತುವರೆದನು. ಅನೇಕ ಸಹಸ್ರ ರಥಗಳಿಂದ, ಸಹಸ್ರಾರು ಆನೆಗಳಿಂದ ಮತ್ತು ಹಾಗೆಯೇ ಸಹಸ್ರಾರು ಕುದುರೆಗಳಿಂದ ಕೂಡಿದವನಾಗಿ ಎಲ್ಲಕಡೆಗಳಿಂದ ತುಮುಲ ಯುದ್ಧವನ್ನು ನಡೆಸಿದನು. ಕಾಲಚೋದಿತ ಆ ಕ್ಷತ್ರಿಯರು ಅರ್ಜುನನ ಮೇಲೆ ದಿವ್ಯ ಮಹಾಸ್ತ್ರಗಳನ್ನು ಎರಚುತ್ತಾ ಅರ್ಜುನನೊಂದಿಗೆ ಯುದ್ಧಮಾಡುತ್ತಿದ್ದರು. ಬಳಲಿದ್ದರೂ ಅರ್ಜುನನು ವಿಪುಲ

ಕ್ಷಯವನ್ನುಂಟುಮಾಡುತ್ತಾ ಆ ಸಹಸ್ರಾರು ರಥ-ಆನೆ-ಕುದುರೆಗಳನ್ನು ತಡೆದು ನಿಲ್ಲಿಸಿದನು. ಆಗ ಶೂರ ಶಕುನಿ ಸೌಬಲನು ನಸುನಗುತ್ತಾ ಅರ್ಜುನನನ್ನು ನಿಶಿತ ಬಾಣಗಳಿಂದ ಗಾಯಗೊಳಿಸಿದನು. ಪುನಃ ನೂರು ಬಾಣಗಳಿಂದ ಆ ಮಹಾರಥನನ್ನು ಮುಂದೆಹೋಗದಂತೆ ತಡೆದನು. ಅರ್ಜುನನಾದರೋ ಅವನನ್ನು ಇಪ್ಪತ್ತು ಬಾಣಗಳಿಂದ ಹೊಡೆದನು. ಇತರ ಮಹೇಷ್ವಾಸರನ್ನೂ ಅವನು ಮೂರು ಮೂರು ಬಾಣಗಳಿಂದ ಹೊಡೆದನು. ಅವರನ್ನು ಬಾಣಗಣಗಳಿಂದ ತಡೆಯುತ್ತಾ ಧನಂಜಯನು ವಜ್ರಪಾಣಿಯು ಅಸುರರನ್ನು ಹೇಗೋ ಹಾಗೆ ಕೌರವ ಯೋಧರನ್ನು ಗಾಯಗೊಳಿಸಿದನು. ಕತ್ತರಿಸಲ್ಪಟ್ಟು ಹರಡಿಹೋಗಿದ್ದ ಸಹಸ್ರಾರು ಭುಜಗಳಿಂದ ಮತ್ತು ಶರೀರಗಳಿಂದ ರಣಭೂಮಿಯು ಪುಷ್ಪಗಳಿಂದ ವ್ಯಾಪ್ತವಾಗಿರುವಂತೆ ತೋರುತ್ತಿತ್ತು. ಶಕುನಿಯನ್ನು ಪುನಃ ಐದು ನತಪರ್ವಗಳಿಂದ ಹೊಡೆದು ಅವನು ಉಲೂಕನನ್ನು ಮೂರು ಮೂರು ಮಹಾಯಸಗಳಿಂದ ಹೊಡೆದನು. ಆಗ ಉಲೂಕನು ವಾಸುದೇವನನನ್ನು ಹೊಡೆದನು ಮತ್ತು ವಸುಧಾತಲವನ್ನು ತುಂಬಿಬಿಡುವಂತೆ ಮಹಾನಾದಗೈದನು. ಅರ್ಜುನನಾದರೋ ಮುಂದುವರೆದು ಶಕುನಿಯ ಧನುಸ್ಸನ್ನು ಕತ್ತರಿಸಿದನು ಮತ್ತು ಅವನ ನಾಲ್ಕು ಕುದುರೆಗಳನ್ನು ಯಮಸದನದ ಕಡೆ ಕಳುಹಿಸಿದನು. ಆಗ ರಥದಿಂದ ಹಾರಿ ಸೌಬಲನು ಬೇಗನೇ ಉಲೂಕನ ರಥವನ್ನೇರಿದನು.

ಅವರಿಬ್ಬರು ಪಿತಾ-ಪುತ್ರ ಮಹಾರಥರೂ ಒಂದೇ ರಥವನ್ನೇರಿ ಮೇಲೆದ್ದ ಮೋಡಗಳು ಗಿರಿಯಮೇಲೆ ಹೇಗೋ ಹಾಗೆ ಪಾರ್ಥನ ಮೇಲೆ ಬಾಣಗಳ ಮಳೆಗರೆದರು. ಪಾಂಡವನು ಅವರಿಬ್ಬರನ್ನೂ ನಿಶಿತ ಶರಗಳಿಂದ ಹೊಡೆದು ಕೌರವ ಸೇನೆಯನ್ನು ನೂರಾರು ಶರಗಳಿಂದ ಹೊಡೆದು ಓಡಿಸಿದನು. ಗಾಳಿಯಿಂದ ಮೋಡಗಳು ಹೇಗೆ ಎಲ್ಲ ಕಡೆ ಚದುರಿ ಹೋಗುವವೋ ಹಾಗೆ ಕೌರವ ಸೇನೆಯು ಛಿದ್ರಛಿದ್ರವಾಗಿ ಒಡೆದುಹೋಯಿತು.

ರಾತ್ರಿಯಲ್ಲಿ ಹಾಗೆ ವಧಿಸಲ್ಪಡುತ್ತಿದ್ದ ಆ ಸೇನೆಯು ಭಯಾರ್ದಿತಗೊಂಡು ದಿಕ್ಕುಗಳನ್ನು ನೋಡುತ್ತಾ ಓಡಿಹೋಯಿತು. ಆ ದಾರುಣ ಕತ್ತಲೆಯ ಸಮರದಲ್ಲಿ ಕೆಲವರು ಸಂಭ್ರಾಂತರಾಗಿ ವಾಹನಗಳನ್ನೇ ಬಿಟ್ಟು ಓಡಿಹೋಗುತ್ತಿದ್ದರು. ಸಮರದಲ್ಲಿ ನಿನ್ನಕಡೆಯ ಯೋಧರನ್ನು ಸೋಲಿಸಿ ಮುದಿತರಾದ ವಾಸುದೇವ-ಧನಂಜಯರು ಶಂಖಗಳನ್ನು ಮೊಳಗಿಸಿದರು.

## ದ್ರೋಣ-ಧೃಷ್ಟದ್ಯುಮ್ನರ ಯುದ್ಧ; ಪಾಂಡವ ಸೇನೆಯ ಪಲಾಯನ

ಧೃಷ್ಟದ್ಯುಮ್ನನು ದ್ರೋಣನನ್ನು ಮೂರು ಶರಗಳಿಂದ ಹೊಡೆದು ತಕ್ಷಣವೇ ನಿಶಿತ ಶರದಿಂದ ಅವನ ಧನುಸ್ಸಿನ ಮೌರ್ವಿಯನ್ನು

ಕತ್ತರಿಸಿದನು. ದ್ರೋಣನು ಆ ಧನುಸ್ಸನ್ನು ಕೆಳಗಿಟ್ಟು ಇನ್ನೊಂದು ವೇಗಶಾಲಿ ಭಾರ ಧನುಸ್ಸನ್ನು ಎತ್ತಿಕೊಂಡನು. ಆಗ ದ್ರೋಣನು ಧೃಷ್ಟದ್ಯುಮ್ನನನ್ನು ಏಳು ಆಶುಗಗಳಿಂದ ಹೊಡೆದು ಸಂಯುಗದಲ್ಲಿ ಐದು ಬಾಣಗಳಿಂದ ಅವನ ಸಾರಥಿಯನ್ನೂ ಹೊಡೆದನು. ಅವನನ್ನು ತಡೆಹಿಡಿದು ಧೃಷ್ಟದ್ಯುಮ್ನನು ತಕ್ಷಣವೇ ನೂರಾರು ಸಾವಿರಾರು ಕೌರವೀ ಸೇನೆಯನ್ನು ವಧಿಸಿದನು. ಕೌರವ ಸೇನೆಯು ಹಾಗೆ ವಧಿಸಲ್ಪಡುತ್ತಿರುವಾಗ ಘೋರ ರಕ್ತದ ಅಲೆಗಳುಳ್ಳ ನದಿಯೇ ಹರಿಯತೊಡಗಿತು. ಯಮರಾಷ್ಟ್ರಪುರದ ಬಳಿ ವೈತರಣಿಯು ಹೇಗೋ ಹಾಗೆ ಎರಡೂ ಸೇನೆಗಳ ಮಧ್ಯೆ ನರ-ಅಶ್ವ-ಗಜಗಳನ್ನು ಹೊತ್ತುಕೊಂಡು ಹೋಗುತ್ತಿದ್ದ ಆ ನದಿಯು ಹರಿಯುತ್ತಿತ್ತು. ಆ ಸೇನೆಯನ್ನು ಓಡಿಸಿದ ಧೃಷ್ಟದ್ಯುಮ್ನನು ದೇವಗಣಗಳ ಮಧ್ಯೆ ಶಕ್ರನಂತೆ ಅತಿಯಾಗಿ ರಾರಾಜಿಸಿದನು. ಆಗ ಧೃಷ್ಟದ್ಯುಮ್ನ-ಶಿಖಂಡಿಯರು, ಯಮಳರಿಬ್ಬರು, ಯುಯುಧಾನ ಮತ್ತು ವೃಕೋದರರು ಮಹಾಶಂಖಗಳನ್ನೂದಿದರು. ಕೌರವರ ಸಹಸ್ರಾರು ರಥಗಳನ್ನು ಗೆದ್ದು ವಿಜಯೋತ್ಸಾಹದಿಂದ ಮಹಾರಥ ಪಾಂಡವರು ಮಹಾಧ್ವನಿಯ ಸಿಂಹನಾದಗೈದರು. ದುರ್ಯೋಧನ, ಕರ್ಣ, ಹಾಗೆಯೇ ದ್ರೋಣ ಮತ್ತು ಶೂರ ದ್ರೌಣಿಯರು ಆ ಮದೋತ್ಕಟರನ್ನು ನೋಡುತ್ತಲೇ ಇದ್ದರು.ಮಹಾತ್ಮರಿಂದ ವಧಿಸಲ್ಪಡುತ್ತಾ ಓಡಿಹೋಗುತ್ತಿರುವ ತನ್ನ ಸೇನೆಯನ್ನು ಕಂಡು

ದುರ್ಯೋಧನನು ಮಹಾ ಕ್ರೋಧದಿಂದ ಆವಿಷ್ಟನಾದನು. ವಾಕ್ಯಜ್ಞನಾದ ಅವನು ಕ್ರೋಧದ ವಶಕ್ಕೆ ಸಿಲುಕಿ ತ್ವರೆಮಾಡಿ ಕರ್ಣ ಮತ್ತು ಜಯಿಗಳಲ್ಲಿ ಶ್ರೇಷ್ಠ ದ್ರೋಣರ ಬಳಿಸಾರಿ ಈ ಮಾತುಗಳನ್ನಾಡಿದನು:

> "ಸವ್ಯಸಾಚಿಯಿಂದ ಸೈಂಧವನು ಹತನಾದುದನ್ನು ಕಂಡು ಕ್ರೋಧಿತರಾಗಿ ನೀವು ಈ ಯುದ್ಧವನ್ನು ರಾತ್ರಿಯಲ್ಲಿಯೂ ಮುಂದುವರೆಸಿದಿರಿ. ಆದರೆ ಪಾಂಡವರ ಸೇನೆಯು ನನ್ನ ಸೇನೆಯನ್ನು ಸಂಹರಿಸುತ್ತಲೇ ಇದೆ. ಇದರಲ್ಲಿ ವಿಜಯವನ್ನು ಹೊಂದಲು ಶಕ್ತರಾಗಿದ್ದರೂ ನೀವು ಅಶಕ್ತರೆಂದು ತೋರ್ಪಡಿಸಿಕೊಳ್ಳುತ್ತಿದ್ದೀರಿ. ಒಂದುವೇಳೆ ನಿಮ್ಮಿಬ್ಬರಿಗೂ ನಾನು ಬೇಡವೆಂದಾದರೆ ಮಾನದರಾದ ನೀವು ಆಗ "ನಾವು ಪಾಂಡುಸುತರನ್ನು ಯುದ್ಧದಲ್ಲಿ ಜಯಿಸುತ್ತೇವೆ" ಎಂದು ನನಗೆ ಹೇಳಬಾರದಿತ್ತು! ನಿಮಗೆ ಸಮ್ಮತಿಯಿರದಿದ್ದರೆ ನಿಮ್ಮ ಆ ಮಾತನ್ನು ಕೇಳಿ ಈ ಯೋಧರ ವಿನಾಶಕಾರಕ ವೈರವನ್ನು ನಾನು ಪಾಂಡವರೊಡನೆ ಕಟ್ಟಿಕೊಳ್ಳುತ್ತಿರಲಿಲ್ಲ. ಒಂದುವೇಳೆ ನಿಮಗೆ ನಾನು ಪರಿತ್ಯಾಜ್ಯನೆನಿಸದಿದ್ದರೆ ವಿಕ್ರಮದಿಂದ ನಿಮಗೆ ಅನುರೂಪ ಯುದ್ಧವನ್ನು ಮಾಡಿ!"

ತುಳಿಯಲ್ಪಟ್ಟ ಸರ್ಪಗಳಂತೆ ಮತ್ತು ಮಾತಿನ ಚಾವಟಿಯಿಂದ ಹೊಡೆಯಲ್ಪಟ್ಟವರಂತೆ ಆ ವೀರರಿಬ್ಬರೂ ಪುನಃ ಯುದ್ಧವನ್ನು ಪ್ರಾರಂಭಿಸಿದರು. ಆಗ ಅವರಿಬ್ಬರು ರಥಶ್ರೇಷ್ಠರೂ ಸರ್ವಲೋಕಧನುರ್ಧರರೂ ರಣದಲ್ಲಿ ಶೈನೇಯಪ್ರಮುಖ ಪಾರ್ಥರನ್ನು ಆಕ್ರಮಣಿಸಿದರು. ಹಾಗೆಯೇ ಪಾರ್ಥರೂ ಕೂಡ ತಮ್ಮ ತಮ್ಮ ಸೇನೆಗಳಿಂದ ಸುತ್ತುವರೆಯಲ್ಪಟ್ಟು ಪುನಃ ಪುನಃ ಸಿಂಹನಾದಗೈಯುತ್ತಾ ಆ ವೀರರಿಬ್ಬರನ್ನೂ ಎದುರಿಸಿದರು. ಆಗ ದ್ರೋಣನು ಕ್ರುದ್ಧನಾಗಿ ತ್ವರೆಯಿಂದ ಹತ್ತು ಬಾಣಗಳಿಂದ ಶಿನಿಪುಂಗವನನ್ನು ಹೊಡೆದನು. ಹಾಗೆಯೇ ಕರ್ಣನು ಹತ್ತು ಬಾಣಗಳಿಂದ, ದುರ್ಯೋಧನನು ಏಳರಿಂದ, ವೃಷಸೇನನು ಹತ್ತರಿಂದ, ಸೌಬಲನು ಏಳರಿಂದ ಹೊಡೆದು ಹೀಗೆ ಕೌರವರು ಶೈನೇಯನನ್ನು ಸುತ್ತುವರೆದರು.

ಸಮರದಲ್ಲಿ ದ್ರೋಣನು ಪಾಂಡವೀ ಸೇನೆಯನ್ನು ಧ್ವಂಸಗೊಳಿಸುತ್ತಿರುವುದನ್ನು ನೋಡಿ ತಕ್ಷಣವೇ ಸೋಮಕರು ಎಲ್ಲಕಡೆಗಳಿಂದ ಶರವರ್ಷವನ್ನು ಸುರಿಸಿ ಅವನನ್ನು ಗಾಯಗೊಳಿಸಿದರು. ಆಗ ದ್ರೋಣನು ಭಾಸ್ಕರನು ಕತ್ತಲೆಯನ್ನು ತನ್ನ ಕಿರಣಗಳಿಂದ ಹೇಗೋ ಹಾಗೆ ಕ್ಷತ್ರಿಯರ ಪ್ರಾಣಗಳನ್ನು

ಅಪಹರಿಸಿದನು. ದ್ರೋಣನಿಂದ ವಧಿಸಲ್ಪಡುತ್ತಿರುವ ಪಾಂಚಾಲರ ಪರಸ್ಪರರ ತುಮುಲ ಶಬ್ಧವು ಒಂದು ಕ್ರೋಶ ದೂರದವರೆಗೂ ಕೇಳಿಬರುತ್ತಿತ್ತು. ಜೀವವನ್ನು ಉಳಿಸಿಕೊಳ್ಳುವ ಸಲುವಾಗಿ ತ್ವರೆಮಾಡಿ ಪುತ್ರರು ಪಿತೃಗಳನ್ನೂ, ಸಹೋದರರು ಸಹೋದರರನ್ನೂ, ಅಳಿಯಂದಿರು ಮಾವಂದಿರನ್ನೂ, ಸ್ನೇಹಿತರನ್ನೂ, ಸಂಬಂಧಿ-ಬಾಂಧವರನ್ನೂ ಅಲ್ಲಲ್ಲಿಯೇ ಬಿಟ್ಟು ಓಡಿಹೋಗುತ್ತಿದ್ದರು. ಕೆಲವರು ಮೋಹಿತರಾಗಿ ಮೋಹದಿಂದ ದ್ರೋಣನ ಎದುರಾಗಿಯೇ ಹೋಗುತ್ತಿದ್ದರು. ಇನ್ನು ಇತರ ಪಾಂಡವ ಯೋಧರು ರಣದಲ್ಲಿ ಪರಲೋಕವನ್ನು ಸೇರಿದರು.

ಆ ಮಹಾತ್ಮನಿಂದ ಹಾಗೆ ವಧಿಸಲ್ಪಡುತ್ತಿದ್ದ ಪಾಂಡವೀ ಸೇನೆಯು ಸಹಸ್ರಾರು ಸಂಖ್ಯೆಗಳಲ್ಲಿ ದೀವಟಿಗೆಗಳನ್ನು ಬಿಸುಟು ರಾತ್ರಿಯಲ್ಲಿ ಭೀಮಸೇನ, ವಿಜಯ, ಅಚ್ಯುತ, ನಕುಲ-ಸಹದೇವರು, ಧರ್ಮಪುತ್ರ ಮತ್ತು ಪಾರ್ಷತರು ನೋಡುತ್ತಿದ್ದಂತೆಯೇ ಓಡಿಹೋಗುತ್ತಿದ್ದರು. ಕತ್ತಲೆಯಿಂದ ಲೋಕವೇ ತುಂಬಿಹೋಗಿರಲು ಅಲ್ಲಿ ಏನೊಂದೂ ತಿಳಿಯುತ್ತಿರಲಿಲ್ಲ. ಆದರೆ ಕೌರವರ ದೀವಟಿಗೆಗಳ ಪ್ರಕಾಶದಿಂದ ಶತ್ರುಗಳು ಓಡಿಹೋಗುತ್ತಿರುವುದು ಕಾಣುತ್ತಿತ್ತು. ಓಡಿಹೋಗುತ್ತಿರುವ ಆ ಸೈನ್ಯವನ್ನು ಮಹಾರಥ ದ್ರೋಣ-ಕರ್ಣರು ಹಿಂದಿನಿಂದ ಅನೇಕ

ಸಾಯಕಗಳನ್ನು ಎರಚುತ್ತಾ ಸಂಹರಿಸಿದರು. ಪಾಂಚಾಲರು ಎಲ್ಲಕಡೆಗಳಿಂದ ಸೀಳಿಕೊಂಡು ಭಗ್ನರಾಗುತ್ತಿರಲು ದೀನಮನಸ್ಕ ಜನಾರ್ದನನು ಫಲ್ಗುನನಿಗೆ ಹೇಳಿದನು:

> “ಮಹೇಷ್ವಾಸ ದ್ರೋಣ-ಕರ್ಣರು ಪಾರ್ಷತ-ಸಾತ್ಯಕಿಯರನ್ನೂ ಪಾಂಚಾಲ ಸೇನೆಯೊಡನೆ ಅನೇಕ ಸಾಯಕಗಳಿಂದ ಸಂಹರಿಸುತ್ತಿದ್ದಾರೆ. ಕೌಂತೇಯ! ಇವರ ಈ ಶರವರ್ಷಗಳಿಂದ ಪ್ರಭಗ್ನರಾದ ನಮ್ಮ ಮಹಾರಥರು ತಡೆದರೂ ರಣರಂಗದಲ್ಲಿ ನಿಲ್ಲುತ್ತಿಲ್ಲ. ನಾವಿಬ್ಬರೂ ಸರ್ವಸೇನೆಗಳ ವ್ಯೂಹವನ್ನು ರಚಿಸಿ ಎಲ್ಲ ಆಯುಧಗಳೊಂದಿಗೆ ದ್ರೋಣ ಮತ್ತು ಸೂತಪುತ್ರರನ್ನು ಬಾಧೆಪಡಿಸಲು ಸಂಪೂರ್ಣ ಪ್ರಯತ್ನಿಸಬೇಕು. ಇವರಿಬ್ಬರೂ ಬಲಶಾಲಿಗಳು, ಶೂರರು, ಕೃತಾಸ್ತ್ರರು ಮತ್ತು ವಿಜಯವನ್ನು ಬಯಸುವವರು. ಕ್ರುದ್ಧರಾದ ಇವರು ಬಯಸಿದರೆ ಈ ರಾತ್ರಿಯೇ ನಮ್ಮ ಸೇನೆಯನ್ನು ನಾಶಗೊಳಿಸಬಲ್ಲರು.”

ಹೀಗೆ ಮಾತನಾಡಿಕೊಳ್ಳುತ್ತಿದ್ದಾಗ ಅತಿ ಉಗ್ರ ಭೀಮನು ಸೇನೆಯನ್ನು ಪುನಃ ಕರೆದು ತಂದನು. ಹಾಗೆ ವೃಕೋದರನು ಅಲ್ಲಿಗೆ ಬರುತ್ತಿದ್ದುದನ್ನು ನೋಡಿದ ಜನಾರ್ದನನು ಹರ್ಷಗೊಂಡವನಾಗಿ ಪಾಂಡವನಿಗೆ ಪುನಃ ಹೇಳಿದನು:

> “ಇಗೋ! ರಣಶ್ಲಾಘೀ ಭೀಮನು ಸೋಮಕ-ಪಾಂಡವರಿಂದ ಸುತ್ತುವರೆಯಲ್ಪಟ್ಟು ರೋಷದಿಂದ ವೇಗವಾಗಿ ಮಹಾಬಲ ದ್ರೋಣ-ಕರ್ಣರು ಇರುವಲ್ಲಿಗೆ ಬರುತ್ತಿದ್ದಾನೆ. ಸೇನೆಗಳೆಲ್ಲವಕ್ಕೆ ಆಶ್ವಾಸನೆ ನೀಡುವ ಸಲುವಾಗಿ ನೀನು ಪಾಂಚಾಲ ಮಹಾರಥರೊಂದಿಗೆ ಸೇರಿಕೊಂಡು ದ್ರೋಣ-ಕರ್ಣರೊಡನೆ ಯುದ್ಧಮಾಡು!”

ಆಗ ಮಾಧವ-ಪಾಂಡವರು ರಣಮೂರ್ಧನಿಯಲ್ಲಿ ದ್ರೋಣ ಮತ್ತು ಕರ್ಣರ ಎದುರಾಗಿ ಯುದ್ಧಸನ್ನದ್ಧರಾಗಿ ನಿಂತರು. ಆಗ ಯುಧಿಷ್ಠಿರನ ಮಹಾಸೇನೆಯು ಹಿಂದಿರುಗಿತು. ಮತ್ತು ದ್ರೋಣ-ಕರ್ಣರು ಯುದ್ಧದಲ್ಲಿ ಆ ಶತ್ರುಬಲವನ್ನು ಧ್ವಂಸಗೊಳಿಸತೊಡಗಿದರು. ಚಂದ್ರೋದಯದಿಂದ ಉಕ್ಕಿಬರುವ ಎರಡು ಮಹಾಸಾಗರಗಳಂತಿದ್ದ ಆ ಎರಡು ಸೇನೆಗಳ ನಡುವೆ ಆ ರಾತ್ರಿ ಪುನಃ ಸಂಪ್ರಹಾರಗಳನ್ನೊಡಗೂಡಿದ ಮಹಾ ತುಮುಲ ಯುದ್ಧವು ಪ್ರಾರಂಭವಾಯಿತು. ಆಗ ಕೌರವ ಸೇನೆಯು ಕೈಗಳಲ್ಲಿದ್ದ ದೀವಟಿಗೆಗಳನ್ನು ಬಿಸುಟು ಪಾಂಡವರೊಡನೆ ಉನ್ಮತ್ತರಾದವರಂತೆ ಯುದ್ಧಮಾಡತೊಡಗಿದರು. ಧೂಳು ಮತ್ತು ಕತ್ತಲಿನಿಂದ ಆವೃತವಾದ ಆ ಅತ್ಯಂತ ದಾರುಣ ರಾತ್ರಿಯಲ್ಲಿ ಎರಡು ಕಡೆಯ ಜಯೈಷಿಗಳು ಕೇವಲ ನಾಮಗೋತ್ರಗಳನ್ನು ಹೇಳಿಕೊಂಡು

ಯುದ್ಧಮಾಡುತ್ತಿದ್ದರು. ಸ್ವಯಂವರದಲ್ಲಿ ರಾಜರು ತಮ್ಮ ತಮ್ಮ ಹೆಸರುಗಳನ್ನು ಹೇಳಿಕೊಳ್ಳುವಂತೆ ಯುದ್ಧದಲ್ಲಿ ತಮ್ಮ ತಮ್ಮ ಹೆಸರುಗಳನ್ನು ಕೇಳುವಂತೆ ಹೇಳಿಕೊಳ್ಳುತ್ತಾ ಯುದ್ಧಮಾಡುತ್ತಿದ್ದರು. ಯುದ್ಧಮಾಡಿ ವಿಜಯಿಗಳಾಗುತ್ತಿದ್ದವರ ಮತ್ತು ಪರಾಜಿತರಾಗುತ್ತಿದ್ದವರ ಧ್ವನಿಗಳು ಒಮ್ಮಿಂದೊಮ್ಮೆಲೇ ನಿಃಶಬ್ಧವಾಗುತ್ತಿದ್ದವು. ಪುನಃ ಮಹಾ ಶಬ್ಧವುಂಟಾಗುತ್ತಿತ್ತು. ಎಲ್ಲೆಲ್ಲಿ ದೀವಟಿಗೆಗಳ ಬೆಳಕು ಕಾಣುತ್ತಿತ್ತೋ ಅಲ್ಲಲ್ಲಿ ಪತಂಗದ ಹುಳುಗಳೋಪಾದಿಯಲ್ಲಿ ಶೂರರು ಕೆಳಗೆ ಬೀಳುತ್ತಿದ್ದರು. ಹಾಗೆ ಯುದ್ಧಮಾಡುತ್ತಿದ್ದ ಪಾಂಡವರ ಮತ್ತು ಕೌರವರ ಸುತ್ತಲೂ ದಟ್ಟವಾದ ಮಹಾ ಕತ್ತಲೆಯು ಆವರಿಸಿತು.

## ಕೃಷ್ಣನು ಘಟೋತ್ಕಚನನ್ನು ಯುದ್ಧಕ್ಕೆ ಪ್ರೋತ್ಸಾಹಿಸಿದುದು

ಆಗ ಪರವೀರಹ ಕರ್ಣನು ಪಾರ್ಷತನನ್ನು ನೋಡಿ ಅವನ ಎದೆಗೆ ಹತ್ತು ಮರ್ಮಭೇದಿಗಳಿಂದ ಹೊಡೆದನು. ಕೂಡಲೆ ಧೃಷ್ಟದ್ಯುಮ್ನನು ಕೂಡ ಅವನನ್ನು ಐದು ಸಾಯಕಗಳಿಂದ ಹೊಡೆದು “ನಿಲ್ಲು! ನಿಲ್ಲು!” ಎಂದು ಕೂಗಿದನು. ಅವರಿಬ್ಬರು ಮಹಾರಥರೂ ಅನ್ಯೋನ್ಯರನ್ನು ರಣದಲ್ಲಿ ಶರಗಳಿಂದ ಮುಚ್ಚಿ ಪೂರ್ಣವಾಗಿ ಸೆಳೆದು ಬಿಟ್ಟ ಬಾಣಗಳಿಂದ ಪುನಃ ಪರಸ್ಪರರನ್ನು ಗಾಯಗೊಳಿಸಿದರು. ಆಗ ಕರ್ಣನು

ಧೃಷ್ಟದ್ಯುಮ್ನನ ಸಾರಥಿಯನ್ನೂ ನಾಲ್ಕು ಕುದುರೆಗಳನ್ನೂ ಸಾಯಕಗಳಿಂದ ಹೊಡೆದನು. ಅವನ ಕಾರ್ಮುಕಪ್ರವರವನ್ನು ನಿಶಿತ ಶರಗಳಿಂದ ತುಂಡರಿಸಿದನು ಮತ್ತು ಭಲ್ಲದಿಂದ ಅವನ ಸಾರಥಿಯನ್ನು ಆಸನದಿಂದ ಬೀಳಿಸಿದನು. ಧೃಷ್ಟದ್ಯುಮ್ನನಾದರೋ ಕುದುರೆಗಳು ಹತವಾಗಿ ಸಾರಥಿಯು ಹತನಾಗಿ ವಿರಥನಾದನು ಮತ್ತು ಘೋರ ಪರಿಘವನ್ನು ಹಿಡಿದು ಕರ್ಣನ ಕುದುರೆಗಳನ್ನು ಅರೆದನು. ಕರ್ಣನ ಸರ್ಪಗಳ ವಿಷದಂತಿದ್ದ ಬಾಣಗಳಿಂದ ಬಹಳ ಪೀಡಿತನಾದ ಧೃಷ್ಟದ್ಯುಮ್ನನು ಕಾಲ್ನಡುಗೆಯಲ್ಲಿಯೇ ಯುಧಿಷ್ಠಿರನ ಸೇನೆಯನ್ನು ಸೇರಿಕೊಂಡನು. ಅಲ್ಲಿ ಅವನು ಸಹದೇವನ ರಥವನ್ನೇರಿದನು. ಕರ್ಣನ ರಥಕ್ಕೆ ಕೂಡ ಅವನ ಸೂತನು ಅನ್ಯ ಕುದುರೆಗಳನ್ನು – ಶಂಖವರ್ಣದ ಮಹಾವೇಗದ ಸುಶಿಕ್ಷಿತ ಸೈಂಧವ ಕುದುರೆಗಳನ್ನು ಕಟ್ಟಿದನು. ರಾಧೇಯನು ಮಹಾರಥ ಪಾಂಚಾಲರನ್ನು ಪಡೆದು ಅವರನ್ನು ಮೇಘಗಳು ಪರ್ವತವನ್ನು ಹೇಗೋ ಹಾಗೆ ಶರಗಳನ್ನು ಸುರಿದು ಪೀಡಿಸಿದನು. ಕರ್ಣನಿಂದ ಹಾಗಿ ಪೀಡಿಸಲ್ಪಟ್ಟ ಪಾಂಚಾಲರ ಆ ಮಹಾಸೇನೆಯು ಸಿಂಹದಿಂದ ಕಾಡಲ್ಪಟ್ಟ ಜಿಂಕೆಯಂತೆ ಭಯದಿಂದ ತತ್ತರಿಸಿ ಓಡತೊಡಗಿತು. ಕ್ಷಣದಲ್ಲಿಯೇ ರಣಭೂಮಿಯಲ್ಲಿ ಅಲ್ಲಲ್ಲಿ ಬಿದ್ದಿದ್ದ ಕುದುರೆಗಳೂ, ಆನೆಗಳೂ, ರಥಗಳೂ, ಮನುಷ್ಯರೂ ಕಂಡುಬಂದರು. ಆ ಮಹಾಯುದ್ಧದಲ್ಲಿ ಕರ್ಣನು ಓಡಿಹೋಗುತ್ತಿದ್ದ

ಯೋಧರ ಬಾಹುಗಳನ್ನೂ ಕುಂಡಲಗಳೊಂದಿಗಿನ ಶಿರಗಳನ್ನೂ ಕತ್ತರಿಸಿದನು. ಅನ್ಯ ಗಜಾರೂಢರ ಅಶ್ವಾರೂಢರ ಮತ್ತು ಪದಾತಿಗಳ ತೊಡೆಗಳನ್ನು ಕತ್ತರಿಸಿದನು. ಓಡಿಹೋಗುತ್ತಿರುವ ಬಹಳಷ್ಟು ಮಹಾರಾಥರಿಗೆ ತಮ್ಮ ಶರೀರದ ಅಂಗಾಂಗಗಳು ಕತ್ತರಿಸಿಹೋದದ್ದು ಅಥವಾ ಕುದುರೆಗಳು ನಾಶಹೊಂದಿದ್ದುದು ತಿಳಿಯುತ್ತಲೇ ಇರಲಿಲ್ಲ. ಆ ಸಮರದಲ್ಲಿ ವಧಿಸಲ್ಪಡುತ್ತಿದ್ದ ಸೃಂಜಯರೊಂದಿಗಿನ ಪಾಂಚಾಲರು ಹುಲ್ಲುಕಡ್ಡಿಯು ಹಂದಾಡಿದರೂ ಸೂತಪುತ್ರನೇ ಬಂದನೆಂದು ತಿಳಿದು ಭಯಪಡುತ್ತಿದ್ದರು. ಸಮರದಲ್ಲಿ ತಮ್ಮ ಕಡೆಯ ಯೋಧರು ಓಡಿಬಂದರೂ ಬುದ್ಧಿಗೆಟ್ಟು ಭೀತರಾಗಿ ಕರ್ಣನೇ ಓಡಿಬರುತ್ತಿದ್ದಾನೆಂದು ಭಾವಿಸಿ ಓಡಿಹೋಗುತ್ತಿದ್ದರು. ಆ ಸೇನೆಗಳು ಭಗ್ನವಾಗಿ ಓಡಿಹೋಗುತ್ತಿರಲು ಕರ್ಣನು ಅವರ ಹಿಂದೆಯೇ ಓಡಿ ಹೋಗಿ ಶರಗಳನ್ನು ಸುರಿಯುತ್ತಾ ಹೊಡೆಯುತ್ತಿದ್ದನು. ಆ ಮಹಾತ್ಮನಿಂದ ನಾಶಗೊಳ್ಳುತ್ತಿದ್ದ ಅವರು ಸಮ್ಮೂಢರಾಗಿ ಚೇತನವನ್ನೇ ಕಳೆದುಕೊಂಡು ಅನ್ಯೋನ್ಯರನ್ನು ನೋಡುತ್ತಿದ್ದರು. ಅವನ ಎದುರು ನಿಲ್ಲಲು ಅಶಕ್ಯರಾದರು. ಕರ್ಣನ ಮತ್ತು ದ್ರೋಣನ ಪರಮ ಬಾಣಗಳಿಂದ ಹತರಾಗುತ್ತಿದ್ದ ಪಾಂಚಾಲರು ಎಲ್ಲ ದಿಕ್ಕುಗಳನ್ನೂ ನೋಡುತ್ತಾ ಪಲಾಯನಗೈದರು.

ಆಗ ರಾಜಾ ಯುಧಿಷ್ಠಿರನು ತನ್ನ ಸೇನೆಯು ಓಡಿಹೋಗುತ್ತಿರುವುದನ್ನು ನೋಡಿ ತಾನೂ ಪಲಾಯನಮಾಡಬೇಕೆಂದು ಯೋಚಿಸಿ ಫಲ್ಗುನನಿಗೆ ಈ ಮಾತನ್ನಾಡಿದನು:

> “ಈ ದಾರುಣ ರಾತ್ರಿವೇಳೆಯಲ್ಲಿ ಭಾಸ್ಕರನಂತೆ ಸುಡುತ್ತಿರುವ ಧನುಷ್ಪಾಣಿ ಮಹೇಷ್ವಾಸ ಕರ್ಣನನ್ನು ನೋಡು! ಕರ್ಣನ ಸಾಯಕಗಳಿಂದ ಗಾಯಗೊಂಡ ನಿನ್ನ ಬಂಧುಗಳು ಅನಾಥರಂತೆ ಗೋಳಾಡುವುದು ಒಂದೇಸಮನೆ ಹತ್ತಿರದಿಂದಲೇ ಕೇಳಿಬರುತ್ತಿದೆ. ಅವನು ಬಾಣಗಳನ್ನು ಸಂಧಾನಮಾಡುವುದನ್ನು ಮತ್ತು ಬಿಡುವುದನ್ನು ನೋಡಿದರೆ ಇವನು ನಮ್ಮನ್ನು ನಾಶಗೊಳಿಸಿ ಜಯವನ್ನು ಗಳಿಸುತ್ತಾನೆ ಎನ್ನುವುದು ನಿಶ್ಚಯವೆನಿಸುತ್ತಿದೆ. ಇದರ ಮಧ್ಯೆ ಕಾಲಕ್ಕೆ ತಕ್ಕಂತೆ ಏನು ಮಾಡಬೇಕೆಂದು ನಿನಗೆ ತೋರುತ್ತದೆಯೋ ಕರ್ಣನ ವಧೆಗೆ ಯುಕ್ತವಾದ ಕಾರ್ಯವನ್ನು ಮಾಡು!”

ಇದನ್ನು ಕೇಳಿದ ಮಹಾಬಾಹು ಪಾರ್ಥನು ಕೃಷ್ಣನಿಗೆ ಹೇಳಿದನು:

> “ರಾಧೇಯನ ಅತಿವಿಕ್ರಮವನ್ನು ನೋಡಿ ರಾಜಾ ಕುಂತೀಸುತನು ಭೀತನಾಗಿದ್ದಾನೆ. ಈಗ ಬಂದಿರುವ ಸಮಯಕ್ಕೆ ಸರಿಯಾದುದೇನೆಂದು ಕ್ಷಿಪ್ರವಾಗಿ ನೀನೇ

ಹೇಳಬೇಕು. ಕರ್ಣನಿಂದ ಪುನಃ ಪುನಃ ನಮ್ಮ ಸೇನೆಯು ಓಡಿಹೋಗುತ್ತಿದೆ. ದ್ರೋಣನ ಸಾಯಕಗಳಿಂದ ಗಾಯಗೊಳ್ಳುತ್ತಿರುವ ಮತ್ತು ಕರ್ಣನಿಂದ ಭಯಗೊಂಡಿರುವ ನಮ್ಮವರಿಗೆ ನಿಲ್ಲುವ ಸ್ಥಾನವೇ ತಿಳಿಯದಂತಾಗಿದೆ. ಏನೂ ಭಯವಿಲ್ಲದೇ ಕರ್ಣನು ರಣಾಂಗಣದಲ್ಲಿ ನಿಶಿತ ವಿಶಿಖಗಳನ್ನು ಸುರಿಸುತ್ತಾ ರಥೋದಾರರನ್ನು ಬೆನ್ನಟ್ಟಿ ಓಡಾಡುತ್ತಿರುವುದನ್ನು ನೋಡುತ್ತಿದ್ದೇನೆ. ಉತ್ಸಾಹದಿಂದ ರಣಮೂರ್ಧನಿಯಲ್ಲಿ ಸಂಚರಿಸುತ್ತಿರುವ ಕರ್ಣನನ್ನು ಪ್ರತ್ಯಕ್ಷ ನೋಡಿ ಕಾಲಿನಿಂದ ತುಳಿಯಲ್ಪಟ್ಟ ಸರ್ಪದಂತೆ ನನ್ನ ಸಹನೆಯು ಮೀರಿಹೋಗುತ್ತಿದೆ. ಮಹಾರಥ ಕರ್ಣನಿರುವಲ್ಲಿಗೆ ಹೋಗು! ಅವನನ್ನು ನಾನಾಗಲೀ ಅಥವ ನನ್ನನ್ನು ಅವನಾಗಲೀ ಸಂಹರಿಸುತ್ತೇವೆ!”

ವಾಸುದೇವನು ಹೇಳಿದನು:

“ಕೌಂತೇಯ! ದೇವರಾಜನಂತೆ ಈ ರಣಾಂಗಣದಲ್ಲಿ ಸಂಚರಿಸುತ್ತಿರುವ ನರವ್ಯಾಘ್ರ ಅತಿಮಾನುಷ ವಿಕ್ರಮಿ ಕರ್ಣನನ್ನು ನೋಡುತ್ತಿದ್ದೇನೆ. ನಿನ್ನನ್ನು ಮತ್ತು ರಾಕ್ಷಸ ಘಟೋತ್ಕಚನನ್ನು ಹೊರತಾಗಿ ಇವನನ್ನು ಸಮರದಲ್ಲಿ

ಎದುರಿಸುವವರು ಬೇರೆ ಯಾರೂ ಇಲ್ಲ. ಆದರೆ ನೀನು ಸೂತಪುತ್ರನನ್ನು ಎದುರಿಸುವ ಕಾಲವು ಬಂದೊದಗಿದೆಯೆಂದು ನನಗನ್ನಿಸುವುದಿಲ್ಲ. ನಿನಗೋಸ್ಕರವಾಗಿ ಇಟ್ಟುಕೊಂಡಿರುವ ಮಹಾ ಉಲ್ಕೆಯಂತೆ ಬೆಳಗುತ್ತಿರುವ ಇಂದ್ರನು ಕೊಟ್ಟ ರೌದ್ರರೂಪದ ಶಕ್ತಿಯು ಅವನಲ್ಲಿದೆ. ಬಲಿಷ್ಟನಾದ ಭೀಮನಿಗೆ ಹುಟ್ಟಿದ ಸುರಪರಾಕ್ರಮಿ ಮಹಾಬಲ ಘಟೋತ್ಕಚನು ರಾಧೇಯನನ್ನು ಎದುರಿಸಬಲ್ಲನು. ಅವನಲ್ಲಿ ದೇವ, ರಾಕ್ಷಸ, ಅಸುರರ ಅಸ್ತ್ರಗಳಿವೆ. ಘಟೋತ್ಕಚನು ಸತತವೂ ನಿಮ್ಮ ಹಿತೈಷಿಯಾಗಿದ್ದು ಅನುರಕ್ತನಾಗಿದ್ದಾನೆ. ರಣದಲ್ಲಿ ಅವನು ಕರ್ಣನನ್ನು ಜಯಿಸುತ್ತಾನೆ ಎನ್ನುವುದರಲ್ಲಿ ನನಗೆ ಸಂಶಯವಿಲ್ಲ.”

ಪಾರ್ಥನಿಗೆ ಹೀಗೆ ಹೇಳಿ ಪುಷ್ಕರಲೋಚನನು ರಾಕ್ಷಸನಿಗೆ ಹೇಳಿ ಕಳುಹಿಸಿದನು. ಅವನು ಅವರ ಮುಂದೆ ಬಂದು ನಿಂತುಕೊಂಡನು. ಕವಚ, ಬಾಣ, ಖಡ್ಗ ಮತ್ತು ಧನುಸ್ಸನ್ನು ಧರಿಸಿದ್ದ ಅವನು ಕೃಷ್ಣನನ್ನೂ ಪಾಂಡವ ಧನಂಜಯನನ್ನೂ ನಮಸ್ಕರಿಸಿ ಹೃಷ್ಟಮನಸ್ಕನಾಗಿ “ನನಗೆ ಆಜ್ಞಾಪಿಸಿ!” ಎಂದು ಹೇಳಿದನು. ಆಗ ನಸುನಗುತ್ತಾ ದಾಶಾರ್ಹನು ಆ



ಮೇಘಸಂಕಾಶ, ಉರಿಯುತ್ತಿರುವ ಮುಖವುಳ್ಳ, ಉರಿಯುತ್ತಿರುವ ಕುಂಡಲಗಳುಳ್ಳ ಹೈಡಿಂಬನಿಗೆ ಹೇಳಿದನು:

"ಘಟೋತ್ಕಚ! ಮಗನೇ! ನಾನು ಹೇಳುವುದನ್ನು ಅರ್ಥಮಾಡಿಕೋ! ನಿನ್ನ ವಿಕ್ರಮವನ್ನು ತೋರಿಸುವ ಕಾಲವು ಬಂದೊದಗಿದೆ. ಈ ಅವಕಾಶವು ಬೇರೆ ಯಾರಿಗೂ ಇನ್ನೂ ಬಂದಿಲ್ಲ! ಮುಳುಗುತ್ತಿರುವ ಬಂಧುಗಳಿಗೆ ನೀನು ತೆಪ್ಪದಂತಾಗು! ನಿನ್ನಲ್ಲಿ ವಿವಿಧ ಅಸ್ತ್ರಗಳಿವೆ. ರಾಕ್ಷಸೀ ಮಾಯೆಯೂ ಇದೆ. ಹೈಡಿಂಬ! ಗೋಪಾಲಕನು ಗೋವುಗಳನ್ನು ಒಟ್ಟುಹಾಕಿ ಹೊಡೆಯುವಂತೆ ರಣಮೂರ್ಧನಿಯಲ್ಲಿ ಕರ್ಣನು ಪಾಂಡವರ ಸೇನೆಯನ್ನು ಸದೆಬಡಿಯುತ್ತಿರುವುದನ್ನು ನೋಡು! ಈ ಮಹೇಷ್ವಾಸ ಮತಿವಂತ ದೃಢವಿಕ್ರಮಿ ಕರ್ಣನು ಪಾಂಡವರ ಸೇನೆಯಲ್ಲಿರುವ ಕ್ಷತ್ರಿಯರ್ಷಭರನ್ನು ಸಂಹರಿಸುತ್ತಿದ್ದಾನೆ. ನಮ್ಮಲ್ಲಿರುವ ದೃಡಧನ್ವಿಗಳಲ್ಲಿ ಯಾರೂ ಕೂಡ ಮಹಾ ಶರವರ್ಷಗಳನ್ನು ಸುರಿಸಿ ಪೀಡಿಸುತ್ತಿರುವ ಅವನನ್ನು ಎದುರಿಸಿ ನಿಲ್ಲಲು ಶಕ್ಯರಾಗಿಲ್ಲ. ಸೂತಪುತ್ರನ ಶರವರ್ಷಗಳಿಂದ ಪೀಡಿತರಾದ ಪಾಂಚಾಲರು ಈ ರಾತ್ರಿ ಸಿಂಹದ ಭಯದಿಂದ

ಜಿಂಕೆಗಳು ಓಡುವಂತೆ ಓಡಿಹೋಗುತ್ತಿದ್ದಾರೆ. ಈ ರೀತಿ ರಣದಲ್ಲಿ ವೃದ್ಧಿಸುತ್ತಿರುವ ಸೂತಪುತ್ರನನ್ನು ಎದುರಿಸುವವನು ಭೀಮವಿಕ್ರಮನಾದ ನೀನಲ್ಲದೇ ಬೇರೆ ಯಾರೂ ಇಲ್ಲ. ಆದುದರಿಂದ ನಿನಗೂ, ನಿನ್ನ ತಾಯಿಯ ಕುಲದವರಿಗೂ, ತಂದೆಯ ಕುಲದವರಿಗೂ, ನಿನ್ನ ತೇಜಸ್ಸಿಗೂ, ಅಸ್ತ್ರಬಲಕ್ಕೂ ಯುಕ್ತವಾದುದನ್ನು ಮಾಡು! ಇದಕ್ಕಾಗಿಯೇ ಮಾನವರು ಮಕ್ಕಳನ್ನು ಬಯಸುತ್ತಾರೆ. ತಮ್ಮನ್ನು ದುಃಖದಿಂದ ಹೇಗೆ ಅವರು ಪಾರುಮಾಡುತ್ತಾರೆಂದು ಯೋಚಿಸುತ್ತಿರುತ್ತಾರೆ. ನೀನು ನಿನ್ನ ಬಾಂಧವರನ್ನು ಪಾರುಮಾಡು! ಸಂಗ್ರಾಮದಲ್ಲಿ ಯುದ್ಧಮಾಡುವಾಗ ನಿನ್ನ ಅಸ್ತ್ರಬಲವೂ ನಿನ್ನ ದುಸ್ತರ ಮಾಯೆಯೂ ಸತತವಾಗಿ ವೃದ್ಧಿಯಾಗುತ್ತಲೇ ಇರುತ್ತದೆ. ಕರ್ಣನ ನಿಶಿತ ಸಾಯಕಗಳಿಂದ ಮತ್ತು ಧಾರ್ತರಾಷ್ಟ್ರರಿಂದ ಮುಳಿಗಿಗೋಗುತ್ತಿರುವ ಪಾಂಡವರಿಗೆ ತೀರದಂತಾಗು! ರಾತ್ರಿಯ ವೇಳೆಯಲ್ಲಿ ರಾಕ್ಷಸರು ಹೆಚ್ಚಿನ ಪರಾಕ್ರಮವುಳ್ಳವರೂ, ಬಲವಂತರೂ, ಹೆಚ್ಚಿನ ದುರ್ಧರ್ಷರೂ, ಶೂರರೂ, ವಿಕ್ರಾಂತಚಾರಿಗಳೂ ಆಗುತ್ತಾರೆ. ಈ ರಾತ್ರಿಯ ರಣದಲ್ಲಿ ಮಾಯೆಯಿಂದ ಮಹೇಷ್ವಾಸ ಕರ್ಣನನ್ನು ವಧಿಸು. ಧೃಷ್ಟದ್ಯುಮ್ನನನ್ನು ಮುಂದಿಟ್ಟುಕೊಂಡು

ಪಾರ್ಥರು ದ್ರೋಣನನ್ನು ವಧಿಸುತ್ತಾರೆ.”

ಕೇಶವನ ಮಾತನ್ನು ಕೇಳಿ ಬೀಭತ್ಸುವೂ ಕೂಡ ಅರಿಂದಮ ರಾಕ್ಷಸ ಘಟೋತ್ಕಚನಿಗೆ ಹೇಳಿದನು:

“ಘಟೋತ್ಕಚ! ನೀನು, ಸಾತ್ಯಕಿ ಮತ್ತು ಭೀಮಸೇನರು ಸರ್ವಸೈನ್ಯಗಳಲ್ಲಿ ವೀರಶ್ರೇಷ್ಠರೆಂದು ನನ್ನ ಅಭಿಪ್ರಾಯ. ಈ ರಾತ್ರಿ ನೀನು ಹೋಗಿ ಕರ್ಣನೊಂದಿಗೆ ದ್ವೈರಥದಲ್ಲಿ ಯುದ್ಧಮಾಡು. ಸಾತ್ಯಕಿಯು ನಿನ್ನ ಹಿಂದೆಯೇ ಇರುತ್ತಾನೆ. ಹಿಂದೆ ಇಂದ್ರನು ಸ್ಕಂದನ ಸಹಾಯದಿಂದ ತಾರಕನನ್ನು ಸಂಹರಿಸಿದಂತೆ ಸಾತ್ವತನ ಸಹಾಯವನ್ನು ಪಡೆದವನಾಗಿ ರಣದಲ್ಲಿ ಶೂರ ಕರ್ಣನನ್ನು ಸಂಹರಿಸು! “

ಘಟೋತ್ಕಚನು ಹೇಳಿದನು:

“ಸತ್ತಮ! ಕರ್ಣನಿಗೆ, ದ್ರೋಣನಿಗೆ ಮತ್ತು ಅನ್ಯ ಕೃತಾಸ್ತ್ರ ಮಹಾತ್ಮ ಕ್ಷತ್ರಿಯರಿಗೆ ನಾನೊಬ್ಬನೇ ಸಾಕು! ಭೂಮಿಯಿರುವವರೆಗೆ ಜನರು ಇದರ ಕುರಿತು ಮಾತನಾಡಿಕೊಳ್ಳುತ್ತಿರುವಂತೆ ಇಂದಿನ ರಾತ್ರಿ ನಾನು ಸೂತಪುತ್ರನಿಗೆ ಸಂಗ್ರಾಮದ ಆತಿಥ್ಯವನ್ನು ಬಡಿಸುತ್ತೇನೆ.

> ರಾಕ್ಷಸಧರ್ಮವನ್ನು ಅನುಸರಿಸಿ ಅಲ್ಲಿ ಯಾವಶೂರರನ್ನೂ – ಭೀತರಾಗಿ ಕೈಮುಗಿಯುವವರನ್ನೂ – ಬಿಡದೇ ಎಲ್ಲರನ್ನೂ ವಧಿಸುತ್ತೇನೆ.”

ಹೀಗೆ ಹೇಳಿ ಮಹಾಬಾಹು ಪರವೀರಹ ಹೈಡಿಂಬನು ಕೌರವ ಸೇನೆಯನ್ನು ಭೀತಗೊಳಿಸುತ್ತಾ ಯುದ್ಧದಲ್ಲಿ ಕರ್ಣನನ್ನು ಎದುರಿಸಿದನು. ಸಂಕ್ರುದ್ಧ ಪನ್ನಗದಂತೆ ಉರಿಯುತ್ತಿರುವ ಮುಖವುಳ್ಳವನಾಗಿ ಮೇಲೆ ಬೀಳುತ್ತಿದ್ದ ಅವನನ್ನು ಸೂತಜನು ಸ್ವೀಕರಿಸಿದನು. ಆಗ ಗರ್ಜಿಸುತ್ತಿರುವ ಕರ್ಣ-ರಾಕ್ಷಸರ ನಡುವೆ ಆ ರಾತ್ರಿ ಶಕ್ರ-ಪ್ರಹ್ರಾದರ ನಡುವೆ ನಡೆದ ಯುದ್ಧದಂತೆ ಯುದ್ಧವು ಪ್ರಾರಂಭವಾಯಿತು.

## ಅಲಂಬಲವಧೆ

ಯುದ್ಧದಲ್ಲಿ ಕರ್ಣನನ್ನು ಸಂಹರಿಸುವ ಇಚ್ಛೆಯಿಂದ ತ್ವರೆಮಾಡಿ ಕರ್ಣನ ರಥದ ಸಮೀಪಕ್ಕೆ ಬರುತ್ತಿದ್ದ ಘಟೋತ್ಕಚನನ್ನು ನೋಡಿ ದುರ್ಯೋಧನನು ದುಃಶಾಸನನಿಗೆ ಈ ಮಾತನ್ನಾಡಿದನು:

> “ರಣದಲ್ಲಿ ಕರ್ಣನ ವಿಕ್ರಮವನ್ನು ನೋಡಿ ಕರ್ಣನನ್ನು ಸಂಹರಿಸಲು ಈ ರಾಕ್ಷಸನು ಅವಸರದಲ್ಲಿ ಬರುತ್ತಿದ್ದಾನೆ. ಈ ಮಹಾರಥನನ್ನು ತಡೆ! ಮಹಾಬಲ ಕರ್ಣನು ರಾಕ್ಷಸನೊಡನೆ

ಯುದ್ಧಮಾಡುವಲ್ಲಿಗೆ ಮಹಾಸೇನೆಯೊಂದಿಗೆ ಹೋಗು. ಸೇನೆಗಳಿಂದ ಪರಿವೃತನಾಗಿ ಪ್ರಯತ್ನಪಟ್ಟು ರಣದಲ್ಲಿ ಕರ್ಣನನ್ನು ರಕ್ಷಿಸು!”

ಅಷ್ಟರಲ್ಲಿಯೇ ಜಟಾಸುರನ ಬಲಶಾಲೀ ಮಗನು ದುರ್ಯೋಧನನ ಬಳಿಬಂದು ಹೇಳಿದನು:

“ದುರ್ಯೋಧನ! ನಿನ್ನಿಂದ ಅಪ್ಪಣೆಯನ್ನು ಪಡೆದು ನನ್ನ ಅನುಯಾಯಿಗಳೊಂದಿಗೆ ನಿನ್ನ ಶತ್ರುಗಳಾದ ಆ ಪ್ರಖ್ಯಾತ ಯುದ್ಧದುರ್ಮದ ಪಾಂಡವರನ್ನು ಸಂಹರಿಸಲು ಬಯಸುತ್ತೇನೆ. ರಾಕ್ಷಸರ ಅಗ್ರಣಿ ಜಟಾಸುರನೇ ನನ್ನ ತಂದೆ. ಹಿಂದೆ ಅವನು ರಾಕ್ಷಸರನ್ನು ಸಂಹರಿಸುವ ಕಾರ್ಯಮಾಡುತ್ತಿದ್ದ ಈ ಕ್ಷುದ್ರ ಪಾರ್ಥರಿಂದ ವಧಿಸಲ್ಪಟ್ಟನು. ಅದರ ಪ್ರತೀಕಾರವನ್ನು ಬಯಸುತ್ತೇನೆ. ನನಗೆ ಅನುಜ್ಞೆಯನ್ನು ದಯಪಾಲಿಸು!”

ಪುನಃ ಪುನಃ ಪ್ರೀತಿತೋರಿಸುವ ರಾಜನು ಅವನಿಗೆ ಹೇಳಿದನು:

“ಶತ್ರುಗಳ ವಧೆಗೆ ದ್ರೋಣಕರ್ಣಾದಿಗಳೊಡನೆ ನಾನು ಸಾಕು. ನೀನಾದರೋ ಹೋಗಿ ಯುದ್ಧದಲ್ಲಿ ಘಟೋತ್ಕಚನನ್ನು ಸಂಹರಿಸು!”

ಹಾಗೆಯೇ ಆಗಲೆಂದು ಹೇಳಿ ಮಹಾಕಾಯ ಜಟಾಸುರಿಯು ಘಟೋತ್ಕಚನನ್ನು ಕೂಗಿ ಕರೆದು ನಾನಾಶಸ್ತ್ರಗಳಿಂದ ಮುಸುಕಿದನು. ಹೈಡಿಂಬನು ಒಬ್ಬನೇ ಕರ್ಣನನ್ನೂ, ದುಸ್ತರ ಕುರುಸೈನ್ಯವನ್ನೂ, ಅಲಂಬಲನನ್ನೂ ಭಿರುಗಾಳಿಯು ಮೋಡವನ್ನು ಹೇಗೋ ಹಾಗೆ ಚದುರಿಸಿಬಿಟ್ಟನು. ಆಗ ಮಾಯಾಮಯ ಘಟೋತ್ಕಚನನ್ನು ನೋಡಿ ಅಲಂಬಲನು ಅವನನ್ನು ಶರವ್ರಾತಗಳಿಂದ ಕಾಣದಂತೆ ಮುಚ್ಚಿಬಿಟ್ಟನು. ಬಹಳ ಬಾಣಗಳಿಂದ ಭೈಮಸೇನಿಯನ್ನು ಗಾಯಗೊಳಿಸಿ ಅಲಂಬಲನು ಶರವ್ರಾತಗಳಿಂದ ಪಾಂಡವರ ಸೇನೆಯನ್ನು ಮುತ್ತಿದನು. ಆ ರಾತ್ರಿವೇಳೆಯಲ್ಲಿ ಓಡಿ ಹೋಗುತ್ತಿದ್ದ ಪಾಂಡು ಸೇನೆಗಳು ಭಿರುಗಾಳಿಗೆ ಸಿಲುಕಿ ಚದುರಿ ಹೋಗುತ್ತಿರುವ ಮೋಡಗಳಂತೆ ಕಾಣುತ್ತಿದ್ದವು. ಅದೇ ರೀತಿ ಘಟೋತ್ಕಚನ ಶರಗಳಿಗೆ ಸಿಲುಕಿದ ಕುರುವಾಹಿನಿಯೂ ಕೂಡ ಆ ದಟ್ಟ ರಾತ್ರಿಯಲ್ಲಿ ಸಹಸ್ರಾರು ದೀವಟಿಗೆಗಳನ್ನು ಬಿಸುಟು ಓಡಿಹೋಗುತ್ತಿತ್ತು.

ಕ್ರುದ್ಧ ಅಲಂಬಲನಾದರೋ ಆ ಮಹಾಯುದ್ಧದಲ್ಲಿ ಭೈಮಸೇನಿಯನ್ನು ಮಾವುತನು ಆನೆಯನ್ನು ತಿವಿಯುವಂತೆ ನಿಶಿತ ಬಾಣಗಳಿಂದ ಹೊಡೆದನು. ಆಗ ಕ್ಷಣದಲ್ಲಿಯೇ ಘಟೋತ್ಕಚನು ತನ್ನ ಶತ್ರುವಿನ ರಥವನ್ನೂ, ಸೂತನನ್ನೂ, ಸರ್ವ ಆಯುಧಗಳನ್ನೂ ಪುಡಿಪುಡಿಮಾಡಿ,

ಅತಿದಾರುಣವಾಗಿ ಗಹಗಹಿಸಿ ನಕ್ಕನು. ಅನಂತರ ಅವನು ಕರ್ಣನನ್ನೂ, ಅನ್ಯ ಕುರುಗಳನ್ನೂ ಮತ್ತು ಅಲಂಬಲನನ್ನೂ ಸಹಸ್ರಾರು ಶರವ್ರಾತಗಳಿಂದ ಮೇಘಗಳು ಮೇರುಪರ್ವತವನ್ನು ಹೇಗೋ ಹಾಗೆ ವರ್ಷಿಸಿದನು. ರಾಕ್ಷಸನಿಂದ ಆರ್ದಿತಗೊಂಡ ಕುರುಗಳ ಸೇನೆಯಲ್ಲಿ ಅಲ್ಲೋಲಕಲ್ಲೋಲವಾಯಿತು. ಮೇಲಿಂದಮೇಲೆ ಚತುರಂಗಬಲವು ಅನ್ಯೋನ್ಯರನ್ನು ಸಂಹರಿಸತೊಡಗಿತು. ವಿರಥನಾದ ಸಾರಥಿಯನ್ನೂ ಕಳೆದುಕೊಂಡ ಜಟಾಸುರಿಯು ರಣದಲ್ಲಿ ಕ್ರುದ್ಧನಾಗಿ ಘಟೋತ್ಕಚನನ್ನು ದೃಢ ಮುಷ್ಟಿಯಿಂದ ಹೊಡೆಯತೊಡಗಿದನು.

ಅವನ ಮುಷ್ಟಿಯಿಂದ ಹೊಡೆಯಲ್ಪಟ್ಟ ಘಟೋತ್ಕಚನು ಭೂಕಂಪವಾದಾಗ ವೃಕ್ಷಗಣಗುಲ್ಮಲಗಳೊಡನೆ ಶೈಲವು ಅಲುಗಾಡುವಂತೆ ತತ್ತರಿಸಿದನು. ಆಗ ಭೈಮಸೇನಿಯು ಪರಿಘದಂತಿದ್ದ ತನ್ನ ಬಾಹುಗಳನ್ನು ಮೇಲೆತ್ತಿ ಮುಷ್ಟಿಯಿಂದ ಜಟಾಸುರಿಯನ್ನು ಜೋರಾಗಿ ಗುದ್ದಿದನು. ಕ್ರುದ್ಧ ಹೈಡಿಂಬನು ತಕ್ಷಣವೇ ಅವನನ್ನು ಕೆಳಕ್ಕೆ ಕೆಡವಿ ತನ್ನ ಎರಡೂ ಬಾಹುಗಳಿಂದ ಅವನನ್ನು ನೆಲಕ್ಕೆ ಅದುಮಿದನು. ಅಲಂಬಲನಾದರೋ ಆ ರಾಕ್ಷಸನ ಹಿಡಿತದಿಂದ ಬಿಡಿಸಿಕೊಂಡು ರಣದಲ್ಲಿ ರೋಷಾನ್ವಿತನಾಗಿ ಘಟೋತ್ಕಚನನ್ನು ನೆಲಕ್ಕೆ ಕೆಡವಿದನು. ಆಗ ಅತಿಕಾಯರಾದ ಘಟೋತ್ಕಚ-ಅಲಂಬಲರಿಬ್ಬರ ನಡುವೆ

ರೋಮಾಂಚಕಾರೀ ತುಮುಲ ಯುದ್ಧವು ಪ್ರಾರಂಭವಾಯಿತು.

ಅನ್ಯೋನ್ಯರನ್ನು ಮೀರಿಸುತ್ತಾ ಆ ಮಯಾವಿ ಮತ್ತು ಅತಿಮಾಯಿ ಮಹಾವೀರರಿಬ್ಬರೂ ಇಂದ್ರ –ವೈರೋಚನರಂತೆ ಯುದ್ಧಮಾಡಿದರು. ಅಗ್ನಿ ಮತ್ತು ನೀರಾಗಿ, ಪುನಃ ಗರುಡ-ತಕ್ಷಕರಾಗಿ, ಪುನಃ ಮೋಡ-ಭಿರುಗಾಳಿಗಳಾಗಿ, ಪುನಃ ವಜ್ರ-ಮಹಾಚಲಗಳಾಗಿ, ಪುನಃ ಆನೆ-ಸಿಂಹಗಳಾಗಿ, ಪುನಃ ರಾಹು-ಭಾಸ್ಕರರಾಗಿ - ಈ ರೀತಿ ನೂರಾರು ಮಾಯೆಗಳನ್ನು ಸೃಷ್ಟಿಸುತ್ತಾ ಅನ್ಯೋನ್ಯರನ್ನು ವಧಿಸಲು ಬಯಸಿ ಅಲಂಬಲ ಘಟೋತ್ಕಚರು ಅತ್ಯಂತ ವಿಚಿತ್ರವಾದ ಯುದ್ಧವನ್ನು ಹೋರಾಡಿದರು. ಪರಿಘ, ಗದೆ, ಪ್ರಾಸ, ಮುದ್ಗರ, ಪಟ್ಟಿಶ, ಮುಸಲ, ಪರ್ವತಾಗ್ರಗಳಿಂದ ಅವರು ಅನ್ಯೋನ್ಯರನ್ನು ಹೊಡೆದರು. ಮಹಾಮಾಯಾವಿ ಆ ರಾಕ್ಷಸಪ್ರವರರು ಯುದ್ಧದಲ್ಲಿ ಕುದುರೆಗಳ ಮೇಲೆ, ಆನೆಗಳ ಮೇಲೆ, ಪದಾತಿಗಳಾಗಿ ಮತ್ತೆ ಪುನಃ ರಥಗಳ ಮೇಳೆ ಯುದ್ಧಮಾಡಿದರು.

ಆಗ ಘಟೋತ್ಕಚನು ಅಲಂಬಲನನ್ನು ವಧಿಸಲು ಬಯಸಿ ಬಹಳ ಕ್ರುದ್ಧನಾಗಿ ಗಿಡುಗನಂತೆ ಮೇಲೆ ಹಾರಿ ಕೆಳಗೆ ಧುಮುಕಿ, ಆ ಮಹಾಕಾಯ ರಾಕ್ಷಸ ಅಲಂಬಲನನ್ನು ವಿಷ್ಣುವು ಮಯನನ್ನು ಹೇಗೋ ಹಾಗೆ ಹಿಡಿದು ಮೇಲೆ ಹಾರಿ ಕೆಳಗೆ ನೆಲದ ಮೇಲೆ ಚಚ್ಚಿದನು. ಆಗ

ಘಟೋತ್ಕಚನು ಅದ್ಭುತವಾಗಿ ಕಾಣುತ್ತಿದ್ದ ಖಡ್ಗವನ್ನು ಮೇಲೆತ್ತಿ ವಿಕೃತವಾಗಿ ಕಾಣುತ್ತಿದ್ದ ಅಲಂಬಲನ ಶಿರವನ್ನು ಕಾಯದಿಂದ ಕತ್ತರಿಸಿದನು. ರಕ್ತವನ್ನು ಸುರಿಸುತ್ತಿದ್ದ ಆ ಶಿರವನ್ನು ಕೂದಲಿನಲ್ಲಿ ಹಿಡಿದು ರಾಕ್ಷಸ ಘಟೋತ್ಕಚನು ದುರ್ಯೋಧನನ ರಥದ ಕಡೆ ನಡೆದನು. ಅವನ ಬಳಿ ಹೋಗಿ ನಗುತ್ತಾ ರಾಕ್ಷಸನು ವಿಕಾರ ಕೂದಲುಗಳುಳ್ಳ ಆ ಶಿರವನ್ನು ಅವನ ರಥದ ಮೇಲೆ ಎಸೆದು ಮಳೆಗಾಲದ ಮೋಡದಂತೆ ಭೈರವವಾಗಿ ಗರ್ಜಿಸಿದನು. ಆಗ ಅವನು ದುರ್ಯೋಧನನಿಗೆ ಈ ಮಾತನ್ನಾಡಿದನು:

> “ಇಗೋ! ನಿನ್ನ ವಿಕ್ರಮಿ ಬಂಧುವು ಹತನಾಗಿರುವುದನ್ನು ನೋಡು! ಇವನಂತೆಯೇ ನಿನಗೆ ನಿಷ್ಠನಾಗಿರುವ ಕರ್ಣನನ್ನೂ ಕೂಡ ಪುನಃ ನೋಡಲಿದ್ದೀಯೆ!”

ಹೀಗೆ ಹೇಳಿ ಅವನು ಕರ್ಣನ ಮೇಲೆ ನೂರಾರು ತೀಕ್ಷ್ಣ ಶರಗಳನ್ನು ಎರಚುತ್ತಾ ಅವನ ಕಡೆಗೇ ಹೋದನು. ಅನಂತರ ಆ ನರ-ರಾಕ್ಷಸರ ಮಧ್ಯೆ ರಣದಲ್ಲಿ ಘೋರರೂಪದ, ಭಯಾನಕ, ವಿಸ್ಮಯದಾಯಕ ಯುದ್ಧವು ನಡೆಯಿತು.

## ಕರ್ಣ-ಘಟೋತ್ಕಚರ ಯುದ್ಧ

ಮಹಾಕಾಯ, ಲೋಹಿತಾಕ್ಷ, ತಾಮ್ರವರ್ಣದ ಮುಖವುಳ್ಳ, ಆಳವಾದ ಹೊಟ್ಟೆಯನ್ನು ಹೊಂದಿರುವ, ರೋಮಗಳು ನಿಮಿರಿ ನಿಂತಿರುವ, ಹಸಿರುಬಣ್ಣದ ಗಡ್ಡ-ಮೀಸೆಗಳುಳ್ಳ, ಗೂಟದಂತಹ ಕಿವಿಗಳುಳ್ಳ, ದೊಡ್ಡ ದೊಡ್ಡ ದವಡೆಗಳುಳ್ಳ ಘಟೋತ್ಕಚನ ಬಾಯಿಯು ಕಿವಿಗಳ ಪರ್ಯಂತವಾಗಿತ್ತು. ತೀಕ್ಷ್ಣ ಕೋರೆದಾಡೆಗಳುಳ್ಳ ಅವನು ಭಯಂಕರರೂಪನಾಗಿದ್ದನು. ಅವನ ಕೆಂಪು ನಾಲಿಗೆ-ತುಟಿಗಳು ನೀಳವಾಗಿದ್ದವು. ಹುಬ್ಬುಗಳು ಜೋಲಾಡುತ್ತಿದ್ದವು. ಮೂಗು ದಪ್ಪವಾಗಿತ್ತು. ಶರೀರವು ನೀಲಿ ಬಣ್ಣದ್ದಾಗಿತ್ತು. ಕುತ್ತಿಗೆಯು ಕೆಂಪಾಗಿತ್ತು. ಅವನ ಶರೀರವು ಪರ್ವತಾಕಾರವಾಗಿದ್ದು ನೋಡಲು ಭಯಂಕರನಾಗಿದ್ದನು. ಆ ಮಹಾಕಾಯ, ಮಹಾಬಾಹು, ಮಹಾಶೀರ್ಷ, ಮಹಾಬಲ, ವಿಕಾರಸ್ವರೂಪನ ಸ್ಪರ್ಷವು ಗಡುಸಾಗಿತ್ತು. ಅವನ ಕಣಕಾಲಿನ ಹಿಂಭಾಗವು ವಿಕಾರವಾಗಿಯೂ ಮಾಂಸಲವಾಗಿಯೂ ಇದ್ದಿತು. ಅವನ ನಿತಂಬವು ದಪ್ಪವಾಗಿದ್ದಿತು. ಹೊಕ್ಕಳು ಪ್ರದೇಶವು ಚಿಕ್ಕದಾಗಿದ್ದು ಆಳವಾಗಿದ್ದಿತು. ಅವನ ಶರೀರವು ದೊಡ್ಡದಾಗಿ ಬೆಳೆದಿದ್ದಿತು. ಮಹಾಮಾಯಾವಿಯಾಗಿದ್ದ ಅವನು ಕೈಗಳಲ್ಲಿ ಆಭರಣಗಳನ್ನು ತೊಟ್ಟುಕೊಂಡಿದ್ದ ಅವನು ಭುಜಗಳಲ್ಲಿ ಅಂಗದ ಕೇಯೂರಗಳನ್ನು ಧರಿಸಿದ್ದನು. ಪರ್ವತವು ಅಗ್ನಿಯನ್ನೇ ಮಾಲೆಯನ್ನಾಗಿ ಧರಿಸುವಂತೆ ಘಟೋತ್ಕಚನು ವಕ್ಷಸ್ಥಳದಲ್ಲಿ ಸ್ವರ್ಣಮಾಲೆಯನ್ನು

ಧರಿಸಿದ್ದನು. ಹೇಮಮಯ ಚಿತ್ರಿತ ತೋರಣಸದೃಶ ಬಹುರೂಪದ ಶುಭ್ರ ಕಿರೀಟವು ಅವನ ತಲೆಯ ಮೇಲೆ ಬೆಳಗುತ್ತಿತ್ತು. ಬಾಲಸೂರ್ಯನಂತೆ ಹೊಳೆಯುತ್ತಿದ್ದ ಕುಂಡಲಗಳನ್ನೂ, ಸುವರ್ಣಮಯ ಶುಭ ಮಾಲೆಯನ್ನೂ, ಮಹಾಪ್ರಭೆಯುಳ್ಳ ಕಂಚಿನ ವಿಶಾಲ ಕವಚವನ್ನೂ ಧರಿಸಿದ್ದನು. ಅವನ ಮಹಾರಥವು ಶಬ್ದಾಯಮಾನ ನೂರಾರು ಗಂಟೆಗಳಿಂದ ಅಲಂಕೃತವಾಗಿತ್ತು. ಕೆಂಪು ಧ್ವಜ-ಪತಾಕೆಗಳಿದ್ದವು. ಕರಡಿಯ ಚರ್ಮವನ್ನು ಹೊದೆಸಿದ್ದ ಆ ರಥವು ನಾಲ್ಕುನೂರು ಮೊಳಗಳಷ್ಟು ವಿಸ್ತಾರವಾಗಿತ್ತು. ಸರ್ವಾಯುಧಗಳಿಂದ ಸಮೃದ್ಧವಾಗಿದ್ದ ಆ ರಥದ ಧ್ವನಿಯು ಮೇಘಗಳ ಗಂಭೀರಧ್ವನಿಗೆ ಸಮನಾಗಿದ್ದಿತು. ದೊಡ್ಡ ಧ್ವಜವಿದ್ದ ಆ ರಥಕ್ಕೆ ಎಂಟು ಗಾಲಿಗಳಿದ್ದವು. ಅದಕ್ಕೆ ಮದಿಸಿದ ಆನೆಗಳಿಗೆ ಸಮಾನ ಕೆಂಪು ಕಣ್ಣುಗಳುಳ್ಳ ವಿಭೀಷಣವಾಗಿ ತೋರುತ್ತಿದ್ದ, ಇಚ್ಛಾನುಸಾರವಾಗಿ ರೂಪಗಳನ್ನು ಬದಲಾಯಿಸಬಲ್ಲ, ಮಹಾಬಲಿಷ್ಠ ಕುದುರೆಗಳನ್ನು ಕಟ್ಟಲಾಗಿತ್ತು. ಬೆಳಗುತ್ತಿದ್ದ ಮುಖ ಮತ್ತು ಕುಂಡಲಗಳನ್ನು ಹೊಂದಿದ್ದ ವಿರೂಪಾಕ್ಷನೆಂಬ ರಾಕ್ಷಸನು ಅವನ ಸಾರಥಿಯಾಗಿದ್ದನು. ಸೂರ್ಯನ ರಶ್ಮಿಗೆ ಸಮಾನ ಕಡಿವಾಣಗಳಿಂದ ಕುದುರೆಗಳನ್ನು ಹಿಡಿದಿದ್ದ ಅವನೊಡನೆ ಅರುಣನೊಂದಿಗೆ ರವಿಯು ಹೇಗೋ ಹಾಗೆ ರಣಸನ್ನದ್ಧನಾಗಿದ್ದನು. ಕೆಂಪು ತಲೆಯ ಪರಮಭೀಷಣ ಮಾಂಸಾಹಾರಿ

ರಣಹದ್ದಿರುವ ಮಹಾ ಧ್ವಜವು ಮೋಡಗಳಿಂದ ಕೂಡಿದ ಪರ್ವತವು ಆಕಾಶವನ್ನು ಚುಂಬಿಸುವಂತೆ ರಥದ ಮೇಲೆ ಹಾರಾಡುತಿತ್ತು. ಇಂದ್ರನ ವಜ್ರಾಯುಧದ ಘೋಷಕ್ಕೆ ಸಮಾನ ಟೇಂಕಾರಶಬ್ಧದಿಂದಲೂ, ಧೃಢ ಮೌರ್ವಿಯುಳ್ಳ, ಒಂದು ಕಿಷ್ಕುವಿನಷ್ಟು ಅಗಲವಾಗಿದ್ದ, ಹನ್ನೆರಡು ಆರತ್ನಿಗಳಷ್ಟು ಉದ್ದವಾಗಿದ್ದ ಕಾರ್ಮುಕವನ್ನು ಕರ್ಣಪರ್ಯಂತವಾಗಿ ಸೆಳೆಯುತ್ತಾ ರಥದ ಅಚ್ಚುಗಳ ಗಾತ್ರದ ಬಾಣಗಳಿಂದ ದಿಕ್ಕುಗಳನ್ನು ಮುಚ್ಚುತ್ತಾ ವೀರರ ಪ್ರಾಣಾಪಹಾರಕ ಆ ಘೋರರಾತ್ರಿಯಲ್ಲಿ ಘಟೋತ್ಕಚನು ಕರ್ಣನ ಬಳಿ ಧಾವಿಸಿದನು.

ರಥದಲ್ಲಿ ಸ್ಥಿರನಾಗಿ ಕುಳಿತಿದ್ದ ಅವನು ಧನುಸ್ಸನ್ನು ಸೆಳೆದು ಬಿಡುತ್ತಿದ್ದಾಗ ಅದರ ಟೇಂಕಾರಶಬ್ಧವು ಸಿಡಿಲಿನ ಶಬ್ಧದಂತೆ ಕೇಳಿಬರುತ್ತಿತ್ತು. ಧನುಸ್ಸಿನ ಆ ಘೋರಶಬ್ಧದಿಂದ ಭಯಗೊಂಡ ಕೌರವ ಸೈನ್ಯಗಳು ಸಮುದ್ರದ ದೊಡ್ಡ ಅಲೆಗಳಂತೆ ಕಂಪಿಸಿದವು. ಆ ವಿಭೀಷಣ ವಿರೂಪಾಕ್ಷನು ತನ್ನ ಮೇಲೆ ಎರಗುತ್ತಿರುವುದನ್ನು ಕಂಡು ಉತ್ಸಾಹಿತ ರಾಧೇಯನು ತ್ವರೆಮಾಡಿ ರಣದಲ್ಲಿ ಅವನನ್ನು ತಡೆದನು. ಮದಿಸಿದ ಸಲಗವನ್ನು ಮತ್ತೊಂದು ಸಲಗವು ಹೇಗೋ ಹಾಗೆ ಮತ್ತು ಹೋರಿಯೊಂದು ಇನ್ನೊಂದು ಹೋರಿಯನ್ನು ಹೇಗೋ ಹಾಗೆ ಕರ್ಣನು ಅವನನ್ನು ಹತ್ತಿರದಿಂದಲೇ ಆಕ್ರಮಣಿಸಿದನು. ಕರ್ಣ-ರಾಕ್ಷಸರ ಆ

ತುಮುಲ ಯುದ್ಧವು ಇಂದ್ರ-ಶಂಬರರ ಯುದ್ಧದಂತಿದ್ದಿತು. ಅವರಿಬ್ಬರೂ ಭಯಂಕರ ಶಬ್ಧಮಾಡುವ ಧನುಸ್ಸುಗಳನ್ನು ಹಿಡಿದು ಮಹಾ ಬಾಣಗಳಿಂದ ಗಾಯಗೊಳಿಸುತ್ತಾ ಮಹಾವೇಗದಲ್ಲಿ ಅನ್ಯೋನ್ಯರನ್ನು ಮುಚ್ಚಿಬಿಟ್ಟರು. ಆಗ ಆಕರ್ಣವಾಗಿ ಸೆಳೆದುಬಿಡುತ್ತಿದ್ದ ಸನ್ನತಪರ್ವ ಶರಗಳಿಂದ ಕಂಚಿನ ಕವಚಗಳನ್ನು ಭೇದಿಸಿ ಅನ್ಯೋನ್ಯರನ್ನು ತಡೆದು ನಿಲ್ಲಿಸಿದರು. ಎರಡು ಸಿಂಹಗಳು ಪಂಜಗಳಿಂದ, ಮಹಾ ಗಜಗಳು ದಂತಗಳಿಂದ ಸೆಣಸಾಡುವಂತೆ ಅವರಿಬ್ಬರು ರಥಶಕ್ತಿಗಳಿಂದ ಮತ್ತು ವಿಶಿಖಗಳಿಂದ ಅನ್ಯೋನ್ಯರನ್ನು ಗಾಯಗೊಳಿಸಿದರು. ಸಾಯಕಗಳನ್ನು ಹೂಡುತ್ತಾ ಶರೀರಗಳನ್ನು ಚಿಂದಿಮಾಡುತ್ತಿದ್ದರು. ಶರವ್ರಾತಗಳಿಂದ ಅನ್ಯೋನ್ಯರನ್ನು ಸುಡುತ್ತಾ ಪ್ರೇಕ್ಷಕರಿಗೆ ದುರ್ಧರ್ಷರಾಗಿ ಕಾಣುತ್ತಿದ್ದರು. ಸರ್ವಾಂಗಗಳೂ ಗಾಯಗೊಂಡು ಅವುಗಳಿಂದ ರಕ್ತವು ಧಾರಾಕಾರವಾಗಿ ಸುರಿಯುತ್ತಿರಲು ಅವರಿಬ್ಬರೂ ಧಾತುಗಳ ಕೆಂಪು ನದಿಗಳು ಹರಿಯುತ್ತಿರುವ ಪರ್ವತಗಳಂತೆ ಬೆಳಗುತ್ತಿದ್ದರು. ಅವರಿಬ್ಬರು ಮಹಾದ್ಯುತಿಗಳು ಪರಸ್ಪರರರನ್ನು ಶರಾಗ್ರಗಳಿಂದ ಗಾಯಗೊಳಿಸುತ್ತಾ ಪ್ರಯತ್ನಿಸುತ್ತಿದ್ದರೂ ಅನ್ಯೋನ್ಯರನ್ನು ಅಲುಗಾಡಿಸಲಾಗಲಿಲ್ಲ. ಪ್ರಾಣಗಳನ್ನೇ ಪಣವನ್ನಾಗಿಟ್ಟು ಯುದ್ಧಮಾಡುತ್ತಿದ್ದ ಕರ್ಣ-ರಾಕ್ಷಸರ ಆ ರಾತ್ರಿಯುದ್ಧವು ಬಹಳ ಸಮಯದವರೆಗೆ ಸಮ-ಸಮವಾಗಿಯೇ

ನಡೆಯುತ್ತಿತ್ತು.

ತೀಕ್ಷ್ಣಬಾಣಗಳನ್ನು ಅನುಸಂಧಾನಮಾಡುತ್ತಾ, ಒಂದಕ್ಕೊಂದು ಅಂಟಿಕೊಂಡಿರುವಂತೆ ಸತತವಾಗಿ ಬಿಡುತ್ತಿದ್ದ ಘಟೋತ್ಕಚನ ಧನುಸ್ಸಿನ ಟೇಂಕಾರ ಶಬ್ಧವನ್ನು ಕೇಳಿ ಕೌರವ ಮತ್ತು ಶತ್ರುಗಳ ಕಡೆಯ ಯೋಧರು ಭಯಗೊಂಡು ತತ್ತರಿಸಿದರು. ಆಗ ಅಸ್ತ್ರವಿದರಲ್ಲಿ ಶ್ರೇಷ್ಠ ಕರ್ಣನು ಅವನನ್ನು ಮೀರಿಸಲು ದಿವ್ಯಾಸ್ತ್ರವನ್ನು ಪ್ರಯೋಗಿಸತೊಡಗಿದನು. ಕರ್ಣನು ದಿವ್ಯಾಸ್ತ್ರವನ್ನು ಬಳಸುವುದನ್ನು ನೋಡಿ ರಾಕ್ಷಸ ಘಟೋತ್ಕಚನು ಮಹಾಮಾಯೆಯನ್ನು ಬಳಸತೊಡಗಿದನು. ಶೂಲಮುದ್ಗರಗಳನ್ನು ಪರ್ವತವೃಕ್ಷಗಳನ್ನು ಕೈಗಳಲ್ಲಿ ಹಿಡಿದ್ದಿದ್ದ ಘೋರರೂಪೀ ರಾಕ್ಷಸರ ಮಹಾ ಸೇನೆಯಿಂದ ಆವೃತನಾದ, ಉಗ್ರ ಕಾಲದಂಡವನ್ನು ಧರಿಸಿದ್ದ ಸಮಸ್ತ ಪ್ರಾಣಿಗಳ ಅಂತಕ ಯಮನಂತೆ ಮಹಾಚಾಪವನ್ನು ಎತ್ತಿ ಹಿಡಿದಿದ್ದ ಅವನನ್ನು ನೋಡಿ ಕೌರವ ರಾಜರು ವ್ಯಥಿತರಾದರು. ಘಟೋತ್ಕಚನು ಮಾಡಿದ ಸಿಂಹನಾದದಿಂಡ ಭಯಗೊಂಡ ಆನೆಗಳು ಮೂತ್ರವಿಸರ್ಜನೆಮಾಡಿದವು. ಮನುಷ್ಯರು ಬಹಳವಾಗಿ ವ್ಯಥಿತರಾದರು. ಆ ಅರ್ಧರಾತ್ರಿಯಲ್ಲಿ ಅಧಿಕಬಲವುಳ್ಳ ರಾಕ್ಷಸ ಸೈನಿಕರು ಅತಿ ಉಗ್ರ ಕಲ್ಲುಗಳ ಮಳೆಯನ್ನು ಎಲ್ಲೆಡೆ ಸುರಿಸಿದರು.

ಕಬ್ಬಿಣದ ಚಕ್ರಗಳೂ, ಭುಶುಂಡಿಗಳೂ, ಶಕ್ತಿ-ತೋಮರಗಳೂ, ಶೂಲ-ಶತಘ್ನೀ-ಪಟ್ಟಿಶಗಳೂ ಅವಿರತವಾಗಿ ಬೀಳುತ್ತಿದ್ದವು. ಆ ಅತಿಉಗ್ರ ರೌದ್ರ ಯುದ್ಧವನ್ನು ನೋಡಿ ನರಾಧಿಪರೂ, ಕೌರವ ಪುತ್ರರೂ, ಯೋಧರೂ ವ್ಯಥಿತರಾಗಿ ಪಲಾಯನಮಾಡಿದರು. ಆದರೆ ಅಲ್ಲಿ ಅಸ್ತ್ರಬಲಶ್ಲಾಘಿ ಮಾನಿನಿ ಕರ್ಣನು ಮಾತ್ರ ವ್ಯಥೆಗೊಳ್ಳಲಿಲ್ಲ. ಶರಗಳಿಂದ ಘಟೋತ್ಕಚನು ನಿರ್ಮಿಸಿದ ಮಾಯೆಯನ್ನು ಧ್ವಂಸಮಾಡಿದನು.

ತನ್ನ ಮಾಯೆಯು ನಷ್ಟವಾದುದನ್ನು ನೋಡಿ ಸಹನೆಮೀರಿದ ಘಟೋತ್ಕಚನು ಘೋರಶರಗಳನ್ನು ಬಿಡಲು ಅವು ಸೂತಪುತ್ರನ ಶರೀರವನ್ನು ಪ್ರವೇಶಿಸಿದವು. ಆ ಶರಗಳು ಕರ್ಣನನ್ನು ಭೇದಿಸಿ ರಕ್ತವನ್ನು ಕುಡಿದು ಸಂಕ್ರುದ್ಧ ಪನ್ನಗಗಳಂತೆ ಭೂಮಿಯನ್ನು ಹೊಕ್ಕವು. ಸೂತಪುತ್ರನಾದರೋ ಸಂಕ್ರುದ್ಧನಾಗಿ ಘಟೋತ್ಕಚನನ್ನು ಅತಿಕ್ರಮಿಸಿ ಹತ್ತು ಶರಗಳಿಂದ ಗಾಯಗೊಳಿಸಿದನು. ಸೂತಪುತ್ರನಿಂದ ಮರ್ಮಗಳಲ್ಲಿ ಗಾಯಗೊಂಡು ತುಂಬಾ ವ್ಯಥಿತನಾದ ಘಟೋತ್ಕಚನು ಸಾವಿರ ಅರೆಗಳುಳ್ಳ ದಿವ್ಯ ಚಕ್ರವನ್ನು ಕೈಗೆತ್ತಿಕೊಂಡನು. ಕ್ರುದ್ಧ ಭೈಮಸೇನಿಯು ಅಧಿರಥಿಯನ್ನು ಕೊಲ್ಲಲೋಸುಗ ತೀಕ್ಷ್ಣ ಅಲಗುಗಳಿಂದ ಕೂಡಿದ್ದ ಬಾಲ ಸೂರ್ಯನಂತೆ ಪ್ರಕಾಶಮಾನ, ಮಣಿರತ್ನಗಳಿಂದ

ವಿಭೂಷಿತ ಚಕ್ರವನ್ನು ಅವನ ರಥದ ಮೇಲೆ ಬೀಸಿ ಎಸೆದನು. ಅಭಾಗ್ಯನ ಸಂಕಲ್ಪಗಳು ವ್ಯರ್ಥವಾಗಿ ಹೋಗುವಂತೆ ಎಸೆಯಲ್ಪಟ್ಟ ಆ ಚಕ್ರವು ಕರ್ಣನ ಸಾಯಕಗಳಿಂದ ಬಹಳ ವೇಗವಾಗಿ ಪ್ರಹರಿಸಲ್ಪಟ್ಟು ಕೆಳಕ್ಕೆ ಬಿದ್ದುಹೋಯಿತು. ತನ್ನ ಚಕ್ರವು ಕೆಳಗುರುಳಿದುದನ್ನು ನೋಡಿ ಸಂಕ್ರುದ್ಧನಾದ ಘಟೋತ್ಕಚನಾದರೋ ರಾಹುವು ಭಾಸ್ಕರನನ್ನು ಹೇಗೋ ಹಾಗೆ ಕರ್ಣನನ್ನು ಬಾಣಗಳಿಂದ ಮುಚ್ಚಿಬಿಟ್ಟನು. ರುದ್ರ-ಉಪೇಂದ್ರರ ಸಮಾನ ವಿಕ್ರಮವುಳ್ಳ ಸೂತಪುತ್ರನಾದರೋ ಗಾಭರಿಗೊಳ್ಳದೇ ತಕ್ಷಣವೇ ಘಟೋತ್ಕಚನ ರಥವನ್ನು ಪತ್ರಿಗಳಿಂದ ಮುಚ್ಚಿಬಿಟ್ಟನು. ಆಗ ಕ್ರುದ್ಧ ಘಟೋತ್ಕಚನಿಂದ ಗರಗರನೆ ತಿರುಗಿಸಿ ಎಸೆಯಲ್ಪಟ್ಟ ಸುವರ್ಣಮಯ ಆಭರಣಗಳಿಂದ ಅಲಂಕೃತ ಗದೆಯೂ ಕೂಡ ಕರ್ಣನಿಂದ ಹೊಡೆಯಲ್ಪಟ್ಟು ಕೆಳಕ್ಕೆ ಬಿದ್ದಿತು.

ಆಗ ಮಹಾಕಾಯನು ಅಂತರಿಕ್ಷಕ್ಕೆ ಹಾರಿ ಕಾಲಮೇಘದಂತೆ ಗುಡುಗುತ್ತಾ ನಭಸ್ತಲದಿಂದ ವೃಕ್ಷಗಳ ಮಳೆಯನ್ನು ಸುರಿಸಿದನು. ಆಗ ದಿವಿಯಲ್ಲಿದ್ದ ಭೀಮಸೇನಸುತ ಮಾಯಾವಿಯನ್ನು ಕರ್ಣನು ಸೂರ್ಯನು ಮೋಡಗಳನ್ನು ತನ್ನ ಕಿರಣಗಳಿಂದ ಭೇದಿಸುವಂತೆ ಮಾರ್ಗಣಗಳಿಂದ ಗಾಯಗೊಳಿಸಿದನು. ಅವನ ಎಲ್ಲ ಕುದುರೆಗಳನ್ನೂ ಸಂಹರಿಸಿ, ರಥವನ್ನು ನೂರು ಚೂರುಗಳನ್ನಾಗಿಸಿ, ಕರ್ಣನು

ಮೋಡಗಳು ಮಳೆಸುರಿಸುವಂತೆ ಬಾಣಗಳ ಮಳೆಯನ್ನು ಸುರಿಸಿದನು. ಘಟೋತ್ಕಚನ ಶರೀರದಲ್ಲಿ ಕರ್ಣನ ಬಾಣಗಳಿಂದ ಗಾಯಗೊಳ್ಳದೇ ಇದ್ದ ಎರಡು ಅಂಗುಲ ಜಾಗವೂ ಇರಲಿಲ್ಲ. ಒಂದೇ ಕ್ಷಣದಲ್ಲಿ ಅವನು ಮುಳ್ಳುಗಳಿಂದ ತುಂಬಿದ ಮುಳ್ಳುಹಂದಿಯಂತೆಯೇ ಕಂಡನು. ಬಾಣಗಳ ಸಮೂಹಗಳಿಂದ ಮುಚ್ಚಿಹೋಗಿದ್ದ ಘಟೋತ್ಕಚನಾಗಲೀ ಅವನ ಕುದುರೆಗಳಾಗಲೀ ರಥವಾಗಲೀ ಧ್ವಜವಾಗಲೀ ಕಾಣುತ್ತಿರಲಿಲ್ಲ. ಅವನಾದರೋ ಕರ್ಣನ ಆ ದಿವ್ಯಾಸ್ತ್ರವನ್ನು ಅಸ್ತ್ರದಿಂದಲೇ ಪ್ರಶಮನಗೊಳಿಸಿದನು. ಆ ಮಾಯಾವಿಯು ಸೂತಪುತ್ರನನ್ನು ಮಾಯಾಯುದ್ಧದಿಂದಲೇ ಎದುರಿಸಿದನು. ಅವನು ಚಳಕದಿಂದಲೂ ಮಾಯೆಯಿಂದಲೂ ಕರ್ಣನೊಡನೆ ಯುದ್ಧಮಾಡುತ್ತಿದ್ದನು. ಇದ್ದಕ್ಕಿದ್ದಂತೆಯೇ ಆಕಾಶದಿಂದ ಬಾಣಗಳ ಜಾಲಗಳು ಕರ್ಣನ ಮೇಲೆ ಬೀಳತೊಡಗಿದವು. ಮಹಾಮಾಯಾವಿ ಭೈಮಸೇನಿಯು ಮಾಯೆಯಿಂದ ಎಲ್ಲರನ್ನೂ ಮೋಹಗೊಳಿಸುವಂತೆ ಮಾಡಿದನು. ಅವನು ವಿರೂಪಮಾಡಿಕೊಂಡು ಅಶುಭ ಮುಖವನ್ನು ಮಾಡಿಕೊಂಡು ಮಾಯೆಯಿಂದ ಸೂತಪುತ್ರನ ದಿವ್ಯಾಸ್ತ್ರಗಳನ್ನು ನುಂಗಿಹಾಕಿದನು. ಪುನಃ ಆ ಮಹಾಕಾಯನು ರಣದಲ್ಲಿ ನೂರಾರು ಚೂರುಗಳಾಗಿ ಸತ್ವವನ್ನು ಕಳೆದುಕೊಂಡು ನಿರುತ್ಸಾಹನಾಗಿ ಆಕಾಶದಿಂದ ಕೆಳಗೆ ಬೀಳತ್ತಿರುವುದು ತೋರಿತು. ಅವನು ಹತನಾದನೆಂದೇ ತಿಳಿದು

ಕುರುಪುಂಗವರು ಜಯಘೋಷಮಾಡಿದರು. ಆದರೆ ಮರುಕ್ಷಣದಲ್ಲಿಯೇ ಪುನಃ ಆ ಮಹಾಕಾಯನು ನೂರು ತಲೆಗಳೊಂದಿಗೆ ನೂರು ಹೊಟ್ಟೆಗಳೊಂದಿಗೆ ಹೊಸದೇಹಗಳಿಂದ ಎಲ್ಲ ದಿಕ್ಕುಗಳಲ್ಲಿ ಕಾಣಿಸಿಕೊಂಡನು.

ಆ ರಾಕ್ಷಸನು ಮೈನಾಕಪರ್ವತದಂತೆ ಮಹಾಕಾಯನಾಗಿಯೂ, ಪುನಃ ಅಂಗುಷ್ಠಮಾತ್ರನಾಗಿಯೂ ಕಾಣುತ್ತಿದ್ದನು. ಸಾಗರದ ಅಲೆಗಳೋಪಾದಿಯಲ್ಲಿ ಮೇಲೆ ಕೆಳಕ್ಕೆ ಹೋಗುತ್ತಾ, ಕೆಲವೊಮ್ಮೆ ವಕ್ರವಾಗಿ ಸಂಚರಿಸುತ್ತಿದ್ದನು. ಅವನು ಭೂಮಿಯನ್ನು ಸೀಳಿಕೊಂಡು ಹೋಗುತ್ತಿದ್ದನು. ಇನ್ನೊಮ್ಮೆ ನೀರಿನಲ್ಲಿ ಮುಳುಗುತ್ತಿದ್ದನು. ಒಮ್ಮಿಂದೊಮ್ಮೆಲೇ ಅದೃಶ್ಯನಾಗಿ ಪುನಃ ಕಾಣಿಸಿಕೊಳ್ಳುತ್ತಿದ್ದನು. ಅವನು ಕೆಳಗಿಳಿದು ಪುನಃ ಹೇಮಪರಿಷ್ಕೃತ ರಥದಲ್ಲಿ ಕುಳಿತುಕೊಳ್ಳುತ್ತಿದ್ದನು. ಕವಚಧಾರಿಯಾದ ಅವನು ತನ್ನ ಮಾಯೆಯಿಂದ ಭೂಮ್ಯಾಕಾಶಗಳನ್ನೂ ದಿಕ್ಕುಗಳನ್ನೂ ಆವರಿಸಿದ್ದನು. ಅನಂತರ ಕರ್ಣನ ರಥದ ಸಮೀಪಕ್ಕೆ ಹೋಗಿ ಆ ಕುಂಡಲಾನನನು ಅಸಂಭ್ರಾಂತನಾಗಿ ಸೂತಪುತ್ರನಿಗೆ ಹೇಳಿದನು:

> “ಸೂತಪುತ್ರ! ನಿಲ್ಲು! ನೀನು ಜೀವಸಹಿತವಾಗಿ ನನ್ನಿಂದ ತಪ್ಪಿಸಿಕೊಂಡು ಹೋಗಲಾರೆ! ಈ ರಣಾಂಗಣದಲ್ಲಿ

ನಿನಗಿರುವ ಯುದ್ಧಶ್ರದ್ಧೆಯನ್ನು ನಾನು ಹೋಗಲಾಡಿಸುತ್ತೇನೆ!”

ಹೀಗೆ ಹೇಳಿ ರೋಷದಿಂದ ಕೆಂಗಣ್ಣನಾಗಿದ್ದ ಆ ಕ್ರೂರಪರಾಕ್ರಮಿ ರಾಕ್ಷಸನು ಅಂತರಿಕ್ಷಕ್ಕೆ ಹಾರಿ ಅಟ್ಟಹಾಸದಿಂದ ನಗುತ್ತಾ ಸಿಂಹವು ಗಜೇಂದ್ರನನ್ನು ಪ್ರಹರಿಸುವಂತೆ ಕರ್ಣನನ್ನು ಪ್ರಹರಿಸತೊಡಗಿದನು. ಮೇಘವು ಜಲಧಾರೆಯಿಂದ ಪರ್ವತವನ್ನು ಮುಚ್ಚುವಂತೆ ರಥದ ಅಚ್ಚುಮರದಷ್ಟು ಗಾತ್ರದ ಬಾಣಗಳ ಮಳೆಯನ್ನು ರಥಶ್ರೇಷ್ಠ ಕರ್ಣನ ಮೇಲೆ ಘಟೋತ್ಕಚನು ಸುರಿಸಿದನು. ಆ ಶರವೃಷ್ಟಿಯನ್ನು ಕರ್ಣನು ದೂರದಿಂದಲೇ ವಿನಾಶಗೊಳಿಸಿದನು. ಕರ್ಣನು ತನ್ನ ಮಾಯೆಯನ್ನು ನಾಶಗೊಳಿಸಿದುದನ್ನು ನೋಡಿ ಘಟೋತ್ಕಚನು ಪುನಃ ಅಂತರ್ಹಿತನಾಗಿ ಮಾಯೆಗಳನ್ನು ಸೃಷ್ಟಿಸಿದನು. ಅವನು ವೃಕ್ಷಗಳ ಸಾಲುಗಳಿಂದಲೂ ಉಚ್ಚ ಶಿಖರಗಳಿಂದಲೂ ಕೂಡಿದ ಗಿರಿಯಾದನು ಮತ್ತು ಅದರಿಂದ ಮಹಾ ಶೂಲ-ಪ್ರಾಸ-ಖಡ್ಗ-ಮುಸಲಗಳನ್ನು ನೀರಿನ ರೂಪದಲ್ಲಿ ಹರಿದುಬರುತ್ತಿದ್ದವು. ಆಯುಧಗಳ ಪ್ರವಾಹವನ್ನು ಹರಿಸುತ್ತಿದ್ದ ಆ ಕಾಡಿಗೆಯಂತೆ ಕಪ್ಪಾಗಿದ್ದ ಪರ್ವತರೂಪವನ್ನು ನೋಡಿ ಕರ್ಣನು ಸ್ವಲ್ಪವೂ ಭ್ರಾಂತನಾಗಲಿಲ್ಲ. ಕರ್ಣನು ನಗುನಗುತ್ತಲೇ ದಿವ್ಯಾಸ್ತ್ರವನ್ನು ಪ್ರಯೋಗಿಸಲು ಆ ಪರ್ವತವು ಅಸ್ತ್ರದಿಂದ ಬಹುದೂರ ಎಸೆಯಲ್ಪಟ್ಟು ನಾಶಗೊಂಡಿತು. ಅನಂತರ ಆ ಉಗ್ರ ಘಟೋತ್ಕಚನು

ಆಕಾಶದಲ್ಲಿ ಕಾಮನಬಿಲ್ಲಿನಿಂದ ಕೂಡಿದ ನೀಲಿಬಣ್ಣದ ಮೇಘವಾಗಿ ಕಲ್ಲಿನ ಮಳೆಗಳಿಂದ ಸೂತಪುತ್ರನನ್ನು ಮುಚ್ಚಿದನು. ಆಗ ಕರ್ಣನು ರೋಷದಿಂದ ವಾಯವ್ಯಾಸ್ತ್ರವನ್ನು ಹೂಡಿ ಆ ಕಾಲಮೇಘವನ್ನು ನಾಶಗೊಳಿಸಿದನು.

ಕರ್ಣನು ಮಾರ್ಗಣಗಣಗಳಿಂದ ಸರ್ವ ದಿಕ್ಕುಗಳನ್ನೂ ತುಂಬಿ ಘಟೋತ್ಕಚನು ಪ್ರಯೋಗಿಸಿದ ಅಸ್ತ್ರವನ್ನು ಧ್ವಂಸಗೊಳಿಸಿದನು. ಆಗ ಸಮರದಲ್ಲಿ ಜೋರಾಗಿ ನಗುತ್ತಾ ಭೈಮಸೇನಿಯು ಕರ್ಣನ ಮೇಲೆ ಮಹಾಮಾಯೆಯನ್ನು ಬಳಸತೊಡಗಿದನು. ಪುನಃ ಸಿಂಹ-ಶಾರ್ದೂಲ ಸಮರಾಗಿದ್ದ, ಮದಿಸಿದ ಆನೆಗಳ ಬಲವುಳ್ಳ, ಆನೆ-ಕುದುರೆ-ರಥಾರೂಡರಾಗಿದ್ದ, ನಾನಾ ಶಸ್ತ್ರಗಳನ್ನು ಹಿಡಿದಿದ್ದ, ನಾನಾಕವಚಭೂಷಣಗಳಿಂದ ಉಗ್ರರಾಗಿ ಕಾಣುತ್ತಿದ್ದ ಅನೇಕ ರಾಕ್ಷಸರಿಂದ ಸುತ್ತುವರೆಯಲ್ಪಟ್ಟು, ಅಸಂಭ್ರಾಂತನಾಗಿ ರಥವನ್ನೇರಿ ಬರುತ್ತಿದ್ದ ಆ ರಥಿಗಳಲ್ಲಿ ಶ್ರೇಷ್ಠ ಘಟೋತ್ಕಚನನ್ನು ಕರ್ಣನು ನೋಡಿದನು. ವಾಸವನು ಮರುತ್ತುಗಳಿಂದ ಹೇಗೋ ಹಾಗೆ ಕ್ರೂರ ರಾಕ್ಷಸರಿಂದ ಸುತ್ತುವರೆಯಲ್ಪಟ್ಟಿದ್ದ ರಾಕ್ಷಸ ಘಟೋತ್ಕಚನನ್ನು ನೋಡಿ ಕರ್ಣನು ಅವನೊಂದಿಗೆ ಯುದ್ಧಮಾಡತೊಡಗಿದನು. ಘಟೋತ್ಕಚನು ಕರ್ಣನನ್ನು ಐದು ಆಶುಗಗಳಿಂದ ಹೊಡೆದು ಸರ್ವಪಾರ್ಥಿವರನ್ನು

ಹೆದರಿಸುವಂತೆ ಭೈರವ ಗರ್ಜನೆ ಮಾಡಿದನು. ಪುನಃ ಅಂಜಲೀಕದಿಂದ ಮಹಾ ಮಾರ್ಗಣಗಣಗಳೊಂದಿಗೆ ಕರ್ಣನ ಕೈಯಲ್ಲಿದ್ದ ಚಾಪವನ್ನು ಘಟೋತ್ಕಚನು ಕತ್ತರಿಸಿದನು. ಕೂಡಲೇ ಕರ್ಣನು ಇನ್ನೊಂದು ದೃಢ, ಮಹಾ ಭಾರವನ್ನು ಸಹಿಸಬಲ್ಲ, ಇಂದ್ರಾಯುಧದಂತೆ ಉದ್ದವಾಗಿದ್ದ ಧನುಸ್ಸನ್ನು ತೆಗೆದುಕೊಂಡು ಬಲವನ್ನುಪಯೋಗಿಸಿ ಸೆಳೆದನು. ಆಗ ಕರ್ಣನು ಸುವರ್ಣಪುಂಖಗಳುಳ್ಳ ಶತ್ರುಗಳನ್ನು ನಾಶಗೊಳಿಸಬಲ್ಲ ಸಾಯಕಗಳನ್ನು ಆಕಾಶದಲ್ಲಿ ಸಂಚರಿಸುತ್ತಿದ್ದ ರಾಕ್ಷಸರ ಮೇಲೆ ಪ್ರಯೋಗಿಸಿದನು. ಆ ಬಾಣಗಳಿಂದ ಪೀಡಿತಗೊಂಡ ಉಬ್ಬಿದ ಎದೆಯುಳ್ಳ ಆ ರಾಕ್ಷಸಗಣಗಳು ಅರಣ್ಯದಲ್ಲಿ ಸಿಂಹದಿಂದ ಪೀಡಿಸಲ್ಪಟ್ಟ ಆನೆಗಳ ಹಿಂಡಿನಂತೆ ಬಹಳವಾಗಿ ವ್ಯಾಕುಲಗೊಂಡವು. ಭಗವಾನ್ ಅಗ್ನಿಯು ಯುಗಕ್ಷಯದಲ್ಲಿ ಪ್ರಾಣಿಗಳನ್ನು ದಹಿಸುವಂತೆ ಕರ್ಣನು ಬಾಣಗಳಿಂದ ಅಶ್ವ-ಸೂತ-ಗಜಗಳೊಡನೆ ರಾಕ್ಷಸರನ್ನು ಮರ್ದಿಸಿ ದಹಿಸಿದನು. ಹಿಂದೆ ದಿವಿಯಲ್ಲಿ ದೇವ ಮಹೇಶ್ವರನು ತ್ರಿಪುರವನ್ನು ಸುಟ್ಟು ಪ್ರಕಾಶಿಸಿದಂತೆ ಸೂತನಂದನನು ಆ ರಾಕ್ಷಸೀ ಸೇನೆಯನ್ನು ಸಂಹರಿಸಿ ಶೋಭಿಸಿದನು.

ರಾಕ್ಷಸೇಂದ್ರ, ಮಹಾಬಲಶಾಲೀ, ಭೀಮನ ವೀರ್ಯಬಲಗಳಿಂದ

ಕೂಡಿದ್ದ, ಕ್ರುದ್ಧ ವೈವಸ್ವತನಂತಿದ್ದ ಘಟೋತ್ಕಚನನ್ನು ಬಿಟ್ಟು ಪಾಂಡವೇಯರ ಸಹಸ್ರ ರಾಜರಲ್ಲಿ ಯಾರೂ ಕರ್ಣನನ್ನು ದಿಟ್ಟಿಸಿ ನೋಡಲು ಶಕ್ಯರಾಗಿರಲಿಲ್ಲ. ದೊಡ್ಡ ಪಂಜುಗಳ ಬೆಂಕಿಯಿಂದ ಉರಿಯುತ್ತಿರುವ ಎಣ್ಣೆಯ ತೊಟ್ಟುಗಳು ಉದುರುತ್ತಿರುವಂತೆ ಕ್ರುದ್ಧ ಘಟೋತ್ಕಚನ ಎರಡೂ ಕಣ್ಣುಗಳಿಂದ ಬೆಂಕಿ ಕೂಡಿದ ಕಣ್ಣೀರು ಉದುರುತ್ತಿತ್ತು. ಆಗ ಕ್ರುದ್ಧ ಘಟೋತ್ಕಚನು ಕೈಯಿಂದ ಕೈಯನ್ನು ಮಸೆಯುತ್ತಾ ಹಲ್ಲುಗಳಿಂದ ಅವಡುಗಚ್ಚುತ್ತಾ ಮಾಯೆಯಿಂದ ನಿರ್ಮಿತ ಗಜಸದೃಶ ಪಿಶಾಚಿಯ ಮುಖದಿಂದ ಕೂಡಿದ ಹೇಸರಗತ್ತೆಗಳನ್ನು ಕಟ್ಟಿದ್ದ ರಥದಲ್ಲಿ ಕುಳಿತು "ಸೂತಪುತ್ರನಲ್ಲಿಗೆ ನನ್ನನ್ನು ಕೊಂಡೊಯ್ಯಿ!" ಎಂದು ಸಾರಥಿಗೆ ಹೇಳಿದನು. ಅವನು ಘೋರರೂಪದ ರಥದಲ್ಲಿ ಕುಳಿತು ಪುನಃ ಸೂತಪುತ್ರನೊಂದಿಗೆ ದ್ವೈರಥ ಯುದ್ಧದಲ್ಲಿ ತೊಡಗಿದನು. ಕ್ರುದ್ಧನಾಗಿದ್ದ ಆ ರಾಕ್ಷಸನು ಪುನಃ ಎಂಟು ಚಕ್ರಗಳುಳ್ಳ, ರುದ್ರನಿರ್ಮಿತ ಮಹಾಘೋರ ವಜ್ರಾಯುಧವನ್ನು ಸೂತಪುತ್ರನ ಮೇಲೆ ಎಸೆದನು. ಕರ್ಣನು ರಥದಲ್ಲಿ ಧನುಸ್ಸನ್ನು ಇಟ್ಟು ರಥದಿಂದ ಜಿಗಿದು ಹಾರಿ ಅದನ್ನು ಕೈಯಲ್ಲಿ ಹಿಡಿದು ರಥದಿಂದ ಕೆಳಗೆ ಧುಮುಕಿದ್ದ ಘಟೋತ್ಕಚನ ಮೇಲೆ ಅದನ್ನೇ ಎಸೆದನು. ಮಹಾಪ್ರಭೆಯುಳ್ಳ ಆ ವಜ್ರಾಯುಧವು ಅಶ್ವ-ಸೂತ-ಧ್ವಜಗಳೊಡನೆ ಘಟೋತ್ಕಚನ ರಥವನ್ನು ಭಸ್ಮಮಾಡಿ ವಸುಧೆಯನ್ನು ಸೀಳಿ ಪ್ರವೇಶಿಸಿತು. ಅದನ್ನು ನೋಡಿ

ಸುರರೂ ವಿಸ್ಮಿತರಾದರು! ದೇವನಿಂದ ಸೃಷ್ಟಿಸಲ್ಪಟ್ಟಿದ್ದ ಆ ಮಹಾ ವಜ್ರವನ್ನು ಅನಾಯಾಸದಿಂದ ಹಾರಿ ಕೈಯಲ್ಲಿ ಹಿಡಿದುದನ್ನು ನೋಡಿ ಕರ್ಣನನ್ನು ಸರ್ವಭೂತಗಳೂ ಪ್ರಶಂಸಿಸಿದವು. ರಣದಲ್ಲಿ ಹೀಗೆ ಮಾಡಿ ಪರಂತಪ ಸೂತಪುತ್ರ ಕರ್ಣನು ಪುನಃ ರಥವನ್ನೇರಿ ನಾರಾಚಗಳನ್ನು ಪ್ರಯೋಗಿಸಿದನು. ಭಯಂಕರವಾಗಿ ತೋರುತ್ತಿದ್ದ ಆ ಸಂಗ್ರಾಮದಲ್ಲಿ ಕರ್ಣನು ಏನನ್ನು ಮಾಡಿದನೋ ಅದನ್ನು ಸರ್ವ ಭೂತಗಳಲ್ಲಿ ಬೇರೆ ಯಾರಿಗೂ ಮಾಡಲು ಅಶಕ್ಯವಾಗಿತ್ತು. ಪರ್ವತವು ಮಳೆಯ ಧಾರೆಗಳಿಂದ ಮುಚ್ಚಿಹೋಗುವಂತೆ ಕರ್ಣನ ನಾರಾಚಗಳಿಂದ ಮುಚ್ಚಲ್ಪಟ್ಟು ಪ್ರಹೃತನಾದ ಘಟೋತ್ಕಚನು ಗಂಧರ್ವ ನಗರಿಯಂತೆ ಪುನಃ ಅಂತರ್ಧಾನನಾದನು. ಹೀಗೆ ಆ ರಿಪುಸೂದನ ಮಯಾಮಾಯಿ ಘಟೋತ್ಕಚನು ಮಾಯೆಯಿಂದ ಮತ್ತು ಹಸ್ತ ಲಾಘವದಿಂದ ಕರ್ಣನ ಆ ದಿವ್ಯಾಸ್ತ್ರಗಳನ್ನು ನಾಶಗೊಳಿಸಿದನು. ಮಾಯೆಯನ್ನು ಆಶ್ರಯಿಸಿ ಆ ರಾಕ್ಷಸನು ತನ್ನ ಅಸ್ತ್ರಗಳನ್ನು ಧ್ವಂಸಮಾಡುತ್ತಿರಲು ಕರ್ಣನು ಸ್ವಲ್ಪವೂ ಭ್ರಾಂತನಾಗದೇ ಅವನೊಡನೇ ಯುದ್ಧಮಾಡುತ್ತಲೇ ಇದ್ದನು.

ಆಗ ಕ್ರುದ್ಧ ಭೈಮಸೇನಿಯು ನರಾಧಿಪರನ್ನು ಭಯಪಡಿಸುತ್ತಾ ತನ್ನನ್ನು ಅನೇಕ ರೂಪಗಳನ್ನಾಗಿ ಪರಿವರ್ತಿಸಿಕೊಂಡನು. ಆಗ ಕರ್ಣನ ಮೇಲೆ ಎಲ್ಲ ಕಡೆಗಳಿಂದ ಸಿಂಹ, ವ್ಯಾಘ್ರ, ಕಿರುಬ, ಅಗ್ನಿರೂಪದ ನಾಲಿಗೆಗಳುಳ್ಳ

ಸರ್ಪಗಳೂ, ಲೋಹಮಯ ಕೊಕ್ಕುಗಳನ್ನು ಹೊಂದಿದ್ದ ಪಕ್ಷಿಗಳೂ ಏಕಕಾಲದಲ್ಲಿ ಬಿದ್ದವು. ಕರ್ಣನ ಚಾಪದಿಂದ ಹೊರಟ ನಿಶಿತ ಶರಗಳಿಂದ ಎರಚಲ್ಪಟ್ಟ ಅವನು ಸರ್ಪ-ಗಿರಿ-ವನಚರರೊಡನೆ ಅಲ್ಲಿಯೇ ಅಂತರ್ಧಾನನಾದನು. ಆಗ ರಾಕ್ಷಸರು, ಪಿಶಾಚಿಗಳು, ಯಾತುಧಾನರು, ನಾಯಿ-ತೋಳಗಳು ಕರ್ಣನನ್ನು ಭಕ್ಷಿಸುವವೋ ಎನ್ನುವಂತೆ ಎಲ್ಲ ಕಡೆಗಳಿಂದ ಓಡಿ ಬಂದವು. ಅವು ಭಯಂಕರ ಗರ್ಜನೆಯೊಡನೆ ಕರ್ಣನನ್ನು ಬೆದರಿಸಲು ಉಪಕ್ರಮಿಸಿದವು. ಆಗ ಕರ್ಣನು ಅನೇಕ ರಕ್ತಸಿಕ್ತ ಘೋರ ಆಯುಧಗಳಿಂದಲೂ ಮತ್ತು ಬಾಣಗಳಿಂದಲೂ ಬಹುಸಂಖ್ಯಾತ ರಾಕ್ಷಸರಲ್ಲಿ ಪ್ರತಿಯೊಬ್ಬನನ್ನೂ ಪ್ರಹರಿಸಿದನು. ಆ ರಾಕ್ಷಸೀ ಮಾಯೆಯನ್ನು ದಿವ್ಯಾಸ್ತ್ರಗಳಿಂದ ನಾಶಗೊಳಿಸಿ ಕರ್ಣನು ಸನ್ನತಪರ್ವ ಶರಗಳಿಂದ ಅವನ ಕುದುರೆಗಳನ್ನು ಸಂಹರಿಸಿದನು. ರಾಕ್ಷಸನು ನೋಡುತ್ತಿದ್ದಂತೆಯೇ ಆ ಕುದುರೆಗಳು ಭಗ್ನವಾಗಿ ಅಂಗಗಳು ಕ್ಷತವಿಕ್ಷತವಾಗಿ, ಪೃಷ್ಟಭಾಗಗಳು ಭಿನ್ನವಾಗಿ ಭೂಮಿಯ ಮೇಲೆ ಬಿದ್ದವು. ಹೀಗೆ ಭಗ್ನನಾದ ಹೈಡಿಂಬನು ವೈಕರ್ತನ ಕರ್ಣನಿಗೆ “ಈಗಲೇ ನಾನು ನಿನಗೆ ಮೃತ್ಯುವನ್ನೀಯುತ್ತೇನೆ!” ಎಂದು ಹೇಳಿ ಅಂತರ್ಧಾನನಾದನು.

## ಅಲಾಯುಧಯುದ್ಧ

ಹೀಗೆ ಅಲ್ಲಿ ಕರ್ಣ ಮತ್ತು ರಾಕ್ಷಸರ ಮಧ್ಯೆ ಯುದ್ಧವು ನಡೆಯುತ್ತಿರುವಾಗ ವೀರ್ಯವಾನ್ ರಾಕ್ಷಸೇಂದ್ರ ಅಲಾಯುಧನು ಆಗಮಿಸಿದನು. ಹಿಂದಿನ ವೈರವನ್ನು ಸ್ಮರಿಸಿಕೊಂಡು ಅವನು ಸಹಸ್ರಾರು ನಾನಾರೂಪಧರ, ವೀರ ವಿರೂಪ ರಾಕ್ಷಸರಿಂದ ಸುತ್ತುವರೆಯಲ್ಪಟ್ಟು ಸುಯೋಧನನ ಬಳಿಗೆ ಬಂದನು. ಬ್ರಾಹ್ಮಣಭಕ್ಷಕ ವಿಕ್ರಾಂತ ಬಕನು ಅಲಾಯುಧನ ಬಂಧುವಾಗಿದ್ದನು. ಹತರಾದ ಮಹಾತೇಜಸ್ವಿ ಕಿರ್ಮೀರ ಹಿಡಿಂಬರೂ ಕೂಡ ಅವನ ಸಖರಾಗಿದ್ದರು. ಬಹಳ ಹಿಂದಿನಿಂದಲೂ ಮನಸ್ಸಿನಲ್ಲಡಗಿದ್ದ ವೈರವನ್ನು ಸ್ಮರಣೆಗೆ ತಂದುಕೊಂಡು ಸೇಡನ್ನು ತೀರಿಸಿಕೊಳ್ಳುವ ಸಲುವಾಗಿ ಅಲಾಯುಧನು ಅಲ್ಲಿಗೆ ಬಂದನು. ಮದಿಸಿದ ಸಲಗದಂತಿದ್ದ ಮತ್ತು ಸಂಕ್ರುದ್ಧ ಸರ್ಪದಂತಿದ್ದ ಆ ಯುದ್ಧಲಾಲಸನು ದುರ್ಯೋಧನನಿಗೆ ಈ ಮಾತನ್ನಾಡಿದನು:

> “ಮಹಾರಾಜ! ಹೇಗೆ ನನ್ನ ಬಾಂಧವ ಹಿಡಿಂಬ, ಬಕ ಮತ್ತು ಕಿರ್ಮೀರ ರಾಕ್ಷಸರು ಭೀಮನಿಂದ ಹತರಾದರೆನ್ನುವುದು ನಿನಗೆ ತಿಳಿದೇ ಇದೆ. ಅಷ್ಟುಮಾತ್ರವಲ್ಲದೇ ಹಿಂದೆ ಅನ್ಯ ನಮ್ಮಂಥಹ ರಾಕ್ಷಸರನ್ನು ಬಿಟ್ಟು ಕನ್ಯೆ ಹಿಡಿಂಬೆಯು ಭೀಮನನ್ನು ವರಿಸಿದಳು! ಅವನ್ನೆಲ್ಲ ಪರಾಮರ್ಶಿಸಿ ವಾಜಿ-

ರಥ-ಕುಂಜರ ಗಣಗಳೊಂದಿಗೆ ಮತ್ತು ಅಮಾತ್ಯರೊಂದಿಗೆ ಹೈಡಿಂಬನನ್ನು ಸಂಹರಿಸಲು ಸ್ವಯಂ ನಾನೇ ಬಂದಿದ್ದೇನೆ. ಇಂದು ವಾಸುದೇವಪ್ರಮುಖರಾದ ಎಲ್ಲ ಕುಂತೀಸುತರನ್ನೂ ಅವರ ಅನುಚರರೊಂದಿಗೆ ಸಂಹರಿಸಿ ಭಕ್ಷಿಸುತ್ತೇನೆ. ಎಲ್ಲ ಸೇನೆಗಳನ್ನೂ ನಿಲ್ಲಿಸು. ನಾವು ಪಾಂಡವರೊಂದಿಗೆ ಹೋರಾಡುತ್ತೇವೆ!”

ಅವನ ಆ ಮಾತನ್ನು ಕೇಳಿ ಸಂತೋಷಗೊಂಡ ದುರ್ಯೋಧನನು ಸಹೋದರರಿಂದ ಸುತ್ತುವರೆಯಲ್ಪಟ್ಟು ಅವನನ್ನು ಅಭಿನಂದಿಸಿ ಈ ಮಾತನ್ನಾಡಿದನು:

“ಸಸೈನ್ಯನಾದ ನಿನ್ನನ್ನು ಮುಂದೆಮಾಡಿಕೊಂಡು ನಾವೂ ಕೂಡ ಶತ್ರುಗಳೊಂದಿಗೆ ಯುದ್ಧಮಾಡುತ್ತೇವೆ. ಏಕೆಂದರೆ ವೈರವನ್ನು ಮುಗಿಸುವ ಸಲುವಾಗಿರುವ ನನ್ನ ಸೈನಿಕರು ಸುಮ್ಮನೆ ಕುಳಿತಿರಲಾರರು!”

ಹಾಗೆಯೇ ಆಗಲೆಂದು ರಾಜನಿಗೆ ಹೇಳಿ ರಾಕ್ಷಸಪುಂಗವನು ತ್ವರೆಮಾಡಿ ಭಯಂಕರ ನರಭಕ್ಷಕರೊಡನೆ ಧಾವಿಸಿದನು. ದೇದೀಪ್ಯಮಾನ ಶರೀರಕಾಂತಿಯಿಂದ ಕೂಡಿದ್ದ ಅಲಾಯುಧನು ಘಟೋತ್ಕಚನಂತೆಯೇ ಆದಿತ್ಯವರ್ಚಸ್ಸಿನ ರಥದಮೇಲೆ ಕುಳಿತಿದ್ದನು. ಅಲಾಯುಧನ ರಥವೂ

ಬಹುತೋರಣಗಳಿಂದ ಅಲಂಕೃತವಾಗಿತ್ತು. ಕರಡಿಯ ಚರ್ಮವನ್ನು ಹೊದಿಸಲಾಗಿತ್ತು. ಅವನ ಮಹಾ ರಥದ ಸುತ್ತಳತೆಯೂ ನಾಲ್ಕು ನೂರು ಮೊಳದಷ್ಟಿದ್ದಿತು. ಅದಕ್ಕೆ ಕಟ್ಟಿದ್ದ ಕುದುರೆಗಳೂ ಕೂಡ ಆನೆಗಳಂತೆ ಮಹಾದೇಹವುಳ್ಳದ್ದಾಗಿದ್ದವು, ಶೀಘ್ರವಾಗಿದ್ದವು ಮತ್ತು ಕತ್ತೆಗಳಂತೆ ಕಿರುಚಿತ್ತಿದ್ದವು. ಕಟ್ಟಿದ್ದ ಅಂತಹ ನೂರು ಮಹಾಕಾಯ ಕುದುರೆಗಳಿಗೆ ರಕ್ತಮಾಂಸಗಳೇ ಭೋಜನವಾಗಿದ್ದವು. ಅವನ ರಥನಿರ್ಘೋಷವೂ ಮಹಾಮೇಘಗಳ ಗರ್ಜನೆಯಂತಿದ್ದಿತು. ಅವನ ಮಹಾಚಾಪವೂ ದೃಢಮೌರ್ವಿಯಿಂದ ಕೂಡಿದ್ದು ಬಲವತ್ತರವಾಗಿದ್ದಿತು. ಅವನ ಬಾಣಗಳು ಕೂಡ ರಥದ ಅಚ್ಚುಮರದಷ್ಟು ದಪ್ಪನಾಗಿದ್ದವು, ರುಕ್ಮಪುಂಖಗಳಾಗಿದ್ದವು. ಶಿಲಾಶಿತಗಳಾಗಿದ್ದವು. ಘಟೋತ್ಕಚನಂತೆ ಅವನೂ ಕೂಡ ಮಹಾಬಾಹು ವೀರನಾಗಿದ್ದನು. ಗುಳ್ಳೆನರಿಗಳ ಸಮೂಹಗಳಿಂದ ರಕ್ಷಿಸಲ್ಪಟ್ಟಿದ್ದ ಅವನ ಧ್ವಜವೂ ಕೂಡ ಜ್ವಲನದಲ್ಲಿ ಸೂರ್ಯನ ಸಮಾನವಾಗಿದ್ದಿತು. ಅವನ ರೂಪವೂ ಸಹ ಘಟೋತ್ಕಚನ ರೂಪದಂತೆ ಅತ್ಯಂತ ಕಾಂತಿಯುಕ್ತವಾಗಿತ್ತು. ಮುಖವು ವ್ಯಾಕುಲಗೊಂಡಿತ್ತು. ಥಳಥಳಿಸುವ ಅಂಗದಗಳನ್ನು ಧರಿಸಿದ್ದ, ಬೆಳಗುತ್ತಿರುವ ಕಿರೀಟ ಮಾಲೆಗಳನ್ನು ಧರಿಸಿದ್ದ, ತಲೆಯ ರುಮಾಲಿನಲ್ಲಿಯೇ ಕತ್ತಿಯನ್ನು ಕಟ್ಟಿಕೊಂಡಿದ್ದ ಅವನು ಗದೆ-ಭುಷಂಡಿ-ಮುಸಲ-ಹಲ-ಬತ್ತಳಿಕೆ ಮತ್ತು ಆನೆಗಳ ಗಾತ್ರದ ಕಲ್ಲುಬಂಡೆಗಳನ್ನು

ಹೊಂದಿದ್ದನು. ಅಗ್ನಿಸಮಾನ ತೇಜಸ್ಸಿನಿಂದ ಬೆಳಗುತ್ತಿದ್ದ ರಥದಲ್ಲಿ ಕುಳಿತು ಅವನು ಪಾಂಡವ ಸೇನೆಯನ್ನು ಓಡಿಸುತ್ತಾ ರಣದಲ್ಲಿ ಸಂಚರಿಸುತ್ತಿರಲು ಅಂತರಿಕ್ಷದಲ್ಲಿ ಮಿಂಚಿನಿಂದ ಕೂಡಿದ ಮೇಘದಂತೆ ಪ್ರಕಾಶಿಸಿದನು. ಆ ಎಲ್ಲ ನರೇಂದ್ರಪ್ರಮುಖರೂ ಪಾಂಡವ ಯೋಧ ವೀರರೂ ಕೂಡ ಮಹಾಬಲದಿಂದ, ಕವಚ-ಗುರಾಣಿಗಳೊಡನೆ ಹರ್ಷಾನ್ವಿತರಾಗಿ ಅವನನ್ನು ಸುತ್ತುವರೆದು ಯುದ್ಧಮಾಡತೊಡಗಿದರು.

ಯುದ್ಧದಲ್ಲಿ ಭೀಮಕರ್ಮಿಯಾದ ಅವನು ಬಂದುದನ್ನು ನೋಡಿ ಕೌರವರಲ್ಲಿ ಮಹಾ ಹರ್ಷವುಂಟಾಯಿತು. ಸಾಗರವನ್ನು ದಾಟಲು ಬಯಸಿದ ದೋಣಿಯಿಲ್ಲದವರಿಗೆ ದೋಣಿಯು ಸಿಕ್ಕಿದರೆ ಹೇಗೋ ಹಾಗೆ ದುರ್ಯೋಧನನೇ ಮೊದಲಾದ ಕೌರವ ಮಕ್ಕಳಿಗೆ ಪರಮ ಸಂತಸವಾಯಿತು. ತಮಗೆ ಪುನರ್ಜನ್ಮವು ಬಂದಿತೆಂದು ತಿಳಿದು ಪಾರ್ಥಿವರು ರಾಕ್ಷಸೇಂದ್ರ ಅಲಾಯುಧನನ್ನು ಸ್ವಾಗತಿಸಿ ಗೌರವಿಸಿದರು. ಕರ್ಣ-ರಾಕ್ಷಸರ ನಡುವೆ ನಡೆಯುತ್ತಿದ್ದ ಆ ಅಮಾನುಷ, ಭಯಂಕರ, ನೋಡಲು ದಾರುಣವಾಗಿದ್ದ ಯುದ್ಧವನ್ನು ರಾಜರೊಂದಿಗೆ ಪಾಂಚಾಲರು ವಿಸ್ಮಯದಿಂದ ನೋಡುತ್ತಿದ್ದರು. ಹಾಗೆಯೇ ಕೌರವರೂ ಕೂಡ, ದ್ರೋಣ-ದ್ರೌಣಿ-ಕೃಪಾದಿಗಳು ಅಲ್ಲಲ್ಲಿಯೇ ಗಾಬರಿಯಿಂದ "ಅವನು ಇನ್ನಿಲ್ಲ!" ಎಂದು ಕೂಗಿಕೊಳ್ಳುತ್ತಿದ್ದರು. ರಣಾಂಗಣದಲ್ಲಿ

ಹೈಡಿಂಬನ ಆ ಕರ್ಮವನ್ನು ನೋಡಿ ಸಂಭ್ರಾಂತರಾಧ ಅವರೆಲ್ಲರೂ ನಿರಾಶೆಯಿಂದ ಉದ್ವಿಗ್ನರಾಗಿದ್ದರು. ಕರ್ಣನು ಜೀವಿತವಾಗಿರುವನೋ ಇಲ್ಲವೋ ಎಂದು ಕೌರವ ಸೇನೆಯು ನಿರಾಶೆಗೊಳ್ಳಲು, ಕರ್ಣನು ಪರಮ ಆರ್ತಸ್ಥಿತಿಯಲ್ಲಿದ್ದುದನ್ನು ಕಂಡು  ದುರ್ಯೋಧನನು ರಾಕ್ಷಸೇಂದ್ರ ಅಲಾಯುಧನನ್ನು ಕರೆದು ಹೇಳಿದನು:

> "ಹೈಡಿಂಬಿಯೊಡನೆ ಯುದ್ಧಮಾಡುತ್ತಿರುವ ಈ ವೈಕರ್ತನ ಕರ್ಣನು ಯುದ್ಧದಲ್ಲಿ ಮಾಡಬೇಕಾಗಿರುವ ಎಲ್ಲ ಮಹಾಕಾರ್ಯಗಳನ್ನೂ ಮಾಡುತ್ತಿದ್ದಾನೆ. ಆದರೆ ಆನೆಯು ಮರಗಳನ್ನು ಕಿತ್ತು ಬಿಸಾಡುವಂತೆ ಭೈಮಸೇನಿಯ ನಾನಾಶಸ್ತ್ರಗಳಿಂದ ಹತರಾಗುತ್ತಿರುವ ಶೂರ ಪಾರ್ಥಿವರನ್ನು ನೋಡು! ಆದುದರಿಂದಲೇ ಈ ರಾಜರ ಮಧ್ಯದಲ್ಲಿ ಸಮರದಲ್ಲಿ ಅವನನ್ನು ನಿನ್ನ ಪಾಲಿಗೆ ನಾನು ಮಾಡಿದ್ದೇನೆ. ನನ್ನ ಅನುಮತಿಯಂತೆ ಈ ಪಾಪಿ ಘಟೋತ್ಕಚನು ಮಾಯಬಲವನ್ನು ಆಶ್ರಯಿಸಿ ವೈಕರ್ತನ ಕರ್ಣನನ್ನು ಸಂಹರಿಸುವ ಮೊದಲೇ, ವಿಕ್ರಮದಿಂದ ಅವನನ್ನು ಸಂಹರಿಸು!"

ರಾಜನು ಹೀಗೆ ಹೇಳಲು, ಹಾಗೆಯೇ ಆಗಲೆಂದು ಹೇಳಿ ಆ

ತೀವ್ರವಿಕ್ರಮಿ ಮಹಾಬಾಹುವು ಘಟೋತ್ಕಚನ ಮೇಲೆರಗಿದನು. ಆಗ ಭೈಮಸೇನಿಯೂ ಕೂಡ ಕರ್ಣನನ್ನು ಬಿಟ್ಟು ಬರುತ್ತಿದ್ದ ಶತ್ರುವನ್ನು ಎದುರಿಸಿ ಮಾರ್ಗಣಗಳಿಂದ ಮರ್ದಿಸತೊಡಗಿದನು. ಆ ಇಬ್ಬರು ಕ್ರುದ್ಧ ರಾಕ್ಷಸೇಂದ್ರರ ನಡುವೆ ಕಾನನದಲ್ಲಿ ಹೆಣ್ಣಾನೆಯ ಸಲುವಾಗಿ ಮದಿಸಿದ ಸಲಗಗಳ ಮಧ್ಯೆ ನಡೆಯುವಂತೆ ಯುದ್ಧವು ನಡೆಯಿತು. ರಾಕ್ಷಸನಿಂದ ವಿಮುಕ್ತನಾದ ರಥಿಗಳಲ್ಲಿ ಶ್ರೇಷ್ಠ ಕರ್ಣನಾದರೋ ಆದಿತ್ಯವರ್ಚಸ ರಥದಿಂದ ಭೀಮಸೇನನನ್ನು ಆಕ್ರಮಣಿಸಿದನು. ಅವನು ಬರುತ್ತಿರುವುದನ್ನು ಅನಾದರಿಸಿ, ಹೋರಿಯನ್ನು ಸಿಂಹವು ಹೇಗೋ ಹಾಗೆ ಸಮರದಲ್ಲಿ ಘಟೋತ್ಕಚನು ಅಲಾಯುಧನಿಂದ ಮುತ್ತಿಗೆಹಾಕಲ್ಪಟ್ಟದುದನ್ನು ನೋಡಿ ಪ್ರಹರಿಗಳಲ್ಲಿ ಶ್ರೇಷ್ಠ ಭೀಮನು ಅಲಾಯುಧನ ರಥದ ಕಡೆಗೆ ಶರೌಘಗಳ ರಾಶಿಯನ್ನು ಸುರಿಸಿದನು. ಅವನು ತನ್ನ ಕಡೆ ಬರುತ್ತಿರುವುದನ್ನು ನೋಡಿ ಅಲಾಯುಧನು ಘಟೋತ್ಕಚನನ್ನು ಬಿಟ್ಟು ಭೀಮಸೇನನನ್ನು ಆಹ್ವಾನಿಸಿದನು. ಆ ರಾಕ್ಷಸಾಂತಕನು ಅವನ ಬಳಿಸಾರಿ ಗಣಗಳೊಂದಿಗೆ ಆ ರಾಕ್ಷಸೇಂದ್ರನನ್ನು ಶರವರ್ಷಗಳಿಂದ ಮುಚ್ಚಿದನು. ಹಾಗೆಯೇ ಅರಿಂದಮ ಅಲಾಯುಧನೂ ಕೂಡ ಶಿಲಾಧೌತ ಜಿಹ್ಮಗಗಳನ್ನು ಕೌಂತೇಯನ ಮೇಲೆ ಪುನಃ ಪುನಃ ಸುರಿಸಿದನು. ಹಾಗೆಯೇ ಜಯೈಷಿ ರಾಕ್ಷಸರೆಲ್ಲರೂ ಭೀಮಸೇನನನ್ನು ಆಕ್ರಮಣಿಸಿ ನಾನಾ ಪ್ರಹಾರಗಳಿಂದ

ಭೀಮನನ್ನು ಎದುರಿಸಿ ಯುದ್ಧ ಮಾಡಿದರು.

ಪ್ರಹರಿಸಲ್ಪಡುತ್ತಿದ್ದ ಬಲಿ ಮಹಾಬಲಿ ಭೀಮಸೇನನು ಅವರೆಲ್ಲರನ್ನೂ ಐದೈದು ಶಿತ ಶರಗಳಿಂದ ಹೊಡೆದನು. ಭೀಮಸೇನನಿಂದ ವಧಿಸಲ್ಪಡುತ್ತಿದ್ದ ಆ ಖರಯೋನಿಯ ರಾಕ್ಷಸರು ತುಮುಲ ಕೂಗನ್ನು ಕೂಗುತ್ತಾ ಹತ್ತು ದಿಕ್ಕುಗಳಲ್ಲಿ ಓಡಿ ಹೋದರು. ಅವರನ್ನು ಪೀಡಿಸುತ್ತಿರುವ ಮಹಾಬಲ ಭೀಮನನ್ನು ನೋಡಿ ರಾಕ್ಷಸ ಅಲಾಯುಧನು ವೇಗದಿಂದ ಶರಗಳನ್ನು ಸುರಿಸುತ್ತಾ ಆಕ್ರಮಣಿಸಿದನು. ಭೀಮಸೇನನು ಅವನನ್ನು ತೀಕ್ಷ್ಣ ಅಗ್ರಭಾಗಗಳುಳ್ಳ ಬಾಣಗಳಿಂದ ಹೊಡೆದನು. ಅಲಾಯುಧನಾದರೋ ಭೀಮನ ಆ ವಿಶಿಖ ಬಾಣಗಳಲ್ಲಿ ಕೆಲವನ್ನು ತುಂಡರಿಸಿದನು. ಇನ್ನು ಕೆಲವನ್ನು ಶೀಘ್ರವಾಗಿ ಕೈಯಿಂದಲೇ ಹಿಡಿದನು. ಆ ರಾಕ್ಷಸೇಂದ್ರನನ್ನು ನೋಡಿ ಭೀಮಪರಾಕ್ರಮಿ ಭೀಮನು ವಜ್ರಪಾತದಂತೆ ವೇಗದಿಂದ ಗದೆಯನ್ನು ಅವನ ಮೇಲೆ ಎಸೆದನು. ಜ್ವಾಲೆಗಳಿಂದ ಸುತ್ತುವರೆದು ವೇಗದಿಂದ ಮೇಲೆ ಬೀಳುತ್ತಿರುವ ಗದೆಯನ್ನು ತನ್ನ ಗದೆಯಿಂದ ಹೊಡೆಯಲು ಅದು ಪುನಃ ಭೀಮನ ಕಡೆಯೇ ರಭಸದಿಂದ ಹೊರಟುಹೋಯಿತು. ಅನಂತರ ರಾಕ್ಷಸೇಂದ್ರನನ್ನು ಕೌಂತೇಯನು ಶರವರ್ಷಗಳಿಂದ ಮುಚ್ಚಿದನು. ಅವುಗಳನ್ನು ಕೂಡ ರಾಕ್ಷಸನು ನಿಶಿತ ಶರಗಳಿಂದ

ನಿರರ್ಥಕಗೊಳಿಸಿದನು. ಭೀಮರೂಪಿ ಆ ರಾಕ್ಷಸ ಸೈನಿಕರೆಲ್ಲರು ಕೂಡ ರಾಕ್ಷಸೇಂದ್ರನ ಶಾಸನದಂತೆ ರಥಕುಂಜರಗಳನ್ನು ಸದೆಬಡಿದರು. ರಾಕ್ಷಸರಿಂದ ಪೀಡಿತ ಪಾಂಚಾರಲು, ಸೃಂಜಯರು, ಕುದುರೆಗಳು ಮತ್ತು ಮಹಾ ಆನೆಗಳಿಗೆ ಅಲ್ಲಿ ಶಾಂತಿಯೆನ್ನುವುದೇ ಇರಲಿಲ್ಲ.

ನಡೆಯುತ್ತಿರುವ ಆ ಮಹಾಘೋರ ಯುದ್ಧವನ್ನು ನೋಡಿ ಪುರುಷಶ್ರೇಷ್ಠ ಕೃಷ್ಣನು ಧನಂಜಯನಿಗೆ ಈ ಮಾತನ್ನಾಡಿದನು.

> “ಮಹಾಬಾಹೋ! ಭೀಮನು ರಾಕ್ಷಸೇಂದ್ರನ ವಶನಾಗಿರುವುದನ್ನು ನೋಡು. ಅವನಿರುವಲ್ಲಿಗೆ ನೀನು ಹೋಗು. ವಿಚಾರಮಾಡಬೇಡ! ಧೃಷ್ಟದ್ಯುಮ್ನ, ಶಿಖಂಡೀ, ಯುಧಾಮನ್ಯು, ಉತ್ತಮೌಜಸರು ಮಹಾರಥ ದ್ರೌಪದೇಯರೊಂದಿಗೆ ಕರ್ಣನನ್ನು ಎದುರಿಸಿ ಹೋಗಲಿ. ನಕುಲ, ಸಹದೇವ, ಮತ್ತು ವೀರ್ಯವಾನ್ ಯುಯುಧಾನರು ನಿನ್ನ ಶಾಸನದಂತೆ ಇತರ ರಾಕ್ಷಸರನ್ನು ಸಂಹರಿಸಲಿ! ಮಹಾ ಭಯವುಂಟಾಗಿರುವ ಈ ಸಮಯದಲ್ಲಿ ನೀನು ದ್ರೋಣನ ನಾಯಕತ್ವದಲ್ಲಿರುವ ಈ ಸೇನೆಯನ್ನು ತಡೆದು ನಿಲ್ಲಿಸು!”

ಕೃಷ್ಣನು ಹೀಗೆ ಹೇಳಲು ಅವನ ಆದೇಶದಂತೆ ಮಹಾರಥರು ರಣದಲ್ಲಿ ಕರ್ಣನ ಬಳಿ ಮತ್ತು ಇತರರು ರಾಕ್ಷಸರ ಕಡೆ ಹೋದರು. ಆಗ

ಪ್ರತಾಪವಾನ್ ರಾಕ್ಷಸೇಂದ್ರನು ಪೂರ್ಣವಾಗಿ ಸೆಳೆದು ಬಿಟ್ಟ ಸರ್ಪಗಳ ವಿಷಕ್ಕೆ ಸಮಾನ ಶರಗಳಿಂದ ಭೀಮನ ಧನುಸ್ಸನ್ನು ಕತ್ತರಿಸಿದನು. ಕಣ್ಣು ಮುಚ್ಚಿ ಬಿಡುವಷ್ಟರಲ್ಲಿಯೇ ಆ ಮಹಾಬಲನು ಹರಿತ ಬಾಣಗಳಿಂದ ರಣದಲ್ಲಿ ಭೀಮಸೇನನ ಕುದುರೆಗಳನ್ನೂ, ಸಾರಥಿಯನ್ನೂ ಸಂಹರಿಸಿದನು. ಹತಾಶ್ವನೂ ಹತಸಾರಥಿಯೂ ಆದ ಭೀಮನು ರಥದಿಂದ ಇಳಿದು ಭಾರ ಘೋರ ಗದೆಯನ್ನು ಅವನ ಮೇಲೆ ಎಸೆದು ಗರ್ಜಿಸಿದನು. ನಿರ್ಘೋಷದೊಂದಿಗೆ ತನ್ನ ಮೇಲೆ ಬೀಳುತ್ತಿದ್ದ ಆ ಮಹಾಗದೆಯನ್ನು ರಾಕ್ಷಸನು ಘೋರ ಗದೆಯಿಂದ ಹೊಡೆದು ಗರ್ಜಿಸಿದನು. ಭಯವನ್ನುಂಟುಮಾಡುವ ರಾಕ್ಷಸೇಂದ್ರನ ಆ ಘೋರ ಕರ್ಮವನ್ನು ನೋಡಿ ಸಂತೋಷಗೊಂಡ ಭೀಮಸೇನನು ಹಿಂದಿರುಗಿದ ತನ್ನ ಗದೆಯನ್ನು ಗ್ರಹಣಮಾಡಿದನು. ಗದೆಗಳ ಪ್ರಹಾರ ಮತ್ತು ಪ್ರತಿಪ್ರಹಾರಗಳಿಂಧ ಭುವನವನ್ನೇ ಕಂಪಿಸುವಂತಿದ್ದ ಆ ನರ-ರಾಕ್ಷಸರ ತುಮುಲಯುದ್ಧವು ಜೋರಾಗಿ ನಡೆಯಿತು. ಅವರಿಬ್ಬರೂ ಗದೆಗಳನ್ನು ತೊರೆದು ಮತ್ತೆ ಅನ್ಯೋನ್ಯರನ್ನು ಸಂಹರಿಸುವ ಸಲುವಾಗಿ ಒಬ್ಬರು ಇನ್ನೊಬ್ಬರನ್ನು ಮುಷ್ಟಿಗಳಿಂದ ಗುದ್ದಿ ಯುದ್ಧಮಾಡತೊಡಗಿದರು. ಅನಂತರ ಆ ಅಮರ್ಷಣರು ರಥಚಕ್ರಗಳಿಂದಲೂ, ನೊಗಗಳಿಂದಲೂ, ಅಚ್ಚುಮರಗಳಿಂದಲೂ, ಪೀಠಗಳಿಂದಲೂ, ಯುದ್ಧೋಪಯೋಗೀ ಸಾಮಗ್ರಿಗಳಿಂದಲು ಮತ್ತು ಸಿಕ್ಕಿದ ವಸ್ತುಗಳಿಂದ ಪರಸ್ಪರರನ್ನು

ಪ್ರಹರಿಸತೊಡಗಿದರು. ಅವರಿಬ್ಬರೂ ರಕ್ತವನ್ನು ಸುರಿಸುತ್ತಾ ಪರಸ್ಪರರನ್ನು ಪುನಃ ಪುನಃ ಸೆಳೆದಾಡುತ್ತಾ ಮದಿಸಿದ ಸಲಗಗಳಂತೆ ಹೋರಾಡಿದರು. ಅದನ್ನು ನೋಡಿದ ಪಾಂಡವರ ಹಿತನಿರತ ಹೃಷೀಕೇಶನು ಭೀಮಸೇನನನ್ನು ರಕ್ಷಿಸುವುದಕ್ಕಾಗಿ ಹೈಡಿಂಬನನ್ನು ಪ್ರಚೋದಿಸಿದನು.

## ಘಟೋತ್ಕಚನಿಂದ ಅಲಾಯುಧನ ವಧೆ

ಹತ್ತಿರದಲ್ಲಿಯೇ ರಾಕ್ಷಸನ ಹಿಡಿತಕ್ಕೆ ಸಿಲುಕಿದ್ದ ಭೀಮನನ್ನು ತೋರಿಸುತ್ತಾ ವಾಸುದೇವನು ಘಟೋತ್ಕಚನಿಗೆ ಈ ಮಾತನ್ನಾಡಿದನು:

> “ಮಹಾಬಾಹೋ! ನೀನೂ ಮತ್ತು ಸರ್ವ ಸೈನ್ಯಗಳೂ ನೋಡುತ್ತಿರುವಂತೆ ಹತ್ತಿರದಲ್ಲಿಯೇ ರಾಕ್ಷಸನ ಹಿಡಿತಕ್ಕೆ ಸಿಲುಕಿರುವ ಭೀಮನನ್ನು ನೋಡು! ನೀನು ಕರ್ಣನನ್ನು ಬಿಟ್ಟು ರಾಕ್ಷಸೇಂದ್ರ ಅಲಾಯುಧನನ್ನು ಬೇಗನೇ ಕೊಲ್ಲು! ಅನಂತರ ಕರ್ಣನನ್ನು ವಧಿಸಬಲ್ಲೆ!”

ವೀರ್ಯವಾನ ಘಟೋತ್ಕಚನು ವಾರ್ಷ್ಣೇಯನ ಮಾತನ್ನು ಕೇಳಿ ಕರ್ಣನನ್ನು ಬಿಟ್ಟು ಬಕನ ಸಹೋದರ ರಾಕ್ಷಸೇಂದ್ರನೊಡನೆ ಯುದ್ಧಮಾಡತೊಡಗಿದನು. ಆ ರಾತ್ರಿ ಆ ಇಬ್ಬರು ರಾಕ್ಷಸರ ನಡುವೆ

ತುಮುಲ ಯುದ್ಧವು ನಡೆಯಿತು. ಭಯಂಕರರಾಗಿ ಕಾಣುತ್ತಿದ್ದ, ಧನುಸ್ಸುಗಳನ್ನು ಕೈಯಲ್ಲಿ ಹಿಡಿದು ವೇಗದಿಂದ ಆಕ್ರಮಣಿಸುತ್ತಿದ್ದ ಅಲಾಯುಧನ ರಾಕ್ಷಸ ಶೂರ ಯೋಧರನ್ನು ಕ್ರುದ್ಧನಾಗಿ ಆಯುಧವನ್ನು ಎತ್ತಿ ಹಿಡಿದಿದ್ದ ಮಹಾರಥ ಯುಯುಧಾನ ಮತ್ತು ನಕುಲ ಸಹದೇವರು ನಿಶಿತ ಶರಗಳಿಂದ ತುಂಡರಿಸಿದರು. ಕಿರೀಟಿ ಬೀಭತ್ಸುವು ಎಲ್ಲ ಕಡೆ ಶರಗಳನ್ನು ಎರಚುತ್ತಾ ಎಲ್ಲ ಕ್ಷತ್ರಿಯರ್ಷಭರನ್ನೂ ಪಲಾಯನಗೊಳಿಸಿದನು. ಕರ್ಣನೂ ಕೂಡ ಧೃಷ್ಟದ್ಯುಮ್ನ, ಶಿಖಂಡಿಗಳೇ ಮೊದಲಾದ ಪಾಂಚಾಲ ಮಹಾರಥರನ್ನೂ ಪಾರ್ಥಿವರನ್ನೂ ಪಲಾಯನಗೊಳಿಸಿದನು. ಅವರು ಹಾಗೆ ವಧಿಸಲ್ಪಡುತ್ತಿರುವುದನ್ನು ನೋಡಿದ ಭೀಮನು ತ್ವರೆಮಾಡಿ ಬಂದು ರಣದಲ್ಲಿ ಕರ್ಣನನ್ನು ವಿಶಿಖಗಳಿಂದ ಮುಚ್ಚಿದನು. ಆಗ ರಾಕ್ಷಸರನ್ನು ಸಂಹರಿಸಿ ನಕುಲ-ಸಹದೇವರೂ, ಸಾತ್ಯಕಿಯೂ ಸೂತಜನಿದ್ದಲ್ಲಿಗೆ ಬಂದರು. ಅವರು ಕರ್ಣನೊಡನೆಯೂ, ಪಾಂಚಾಲರು ದ್ರೋಣನೊಡನೆಯೂ ಯುದ್ಧಮಾಡತೊಡಗಿದರು.

ಸಂಕ್ರುದ್ಧ ಅಲಾಯುಧನಾದರೋ ಅತಿದೊಡ್ಡ ಪರಿಘದಿಂದ ಅರಿಂದಮ ಘಟೋತ್ಕಚನ ನೆತ್ತಿಯ ಮೇಲೆ ಹೊಡೆಯತೊಡಗಿದನು. ಅವನ ಆ ಪ್ರಹಾರದಿಂದ ಭೈಮಸೇನಿಯು ಕ್ಷಣಕಾಲ ಮೂರ್ಚಿತನಾದರೂ ಆ

ವೀರ್ಯವಾನನು ಸ್ವಲ್ಪಹೊತ್ತಿನಲ್ಲಿಯೇ ಚೇತರಿಸಿಕೊಂಡನು. ಆಗ ಪ್ರಜ್ವಲಿಸುತ್ತಿರುವ ಅಗ್ನಿಗೆ ಸಮಾನ ನೂರುಘಂಟೆಗಳಿಂದ ಅಲಂಕೃತ ಕಾಂಚನ ಭೂಷಣ ಗದೆಯನ್ನು ಸಮರದಲ್ಲಿ ಅವನ ಮೇಲೆ ಎಸೆದನು. ಭೀಮಕರ್ಮಿಯಿಂದ ವೇಗವಾಗಿ ಎಸೆಯಲ್ಪಟ್ಟ ಆ ಗದೆಯು ಮಹಾಧ್ವನಿಯೊಂದಿಗೆ ಕುದುರೆಗಳನ್ನೂ, ಸಾರಥಿಯನ್ನೂ ಮತ್ತು ರಥವನ್ನೂ ಪುಡಿಪುಡಿಮಾಡಿತು. ಕುದುರೆ, ರಥಚಕ್ರ, ರಥದ ಅಚ್ಚುಗಳು ಮುರಿದುಹೋಗಲು, ಧ್ವಜ ಮತ್ತು ಮೂಕಿಗಳು ಚೂರು ಚೂರಾಗಿ ಬೀಳಲು ಅಲಾಯುಧನು ರಾಕ್ಷಸೀ ಮಾಯೆಯನ್ನು ಬಳಸಿ ತಕ್ಷಣವೇ ರಥದಿಂದ ಮೇಲೇರಿದನು. ಅವನು ಮಾಯೆಯನ್ನು ಬಳಸಿ ಬಹಳ ರಕ್ತವನ್ನು ಸುರಿಸಿದನು. ಆ ರಾತ್ರಿಯ ಆಕಾಶವು ಮಿಂಚಿನಿಂದ ಬೆಳಗುತ್ತಿತ್ತು. ಆಗ ಗುಡುಗು ಮಿಂಚುಗಳೂ, ಸಿಡಿಲುಗಳೂ ಬಿದ್ದವು. ಆ ಮಹಾಯುದ್ಧದಲ್ಲಿ ಜೋರಾಗಿ ಚಟ ಚಟಾ ಶಬ್ಧವು ಕೇಳಿಬರುತ್ತಿತ್ತು. ರಾಕ್ಷಸನಿಂದ ನಿರ್ಮಿಸಲ್ಪಟ್ಟಿದ್ದ ಆ ರಾಕ್ಷಸೀ ಮಾಯೆಯನ್ನು ನೋಡಿ ಹೈಡಿಂಬನು ಮೇಲೆ ಹಾರಿ ತನ್ನದೇ ಮಾಯೆಯಿಂದ ಆ ಮಾಯೆಯನ್ನು ನಾಶಗೊಳಿಸಿದನು.

ತನ್ನ ಮಾಯೆಯನ್ನು ಮಾಯೆಯಿಂದಲೇ ನಾಶಗೊಳಿಸಿದುದನ್ನು ನೋಡಿ ಮಾಯಾವೀ ಅಲಾಯುಧನು ಘಟೋತ್ಕಚನ ಮೇಲೆ ಕಲ್ಲಿನ ತುಮುಲ

ಮಳೆಯನ್ನು ಸುರಿಸಿದನು. ವೀರ್ಯವಾನ್ ಘಟೋತ್ಕಚನು ಆ ಘೋರ ಕಲ್ಲಿನ ಮಳೆಯನ್ನು ದಿಕ್ಕುಗಳಲ್ಲಿ ಶರವರ್ಷವನ್ನು ಸುರಿಸಿ ವಿಧ್ವಂಸಗೊಳಿಸಿದನು. ಅದೊಂದು ಅದ್ಭುತವಾಗಿತ್ತು. ಆಗ ಅವರಿಬ್ಬರು ಅನ್ಯೋನ್ಯರ ಮೇಲೆ ನಾನಾ ಪ್ರಹರಣಗಳನ್ನು - ಕಬ್ಬಿಣದ ಹಾರೆ, ಪರಿಘ, ಶೂಲ, ಗದೆ, ಮುಸಲ, ಮುದ್ಗರ, ಪಿನಾಕ, ಕರವಾಲ, ತೋಮರ, ಪ್ರಾಸಕಂಪನ, ನಾರಚ, ಹರಿತ ಭಲ್ಲ, ಬಾಣ, ಚಕ್ರ, ಪರಶು, ಅಯೋಗುಡ, ಭಿಂಡಿಪಾಲ, ಗೋಶೀಷ, ಉಲೂಖ, ಉತ್ಪಾಟ ಸುರಿಸುತ್ತಾ, ಮತ್ತು ಮಹಾಶಾಖಗಳಿಂದ ಕೂಡಿದ್ದ ಶಮೀ, ಪೀಲು, ಕದಂಬ, ಸಂಪಿಗೆ, ಇಂಗುದ, ಬದರೀ, ಸುಪುಷ್ಪಿತ ಪಲಾಶ, ಅರಿಮೇದ, ಹಲಸು, ನ್ಯಗ್ರೋದ, ಪಿಪ್ಪಲ ಮೊದಲಾದ ವೃಕ್ಷಗಳಿಂದ ಅನ್ಯೋನ್ಯರನ್ನು ಹೊಡೆದು ಸೆಣೆಸಾಡಿದರು. ನಾನಾವಿಧ ಗರಿಕಾದಿ ಧಾತುಗಳಿಂದ ಸಮಾಕುಲ ಪರ್ವತ ಶಿಖರಗಳನ್ನೇ ಕಿತ್ತು ಪರಸ್ಪರರೊಡನೆ ಯುದ್ಧಮಾಡಿದರು. ಅವುಗಳ ಶಬ್ಧವು ವಜ್ರಗಳನ್ನು ಒಡೆಯುತ್ತಿರುವವರೋ ಎನ್ನುವಂತೆ ಮಹತ್ತರವಾಗಿತ್ತು. ಅವರಿಬ್ಬರ ನಡುವಿನ ಯುದ್ಧವು ಹಿಂದೆ ಕಪೀಂದ್ರ ಸುಗ್ರೀವ-ವಾಲಿಗಳ ನಡುವೆ ನಡೆದಂತೆ ಘೋರವಾಗಿದ್ದಿತು.

ವಿವಿಧ ಘೋರ ಆಯುಧಗಳಿಂದ ಮತ್ತು ವಿಶಿಖಗಳಿಂದ



ಯುದ್ಧಮಾಡುತ್ತಿದ್ದ ಅವರಿಬ್ಬರು ಹರಿತ ಖಡ್ಗಗಳನ್ನು ಹಿಡಿದು ಅನ್ಯೋನ್ಯರನ್ನು ಹೊಡೆಯತೊಡಗಿದರು. ಅವರಿಬ್ಬರು ಮಹಬಲರೂ ಅನ್ಯೋನ್ಯರ ತಲೆಗೂದಲನ್ನು ಹಿಡಿದು ಎಳೆಯುತ್ತಿದ್ದರು, ಅವರಿಬ್ಬರು ಮಹಾಕಾಯ ಮಹಾಬಲರೂ ಭುಜಗಳನ್ನು ಹಿಡಿದು ಸೆಣೆಸಾಡಿದರು. ಜೋರಾಗಿ ಮಳೆಸುರಿಸುವ ಮಹಾ ಮೋಡಗಳಂತೆ ಅ ಇಬ್ಬರು ಮಹಾಕಾಯಗಳಿಂದ ಬೆವರು ಮತ್ತು ರಕ್ತವು ಸುರಿಯುತ್ತಿತ್ತು. ಆಗ ಹೈಡಿಂಬನು ವೇಗದಿಂದ ಆ ರಾಕ್ಷಸನನ್ನು ಜೋರಾಗಿ ತಿರುಗಿಸಿ ಬಲವನ್ನುಪಯೋಗಿಸಿ ಹೊಡೆದು ಅವನ ಮಹಾ ಶಿರವನ್ನು ಕತ್ತರಿಸಿದನು. ಕುಂಡಲಗಳಿಂದ ವಿಭೂಷಿತ ಅವನ ಆ ಶಿರವನ್ನು ತುಂಡರಿಸಿ ಮಹಾಬಲ ಘಟೋತ್ಕಚನು ತುಮುಲ ಕೂಗನ್ನು ಕೂಗಿದನು. ಆ ಮಹಾಕಾಯ, ಬಕನ ದಾಯಾದಿ, ಅರಿಂದಮ ಅಲಾಯುಧನು ಹತನಾದುದನ್ನು ನೋಡಿ ಪಾಂಚಾಲರು ಮತ್ತು ಪಾಂಡವರು ಸಿಂಹನಾದಗೈದು ವಿನೋದಿಸಿದರು. ಆ ರಾಕ್ಷಸನು ಬೀಳಲು ಪಾಂಡವೇಯರು ಸಹಸ್ರಾರು ಭೇರಿಗಳನ್ನೂ, ಶಂಖಗಳನ್ನೂ ಮೊಳಗಿಸಿದರು. ಎಲ್ಲ ಕಡೆಗಳಲ್ಲಿ ದೀಪಗಳ ಸಾಲಿನಿಂದ ಬೆಳಗುತ್ತಿದ್ದ ಆ ರಾತ್ರಿಯು ಪಾಂಡವರ ವಿಜಯದಿಂದ ಇನ್ನೂ ವಿಶೇಷವಾಗಿ ಪ್ರಕಾಶವಾಗಿದ್ದಿತು. ಗತಚೇತನ ಅಲಾಯುಧನ ಆ ಶಿರವನ್ನಾದರೋ ಮಹಾಬಲ ಭೈಮಸೇನಿಯು ದುರ್ಯೋಧನನ ಎದುರು ಎಸೆದನು.

ಅಲಾಯುಧನು ಹತನಾದುದನ್ನು ನೋಡಿ ರಾಜಾ ದುರ್ಯೋಧನನು ಸೈನ್ಯಗಳೊಂದಿಗೆ ಬಹಳ ಉದ್ವಿಗ್ನನಾದನು. ಹಿಂದಿನ ಕಡುವೈರವನ್ನು ಸ್ಮರಿಸಿಕೊಂಡು ಯುದ್ಧದಲ್ಲಿ ನಾನೇ ಭೀಮಸೇನನನ್ನು ಕೊಲ್ಲುತ್ತೇನೆ ಎಂದು ಅಲಾಯುಧನು ಸ್ವಯಂ ತಾನೇ ಬಂದು ಪ್ರತಿಜ್ಞೆ ಮಾಡಿದ್ದನು. ದುರ್ಯೋಧನನು ಭೀಮಸೇನನು ಅಲಾಯುಧನಿಂದ ನಿಶ್ಚಯವಾಗಿಯೂ ಹತನಾಗುತ್ತಾನೆಂದೂ ತಾನು ಮತ್ತು ತನ್ನ ಸಹೋದರರು ಚಿರಕಾಲ ಜೀವಿಸರಬಹುದೆಂದೂ ತಿಳಿದುಕೊಂಡಿದ್ದನು. ಆದರೆ ಭೀಮಸೇನನ ಮಗನಿಂದ ಅಲಾಯುಧನು ಹತನಾದುದನ್ನು ನೋಡಿ ಅವನು ಭೀಮಸೇನನ ಪ್ರತಿಜ್ಞೆಯು ಪೂರ್ಣಗೊಳ್ಳುವುದು ಎಂದು ಅಂದುಕೊಂಡನು.

## ಘಟೋತ್ಕಚವಧೆ

ಅಲಾಯುಧನನ್ನು ಸಂಹರಿಸಿ ಪ್ರಹೃಷ್ಟನಾದ ರಾಕ್ಷಸ ಘಟೋತ್ಕಚನು ವಾಹಿನಿಗಳ ಎದುರು ನಿಂತು ವಿವಿಧ ರೀತಿಗಳಲ್ಲಿ ಗರ್ಜಿಸಿದನು. ಆನೆಗಳನ್ನೂ ನಡುಗಿಸುವ ಅವನ ಆ ತುಮುಲ ಶಬ್ಧವನ್ನು ಕೇಳಿದ ಕೌರವರನ್ನು ಸುದಾರಣ ಭಯವು ಆವರಿಸಿತು. ಮಹಾಬಲ ಭೈಮಸೇನಿಯೊಂದಿಗೆ ಅಲಾಯುಧನು ಹೋರಾಡುತ್ತಿರುವುದನ್ನು ನೋಡಿ ಮಹಾಬಾಹು ಕರ್ಣನು ಪಾಂಚಾಲರನ್ನು ಆಕ್ರಮಣಿಸಿದ್ದನು.

ಸಂಪೂರ್ಣವಾಗಿ ಸೆಳೆದ ಹತ್ತು ಹತ್ತು ದೃಢ ನತಪರ್ವ ಬಾಣಗಳಿಂದ ಅವನು ಧೃಷ್ಟದ್ಯುಮ್ನ-ಶಿಖಂಡಿಗಳನ್ನು ಹೊಡೆದನು. ಅನಂತರ ಪರಮ ನಾರಾಚಗಳಿಂದ ಯುಧಾಮನ್ಯು ಉತ್ತಮೌಜಸರನ್ನೂ ಹೊಡೆದು ಮಾರ್ಗಣಗಳಿಂದ ರಥೋದಾರ ಸಾತ್ಯಕಿಯನ್ನು ನಡುಗಿಸಿದನು. ಅವರುಗಳು ಕೂಡ ಅಲ್ಲಿ ಅವನ ಮೇಲೆ ಎಡ-ಬಲಗಳಲ್ಲಿ ಎಲ್ಲಕಡೆಗಳಿಂದ ಬಿಲ್ಲುಗಳನ್ನು ಮಂಡಲಾಕಾರವಾಗಿ ಸೆಳೆದು ಹೊಡೆಯುತ್ತಿರುವುದು ಕಂಡು ಬರುತ್ತಿತ್ತು. ಅವರ ಟೇಂಕಾರ ನಿರ್ಘೋಷವು ಮತ್ತು ರಥನೇಮಿಗಳ ಶಬ್ಧಗಳು ಆ ರಾತ್ರಿ ಬೇಸಗೆಯ ಕೊನೆಯಲ್ಲಿ ಮೋಡಗಳ ಶಬ್ಧದಂತೆ ಕೇಳಿಬರುತ್ತಿದ್ದವು.

ಟೇಂಕಾರ-ರಥಶಬ್ಧಗಳು ಮೇಘದ ಘರ್ಜನೆಯಂತಿದ್ದವು; ಮಂಡಲಾಕಾರವಾಗಿ ಎಳೆಯಲ್ಪಟ್ಟ ಧನುಸ್ಸುಗಳು ಕಾಮನಬಿಲ್ಲುಗಳಂತಿದ್ದವು; ಬಾಣಗಳ ಸಮೂಹಗಳು ಮಳೆಯಂತೆ ಸುರಿಯುತ್ತಿದ್ದವು; ಆ ಸಂಗ್ರಾಮವು ಹೀಗೆ ಮೇಘದಂತಾಯಿತು. ಪರ್ವತದಂತೆ ಅಚಲನಾಗಿದ್ದ, ಶೈಲದಂತೆ ಶಕ್ತಿವಂತನಾಗಿದ್ದ ಆ ವೈಕರ್ತನನು ರಣದಲ್ಲಿ ಧ್ವಂಸಮಾಡತೊಡಗಿದನು. ಆಗ ವಜ್ರಗಳಂತೆ ಬೀಳುತ್ತಿದ್ದ, ಬಂಗಾರದ ಬಣ್ಣದ ಪುಂಖಗಳುಳ್ಳ ಹರಿತ ಶರಗಳಿಂದ ಸಮರದಲ್ಲಿ ಶತ್ರುಗಳನ್ನು ನಿನ್ನ ಮಗನ ಹಿತದಲ್ಲಿಯೇ ನಿರತನಾಗಿದ್ದ

ವೈಕರ್ತನನು ನಾಶಗೊಳಿಸಿದನು. ವೈಕರ್ತನನ ಕೃತ್ಯದಿಂದಾಗಿ ಕೆಲವರ ಬಾವುಟಗಳು ಹರಿದುಹೋದವು, ಧ್ವಜಗಳು ತುಂಡಾದವು. ಕೆಲವರ ಶರೀರಗಳು ತುಂಡಾಗಿ ನೋವಿನಿಂದ ತೊಳಲಾಡುತ್ತಿದ್ದರು. ಕೆಲವರ ಸಾರಥಿಗಳು ಸತ್ತಿದ್ದರು; ಕೆಲವರ ಕುದುರೆಗಳು ಸತ್ತಿದ್ದವು. ಕಾಡಲ್ಪಡುತ್ತಿದ್ದ ಆ ಪಾಂಚಾಲರ ಸೇನೆಯು ಯುಧಿಷ್ಠಿರನ ಸೇನೆಯನ್ನು ಸೇರಿಕೊಂಡಿತು.

ಅದೂ ಕೂಡ ಭಗ್ನವಾಗಿ ಓಡಿ ಹೋಗುತ್ತಿರುವುದನ್ನು ಕಂಡ ಘಟೋತ್ಕಚನು ಅತೀವ ರೋಷಗೊಂಡನು. ಕಾಂಚನರತ್ನಚಿತ್ರಿತ ಉತ್ತಮ ರಥದಲ್ಲಿ ಕುಳಿತು ಸಿಂಹದಂತೆ ಗರ್ಜಿಸಿದನು ಮತ್ತು ವೈಕರ್ತನ ಕರ್ಣನ ಬಳಿಸಾರಿ ಅವನನ್ನು ವಜ್ರದಂತಿರುವ ಪೃಷತಗಳಿಂದ ಹೊಡೆದನು. ಅವರಿಬ್ಬರೂ ಧಾರಾಕಾರವಾಗಿ ಸುರಿಸುತ್ತಿದ್ದ ಕರ್ಣಿ, ನಾರಾಚ, ಶಿಲೀಮುಖ, ನಾಲೀಕ, ದಂಡ, ವತ್ಸದಂತ, ವರಾಹಕರ್ಣ, ವಿಷಾಣಶೃಂಗ, ಕ್ಷುರಗಳು ಆಕಾಶದಲ್ಲಿ ಪ್ರತಿಧ್ವನಿಗೈಯುತ್ತಿದ್ದವು. ಧಾರಾಕಾರವಾಗಿ ಸುರಿಯುತ್ತಿದ್ದ ಆ ಬಾಣಗಳಿಂದ ಅಂತರಿಕ್ಷವು ತುಂಬಿಹೋಯಿತು. ಆಕಾಶದಲ್ಲಿ ಒಂದಕ್ಕೊಂದು ತಾಗಿ ಉರಿದು ಹಿಂದೆ ಸರಿಯುತ್ತಿದ್ದವು. ಸುವರ್ಣಪುಂಖಗಳು ಪ್ರಭೆಯಿಂದ ಪ್ರಜ್ವಲಿಸಲು ಅವು ಬಣ್ಣ ಬಣ್ಣದ ಹೂವುಗಳ ಮಾಲೆಗಳಂತೆ ತೋರುತ್ತಿದ್ದವು. ಅಪ್ರತಿಮ ಪ್ರಭಾವಗಳಲ್ಲಿ

ಸರಿಸಮನಾಗಿದ್ದ ಅವರು ಉತ್ತಮ ಅಸ್ತ್ರಗಳಿಂದ ಅನ್ಯೋನ್ಯರನ್ನು ಸಂಹರಿಸಲು ಪ್ರಯತ್ನಿಸುತ್ತಿದ್ದರು. ಆ ಸಮರದಲ್ಲಿ ಉತ್ತಮ ವೀರರಾಗಿದ್ದ ಅವರಿಬ್ಬರಲ್ಲಿ ಯಾರೂ ವಿಶೇಷವೆಂದು ತೋರಿಬರಲಿಲ್ಲ. ರವಿ ಮತ್ತು ಭೀಮಸೇನರ ಮಕ್ಕಳೊಂದಿಗೆ ನಡೆಯುತ್ತಿದ್ದ ಆ ಯುದ್ಧವು ಅತೀವ ವಿಚಿತ್ರವಾಗಿದ್ದಿತು, ಅತೀವ ರೂಪವುಳ್ಳದ್ದಾಗಿತ್ತು. ಆಕಾಶದಲ್ಲಿ ಬೀಳುತ್ತಿದ್ದ ಘೋರ ಶಸ್ತ್ರಗಳ ಸಮಾಕುಲಗಳು ಆಕಾಶದಲ್ಲಿ ರಾಹು-ಆದಿತ್ಯರ ಯುದ್ಧದಂತೆ ಬೆಳಗುತ್ತಿದ್ದವು.

ಘಟೋತ್ಕಚನನ್ನು ಅತಿಶಯಿಸಲು ಸಾದ್ಯವಾಗದಾಗ ಕರ್ಣನು ಉಗ್ರ ಅಸ್ತ್ರಗಳನ್ನು ಪ್ರಯೋಗಿಸಲು ಪ್ರಾರಂಭಿಸಿದನು. ಕರ್ಣನ ಆ ಅಸ್ತ್ರದಿಂದ ಕುದುರೆ ಸಾರಥಿಗಳು ಹತರಾಗಲು ರಾಕ್ಷಸ ಹೈಡಿಂಬನು ಕ್ಷಿಪ್ರವಾಗಿ ಅಂತರ್ಧಾನನಾದನು. ರಾಕ್ಷಸನು ಅಂತರ್ಧಾನನಾದುದನ್ನು ತಿಳಿದು ಕುರುಗಳೆಲ್ಲರೂ "ಕೂಟಯೋಧಿ ಈ ರಾಕ್ಷಸನು ಅದೃಶ್ಯನಾಗಿ ಸಮರದಲ್ಲಿ ಕರ್ಣನನ್ನು ಸಂಹರಿಸದೇ ಇರುವನೇ?" ಎಂದು ಜೋರಾಗಿ ಕೂಗಿಕೊಂಡರು. ಆಗ ಲಘು ಚಿತ್ರಾಸ್ತ್ರಯೋಧಿ ಕರ್ಣನು ಬಾಣಜಾಲಗಳಿಂದ ಎಲ್ಲ ದಿಕ್ಕುಗಳನ್ನೂ ತುಂಬಿಸಿದನು. ಸಾಯಕಗಳಿಂದ ಕತ್ತಲೆ ತುಂಬಿದ ಅಂತರಿಕ್ಷದಲ್ಲಿ ಯಾವ ಭೂತಗಳೂ ಸಂಚರಿಸಲಾಗುತ್ತಿರಲಿಲ್ಲ. ಹಸ್ತಲಾಘವದಿಂದ ಸೂತಪುತ್ರನು ಅಂತರಿಕ್ಷವೆಲ್ಲವನ್ನೂ ಬಾಣಗಳಿಂದ ತುಂಬುತ್ತಿರಲು ಅವನು

ಬಾಣಗಳನ್ನು ತೆಗೆಯುವುದಾಗಲೀ, ಅನುಸಂಧಾನ ಮಾಡುವುದಾಗಲೀ, ಕೈಯ ಅಗ್ರಭಾಗದಿಂದ ಶಿಂಜಿನಿಯನ್ನು ಎಳೆಯುವುದಾಗಲೀ ಕಾಣುತ್ತಲೇ ಇರಲಿಲ್ಲ. ಆಗ ನಾವು ಅಂತರಿಕ್ಷದಲ್ಲಿ ರಾಕ್ಷಸನು ನಿರ್ಮಿಸಿದ ಘೋರ, ಭಯಂಕರ, ದಾರುಣ ಮಾಯೆಯನ್ನು – ಅಗ್ನಿಶಿಖೆಯಂತೆ ಉಗ್ರವಾಗಿ ದೇದೀಪ್ಯಮಾನ ಕೆಂಪುಮೋಡಗಳ ಪ್ರಕಾಶವನ್ನು ನೋಡಿದೆವು. ಅನಂತರ ಅದರಿಂದ ಮಿಂಚುಗಳು, ಮತ್ತು ಉರಿಯುತ್ತಿರುವ ಉಲ್ಕೆಗಳು ಹುಟ್ಟಿಕೊಂಡವು. ಅಲ್ಲಿಂದ ಸಹಸ್ರಾರು ದುಂದುಭಿಗಳು ಮೊಳಗುತ್ತಿರುವವೋ ಎನ್ನುವಷ್ಟು ಘೋರ ಅನ್ಯ ಘೋಷಗಳು ಹೊರಸೂಸಿದವು. ಮತ್ತೆ ಅಲ್ಲಿಂದ ರುಕ್ಮಪುಂಖಗಳ ಶಕ್ತಿಗಳು, ಪ್ರಾಸಗಳು, ಮುಸಲಗಳು, ಅನ್ಯ ಆಯುಧಗಳು, ಪರಶು, ತೈಲಧೌತಗಳು, ಖಡ್ಗಗಳು, ಮತ್ತು ಉರಿಯುತ್ತಿರುವ ಪಟ್ಟಿಶ-ತೋಮರಗಳು ಸುರಿದು ಬಿದ್ದವು. ಕಿರಣಗಳನ್ನು ಸೂಸುತ್ತಿದ್ದ ಪರಿಘಗಳು, ಲೋಹದಿಂದ ಬದ್ಧವಾದ ಬಣ್ಣ ಬಣ್ಣದ ಗದೆಗಳು, ಹರಿತವಾಗಿದ್ದ ಶೂಲಗಳು, ಬಂಗಾರದ ಪಟ್ಟಿಗಳನ್ನು ಹೊಂದಿದ್ದ ಭಾರ ಗದೆಗಳು, ಮತ್ತು ಶತಘ್ನಗಳು ಎಲ್ಲೆಡೆಯಿಂದ ಬೀಳತೊಡಗಿದವು. ಅಲ್ಲಲ್ಲಿ ಮಹಾಶಿಲೆಗಳು ಬಿದ್ದವು. ಸಹಸ್ರ ಮಿಂಚು-ಸಿಡುಲುಗಳಂತೆ ಅನೇಕ ನೂರು ಮೊನಗುಗಳುಳ್ಳ ಚಕ್ರಗಳು ಅವುಗಳಿಂದ ಹೊರಬಿದ್ದ ಜ್ವಲನ ಪ್ರಭೆಗಳು ಉದ್ಭವಿಸಿದವು. ಪ್ರಜ್ವಲಿಸುತ್ತಾ ಬೀಳುತ್ತಿದ್ದ ಶಕ್ತಿ,

ಪಾಷಾಣ, ಪರಶು, ಪ್ರಸ, ಖಡ್ಗ, ವಜ್ರಾಶನಿ ಮತ್ತು ಮುದ್ಗರಗಳ ವಿಶಾಲ ವೃಷ್ಟಿಯನ್ನು ನಾಶಗೊಳಿಸಲು ಕರ್ಣನ ಶರೌಘಗಳು ಅಶಕ್ತವಾದವು.

ಶರಗಳಿಂದ ಹತರಾಗಿ ಬೀಳುತ್ತಿರುವ ಕುದುರೆಗಳ, ವಜ್ರಗಳಿಂದ ಹತವಾಗಿ ಬೀಳುತ್ತಿರುವ ಆನೆಗಳ, ಶಿಲೆಗಳಿಂದ ಹತರಾಗಿ ಬೀಳುತ್ತಿರುವ ಮಹಾರಥಗಳ ಮಹಾ ನಿನಾದವುಂಟಾಯಿತು. ಅತ್ಯಂತ ಭಯಂಕರವಾದ ನಾನಾವಿಧದ ಶಸ್ತ್ರಗಳನ್ನು ಬೀಳಿಸಿ ಘಟೋತ್ಕಚನಿಂದ ಹತವಾದ ದುರ್ಯೋಧನನ ಆ ಸೇನೆಯು ಆರ್ತರೂಪದಿಂದ ಓಡುತ್ತಾ ತಿರುಗುತ್ತಿರುವುದು ಕಂಡುಬಂದಿತು. ಹಾಹಾಕಾರಮಾಡುತ್ತಾ ಅಲ್ಲಲ್ಲಿಯೇ ಸುತ್ತುವರಿಯುತ್ತಾ ವಿಷಣ್ಣರೂಪರಾಗಿ ಸಂಲೀಯರಾದ ಆ ಪುರುಷಪ್ರವೀರರು ಆರ್ಯಭಾವದಿಂದ ಪರಾಙ್ಮುಖರಾಗಲಿಲ್ಲ. ರಾಕ್ಷಸನ ಆ ಘೋರತರ ಭಯಂಕರ ಮಹಾಸ್ತ್ರಗಳಿಂದ ತುಂಬಿ ಸುರಿಯುತ್ತಿದ್ದ ವೃಷ್ಟಿಯನ್ನು ನೋಡಿ, ಪತನಗೊಳ್ಳುತ್ತಿದ್ದ ಸೇನೆಗಳನ್ನು ನೋಡಿ ಕೌರವ ಪುತ್ರರನ್ನು ಮಹಾಭಯವು ಆವರಿಸಿತು. ಬೆಂಕಿಯಂತೆ ಉರಿಯುತ್ತಿರುವ ನಾಲಿಗೆಯನ್ನು ಹೊರಚಾಚಿ ಭಯಂಕರವಾಗಿ ಕಿರುಚಿಕೊಳ್ಳುತ್ತಿರುವ ನೂರಾರು ನರಿಗಳನ್ನು ಮತ್ತು ಗರ್ಜಿಸುತ್ತಿದ್ದ ರಾಕ್ಷಸಗಣಗಳನ್ನು ನೋಡಿ ನರೇಂದ್ರಯೋಧರು ವ್ಯಥಿತರಾದರು. ಬೆಂಕಿಯಂತೆ ಉರಿಯುತ್ತಿರುವ ನಾಲಿಗೆಗಳುಳ್ಳ ಮುಖಗಳ, ತೀಕ್ಷ್ಣ

ಹಲ್ಲುಗಳ, ವಿಭೀಷಣವಾಗಿ ತೋರುತ್ತಿರುವ, ಪರ್ವತಗಳಂತಹ ದೇಹವುಳ್ಳ, ಆಕಾಶವನ್ನೇರಿದ, ಶಕ್ತಿ-ವಿಷಕ್ತಗಳನ್ನು ಹಿಡಿದಿದ್ದ ರಾಕ್ಷಸರು ಮೇಘಗಳಂತೆ ಆಯುಧಗಳ ಮಳೆಯನ್ನು ಸುರಿಸುತ್ತಿದ್ದರು. ಅವರು ಅವ್ಯಾಹತವಾಗಿ ಸುರಿಸುತ್ತಿದ್ದ ಬಾಣ, ಶಕ್ತಿ, ಶೂಲ, ಗದೆ, ಪ್ರಜ್ವಲಿಸುತ್ತಿದ್ದ ಉಗ್ರ ಪರಿಘಗಳು, ವಜ್ರ, ಪಿನಾಕ, ವಿದ್ಯುತ್, ಪ್ರಹಾರ, ಚಕ್ರಗಳು, ಶತಘ್ನಗಳು, ಗುದ್ದಲಿ, ಭುಶುಂಡ, ಅಶ್ಮಗುಡ, ಶತಘ್ನ, ಸ್ಥೂಣ, ಕಾರ್ಷ್ಣ, ಉಕ್ಕಿನ ಪಟ್ಟಿಗಳಿಂದ ನಿನ್ನ ಮಗನ ಸೇನೆಯು ಚದುರಿ ಅವರನ್ನು ರೌದ್ರ ಸಂಕಟವು ಆವರಿಸಿತು. ಕೆಳಗೆ ಉದುರುತ್ತಿದ್ದ ಕಲ್ಲುಬಂಡೆಗಳಿಂದಾಗಿ ಅನೇಕ ಶೂರರ ತಲೆಗಳು ಒಡೆದು ಹೋಗಿ, ಅಂಗಾಂಗಗಳು ಮುರಿದು, ಕರುಳುಗಳು ಹೊರಬಂದು ಅಲ್ಲಿ ಉರುಳಿದರು. ಕುದುರೆಗಳು ಆನೆಗಳು ಮುರಿದು ಬಿದ್ದವು. ರಥಗಳು ಪುಡಿಪುಡಿಯಾದವು.

ಹೀಗೆ ಘಟೋತ್ಕಚನ ಮಾಯೆಯಿಂದ ಸೃಷ್ಟಿಸಲ್ಪಟ್ಟ ಮಹಾ ಶಸ್ತ್ರವೃಷ್ಟಿಯನ್ನು ಸುರಿಸುತ್ತಿದ್ದ ಆ ಘೋರರೂಪೀ ಯಾತುಧಾನರು ಭೂಮಿಯ ಮೇಲೆ ಭೀತರಾಗಿ ಯಾಚಿಸುತ್ತಿದ್ದವರನ್ನೂ ಬಿಡಲಿಲ್ಲ. ಕಾಲನಿಂದಲೇ ನಿಯೋಜಿತಗೊಂಡ ಆ ಕುರುವೀರವಿನಾಶಕ ಕ್ಷತ್ರಿಯಾಂತಕ ಘೋರ ಯುದ್ಧದಲ್ಲಿ ಭಗ್ನರಾದ ಎಲ್ಲ ಕೌರವರೂ ಚೀತ್ಕಾರಮಾಡುತ್ತಾ ಓಡಿಹೋದರು. “ಪಲಾಯನಮಾಡಿರಿ! ಕೌರವರು

ಉಳಿಯುವುದಿಲ್ಲ! ಪಾಂಡವರಿಗೋಸ್ಕರವಾಗಿ ಇಂದ್ರನೂಸೇರಿ ದೇವತೆಗಳು ಸಂಹರಿಸುತ್ತಿದ್ದಾರೆ!” ಹೀಗೆ ಧ್ವಂಸಗೊಳಿಸಲ್ಪಡುತ್ತಿದ್ದ ಭಾರತರಿಗೆ ಅಲ್ಲಿ ಯಾವುದೇ ಆಸರೆಯೂ ಇರಲಿಲ್ಲ. ನಡೆಯುತ್ತಿರುವ ಆ ಆಕ್ರಂದನದ ತುಮುಲದಲ್ಲಿ ಕುರುಗಳ ಸೈನ್ಯವು ಮುಳುಗಿಹೋಗಿರಲು, ಕತ್ತಲೆಯಲ್ಲಿ ಸೇನೆಗಳ ಭಾಗಗಳಲ್ಲಿ ಏನಾಗುತ್ತಿದ್ದೆಂದು ಕೌರವರಿಗೂ ಅಥವಾ ಇತರರಿಗೂ ಅರ್ಥವೇ ಆಗುತ್ತಿರಲಿಲ್ಲ.

ಕೊನೆಯಿಲ್ಲದಂತಿದ್ದ ಆ ಘೋರರೂಪ ಯುದ್ಧದಲ್ಲಿ ಎಲ್ಲ ದಿಕ್ಕುಗಳಲ್ಲಿ ಶೂನ್ಯದೃಷ್ಟಿಯನ್ನಿಟ್ಟು ಸೇನೆಗಳು ಓಡಿಹೋಗುತ್ತಿರಲು ಅಲ್ಲಿ ಆ ಶಸ್ತ್ರವೃಷ್ಟಿಯನ್ನು ಎದೆಯಿಟ್ಟು ತಡೆಯುತ್ತಿದ್ದ ಕರ್ಣನೊಬ್ಬನೇ ಕಾಣುತ್ತಿದ್ದನು. ಸೂತಪುತ್ರನು ಆಗ ಬಾಣಗಳಿಂದ ಅಂತರಿಕ್ಷವನ್ನು ಮುಚ್ಚಿ, ರಾಕ್ಷಸನ ದಿವ್ಯ ಮಾಯೆಯೊಡನೆ ಯುದ್ಧಮಾಡಿದನು. ದುಷ್ಕರ ಆರ್ಯಕರ್ಮವನ್ನು ಮಾಡುತ್ತಿದ್ದ ಲಜ್ಜಾಶೀಲ ಸೂತಪುತ್ರನು ರಣದಲ್ಲಿ ಮೋಹಕ್ಕೊಳಗಾಗಲಿಲ್ಲ. ರಾಕ್ಷಸನ ವಿಜಯವನ್ನು ನೋಡಿ ಭಯಗೊಂಡಿದ್ದರೂ ಸೈಂಧವ-ಬಾಹ್ಲೀಕರೆಲ್ಲರೂ ಅಭೀತನಾಗಿದ್ದ ಕರ್ಣನನ್ನು ನೋಡಿ ಅವನನ್ನು ಪ್ರಶಂಸಿಸಿದರು. ಆಗ ಘಟೋತ್ಕಚನು ಬಿಟ್ಟ ಚಕ್ರಯುಕ್ತ ಶತಘ್ನಿಯು ಒಂದೇ ಬಾರಿ ಕರ್ಣನ ನಾಲ್ಕೂ ಕುದುರೆಗಳನ್ನೂ ಸಂಹರಿಸಿತು. ಅವುಗಳು ಅಸುನೀಗಿ ನಾಲಿಗೆ-ಕಣ್ಣು ಮತ್ತು ಹಲ್ಲುಗಳನ್ನು ಹೊರಚಾಚಿ ಕೆಳಗೆ ಬಿದ್ದವು. ಕುದುರೆಗಳು

ಹತಗೊಳ್ಳಲು ರಥದಿಂದ ಕೆಳಗಿಳಿದು ಕುರುಗಳು ಓಡಿಹೋಗುತ್ತಿರುವುದನ್ನೂ ತನ್ನ ದಿವ್ಯ ಅಸ್ತ್ರಗಳು ಮಾಯೆಯಿಂದ ನಾಶವಾಗುತ್ತಿರುವುದನ್ನೂ ನೋಡಿ ಈಗ ತಾನು ಏನು ಮಾಡಬೇಕೆಂದು ಮನಸ್ಸಿನಲ್ಲಿಯೇ ಕರ್ಣನು ಚಿಂತಿಸಿದನು. ಘೋರರೂಪದ ಆ ಮಾಯೆಯನ್ನೂ ಕರ್ಣನನ್ನೂ ನೋಡಿ ಕುರುಗಳೆಲ್ಲರೂ ಒಕ್ಕೊರಳಿನಿಂದ ಹೇಳಿದರು:

> "ಕರ್ಣ! ಬೇಗನೇ ಇಂದು ಶಕ್ತಿಯಿಂದ ರಾಕ್ಷಸನನ್ನು ಸಂಹರಿಸು! ಇವನು ಧಾರ್ತರಾಷ್ಟ್ರರನ್ನು ಉಳಿಸುವುದಿಲ್ಲ! ಭೀಮ-ಪಾರ್ಥರು ಇದಕ್ಕಿಂತಲೂ ಹೆಚ್ಚಿನದನ್ನೇನೂ ಮಾಡಲಾರರು! ಈ ರಾತ್ರಿಯಲ್ಲಿ ಸುಡುತ್ತಿರುವ ರಾಕ್ಷಸನನ್ನು ವಧಿಸು! ಈ ಘೋರರೂಪೀ ಸಂಗ್ರಾಮದಿಂದ ನಮಗೆ ಮುಕ್ತಿಯನ್ನು ನೀಡುವವನೇ ಮುಂದೆ ಸಮರದಲ್ಲಿ ಪಾರ್ಥನೊಂದಿಗೆ ಹೋರಾಡುತ್ತಾನೆ. ಆದುದರಿಂದ ಇಂದ್ರದತ್ತ ಶಕ್ತ್ಯಾಯುಧದಿಂದ ಘೋರರೂಪೀ ರಾಕ್ಶಸನನ್ನು ಕೂಡಲೇ ಸಂಹರಿಸು! ಕರ್ಣ! ಇಂದ್ರಸದೃಶ ಕೌರವರೆಲ್ಲರೂ ತಮ್ಮ ಯೋಧರೊಂದಿಗೆ ಈ ರಾತ್ರಿಯೇ ನಾಶಹೊಂದದಿರಲಿ!"

ಆ ರಾತ್ರಿಯಲ್ಲಿ ವಧಿಸುತ್ತಿರುವ ರಾಕ್ಷಸನನ್ನೂ, ನಾಶಗೊಳ್ಳುತ್ತಿರುವ ಸೇನೆಯನ್ನೂ ನೋಡಿ, ಕೌರವರ ಮಹಾ ನಿನಾದವನ್ನೂ ಕೇಳಿ ಕರ್ಣನು ಶಕ್ತಿಯನ್ನು ಪ್ರಯೋಗಿಸುವ ಮನಸ್ಸು ಮಾಡಿದನು. ರಣದಲ್ಲಿ ಮಾಡುತ್ತಿದ್ದ ಪ್ರತಿಘಾತವನ್ನು ಸಹಿಸಿಕೊಳ್ಳಲಾರದೇ ಸಿಂಹದಂತೆ ಕ್ರುದ್ಧನಾದ ಆ ಅಮರ್ಷಿಯು ಅವನನ್ನು ವಧಿಸಲು ಬಯಸಿ ಶ್ರೇಷ್ಠ ಸಹಿಸಲಸಾಧ್ಯ ವೈಜಯಂತೀ ಶಕ್ತಿಯನ್ನು ತೆಗೆದುಕೊಂಡನು. ವರ್ಷಗಟ್ಟಲೆ ಪೂಜಿಸಿ ಇಟ್ಟುಕೊಂಡಿದ್ದ, ಫಲ್ಗುನನ ವಧೆಗೆಂದು ಮೀಸಲಾಗಿಟ್ಟಿದ್ದ, ಶ್ರೇಷ್ಠ ಕುಂಡಲಗಳ ವಿನಿಮಯದಲ್ಲಿ ಶಕ್ರನು ಸೂತಪುತ್ರನಿಗೆ ಪ್ರದಾನಿಸಿದ್ದ ಆ ಶಕ್ತಿಯನ್ನು ತೆಗೆದುಕೊಂಡನು. ಉರಿಯುತ್ತಿರುವ ನಾಲಿಗೆಗಳುಳ್ಳ, ಅಂತಕನ ಪಾಶದಂತಿದ್ದ, ಕಪ್ಪಾಗಿದ್ದ, ಮೃತ್ಯುವಿನ ತಂಗಿಯಂತಿದ್ದ, ಉಲ್ಕೆಯಂತೆ ಪ್ರಜ್ವಲಿಸುತ್ತಿದ್ದ ಆ ಶಕ್ತಿಯನ್ನು ವೈಕರ್ತನ ಕರ್ಣನು ರಾಕ್ಷಸನಿಗಾಗಿ ಹಿಡಿದನು. ಶತ್ರುಗಳ ಶರೀರಗಳನ್ನು ನಾಶಗೊಳಿಸಬಲ್ಲ ಆ ಉತ್ತಮ ಶಕ್ತಿಯು ಸೌತಿಯ ಬಾಹುವಿನಲ್ಲಿ ಪ್ರಜ್ವಲಿಸುತ್ತಿರುವುದನ್ನು ನೋಡಿ ಭೀತ ರಾಕ್ಷಸನು ತನ್ನನ್ನು ವಿಂಧ್ಯಪರ್ವತದಷ್ಟು ದೊಡ್ಡದನ್ನಾಗಿಸಿಕೊಂಡು ಓಡ ತೊಡಗಿದನು. ಕರ್ಣನ ಬಾಹುಗಳ ಮಧ್ಯೆ ಇದ್ದ ಆ ಶಕ್ತಿಯನ್ನು ನೋಡಿ ಅಂತರಿಕ್ಷದಲ್ಲಿ ತುಮುಲ ಶಬ್ಧವು ಕೇಳಿಬಂದಿತು. ಭಿರುಗಾಳಿ ಬೀಸತೊಡಗಿತು. ಆರ್ಭಟದಿಂದ ಸಿಡಿಲು ಭೂಮಿಗೆ ಬಡಿಯಿತು. ಆ

ಶಕ್ತಿಯು ಮಾಯೆಯನ್ನು ಸುಟ್ಟು ಭಸ್ಮಮಾಡಿ ಪ್ರಜ್ವಲಿಸುತ್ತಾ ರಾಕ್ಷಸನ ಹೃದಯವನ್ನು ಗಾಢವಾಗಿ ಸೀಳಿ ಬೆಳಗುತ್ತಿರುವ ರಾತ್ರಿಯಲ್ಲಿ ಮೇಲಕ್ಕೆ ಹಾರಿ ನಕ್ಷತ್ರಗಳ ಮಧ್ಯೆ ಅಂತರ್ಧಾನವಾಯಿತು. ವಿಚಿತ್ರವಾಗಿ ವಿವಿಧ – ದಿವ್ಯ, ಮಾನುಷ, ಮತ್ತು ರಾಕ್ಷಸ – ಶಸ್ತ್ರಸಮೂಹಗಳೊಂದಿಗೆ ಯುದ್ಧಮಾಡಿ ಆ ವೀರ ಘಟೋತ್ಕಚನು ಶಕ್ರನ ಶಕ್ತಿಗೆ ಸೋತು ವಿವಿಧ ಭೈರವ ನಾದಗೈಯುತ್ತಾ ಪ್ರಾಣವನ್ನು ತೊರೆದನು.

ಸಾಯುವ ಈ ಕ್ಷಣದಲ್ಲಿ ಕೂಡ ಘಟೋತ್ಕಚನು ಶತ್ರುಗಳನ್ನು ಧ್ವಂಸಮಾಡಲೋಸುಗ ಇನ್ನೊಂದು ವಿಚಿತ್ರವೂ ಆಶ್ಚರ್ಯಕರವೂ ಆದ ಕರ್ಮವನ್ನು ಮಾಡಿದನು. ಶಕ್ತಿಯು ಶರೀರವನ್ನು ಭೇದಿಸುವ ಸಮಯದಲ್ಲಿ ಅವನು ಮೇಘ ಪರ್ವತದಂತೆ ದೊಡ್ಡದಾಗಿ ಬೆಳೆದನು. ಆ ಮಹಾರೂಪವನ್ನು ತಳೆದ ರಾಕ್ಷಸೇಂದ್ರ ಘಟೋತ್ಕಚನು ದೇಹವು ತುಂಡಾಗಿ, ತಲೆಕೆಳಗಾಗಿ, ನಾಲಗೆ ಚಾಚಿ  ಅಂತರಿಕ್ಷದಿಂದ ಭೂಮಿಯ ಮೇಲೆ ಬಿದ್ದನು. ಆ ಭೀಮಕರ್ಮಿ ಭೈಮಸೇನಿಯು ತನ್ನ ರೂಪವನ್ನು ಇನ್ನೂ ಭಯಂಕರವಾಗಿ ಮಾಡಿಕೊಂಡು ಕೌರವ ಸೇನೆಯ ಒಂದು ಭಾಗವನ್ನೇ ನಾಶಗೊಳಿಸಿ ಕೌರವರನ್ನು ಭಯಪಡಿಸುತ್ತಾ ಕೆಳಕ್ಕೆ ಬಿದ್ದನು. ಆಗ ಸಿಂಹನಾದಗಳೊಂದಿಗೆ ಭೇರಿ, ಶಂಕ, ಮುರಜ ಮತ್ತು ಅನಕಗಳು ಮೊಳಗಿದವು. ಮಾಯೆಯು ಸುಟ್ಟು ರಾಕ್ಷಸನು ಹತನಾದುದನ್ನು ನೋಡಿ ಕೌರವೇಯರು ಹರ್ಷದಿಂದ ನಿನಾದಗೈದರು.

ಅನಂತರ ಕರ್ಣನು ವೃತ್ರವಧೆಯನಂತರ ಶಕ್ರನು ಮರುದ್ಗಣಗಳಿಂದ ಹೇಗೋ ಹಾಗೆ ಕುರುಗಳಿಂದ ಪ್ರಶಂಸಿಸಲ್ಪಟ್ಟು ನಿನ್ನ ಪುತ್ರನ ರಥವನ್ನೇರಿ ಸಂತೋಷದಿಂದ ತನ್ನ ಸೈನ್ಯವನ್ನು ಸೇರಿದನು.

## ಘಟೋತ್ಕಚನ ವಧೆಯಿಂದ ಕೃಷ್ಣನ ಹರ್ಷ

ಕುಸಿದುಬಿದ್ದಿರುವ ಪರ್ವತದಂತೆ ಹತನಾಗಿ ಬಿದ್ದಿರುವ ಹೈಡಿಂಬನನ್ನು ನೋಡಿ ಪಾಂಡವರೆಲ್ಲರೂ ಕಣ್ಣೀರುತುಂಬಿದವರಾಗಿ ದೀನಮನಸ್ಕರಾದರು. ವಾಸುದೇವನಾದರೋ ಮಹಾ ಹರ್ಷದಿಂದ ಕುಣಿದಾಡಿದನು. ಗೆದ್ದನೋ ಎನ್ನುವಂತೆ ಸಿಂಹನಾದವನ್ನು ಮಾಡಿದನು. ಫಲ್ಗುನನನ್ನು ಬಿಗಿದಪ್ಪಿ ಗಟ್ಟಿಯಾಗಿ ಕೂಗಿದನು. ಇದಲ್ಲದೇ ಅವನು ಕುದುರೆಗಳ ಕಡಿವಾಣಗಳನ್ನೆಳೆದು ನಿಲ್ಲಿಸಿ ಜೋರಾಗಿ ಗರ್ಜಿಸುತ್ತಾ ಚಂಡಮಾರುತದಿಂದ ಬುಡಮೇಲಾದ ವೃಕ್ಷವು ಗಾಳಿಯಲ್ಲಿ ತೂರಿಕೊಂಡು ಓಲಾಡುವಂತೆ ಹರ್ಷೋದ್ವೇಗದಿಂದ ತೂರಾಡಿದನು. ಆಗ ಪುನಃ ಪಾರ್ಥನನ್ನು ಬಿಗಿದಪ್ಪಿ ಜೋರಾಗಿ ಅವನ ಬೆನ್ನು ತಟ್ಟಿದನು. ಅಚ್ಯುತನು ಪುನಃ ರಥವನ್ನೇರಿ ಜೋರಾಗಿ ಗರ್ಜಿಸಿದನು. ಮಹಾಬಲ ವಾಸುದೇವನು ಅತ್ಯಂತ ಸಂತೋಷಗೊಂಡಿದ್ದಾನೆ ಎಂದು ತಿಳಿದ ಅರ್ಜುನನು ಅಸಮಾಧಾನ ಮನಸ್ಕನಾಗಿ ಹೇಳಿದನು:

“ಮಧುಸೂದನ! ಇಂದು ಹೈಡಿಂಬಿಯ ವಧೆಯಿಂದಾಗಿ

ಅತೀವ ಶೋಕಸ್ಥಾನದಲ್ಲಿರಬೇಕಾಗಿದ್ದ ನೀನು ಈ ರೀತಿ ಅತೀವ ಹರ್ಷಿತನಾಗಿರುವುದು ಸಮಯೋಚಿತವಾಗಿಲ್ಲ. ಘಟೋತ್ಕಚನು ಹತನಾದುದನ್ನು ಕಂಡು ನಮ್ಮ ಸೇನೆಗಳು ಪಲಾಯನಮಾಡುತ್ತಿದ್ದಾರೆ. ಹೈಡಿಂಬಿಯ ಪತನದಿಂದಾಗಿ ನಾವೂ ಕೂಡ ಅತ್ಯಂತ ದುಃಖಿತರಾಗಿದ್ದೇವೆ. ಆದರೆ ಜನಾರ್ದನ! ನೀನು ಹೀಗೆ ಸಂತೋಷಪಡುತ್ತಿರುವುದಕ್ಕೆ ಅತ್ಯಲ್ಪ ಕಾರಣವು ಇದ್ದಿರಲಾರದು. ಕೇಳುತ್ತಿರುವ ನನಗೆ ಸತ್ಯವನ್ನು ವಿವರಿಸು. ಇದು ಅತಿ ರಹಸ್ಯವಲ್ಲದಿದ್ದರೆ ನನಗೆ ಹೇಳು. ಇಂದು ನಿನ್ನ ಧೈರ್ಯದ ವಿಕಾರ ರೂಪಕ್ಕೆ ಕಾರಣವೇನೆಂದು ಹೇಳು! ಸಮುದ್ರವು ಬತ್ತಿಹೋದರೆ ಅಥವಾ ಮೇರು ಪರ್ವತವು ಸರಿದರೆ ಎಷ್ಟು ಆಶ್ಚರ್ಯವಾಗುವುದೋ ಅಷ್ಟೇ ಆಶ್ಚರ್ಯವು ನಿನ್ನ ಈ ಕೃತ್ಯವನ್ನು ಕಂಡು ನನಗಾಗುತ್ತಿದೆ!”

ವಾಸುದೇವನು ಹೇಳಿದನು:

“ಧನಂಜಯ! ನನಗೆ ಅತ್ಯಂತ ಹರ್ಷವುಂಟಾಗಿರುವುದು ಏಕೆನ್ನುವುದನ್ನು ನೀನು ಕೇಳು. ಸದ್ಯ ನನ್ನ ಮನಸ್ಸಿಗೆ ಉತ್ತಮ ಅತೀವ ಸಮಾಧಾನವುಂಟಾಗಿದೆ. ಘಟೋತ್ಕಚನ ಮೇಲೆ ಈ

ಶಕ್ತಿಯನ್ನು ಪ್ರಯೋಗಿಸಿದ ಕರ್ಣನು ಹತನಾದನೆಂದೇ ಸದ್ಯ ನೀನು ಭಾವಿಸಬಹುದು. ಕಾರ್ತಿಕೇಯನಿಗೆ ಸಮಾನನಾಗಿ ಶಕ್ತಿಯನ್ನು ಕೈಯಲ್ಲಿ ಹಿಡಿದು ಯುದ್ಧಕ್ಕೆ ಬರುವ ಕರ್ಣನನ್ನು ಎದುರಿಸಿ ನಿಲ್ಲುವ ಪುರುಷನು ಈ ಲೋಕದಲ್ಲಿ ಯಾವನಿದ್ದಾನೆ? ಒಳ್ಳೆಯದಾಯಿತು ಅವನು ಕವಚವನ್ನು ಕಳೆದುಕೊಂಡನು. ಒಳ್ಳೆಯದಾಯಿತು ಅವನು ಕುಂಡಲಗಳನ್ನು ಕಳೆದುಕೊಂಡನು. ಒಳ್ಳೆಯದಾಯಿತು ಅವನು ಘಟೋತ್ಕಚನ ಮೇಲೆ ಪ್ರಯೋಗಿಸಿ ತನ್ನ ಶಕ್ತಿಯನ್ನೂ ವಿರಸನಗೊಳಿಸಿಕೊಂಡನು. ಒಂದು ವೇಳೆ ಅವನು ಕವಚ ಮತ್ತು ಕುಂಡಲಗಳ ಸಹಿತನಾಗಿಯೇ ಇದ್ದಿದ್ದರೆ ದೇವತೆಗಳೊಂದಿಗೆ ಮೂರು ಲೋಕಗಳನ್ನೂ ಬಲಶಾಲಿ ಕರ್ಣನು ಜಯಿಸುತ್ತಿದ್ದನು. ವಾಸವನಾಗಲೀ, ಕುಬೇರನಾಗಲೀ, ಜಲೇಶ್ವರ ವರುಣನಾಗಲೀ, ಯಮನಾಗಲೀ ಅಂತಹ ಕರ್ಣನನ್ನು ರಣದಲ್ಲಿ ಎದುರಿಸಲು ಶಕ್ತರಾಗುತ್ತಿರಲಿಲ್ಲ. ಅವುಗಳಿಂದ ಯುಕ್ತನಾಗಿದ್ದ ಆ ನರರ್ಷಭನನ್ನು ಗಾಂಡಿವವನ್ನು ಧರಿಸಿದ ನೀನಾದರೋ ಅಥವಾ ಸುದರ್ಶನ ಚಕ್ರವನ್ನು ಹಿಡಿದ ನಾನಾದರೋ ರಣದಲ್ಲಿ ಜಯಿಸಲು ಶಕ್ತರಾಗಿದ್ದಿರಲಿಲ್ಲ. ನಿನ್ನ ಹಿತಕ್ಕಾಗಿಯೇ

ಪರಪುರಂಜಯ ಶಕ್ರನು ಮಾಯೆಯಿಂದ ಅವನ ಕವಚಗಳನ್ನು ಅಪಹರಿಸಿದನು. ಕರ್ಣನು ಕವಚವನ್ನೂ ಶುಭ್ರ ಕುಂಡಲಗಳನ್ನೂ ಕತ್ತರಿಸಿ ತೆಗೆದು ಇಂದ್ರನಿಗೆ ಕೊಟ್ಟಿದುದರಿಂದಲೇ ವೈಕರ್ತನನೆನಿಸಿಕೊಂಡನು. ಕೋಪಗೊಂಡ ವಿಷಸರ್ಪವು ಮಂತ್ರತೇಜಸ್ಸಿನಿಂದ ಸ್ತಬ್ಧವಾಗುವಂತೆ, ಜ್ವಾಲೆಗಳು ಆರಿಹೋದ ಅಗ್ನಿಯಂತೆ ಇಂದು ಕರ್ಣನು ನಿಸ್ತೇಜನಾಗಿ ಕಾಣುತ್ತಿದ್ದಾನೆ.

ಎಂದಿನಿಂದ ದಿವ್ಯ ಕುಂಡಲ ಮತ್ತು ಕವಚಗಳ ವಿನಿಮಯವಾಗಿ ಘಟೋತ್ಕಚನ ಮೇಲೆ ಪ್ರಯೋಗಿಸಿದ ಈ ಶಕ್ತಿಯನ್ನು ಮಹಾತ್ಮ ವಾಸವನಿಂದ ಪಡೆದನೋ ಅಂದಿನಿಂದ ಸತತವಾಗಿ ನೀನು ರಣದಲ್ಲಿ ಹತನಾದಂತೆಯೇ ಎಂದು ಕರ್ಣನು ಯೋಚಿಸುತ್ತಿದ್ದನು. ಹೀಗೆ ಆ ಶಕ್ತಿಯನ್ನು ಕಳೆದುಕೊಂಡರೂ ನಿನ್ನನ್ನು ಬಿಟ್ಟು ಬೇರೆ ಯಾರೂ ಅವನನ್ನು ಸಂಹರಿಸಲು ಶಕ್ಯರಲ್ಲ. ಸತ್ಯದ ಮೇಲೆ ಆಣೆಯಿಟ್ಟು ಹೇಳುತ್ತಿದ್ದೇನೆ. ಬ್ರಹ್ಮಣ್ಯನೂ, ಸತ್ಯವಾದಿಯೂ, ತಪಸ್ವಿಯೂ, ನಿಯತವ್ರತನೂ, ಶತ್ರುಗಳ ಮೇಲೂ ದಯಾವಂತನಾದ ಕರ್ಣನು ವೃಷ (ಧರ್ಮಾತ್ಮ) ಎಂದೂ ಪ್ರಸಿದ್ಧನಾಗಿದ್ದಾನೆ.

ಅವನು ಯುದ್ಧಕುಶಲನು. ನಿತ್ಯವೂ ಧನುಸ್ಸನ್ನು ಮೇಲಿತ್ತಿಕೊಂಡೇ ಇರತಕ್ಕವನು. ವನದಲ್ಲಿರುವ ಸಿಂಹದಂತೆ ಗರ್ಜಿಸುತ್ತಾನೆ. ಮದಿಸಿದ ಸಲಗವು ತನ್ನ ಹಿಂಡನ್ನು ಮದರಹಿತವನ್ನಾಗಿಸುವಂತೆ ಕರ್ಣನು ರಣದಲ್ಲಿ ರಥಶಾರ್ದೂಲರನ್ನು ಮದರಹಿತರನ್ನಾಗಿಸುತ್ತಾನೆ. ನಡುನೆತ್ತಿಯ ಸೂರ್ಯನನ್ನು ನಿರೀಕ್ಷಿಸಲು ಹೇಗೆ ಶಕ್ಯವಾಗುವುದಿಲ್ಲವೋ ಹಾಗೆ ಶರತ್ಕಾಲದ ಅಂತ್ಯದಲ್ಲಿ ದಿವಾಕರನ ಸಹಸ್ರ ಕಿರಣಗಳಂತೆ ರಣದಲ್ಲಿ ಶರಜಾಲಗಳನ್ನು ಪ್ರಯೋಗಿಸುವ ಕರ್ಣನನ್ನು ನಿನ್ನ ಕಡೆಯ ಮಹಾತ್ಮ ಯೋಧಮುಖ್ಯರು ನಿರೀಕ್ಷಿಸಲು ಶಕ್ಯರಾಗಿಲ್ಲ. ಬೇಸಗೆಯ ಕೊನೆಯಲ್ಲಿ ಮೋಡಗಳು ಮಳೆಗರೆಯುವಂತೆ ಬಾಣಗಳ ಮಳೆಯನ್ನು ಮತ್ತೆ ಮತ್ತೆ ಸುರಿಸುವ, ಮೋಡಗಳಂತೆ ದಿವ್ಯ ಅಸ್ತ್ರಗಳ ಮಳೆಯನ್ನು ಸುರಿಸುವ ಮೋಡರೂಪೀ ಕರ್ಣನು ಇಂದು ಶಕ್ರನಿಂದ ಪಡೆದ ಶಕ್ತಿಯನ್ನು ಕಳೆದುಕೊಂಡು ಕೇವಲ ಮನುಷ್ಯತ್ವವನ್ನು ಉಳಿಸಿಕೊಂಡಿದ್ದಾನೆ.

ಇವನನ್ನು ವಧಿಸಲು ಒಂದೇ ಒಂದು ಅವಕಾಶವಿದೆ. ಇವನು ಅಪ್ರಮತ್ತನಾಗಿರುವ ಅವಕಾಶವನ್ನು ಬಳಸಿ

ಪ್ರಮತ್ತನಾಗಿದ್ದುಕೊಂಡು ಈ ಕೆಲಸವನ್ನು ಮಾಡಬೇಕು. ರಥಚಕ್ರವು ಹುಗಿದುಹೋಗಿ ಕಷ್ಟದಲ್ಲಿರುವಾಗ, ಮೊದಲೇ ನಾನು ನೀಡುವ ಸೂಚನೆಯನ್ನು ಗಮನಿಸಿ, ನೀನು ಇವನನ್ನು ಸಂಹರಿಸಬೇಕು. ಜರಾಸಂಧ, ಚೇದಿರಾಜ, ಏಕಲವ್ಯ ಒಬ್ಬೊಬ್ಬರಾಗಿ ಈ ಎಲ್ಲರನ್ನೂ ಒಂದೊಂದು ಸಮಯದಲ್ಲಿ ಒಂದೊಂದು ಉಪಾಯವನ್ನು ಪ್ರಯೋಗಿಸಿ, ನಿನಗೋಸ್ಕರವಾಗಿ ನಾನೇ ಸಂಹರಿಸಿದ್ದೇನೆ. ಇನ್ನು ಹಿಡಿಂಬ, ಕಿರ್ಮೀರ, ಬಕರೇ ಮೊದಲಾದ ರಾಕ್ಷಸೇಂದ್ರರು ಅಲಾಯುಧ, ಮತ್ತು ಘಟೋತ್ಕಚರೂ ಕೂಡ ಬೇರೆ ಬೇರೆ ಉಪಾಯಗಳಿಂದ ಪ್ರತ್ಯೇಕ ಸಮಯಗಳಲ್ಲಿ ಹತರಾಗಿದ್ದಾರೆ.”

ಅರ್ಜುನನು ಹೇಳಿದನು:

“ಜನಾರ್ದನ! ನಮಗಾಗಿ ನೀನು ಜರಾಸಂಧನೇ ಮೊದಲಾದ ಪೃಥಿವೀಪಾಲರನ್ನು ಯಾವ ಯಾವ ಉಪಾಯಗಳಿಂದ ಸಂಹರಿಸಿದೆ?”

ವಾಸುದೇವನು ಹೇಳಿದನು:

“ಒಂದುವೇಳೆ ಈ ಮೊದಲೇ ಜರಾಸಂಧ, ಚೇದಿರಾಜ ಮತ್ತು

ನೈಷಾದರು ಹತರಾಗಿರದಿದ್ದರೆ ಈಗ ಅವರು ನಮಗೆ ಅತಿ ಭಯಂಕರರಾಗಿರುತ್ತಿದ್ದರು. ಅವಶ್ಯವಾಗಿ ಸುಯೋಧನನು ಆ ರಥಸತ್ತಮರನ್ನು ತನ್ನ ಕಡೆಯವರನ್ನಾಗಿಯೇ ಆರಿಸಿಕೊಳ್ಳುತ್ತಿದ್ದನು. ನಮಗೆ ನಿತ್ಯವೈರಿಗಳಾಗಿದ್ದ ಅವರೂ ಕೂಡ ಕೌರವರನ್ನೇ ಸೇರಿಕೊಳ್ಳುತ್ತಿದ್ದರು. ಆ ಕೃತಾಸ್ತ್ರ, ಧೃಢಯೋಧಿ ಮಹಾತ್ಮರು ಅಮರರಂತೆ ಧಾರ್ತರಾಷ್ಟ್ರರ ಈ ಸೇನೆಯೆಲ್ಲವನ್ನೂ ರಕ್ಷಿಸುತ್ತಿದ್ದರು. ಸೂತಪುತ್ರ, ಜರಾಸಂಧ, ಚೇದಿರಾಜ ಮತ್ತು ನಿಷಾದಜರು ಸುಯೋಧನನನ್ನು ಸಮಾಶ್ರಯಿಸಿ ಈ ಪೃಥ್ವಿಯೆಲ್ಲವನ್ನೂ ಕಾಡುತ್ತಿದ್ದರು. ಉಪಾಯಗಳಿಂದಲ್ಲದೇ ದೇವತೆಗಳಿಂದಲೂ ರಣದಲ್ಲಿ ಜಯಿಸಲ್ಪಡತಕ್ಕವರಾಗಿರದ ಅವರು ನನ್ನ ಯಾವ ಯಾವ ಉಪಾಯಗಳಿಂದ ಹತರಾದರೆನ್ನುವುದನ್ನು ಕೇಳು. ಅವರಲ್ಲಿ ಒಬ್ಬೊಬ್ಬರೂ ಪ್ರತ್ಯೇಕವಾಗಿ ಸಮರದಲ್ಲಿ ಲೋಕಪಾಲರಿಂದ ರಕ್ಷಿತ ಸಮಸ್ತ ಸುರವಾಹಿನಿಯೊಂದಿಗೂ ಯುದ್ಧಮಾಡಬಲ್ಲತಕ್ಕವರಾಗಿದ್ದರು.

ಹಿಂದೊಮ್ಮೆ ರೌಹಿಣೇಯ ಬಲರಾಮನು ಆಕ್ರಮಣಿಸಿದ್ದಾಗ ಕ್ರೋಧದಿಂದ ಜರಾಸಂಧನು ನಮ್ಮನ್ನು ವಧಿಸಲೋಸುಗ

ಉಕ್ಕಿನ ತುದಿಯುಳ್ಳ ಗದೆಯನ್ನು ನಮ್ಮ ಮೇಲೆ ಎಸೆದನು. ಶಕ್ರನು ಬಿಟ್ಟ ವಜ್ರದೋಪಾದಿಯಲ್ಲಿ ಅಗ್ನಿಯಪ್ರಭೆಯುಳ್ಳ ಆ ಶಕ್ತ್ಯಾಯುಧವು ಬೈತಲೆಯಂತೆ ಆಕಾಶವನ್ನು ಸೀಳುತ್ತಾ ನಮ್ಮ ಮೇಲೆ ಬೀಳುತ್ತಿರುವುದನ್ನು ಕಂಡೆವು. ಅದು ಬೀಳುತ್ತಿರುವುದನ್ನು ನೋಡಿ ರೋಹಿಣೀನಂದನನು ಅದನ್ನು ತುಂಡರಿಸಲು ಸ್ಥೂಣಾಕರ್ಣವೆಂಬ ಅಸ್ತ್ರವನ್ನು ಪ್ರಯೋಗಿಸಿದನು. ಅಸ್ತ್ರವೇಗದಿಂದ ಪ್ರತಿಹತ ಆ ಗದೆಯು ಪರ್ವತಗಳನ್ನೇ ಕಂಪಿಸುವಂತೆ ಭೂಮಿಯನ್ನು ಸೀಳಿ ಹೊಕ್ಕಿತು. ಅಲ್ಲಿಯೇ ವಜ್ರದ ವಿಕ್ರಮವುಳ್ಳ ಘೋರ ಜರಾ ಎಂಬ ಹೆಸರಿನ ರಾಕ್ಷಸಿಯಿದ್ದಳು. ಅವಳೇ ಜರಾಸಂಧನು ಹುಟ್ಟಿದಾಗ ಅವನನ್ನು ಒಂದುಗೂಡಿಸಿದ್ದಳು. ಪ್ರತ್ಯೇಕ ಪ್ರತ್ಯೇಕ ಎರಡು ಅರ್ಧದೇಹಗಳಿಂದ ಇಬ್ಬರು ತಾಯಂದಿರಲ್ಲಿ ಹುಟ್ಟಿದ ಅವನು ಜರಾ ಎಂಬ ರಾಕ್ಷಸಿಯಿಂದ ಸೇರಿಸಲ್ಪಟ್ಟನಾಗಿರುವುದರಿಂದ ಅವನು ಜರಾಸಂಧನೆನಿಸಿಕೊಂಡನು. ಅಲ್ಲಿ ಭೂಮಿಯ ಕೆಳಗೆ ವಾಸಿಸುತ್ತಿದ್ದ ಆ ರಾಕ್ಷಸಿಯು ಸುತ-ಬಾಂಧವರೊಡನೆ ಆ ಗದೆ ಮತ್ತು ಸ್ಥೂಣಕರ್ಣದ ಹೊಡೆತದಿಂದಾಗಿ ಹತಳಾದಳು. ಆ ಗದೆಯನ್ನು ಕಳೆದುಕೊಂಡ ಜರಾಸಂಧನು ಮಹಾ

ಮಲ್ಲಯುದ್ಧದಲ್ಲಿ ಭೀಮಸೇನನಿಂದ ಹತನಾದುದನ್ನು ನೀನೇ ನೋಡಿದ್ದೀಯೆ. ಒಂದುವೇಳೆ ಪ್ರತಾಪವಾನ್ ಜರಾಸಂಧನು ಆ ಗದೆಯನ್ನು ಹೊಂದಿದ್ದರೆ ರಣದಲ್ಲಿ ಅವನನ್ನು ಸಂಹರಿಸಲು ಇಂದ್ರಸಮೇತ ದೇವತೆಗಳೂ ಶಕ್ತರಾಗುತ್ತಿರಲಿಲ್ಲ.

ನಿನ್ನ ಹಿತಕ್ಕಾಗಿಯೇ ಸತ್ಯವಿಕ್ರಮ ದ್ರೋಣನು ಆಚಾರ್ಯನ ವೇಷದಲ್ಲಿ ನೈಷಾದಿ ಏಕಲವ್ಯನ ಅಂಗುಷ್ಠವನ್ನು ಅಪಹರಿಸಿದನು. ದೃಢವಿಕ್ರಮಿ ನೈಷಾದಿಯು ಅಂಗುಲಿತ್ರಾಣಗಳನ್ನು ಕಟ್ಟಿಕೊಂಡು ಇನ್ನೊಬ್ಬ ರಾಮನಂತೆಯೇ ವನಗಳಲ್ಲಿ ಸಂಚರಿಸುತ್ತಿದ್ದನು. ಅಂಗುಷ್ಠವನ್ನು ಹೊಂದಿದ್ದ ಏಕಲವ್ಯನನ್ನು ದೇವ ಮಾನವ ರಾಕ್ಷಸ ಉರಗರು ಸೇರಿಯೂ ಯುದ್ಧದಲ್ಲಿ ಜಯಿಸಲು ಎಂದೂ ಶಕ್ತರಾಗುತ್ತಿರಲಿಲ್ಲ. ಇನ್ನು ಮನುಷ್ಯ ಮಾತ್ರರು ಏನು! ಅವನನ್ನು ನೋಡಲು ಕೂಡ ಶಕ್ಯರಾಗುತ್ತಿರಲಿಲ್ಲ. ದೃಢಮುಷ್ಟಿಯಾಗಿದ್ದ ಅವನು ಹಗಲೂ ರಾತ್ರಿ ನಿತ್ಯವೂ ಶ್ರಮಿಸುತ್ತಿದ್ದನು.

ನಿನ್ನ ಹಿತಕ್ಕಾಗಿಯೇ ಸಂಗ್ರಾಮಕ್ಕೆ ಮೊದಲೇ ನಾನು ಚೇದಿರಾಜ ಶಿಶುಪಾಲನನ್ನು ನಿನ್ನ ಪ್ರತ್ಯಕ್ಷದಲ್ಲಿಯೇ

ಸಂಹರಿಸಿದೆನು. ಸಂಗ್ರಾಮದಲ್ಲಿ ಅವನನ್ನು ಕೂಡ ಗೆಲ್ಲಲು ಸುರಾಸುರರೆಲ್ಲರೂ ಅಶಕ್ಯರೇ! ಅವನ ಮತ್ತು ಅನ್ಯ ಸುರಶತ್ರುಗಳ ವಧೆಗಾಗಿಯೇ ನಾನು ಹುಟ್ಟಿದ್ದೇನೆ. ನಿನ್ನ ಸಹಾಯಕ್ಕೆಂದು ಮತ್ತು ಲೋಕಗಳ ಹಿತವನ್ನು ಬಯಸಿ ಭೀಮಸೇನನು ರಾವಣನ ಸಮಪ್ರಾಣರಾದ ಬ್ರಹ್ಮ ಯಜ್ಞವಿನಾಶಕರಾದ ಹಿಡಿಂಬ ಕಿರ್ಮೀರರನ್ನು ಉರುಳಿಸಿದನು.

ಅದೇ ರೀತಿ ಮಯಾವಿ ಅಲಾಯುಧನೂ ಹೈಡಿಂಬಿ ಘಟೋತ್ಕಚನಿಂದ ಹತನಾದನು. ಹೈಡಿಂಬಿಯೂ ಕೂಡ ಉಪಾಯದಿಂದ ಕರ್ಣನ ಶಕ್ತಿಗೆ ಸಿಲುಕಿ ಹತನಾದನು. ಒಂದುವೇಳೆ ಕರ್ಣನು ಶಕ್ತ್ಯಾಯುಧದಿಂದ ಇವನನ್ನು ಸಂಹರಿಸದೇ ಇದ್ದಿದ್ದರೆ ಘಟೋತ್ಕಚನ ವಧೆಯು ನನ್ನಿಂದಲೇ ಆಗುತ್ತಿತ್ತು! ನಿಮಗೆ ಪ್ರಿಯವಾದುದನ್ನು ಮಾಡಲೋಸುಗ ನಾನು ಅವನನ್ನು ಈ ಹಿಂದೆಯೇ ಸಂಹರಿಸಲಿಲ್ಲ. ಈ ರಾಕ್ಷಸನು ಬ್ರಾಹ್ಮಣದ್ವೇಷೀ. ಯಜ್ಞದ್ವೇಷೀ. ಧರ್ಮವನ್ನು ಕಳೆದುಕೊಂಡವನು, ಪಾಪಾತ್ಮ. ಆದುದರಿಂದಲೇ ಅವನು ಸತ್ತನು. ಉಪಾಯದಿಂದ ಶಕ್ರನು ನೀಡಿದ ಶಕ್ತಿಯು ಕೈಬಿಡುವಂತೆ ಮಾಡಿದೆ.

ಧರ್ಮವನ್ನು ಲೋಪಮಾಡುವವರು ನನ್ನಿಂದ ವಧಿಸಲ್ಪಡುತ್ತಾರೆಧರ್ಮಸಂಸ್ಥಾಪನೆಗಾಗಿಯೇ ನಾನು ಈ ಅಚಲ ಪ್ರತಿಜ್ಞೆಯನ್ನು ಕೈಗೊಂಡಿರುವೆನು. ಎಲ್ಲಿ ಬ್ರಹ್ಮ, ಸತ್ಯ, ದಮ, ಶೌಚ, ಧರ್ಮ, ಲಜ್ಜೆ, ಸಾತ್ವಿಕ ಸಂಪತ್ತು, ಧೃತಿ ಮತ್ತು ಕ್ಷಮೆಗಳಿರುವವೋ ಅಲ್ಲಿ ನಿತ್ಯವೂ ನಾನು ರಮಿಸುತ್ತೇನೆ. ಸತ್ಯದ ಮೇಲೆ ಆಣೆಯಿಟ್ಟು ನಿನಗೆ ಹೇಳುತ್ತಿದ್ದೇನೆ. ವೈಕರ್ತನನ ಕುರಿತು ನೀನು ದುಃಖಿಸಬೇಕಾದುದಿಲ್ಲ. ನಂತರದಲ್ಲಿ ನಾನು ನಿನಗೆ ಅವನ ವಧೋಪಾಯವನ್ನು ಉಪದೇಶಿಸುತ್ತೇನೆ. ಸುಯೋಧನನನ್ನು ಕೂಡ ರಣದಲ್ಲಿ ವೃಕೋದರನು ಸಂಹರಿಸುತ್ತಾನೆ. ಅವನ ವಧೋಪಾಯವನ್ನು ಕೂಡ ನಾನು ನಿನಗೆ ಹೇಳುತ್ತೇನೆ. ಶತ್ರುಗಳ ಸೇನೆಗಳ ಮಧ್ಯೆ ತುಮುಲ ಶಬ್ಧವು ಹೆಚ್ಚಾಗುತ್ತಲೇ ಇದೆ. ನಿನ್ನ ಸೇನೆಗಳು ಕೂಡ ದಶದಿಶಗಳಲ್ಲಿ ಓಡುತ್ತಿವೆ. ಲಕ್ಷ್ಯಭೇದನದಲ್ಲಿ ಪರಿಣಿತರಾದ ಕೌರವರು ನಿನ್ನ ಸೇನೆಯನ್ನು ಧ್ವಂಸಮಾಡುತ್ತಿದ್ದಾರೆ. ಪ್ರಹರಿಗಳಲ್ಲಿ ಶ್ರೇಷ್ಠ ದ್ರೋಣನೂ ಕೂಡ ನಮ್ಮ ಸೇನೆಯನ್ನು ಸುಡುತ್ತಿದ್ದಾನೆ!”

ಇದನ್ನು ತಿಳಿದೇ, ಆ ಅಮೋಘ ಶಕ್ತಿಯನ್ನು ಹಾಗೆ

ನಿರಸನಗೊಳಿಸಬೇಕೆಂದೇ ಮಹಾಬುದ್ಧಿ ಜನಾರ್ದನನು ಮಹಾವೀರ್ಯ ರಾಕ್ಷಸೇಶ್ವರ ಘಟೋತ್ಕಚ ಮತ್ತು ಕರ್ಣರ ನಡುವೆ ದ್ವೈರಥವನ್ನು ನಿಯೋಜಿಸಿದನು. ಮಹಾರಥ ಕರ್ಣನಿಂದ ಕೃಷ್ಣನು ಪಾರ್ಥನನ್ನು ರಕ್ಷಿಸದೇ ಇದ್ದಿದ್ದರೆ ಆಗಲೇ ಕುರುಗಳು ಯಶಸ್ವಿಗಳಾಗಿಬಿಡುತ್ತಿದ್ದರು! ಯೋಗಗಳ ಈಶ್ವರ ಪ್ರಭು ಜನಾರ್ದನನಿಲ್ಲದಿದ್ದರೆ ಪಾರ್ಥನು ಈಗಾಗಲೇ ಅಶ್ವ-ಧ್ವಜ-ರಥ ಸಮೇತ ರಣಭೂಮಿಯಲ್ಲಿ ಹತನಾಗಿ ಬಿದ್ದುಹೋಗುತ್ತಿದ್ದನು! ಕೃಷ್ಣನ ಅನೇಕ ಉಪಾಯಗಳಿಂದಲೇ ಅರ್ಜುನನು ರಕ್ಷಿಸಲ್ಪಡುತ್ತಿದ್ದನು. ಕೃಷ್ಣನಿಂದ ಪಾಲಿತ ಪಾರ್ಥನು ಶತ್ರುಗಳನ್ನು ಎದುರಿಸಿ ಜಯಿಸುತ್ತಿದ್ದನು. ವಿಶೇಷ ಪ್ರಯತ್ನದಿಂದಲೇ ಕೃಷ್ಣನು ಆ ಅಮೋಘ ಶಕ್ತಿಯಿಂದ ಪಾಂಡವನನ್ನು ರಕ್ಷಿಸಿದನು. ಇಲ್ಲದಿದ್ದರೆ ಆ ಶಕ್ತಿಯು ಸಿಡಿಲು ಮರವನ್ನು ಧ್ವಂಸಮಾಡುವಂತೆ ಕೌಂತೇಯನನ್ನು ಸಂಹರಿಸುತ್ತಿತ್ತು.

ರಾತ್ರಿ ರಾತ್ರಿಯೂ ನಿತ್ಯವೂ ಕರ್ಣನು ಅರ್ಜುನನನ್ನು ಎದುರಿಸಬೇಕೆನ್ನುವುದನ್ನೇ ಸಮರ್ಥಿಸುವುದು ದುರ್ಯೋಧನ, ಶಕುನಿ, ದುಃಶಾಸನ ಮತ್ತು ಸಂಜಯರ ಕೆಲಸವಾಗಿತ್ತು.

> “ಕರ್ಣ! ನಾಳೆ ಎಲ್ಲ ಸೈನಿಕರನ್ನೂ ಬಿಟ್ಟು ಧನಂಜಯನನ್ನು ಸಂಹರಿಸು! ಅನಂತರ ನಾವು ಪಾಂಡು-ಪಾಂಚಾಲರನ್ನು

ಸೇವಕರಂತೆ ಉಪಭೋಗಿಸುತ್ತೇವೆ! ಅಥವಾ ಪಾರ್ಥನು ಹತನಾದರೂ ಕೃಷ್ಣ ವಾರ್ಷ್ಣೇಯನು ಪಾಂಡವರಲ್ಲಿ ಮತ್ತೊಬ್ಬನನ್ನು ಇಟ್ಟುಕೊಂಡು ಯುದ್ಧವನ್ನು ಮುಂದುವರಿಸುತ್ತಾನೆಂದಾದರೆ ಕೃಷ್ಣನನ್ನೇ ಸಂಹರಿಸು! ಕೃಷ್ಣನೇ ಪಾಂಡವರ ಮೂಲ. ಪಾರ್ಥನು ಕಾಂಡ. ಇತರ ಪಾರ್ಥರು ರೆಂಬೆಗಳು. ಪಾಂಚಾಲರು ಎಲೆಗಳ ರೂಪದಲ್ಲಿದ್ದಾರೆ. ಪಾಂಡವರು ಕೃಷ್ಣನ ಆಶ್ರಯದಲ್ಲಿದ್ದಾರೆ. ಕೃಷ್ಣನನ್ನೇ ಬಲವನ್ನಾಗಿ ಪಡೆದಿದ್ದಾರೆ. ಕೃಷ್ಣನನ್ನು ಸ್ವಾಮಿಯೆಂದೇ ದೃಢವಾಗಿ ನಂಬಿದ್ದಾರೆ. ನಕ್ಷತ್ರಗಳಿಗೆ ಚಂದ್ರಮನು ಹೇಗೋ ಹಾಗೆ ಪಾಂಡವರಿಗೆ ಶ್ರೀಕೃಷ್ಣ. ಆದುದರಿಂದ ಸೂತಜ! ಎಲೆಗಳು, ರೆಂಬೆಗಳು ಮತ್ತು ಕಾಂಡವನ್ನು ಬಿಟ್ಟು ಇವೆಲ್ಲವಕ್ಕೂ ಬೇರಿನಂತಿರುವ ಕೃಷ್ಣನನ್ನೇ ಕತ್ತರಿಸಿಹಾಕಿಬಿಡು!”

ಒಂದುವೇಳೆ ಕರ್ಣನು ದಾಶಾರ್ಹ ಯಾದವನಂದನನನ್ನು ಸಂಹರಿಸಿದ್ದರೆ ಈ ಇಡೀ ವಸುಮತಿಯು ಧೃತರಾಷ್ಟ್ರನ ವಶವಾಗುತ್ತಿತ್ತು ಎನ್ನುವುದರಲ್ಲಿ ಸಂಶಯವೇ ಇಲ್ಲ. ಯದುಕುಲಪಾಂಡವನಂದನ ಮಹಾತ್ಮ ಕೃಷ್ಣನು ಹತನಾಗಿ ಭೂಮಿಯ ಮೇಲೆ ಮಲಗಿದ್ದರೆ ಗಿರಿ-

ಸಮುದ್ರ-ವನ ಸಮೇತ ವಸುಧೆಯು ಇಡೀ ಧೃತರಾಷ್ಟ್ರನ ವಶವಾಗುತ್ತಿತ್ತಲ್ಲವೇ?

ಕರ್ಣನೂ ಕೂಡ ಹಾಗೆ ಮಾಡುತ್ತೇನೆಂದು ಯೋಚಿಸಿದ್ದರೂ ಬೆಳಗಾಗುತ್ತಲೇ ಯುದ್ಧಕಾಲದಲ್ಲಿ ತ್ರಿದಶೇಶ್ವರ ಅಪ್ರಮೇಯ ಹೃಷೀಕೇಶನು ಅವನನ್ನು ಮೋಹಗೊಳಿಸುತ್ತಿದನು. ಕೇಶವನಾದರೋ ಕೌಂತೇಯ ಅರ್ಜುನನನ್ನು ಸದಾ ರಕ್ಷಿಸುತ್ತಿದ್ದನು. ಆದುದರಿಂದಲೇ ಅವನು ರಣದಲ್ಲಿ ಅರ್ಜುನನನ್ನು ಸೌತಿಯ ಎದುರು ನಿಲ್ಲಿಸುತ್ತಿರಲಿಲ್ಲ. ಪ್ರಭು ಅಚ್ಯುತನು ಆ ಅಮೋದ ಶಕ್ತಿಯನ್ನು ನಿರಸನಗೊಳಿಸಬೇಕೆಂದು ಬೇರೆ ಯಾರಾದರೂ ರಥೋದಾರರನ್ನು ಅವನ ಎದಿರು ನಿಲ್ಲಿಸುತ್ತಿದ್ದನು.

ಆ ರಾತ್ರಿ ಸಾತ್ಯಕಿಯು ಕರ್ಣನ ವಿಷಯದಲ್ಲಿ ಕೃಷ್ಣನಲ್ಲಿ ಪ್ರಶ್ನಿಸಿದನು:

> "ಈ ಶಕ್ತ್ಯಾಯುಧವು ಇತ್ತಾದರೂ ಅಮಿತಮಿಕ್ರಮಿ ಕರ್ಣ ಸೂತಪುತ್ರನು ಏಕೆ ಅದನ್ನು ಫಲ್ಗುನನ ಮೇಲೆ ಪ್ರಯೋಗಿಸಲಿಲ್ಲ?"

ಆಗ ವಾಸುದೇವನು ಹೇಳಿದನು:

> "ದುರ್ಯೋಧನನೇ ಮೊದಲಾಗಿ ದುಃಶಾಸನ, ಕರ್ಣ, ಶಕುನಿ, ಮತ್ತು ಸೈಂಧವರು ಸತತವೂ ಮಂತ್ರಾಲೋಚನೆಯನ್ನೇ

ಮಾಡುತ್ತಿದ್ದರು: “ಕರ್ಣ! ಕರ್ಣ! ರಣದಲ್ಲಿ ಅಮಿತ ಪರಾಕ್ರಮವುಳ್ಳವನೇ! ವಿಜಯಿಗಳಲ್ಲಿ ಶ್ರೇಷ್ಠನೇ! ಕುಂತೀಪುತ್ರ ಧನಂಜಯ ಮಹಾರಥ ಪಾರ್ಥನ ಹೊರತಾಗಿ ಬೇರೆ ಯಾರಮೇಲೂ ಈ ಶಕ್ತಿಯನ್ನು ಪ್ರಯೋಗಿಸಬೇಡ! ವಾಸವನು ದೇವತೆಗಳಲ್ಲಿ ಹೇಗೋ ಹಾಗೆ ಅವನು ಪಾಂಡವರಲ್ಲಿ ಅತಿ ಯಶೋವಂತನು. ಅವನು ಹತನಾದರೆ ಅಗ್ನಿಯಿಲ್ಲದೇ ಸುರರು ಹೇಗೋ ಹಾಗೆ ಪಾಂಡವರೆಲ್ಲರೂ ಸೃಂಜಯರೊಂದಿಗೆ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ!”

ಹಾಗೇಯೇ ಆಗಬೇಕೆಂದು ಒಪ್ಪಿಕೊಂಡ ಕರ್ಣನ ಹೃದಯದಲ್ಲಿ ನಿತ್ಯವೂ ಗಾಂಡಿವಧನ್ವಿಯನ್ನು ವಧಿಸುವ ಸಂಕಲ್ಪವಿರುತ್ತಿತ್ತು. ಆ ಶಕ್ತಿಯನ್ನು ಪಾಂಡವ ಶ್ವೇತವಾಹನನ ಮೇಲೆ ಪ್ರಯೋಗಿಸಬಾರದೆಂದು ನಾನೇ ರಾಧೇಯನನ್ನು ಮೋಹಗೊಳಿಸುತ್ತಿದ್ದೆ. ಆ ಶಕ್ತಿಯೇ ಫಲ್ಗುನನ ಮೃತ್ಯು ಎಂದು ತಿಳಿದಿದ್ದ ನನಗೆ ನಿದ್ರೆಯಿರಲಿಲ್ಲ. ಮನಸ್ಸಿಗೆ ಹರ್ಷವಿರಲಿಲ್ಲ! ಆ ಶಕ್ತಿಯನ್ನು ಘಟೋತ್ಕಚನ ಮೇಲೆ ವ್ಯರ್ಥವಾದುದನ್ನು ನೋಡಿ ಧನಂಜಯನು ಮೃತ್ಯುವಿನ ತೆರೆದ ಬಾಯಿಂದ ಮುಕ್ತನಾದುದನ್ನು ಕಾಣುತ್ತಿದ್ದೇನೆ. ಯುದ್ಧದಲ್ಲಿ ಬೀಭತ್ಸುವನ್ನು

ರಕ್ಷಿಸುವುದನ್ನು ಹೋಲಿಸಿದರೆ ನನಗೆ ನನ್ನ ತಂದೆಯಾಗಲೀ ತಾಯಿಯಾಗಲೀ ನೀನಾಗಲೀ ಸಹೋದರರಾಗಲೀ ನನ್ನ ಪ್ರಾಣವಾಗಲೀ ಹೆಚ್ಚೆನಿಸುವುದಿಲ್ಲ. ತ್ರೈಲೋಕ್ಯದ ಆಡಳಿತ ಅಥವಾ ಅದಕ್ಕಿಂತಲೂ ದುರ್ಲಭ ಇನ್ನೇನಾದರೂ ನನಗೆ ದೊರಕಿದರೆ ಕೂಡ ಪಾರ್ಥ ಧನಂಜಯನಿಲ್ಲದೇ ನಾನು ಅದನ್ನು ಬಯಸುವುದಿಲ್ಲ. ಆದುದರಿಂದ ಪಾರ್ಥ ಧನಂಜಯನು ಮೃತ್ಯುವಿನಿಂದ ಹೊರಬಂದುದನ್ನು ನೋಡಿ ಇಂದು ನನಗೆ ಅತ್ಯಂತ ಹರ್ಷವಾಗುತ್ತಿದೆ. ಈ ಕಾರಣದಿಂದಲೇ ನಾನು ಕರ್ಣನೊಡನೆ ಯುದ್ಧಮಾಡಲು ರಾಕ್ಷಸನನ್ನು ಕಳುಹಿಸಿದ್ದೆ. ಈ ರಾತ್ರಿಯಲ್ಲಿ ಕರ್ಣನೊಡನೆ ಯುದ್ಧಮಾಡಲು ಬೇರೆ ಯಾರಿಗೂ ಕಷ್ಟವಾಗುತ್ತಿತ್ತು!”

ಹೀಗೆ ಸತತವೂ ಧನಂಜಯನ ಹಿತದಲ್ಲಿ ಮತ್ತು ಅವನಿಗೆ ಪ್ರಿಯವಾದುದನ್ನು ಮಾಡಲು ನಿರತನಾಗಿದ್ದ ದೇವಕಿನಂದನನು ಸಾತ್ಯಕಿಗೆ ಹೇಳಿದನು.

ಪ್ರತಿರಾತ್ರಿ ಸಂಗ್ರಾಮದಿಂದ ಹಿಂದಿರುಗುತ್ತಲೇ ನಿತ್ಯವೂ ಕೌರವರೆಲ್ಲರೂ ಕರ್ಣನಿಗೆ ಅವನಿಗೆ ಇದೇ ಸಲಹೆಯನ್ನು ನೀಡುತ್ತಿದ್ದರು:

“ಕರ್ಣ! ಕರ್ಣ! ನಾಳೆ ಬೆಳಗಾಗುತ್ತಲೇ ಕೇಶವನ

ಮೇಲಾಗಲೀ ಅರ್ಜುನನ ಮೇಲಾಗಲೀ ಈ ಶಕ್ತಿಯನ್ನು ಪ್ರಯೋಗಿಸು!”

ಎಂದು. ಆದರೆ ಪ್ರಭಾತಸಮಯದಲ್ಲಿ ದೈವಚಿತ್ತವೋ ಎಂಬಂತೆ ಕರ್ಣನ ಮತ್ತು ಅನ್ಯ ಯೋಧರ ಬುದ್ಧಿಯು ಪುನಃ ನಾಶವಾಗಿಹೋಗುತ್ತಿತ್ತು! ರಣದಲ್ಲಿ ಕರ್ಣನು ತನ್ನ ಕೈಯಿಂದ ಪಾರ್ಥನನ್ನಾಗಲೀ ದೇವಕೀಸುತ ಕೃಷ್ಣನನ್ನಾಗಲೀ ಕೊಲ್ಲದೇ ಇರುವುದಕ್ಕೆ ದೈವವೇ ಪರಮ ಕಾರಣವೆಂದು ಅನ್ನಿಸುತ್ತದೆ. ಅವನ ಕೈಯಲ್ಲಿ ಆ ಶಕ್ತಿಯು ಕಾಲರಾತ್ರಿಯಂತೆ ಸರ್ವತಾ ಜಾಗ್ರತವಾಗಿಯೇ ಇದ್ದಿತು. ಆದರೆ ದೈವದಿಂದ ಬುದ್ಧಿಯನ್ನು ಕಳೆದುಕೊಂಡ ಕರ್ಣನು ಅದನ್ನು ಪ್ರಯೋಗಿಸಲಿಲ್ಲ. ದೇವಮಾಯೆಯಿಂದ ಮೋಹಿತನಾದ ಅವನು ಶಕ್ರನು ನೀಡಿದ ಆ ವಾಸವೀ ಶಕ್ತಿಯನ್ನು ದೇವಕೀಪುತ್ರ ಕೃಷ್ಣನ ಅಥವಾ ಪಾರ್ಥನ ವಧೆಗಾಗಿ ಬಳಸಲಿಲ್ಲ!

## ಯುಧಿಷ್ಠಿರ ಶೋಕ; ವ್ಯಾಸವಾಕ್ಯ

ರಾತ್ರಿಯಲ್ಲಿ ಕರ್ಣನಿಂದ ರಾಕ್ಷಸ ಘಟೋತ್ಕಚನು ಹತನಾಗಲು, ಪ್ರಹೃಷ್ಟರಾದ ಕೌರವರು ಯುದ್ಧೋತ್ಸಾಹದಿಂದ ಯುದ್ಧಮಾಡುತ್ತಾ ವೇಗದಿಂದ ಸೇನೆಯನ್ನು ವಧಿಸುತ್ತಿರಲು, ಆ ದಟ್ಟ ರಾತ್ರಿಯಲ್ಲಿ ಯುಧಿಷ್ಠಿರನು ಪರಮ ದುಃಖಿತನಾದನು. ಆ ಪರಂತಪನು

ಭೀಮಸೇನನಿಗೆ ಹೇಳಿದನು:

> "ಮಹಾಬಾಹೋ! ಧಾರ್ತರಾಷ್ಟ್ರನ ಸೇನೆಯನ್ನು ತಡೆ! ಹೈಡಿಂಬನ ವಿಘಾತದಿಂದಾಗಿ ಮಹಾ ಮೋಹವು ನನ್ನನ್ನು ಆವೇಶಗೊಂಡಿದೆ!"

ಭೀಮನಿಗೆ ಹೀಗೆ ಆದೇಶಿಸಿ ಯುಧಿಷ್ಠಿರನು ತನ್ನ ರಥದಲ್ಲಿಯೇ ಕುಳಿತುಕೊಂಡನು. ಮುಖವು ಕಣ್ಣೀರಿನಿಂದ ತುಂಬಿಹೋಗಲು ರಾಜನು ಪುನಃ ಪುನಃ ನಿಟ್ಟುಸಿರು ಬಿಡುತ್ತಿದ್ದನು. ಕರ್ಣನ ವಿಕ್ರಮವನ್ನು ನೋಡಿ ಘೋರ ಚಿಂತೆಯು ಅವನನ್ನು ಆವರಿಸಿತು. ಅವನು ಹಾಗೆ ವ್ಯಥಿತನಾಗಿರುವುದನ್ನು ನೋಡಿ ಕೃಷ್ಣನು ಈ ಮಾತನ್ನಾಡಿದನು:

> "ಕೌಂತೇಯ! ದುಃಖಿಸದಿರು! ಸಾಮಾನ್ಯ ಮನುಷ್ಯನಂತೆ ಈ ರೀತಿ ದುಃಖಿಸುವುದು ನಿನಗೆ ಇದು ಸರಿಯೆನಿಸುವುದಿಲ್ಲ. ರಾಜನ್! ಎದ್ದೇಳು! ಯುದ್ಧಮಾಡು! ಈ ಭಾರವನ್ನು ಹೊರು! ನೀನು ಗಾಬರಿಗೊಂಡರೆ ವಿಜಯದಲ್ಲಿ ಸಂಶಯವುಂಟಾಗುತ್ತದೆ."

ಕೃಷ್ಣನ ಮಾತನ್ನು ಕೇಳಿ ಧರ್ಮರಾಜ ಯುಧಿಷ್ಠಿರನು ಕೈಗಳಿಂದ ಕಣ್ಣೀರನ್ನು ಒರೆಸಿಕೊಂಡು ಕೃಷ್ಣನಿಗೆ ಈ ಮಾತುಗಳನ್ನಾಡಿದನು:

“ಕೃಷ್ಣ! ಧರ್ಮಗಳ ಪರಮ ದಾರಿಯು ನಿನಗೆ ತಿಳಿದೇ ಇದೆ. ಪಡೆದುಕೊಂಡ ಉಪಕಾರವನ್ನು ಸ್ಮರಿಸಿಕೊಳ್ಳದಿರುವವನಿಗೆ ಬ್ರಹ್ಮಹತ್ಯೆಯ ಫಲವು ದೊರಕುತ್ತದೆ! ನಾವು ವನದಲ್ಲಿದ್ದಾಗ ಬಾಲಕನಾಗಿದ್ದರೂ ಮಹಾತ್ಮ ಹೈಡಿಂಬಿಯು ನಿಜವಾಗಿಯೂ ನಮಗೆ ಬಹಳ ಸಹಾಯ ಮಾಡಿದ್ದನು. ಶ್ವೇತವಾಹನ ಪಾಂಡವನು ಅಸ್ತ್ರಗಳಿಗಾಗಿ ಹೋಗಿರುವನೆಂದು ತಿಳಿದು ಈ ಮಹೇಷ್ವಾಸನು ಕಾಮ್ಯಕದಲ್ಲಿ ನಮ್ಮೊಡನೆಯೇ ಇದ್ದನು. ಧನಂಜಯನು ಬರುವವರೆಗೆ ಅವನು ನಮ್ಮೊಡನೆಯೇ ಇದ್ದನು. ಗಂಧಮಾದನ ಯಾತ್ರೆಯಲ್ಲಿ ಪಾಂಚಾಲಿಯು ಬಳಲಿದ್ದಾಗ ಈ ಮಹಾತ್ಮನೇ ಅವಳನ್ನು ತನ್ನ ಭುಜಗಳಮೇಲೆ ಹೊತ್ತು ದುರ್ಗಮ ಪ್ರದೇಶಗಳನ್ನು ದಾಟಿಸಿದನು. ಈ ಯುದ್ಧಗಳ ಆರಂಭದಲ್ಲಿ ಕೂಡ ಆ ಮಹಾತ್ಮನು ನನಗೋಸ್ಕರವಾಗಿ ದುಷ್ಕರ ಕರ್ಮಗಳನ್ನು ಮಾಡಿದನು. ಸ್ವಭಾವತಃ ನನಗೆ ಸಹದೇವನಲ್ಲಿ ಎಷ್ಟು ಪ್ರೀತಿಯಿದೆಯೋ ಅದಕ್ಕಿಂತ ಎರಡು ಪಟ್ಟು ಪ್ರೀತಿಯು ಈ ರಾಕ್ಷಸೇಂದ್ರ ಘಟೋತ್ಕಚನ ಮೇಲೆ ಇದೆ. ಆ ಮಹಾಬಾಹುವು ನನ್ನ ಭಕ್ತನಾಗಿದ್ದನು. ಅವನಿಗೆ ನಾನು ಎಷ್ಟು ಪ್ರಿಯನಾಗಿದ್ದೆನೋ ಅಷ್ಟೇ ನನಗೂ ಅವನು ಪ್ರಿಯನಾಗಿದ್ದನು.

ಅವನ ಅಗಲಿಕೆಯಿಂದ ಶೋಕಸಂತಪ್ತನಾಗಿದ್ದೇನೆ. ಬುದ್ಧಿಗೆಟ್ಟವನಾಗಿದ್ದೇನೆ.

ವಾರ್ಷ್ಣೇಯ! ಕೌರವರಿಂದ ಓಡಿಸಲ್ಪಡುತ್ತಿರುವ ಸೈನ್ಯಗಳನ್ನು ನೋಡು! ಮಹಾರಥ ದ್ರೋಣ-ಕರ್ಣರು ಪ್ರಯತ್ನಪೂರ್ವಕವಾಗಿ ಯುದ್ಧಮಾಡುತ್ತಿರುವುದನ್ನು ನೋಡು! ಮದಿಸಿದ ಎರಡು ಆನೆಗಳಿಂದ ಜೊಂಡುಹುಲ್ಲಿನ ವನವು ಧ್ವಂಸಗೊಳಿಸಲ್ಪಡುವಂತೆ ಈ ರಾತ್ರಿ ಪಾಂಡವ ಸೇನೆಯು ಧ್ವಂಸವಾಗುತ್ತಿರುವುದನ್ನು ನೋಡು! ಭೀಮಸೇನನ ಬಾಹುಬಲವನ್ನೂ ಪಾರ್ಥನ ವಿಚಿತ್ರ ಅಸ್ತ್ರಬಲವನ್ನೂ ಅನಾದರಿಸಿ ಕೌರವರು ವಿಕ್ರಮದಿಂದ ನಮ್ಮ ಸೇನೆಯೊಡನೆ ಯುದ್ಧಮಾಡುತ್ತಿದ್ದಾರೆ! ಯುದ್ಧದಲ್ಲಿ ರಾಕ್ಷಸನನ್ನು ಸಂಹರಿಸಿ ದ್ರೋಣ, ಕರ್ಣ ಮತ್ತು ರಾಜಾ ಸುಯೋಧನರು ರಣರಂಗದಲ್ಲಿ ಹೃಷ್ಟರಾಗಿ ಗರ್ಜಿಸುತ್ತಿದ್ದಾರೆ. ನಾವು ಮತ್ತು ನೀನೂ ಕೂಡ ಜೀವಿಸಿರುವಾಗ ಸೂತಪುತ್ರನನ್ನು ಎದುರಿಸಿ ಹೈಡಿಂಬನು ಹೇಗೆ ಮೃತ್ಯುವನ್ನಪ್ಪಿದನು? ನಮ್ಮೆಲ್ಲರನ್ನೂ ತೃಣೀಕರಿಸಿ, ಸವ್ಯಸಾಚಿಯು ನೋಡುತ್ತಿರುವಂತೆಯೇ, ಭೈಮಸೇನಿ ಮಹಾಬಲ ರಾಕ್ಷಸನು ಸಂಹರಿಸಲ್ಪಟ್ಟನು!

ದುರಾತ್ಮ ಧಾರ್ತರಾಷ್ಟ್ರರು ಅಭಿಮನ್ಯುವನ್ನು ಕೊಂದಾಗ ಮಹಾರಥ ಸವ್ಯಸಾಚಿಯು ಅಲ್ಲಿ ರಣದಲ್ಲಿರಲಿಲ್ಲ. ದುರಾತ್ಮ ಸೈಂಧವನು ನಮ್ಮೆಲ್ಲರನ್ನು ತಡೆದಿದ್ದರೂ ಆ ಕೃತ್ಯಕ್ಕೆ ತನ್ನ ಮಗನೊಡನೆ ದ್ರೋಣನು ಕಾರಣನಾಗಿದ್ದನು. ಸ್ವಯಂ ಗುರುವೇ ಕರ್ಣನಿಗೆ ಅಭಿಮನ್ಯುವಿನ ವಧೋಪಾಯವನ್ನು ಉಪದೇಶಿಸಿದನು. ಅಭಿಮನ್ಯುವು ಖಡ್ಗದಿಂದ ಹೋರಾಡುತ್ತಿರುವಾಗ ಅವನ ಖಡ್ಗವನ್ನು ಅವನೇ ಎರಡಾಗಿ ತುಂಡರಿಸಿದನು ಕೂಡ! ಅಭಿಮನ್ಯುವು ಕಷ್ಟದಲ್ಲಿರುವಾಗ ಸುಳ್ಳುಗಾರನಂತೆ ಕೃತವರ್ಮನು ಅವನ ಕುದುರೆಗಳನ್ನೂ ಪಾರ್ಷ್ಣಿಸಾರಥಿಯನ್ನೂ ಸಂಹರಿಸಿದನು. ಅನಂತರ ಮಹೇಷ್ವಾಸರು ಸೌಭದ್ರನನ್ನು ಕೆಳಗುರುಳಿಸಿದರು. ಅಲ್ಪ ಕಾರಣಕ್ಕಾಗಿ ಗಾಂಡಿವಧನ್ವಿಯು ಸೈಂಧವನನ್ನು ಸಂಹರಿಸಿದನು. ಅದು ನನಗೆ ಪ್ರಿಯವಾಗಿರಲಿಲ್ಲ! ಒಂದುವೇಳೆ ಶತ್ರುವಧೆಯಲ್ಲಿ ನ್ಯಾಯವಾಗಬೇಕೆಂದರೆ ರಣದಲ್ಲಿ ಮೊದಲು ಪಾಂಡವರು ದ್ರೋಣ-ಕರ್ಣರನ್ನು ಸಂಹರಿಸಬೇಕೆಂದು ನನಗನ್ನಿಸುತ್ತದೆ. ಇವರಿಬ್ಬರೂ ನಮ್ಮ ದುಃಖಕ್ಕೆ ಮೂಲ ಕಾರಣರು. ರಣದಲ್ಲಿ ಇವರಿಬ್ಬರನ್ನೂ ಪಡೆದು ಸುಯೋಧನನು ಸಮಾಧಾನದಿಂದಿದ್ದಾನೆ. ಎಲ್ಲಿ ದ್ರೋಣ

> ಮತ್ತು ಅನುಯಾಯಿಗಳೊಂದಿಗೆ ಸೂತಪುತ್ರನ ವಧೆಯಾಗಬೇಕಿತ್ತೋ ಅಲ್ಲಿ ಮಹಾಬಾಹು ಅರ್ಜುನನು ಅಭಿಮನ್ಯುವಿನಿಂದ ಅತಿ ದೂರದಲ್ಲಿದ್ದ ಸೈಂಧವನನ್ನು ಸಂಹರಿಸಿದನು! ಸೂತಪುತ್ರನನ್ನು ನಿಗ್ರಹಿಸುವುದು ನನ್ನ ಅವಶ್ಯ ಕಾರ್ಯವಾಗಿದೆ. ಸ್ವಯಂ ನಾನೇ ವೀರ ಕರ್ಣನನ್ನು ಸಂಹರಿಸಲು ಬಯಸಿ ಹೋಗುತ್ತೇನೆ. ಮಹಾಬಾಹು ಭೀಮಸೇನನು ದ್ರೋಣನ ಸೇನೆಯನ್ನು ಎದುರಿಸಲಿ!"

ಹೀಗೆ ಹೇಳಿ ಅವಸರದಲ್ಲಿ ಮಹಾಧನುಸ್ಸನ್ನು ಟೇಂಕರಿಸುತ್ತಾ ಭೈರವ ಶಂಖವನ್ನು ಊದುತ್ತಾ ಹೊರಟು ಹೋದನು. ಆಗ ತ್ವರೆಮಾಡಿ ರಾಜನ ಹಿಂದೆಯೇ ಶಿಖಂಡಿಯು ಸಹಸ್ರ ರಥಗಳಿಂದ, ಮುನ್ನೂರು ಆನೆಗಳಿಂದ, ಐದು ಸಾವಿರ ಕುದುರೆಗಳಿಂದ ಮತ್ತು ಮೂರು ಸಾವಿರ ಪ್ರಭದ್ರಕರಿಂದ ಅವೃತನಾಗಿ ಹೋದನು. ಯುಧಿಷ್ಠಿರನ ನೇತೃತ್ವದಲ್ಲಿ ಕವಚಧಾರೀ ಪಾಂಚಾಲರು ಮತ್ತು ಪಾಂಡವರು ಭೇರಿಗಳನ್ನು ಬಾರಿಸಿದರು ಮತ್ತು ಶಂಖಗಳನ್ನೂದಿದರು. ಆಗ ಮಹಾಬಾಹು ವಾಸುದೇವನು ಧನಂಜಯನಿಗೆ ಹೇಳಿದನು:

> "ಇಗೋ! ಕ್ರೋಧಾವಿಷ್ಟ ಯುಧಿಷ್ಠಿರನು ತ್ವರೆಮಾಡಿ ಸೂತಪುತ್ರನನ್ನು ಸಂಹರಿಸಲು ಬಯಸಿ ಹೋಗುತ್ತಿದ್ದಾನೆ!

ಇದನ್ನು ಉಪೇಕ್ಷಿಸುವುದು ಸರಿಯಲ್ಲ!”

ಹೀಗೆ ಹೇಳಿ ಹೃಷೀಕೇಶನು ಶೀಘ್ರವಾಗಿ ಕುದುರೆಗಳನ್ನು ಓಡಿಸಿದನು. ಜನಾರ್ದನನು ದೂರದಲ್ಲಿ ಹೋಗುತ್ತಿದ್ದ ರಾಜಾ ಯುಧಿಷ್ಠಿರನನ್ನೇ ಅನುಸರಿಸಿದನು. ಸೂತಪುತ್ರನನ್ನು ಕೊಲ್ಲಲೋಸುಗ ಅವಸರದಲ್ಲಿ ಹೋಗುತ್ತಿದ್ದ ಶೋಕದಿಂದ ಸಂಕಲ್ಪವನ್ನೇ ಕಳೆದುಕೊಂಡಿದ್ದ, ಅಗ್ನಿಯಂತೆ ದಹಿಸುತ್ತಿದ್ದ ಧರ್ಮಪುತ್ರ ಯುಧಿಷ್ಠಿರನನ್ನು ನೋಡಿ ವ್ಯಾಸನು ಬಂದು ಹೇಳಿದನು:

“ಅದೃಷ್ಟವಶಾತ್ ಸಂಗ್ರಾಮದಲ್ಲಿ ಕರ್ಣನನ್ನು ಎದುರಿಸಿಯೂ ಫಲ್ಗುನನು ಜೀವದಿಂದಿದ್ದಾನೆ! ಏಕೆಂದರೆ ಕರ್ಣನು ಸವ್ಯಸಾಚಿಯನ್ನು ಕೊಲ್ಲಲು ಬಯಸಿ ಆ ಶಕ್ತಿಯನ್ನು ರಕ್ಷಿಸಿಕೊಂಡಿದ್ದನು. ಭರತರ್ಷಭ! ಸೌಭಾಗ್ಯವಶಾತ್ ಜಿಷ್ಣುವು ಕರ್ಣನೊಡನೆ ದ್ವಂದ್ವರಥಯುದ್ಧದಲ್ಲಿ ತೊಡಗಲಿಲ್ಲ. ಹಾಗಾಗಿದ್ದರೆ ಪರಸ್ಪರರೊಡನೆ ಸ್ಪರ್ಧಿಸಿ ಇಬ್ಬರೂ ದಿವ್ಯಾಸ್ತ್ರಗಳನ್ನೂ ಅನ್ಯ ಅಸ್ತ್ರಗಳನ್ನೂ ಎಲ್ಲೆಡೆ ಪ್ರಯೋಗಿಸುತ್ತಿದ್ದರು. ಅವನ ಅಸ್ತ್ರಗಳೆಲ್ಲವೂ ನಾಶವಾಗುತ್ತಿರುವುದನ್ನು ನೋಡಿ ಪೀಡಿತ ಸೂತನಂದನು ನಿಜವಾಗಿಯೂ ಸಮರದಲ್ಲಿ ವಾಸವನಿತ್ತಿದ್ದ ಶಕ್ತಿಯನ್ನು

ಪ್ರಯೋಗಿಸುತ್ತಿದ್ದನು! ಹಾಗೇನಾದರೂ ಆಗಿದ್ದರೆ ಈಗಿನದಕ್ಕಿಂತಲೂ ಘೋರ ವ್ಯಸನವನ್ನು ನೀನು ಹೊಂದುತ್ತಿದ್ದೆಯಲ್ಲವೇ? ಒಳ್ಳೆಯದಾಯಿತು – ಯುದ್ಧದಲ್ಲಿ ಸೂತಪುತ್ರನಿಂದ ರಾಕ್ಷಸನು ಹತನಾದನು! ವಾಸವನಿತ್ತ ಶಕ್ತಿಯನ್ನು ಕಾರಣವನ್ನಾಗಿಟ್ಟುಕೊಂಡು ಕಾಲನೇ ಅವನನ್ನು ಅಪಹರಿಸಿದ್ದಾನೆ. ನಿನಗೋಸ್ಕರವೇ ಈ ರಾಕ್ಷಸನು ಯುದ್ಧದಲ್ಲಿ ಹತನಾದನು. ಆದುದರಿಂದ ಕೋಪಗೊಳ್ಳಬೇಡ! ಮನಸ್ಸನ್ನು ಶೋಕದಲ್ಲಿ ತೊಡಗಿಸಬೇಡ! ಇಲ್ಲಿರುವ ಪ್ರಾಣಿಗಳೆಲ್ಲವೂ ಕೊನೆಯಲ್ಲಿ ಇದೇ ಅವಸ್ಥೆಯನ್ನು ಅನುಭವಿಸುತ್ತವೆ! ಸಹೋದರರೊಂದಿಗೆ ಮತ್ತು ಎಲ್ಲ ಮಹಾತ್ಮ ಪಾರ್ಥಿವರೊಂದಿಗೆ ಸೇರಿ ಸಮರದಲ್ಲಿ ಕೌರವರೊಡನೆ ಯುದ್ಧಮಾಡು. ಇಂದಿನಿಂದ ಐದನೆಯ ದಿವಸದಲ್ಲಿ ಈ ಭೂಮಿಯು ನಿನ್ನದಾಗುತ್ತದೆ! ನಿತ್ಯವೂ ಧರ್ಮ, ದಯೆ, ತಪಸ್ಸು, ದಾನ, ಕ್ಷಮೆ ಮತ್ತು ಸತ್ಯಗಳ ಕುರಿತೇ ಚಿಂತಿಸು. ಪರಮಪ್ರೀತನಾಗಿ ಇವುಗಳ ಸೇವೆಯಲ್ಲಿರು. ಧರ್ಮವೆಲ್ಲಿದೆಯೋ ಅಲ್ಲಿ ಜಯವಿದೆ.”

ಪಾಂಡವನಿಗೆ ಹೀಗೆ ಹೇಳಿ ವ್ಯಾಸನು ಅಲ್ಲಿಯೇ ಅಂತರ್ಧಾನನಾದನು.

# ಹದಿನೈದನೇ ದಿನದ ಯುದ್ಧ – ದ್ರೋಣವಧೆ

## ಹದಿನಾಲ್ಕನೆಯ ದಿನದ ರಾತ್ರಿಯುದ್ಧದಲ್ಲಿ ರಣಾಂಗಣದಲ್ಲಿಯೇ ಸೇನೆಗಳು ನಿದ್ರೆಹೋದುದು

ಸೂತಪುತ್ರನಿಂದ ಘಟೋತ್ಕಚನು ಹತನಾದ ರಾತ್ರಿ ಯುಧಿಷ್ಠಿರನು ದುಃಖ-ರೋಷಗಳ ವಶನಾದನು. ಭೀಮನಿಂದ ಕೌರವ ಮಹಾಸೇನೆಯು ತಡೆಹಿಡಿಯಲ್ಪಟ್ಟಿರುವುದನ್ನು ನೋಡಿ ಕುಂಭಯೋನಿ ದ್ರೋಣನನ್ನು ತಡೆಯುವಂತೆ ಧೃಷ್ಟದ್ಯುಮ್ನನಿಗೆ ಹೇಳಿದನು:

> “ಶತ್ರುತಾಪನ! ದ್ರೋಣನ ವಿನಾಶಕ್ಕಾಗಿಯೇ ನೀನು ಅಗ್ನಿಯಿಂದ ಶರ, ಕವಚ, ಖಡ್ಗ ಮತ್ತು ಧನುಸ್ಸುಗಳೊಡನೆ ಸಮುತ್ಪನ್ನನಾಗಿದ್ದೀಯೆ. ಆದುದರಿಂದ ನೀನು ಸ್ವಲ್ಪವೂ ಭಯಪಡದೇ ಸಂತೋಷದಿಂದ ರಣದಲ್ಲಿ ಅವನನ್ನು ಆಕ್ರಮಣಿಸು! ಜನಮೇಜಯ, ಶಿಖಂಡಿ, ದೌರ್ಮುಖ ಮತ್ತು ಯಶೋಧನರು ಕುಂಭಯೋನಿಯನ್ನು ಎಲ್ಲಕಡೆಗಳಿಂದ ಆಕ್ರಮಣಿಸಲಿ. ನಕುಲ-ಸಹದೇವರು, ದ್ರೌಪದೇಯರು, ಪ್ರಭದ್ರಕರು, ಪುತ್ರ-ಭ್ರಾತೃಗಳೊಡನೆ ದ್ರುಪದ ಮತ್ತು

ವಿರಾಟರು, ಸಾತ್ಯಕಿ, ಕೇಕಯರು, ಮತ್ತು ಧನಂಜಯ ಇವರು ಭಾರದ್ವಾಜನ ವಧೆಯನ್ನು ಗುರಿಯಾಗಿಟ್ಟುಕೊಂಡು ವೇಗದಿಂದ ಆಕ್ರಮಣಿಸಲಿ. ಹಾಗೆಯೇ ಸರ್ವ ರಥಿಗಳೂ, ಆನೆ-ಕುದುರೆ ಸವಾರರೂ, ಇತರ ಪಾದಾತಿಗಳೂ ರಣದಲ್ಲಿ ಮಹಾರಥ ದ್ರೋಣನನ್ನು ಉರುಳಿಸಲು ಪ್ರಯತ್ನಿಸಲಿ."

ಹಾಗೆ ಪಾಂಡವನಿಂದ ಆಜ್ಞಾಪಿತರಾದ ಅವರೆಲ್ಲರೂ ವೇಗದಿಂದ ಮತ್ತು ಯುದ್ಧೋತ್ಸಾಹದಿಂದ ಕುಂಭಯೋನಿಯನ್ನು ಆಕ್ರಮಣಿಸಿದರು. ಸಮರದಲ್ಲಿ ಸರ್ವ ಪ್ರಯತ್ನದಿಂದ ಒಮ್ಮೆಲೇ ತಮ್ಮ ಮೇಲೆ ಬೀಳುತ್ತಿದ್ದ ಆ ಪಾಂಡವ ಸರ್ವರನ್ನೂ ಶಸ್ತ್ರಭೃತರಲ್ಲಿ ಶ್ರೇಷ್ಠನಾದ ದ್ರೋಣನು ಎದುರಿಸಿದನು. ಆಗ ದುರ್ಯೋಧನನು ಬಹಳ ಕ್ರೋಧಿತನಾಗಿ ದ್ರೋಣನನ್ನು ಜೀವಂತವಾಗಿಡಲು ಇಚ್ಛಿಸಿ ಸರ್ವ ಪ್ರಯತ್ನದಿಂದ ಪಾಂಡವರನ್ನು ಆಕ್ರಮಣಿಸಿದನು. ಆಗ ಬಳಲಿದ್ದ ಪಾಂಡವರ ಮತ್ತು ಕುರುಗಳ ವಾಹನ-ಸೈನಿಕರ ನಡುವೆ, ಪರಸ್ಪರರ ಮೇಲೆ ಗರ್ಜಿಸುತ್ತಾ, ಯುದ್ಧವು ಪ್ರಾರಂಭವಾಯಿತು.

ಯುದ್ಧದಲ್ಲಿ ಬಳಲಿದ್ದ ಮತ್ತು ನಿದ್ರೆಯಲ್ಲಿ ಅಂಧರಂತಾಗಿದ್ದ ಆ ಮಹಾರಥರು ಯಾವುದೇ ರೀತಿಯಲ್ಲಿ ರಣದಲ್ಲಿ ಪ್ರಹಾರಮಾಡಲು ಸಾಧ್ಯವಾಗುತ್ತಿರಲಿಲ್ಲ. ಮೂರುಯಾಮಗಳ ಆ ಘೋರರೂಪೀ

ಭಯಾನಕ ರಾತ್ರಿಯು ಪ್ರಾಣಹಾರಿಣಿಯಾದ – ವಿಶೇಷವಾಗಿ ವಧಿಸಲ್ಪಡುತ್ತಿರುವವರಿಗೆ ಮತ್ತು ಗಾಯಗೊಂಡಿರುವವರಿಗೆ – ಸಹಸ್ರಯಾಮಗಳಂತೆ ತೋರಿತು. ಹಗಲು ರಾತ್ರಿ ಎಚ್ಚೆತ್ತಿದ್ದ ಅವರು ವಿಶೇಷವಾಗಿ ನಿದ್ರೆಯಿಂದ ಕಣ್ಣು ಕಾಣದಂತಾಗಿದ್ದರು. ಎಲ್ಲ ಕ್ಷತ್ರಿಯರೂ ನಿರುತ್ಸಾಹರಾಗಿ, ದೀನಚೇತಸರಾಗಿದ್ದರು. ಕೌರವರ ಮತ್ತು ಶತ್ರುಗಳ ಕೈಗಳಿಂದ ಅಸ್ತ್ರ ಮತ್ತು ಬಾಣಗಳು ಜಾರಿಬೀಳುತ್ತಿದ್ದವು. ಹಾಗೆ ನಿದ್ದೆ ಬರುತ್ತಿದ್ದರೂ ವಿಶೇಷವಾಗಿ ನಾಚಿಗೊಳ್ಳುತ್ತಿದ್ದ ಅವರು ಸ್ವಧರ್ಮವನ್ನು ನೋಡುತ್ತಾ ತಮ್ಮ ಸೇನೆಗಳನ್ನು ಬಿಟ್ಟು ಹೋಗುತ್ತಿರಲಿಲ್ಲ. ಕೆಲವು ಜನರು ನಿದ್ರೆಯಿಂದ ಕುರುಡರಾಗಿ ಅನ್ಯ ಶಸ್ತ್ರಗಳನ್ನು ವಿಸರ್ಜಿಸಿ – ಕೆಲವರು ಆನೆಗಳ ಮೇಲೆ, ಕೆಲವರು ರಥದಲ್ಲಿ ಮತ್ತು ಕೆಲವರು ಕುದುರೆಗಳ ಮೇಲೆ ನಿದ್ದೆಮಾಡುತ್ತಿದ್ದರು. ನಿದ್ರಾಂಧರಾದ ನರಾಧಿಪರಿಗೆ ಎಲ್ಲಿ ಏನು ನಡೆಯುತ್ತಿದೆ ಎನ್ನುವುದೇ ತಿಳಿಯುತ್ತಿರಲಿಲ್ಲ. ಸಮರದಲ್ಲಿ ಆ ಯೋಧರು ಅನ್ಯೋನ್ಯರನ್ನು ಯಮಕ್ಷಯಕ್ಕೆ ಕಳುಹಿಸುತ್ತಿದ್ದರು. ಸ್ವಪ್ನದಲ್ಲಿ ಕೆಲವರು ತಮ್ಮವರು ಮತ್ತು ಶತ್ರುಗಳು ಎಂದು ತಿಳಿಯದೇ ಸಮರದಲ್ಲಿ ಶತ್ರುಗಳನ್ನೂ ಸಂಹರಿಸುತ್ತಿದ್ದರು. ತಾವೂ ಸಾಯುತ್ತಿದ್ದರು. ತಮ್ಮ ಕಡೆಯವರನ್ನೂ ಸಂಹರಿಸುತ್ತಿದ್ದರು. ಮಹಾರಣದಲ್ಲಿ ನಿದ್ರೆಯಿಂದ ವಿವೇಚನರಹಿತರಾದ ಕೆಲವರು ಬಾಯಿಗೆ ಬಂದಂತೆ ಮಾತನಾಡಿಕೊಳ್ಳುತ್ತಿದ್ದರು. ನಿದ್ದೆಯಿಂದ ಕಣ್ಣುಗಳು ಕೆಂಪಾಗಿದ್ದರೂ

ನಿದ್ರೆಯಿಂದ ಕುರುಡರಾದ ಕೌರವರು ಯುದ್ಧಮಾಡಬೇಕೆಂದು ನಿಷ್ಠೆಯಿಂದ ನಿಂತಿದ್ದರು. ಆ ದಾರುಣ ಕತ್ತಲೆಯಲ್ಲಿ ಕೂಡ ನಿದ್ರಾಂಧರಾಗಿದ್ದರೂ ಕೆಲವರು ರಣದಲ್ಲಿ ಪರಸ್ಪರರನ್ನು ಸದೆಬಡಿಯುತ್ತಾ ಶೂರರನ್ನು ಸಂಹರಿಸುತ್ತಿದ್ದರು. ಬಹಳ ನಿದ್ರೆಯಿಂದ ತೂಕಡಿಸುತ್ತಿದ್ದ ಅನೇಕರು ಎದುರಾಳಿಗಳು ತಮ್ಮನ್ನು ಸಂಹರಿಸಿದರೂ ಅವರಿಗೆ ಅದು ತಿಳಿಯುತ್ತಲೇ ಇರಲಿಲ್ಲ.

ಸೈನಿಕರ ಆ ವಿಧದ ದುರವಸ್ಥೆಯನ್ನು ಕಂಡು ಪುರುಷರ್ಷಭ ಬೀಭತ್ಸುವು ನಾಲ್ಕು ದಿಕ್ಕುಗಳಲ್ಲಿಯೂ ಪ್ರತಿಧ್ವನಿಸುವಂತೆ ಉಚ್ಛ್ರಧ್ವನಿಯಲ್ಲಿ ಈ ಮಾತನ್ನಾಡಿದನು:

> “ವಾಹನಸಹಿತರಾಗಿ ನೀವೆಲ್ಲರೂ ನಿದ್ರೆಯಿಂದ ಕುರುಡಾಗಿದ್ದೀರಿ! ಈ ಸೈನ್ಯವೂ ಕೂಡ ಗಾಢಾಂಧಕಾರದಿಂದ ಮತ್ತು ಬಹಳ ಧೂಳಿನಿಂದ ಆವೃತವಾಗಿಬಿಟ್ಟಿದೆ. ಸೈನಿಕರೇ! ನಿಮಗೆಲ್ಲರಿಗೂ ಸರಿಯೆನ್ನಿಸಿದರೆ ಸ್ವಲ್ಪ ಕಾಲ ಯುದ್ಧ ಮಾಡದಿರಿ! ಈ ರಣಭೂಮಿಯಲ್ಲಿಯೇ ಮುಹೂರ್ತಕಾಲ ಕಣ್ಣುಮುಚ್ಚಿ ನಿದ್ರಿಸಿರಿ! ಕುರುಪಾಂಡವರೇ! ವಿಶ್ರಾಂತಿಯನ್ನು ಪಡೆದು ನಿದ್ರೆಯಿಂದ ಎಚ್ಚರಗೊಂಡ ನೀವು ಚಂದ್ರನು ಉದಯವಾಗಲು ಪುನಃ ಹಿಂದಿನಂತೆಯೇ ಅನ್ಯೋನ್ಯರನ್ನು

ಸ್ವರ್ಗಕ್ಕೆ ಕಳುಹಿಸುವಿರಂತೆ!”

ಧಾರ್ಮಿಕ ಆ ಸೈನಿಕರು ಅವನ ಆ ಮಾತನ್ನು ಕೇಳಿ ಸರಿಯೆಂದುಕೊಂಡು ಅನ್ಯೋನ್ಯರಿಗೆ:

“ಕರ್ಣ! ಕರ್ಣ! ರಾಜನ್ ದುರ್ಯೋಧನ! ಯುದ್ಧವನ್ನು ಕೂಡಲೇ ನಿಲ್ಲಿಸಿ. ಪಾಂಡವರ ಸೇನೆಯೂ ಕೂಡ ಯುದ್ಧದಿಂದ ವಿರತವಾಗಿದೆ!”

ಎಂದು ಕೂಗಿ ಹೇಳಿದರು. ಹಾಗೆಯೇ ಫಲ್ಗುನನು ಅಲ್ಲಲ್ಲಿ ಕೂಗಿ ಹೇಳುತ್ತಿರಲು ಸ್ವಲ್ಪಸಮಯದಲ್ಲಿಯೇ ಪಾಂಡವರ ಸೇನೆ ಮತ್ತು ಕೌರವರು ಯುದ್ಧವನ್ನು ನಿಲ್ಲಿಸಿದರು. ಅರ್ಜುನನ ಆ ಸಲಹೆಯನ್ನು ದೇವತೆಗಳೂ, ಋಷಿಗಳೂ, ಎಲ್ಲ ಸೈನಿಕರೂ ಪರಮ ಹರ್ಷಿತರಾಗಿ ಶ್ಲಾಘಿಸಿದರು. ದಯಾಭರಿತ ಆ ಮಾತನ್ನು ಗೌರವಿಸಿ ಸರ್ವಸೇನೆಗಳೂ ಮುಹೂರ್ತಕಾಲ ರಣದಲ್ಲಿಯೇ ಮಲಗಿದರು. ಕೌರವ ಧ್ವಜವುಳ್ಳವರು ಕೂಡ ವಿಶ್ರಾಮವನ್ನು ಪಡೆದು ಸುಖವನ್ನು ನೀಡಿದ ವೀರ ಅರ್ಜುನನನ್ನು ಪ್ರಶಂಸಿಸುತ್ತಾ ಹೇಳಿದರು:

“ಅನಘ! ನಿನ್ನಲ್ಲಿ ವೇದಗಳು, ಅಸ್ತ್ರಗಳು ಮತ್ತು ಬುದ್ಧಿ-ಪರಾಕ್ರಮಗಳು ಹಾಗೂ ಧರ್ಮ ಮತ್ತು ಭೂತಗಳ ಮೇಲೆ

ದಯೆಯು ಮೂರ್ತಿಮತ್ತಾಗಿ ನೆಲೆಸಿವೆ. ಬಳಲಿದ್ದ ನಮಗೆ ನೀನು ಆಶ್ವಾಸನೆಯಿತ್ತು ನಿದ್ರೆಯ ಪರಮಸುಖವನ್ನು ಅನುಭವಿಸುವಂತೆ ಮಾಡಿದೆ. ಬೇಗನೆ ನಿನ್ನ ಮನಸ್ಸಿಗೆ ಪ್ರಿಯವಾದುದನ್ನು ಪಡೆದುಕೊಳ್ಳುವೆ!"

ಈ ರೀತಿ ಮಹಾರಥರು ಆ ನರವ್ಯಾಘ್ರನನ್ನು ಪ್ರಶಂಸಿಸುತ್ತಾ ಸ್ವಲ್ಪ ಹೊತ್ತಿನಲ್ಲಿಯೇ ನಿದ್ರಾಪರವಶರಾಗಿ ಸುಮ್ಮನಾದರು.

ಕೆಲವರು ಕುದುರೆಗಳ ಮೇಲೆಯೇ ಮಲಗಿದರು. ಇನ್ನು ಕೆಲವರು ರಥದ ಆಸನಗಳ ಮೇಲೆ, ಅನ್ಯರು ಆನೆಗಳ ಹೆಗಲಿನಮೇಲೂ ಮತ್ತು ಇನ್ನು ಕೆಲವರು ಭೂಮಿಯಮೇಲೂ ಮಲಗಿದರು. ಮನುಷ್ಯರು ಆಯುಧಗಳೊಂದಿಗೆ, ಗದೆಗಳನ್ನು ಹಿಡಿದುಕೊಂಡು, ಖಡ್ಗ-ಪರಶುಗಳನ್ನು ಹಿಡಿದು, ಕೆಲವರು ಪ್ರಾಸ-ಕವಚಗಳೊಂದಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಮಲಗಿದ್ದರು. ನಿದ್ರೆಯಿಂದ ಕುರುಡಾಗಿದ್ದ ಆನೆಗಳು ಸರ್ಪಕ್ಕೆ ಸಮಾನವಾಗಿದ್ದ ಮತ್ತು ಭೂಮಿಯ ಧೂಳಿನಿಂದ ಅವಲಿಪ್ತವಾಗಿದ್ದ ಸೊಂಡಿಲುಗಳಿಂದ ಸುದೀರ್ಘ ಶ್ವಾಸೋಚ್ಛ್ವಾಸಗಳನ್ನು ಬಿಡುತ್ತಾ ರಣಾಂಗಣವನ್ನೇ ಶೀತಲಗೊಳಿಸಿದವು. ಸುದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಮಲಗಿದ್ದ ಆನೆಗಳು ಆ ರಣಾಂಗಣದಲ್ಲಿ ಭುಸುಗುಟ್ಟುವ ಸರ್ಪಗಳಿಂದ ಕೂಡಿದ

ಕಡಿದು ಬಿದ್ದಿರುವ ಪರ್ವತಗಳಂತೆ ಕಾಣುತ್ತಿದ್ದವು. ಕಾಂಚನದ ಕಡಿವಾಣಗಳುಳ್ಳ ಕುದುರೆಗಳು ಕತ್ತಿನ ಕೂದಲುಗಳಮೇಲೆ ಕಟ್ಟಲ್ಪಟ್ಟಿದ್ದ ನೊಗಗಳಿಂದಲೂ ಗೊರಸುಗಳ ತುದಿಯಿಂದಲೂ ಭೂಮಿಯನ್ನು ಕೆರೆಯುತ್ತಾ ಸಮವಾಗಿದ್ದ ರಣಭೂಮಿಯನ್ನು ಹಳ್ಳ-ತಿಟ್ಟುಗಳಾಗುವಂತೆ ಮಾಡಿದವು. ಅಲ್ಲಿ ಎಲ್ಲಕಡೆ ಕುದುರೆಗಳು ರಥಗಳಿಗೆ ಕಟ್ಟಿಕೊಂಡೇ ನಿದ್ದೆಮಾಡುತ್ತಿದ್ದವು.

ಹಾಗೆ ತಮ್ಮ ವಾಹನಗಳೊಡನೆ ಸುಮ್ಮನೇ ಚಲಿಸದೇ ಗಾಢನಿದ್ರೆಯಲ್ಲಿ ಮಲಗಿರುವುದನ್ನು ನೋಡಿದರೆ ಕುಶಲ ಚಿತ್ರಕಾರನು ಚಿತ್ರಪಟದ ಮೇಲೆ ಅದ್ಭುತ ಚಿತ್ರವನ್ನು ಬರೆದಿರುವನೋ ಎಂಬಂತೆ ತೋರುತ್ತಿತ್ತು. ಪರಸ್ಪರರ ಸಾಯಕಗಳಿಂದ ಅಂಗಾಂಗಗಳಲ್ಲಿ ಗಾಯಗೊಂಡು ಆನೆಗಳ ಕುಂಭಸ್ಥಳಗಳ ಮೇಲೆ ಮುಖವನ್ನಿಟ್ಟು ಮಲಗಿರುವ ಕುಂಡಲಗಳನ್ನು ಧರಿಸಿದ್ದ ಆ ಯುವಕರು ಕಾಮಿನಿಯರ ಕುಚಗಳ ನಡುವೆ ಮುಖವನ್ನು ಹುದುಗಿಸಿಕೊಂಡು ಮಲಗಿರುವ ಕಾಮುಕರಂತೆ ಕಾಣುತ್ತಿದ್ದರು. ಆಗ ಕಾಮಿನಿಯರ ಕಪೋಲಗಳಂತೆ ಬಿಳುಪಾಗಿದ್ದ ನಯನಾನಂದಕರ ಕುಮುದನಾಥ ಚಂದ್ರನು ಮಹೇಂದ್ರನ ಪೂರ್ವ ದಿಕ್ಕನ್ನು ಅಲಂಕರಿಸಿದನು.

ಆಗ ಮುಹೂರ್ತಕಾಲದಲ್ಲಿ ಮೊಲದ ಚಿಹ್ನೆಯುಳ್ಳ ಭಗವಾನ್

ಚಂದ್ರನು ನಕ್ಷತ್ರಗಳ ಬೆಳಕನ್ನು ತಾನೇ ಹೀರಿಕೊಳ್ಳುತ್ತಾ ಮೊದಲು ಅರುಣನನ್ನು ತೋರಿಸಿದನು. ಅರುಣನ ಉದಯವನ್ನು ಅನುಸರಿಸಿ ಚಂದ್ರನು ಸುವರ್ಣಪ್ರಭೆಗೆ ಸಮಾನ ಪ್ರಭೆಯ ದೊಡ್ಡ ಕಿರಣಗಳ ಸಮೂಹಗಳನ್ನು ಮಂದ ಮಂದವಾಗಿ ಹೊರಹೊಮ್ಮಿಸಿದನು. ಚಂದ್ರನ ಆ ರಶ್ಮಿಗಳು ಪ್ರಭೆಯಿಂದ ಕತ್ತಲೆಯನ್ನು ಓಡಿಸುತ್ತಾ, ಮೆಲ್ಲ ಮೆಲ್ಲಗೆ ಎಲ್ಲ ದಿಕ್ಕುಗಳನ್ನೂ ಅಂತರಿಕ್ಷ-ಭೂಮಿಗಳನ್ನು ವ್ಯಾಪಿಸಿದವು. ಆಗ ಮುಹೂರ್ತಕಾಲದಲ್ಲಿ ವಿಶ್ವವೇ ಜ್ಯೋತಿರ್ಮಯವಾಗಿ ಬೆಳಗಿತು. ಹೇಳಹೆಸರಿಲ್ಲದಂತೆ ಕತ್ತಲೆಯು ಎಲ್ಲಿಗೋ ಓಡಿಹೋಯಿತು. ನಿಶಾಕರನು

ಪೂರ್ಣಪ್ರಕಾಶದಿಂದ ಬೆಳಗುತ್ತಿರಲಾಗಿ ಹಗಲಿನಂತೆಯೇ ಲೋಕವು ಚಂದ್ರನ ಬೆಳಕಿನಿಂದ ಬೆಳಗತೊಡಗಲು ಕೆಲವು ನಕ್ತಂಚರ ಪ್ರಾಣಿಗಳು ಅಲ್ಲಲ್ಲಿ ಸಂಚರಿಸತೊಡಗಿದವು. ಸೂರ್ಯನ ರಶ್ಮಿಗಳಿಂದ ಕಮಲಪುಷ್ಪಗಳ ವನವು ವಿಕಸಿತವಾಗುವಂತೆ ಚಂದ್ರಕಿರಣಗಳ ಸ್ಪರ್ಶದಿಂದ ಸೈನ್ಯವು ಎಚ್ಚರಗೊಂಡಿತು. ಚಂದ್ರೋದಯದ ಪ್ರಭಾವದಿಂದ ಸಮುದ್ರವು ಅಲ್ಲೋಲ-ಕಲ್ಲೋಲವಾಗುವಂತೆ ಚಂದ್ರೋದಯದಿಂದ ಎಚ್ಚೆತ್ತ ಸೇನಾಸಾಗರವೂ ಕ್ಷೋಭೆಗೊಂಡಿತು. ಅನಂತರ ಪರಮ ಲೋಕಗಳನ್ನು ಬಯಸಿದ್ದ ಅವರ ನಡುವೆ

ಲೋಕವಿನಾಶಕಾರಿ ಆ ಯುದ್ಧವು ಪುನಃ ಪ್ರಾರಂಭವಾಯಿತು.

## ದುರ್ಯೋಧನನು ದ್ರೋಣನ ಅವಹೇಳನಮಾಡಿದುದು

ಅನಂತರ ಕ್ರೋಧಾವಿಷ್ಟ ದುರ್ಯೋಧನನು ದ್ರೋಣನ ಬಳಿಬಂದು ಹರ್ಷವನ್ನೂ ತೇಜಸ್ಸನ್ನೂ ಹುಟ್ಟಿಸುತ್ತಾ ಈ ಮಾತನ್ನಾಡಿದನು:

> "ಸಂಗ್ರಾಮದಲ್ಲಿ ಬಳಲಿ ವಿಶ್ರಮಿಸುತ್ತಿರುವ, ಉತ್ಸಾಹಹೀನರಾಗಿರುವವರ ಮೇಲೆ – ಅದರಲ್ಲೂ ವಿಶೇಷವಾಗಿ ಲಕ್ಷ್ಯವನ್ನು ಭೇದಿಸಬಲ್ಲ ಶತ್ರುಗಳ ಮೇಲೆ - ಕ್ಷಮೆಯನ್ನು ತೋರಿಸಲೇ ಬಾರದು. ನಿಮಗೆ ಪ್ರಿಯವಾದುದನ್ನು ಮಾಡಲೋಸುಗವೇ ನಾವು ಈಗ ತಾಳ್ಮೆಯಿಂದ ಇದ್ದೇವೆ. ನಿಶ್ಚಿಂತರಾಗಿ ವಿಶ್ರಾಂತಿಯನ್ನು ಪಡೆದ ಈ ಪಾಂಡವರು ಈಗ ಇನ್ನೂ ಹೆಚ್ಚಿನ ಬಲವುಳ್ಳವರಾಗಿದ್ದಾರೆ. ನಾವಾದರೋ ತೇಜಸ್ಸು ಬಲಗಳಲ್ಲಿ ಸರ್ವಥಾ ಹೀನರಾಗುತ್ತಿದ್ದೇವೆ. ನಿಮ್ಮಿಂದ ಪರಿಪಾಲಿಸಲ್ಪಟ್ಟಿರುವ ಅವರು ಪುನಃ ಪುನಃ ವರ್ಧಿಸುತ್ತಲೇ ಇದ್ದಾರೆ. ಬ್ರಹ್ಮಾಸ್ತ್ರವೇ ಮೊದಲಾದ ಎಲ್ಲ ದಿವ್ಯಾಸ್ತ್ರಗಳೂ ವಿಶೇಷವಾಗಿ ನಿಮ್ಮಲ್ಲಿಯೇ ಪ್ರತಿಷ್ಠಿತವಾಗಿವೆ. ಪಾಂಡವರಾಗಲೀ, ನಾವಾಗಲೀ ಮತ್ತು ಲೋಕದಲ್ಲಿನ ಅನ್ಯ ಧನುರ್ಧರರಾಗಲೀ ಯುದ್ಧದಲ್ಲಿ ತೊಡಗಿರುವ ನಿಮಗೆ

ಸಮಾನರಾಗುವುದಿಲ್ಲ. ನಿಮಗೆ ಈ ಮಾತನ್ನು ನಾನು ಸತ್ಯವಾಗಿ ಹೇಳುತ್ತಿದ್ದೇನೆ. ಸರ್ವಾಸ್ತ್ರಗಳನ್ನು ತಿಳಿದುಕೊಂಡಿರುವ ನೀವು ಸುರಾಸುರಗಂಧರ್ವರಿಂದ ಕೂಡಿದ ಈ ಸರ್ವ ಲೋಕಗಳನ್ನೂ ದಿವ್ಯಾಸ್ತ್ರಗಳಿಂದ ನಾಶಗೊಳಿಸಬಲ್ಲಿರಿ. ಅದರಲ್ಲಿ ಸಂಶಯವೇ ಇಲ್ಲ. ಅವರು ನಿಮಗೆ ಹೆದರಿದ್ದರೂ ಅವರ ಶಿಷ್ಯತ್ವವನ್ನು ಮುಂದಿರಿಸಿಕೊಂಡೋ ಅಥವಾ ನನ್ನ ಮಂದಭಾಗ್ಯದಿಂದಲೋ ನೀವು ಅವರಲ್ಲಿ ವಿಶೇಷ ಸಹನೆಯನ್ನೇ ತೋರಿಸುತ್ತಿರುವಿರಿ!”

ಯುದ್ಧೋತ್ಸಾಹವನ್ನು ತುಂಬಬೇಕೆಂದು ಬಯಸಿ ದುರ್ಯೋಧನನು ಹೇಳಿದ ಈ ಮಾತಿನಿಂದ ಕುಪಿತನಾದ ದ್ರೋಣನು ಕೋಪವಶನಾಗಿ ಅವನಿಗೆ ಹೀಗೆ ಹೇಳಿದನು:

“ದುರ್ಯೋಧನ! ವೃದ್ಧನಾಗಿದ್ದರೂ ನಾನು ನನ್ನ ಪರಮ ಶಕ್ತಿಯನ್ನುಪಯೋಗಿಸಿ ಯುದ್ಧದಲ್ಲಿ ಹೋರಾಡುತ್ತಿದ್ದೇನೆ. ವಿಜಯದ ಆಸೆಯಿಂದ ನಾನು ನೀಚಕಾರ್ಯವನ್ನು ಮಾಡಬೇಕೇ? ಇಲ್ಲಿರುವ ಎಲ್ಲರಿಗೂ ಅಸ್ತ್ರಗಳು ತಿಳಿದಿಲ್ಲ ಎಂದು ಅಂದುಕೊಂಡು ಅಸ್ತ್ರವಿದನಾದ ನಾನು ಎಲ್ಲರನ್ನೂ

ಸಂಹರಿಸಬೇಕೇ? ಶುಭವೋ ಅಶುಭವೋ ನೀನು ಹೇಳಿದಂತೆಯೇ ನಾನು ಮಾಡುತ್ತೇನೆ. ನಿನ್ನ ಮಾತಿಗೆ ಹೊರತಾಗಿ ನಾನು ಏನನ್ನೂ ಮಾಡುವುದಿಲ್ಲ. ಯುದ್ಧದಲ್ಲಿ ಪರಾಕ್ರಮದಿಂದ ಹೋರಾಡಿ ಸರ್ವ ಪಾಂಚಾಲರನ್ನೂ ಸಂಹರಿಸಿದ ನಂತರವೇ ನಾನು ಈ ಕವಚವನ್ನು ಕಳಚುತ್ತೇನೆ. ಈ ಮಾತನ್ನು ನಾನು ನನ್ನ ಆಯುಧಗಳ ಮೇಲೆ ಆಣೆಯಿಟ್ಟು ಹೇಳುತ್ತಿದ್ದೇನೆ. ಯುದ್ಧದಲ್ಲಿ ಬಳಲಿರುವ ಅರ್ಜುನನನ್ನು ಸಂಹರಿಸಿಬಿಡಬಹುದೆಂದು ನಿನಗನ್ನಿಸುತ್ತದೆಯಲ್ಲವೇ? ಅವನ ವೀರ್ಯದ ಕುರಿತಾದ ಸತ್ಯವನ್ನು ನಿನಗೆ ಹೇಳುತ್ತೇನೆ. ಕೇಳು!

ರಣದಲ್ಲಿ ಕುಪಿತ ಸವ್ಯಸಾಚಿಯನ್ನು ದೇವತೆಗಳಾಗಲೀ, ಗಂಧರ್ವರಾಗಲೀ, ಯಕ್ಷರಾಗಲೀ ಮತ್ತು ರಾಕ್ಷಸರಾಗಲೀ ಎದುರಿಸಲು ಉತ್ಸಾಹಿಸುವುದಿಲ್ಲ. ಖಾಂಡವದಲ್ಲಿ ಅದ್ಭುತ ಮಳೆಸುರಿಸುತ್ತಿದ್ದ ಭಗವಾನ್ ಸುರೇಶ್ವರನನ್ನೇ ಮಹಾತ್ಮ ಅರ್ಜುನನು ಸಾಯಕಗಳಿಂದ ನಿಲ್ಲಿಸಿದನು. ಬಲಗರ್ವಿತ ಯಕ್ಷರು, ನಾಗರು, ದೈತ್ಯರು ಮತ್ತು ಅನ್ಯರು ಈ ಪುರುಷೇಂದ್ರನಿಂದ ನಾಶಗೊಂಡಿರುವುದು ನಿನಗೆ ತಿಳಿದೇ ಇದೆ. ಘೋಷಯಾತ್ರೆಯ ಸಮಯದಲ್ಲಿ ಗಂಧರ್ವ

> ಚಿತ್ರಸೇನನೇ ಮೊದಲಾದವರನ್ನು ಗೆದ್ದು ಈ ದೃಢಧನ್ವಿಯು ನಿನ್ನ ಬಿಡುಗಡೆಗೊಳಿಸಿ ನಾಚಿಕೆಗೀಡುಮಾಡಲಿಲ್ಲವೇ? ಈ ವೀರನು ಸಂಗ್ರಾಮದಲ್ಲಿ ದೇವತೆಗಳ ಶತ್ರುಗಳಾದ ಸುರರಿಗೂ ಅವಧ್ಯ ನಿವಾತಕವಚರನ್ನೂ ಸೋಲಿಸಿದನು. ಸಹಸ್ರಾರು ಹಿರಣ್ಯಪುರವಾಸಿ ದಾನವರನ್ನು ಈ ಪುರುಷವ್ಯಾಘ್ರನು ಗೆದ್ದನು. ಇದು ಮನುಷ್ಯರಿಗೆ ಹೇಗೆ ಸಾಧ್ಯ? ನಾವೆಷ್ಟೇ ಪ್ರಯತ್ನಪಟ್ಟು ಹೋರಾಡುತ್ತಿದ್ದರೂ ನಿನ್ನ ಈ ಸೇನೆಯು ನಿನ್ನ ಕಣ್ಣುಮುಂದೇ ಪಾಂಡುಪುತ್ರನಿಂದ ನಾಶವಾಗುತ್ತಿಲ್ಲವೇ?”

ಹೀಗೆ ಅರ್ಜುನನನ್ನು ಪ್ರಶಂಸಿಸುತ್ತಿದ್ದ ದ್ರೋಣನಿಗೆ ಕುಪಿತನಾದ ದುರ್ಯೋಧನನು ಪುನಃ ಹೀಗೆ ಹೇಳಿದನು:

> “ಯುದ್ಧದಲ್ಲಿ ಇಂದು ಭಾರತೀಸೇನೆಯನ್ನು ಎರಡು ಭಾಗಗಳನ್ನಾಗಿಸಿಕೊಂಡು ನಾನು, ದುಃಶಾಸನ, ಕರ್ಣ ಮತ್ತು ಸೋದರಮಾವ ಶಕುನಿ – ಅರ್ಜುನನನ್ನು ಸಂಹರಿಸುತ್ತೇವೆ.”

ಅವನ ಆ ಮಾತನ್ನು ಕೇಳಿ ನಸುನಗುತ್ತಾ ಭಾರದ್ವಾಜನು “ನಿನಗೆ ಮಂಗಳವಾಗಲಿ!” ಎಂದು ಹೇಳಿ ರಾಜನನ್ನು ಕಳುಹಿಸಿಕೊಡುತ್ತಾ ಇದನ್ನೂ ಹೇಳಿದನು:

“ತೇಜಸ್ಸಿನಿಂದ ಪ್ರಜ್ವಲಿಸುತ್ತಿರುವ ಅಕ್ಷಯ ಕ್ಷತ್ರಿಯರ್ಷಭ ಗಾಂಡೀವಧನ್ವಿಯನ್ನು ಯಾವ ಕ್ಷತ್ರಿಯನು ವಿನಾಶಮಾಡಬಲ್ಲನು? ದಿಕ್ಪಾಲಕ ವಿತ್ತಪತಿ ಕುಬೇರನಾಗಲೀ, ಇಂದ್ರನಾಗಲೀ, ಯಮನಾಗಲೀ, ಜಲೇಶ್ವರ ವರುಣನಾಗಲೀ ಅಥವಾ ಅಸುರ-ಉರಗ-ರಾಕ್ಷಸರೂ ಕೂಡ ಆಯುಧಪಾಣಿ ಅರ್ಜುನನನ್ನು ನಾಶಗೊಳಿಸಲಾರರು. ನೀನಾಡಿದ ಈ ಮಾತುಗಳನ್ನು ಕೇವಲು ಮೂಢರು ಆಡುತ್ತಾರೆ. ಯುದ್ಧದಲ್ಲಿ ಅರ್ಜುನನನ್ನು ಎದುರಿಸಿದ ಯಾರು ತಾನೇ ಕುಶಲಿಗಳಾಗಿ ಮನೆಗೆ ಹಿಂದಿರುಗುತ್ತಾರೆ? ನೀನಾದರೋ ಎಲ್ಲರನ್ನೂ ಅತಿಯಾಗಿ ಶಂಕಿಸುವವನು. ನಿಷ್ಠುರವಾಗಿ ಮಾತನಾಡುತ್ತೀಯೆ. ಪಾಪಭರಿತ ನಿಶ್ಚಯಗಳನ್ನು ಕೈಗೊಳ್ಳುತ್ತೀಯೆ. ನಿನಗೆ ಶ್ರೇಯಸ್ಕರರಾದವರ ಮತ್ತು ನಿನ್ನ ಹಿತದಲ್ಲಿಯೇ ನಿರತರಾದವರ ಮೇಲೆ ಕೂಡ ನೀನು ನಿಷ್ಠುರವಾಗಿ ಮಾತನಾಡಬಯಸುತ್ತೀಯೆ! ಕೌಂತೇಯನ ಸಮೀಪಕ್ಕೆ ನೀನೇ ಹೋಗು! ನಿನಗೋಸ್ಕರವಾಗಿ ಬೇಗನೆ ಅವನನ್ನು ಸಂಹರಿಸು! ಕುಲಜನೂ ಕ್ಷತ್ರಿಯನೂ ಆಗಿರುವ ನೀನು ಯುದ್ಧಮಾಡಲು ಏಕೆ ಶಂಕಿಸುತ್ತಿರುವೆ? ನಿರಪರಾಧಿ ಈ ಪಾರ್ಥಿವಸರ್ವರನ್ನೂ ಏಕೆ ಸುಮ್ಮನೇ ನಾಶಗೊಳಿಸುತ್ತಿರುವೆ? ಈ ವೈರತ್ವಕ್ಕೆ

ಮೂಲಕಾರಣನಾದ ನೀನೇ ಅರ್ಜುನನನ್ನು ಎದುರಿಸುವುದು ಸರಿಯಾಗಿದೆ. ತಿಳಿದವನಾದ, ಕ್ಷತ್ರಧರ್ಮವನ್ನು ಅನುಸರಿಸುವ, ಮೋಸದ ದ್ಯೂತದಲ್ಲಿ ನಿಪುಣನಾಗಿರುವ ಗಾಂಧಾರದೇಶದ ಈ ನಿನ್ನ ಸೋದರಮಾವನನ್ನೂ ಅರ್ಜುನನೊಡನೆ ಯುದ್ಧಮಾಡಲು ಕಳುಹಿಸು. ಅಕ್ಷವಿದ್ಯೆಯಲ್ಲಿ ಮಹಾಕುಶಲನಾಗಿರುವ, ವಕ್ರಬುದ್ಧಿಯುಳ್ಳ, ಜೂಜಿನ ಜಾಲವನ್ನು ವ್ಯವಸ್ಥಾಪಿಸುವ, ಶಠ, ಜೂಜುಕೋರ, ಮೋಸದಲ್ಲಿ ಮಹಾಪ್ರಾಜ್ಞನಾದ ಇವನು ಯುದ್ಧದಲ್ಲಿ ಪಾಂಡವರನ್ನು ಜಯಿಸುತ್ತಾನೆ.

ಕರ್ಣನೊಡನೆ ಸೇರಿಕೊಂಡು ಅತ್ಯಂತ ಸಂತೋಷಗೊಂಡವನಂತೆ ಮೋಹದಿಂದ ನೀನು ಏಕಾಂತದಲ್ಲಿ ಧೃತರಾಷ್ಟ್ರನಿಗೆ ಕೊಚ್ಚಿಕೊಳ್ಳುತ್ತಿದ್ದುದನ್ನು ನಾನು ಕೇಳಿದ್ದೇನೆ: “ಅಪ್ಪಾ ! ನಾನು, ಕರ್ಣ, ಭ್ರಾತ ದುಃಶಾಸನ ಈ ಮೂವರೇ ಸೇರಿ ಪಾಂಡುಪುತ್ರರನ್ನು ಸಮರದಲ್ಲಿ ಸಂಹರಿಸಬಲ್ಲೆವು !” ಹೀಗೆ ನೀನು ಗಳಹುತ್ತಿರುವುದನ್ನು ಪ್ರತಿ ಸಭೆಯಲ್ಲಿಯೂ ಕೇಳುತ್ತಲೇ ಬಂದಿದ್ದೇವೆ. ಆ ಪ್ರತಿಜ್ಞೆಗಳು ಸತ್ಯವಾಗುವಂತೆ ಅವರೊಂದಿಗೆ

ನೀನು ನಡೆದುಕೋ! ಆ ನಿನ್ನ ಶತ್ರು ಅರ್ಜುನನು ಯಾವ ಶಂಕೆಯೂ ಇಲ್ಲದೇ ನಿನ್ನ ಮುಂದೆ ನಿಂತಿದ್ದಾನೆ. ಕ್ಷತ್ರಿಯಧರ್ಮವನ್ನು ಮನಸ್ಸಿನಲ್ಲಿಟ್ಟುಕೊಂಡು ಯುದ್ಧಮಾಡು. ವಿಜಯಿಯಾದರೂ ವಧಿಸಲ್ಪಟ್ಟರೂ ನೀನು ಶ್ಲಾಘನೀಯನಾಗುತ್ತೀಯೆ. ದಾನಗಳನ್ನಿತ್ತಿದ್ದೀಯೆ. ಚೆನ್ನಾಗಿ ಭೋಗಿಸಿರುವೆ. ವೇದಾಧ್ಯಯನ ಮಾಡಿರುವೆ. ಬಯಸಿದಷ್ಟು ಐಶ್ವರ್ಯವನ್ನು ಹೊಂದಿರುವೆ. ಋಣಗಳಿಂದ ಮುಕ್ತನಾಗಿರುವೆ. ಪಾಂಡವನೊಡನೆ ಯುದ್ಧಮಾಡು. ಭಯಪಡಬೇಡ!”

ಸಮರದಲ್ಲಿ ಹೀಗೆ ಹೇಳಿ ದ್ರೋಣನು ಶತ್ರುಗಳಿರುವಲ್ಲಿಗೆ ತೆರಳಿದನು. ಅನಂತರ ಸೇನೆಯು ಎರಡು ಭಾಗಗಳಾಗಿ ವಿಂಗಡಿಸಲ್ಪಟ್ಟು ಯುದ್ಧವು ಪ್ರಾರಂಭವಾಯಿತು.

## ಅರ್ಜುನನ ಯುದ್ಧ

ರಾತ್ರಿಯ ಮೂರುಭಾಗಗಳೇ ಉಳಿದಿರಲು ಸಂಹೃಷ್ಟ ಕುರುಗಳು ಮತ್ತು ಪಾಂಡವರು ಯುದ್ಧವನ್ನು ಪ್ರಾರಂಭಿಸಿದರು. ಸ್ವಲ್ಪವೇ ಸಮಯದಲ್ಲಿ ಆದಿತ್ಯನ ಮುಂಭಾಗದಲ್ಲಿರುವ ಅರುಣನು ಚಂದ್ರನ ಪ್ರಭೆಯನ್ನು ಅಪಹರಿಸುತ್ತಾ ಅಂತರಿಕ್ಷವನ್ನೇ ಕೆಂಪಾಗಿ ಮಾಡುತ್ತಾ ಉದಯಿಸಿದನು.

ಅನಂತರ ಸೈನ್ಯವನ್ನು ಎರಡುಭಾಗಗಳನ್ನಾಗಿ ಮಾಡಿಕೊಂಡು ದ್ರೋಣನು ದುರ್ಯೋಧನನನ್ನು ಮುಂದೆಮಾಡಿಕೊಂಡು ಪಾಂಚಾಲರೊಂದಿಗೆ ಸೋಮಕ-ಪಾಂಡವರನ್ನು ಆಕ್ರಮಣಿಸಿದನು. ಎರಡು ಭಾಗಗಳಾಗಿದ್ದ ಕುರುಗಳನ್ನು ನೋಡಿ ಮಾಧವನು ಅರ್ಜುನನಿಗೆ ಹೇಳಿದನು: "ಸವ್ಯಸಾಚೀ! ಬಾಂಧವರಾದ ಈ ಕುರುಗಳನ್ನು ನಿನ್ನ ಎಡಭಾಗದಲ್ಲಿರಿಸಿಕೊಂಡು ಹೋಗೋಣ!" ಹಾಗೆಯೇ ಆಗಲೆಂದು ಮಾಧವನಿಗೆ ಅನುಮತಿಯನ್ನಿತ್ತ ನಂತರ ಧನಂಜಯನು ದ್ರೋಣ-ಕರ್ಣರನ್ನು ಅವರ ಎಡಭಾಗದಿಂದ ಪ್ರದಕ್ಷಿಣೆ ಮಾಡಿದನು. ಕೃಷ್ಣನ ಅಭಿಪ್ರಾಯವೇನೆಂದು ತಿಳಿದ ಅರ್ಜುನನು ಸೇನೆಯ ಅಗ್ರಭಾಗದಲ್ಲಿದ್ದ ಭೀಮಸೇನನನ್ನು ನೋಡಿ ಅವನನ್ನು ಸೇರಿಕೊಂಡನು.

ಭೀಮನು ಹೇಳಿದನು:

> "ಅರ್ಜುನ! ನಾನು ಹೇಳುವುದನ್ನು ಕೇಳು! ಯಾವುದಕ್ಕಾಗಿ ಕ್ಷತ್ರಿಯರಾಗಿ ಹುಟ್ಟಿದೆವೋ ಅದರ ಕಾಲವು ಬಂದೊದಗಿದೆ! ಈ ಸಮಯದಲ್ಲಿ ಕೂಡ ಶ್ರೇಯಸ್ಸನ್ನು ಪಡೆಯದೇ ಇದ್ದರೆ ಅಸಂಭಾವಿತನ ರೂಪವನ್ನು ಪಡೆಯುವೆ. ನಮಗೆ ಅತಿ ಕಠೋರವಾದುದನ್ನು ಮಾಡುವೆ! ನಿನ್ನ ವೀರ್ಯದಿಂದ ಸತ್ಯ,

ಸಂಪತ್ತು, ಧರ್ಮ ಮತ್ತು ಯಶಸ್ಸುಗಳ ಋಣವನ್ನು ತೀರಿಸು!
ಈ ಸೇನೆಗಳನ್ನು ಭೇದಿಸು!”

ಭೀಮ-ಕೇಶವರಿಂದ ಪ್ರಚೋದಿತನಾದ ಸವ್ಯಸಾಚಿಯು ಕರ್ಣ-ದ್ರೋಣರನ್ನು ನಾಲ್ಕೂ ಕಡೆಗಳಿಂದ ಮುತ್ತಿಗೆಹಾಕಿ ಆಕ್ರಮಣಿಸಿದನು. ರಣಾಂಗಣದ ಅಗ್ರಭಾಗದಿಂದ ಬಂದು ಕ್ಷತ್ರಿಯರ್ಷಭರನ್ನು ಉರಿಯುವ ಅಗ್ನಿಯಂತೆ ದಹಿಸುತ್ತಿದ್ದ ಆ ಪರಾಕ್ರಮಿ ಪರಾಕ್ರಾಂತನನ್ನು ಕ್ಷತ್ರಿಯರ್ಷಭರು ಪ್ರಯತ್ನಪಟ್ಟರೂ ತಡೆಹಿಡಿಯಲ ಶಕ್ಯರಾಗಲಿಲ್ಲ. ಆಗ ದುರ್ಯೋಧನ, ಕರ್ಣ ಮತ್ತು ಶಕುನಿಯರು ಧನಂಜಯನ ಮೇಲೆ ಶರವ್ರಾತಗಳನ್ನು ಸುರಿಸಿದರು. ಅವರ ಎಲ್ಲ ಅಸ್ತ್ರಗಳನ್ನೂ ಲೆಕ್ಕಿಸದೇ ಉತ್ತಮ ಅಸ್ತ್ರವಿದ ಅರ್ಜುನನು ಅವರನ್ನು ಶರಗಳಿಂದ ಮುಚ್ಚಿಬಿಟ್ಟನು. ಲಘುಹಸ್ತ ಧನಂಜಯನು ಅಸ್ತ್ರಗಳಿಂದ ಅಸ್ತ್ರಗಳನ್ನು ನಿರಸನಗೊಳಿಸಿ ಅವರೆಲ್ಲರನ್ನೂ ಹತ್ತು ಹತ್ತು ನಿಶಿತ ಶರಗಳಿಂದ ಹೊಡೆದು ಗಾಯಗೊಳಿಸಿದನು. ಆಗ ಧೂಳಿನ ರಾಶಿಯು ಮೇಲೆದ್ದು ಶರವೃಷ್ಟಿಯೊಂದಿಗೆ ಸುರಿಯತೊಡಗಲು ಘೋರ ಕತ್ತಲೆಯೂ ಮಹಾ ಶಬ್ಧವೂ ಆವರಿಸಿತು. ಆಕಾಶ-ಭೂಮಿ-ದಿಕ್ಕುಗಳು ಎಲ್ಲಿವೆಯೆನ್ನುವುದೇ ತಿಳಿಯುತ್ತಿರಲಿಲ್ಲ. ಸೈನ್ಯಗಳಿಂದ ಮೇಲೆದ್ದ ಧೂಳಿನಿಂದ ಅಚ್ಛಾದಿತವಾಗಿ ಎಲ್ಲವೂ ಅಂಧಕಾರಮಯವಾಗಿಯೇ ಕಾಣಿಸುತ್ತಿತ್ತು.

ಕೌರವರಾಗಲೀ ಪಾಂಡವರಾಗಲೀ ಯಾರು ಯಾರೆಂದು ಪರಸ್ಪರರನ್ನು ಗುರುತಿಸಲು ಸಾಧ್ಯವಾಗುತ್ತಿರಲಿಲ್ಲ. ವಿರಥ ರಥಿಗಳು ಪರಸ್ಪರರ ಬಳಿಸಾರಿ ಜುಟ್ಟನ್ನೂ, ಕವಚಗಳನ್ನೂ, ಭುಜಗಳನ್ನೂ ಹಿಡಿದು ಯುದ್ಧಮಾಡುತ್ತಿದ್ದರು. ಹತಾಶ್ವ ಹತಸಾರಥಿ ರಥಿಗಳು ಹತರಾಗಿದ್ದರೂ ಭಯಾರ್ದಿತರಾಗಿ ಜೀವಂತವಿರುವಂತೆಯೇ ಕಾಣುತ್ತಿದ್ದರು. ತೀರಿಕೊಂಡ ಕುದುರೆಗಳು ಕುದುರೆಸವಾರರೊಂದಿಗೆ ಸತ್ತುಹೋಗಿರುವ ಪರ್ವತಗಳಂತಿದ್ದ ಆನೆಗಳನ್ನು ಅಪ್ಪಿಕೊಂಡಿರುವವೋ ಎನ್ನುವಂತೆ ತೋರುತ್ತಿದ್ದವು.

## ವಿರಾಟ-ದ್ರುಪದರ ವಧೆ; ಧೃಷ್ಟದ್ಯುಮ್ನನ ಪ್ರತಿಜ್ಞೆ

ಅನಂತರ ದ್ರೋಣನು ಸಂಗ್ರಾಮದ ಉತ್ತರ ದಿಕ್ಕಿಗೆ ಹೋಗಿ ಅಲ್ಲಿ ಹೊಗೆಯಿಲ್ಲದ ಅಗ್ನಿಯಂತೆ ಪ್ರಜ್ವಲಿಸುತ್ತಾ ಯುದ್ಧಕ್ಕೆ ಅಣಿಯಾಗಿ ನಿಂತನು. ದ್ರೋಣನು ರಣಾಂಗಣದ ಒಂದುಕಡೆ ಬಂದು ನಿಂತಿರುವುದನ್ನು ನೋಡಿ ಪಾಂಡವರ ಸೇನೆಯು ಭಯದಿಂದ ತತ್ತರಿಸಿತು. ತೇಜಸ್ಸಿನಿಂದ ಬೆಳಗುತ್ತಿದ್ದ, ಕಳೆಯಿಂದ ತುಂಬಿಕೊಂಡು ಹೊಳೆಯುತ್ತಿದ್ದ ದ್ರೋಣನನ್ನು ನೋಡಿ ಅವರು ಭಯದಿಂದ ನಡುಗಿದರು, ಪಲಾಯನಗೈದರು ಮತ್ತು ಕಳೆಗುಂದಿದರು. ಮದೋದಕವನ್ನು ಸುರಿಸುವ ಸಲಗದಂತೆ ಶತ್ರುಸೇನೆಯನ್ನು

ಅಹ್ವಾನಿಸುತ್ತಿದ್ದ ಅವನನ್ನು ದಾನವರು ವಾಸವನನ್ನು ಹೇಗೋ ಹಾಗೆ ಜಯಿಸಲು ಇಚ್ಛಿಸಲಿಲ್ಲ. ಕೆಲವರು ನಿರುತ್ಸಾಹಿಗಳಾದರು. ಕೆಲವು ಅಭಿಮಾನಿಗಳು ಕ್ರುದ್ಧರಾದರು. ಕೆಲವರು ವಿಸ್ಮಿತರಾದರು. ಇನ್ನು ಕೆಲವರು ಸಹನೆಯನ್ನು ಕಳೆದುಕೊಂಡರು. ಕೆಲವು ನರಾಧಿಪರು ಕೈಗಳನ್ನು ಕೈತುದಿಗಳಿಂದ ಉಜ್ಜಿಕೊಂಡರು. ಇನ್ನು ಕೆಲವರು ಕ್ರೋಧಮೂರ್ಚಿತರಾಗಿ ಹಲ್ಲುಗಳಿಂದ ತುಟಿಗಳನ್ನು ಕಚ್ಚಿಕೊಂಡರು. ಕೆಲವರು ತಮ್ಮ ಆಯುಧಗಳನ್ನು ಗರಗರನೆ ತಿರುಗಿಸಿ ದ್ರೋಣನ ಮೇಲೆ ಎಸೆಯುತ್ತಿದ್ದರು. ಮತ್ತೆ ಕೆಲವರು ತಮ್ಮ ಭುಜಗಳನ್ನು ತಟ್ಟಿಕೊಳ್ಳುತ್ತಿದ್ದರು. ಇನ್ನು ಕೆಲವು ಮಹೌಜಸರು ತಮ್ಮ ಜೀವವನ್ನೇ ತೊರೆದು ದ್ರೋಣನನ್ನು ಆಕ್ರಮಣಿಸಿದರು. ವಿಶೇಷವಾಗಿ ಪಾಂಚಾಲರು ದ್ರೋಣನ ಸಾಯಕಗಳಿಂದ ಪೀಡಿತರಾಗಿದ್ದರೂ ತುಂಬಾ ವೇದನೆಯಿಂದಲೂ ಸಮರದಲ್ಲಿ ಯುದ್ಧಮಾಡುತ್ತಿದ್ದರು.

ಆಗ ರಣದಲ್ಲಿ ಹಾಗೆ ಸುತ್ತುತ್ತಿದ್ದ ಸಮರದುರ್ಜಯ ದ್ರೋಣನನ್ನು ವಿರಾಟ-ದ್ರುಪದರು ಸಂಗ್ರಾಮದಲ್ಲಿ ಎದುರಿಸಿದರು. ಆಗ ದ್ರುಪದನ ಮೂರು ಮೊಮ್ಮಕ್ಕಳೂ, ಚೇದಿಗಳೂ ದ್ರೋಣನನ್ನು ಯುದ್ಧದಲ್ಲಿ ಎದುರಿಸಿದರು. ಮೂರು ನಿಶಿತ ಶರಗಳಿಂದ ದ್ರೋಣನು ದ್ರುಪದನ ಆ ಮೂವರು ಮೊಮ್ಮಕ್ಕಳ ಪ್ರಾಣಗಳನ್ನು ಅಪಹರಿಸಿ ಭೂಮಿಯ ಮೇಲೆ

ಕೆಡವಿದನು. ಆಗ ಭಾರದ್ವಾಜ ದ್ರೋಣನು ಚೇದಿ-ಕೇಕಯ-ಸೃಂಜಯರನ್ನು ಗೆದ್ದು ಎಲ್ಲ ಮತ್ಸ್ಯರನ್ನೂ ಜಯಿಸಿದನು. ಆಗ ಕ್ರೋಧದಿಂದ ಯುದ್ಧದಲ್ಲಿ ದ್ರುಪದ ಮತ್ತು ವಿರಾಟರೂ ಕೂಡ ದ್ರೋಣನ ಮೇಲೆ ಶರವರ್ಷವನ್ನು ಸುರಿಸಿದರು. ಆಗ ಅರಿಮರ್ದನ ದ್ರೋಣನು ಚೂಪಾಗಿದ್ದ ಭಲ್ಲಗಳೆರಡರಿಂದ ದ್ರುಪದ-ವಿರಾಟ ಇಬ್ಬರನ್ನೂ ವೈವಸ್ವತಕ್ಷಯಕ್ಕೆ ಕಳುಹಿಸಿದನು. ವಿರಾಟ-ದ್ರುಪದರೂ ಕೇಕಯರೂ, ಚೇದಿ-ಮತ್ಸ್ಯರು ಮತ್ತು ಪಾಂಚಾಲರು ಹತರಾಗಲು, ದ್ರುಪದನ ಮೂವರು ವೀರ ಮೊಮ್ಮಕ್ಕಳು ಹತರಾಗಲು, ದ್ರೋಣನ ಆ ಕರ್ಮವನ್ನು ನೋಡಿ ಕೋಪ-ದುಃಖಸಮನ್ವಿತ ಮಹಾಮನಸ್ವಿ ಧೃಷ್ಟದ್ಯುಮ್ನನು ರಥಿಗಳ ಮಧ್ಯದಲ್ಲಿ ಶಪಥಮಾಡಿದನು:

> "ಇಂದಿನ ಯುದ್ಧದಲ್ಲಿ ಯಾರಕೈಯಿಂದ ದ್ರೋಣನು ತಪ್ಪಿಸಿಕೊಂಡು ಹೋಗುವನೋ ಅಥವಾ ಯಾರು ದ್ರೋಣನಿಂದ ಪರಾಙ್ಮುಖರಾಗಿ ಹೋಗುವನೋ ಅವನ ಇಷ್ಟಾಪೂರ್ತಗಳು ನಾಶವಾಗಿ ಕ್ಷಾತ್ರಧರ್ಮದಿಂದಲೂ ಬ್ರಾಹ್ಮಣಧರ್ಮದಿಂದಲೂ ಭ್ರಷ್ಟನಾಗಿಹೋಗಲಿ!"

ಹೀಗೆ ಸರ್ವಧನುಷ್ಮತರ ಮಧ್ಯೆ ಪ್ರತಿಜ್ಞೆಮಾಡಿ ಪರವೀರಹ ಪಾಂಚಾಲ್ಯನು ಸೇನಾಸಮೇತನಾಗಿ ದ್ರೋಣನನ್ನು ಆಕ್ರಮಣಿಸಿದನು.

ಇನ್ನೊಂದು ಕಡೆ ಪಾಂಚಾಲರು ಪಾಂಡವರೊಂದಿಗೆ ಸೇರಿಕೊಂಡು ದ್ರೋಣನನ್ನು ಪ್ರಹರಿಸುತ್ತಿದ್ದರು. ದುರ್ಯೋಧನ, ಕರ್ಣ, ಸೌಬಲ ಶಕುನಿ ಮತ್ತು ಇತರ ಮುಖ್ಯ ಸಹೋದರರು ಯುದ್ಧದಲ್ಲಿ ದ್ರೋಣನನ್ನು ರಕ್ಷಿಸುತ್ತಿದ್ದರು. ಹಾಗೆ ಸಮರದಲ್ಲಿ ಕೌರವ ಮಹಾತ್ಮರಿಂದ ದ್ರೋಣನು ರಕ್ಷಿಸಲ್ಪಡುತ್ತಿರಲು ಪ್ರಯತ್ನಪಡುತ್ತಿದ್ದರೂ ಪಾಂಚಾಲರು ಅವನನ್ನು ನೋಡಲೂ ಕೂಡ ಶಕ್ಯರಾಗುತ್ತಿರಲಿಲ್ಲ. ಆಗ ಧೃಷ್ಟದ್ಯುಮ್ನನ ಮೇಲೆ ಕ್ರುದ್ಧನಾಗಿ ಪುರುಷರ್ಷಭ ಭೀಮಸೇನನು ಈ ಉಗ್ರವಾದ ಮಾತುಗಳಿಂದ ಅವನನ್ನು ಚುಚ್ಚಿದನು:

> “ದ್ರುಪದನ ಕುಲದಲ್ಲಿ ಹುಟ್ಟಿರುವ ನೀನು ಸರ್ವ ಅಸ್ತ್ರಶಸ್ತ್ರಗಳಲ್ಲಿ ವಿತ್ತಮನಾಗಿರುವೆ. ಆದರೆ ಸ್ವಾಭಿಮಾನಿಯಾದ ಯಾವ ಕ್ಷತ್ರಿಯನು ನಿನ್ನಂತೆ ಶತ್ರುವು ಕಣ್ಣೆದುರಿರುವಾಗಲೇ ನೋಡುತ್ತಾ ನಿಂತಿರುತ್ತಾನೆ? ಅದರಲ್ಲೂ ವಿಶೇಷವಾಗಿ ಕಣ್ಣೆದುರಿನಲ್ಲಿಯೇ ಪಿತ-ಪುತ್ರರವಧೆಯನ್ನು ಕಂಡ ಯಾವ ಮನುಷ್ಯನು, ರಾಜಸಂಸದಿಯಲ್ಲಿ ಶಪಥಮಾಡಿದವನು, ಸುಮ್ಮನಿದ್ದಾನು? ಶರಚಾಪಗಳನ್ನೇ ಇಂಧನವನ್ನಾಗಿಸಿಕೊಂಡು ತನ್ನದೇ ತೇಜಸ್ಸಿನಿಂದ ವೈಶ್ವಾನರನಂತೆ ಪ್ರಜ್ವಲಿಸುತ್ತಿರುವ ದ್ರೋಣನು ತೇಜಸ್ಸಿನಿಂದ ಕ್ಷತ್ರಿಯರನ್ನು ದಹಿಸುತ್ತಿದ್ದಾನೆ.

ಪಾಂಡವರ ಸೇನೆಯನ್ನು ಇವನು ನಿಃಶೇಷವನ್ನಾಗಿ ಮಾಡುವ ಮೊದಲೇ ಈ ದ್ರೋಣನನ್ನು ಆಕ್ರಮಿಸುತ್ತೇನೆ. ನಿಂತು ನನ್ನ ಈ ಕರ್ಮವನ್ನು ನೋಡು !"

ಹೀಗೆ ಹೇಳಿ ಕ್ರುದ್ಧ ವೃಕೋದರನು ಪೂರ್ಣವಾಗಿ ಸೆಳೆದು ಬಿಡುತ್ತಿದ್ದ ಬಾಣಗಳಿಂದ ಕೌರವ ಸೇನೆಯನ್ನು ಓಡಿಸುತ್ತಾ ದ್ರೋಣನ ಸೇನೆಯನ್ನು ಪ್ರವೇಶಿಸಿದನು. ಧೃಷ್ಟದ್ಯುಮ್ನನೂ ಕೂಡ ಆ ಮಹಾಸೇನೆಯನ್ನು ಪ್ರವೇಶಿಸಿ ರಣದಲ್ಲಿ ದ್ರೋಣನ ಬಳಿಹೋದನು. ಆಗ ಮಹಾ ತುಮುಲ ಯುದ್ಧವು ನಡೆಯಿತು. ಆ ದಿನದ ಸೂರ್ಯೋದಯದಲ್ಲಿ ಅಂತಹ ದೊಡ್ಡದಾದ, ಹತ್ತಿಕೊಂಡು ನಡೆಯುತ್ತಿದ್ದ ಯುದ್ಧವನ್ನು ಹಿಂದೆ ನೋಡಿರಲಿಲ್ಲ, ಅದರ ಕುರಿತು ಕೇಳಿರಲಿಲ್ಲ. ರಥದ ಗುಂಪುಗಳು ಒಂದಕ್ಕೊಂದು ತಾಗಿಕೊಂಡಿರುವಂತೆ ಕಾಣುತ್ತಿದ್ದವು. ಸತ್ತುಹೋಗಿದ್ದ ಸೈನಿಕರ ಶರೀರಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು. ಬೇರೆಯೇ ಕಡೆ ಹೋಗುತ್ತಿದ್ದವರನ್ನು ದಾರಿಯಲ್ಲಿಯೇ ತಡೆದು ಕೊಳ್ಳುತ್ತಿದ್ದರು. ವಿಮುಖರಾಗಿ ಓಡಿ ಹೋಗುತ್ತಿದ್ದವರನ್ನೂ ಶತ್ರುಪಕ್ಷದವರು ಹಿಂದಿನಿಂದ ಹೊಡೆದು ಕೊಲ್ಲುತ್ತಿದ್ದರು. ಹೀಗೆ ತುಂಬಾ ಪರಸ್ಪರ ತಾಗಿಕೊಂಡು ದಾರುಣ ಯುದ್ಧವು ನಡೆಯುತ್ತಿರಲು ಸ್ವಲ್ಪವೇ ಸಮಯದಲ್ಲಿ ಸೂರ್ಯನ ಪೂರ್ಣೋದಯವಾಯಿತು. ಹಾಗೆ

ರಣಾಂಗಣದಲ್ಲಿ ಕವಚಗಳನ್ನು ಧರಿಸಿ ಬಂದಿದ್ದ ಸೈನಿಕರು ಸಂಧ್ಯಾಸಮಯದಲ್ಲಿ ಉದಯಿಸುತ್ತಿರುವ ಸಹಸ್ರಾಂಶು ಆದಿತ್ಯನನ್ನು ನಮಸ್ಕರಿಸಿ ಪೂಜಿಸಿದರು. ಕುದಿಸಿದ ಕಾಂಚನ ಪ್ರಭೆಯುಳ್ಳ ಸಹಸ್ರಾಂಶನು ಉದಯಿಸಿ ಲೋಕವು ಪ್ರಾಕಾಶಿತವಾಗಲು ಪುನಃ ಯುದ್ಧವು ಪ್ರಾರಂಭವಾಯಿತು.

ಸೂರ್ಯೋದಯಕ್ಕೆ ಮೊದಲು ಅಲ್ಲಿ ಯಾರ್ಯಾರು ದ್ವಂದ್ವಯುದ್ಧದಲ್ಲಿ ತೊಡಗಿದ್ದರೋ ಅವರೇ ಸೂರ್ಯೋದಯದ ನಂತರವೂ ದ್ವಂದ್ವಯುದ್ಧವನ್ನು ಮುಂದುವರೆಸಿದರು. ರಥಗಳು ಕುದುರೆಗಳೊಂದಿಗೆ, ಕುದುರೆಗಳು ಆನೆಗಳೊಂದಿಗೆ, ಪಾದಾತಿಗಳು ಆನೆಗಳೊಂದಿಗೆ, ಕುದುರೆಗಳು ಕುದುರೆಗಳೊಂದಿಗೆ ಮತ್ತು ಪದಾತಿಗಳು ಪದಾತಿಗಳೊಂದಿಗೆ ಎದುರಾಗಿ ಯುದ್ಧಮಾಡಿದರು. ಒಬ್ಬರಿಗೊಬ್ಬರು ಅಂಟಿಕೊಂಡು ಮತ್ತು ಬೇರೆ ಬೇರಾಗಿ ಯೋಧರು ರಣದಲ್ಲಿ ಬೀಳುತ್ತಿದ್ದರು. ರಾತ್ರಿಯೆಲ್ಲಾ ಯುದ್ಧಮಾಡುತ್ತಿದ್ದು ಈಗ ಸೂರ್ಯನ ತೇಜಸ್ಸಿನಿಂದ ಬಳಲಿ, ಹಸಿವು-ಬಾಯಾರಿಕೆಗಳಿಂದ ಆಯಾಸಗೊಂಡವರಾಗಿ ಅನೇಕರು ಮೂರ್ಛಿತರಾದರು. ಶಂಖ-ಭೇರಿ-ಮೃದಂಗಗಳ ಮತ್ತು ಆನೆಗಳ ಗರ್ಜನೆ, ಸೆಳೆಯಲ್ಪಡುತ್ತಿದ್ದ ಧನುಸ್ಸುಗಳ ಟೇಂಕಾರಗಳು ಇವೆಲ್ಲವುಗಳ ಶಬ್ಧಗಳು ಮುಗಿಲನ್ನು

ಮುಟ್ಟಿದವು. ಓಡಿಹೋಗುತ್ತಿರವರ ಹೆಜ್ಜೆಗಳ ಶಬ್ಧಗಳೂ, ಶಸ್ತ್ರಗಳು ಬೀಳುತ್ತಿರುವ ಶಬ್ಧಗಳೂ, ಕುದುರೆಗಳ ಹೇಂಕಾರಗಳೂ, ರಥಗಳು ನಡೆಯುತ್ತಿರುವ ಶಬ್ಧಗಳೂ, ಮತ್ತು ಕೂಗು-ಗರ್ಜನೆಗಳ ಶಬ್ಧಗಳೂ ಸೇರಿ ಮಹಾ ತುಮುಲವೆದ್ದಿತು. ನಾನಾ ಆಯುಧಗಳಿಂದ ಕತ್ತರಿಸುತ್ತಿರುವವರ, ಆತುರ ಕೂಗುಗಳ ತುಮುಲ ಶಬ್ಧದ ಮಹಾಸ್ವನಗಳು ಆಕಾಶವನ್ನು ಸೇರಿದವು. ಕೆಳಗುರುಳಿಸುತ್ತಿದ್ದ ಮತ್ತು ಕೆಳಗುರುಳುತ್ತಿದ್ದ ಪದಾತಿ-ಅಶ್ವ-ಗಜಗಳ ದೀನತರ ಕೂಗುಗಳು ಇನ್ನೂ ಜೋರಾಗಿ ಕೇಳಿಬರುತ್ತಿತ್ತು. ಆ ಸರ್ವಸೇನೆಗಳಲ್ಲಿ ಅನೇಕಶಃ ಕೌರವರು ಕೌರವರನ್ನೇ ಕೊಲ್ಲುತ್ತಿದ್ದರು; ಶತ್ರುಗಳು ಶತ್ರುಗಳನ್ನೇ ಕೊಲ್ಲುತ್ತಿದ್ದರು. ತೊಳೆಯಲು ಅಗಸನ ಮನೆಯಲ್ಲಿ ಬಟ್ಟೆಗಳು ರಾಶಿ ರಾಶಿಯಾಗಿ ಬಂದು ಬೀಳುವಂತೆ ಯೋಧರ ಮತ್ತು ಆನೆಗಳ ವೀರಬಾಹುಗಳು ತುಂಡಾಗಿ ತೊಪತೊಪನೆ ಬೀಳುತ್ತಿದ್ದವು. ಖಡ್ಗಗಳನ್ನು ಹಿಡಿದ ವೀರಬಾಹುಗಳ ಮೇಲೆ ಬೀಳುವ ಖಡ್ಗಗಳ ಶಬ್ಧವು ಅಗಸನು ಬಂಡೆಯಮೇಲೆ ಬಟ್ಟೆಯನ್ನು ಒಗೆಯುವ ಶಬ್ಧದಂತಿತ್ತು. ಅರ್ಧ ತುಂಡಾದ ಚೂರಿಗಳಿಂದಲೂ, ಖಡ್ಗಗಳಿಂದಲೂ, ತೋಮರಗಳಿಂದಲೂ, ಪರಶಾಯುಧಗಳಿಂದಲೂ ಆ ಮಹಾ ಸುದಾರುಣ ಯುದ್ಧವು ನಡೆಯಿತು. ಆನೆ-ಕುದುರೆಗಳ ಕಾಯದಿಂದ ಹುಟ್ಟಿದ, ನರದೇಹಗಳನ್ನು ಕೊಚ್ಚಿಕೊಂಡು ಹೋಗುತ್ತಿದ್ದ, ಶಸ್ತ್ರಗಳೇ ಮೀನುಗಳಂತೆ

ತುಂಬಿಹೋಗಿದ್ದ, ಮಾಂಸಶೋಣಿತಗಳೇ ಕೆಸರಾಗುಳ್ಳ, ಆರ್ತನಾದವೇ ಅಲೆಗಳ ಶಬ್ಧವಾಗಿದ್ದ, ಪತಾಕೆಗಳ ವಸ್ತ್ರಗಳೇ ನೊರೆಗಳಂತೆ ತೇಲುತ್ತಿದ್ದ ಪರಲೋಕಕ್ಕೆ ಹರಿದು ಹೋಗುತ್ತಿದ್ದ ನದಿಯನ್ನೇ ಆ ವೀರರು ಸೃಷ್ಟಿಸಿದರು.

ಶರ-ಶಕ್ತಿಗಳಿಂದ ಗಾಯಗೊಂಡ, ಆಯಾಸಗೊಂಡ, ರಾತ್ರಿ ಬುದ್ಧಿಗೆಟ್ಟ ಎಲ್ಲ ಗಜಾಶ್ವಗಳೂ ಸ್ಥಬ್ಧಗೊಂಡು ನಿಂತುಬಿಟ್ಟಿದ್ದವು. ಸುಂದರ ಕುಂಡಲಗಳಿಂದ ಅಲಂಕೃತ ಶಿರಗಳ ವೀರರ ಮುಖಗಳು ಬಾಡಿಹೋಗಿದ್ದವು. ಅನೇಕ ಯುದ್ಧೋಪಕರಣಗಳು ಅಲ್ಲಲ್ಲಿ ಬಿದ್ದು ಪ್ರಕಾಶಿಸುತ್ತಿದ್ದವು. ಕ್ರವ್ಯಾದಸಂಘಗಳಿಂದ, ಮೃತರಾದ ಮತ್ತು ಅರ್ಧಮೃತರಾದವರ ದೇಹಗಳಿಂದ ತುಂಬಿಹೋಗಿದ್ದ ಆ ರಣಭೂಮಿಯಲ್ಲಿ ಯುದ್ಧಕ್ಕೆ ರಥಗಳು ಹೋಗಲಿಕ್ಕೆ ದಾರಿಯೂ ಇಲ್ಲದಂತಾಗಿತ್ತು. ರಕ್ತಮಾಂಸಗಳ ಕೆಸರಿನಲ್ಲಿ ರಥಚಕ್ರಗಳು ಹೂತುಹೋಗುತ್ತಿದ್ದವು. ಕುದುರೆಗಳು ಬಹಳವಾಗಿ ಬಳಲಿದ್ದವು. ಬಾಣಗಳಿಂದ ಬಹಳವಾಗಿ ಗಾಯಗೊಂಡು ನಡುಗುತ್ತಿದ್ದವು. ಆದರೂ ಉತ್ತಮ ಕುಲ-ಸತ್ತ್ವ-ಬಲಗಳುಳ್ಳ ಆ ಕುದುರೆಗಳು ಆನೆಗಳಂತೆ ಕಷ್ಟದಿಂದ ರಥಗಳನ್ನು ಒಯ್ಯುತ್ತಿದ್ದವು.

ದ್ರೋಣ ಮತ್ತು ಅರ್ಜುನರಿಬ್ಬರನ್ನು ಬಿಟ್ಟು ಉಳಿದ ಎಲ್ಲ ಸೇನೆಗಳೂ

ವಿಹ್ವಲ, ಭ್ರಾಂತ, ಭಯಾರ್ದಿತ ಆತುರವಾಗಿದ್ದವು. ಅವರಿಬ್ಬರೂ ಅವರ ಆಶ್ರಯದಾತರಾಗಿದ್ದರು. ಆರ್ತರಕ್ಷಕರಾಗಿದ್ದರು. ಅನ್ಯೋನ್ಯರನ್ನು ಎದುರಿಸಿ ಅವರು ವೈವಸ್ವತಕ್ಷಯಕ್ಕೆ ಹೋಗುತ್ತಿದ್ದರು. ಕೌರವರ ಮತ್ತು ಪಾಂಚಾಲರ ಮಹಾಬಲಗಳು ಬೆರೆದು ಮಹಾಕಷ್ಟಕ್ಕೊಳಗಾದವು. ಅವರಿಗೆ ಯಾವುದೂ ತಿಳಿಯುತ್ತಿರಲಿಲ್ಲ. ಅಂತಕನ ಆಟದಂತಿದ್ದ, ಹೇಡಿಗಳ ಭಯವನ್ನು ಹೆಚ್ಚಿಸುತ್ತಿದ್ದ ಆ ಯುದ್ಧದಲ್ಲಿ ಪೃಥ್ವಿಯ ರಾಜವಂಶಗಳ ಮಹಾ ಕ್ಷಯವುಂಟಾಗುತ್ತಿತ್ತು. ಯುದ್ಧದಲ್ಲಿ ತೊಡಗಿ ಧೂಳಿನಿಂದ ತುಂಬಿಹೋಗಿದ್ದ ಆ ಸೇನೆಗಳಲ್ಲಿ ಕರ್ಣನನ್ನಾಗಲೀ, ದ್ರೋಣನನ್ನಾಗಲೀ, ಅರ್ಜುನನನ್ನಾಗಲೀ, ಯುಧಿಷ್ಠಿರನನ್ನಾಗಲೀ, ಭೀಮಸೇನನನ್ನಾಗಲೀ, ಯಮಳರನ್ನಾಗಲೀ, ಪಾಂಚಾಲ್ಯನನ್ನಾಗಲೀ, ಸಾತ್ಯಕಿಯನ್ನಾಗಲೀ, ದುಃಶಾಸನನನ್ನಾಗಲೀ, ದ್ರೌಣಿಯನ್ನಾಗಲೀ, ದುರ್ಯೋಧನ-ಸೌಬಲರನ್ನಾಗಲೀ, ಕೃಪನನ್ನಾಗಲೀ, ಕೃತವರ್ಮನನ್ನಾಗಲೀ, ಇನ್ನು ಇತರರನ್ನಾಗಲೀ, ಆಕಾಶವನ್ನಾಗಲೀ, ದಿಕ್ಕುಗಳನ್ನಾಗಲೀ, ಕಾಣದಂತಾಗಿತ್ತು.

ಆ ತುಮುಲಯುದ್ಧವು ನಡೆಯುತ್ತಿರಲು ಧೂಳಿನ ಘೋರ ಮೋಡವೇ ಮೇಲೆದ್ದಿತು. ಅದನ್ನು ನೋಡಿ ಎರಡನೆಯೇ ರಾತ್ರಿಯೇ ಬಂದುಬಿಟ್ಟಿತೋ ಎಂದು ಜನರು ಸಂಭ್ರಾಂತರಾದರು. ಆ ಧೂಳಿನಲ್ಲಿ

ಕೌರವೇಯರು, ಪಾಂಚಾಲರು ಮತ್ತು ಪಾಂಡವರು ಯಾರೆಂದೇ ತಿಳಿಯುತ್ತಿರಲಿಲ್ಲ. ದಿಕ್ಕುಗಳಾಗಲೀ, ಆಕಾಶವಾಗಲೀ, ಹಳ್ಳ-ದಿಣ್ಣೆಗಳಾಗಲೀ ಕಾಣುತ್ತಿರಲಿಲ್ಲ. ಯುದ್ಧದಲ್ಲಿ ವಿಜಯೈಷಿ ನರರು ಕೈಗೆಸಿಕ್ಕಿದವರನ್ನು, ಶತ್ರುಗಳೋ ತಮ್ಮವರೋ ಎನ್ನುವುದನ್ನು ವಿಚಾರಿಸದೇ ಕೆಳಗುರುಳಿಸುತ್ತಿದ್ದರು. ಗಾಳಿಯು ಜೋರಾಗಿ ಬೀಸುತ್ತಿದ್ದುದರಿಂದ ಧೂಳು ಮೇಲೆ ಹಾರಿತು. ರಕ್ತವು ಸುರಿಯುತ್ತಿದ್ದುದರಿಂದ ಧೂಳು ಭೂಮಿಯಲ್ಲಿಯೇ ನಿಂತು ಕಡಿಮೆಯಾಯಿತು. ಅಲ್ಲಿ ರಕ್ತದಿಂದ ತೋಯ್ದುಹೋಗಿದ್ದ ಆನೆಗಳು, ಕುದುರೆಗಳೂ, ರಥವೇರಿದ್ದ ಯೋಧರು ಮತ್ತು ಪದಾತಿಗಳು ಪಾರಿಜಾತವೃಕ್ಷಗಳ ವನಗಳೋಪಾದಿಯಲ್ಲಿ ಗೋಚರಿಸುತ್ತಿದ್ದವು. ಆಗ ದುರ್ಯೋಧನ, ಕರ್ಣ, ದ್ರೋಣ, ಮತ್ತು ದುಃಶಾಸನ ಈ ನಾಲ್ವರು ನಾಲ್ವರು ಪಾಂಡವ ಮಹಾರಥರೊಡನೆ ಯುದ್ಧದಲ್ಲಿ ತೊಡಗಿದರು. ಸಹೋದರನೊಂದಿಗೆ ದುರ್ಯೋಧನನು ಯಮಳರೊಡನೆಯೂ, ರಾಧೇಯನು ವೃಕೋದರನೊಡನೆಯೂ, ಅರ್ಜುನನು ಭಾರದ್ವಾಜನೊಂದಿಗೂ ಯುದ್ಧಮಾಡಿದರು. ಪರಸ್ಪರರ ಮೇಲೆ ಎರಗುತ್ತಿದ್ದ ಆ ರಥರ್ಷಭರ ಉಗ್ರ ಅಮಾನುಷ ಮಹದಾಶ್ಚರ್ಯಕರ ಘೋರ ಯುದ್ಧವನ್ನು ಎಲ್ಲರೂ ಸುತ್ತುವರೆದು ನೋಡಿದರು. ವಿಚಿತ್ರ ರಥಮಾರ್ಗಗಳನ್ನೂ, ವಿಚಿತ್ರ ರಥಸಂಕುಲಗಳನ್ನೂ, ಚಿತ್ರಯೋಧಿಗಳ

ಆ ವಿಚಿತ್ರ ಯುದ್ಧವನ್ನು ರಥಿಗಳು ನೋಡಿದರು. ಪರಸ್ಪರರನ್ನು ಗೆಲ್ಲಲು ಬಯಸಿದ್ದ ಆ ಪರಾಕ್ರಾಂತರು ಬೇಸಗೆಯ ಅಂತ್ಯದಲ್ಲಿನ ಮೋಡಗಳಂತೆ ಶರವರ್ಷಗಳನ್ನು ಸುರಿಸಿ ಪ್ರಯತ್ನಿಸುತ್ತಿದ್ದರು. ಸೂರ್ಯಸಂಕಾಶ ರಥಗಳಲ್ಲಿ ಕುಳಿತಿದ್ದ ಆ ಪುರುಷರ್ಷಭರು ಮಿಂಚಿನಿಂದ ಕೂಡಿದ ಶರತ್ಕಾಲದ ಮೋಡಗಳಂತೆ ಶೋಭಿಸುತ್ತಿದ್ದರು. ಆ ಮಹೇಷ್ವಾಸ ಧನುರ್ಧರರು ಪ್ರಯತ್ನಪಟ್ಟು ಸ್ಪರ್ಧಿಸುತ್ತಿದ್ದರು. ಮದಿಸಿದ ಸಲಗಗಳಂತೆ ಅನ್ಯೋನ್ಯರನ್ನು ಆಕ್ರಮಣಿಸುತ್ತಿದ್ದರು. ಕಾಲವು ಸಮೀಪವಾಗುವ ಮೊದಲು ದೇಹವು ನಾಶವಾಗುವುದಿಲ್ಲ. ಅಲ್ಲಿ ಎಲ್ಲ ಮಹಾರಥರೂ ಗಾಯಗೊಂಡಿದ್ದರೇ ಹೊರತು ಎಲ್ಲರೂ ಒಟ್ಟಿಗೇ ಸಾಯಲಿಲ್ಲ.

## ದುರ್ಯೋಧನ-ದುಃಶಾಸನರು ನಕುಲ-ಸಹದೇವರೊಂದಿಗೆ ಯುದ್ಧಮಾಡಿದುದು

ಆಗ ಅಸಹನೆಯಿಂದ ಕ್ರುದ್ಧನಾಗಿದ್ದ ದುರ್ಯೋಧನನಿಗೂ ಕ್ರುದ್ಧನಾಗಿ ಅಸಹನೆಗೊಂಡಿದ್ದ ನಕುಲನಿಗೂ ಯುದ್ಧವು ನಡೆಯಿತು. ಮಾದ್ರೀಪುತ್ರನು ದುರ್ಯೋಧನನನ್ನು ಬಲಭಾಗಕ್ಕೆ ಮಾಡಿಕೊಂಡು ಹೃಷ್ಟನಾಗಿ ನೂರಾರು ಶರಗಳನ್ನು ಅವನ ಮೇಲೆ ಚೆಲ್ಲಿ ಮಹಾನಾದಗೈದನು. ಭ್ರಾತೃತ್ವದಿಂದಾಗಿ ತನ್ನನ್ನು ಬಲಭಾಗಕ್ಕೆ

ಮಾಡಿಕೊಂಡು ಯುದ್ಧಮಾಡುತ್ತಿದುದು ದುರ್ಯೋಧನನಿಗೆ ಸಹಿಸಿಕೊಳ್ಳಲಾಗಲಿಲ್ಲ. ಬಹಳಬೇಗ ಅವನು ನಕುಲನನ್ನು ತನ್ನ ಬಲಭಾಗಕ್ಕೆ ಮಾಡಿಕೊಂಡನು. ವಿಚಿತ್ರಮಾರ್ಗಗಳನ್ನು ತಿಳಿದಿದ್ದ ತೇಜಸ್ವೀ ನಕುಲನು ದುರ್ಯೋಧನನನ್ನು ಪುನಃ ಬಲಭಾಗಕ್ಕೆ ಮಾಡಿಕೊಂಡು ತಡೆದನು. ನಕುಲನು ಎಲ್ಲ ಕಡೆಗಳಿಂದಲೂ ಅವನನ್ನು ತಡೆಹಿಡಿದು, ಶರಜಾಲಗಳಿಂದ ಪೀಡಿಸಿ ವಿಮುಖನನ್ನಾಗಿ ಮಾಡಿದನು. ಅದನ್ನು ಸೇನೆಗಳು ಶ್ಲಾಘಿಸಿದವು. ದುರ್ಯೋಧನನ ದುರ್ಮಂತ್ರದಿಂದ ನಡೆಯಲ್ಪಟ್ಟ ಎಲ್ಲ ದುಃಖಗಳನ್ನು ಸ್ಮರಿಸಿಕೊಳ್ಳುತ್ತಾ ನಕುಲನು ಅವನಿಗೆ “ನಿಲ್ಲು ! ನಿಲ್ಲು !” ಎಂದು ಕೂಗಿ ಹೇಳಿದನು.

ಆಗ ದುಃಶಾಸನನು ಕ್ರುದ್ಧನಾಗಿ ಮೇದಿನಿಯನ್ನು ನಡುಗಿಸುವಂಥಹ ತೀವ್ರ ರಥವೇಗದಿಂದ ಸಹದೇವನನ್ನು ಆಕ್ರಮಣಿಸಿದನು. ಅವನು ಬಂದೆರಗುವುದರೊಳಗೆ ಮಾದ್ರೀಸುತನು ಭಲ್ಲದಿಂದ ಅವನ ಸಾರಥಿಯ ಶಿರವನ್ನು, ಶಿರಸ್ತ್ರಾಣದೊಂದಿಗೆ, ಕತ್ತರಿಸಿದನು. ಸಹದೇವನು ಆಶುಗಗಳಿಂದ ವೇಗವಾಗಿ ಸಾರಥಿಯ ಶಿರವನ್ನು ಕತ್ತರಿಸಿದುದು ದುಃಶಾಸನನಿಗಾಗಲೀ ಅಥವಾ ಬೇರೆ ಯಾವ ಸೈನಿಕರಿಗಾಗಲೀ ತಿಳಿಯಲೇ ಇಲ್ಲ. ಹಿಡಿಯದೇ ಇದ್ದುದರಿಂದ ಯಥಾಸುಖವಾಗಿ ಕುದುರೆಗಳು ಹೋಗುತ್ತಿದ್ದಾಗಲೇ ಸಾರಥಿಯು ಹತನಾದುದುದನ್ನು

ದುಃಶಾಸನನು ತಿಳಿದುಕೊಂಡನು. ಹಯವಿಶಾರದ ದುಃಶಾಸನನು ಸ್ವಯಂ ತಾನೇ ಕುದುರೆಗಳ ಕಡಿವಾಣಗಳನ್ನು ಹಿಡಿದು ನಡೆಸಿ ವಿಚಿತ್ರ, ಲಘು ಮತ್ತು ಖಡಾ-ಖಡಿ ಭಂಗಿಗಳಲ್ಲಿ ಯುದ್ಧಮಾಡಿದನು. ಸೂತನು ಹತನಾಗಿದ್ದ ರಥವನ್ನು ನಡೆಸುತ್ತಾ ಭಯವಿಲ್ಲದೇ ರಣದಲ್ಲಿ ಸಂಚರಿಸುತ್ತಿದ್ದ ಅವನ ಆ ಕರ್ಮವನ್ನು ಕೌರವರೂ ಶತ್ರುಗಳೂ ಪ್ರಶಂಸಿಸಿದರು. ಸಹದೇವನಾದರೋ ಆ ಕುದುರೆಗಳನ್ನು ತೀಕ್ಷ್ಣ ಬಾಣಗಳಿಂದ ಮುಚ್ಚಿದನು. ಬಾಣಗಳಿಂದ ಪೀಡಿತರಾದ ಅವು ಅಲ್ಲಲ್ಲಿ ಓಡತೊಡಗಿದವು. ಆಗ ದುಃಶಾಸನನು ಧನುಸ್ಸನ್ನು ಬಿಟ್ಟು ಕಡಿವಾಣಗಳನ್ನು ಹಿಡಿದು ರಥವನ್ನು ನಿಯಂತ್ರಿಸಿ, ಅದಾದನಂತರ ಕಡಿವಾಣಗಳನ್ನು ಬಿಟ್ಟು ಧನುಸ್ಸಿನಿಂದ ಕೆಲಸಮಾಡುತ್ತಿದ್ದನು. ಅವನ ಆ ದುರ್ಬಲ ಕ್ಷಣಗಳಲ್ಲಿ ಮಾದ್ರೀಪುತ್ರನು ದುಃಶಾಸನನನ್ನು ಬಾಣಗಳಿಂದ ಮುಚ್ಚಿಬಿಡುತ್ತಿದ್ದನು. ಆ ಮಧ್ಯದಲ್ಲಿ ದುಃಶಾಸನನನ್ನು ರಕ್ಷಿಸಲು ಕರ್ಣನು ಮುಂದೆಬಂದನು. ಆಗ ವೃಕೋದರನು ಸಮಾಹಿತನಾಗಿ ಮೂರು ಭಲ್ಲಗಳನ್ನು ಆಕರ್ಣಪೂರ್ಣವಾಗಿ ಸೆಳೆದು ಕರ್ಣನ ಬಾಹುಗಳೆರಡಕ್ಕೂ ಮತ್ತು ಎದೆಗೂ ಹೊಡೆದು ಗರ್ಜಿಸಿದನು. ತುಳಿಯಲ್ಪಟ್ಟ ಸರ್ಪದಂತೆ ಕರ್ಣನು ಅವನನ್ನು ತಡೆಗಟ್ಟಿದನು. ಆಗ ಭೀಮ-ರಾಧೇಯರ ನಡುವೆ ತುಮುಲ ಯುದ್ಧವು ಪ್ರಾರಂಭವಾಯಿತು.

## ಕರ್ಣ-ಭೀಮಸೇನರ ಯುದ್ಧ

ಎರಡು ಹೋರಿಗಳಂತೆ ಸಂಕ್ರುದ್ಧರಾಗಿದ್ದ, ತೆರಳಿದ ಕಣ್ಣಿದ್ದ ಅವರಿಬ್ಬರೂ ಮಹಾ ವೇಗದಿಂದ ಸಂರಬ್ಧರಾಗಿ ಅನ್ಯೋನ್ಯರ ಮೇಲೆ ಎರಗಿದರು. ಯುದ್ಧಕೌಶಲರಾದ ಇಬ್ಬರೂ ಅಂಟಿಕೊಂಡು ಯುದ್ಧಮಾಡುತ್ತಿರುವುದರಿಂದ ಬಾಣಗಳ ಸುರಿಮಳೆಗಳನ್ನು ನಿಲ್ಲಿಸಿ ಗದಾಯುದ್ಧವನ್ನು ಪ್ರಾರಂಭಿಸಿದರು. ಭೀಮಸೇನನಾದರೋ ಕರ್ಣನ ರಥದ ಮೂಕಿಯನ್ನು ಗದೆಯಿಂದ ಚೂರುಮಾಡಿದನು. ಅದೊಂದು ಅದ್ಭುತವಾಯಿತು. ಆಗ ವೀರ್ಯವಾನ್ ರಾಧೇಯನು ಗದೆಯನ್ನು ಎತ್ತಿಕೊಂಡು ಭೀಮನ ರಥದ ಮೇಲೆ ಎಸೆಯಲು ಅವನು ಆ ಗದೆಯನ್ನು ಇನ್ನೊಂದು ಗದೆಯಿಂದ ಹೊಡೆದು ಪುಡಿಮಾಡಿದನು. ಭೀಮನು ಪುನಃ ಭಾರವಾದ ಗದೆಯೊಂದನ್ನು ಆಧಿರಥನ ಮೇಲೆ ಎಸೆದನು. ಅದನ್ನು ಕರ್ಣನು ಗುರಿಯಿಟ್ಟು ಪುಂಖಗಳುಳ್ಳ ಹತ್ತು ಶರಗಳಿಂದ ಹೊಡೆದನು. ಬಾಣಗಳಿಂದ ಪ್ರಹರಿಸಲ್ಪಟ್ಟ ಆ ಗದೆಯು ಪುನಃ ಭೀಮನ ಬಳಿ ಹಿಂದಿರುಗಿತು. ಅದರ ಬೀಳುವಿಕೆಯಿಂದ ಭೀಮನ ವಿಶಾಲ ಧ್ವಜವು ಕೆಳಗೆ ಬಿದ್ದಿತು ಮತ್ತು ಗದೆಯಿಂದ ಹೊಡೆಯಲ್ಪಟ್ಟು ಸಾರಥಿಯೂ ಮೂರ್ಛಿತನಾದನು. ಅವನು ಕ್ರೋಧಮೂರ್ಚಿತನಾಗಿ ಕರ್ಣನ ಮೇಲೆ ಅವನ ಧ್ವಜ, ಧನುಸ್ಸು ಮತ್ತು ಬತ್ತಳಿಕೆಗಳಿಗೆ ಗುರಿಯಿಟ್ಟು ಎಂಟು ಸಾಯಕಗಳನ್ನು ಪ್ರಯೋಗಿಸಿದನು. ಆಗ

ರಾಧೇಯನು ಪುನಃ ಭೀಮನ ಕರಡೀ ಬಣ್ಣದ ಕುದುರೆಗಳನ್ನೂ, ರಥದ ನೊಗವನ್ನೂ ಮತ್ತು ಇಬ್ಬರು ಪಾರ್ಷ್ಣಿಸಾರಥಿಗಳನ್ನೂ ನಾಶಗೊಳಿಸಿದನು. ರಥಹೀನನಾದ ಭೀಮನು ಸಿಂಹವು ಪರ್ವತ ಶಿಖರಕ್ಕೆ ನೆಗಯುವಂತೆ ನಕುಲನ ರಥಕ್ಕೆ ಹಾರಿ ಕುಳಿತನು.

## ದ್ರೋಣಾರ್ಜುನರ ಯುದ್ಧ

ಹಾಗೆಯೇ ಮಹಾರಥ, ಆಚಾರ್ಯ-ಶಿಷ್ಯ, ಯುದ್ಧಪ್ರಹರಣಗಳಲ್ಲಿ ಕುಶಲ ದ್ರೋಣ-ಅರ್ಜುನರು ವಿಚಿತ್ರ ಯುದ್ಧದಲ್ಲಿ ತೊಡಗಿದ್ದರು. ಬಾಣಗಳ ಸಂಧಾನ-ಪ್ರಯೋಗಗಳ ಲಘುತ್ವದಿಂದಲೂ, ದ್ವೈರಥ ಯುದ್ಧದಿಂದಲೂ, ರಣದಲ್ಲಿ ಮನುಷ್ಯರ ಕಣ್ಣು-ಮನಸ್ಸುಗಳನ್ನು ಭ್ರಮೆಗೊಳಿಸುತ್ತಿದ್ದ, ಹಿಂದೆಂದೂ ನೋಡದಿದ್ದ ಆ ಗುರುಶಿಷ್ಯರ ಯುದ್ಧವನ್ನು ನೋಡುತ್ತಾ ಕೌರವರ ಮತ್ತು ಶತ್ರುಗಳ ಎಲ್ಲ ಯೋಧರೂ ಯುದ್ಧದಿಂದ ಸ್ವಲ್ಪ ವಿರಮಿಸಿದರು. ಸೇನೆಗಳ ಮಧ್ಯದಿಂದ ರಥಮಾರ್ಗದಲ್ಲಿ ನುಸುಳಿಕೊಳ್ಳುತ್ತಾ ಅನ್ಯೋನ್ಯರನ್ನು ಬಲಬಾಗದಲ್ಲಿಟ್ಟುಕೊಂಡು ಯುದ್ಧಮಾಡಲು ಆ ವೀರರಿಬ್ಬರೂ ಪ್ರಯತ್ನಿಸುತ್ತಿದ್ದರು. ಅವರ ಆ ಪರಾಕ್ರಮವನ್ನು ಯೋಧರು ವಿಸ್ಮಿತರಾಗಿ ನೋಡುತ್ತಿದ್ದರು. ಮಾಂಸದ ತುಂಡಿಗಾಗಿ ಗಗನದಲ್ಲಿ ಎರಡು ಗಿಡುಗಗಳ ನಡುವೆ ನಡೆಯುವಂತೆ ದ್ರೋಣ-ಪಾಂಡವರೊಡನೆ ಮಹಾ

ಯುದ್ಧವು ನಡೆಯಿತು. ಕುಂತೀಪುತ್ರನನ್ನು ಗೆಲ್ಲಲು ದ್ರೋಣನು ಏನನ್ನು ಮಾಡುತ್ತಿದ್ದನೋ ಅದನ್ನು ನಗುತ್ತಾ ಪಾಂಡವನು ಪ್ರತಿಯಾಗಿ ನಾಶಗೊಳಿಸುತ್ತಿದ್ದನು. ದ್ರೋಣನು ಪಾಂಡವನನ್ನು ಮೀರಿಸಲು ಶಕ್ಯನಾಗದಿರಲು ಆ ಅಸ್ತ್ರಮಾರ್ಗವಿಶಾರದನು ಅಸ್ತ್ರಗಳನ್ನು ಪ್ರಯೋಗಿಸಲು ಪ್ರಾರಂಭಿಸಿದನು. ದ್ರೋಣನ ಧನುಸ್ಸಿನಿಂದ ಹೊರಬೀಳುತ್ತಿದ್ದ ಐಂದ್ರ, ಪಾಶುಪತ, ತ್ವಾಷ್ಟ್ರ, ವಾಯವ್ಯ, ಮತ್ತು ವಾರುಣ ಅಸ್ತ್ರಗಳನ್ನು ಧನಂಜಯನು ಅವುಗಳನ್ನೇ ಪ್ರಯೋಗಿಸಿ ನಾಶಗೊಳಿಸಿದನು. ಅವನ ಅಸ್ತ್ರಗಳನ್ನು ಪಾಂಡವನು ಅಸ್ತ್ರಗಳಿಂದ ಪ್ರಶಮನಗೊಳಿಸುತ್ತಿರಲು ದ್ರೋಣನು ಪರಮ ದಿವ್ಯ ಅಸ್ತ್ರಗಳಿಂದ ಪಾರ್ಥನನ್ನು ಮುಚ್ಚಿದನು. ಪಾರ್ಥನನ್ನು ಗೆಲ್ಲಲು ಯಾವ ಅಸ್ತ್ರವನ್ನು ಅವನು ಪ್ರಯೋಗಿಸುತ್ತಿದ್ದನೋ ಅವುಗಳನ್ನು ಅದೇ ಅಸ್ತ್ರಗಳಿಂದ ಅರ್ಜುನನು ಪ್ರಶಮನಗೊಳಿಸುತ್ತಿದ್ದನು. ದಿವ್ಯಅಸ್ತ್ರಗಳನ್ನು ಅಸ್ತ್ರಗಳಿಂದ ಯಥಾವಿಧಿಯಾಗಿ ಅರ್ಜುನನು ನಾಶಗೊಳಿಸುತ್ತಿರಲು ಅರ್ಜುನನನ್ನು ದ್ರೋಣನು ಮನಸ್ಸಿನಲ್ಲಿಯೇ ಪ್ರಶಂಸಿಸಿದನು. ತನ್ನ ಶಿಷ್ಯನಿಂದಾಗಿ ಅವನು ತನ್ನನ್ನು ತಾನೇ ಇಡೀ ಪೃಥ್ವಿಯಲ್ಲಿ ಎಲ್ಲಕಡೆ ಇದ್ದ ಶಸ್ತ್ರವಿದುಗಳಲ್ಲಿ ಶ್ರೇಷ್ಠನೆಂದು ತಿಳಿದುಕೊಂಡನು. ಆ ಮಹಾತ್ಮರ ಮಧ್ಯೆ ಪಾರ್ಥನಿಂದ ಹಾಗೆ ತಡೆಯಲ್ಪಟ್ಟ ದ್ರೋಣನು ಪ್ರೀತಿಯಿಂದ ಅರ್ಜುನನನ್ನು ತಡೆಯಲು ಪ್ರಯತ್ನಿಸಿ ಯುದ್ಧಮಾಡುತ್ತಿದ್ದನು.

ಆಗ ಅಂತರಿಕ್ಷದಲ್ಲಿ ಸಹಸ್ರಾರು ದೇವತೆಗಳೂ, ಗಂಧರ್ವರೂ, ಋಷಿಗಳೂ ಸಿದ್ಧಸಂಘಗಳೂ ಯುದ್ಧವನ್ನು ನೋಡುವ ಇಚ್ಛೆಯಿಂದ ನೆರೆದಿದ್ದರು. ಅಪ್ಸರೆಯರ ಸಂಕೀರ್ಣದಿಂದ ಮತ್ತು ಯಕ್ಷ-ರಾಕ್ಷಸ ಸಂಕುಲಗಳಿಂದ ಕೂಡಿದ್ದ ಶ್ರೀಮದಾಕಾಶವು ಮೇಘಸಂಕುಲಗಳಿಂದ ಕೂಡಿರುವಂತೆ ಶೋಭಿಸುತ್ತಿತ್ತು. ಧನುಸ್ಸುಗಳ ಟೇಂಕಾರ ಮತ್ತು ಮಹಾಸ್ತ್ರಗಳ ಪ್ರಯೋಗದ ಧ್ವನಿ ಹತ್ತು ದಿಕ್ಕುಗಳಲ್ಲಿಯೂ ಮೊಳಗಿ ಕೇಳಿಬರುತ್ತಿತ್ತು. ಅಲ್ಲಿ ಅಂತರ್ಧಾನರು ದ್ರೋಣ ಮತ್ತು ಪಾರ್ಥರನ್ನು ಪುನಃ ಪುನಃ ಸ್ತುತಿಸಿ ಹೀಗೆ ಮಾತನಾಡಿಕೊಳ್ಳುತ್ತಾ ಸಂಚರಿಸುತ್ತಿದ್ದರು:

> “ಇದು ಮನುಷ್ಯ ಯುದ್ಧವೂ ಅಲ್ಲ. ಅಸುರ ಅಥವಾ ರಾಕ್ಷಸ ಯುದ್ಧವೂ ಅಲ್ಲ. ಇದು ದೇವತೆಗಳ ಅಥವಾ ಗಂಧರ್ವರ ಅಥವಾ ನಿಶ್ಚಯವಾಗಿಯೂ ಪರಮ ಬ್ರಾಹ್ಮೀ ಯುದ್ಧವೂ ಅಲ್ಲ. ಇಂತಹ ವಿಚಿತ್ರ ಆಶ್ಚರ್ಯವನ್ನು ನಾವು ನೋಡಿರಲಿಲ್ಲ ಮತ್ತು ಕೇಳಿರಲಿಲ್ಲ. ಆಚಾರ್ಯನು ಪಾಂಡವನನ್ನು ಮೀರಿಸಲು ನೋಡುತ್ತಿದ್ದರೆ ಪಾಂಡವನು ದ್ರೋಣನನ್ನು ಅತಿಶಯಿಸಲು ನೋಡುತ್ತಿದ್ದಾನೆ. ಇವರಿಬ್ಬರ ಅಸ್ತ್ರಯುದ್ಧದಲ್ಲಿ ಯಾವುದೇ ರೀತಿಯ ವ್ಯತ್ಯಾಸವನ್ನು ಕಾಣಲು ಶಕ್ಯವಿಲ್ಲ. ಒಂದುವೇಳೆ ರುದ್ರನೇ ಎರಡಾಗಿ ತನ್ನೊಡನೆ ತಾನೇ

ಯುದ್ಧಮಾಡುತ್ತಿದ್ದಾನೆಂದರೆ ಅದಕ್ಕೆ ಈ ಯುದ್ಧವನ್ನು ತುಲನೆ ಮಾಡಬಹುದಾಗಿದೆ. ಹೊರತಾಗಿ ಇವರ ಯುದ್ಧಕ್ಕೆ ಬೇರೆ ಯಾವ ಉಪಮೆಯೂ ಇಲ್ಲ. ಜ್ಞಾನವು ಆಚಾರ್ಯನಲ್ಲಿ ಏಕತ್ರವಾಗಿದೆಯೆಂದರೆ ಪಾಂಡವನಲ್ಲಿ ಜ್ಞಾನ-ಉಪಾಯಗಳೆರಡೂ ಇವೆ. ಆಚಾರ್ಯನಲ್ಲಿ ಶೌರ್ಯವೊಂದಿದ್ದರೆ ಪಾಂಡವನಲ್ಲಿ ಬಲ-ಶೌರ್ಯಗಳೆರಡೂ ಇವೆ. ಈ ಇಬ್ಬರು ಮಹೇಷ್ವಾಸರನ್ನು ರಣದಲ್ಲಿ ಯಾವ ಶತ್ರುವೂ ಕೆಳಗುರುಳಿಸಲಾರನು! ಆದರೆ ಇಚ್ಛಿಸಿದರೆ ಇವರಿಬ್ಬರೂ ಇಡೀ ಜಗತ್ತನ್ನೇ ನಾಶಗೊಳಿಸಬಲ್ಲರು."

ಅವರಿಬ್ಬರು ಪುರುಷರ್ಷಭರನ್ನೂ ನೋಡಿ ಕಾಣದಿರುವ ಮತ್ತು ಕಾಣುವ ಭೂತಗಳು ಹೀಗೆ ಹೇಳಿಕೊಳ್ಳುತ್ತಿದ್ದವು.

ಆಗ ಮಹಾಮತಿ ದ್ರೋಣನು ಅದೃಶ್ಯ ಭೂತಗಳನ್ನೂ ರಣದಲ್ಲಿರುವ ಪಾರ್ಥನನ್ನು ಸಂತಾಪಗೊಳಿಸುತ್ತಾ ಬ್ರಹ್ಮಾಸ್ತ್ರವನ್ನು ಪ್ರಯೋಗಿಸಲು ಮುಂದಾದನು. ಆಗ ಪರ್ವತ-ವನ-ದ್ರುಮಗಳೊಂದಿಗೆ ಪೃಥ್ವಿಯು ನಡುಗಿತು. ಚಂಡಮಾರುತವು ಬೀಸತೊಡಗಿತು. ಸಾಗರವು ಅಲ್ಲೋಲಕಲ್ಲೋಲಗೊಂಡಿತು. ಮಹಾತ್ಮನು ಬ್ರಹ್ಮಾಸ್ತ್ರವನ್ನು ಎತ್ತಿಕೊಳ್ಳಲು ಕುರುಪಾಂಡವ ಸೇನೆಗಳಲ್ಲಿ ಮತ್ತು ಎಲ್ಲ ಭೂತಗಳಲ್ಲಿ

ಮಹಾ ಭಯವುಂಟಾಯಿತು. ಆಗ ಪಾರ್ಥನು ಗಾಬರಿಗೊಳ್ಳದೇ ಆ ಅಸ್ತ್ರವನ್ನು ಬ್ರಹ್ಮಾಸ್ತ್ರದಿಂದಲೇ ನಾಶಗೊಳಿಸಿದನು. ಆಗ ಎಲ್ಲರ ಮನಸ್ಸಿನಲ್ಲಿದ್ದ ಉದ್ವೇಗಗಳು ಪ್ರಶಮನಗೊಂಡವು. ಯಾವಾಗ ಅವರಿಬ್ಬರ ನಡುವಿನ ಯುದ್ಧವು ಕೊನೆಯನ್ನು ಕಾಣಲಿಲ್ಲವೋ, ಯಾವಾಗ ಅನ್ಯೋನ್ಯರನ್ನು ಅವರು ಸೋಲಿಸಲಿಲ್ಲವೋ ಆಗ ಆ ಯುದ್ಧವು ಸಂಕುಲಯುದ್ಧವಾಗಿ ಪರಿಣಮಿಸಿತು.

ರಣದಲ್ಲಿ ದ್ರೋಣ-ಪಾಂಡವರ ಮಧ್ಯೆ ತುಮುಲ ಯುದ್ಧವು ನಡೆಯಲು ಪುನಃ ಅಲ್ಲಿ ಏನು ನಡೆಯುತ್ತಿದೆಯೆನ್ನುವುದೇ ತಿಳಿಯುತ್ತಿರಲಿಲ್ಲ. ಆಕಾಶವು ಮೇಘಗಳ ಸಮೂಹಗಳಿಂದ ವ್ಯಾಪ್ತವಾಗುವಂತೆ ಬಾಣಗಳ ಸಮೂಹದಿಂದ ಆಕಾಶವೇ ವ್ಯಾಪ್ತವಾಗಲು, ಅಂತರಿಕ್ಷದಲ್ಲಿ ಚಲಿಸುತ್ತಿದ್ದ ಯಾವ ಪಕ್ಷಿಯೂ ಮುಂದುವರೆಯಲು ಸಾಧ್ಯವಾಗುತ್ತಿರಲಿಲ್ಲ.

## ತುಮುಲ ಯುದ್ಧ

ಹಾಗೆ ನರಾಶ್ವಗಜಸಂಹಾರವು ನಡೆಯುತ್ತಿರಲು ದುಃಶಾಸನನು ಧೃಷ್ಟದ್ಯುಮ್ನನನ್ನು ಎದುರಿಸಿ ಯುದ್ಧಮಾಡಿದನು. ರುಕ್ಮರಥ ದ್ರೋಣನೊಡನೊಡನೆ ಯುದ್ಧಮಾಡಲು ಆಸಕ್ತನಾದ ಅವನನ್ನು ದುಃಶಾಸನನು ಶರಗಳಿಂದ ಗಾಯಗೊಳಿಸಲು ಅಸಹನೆಯಿಂದ ಅವನು

ದುಃಶಾಸನನ ಕುದುರೆಗಳನ್ನು ಶರಗಳಿಂದ ಮುಚ್ಚಿದನು. ಪಾರ್ಷತನ ಶರಗಳಿಂದ ಮುಚ್ಚಲ್ಪಟ್ಟ ಆ ರಥವು ಧ್ವಜ-ಸಾರಥಿಗಳೊಂದಿಗೆ ಕಾಣದಂತಾಯಿತು. ಪಾಂಚಾಲನ ಶರಜಾಲಗಳಿಂದ ಚೆನ್ನಾಗಿ ಪೀಡಿತನಾದ ದುಃಶಾಸನನು ಅವನ ಮುಂದೆ ಹೆಚ್ಚುಕಾಲ ನಿಲ್ಲಲು ಶಕ್ಯನಾಗಲಿಲ್ಲ. ಆ ಪಾರ್ಷತನು ದುಃಶಾಸನನನ್ನು ಬಾಣಗಳಿಂದ ವಿಮುಖನನ್ನಾಗಿ ಮಾಡಿ ರಣದಲ್ಲಿ ದ್ರೋಣನನ್ನೇ ಆಕ್ರಮಣಿಸುತ್ತಾ ಸಹಸ್ರ ಬಾಣಗಳನ್ನು ಎರಚಿದನು.

ಆಗ ಹಾರ್ದಿಕ್ಯ ಕೃತವರ್ಮ ಮತ್ತು ನಂತರ ದುಃಶಾಸನನ ಮೂವರು ಸಹೋದರರು ಧೃಷ್ಟದ್ಯುಮ್ನನನ್ನು ಸುತ್ತುವರೆದರು. ಅಗ್ನಿಯಂತೆ ದೇದೀಪ್ಯಮಾನನಾಗಿ ಉರಿಯುತ್ತಿದ್ದ ದ್ರೋಣನ ಎದುರಾಗಿ ರಭಸದಿಂದ ಮುನ್ನುಗ್ಗುತ್ತಿದ್ದ ಧೃಷ್ಟದ್ಯುಮ್ನನನ್ನು ನಕುಲ-ಸಹದೇವರು ರಕ್ಷಕರಾಗಿ ಹಿಂಬಾಲಿಸಿ ಹೋದರು. ಆ ಎಲ್ಲ ಏಳು ಸತ್ವವಂತ ಅಸಹನಶೀಲ ಮಹಾರಥರೂ ಮರಣವನ್ನೇ ಮುಂದಿಟ್ಟುಕೊಂಡು ಪ್ರಹಾರಕಾರ್ಯದಲ್ಲಿ ತೊಡಗಿದ್ದರು. ಶುದ್ಧಾತ್ಮ ಶುದ್ಧನಡತೆಯ ಅವರು ಪರಸ್ಪರನ್ನು ಜಯಿಸುವ ಇಚ್ಛೆಯಿಂದ ಸ್ವರ್ಗವನ್ನೇ ಗುರಿಯನ್ನಾಗಿಟ್ಟುಕೊಂಡು ಯುದ್ಧಮಾಡುತ್ತಿದ್ದರು. ಶುದ್ಧಕರ್ಮಗಳ ಕುಲಗಳಲ್ಲಿ ಜನಿಸಿದ ಮತಿಮಂತರಾದ ಆ ಜನಾಧಿಪರು ಉತ್ತಮ

ಗತಿಯನ್ನೇ ಅಭಿಲಾಷಿಸಿ ಧರ್ಮಯುದ್ಧವನ್ನು ಮಾಡುತ್ತಿದ್ದರು.

ಅಲ್ಲಿ ಅಧರ್ಮಪೂರ್ವಕವಾದ ಅಥವಾ ನಿಂದನೀಯವಾದ ಯುದ್ಧವು ನಡೆಯುತ್ತಿರಲಿಲ್ಲ. ಅಲ್ಲಿ ಕರ್ಣಿ, ನಾಲೀಕ, ವಿಷಲಿಪ್ತ, ವಸ್ತಕ, ಸೂಚೀ, ಪಿಶ, ವಾಸ್ತಿಗಜಾಸ್ತಿಜ, ಸಂಶ್ಲಿಷ್ಟ, ಪೂತಿ, ಮತ್ತು ಜಿಹ್ಮಗಗಳನ್ನು ಬಳಸುತ್ತಿರಲಿಲ್ಲ.  ಧರ್ಮಯುದ್ಧದಿಂದ ಕೀರ್ತಿಯನ್ನೂ ಉತ್ತಮ ಲೋಕಗಳನ್ನೂ ಪಡೆದುಕೊಳ್ಳಬೇಕೆಂದು ಇಚ್ಛಿಸಿದ್ದ ಎಲ್ಲ ಯೋಧರೂ ನೇರ ವಿಶುದ್ಧ ಶಸ್ತ್ರಗಳನ್ನೇ ಧರಿಸಿದ್ದರು. ಆಗ ಕೌರವರ ನಾಲ್ವರು ಯೋಧರು ಮತ್ತು ಮೂವರು ಪಾಂಡವರ ಕಡೆಯವರ ಮಧ್ಯೆ ಸರ್ವದೋಷವರ್ಜಿತ ತುಮುಲ ಯುದ್ಧವು ನಡೆಯಿತು. ಕೌರವ ರಥರ್ಷಭರನ್ನು ನಕುಲ-ಸಹದೇವರು ತಡೆಯುತ್ತಿದ್ದಿದ್ದುದನ್ನು ನೋಡಿ ಶೀಘ್ರಾಸ್ತ್ರ ಧೃಷ್ಟದ್ಯುಮ್ನನು ನೇರವಾಗಿ ದ್ರೋಣನನ್ನು ಆಕ್ರಮಣಿಸಿದನು.

ಪರ್ವತಗಳಿಂದ ಚಂಡಮಾರುತವು ತಡೆಹಿಡಿಯಲ್ಪಡುವಂತೆ ಆ ಇಬ್ಬರು ಪುರುಷಸಿಂಹ ವೀರ ನಕುಲ-ಸಹದೇವರಿಂದ ತಡೆಯಲ್ಪಟ್ಟ ಕೌರವ ನಾಲ್ವರು ಅವರೊಂದಿಗೆ ಯುದ್ಧದಲ್ಲಿ ತೊಡಗಿದರು. ಇಬ್ಬಿಬ್ಬರು ರಥಪುಂಗವರು ಒಬ್ಬೊಬ್ಬ ಯಮಳೊಡನೆ ರಥಯುದ್ಧದಲ್ಲಿ ಸಮಾಸಕ್ತರಾಗಿರಲು ಧೃಷ್ಟದ್ಯುಮ್ನನು ದ್ರೋಣನನ್ನು ಆಕ್ರಮಣಿಸಿದನು. ಪಾಂಚಾಲ್ಯನು ಯುದ್ಧದುರ್ಮದ ದ್ರೋಣನ ಮೇಲೆ

ಎರಗುತ್ತಿರುವುದನ್ನು ಮತ್ತು ನಕುಲ-ಸಹದೇವರು ಉಳಿದವರೊಡನೆ ಯುದ್ಧದಲ್ಲಿ ಸಮಾಸಕ್ತರಾಗಿರುವುದನ್ನು ನೋಡಿ ದುರ್ಯೋಧನನು ರಕ್ತವನ್ನು ಕುಡಿಯುವ ಬಾಣಗಳನ್ನು ಸುರಿಸುತ್ತಾ ಮಧ್ಯದಲ್ಲಿ ನುಗ್ಗಿ ಆಕ್ರಮಣಮಾಡಿದನು.

## ಸಾತ್ಯಕಿ-ದುರ್ಯೋಧನರ ಯುದ್ಧ

ಆಗ ಅವನನ್ನು ಸಾತ್ಯಕಿಯು ಪುನಃ ಶೀಘ್ರವಾಗಿ ಆಕ್ರಮಣಿಸಿ ತಡೆದನು. ಅವರಿಬ್ಬರು ಕುರು-ಮಾಧವ ನರಶಾರ್ದೂಲರು ಪರಸ್ಪರರ ಸಮೀಪ ಬಂದು ನಿರ್ಭೀತರಾಗಿ ಗಹಗಹಿಸಿ ನಗುತ್ತಾ ಯುದ್ಧದಲ್ಲಿ ತೊಡಗಿದರು. ಅನ್ಯೋನ್ಯರನ್ನು ನೋಡಿ ಬಾಲ್ಯದಲ್ಲಿ ನಡೆದಿದ್ದ ಎಲ್ಲ ಪ್ರಿಯ ಸಂಗತಿಗಳನ್ನೂ ಸ್ಮರಿಸಿಕೊಂಡು ಪುನಃ ಪುನಃ ನಗುತ್ತಿದ್ದರು. ಆಗ ದುರ್ಯೋಧನನು ಪ್ರಿಯ ಸಖ ಸಾತ್ಯಕಿಗೆ ತನ್ನನ್ನು ತಾನೇ ನಿಂದಿಸಿಕೊಳ್ಳುತ್ತಾ ಹೇಳಿದನು:

> “ಸಖಾ! ಈ ಕ್ರೋಧಕ್ಕೆ ಧಿಕ್ಕಾರ! ಈ ಲೋಭ, ಮೋಹ, ಅಸಹನೆಗಳಿಗೆ ಧಿಕ್ಕಾರ! ಕ್ಷತ್ರಿಯ ನಡತೆಗೆ ಧಿಕ್ಕಾರ! ಶ್ರೇಷ್ಠ ಎದೆಗಾರಿಕೆಗೂ ಧಿಕ್ಕಾರ! ಶಿನಿಪುಂಗವ! ನಿನ್ನನ್ನು ನಾನು ಮತ್ತು ನನ್ನನ್ನು ನೀನು ಎದುರಿಸಿ ಯುದ್ಧಮಾಡುತ್ತಿದ್ದೇವೆಯಲ್ಲಾ! ಸದಾ ನೀನು ನನಗೆ

ಪ್ರಾಣಕ್ಕಿಂತಲೂ ಪ್ರಿಯನಾಗಿದ್ದೆ. ನಾನೂ ಕೂಡ ನಿನಗೆ ಪ್ರಾಣಕ್ಕಿಂತಲೂ ಪ್ರಿಯನಾಗಿದ್ದೆ! ನಾವಿಬ್ಬರೂ ಬಾಲ್ಯದಲ್ಲಿ ಮಾಡಿದುದೆಲ್ಲವನ್ನೂ ನಾನು ಸ್ಮರಿಸಿಕೊಳ್ಳುತ್ತೇನೆ. ಆದರೆ ಈ ರಣಾಂಗಣದಲ್ಲಿ ಅವೆಲ್ಲವೂ ಜೀರ್ಣವಾಗಿ ಮುಗಿದುಹೋದಂತಿವೆ! ಕ್ರೋಧ-ಲೋಭಗಳಲ್ಲದೇ ಬೇರೆ ಯಾವ ಕಾರಣಕ್ಕಾಗಿ ನಾವು ಇಂದು ಯುದ್ಧಮಾಡುತ್ತಿದ್ದೇವೆ ಸಾತ್ವತ?”

ಹಾಗೆ ಮಾತನಾಡುತ್ತಿದ್ದ ಅವನಿಗೆ ಪರಮಾಸ್ತ್ರಗಳನ್ನು ತಿಳಿದಿದ್ದ ಸಾತ್ಯಕಿಯು ತೀಕ್ಷ್ಣ ವಿಶಿಖಗಳನ್ನು ಎತ್ತಿಕೊಂಡು ನಗುತ್ತಾ ಉತ್ತರಿಸಿ ಹೇಳಿದನು:

“ರಾಜಪುತ್ರ! ಇದು ಅಂದು ನಾವು ಒಟ್ಟಾಗಿ ಆಟವಾಡುತ್ತಿದ್ದ ಸಭೆಯೂ ಅಲ್ಲ. ಆಚಾರ್ಯನ ಮನೆಯೂ ಅಲ್ಲ.”

ದುರ್ಯೋಧನನು ಹೇಳಿದನು:

“ಶಿನಿಪುಂಗವ! ಬಾಲ್ಯದಲ್ಲಿ ಆಡುತ್ತಿದ್ದ ಆ ನಮ್ಮ ಆಟವು ಎಲ್ಲಿ ಹೋಯಿತು? ಪುನಃ ಈ ಯುದ್ಧವು ಏತಕ್ಕೆ? ಕಾಲವನ್ನು ಮೀರಿಹೋಗುವುದು ಅತ್ಯಂತ ಕಷ್ಟಕರವಾದುದು! ಇಲ್ಲಿ

ನಾವೆಲ್ಲರೂ ಧನಲೋಭದಿಂದಲೇ ಯುದ್ಧಕ್ಕೆ ಸೇರಿಕೊಂಡಿಲ್ಲವೇ? ಆದರೆ ನಮಗೆ ಧನದಿಂದಾಗಲೀ ಧನದ ಆಸೆಯಿಂದಾಗಲೀ ಮಾಡುವ ಕಾರ್ಯವೇನಿದೆ?”

ಅಲ್ಲಿ ಹಾಗೆ ಮಾತನಾಡುತ್ತಿದ್ದ ದುರ್ಯೋಧನನಿಗೆ ಸಾತ್ಯಕಿಯು ಹೇಳಿದನು:

“ಕ್ಷತ್ರಿಯನಾಗಿ ಸದಾ ಹೀಗೆಯೇ ನಡೆದುಕೊಳ್ಳಬೇಕಾಗುತ್ತಾದೆ. ಗುರುವಾದರೂ ಅವನೊಂದಿಗೆ ಯುದ್ಧಮಾಡಬೇಕಾಗುತ್ತದೆ! ಒಂದುವೇಳೆ ನಾನು ನಿನಗೆ ಪ್ರಿಯನಾಗಿದ್ದರೆ ನನ್ನನ್ನು ಜಯಿಸು! ಸಾವಕಾಶಮಾಡಬೇಡ! ನೀನು ಹಾಗೆ ಮಾಡಿದರೆ ನಾನು ಅನೇಕ ಸುಕೃತಲೋಕಗಳಿಗೆ ಹೋಗಬಲ್ಲೆ! ಆದುದರಿಂದ ನಿನ್ನಲ್ಲಿರುವ ಶಕ್ತಿ-ಬಲಗಳನ್ನು ಬೇಗನೇ ನನ್ನಲ್ಲಿ ಪ್ರದರ್ಶಿಸು. ಮಿತ್ರರ ಈ ಮಹಾ ವ್ಯಸನವನ್ನು ಇನ್ನೂ ಹೆಚ್ಚುಕಾಲ ನೋಡಲು ನನಗಿಷ್ಟವಿಲ್ಲ!”

ಹೀಗೆ ಸಾತ್ಯಕಿಯು ಸ್ಪಷ್ಟಮಾತುಗಳನ್ನಾಡಿ ಅವನಿಗೆ ಉತ್ತರಿಸಿ ಬೇಗನೇ ನಿರಪೇಕ್ಷನಾಗಿ ಅವನನ್ನು ಆಕ್ರಮಣಿಸಿದನು. ಅವನು ಆಕ್ರಮಣಿಸುತ್ತಿರುವುದನ್ನು ನೋಡಿ ದುರ್ಯೋಧನನು ಶೈನೇಯನನ್ನು ಶರಗಳಿಂದ ಮುಚ್ಚಿ ತಡೆದನು. ಆಗ ಅನ್ಯೋನ್ಯರಲ್ಲಿ ಕ್ರುದ್ಧರಾಗಿದ್ದ

ಕುರು-ಮಾಧವಸಿಂಹರೊಡನೆ ಆನೆ-ಸಿಂಹಗಳ ನಡುವಿನಂತೆ ಘೋರ ಯುದ್ಧವು ನಡೆಯಿತು. ಅನಂತರ ದುರ್ಯೋಧನನು ಸಾತ್ವತನನ್ನು ಪೂರ್ಣಾಯತವಾಗಿ ಸೆಳೆದು ಬಿಡಲ್ಪಟ್ಟ ಹತ್ತು ನಿಶಿತ ಶರಗಳಿಂದ ಹೊಡೆದನು. ಹಾಗೆಯೇ ಸಾತ್ಯಕಿಯೂ ಕೂಡ ಅವನನ್ನು ತಿರುಗಿ ಹತ್ತು ಶರಗಳಿಂದ, ಮತ್ತೆ ಪುನಃ ಐವತ್ತು, ಮೂವತ್ತು ಮತ್ತು ಹತ್ತು ಶರಗಳಿಂದ ಹೊಡೆದನು. ಆಗ ಸಾತ್ಯಕಿಯು ತಕ್ಷಣವೇ ದುರ್ಯೋಧನನು ಸಂಧಾನಮಾಡುತ್ತಿದ್ದ ಬಾಣವನ್ನೂ ಆ ಬಾಣದಿಂದ ಕೂಡಿದ್ದ ಧನುಸ್ಸನ್ನೂ ಕತ್ತರಿಸಿ ಅವನನ್ನು ಚೆನ್ನಾಗಿ ಗಾಯಗೊಳಿಸಿದನು. ದಾಶಾರ್ಹನ ಶರ ಪೀಡಿತ ದುರ್ಯೋಧನನು ಗಾಡವಾಗಿ ಗಾಯಗೊಂಡು ವ್ಯಥಿತನಾಗಿ ರಥದಲ್ಲಿಯೇ ನುಸುಳಿಕೊಂಡನು.

ಸ್ವಲ್ಪಹೊತ್ತು ವಿಶ್ರಮಿಸಿ ದುರ್ಯೋಧನನು ಸಾತ್ಯಕಿಯನ್ನು ಪುನಃ ಆಕ್ರಮಣಿಸಿದನು. ಯುಯುಧಾನನ ರಥದ ಮೇಲೆ ಅವನು ಬಾಣಗಳ ಜಾಲಗಳನ್ನು ಸೃಷ್ಟಿಸಿದನು. ಹಾಗೆಯೇ ಸಾತ್ಯಕಿಯು ಕೂಡ ದುರ್ಯೋಧನನ ರಥದ ಮೇಲೆ ಸತತವಾಗಿ ಬಾಣಗಳನ್ನು ಸುರಿಸುತ್ತಿದ್ದನು. ಅನಂತರ ಆ ಯುದ್ಧವು ಸಂಕುಲಯುದ್ಧವಾಗಿ ಪರಿಣಮಿಸಿತು. ಅವರಿಬ್ಬರ ಬಾಣಗಳು ಹಾರಿ ಎಲ್ಲಕಡೆ ಬೀಳುತ್ತಿರುವಾಗ ಮಹಾಪೊದೆಯಮೇಲೆ ಬೆಂಕಿಯು ಬೀಳುತ್ತಿದ್ದರೆ ಹೇಗೆ

ಶಬ್ಧವಾಗುತ್ತದೆಯೋ ಹಾಗೆ ಮಹಾ ಶಬ್ಧವು ಉಂಟಾಯಿತು. ರಥಸತ್ತಮ ಮಾಧವನ ಕೈ ಮೇಲಾಗುತ್ತಿದ್ದುದನ್ನು ನೋಡಿದ ಕರ್ಣನು ದುರ್ಯೋಧನನನ್ನು ರಕ್ಷಿಸುವ ಸಲುವಾಗಿ ಬೇಗನೇ ಅಲ್ಲಿಗೆ ಧಾವಿಸಿದನು. ಅದನ್ನು ಭೀಮಸೇನನು ಸಹಿಸಿಕೊಳ್ಳಲಿಲ್ಲ. ಅವನು ತ್ವರೆಮಾಡಿ ಅನೇಕ ಸಾಯಕಗಳನ್ನು ಚೆಲ್ಲುತ್ತಾ ಕರ್ಣನನ್ನು ಆಕ್ರಮಣಿಸಿದನು.

## ಕರ್ಣ-ಭೀಮಸೇನರ ಯುದ್ಧ

ಕರ್ಣನು ನಸುನಗುತ್ತಾ ಅವನನ್ನು ನಿಶಿತ ಬಾಣಗಳಿಂದ ತಿರುಗಿ ಹೊಡೆದನು ಮತ್ತು ಶರಗಳಿಂದ ಅವನ ಧನುಸ್ಸು-ಶರಗಳನ್ನು ತುಂಡರಿಸಿ ಸಾರಥಿಯನ್ನು ಸಂಹರಿಸಿದನು. ಪಾಂಡವ ಭೀಮಸೇನನಾದರೋ ಸಂಕ್ರುದ್ಧನಾಗಿ ಗದೆಯನ್ನೆತ್ತಿಕೊಂಡು ಯುದ್ಧದಲ್ಲಿ ರಿಪುವಿನ ಧ್ವಜವನ್ನೂ, ಧನುಸ್ಸನ್ನೂ, ಸಾರಥಿಯನ್ನೂ ಧ್ವಂಸಮಾಡಿದನು. ಅಸಹನಶೀಲ ಕರ್ಣನಾದರೋ ವಿವಿಧ ಶರಜಾಲಗಳಿಂದ ಮತ್ತು ನಾನಾ ಶಸ್ತ್ರಗಳಿಂದ ರಣರಂಗದಲ್ಲಿ ಭೀಮಸೇನನೊಡನೆ ಯುದ್ಧಮಾಡಿದನು. ಈ ರೀತಿ ಸಂಕುಲಯುದ್ಧವು ನಡೆಯುತ್ತಿರಲು ರಾಜಾ ಧರ್ಮಸುತನು ಪಾಂಚಾಲ ನರವ್ಯಾಘ್ರರಿಗೂ ಮತ್ಸ್ಯ ನರರ್ಷಭರಿಗೂ ಹೇಳಿದನು:

“ನಮ್ಮ ಪ್ರಾಣಸಮಾನರೂ ಶಿರಾಸಮಾನರೂ ಆಗಿರುವ ಆ ಮಹಾಬಲ ಯೋಧ ಪುರುಷರ್ಷಭರು ಧಾರ್ತರಾಷ್ಟ್ರರೊಂದಿಗೆ ಯುದ್ಧಮಾಡುತ್ತಿದ್ದಾರೆ. ಇಲ್ಲಿ ಏಕೆ ನೀವೆಲ್ಲರೂ ಜ್ಞಾನತಪ್ಪಿದವರಂತೆ ಮತ್ತು ಮೂಢರಂತೆ ನಿಂತಿರುವಿರಿ? ಕ್ಷತ್ರಧರ್ಮವನ್ನು ಮುಂದಿಟ್ಟುಕೊಂಡು ನಿಶ್ಚಿಂತರಾಗಿ ನನ್ನವರಾದ ಮಹಾರಥರು ಎಲ್ಲಿ ಯುದ್ಧಮಾಡುತ್ತಿರುವರೋ ಅಲ್ಲಿಗೆ ಹೋಗಿ! ಜಯಗಳಿಸಿಯಾದರೂ ಅಥವಾ ವಧಿಸಲ್ಪಟ್ಟರೂ ನಮಗಿಷ್ಟವಾದ ಗತಿಯನ್ನೇ ಪಡೆಯುತ್ತೇವೆ. ಗೆದ್ದರೆ ಭೂರಿದಕ್ಷಿಣೆಗಳುಳ್ಳ ಅನೇಕ ಯಜ್ಞಗಳನ್ನು ಮಾಡುವಿರಂತೆ. ಅಥವಾ ಮಡಿದರೆ ದೇವರೂಪಿಗಳಾಗಿ ಪುಷ್ಕಲ ಪುಣ್ಯಲೋಕಗಳನ್ನು ಪಡೆಯುವಿರಂತೆ!”

## ಯುಧಿಷ್ಠಿರನು ಆಚಾರ್ಯ ದ್ರೋಣನಿಗೆ ಸುಳ್ಳನ್ನಾಡಿದುದು

ರಾಜನಿಂದ ಹೀಗೆ ಪ್ರಚೋದಿತರಾದ ಮಹಾರಥರು ಯುದ್ಧೋದ್ಯತರಾಗಿ ಸೇನೆಯನ್ನು ನಾಲ್ಕು ಭಾಗಗಳನ್ನಾಗಿ ಮಾಡಿಕೊಂಡು ತ್ವರೆಮಾಡಿ ದ್ರೋಣನನ್ನು ಆಕ್ರಮಣಿಸಿದರು. ಪಾಂಚಾಲರ ಒಂದು ತುಂಡು ಅನೇಕ ಶರಗಳಿಂದ ದ್ರೋಣನನ್ನು

ಆಕ್ರಮಣಿಸಿತು. ಇನ್ನೊಂದು ಭಾಗವು ಭೀಮಸೇನನನ್ನು ಮುಂದಿಟ್ಟುಕೊಂಡು ದ್ರೋಣನನ್ನು ಆಕ್ರಮಣಿಸಿತು. ಪಾಂಡುಪುತ್ರರಲ್ಲಿ ಕುಟಿಲರಾಗಿದ್ದ ಮೂವರು ಮಹಾರಥರು – ನಕುಲ, ಸಹದೇವ ಮತ್ತು ಭೀಮಸೇನರು – ಧನಂಜಯನನ್ನು ಕೂಗಿ ಕರೆದು ಹೇಳಿದರು:

> "ಅರ್ಜುನ! ಬೇಗನೆ ಬಾ! ಕುರುಯೋಧರನ್ನು ದ್ರೋಣನಿಂದ ಬೇರ್ಪಡಿಸು! ಅನಂತರ ರಕ್ಷಣೆಯನ್ನು ಕಳೆದುಕೊಂಡ ದ್ರೋಣನನ್ನು ಪಾಂಚಾಲರು ಸಂಹರಿಸುತ್ತಾರೆ!"

ಕೂಡಲೇ ಪಾರ್ಥನು ಕೌರವೇಯರನ್ನು ಆಕ್ರಮಣಿಸಿದನು. ದ್ರೋಣನಾದರೋ ಧೃಷ್ಟದ್ಯುಮ್ನನ ನಾಯಕತ್ವದಲ್ಲಿದ್ದ ಪಾಂಚಾಲರೊಡನೆ ಯುದ್ಧವನ್ನು ಮುಂದುವರೆಸಿದನು. ಕ್ರುದ್ಧ ಇಂದ್ರನು ಹಿಂದೆ ರಣದಲ್ಲಿ ದಾನವರನ್ನು ಹೇಗೆ ನಾಶಗೊಳಿಸಿದನೋ ಹಾಗೆ ದ್ರೋಣನು ಪಾಂಚಾಲರೊಡನೆ ಮಹಾ ಕದನವನ್ನೇ ನಡೆಸಿದನು. ದ್ರೋಣನಿಂದ ಯುದ್ಧದಲ್ಲಿ ಸತತವಾಗಿ ವಧಿಸಲ್ಪಡುತ್ತಿದ್ದರೂ ಸತ್ತ್ವವಂತ ಮಹಾರಥ ಪಾಂಚಾಲರು ರಣದಲ್ಲಿ ದ್ರೋಣನಿಗೆ ಭಯಪಡಲಿಲ್ಲ. ವಧಿಸಲ್ಪಡುತ್ತಿದ್ದ ಪಾಂಚಾಲ-ಸೃಂಜಯರು ಮೋಹಗೊಂಡಿರುವರೋ ಎನ್ನುವಂತೆ ಮುನ್ನುಗ್ಗಿ ಮಹಾರಥ ದ್ರೋಣನನ್ನೇ ಆಕ್ರಮಣಿಸಿ ಯುದ್ಧಮಾಡುತ್ತಿದ್ದರು. ಬಾಣಗಳಿಂದ

ಮುಚ್ಚಲ್ಪಟ್ಟ ಮತ್ತು ಶರಶಕ್ತಿಯಿಂದ ವಧಿಸಲ್ಪಡುತ್ತಿದ್ದ ಪಾಂಚಾಲರ ಭೈರವ ನಾದವು ಎಲ್ಲಕಡೆಗಳಿಂದ ಕೇಳಿಬರುತ್ತಿತ್ತು. ಸಂಗ್ರಾಮದಲ್ಲಿ ದ್ರೋಣಾಸ್ತ್ರದಿಂದ ಸೀಳಲ್ಪಟ್ಟು ವಧಿಸಲ್ಪಡುತ್ತಿರುವ ಪಾಂಚಾಲರನ್ನು ನೋಡಿ ಪಾಂಡವರಲ್ಲಿ ಭೀತಿಯು ಆವರಿಸಿತು. ಆಗ ಯುದ್ಧದಲ್ಲಿ ವಿಪುಲವಾಗಿ ನಾಶಗೊಳ್ಳುತ್ತಿರುವ ಅಶ್ವ-ನರ ಸಂಘಗಳನ್ನು ನೋಡಿ ಪಾಂಡವರಿಗೆ ವಿಜಯವು ದೊರಕುತ್ತದೆ ಎನ್ನುವುದರ ಮೇಲೆ ಸಂಶಯವುಂಟಾಯಿತು. ಅವರು

> “ಗ್ರೀಷ್ಮ ಋತುವಿನಲ್ಲಿ ಪ್ರಜ್ವಲಿಸುವ ಅಗ್ನಿಯು ಒಣ ಪೊದೆಯನ್ನು ಸುಟ್ಟು ಭಸ್ಮ ಮಾಡುವಂತೆ ಪರಮಾಸ್ತ್ರವಿದುವಾದ ದ್ರೋಣನು ನಮ್ಮೆಲ್ಲರನ್ನೂ ಸಂಹರಿಸಿಬಿಡುವುದಿಲ್ಲವೇ? ಈ ಯುದ್ಧದಲ್ಲಿ ದ್ರೋಣನನ್ನು ದಿಟ್ಟಿಸಿ ನೋಡಲು ಸಮರ್ಥರು ಯಾರೂ ಇಲ್ಲ. ಧರ್ಮವಿದು ಅರ್ಜುನನಾದರೋ ದ್ರೋಣನೊಡನೆ ಯುದ್ಧಮಾಡುವವನಲ್ಲ!”

ಎಂದು ಅಂದುಕೊಳ್ಳುತ್ತಿದ್ದರು.

ದ್ರೋಣನ ಸಾಯಕಗಳಿಂದ ಪೀಡಿತರಾಗಿ ಭಯಗೊಂಡಿರುವ ಕುಂತೀಸುತರನ್ನು ನೋಡಿ ಅವರ ಶ್ರೇಯಸ್ಸನ್ನೇ

ಮತಿಯಲ್ಲಿಟ್ಟುಕೊಂಡಿದ್ದ ಕೇಶವನು ಅರ್ಜುನನಿಗೆ ಹೇಳಿದನು:

"ಈ ರಥಯೂಥಪಯೂಥಪನನ್ನು ಸಂಗ್ರಾಮದಲ್ಲಿ ಯುದ್ಧದಿಂದ ಜಯಿಸಲು ವೃತ್ರಹರ ಇಂದ್ರನಿಗೂ ಎಂದೂ ಸಾಧ್ಯವಿಲ್ಲ. ಪಾಂಡವ! ಧರ್ಮವನ್ನು ಬದಿಗೊತ್ತಿ ನಾವು ಜಯವನ್ನು ಪಡೆಯುವುದರಲ್ಲಿ ನಿರತರಾಗಬೇಕು ಅಥವಾ ರುಕ್ಮವಾಹನ ದ್ರೋಣನು ಸಂಯುಗದಲ್ಲಿ ನಮ್ಮೆಲ್ಲರನ್ನೂ ಸಂಹರಿಸುತ್ತಾನೆ. ಅಶ್ವತ್ಥಾಮನು ಹತನಾದರೆ ಇವನು ಯುದ್ಧಮಾಡುವುದಿಲ್ಲ ಎಂದು ನನ್ನ ಅಭಿಪ್ರಾಯ. ಯುದ್ಧದಲ್ಲಿ ಅವನು ಹತನಾದನೆಂದು ಯಾರಾದರೂ ಮನುಷ್ಯನು ಅವನಿಗೆ ಹೇಳಲಿ!"

ಇದು ಧನಂಜಯನಿಗೆ ಸ್ವಲ್ಪವೂ ಹಿಡಿಸಲಿಲ್ಲ. ಆದರೆ ಬೇರೆಯವರೆಲ್ಲರು ಮತ್ತು ಕಷ್ಟದಿಂದ ಯುಧಿಷ್ಠಿರನೂ ಇದಕ್ಕೆ ಸಮ್ಮತಿಯಿತ್ತರು. ಆಗ ಭೀಮನು ತನ್ನದೇ ಸೇನೆಯಲ್ಲಿದ್ದ ಅಶ್ವತ್ಥಾಮ ಎಂದು ಕರೆಯಲ್ಪಡುತ್ತಿದ್ದ ಮಹಾಗಜವನ್ನು ಗದೆಯಿಂದ ಸಂಹರಿಸಿದನು. ಭೀಮಸೇನನಾದರೋ ಲಜ್ಜಾಯುಕ್ತನಾಗಿಯೇ ಆಹವದಲ್ಲಿ ದ್ರೋಣರ ಸಮೀಪ ಹೋಗಿ ಅಶ್ವತ್ಥಾಮನು ಹತನಾದನೆಂದು ಗಟ್ಟಿಯಾಗಿ ಕೂಗಿದನು. ಏಕೆಂದರೆ ಅಶ್ವತ್ಥಾಮ ಎಂಬ ಹೆಸರಿನಿಂದ ಖ್ಯಾತ ಆನೆಯೊಂದು ಹತವಾಗಿತ್ತು.

ಅದನ್ನೇ ಮನಸ್ಸಿಗೆ ತಂದುಕೊಂಡು ಭೀಮನು ಸುಳ್ಳು ಸುದ್ದಿಯನ್ನು ಪಸರಿಸಿದ್ದನು. ಭೀಮಸೇನನ ಆ ಪರಮ ಅಪ್ರಿಯ ಮಾತನ್ನು ಕೇಳಿ ದ್ರೋಣನ ಶರೀರವು ನೀರಿನಲ್ಲಿ ಮರಳು ಕದಡಿಹೋಗುವಂತೆ ಶಿಥಿಲವಾಗಿ ಹೋಯಿತು. ಆದರೆ ತನ್ನ ಮಗನ ವೀರ್ಯವನ್ನು ತಿಳಿದಿದ್ದ ಅವನು ಅದೊಂದು ಸುಳ್ಳೆಂದು ಶಂಕಿಸಿದನು. ಅವನು ಹತನಾದನೆಂದು ಕೇಳಿದರೂ ಧೈರ್ಯದಿಂದ ವಿಚಲಿತನಾಗಲಿಲ್ಲ. ತನ್ನ ಮಗನನ್ನು ಯುದ್ಧದಲ್ಲಿ ಅಮರರೂ ಎದುರಿಸಲಾರರು ಎಂದು ಯೋಚಿಸಿ ದ್ರೋಣನು ಕ್ಷಣದಲ್ಲಿಯೇ ಆಶ್ವಾಸನೆಹೊಂದಿ ಚೇತರಿಸಿಕೊಂಡನು. ತನಗೆ ಮೃತ್ಯುರೂಪನಾಗಿದ್ದ ಪಾರ್ಷತನನ್ನು ಸಂಹರಿಸುವ ಇಚ್ಛೆಯಿಂದ ಸಹಸ್ರಾರು ತೀಕ್ಷ್ಣ ಕಂಕಪತ್ರಿಗಳಿಂದ ಅವನನ್ನು ಮುಚ್ಚಿದನು.

ಹಾಗೆ ಸಂಗ್ರಾಮದಲ್ಲಿ ಸಂಚರಿಸುತ್ತಿದ್ದ ದ್ರೋಣನನ್ನು ಇಪ್ಪತ್ತು ಸಾವಿರ ಪಾಂಚಾಲ ನರರ್ಷಭರು ಶರಗಳಿಂದ ಎಲ್ಲಕಡೆಗಳಿಂದ ಮುಚ್ಚಿದರು. ಆಗ ಕೋಪಗೊಂಡ ಪರಂತಪ ದ್ರೋಣನು ಆ ಪಾಂಚಾಲಶೂರರ ವಧೆಗೆಂದು ಬ್ರಹ್ಮಾಸ್ತ್ರವನ್ನು ಹೂಡಿದನು. ಆಗ ಸರ್ವ ಸೋಮಕರನ್ನು ಸಂಹರಿಸುತ್ತಾ ದ್ರೋಣನು ವಿರಾಜಿಸಿದನು. ಮಹಾರಣದಲ್ಲಿ ಪಾಂಚಾಲರ ಶಿರಗಳು ಮತ್ತು ಹಾಗೆಯೇ ಕನಭೂಷಣಗಳಿಂದ

ಅಲಂಕೃತ ಪರಿಘಾಕಾರದ ಅನೇಕ ಬಾಹುಗಳೂ ಉರುಳಿದವು. ಭಾರದ್ವಾಜನಿಂದ ವಧಿಸಲ್ಪಟ್ಟ ಪಾರ್ಥಿವರು ಚಂಡಮಾರುತಕ್ಕೆ ಸಿಕ್ಕಿ ಬಿದ್ದ ವೃಕ್ಷಗಳಂತೆ ರಣಭೂಮಿಯಲ್ಲಿ ಹರಡಿ ಬೀಳುತ್ತಿದ್ದರು. ಕೆಳಗೆ ಬೀಳುತ್ತಿದ್ದ ಆನೆಗಳ ಮತ್ತು ಕುದುರೆಗಳ ಗುಂಪುಗಳಿಂದ ರಣಭೂಮಿಯು ಮಾಂಸ-ರಕ್ತ-ಮಜ್ಜೆಗಳಿಂದ ಅಗಮ್ಯರೂಪವಾಗಿ ತೋರಿತು. ರಥಾರೂಢರಾಗಿದ್ದ ಇಪ್ಪತ್ತು ಸಾವಿರ ಪಾಂಚಾಲರನ್ನು ಸಂಹರಿಸಿ ದ್ರೋಣನು ಯುದ್ಧಭೂಮಿಯಲ್ಲಿ ಪ್ರಜ್ವಲಿಸುತ್ತಿರುವ ಹೊಗೆಯಿಲ್ಲದ ಅಗ್ನಿಯಂತೆ ಶೋಭಿಸುತ್ತಿದ್ದನು. ಹಾಗೆಯೇ ಕ್ರುದ್ಧ ಪ್ರತಾಪವಾನ ಭಾರದ್ವಾಜನು ಪುನಃ ಭಲ್ಲದಿಂದ ವಸುದಾನನ ಶಿರವನ್ನು ಶರೀರದಿಂದ ಅಪಹರಿಸಿದನು. ಪುನಃ ಅವನು ಐದುನೂರು ಮತ್ಸ್ಯರನ್ನೂ, ಆರುಸಾವಿರ ಸೃಂಜಯರನ್ನೂ, ಹತ್ತು ಸಾವಿರ ಆನೆಗಳನ್ನೂ ಹತ್ತು ಸಾವಿರ ಕುದುರೆಗಳನ್ನೂ ಸಂಹರಿಸಿದನು.

ಕ್ಷತ್ರಿಯರನ್ನು ನಿರ್ಮೂಲನಗೊಳಿಸಲು ವ್ಯವಸ್ಥಿತನಾಗಿದ್ದ ದ್ರೋಣನನ್ನು ನೋಡಿ ತಕ್ಷಣವೇ ಹವ್ಯವಾಹನನ್ನು ಮುಂದಿರಿಸಿಕೊಂಡು ಬ್ರಹ್ಮಲೋಕಕ್ಕೆ ಕರೆದುಕೊಂಡು ಹೋಗಲು ಅವನ ಬಳಿ ವಿಶ್ವಾಮಿತ್ರ, ಜಮದಗ್ನಿ, ಭಾರದ್ವಾಜ, ಗೌತಮ, ವಸಿಷ್ಠ, ಕಶ್ಯಪ, ಅತ್ರಿ, ಸಿಕತರು, ಪೃಶ್ನರು, ಗರ್ಗರು, ವಾಲಖಿಲ್ಯರು, ಮರೀಚಿಪರು, ಭೃಗುವಂಶಜರು,

ಅಂಗಿರಸರು, ಮತ್ತು ಅನ್ಯ ಸೂಕ್ಷ್ಮ ಮಹರ್ಷಿಗಳು ರಣರಂಗಕ್ಕೆ ಆಗಮಿಸಿದರು. ಅವರೆಲ್ಲರೂ ರಣಾಂಗಣದಲ್ಲಿ ಶೋಭಾಯಮಾನ ದ್ರೋಣನಿಗೆ ಹೇಳಿದರು:

> "ನೀನು ಅಧರ್ಮತಃ ಯುದ್ಧಮಾಡುತ್ತಿರುವೆ. ನಿನ್ನ ನಿಧನದ ಕಾಲವು ಬಂದೊದಗಿದೆ. ದ್ರೋಣ! ಆಯುಧವನ್ನು ಕೆಳಗಿಡು! ಇಲ್ಲಿ ಬಂದು ನಿಂತಿರುವ ನಮ್ಮನ್ನು ಸರಿಯಾಗಿ ನೋಡು! ಈ ಕ್ರೂರತರ ಕರ್ಮವನ್ನು ಮಾಡುವುದು ನಿನಗೆ ಸರಿಯಲ್ಲ! ವೇದ-ವೇದಾಂಗಪಾರಂಗತನಾಗಿರುವೆ. ಸತ್ಯ-ಧರ್ಮಪರಾಯಣನಾಗಿರುವೆ. ಎಲ್ಲಕ್ಕಿಂತಲೂ ಮಿಗಿಲಾಗಿ ಬ್ರಾಹ್ಮಣನಾಗಿರುವೆ! ನಿನ್ನಂತವನಿಗೆ ಈ ವಿನಾಶಕಾರ್ಯವು ಖಂಡಿತವಾಗಿ ಶೋಭಿಸುವುದಿಲ್ಲ. ಅಮೋಘ ಬಾಣಗಳನ್ನು ಹೊಂದಿರುವವನೇ! ಆಯುಧವನ್ನು ತೊರೆ! ಶಾಶ್ವತದಲ್ಲಿ ಬುದ್ಧಿಯನ್ನಿರಿಸು. ಮನುಷ್ಯ ಲೋಕದಲ್ಲಿ ನಿನ್ನ ವಾಸದ ಕಾಲವು ಪರಿಪೂರ್ಣವಾಗಿದೆ."

ಅವರ ಈ ಮಾತನ್ನೂ ಭೀಮಸೇನನ ಮಾತನ್ನೂ ಕೇಳಿ ಮತ್ತು ಧೃಷ್ಟದ್ಯುಮ್ನನನ್ನೂ ನೋಡಿ ದ್ರೋಣನು ರಣದಿಂದ ವಿಮನಸ್ಕನಾದನು. ವ್ಯಥೆಯಿಂದ ಸುಡುತ್ತಿರುವ ಆ ಸುಮಹಾತ್ಮನು

“ಅವನು ಹತನಾದನೇ ಅಥವಾ ಹತನಾಗಲಿಲ್ಲವೇ?” ಎಂದು ಯುಧಿಷ್ಠಿರನನ್ನು ಕೇಳಿದನು. ಏಕೆಂದರೆ ಪಾರ್ಥನು ಮೂರು ಲೋಕಗಳ ಐಶ್ವರ್ಯಕ್ಕಾಗಿಯೇ ಆದರೂ ಅಥವಾ ಬೇರೆ ಯಾವುದೇ ಕಾರಣಕ್ಕಾದರೂ ಸುಳ್ಳುಹೇಳುವುದಿಲ್ಲವೆಂದು ದ್ರೋಣನ ದೃಢ ನಂಬಿಕೆಯಾಗಿತ್ತು. ಆದುದರಿಂದಲೇ ಅವನು ಸತ್ಯವನ್ನು ತಿಳಿಯಬೇಕಾಗಿ ಬೇರೆ ಯಾರನ್ನೂ ಕೇಳದೇ ಬಾಲ್ಯದಿಂದಲೂ ಸತ್ಯವಾದಿಯಾಗಿದ್ದ ಪಾಂಡವನಲ್ಲಿಯೇ ಕೇಳಿದನು. ಆಗ ಸೇನಾಪತಿ ದ್ರೋಣನು ಭೂಮಿಯನ್ನು ನಿಷ್ಪಾಂಡವರನ್ನಾಗಿ ಮಾಡುತ್ತಾನೆಂದು ತಿಳಿದ ಗೋವಿಂದನು ವ್ಯಥಿತನಾಗಿ ಧರ್ಮರಾಜನಿಗೆ ಹೇಳಿದನು:

> “ಒಂದುವೇಳೆ ಇನ್ನೊಂದು ಅರ್ಧದಿವಸ ದ್ರೋಣನು ಕ್ರೋಧಿತನಾಗಿ ಯುದ್ಧಮಾಡಿದರೆ ಅವನು ನಿನ್ನ ಸೇನೆಯನ್ನು ಸಂಪೂರ್ಣವಾಗಿ ನಾಶಗೊಳಿಸುತ್ತಾನೆ. ನಿನಗೆ ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ನೀನೀಗ ನಮ್ಮೆಲ್ಲರನ್ನೂ ದ್ರೋಣನಿಂದ ರಕ್ಷಿಸಬೇಕಾಗಿದೆ. ಕೆಲವು ಸಮಯಗಳಲ್ಲಿ ಸತ್ಯವಚನಕ್ಕಿಂತಲೂ ಸುಳ್ಳುಮಾತೇ ಶ್ರೇಷ್ಠವೆನಿಸಿಕೊಳ್ಳುತ್ತದೆ. ಪ್ರಾಣವನ್ನು ಉಳಿಸಿಕೊಳ್ಳುವುದಕ್ಕಾಗಿ ಆಡಿದ ಸುಳ್ಳು ಸುಳ್ಳಾಡಿದವನನ್ನು ಸ್ಪರ್ಶಿಸುವುದಿಲ್ಲ.”

ಅವರಿಬ್ಬರು ಹೀಗೆ ಮಾತನಾಡಿಕೊಳ್ಳುತ್ತಿರುವಾಗ ಭೀಮಸೇನನೂ ಈ ಮಾತನ್ನಾಡಿದನು:

> “ಮಹಾರಾಜ! ಆ ಮಹಾತ್ಮನ ವಧೋಪಾಯವನ್ನು ನಾನೂ ಕೇಳಿದೆ. ಆಗ ನಿನ್ನ ಸೇನೆಯ ಮಧ್ಯದಲ್ಲಿ ಸಂಚರಿಸುತ್ತಿದ್ದ, ಇಂದ್ರನ ಐರಾವತಕ್ಕೆ ಸಮನಾದ, ಮಾಲವರಾಜ ಇಂದ್ರವರ್ಮನ ಅಶ್ವತ್ಥಾಮ ಎಂದು ವಿಖ್ಯಾತ ಆನೆಯನ್ನು ನಾನು ಯುದ್ಧದಲ್ಲಿ ವಿಕ್ರಮದಿಂದ ಸಂಹರಿಸಿ, ದ್ರೋಣನಿಗೆ “ಅಶ್ವತ್ಥಾಮನು ಹತನಾಗಿದ್ದಾನೆ. ಬ್ರಹ್ಮನ್! ಯುದ್ಧದಿಂದ ವಿಮುಖನಾಗು!” ಎಂದು ಹೇಳಿದೆ. ಆದರೆ ಆ ಪುರುಷರ್ಷಭನು ನನ್ನ ಮಾತಿನ ಮೇಲೆ ವಿಶ್ವಾಸವನ್ನಿಡಲಿಲ್ಲ. ಆದುದರಿಂದ ಜಯವನ್ನು ಬಯಸುವ ನೀನು ಗೋವಿಂದನ ಮಾತನ್ನು ಒಪ್ಪಿಕೋ! ರಾಜನ್! ಶಾರದ್ವತೀ ಸುತನು ಹತನಾದನೆಂದು ದ್ರೋಣನಿಗೆ ಹೇಳು. ಇದನ್ನು ನೀನು ಹೇಳಿದರೆ ನಂತರ ಆ ದ್ವಿಜರ್ಷಭನು ಖಂಡಿತವಾಗಿ ಯುದ್ಧವನ್ನು ಮಾಡುವುದಿಲ್ಲ. ಏಕೆಂದರೆ, ನರಲೋಕದಲ್ಲಿ ನೀನು ಸತ್ಯವಾನನೆಂದು ಖ್ಯಾತನಾಗಿದ್ದೀಯೆ!”

ಅವನ ಆ ಮಾತನ್ನು ಕೇಳಿ ಮತ್ತು ಕೃಷ್ಣನ ಮಾತಿನಿಂದ

ಪ್ರಚೋದಿತನಾಗಿ ಅವನು ಅದನ್ನು ಹೇಳಲು ಸಿದ್ಧನಾದನು. ಅದರಿಂದಾಗುವ ಪರಿಣಾಮದಿಂದ ಭಯಪಟ್ಟಿದ್ದ ಆದರೆ ವಿಜಯದಲ್ಲಿ ಆಸಕ್ತಿಯನ್ನು ಹೊಂದಿದ್ದ ಯುಧಿಷ್ಠಿರನು ಅದನ್ನು ಹೇಳಿ ಅವ್ಯಕ್ತವಾಗಿ "ಹತಃ ಕುಂಜರ" ಎಂದು ಹೇಳಿದನು. ಅದರ ಮೊದಲು ಅವನ ರಥವು ಭೂಮಿಯಿಂದ ನಾಲ್ಕು ಅಂಗುಲ ಮೇಲಿದ್ದಿತು. ಅವನು ಹೀಗೆ ಹೇಳಿದೊಡನೆಯೇ ಅವನ ಕುದುರೆಗಳು ನೆಲವನ್ನು ಮುಟ್ಟಿದವು.

## ಧೃಷ್ಟದ್ಯುಮ್ನನಿಂದ ದ್ರೋಣವಧೆ

ಯುಧಿಷ್ಠಿರನ ಆ ಮಾತನ್ನು ಕೇಳಿ ಮಹಾರಥ ದ್ರೋಣನಾದರೋ ಪುತ್ರವ್ಯಸನದಿಂದ ಸಂತಪ್ತನಾಗಿ ಜೀವನದಲ್ಲಿ ನಿರಾಶನಾದನು. ಮಹಾತ್ಮ ಪಾಂಡವರಿಗೆ ತಾನು ಅಪರಾಧವನ್ನೆಸಗಿದ್ದೇನೆಂಬ ಋಷಿವಾಕ್ಯವನ್ನು ಮನ್ನಿಸಿ, ತನ್ನ ಮಗನು ಹತನಾದನೆನ್ನುವುದನ್ನು ಕೇಳಿ ಅರಿಂದಮ ದ್ರೋಣನು ವಿಚೇತನನಾಗಿ, ಪರಮ ಉದ್ವಿಗ್ನನಾಗಿ, ಧೃಷ್ಟದ್ಯುಮ್ನನನ್ನು ನೋಡದೇ, ಹಿಂದಿನಂತೆ ಯುದ್ಧಮಾಡಲು ಅಶಕ್ಯನಾದನು. ಅವನು ಪರಮೋದ್ವಿಗ್ನನಾಗಿರುವುದನ್ನು ಮತ್ತು ಶೋಕದಿಂದ ಚೇತನವನ್ನು ಕಳೆದುಕೊಂಡಿರುವುದನ್ನು ನೋಡಿದ ಪಾಂಚಾಲರಾಜನ ಮಗ ಧೃಷ್ಟದ್ಯುಮ್ನನು ಅವನನ್ನು ಆಕ್ರಮಣಿಸಿದನು. ಯಾರನ್ನು ಮನುಜೇಂದ್ರ ದ್ರುಪದನು ಮಹಾಯಜ್ಞದಲ್ಲಿ ಸಮಿತ್ತನ್ನು

ಹಾಕಿ ಹವ್ಯವಾಹನಿಂದ ದ್ರೋಣನ ವಿನಾಶಕ್ಕಾಗಿ ಪಡೆದಿದ್ದನೋ ಆ ಪಾಂಚಾಲ್ಯನು ಘೋರ ಮೋಡದಂತೆ ಗುಡುಗುತ್ತಿರುವ ಬಿಗಿಯಾದ ಧನುಸ್ಸನ್ನು ಹಿಡಿದು, ಸರ್ಪದ ವಿಷಕ್ಕೆ ಸಮಾನ ದಿವ್ಯ ಅಜರ ದೃಢ ಅಗ್ನಿಯಂತೆ ಜ್ವಾಲೆಗಳನ್ನು ಕಾರುತ್ತಿರುವ ಬಾಣವನ್ನು ಆ ಕಾರ್ಮುಕಕ್ಕೆ ಹೂಡಿ, ದ್ರೋಣನನ್ನು ಸಂಹರಿಸಲು ಬಯಸಿದನು. ಮಂಡಲಾಕಾರದ ಶಿಂಜಿನಿಯ ಮಧ್ಯದಲ್ಲಿದ್ದ ಆ ಶರದ ರೂಪವು ಛಳಿಗಾಲದ ಅಂತ್ಯದಲ್ಲಿ ಭಾಸ್ಕರನಂತೆ ಪ್ರಕಾಶಿಸುತ್ತಿತ್ತು. ಪಾರ್ಷತನಿಂದ ಎಳೆಯಲ್ಪಟ್ಟ ಪ್ರಜ್ವಲಿಸುತ್ತಿರುವ ಆ ಧನುಸ್ಸನ್ನು ನೋಡಿ ಸೈನಿಕರು ಅಂತಕಾಲವು ಬಂದೊದಗಿತು ಎಂದು ಅಂದುಕೊಂಡರು. ಆ ಬಾಣವನ್ನು ಹೂಡಿದುದನ್ನು ನೋಡಿ ಪ್ರತಾಪವಾನ್ ಭಾರದ್ವಾಜನು ತನ್ನ ದೇಹದ ಕಾಲಾವಧಿಯು ಮುಗಿಯುತ್ತ ಬಂದಿತೆಂದು ಅಂದುಕೊಂಡನು. ಆಗ ಅವನನ್ನು ತಡೆಯಲು ಆಚಾರ್ಯನು ಅತ್ಯಂತ ಪ್ರಯತ್ನಿಸಿದನು. ಆದರೆ ಮಹಾತ್ಮನಿಗೆ ಯಾವ ಅಸ್ತ್ರಗಳೂ ನೆನಪಿಗೆ ಬರಲಿಲ್ಲ.

ದ್ರೋಣನು ನಾಲ್ಕು ದಿನಗಳು ಮತ್ತು ಒಂದು ರಾತ್ರಿ ಒಂದೇಸಮನೆ ಬಾಣಗಳನ್ನು ಬಿಡುತ್ತಿದ್ದನು. ರಾತ್ರಿಯ ಮೂರು ಭಾಗಗಳು ಮುಗಿದುಹೋದುದರಿಂದ ಅವನ ಬಾಣಗಳೂ ಮುಗಿದುಹೋಗಿದ್ದವು. ಅವನ ಬಾಣಗಳು ಮುಗಿದುಹೋಗಿರಲು, ಪುತ್ರಶೋಕದಿಂದ

ಪೀಡಿತನಾಗಿರಲು, ವಿವಿಧ ದಿವ್ಯಾಸ್ತ್ರಗಳೂ ಅವನಿಗೆ ಆ ಸಮಯದಲ್ಲಿ ಗೋಚರಿಸುತ್ತಿರಲಿಲ್ಲ. ಋಷಿಗಳ ಮಾತಿನಿಂದಲೂ ಪ್ರಭಾವಿತನಾಗಿ ಅವನು ಶಸ್ತ್ರಗಳನ್ನು ತ್ಯಜಿಸಲು ಬಯಸಿ ತೇಜಸ್ಸಿನಿಂದ ತುಂಬಿದ್ದರೂ ಅತಿಮಾನುಷ ಯುದ್ಧವನ್ನು ಮಾಡಲಾರದಂತಾದನು. ಹಾಗಿದ್ದರೂ ಅವನು ಅನ್ಯ ದಿವ್ಯ ಆಂಗಿರಸ ಧನುಸ್ಸನ್ನು ಮತ್ತು ಬ್ರಹ್ಮದಂಡದಂತೆ ಹೊಳೆಯುತ್ತಿದ್ದ ಶರಗಳನ್ನು ತೆಗೆದುಕೊಂಡು ಧೃಷ್ಟದ್ಯುಮ್ನನೊಡನೆ ಯುದ್ಧಮಾಡಿದನು. ಆಗ ಪರಮಕ್ರುದ್ಧನಾದ ಆ ಅಮರ್ಷಣನು ಧೃಷ್ಟದ್ಯುಮ್ನನನ್ನು ಮಹಾ ಶರವರ್ಷದಿಂದ ಮುಚ್ಚಿ ಗಾಯಗೊಳಿಸಿದನು. ದ್ರೋಣನು ಅವನ ಶರವನ್ನು ಸಾಯಕಗಳಿಂದ ನೂರು ಭಾಗಗಳಲ್ಲಿ ತುಂಡರಿಸಿ ನಿಶಿತ ಬಾಣಗಳಿಂದ ಅವನ ಧ್ವಜವನ್ನು, ಧನುಸ್ಸನ್ನೂ, ಸಾರಥಿಯನ್ನೂ ಕೆಳಗುರುಳಿಸಿದನು. ಆಗ ಧೃಷ್ಟದ್ಯುಮ್ನನು ಜೋರಾಗಿ ನಗುತ್ತಾ ಪುನಃ ಇನ್ನೊಂದು ಕಾರ್ಮುಕವನ್ನು ಕೈಗೆತ್ತಿಕೊಂಡು ನಿಶಿತ ಬಾಣದಿಂದ ಅವನ ಎದೆಗೆ ಹೊಡೆದನು. ಅದರಿಂದ ಅತಿಯಾಗಿ ಗಾಯಗೊಂಡರೂ ದ್ರೋಣನು ಗಾಬರಿಗೊಳ್ಳದೇ ಸಂಯುಗದಲ್ಲಿ ಹರಿತ ಭಲ್ಲದಿಂದ ಧೃಷ್ಟದ್ಯುಮ್ನನ ಮಹಾಧನುಸ್ಸನ್ನು ತುಂಡರಿಸಿದನು. ದ್ರೋಣನು ಅವನ ಗದೆ ಮತ್ತು ಖಡ್ಗಗಳನ್ನು ಬಿಟ್ಟು ಬೇರೆ ಎಲ್ಲ ಬಾಣಗಳನ್ನೂ ಧನುಸ್ಸುಗಳನ್ನೂ ಕತ್ತರಿಸಿದನು. ಆಗ ಕ್ರುದ್ಧ ಪರಂತಪನು ಕ್ರುದ್ಧರೂಪ ಧೃಷ್ಟದ್ಯುಮ್ನನ

ಜೀವವನ್ನು ಅಂತ್ಯಗೊಳಿಸಲು ಅವನನ್ನು ಒಂಭತ್ತು ನಿಶಿತ ಶರಗಳಿಂದ ಹೊಡೆದನು. ಆಗ ಧೃಷ್ಟದ್ಯುಮ್ನನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸುತ್ತಾ ತನ್ನ ರಥ-ಕುದುರೆಗಳನ್ನು ದ್ರೋಣನ ರಥ-ಕುದುರೆಗಳೊಡನೆ ತಾಗಿಸಿ ಬೆರೆಸಿದನು.

ವಾಯುವೇಗವುಳ್ಳ ಕಪೋತಬಣ್ಣದ ಅವನ ಕುದುರೆಗಳು ಕೆಂಪುಬಣ್ಣದ ದ್ರೋಣನ ಕುದುರೆಗಳೊಡನೆ ಬೆರೆದು ಬಹಳವಾಗಿ ಶೋಭಿಸಿದವು. ಮಳೆಗಾಲದ ಪ್ರಾರಂಭದಲ್ಲಿ ಹೇಗೆ ಮಿಂಚಿನೊಡನೆ ಮೋಡಗಳು ಗುಡುಗುತ್ತವೆಯೋ ಹಾಗೆ ಆ ಕುದುರೆಗಳು ರಣರಂಗದಲ್ಲಿ ರಾಜಿಸಿದವು. ದ್ವಿಜ ದ್ರೋಣನು ಧೃಷ್ಟದ್ಯುಮ್ನನ ಈಷಾಬಂಧವನ್ನೂ, ಚಕ್ರಬಂಧವನ್ನೂ ಮತ್ತು ರಥಬಂಧವನ್ನೂ ಧ್ವಂಸಮಾಡಿದನು. ಧನುಸ್ಸು ತುಂಡಾಗಲು, ಅಶ್ವ-ಸಾರಥಿಗಳನ್ನು ಕಳೆದುಕೊಂಡು ವಿರಥನಾದ ವೀರ ಧೃಷ್ಟದ್ಯುಮ್ನನು ಪರಮ ಕಂಟಕಕ್ಕೆ ಸಿಲುಕಿ, ಉತ್ತಮ ಗದೆಯನ್ನು ತೆಗೆದುಕೊಂಡನು. ಅದನ್ನೂ ಕೂಡ ಕ್ರುದ್ಧ ದ್ರೋಣನು ತ್ವರೆಮಾಡಿ ತೀಕ್ಷ್ಣ ವಿಶಿಖ ಬಾಣಗಳಿಂದ ನಾಶಗೊಳಿಸಿದನು. ಗದೆಯು ದ್ರೋಣನ ಶರಗಳಿಂದ ನಾಶವಾದುದನ್ನು ನೋಡಿ ಆ ನರವ್ಯಾಘ್ರನು ಹೊಳೆಯುವ ಖಡ್ಗವನ್ನೂ ಕಾಂತಿಯುಕ್ತ ಗುರಾಣಿಯನ್ನೂ ಕೈಗೆತ್ತಿಕೊಂಡನು. ಆಗ ಪಾಂಚಾಲ್ಯನು ಆಚಾರ್ಯಮುಖ್ಯನ ವಧೆಯ ಕಾಲವು ಪ್ರಾಪ್ತವಾಗಿದೆ

ಎಂದು ನಿಃಸಂಶಯವಾಗಿ ಭಾವಿಸಿದನು. ಆಗ ತನ್ನ ರಥದ ಈಷಾದಂಡದ ಮೂಲಕವಾಗಿ ತನ್ನ ರಥದ ನೀಡದಲ್ಲಿ ಕುಳಿತಿದ್ದ ದ್ರೋಣನನ್ನು ಹೊಳೆಯುತ್ತಿದ್ದ ಖಡ್ಗ ಮತ್ತು ಗುರಾಣಿಗಳೊಂದಿಗೆ ಆಕ್ರಮಣಿಸತೊಡಗಿದನು. ಮಹಾರಥ ಧೃಷ್ಟದ್ಯುಮ್ನನು ಯುದ್ಧದಲ್ಲಿ ಭಾರದ್ವಾಜನ ಎದೆಯನ್ನು ಸೀಳುವಂತಹ ದುಷ್ಕರ ಕಾರ್ಯವನ್ನು ಮಾಡಲು ಬಯಸಿದನು.

ಆಗ ಧೃಷ್ಟದ್ಯುಮ್ನನು ಒಮ್ಮೆ ನೊಗದ ಮಧ್ಯಭಾಗದಲ್ಲಿ ಕಾಲಿಡುತ್ತಾ,, ಇನ್ನೊಮ್ಮೆ ನೊಗದ ಬಂಧನಸ್ಥಾನದಲ್ಲಿಯೂ, ಪುನಃ ದ್ರೋಣನ ಕುದುರೆಗಳ ಹಿಂಭಾಗದಲ್ಲಿಯೂ ನಿಂತುಕೊಳ್ಳುತ್ತಿದ್ದನು. ಅದನ್ನು ನೋಡಿ ಸೇನೆಗಳು ಅವನನ್ನು ಪ್ರಶಂಸಿಸಿದವು. ನೊಗದ ಮೇಲಿದ್ದಾನೋ ಕುದುರೆಗಳ ಹಿಂದಿದ್ದಾನೋ ಎಂದು ದ್ರೋಣನಿಗೂ ತೋರದಂತಾಯಿತು. ಅದೊಂದು ಅದ್ಭುತವೇ ನಡೆಯಿತು. ಮಾಂಸದ ತುಂಡಿಗಾಗಿ ಗಿಡಗವು ಹೇಗೆ ಶೀಘ್ರಾತಿಶೀಘ್ರವಾಗಿ ಹಾರಾಡುತ್ತದೆಯೋ ಹಾಗೆ ದ್ರೋಣನನ್ನು ಬಯಸುತ್ತಿದ್ದ ಅವನು ರಣದಲ್ಲಿ ವೇಗದಿಂದ ಹಾರಾಡುತ್ತಿದ್ದನು. ಆಗ ಕ್ರುದ್ಧನಾಗಿ ಪರಾಕ್ರಮೀ ದ್ರೋಣನು ರಥಶಕ್ತಿಯಿಂದ ತನ್ನ ಕುದುರೆಗಳನ್ನು ಗಾಯಗೊಳಿಸದೇ ಎಚ್ಚರಿಕೆಯಿಂದ ಧೃಷ್ಟದ್ಯುಮ್ನನ ಕಪೋತವರ್ಣದ ಕುದುರೆಗಳನ್ನು

ಸಂಹರಿಸಿದನು. ಅವನಿಂದ ಹತವಾಗಿ ಧೃಷ್ಟದ್ಯುಮ್ನನ ಕುದುರೆಗಳು ಭೂಮಿಗುರುಳಿದವು. ದ್ರೋಣನ ಕೆಂಪು ಕುದುರೆಗಳೂ ರಥಬಂಧನದಿಂದ ಕಳಚಿಕೊಂಡವು. ತನ್ನ ಕುದುರೆಗಳು ದ್ವಿಜಾಗ್ರನಿಂದ ಹಾಗೆ ಹತವಾದುದನ್ನು ನೋಡಿ ಯಾಜ್ಞಸೇನಿಯು ಸಹಿಸಿಕೊಳ್ಳಲಿಲ್ಲ.

ವಿರಥನಾಗಿ ಆ ಖಡ್ಗಧಾರಿಗಳಲ್ಲಿ ಶ್ರೇಷ್ಠ ಧೃಷ್ಟದ್ಯುಮ್ನನು ಸರ್ಪವನ್ನು ವೈನತೇಯ ಗರುಡನು ಹೇಗೋ ಹಾಗೆ ದ್ರೋಣನನ್ನು ಆಕ್ರಮಣಿಸಿದನು. ಭಾರದ್ವಾಜನನ್ನು ಸಂಹರಿಸಲು ಹೊರಟ ಅವನ ರೂಪವು ಹಿರಣ್ಯಕಶಿಪುವಿನ ವಧೆಯಲ್ಲಿ ವಿಷ್ಣುವಿನ ಪರಮ ರೂಪವು ಹೇಗಿತ್ತೋ ಹಾಗೆ ಕಾಣುತ್ತಿತ್ತು. ಆಗ ಪಾರ್ಷತನು ವಿವಿಧ ಮಾರ್ಗಗಳಲ್ಲಿ ಸಂಚರಿಸುತ್ತಾ ಇಪ್ಪತ್ತು ಪ್ರಕಾರದ ಖಡ್ಗಪ್ರಹಾರಗಳನ್ನು ಪ್ರದರ್ಶಿಸಿದನು: ಭ್ರಾಂತ, ಉಧ್ಭ್ರಾಂತ, ಆವಿದ್ಧ, ಆಪ್ಲುತ, ಪ್ರಸೃತ, ಸೃತ, ಪರಿವೃತ್ತ, ನಿವೃತ್ತ ಸಂಪಾತ, ಸಮುದೀರ್ಣ, ಭಾರತ, ಕೌಶಿಕ, ಸಾತ್ವತ. ಆಗ ದ್ವಿಜನು ಸಹಸ್ರ ಬಾಣಗಳಿಂದ ನೂರುಚಂದ್ರರ ಚಿಹ್ನೆಗಳನ್ನು ಹೊಂದಿದ್ದ ಧೃಷ್ಟದ್ಯುಮ್ನನ ಗುರಾಣಿಯನ್ನೂ ಖಡ್ಗವನ್ನೂ ಚೂರು ಚೂರು ಮಾಡಿ ಕೆಡವಿದನು. ಹತ್ತಿರದಲ್ಲಿದ್ದವರೊಡನೆಯೂ ಯುದ್ಧಮಾಡಬಹುದಾದಂತಹ ವೈತಸ್ತಿಗಳೆಂಬ ಬಾಣಗಳನ್ನು ದ್ರೋಣನು ಬಳಸಿ ಧೃಷ್ಟದ್ಯುಮ್ನನ ಕತ್ತಿ-ಗುರಾಣಿಗಳನ್ನು ಕತ್ತರಿಸಿದನು.

ಆ ಬಾಣಗಳು ಅತಿಸಮೀಪದಲ್ಲಿದ್ದವರೊಡನೆಯೂ ಯುದ್ಧಮಾಡಬಲ್ಲಂತಹ ದ್ರೋಣನನ್ನು ಮತ್ತು ಕೃಪ, ಅರ್ಜುನ, ದ್ರೌಣಿ ಅಶ್ವತ್ಥಾಮ, ಕರ್ಣ, ಕೃಷ್ಣನ ಮಗ ಪ್ರದ್ಯುಮ್ನ, ಸಾತ್ಯಕಿ ಮತ್ತು ಅಭಿಮನ್ಯುವನ್ನು ಬಿಟ್ಟರೆ ಬೇರೆ ಯಾರಲ್ಲಿಯೂ ಇರಲಿಲ್ಲ. ಆಗ ಹತ್ತಿರದಲ್ಲಿಯೇ ಇದ್ದ ಪುತ್ರಸಮ್ಮಿತ ಶಿಷ್ಯ ಧೃಷ್ಟದ್ಯುಮ್ನನನ್ನು ಸಂಹರಿಸಲು ಬಯಸಿ ಆಚಾರ್ಯನು ದೃಢ ಉತ್ತಮ ಬಾಣವನ್ನು ಹೂಡಿದನು. ಆ ಶರವನ್ನು ಸಾತ್ಯಕಿಯು ದುರ್ಯೋಧನ-ಕರ್ಣರು ನೋಡುತ್ತಿದ್ದಂತೆಯೇ ಹತ್ತು ತೀಕ್ಷ್ಣ ಶರಗಳಿಂದ ಕತ್ತರಿಸಿ ಆಚಾರ್ಯಮುಖ್ಯನ ಹಿಡಿತದಿಂದ ಧೃಷ್ಟದ್ಯುಮ್ನನನ್ನು ವಿಮೋಚನಗೊಳಿಸಿದನು. ದ್ರೋಣ, ಕರ್ಣ ಮತ್ತು ಕೃಪರ ಮಧ್ಯದಿಂದ ರಥಮಾರ್ಗದಲ್ಲಿ ಸಂಚರಿಸುತ್ತಾ ಬಂದ ಸತ್ಯವಿಕ್ರಮ ಸಾತ್ಯಕಿಯನ್ನು ವಿಷ್ವಕ್ಸೇನ-ಧನಂಜಯರೂ ನೋಡಿದರು. ಯುದ್ಧದಲ್ಲಿ ಎಲ್ಲರ ಮೇಲೂ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿ ಸಂಹರಿಸುತ್ತಿದ್ದ ವಾರ್ಷ್ಣೇಯ ಸಾತ್ಯಕಿಯನ್ನು ವಿಷ್ವಕ್ಸೇನ-ಧನಂಜಯರು “ಸಾಧು ! ಸಾಧು !” ಎಂದು ಪ್ರಶಂಸಿಸಿ ಸೇನೆಗಳ ಮೇಲೆ ಧಾಳಿ ನಡೆಸಿದರು.

ಆಗ ಧನಂಜಯನು ಕೃಷ್ಣನಿಗೆ ಹೇಳಿದನು:

“ನೋಡು ಕೃಷ್ಣ ! ಮಧೂದ್ವಹ ಸತ್ಯವಿಕ್ರಮಿ ಸಾತ್ಯಕಿಯು

ಆಚಾರ್ಯಪ್ರಮುಖರ ಮಧ್ಯೆ ಯುದ್ಧದ ಆಟವಾಡಿ ನನ್ನನ್ನೂ ಮತ್ತು ಮಾದ್ರೀಪುತ್ರರನ್ನೂ, ಭೀಮನನ್ನೂ ಮತ್ತು ರಾಜಾ ಯುಧಿಷ್ಠರನನ್ನೂ ಆನಂದಗೊಳಿಸುತ್ತಿದ್ದಾನೆ. ಉತ್ತಮ ಶಿಕ್ಷಣವನ್ನು ಪಡೆದಿದ್ದರೂ ಉದ್ಧಟತನವನ್ನು ತೋರಿಸದೇ ರಣರಂಗದಲ್ಲಿ ವೃಷ್ಣಿಗಳ ಕೀರ್ತಿವರ್ಧನ ಸಾತ್ಯಕಿಯು ಮಹಾರಥರೊಡನೆ ಯುದ್ಧದ ಆಟವಾಡುತ್ತಿದ್ದಾನೆ. ಸಮರದಲ್ಲಿ ಅಜೇಯ ಸಾತ್ವತನನ್ನು ನೋಡಿ ಸಿದ್ಧರೂ, ಎರಡೂ ಕಡೆಯ ಯೋಧರೂ ಸೇನೆಗಳೂ ಎಲ್ಲರೂ ವಿಸ್ಮಿತರಾಗಿ "ಸಾಧು ! ಸಾಧು !" ಎಂದು ಆನಂದಿಸುತ್ತಿದ್ದಾರೆ ಮತ್ತು ಪ್ರಶಂಸಿಸುತ್ತಿದ್ದಾರೆ."

ಕ್ರುದ್ಧ ರುದ್ರನಿಂದ ಪಶುಗಳು ಹೇಗೆ ಸಂಹರಿಸಲ್ಪಡುತ್ತಾರೋ ಹಾಗೆ ಆ ರಾಜಸಮಾಗಮದಲ್ಲಿ ಅತ್ಯಂತ ಕ್ರೂರ ಯುದ್ಧವು ಪ್ರಾರಂಭವಾಯಿತು. ಕತ್ತರಿಸಲ್ಪಟ್ಟ ತೋಳುಗಳು, ಶಿರಸ್ಸುಗಳು, ಧನುಸ್ಸುಗಳು, ಛತ್ರಗಳು, ಚಾಮರಗಳು, ತುಂಡಾದ ಚಕ್ರಗಳು, ರಥಗಳು, ಕೆಳಗೆ ಬಿದ್ದಿದ್ದ ಮಹಾಧ್ವಜಗಳು, ಹತವಾದ ಕುದುರೆಗಳು ಮತ್ತು ಶೂರ ಸೈನಿಕರಿಂದ ರಣಭೂಮಿಯು ತುಂಬಿಹೋಗಿತ್ತು. ಬೀಳುತ್ತಿರುವ ಬಾಣಗಳಿಂದ ಗಾಯಗೊಂಡ ಯೋಧರು ಆ ಮಹಾಯುದ್ಧದಲ್ಲಿ ವಿವಿಧ ಚೇಷ್ಟೆಗಳನ್ನು

ಮಾಡುತ್ತಾ ಚಡಪಡಿಸುತ್ತಿರುವುದು ಅಲ್ಲಿ ಕಂಡುಬರುತ್ತಿತ್ತು. ದೇವಾಸುರರ ನಡುವಿನಂತೆ ಆ ಘೋರ ಯುದ್ಧವು ನಡೆಯುತ್ತಿರಲು ಯುಧಿಷ್ಠಿರನು ಕ್ಷತ್ರಿಯರಿಗೆ ಹೇಳಿದನು:

> "ಮಹಾರಥರೇ! ಚೆನ್ನಾಗಿ ಪ್ರಯತ್ನಪಟ್ಟು ಕುಂಭಯೋನಿಯೊಡನೆ ಯುದ್ಧಮಾಡಿ. ವೀರ ಪಾರ್ಷತನು ಯಥಾಶಕ್ತಿಯಾಗಿ ಭಾರದ್ವಾಜನನ್ನು ಕೆಳಗುರುಳಿಸಲು ಅವನೊಡನೆ ಯುದ್ಧಮಾಡುತ್ತಾನೆ. ಈ ಮಹಾರಣದಲ್ಲಿ ಕಾಣುವ ದೃಶ್ಯಗಳನ್ನು ನೋಡಿದರೆ ಇಂದು ರಣದಲ್ಲಿ ಕ್ರುದ್ಧ ಪಾರ್ಷತನು ದ್ರೋಣನನ್ನು ಕೆಳಗುರುಳಿಸುತ್ತಾನೆ. ಆದುದರಿಂದ ನೀವೆಲ್ಲರೂ ಒಂದಾಗಿ ಕುಂಭಯೋನಿಯೊಡನೆ ಯುದ್ಧಮಾಡಿರಿ!"

ಯುಧಿಷ್ಠಿರನಿಂದ ಆಜ್ಞಪ್ತ ಮಹಾರಥ ಸೃಂಜಯರು ಒಟ್ಟಾಗಿ ಭಾರದ್ವಾಜನನ್ನು ಕೊಲ್ಲಲು ಬಯಸಿ ಅವನನ್ನು ಆಕ್ರಮಣಿಸಿದರು. ಮೃತನಾಗಬೇಕೆಂದು ನಿಶ್ಚಯಿಸಿದ್ದ ಭಾರದ್ವಾಜನು ಮೇಲೆರಗುತ್ತಿದ್ದ ಅವರೆಲ್ಲರನ್ನೂ ವೇಗದಿಂದ ಎದುರಿಸಿದನು. ಆ ಸತ್ಯಸಂಧನು ಮುಂದುವರೆಯುತ್ತಿರಲು ಭೂಮಿಯು ನಡುಗಿತು. ಸೇನೆಗಳನ್ನು ಭಯಪಡಿಸುತ್ತಾ ಸಿಡಿಲುಗಳೊಂದಿಗೆ ಚಂಡಮಾರುತವು

ಬೀಸತೊಡಗಿತು. ಮುಂದೆಬರುವ ಮಹಾಭಯವನ್ನು ಸೂಚಿಸಲೋ ಎನ್ನುವಂತೆ ಆದಿತ್ಯಮಂಡಲದಿಂದ ಮಹಾ ಉಲ್ಕೆಯೊಂದು ಬೆಂಕಿಯಂತೆ ಸುಡುತ್ತಾ ಕೆಳಗೆ ಬಿದ್ದಿತು. ಭಾರದ್ವಾಜನ ಶಸ್ತ್ರಗಳು ತಾವೇ ತಾವಾಗಿ ಉರಿಯತೊಡಗಿದವು. ರಥಚಕ್ರಗಳು ಅಸಾಧಾರಣವಾಗಿ ಶಬ್ಧಮಾಡುತ್ತಿದ್ದವು. ಕುದುರೆಗಳು ಕಣ್ಣೀರನ್ನು ಸುರಿಸುತ್ತಿದ್ದವು. ಮಹಾರಥ ಭಾರದ್ವಾಜನ ತೇಜಸ್ಸು ಕುಂದುತ್ತಿದೆಯೋ ಎನ್ನುವಂತಾಯಿತು. ಸ್ವರ್ಗಗಮನದ ಕುರಿತು ಬ್ರಹ್ಮವಾದೀ ಋಷಿಗಳು ಹೇಳಿದುದನ್ನು ಸ್ಮರಿಸುತ್ತಾ ಅವನು ಉತ್ತಮ ಯುದ್ಧದಿಂದ ಪ್ರಾಣಗಳನ್ನು ತೊರೆಯಲು ನಿಶ್ಚಯಿಸಿದನು. ದ್ರುಪದನ ಸೇನೆಗಳಿಂದ ನಾಲ್ಕೂ ಕಡೆಗಳಿಂದ ಪರಿವೃತನಾದ ದ್ರೋಣನು ಕ್ಷತ್ರಿಯ ಗುಂಪುಗಳನ್ನು ದಹಿಸುತ್ತಾ ರಣದಲ್ಲಿ ಸಂಚರಿಸುತ್ತಿದ್ದನು. ಆ ಅರಿಮರ್ದನನು ಇಪ್ಪತ್ತು ಸಾವಿರ ಕ್ಷತ್ರಿಯರನ್ನು ಸಂಹರಿಸಿ ನಿಶಿತ ಶಿಖಗಳಿಂದ ಹತ್ತು ಸಾವಿರ ಆನೆಗಳನ್ನು ಸಂಹರಿಸಿದನು. ಕ್ಷತ್ರಿಯರನ್ನು ನಿರ್ಮೂಲನ ಮಾಡುವ ಸಲುವಾಗಿ ಬ್ರಹ್ಮಾಸ್ತ್ರವನ್ನು ಇಟ್ಟುಕೊಂಡು ಹೊಗೆಯಿಲ್ಲದ ಅಗ್ನಿಯಂತೆ ಯುದ್ಧದಲ್ಲಿ ಪ್ರಯತ್ನಪಟ್ಟು ನಿಂತಿದ್ದನು.

ವಿರಥನಾಗಿದ್ದ, ಎಲ್ಲ ಆಯುಧಗಳನ್ನೂ ಕಳೆದುಕೊಂಡಿದ್ದ, ವಿಷಣ್ಣನಾದ ಧೃಷ್ಟದ್ಯುಮ್ನನನ್ನು ತ್ವರೆಮಾಡಿ ಭೀಮನು ಸಂಧಿಸಿದನು. ಆಗ ತನ್ನ

ರಥದಲ್ಲಿ ಪಾಂಚಾಲ್ಯನನ್ನು ಏರಿಸಿಕೊಂಡು ಹತ್ತಿರದಿಂದಲೇ ದ್ರೋಣನನ್ನು ನೋಡುತ್ತಾ ಅರಿಮರ್ದನ ಭೀಮನು ಧೃಷ್ಟದ್ಯುಮ್ನನಿಗೆ ಹೇಳಿದನು:

> "ನಿನ್ನೊಬ್ಬನನ್ನು ಬಿಟ್ಟು ಬೇರೆ ಯಾರೂ ಈ ಆಚಾರ್ಯನೊಡನೆ ಯುದ್ಧಮಾಡಲು ಉತ್ಸಾಹಿತರಾಗಿಲ್ಲ. ಆದುದರಿಂದ ಅವನ ವಧೆಯ ಭಾರವು ಸಂಪೂರ್ಣವಾಗಿ ನಿನ್ನ ಮೇಲೆಯೇ ಇದೆ. ತ್ವರೆಮಾಡು!"

ಹೀಗೆ ಹೇಳಲು ಮಹಾಬಾಹು ಧೃಷ್ಟದ್ಯುಮ್ನನು ಸರ್ವಭಾರಗಳನ್ನೂ ಹೊರಬಲ್ಲ ಹೊಸತಾದ ದೃಢ ಆಯುಧಪ್ರವರ ಧನುಸ್ಸನ್ನು ಮುಂದಕ್ಕೆ ಬಗ್ಗಿ ಎತ್ತಿಕೊಂಡನು. ಧೃಷ್ಟದ್ಯುಮ್ನನು ಕುಪಿತನಾಗಿ ರಣದಲ್ಲಿ ದ್ರೋಣನನ್ನು ತಡೆಯಲು ಬಯಸಿ ಬಿಲ್ಲನ್ನು ಸೆಳೆದು ಶರವರ್ಷಗಳಿಂದ ಆಚಾರ್ಯನನ್ನು ಮುಚ್ಚಿಬಿಟ್ಟನು. ಅವರಿಬ್ಬರು ರಣಶೋಭೀ ಶ್ರೇಷ್ಠರು ಕ್ರೋಧಿತರಾಗಿ ಬ್ರಹ್ಮಾಸ್ತ್ರವೇ ಮೊದಲಾದ ಅನೇಕ ದಿವ್ಯಾಸ್ತ್ರಗಳನ್ನು ಪ್ರಯೋಗಿಸುತ್ತಾ ಪರಸ್ಪರರನ್ನು ಮುಂದೆ ಬಾರದಂತೆ ತಡೆದರು. ಪಾರ್ಷತನು ರಣದಲ್ಲಿ ಭಾರದ್ವಾಜನ ಸರ್ವ ಅಸ್ತ್ರಗಳನ್ನು ನಾಶಗೊಳಿಸಿ ದ್ರೋಣನನ್ನು ಮಹಾಸ್ತ್ರಗಳಿಂದ ಮುಚ್ಚಿಬಿಟ್ಟನು. ಆ ಅಚ್ಯುತನು ಸಂಗ್ರಾಮದಲ್ಲಿ ದ್ರೋಣನನ್ನು ರಕ್ಷಿಸುತ್ತಿದ್ದ ವಸಾತಿ, ಶಿಬಿ, ಬಾಹ್ಲೀಕ

ಮತ್ತು ಕೌರವರನ್ನು ಕೂಡ ವಧಿಸಿದನು. ಆಗ ಧೃಷ್ಟದ್ಯುಮ್ನನು ಕಿರಣಗಳಿಂದ ಸೂರ್ಯನು ಹೇಗೋ ಹಾಗೆ ಶರಜಾಲಗಳಿಂದ ಎಲ್ಲ ದಿಕ್ಕುಗಳನ್ನೂ ಪಸರಿಸುತ್ತಾ ಪ್ರಕಾಶಿಸಿದನು. ದ್ರೋಣನು ಅವನ ಧನುಸ್ಸನ್ನು ಕತ್ತರಿಸಿ ಶಿಲೀಮುಖಗಳಿಂದ ಅವನ ಮರ್ಮಸ್ಥಾನಗಳಿಗೆ ಹೊಡೆದು ಗಾಯಗೊಳಿಸಲು ಧೃಷ್ಟದ್ಯುಮ್ನನು ಬಹಳ ವ್ಯಥಿತನಾದನು. ಆಗ ದೃಢಕ್ರೋಧ ಭೀಮನು ತನ್ನ ರಥವನ್ನು ದ್ರೋಣನ ರಥಕ್ಕೆ ತಾಗಿಸಿಕೊಂಡು ಮೆಲ್ಲ ಮೆಲ್ಲನೆ ದ್ರೋಣನೊಂದಿಗೆ ಈ ಮಾತನ್ನಾಡಿದನು:

> “ಒಂದುವೇಳೆ ಬ್ರಹ್ಮಬಂಧುಗಳು ತಮ್ಮ ಕರ್ಮಗಳಿಂದ ಅಸಂತುಷ್ಟರಾಗಿ ಪರಧರ್ಮವನ್ನು ಆಶ್ರಯಿಸಿ ಯುದ್ಧವನ್ನು ಮಾಡದೇ ಇದ್ದಿದ್ದರೆ ಈ ಕ್ಷತ್ರಿಯ ಕ್ಷಯವು ನಡೆಯುತ್ತಿರಲಿಲ್ಲ. ಸರ್ವಭೂತಗಳೊಡನೆ ಅಹಿಂಸೆಯಿಂದ ನಡೆದುಕೊಳ್ಳುವುದು ಪರಮ ಧರ್ಮವೆಂದು ತಿಳಿದವರು ಹೇಳುತ್ತಾರೆ. ಅಹಿಂಸೆಗೆ ಬ್ರಾಹ್ಮಣನೇ ಮೂಲ. ನೀವಾದರೂ ಬ್ರಹ್ಮವಿತ್ತಮರಾಗಿದ್ದೀರಿ. ಬ್ರಹ್ಮನ್! ಪುತ್ರ-ಪತ್ನಿ-ಧನವನ್ನು ಬಯಸಿ ಅಜ್ಞಾನದಿಂದ ಮೂಢ ಚಾಂಡಾಲರಂತೆ ನೀವು ಮ್ಲೇಚ್ಛಗಣಗಳನ್ನೂ ಅನ್ಯ ಕ್ಷತ್ರಿಯರನ್ನೂ ಸಂಹರಿಸುತ್ತಿರುವಿರಿ. ವಿಕರ್ಮಸ್ಥ ನೀವು

ಒಬ್ಬರೇ ಒಬ್ಬ ಮಗನ ಸಲುವಾಗಿ ಸ್ವಕರ್ಮದಲ್ಲಿ ನಿರತರಾಗಿರುವ ಅನೇಕ ಕ್ಷತ್ರಿಯರನ್ನು ಸಂಹರಿಸುತ್ತಿದ್ದೀರಲ್ಲ! ಇದರಿಂದ ಹೇಗೆ ನಿಮಗೆ ನಾಚಿಕೆಯಾಗುವುದಿಲ್ಲ? ಅವನೇ ಇಂದು ಕೆಳಗುರುಳಿ ಹಿಂದೆ ಮಲಗಿದ್ದಾನೆ. ಇದು ನಿಮಗೆ ತಿಳಿದಿಲ್ಲ. ಧರ್ಮರಾಜನ ಆ ಮಾತನ್ನು ನೀವು ಅತಿಯಾಗಿ ಶಂಕಿಸಬಾರದು!"

ಭೀಮಸೇನನು ಹೀಗೆ ಹೇಳಲು ದ್ರೋಣನು ಆ ಧನುಸ್ಸನ್ನು ಬಿಸುಟನು. ಸರ್ವ ಅಸ್ತ್ರಗಳನ್ನೂ ತೊರೆಯಲು ಬಯಸಿ ಧರ್ಮಾತ್ಮನು ಹೇಳಿದನು:

"ಕರ್ಣ! ಮಹೇಷ್ವಾಸ ಕರ್ಣ! ಕೃಪ! ದುರ್ಯೋಧನ! ಪುನಃ ಪುನಃ ಹೇಳುತ್ತಿದ್ದೇನೆ. ಸಂಗ್ರಾಮದಲ್ಲಿ ಪ್ರಯತ್ನವನ್ನು ಮಾಡಿ! ಪಾಂಡವರಿಂದ ನಿಮಗೆ ಮಂಗಳವಾಗಲಿ. ನಾನು ಶಸ್ತ್ರಪರಿತ್ಯಾಗ ಮಾಡುತ್ತಿದ್ದೇನೆ!"

ಹೀಗೆ ದ್ರೋಣನು ದ್ರೌಣಿಯನ್ನೇ ಕೂಗಿ ಕರೆಯುತ್ತಾ ರಣದಲ್ಲಿ ಶಸ್ತ್ರವನ್ನು ಬಿಸುಟು ರಥದಲ್ಲಿ ಕುಳಿತುಕೊಂಡನು. ಯೋಗಯುಕ್ತನಾಗಿ ಸರ್ವಭೂತಗಳಿಗೂ ಅಭಯವನ್ನಿತ್ತನು.

ಅವನ ಆ ರೂಪವನ್ನು ಅರ್ಥಮಾಡಿಕೊಂಡು ಧೃಷ್ಟದ್ಯುಮ್ನನು



ಮೇಲೆದ್ದು ಖಡ್ಗವನ್ನು ಹಿಡಿದು ರಥದಿಂದ ಹಾರಿ ಒಮ್ಮೆಲೇ ದ್ರೋಣನನ್ನು ಆಕ್ರಮಣಿಸಿದನು. ಆ ಸ್ಥಿತಿಯಲ್ಲಿ ದ್ರೋಣನು ಧೃಷ್ಟದ್ಯುಮ್ನನ ವಶನಾದುದನ್ನು ಕಂಡು ಭೂತಗಳು, ಮನುಷ್ಯರು ಮತ್ತು ಇತರರು ಹಾಹಾಕಾರಗೈದರು. ಜೋರಾಗಿ ಹಾಹಾಕಾರವುಂಟಾಯಿತು. ಧಿಕ್ಕಾರವೆಂದೂ ಕೂಗಿಕೊಂಡರು. ಆದರೆ ದ್ರೋಣನಾದರೋ ಶಸ್ತ್ರಗಳನ್ನು ಬಿಸುಟು ಪರಮ ಸಾಮ್ಯಸ್ಥಿತಿಯನ್ನು ಹೊಂದಿದ್ದನು. ಹಾಗೆ ಹೇಳಿ ಆ ಮಹಾತಪಸ್ವಿ ಆಚಾರ್ಯನು ಯೋಗವನ್ನು ಆಶ್ರಯಿಸಿ ಜ್ಯೋತಿರ್ಭೂತನಾಗಿ ಸತ್ಪುರುಷರಿಗೂ ಅಸಾದ್ಯ ದಿವವನ್ನು ಪ್ರವೇಶಿಸಿದ್ದನು. ಅವನು ಹಾಗೆ ಹೋಗುತ್ತಿರಲು ಎರಡು ಸೂರ್ಯಗಳಿವೆಯೋ ಎನ್ನುವಂತೆ ನೋಡುವವರ ಬುದ್ಧಿಗಳಿಗನ್ನಿಸಿತು. ಭಾರದ್ವಾಜನಿಶಾಕರನು ಉದಯಿಸಲು ಆಕಾಶವೆಲ್ಲವೂ ಪ್ರಕಾಶಮಾನವಾಯಿತು. ಅದು ಸೂರ್ಯನ ಜ್ಯೋತಿಯೊಂದಿಗೆ ಸೇರಿಕೊಂಡು ಒಂದಾಯಿತು. ನಿಮಿಷಮಾತ್ರದಲ್ಲಿ ಆ ಜ್ಯೋತಿಯು ಅಂತರ್ಧಾನವಾಯಿತು. ದ್ರೋಣನು ಬ್ರಹ್ಮಲೋಕಕ್ಕೆ ಹೋಗಲು ಮತ್ತು ಧೃಷ್ಟದ್ಯುಮ್ನನು ಮೋಹಿತನಾಗಲು ಪ್ರಹೃಷ್ಟ ದಿವೌಕಸರಲ್ಲಿ ಕಿಲ ಕಿಲ ಶಬ್ಧವುಂಟಾಯಿತು. ಯೋಗಯುಕ್ತನಾದ ಆ ಮಹಾತ್ಮನು ಪರಮಗತಿಯಲ್ಲಿ ಹೋಗಿದ್ದುದನ್ನು ಮಾನುಷಯೋನಿಗಳಾದ ಅಲ್ಲಿ ಐವರು ಮಾತ್ರ ಕಂಡರು: ಸಂಜಯ,

ಪಾರ್ಥ ಧನಂಜಯ, ಕೃಪ, ವಾಸುದೇವ ಮತ್ತು ಧರ್ಮರಾಜ. ಭಾರದ್ವಾಜ ಮಹಿಮಾನನು ಯೋಗಮುಕ್ತನಾಗಿ ಹೋಗಿದುದನ್ನು ಅನ್ಯರ್ಯಾರೂ ನೋಡಲಿಲ್ಲ. ಆಚಾರ್ಯ ಅರಿಂದಮನು ಯೋಗವನ್ನು ಬಳಸಿ ಋಷಿಪುಂಗವರೊಡನೆ ಪರಮ ಗತಿಯನ್ನು ಹೊಂದಿ ಬ್ರಹ್ಮಲೋಕಕ್ಕೆ ಹೋಗುತ್ತಿದ್ದುದನ್ನು ಅಜ್ಞಾನಿ ಮನುಷ್ಯರು ನೋಡಲಿಲ್ಲ.

ನೂರಾರು ಶರಗಳಿಂದ ಅವನ ಅಂಗಗಳು ಗಾಯಗೊಂಡಿದ್ದವು. ಆಯುಧವನ್ನು ಕೆಳಗಿಟ್ಟಿದ್ದನು. ದೇಹದಿಂದ ರಕ್ತವು ಸೋರುತ್ತಿತ್ತು. ಅಂತಹ ಸ್ಥಿತಿಯಲ್ಲಿ ಅವನನ್ನು ಹಿಡಿದ ಪಾರ್ಷತನನ್ನು ಸರ್ವಭೂತಗಳೂ ಧಿಕ್ಕರಿಸಿದವು. ಸತ್ವವನ್ನು ಕಳೆದುಕೊಂಡಿದ್ದ ದೇಹದ ತಲೆಗೂದಲನ್ನು ಹಿಡಿದು ಏನನ್ನೂ ಮಾತನಾಡದಂತಿದ್ದ ಅವನ ಶಿರವನ್ನು ಧೃಷ್ಟದ್ಯುಮ್ನನು ಕಾಯದಿಂದ ಕತ್ತರಿಸಿದನು. ಭಾರದ್ವಾಜನು ಕೆಳಗೆ ಬೀಳಲು ಮಹಾಹರ್ಷಯುಕ್ತ ಧೃಷ್ಟದ್ಯುಮ್ನನು ಯುದ್ಧದಲ್ಲಿ ಖಡ್ಗವನ್ನು ತಿರುಗಿಸುತ್ತಾ ಜೋರಾಗಿ ಸಿಂಹನಾದಗೈದನು. ಕಿವಿಯವರೆಗೂ ತಲೆಗೂದಲು ನೆರೆದಿದ್ದ ಕಪ್ಪುವರ್ಣದ ದ್ರೋಣನು ಎಂಭತ್ತೈದು ವರ್ಷದವನಾಗಿದ್ದನು. ಆದರೆ ಧೃತರಾಷ್ಟ್ರನ ಸಲುವಾಗಿ ಹದಿನಾರು ವರ್ಷದವನಂತೆ ರಣದಲ್ಲಿ ಸಂಚರಿಸುತ್ತಿದ್ದನು.

ಆಗ ಮಾಹಾಬಾಹು ಧನಂಜಯನು

“ದ್ರುಪದಾತ್ಮಜ ! ಆಚಾರ್ಯನನ್ನು ಜೀವಂತವಾಗಿ
ಹಿಡಿದುಕೊಂಡು ಬಾ ! ಕೊಲ್ಲಬೇಡ !”

ಎಂದು ಕೂಗಿ ಹೇಳಿದ್ದನು. “ಕೊಲ್ಲಬಾರದವರನ್ನು ಕೊಲ್ಲಬೇಡ !” ಎಂದು ಸೈನಿಕರು ಕೂಗಿ ಹೇಳುತ್ತಿದ್ದರು. ಅರ್ಜುನನು ಕೂಡ ಅದನ್ನೇ ಕೂಗಿ ಹೇಳುತ್ತಾ ಧೃಷ್ಟದ್ಯುಮ್ನನ ಬಳಿ ಧಾವಿಸಿ ಬಂದಿದ್ದನು. ಅರ್ಜುನನೂ ಮತ್ತು ಸರ್ವ ಪಾರ್ಥಿವರೂ ಕೂಗಿಕೊಳ್ಳುತ್ತಿರುವಾಗಲೇ ಧೃಷ್ಟದ್ಯುಮ್ನನು ರಥದಮೇಲೆ ಕುಳಿತಿದ್ದ ನರರ್ಷಭ ದ್ರೋಣನನ್ನು ವಧಿಸಿದನು.

ರಕ್ತದಿಂದ ತೋಯ್ದ ಆ ಅರಿಂದಮನು ರಥದಿಂದ ನೆಲಕ್ಕೆ ಬೀಳಲು ಲೋಹಿತಾಂಗ ಆ ದುರ್ದರ್ಷನು ಆದಿತ್ಯನಂತೆ ತೋರಿದನು. ರಣದಲ್ಲಿ ಹೀಗೆ ಅವನು ಸಂಹರಿಸಲ್ಪಟ್ಟಿದುದನ್ನು ಸೈನಿಕ ಜನರು ನೋಡಿದರು. ಮಹೇಷ್ವಾಸ ಧೃಷ್ಟದ್ಯುಮ್ನನಾದರೋ ಭಾರದ್ವಾಜನ ಆ ಮಹಾಶಿರವನ್ನು ಕೌರವರ ಪ್ರಮುಖದಲ್ಲಿ ಎಸೆದನು. ಭಾರದ್ವಾಜನ ಆ ಶಿರವನ್ನು ನೋಡಿ ಕೌರವರು ಪಲಾಯನಮಾಡಲು ಉತ್ಸುಕರಾಗಿ ಸರ್ವ ದಿಕ್ಕುಗಳಲ್ಲಿ ಓಡಿ ಹೋದರು. ದ್ರೋಣನಾದರೋ ದಿವವನ್ನು ಸೇರಿ ನಕ್ಷತ್ರಪಥವನ್ನು ಪ್ರವೇಶಿಸಿದನು. ಸತ್ಯವತೀ ಸುತ ಋಷಿ ಕೃಷ್ಣನ ಪ್ರಸಾದದಿಂದ ಸಂಜಯನು ಆ ಮಹಾದ್ಯುತಿಯು ಹೊಗೆಯಿಲ್ಲದ



ಅಗ್ನಿಯಂತೆ ಮತ್ತು ಪ್ರಜ್ವಲಿಸುತ್ತಿರುವ ಉಲ್ಕೆಯಂತೆ ದಿವಿಯನ್ನು ಸೇರಿ ಹೋಗುತ್ತಿರುವುದನ್ನು ನೋಡಿದನು.

ದ್ರೋಣನು ಹತನಾಗಲು ನಿರುತ್ಸಾಹಿತರಾಗಿದ್ದ ಕುರುಗಳನ್ನು ಪಾಂಡವ-ಸೃಂಜಯರು ಮಹಾವೇಗದಿಂದ ಆಕ್ರಮಣಿಸಿದರು. ಆಗ ಕೌರವ ಸೈನ್ಯವು ಒಡೆದುಹೋಯಿತು. ಸಂಗ್ರಾಮದಲ್ಲಿ ನಿಶಿತಶರಗಳಿಂದ ಅನೇಕರು ಹತರಾದರು. ದ್ರೋಣನು ಹತನಾಗಲು ಕೌರವರು ಜೀವವನ್ನೇ ಕಳೆದುಕೊಂಡವರಂತೆ ಆಗಿದ್ದರು. ಕೌರವ ಸೇನೆಯು ಇಲ್ಲಿ ಪರಾಜಯವನ್ನು ಹೊಂದಿ ಮರಣಾನಂತರದ ಮಹಾಭಯವನ್ನೂ ಹೊಂದಿದ್ದರು. ಇವೆರಡರಿಂದಲೂ ವಂಚಿತರಾದ ಅವರು ಆತ್ಮಧೃತಿಯನ್ನು ಕಳೆದುಕೊಂಡು ದುಃಖಿತರಾದರು. ಕೌರವರ ಕಡೆಯ ಪಾರ್ಥಿವರು ಭಾರದ್ವಾಜನ ಶರೀರವನ್ನು ಹುಡುಕಿದರೂ ಲಕ್ಷಗಟ್ಟಲೆ ಕಬಂಧಗಳ ರಾಶಿಗಳಲ್ಲಿ ಅವರಿಗೆ ಅದು ಸಿಗಲೇ ಇಲ್ಲ. ಪಾಂಡವರಾದರೋ ಜಯ ಮತ್ತು ಮರಣಾನಂತರದ ಮಹಾಯಶಸ್ಸನ್ನು ಗಳಿಸಿ ಬಾಣಗಳಿಂದ ಶಬ್ಧಮಾಡಿದರು ಮತ್ತು ಪುಷ್ಕಲ ಸಿಂಹನಾದಗೈದರು.

ಆಗ ಭೀಮಸೇನ-ಧೃಷ್ಟದ್ಯುಮ್ನರು ಪರಸ್ಪರರನ್ನು ಬಿಗಿದಪ್ಪಿ ಸೇನೆಗಳ ಮಧ್ಯೆ ಕುಣಿದಾಡಿದರು. ಆಗ ಭೀಮನು ಶತ್ರುತಾಪನ ಪಾರ್ಷತನಿಗೆ

ಹೇಳಿದನು:

> “ಪಾರ್ಷತ! ಸಂಯುಗದಲ್ಲಿ ಸೂತಪುತ್ರ ಮತ್ತು ಪಾಪಿ ಧಾರ್ತರಾಷ್ಟ್ರನು ಹತನಾದನಂತರ ವಿಜಯಿಯಾದ ನಿನ್ನನ್ನು ಪುನಃ ಅಪ್ಪಿಕೊಳ್ಳುತ್ತೇನೆ!”

ಹೀಗೆ ಹೇಳಿ ಪಾಂಡವ ಭೀಮನು ಮಹಾ ಹರ್ಷಗೊಂಡವನಾಗಿ ತೋಳಿನ ಶಬ್ದದಿಂದ ಭೂಮಿಯನ್ನೇ ನಡುಗಿಸತೊಡಗಿದನು. ಅವನ ಆ ಶಬ್ಧದಿಂದ ಭಯಭೀತರಾದ ಕೌರವರು ಕ್ಷತ್ರಧರ್ಮವನ್ನು ತ್ಯಜಿಸಿ ಪಲಾಯನಪರಾಯಣರಾಗಿ ಓಡಿಹೋಗತೊಡಗಿದರು. ಪಾಂಡವರಾದರೋ ಜಯವನ್ನು ಪಡೆದು ಸಂತೋಷವನ್ನು ತಮ್ಮದಾಗಿಸಿಕೊಂಡರು. ಸಂಗ್ರಾಮದಲ್ಲಿ ಶತ್ರುನಾಶದಿಂದ ಸುಖವನ್ನು ಹೊಂದಿದರು. ದ್ರೋಣನು ಹತನಾದ ನಂತರ ಮತ್ತು ಅನೇಕ ವೀರರು ಹತರಾದ ನಂತರ ಶಸ್ತ್ರಪೀಡಿತ ಗಾಯಗೊಂಡ ಕುರುಗಳು ತುಂಬಾ ಶೋಕಪರಾಯಣರಾದರು. ಚೇತನಗಳನ್ನೇ ಕಳೆದುಕೊಂಡ, ಉತ್ಸಾಹಹೀನರಾದ, ದೀನರೂ, ತೇಜಸ್ಸು ಕುಂದಿದವರೂ ಆದ ಅವರು ಮಹಾ ಆರ್ತಸ್ವರದಿಂದ ಅಳುತ್ತಾ ದುರ್ಯೋಧನನನ್ನು ಸುತ್ತುವರೆದರು. ಹಿಂದೆ ಹಿರಣ್ಯಾಕ್ಷನು ಹತನಾದಾಗ ದೈತ್ಯರು ಹೇಗಾಗಿದ್ದರೋ ಹಾಗೆ ಕುರುಸೈನಿಕರು ಧೂಳುತುಂಬಿದವರಾಗಿ ದಿಕ್ಕು

ದಿಕ್ಕುಗಳನ್ನು ನೋಡುತ್ತಾ ನಡುಗುತ್ತಿದ್ದರು. ಕ್ಷುದ್ರಮೃಗಗಳಂತೆ ಪರಿವೃತರಾಗಿದ್ದ ಅವರನ್ನು ಸಮಾಧಾನಗೊಳಿಸಲು ಅಸಮರ್ಥನಾಗಿ ದುರ್ಯೋಧನನು ಅಲ್ಲಿಂದ ಹೊರಟು ಹೋದನು. ಹಸಿವು-ಬಾಯಾರಿಕೆಗಳಿಂದ ಬಳಲಿದ್ದ ಕುರು ಯೋಧರು ಸೂರ್ಯನ ಬಿಸಿಲಿನಿಂದ ತುಂಬಾ ಸಂತಪ್ತರಾಗಿ ವಿಮನಸ್ಕರಾದರು. ಭಾಸ್ಕರನೇ ಬಿದ್ದುಬಿಟ್ಟನೋ ಅಥವಾ ಸಮುದ್ರವೇ ಒಣಗಿಹೋಯಿತೋ ಅಥವಾ ಮೇರುಪರ್ವತವೇ ತಲೆಕೆಳಗಾಯಿತೋ ಅಥವಾ ಇಂದ್ರನೇ ಸೋತುಹೋದನೋ ಎನ್ನುವಂತಿದ್ದ ಆ ಭಾರದ್ವಾಜನ ಪತನವನ್ನು ನೋಡಿ ಸಹಿಸಿಕೊಳ್ಳಲಾರದೇ ಅತ್ಯಂತ ಭಯಭೀತರಾಗಿ ನಡುಗುತ್ತಾ ಕೌರವರು ಪಲಾಯನಮಾಡತೊಡಗಿದರು. ರುಕ್ಮರಥ ದ್ರೋಣನು ಹತನಾದುದನ್ನು ಕಂಡ ಗಾಂಧಾರರಾಜ ಶಕುನಿಯು ಭಯಗೊಂಡು ತನಗಿಂತಲೂ ಹೆಚ್ಚು ಭಯಗೊಂಡಿದ್ದ ರಥಿಕರೊಡನೆ ಪಲಾಯನಮಾಡಿದನು. ಸೂತಪುತ್ರ ಕರ್ಣನು ಭಯದಿಂದ ವೇಗವಾಗಿ ಓಡಿಹೋಗುತ್ತಿರುವ ಪತಾಕೆಗಳುಳ್ಳ ರಥಗಳ ಮಹಾಸೇನೆಯೊಂದಿಗೆ ಪಲಾಯನಮಾಡಿದನು. ಮದ್ರರ ರಾಜ ಶಲ್ಯನೂ ಕೂಡ ರಥ-ಆನೆ-ಕುದುರೆಗಳಿಂದ ಸಮೃದ್ಧ ತನ್ನ ಸೇನೆಯನ್ನು ಮುಂದೆಮಾಡಿಕೊಂಡು ಭಯದಿಂದ ಹಿಂದೆಮುಂದೆ ನೋಡುತ್ತಾ ಪಲಾಯನಮಾಡಿದನು. ಹತರಾಗಿದ್ದ ಅನೇಕ ವೀರರೂ, ಆನೆಗಳೂ ಮತ್ತು ಅನೇಕ

ಪದಾತಿಗಳಿಂದ ಆವೃತರಾಗಿದ್ದ ಶಾರದ್ವತ ಕೃಪನು "ಕಷ್ಟ! ಕಷ್ಟ!" ಎಂದು ಹೇಳಿಕೊಳ್ಳುತ್ತಾ ರಣದಿಂದ ಹೊರಟುಹೋದನು. ಅಳಿದುಳಿದ ಭೋಜರಿಂದ, ಕಳಿಂಗ, ಆರಟ್ಟ ಮತ್ತು ಬಾಹ್ಲೀಕರಿಂದ ಪರಿವೃತನಾಗಿ ಕೃತವರ್ಮನು ವೇಗವಾಗಿ ಹೋಗುತ್ತಿರುವ ಕುದುರೆಗಳಿಂದ ಎಳೆಯಲ್ಪಟ್ಟ ರಥದಲ್ಲಿ ಕುಳಿತು ಪಲಾಯನಮಾಡಿದನು. ದ್ರೋಣನು ಕೆಳಗುರುಳಿದ್ದುದನ್ನು ನೋಡಿ ಉಲೂಕನು ಪದಾತಿಸೇನೆಗಳಿಂದ ಕೂಡಿ ಭಯಾರ್ದಿತನಾಗಿ ನಡುಗುತ್ತಾ ಪಲಾಯನಗೈದನು. ಪರಾಕ್ರಮಿಯ ಶೌರ್ಯದ ಲಕ್ಷಣಗಳುಳ್ಳ, ಯುವಕನೂ ಸುಂದರನೂ ಆದ ದುಃಶಾಸನನು ತುಂಬಾ ಉದ್ವಿಗ್ನನಾಗಿ ಗಜಸೇನೆಯಿಂದ ಸುತ್ತುವರೆಯಲ್ಪಟ್ಟು ಪಲಾಯನಮಾಡಿದನು. ಮಹಾರಥ ದುರ್ಯೋಧನನು ಗಜಾಶ್ವರಥಗಳಿಂದೊಡಗೂಡಿದ ಸೇನೆಯಿಂದ ಮತ್ತು ಪದಾತಿಗಳಿಂದ ಸುತ್ತುವರೆಯಲ್ಪಟ್ಟು ಅಲ್ಲಿಂದ ಪಲಾಯನಮಾಡಿದನು.

ಆನೆ ರಥಗಳನ್ನು ಏರಿಕೊಂಡು, ಇತರ ಜನರು ಕುದುರೆಗಳನ್ನೇರಿಕೊಂಡು ತಲೆಕೂದಲಗಳು ಕೆದರಿಹೋಗಿರಲು ತಡವರಿಸುತ್ತಾ ಮುಗ್ಗರಿಸುತ್ತಾ ಓಡಿ ಹೋಗುತ್ತಿದ್ದರು. ಕೌರವರು "ಇದು ಇನ್ನು ಉಳಿಯುವುದಿಲ್ಲ" ಎಂದು ಹೇಳಿಕೊಳ್ಳುತ್ತಾ, ಉತ್ಸಾಹ

ತೇಜಸ್ಸುಗಳನ್ನು ಕಳೆದುಕೊಂಡು, ಇನ್ನು ಕೆಲವರು ಕವಚಗಳನ್ನೇ ಬಿಸುಟು ಓಡಿಹೋಗುತ್ತಿದ್ದರು. ಸೈನಿಕರು “ನಿಲ್ಲು! ನಿಲ್ಲು!” ಎಂದು ಅನ್ಯೋನ್ಯರನ್ನು ಕೂಗಿ ಕರೆಯುತ್ತಾ ಓಡಿಹೋಗುತ್ತಿದ್ದರೂ ಸ್ವಯಂ ತಾವು ಯಾರಿಗೂ ನಿಲ್ಲುತ್ತಿರಲಿಲ್ಲ. ಸಾರಥಿಗಳನ್ನು ಕಳೆದುಕೊಂಡ ಸ್ವಲಂಕೃತ ರಥಗಳಿಂದ ಕುದುರೆಗಳನ್ನು ಬಿಚ್ಚಿ ಏರಿ ಕಾಲುಗಳಿಂದಲೇ ಪ್ರಚೋದಿಸುತ್ತಾ ವೇಗದಿಂದ ಯೋಧರು ಓಡಿಹೋಗುತ್ತಿದ್ದರು.

## ಕೃಪನು ಅಶ್ವತ್ಥಾಮನಿಗೆ ದ್ರೋಣವಧೆಯ ಕುರಿತು ಹೇಳಿದುದು; ಅಶ್ವತ್ಥಾಮನ ಕ್ರೋಧ

ಈ ರೀತಿ ತೇಜೋಹೀನರಾಗಿ ಭಯದಿಂದ ಓಡಿಹೋಗುತ್ತಿದ್ದ ಸೇನೆಯನ್ನು ಪ್ರವಾಹಕ್ಕೆ ವಿರುದ್ಧವಾಗಿ ವೇಗದಿಂದ ಮೊಸಳೆಯೋಪಾದಿಯಲ್ಲಿ ಶತ್ರುಸೇನೆಯ ಕಡೆ ಬರುತ್ತಿದ್ದ ದ್ರೋಣಪುತ್ರನು ನೋಡಿದನು. ಮದಿಸಿದ ಸಲಗದ ವಿಕ್ರಮವುಳ್ಳ ಆ ಯುದ್ಧದುರ್ಮದನು ಪಾಂಡವರ ಬಹುವಿಧದ ಸೇನೆಯನ್ನು ಸಂಹರಿಸಿ, ಎಷ್ಟೋ ಸಂಕಟಗಳಿಂದ ಪಾರಾಗಿ ಬರುತ್ತಿದ್ದನು. ಪಲಾಯನಮಾಡುವುದರಲ್ಲಿಯೇ ಹೆಚ್ಚು ಉತ್ಸಾಹವಿಟ್ಟಿದ್ದ ಮತ್ತು ದಿಕ್ಕಾಪಾಲಾಗಿ ಓಡಿ ಹೋಗುತ್ತಿರುವ ಸೇನೆಯನ್ನು ನೋಡಿ ದ್ರೋಣಪುತ್ರನು ದುರ್ಯೋಧನನ ಬಳಿಸಾರಿ ಹೀಗೆ ಹೇಳಿದನು:

“ಭಾರತ! ಬಹಳ ಭಯಗೊಂಡವರಂತೆ ಈ ಸೇನೆಯೇಕೆ ಓಡಿಹೋಗುತ್ತಿದೆ? ರಣದಿಂದ ಓಡಿಹೋಗುತ್ತಿರುವವರನ್ನು ನೀನೇಕೆ ತಡೆಯುತ್ತಿಲ್ಲ? ನೀನೂ ಕೂಡ ಮೊದಲಿನಂತೆ ಕಾಣುತ್ತಿಲ್ಲ! ಕರ್ಣಾದಿ ರಾಜರೂ ಕೂಡ ರಣಾಂಗಣದಲ್ಲಿ ನಿಲ್ಲುತ್ತಿಲ್ಲ! ಬೇರೆ ಯುದ್ಧಗಳಲ್ಲಿ ನಿನ್ನ ಸೇನೆಯು ಹೀಗೆ ಓಡಿಹೋಗುತ್ತಿರಲಿಲ್ಲ. ನಿನ್ನ ಸೇನೆಯಲ್ಲಿ ಎಲ್ಲರೂ ಕ್ಷೇಮವಷ್ಟೇ? ನಿನ್ನ ಸೇನೆಯಲ್ಲಿ ಯಾವ ರಥಸಿಂಹನು ಹತನಾದುದರಿಂದ ನಿನ್ನ ಸೇನೆಗೆ ಈ ಅವಸ್ಥೆಯುಂಟಾಯಿತು ಎನ್ನುವುದನ್ನು ನನಗೆ ಹೇಳು ಕೌರವ!”

ದ್ರೋಣಪುತ್ರನಾಡಿದ ಆ ಮಾತನ್ನು ಕೇಳಿ ದುರ್ಯೋಧನನಿಗೆ ಘೋರವೂ ಅಪ್ರಿಯವೂ ಆದ ವಿಷಯವನ್ನು ಅವನಿಗೆ ಹೇಳಲು ಶಕ್ಯನಾಗಲಿಲ್ಲ. ಶೋಕವೆಂಬ ಮಹಾಸಾಗರದಲ್ಲಿ ನೌಕೆಯು ಒಡೆದು ಮುಳುಗಿಹೋಗಿದ್ದ ದುರ್ಯೋಧನನು ರಥದಲ್ಲಿದ್ದ ದ್ರೋಣಪುತ್ರನನ್ನು ನೋಡಿ ಕಣ್ಣುಗಳಲ್ಲಿ ನೀರುತುಂಬಿಸಿಕೊಂಡನು. ಆಗ ರಾಜನು ಲಜ್ಜಿತನಾಗಿ ಶಾರದ್ವತನಿಗೆ

“ಈ ಸೇನೆಯು ಏಕೆ ಓಡಿಹೋಗುತ್ತಿದೆ ಎನ್ನುವುದನ್ನು ಸರ್ವಸ್ವವಾಗಿ ಹೇಳಿ! ನಿಮಗೆ ಮಂಗಳವಾಗಲಿ!”

ಎಂದನು. ಆಗ ಶಾರದ್ವತನು ಬಾರಿ ಬಾರಿ ಸಂಕಟಪಡುತ್ತಾ ದ್ರೋಣಪುತ್ರನಿಗೆ ದ್ರೋಣನು ಹೇಗೆ ಕೆಳಗುರುಳಿಸಲ್ಪಟ್ಟನು ಎನ್ನುವುದನ್ನು ಹೇಳಿದನು:

> “ನಾವು ಪೃಥ್ವಿಯಲ್ಲಿಯೇ ರಥಶ್ರೇಷ್ಠ ದ್ರೋಣನನ್ನೇ ಮುಂದಿರಿಸಿಕೊಂಡು ಕೇವಲ ಪಾಂಚಾಲರೊಡನೆ ಯುದ್ಧವನ್ನು ಪ್ರಾರಂಭಿಸಿದೆವು. ಹಾಗೆ ಸಂಗ್ರಾಮವು ನಡೆಯುತ್ತಿರಲು ಕುರು-ಸೋಮಕರು ಒಟ್ಟಾಗಿ ಅನ್ಯೋನ್ಯರೊಡನೆ ಗರ್ಜಿಸುತ್ತಾ ಶಸ್ತ್ರಗಳಿಂದ ಶತ್ರುಗಳ ಶರೀರಗಳನ್ನು ಕೆಳಗುರುಳಿಸಿದರು. ಆಗ ದ್ರೋಣನು ಬ್ರಹ್ಮಾಸ್ತ್ರವನ್ನು ಪ್ರಯೋಗಿಸಿ ಭಲ್ಲಗಳಿಂದ ನೂರಾರು ಸಹಸ್ರಾರು ಶತ್ರುಸೈನಿಕರನ್ನು ಸಂಹರಿಸಿದನು. ಕಾಲಚೋದಿತ ಪಾಂಡವರು, ಕೇಕಯರು, ಮತ್ಸ್ಯರು ಮತ್ತು ವಿಶೇಷವಾಗಿ ಪಾಂಚಾಲರು ರಣದಲ್ಲಿ ದ್ರೋಣನ ರಥದ ಸಮೀಪಕ್ಕೆ ಬಂದು ನಾಶಹೊಂದಿದರು. ಬ್ರಹ್ಮಾಸ್ತ್ರದ ಪ್ರಯೋಗದಿಂದ ದ್ರೋಣನು ಸಾವಿರ ರಥಸಿಂಹರನ್ನೂ ಎರಡು ಸಾವಿರ ಆನೆಗಳನ್ನೂ ಸುಟ್ಟು ಮೃತ್ಯುಲೋಕಕ್ಕೆ ಕಳುಹಿಸಿದನು. ಕಿವಿಯವರೆಗೂ ಕೂದಲು ನೆರೆತಿದ್ದ, ಎಂಭತ್ತೈದು ವರ್ಷದ ಆ ಶ್ಯಾಮಲವರ್ಣದ ವೃದ್ಧನು ರಣದಲ್ಲಿ ಹದಿನಾರು

ವರ್ಷದವನಂತೆ ಸಂಚರಿಸುತ್ತಿದ್ದನು. ಸೈನ್ಯಗಳು ಕಷ್ಟಕ್ಕೊಳಗಾಗಲು, ರಾಜರು ವಧಿಸಲ್ಪಡುತ್ತಿರಲು ಕೋಪಗೊಂಡ ಪಾಂಚಾಲರು ಯುದ್ಧದಿಂದ ವಿಮುಖರಾದರು. ಅವರು ಹೀಗೆ ಪ್ರಭಗ್ನರಾಗಿ ವಿಮುಖರಾಗಲು ಶತ್ರುಗಳನ್ನು ಜಯಿಸುವ ದ್ರೋಣನು ದಿವ್ಯಾಸ್ತ್ರಗಳನ್ನು ಪ್ರಕಟಿಸುತ್ತಾ ಉದಯಿಸಿದ ಸೂರ್ಯನಂತೆ ಪ್ರಕಾಶಿಸಿದನು. ನಿನ್ನ ತಂದೆಯು ಪಾಂಡವಸೇನೆಯ ಮಧ್ಯದಲ್ಲಿ ಬಿಡುತ್ತಿರುವ ಶರಗಳ ಕಿರಣಗಳಿಂದಾಗಿ ಮಧ್ಯಾಹ್ನದ ಸೂರ್ಯನಂತೆ ನೋಡಲೂ ಕಷ್ಟಕರನಾಗಿದ್ದನು. ಸೂರ್ಯನಂತೆ ವಿರಾಜಿಸುತ್ತಿದ್ದ ದ್ರೋಣನಿಂದ ದಹಿಸಲ್ಪಡುತ್ತಿದ್ದ ಅವರು ವೀರ್ಯವೇ ಸುಟ್ಟುಹೋದಂತವರಾಗಿ ನಿರುತ್ಸಾಹರಾಗಿ ಚೇತನವನ್ನೇ ಕಳೆದುಕೊಂಡರು. ದ್ರೋಣನ ಬಾಣಗಳಿಂದ ಪೀಡಿತರಾದ ಅವರನ್ನು ನೋಡಿ ಅವರ ಜಯವನ್ನೇ ಬಯಸುವ ಮಧುಸೂದನನು ಪಾಂಡುಪುತ್ರರಿಗೆ ಹೀಗೆಂದನು: "ಶಸ್ತ್ರಧಾರಿಗಳಲ್ಲಿಯೇ ಶ್ರೇಷ್ಠನಾದ, ರಥಿಗಳ ನಾಯಕರಿಗೂ ನಾಯಕನಾಗಿರುವ ಇವನನ್ನು ಜಯಿಸಲು ರಣದಲ್ಲಿ ಯಾವ ಶತ್ರುವಿಗೂ, ವೃತ್ರಹ ಇಂದ್ರನಿಗೂ, ಸಾಧ್ಯವಿಲ್ಲ. ಪಾಂಡವರೇ!

ರುಕ್ಮರಥ ದ್ರೋಣನು ಯುದ್ಧದಲ್ಲಿ ನಮ್ಮೆಲ್ಲರನ್ನೂ ಸಂಹರಿಸಿಬಿಡಬಾರದೆಂದಾದರೆ ನೀವು ಧರ್ಮವನ್ನು ಬದಿಗೊತ್ತಿ ಜಯವನ್ನು ರಕ್ಷಿಸಬೇಕು! ಅಶ್ವತ್ಥಾಮನು ಹತನಾದರೆ ಇವನು ಯುದ್ಧಮಾಡುವುದಿಲ್ಲ ಎಂದು ನನ್ನ ಅಭಿಪ್ರಾಯ. ಆದುದರಿಂದ ಯಾರಾದರೊಬ್ಬನು ಯುದ್ಧದಲ್ಲಿ ಅಶ್ವತ್ಥಾಮನು ಹತನಾದನೆಂಬ ಸುಳ್ಳನ್ನು ಅವನಿಗೆ ಹೇಳಬೇಕು!"

ಈ ಮಾತು ಧನಂಜಯನಿಗೆ ಹಿಡಿಸಲಿಲ್ಲ. ಅನ್ಯರೆಲ್ಲರೂ, ಬಹಳ ಕಷ್ಟದಿಂದ ಯುಧಿಷ್ಠಿರನೂ, ಅದಕ್ಕೆ ಸಮ್ಮತಿಸಿದರು. ಭೀಮಸೇನನು ನಾಚಿಕೆಗೊಂಡೇ ಅಶ್ವತ್ಥಾಮನು ಹತನಾದನೆಂದು ನಿನ್ನ ತಂದೆಗೆ ಹೇಳಿದನು. ಆದರೆ ನಿನ್ನ ತಂದೆಯು ಅವನ ಮಾತನ್ನು ನಂಬಲಿಲ್ಲ. ಆದರೂ ಪುತ್ರವತ್ಸಲ ನಿನ್ನ ತಂದೆಯು ಅದು ಸುಳ್ಳೆಂದು ಸಂದೇಹಗೊಂಡು ಅಶ್ವತ್ಥಾಮನು ಹತನಾದನೇ ಅಥವಾ ಅಲ್ಲವೇ ಎಂದು ಧರ್ಮರಾಜನನ್ನು ಕೇಳಿದನು. ಆಗ ಸುಳ್ಳುಹೇಳಲು ಭಯಗೊಂಡಿದ್ದ ಆದರೆ ಜಯದಲ್ಲಿ ಆಸಕ್ತನಾಗಿದ್ದ ಯುಧಿಷ್ಠಿರನು ಮಾಲವದ ಇಂದ್ರವರ್ಮನ

ಅಶ್ವತ್ಥಾಮ ಎಂಬ ಹೆಸರಿನ ಪರ್ವತಾಕಾರದ ಆನೆಯು ಭೀಮನಿಂದ ಹತವಾಯಿತು ಎಂದು ಹೇಳಿದನು. ದ್ರೋಣನ ಹತ್ತಿರ ಹೋಗಿ ಗಟ್ಟಿಯಾಗಿ ಹೀಗೆ ಹೇಳಿದನು: "ಯಾರಿಗಾಗಿ ಶಸ್ತ್ರಗಳನ್ನು ಹಿಡಿದಿರುವೆಯೋ ಮತ್ತು ಯಾರನ್ನು ನೋಡಿ ಜೀವಂತನಾಗಿರುವೆಯೋ ಆ ನಿನ್ನ ನಿತ್ಯ ಪ್ರಿಯಪುತ್ರ ಅಶ್ವತ್ಥಾಮನು ಕೆಳಗುರುಳಿಸಲ್ಪಟ್ಟಿದ್ದಾನೆ."

ಆ ಮಹಾ ಅಪ್ರಿಯವಾದುದನ್ನು ಕೇಳಿ ಆಚಾರ್ಯನು ಅಲ್ಲಿ ವಿಮನಸ್ಕನಾಗಿ, ದಿವ್ಯಾಸ್ತ್ರಗಳನ್ನು ನಿಲ್ಲಿಸಿ ಹಿಂದಿನಂತೆ ಯುದ್ಧಮಾಡಲಿಲ್ಲ. ಪರಮ ಉದ್ವಿಗ್ನನಾಗಿದ್ದ, ಶೋಕದಿಂದ ಹತಚೇತನನಾಗಿದ್ದ ಅವನನ್ನು ಪಾಂಚಾಲರಾಜನ ಕ್ರೂರಕರ್ಮಿ ಮಗನು ಆಕ್ರಮಣಿಸಿದನು. ಮೃತ್ಯುವೆಂದು ವಿಹಿತನಾಗಿದ್ದ ಅವನನ್ನು ನೋಡಿ ಲೋಕತತ್ವಗಳನ್ನು ಕಂಡಿದ್ದ ದ್ರೋಣನು ರಣದಲ್ಲಿ ದಿವ್ಯಾಸ್ತ್ರಗಳನ್ನು ವಿಸರ್ಜಿಸಿ ಪ್ರಾಯೋಪವೇಶಮಾಡಿದನು. ತಕ್ಷಣವೇ ಪಾರ್ಷತನು, ವೀರರು ಬೇಡವೆಂದು ಕೂಗಿಕೊಳ್ಳುತ್ತಿದ್ದರೂ, ಎಡಗೈಯಿಂದ ದ್ರೋಣನ ತಲೆಗೂದಲನ್ನು ಹಿಡಿದುಕೊಂಡನು. "ವಧ್ಯನಲ್ಲದವನನ್ನು ವಧಿಸಬೇಡ!" ಎಂದು ಸುತ್ತಲಿದ್ದ

ಎಲ್ಲರೂ ಹೇಳುತ್ತಿದ್ದರು. ಹಾಗೆಯೇ ಅರ್ಜುನನೂ ಕೂಡ ರಥದಿಂದ ಕೆಳಕ್ಕಿಳಿದು ಅವನನ್ನು ತಡೆಯಲು ಓಡಿ ಬಂದನು. ಧರ್ಮವಿದು ಅರ್ಜುನನು "ಜೀವಂತವಾಗಿ ಆಚಾರ್ಯನನ್ನು ಕರೆದುಕೊಂಡು ಬಾ! ಕೊಲ್ಲಬೇಡ!" ಎಂದು ಪುನಃ ಪುನಃ ಹೇಳುತ್ತಾ ಬಾಹುಗಳನ್ನು ಮೇಲೆತ್ತಿ ಓಡಿ ಬರುತ್ತಿದ್ದನು. ಕೌರವರು ಮತ್ತು ಅರ್ಜುನರು ತಡೆಯುತ್ತಿದ್ದರೂ ಆ ನರರ್ಷಭನು ನಿನ್ನ ತಂದೆಯನ್ನು ಕ್ರೂರತನದಿಂದ ಕೊಂದೇಬಿಟ್ಟನು. ಆಗ ಸೈನಿಕರೆಲ್ಲರೂ ಭಯಾರ್ದಿತರಾಗಿ ಓಡತೊಡಗಿದರು. ನಾವೂ ಕೂಡ ನಿನ್ನ ತಂದೆಯ ಮರಣದಿಂದ ನಿರುತ್ಸಾಹಿಗಳಾಗಿದ್ದೇವೆ."

ಯುದ್ಧದಲ್ಲಿ ತನ್ನ ತಂದೆಯು ಹತನಾದನೆಂದು ಕೇಳಿದ ದ್ರೋಣಪುತ್ರನು ಕಾಲಿನಿಂದ ಮೆಟ್ಟಲ್ಪಟ್ಟ ಸರ್ಪದಂತೆ ಅತಿ ತೀವ್ರ ಕ್ರೋಧವನ್ನು ತಾಳಿದನು.

# ಹದಿನೈದನೆಯ ದಿನದ ಯುದ್ಧ: ಅಶ್ವತ್ಥಾಮನಿಂದ ನಾರಾಯಣಾಸ್ತ್ರ

# ಪ್ರಯೋಗ

ಪಾಪಕರ್ಮಿ ಧೃಷ್ಟದ್ಯುಮ್ನನಿಂದ ತನ್ನ ತಂದೆಯು ಹತನಾದನೆಂದು ಕೇಳಿ ದ್ರೌಣಿ ಅಶ್ವತ್ಥಾಮನ ಕಣ್ಣುಗಳು ರೋಷದ ಕಣ್ಣೀರಿನಿಂದ ತುಂಬಿದವು. ಪ್ರಳಯ ಕಾಲದಲ್ಲಿ ಪ್ರಾಣಿಗಳ ಅಸುವನ್ನು ಹೀರಿಕೊಳ್ಳುವ ಅಂತಕನೋಪಾದಿಯಲ್ಲಿ ಕ್ರುದ್ಧನಾದ ಅವನ ಶರೀರವು ದಿವ್ಯವಾಗಿ ಕಂಡಿತು. ಕಣ್ಣುಗಳು ಕಣ್ಣೀರಿನಿಂದ ತುಂಬಿಕೊಳ್ಳುತ್ತಿರಲು ಅವನು ಪುನಃ ಪುನಃ ಕಣ್ಣುಗಳನ್ನು ಒರೆಸಿಕೊಳ್ಳುತ್ತಾ ಕೋಪದಿಂದ ನಿಟ್ಟುಸಿರು ಬಿಡುತ್ತಾ ದುರ್ಯೋಧನನೊಡನೆ ಈ ಮಾತುಗಳನ್ನಾಡಿದನು:

> “ಶಸ್ತ್ರಸಂನ್ಯಾಸವನ್ನು ಮಾಡಿದ ನನ್ನ ತಂದೆಯನ್ನು ಕ್ಷುದ್ರಜನರು ಕೊಂದರು. ಧ್ವರ್ಮಧ್ವಜನೆನಿಸಿಕೊಂಡವನು ಈ ಪಾಪದ ಕೆಲಸವನ್ನು ಮಾಡಿದನೆಂದು ನನಗೆ ತಿಳಿದಿದೆ. ಧರ್ಮಪುತ್ರನ ಅತ್ಯಂತ ಅನಾರ್ಯ ಕ್ರೂರಕೃತ್ಯದ ಕುರಿತು ನಾನು ಕೇಳಿದೆ. ಯುದ್ಧದಲ್ಲಿ ತೊಡಗಿದವರಿಗೆ ಜಯ-ಅಪಜಗಳೆರಡರಲ್ಲಿ ಒಂದಾಗುವುದು ನಿಶ್ಚಿತವಾದುದು. ಆದರೆ ಅಲ್ಲಿ ವಧೆಗೆ ಹೆಚ್ಚಿನ ಪ್ರಾಶಸ್ತ್ಯವಿಗೆ. ಸಂಗ್ರಾಮ ಯುದ್ಧದಲ್ಲಿ ನ್ಯಾಯರೀತಿಯಲ್ಲಿ ವಧೆಯಾದರೆ ಅದರಿಂದ ಯಾರಿಗೂ

ಯಾವವಿಧದ ದುಃಖವೂ ಆಗುವುದಿಲ್ಲ. ದ್ವಿಜರು ಈ ಧರ್ಮರಹಸ್ಯವನ್ನು ಕಂಡಿದ್ದಾರೆ. ನನ್ನ ತಂದೆಯು ವೀರಲೋಕಗಳಿಗೇ ಹೋಗಿದ್ದಾನೆ. ಅದರಲ್ಲಿ ನನಗೆ ಸಂಶಯವಿಲ್ಲ. ಆದುದರಿಂದ ಅವನು ನಿಧನನಾದನೆಂದು ನಾನು ಶೋಕಿಸುತ್ತಿಲ್ಲ. ಧರ್ಮಪ್ರವೃತ್ತನಾಗಿದ್ದ ಅವನ ಕೂದಲನ್ನು ಸರ್ವಸೈನ್ಯಗಳೂ ನೋಡುತ್ತಿರುವಂತೆ ಧೃಷ್ಟದ್ಯುಮ್ನನು ಹಿಡಿದನು ಎನ್ನುವುದೇ ನನ್ನ ಮರ್ಮಗಳನ್ನು ಛಿದ್ರಗೊಳಿಸುತ್ತಿದೆ. ಲೋಕದಲ್ಲಿ ಜನರು ಕಾಮ-ಕ್ರೋಧ-ಅಜ್ಞಾನ-ದರ್ಪ ಅಥವಾ ಬಾಲ್ಯತನದಿಂದ ಧರ್ಮಕ್ಕೆ ಬಾಹಿರವಾಗಿ ನಡೆದುಕೊಳ್ಳುತ್ತಾರೆ. ಇಂತಹ ಮಹಾ ಅಧರ್ಮಿಕ ಕೆಲಸವನ್ನು ದುರಾತ್ಮ ಕ್ರೂರಿ ಪಾರ್ಷತನು ನನ್ನನ್ನೂ ಅಲ್ಲಗಳೆದು ಮಾಡಿದ್ದಾನೆ. ಅದಕ್ಕೆ ತಕ್ಕುದಾದ ಸುದಾರುಣ ಫಲವನ್ನು ಧೃಷ್ಟದ್ಯುಮ್ನನೂ ಮತ್ತು ಆ ಅನಾರ್ಯ ಕಾರ್ಯವನ್ನು ಮಾಡಿಸಿದ ಪರಮ ಮಿಥ್ಯಾವಾದೀ ಪಾಂಡವರೂ ಕಾಣಲಿದ್ದಾರೆ. ಹೀಗೆ ಶಸ್ತ್ರಸಂನ್ಯಾಸ ಮಾಡಿದ್ದ ಆಚಾರ್ಯನನ್ನು ಮೋಸದಿಂದ ಸಂಹರಿಸಿದ ಧರ್ಮರಾಜನ ರಕ್ತವನ್ನು ಇಂದು ಭೂಮಿಯು ಕುಡಿಯುತ್ತದೆ! ನಾನು ಸರ್ವೋಪಾಯಗಳಿಂದ ಪಾಂಚಾಲನನ್ನು ವಧಿಸಲು

ಪ್ರಯತ್ನಿಸುತ್ತೇನೆ. ಮೃದು ಅಥವಾ ದಾರುಣ ಕರ್ಮದಿಂದ ನಾನು ಆ ಪಾಂಚಾಲನ ವಧೆಯನ್ನು ಮಾಡಿಯೇ ಶಾಂತಿಯನ್ನು ಪಡೆಯುತ್ತೇನೆ. ಪರಲೋಕದಲ್ಲಿ ಮತ್ತು ಈ ಲೋಕದಲ್ಲಿ ಬರಬಹುದಾದ ಮಹಾಭಯದ ರಕ್ಷಣೆಗೆಂದೇ ಜನರು ಮಕ್ಕಳನ್ನು ಬಯಸುತ್ತಾರೆ. ಪರ್ವತಸಮಾನ ಪುತ್ರನೂ ಶಿಷ್ಯನೂ ಆದ ನಾನು ಜೀವಂತವಿರುವಾಗಲೇ ಯಾರೂ ಬಂಧುಗಳೇ ಇಲ್ಲದವರಂತೆ ನನ್ನ ತಂದೆಗೆ ಈ ಅವಸ್ಥೆಯು ಪ್ರಾಪ್ತವಾಯಿತು! ನನ್ನಲ್ಲಿರುವ ದಿವ್ಯಾಸ್ತ್ರಗಳಿಗೆ ಧಿಕ್ಕಾರ! ನನ್ನ ಬಾಹುಗಳಿಗೆ ಧಿಕ್ಕಾರ! ಪರಾಕ್ರಮಕ್ಕೆ ಧಿಕ್ಕಾರ! ನನ್ನಂತಹ ಮಗನನ್ನು ಪಡೆದುದರಿಂದಲೇ ದ್ರೋಣನು ತಲೆಗೂದಲನ್ನು ಹಿಡಿಸಿಕೊಂಡವನಾದನು! ನನ್ನ ತಂದೆಯು ಪರಲೋಕಕ್ಕೆ ಹೋಗಿದ್ದರೂ ಕೂಡ ಅವರ ಋಣವು ಮುಗಿಯುವಂತೆ ನಾನು ಮಾಡುತ್ತೇನೆ. ಆರ್ಯನು ಎಂದೂ ಆತ್ಮಸ್ತುತಿಯನ್ನು ಮಾಡಿಕೊಳ್ಳಬಾರದು. ಆದರೆ ಪಿತೃವಧೆಯನ್ನು ಸಹಿಸಿಕೊಳ್ಳಲಾಗದೇ ನಾನು ನನ್ನ ಪೌರುಷದ ಕುರಿತು ಹೇಳುತ್ತೇನೆ.

ಸರ್ವಸೇನೆಗಳನ್ನೂ ಅರೆದು ಯುಗಾಂತವನ್ನೇ

ಉಂಟುಮಾಡುವ ನನ್ನ ಈ ವೀರ್ಯವನ್ನು ಇಂದು ಜನಾರ್ದನನೊಡನೆ ಪಾಂಡವರು ನೋಡಲಿ! ಇಂದು ರಥಸ್ಥನಾದ ನನ್ನನ್ನು ರಣದಲ್ಲಿ ದೇವತೆ-ಗಂಧರ್ವ-ಅಸುರ-ರಾಕ್ಷಸರು ಯಾರೂ ಗೆಲ್ಲಲು ಶಕ್ತರಾಗುವುದಿಲ್ಲ. ಈ ಲೋಕದಲ್ಲಿ ನನ್ನ ಮತ್ತು ಅರ್ಜುನನನ್ನು ಮೀರಿಸಿದ ಅಸ್ತ್ರವಿತ್ತಮನು ಬೇರೆ ಯಾರೂ ಇಲ್ಲ. ಸೂರ್ಯನು ಕಿರಣಗಳನ್ನು ಪಸರಿಸಿ ಹೇಗೆ ಸುಡುವನೋ ಹಾಗೆ ನಾನಿಂದು ಸೇನೆಗಳ ಮಧ್ಯದಲ್ಲಿ ದೇವತೆಗಳು ಸೃಷ್ಟಿಸಿದ ಅಸ್ತ್ರಗಳನ್ನು ಪ್ರಯೋಗಿಸುತ್ತೇನೆ. ಇಂದಿನ ಮಹಾಯುದ್ಧದಲ್ಲಿ ನನ್ನ ಧನುಸ್ಸಿನಿಂದ ಪ್ರಮುಕ್ತ ಬಾಣಗಳು ಪಾಂಡವರನ್ನು ಮಥಿಸಿ ನನ್ನ ವೀರ್ಯವನ್ನು ತೋರಿಸಿಕೊಡುತ್ತವೆ. ಇಂದು ಎಲ್ಲ ದಿಕ್ಕುಗಳೂ ಮಳೆಯ ನೀರಿನಿಂದ ತುಂಬಿಬಿಡುವಂತೆ ನನ್ನ ತೀಕ್ಷ್ಣ ಬಾಣಗಳಿಂದ ಆವೃತವಾಗುವುದನ್ನು ಎಲ್ಲರೂ ನೋಡುವವರಿದ್ದಾರೆ! ಭೈರವಸ್ವರದ ಶರಜಾಲಗಳನ್ನು ಎಲ್ಲೆಡೆ ಎರಚಿ ಚಂಡಮಾರುತವು ವೃಕ್ಷಗಳನ್ನು ಕೆಡಹುವಂತೆ ಶತ್ರುಗಳನ್ನು ಕೆಳಗುರುಳಿಸುತ್ತೇನೆ!

ಈ ಅಸ್ತ್ರವನ್ನು ಬೀಭತ್ಸುವಾಗಲೀ ಜನಾರ್ದನನಾಗಲೀ

ಭೀಮಸೇನನಾಗಲೀ, ನಕುಲ-ಸಹದೇವರಾಗಲೀ, ರಾಜಾ ಯುಧಿಷ್ಠಿರನಾಗಲೀ, ದುರಾತ್ಮರಾದ ಪಾರ್ಷತ-ಶಿಖಂಡಿ-ಸಾತ್ಯಕಿಗಾಗಲೀ ತಿಳಿದಿಲ್ಲ. ಕೌರವ್ಯ! ಇದರ ಪ್ರಯೋಗ-ಸಂಹಾರಗಳೆರಡು ನನ್ನಲ್ಲಿ ಮಾತ್ರ ಪ್ರತಿಷ್ಠಿತವಾಗಿವೆ. ಹಿಂದೆ ನನ್ನ ತಂದೆಯು ವಿಧಿಪೂರ್ವಕವಾಗಿ ನಾರಾಯಣನನ್ನು ನಮಸ್ಕರಿಸಿ ಬ್ರಹ್ಮರೂಪ ಉಪಹಾರವನ್ನು ಸಮರ್ಪಿಸಿದ್ದನು. ಅದನ್ನು ಸ್ವಯಂ ಸ್ವೀಕರಿಸಿದ ಭಗವಾನನು ವರವನ್ನಿತ್ತನು. ಆಗ ನನ್ನ ತಂದೆಯು ಶ್ರೇಷ್ಠವಾದ ನಾರಾಯಣಾಸ್ತ್ರವನ್ನು ವರವನ್ನಾಗಿ ಕೇಳಿದನು. ಆಗ ದೇವಸತ್ತಮ ಭಗವಾನನು ಹೀಗೆ ಹೇಳಿದ್ದನು: “ಇದರ ನಂತರ ಯುದ್ಧದಲ್ಲಿ ನಿನಗೆ ಸರಿಸಾಟಿಯಾದ ಯಾವ ನರನೂ ಇರುವುದಿಲ್ಲ. ಆದರೆ ಬ್ರಹ್ಮನ್! ಇದನ್ನು ವಿಚಾರಮಾಡದೇ ಎಂದೂ ಪ್ರಯೋಗಿಸಕೂಡದು. ಈ ಅಸ್ತ್ರವು ಶತ್ರುವನ್ನು ವಧಿಸದೇ ಹಿಂದಿರುಗುವುದಿಲ್ಲ. ಇದು ಯಾರನ್ನು ವಧಿಸುತ್ತದೆ ಎನ್ನುವುದನ್ನು ತಿಳಿಯಲು ಶಕ್ಯವಿಲ್ಲ. ಅವಧ್ಯರಾದವರನ್ನೂ ವಧಿಸಿಬಿಡಬಹುದು. ಆದುದರಿಂದ ಇದನ್ನು ದುಡುಕಿ ಪ್ರಯೋಗಿಸಬಾರದು. ಯುದ್ಧದಲ್ಲಿ ಪಲಾಯನ ಮಾಡಿದವರನ್ನೂ ಇದು ವಧಿಸುತ್ತದೆ. ಶಸ್ತ್ರಗಳನ್ನು

ವಿಸರ್ಜಿಸುವುದು, ಅಭಯವನ್ನು ಯಾಚಿಸುವುದು, ಶತ್ರುಗಳಿಗೆ ಶರಣಾಗತರಾಗುವುದು ಇವುಗಳು ಈ ಮಹಾಸ್ತ್ರವನ್ನು ಶಮನಗೊಳಿಸತಕ್ಕ ಕೆಲವು ಉಪಾಯಗಳು. ಅವಧ್ಯರಾದವರನ್ನು ಇದು ಪೀಡಿಸಿದ್ದೇ ಆದರೆ ಅಸ್ತ್ರವನ್ನು ಪ್ರಯೋಗಿಸಿದವನೇ ಪೀಡೆಗೊಳಗಾಗುತ್ತಾನೆ.” ಆಗ ನನ್ನ ತಂದೆಯು ಅದನ್ನು ಸ್ವೀಕರಿಸಿದನು. ಪ್ರಭುವು ಮತ್ತೆ ಹೇಳಿದನು: “ನೀನು ಅನೇಕ ದಿವ್ಯಾಸ್ತ್ರಗಳ ಮಳೆಗಳನ್ನು ಸುರಿಸುವೆ! ಈ ಅಸ್ತ್ರವನ್ನು ಹೊಂದಿರುವುದರಿಂದ ನೀನು ಸಂಗ್ರಾಮದಲ್ಲಿ ತೇಜಸ್ಸಿನಿಂದ ಪ್ರಜ್ವಲಿಸುತ್ತೀಯೆ!” ಹೀಗೆ ಹೇಳಿ ಆ ಭಗವಾನ್ ಪ್ರಭುವು ದಿವಕ್ಕೆ ತೆರಳಿದನು.

ಇಗೋ ಇದು ನನ್ನ ಬಂಧುವಿನಿಂದ ಪಡೆದ ಆ ನಾರಾಯಣಾಸ್ತ್ರವು. ಶಚೀಪತಿಯು ಅಸುರರನ್ನು ಹೇಗೋ ಹಾಗೆ ಇದರಿಂದ ರಣದಲ್ಲಿ ನಾನು ಪಾಂಡವರನ್ನೂ, ಪಾಂಚಾಲರನ್ನೂ, ಮತ್ಸ್ಯ-ಕೇಕಯರನ್ನೂ ಓಡಿಸುತ್ತೇನೆ. ನನ್ನ ಶರಗಳು ಹೇಗೆ ಹೋಗಬೇಕೆಂದು ಇಚ್ಛಿಸುವೆನೋ ಹಾಗೆ ಅವು ಪರಾಕ್ರಮಿ ಶತ್ರುಗಳ ಮೇಲೆ ಬೀಳುವವು! ನಾನು ರಣದಲ್ಲಿ ನಿಂತು ಯಥೇಚ್ಛವಾದ ಕಲ್ಲಿನ ಮಳೆಗರೆಯುತ್ತೇನೆ. ಲೋಹದ

ಕೊಕ್ಕೊಕ್ಕು ಪಕ್ಷಿಗಳಿಂದ ಮಹಾರಥರನ್ನು ಪಲಾಯನಗೊಳಿಸುತ್ತೇನೆ. ವಿವಿಧ ಪರಶುಗಳನ್ನೂ ಸುರಿಸುತ್ತೇನೆ. ಇದರಲ್ಲಿ ಸಂಶಯವಿಲ್ಲದಿರಲಿ! ಹೀಗೆ ನಾನು ಮಹಾ ನಾರಾಯಣಾಸ್ತ್ರದಿಂದ ಪಾಂಡವರನ್ನು ವ್ಯರ್ಥಗೊಳಿಸಿ ಶತ್ರುಗಳನ್ನು ಧ್ವಂಸಮಾಡುತ್ತೇನೆ. ಮಿತ್ರ, ಬ್ರಾಹ್ಮಣ ಮತ್ತು ಗುರು-ದ್ವೇಷಿಯಾದ ನೀಚ, ಅತಿನಿಂದ್ಯ, ಪಾಂಚಾಲಕುಲಕಳಂಕ ಆ ಧೃಷ್ಟದ್ಯುಮ್ನನನ್ನು ಜೀವದಿಂದ ಮೋಕ್ಷಗೊಳಿಸುತ್ತೇನೆ.”

ದ್ರೋಣಪುತ್ರನ ಆ ಮಾತನ್ನು ಕೇಳಿ ಸೇನೆಯು ಹಿಂದಿರುಗಿತು. ಆಗ ಎಲ್ಲ ಪುರುಷಸತ್ತಮರೂ ಮಹಾಶಂಖಗಳನ್ನೂದಿದರು. ಹೃಷ್ಟರಾಗಿ ಸಹಸ್ರಾರು ಭೇರಿ-ಡಿಂಡಿಮಗಳನ್ನು ಬಾರಿಸಿದರು. ಕುದುರೆಗಳ ಗೊರಸುಗಳಿಂದಲೂ ರಥಚಕ್ರಗಳ ಸಂಚಲನದಿಂದಲೂ ವಸುಧೆಯು ಪೀಡಿತಳಾದಳು. ಆ ತುಮುಲ ಶಬ್ಧವು ಆಕಾಶ, ಸ್ವರ್ಗ ಮತ್ತು ಪೃಥ್ವಿಯಲ್ಲಿ ಮೊಳಗಿತು. ಮೇಘಗರ್ಜನೆಗೆ ಸಮಾನ ಆ ಶಬ್ಧವನ್ನು ಕೇಳಿ ಪಾಂಡವರು ರಥಶ್ರೇಷ್ಠರೊಡನೆ ಕಲೆತು ಒಟ್ಟಿಗೇ ಮಂತ್ರಾಲೋಚನೆಗೆ ತೊಡಗಿದರು. ಹಾಗೆ ಹೇಳಿ ದ್ರೋಣಪುತ್ರನೂ ಕೂಡ ನೀರನ್ನು ಮುಟ್ಟಿ ಆ ದಿವ್ಯ ನಾರಾಯಣಾಸ್ತ್ರವನ್ನು ಪ್ರಕಟಿಸಿದನು.

ನಾರಾಯಣಾಸ್ತ್ರವು ಪ್ರಾದುರ್ಭೂತವಾಗಲು ತುಂತುರುಹನಿಗಳೊಂದಿಗೆ

ಗಾಳಿಯು ಬೀಸತೊಡಗಿತು. ಮೋಡಗಳಿಲ್ಲದ ಆಕಾಶವು ಗರ್ಜಿಸಿತು. ಭೂಮಿಯು ನಡುಗಿತು. ಮಹಾಸಾಗರವು ಅಲ್ಲೋಲಕಲ್ಲೋಲಗೊಂಡಿತು. ಸಮುದ್ರಗಾಮಿ ಮುಖ್ಯನದಿಗಳು ಹಿಂದಕ್ಕೆ ಹರಿಯತೊಡಗಿದವು. ಪರ್ವತಗಳಿಂದ ಶಿಖರಗಳು ಬಿರಿಬಿಟ್ಟವು. ಮೃಗಗಳು ಪಾಂಡುಪುತ್ರರನ್ನು ಅಪ್ರದಕ್ಷಿಣವಾಗಿ ಸುತ್ತತೊಡಗಿದವು. ಎಲ್ಲ ಕಡೆಗಳಲ್ಲಿಯೂ ಕತ್ತಲೆಯು ಆವರಿಸಿತು. ಸೂರ್ಯನು ಮಾಲಿನ್ಯಹೊಂದಿದನು. ಮಾಂಸಾಹಾರೀ ಪಕ್ಷಿಗಳು ಸಂತೋಷದಿಂದ ಹಾರಾಡತೊಡಗಿದವು. ದೇವದಾನವಗಂಧರ್ವರು ಅಸ್ವಸ್ತರಾದರು. ಆ ತೀವ್ರತೆಗಳನ್ನು ನೋಡಿ ಇದು ಹೇಗಾಯಿತು? ಮುಂದೆ ಏನಾಗುತ್ತದೆ? ಎಂದು ಪಾಂಡವರು ಮಹಾವ್ಯಾಕುಲಕ್ಕೊಳಗಾದರು. ದ್ರೌಣಿಯ ಆ ಘೋರರೂಪದ ಭಯಾವಹ ಅಸ್ತ್ರವನ್ನು ನೋಡಿ ಸರ್ವರಾಜರೂ ವಿಚೇತಸರಾಗಿ ವ್ಯಥಿತರಾದರು.

## ದ್ರೋಣನ ವಧೆಯ ಕುರಿತು ಪಾಂಡವ ಮಹಾರಥರಲ್ಲಿ ವಾಗ್ಯುದ್ಧ

ಯುಧಿಷ್ಠಿರನು ಸ್ವಲ್ಪ ಹೊತ್ತಿನ ಮೊದಲೇ ಧಾರ್ತರಾಷ್ಟ್ರರು ಓಡಿ ಹೋಗುತ್ತಿದ್ದುದನ್ನು ನೋಡಿದ್ದನು. ಆದರೆ ಪುನಃ ತುಮುಲಶಬ್ಧವನ್ನು

ಕೇಳಿ ಅರ್ಜುನನನ್ನು ಪ್ರಶ್ನಿಸಿದನು:

“ವಜ್ರಹಸ್ತನಿಂದ ಮಹಾಸುರ ವೃತ್ರನು ಹೇಗೆ ಹತನಾದನೋ ಹಾಗೆ ಯುದ್ಧದಲ್ಲಿ ಆಚಾರ್ಯ ದ್ರೋಣನು ಧೃಷ್ಟದ್ಯುಮ್ನನಿಂದ ಹತನಾಗಿದ್ದಾನೆ. ವಿಜಯದ ಆಸೆಯನ್ನೇ ತೊರೆದು ತಮ್ಮನ್ನು ಉಳಿಸಿಕೊಳ್ಳಲು ನಿರ್ಧರಿಸಿ ದೀನಾತ್ಮ ಕುರುಗಳು ಪಲಾಯನಮಾಡಿದ್ದರು. ಪಾರ್ಷ್ಣಿ ಸಾರಥಿಗಳು ಹತರಾಗಲು ಮತ್ತು ಮೂಕಿಗಳು ಸೀಳಿಹೋಗಿರಲು ಕೆಲವು ಪಾರ್ಥಿವರು ಭ್ರಾಂತರಾಗಿ ತಕ್ಷಣವೇ ರಥಗಳಲ್ಲಿ ಪತಾಕ-ಧ್ವಜ-ಚತ್ರಗಳಿಲ್ಲದೇ ರಥಗಳಲ್ಲಿ ಓಡಿ ಹೋಗುತ್ತಿದ್ದರು. ಇನ್ನು ಕೆಲವರು ರಥದ ಆಸನಗಳು ಭಗ್ನವಾಗಿಹೋಗಿದುದರಿಂದ, ಕುದುರೆಗಳು ವ್ಯಾಕುಲಗೊಂಡು ವಿಚೇತನಗೊಂಡಿದ್ದುದರಿಂದ ಭೀತರಾಗಿ ತಾವೇ ಕಾಲುಗಳಿಂದ ಕುದುರೆಗಳನ್ನು ತಿವಿದುಕೊಳ್ಳುತ್ತಾ ಓಡಿಹೋಗುತ್ತಿದ್ದರು. ಇನ್ನು ಕೆಲವರು ನಾರಾಚಗಳಿಂದ ಆಸನಹೀನರಾಗಿ ಆನೆಗಳ ಭುಜಗಳ ಮೇಲಿಂದ ನೇತಾಡುತ್ತಾ ಭಯಾತುರರಾಗಿ ಓಡಿಹೋಗುತ್ತಿದ್ದರು. ಬಾಣಗಳಿಂದ ಗಾಯಗೊಂಡ ಮತ್ತು ಮಾವಟಿಗರಿಲ್ಲದ ಕೆಲವು ಆನೆಗಳು ಯೋಧರನ್ನೆಳೆದುಕೊಂಡು

ದಿಕ್ಕಾಪಾಲಾಗಿ ಓಡಿಹೋಗುತ್ತಿದ್ದವು. ಮತ್ತೆ ಕೆಲವರು ಕವಚ-ಆಯುಧಗಳನ್ನು ಕಳಚಿಕೊಂಡು ವಾಹನಗಳಿಂದ ಕುಸಿದು ನೆಲದಮೇಲೆ ಬಿದ್ದಿದ್ದವರು ರಥದಗಾಲಿಗಳಿಂದ ಮತ್ತು ಆನೆ-ಕುದುರೆಗಳಿಂದ ತುಳಿಯಲ್ಪಟ್ಟು ಕತ್ತರಿಸಲ್ಪಟ್ಟಿದ್ದರು. ಮತ್ತೆ ಕೆಲವರು ಹಾ ಪುತ್ರಕ! ಹಾ ತಾತ! ಎಂದು ಭಯದಿಂದ ಕೂಗಿಕೊಳ್ಳುತ್ತಾ ಪಲಾಯನಗೈಯುತ್ತಿದ್ದರು. ಸಂಕಟದಿಂದ ನಿರುತ್ಸಾಹಿಗಳಾಗಿದ್ದ ಅವರು ಅನ್ಯೋನ್ಯರನ್ನು ಗುರುತಿಸುತ್ತಿರಲಿಲ್ಲ. ಮತ್ತೆ ಕೆಲವರು ಗಾಢವಾಗಿ ಗಾಯಗೊಂಡಿದ್ದ ಮಕ್ಕಳನ್ನೋ, ತಂದೆಯನ್ನೋ, ಸ್ನೇಹಿತರನ್ನೋ, ಸಹೋದರರರನ್ನೋ ತೊಡೆಯಮೇಲಿರಿಸಿಕೊಂಡು ಕವಚಗಳನ್ನು ಕಳಚಿ ನೀರಿನಿಂದ ಉಪಚರಿಸುತ್ತಿದ್ದರು. ದ್ರೋಣನು ಹತನಾದಾಗ ಈ ರೀತಿಯ ಅವಸ್ಥೆಯನ್ನು ಹೊಂದಿ ಓಡಿ ಹೋಗುತ್ತಿದ್ದ ಅವರ ಸೇನೆಯನ್ನು ಪುನಃ ಯಾರು ಕರೆದುಕೊಂಡು ಬಂದಿದ್ದಾರೆ? ಇದರ ಕುರಿತು ನಿನಗೇನಾದರೂ ತಿಳಿದಿದ್ದರೆ ಹೇಳು! ಕುದುರೆಗಳ ಹೇಂಕಾರವೂ, ಆನೆಗಳ ಘೀಂಕಾರವೂ, ರಥಚಕ್ರಗಳ ಧ್ವನಿಯೂ ಮಿಶ್ರಿತವಾಗಿ ಜೋರಾಗಿ ಕೇಳಿಬರುತ್ತಿದೆ! ಕುರುಸೇನೆಯ ಮಹಾಸಾಗರದಲ್ಲಿ ಉತ್ಪನ್ನವಾದ ಈ ಶಬ್ಧವು

ಕ್ಷಣ ಕ್ಷಣವೂ ತೀವ್ರವಾಗುತ್ತಿದೆ. ಪುನಃ ಪುನಃ ಕೇಳಿಬರುತ್ತಿರುವ ಈ ಶಬ್ಧವು ನಮ್ಮವರನ್ನು ನಡುಗಿಸುತ್ತಿದೆ. ರೋಮಾಂಚಕಾರಿಯಾಗಿ ಕೇಳಿಬರುತ್ತಿರುವ ಈ ತುಮುಲ ಶಬ್ಧವು ಇಂದ್ರನನ್ನೂ ಕೂಡಿ ಈ ಮೂರು ಲೋಕಗಳನ್ನೂ ನುಂಗಿಬಿಡುತ್ತದೆಯೋ ಎಂದು ನನಗನ್ನಿಸುತ್ತಿದೆ. ಈ ನಿನಾದವು ದ್ರೋಣನು ಹತನಾಗಲು ಕೌರವರ ಸಹಾಯಾರ್ಥವಾಗಿ ಬರುತ್ತಿರುವ ವಜ್ರಧರ ವಾಸವನ ಭೈರವಧ್ವನಿಯಾಗಿರಬಹುದು ಎಂದು ನನಗೆ ಅನ್ನಿಸುತ್ತಿದೆ. ಅಲ್ಲಿಯ ಆ ಸುಭೀಷಣ ಜೋರಾಗಿರುವ ನಾದವನ್ನು ಕೇಳಿ ಸಂವಿಗ್ನರಾದ ನಮ್ಮ ಮಹಾರಥರ ಮತ್ತು ಆನೆಗಳ ರೋಮಗಳು ನಿಮಿರಿನಿಂತಿವೆ! ಚದುರಿಹೋಗಿದ್ದ ಸೇನೆಗಳನ್ನು ಒಂದುಗೂಡಿಸಿ ಯುದ್ಧಕ್ಕಾಗಿ ದೇವೇಶ್ವರನಂತೆ ಬರುತ್ತಿರುವ ಕೌರವರ ಈ ಮಹಾರಥನ್ಯಾರು?”

ಅರ್ಜುನನು ಹೇಳಿದನು:

“ರಾಜನ್! ಶಸ್ತ್ರಸಂನ್ಯಾಸಮಾಡಿದ ಗುರುವು ಹತನಾದ ನಂತರ ಧಾರ್ತರಾಷ್ಟ್ರರನ್ನು ಪುನಃ ಒಂದುಗೂಡಿಸಿ ಗರ್ಜಿಸುತ್ತಿರುವವನ್ಯಾರೆಂದು, ಯಾರ ವೀರ್ಯವನ್ನು

ಉಪಾಶ್ರಯಿಸಿ ತಮ್ಮನ್ನು ಈ ಉಗ್ರ ಕರ್ಮಕ್ಕೆ ಧೈರ್ಯವನ್ನು ತಳೆದು ಮೇಲೇರಿಸಿಕೊಂಡು ಕೌರವರು ಶಂಖಗಳನ್ನು ಊದುತ್ತಿರುವವರು ಎಂದು ನಿನಗೆ ಸಂಶಯವಾಗುತ್ತಿದೆಯಲ್ಲವೇ? ಮದಿಸಿದ ಆನೆಯ ನಡುಗೆಯುಳ್ಳ, ಕುರುಗಳಿಗೆ ಅಭಯಂಕರನಾದ, ಶ್ರೀಮಂತನಾದ ಆ ಉಗ್ರಕರ್ಮಿ ಮಹಾಬಾಹುವು ಯಾರೆಂದು ನಿನಗೆ ಹೇಳುತ್ತೇನೆ. ಕೇಳು! ಯಾರು ಹುಟ್ಟಿದೊಡನೆಯೇ ದ್ರೋಣನು ಒಂದುಸಾವಿರ ಗೋವುಗಳನ್ನು ಯೋಗ್ಯ ಬ್ರಾಹ್ಮಣರಿಗೆ ದಾನಮಾಡಿದನೋ ಆ ಅಶ್ವತ್ಥಾಮನೇ ಹೀಗೆ ಗರ್ಜಿಸುತ್ತಿದ್ದಾನೆ! ಹುಟ್ಟಿದೊಡನೆಯ ಯಾವ ವೀರನು ಉಚ್ಛೈಃಶ್ರವದಂತೆ ಹೇಷಾರವ ಮಾಡಿ ಭೂಮಿಯನ್ನೂ ಮೂರು ಲೋಕಗಳನ್ನು ಕಂಪಿಸಿದನೋ, ಯಾರ ಹೇಷಾರವವನ್ನು ಕೇಳಿ ಅಂತರ್ಹಿತ ಭೂತಗಳು ಅವನಿಗೆ ಅಶ್ವತ್ಥಾಮ ಎಂಬ ಹೆಸರನ್ನಿಟ್ಟರೋ ಆ ಶೂರನೇ ಇಂದು ಗರ್ಜಿಸುತ್ತಿದ್ದಾನೆ! ಯಾರನ್ನು ಅನಾಥನಂತೆ ಅತ್ಯಂತಕ್ರೂರ ಕರ್ಮದಿಂದ ಪಾರ್ಷತನು ಆಕ್ರಮಣಿಸಿ ಸಂಹರಿಸಿದನೋ ಅವನ ನಾಥನೇ ಈಗ ರಣಾಂಗಣದಲ್ಲಿ ಉಪಸ್ಥಿತನಾಗಿದ್ದಾನೆ. ತನ್ನ ಪೌರುಷವು ಎಷ್ಟಿರುವುದೆಂದು

ತಿಳಿದಿರುವ ದ್ರೌಣಿಯು ನನ್ನ ಗುರುವಿನ ಮುಡಿಯನ್ನು ಹಿಡಿದು ಕೊಂದಿರುವವನನ್ನು ಖಂಡಿತವಾಗಿಯೂ ಕ್ಷಮಿಸುವುದಿಲ್ಲ!

ಧರ್ಮಜ್ಞನಾಗಿದ್ದರೂ ಸತ್ಪುರುಷನಾಗಿದ್ದರೂ ರಾಜ್ಯದ ಕಾರಣದಿಂದ ನೀನು ಗುರುವಿಗೆ ಸುಳ್ಳನ್ನು ಹೇಳಿ ಮೋಸಗೊಳಿಸಿ ಮಹಾ ಅಧರ್ಮವನ್ನು ಮಾಡಿರುವೆ! "ಈ ಪಾಂಡವನು ಸರ್ವಧರ್ಮೋಪಪನ್ನನು. ನನ್ನ ಶಿಷ್ಯನೂ ಕೂಡ. ಇವನು ಸುಳ್ಳು ಹೇಳುವುದಿಲ್ಲ" ಎಂಬ ದೃಢವಿಶ್ವಾಸವನ್ನು ಅವನು ನಿನ್ನಲ್ಲಿಟ್ಟಿದ್ದನು. ಆದರೆ ನೀನು ಸತ್ಯವೆಂಬ ಅಂಗಿಯನ್ನು ತೊಟ್ಟು ಅಶ್ವತ್ಥಾಮನ ಹೆಸರಿನವನು ಹತನಾದನೆಂಬ ಸುಳ್ಳನ್ನು ಆಚಾರ್ಯನಿಗೆ ಹೇಳಿ ಅನಂತರ ಕುಂಜರ ಎಂದು ಹೇಳಿದೆ! ಆಗ ಅವನು ಶಸ್ತ್ರವನ್ನು ಬಿಸುಟು ಮಮಕಾರವನ್ನು ತೊರೆದು ಬುದ್ಧಿಗೆಟ್ಟವನಾಗಿ ಅತ್ಯಂತ ವಿಹ್ವಲನಾದುದನ್ನು ನೀನೂ ನೋಡಿದೆ! ಹಾಗೆ ಶೋಕಾವಿಷ್ಟನಾಗಿ ಯುದ್ಧದಿಂದ ವಿಮುಖನಾಗಿದ್ದ ಆ ಪುತ್ರವತ್ಸಲ ಗುರುವು ಶಾಶ್ವತ ಧರ್ಮವನ್ನು ಬಿಸುಟ ಶಿಷ್ಯನಿಂದ ಘಾತಿತನಾದನು! ಶಸ್ತ್ರಗಳನ್ನು ಕೆಳಗಿಟ್ಟ ಗುರುವನ್ನು ಅಧರ್ಮದಿಂದ ಕೊಲ್ಲಿಸಿದ ನೀನು ಶಕ್ಯನಾದರೆ

ಅಮಾತ್ಯರೊಂದಿಗೆ ಈ ಪಾರ್ಷತನನ್ನು ರಕ್ಷಿಸು! ತಂದೆಯನ್ನು ಕಳೆದುಕೊಂಡು ಕ್ರುದ್ಧನಾಗಿರುವ ಆಚಾರ್ಯಪುತ್ರನಿಂದ ಗ್ರಸ್ತನಾಗಿರುವ ಪಾರ್ಷತನನ್ನು ಇಂದು ನಾವೆಲ್ಲ ಸೇರಿದರೂ ರಕ್ಷಿಸಲು ಶಕ್ಯರಾಗಿರಲಿಕ್ಕಿಲ್ಲ. ಇರುವ ಎಲ್ಲವುಗಳೊಡನೆ ಸೌಹಾರ್ದತೆಯಿಂದಿರುವ ಅಶ್ವತ್ಥಾಮನು ತನ್ನ ತಂದೆಯ ಮುಡಿಯನ್ನು ಹಿಡಿಯಲಾಯಿತು ಎಂದು ಕೇಳಿ ನಮ್ಮನ್ನು ರಣದಲ್ಲಿ ಇಂದು ಸುಡಲಿದ್ದಾನೆ. ಆಚಾರ್ಯನನ್ನು ಉಳಿಸಬೇಕೆಂಬ ಆಸೆಯಿಂದ ನಾನು ತುಂಬಾ ಕೂಗಿಕೊಳ್ಳುತ್ತಿದ್ದರೂ ನನ್ನ ಗುರುವು ಸ್ವಧರ್ಮವನ್ನು ತೊರೆದ ಶಿಷ್ಯನಿಂದ ಹತನಾಗಿಬಿಟ್ಟನು! ನಮ್ಮ ಆಯುಷ್ಯದಲ್ಲಿ ಬಹುಭಾಗವು ಕಳೆದುಹೋಗಿದೆ. ಸ್ವಲ್ಪವೇ ಉಳಿದುಕೊಂಡಿದೆ. ಈ ಸಮಯದಲ್ಲಿ ನಾವು ಮಹಾ ಅಧರ್ಮವನ್ನು ಮಾಡಿದ್ದೇವೆ, ಮತ್ತು ಉಳಿದ ಆಯುಷ್ಯವನ್ನು ಕಳಂಕಿತಗೊಳಿಸಿದ್ದೇವೆ. ನಿತ್ಯವೂ ತಂದೆಯಂತೆ ಸೌಹಾರ್ದದಿಂದಿದ್ದ, ಧರ್ಮದಲ್ಲಿ ತಂದೆಯಂತಿದ್ದ ಗುರುವನ್ನು ನಾವು ಅಲ್ಪಕಾಲದ ರಾಜ್ಯ ಕಾರಣದಿಂದಾಗಿ ಸಂಹರಿಸಿದೆವು! ತತ್ಪರರಾಗಿದ್ದ ಭೀಷ್ಮ-ದ್ರೋಣರಿಗೆ ಧೃತರಾಷ್ಟ್ರನು ತನ್ನ ಪುತ್ರರೊಂದಿಗೆ ಸರ್ವ ಪೃಥ್ವಿಯನ್ನೂ ಒಪ್ಪಿಸಿಬಿಟ್ಟಿದ್ದನು. ಆ

ವೃತ್ತಿಯನ್ನು ಪಡೆದು ಶತ್ರುಗಳಿಂದಲೂ ಸತತವಾಗಿ ಸತ್ಕೃತನಾಗಿದ್ದ ಆ ಗುರುವು ನನ್ನನ್ನು ತನ್ನ ಮಗನಿಗಿಂತಲೂ ಅಧಿಕವಾಗಿ ಸ್ವೀಕರಿಸಿದ್ದನು. ನಿನ್ನ ಮಾತಿನಿಂದ ದುಃಖಿತನಾದ ಅವನು ಯುದ್ಧದಲ್ಲಿ ಅಸ್ತ್ರವನ್ನು ತ್ಯಜಿಸಿ ಹತನಾದನು. ಯುದ್ಧಮಾಡುತ್ತಿರುವ ಅವನನ್ನು ಶತಕ್ರತುವು ಕೂಡ ಸಂಹರಿಸಲಾರನಾಗಿದ್ದನು. ನಿತ್ಯೋಪಕಾರಿಯಾಗಿದ್ದ ವೃದ್ಧ ಆಚಾರ್ಯನಿಗೆ ದ್ರೋಹವೆಸಗಿ ರಾಜ್ಯಕ್ಕಾಗಿ ಸಣ್ಣಬುದ್ಧಿಯವರಾದ ನಾವು ಅನಾರ್ಯರಂತೆ ಸಂಹರಿಸಿದೆವು! ನನ್ನ ಮೇಲಿನ ಪ್ರೇಮದಿಂದ ಗುರುವು “ಈ ವಾಸವಿಯು ಪುತ್ರನು ನನಗಾಗಿ ಸಹೋದರರು, ತಂದೆ, ಮತ್ತು ಜೀವ ಎಲ್ಲವನ್ನೂ ತ್ಯಜಿಸಬಲ್ಲನು” ಎಂದು ತಿಳಿದಿದ್ದನು. ರಾಜ್ಯದ ಆಸೆಯಿಂದ ಸಂಹರಿಸಲ್ಪಡುತ್ತಿದ್ದರೂ ನಾನು ಉಪೇಕ್ಷೆಯಿಂದಿದ್ದುಬಿಟ್ಟೆನು. ಅದರಿಂದಾಗಿ ನಾನು ತಲೆತಗ್ಗಿಸಿ ನರಕವನ್ನು ಅನುಭವಿಸುತ್ತಿದ್ದೇನೆ. ಬ್ರಾಹ್ಮಣನಾದ, ವೃದ್ಧನಾದ, ಆಚಾರ್ಯನಾದ, ಶಸ್ತ್ರವನ್ನು ತ್ಯಜಿಸಿದ್ದ ಮುನಿಯನ್ನು ರಾಜ್ಯಾರ್ಥವಾಗಿ ಸಂಹರಿಸಿದ ನನಗೆ ಸಾವೇ ಶ್ರೇಯಸ್ಸೆನಿಸುತ್ತದೆ. ಜೀವಿತವಾಗಿರುವುದಲ್ಲ!”

ಅರ್ಜುನನ ಆ ಮಾತನ್ನು ಕೇಳಿ ಮಹಾರಥರು ಯಾರೂ ಧನಂಜಯನಿಗೆ ಅಪ್ರಿಯವಾದ ಅಥವಾ ಪ್ರಿಯವಾದ ಏನನ್ನೂ ಹೇಳಲಿಲ್ಲ. ಆಗ ಕ್ರುದ್ಧ ಮಹಾಬಾಹು ಭೀಮಸೇನನು ಅರ್ಜುನನನ್ನು ಬೈಯುತ್ತಿರುವನೋ ಎನ್ನುವಂತೆ ಹೇಳಿದನು:

"ಪಾರ್ಥ ! ಅರಣ್ಯವನ್ನು ಸೇರಿರುವ ಧರ್ಮಸಂಹಿತ ಮುನಿಯಂತೆ ಮತ್ತು ದಂಡವನ್ನು ತೊರೆದ ಸಂಶಿತವ್ರತ ಬ್ರಾಹ್ಮಣನಂತೆ ಮಾತನಾಡುತ್ತಿರುವೆ ! ಸಂಕಟದಲ್ಲಿರುವ ತನ್ನನ್ನೂ ಸಂಕಟದಲ್ಲಿರುವವರನ್ನೂ ರಕ್ಷಿಸುವ, ಸ್ತ್ರೀಯರು ಮತ್ತು ಸಾಧುಗಳ ವಿಷಯದಲ್ಲಿ ಕ್ಷಮಾಭಾವದಿಂದಿರುವ ಕ್ಷತ್ರಿಯನು ಬೇಗನೆ ಭೂಮಿಯನ್ನೂ, ಧರ್ಮವನ್ನೂ, ಯಶಸ್ಸನ್ನೂ, ಸಂಪತ್ತನ್ನೂ ಪಡೆಯುತ್ತಾನೆ. ನೀನಾದರೋ ಕ್ಷತ್ರಿಯರ ಎಲ್ಲ ಗುಣಗಳಿಂದ ಕೂಡಿರುವೆ. ಕುಲೋದ್ಧಾರಕನಾಗಿರುವೆ. ಆದರೆ ಮೂರ್ಖನಂತೆ ಇಂದು ನೀನಾಡುವ ಈ ಮಾತು ನಿನಗೆ ಶೋಭಿಸುವುದಿಲ್ಲ. ನಿನ್ನ ಪರಾಕ್ರಮವು ಶಚೀಪತಿ ಶಕ್ರನ ಪರಾಕ್ರಮದಂತಿದೆ. ಮಹಾಸಾಗರವು ತೀರವನ್ನು ಅತಿಕ್ರಮಿಸದಂತೆ ನೀನು ಧರ್ಮವನ್ನು ಅತಿಕ್ರಮಿಸುವವನಲ್ಲ. ಹದಿಮೂರುವರ್ಷಗಳ

ಕೋಪವನ್ನು ಹಿಂದೆ ಸರಿಸಿ ಧರ್ಮವನ್ನೇ ಬಯಸಿರುವ ನಿನ್ನನ್ನು ಇಂದು ಯಾರು ತಾನೇ ಗೌರವಿಸುವುದಿಲ್ಲ? ಅದೃಷ್ಟವಶಾತ್ ನಿನ್ನ ಮನಸ್ಸು ಇಂದು ಸ್ವಧರ್ಮವನ್ನು ಅನುಸರಿಸಿದೆ. ಅದೃಷ್ಟವಶಾತ್ ನಿನ್ನ ಬುದ್ಧಿಯು ಸತತವೂ ದಯಾಪೂರ್ಣವಾಗಿದೆ. ಆದರೂ ಧರ್ಮಪ್ರವೃತ್ತನಾಗಿದ್ದವನ ರಾಜ್ಯವನ್ನು ಅಧರ್ಮದಿಂದ ಅಪಹರಿಸಲಾಯಿತು. ಶತ್ರುಗಳು ದ್ರೌಪದಿಯನ್ನು ಸಭೆಗೆ ಎಳೆದುತಂದು ಅಪಮಾನಿಸಿದರು. ಅನರ್ಹರಾಗಿದ್ದರೂ ನಮ್ಮನ್ನು ಪರಿವ್ರಾಜಕರಂತೆ ವಲ್ಕಲಜಿನಗಳನ್ನುಟ್ಟು ಹದಿಮೂರು ವರ್ಷ ವನದಲ್ಲಿರುವಂತೆ ಮಾಡಿದರು. ಇವೆಲ್ಲವೂ ಕೋಪಗೊಳ್ಳತಕ್ಕ ಸಂದರ್ಭಗಳಾಗಿದ್ದರೂ ಕೋಪಗೊಳ್ಳದೇ ಕ್ಷತ್ರಧರ್ಮವನ್ನು ಅನುಸರಿಸುತ್ತಿದ್ದ ನೀನು ಎಲ್ಲವನ್ನೂ ಅನುಸರಿಸಿದೆ. ಆ ಅಧರ್ಮಿಗಳನ್ನು ರಾಜ್ಯಕಳ್ಳರನ್ನು ಕ್ಷುದ್ರರನ್ನು ಅನುಯಾಯಿಗಳೊಂದಿಗೆ ಸಂಹರಿಸುತ್ತೇನೆ ಎಂದು ನೀನು ಹೇಳಿದುದರಿಂದ ನಾವು ಯುದ್ಧಕ್ಕಾಗಿ ಬಂದಿದ್ದೇವೆ. ಯಥಾಶಕ್ತಿಯಾಗಿ ನಾವು ಪರಿಶ್ರಮ ಪಡುತ್ತಿರುವಾಗ ಇಂದು ನೀನು ಯುದ್ಧದಿಂದ ಜಿಗುಪ್ಸಿತನಾದಂತಿದೆ! ನೀನು ಸ್ವಧರ್ಮವನ್ನು ತಿಳಿಯಲು ಇಚ್ಛಿಸುತ್ತಿಲ್ಲ. ನಿನ್ನ ಮಾತುಗಳು

ಸುಳ್ಳು. ಭಯಾರ್ದಿತರಾದ ನಮ್ಮ ಮರ್ಮಗಳನ್ನು ನಿನ್ನ ಮಾತುಗಳು ಕತ್ತರಿಸುತ್ತಿವೆ. ಗಾಯಗೊಂಡವರ ಗಾಯದಮೇಲೆ ಉಪ್ಪುಚೆಲ್ಲುವಂತೆ ನಿನ್ನ ಮಾತಿನ ಬಾಣಗಳು ನನ್ನ ಹೃದಯವನ್ನು ಸೀಳುತ್ತಿವೆ. ಪ್ರಶಂಸೆಗೆ ಅರ್ಹರಾದ ನಿನ್ನನ್ನು ಮತ್ತು ನಮ್ಮನ್ನು ಪ್ರಶಂಸಿಸದೇ ಇರುವುದು ಅತ್ಯಂತ ಅಧರ್ಮವೆಂದು ಧಾರ್ಮಿಕನಾದ ನಿನಗೂ ತಿಳಿಯುತ್ತಿಲ್ಲವಲ್ಲ! ನಿನ್ನ ಹದಿನಾರರಲ್ಲಿ ಒಂದು ಅಂಶಕ್ಕೂ ಸಮನಾಗಿರದ ಪ್ರಶಂಸೆಗೆ ಅರ್ಹರಲ್ಲದವರನ್ನು ನೀನು ಪ್ರಶಂಸಿಸುತ್ತಿರುವೆ! ಸ್ವಯಂ ತಾನೇ ತನ್ನ ಕುರಿತು ಹೇಳಿಕೊಳ್ಳುವುದು ಮತ್ತು ಗುಣಸ್ತುತಿಮಾಡಿಕೊಳ್ಳುವುದು ಸರಿಯಲ್ಲ. ಆದರೂ ಕ್ರೋಧದಿಂದ ನಾನು ಈ ಭೂಮಿಯನ್ನು ಸೀಳಿಬಿಡಬಲ್ಲೆ. ಪರ್ವತಗಳನ್ನು ಪುಡಿಪುಡಿಮಾಡಬಲ್ಲೆ. ಭಯಂಕರ ಭಾರದ ಈ ಕಾಂಚನಮಾಲಿನೀ ಗದೆಯನ್ನು ಪ್ರಯೋಗಿಸಿ ಚಂಡಮಾರುತದಂತೆ ಪರ್ವತಗಳಂತಿರುವ ವೃಕ್ಷಗಳನ್ನೂ ಕಡಿದುರುಳಿಸಬಲ್ಲೆ! ನಿನ್ನ ಸಹೋದರನಾದ ನಾನು ಹೀಗಿದ್ದೇನೆಂದು ತಿಳಿದೂ ದ್ರೋಣಪುತ್ರನಿಗೋಸ್ಕರವಾಗಿ ನಮ್ಮಲ್ಲಿ ಭಯವನ್ನುಂಟುಮಾಡುವುದು ನಿನಗೆ ಸರಿಯಲ್ಲ! ಎಲ್ಲ ನರರ್ಷಭರೊಡನೆ ನೀನು ಇಲ್ಲಿಯೇ ನಿಲ್ಲು.

ಗದಾಪಾಣಿಯಾಗಿ ನಾನೊಬ್ಬನೇ ಈ ಮಹಾಯುದ್ಧವನ್ನು ಜಯಿಸುತ್ತೇನೆ!"

ಆಗ ಪಾಂಚಾಲರಾಜ ಪುತ್ರನು ಸಂಕ್ರುದ್ಧನಾದ ನರಹರಿಯು ಹಿರಣ್ಯಕಶಿಪುವಿಗೆ ಗರ್ಜಿಸಿ ಹೇಳುವಂತೆ ಹೇಳಿದನು:

"ಪಾರ್ಥ! ಯಾಜನ, ಅಧ್ಯಾಪನ, ದಾನ, ಯಜ್ಞ, ಪ್ರತಿಗ್ರಹ, ಮತ್ತು ಅಧ್ಯಯನ - ಈ ಆರು ವಿಪ್ರನ ಕರ್ಮಗಳೆಂದು ತಿಳಿದವರು ಹೇಳುತ್ತಾರೆ. ಇವುಗಳಲ್ಲಿ ಯಾವುದು ಅವನಲ್ಲಿತ್ತೆಂದು ನೀನು ದ್ರೋಣನನ್ನು ಕೊಂದಿದುದಕ್ಕೆ ನನ್ನನ್ನು ನಿಂದಿಸುತ್ತಿರುವೆ? ಸ್ವಧರ್ಮವನ್ನು ಅತಿಕ್ರಮಿಸಿ ಕ್ಷತ್ರಧರ್ಮವನ್ನು ಅನುಸರಿಸಿ ಆ ಕ್ಷುದ್ಧಕರ್ಮಿಯು ಅಮಾನುಷ ಅಸ್ತ್ರಗಳಿಂದ ನಮ್ಮವರನ್ನು ಸಂಹರಿಸುತ್ತಿದ್ದನು. ಬ್ರಾಹ್ಮಣನೆಂದು ಕರೆಯಿಸಿಕೊಂಡು ಅಸಹ್ಯ ಮಾಯೆಯಿಂದ ನಮ್ಮನ್ನು ಸಂಹರಿಸುತ್ತಿದ್ದ ಅವನನ್ನು ಇಂದು ಮಾಯೆಯಿಂದಲೇ ನಾವು ಸಂಹರಿಸಿದರೆ ಅದರಲ್ಲಿ ಸರಿಯಿಲ್ಲದೇ ಇದ್ದುದು ಯಾವುದಿದೆ? ಹಾಗಿದ್ದ ಅವನನ್ನು ಸಂಹರಿಸಲು ದ್ರೌಣಿಯು ರೋಷದಿಂದ ಭೈರವವಾಗಿ ಕೂಗಿಕೊಳ್ಳುತ್ತಿದ್ದರೆ ಅದರಲ್ಲಿ ನನ್ನದೇನು ಕಳೆದು

ಹೋಗುತ್ತದೆ? ಯುದ್ಧದ ನೆಪಮಾಡಿಕೊಂಡು ಕೌರವರನ್ನು ರಕ್ಷಿಸಲಾಗದೇ ದ್ರೌಣಿಯು ಒಂದುವೇಳೆ ಅವರನ್ನೇ ಸಂಹರಿಸಿದರೂ ನನಗೆ ಅದ್ಭುತವೆಂದೆನಿಸುವುದಿಲ್ಲ! ಧಾರ್ಮಿಕನಾಗಿದ್ದುಕೊಂಡು ಯಾವ ನನ್ನನ್ನು ಗುರುಘಾತಿನಿಯೆಂದು ನೀನು ಕರೆಯುತ್ತಿರುವೆಯೋ ಆ ನಾನು ಅದನ್ನು ಮಾಡಲೆಂದೇ ಅಗ್ನಿಯಿಂದ ಪಾಂಚಾಲ್ಯನ ಮಗನಾಗಿ ಉತ್ಪನ್ನನಾಗಿರುವೆ! ರಣದಲ್ಲಿ ಯಾರಿಗೆ ಮಾಡುವಂತಹುದು ಮತ್ತು ಮಾಡಬಾರದಂತಹುದು ಒಂದೇ ಸಮನಾಗಿದ್ದವೋ ಅವನು ಬ್ರಾಹ್ಮಣ ಅಥವಾ ಕ್ಷತ್ರಿಯನೆಂದು ನೀನು ಹೇಗೆ ಹೇಳುವೆ? ಅಸ್ತ್ರಗಳನ್ನು ತಿಳಿಯದವರನ್ನು ಯಾವನು ಕ್ರೋಧಮೂರ್ಚಿತನಾಗಿ ಬ್ರಹ್ಮಾಸ್ತ್ರಗಳಿಂದ ಸಂಹರಿಸುತ್ತಿದ್ದನೋ ಅಂಥವನನ್ನು ಸರ್ವೋಪಾಯಗಳಿಂದ ಏಕೆ ವಧಿಸಬಾರದು? ಧರ್ಮವಿದುಗಳು ತಮಗೆ ವಿಷಸಮರೆಂದು ವಿಧರ್ಮಿಗಳು ಹೇಳುತ್ತಾರೆ. ಅದನ್ನು ತಿಳಿದೂ ನೀನೇಕೆ ನನ್ನನ್ನು ನಿಂದಿಸುತ್ತಿರುವೆ? ಆ ಕ್ರೂರಿಯನ್ನು ನಾನು ರಥವನ್ನೇರಿಯೇ ಕೆಳಗುರುಳಿಸಿದೆನು. ಅಭಿನಂದಿಸಬೇಕಾದ ನನ್ನನ್ನು ಏಕೆ ಅಭಿನಂದಿಸುತ್ತಿಲ್ಲ? ಉರಿಯುತ್ತಿರುವ ಸೂರ್ಯನ ವಿಷದಂತೆ ಭಯಂಕರನಾಗಿದ್ದ

ದ್ರೋಣನ ಶಿರವನ್ನು ರಣದಲ್ಲಿ ತುಂಡರಿಸಿದುದನ್ನು ಪ್ರಶಂಸೆಗೆ ಯೋಗ್ಯವಾದರೂ ನೀನು ಏಕೆ ಪ್ರಶಂಸಿಸುತ್ತಿಲ್ಲ? ಅವನಾದರೋ ಯುದ್ಧದಲ್ಲಿ ನನ್ನವರನ್ನು ಮಾತ್ರ ಸಂಹರಿಸುತ್ತಿದ್ದನೇ ಹೊರತು ಬೇರೆ ಯಾರ ಬಾಂಧವರನ್ನೂ ಸಂಹರಿಸುತ್ತಿರಲಿಲ್ಲ. ಅವನ ಶಿರವನ್ನು ಕತ್ತರಿಸಿದರೂ ನನ್ನ ಕ್ರೋಧವು ತಣಿಯುತ್ತಿಲ್ಲ. ಜಯದ್ರಥನ ಶಿರವನ್ನು ಹೇಗೋ ಹಾಗೆ ಅವನ ಶಿರಸ್ಸನ್ನು ಕೂಡ ತಕ್ಷಣವೇ ನಿಷಾದರ ಪ್ರದೇಶದಲ್ಲಿ ಬೀಳುವಂತೆ ನಾನು ಮಾಡಲಿಲ್ಲವೆಂದು ನನ್ನ ಮರ್ಮಸ್ಥಾನಗಳು ಚುಚ್ಚುತ್ತಿವೆ! ಶತ್ರುಗಳನ್ನು ವಧಿಸದೇ ಇರುವುದು ಅಧರ್ಮವೆಂದು ಹೇಳುತ್ತಾರೆ. ಏಕೆಂದರೆ ಕ್ಷತ್ರಿಯನ ಧರ್ಮವೇ ಸಂಹರಿಸುವುದು. ಇನ್ನು ಬೇರೆ ಏನಿದೆ? ನಿನ್ನ ತಂದೆಯ ಸಖನಾದ ಶೂರ ಭಗದತ್ತನು ನಿನ್ನಿಂದ ಹೇಗೆ ಹತನಾದನೋ ಹಾಗೆ ಯುದ್ಧದಲ್ಲಿ ಈ ಶತ್ರುವೂ ಕೂಡ ನನ್ನಿಂದ ಧರ್ಮಪೂರ್ವಕವಾಗಿಯೇ ಹತನಾಗಿದ್ದಾನೆ. ರಣದಲ್ಲಿ ಪಿತಾಮಹನನ್ನು ಸಂಹರಿಸಿ ನಿನ್ನನ್ನು ಧರ್ಮಾತ್ಮನೆಂದು ತಿಳಿದುಕೊಂಡಿರುವ ನೀನು ನನ್ನಿಂದ ಶತ್ರುವು ಹತನಾಗಲು ಹೇಗೆ ಪಾಪವೆಂದೂ, ಧರ್ಮವಲ್ಲವೆಂದೂ ಅಭಿಪ್ರಾಯಪಡುವೆ? ಜ್ಯೇಷ್ಠ

ಪಾಂಡವನು ಸುಳ್ಳುಗಾರನಾಗಲಿಲ್ಲ. ಅಥವಾ ನಾನು ಅಧಾರ್ಮಿಕನಾಗಲಿಲ್ಲ. ಪಾಪಿಷ್ಟ ಆ ಶಿಷ್ಯದ್ರೋಹಿಯು ಹತನಾಗಿದ್ದಾನೆ. ಯುದ್ಧಮಾಡು. ವಿಜಯವು ನಿನ್ನದಾಗುತ್ತದೆ!”

ಕ್ರೂರಕರ್ಮಿ ದ್ರುಪದಪುತ್ರನ ಆ ಮಾತನ್ನು ಕೇಳಿ ಎಲ್ಲ ರಾಜರೂ ಸುಮ್ಮನಾಗಿದ್ದರು. ಅರ್ಜುನನಾದರೋ ಕಡೆಗಣ್ಣಿನಿಂದ ಪಾರ್ಷತನನ್ನು ನೋಡಿ ಕಣ್ಣೀರು ತುಂಬಿ ನಿಟ್ಟುಸಿರು ಬಿಡುತ್ತಾ “ಧಿಕ್ಕಾರ! ಧಿಕ್ಕಾರ! ಧಿಕ್ಕಾರ!” ಎಂದು ನುಡಿದನು. ಯುಧಿಷ್ಠಿರ, ಭೀಮ, ಯಮಳರು ಮತ್ತು ಕೃಷ್ಣನೂ ಕೂಡ ತಲೆ ತಗ್ಗಿಸಿ ಕುಳಿತಿರಲು ಸಾತ್ಯಕಿಯು ಹೇಳಿದನು:

“ಅಮಂಗಳಕರವಾಗಿ ಮಾತನಾಡುವ ಈ ಪಾಪಪುರುಷ, ನರಾಧಮನನ್ನು ಶೀಘ್ರವಾಗಿ ಕೊಲ್ಲುವ ಪುರುಷನ್ಯಾರೂ ಇಲ್ಲಿ ಇಲ್ಲವೇ? ಕ್ಷುದ್ರ! ಗುರುವನ್ನು ನಿಂದಿಸುವ ನಿನ್ನ ನಾಲಿಗೆ ಮತ್ತು ತಲೆಯು ಏಕೆ ನೂರು ಚೂರುಗಳಾಗಿ ಸೀಳಿಹೋಗುತ್ತಿಲ್ಲ? ಈ ಅಧರ್ಮದಿಂದ ನಿನ್ನ ಪತನವೇಕೆ ಇನ್ನೂ ಆಗಿಲ್ಲ? ಪಾಪಕರ್ಮವನ್ನೆಸಗಿ ಜನಸಂಸದಿಯಲ್ಲಿ ಆತ್ಮಶ್ಲಾಘನೆ ಮಾಡಿಕೊಳ್ಳುತ್ತಿರುವ ನೀನು ಎಲ್ಲ ಅಂಧಕ-ವೃಷ್ಣಿಯರ ಮತ್ತು ಪಾರ್ಥರ ಅವಹೇಳನೆಗೆ ಪಾತ್ರನಾಗಿರುವೆ! ಆ ರೀತಿ

ಮಾಡಬಾರದುದನ್ನು ಮಾಡಿ ಪುನಃ ಗುರುವನ್ನು ನಿಂದಿಸುತ್ತಿರುವ ನೀನು ವಧ್ಯನು. ಮುಹೂರ್ತಕಾಲವೂ ನೀನು ಜೀವಿಸಿರುವುದರಲ್ಲಿ ಅರ್ಥವಿಲ್ಲ! ಪುರುಷಾಧಮ! ನೀನಲ್ಲದೇ ಬೇರೆ ಯಾರು ತಾನೇ ಧರ್ಮಾತ್ಮನೂ ಸಾಧುವೂ ಆದ ಗುರುವಿನ ಶಿಖೆಯನ್ನು ಹಿಡಿದು ವಧಿಸಿಯಾನು? ಕುಲಗೇಡಿಯಾದ ನಿನ್ನನ್ನು ಪಡೆದು ನಿನ್ನ ಹಿಂದಿನ ಏಳು ತಲೆಮಾರಿನ ಬಾಂಧವರೂ ಯಶಸ್ಸಿನಿಂದ ಪರಿತ್ಯಕ್ತರಾಗಿ ನರಕಕ್ಕೆ ಬಿದ್ದಿರಬಹುದು. ಭೀಷ್ಮನ ಕುರಿತು ನರರ್ಷಭ ಪಾರ್ಥನಿಗೆ ಹೇಳುತ್ತಿರುವೆಯಲ್ಲವೇ? ಆ ಮಹಾತ್ಮ ಭೀಷ್ಮನು ಸ್ವಯಂ ತಾನೇ ತನ್ನ ಅಂತ್ಯವು ಹೀಗಾಗಬೇಕೆಂದು ನಿರ್ದೇಶಿಸಿರಲಿಲ್ಲವೇ? ಭೀಷ್ಮನನ್ನು ಕೂಡ ನಿನ್ನ ಪಾಪಕಾರಿ ಸಹೋದರನೇ ಸಂಹರಿಸಿದನು! ನೀವಿಬ್ಬರು ಪಾಂಚಾಲಪುತ್ರರ ಹೊರತಾಗಿ ಪಾಪಿಷ್ಟರಾಗಿರುವವರು ಈ ಭುಮಿಯಲ್ಲಿಯೇ ಬೇರೆ ಯಾರಿಲ್ಲ! ಅವನೂ ಕೂಡ ಭೀಷ್ಮನ ಅಂತಕನಾಗಿ ನಿನ್ನ ತಂದೆಯಿಂದ ಉತ್ಪನ್ನನಾಗಿಲ್ಲವೇ? ಆ ಮಹಾತ್ಮನ ಮೃತ್ಯುವಾದ ಶಿಖಂಡಿಯನ್ನು ನಿನ್ನ ತಂದೆಯೇ ರಕ್ಷಿಸಿದನು. ಸಹೋದರ ಶಿಖಂಡಿಯೊಂದಿಗೆ ನಿನ್ನನ್ನು ಪಡೆದ ಪಾಂಚಾಲರು ಅಧರ್ಮಿಗಳೂ, ಕ್ಷುದ್ರರೂ, ಮಿತ್ರ-

ಗುರುದ್ರೋಹಿಗಳೆಂದೆನಿಸಿಕೊಂಡು ಸರ್ವ ಸಾಧುಗಳ ಧಿಕ್ಕಾರಕ್ಕೆ ಪಾತ್ರರಾಗಿದ್ದಾರೆ. ಒಂದುವೇಳೆ ಈ ರೀತಿಯ ಮಾತನ್ನು ಪುನಃ ನನ್ನ ಸಮೀಪದಲ್ಲಿ ನೀನು ಹೇಳಿದ್ದೇ ಆದರೆ ವಜ್ರದಂತಿರುವ ಗದೆಯಿಂದ ನಿನ್ನ ಶಿರವನ್ನು ಕೆಳಗುರುಳಿಸುತ್ತೇನೆ!"

ಈ ರೀತಿ ಕ್ರೂರಶಬ್ಧಗಳಿಂದ ಸಾತ್ವತನು ಪಾರ್ಷತನನ್ನು ಆಕ್ಷೇಪಿಸಲು, ಪರಮಕ್ರುದ್ಧನಾದ ಧೃಷ್ಟದ್ಯುಮ್ನನು ನಗುತ್ತಿರುವನೋ ಎನ್ನುವಂತೆ ಹೇಳಿದನು:

"ಮಾಧವ! ನಿನ್ನ ಮಾತನ್ನು ಕೇಳುತ್ತಲೇ ಇದ್ದೇನೆ. ಹೇಳಿಕೊಂಡಿರಲೆಂದು ಕ್ಷಮಿಸುತ್ತಲೂ ಇದ್ದೇನೆ. ಆದರೆ ಶುಭ ಸಾಧುಪುರುಷರನ್ನು ಅವಹೇಳನಮಾಡುವುದು ಅನಾರ್ಯವಾದುದು. ಲೋಕದಲ್ಲಿ ಕ್ಷಮೆಗೆ ಪ್ರಾಶಸ್ತ್ಯವಿದೆ. ಆದರೆ ಪಾಪಿಷ್ಟರು ಕ್ಷಮೆಗೆ ಅರ್ಹರರಲ್ಲ. ಕ್ಷಮಾವಂತನೇ ಸೋತುಹೋದನೆಂದು ಪಾಪಾತ್ಮರು ತಿಳಿದುಕೊಂಡುಬಿಡುತ್ತಾರೆ. ನೀನು ಸ್ವತಃ ಕ್ಷುದ್ರಸಮಾಚಾರದವನು. ಕಾಲುಗುರಿನ ತುದಿಯಿಂದ ಹಿಡಿದು ಶಿಖಾಗ್ರದವರೆಗೂ ನಿನ್ನಲ್ಲಿ ಪಾಪವೇ ತುಂಬಿದೆ.

ನೀಚಾತ್ಮನಾದ ನೀನು ಮಾತನಾಡಲು ಬಯಸಿ ಮಾತನಾಡುತ್ತಿರುವೆಯಷ್ಟೇ! ಭುಜವು ತುಂಡಾಗಿ ಪ್ರಾಯಗತನಾಗಿದ್ದ ಭೂರಿಶ್ರವನನ್ನು ಇತರರು ತಡೆಹಿಡಿಯುತ್ತಿದ್ದರೂ ನೀನು ಸಂಹರಿಸಿದೆ. ಅದಕ್ಕಿಂತ ಹೆಚ್ಚಿನ ಪಾಪವು ಯಾವುದಿದೆ? ಯುದ್ಧದಲ್ಲಿ ದ್ರೋಣನನ್ನು ದಿವ್ಯಾಸ್ತ್ರಗಳಿಂದ ಆಕ್ರಮಣಿಸುತ್ತಿದ್ದ ನಾನು ಶಸ್ತ್ರಗಳನ್ನು ಬಿಸುಟ ಅವನನ್ನು ಕೊಂದಿದುರಲ್ಲಿ ಕ್ರೂರ ದುಷ್ಕೃತವೇನಿದೆ? ಸಾತ್ಯಕೀ! ಯುದ್ಧಮಾಡದೇ ಇದ್ದ, ಪ್ರಾಯಗತನಾಗಿದ್ದ, ಬಾಹುವು ತುಂಡಾಗಿರುವ ಮುನಿಯನ್ನು ಕೊಂದು ಇತರರಿಗೆ ಏಕೆ ಉಪದೇಶಿಸುತ್ತಿರುವೆ? ಆ ವೀರ್ಯವಾನನು ನಿನ್ನನ್ನು ನೆಲಕ್ಕೆ ಕೆಡವಿ ಎಳೆದಾಡುತ್ತಿರುವಾಗ ನೀನು ಪುರುಷಸತ್ತಮನಾಗಿಕೊಂಡು ಅವನನ್ನು ಏಕೆ ಆಗ ಕೊಲ್ಲಲಿಲ್ಲ? ಮೊದಲೇ ಪಾರ್ಥನಿಂದ ಸೋತಿದ್ದ ಪ್ರತಾಪವಾನ್ ಶೂರ ಸೌಮದತ್ತಿಯನ್ನು ಪುನಃ ನೀನು ಅನಾರ್ಯನಂತೆ ಸಂಹರಿಸಿದೆ! ಆದರೆ ನಾನು ಮಾತ್ರ ಎಲ್ಲೆಲ್ಲಿ ದ್ರೋಣನು ಸಹಸ್ರಾರು ಬಾಣಗಳನ್ನು ಎರಚಿ ಪಾಂಡವ ಸೇನೆಯನ್ನು ಪಲಾಯನಗೊಳಿಸುತ್ತಿದ್ದನೋ ಅಲ್ಲಲ್ಲಿಗೆ ಹೋಗಿ ಅವನೊಂದಿಗೆ ಹೋರಾಡುತ್ತಿದ್ದೆನು. ಸ್ವಯಂ ನೀನೇ ಈ

ರೀತಿಯ ಚಾಂಡಾಲಕೃತ್ಯವನ್ನೆಸಗಿ ಹೇಗೆ ತಾನೆ ನೀನು ನನ್ನ ಕುರಿತು ಕ್ರೂರವಾಗಿ ಹೀಗೆ ಮಾತನಾಡಲು ಬಯಸುವೆ? ಈ ರೀತಿಯ ಉಗ್ರಕರ್ಮವನ್ನು ಮಾಡಿದವನು ನೀನೇ. ನಾನಲ್ಲ! ಪಾಪಕರ್ಮಗಳೆಲ್ಲವೂ ನಿನ್ನಲ್ಲಿಯೇ ನೆಲೆಸಿವೆ. ಪುನಃ ಮಾತನಾಡಬೇಡ! ಸುಮ್ಮನಾಗು! ನನಗೆ ನೀನು ಏನು ಹೇಳಲಿಚ್ಛಿಸಿದ್ದೀಯೋ ಅದಕ್ಕೂ ನೀಚವಾದ ಉತ್ತರವಿದೆ! ಮೂರ್ಖತನದಿಂದ ನನ್ನ ಕುರಿತು ಪುನಃ ಈ ರೀತಿಯ ಕಟುನುಡಿಗಳನ್ನಾಡಿದರೆ ಯುದ್ಧದಲ್ಲಿ ಬಾಣಗಳಿಂದ ನಿನ್ನನ್ನು ವೈವಸ್ವತಕ್ಷಯಕ್ಕೆ ಕಳುಹಿಸುತ್ತೇನೆ! ಮೂರ್ಖ! ಕೇವಲ ಧರ್ಮದಿಂದ ಜಯಗಳಿಸಲು ಶಕ್ಯವಿಲ್ಲ. ಅವರೂ ಕೂಡ ಹೇಗೆ ಅಧರ್ಮದಿಂದ ನಡೆದುಕೊಂಡಿದ್ದರು ಎನ್ನುವುದನ್ನು ಕೇಳು! ಹಿಂದೆ ಅವರು ಪಾಂಡವ ಯುಧಿಷ್ಠಿರನನ್ನು ಅಧರ್ಮದಿಂದಲೇ ವಂಚಿಸಿದರು. ಹಾಗೆಯೇ ಅಧರ್ಮದಿಂದ ದ್ರೌಪದಿಯನ್ನು ಕೂಡ ಕಾಡಿದರು. ಕೃಷ್ಣೆಯೊಡನೆ ಪಾಂಡವರೆಲ್ಲರೂ ವನದಲ್ಲಿ ಪರಿವ್ರಾಜಕರ ಜೀವನ ನಡೆಸಿದರು. ಈ ಎಲ್ಲ ಕಷ್ಟವನ್ನೂ ಅವರಿಗೆ ಅಧರ್ಮದಿಂದಲೇ ನೀಡಲಾಯಿತಲ್ಲವೇ? ಮದ್ರರಾಜನನ್ನು ಶತ್ರುಗಳು ಅಧರ್ಮದಿಂದಲೇ ತಮ್ಮೊಡನೆ ಸೆಳೆದುಕೊಳ್ಳಲಿಲ್ಲವೇ? ನಮ್ಮ ಕಡೆಯ ಅಧರ್ಮದಿಂದ

ಕುರುಪಿತಾಮಹ ಭೀಷ್ಮನು ಹತನಾದನು. ನಿನ್ನ ಅಧರ್ಮದಿಂದಾಗಿ ಧರ್ಮವಿದ ಭೂರಿಶ್ರವನು ಹತನಾದನು. ಹೀಗೆ ಯುದ್ಧದಲ್ಲಿ ಜಯವನ್ನು ಪಾಲಿಸಲೋಸುಗ ಪಾಂಡವರು ಮತ್ತು ಅವರ ಶತ್ರುಗಳು ಧರ್ಮಜ್ಞರಾಗಿದ್ದರೂ ಅಧರ್ಮವನ್ನು ಆಚರಿಸಿರುವರು. ಪರಮ ಧರ್ಮವು ಯಾವುದೆನ್ನುವುದೆಂದು ತಿಳಿಯಲು ಕಷ್ಟ. ಹಾಗೆಯೇ ಅಧರ್ಮವೇನೆಂದು ತಿಳಿಯುವುದೂ ಕಷ್ಟವೇ ಸರಿ. ಯುದ್ಧಮಾಡು! ಸುಮ್ಮನೇ ಕೌರವರೊಂದಿಗೆ ಪಿತೃಲೋಕಗಳಿಗೆ ಹೋಗಬೇಡ!”

ಇವೇ ಮೊದಲಾದ ಕ್ರೂರ ಕಠಿನ ಮಾತುಗಳನ್ನು ಕೇಳಿದ ಸಾತ್ಯಕಿಯ ಮೈ ನಡುಗಿತು. ಅದನ್ನು ಕೇಳಿ ಕ್ರೋಧದಿಂದ ಕಣ್ಣುಗಳು ಕೆಂಪಾಗಲು ಸಾತ್ಯಕಿಯು ಧನುಸ್ಸನ್ನು ರಥದಲ್ಲಿಯೇ ಇರಿಸಿ ಸರ್ಪದಂತೆ ಭುಸುಗುಟ್ಟುತ್ತಾ ಗದೆಯೊಂದನ್ನು ಎತ್ತಿಕೊಂಡನು. ಆಗ ಪಾಂಚಾಲ್ಯನ ಎದುರಾಗಿ ಅತ್ಯಂತ ಕೋಪದಿಂದ

“ಇನ್ನು ನಿನ್ನೊಡನೆ ಕಠೋರವಾದ ಮಾತಗಳನ್ನಾಡುವುದಿಲ್ಲ! ವಧಾರ್ಹನಾದ ನಿನ್ನನ್ನು ಈಗಲೇ ಕೊಂದುಬಿಡುತ್ತೇನೆ!”

ಎಂದನು. ತಕ್ಷಣವೇ ವಾಸುದೇವನಿಂದ ಚೋದಿತನಾದ ಮಹಾಬಲ

ಭೀಮಸೇನನು ರಥದಿಂದ ಹಾರಿ ತನ್ನ ಎರಡೂ ಬಾಹುಗಳಿಂದ ಹೀಗೆ ಸಂಕ್ರುದ್ಧನಾಗಿ ಪಾಂಚಾಲ್ಯನ ಮೇಲೆ ಬೀಳುತ್ತಿದ್ದ ಅಂತಕನಿಗೂ ಅಂತಕನಂತಿದ್ದ ಆ ಮಹಾಬಲ ಅಮರ್ಷಣನನ್ನು ಭದ್ರವಾಗಿ ಹಿಡಿದು ಮುಂದೆಹೋಗದಂತೆ ತಡೆದನು. ಹಾಗೆ ಕ್ರುದ್ಧನಾಗಿ ಓಡಿಹೋಗುತ್ತಿದ್ದ ಸಾತ್ಯಕಿಯನ್ನು ಬಲಶಾಲಿ ಪಾಂಡವನು ಹಿಡಿದು ತಡೆದಿದ್ದರೂ ಸಾತ್ಯಕಿಯು ಬಲಾತ್ಕಾರವಾಗಿ ಅವನನ್ನೇ ಎಳೆದುಕೊಂಡು ಮುಂದೆ ಸಾಗುತ್ತಿದ್ದನು. ಎರಡು ಪಾದಗಳನ್ನೂ ಭದ್ರವಾಗಿ ಊರಿಕೊಂಡು ನಿಂತಿದ್ದ ಭೀಮನು ಬಲಿಷ್ಠರಲ್ಲಿ ಶ್ರೇಷ್ಠನಾಗಿದ್ದ ಶಿನಿಪುಂಗವನನ್ನು ಆರನೆಯ ಹೆಜ್ಜೆಯನ್ನಿಡುವುದರೊಳಗೆ ತಡೆದು ನಿಲ್ಲಿಸಿದನು.

ಅಷ್ಟರಲ್ಲಿ ಸಹದೇವನು ತನ್ನ ರಥದಿಂದಿಳಿದು ಬಲಶಾಲಿ ಭೀಮನಿಂದ ಹಿಡಿಯಲ್ಪಟ್ಟಿದ್ದ ಸಾತ್ಯಕಿಗೆ ಮಧುರವಾದ ಈ ಮಾತುಗಳನ್ನಾಡಿದನು:

> “ಪುರುಷವ್ಯಾಘ್ರ! ಮಾಧವ! ನಮಗೆ ಅಂಧಕ-ವೃಷ್ಣಿಗಳನ್ನೂ ಪಾಂಚಾಲರನ್ನೂ ಬಿಟ್ಟರೆ ಬೇರೆ ಯಾವ ಮಿತ್ರರೂ ಇಲ್ಲ. ಹಾಗೆಯೇ ಅಂಧಕ-ವೃಷ್ಣಿಗಳಿಗೆ ಅದರಲ್ಲೂ ವಿಶೇಷವಾಗಿ ನಿನಗೆ ಮತ್ತು ಕೃಷ್ಣನಿಗೆ ನಮ್ಮನ್ನು ಬಿಟ್ಟು ಬೇರೆ ಯಾವ ಮಿತ್ರರೂ ಇಲ್ಲ. ಪಾಂಚಾಲರಿಗೆ ಕೂಡ ಅವರು ಸಮುದ್ರಪರ್ಯಂತವಾಗಿ ಹುಡುಕಿದರೂ ಪಾಂಡವ-

ವೃಷ್ಣಿಗಳಿಗಿಂತಲೂ ಉತ್ತಮ ಮಿತ್ರರು ಯಾರೂ ಇರುವುದಿಲ್ಲ. ನೀನು ನಮ್ಮನ್ನು ಎಂತಹ ಮಿತ್ರರೆಂದು ಭಾವಿಸುತ್ತಿರುವೆಯೋ ನಾವೂ ಸಹ ನಿನ್ನನ್ನು ಅಂತಹ ಮಿತ್ರನೆಂದೇ ಭಾವಿಸಿರುತ್ತೇವೆ. ನೀವು ನಮಗೆ ಹೇಗೋ ನಾವೂ ಸಹ ನಿಮಗೆ ಹಾಗೆಯೇ ಇದ್ದೇವೆ. ಸರ್ವಧರ್ಮಗಳನ್ನೂ ತಿಳಿದಿರುವವನೇ! ಮಿತ್ರಧರ್ಮವನ್ನು ಸ್ಮರಿಸಿಕೊಂಡು ಪಾಂಚಾಲ್ಯನ ಮೇಲಿರುವ ಸಿಟ್ಟನ್ನು ತಡೆಹಿಡಿದು ಶಾಂತನಾಗು! ಪಾರ್ಷತನನ್ನು ನೀನು ಕ್ಷಮಿಸಿಬಿಡು. ಪಾರ್ಷತನೂ ನಿನ್ನನ್ನು ಕ್ಷಮಿಸಿಬಿಡಲಿ. ನೀವಿಬ್ಬರೂ ಕ್ಷಮಾವಂತರಾಗಿರೆಂದು ನಾವು ಆಶಿಸುತ್ತೇವೆ. ಕ್ಷಮೆಗಿಂತಲೂ ಅಧಿಕವಾದುದು ಬೇರೆ ಏನಿದೆ?”

ಸಹದೇವನು ಹೀಗೆ ಶೈನೇಯನನ್ನು ಶಾಂತಗೊಳಿಸುತ್ತಿರಲು ಪಾಂಚಾಲರಾಜನ ಮಗನು ನಗುತ್ತಾ ಹೇಳಿದನು:

“ಭೀಮ! ಯುದ್ಧಮದಾನ್ವಿತ ಈ ಶಿನಿಯ ಮೊಮ್ಮಗನನ್ನು ಬಿಟ್ಟುಬಿಡು! ಚಂಡಮಾರುತವು ಪರ್ವತವನ್ನು ಹೇಗೋ ಹಾಗೆ ಇವನು ನನ್ನನ್ನು ಎದುರಿಸಲಿ! ಈಗಲೇ ನಿಶಿತ ಬಾಣಗಳಿಂದ ಈ ಯಾದವನ ಕೋಪವನ್ನು, ಯುದ್ಧದಲ್ಲಿರುವ ಶ್ರದ್ಧೆಯನ್ನೂ ಮತ್ತು ಜೀವಿತವನ್ನೂ ಅಡಗಿಸುತ್ತೇನೆ! ಕೌರವರು

ಮಹಾಸೇನೆಯೊಂದಿಗೆ ಪಾಂಡುಪುತ್ರರೊಡನೆ ಯುದ್ಧಕ್ಕಾಗಿ ಬರುತ್ತಿರುವ ಈ ಸಮಯದಲ್ಲಿ ನಾನಾದರೂ ಏನುತಾನೇ ಮಾಡಬಲ್ಲೆನು? ಅಥವಾ ಫಲ್ಗುನನು ಯುದ್ಧದಲ್ಲಿ ಅವರೆಲ್ಲರನ್ನೂ ತಡೆಯುತ್ತಾನೆ. ನಾನಾದರೋ ಸಾಯಕಗಳಿಂದ ಇವನ ತಲೆಯನ್ನು ನೆಲಕ್ಕೆ ಬೀಳಿಸುತ್ತೇನೆ! ಇವನು ನನ್ನನ್ನೂ ಯುದ್ಧದಲ್ಲಿ ಭುಜವನ್ನು ಕಳೆದುಕೊಂಡ ಭೂರಿಶ್ರವಸನೆಂದೇ ಭಾವಿಸಿದ್ದಾನೆ. ಇವನನ್ನು ಬಿಟ್ಟುಬಿಡು! ಇವನು ನನ್ನನ್ನು ಕೊಲ್ಲುತ್ತಾನೆ ಅಥವಾ ನಾನು ಇವನನ್ನು ಕೊಲ್ಲುತ್ತೇನೆ!”

ಪಾಂಚಾಲ್ಯನ ಮಾತುಗಳನ್ನು ಕೇಳಿ ಸಾತ್ಯಕಿಯು ಸರ್ಪದಂತೆ ದೀರ್ಘವಾಗಿ ನಿಟ್ಟುಸಿರುಬಿಡುತ್ತಾ ಭೀಮನ ಬಾಹುಬಂಧನದಿಂದ ಬಿಡಿಸಿಕೊಳ್ಳಲು ಚಡಪಡಿಸುತ್ತಿದ್ದನು. ಆಗ ವಾಸುದೇವ ಮತ್ತು ಧರ್ಮರಾಜರು ತ್ವರೆಮಾಡಿ ಮಹಾ ಪ್ರಯತ್ನದಿಂದ ಆ ಇಬ್ಬರು ವೀರರನ್ನೂ ತಡೆದರು. ಕ್ರೋಧದಿಂದ ಕಣ್ಣುಗಳು ಕೆಂಪಾಗಿದ್ದ ಆ ಪರಮೇಷ್ವಾಸ ಕ್ಷತ್ರಿಯರ್ಷಭರಿಬ್ಬರೂ ತಮ್ಮ ಜಗಳವನ್ನು ನಿಲ್ಲಿಸಿ ಎದುರಾಗಿ ಬರುತ್ತಿರುವ ಶತ್ರುಸೇನೆಯೊಡನೆ ಯುದ್ಧಮಾಡತೊಡಗಿದರು.

## ಅಶ್ವತ್ಥಾಮನಿಂದ ನಾರಾಯಣಾಸ್ತ್ರ ಪ್ರಯೋಗ;

## ಪಾಂಡವಸೇನೆಯ ಅಸ್ತ್ರತ್ಯಾಗ

ಅನಂತರ ದ್ರೋಣನಂದನನು ಯುಗಾಂತದಲ್ಲಿ ಸರ್ವಭೂತಗಳನ್ನೂ ಕೊನೆಗೊಳಿಸುವ ಅಂತಕನಂತೆ ಶತ್ರುಗಳೊಂದಿಗೆ ಕದನವನ್ನು ನಡೆಸಿದನು. ಅವನು ಭಲ್ಲಗಳಿಂದ ಶತ್ರುಗಳನ್ನು ಸಂಹರಿಸಿ ದೇಹಗಳ ಪರ್ವತವನ್ನೇ ಸೃಷ್ಟಿಸಿದನು. ಧ್ವಜಗಳೇ ಆ ಪರ್ವತದ ವೃಕ್ಷಗಳಾಗಿದ್ದವು, ಶಸ್ತ್ರಗಳೇ ಶಿಖರಗಳಾಗಿದ್ದವು, ಸತ್ತುಹೋಗಿದ್ದ ಆನೆಗಳೇ ಕಲ್ಲುಬಂಡೆಗಳಾಗಿದ್ದವು, ಅಶ್ವಗಳು ಕಿಂಪುರುಷರ ಗುಂಪುಗಳಾಗಿದ್ದವು, ಭತ್ತಳಿಕೆಗಳು ಲತಾವಾಟಿಕೆಗಳಾಗಿದ್ದವು, ಶೂಲಗಳು ಮಾಂಸಾಹಾರಿ ಪಕ್ಷಿಗಳ ಸಂಕುಲಗಳಾಗಿದ್ದವು ಮತ್ತು ಭೂತಯಕ್ಷಗಣಾಕುಲಗಳಾಗಿದ್ದವು. ಆಗ ಮಹಾವೇಗದಿಂದ ಆ ನರರ್ಷಭನು ಗರ್ಜಿಸಿ ತನ್ನ ಪ್ರತಿಜ್ಞೆಯನ್ನು ಪುನಃ ದುರ್ಯೋಧನನಿಗೆ ಕೇಳಿಸಿದನು.

> “ಯುದ್ಧಮಾಡುತ್ತಿದ್ದ ಆಚಾರ್ಯನನ್ನು ಧರ್ಮದ ಅಂಗಿಯನ್ನು ತೊಟ್ಟು ಯುಧಿಷ್ಠಿರನು ಶಸ್ತ್ರವನ್ನು ಬಿಡು! ಎಂದು ಹೇಳಿದುದಕ್ಕಾಗಿ ಅವನು ನೋಡುತ್ತಿರುವಂತೆಯೆ ಅವನ ಸೇನೆಯನ್ನು ಪಲಾಯನಗೊಳಿಸುತ್ತೇನೆ! ಅವರೆಲ್ಲರನ್ನೂ ಓಡಿಸಿ ನಂತರ ಆ ಪಾಪಿ ಪಾಂಚಾಲ್ಯನನ್ನು ವಧಿಸುತ್ತೇನೆ ಕೂಡ!

> ನನ್ನೊಡನೆ ರಣದಲ್ಲಿ ಯಾರ್ಯಾರು ಯುದ್ಧಮಾಡುತ್ತಾರೋ ಅವರೆಲ್ಲರನ್ನೂ ಸಂಹರಿಸುತ್ತೇನೆ. ನಿನಗೆ ಸತ್ಯವನ್ನೇ ತಿಳಿಸುತ್ತಿದ್ದೇನೆ. ಸೇನೆಯನ್ನು ಹಿಂದಿರುಗಿಸು !”

ಅದನ್ನು ಕೇಳಿದ ದುರ್ಯೋಧನನಾದರೋ ಮಹಾಭಯವನ್ನು ಕಳೆದುಕೊಂಡು ಮಹಾ ಸಿಂಹನಾದದಿಂದ ಸೇನೆಯನ್ನು ಹಿಂದೆ ಕರೆದನು. ಆಗ ಕುರುಪಾಂಡವ ಸೇನೆಗಳ ನಡುವೆ ತುಂಬಿದ ಎರಡು ಸಮುದ್ರಗಳ ನಡುವೆ ಹೇಗೋ ಹಾಗೆ ಪುನಃ ತೀವ್ರವಾದ ಯುದ್ಧವು ಪ್ರಾರಂಭವಾಯಿತು. ದ್ರೋಣಪುತ್ರನಿಂದಾಗಿ ಕೌರವರು ರೋಷಾವೇಶದಿಂದ ಸುಸ್ಥಿರರಾಗಿ ನಿಂತಿದ್ದರು. ದ್ರೋಣನ ನಿಧನದಿಂದಾಗಿ ಪಾಂಡುಪಾಂಚಾಲರು ಉದ್ಧತರಾಗಿದ್ದರು. ತಮಗೇ ಜಯವನ್ನು ಕಾಣುತ್ತಿದ್ದ ಪರಮಹೃಷ್ಟರಾದ ಅವರಿಬ್ಬರು ಕೋಪಿಷ್ಟರ ನಡುವೆ ಮಹಾವೇಗದ ಯುದ್ಧವು ನಡೆಯಿತು. ಒಂದು ಪರ್ವತವು ಇನ್ನೊಂದು ಪರ್ವತವನ್ನು ಅಥವಾ ಒಂದು ಸಾಗರವು ಇನ್ನೊಂದು ಸಾಗರವನ್ನು ತಾಗುವಂತೆ ಕುರುಪಾಂಡವರ ಮಧ್ಯೆ ಹೊಡೆದಾಟವು ನಡೆಯಿತು. ಆಗ ಸಂಹೃಷ್ಟ ಕುರುಪಾಂಡವ ಸೈನಿಕರು ಸಹಸ್ರಾರು ಶಂಖಗಳನ್ನೂ, ಕೋಟಿಗಟ್ಟಲೆ ಭೇರಿಗಳನ್ನೂ ಬಾರಿಸಿದರು. ಮಂದರಪರ್ವತವನ್ನು ಕಡೆಗೋಲನ್ನಾಗಿಸಿ ಸಾಗರವನ್ನು ಕಡೆದಾಗ

ಉಂಟಾದ ಶಬ್ಧದಂತೆ ಆ ಸೇನೆಗಳಿಂದ ಅದ್ಭುತ ಮಹಾನಿನಾದವು ಕೇಳಿಬಂದಿತು. ಆಗ ದ್ರೌಣಿಯು ಪಾಂಡವರ ಮತ್ತು ಪಾಂಚಾಲರ ಸೇನೆಗಳನ್ನು ಗುರಿಯಾಗಿಸಿ ನಾರಾಯಣಾಸ್ತ್ರವನ್ನು ಪ್ರಯೋಗಿಸಿದನು.

ಅದರಿಂದ ಸಹಸ್ರಾರು ಉರಿಯುತ್ತಿರುವ ಮುಖಗಳುಳ್ಳ ಬಾಣಗಳು ಆಕಾಶದಲ್ಲಿ ಪಾಂಡವರನ್ನು ಭಕ್ಷಿಸುವವೋ ಎಂಬಂತಿದ್ದ ಉರಿಯುತ್ತಿರುವ ಹೆಡೆಗಳ ಸರ್ಪಗಳಂತೆ ಕಾಣಿಸಿಕೊಂಡವು. ಸೂರ್ಯನ ಕಿರಣಗಳು ಬಹಳ ಬೇಗ ಲೋಕವನ್ನೆಲ್ಲಾ ಹರಡಿಕೊಳ್ಳುವಂತೆ ಆ ಬಾಣಗಳು ಮುಹೂರ್ತಮಾತ್ರದಲ್ಲಿ ಆಕಾಶವನ್ನೂ, ದಿಕ್ಕುಗಳನ್ನೂ, ಸೇನೆಯನ್ನೂ ಆವರಿಸಿದವು. ಅಮಲ ಆಕಾಶದಲ್ಲಿ ಬೆಳಗುವ ನಕ್ಷತ್ರಗಳಂತೆ ಉಕ್ಕಿನ ಚಂಡುಗಳು ಪ್ರಾದುರ್ಭವಿಸಿದವು. ನಾಲ್ಕೂ ದಿಕ್ಕುಗಳಲ್ಲಿ ಉರಿಯುತ್ತಿರುವ ವಿಚಿತ್ರ ಶತಘ್ನಗಳೂ, ಖಡ್ಗಗಳಂತಹ ಅಲಗುಗಳುಳ್ಳ ಚಕ್ರಗಳೂ ಮಂಡಲಾಕಾರದಲ್ಲಿ ಹೊಳೆಯತೊಡಗಿದವು. ಶಸ್ತ್ರಗಳ ಆಕೃತಿಗಳಿಂದ ತುಂಬಿಹೋಗಿದ್ದ ಅಂತರಿಕ್ಷವನ್ನು ನೋಡಿ ಪಾಂಡವ-ಪಾಂಚಾಲ-ಸೃಂಜಯರು ಅತೀವ ಉದ್ವಿಗ್ನರಾದರು. ಹೇಗೆ ಹೇಗೆ ಪಾಂಡವ ಮಹಾರಥರು ಯುದ್ಧಮಾಡುತ್ತಿದ್ದರೋ ಹಾಗೆ ಹಾಗೆ ಆ ಅಸ್ತ್ರವು ವರ್ಧಿಸುತ್ತಿತ್ತು. ಆ ನಾರಾಯಣಾಸ್ತ್ರದಿಂದ ವಧಿಸಲ್ಪಡುತ್ತಿದ್ದ ಸೇನೆಗಳು ರಣದಲ್ಲಿ ಬೆಂಕಿಯಿಂದ ಸುಡಲ್ಪಡುತ್ತಿದ್ದಂತೆ



ಸರ್ವಾಂಗಗಳಲ್ಲಿಯೂ ಪೀಡಿತಗೊಂಡವು. ಛಳಿಗಾಲದ ಅಂತ್ಯದಲ್ಲಿ ಅಗ್ನಿಯು ಒಣಹುಲ್ಲನ್ನು ಸುಡುವಂತೆ ಆ ಅಸ್ತ್ರವು ಪಾಂಡವರ ಸೇನೆಯನ್ನು ಸುಡತೊಡಗಿತು. ಸರ್ವತ್ರ ತುಂಬಿಹೋಗಿದ್ದ ಆ ಅಸ್ತ್ರದಿಂದ ಸೈನ್ಯವು ಕ್ಷೀಣಿಸುತ್ತಿರಲು ಧರ್ಮಪುತ್ರ ಯುಧಿಷ್ಠಿರನು ಪರಮ ಭಯಭೀತನಾದನು. ಬುದ್ಧಿಕಳೆದುಕೊಂಡು ಓಡಿಹೋಗುತ್ತಿರುವ ಆ ಸೈನ್ಯವನ್ನೂ ತಟಸ್ಥಭಾವದಿಂದಿದ್ದ ಪಾರ್ಥನನ್ನೂ ನೋಡಿ ಧರ್ಮಪುತ್ರನು ಹೀಗೆಂದನು:

> “ಧೃಷ್ಟದ್ಯುಮ್ನ! ನೀನು ಪಾಂಚಾಲಸೇನೆಯೊಂದಿಗೆ ಪಲಾಯನಮಾಡು. ಸಾತ್ಯಕೀ! ನೀನು ವೃಷ್ಣಿ-ಅಂಧಕರಿಂದ ಕೂಡಿ ನಿನ್ನ ನಿವಾಸಕ್ಕೆ ಹೊರಟುಹೋಗು! ಧರ್ಮಾತ್ಮ ವಾಸುದೇವನಾದರೋ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತಾನೆ. ಲೋಕಕ್ಕೇ ಉಪದೇಶಮಾಡಲು ಸಮರ್ಥನಾದ ಅವನಿಗೆ ತನ್ನನ್ನು ರಕ್ಷಿಸಿಕೊಳ್ಳುವುದರಲ್ಲಿ ಏನಿದೆ? ಸರ್ವ ಸೇನೆಗಳಿಗೂ ಹೇಳುತ್ತಿದ್ದೇನೆ. ಇನ್ನು ಮುಂದೆ ಯುದ್ಧಮಾಡಬೇಡಿರಿ. ಏಕೆಂದರೆ ನಾನು ನನ್ನ ಸಹೋದರರೊಂದಿಗೆ ಅಗ್ನಿಪ್ರವೇಶಮಾಡುತ್ತೇನೆ! ಹೇಡಿಗಳಿಗೆ ದಾಟಲಸಾಧ್ಯ ಭೀಷ್ಮ-ದ್ರೋಣರ ಸಾಗರವೆಂಬ ರಣವನ್ನು ದಾಟಿದ ನಾವು

ಈಗ ಸೇನೆಗಳೊಂದಿಗೆ ದ್ರೌಣಿಯೆಂಬ ಹಸುವಿನ ಗೊರಸಿನ ಹಳ್ಳದ ನೀರಿನಲ್ಲಿ ಮುಳುಗಿಹೋಗುತ್ತಿದ್ದೇವೆ! ಕಲ್ಯಾಣಸಂಪನ್ನ ಆಚಾರ್ಯನನ್ನು ನಾನು ಯುದ್ಧದಲ್ಲಿ ಸಂಹರಿಸಿದುದರ ಪರಿಣಾಮವಾಗಿ ಬೀಭತ್ಸುವು ನನ್ನ ಕುರಿತು ಏನು ಆಶಯಪಟ್ಟಿದ್ದನೋ ಅದು ಈಗಲೇ ಆಗಿಹೋಗಲಿ! ಯುದ್ಧದಲ್ಲಿ ವಿಶಾರದನಾಗಿರದ ಬಾಲಕ ಸೌಭದ್ರನು ಅನೇಕ ಸಮರ್ಥ ಕ್ರೂರರಿಂದ ಕೊಲ್ಲಲ್ಪಡುತ್ತಿದ್ದಾಗಲೂ ರಕ್ಷಣೆಯನ್ನು ನೀಡದೇ ಇದ್ದ, ಸಭೆಗೆ ಬಂದಾಗ ದಾಸಭಾವವನ್ನು ಕಳೆದುಕೊಳ್ಳಲು ದ್ರೌಪದಿಯು ಪ್ರಶ್ನೆಯನ್ನು ಕೇಳಿದಾಗ ಪುತ್ರನೊಡನೆ ಉತ್ತರವನ್ನು ನೀಡದೇ ಇದ್ದ, ಸೈಂಧವನನ್ನು ರಕ್ಷಿಸಲೋಸುಗ ಕುದುರೆಗಳು ಬಳಲಿದ್ದ ಫಲ್ಗುನನನ್ನು ಕೊಲ್ಲಲು ಬಯಸಿದ್ದ ಧಾರ್ತರಾಷ್ಟ್ರನಿಗೆ ಕವಚವನ್ನು ತೊಡಿಸಿದ್ದ, ನನ್ನ ವಿಜಯಕ್ಕಾಗಿ ಸರ್ವಯತ್ನವನ್ನೂ ಮಾಡುತ್ತಿದ್ದ, ಸತ್ಯಜಿತನೇ ಮೊದಲಾದ ಪಾಂಚಾಲರನ್ನು ಬ್ರಹ್ಮಾಸ್ತ್ರಜ್ಞಾನದಿಂದ ನಿಃಶೇಷವಾಗಿ ವಿನಾಶಗೊಳಿಸಿದ್ದ, ಅಧರ್ಮದಿಂದ ನಮ್ಮನ್ನು ರಾಜ್ಯಭ್ರಷ್ಟರನ್ನಾಗಿಸಿದಾಗ ನಮ್ಮವರಿಂದ ತಡೆಯಲ್ಪಟ್ಟರೂ ಅದನ್ನು ಅನುಸರಿಸುವಂತೆ ಕೌರವರಿಗೆ ಉಪದೇಶಿಸದೇ ಇದ್ದ, ಈ ರೀತಿ ನಮಗೆ ಪರಮ

ಸೌಹಾರ್ದರಂತೆ ವರ್ತಿಸುತ್ತಿದ್ದ ಆಚಾರ್ಯರನ್ನು ಸಂಹರಿಸಿದುದಕ್ಕಾಗಿ ನಾನು ಬಾಂಧವರೊಡನೆ ಮರಣಹೊಂದುತ್ತೇನೆ!"

ಕೌಂತೇಯನು ಹೀಗೆ ಹೇಳುತ್ತಿರಲು ತ್ವರೆಮಾಡಿ ದಾಶಾರ್ಹನು ಬಾಹುಗಳಿಂದ ಸೇನೆಯನ್ನು ತಡೆದು ಈ ಮಾತನ್ನಾಡಿದನು:

"ಬೇಗನೆ ಶಸ್ತ್ರಗಳನ್ನು ಕೆಳಗಿಡಿರಿ! ವಾಹನಗಳಿಂದ ಕೆಳಗಿಳಿಯಿರಿ! ಇದೇ ಉಪಾಯವನ್ನು ಈ ಅಸ್ತ್ರದ ನಿವಾರಣೆಗೆಂದು ಮಹಾತ್ಮ ನಾರಾಯಣನೇ ವಿಹಿಸಿದ್ದಾನೆ. ಆನೆ, ಕುದುರೆ ಮತ್ತು ರಥಗಳಿಂದ ಎಲ್ಲರೂ ನೆಲದಮೇಲೆ ಕೆಳಗಿಳಿಯಿರಿ! ನೆಲದ ಮೇಲೆ ನಿರಾಯುಧರಾಗಿರುವವರನ್ನು ಈ ಅಸ್ತ್ರವು ಸಂಹರಿಸುವುದಿಲ್ಲ. ಏಕೆಂದರೆ ಈ ಅಸ್ತ್ರಬಲದ ವಿರುದ್ಧವಾಗಿ ಯೋಧರು ಯಾವ ಯಾವ ರೀತಿಯಲ್ಲಿ ಯುದ್ಧಮಾಡುತ್ತಾರೋ ಹಾಗೆಯೇ ಈ ಕೌರವರ ಬಲವೂ ಹೆಚ್ಚಾಗುತ್ತಾ ಹೋಗುತ್ತದೆ. ಯಾರು ವಾಹನಗಳಿಂದ ಕೆಳಗಿಳಿದು ಶಸ್ತ್ರಗಳನ್ನು ಕೆಳಗಿಡುತ್ತಾರೋ ಆ ಮಾನವರನ್ನು ಸಂಗ್ರಾಮದಲ್ಲಿ ಈ ಅಸ್ತ್ರವು ಸಂಹರಿಸುವುದಿಲ್ಲ. ಯಾರು ಇದನ್ನು ಮನಸ್ಸಿನಲ್ಲಿಯಾದರೂ ವಿರೋಧಿಸುತ್ತಾರೋ

> ಅವರೆಲ್ಲರನ್ನೂ, ಅವರು ರಸಾತಲಕ್ಕೆ ಹೋಗಿ ಅಡಗಿಕೊಂಡರೂ, ಇದು ಸಂಹರಿಸುತ್ತದೆ.”

ವಾಸುದೇವನ ಆ ಮಾತನ್ನು ಕೇಳಿ ಎಲ್ಲರೂ ಮನಸ್ಸು ಮತ್ತು ಕರಣಗಳಿಂದ ಅಸ್ತ್ರವನ್ನು ತ್ಯಜಿಸಲು ಇಚ್ಛಿಸಿದರು. ಶಸ್ತ್ರಾಸ್ತ್ರಗಳನ್ನು ಕೆಳಗಿಡುತ್ತಿದ್ದ ಅವರನ್ನು ನೋಡಿ ಅವರನ್ನು ಹರ್ಷಗೊಳಿಸುತ್ತಾ ಭೀಮಸೇನನು ಹೇಳಿದನು:

> “ಯಾವುದೇ ಕಾರಣದಿಂದ ಯಾರೂ ಶಸ್ತ್ರಗಳನ್ನು ಕೆಳಗಿಡಬಾರದು! ದ್ರೋಣಪುತ್ರನನ್ನು ನಾನು ಆಶುಗಗಳಿಂದ ತಡೆಯುತ್ತೇನೆ! ಈಗಲೇ ಈ ಸುವರ್ಣಮಯ ಭಾರ ಗದೆಯಿಂದ ದ್ರೌಣಿಯ ಅಸ್ತ್ರವನ್ನು ವಿನಾಶಗೊಳಿಸಿ ಅವನನ್ನು ಕಾಲನಂತೆ ಪ್ರಹರಿಸುತ್ತೇನೆ! ಹೇಗೆ ಸವಿತು ಸೂರ್ಯನಿಗೆ ಸಮನಾದ ಬೇರೆ ನಕ್ಷತ್ರವು ಇನ್ನಿಲ್ಲವೋ ಹಾಗೆ ನನ್ನ ವಿಕ್ರಮಕ್ಕೆ ಸಮನಾಗಿರುವ ಪುರುಷರ್ಯಾರೂ ಇಲ್ಲಿ ಇಲ್ಲ. ಶಿಖರಯುಕ್ತ ಪರ್ವತವನ್ನೂ ಕೆಳಗುರುಳಿಸಿ ಪುಡಿಮಾಡಬಲ್ಲ ಆನೆಯ ಸೊಂಡಿಲಿನಂತಿರುವ ನನ್ನ ದೃಢ ಬಾಹುಗಳ ಸಾಮಾರ್ಥ್ಯವನ್ನು ಇಂದು ನೋಡಿ! ದಿವಿಯ ದೇವತೆಗಳಲ್ಲಿ ಶಕ್ರನು ಹೇಗೆ ಪ್ರತಿದ್ವಂದ್ವಿಯಿಲ್ಲದಿರುವನೆಂದು ಪ್ರಸಿದ್ಧನೋ

ಹಾಗೆ ಮನುಷ್ಯರಲ್ಲಿ ಸಾವಿರ ಆನೆಗಳ ಬಲಕ್ಕೆ ಸಮನಾದ ನಾನೊಬ್ಬನೇ ಪ್ರತಿದ್ವಂದ್ವಿಯಿಲ್ಲದಿರುವವನು ! ಇಂದು ಯುದ್ಧದಲ್ಲಿ ಹತ್ತಿ ಉರಿಯುತ್ತಿದ್ದ ದ್ರೌಣಿಯ ಅಸ್ತ್ರವನ್ನು ತಡೆಯುವ ನನ್ನ ಈ ಉಬ್ಬಿದ ಬಾಹುಗಳ ವೀರ್ಯವನ್ನು ನೋಡಿ ! ಕುರುಪಾಂಡವರಲ್ಲಿ ಇಂದು ಈ ನಾರಾಯಣಾಸ್ತ್ರವನ್ನು ಎದುರಿಸುವವನು ಯಾರೂ ಎಲ್ಲವೆಂದಾದರೆ ನಾನು ಅದನ್ನು ಎದುರಿಸುತ್ತೇನೆ ! ನೋಡಿ !"

ಹೀಗೆ ಹೇಳಿ ಭೀಮನು ಮೇಘಘೋಷದ ಆದಿತ್ಯವರ್ಚಸ ರಥದಲ್ಲಿ ಕುಳಿತು ದ್ರೋಣಪುತ್ರನನ್ನು ಸಮೀಪಿಸಿದನು. ಶೀಘ್ರವಾಗಿ ಅವನನ್ನು ಸಮೀಪಿಸಿ ನಿಮಿಷಮಾತ್ರದಲ್ಲಿ ತನ್ನ ಹಸ್ತಲಾಘವದಿಂದ ವಿಕ್ರಮಿ ಕುಂತೀಪುತ್ರನು ಅಶ್ವತ್ಥಾಮನನ್ನು ಬಾಣಗಳ ಜಾಲದಿಂದ ಮುಚ್ಚಿಬಿಟ್ಟನು. ಆಗ ದ್ರೌಣಿಯು ನಗುತ್ತಾ ಉದಾಸೀನತೆಯಿಂದ ಕೆಲವು ಮಾತುಗಳನ್ನಾಡಿ ಅಭಿಮಂತ್ರಿಸಿದ ದೀಪ್ತಾಗ್ರ ಶರಗಳಿಂದ ಭೀಮನನ್ನು ಮುಚ್ಚಿದನು. ಬಂಗಾರದ ಬೆಂಕಿಯ ಕಿಡಿಗಳನ್ನು ಕಾರುವ ಉರಿಯುತ್ತಿರುವ ಮುಖಗಳುಳ್ಳ ಪನ್ನಗಗಳಂತಿದ್ದ ಆ ಬಾಣಗಳು ಭೀಮನನ್ನು ಮುಚ್ಚಿಬಿಟ್ಟವು. ಯುದ್ಧದಲ್ಲಿ ಆಗ ಭೀಮಸೇನನು ಸಾಯಂಕಾಲದಲ್ಲಿ ಮಿಂಚು ಹುಳುಗಳಿಂದ ಆವೃತ ಪರ್ವತದಂತೆ

ತೋರುತ್ತಿದ್ದನು. ಅವನು ದ್ರೋಣಪುತ್ರನ ಆ ಅಸ್ತ್ರವನ್ನು ವಿರೋಧಿಸಲು ಅದು ಗಾಳಿಯಿಂದ ಉಲ್ಬಣಿಸುವ ಬೆಂಕಿಯಂತೆ ವೃದ್ಧಿಸಿತು. ಭೀಮವಿಕ್ರಮದಿಂದಿದ್ದ ಆ ಅಸ್ತ್ರವು ಬೆಳೆಯುತ್ತಿದ್ದುದನ್ನು ನೋಡಿ ಪಾಂಡವಸೇನೆಯಲ್ಲಿ, ಭೀಮಸೇನನನ್ನು ಬಿಟ್ಟು ಉಳಿದೆಲ್ಲರನ್ನೂ ಮಹಾ ಭಯವು ಆವರಿಸಿತು. ಆಗ ಎಲ್ಲರೂ ಎಲ್ಲ ಕಡೆಗಳಲ್ಲಿಯೂ ರಥ-ಆನೆ-ಕುದುರೆಗಳಿಂದ ಕೆಳಗಿಳಿದು ಶಸ್ತ್ರಗಳೆಲ್ಲವನ್ನೂ ನೆಲದ ಮೇಲೆ ಇರಿಸಿದರು. ಅವರು ಹಾಗೆ ವಾಹನಗಳಿಂದ ಕೆಳಗಿಳಿದು ಶಸ್ತ್ರಗಳನ್ನು ಕೆಳಗಿಡಲು ಆ ಅಸ್ತ್ರವೀರ್ಯವೆಲ್ಲವೂ ಒಟ್ಟಾಗಿ ಭೀಮನ ಶಿರದ ಮೇಲೆಯೇ ಬಿದ್ದಿತು. ತೇಜಸ್ಸಿನಿಂದ ಆವೃತನಾದ ಭೀಮಸೇನನನ್ನು ಕಾಣದೇ ಅಲ್ಲಿದ್ದ ಎಲ್ಲರೂ, ವಿಶೇಷವಾಗಿ ಪಾಂಡವರು, ಹಾಹಾಕಾರಗೈದರು.

ಆ ಅಸ್ತ್ರದಿಂದ ಭೀಮಸೇನನು ಮುಚ್ಚಿಹೋಗಿರುವುದನ್ನು ನೋಡಿ ಧನಂಜಯನು ತೇಜಸ್ಸನ್ನು ನಾಶಗೊಳಿಸಲು ವಾರುಣಾಸ್ತ್ರದಿಂದ ಅದನ್ನು ಸುತ್ತಲಿನಿಂದ ಮುಚ್ಚಿದನು. ಅರ್ಜುನನ ಹಸ್ತಲಾಘವದಿಂದ ಮತ್ತು ಸುತ್ತುವರೆದಿದ್ದ ಆ ತೇಜಸ್ಸಿನಿಂದಾಗಿ ಭೀಮಸೇನನು ವಾರುಣಾಸ್ತ್ರದಿಂದ ಸುತ್ತುವರೆಯಲ್ಪಟ್ಟಿದ್ದುದನ್ನು ಯಾರೂ ಗಮನಿಸಲಿಲ್ಲ. ರಥ-ಅಶ್ವ-ಸೂತನೊಡನೆ ದ್ರೋಣಪುತ್ರನ ಅಸ್ತ್ರದಿಂದ

ಸಂವೃತನಾಗಿದ್ದ ಭೀಮನು ಧಗಧಗಿಸುತ್ತಿರುವ ಅಗ್ನಿಯೊಳಗೆ ಇಟ್ಟಿರುವ ಇನ್ನೊಂದು ಅಗ್ನಿಯಂತೆಯೇ ಪ್ರಕಾಶಿಸಿದನು. ರಾತ್ರಿಯು ಕಳೆಯಲು ನಕ್ಷತ್ರಗಳು ಅಸ್ತಗಿರಿಯ ಕಡೆ ಹೋಗುವಂತೆ ಆ ಬಾಣಗಳು ಭೀಮಸೇನನ ರಥದ ಮೇಲೆಯೇ ಬೀಳುತ್ತಿದ್ದವು. ದ್ರೋಣಪುತ್ರನ ಅಸ್ತ್ರದಿಂದ ಆವೃತರಾದ ಭೀಮ, ಅವನ ರಥ, ಕುದುರೆ ಮತ್ತು ಸಾರಥಿಗಳು, ಬೆಂಕಿಯ ಅಂತರ್ಗತರಾದರು. ಸಮಯದಲ್ಲಿ ಸಚರಾಚರ ಜಗತ್ತೆಲ್ಲವನ್ನೂ ಭಸ್ಮಮಾಡಿ ಅಗ್ನಿಯು ವಿಭುವಿನ ಮುಖವನ್ನು ಪ್ರವೇಶಿಸುವಂತೆ ಆ ಅಸ್ತ್ರವು ಭೀಮನನ್ನು ಆವರಿಸಿತು. ಸೂರ್ಯನು ಅಗ್ನಿಯನ್ನು ಮತ್ತು ಅಗ್ನಿಯು ದಿವಾಕರನನ್ನು ಪ್ರವೇಶಿಸುವಂತೆ ಆ ತೇಜಸ್ಸು ಭೀಮನನ್ನು ಪ್ರವೇಶಿಸಲು ಅವನು ಎಲ್ಲಿರುವನೆಂದೇ ಯಾರಿಗೂ ತಿಳಿಯದಾಯಿತು. ಆ ಅಸ್ತ್ರವು ಭೀಮನ ರಥವನ್ನು ಆವರಿಸಿದುದನ್ನು ನೋಡಿ, ತನಗೆ ಎದುರಾಳಿಗಳ್ಯಾರೂ ಇಲ್ಲವೆಂದು ದ್ರೌಣಿಯ ಬಲವು ಇನ್ನೂ ಉಲ್ಬಣಗೊಂಡಿತು. ಪಾಂಡವರ ಸರ್ವಸೇನೆಗಳೂ ಅಸ್ತ್ರಗಳನ್ನು ಕೆಳಗಿಟ್ಟು ಮೂಢರಂತಾಗಿದ್ದರು. ಯುಧಿಷ್ಠಿರನೇ ಮೊದಲಾದ ಮಹಾರಥರು ಯುದ್ಧದಿಂದ ವಿಮುಖರಾಗಿದ್ದರು. ಆಗ ವೀರ ಅರ್ಜುನ ಮತ್ತು ಮಹಾದ್ಯುತಿ ವಾಸುದೇವರು ತ್ವರೆಮಾಡಿ ರಥದಿಂದ ಕೆಳಕ್ಕೆ ಹಾರಿ ಭೀಮನಿದ್ದಲ್ಲಿಗೆ ಓಡಿದರು.

ಆ ಮಹಾಬಲಿಗಳಿಬ್ಬರೂ ದ್ರೋಣಪುತ್ರನ ಅಸ್ತ್ರಬಲದಿಂದ ಹುಟ್ಟಿದ್ದ ತೇಜಸ್ಸನ್ನು ಮಾಯೆಯಿಂದ ಪ್ರವೇಶಿಸಿ ಭೀಮನ ಬಳಿ ಬಂದರು. ಅಸ್ತ್ರಗಳನ್ನು ಕೆಳಗಿಟ್ಟಿದುದರಿಂದ ಮತ್ತು ವಾರುಣಾಸ್ತ್ರಪ್ರಯೋಗದಿಂದ ಆ ಅಸ್ತ್ರದಿಂದ ಹುಟ್ಟಿದ್ದ ಅಗ್ನಿಯು ಆ ವೀರ್ಯವಂತ ಕೃಷ್ಣರಿಬ್ಬರನ್ನೂ ಪೀಡಿಸಲಿಲ್ಲ. ಆಗ ನಾರಾಯಣಾಸ್ತ್ರವನ್ನು ಶಾಂತಗೊಳಿಸಲೋಸುಗ ಆ ನರನಾರಾಯಣರು ಬಲವನ್ನುಪಯೋಗಿಸಿ ಭೀಮನನ್ನೂ ಅವನ ಸರ್ವ ಆಯುಧಗಳನ್ನೂ ಎಳೆದು ಕೆಳಗಿಳಿಸಿದರು. ಕೆಳಗೆ ಎಳೆಯಲ್ಪಡುತ್ತಿರುವಾಗಲೂ ಕೂಡ ಮಹಾರಥ ಕೌಂತೇಯನು ಗರ್ಜಿಸುತ್ತಿರಲು ದ್ರೌಣಿಯ ಆ ದುರ್ಜಯ ಘೋರ ಅಸ್ತ್ರವು ಹೆಚ್ಚುತ್ತಲೇ ಇತ್ತು.

ಆಗ ವಾಸುದೇವನು ಅವನಿಗೆ ಹೇಳಿದನು:

> “ಇದೇನಿದು ಪಾಂಡುನಂದನ ! ತಡೆಹಿಡಿದರೂ ನೀನು ಯುದ್ಧಮಾಡುವುದನ್ನು ನಿಲ್ಲಿಸುತ್ತಿಲ್ಲ ! ಒಂದುವೇಳೆ ಈ ಸಮಯದಲ್ಲಿ ಕೌರವನಂದನರನ್ನು ಜಯಿಸುವಂತಿದ್ದರೆ ನಾವಿಬ್ಬರು ಕೂಡ ಯುದ್ಧಮಾಡುತ್ತಿದ್ದೆವು. ಈ ನರರ್ಷಭರೂ ಕೂಡ ಯುದ್ಧಮಾಡುತ್ತಿದ್ದರು. ನಿನ್ನವರೆಲ್ಲರೂ ರಥದಿಂದ ಕೆಳಗಿಳಿದಿದ್ದಾರೆ. ನೀನೂ ಕೂಡ ಪರಾಕ್ರಮವನ್ನು ತೋರಿಸದೇ

ಬೇಗನೇ ರಥದಿಂದ ಕೆಳಗಿಳಿ !”

ಹೀಗೆ ಹೇಳಿ ಕೃಷ್ಣನು ಕ್ರೋಧದಿಂದ ಸಂರಕ್ತಲೋಚನನಾಗಿ ಸರ್ಪದಂತೆ ಭುಸುಗುಟ್ಟುತ್ತಿದ್ದ ಭೀಮನನ್ನು ರಥದಿಂದ ನೆಲಕ್ಕೆ ಕೆಡವಿದನು. ಯಾವಾಗ ಅವನನ್ನು ಕೆಳಕ್ಕೆ ಎಳೆದರೋ ಮತ್ತು ಆಯುಧಗಳನ್ನು ನೆಲದಮೇಲಿಟ್ಟರೋ ಆಗ ಶತ್ರುಗಳನ್ನು ಸುಡುತ್ತಿದ್ದ ಆ ನಾರಾಯಣಾಸ್ತ್ರವು ಪ್ರಶಾಂತಗೊಂಡಿತು. ವಿಧಿವತ್ತಾಗಿ ದುಃಸ್ಸಹವಾಗಿದ್ದ ಆ ತೇಜಸ್ಸು ಪ್ರಶಾಂತಗೊಳ್ಳಲು ಸರ್ವ ದಿಕ್ಕುಗಳೂ ಉಪದಿಕ್ಕುಗಳೂ ಶುಭ್ರವಾದವು. ಸುಮಂಗಲ ಗಾಳಿಯು ಬೀಸತೊಡಗಿತು. ಮೃಗಪಕ್ಷಿಗಳು ಶಾಂತಗೊಂಡವು. ವಾಹನಗಳು ಮತು ಯೋಧರು ಪ್ರಹೃಷ್ಟಗೊಂಡರು. ಆ ಅಸ್ತ್ರದ ಘೋರ ತೇಜಸ್ಸು ಹೊರಟುಹೋಗಲು ಧೀಮಾನ್ ಭೀಮನು ರಾತ್ರಿಯು ಕಳೆದನಂತರ ಉದಿಸುತ್ತಿರುವ ಸೂರ್ಯನಂತೆ ಪ್ರಕಾಶಿಸಿದನು. ಅಸ್ತ್ರವು ಶಾಂತವಾದುದನ್ನು ನೋಡಿ ಅಳಿದುಳಿದ ಪಾಂಡವ ಸೇನೆಯು ಸಂತೋಷಗೊಂಡು ದುರ್ಯೋಧನನನ್ನು ಸಂಹರಿಸಲು ಬಯಸಿ ಪುನಃ ಯುದ್ಧಸನ್ನದ್ಧವಾಯಿತು.

## ಹದಿನೈದನೆಯ ದಿನದ ಯುದ್ಧ ಸಮಾಪ್ತಿ: ಅಶ್ವತ್ಥಾಮ ಪರಾಕ್ರಮ

ಆ ಅಸ್ತ್ರದಿಂದ ಹತಗೊಳ್ಳದೇ ವ್ಯವಸ್ಥಿತವಾಗಿ ನಿಂತಿದ್ದ ಆ ಸೇನೆಯನ್ನು ನೋಡಿ ದುರ್ಯೋಧನನು ದ್ರೋಣಪುತ್ರನಿಗೆ ಹೇಳಿದನು:

> “ಅಶ್ವತ್ಥಾಮ! ಶೀಘ್ರದಲ್ಲಿಯೇ ಪುನಃ ಆ ಅಸ್ತ್ರವನ್ನು ಪ್ರಯೋಗಿಸು! ಜಯೈಷಿ ಪಾಂಚಾಲರು ಪುನಃ ಯುದ್ಧಕ್ಕೆ ಸಿದ್ಧರಾಗಿದ್ದಾರೆ!”

ದುರ್ಯೋಧನನು ಹಾಗೆ ಹೇಳಲು ಅಶ್ವತ್ಥಾಮನು ದೀನನಾಗಿ ನಿಟ್ಟುಸಿರುಬಿಡುತ್ತಾ ರಾಜನಿಗೆ ಈ ಮಾತನ್ನಾಡಿದನು:

> “ರಾಜನ್! ಈ ಅಸ್ತ್ರವನ್ನು ಮರುಕಳಿಸಲಾಗುವುದಿಲ್ಲ. ಎರಡನೆಯ ಬಾರಿ ಪ್ರಯೋಗಿಸಲಿಕ್ಕಾಗುವುದಿಲ್ಲ. ಪುನಃ ಪ್ರಯೋಗಿಸಿದ್ದಾದರೆ ಪ್ರಯೋಗಿಸಿದವನನ್ನೇ ಅದು ಸಂಹರಿಸುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಈ ಅಸ್ತ್ರದ ನಿವಾರಣೋಪಾಯವನ್ನು ಕೃಷ್ಣನೇ ತಿಳಿಸಿದನು. ಅನ್ಯಥಾ ಯುದ್ಧದಲ್ಲಿ ಶತ್ರುಗಳ ವಧೆಯು ನಿಶ್ಚಿತವಾಗಿದ್ದಿತು. ಪರಾಜಯ ಮತ್ತು ಮೃತ್ಯುಗಳ ನಡುವೆ ಮೃತ್ಯುವೇ ಶ್ರೇಯಸ್ಕರವಾದುದು. ಸೋಲಲ್ಲ. ಶಸ್ತ್ರಗಳನ್ನು ಕೆಳಗಿಟ್ಟಿರುವ ಇವರೆಲ್ಲರೂ ಮೃತ್ಯುಸಮ ಸೋಲನ್ನೇ ಹೊಂದಿದ್ದಾರೆ.”

ದುರ್ಯೋಧನನು ಹೇಳಿದನು:

> “ಆಚಾರ್ಯಪುತ್ರ! ಈ ಅಸ್ತ್ರವನ್ನು ಎರಡನೆಯ ಬಾರಿ ಬಳಸಲಿಕ್ಕಾಗುವುದಿಲ್ಲವಾದರೆ ನಿನ್ನಲ್ಲಿರುವ ಅನ್ಯ ಅಸ್ತ್ರಗಳಿಂದ ಈ ಗುರುಘಾತಿಗಳನ್ನು ವಧಿಸು! ತ್ರ್ಯಂಬಕನಲ್ಲಿರುವಂತೆ ನಿನ್ನಲ್ಲಿಯೂ ದಿವಾಸ್ತ್ರಗಳಿವೆ. ನೀನು ಇಚ್ಛಿಸಿದರೆ ಕ್ರುದ್ಧ ಪುರಂದರನೂ ಕೂಡ ನಿನ್ನಿಂದ ಬಿಡಿಸಿಕೊಂಡು ಹೋಗಲಾರ!”

ಧ್ವಜದಲ್ಲಿ ಸಿಂಹದ ಬಾಲದ ಚಿಹ್ನೆಯನ್ನು ಹೊಂದಿದ್ದ ಅಶ್ವತ್ಥಾಮನು ತನ್ನ ಪಿತನ ನಿಧನವನ್ನು ಸ್ಮರಿಸಿಕೊಂಡು ಕ್ರೋಧದೊಂದಿಗೆ ಭಯವನ್ನು ತೊರೆದು ಪಾರ್ಷತನ ಮೇಲೆರಗಿದನು. ನರರ್ಷಭನು ಅವನ ಸಮೀಪಕ್ಕೆ ಹೋಗಿ ಇಪ್ಪತ್ತು ಕ್ಷುದ್ರಕಗಳಿಂದ ಮತ್ತು ಅತಿವೇಗದ ಐದು ಬಾಣಗಳಿಂದ ಆ ಪುರುಷರ್ಷಭನನ್ನು ಹೊಡೆದನು. ಆಗ ಧೃಷ್ಟದ್ಯುಮ್ನನು ಪಾವಕನಂತೆ ಪ್ರಜ್ವಲಿಸುತ್ತಿರುವ ಅರವತ್ಮೂರು ಪತ್ರಿಗಳಿಂದ ದ್ರೋಣಪುತ್ರನನ್ನು ಪ್ರಹರಿಸಿದನು. ಬಂಗಾರದ ರೆಕ್ಕೆಗಳುಳ್ಳ ಮಸೆಗಲ್ಲಿನಿಂದ ಹರಿತಮಾಡಲ್ಪಟ್ಟ ಇಪ್ಪತ್ತು ನಿಶಿತ ಶರಗಳಿಂದ ಅವನ ಸಾರಥಿಯನ್ನೂ ನಾಲ್ಕರಿಂದ ಅವನ ನಾಲ್ಕು ಕುದುರೆಗಳನ್ನೂ ಹೊಡೆದನು. ಹಾಗೆ ಹೊಡೆದವನನ್ನು ಪುನಃ

ಹೊಡೆಯುತ್ತಾ ದ್ರೌಣಿಯು ಮೇದಿನಿಯನ್ನು ನಡುಗಿಸುವನೋ ಮತ್ತು ಸರ್ವಲೋಕಗಳ ಪ್ರಾಣಗಳನ್ನು ಹೀರುವನೋ ಎನ್ನುವಂತೆ ಮಹಾರಣದಲ್ಲಿ ಮಹಾನಾದಗೈದನು. ಪಾರ್ಷತನಾದರೋ ದ್ರೌಣಿಯನ್ನೇ ಆಕ್ರಮಣಿಸಿದನು. ಪಾಂಚಾಲ್ಯನು ದ್ರೋಣಪುತ್ರನ ತಲೆಯ ಮೇಲೆ ಬಾಣಮಯ ಮಳೆಯನ್ನೇ ಸುರಿಸಿದನು. ಪಿತೃವಧೆಯನ್ನು ಸ್ಮರಿಸಿಕೊಂಡು ದ್ರೌಣಿಯು ಕ್ರುದ್ಧನಾಗಿ ಅವನನ್ನೂ ಹತ್ತು ಪತ್ರಿಗಳಿಂದ ಹೊಡೆದು ಗಾಯಗೊಳಿಸಿದನು. ಚೆನ್ನಾಗಿ ಸೆಳೆದು ಬಿಟ್ಟಿದ್ದ ಎರಡು ಕ್ಷುರಗಳಿಂದ ಪಾಂಚಾಲರಾಜನ ಧ್ವಜ ಮತ್ತು ಧನುಸ್ಸುಗಳನ್ನು ತುಂಡರಿಸಿ ದ್ರೌಣಿಯು ಅನ್ಯ ಬಾಣಗಳಿಂದ ಅವನನ್ನು ಗಾಯಗೊಳಿಸಿದನು. ಕೂಡಲೇ ದ್ರೌಣಿಯು ಕ್ರುದ್ಧನಾಗಿ ಅವನನ್ನು ಕುದುರೆ, ಸಾರಥಿ ಮತ್ತು ರಥಗಳಿಂದ ವಿಹೀನನನ್ನಾಗಿ ಮಾಡಿ ಅವನ ಅನುಚರರನ್ನು ಶರಗಳಿಂದ ಮುಚ್ಚಿಬಿಟ್ಟನು.

ಶರವರ್ಷಗಳಿಂದ ಮುಚ್ಚಿಹೋಗಿ ಸಂಭ್ರಾಂತರೂ ಆರ್ತರೂ ಆಗಿ ತೋರುತ್ತಿದ್ದ ಪಾಂಚಾಲ ಸೇನೆಯು ಆಗ ಪಲಾಯನಮಾಡಿತು. ಯೋಧರು ವಿಮುಖರಾಗುತ್ತಿರುವುದನ್ನು ಮತ್ತು ಧೃಷ್ಟದ್ಯುಮ್ನನು ಪೀಡಿತನಾಗಿರುವುದನ್ನು ನೋಡಿ ತಕ್ಷಣವೇ ಶೈನೇಯನು ತನ್ನ ರಥವನ್ನು ದ್ರೌಣಿರಥದ ಕಡೆ ಓಡಿಸಿದನು. ಅಶ್ವತ್ಥಾಮನನ್ನು ಎದುರಿಸಿ

ಅವನನ್ನು ಎಂಟು ನಿಶಿತ ಬಾಣಗಳಿಂದ ಗಾಯಗೊಳಿಸಿದನು. ಪುನಃ ನಾನಾರೂಪದ ಇಪ್ಪತ್ತು ಬಾಣಗಳಿಂದ ಆ ಅಮರ್ಷಣನನ್ನು ಹೊಡೆದು, ಹಾಗೆಯೇ ಅವನ ಸಾರಥಿಯನ್ನೂ ನಾಲ್ಕು ಬಾಣಗಳಿಂದ ನಾಲ್ಕು ಕುದುರೆಗಳನ್ನೂ ಹೊಡೆದನು. ಹೀಗೆ ನಾನಾವಿಧದ ಬಾಣಗಳಿಂದ ಅತಿಯಾಗಿ ಗಾಯಗೊಂಡ ದ್ರೌಣಿಯು ನಕ್ಕು ಯುಯುಧಾನನಿಗೆ ಈ ಮಾತನ್ನಾಡಿದನು:

> "ಶೈನೇಯ ! ಆಚಾರ್ಯಘಾತಿನಿಯ ಮೇಲೆ ನಿನಗೆ ಅನುಗ್ರಹಬುದ್ಧಿಯಿದೆ ಎನ್ನುವುದನ್ನು ನಾನು ತಿಳಿದಿದ್ದೇನೆ. ಆದರೆ ನನ್ನ ಹಿಡಿತಕ್ಕೆ ಬಂದಿರುವ ಅವನನ್ನು ಅಥವಾ ನಿನ್ನನ್ನೂ ನೀನು ರಕ್ಷಿಸಲಾರೆ !"

ಹೀಗೆ ಹೇಳಿ ದ್ರೌಣಿಯು ಸೂರ್ಯನ ರಶ್ಮಿಗಳ ಕಾಂತಿಯುಳ್ಳ ಸುತೀಕ್ಷ್ಣ ಉತ್ತಮ ಶರವನ್ನು ವೃತ್ರನಮೇಲೆ ಹರಿಯು ಹೇಗೋ ಹಾಗೆ ಸಾತ್ವತನ ಮೇಲೆ ಪ್ರಯೋಗಿಸಿದನು. ಅವನು ಪ್ರಯೋಗಿಸಿದ ಆ ಸಾಯಕವು ಕವಚದೊಂದಿಗೆ ಸಾತ್ಯಕಿಯ ದೇಹವನ್ನು ಭೇದಿಸಿ ಭುಸುಗುಟ್ಟುವ ಸರ್ಪವು ಬಿಲವನ್ನು ಹೊಗುವಂತೆ ಭೂಮಿಯನ್ನು ಹೊಕ್ಕಿತು. ಭಿನ್ನಕವಚನಾಗಿದ್ದ ಶೂರ ಸಾತ್ಯಕಿಯು ಅಂಕುಶದಿಂದ ತಿವಿಯಲ್ಪಟ್ಟ ಆನೆಯಂತೆ ವ್ಯಥಿತನಾದನು. ಗಾಯದಿಂದ ಅತಿಯಾಗಿ

ರಕ್ತಸ್ರಾವವಾಗಲು ಅವನು ಧನುಸ್ಸು ಬಾಣಗಳನ್ನು ಕೆಳಗಿಟ್ಟನು. ರಕ್ತಸ್ರಾವದಿಂದ ಮೂರ್ಛೆಹೋಗಿ ರಥದಲ್ಲಿಯೇ ಕುಳಿತು ಒರಗಿದನು. ತಕ್ಷಣವೇ ಅವನ ಸಾರಥಿಯು ಅವನನ್ನು ದ್ರೋಣಪುತ್ರನ ರಥದಿಂದ ದೂರಕ್ಕೆ ಕೊಂಡೊಯ್ದನು.

ಅನಂತರ ಪರಂತಪ ಅಶ್ವತ್ಥಾಮನು ಇನ್ನೊಂದು ಸುಂದರ ಪುಂಖಗಳುಳ್ಳ ನತಪರ್ವ ಶರದಿಂದ ಧೃಷ್ಟದ್ಯುಮ್ನನ ಹುಬ್ಬುಗಳ ಮಧ್ಯೆ ಹೊಡೆದನು. ಮೊದಲೇ ಅತಿಯಾಗಿ ಗಾಯಗೊಂಡಿದ್ದ ಪಾಂಚಾಲ್ಯನು ಇನ್ನೂ ಪೀಡಿತನಾಗಿ ಯುದ್ಧದಲ್ಲಿ ಧ್ವಜವನ್ನು ಹಿಡಿದು ಕುಳಿತುಕೊಂಡನು. ಆನೆಯನ್ನು ಪೀಡಿಸುವ ಮದಿಸಿದ ಸಿಂಹದಂತ್ತಿದ್ದ ಅವನನ್ನು ವೇಗದಿಂದ ಐವರು ಶೂರ ಪಾಂಡವ ರಥರು – ಕಿರೀಟೀ, ಭೀಮಸೇನ, ಪೌರವ ವೃದ್ಧಕ್ಷತ್ರ, ಚೇದಿಗಳ ಯುವರಾಜ ಮತ್ತು ಮಾಲವದ ಸುದರ್ಶನ - ಇವರು ಧಾವಿಸಿಬಂದು ಐವರೂ ಐದೈದು ಬಾಣಗಳಿಂದ ಒಂದೇವೇಳೆಯಲ್ಲಿ ಎಲ್ಲಕಡೆಗಳಿಂದ ಅಶ್ವತ್ಥಾಮನನ್ನು ಹೊಡೆದರು. ಐವರೂ ಬಿಟ್ಟ ಆ ಇಪ್ಪತ್ತೈದು ಸಾಯಕಗಳನ್ನು ದ್ರೌಣಿಯು ಇಪ್ಪತ್ತೈದು ಶರಗಳಿಂದ ಒಟ್ಟಿಗೇ ಕತ್ತರಿಸಿದನು. ಮತ್ತೆ ದ್ರೌಣಿಯು ಏಳು ನಿಶಿತ ಬಾಣಗಳಿಂದ ಪೌರವನನ್ನೂ, ಮೂರರಿಂದ ಮಾಲವನನ್ನೂ, ಒಂದರಿಂದ ಪಾರ್ಥನನ್ನೂ, ಮತ್ತು ಆರರಿಂದ ವೃಕೋದರನನ್ನೂ

ಹೊಡೆದನು. ಆಗ ಅವರೆಲ್ಲ ಮಹಾರಥರೂ ದ್ರೌಣಿಯನ್ನು ಒಟ್ಟಾಗಿ ಮತ್ತು ಪ್ರತ್ಯೇಕವಾಗಿ ರುಕ್ಮಪುಂಖ ಶಿಲಾಶಿತಗಳಿಂದ ಹೊಡೆದರು.

ಯುವರಾಜನಾದರೋ ದ್ರೌಣಿಯನ್ನು ಇಪ್ಪತ್ತು ಪತ್ರಿಗಳಿಂದ ಹೊಡೆದನು. ಪಾರ್ಥನು ಪುನಃ ಎಂಟರಿಂದ ಮತ್ತು ಎಲ್ಲರೂ ಮೂರು ಮೂರರಿಂದ ಅವನನ್ನು ಹೊಡೆದರು. ಅನಂತರ ದ್ರೌಣಾಯನು ಅರ್ಜುನನ್ನು ಆರರಿಂದ, ವಾಸುದೇವನನ್ನು ಹತ್ತರಿಂದ, ಭೀಮನನ್ನು ಹತ್ತರಿಂದ, ಯುವರಾಜನನ್ನು ನಾಲ್ಕರಿಂದ ಹೊಡೆದು ಎರಡರಿಂದ ಅವನ ಧನ್ನುಸ್ಸು-ಧ್ವಜಗಳನ್ನು ಕತ್ತರಿಸಿದನು. ಪುನಃ ಪಾರ್ಥನನ್ನು ಶರವರ್ಷದಿಂದ ಹೊಡೆದು ದ್ರೌಣಿಯು ಘೋರವಾದ ಸಿಂಹನಾದವನ್ನು ಮಾಡಿದನು. ದ್ರೌಣಿಯು ಪ್ರಯೋಗಿಸುತ್ತಿದ್ದ ಆ ನಿಶಿತವಾದ, ಎಣ್ಣೆಯಲ್ಲಿ ಅದ್ದಿ ಹದಗೊಳಿಸಿದ್ದ ಬಾಣಗಳು ಭೂಮಿ, ಆಕಾಶ, ದಿಕ್ಕು-ಉಪದಿಕ್ಕುಗಳನ್ನೂ ಆವರಿಸಿ ಎಲ್ಲವೂ ಬಾಣಮಯವಾಗಿ ಘೋರರೂಪವಾಗಿ ಕಾಣುತ್ತಿದ್ದವು. ವೀರ್ಯದಲ್ಲಿ ಇಂದ್ರನ ಸಮಾನನಾಗಿದ್ದ ಉಗ್ರತೇಜಸ್ವಿ ಅಶ್ವತ್ಥಾಮನು ತನ್ನ ರಥದ ಬಳಿಯಿದ್ದ ಸುದರ್ಶನನ ಇಂದ್ರನ ಧ್ವಜಗಳಂತೆ ಪ್ರಕಾಶಮಾನವಾಗಿದ್ದ ಎರಡು ಭುಜಗಳನ್ನೂ ಶಿರಸ್ಸನ್ನೂ ಏಕಕಾಲದಲ್ಲಿ ಮೂರು ಬಾಣಗಳಿಂದ ಹೊಡೆದು ಕತ್ತರಿಸಿದನು. ಅವನು ರಥಶಕ್ತಿಯಿಂದ

ಪೌರವನ ರಥವನ್ನು ಬಾಣಗಳಿಂದ ಎಳ್ಳುಕಾಳುಗಳಷ್ಟು ಸಣ್ಣದಾಗಿ ಪುಡಿಪುಡಿಮಾಡಿ, ಚಂದನಗಳಿಂದ ಲೇಪಿತವಾದ ಅವನ ಬಾಹುಗಳನ್ನು ಕತ್ತರಿಸಿ, ಭಲ್ಲದಿಂದ ಅವನ ಶಿರವನ್ನು ದೇಹದಿಂದ ಬೇರ್ಪಡಿಸಿದನು. ಅನಂತರ ಆ ವೇಗವಾನನು ಪ್ರಜ್ವಲಿಸುವ ಅಗ್ನಿಯಂತಿರುವ ಬಾಣಗಳಿಂದ ಯುವಕನಾಗಿದ್ದ ನೀಲಕಮಲದ ಬಣ್ಣದ ಚೇದಿಪ್ರಿಯ ಯುವರಾಜನನ್ನು ಹೊಡೆದು ಅವನನ್ನು ಕುದುರೆ-ಸಾರಥಿಗಳೊಂದಿಗೆ ಮೃತ್ಯುಲೋಕಕ್ಕೆ ಕಳುಹಿಸಿದನು. ಅವರನ್ನು ರಣದಲ್ಲಿ ಸಂಹರಿಸಿ ವೀರ ಯೋಧರ ನಾಯಕ ಅಪರಾಜಿತ ದ್ರೋಣಪುತ್ರನು ಸಂತೋಷಗೊಂಡು ದೊಡ್ಡ ಶಂಖವನ್ನು ಊದಿದನು.

ಅನಂತರ ಎಲ್ಲ ಪಾಂಚಾಲಯೋಧರೂ ಪಾಂಡವ ಭೀಮಸೇನನೂ ಭಯದಿಂದ ಧೃಷ್ಟದ್ಯುಮ್ನನ ರಥವನ್ನು ಬಿಟ್ಟು ದಿಕ್ಕಾಪಾಲಾಗಿ ಓಡಿ ಹೋದರು. ಓಡಿಹೋಗುತ್ತಿರುವವರ ಮೇಲೆ ದ್ರೌಣಿಯು ಶರಗಳನ್ನು ಸುರಿಸಿ, ಕಾಲನಂತೆ ಪಾಂಡವಸೇನೆಯನ್ನು ಹಿಂದಿನಿಂದ ಬೆನ್ನಟ್ಟಿ ಹೋದನು. ದ್ರೋಣಪುತ್ರನಿಂದ ವಧಿಸಲ್ಪಡುತ್ತಿರುವ ಆ ಕ್ಷತ್ರಿಯರು ಸಮರದಲ್ಲಿ ದ್ರೋಣಪುತ್ರನ ಭಯದಿಂದ ಎಲ್ಲ ದಿಕ್ಕುಗಳಿಗೆ ಓಡಿ ಹೋದರು.

ಸೇನೆಯು ಭಗ್ನವಾಗುತ್ತಿದ್ದುದನ್ನು ನೋಡಿ ಧನಂಜಯನು

ದ್ರೋಣಪುತ್ರನನ್ನು ವಧಿಸಲು ಇಚ್ಛಿಸಿ ಅವನನ್ನು ತಡೆದನು. ಗೋವಿಂದ ಮತ್ತು ಅರ್ಜುನರು ತಮ್ಮ ಸೈನಿಕರನ್ನು ರಣದಲ್ಲಿ ನಿಲ್ಲಿಸಲು ಪ್ರಯತ್ನಿಸುತ್ತಿದ್ದರೂ ಅವರು ನಿಲ್ಲುತ್ತಿರಲಿಲ್ಲ. ಬೀಭತ್ಸುವು ಒಬ್ಬನೇ ಉಳಿದ ಸೋಮಕರೊಂದಿಗೆ ಮತ್ಸ್ಯರನ್ನು ಮತ್ತು ಇತರರನ್ನು ಒಟ್ಟುಗೂಡಿಸಿಕೊಂಡು ಕೌರವರೊಂದಿಗೆ ಯುದ್ಧಮಾಡಲು ನಿಂತನು. ಅಶ್ವತ್ಥಾಮನನ್ನು ಬೇಗನೇ ಆಕ್ರಮಿಸಿ ಸವ್ಯಸಾಚಿಯು ಹೇಳಿದನು: "ನಿನ್ನಲ್ಲಿ ಯಾವ ಶಕ್ತಿ-ವೀರ್ಯ-ಜ್ಞಾನ-ಪೌರುಷಗಳಿವೆಯೋ, ಧಾರ್ತರಾಷ್ಟ್ರರಲ್ಲಿ ಯಾವ ಪ್ರೀತಿಯೂ ನಮ್ಮ ಮೇಲೆ ಯಾವ ದ್ವೇಷವೂ ಇವೆಯೋ, ಮತ್ತು ನಿನ್ನಲ್ಲಿ ಯಾವ ಪರಮ ತೇಜಸ್ಸಿದೆಯೋ ಅದನ್ನು ನನಗೆ ತೋರಿಸು! ದ್ರೋಣನನ್ನು ಸಂಹರಿಸಿದ ಆ ಪಾರ್ಷತನೇ ನಿನ್ನ ದರ್ಪವನ್ನು ಮುರಿಯುತ್ತಾನೆ. ಕಾಲಾಗ್ನಿಗೆ ಸಮನಾಗಿರುವ ಯುದ್ಧದಲ್ಲಿ ಶತ್ರುಗಳಿಗೆ ಅಂತಕನೆಂದು ಪ್ರಖ್ಯಾತನಾಗಿರುವ ಪಾಂಚಾಲ್ಯನನ್ನು ಮತ್ತು ಕೇಶವನೊಡನೆ ನನ್ನನ್ನೂ ಎದುರಿಸಿ ಯುದ್ಧಮಾಡು!"

ಯುವರಾಜ, ಪೌರವ ವೃದ್ಧಕ್ಷತ್ರ ಮತ್ತು ಇಷ್ವಸ್ತ್ರವಿಧಿಸಂಪನ್ನನಾಗಿದ್ದ ಮಾಲವದ ಸುದರ್ಶನರು ಹತರಾಗಲು, ಮತ್ತು ಧೃಷ್ಟದ್ಯುಮ್ನ, ಸಾತ್ಯಕಿ ಮತ್ತು ಭೀಮನೂ ಕೂಡ ಪರಾಜಿತರಾಗಲು, ಯುಧಿಷ್ಠಿರನಾಡಿದ ಮಾತುಗಳು ಮರ್ಮಗಳನ್ನು ಭೇದಿಸಲು, ಮತ್ತು ತಮ್ಮಲ್ಲಿಯೇ ನಡೆದ

ಅಂತರ್ಭೇದ ಇವೆಲ್ಲವುಗಳಿಂದ ಹುಟ್ಟಿದ ದುಃಖವನ್ನು ಅನುಭವಿಸುತ್ತಾ ಬೀಭತ್ಸುವಿಗೆ ಅಭೂತಪೂರ್ವವಾದ ದುಃಖ ಮತ್ತು ಕೋಪಗಳೆರಡೂ ಆಗಿದ್ದವು. ಈ ಕಾರಣದಿಂದಲೇ ಆಚಾರ್ಯತನಯನು ಕ್ರೂರನೋ ಮತ್ತು ಹೇಡಿಯೋ ಎನ್ನುವಂತೆ ಅನರ್ಹರೀತಿಯಲ್ಲಿ ಅಶ್ಲೀಲವಾದ ಮತ್ತು ಅಪ್ರಿಯವಾದ ಮಾತುಗಳನ್ನು ದ್ರೌಣಿಗೆ ಹೇಳಿದನು. ಪಾರ್ಥನ ಕಠೋರ ಮಾತನ್ನು ಸರ್ವಮರ್ಮಗಳನ್ನೂ ಭೇದಿಸುವಂತಹ ದಾಟಿಯಲ್ಲಿ ಹೇಳಿದುದನ್ನು ಕೇಳಿದ ಅಶ್ವತ್ಥಾಮನು ಕ್ರೋಧದಿಂದ ಸುದೀರ್ಘವಾಗಿ ನಿಟ್ಟುಸಿರುಬಿಟ್ಟನು. ಪಾರ್ಥನಮೇಲೆ ಮತ್ತು ವಿಶೇಷವಾಗಿ ಕೃಷ್ಣನ ಮೇಲೆ ದ್ರೌಣಿಯು ಕುಪಿತನಾದನು.

ಆ ವೀರ್ಯವಾನನು ಪ್ರಯತ್ನಿಸಿ ರಥದಲ್ಲಿ ಕುಳಿತು ಆಚಮನ ಮಾಡಿ ದೇವತೆಗಳಿಗೂ ದುರ್ಧರ್ಷ ಆಗ್ನೇಯಾಸ್ತ್ರವನ್ನು ಪ್ರಕಟಿಸಿದನು. ಪರವೀರಹ ಆಚಾರ್ಯನಂದನನು ಕಾಣುತ್ತಿದ್ದ ಮತ್ತು ಕಾಣಿಸದಿದ್ದ ಶತ್ರುಗಣಗಳನ್ನು ಉದ್ದೇಶಿಸಿ, ಹೊಗೆಯಿಲ್ಲದ ಪಾವಕನಂತೆ ಉರಿಯುತ್ತಿದ್ದ ಶರವನ್ನು ಅಭಿಮಂತ್ರಿಸಿ, ಕ್ರೋಧಾವೇಶಗೊಂಡು ಎಲ್ಲೆಡೆಯಲ್ಲಿ ಪ್ರಯೋಗಿಸಿದನು. ಆಗ ಆಕಾಶದಲ್ಲಿ ತುಮುಲದೊಡನೆ ಶರವರ್ಷವುಂಟಾಯಿತು. ತಣ್ಣನೆಯ ಗಾಳಿಯು ಬೀಸತೊಡಗಿತು.

ಸೂರ್ಯನೂ ಸುಡಲಿಲ್ಲ. ಎಲ್ಲ ದಿಕ್ಕುಗಳಲ್ಲಿಯೂ ದಾನವರೂ ಕೂಡ ಭೈರವವಾಗಿ ಕೂಗಿಕೊಂಡರು. ಅಂಬರದಲ್ಲಿ ಮೋಡಗಳು ಗುಡುಗಿದವು. ರಕ್ತದ ಮಳೆಯು ಸುರಿಯಿತು. ಪಕ್ಷಿ-ಪಶು-ಗೋವುಗಳು ಮತ್ತು ಸುವ್ರತ ಮುನಿಗಳು ಕೂಡ ಪರಮ ಪ್ರಯತ್ನಮಾಡಿಯೂ ಶಾಂತಿಯನ್ನು ಪಡೆಯಲಾರದಾದರು. ಸರ್ವಮಹಾಭೂತಗಳೂ ಭ್ರಾಂತಗೊಂಡವು. ದಿವಾಕರನೂ ಇರುವಲ್ಲಿಯೇ ಗರಗರನೆ ತಿರುಗುತ್ತಿರುವಂತೆ ತೋರಿದನು. ಮೂರುಲೋಕದವರೂ ಜ್ವರದಿಂದ ಪೀಡಿತರಾದವರಂತೆ ಪರಿತಪಿಸಿದರು. ಆ ಶರದ ತೇಜಸ್ಸಿನಿಂದ ಸಂತಪ್ತರಾಗಿ ಭೂಮಿಯ ಮೇಲೆ ಮಲಗಿದ್ದ ನಾಗಗಳು ಭುಸುಗುಟ್ಟುತ್ತಾ ಘೋರ ತೇಜಸ್ಸಿನಿಂದ ಮುಕ್ತಿಪಡೆಯಲೋಸುಗ ಪುನಃ ಪುನಃ ಮೇಲೆ ಹಾರುತ್ತಿದ್ದವು. ಜಲಚರ ಪ್ರಾಣಿಗಳು ಮತ್ತು ಸಸ್ಯಗಳು ಕುದಿಯುತ್ತಿರುವ ಜಲಾಶಯಗಳಲ್ಲಿ ಬೆಂದು ಚಡಪಡಿಸುತ್ತಿದ್ದವು. ದಿಕ್ಕು-ಉಪದಿಕ್ಕುಗಳಿಂದ, ಆಕಾಶ-ಭುವನಗಳಿಂದ ಗರುಡನ ಮತ್ತು ಚಂಡಮಾರುತದ ವೇಗದಲ್ಲಿ ಶರವೃಷ್ಟಿಗಳು ಬೀಳತೊಡಗಿದವು.

ದ್ರೋಣಪುತ್ರನ ಆ ವಜ್ರವೇಗಸಮಾಹಿತ ಶರಗಳಿಂದ ಸುಟ್ಟ ಶತ್ರುಗಳು ಕಾಡ್ಗಿಚ್ಚಿನಿಂದ ಸುಟ್ಟ ಮರಗಳಂತೆ ಕೆಳಗುರುಳಿದರು. ದಹಿಸುತ್ತಿರುವ ಮಹಾನಾಗಗಳು ಗುಡುಗಿನಂತೆ ಭೈರವವಾಗಿ ಭುಸುಗುಡುತ್ತಾ

ಆಕಾಶದ ಎಲ್ಲಕಡೆಗಳಿಂದ ಬೀಳತೊಡಗಿದವು. ಘೋರ ವನದಲ್ಲಿ ದಾವಾಗ್ನಿಯಿಂದ ಸುತ್ತುವರೆಯಲ್ಪಟ್ಟವರಂತೆ ಹತ್ತಿ ಉರಿಯುತ್ತಿದ್ದ ಅನೇಕ ಮಹಾಗಜಗಳು ಎಲ್ಲಕಡೆಗಳಲ್ಲಿ ಓಡತೊಡಗಿದವು. ಅಶ್ವವೃಂದಗಳು ಮತ್ತು ರಥವೃಂದಗಳು ಉರಿಯುತ್ತಿರುವ ಮರಗಳ ಶಿಖರಗಳಂತೆ ಕಾಣುತ್ತಿದ್ದವು. ಅಲ್ಲಲ್ಲಿ ಸಹಸ್ರಾರು ರಥಗಳ ಗುಂಪುಗಳೂ ಸುಟ್ಟು ಬೀಳುತ್ತಿದ್ದವು. ಯುಗಾಂತದಲ್ಲಿ ಸರ್ವಭೂತಗಳನ್ನು ಸಂವರ್ತಕ ಅಗ್ನಿಯು ಸುಡುವಂತೆ ಭಗವಾನ್ ಅಗ್ನಿಯು ಯುದ್ಧದಲ್ಲಿ ಆ ಸೈನ್ಯವನ್ನು ಸುಟ್ಟನು.

ಪಾಂಡವೀ ಸೇನೆಯು ಆ ಮಹಾರಣದಲ್ಲಿ ಹಾಗೆ ಸುಡುತ್ತಿರುವುದನ್ನು ನೋಡಿ ಪ್ರಹೃಷ್ಟರಾದ ನಿಮ್ಮವರು ಸಿಂಹನಾದಗೈದರು. ಆಗ ಜಯವನ್ನು ಬಯಸಿದ್ದ ಕೌರವರು ಹೃಷ್ಟರಾಗಿ ತಕ್ಷಣವೇ ನಾನಾರೀತಿಯ ಮಂಗಳ ವಾದ್ಯಗಳನ್ನು ಬಾರಿಸತೊಡಗಿದರು. ಲೋಕವೆಲ್ಲವೂ ಕತ್ತಲೆಯಿಂದ ಆವೃತವಾಗಿದ್ದ ಆ ಮಹಾಯುದ್ಧದಲ್ಲಿ ಅಕ್ಷೌಹಿಣಿ ಸೇನೆಯೂ ಪಾಂಡವ ಸವ್ಯಸಾಚಿಯೂ ಕಾಣದಂತಾದರು. ಅಸಹನಶೀಲ ದ್ರೋಣಪುತ್ರನು ಸೃಷ್ಟಿಸಿದ ಅಂತಹ ಅಸ್ತ್ರವನ್ನು ಯಾರೂ ಇದರ ಮೊದಲು ಕಂಡಿರಲಿಲ್ಲ. ಅದರ ಕುರಿತು ಕೇಳಿಯೂ ಇರಲಿಲ್ಲ.

ಅರ್ಜುನನಾದರೋ ಸರ್ವಾಸ್ತ್ರಗಳನ್ನೂ ಶಮನಗೊಳಿಸುವುದಕ್ಕಾಗಿ ಪದ್ಮಯೋನಿಯಿಂದ ವಿಹಿತವಾಗಿದ್ದ ಬ್ರಹ್ಮಾಸ್ತ್ರವನ್ನು ಪ್ರಕಟಿಸಿದನು. ಕ್ಷಣದಲ್ಲಿಯೇ ಆ ಕತ್ತಲೆಯು ಹೋಗಿ ಶೀತಲ ಗಾಳಿಯು ಬೀಸತೊಡಗಿತು. ದಿಕ್ಕುಗಳು ನಿರ್ಮಲವಾದವು. ಅದೊಂದು ಅದ್ಭುತವಾಗಿತ್ತು, ಅಸ್ತ್ರದ ಮಾಯೆಯಿಂದ ದಗ್ಧರಾಗಿ ಹೋಗಿ ಹತವಾಗಿದ್ದ ಎಲ್ಲ ಅಕ್ಷೌಹಿಣೀ ಸೇನೆಯನ್ನು ಗುರುತಿಸಲೂ ಸಾಧ್ಯವಾಗುತ್ತಿರಲಿಲ್ಲ.

ಆಗ ಕತ್ತಲೆಯನ್ನು ಹೋಗಲಾಡಿಸಲು ಉದಯಿಸುವ ಸೂರ್ಯಚಂದ್ರರಂತೆ ಮಹೇಷ್ವಾಸ ವೀರ ಕೇಶವಾರ್ಜುನರು ಒಟ್ಟಿಗೇ ವಿಮುಕ್ತರಾಗಿ ಕಾಣತೊಡಗಿದರು. ಕೌರವರಿಗೆ ಭಯಂಕರರಾಗಿದ್ದ ಅವರು ಪತಾಕ-ಧ್ವಜ-ಕುದುರೆಗಳಿಂದ ಯುಕ್ತವಾಗಿದ್ದ ರಥದಲ್ಲಿ ಶ್ರೇಷ್ಠ ಆಯುಧಗಳನ್ನು ಸೆಳೆಯುತ್ತಾ, ಅಸ್ತ್ರದಿಂದ ವಿಮುಕ್ತರಾಗಿ ಕಾಣಿಸಿಕೊಂಡರು. ಆಗ ತಕ್ಷಣವೇ ಪ್ರಹೃಷ್ಟ ಪಾಂಡವರ ಕಡೆಯಲ್ಲಿ ಕಿಲಕಿಲ ಶಬ್ಧವೂ ಶಂಖಭೇರಿಗಳ ನಿನಾದವೂ ಕೇಳಿಬಂದಿತು. ಅವರಿಬ್ಬರೂ ಹತರಾದರೆಂದೇ ಎರಡು ಸೇನೆಗಳು ತಿಳಿದುಕೊಂಡಿದ್ದವು. ಆದರೆ ಸ್ವಲ್ಪವೂ ಗಾಯಗೊಳ್ಳದೇ ವಿಮುಕ್ತರಾಗಿ ಪ್ರಮುದಿತರಾಗಿ ಶಂಖಗಳನ್ನು ಊದುತ್ತಾ ಒಮ್ಮೆಲೇ ಕಾಣಿಸಿಕೊಂಡ

ಕೇಶವಾರ್ಜುನರಿಬ್ಬರನ್ನೂ ನೋಡಿ ಪಾರ್ಥರು ಮುದಿತರಾದರು ಮತ್ತು ಕೌರವರು ವ್ಯಥಿತರಾದರು.

ವಿಮುಕ್ತರಾದ ಅವರಿಬ್ಬರು ಮಹಾತ್ಮರನ್ನೂ ಕಂಡು ದ್ರೌಣಿಯು ತುಂಬಾ ದುಃಖಿತನಾಗಿ ಇದೇನೆಂದು ಮುಹೂರ್ತಕಾಲ ಚಿಂತಿಸತೊಡಗಿದನು. ಧ್ಯಾನಶೋಕಪರಾಯಣನಾದ ಅವನು ಚಿಂತಿಸುತ್ತಾ ದೀರ್ಘ ಬಿಸಿ ನಿಟ್ಟುಸಿರು ಬಿಡುತ್ತಾ ವಿಮನಸ್ಕನಾದನು. ಆಗ ದ್ರೌಣಿಯು ಧನುಸ್ಸನ್ನು ಕೆಳಗಿಟ್ಟು ರಥದಿಂದ ಕೆಳಕ್ಕೆ ಹಾರಿ "ಇವೆಲ್ಲವೂ ಸುಳ್ಳು! ಧಿಕ್ಕಾರ! ಧಿಕ್ಕಾರ!" ಎಂದು ಹೇಳುತ್ತಾ ರಣದಿಂದ ವೇಗವಾಗಿ ಓಡಿಹೋದನು.

## ವ್ಯಾಸನು ಅಶ್ವತ್ಥಾಮನಿಗೆ ಕೃಷ್ಣಾರ್ಜುನರ ಘನತೆಯನ್ನು ವರ್ಣಿಸಿದುದು

ಆಗ ದಟ್ಟ ಕಾಲಮೇಘದಂತೆ ಕಾಣುತ್ತಿದ್ದ ಅಕಲ್ಮಷ ಸರಸ್ವತೀ ತೀರದಲ್ಲಿ ವಾಸಿಸುತ್ತಿದ್ದ ವೇದಗಳನ್ನು ವಿಂಗಡಿಸಿದ ವ್ಯಾಸನನ್ನು ಕಂಡನು. ತನ್ನ ಮುಂದೆ ನಿಂತಿರುವ ಅವನನ್ನು ನೋಡಿ ದ್ರೌಣಿಯು ದೀನನಾಗಿ ನಮಸ್ಕರಿಸಿ ಗದ್ಗದ ಧ್ವನಿಯಲ್ಲಿ ಈ ಮಾತನ್ನಾಡಿದನು:

"ಭೋ! ಭೋ! ಇದು ಮಾಯೆಯೋ ದೈವೇಚ್ಛೆಯೋ

ಏನೆಂದು ಅರ್ಥವಾಗುತ್ತಿಲ್ಲ. ಈ ಅಸ್ತ್ರವು ಹೇಗೆ ಈ ರೀತಿಯಲ್ಲಿ ಸುಳ್ಳಾಯಿತು? ಇದರಲ್ಲಿ ನನ್ನದೇನಾದರೂ ದೋಷವಿದೆಯೇ? ಇದರ ಪ್ರಭಾವವು ತಲೆಕೆಳಗಾಯಿತೇ? ಲೋಕಗಳ ಪರಾಭವವೆಂದು ಸಿದ್ಧವಾಗಿದೆಯೇ? ಈ ಇಬ್ಬರು ಕೃಷ್ಣರೂ ಜೀವಿಸಿದ್ದಾರೆಂದರೆ ಕಾಲವನ್ನು ಅತಿಕ್ರಮಿಸಲು ಸಾಧ್ಯವಿಲ್ಲವೆನಿಸುತ್ತಿದೆ. ನಾನು ಪ್ರಯೋಗಿಸಿದ ಈ ಅಸ್ತ್ರವನ್ನು ಅಸುರ-ಅಮರ-ಗಂಧರ್ವ-ಪಿಶಾಚ-ರಾಕ್ಷಸರಾಗಲೀ, ಸರ್ಪ-ಯಕ್ಷ-ಪಕ್ಷಿಗಳಾಗಲೀ ಮತ್ತು ಮನುಷ್ಯರಾಗಲೀ ಎಂದೂ ಅಸಫಲಗೊಳಿಸಲು ಸಮರ್ಥರಿಲ್ಲ. ಹಾಗಿರುವಾಗ ಅದು ಒಂದು ಅಕ್ಷೌಹಿಣೀ ಸೇನೆಯನ್ನು ಮಾತ್ರ ದಹಿಸಿ ಉಪಶಮನಗೊಂಡಿತು. ಆದರೂ ಇದು ಮರ್ತ್ಯರ ಧರ್ಮವನ್ನು ಹೊಂದಿರುವ ಕೇಶವಾರ್ಜುನರನ್ನು ಏಕೆ ವಧಿಸಲಿಲ್ಲ? ಭಗವನ್! ನಾನು ಕೇಳುವ ಈ ಪ್ರಶ್ನೆಗೆ ಯಥಾವತ್ತಾಗಿ ಉತ್ತರಿಸಿರಿ!”

ವ್ಯಾಸನು ಹೇಳಿದನು:

“ವಿಸ್ಮಯದಿಂದ ನೀನು ಕೇಳುವ ಈ ಮಹಾಅರ್ಥವೆಲ್ಲವನ್ನೂ ನಾನು ನಿನಗೆ ಹೇಳುತ್ತೇನೆ. ಮನಸ್ಸನ್ನು

ಸಮಾಧಾನಗೊಳಿಸಿಕೊಂಡು ಕೇಳು! ನಮ್ಮ ಪೂರ್ವಜರಿಗೂ ಪೂರ್ವಜನಾದ, ವಿಶ್ವಕ್ಕೇ ಕಾರಣನಾದ ನಾರಾಯಣನೆಂಬ ಹೆಸರಿನ ಭಗವಂತನು ವಿಶೇಷಕಾರ್ಯಾರ್ಥವಾಗಿ ಒಮ್ಮೆ ಧರ್ಮನ ಪುತ್ರನಾಗಿ ಜನಿಸಿದನು. ಪ್ರಜ್ವಲಿಸುತ್ತಿರುವ ಸೂರ್ಯನ ಕಾಂತಿಯನ್ನು ಹೊಂದಿದ್ದ ಆ ಮಹಾತೇಜಸ್ವಿಯು ಮೈನಾಕ ಪರ್ವತದಲ್ಲಿ ನಿಂತು ಬಾಹುಗಳನ್ನು ಮೇಲೆತ್ತಿ ತೀವ್ರ ತಪಸ್ಸಿನಲ್ಲಿ ತೊಡಗಿದನು. ಆ ಅಂಬುಜಾಕ್ಷನು ಅರವತ್ತು ಸಾವಿರ ವರ್ಷಗಳ ಪರ್ಯಂತ ವಾಯುವನ್ನೇ ಸೇವಿಸುತ್ತಾ ತನ್ನ ಶರೀರವನ್ನು ಕೃಶಗೊಳಿಸಿದನು. ಅದಕ್ಕೂ ದ್ವಿಗುಣಕಾಲ ಪುನಃ ಮಹಾತಪಸ್ಸನ್ನಾಚರಿಸಿ ಅವನು ತನ್ನ ತೇಜಸ್ಸಿನ ಅಗ್ನಿಯಿಂದ ಭೂಮಿ ಆಕಾಶಗಳ ಮಧ್ಯಭಾಗವನ್ನು ತುಂಬಿಸಿದನು. ಅವನು ಹಾಗೆ ತಪಸ್ಸಿನಿಂದ ಬ್ರಹ್ಮಭೂತನಾಗಿರಲು ವಿಶ್ವದ ಯೋನಿ, ಜಗತ್ತಿನ ಒಡೆಯ, ಅತಿ ದುರ್ಧರ್ಶ, ಸರ್ವದೇವತೆಗಳಿಗೂ ಈಶ್ವರ, ಅಣುಗಳಿಗೂ ಅಣು, ದೊಡ್ಡವುಗಳಿಗೂ ದೊಡ್ಡವನಾದ ವಿಶ್ವೇಶ್ವರನ್ನು ಕಂಡನು. ರುದ್ರ, ಈಶಾನ, ಋಷಭ, ಚೇಕಿತಾನ, ಅಜ, ಪರಮ, ಅಲ್ಲಿನಿಂತಿದ್ದರೂ ಸರ್ವಭೂತಗಳ ಹೃದಯಗಳಲ್ಲಿ ಸ್ಥಿತನಾಗಿರುವ, ದುರ್ವಾರಣ, ದುರ್ದೃಶ,

ತಿಗ್ಮಮನ್ಯು, ಮಹಾತ್ಮ, ಸರ್ವಹರ, ಪ್ರಚೇತಸ, ದಿವ್ಯ ಚಾಪಬಾಣಗಳನ್ನು ಹಿಡಿದಿರುವ, ಬಂಗಾರದ ಕವಚವನ್ನು ಧರಿಸಿದ್ದ, ಅನಂತವೀರ್ಯ, ಪಿನಾಕ-ವಜ್ರ-ಉರಿಯುತ್ತಿರುವ ಶೂಲ-ಪರಶು-ಗದೆ ಮತ್ತು ಖಡ್ಗಗಳನ್ನು ಧರಿಸಿದ್ದ, ಸುಂದರ ಹುಬ್ಬುಗಳುಳ್ಳ, ಜಟಾಮಂಡಲ, ಚಂದ್ರಮೌಳಿ, ವ್ಯಾಘ್ರಾಜಿನ, ಪರಿಘ-ದಂಡಗಳನ್ನು ಕೈಗಳಲ್ಲಿ ಹಿಡಿದಿದ್ದ, ಶುಭ ಅಂಗದವನ್ನು ಧರಿಸಿದ್ದ, ನಾಗಯಜ್ಞೋಪವೀತ, ವಿಶ್ವೇದೇವರ ಗಣಗಳಿಂದಲೂ ಭೂತಗಣಗಳಿಂದಲೂ ಶೋಭಿತ, ತಪಸ್ವಿಗಳಿಗೆ ಒಬ್ಬನೇ ಸನ್ನಿಧಾನ, ವೃದ್ಧರಿಂದ ಪ್ರಿಯವಾಗಿ ಸ್ತುತಿಸಲ್ಪಡುವ, ನೀರು-ನಾಕ-ಆಕಾಶ-ಭೂಮಿ-ಚಂದ್ರ-ಸೂರ್ಯ ಹಾಗೆಯೇ ಜಗತ್ತು-ವಾಯು-ಅಗ್ನಿಗಳನ್ನೂ ಮೀರಿದ, ಬ್ರಹ್ಮದ್ವೇಷಿಗಳ ವಿನಾಶಕ, ಅಮೃತತ್ವಕ್ಕೆ ಕಾರಣ, ದುರಾಚಾರಿಗಳಿಗೆ ಕಾಣಿಸದ, ಸಾಧುವೃತ್ತರಾದ ಬ್ರಾಹ್ಮಣರು ಪಾಪವನ್ನು ಕಳೆದುಕೊಂಡು ವಿಶೋಕ ಮನಸ್ಸಿನಲ್ಲಿ ಕಾಣಬಲ್ಲ, ಆ ಧರ್ಮ ಪರಮೇಶ್ವರ ವಿಶ್ವರೂಪನನ್ನು ತನ್ನ ಭಕ್ತಿಯಿಂದ ಅವನು ನೋಡಿದನು. ಆ ದೇವದೇವನನ್ನು ನೋಡಿ ಸಂಹೃಷ್ಟಾತ್ಮನಾದ ಅವನು ತನ್ನ ವಾಕ್-ಮನೋ-ಬುದ್ಧಿ-ದೇಹಗಳಿಂದ ಮುದಿತನಾದನು. ರುದ್ರಾಕ್ಷಮಾಲೆಗಳಿಂದ

ವಿಭೂಷಿತ ಬೆಳಕಿನ ಆ ಪರಮನಿಧಿಯನ್ನು ಕಂಡು ನಾರಾಯಣನು ಆ ವಿಶ್ವಸಂಭವನಿಗೆ ನಮಸ್ಕರಿಸಿದನು. ಹೃಷ್ಟಪುಷ್ಟ ಪಾರ್ವತಿಯ ಜೊಗೆತಿದ್ದ ವರದ ಪ್ರಭು ಅಜ ಈಶಾನ ಅವ್ಯಗ್ರ ತನಗೆ ತಾನೇ ಕಾರಣ ಅಚ್ಯುತ ಮತ್ತು ಅಂಧಕನನ್ನು ಸಂಹರಿಸಿದ ರುದ್ರನಿಗೆ ನಮಸ್ಕರಿಸಿ ಪದ್ಮಾಕ್ಷ ವಿರೂಪಾಕ್ಷನನ್ನು ಭಕ್ತಿಯಿಂದ ಸ್ತುತಿಸಿದನು:

“ಆದಿದೇವ! ದೇವ! ಭೂತಕೃತ! ವರೇಣ್ಯ! ಇಂದು ಈ ಭುವನವನ್ನು ರಕ್ಷಿಸುವ ಪೂರ್ವದೇವರು ನಿನ್ನಿಂದಲೇ ಹುಟ್ಟಿದರು. ಈ ಧರಣಿಯನ್ನು ರಕ್ಷಿಸುವ ಪುರಾಣರೂ ಕೂಡ ಹಿಂದೆ ನಿನ್ನಿಂದಲೇ ಸೃಷ್ಟಿಸಲ್ಪಟ್ಟರು. ಸುರ-ಅಸುರ-ನಾಗ-ರಾಕ್ಷಸ-ಪಿಶಾಚರು, ನರರು, ಸುಪರ್ಣರು ಮತ್ತು ಗಂಧರ್ವ-ಯಕ್ಷರು, ವಿಶ್ವದಲ್ಲಿರುವ ಪ್ರತ್ಯೇಕ ಭೂತಸಂಘಗಳು ನಿನ್ನಿಂದಲೇ ಹುಟ್ಟಿರುವವು ಎಂದು ಸರ್ವರಿಗೂ ತಿಳಿದಿದೆ. ಆದುದರಿಂದ ಇಂದ್ರ, ಯಮ, ವರುಣ, ಕುಬೇರ, ಮಿತ್ರ, ತ್ವಷ್ಟ ಮತ್ತು ಚಂದ್ರರ ಕರ್ಮಗಳು ನಿನ್ನವೇ ಆಗಿವೆ. ಶಬ್ಧ-ಸ್ಪರ್ಶ-ರೂಪ-ರಸ-ಗಂಧಗಳೂ, ಆಕಾಶ-ವಾಯು-ನೀರು-ತೇಜಸ್ಸುಗಳೂ, ಭೂಮಿ, ಕಾಮ, ಬ್ರಹ್ಮ, ವೇದ, ಬ್ರಾಹ್ಮಣರೂ

ಮತ್ತು ಸ್ಥಾವರ-ಜಂಗಮಗಳೂ ನಿನ್ನಿಂದಲೇ ಹುಟ್ಟಿವೆ. ನೀರು ಪ್ರತ್ಯೇಕ ಪ್ರತ್ಯೇಕ ಆವಿಯ ತುಂತುರಾಗಿ ಹೇಗೆ ಪ್ರಳಯ ಕಾಲದಲ್ಲಿ ಪುನಃ ಒಂದಾಗಿ ನೀರೇ ಆಗುತ್ತದೆಯೋ ಹಾಗೆ ಸಕಲ ಪ್ರಾಣಿಗಳೂ ನಿನ್ನಿಂದಲೇ ಹೊರಟು ನಿನ್ನಲ್ಲಿಯೇ ಸೇರಿಕೊಳ್ಳುತ್ತವೆ. ಇದನ್ನು ತಿಳಿದ ವಿದ್ವಾಂಸನು ಸಾಯುಜ್ಯವನ್ನು ಹೊಂದುತ್ತಾನೆ. ದಿವ್ಯ ಸುಂದರ ರೆಕ್ಕೆಗಳುಳ್ಳ ಎರಡು ಮನಸ್ಸಿನ ಪಕ್ಷಿಗಳನ್ನು ರಕ್ಷಿಸುವ ವೇದಗಳೇ ರೆಂಬೆಗಳಾಗಿರುವ ಆ ಏಳು ಅಶ್ವತ್ಥವೃಕ್ಷಗಳಿಗೆ ಆಧಾರಭೂತಗಳಾದ ಹತ್ತು ಪುರಗಳನ್ನು ನೀನೇ ಸೃಷ್ಟಿಸಿರುವೆ. ಆದರೂ ಇವುಗಳಿಂದ ನೀನು ಬೇರೆಯಾಗಿರುವೆ! ಎದುರಿಸಲಸಾಧ್ಯವಾದ ಭೂತ-ವರ್ತಮಾನ-ಭವಿಷ್ಯಗಳು, ವಿಶ್ವಗಳು ಮತ್ತು ಈ ಭುವನವು ನಿನ್ನಿಂದಲೇ ಹುಟ್ಟಿರುವವು. ನಿನ್ನನ್ನು ಭಜಿಸುತ್ತಿರುವ ಈ ಭಕ್ತ ನನ್ನನ್ನು ಪರಿಪಾಲಿಸು. ಹಿತ-ಅಹಿತ ಇಚ್ಛೆಗಳಿಂದ ನನ್ನನ್ನು ಹಿಂಸಿಸಬೇಡ! ಆತ್ಮಸ್ವರೂಪನಾದ ನಿನ್ನನ್ನು ತನಗಿಂತಲೂ ಬೇರೆಯಲ್ಲವನೆಂದು ತಿಳಿದುಕೊಂಡ ವಿಧ್ವಾಂಸನು ವಿಶುದ್ಧ ಬ್ರಹ್ಮನನ್ನು ಹೊಂದುತ್ತಾನೆ. ನಿನ್ನನ್ನು ಸಮ್ಮಾನಿಸಲಿಚ್ಛಿಸಿ ನಾನು ಸ್ತುತಿಸುತ್ತಿದ್ದೇನೆ. ದೇವವರ್ಯ! ನಿನ್ನನ್ನು ಬಹಳ

ಕಾಲದಿಂದ ಅನ್ವೇಷಿಸುತ್ತಿದ್ದೆ. ನನ್ನಿಂದ ಸ್ತುತನಾದ ನೀನು ಮಾಯೆಯನ್ನು ದೂರಗೊಳಿಸಿ ನನಗೆ ಇಷ್ಟವಾದ ಬೇರೆ ಯಾರಿಂದಲೂ ಪಡೆದುಕೊಳ್ಳಲು ಅಸಾಧ್ಯ ವರವನ್ನು ದಯಪಾಲಿಸು!"

ಋಷಿಯಿಂದ ಸಂಸ್ತುತನಾದ ಅಚಿಂತ್ಯಾತ್ಮ, ನೀಲಕಂಠ, ಪಿನಾಕಧಾರಿಯು ದೇವಮುಖ್ಯನಿಗೆ ಅರ್ಹವಾದ ವರವನ್ನಿತ್ತನು. ನೀಲಕಂಠನು ಹೇಳಿದನು: "ನಾರಾಯಣ! ನನ್ನ ಪ್ರಸಾದದಿಂದ ಮನುಷ್ಯರಲ್ಲಿ, ದೇವಗಂಧರ್ವಯೋನಿಗಳಲ್ಲಿ ನೀನು ಅಪ್ರಮೇಯ ಬಲಾನ್ವಿತನಾಗುವೆ! ದೇವಾಸುರರು, ಮಹೋರಗಗಳು, ಪಿಶಾಚರು, ಗಂಧರ್ವರು, ನರರು, ರಾಕ್ಷಸರು, ಪಕ್ಷಿಗಳು, ನಾಗಗಳು ಮತ್ತು ವಿಶ್ವದಲ್ಲಿಯ ಇತರ ಪಶುಪ್ರಾಣಿಗಳೂ ನಿನ್ನ ರಭಸವನ್ನು ತಡೆಯಲಾರರು. ನಿನ್ನನ್ನು ಸಮರದಲ್ಲಿ ಎಂದೂ ದೇವತೆಗಳು – ಶಸ್ತ್ರಗಳಿಂದಾಗಲೀ, ವಜ್ರದಿಂದಾಗಲೀ, ಅಗ್ನಿ-ವಾಯು-ವಾರುಣಾಸ್ತ್ರಗಳಿಂದಾಗಲೀ, ಒಣಗಿರುವುದರಿಂದಾಗಲೀ, ಸ್ಥಾವರ-ಜಂಗಮಗಳಿಂದಲೂ - ಜಯಿಸಲಾರರು. ನೀನು ಸಮರದಲ್ಲಿ ನನ್ನನ್ನೇ ಎದುರಿಸಿದರೂ, ನನ್ನ ಪ್ರಸಾದದಿಂದ, ನನಗಿಂತ ನೀನೇ

ಅಧಿಕಬಲಶಾಲಿಯಾಗಿರುವೆ!”

ಈ ರೀತಿ ಹಿಂದೆ ಶೌರಿಯಿಂದ ಈ ವರವನ್ನು ಪಡೆದ ಇದೇ ದೇವನು ಜಗತ್ತನ್ನು ಮಾಯೆಯಿಂದ ಮೋಹಗೊಳಿಸುತ್ತಿರುವನು. ಅವನದೇ ತಪಸ್ಸಿನಿಂದ ಹುಟ್ಟಿದ ನರನೆಂಬ ಹೆಸರಿನ ಮಹಾಮುನಿಯು, ಸದಾ ಆ ದೇವನಿಗೆ ಸಮನಾಗಿರುವ ಅರ್ಜುನನು. ಇವರಿಬ್ಬರು ಋಷಿಗಳೂ ಪೂರ್ವದೇವರಿಗಿಂತಲೂ ಅಧಿಕರು. ಲೋಕಯಾತ್ರೆಯನ್ನು ಸಾಗಿಸಲು ಇವರು ಯುಗಯುಗದಲ್ಲಿ ಅವತರಿಸುತ್ತಾರೆ. ನೀನೂ ಕೂಡ ಹಾಗೆಯೇ ಎಲ್ಲ ಕರ್ಮಗಳನ್ನೂ ಮಾಡಿ, ಮಹಾ ತಪಸ್ಸನ್ನು ಗೈದು ತೇಜಸ್ಸು ಮತ್ತು ಕೋಪಗಳಲ್ಲಿ ರೌದ್ರನಾಗಿ ಜನಿಸಿರುವೆ. ದೇವತೆಯಂತೆ ನೀನು ಪ್ರಾಜ್ಞನಾಗಿ ಜಗತ್ತು ಭವಮಯವೆಂದು ತಿಳಿದು ಅವನನ್ನು ಪ್ರೀತಿಗೊಳಿಸಲು ನಿಯಮಗಳಿಂದ ನಿನ್ನನ್ನು ಕೃಶಗೊಳಿಸಿದ್ದೆ. ನೀನು ಆ ಮಹಾಪುರುಷನ ಉಜ್ವಲ ಮೂರ್ತಿಯನ್ನು ಪ್ರತಿಷ್ಠಾಪಿಸಿ ಹೋಮ-ಜಪ-ಉಪಹಾರಗಳಿಂದ ಆರಾಧಿಸುತ್ತಿದ್ದೆ. ಹಾಗೆ ನಿನ್ನ ಹೃದಯದಲ್ಲಿದ್ದುಕೊಂಡು ನಿನ್ನಿಂದ ತಿಳಿಯಲ್ಪಟ್ಟು ಪೂಜಿಸಲ್ಪಟ್ಟ ಆ ಪೂರ್ವದೇವನು ತೃಪ್ತನಾಗಿ ನಿನಗೆ

ಪುಷ್ಕಲ ವರಗಳನ್ನು ಇತ್ತಿದ್ದನು. ಹೀಗೆ ನಿನ್ನಲ್ಲಿ ಮತ್ತು ಅವರಲ್ಲಿ ಜನ್ಮಕರ್ಮತಪೋಯೋಗಗಳು ಸಮೃದ್ಧವಾಗಿವೆ. ಯುಗ ಯುಗದಲ್ಲಿ ಅವರು ಲಿಂಗವನ್ನು ಅರ್ಚಿಸಲು ನೀನು ಅವನ ಮೂರ್ತಿಯನ್ನು ಅರ್ಚಿಸಿದೆ. ಸರ್ವವೂ ಭವನ ರೂಪವೆಂದೇ ಭಾವಿಸಿ ಯಾರು ಪ್ರಭುವನ್ನು ಲಿಂಗರೂಪದಲ್ಲಿ ಅರ್ಚಿಸುತ್ತಾರೋ ಅವರಲ್ಲಿ ಆತ್ಮಯೋಗಗಳೂ, ಶಾಸ್ತ್ರಯೋಗಗಳೂ ಶಾಶ್ವತವಾಗಿ ನೆಲೆಸಿರುತ್ತವೆ. ಈ ರೀತಿಯಾಗಿ ದೇವತೆಗಳೂ, ಸಿದ್ಧರೂ, ಪರಮ ಋಷಿಗಳೂ ಶಾಶ್ವತವಾದ ಪರಮ ಲೋಕಗಳಲ್ಲಿ ಸ್ಥಾನಕ್ಕೋಸ್ಕರವಾಗಿ ಅವನನ್ನು ಪ್ರಾರ್ಥಿಸುತ್ತಾರೆ. ಕೇಶವನು ರುದ್ರಭಕ್ತನು ಮತ್ತು ರುದ್ರಸಂಭವನು. ಸನಾತನ ಕೃಷ್ಣನನ್ನೇ ಯಜ್ಞಗಳಲ್ಲಿ ಯಾಜಿಸಬೇಕು. ಸರ್ವಭೂತಗಳೂ ಭವನೆಂದೇ ತಿಳಿದು ಯಾರು ಪ್ರಭುವನ್ನು ಲಿಂಗರೂಪದಲ್ಲಿ ಅರ್ಚಿಸುತ್ತಾರೋ ಅವರನ್ನು ವೃಷಭಧ್ವಜನು ಅಧಿಕವಾಗಿ ಪ್ರೀತಿಸುತ್ತಾನೆ.”

ಅವನ ಆ ಮಾತನ್ನು ಕೇಳಿ ಮಹಾರಥ ದ್ರೋಣಪುತ್ರನು ರುದ್ರನಿಗೆ ನಮಸ್ಕರಿಸಿದನು ಮತ್ತು ಕೇಶವನು ಅಧಿಕನೆಂದು ಒಪ್ಪಿಕೊಂಡನು. ರೋಮಾಂಚಿತನಾಗಿ ಮಹರ್ಷಿಗೆ ನಮಸ್ಕರಿಸಿ ಜಿತೇಂದ್ರಿಯ ಅಶ್ವತ್ಥಾಮನು ಸೇನೆಯನ್ನು ನೋಡಿ ಹಿಂದಿರುಗುವಂತೆ ಸೂಚಿಸಿದನು.

ಆಗ ಯುದ್ಧದಲ್ಲಿ ದ್ರೋಣನು ಕೆಳಗುರುಳಲು ಪಾಂಡವರ ಮತ್ತು ದೀನ ಕೌರವರ ಸೇನೆಗಳು ತಮ್ಮ ತಮ್ಮ ಡೇರೆಗಳಿಗೆ ಹಿಂದಿರುಗಿದವು. ವೇದಪಾರಗ ಬ್ರಾಹ್ಮಣ ದ್ರೋಣನು ಐದು ದಿನಗಳು ಯುದ್ಧಮಾಡಿ ಸೇನೆಗಳನ್ನು ಸಂಹರಿಸಿ ಬ್ರಹ್ಮಲೋಕಕ್ಕೆ ಹೋದನು.

## ಶತರುದ್ರೀಯ

ಪಾರ್ಷತನಿಂದ ಹಾಗೆ ದ್ರೋಣನು ಹತನಾಗಲು ಮತ್ತು ಕೌರವರು ಭಗ್ನರಾಗಲು ಕುಂತೀಪುತ್ರ ಧನಂಜಯನು ಯುದ್ಧದಲ್ಲಿ ತನಗಾದ ವಿಜಯದ ಕುರಿತು ಮಹಾ ಆಶ್ಚರ್ಯಚಕಿತನಾಗಿ ಅಲ್ಲಿಗೆ ಬಂದಿದ್ದ ವ್ಯಾಸನಲ್ಲಿ ಕೇಳಿದನು:

> “ಸಂಗ್ರಾಮದಲ್ಲಿ ವಿಮಲ ಶರಸಮೂಹಗಳಿಂದ ಶತ್ರುಗಳನ್ನು ಸಂಹರಿಸುತ್ತಿರುವಾಗ ಅಗ್ನಿಯ ಪ್ರಭೆಯುಳ್ಳ ಪುರುಷನೊಬ್ಬನು ಮುಂದೆ ಮುಂದೆ ಹೋಗುತ್ತಿರುವುದನ್ನು ಕಂಡೆನು. ಮಹಾಮುನೇ ! ಪ್ರಜ್ವಲಿಸುವ ಶೂಲವನ್ನೆತ್ತಿಕೊಂಡು ಅವನು ಯಾವ ದಿಕ್ಕಿನಲ್ಲಿ ಹೋಗುತ್ತಿದ್ದನೋ ಆ ದಿಕ್ಕಿನಲ್ಲಿ ನನ್ನ ಶತ್ರುಗಳು ವಿಧ್ವಂಸಿತರಾಗುತ್ತಿದ್ದರು. ಅವನ ಕಾಲುಗಳು ಭೂಮಿಯನ್ನು ಸ್ಪರ್ಷಿಸುತ್ತಿರಲಿಲ್ಲ. ಶೂಲವನ್ನು ಅವನು ಕೈಯಿಂದ ಬಿಡುತ್ತಿರಲಿಲ್ಲ. ಆದರೆ ಅವನ ತೇಜಸ್ವೀ

ಶೂಲದಿಂದ ಸಹಸ್ರಾರು ಶೂಲಗಳು ಹೊರಬಂದು ಶತ್ರುಗಳ ಮೇಲೆ ಬೀಳುತ್ತಿದ್ದವು. ಶತ್ರುಗಳು ಅವನಿಂದಲೇ ನಾಶವಾಗುತ್ತಿದ್ದರು. ಆದರೆ ಜನರು ನನ್ನಿಂದ ನಾಶವಾದರೆಂದು ಭಾವಿಸುತ್ತಿದ್ದರು. ಅವನು ಸೇನೆಗಳನ್ನು ಸುಡುತ್ತಿದ್ದನು. ನಾನು ಅವನ ಹಿಂದೆ ಹಿಂದೆ ಹೋಗುತ್ತಿದ್ದೆ ಮಾತ್ರ. ಭಗವನ್! ಆ ಶೂಲಪಾಣಿ, ಸೂರ್ಯಸನ್ನಿಭ ತೇಜಸ್ಸುಳ್ಳ ಕೃಷ್ಣವರ್ಣದ ಮಹಾನ್ ಪುರುಷೋತ್ತಮನು ಯಾರೆಂದು ನನಗೆ ಹೇಳು."

ವ್ಯಾಸನು ಹೇಳಿದನು:

"ಪಾರ್ಥ ! ಪ್ರಜಾಪತಿಗಳೆಲ್ಲರಿಗೂ ಮೊದಲಿಗ, ತೇಜಃಸ್ವರೂಪ, ಆದಿ ಪುರುಷ, ವಿಭು, ಭೂಲೋಕ-ಭುವರ್ಲೋಕ ಸದೃಶ, ಸಕಲ ಲೋಕಗಳಿಗೂ ಪ್ರಭು, ದೇವ, ಈಶಾನ ವರದ ಶಂಕರನನ್ನು ನೀನು ನೋಡಿರುವೆ. ಆ ದೇವ, ಸರ್ವಾದಿ ಭುವನೇಶ್ವರ, ಮಹಾದೇವ, ಮಹಾತ್ಮ, ಈಶಾನ, ಜಟಿಲ, ಶಿವ, ತ್ರ್ಯಕ್ಷ, ಮಹಾಭುಜ, ರುದ್ರ, ಶಿಖಿ, ಚೀರವಾಸಸ, ಭಕ್ತರ ದಾತಾರ, ಪ್ರಸಾದವಾಗಿ ವರಗಳನ್ನು ನೀಡುವವನ ಶರಣು ಹೋಗು. ಆ ವಿಭುವಿನ ದಿವ್ಯ ಪಾರ್ಷದರು ನಾನಾ ವಿಧದ

ದಿವ್ಯರೂಪಗಳನ್ನು ಹೊಂದಿರುವರು – ವಾಮನರು, ಜಟಾಧಾರಿಗಳು, ಬೋಳು ತಲೆಯವರು, ಮೋಟಾದ ಕುತ್ತಿಗೆಯುಳ್ಳವರು, ದೊಡ್ಡ ಹೊಟ್ಟೆಯಳ್ಳವರು, ದೊಡ್ಡ ದೇಹವುಳ್ಳವರು, ಮಹೋತ್ಸಾಹಿಗಳು, ಮಹಾಕಿವಿಯುಳ್ಳವರು ಮತ್ತು ಇತರರು ವಿಕಾರವಾದ ಮುಖವುಳ್ಳವರು, ಮತ್ತು ವಿಕಾರವಾದ ವೇಷಭೂಷಣಗಳನ್ನು ಧರಿಸಿರುವವರು. ಇಂಥವರಿಂದ ಪೂಜಿಸಲ್ಪಟ್ಟ ಮಹಾದೇವ ಮಹೇಶ್ವರ ತೇಜಸ್ವೀ ಶಿವನೇ ನಿನ್ನ ಮುಂದೆ ಮುಂದೆ ಹೋಗುತ್ತಿದ್ದಾನೆ. ಆ ಘೋರ ರೋಮಾಂಚಕರ ಸಂಗ್ರಾಮದಲ್ಲಿ ಮಹೇಷ್ವಾಸ ಪ್ರಹಾರಿಗಳಾದ ದ್ರೋಣ-ಕರ್ಣ-ಕೃಪರಿಂದ ರಕ್ಷಿತರಾಗಿರುವ ಆ ಸೇನೆಯನ್ನು ದೇವ ಮಹೇಷ್ವಾಸ ಬಹುರೂಪೀ ಮಹೇಶ್ವರನಲ್ಲದೇ ಬೇರೆ ಯಾರು ತಾನೇ ಮನಸ್ಸಿನಲ್ಲಿಯಾದರೂ ಎದುರಿಸಲು ಸಾಧ್ಯವಾಗುತ್ತಿತ್ತು? ಅವನ ಮುಂದೆ ಬಂದ ಯಾರೂ ಅವನನ್ನು ಎದುರಿಸಲು ಮನಸ್ಸುಮಾಡಲಾರ. ಮೂರು ಲೋಕಗಳಲ್ಲಿಯೂ ಅವನ ಸಮನಾದುದು ಯಾವುದೂ ಇಲ್ಲ. ಕ್ರುದ್ಧನಾಗಿರುವ ಅವನ ವಾಸನೆ ಬಂದರೂ ಸಾಕು ಶತ್ರುಗಳು ಮೂರ್ಛೆಹೋಗುತ್ತಾರೆ. ನಡುಗುತ್ತಾರೆ. ಮತ್ತು ಕೆಳಗೆ ಬೀಳುತ್ತಾರೆ. ಅವನಿಗೆ

ನಮಸ್ಕರಿಸುವ ದೇವತೆಗಳು ದಿವದಲ್ಲಿಯೇ ಇರುತ್ತಾರೆ. ಮಾನವ ಲೋಕದಲ್ಲಿ ಕೂಡ ಹಾಗೆ ಮಾಡುವ ನರರು ಸ್ವರ್ಗವನ್ನು ಗೆಲ್ಲುತ್ತಾರೆ. ಯಾವ ಭಕ್ತನು ವರದ ದೇವ ಶಿವ ರುದ್ರ ಉಮಾಪತಿಯನ್ನು ಉಪಾಸಿಸುತ್ತಾನೋ ಅವನು ಈ ಲೋಕದಲ್ಲಿ ಸುಖವನ್ನು ಹೊಂದುತ್ತಾನೆ ಮತ್ತು ಪರಮ ಗತಿಯನ್ನು ಪಡೆಯುತ್ತಾನೆ. ಶಾಂತಸ್ವರೂಪ ಶಿತಿಕಂಠ, ಸೂಕ್ಷ್ಮಾತಿಸೂಕ್ಷ್ಮ, ಉತ್ತಮತೇಜೋವಿಶಿಷ್ಟ, ಜಟಾಜೂಟಧಾರಿ, ವಿಕರಾಲಸ್ವರೂಪ, ಕುಬೇರವರದನಿಗೆ ನೀನು ನಮಸ್ಕರಿಸು.

ಯಮನಿಗೆ ಅನುಕೂಲನಾದ ಕಾಲಸ್ವರೂಪ, ಅವ್ಯಕ್ತಸ್ವರೂಪದ ಆಕಾಶವೇ ತಲೆಗೂದಲಾಗಿರುವ, ಸಧಾಚಾರಸಂಪನ್ನ, ಶಂಕರ, ಕಮನೀಯವಿಗ್ರಹ, ಪಿಂಗಳನೇತ್ರ, ಸ್ಥಾಣು, ಮಹಾಪುರುಷ, ಕಂದುಬಣ್ಣದ ಕೂದಲುಳ್ಳವ, ಮುಂಡ, ತಪಸ್ಸಿನಿಂದ ಕೃಶನಾಗಿರುವ, ಭವಸಾಗರವನ್ನು ದಾಟಿಸುವ, ಸೂರ್ಯಸ್ವರೂಪ, ಉತ್ತಮತೀರ್ಥ, ದೇವದೇವ, ವೇಗವಂತನಿಗೆ ನಮಸ್ಕರಿಸು.

ಬಹುರೂಪಿ, ಶರ್ವ, ಪ್ರಿಯ, ಸುಂದರ ಉಡುಗೆಗಳನ್ನು ತೊಟ್ಟ,

ಶಿರಸ್ತ್ರಾಣವನ್ನು ಧರಿಸುವ, ಸುಂದರ ಮುಖವುಳ್ಳ, ಸಹಸ್ರಾಕ್ಷನಿಗೆ ಮತ್ತು ಮಳೆಗರೆಯುವವನಿಗೆ ನಮಸ್ಕರಿಸು.

ಪರ್ವತದಲ್ಲಿ ಮಲಗುವವನಿಗೆ, ಪರಮಶಾಂತನಿಗೆ, ಪತಿಗೆ, ನಾರುಮಡಿಯನ್ನುಟ್ಟವನಿಗೆ, ಹಿರಣ್ಯಬಾಹುವಿಗೆ, ಉಗ್ರನಿಗೆ ಮತ್ತು ದಿಕ್ಕುಗಳ ಅಧಿಪತಿಗೆ ನಮಸ್ಕರಿಸು. ಮೇಘಗಳ ಅಧಿಪತಿಗೆ, ಭೂತಗಳ ಪತಿಗೆ ನಮಸ್ಕಾರ. ವೃಕ್ಷಗಳ ಒಡೆಯನಿಗೆ ಮತ್ತು ನೀರಿನ ಒಡೆಯನಿಗೆ ನಮಸ್ಕಾರ.

ವೃಕ್ಷಗಳಿಂದ ಆವೃತ ಶರೀರವುಳ್ಳವನಿಗೆ, ಸೇನಾನಿಗೆ, ಮಧ್ಯಮನಿಗೆ, ಕೈಯಲ್ಲಿ ಸ್ರುವವನ್ನು ಹಿಡಿದಿರುವವನಿಗೆ, ದೇವನಿಗೆ, ಧನ್ವಿಗೆ, ಭಾರ್ಗವನಿಗೆ, ಬಹೂರೂಪನಿಗೆ, ವಿಶ್ವದ ಪತಿಗೆ, ಚೀರವಾಸಸನಿಗೆ, ಸಹಸ್ರ ಶಿರಸನಿಗೆ, ಸಹಸ್ರನಯನನಿಗೆ, ಸಹಸ್ರಬಾಹುವಿಗೆ ಮತ್ತು ಸಹಸ್ರ ಚರಣನಿಗೆ ನಮಸ್ಕಾರ.

ವರದನ, ಭುವನೇಶ್ವರನ, ಉಮಾಪತಿಯ, ವಿರೂಪಾಕ್ಷನ, ದಕ್ಷಯಜ್ಞನಿಬರ್ಹಣನ, ಪ್ರಜೆಗಳ ಪತಿ, ಅವ್ಯಗ್ರ, ಭೂತಗಳ ಪತಿ, ಅವ್ಯಯ, ಕಪರ್ದಿ, ವೃಷಾವರ್ತ, ವೃಷನಾಭ, ವೃಷಧ್ವಜ, ವೃಷದರ್ಪ, ವೃಷಪತಿ, ವೃಷಶೃಂಗ,

ವೃಷರ್ಷಭ, ವೃಷಾಂಕ, ವೃಷಭೋದಾರ, ವೃಷಭ, ವೃಷಭೇಕ್ಷಣ, ವೃಷಾಯುಧ, ವೃಷಶರ, ವೃಷಭೂತ ಮಹೇಶ್ವರನ ಶರಣು ಹೋಗು.

ಮಹೋದರ, ಮಹಾಕಾಯ, ದ್ವೀಪಿಚರ್ಮನಿವಾಸಿ, ಲೋಕೇಶ, ವರದ, ಮುಂಡ, ಬ್ರಹ್ಮಣ್ಯ, ಬ್ರಾಹ್ಮಣಪ್ರಿಯ, ತ್ರಿಶೂಲಪಾಣಿ, ವರದ, ಖಡ್ಗಚರ್ಮಧರ, ಪ್ರಭು, ಪಿನಾಕಿ, ಖಂಡಪರಶು, ಲೋಕಪತಿ, ಈಶ್ವರ, ದೇವ, ಶರಣ್ಯ, ಚೀರವಾಸಸನ ಶರಣು ಹೋಗು.

ಸುರೇಶನಿಗೆ, ವೈಶ್ರವಣನ ಸಖನಿಗೆ, ಉತ್ತಮ ವಸ್ತ್ರವನ್ನು ಧರಿಸಿರುವವನಿಗೆ, ನಿತ್ಯನಿಗೆ, ಸುವ್ರತನಿಗೆ, ಸುಧನ್ವಿಗೆ ನಮಸ್ಕಾರ. ಸ್ರುವವನ್ನು ಹಿಡಿದಿರುವವನಿಗೆ, ದೇವನಿಗೆ, ಸುಖಧನ್ವಿಗೆ, ಧನ್ವಿಗೆ, ಧನ್ವಂತರಿಗೆ, ಧನುಷಿಗೆ, ಧನ್ವಾಚಾರ್ಯನಿಗೆ, ಧನ್ವಿಗೆ ನಮಸ್ಕಾರ.

ಉಗ್ರಾಯುಧ, ದೇವ, ಸುರವರನಿಗೆ ನಮಸ್ಕಾರ. ಬಹುರೂಪಿಗೆ ನಮಸ್ಕಾರ. ಬಹುಧನ್ವಿಗೆ ನಮಸ್ಕಾರ. ಸ್ಥಾಣುವೇ, ಸುವ್ರತನೇ, ಸುಧನ್ವಿಯೇ, ನಿತ್ಯನೇ, ನಿನಗೆ ನಮಸ್ಕಾರ. ತ್ರಿಪುರಘ್ನನೇ, ಭಗಘ್ನನೇ ನಿನಗೆ ನಮೋನಮ.

ವನಸ್ಪತಿಗಳ ಒಡೆಯನಿಗೆ ನಮಸ್ಕಾರ. ನರರ ಪತಿಗೆ ನಮಸ್ಕಾರ. ಅಪಾಂಪತಿಗೆ ನಮಸ್ಕಾರ. ನಿತ್ಯನಿಗೆ ಮತ್ತು ಯಜ್ಞಪತಿಗೆ ನಮಸ್ಕಾರ. ಪೂಷನ ಹಲ್ಲುಗಳನ್ನು ಮುರಿದವನಿಗೆ, ಮುಕ್ಕಣ್ಣನಿಗೆ, ವರದನಿಗೆ, ನೀಲಕಂಠನಿಗೆ, ಪಿಂಗಲನಿಗೆ, ಸ್ವರ್ಣಕೇಶನಿಗೆ ನಮಸ್ಕಾರ.

ಧೀಮತ ಮಹಾದೇವನ ದಿವ್ಯಕರ್ಮಗಳ ಕುರಿತು ತಿಳಿದಷ್ಟು ಮತ್ತು ಕೇಳಿದಷ್ಟನ್ನು ವರ್ಣಿಸುತ್ತೇನೆ. ಇವನು ಕುಪಿತನಾದರೆ ಲೋಕದಲ್ಲಿ ಸುರರಾಗಲೀ, ಅಸುರರಾಗಲೀ, ಗಂಧರ್ವರಾಗಲೀ, ರಾಕ್ಷಸರಾಗಲೀ, ಅವರು ಗುಹೆಗಳನ್ನು ಸೇರಿದರೂ, ಸುಖದಿಂದಿರಲಾರರು. ಹಿಂದೆ ಭವನು ನಿರ್ಭಯನಾಗಿ ಕುಪಿತನಾಗಿ ಧನುಸ್ಸಿನಿಂದ ಬಾಣಗಳನ್ನು ಪ್ರಯೋಗಿಸಿ ಜೋರಾಗಿ ಗರ್ಜಿಸುತ್ತಾ ಯಜ್ಞವನ್ನೇ ಧ್ವಂಸಮಾಡಿದ್ದನು. ಮಹೇಶ್ವರನು ಯಜ್ಞದಲ್ಲಿ ಕುಪಿತನಾಗಿರಲು ಸುರರು ಎಲ್ಲಿಯೂ ಶಾಂತಿ ಮತ್ತು ರಕ್ಷಣೆಯನ್ನು ಪಡೆಯದೇ ಒಮ್ಮಿಂದೊಮ್ಮೆಲೇ ಅಲ್ಲಿಂದ ಓಡಿ ಹೋಗಿದ್ದರು. ಅವನ ಧನುಸ್ಸಿನ ಟೇಂಕಾರಘೋಷದಿಂದ ಸರ್ವ ಲೋಕಗಳೂ ವ್ಯಾಕುಲಗೊಂಡವು. ಅದರ ವಶಕ್ಕೆ

ಬಂದ ಸುರಾಸುರರು ಕೆಳಗುರುಳಿದರು. ಸರ್ವ ಸಮುದ್ರಗಳೂ ಉಕ್ಕಿಬಂದವು. ಭೂಮಿಯು ನಡುಗಿತು. ಪರ್ವತಗಳು ಸೀಳಿದವು. ಮತ್ತು ದಿಗ್ಗಜಗಳು ಭ್ರಾಂತಗೊಂಡವು. ಅಂಧಕಾರವು ತುಂಬಿ ಲೋಕಗಳು ಕಾಣದಂತಾದವು. ಅವನು ಸೂರ್ಯನೊಂದಿಗೆ ಎಲ್ಲ ನಕ್ಷತ್ರಗಳ ಪ್ರಭೆಯನ್ನೂ ನಷ್ಟಗೊಳಿಸಿದ್ದನು. ಭಯಭೀತ ಋಷಿಗಳು ಸರ್ವಭೂತಗಳ ಮತ್ತು ತಮ್ಮ ಸುಖವನ್ನು ಬಯಸಿ ಶಾಂತಿಮಾಡತೊಡಗಿದರು. ಶಂಕರನು ಪುರೋಡಾಶವನ್ನು ಭಕ್ಷಿಸುತ್ತಿದ್ದ ಪೂಷನನ್ನು ಆಕ್ರಮಿಸಿ ಅಟ್ಟಹಾಸದಿಂದ ನಗುತ್ತಾ ಅವನ ಹಲ್ಲುಗಳೆಲ್ಲವನ್ನೂ ಕಿತ್ತುಬಿಟ್ಟನು. ಆಗ ದೇವತೆಗಳು ನಡುಗುತ್ತಾ ತಲೆತಗ್ಗಿಸಿಕೊಂಡು ಯಜ್ಞಶಾಲೆಯಿಂದ ಹೊರಬಂದಿದ್ದರು. ಪುನಃ ಶಂಕರನು ದೇವತೆಗಳ ಮೇಲೆ ಗುರಿಯಿಟ್ಟು ಉರಿಯುತ್ತಿರುವ ನಿಶಿತ ಶರವನ್ನು ಧನುಸ್ಸಿಗೆ ಹೂಡಿದನು. ತ್ರಿದಶರು ಭಯದಿಂದ ವಿಶಿಷ್ಟ ಯಜ್ಞಭಾಗವನ್ನು ರುದ್ರನಿಗೆ ಕಲ್ಪಿಸಿ ಅವನಿಗೆ ಶರಣು ಹೊಕ್ಕರು. ಶಂಕರನ ಕೋಪವು ಶಾಂತವಾದನಂತರವೇ ಆ ಯಜ್ಞವು ಪೂರ್ಣಗೊಂಡಿತು. ಆಗ ಶಂಕರನ ಕುರಿತು ಹೇಗೆ ಭಯಪಟ್ಟಿದ್ದರೋ ಹಾಗೆ ಈಗಲೂ ಕೂಡ ಅವನ ಕುರಿತು

ಸುರರು ಭಯದಿಂದಿದ್ದಾರೆ.

ಹಿಂದೆ ದಿವಿಯಲ್ಲಿ ವೀರ್ಯವಂತ ಅಸುರರ ಮೂರು ಮಹಾ ಪುರಗಳಿದ್ದವು – ಉಕ್ಕಿನದು, ಬೆಳ್ಳಿಯದು ಮತ್ತು ಇನ್ನೊಂದು ಬಂಗಾರದ್ದು. ಉಕ್ಕಿನದು ತಾರಕಾಕ್ಷನದಾಗಿತ್ತು, ಬೆಳ್ಳಿಯದು ಕಮಲಾಕ್ಷನದು, ಮತ್ತು ಪರಮ ಸುವರ್ಣಮಯವಾದುದು ವಿದ್ಯುನ್ಮಾಲಿನಿಯದಾಗಿತ್ತು. ಸರ್ವಾಯುಧಗಳಿಂದಲೂ ಇಂದ್ರನು ಇದನ್ನು ಭೇದಿಸಲು ಶಕ್ತನಾಗಲಿಲ್ಲ. ಆಗ ಸೋತ ಅಮರರೆಲ್ಲರೂ ರುದ್ರನಿಗೆ ಶರಣು ಹೋದರು. ಎಲ್ಲ ದೇವತೆಗಳೂ ಒಂದಾಗಿ ಆ ಮಹಾತ್ಮನಿಗೆ ಹೇಳಿದರು: "ರುದ್ರ! ಭುವನೇಶ್ವರ! ಈ ಅಸುರರನ್ನು ಸಂಹರಿಸಿದರೆ ಸರ್ವ ಕರ್ಮಗಳಲ್ಲಿ ಕಟ್ಟುವ ಪಶುವು ರುದ್ರನದಾಗುತ್ತದೆ." ದೇವತೆಗಳ ಹಿತವನ್ನು ಬಯಸಿ ಹಾಗೆಯೇ ಆಗಲೆಂದು ಅವರಿಗೆ ಹೇಳಿ ಅವನು ಒಂದು ಸಾವಿರ ವರ್ಷಗಳು ಅಚಲನಾಗಿ (ಸ್ಥಾಣುವಾಗಿ) ನಿಂತಿದ್ದನು. ಯಾವಾಗ ಆ ಮೂರೂ ಪುರಗಳೂ ಅಂತರಿಕ್ಷದಲ್ಲಿ ಒಟ್ಟಾಗಿ ಸೇರಿದವೋ ಆಗ ಅವನು ಮೂರು ಪರ್ವಗಳಿದ್ದ ಮೂರು ಮೊನೆಗಳಿದ್ದ ಬಾಣದಿಂದ ಅವನ್ನು ಭೇದಿಸಿದನು. ಕಾಲಾಗ್ನಿಸಂಯುಕ್ತ ಮತ್ತು

ವಿಷ್ಣು-ಸೋಮ ಸಮಾಯುತ ಶರವನ್ನು ನೋಡಲು ದಾನವರ ಆ ಪುರಗಳು ಶಕ್ತರಾಗಲಿಲ್ಲ.

ಉಮೆಯು ಪಂಚಶಿಖೆಗಳಿಂದ ಕೂಡಿದ್ದ ಬಾಲಕನನ್ನು ತನ್ನ ತೊಡೆಯಮೇಲಿರಿಸಿಕೊಂಡು "ಇವನ್ಯಾರೆಂದು ನಿಮಗೆ ತಿಳಿದಿದೆಯೇ?" ಎಂದು ಸುರರನ್ನು ಪ್ರಶ್ನಿಸಿದಳು. ಈ ಪ್ರಭುವು ವಜ್ರವನ್ನು ಹಿಡಿದಿದ್ದ ಶಕ್ರನ ಬಾಹುವನ್ನು ಕ್ರೋಧದಿಂದ ಸ್ತಂಭನಗೊಳಿಸಿದ್ದನು. ಅವನೇ ಈ ಸರ್ವಲೋಕೇಶ್ವರ, ಪ್ರಭು, ದೇವ, ಭಗವಾನನು. ಆ ಪ್ರಜಾಪತಿ, ಬಾಲಾರ್ಕಸದೃಶ ಪ್ರಭು ಭುವನೇಶ್ವರನನ್ನು ದೇವತೆಗಳೆಲ್ಲರೂ ಮೊದಲು ಗುರುತಿಸಲಾರದೇ ಹೋದರು. ಆಗ ಪಿತಾಮಹ ಬ್ರಹ್ಮನು ಅವನನ್ನು ನೋಡಿ ಅವನೇ ಮಹೇಶ್ವರನೆಂದೂ ಶ್ರೇಷ್ಠನೆಂದೂ ತಿಳಿದು ಅವನಿಗೆ ವಂದಿಸಿದನು. ಅನಂತರ ಸುರರು ಉಮೆಯನ್ನೂ ರುದ್ರನನ್ನೂ ಪ್ರಸನ್ನಗೊಳಿಸಿದರು. ವಜ್ರಾಯುಧಸಹಿತವಾಗಿ ಸ್ತಂಭಿತವಾಗಿದ್ದ ಇಂದ್ರನ ಬಾಹುವು ಮೊದಲಿನಂತೆಯೇ ಚಲಿಸತೊಡಗಿತು. ಪತ್ನಿಯೊಂದಿಗೆ ಭಗವಾನ್ ವೃಷಧ್ವಜ ದಕ್ಷಯಜ್ಞವಿನಾಶಕ, ತ್ರಿದಶಶ್ರೇಷ್ಠನು ಆ ದೇವತೆಗಳ ಮೇಲೆ ಪ್ರಸನ್ನನಾದನು.

ಅವನೇ ರುದ್ರ, ಅವನೇ ಶಿವ, ಅವನೇ ಅಗ್ನಿ, ಶರ್ವ ಮತ್ತು ಎಲ್ಲವನ್ನೂ ತಿಳಿದವನು. ಅವನೇ ಇಂದ್ರ, ವಾಯು, ಅಶ್ವಿನಿಯರು ಮತ್ತು ಮಿಂಚು. ಅವನೇ ಭವ, ಪರ್ಜನ್ಯ, ಮಹಾದೇವ ಮತ್ತು ಅನಘ. ಅವನೇ ಚಂದ್ರಮ, ಈಶಾನ, ಸೂರ್ಯ ಮತ್ತು ವರುಣನೂ ಕೂಡ. ಅವನೇ ಕಾಲ, ಅವನೇ ಅಂತಕ, ಮೃತ್ಯು, ಮತ್ತು ಯಮ. ಅವನೇ ರಾತ್ರಿ-ಹಗಲುಗಳು, ಮಾಸ-ಪಕ್ಷಗಳು, ಋತುಗಳು, ಸಂಧ್ಯಗಳು ಮತ್ತು ಸವತ್ಸರಗಳು ಕೂಡ. ಅವನೇ ಧಾತಾ, ವಿಧಾತಾ, ವಿಶ್ವಾತ್ಮ ಮತ್ತು ವಿಶ್ವಕರ್ಮಕೃತ್. ಎಲ್ಲ ದೇವತೆಗಳ ಶರೀರವನ್ನೂ ಅವನೇ ಧರಿಸುತ್ತಾನೆ. ಎಲ್ಲ ದೇವತೆಗಳೂ ಅವನನ್ನು ಸದಾಕಾಲದಲ್ಲಿಯೂ ಸ್ತುತಿಸುತ್ತಿರುತ್ತಾರೆ. ಅವನು ಏಕರೂಪನೂ, ಬಹುರೂಪನೂ ಆಗಿದ್ದಾನೆ, ನೂರಾರು, ಸಾವಿರಾರು, ಲಕ್ಷೋಪಲಕ್ಷ ರೂಪಗಳಿಂದ ಅವನು ವಿರಾಜಿಸುತ್ತಾನೆ. ಆ ಮಹಾದೇವನು ಈ ತರಹದವನು. ಅವನು ಹುಟ್ಟಿಲ್ಲದ ಭಗವಾನನು. ಆ ಭಗವಂತನ ಎಲ್ಲ ಗುಣಗಳನ್ನೂ ವರ್ಣಿಸಲು ನನಗೆ ಶಕ್ಯವಿಲ್ಲ.

ಸರ್ವಗ್ರಹಗಳ ಬಾಧೆಯಿಂದ ಪೀಡಿತರಾದವರು ಮತ್ತು ಸರ್ವ

ಪಾಪಗಳಿಂದ ಕೂಡಿದವರೂ ಸಹ ಶರಣುಹೋದರೆ ಆ ಶರಣ್ಯನು ಸುಪ್ರೀತನಾಗಿ ಅವರನ್ನು ಬಾಧೆಗಳಿಂದ ಮತ್ತು ಪಾಪಗಳಿಂದ ವಿಮೋಚನೆಯನ್ನು ನೀಡುತ್ತಾನೆ. ಮನುಷ್ಯರಿಗೆ ಅವನು ಆಯುರಾರೋಗ್ಯ ಐಶ್ವರ್ಯಗಳನ್ನು, ಪುಷ್ಕಲ ಕಾಮಗಳನ್ನೂ ವಿತ್ತವನ್ನೂ ನೀಡುತ್ತಾನೆ ಮತ್ತು ಪುನಃ ಅವುಗಳನ್ನು ಕಳೆಯುತ್ತಾನೆ. ಇಂದ್ರಾದಿ ದೇವತೆಗಳಲ್ಲಿರುವ ಐಶ್ವರ್ಯವೆಲ್ಲವೂ ಅವನದೇ ಐಶ್ವರ್ಯವೆಂದು ಹೇಳುತ್ತಾರೆ. ಲೋಕದಲ್ಲಿ ಮನುಷ್ಯರ ಶುಭಾಶುಭಗಳನ್ನೂ ಅವನೇ ನಡೆಸುತ್ತಾನೆ. ಐಶ್ವರ್ಯಗಳದ್ದಲ್ಲದೇ ಅವನನ್ನು ಕಾಮಗಳ ಈಶ್ವರನೆಂದೂ ಪುನಃ ಕರೆಯುತ್ತಾರೆ. ಇರುವವುಗಳ ಮಹೇಶ್ವರನಾಗಿರುವ ಅವನು ಮಹತ್ತಿನ ಈಶ್ವರನೂ ಕೂಡ. ಅನೇಕ ವಿವಿಧರೂಪಗಳಲ್ಲಿ ಇವನು ಜಗತ್ತನೇ ವ್ಯಾಪಿಸಿದ್ದಾನೆ. ಆ ದೇವನ ಮುಖವು ಸಮುದ್ರದಲ್ಲಿ ಅಧಿಷ್ಠಾನಗೊಂಡಿದೆ. ಈ ದೇವನೇ ಶ್ಮಶಾನಗಳಲ್ಲಿ ನಿತ್ಯವೂ ವಾಸಿಸುತ್ತಾನೆ. ಅಲ್ಲಿ ಆ ಈಶ್ವರನನ್ನು ಜನರು ವೀರಸ್ಥಾನನೆಂದು ಯಾಜಿಸುತ್ತಾರೆ. ಇವನಿಗೆ ಅನೇಕ ದೇದೀಪ್ಯಮಾನ ಘೋರ ರೂಪಗಳಿವೆ. ಲೋಕದಲ್ಲಿ ಮನುಷ್ಯರು ಇವುಗಳನ್ನು ಪೂಜಿಸುತ್ತಾರೆ ಮತ್ತು ಪ್ರಾರ್ಥಿಸುತ್ತಾರೆ.

ಅವನ ಮಹತ್ತ್ವತೆಗೆ, ಒಡೆತನಕ್ಕೆ ಮತ್ತು ಕರ್ಮಭಿಗಳಿಗೆ ತಕ್ಕುದಾದ ಅನೇಕ ನಾಮಧೇಯಗಳು ಲೋಕಗಳಲ್ಲಿ ಅವನಿಗಿವೆ. ವೇದಗಳಲ್ಲಿ ಇವನನ್ನು ಉತ್ತಮ ಶತರುದ್ರೀಯದಿಂದಲೂ ಮತ್ತು ಮಹಾತ್ಮರು ಇವನನ್ನು ಅನಂತರುದ್ರ ಎಂಬ ಹೆಸರಿನಿಂದಲೂ ಉಪಸ್ಥಾನ ಮಾಡುತ್ತಾರೆ. ದೇವತೆಗಳ ಮತ್ತು ಮನುಷ್ಯರ ಕಾಮೋಪಭೋಗಗಳಿಗೆ ಮಹೇಶ್ವರನೇ ಪ್ರಭುವಾಗಿದ್ದಾನೆ. ಮಹಾವಿಶ್ವವನ್ನೇ ವ್ಯಾಪಿಸಿರುವ ಅವನೇ ಪ್ರಭೂ, ದೇವ ಮತ್ತು ವಿಭು. ಬ್ರಾಹ್ಮಣರು ಮತ್ತು ಮುನಿಗಳು ಇವನನ್ನು ಜ್ಯೇಷ್ಠಭೂತನೆಂದು ಕರೆಯುತ್ತಾರೆ. ದೇವತೆಗಳೆಲ್ಲರಿಗೂ ಇವನು ಪ್ರಥಮನು. ಇವನ ಮುಖದಿಂದಲೇ ಅಗ್ನಿಯು ಹುಟ್ಟಿದನು. ಎಲ್ಲ ಪ್ರಾಣಿಗಳನ್ನು ಸರ್ವಥಾ ಪರಿಪಾಲಿಸುವುದರಿಂದಲೂ, ಅವುಗಳೊಡನೆ ಕ್ರೀಡಿಸುತ್ತಿರುವುದರಿಂದಲೂ ಮತ್ತು ಅವುಗಳಿಗೆ ಅಧಿಪತಿಯಾಗಿರುವುದರಿಂದಲೂ ಇವನು ಪಶುಪತಿಯೆಂದು ತಿಳಿಯಲ್ಪಟ್ಟಿದ್ದಾನೆ. ಇವನ ದಿವ್ಯಲಿಂಗವು ನಿತ್ಯವೂ ಬ್ರಹ್ಮಚರ್ಯದಲ್ಲಿ ಸ್ಥಿತವಾಗಿರುವುದರಿಂದ ಮತ್ತು ಇವನು ಲೋಕಗಳ ಮಹತ್ವನಾಗಿರುವುದರಿಂದ ಮಹೇಶ್ವರನೆಂದು

ಕರೆಯಲ್ಪಟ್ಟಿದ್ದಾನೆ. ಮೇಲ್ಮುಖವಾಗಿ ಪ್ರತಿಷ್ಠಿತವಾಗಿರುವ ಇವನ ಲಿಂಗವನ್ನು ಋಷಿಗಳು, ದೇವತೆಗಳೂ, ಗಂಧರ್ವ-ಅಪ್ಸರೆಯರೂ ಅರ್ಚಿಸುತ್ತಾರೆ. ಹಾಗಿರುವ ಅವನನ್ನು ಪೂಜಿಸಿದರೆ ಮಹೇಶ್ವರ ಶಂಕರನು ಸಂತೋಷಪಡುತ್ತಾನೆ, ಸುಖಿಯಾಗುತ್ತಾನೆ, ಪರಮ ಪ್ರೀತನಾಗುತ್ತಾನೆ ಮತ್ತು ಪ್ರಹೃಷ್ಟನಾಗುತ್ತಾನೆ. ಭೂತ-ಭವ್ಯ-ಭವಿಷ್ಯತ್ತುಗಳಲ್ಲಿರುವ ಸ್ಥಾವರ ಮತ್ತು ಚಲಿಸುತ್ತಿರುವ ಅನೇಕ ರೂಪಗಳಿರುವ ಇವನನ್ನು ಬಹುರೂಪನೆಂದು ಕರೆಯುತ್ತಾರೆ. ಎಲ್ಲಕಡೆಗಳಲ್ಲಿ ಕಣ್ಣುಗಳಿದ್ದರೂ ಇವನ ಒಂದು ಕಣ್ಣು ಜ್ವಾಜಲ್ಯಮಾನವಾಗಿದ್ದು ಕ್ರೋಧಾಗ್ನಿಯು ಎಲ್ಲ ಲೋಕಗಳನ್ನೂ ವ್ಯಾಪಿಸುವುದರಿಂದ ಇವನನ್ನು ಶರ್ವ ಎಂದೂ ಕರೆಯುತ್ತಾರೆ. ಧೂಮ್ರವರ್ಣದವನಾಗಿರುವುದರಿಂದ ಇವನನ್ನು ಧೂರ್ಜಟಿಯೆಂದು ಕರೆಯುತ್ತಾರೆ. ಇವನಲ್ಲಿ ವಿಶ್ವೇದೇವರು ಸ್ಥಿತರಾಗಿರುವುದರಿಂದ ವಿಶ್ವರೂಪನೆಂದೂ ಕರೆಯಲ್ಪಡುತ್ತಾನೆ. ಈ ಭುವನೇಶ್ವರನು ದ್ಯೌ, ಆಪ ಮತ್ತು ಪೃಥ್ವಿ ಎಂಬ ಮೂರು ದೇವಿಯರನ್ನು ಪ್ರೀತಿಸುತ್ತಾನಾದುದರಿಂದ ತ್ರ್ಯಂಬಕನೆಂದು ಕರೆಯಲ್ಪಟ್ಟಿದ್ದಾನೆ. ಮನುಷ್ಯರ ಸರ್ವಕರ್ಮಗಳಲ್ಲಿ

ಸರ್ವಸಾಧನೆಗಳನ್ನು ಮತ್ತು ಫಲಗಳನ್ನು ವೃದ್ಧಿಸುವವನಾದುದರಿಂದ ಇವನು ಶಿವನೆಂದು ಕರೆಯಲ್ಪಟ್ಟಿದ್ದಾನೆ. ಅವನು ಸಹಸ್ರಾಕ್ಷನಾಗಿರಲಿ, ದಶಸಹಸ್ರಾಕ್ಷನಾಗಿರಲಿ, ನಖ-ಶಿಖಾಂತವಾಗಿ ಕಣ್ಣುಗಳಿಂದಲೇ ಕೂಡಿರಲಿ – ಈ ಮಹಾ ವಿಶ್ವವನ್ನೇ ಯಾರು ನೋಡುತ್ತಾ ಪಾಲಿಸುವನೋ ಅವನು ಮಹಾದೇವನಾದನು. ಊರ್ಧ್ವನಾಗಿ ನಿಂತಿರುವುದರಿಂದ, ಪ್ರಾಣೋತ್ಪತ್ತಿಗೆ ನಿಂತಿರುವುದರಿಂದ, ನಿತ್ಯವೂ ಲಿಂಗರೂಪದಲ್ಲಿರುವುದರಿಂದ ಅವನು ಸ್ಥಾಣುವೆನಿಸಿಕೊಂಡನು.

ಪ್ರಾಣಿಗಳ ಶರೀರಗಳಲ್ಲಿ ವಿಷಮಸ್ಥನಾಗಿದ್ದರೂ ಸಮನಾಗಿರುವ ಇವನು ಪ್ರಾಣಾಪಾನ ವಾಯುವಾಗಿ ಶರೀರಗಳಲ್ಲಿ ವಿಷಮರೂಪದಲ್ಲಿರುತ್ತಾನೆ. ಇವನ ವಿಗ್ರಹವನ್ನಾಗಲೀ ಲಿಂಗವನ್ನಾಗಲೀ ಪೂಜಿಸಬೇಕು. ನಿತ್ಯವೂ ಲಿಂಗವನ್ನು ಪೂಜಿಸಿದವನು ಮಹತ್ತರ ಸಂಪತ್ತನ್ನು ಪಡೆಯುತ್ತಾನೆ. ಅವನ ತೊಡೆಗಳ ಕೆಳಗಿನ ಅರ್ಧಭಾಗವನ್ನು ಆಗ್ನೇಯ ಶರೀರವೆಂದೂ ಮೇಲಿನ ಅರ್ಧಭಾಗವನ್ನು ಸೋಮ ಅಥವಾ ಮಂಗಳ ಶರೀರವೆಂದು ಹೇಳುತ್ತಾರೆ. ಇತರರು

ಅವನ ದೇಹದ ಬಲಗಡೆಯ ಅರ್ಧಭಾಗವನ್ನು ಆಗ್ನೇಯ ಶರೀರವೆಂದೂ ಎಡಗಡೆಯ ಅರ್ಧಭಾಗವನ್ನು ಸೋಮಶರೀರವೆಂದೂ ಹೇಳುತ್ತಾರೆ. ಅವನ ಮಂಗಳ ಶರೀರವು ಅತ್ಯಂತಕಾಂತಿಯಿಂದ ಬೆಳಗುತ್ತಿದ್ದು ದೇವತೆಗಳಿಗೆ ಸೇರಿರುತ್ತದೆ. ಹೊಳೆಯುವ ಆಗ್ನೇಯ ಶರೀರವು ಘೋರವಾದುದು ಎಂದು ಮನುಷ್ಯರಲ್ಲಿ ಹೇಳುತ್ತಾರೆ. ಅವನ ಮಂಗಳ ಶರೀರದಿಂದ ಅವನು ಬ್ರಹ್ಮಚರ್ಯವನ್ನು ಪಾಲಿಸುತ್ತಾನೆ. ಅವನ ಘೋರತರ ಶರೀರದಿಂದ ಈಶ್ವರನು ಸರ್ವಗಳನ್ನೂ ನಾಶಗೊಳಿಸುತ್ತಾನೆ. ಆ ಪ್ರತಾಪವಾನನು ಉಗ್ರನಾಗಿ ತೀಕ್ಷ್ಣನಾಗಿ ಸುಟ್ಟ ರಕ್ತ-ಮಾಂಸ-ಮಜ್ಜೆಗಳನ್ನು ಭಕ್ಷಿಸುವುದರಿಂದ ಅವನನ್ನು ರುದ್ರನೆಂದು ಕರೆಯುತ್ತಾರೆ.

ಪಾರ್ಥ ! ಸಂಗ್ರಾಮದಲ್ಲಿ ನಿನ್ನ ಮುಂದಿನಿಂದ ಶತ್ರುಗಳನ್ನು ಸಂಹರಿಸುತ್ತಾ ಹೋಗುತ್ತಿದ್ದವನು ಪಿನಾಕಪಾಣಿ ಈ ಮಹಾದೇವನೇ ಆಗಿದ್ದಾನೆ. ಅವನನ್ನೇ ನೀಡು ನೋಡಿರುವೆ. ಸಂಗ್ರಾಮದಲ್ಲಿ ನಿನ್ನ ಮುಂದೆಮುಂದೆ ಹೋಗುತ್ತಿದ್ದ ನಿನಗೆ ಅಸ್ತ್ರಗಳನ್ನು ದಯಪಾಲಿಸಿದ್ದ ಭಗವಾನ ದೇವನಿಂದಲೇ ಈ ದಾನವರು ಹತರಾದರು. ನಾನು ಈಗ ಹೇಳಿದ ದೇವದೇವನ

ಶತರುದ್ರೀಯವು ಧನ್ಯವಾದುದು, ಯಶಸ್ಸನ್ನೂ ಆಯುಸ್ಸನ್ನೂ ನೀಡುವಂತಹುದು, ಪುಣ್ಯಕರವಾದುದು ಮತ್ತು ವೇದಗಳಲ್ಲಿ ಸೂಚಿಸಲ್ಪಟ್ಟಿರುವುದು. ಇದು ಸರ್ವಾರ್ಥಸಾಧಕವಾದುದು. ಸರ್ವ ಕಿಲ್ಬಿಷಗಳನ್ನು ನಾಶಪಡಿಸುವ ಪುಣ್ಯಕಾರಕವು. ಸರ್ವಪಾಪಗಳನ್ನು ಪ್ರಶಮನಗೊಳಿಸುವಂತಹುದು ಮತ್ತು ಸರ್ವ ದುಃಖ ಭಯಗಳನ್ನು ಕಳೆಯುವಂತಹುದು. ಈ ಚತುರ್ವಿಧ ಸ್ತೋತ್ರವನ್ನು ಯಾವ ನರನು ಸದಾ ಕೇಳುತ್ತಾನೋ ಅವನು ಸರ್ವಶತ್ರುಗಳನ್ನೂ ಗೆದ್ದು ರುದ್ರಲೋಕದಲ್ಲಿ ಮೆರೆಯುತ್ತಾನೆ. ಮಹಾತ್ಮ ಶಂಕರನ ಈ ಚರಿತ್ರೆಯು ಸಂಗ್ರಾಮಕಾಲದಲ್ಲಿ ಸದಾ ವಿಜಯವನ್ನು ತರುತ್ತದೆ. ಮನುಷ್ಯರಲ್ಲಿ ಯಾರು ಈ ಶತರುದ್ರೀಯವನ್ನು ಸದಾ ಓದುತ್ತಾರೋ, ಕೇಳುತ್ತಾರೋ ಮತ್ತು ಆ ದೇವ ವಿಶ್ವೇಶ್ವರನನ್ನು ಭಜಿಸುತ್ತಾರೋ ಅವರಿಗೆ ತ್ರ್ಯಂಬಕನು ಪ್ರಸನ್ನನಾಗಿ ಆಸೆಗಳನ್ನು ಒದಗಿಸಿಕೊಡುತ್ತಾನೆ. ಕೌಂತೇಯ ! ಹೋಗು ! ಯುದ್ಧಮಾಡು ! ಯಾರ ಮಂತ್ರಿ, ರಕ್ಷಕ ಮತ್ತು ಜೊತೆಗಾರನು ಜನಾರ್ದನನೋ ಅಂತಹ ನಿನಗೆ ಪರಾಜಯವಾಗಲಾರದು !”

ರಣದಲ್ಲಿ ಅರ್ಜುನನಿಗೆ ಹೀಗೆ ಹೇಳಿ ಪರಾಶರಸುತನು ಎಲ್ಲಿಗೆ

ಹೋಗಬೇಕಿತ್ತೋ ಅಲ್ಲಿಗೆ ಹೊರಟುಹೋದನು.